ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–36

ಆಶ್ವಮೇಧಿಕಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೩೬

ಆಶ್ವಮೇಧಿಕಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ, ಮೈಸೂರು.

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಆಶ್ವಮೇಧಿಕಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಆಶ್ವಮೇಧಿಕಪರ್ವ - ಭಾಗ ೩೬

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-40-2

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XII + 554 = 566
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ವುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೩೬

ಆಶ್ವಮೇಧಿಕ ಪರ್ವ

ಪುಟ ಸಂ.

76. ಅರ್ಜುನನಿಂದ ವಜ್ರದತ್ತನ ಪರಾಜಯ 1

77. ಅರ್ಜುನನು ಅಶ್ವವನ್ನು ಅನುಸರಿಸಿಕೊಂಡು ಸಿಂಧುದೇಶಕ್ಕೆ ಆಗಮಿಸಿ, ಸೈಂಧವರ ಜೊತೆ ಯುದ್ಧ ಮಾಡಿದುದು. ಅವರ ಬಳಿ ಯುದ್ಧ ಮಾಡುವಾಗ ಅರ್ಜುನನ ಗಾಂಡೀವ ಧನುಸ್ಸು ಬೀಳುವುದು. ಆ ಪ್ರಸಂಗದಲ್ಲಿ ದೇವತೆಗಳು, ಋಷಿಗಳು ಮೊದಲಾದವರು ಜಪವನ್ನು ಮಾಡಿ ಅರ್ಜುನನಿಗೆ ತೇಜಸ್ಸನ್ನು ತುಂಬುವುದು. ಪುನಃ ಅರ್ಜುನನು ಸೈಂಧವರೊಡನೆ ಯುದ್ಧ ಮಾಡಿದುದು 7

78. ಅರ್ಜುನ-ಸೈಂಧವರ ಯುದ್ಧ. ದುಶ್ಶಲೆಯ ಪ್ರಾರ್ಥನೆಯಂತೆ ಯುದ್ಧವನ್ನು ನಿಲ್ಲಿಸಿದುದು 14

79. ಅರ್ಜುನ-ಬಭ್ರುವಾಹನರ ಯುದ್ಧ. ಅರ್ಜುನನ ಮರಣ 33

80. ಚಿತ್ರಾಂಗದೆಯ ವಿಲಾಪ. ಮೂರ್ಛೆಯಿಂದ ಎಚ್ಚರಗೊಂಡ ಬಭ್ರುವಾಹನನ ಶೋಕ. ಉಲೂಪಿಯ ಪ್ರಯತ್ನದಿಂದ ಸಂಜೀವನಿ ಔಷಧಿಯ ಮೂಲಕ ಅರ್ಜುನನನ್ನು ಬದುಕಿಸಿದುದು 41

81. ಬಹಳ ಕಾಲದ ಬಳಿಕ ಎಚ್ಚರಗೊಂಡ ಬಭ್ರುವಾಹನನು ಉಲೂಪಿಯನ್ನು ಕಂಡು ತಾನೂ ಪ್ರಾಯೋಪ್ರವೇಶಕ್ಕೆ ಕುಳಿತಿದುದು 46

82. ಬಭ್ರುವಾಹನನು ಪ್ರಾಯೋಪ್ರವೇಶಕ್ಕೆ ಕುಳಿತಿದ್ದನ್ನು ಕಂಡು ಉಲೂಪಿಯು ಸಂಜೀವನ ಮಣಿಯನ್ನು ಸ್ಮರಿಸಿ, ಅದರ ಸಹಾಯದಿಂದ ಅರ್ಜುನನನ್ನು ಬದುಕಿಸಿದುದು. ಮಲಗಿ ಎದ್ದವನಂತೆ ಅರ್ಜುನನು ಮೇಲೆದ್ದು ಬಭ್ರುವಾಹನನನ್ನು ಕುರಿತು ಚಿತ್ರಾಂಗದೆ- ಉಲೂಪಿಯರು ಯುದ್ಧಭೂಮಿಗೆ ಏಕೆ ಬಂದಿದ್ದಾರೆಂದು ಪ್ರಶ್ನಿಸುವುದು 51

83. ಉಲೂಪಿಯು ಅರ್ಜುನನನ್ನು ಕುರಿತು ಚಿತ್ರಾಂಗದೆ-ಉಲೂಪಿ ಇವರು ಯುದ್ಧಭೂಮಿಗೆ ಆಗಮಿಸಲು ಕಾರಣವೇನೆಂಬುದನ್ನು ಹೇಳಿದುದು. ಬಭ್ರುವಾಹನನಿಂದ ಅರ್ಜುನನು ಪರಾಜಯ ಹೊಂದಲು ಕಾರಣವೇನೆಂಬುದನ್ನು ವಿವರಿಸಿದುದು 56

84. ಅರ್ಜುನನು ಯಜ್ಞಾಶ್ವವನ್ನು ಅನುಸರಿಸಿಕೊಂಡು ಮಗಧದೇಶಕ್ಕೆ ಬಂದಿದುದು. ಜರಾಸಂಧನ ಮೊಮ್ಮಗನಾದ ಮೇಘಸಂಧಿಯನ್ನು ಪರಾಜಯಗೊಳಿಸಿ ಮ್ಲೇಚ್ಛರನ್ನೂ ಸೋಲಿಸಿದುದು 64

85. ಕುದುರೆಯು ದಕ್ಷಿಣ ಮತ್ತು ಪಶ್ಚಿಮ ಸಮುದ್ರಗಳ ತೀರದಲ್ಲಿ ಸಂಚರಿಸುತ್ತಾ ಚೇದಿ ದೇಶವನ್ನು ಪ್ರವೇಶಿಸಿದುದು. ಶಿಶುಪಾಲನ ಮಗನಿಂದ ಅರ್ಜುನನು ಪೂಜೆಯನ್ನು ಸ್ವೀಕರಿಸಿದುದು. ನಂತರ ಕಾಶೀ, ಕೋಸಲ ದೇಶಾಧಿಪತಿ ರಾಜರನ್ನು ಜಯಿಸಿ, ಗಾಂಧಾರದೇಶದ ಕಡೆ ನಡೆದುದು 71

86. ಶಕುನಿಯ ಮಗನ ಪರಾಜಯ 75

87. ಅಶ್ವಮೇಧ ಯಾಗದ ಸಂದಿಗ್ಧಿಯ ವರ್ಣನೆ 94

88. ಕೃಷ್ಣನು ಬಲರಾಮಾದಿಗಳಿಂದ ಸಹಿತನಾಗಿ ಯುಧಿಷ್ಠಿರನ ಅಶ್ವಮೇಧ ಯಾಗಕ್ಕಾಗಿ ಹಸ್ತಿನಾವತಿಯನ್ನು ಕುರಿತು ಆಗಮಿಸಿದುದು. ಯುಧಿಷ್ಠಿರನು ನಾನಾ ದೇಶಗಳಿಂದ ಬರುತ್ತಿರುವ ರಾಜರನ್ನು ಯಥೋಚಿತವಾಗಿ ಸತ್ಕರಿಸುವಂತೆ ಮಣಲೂರಿನಿಂದ ಬರುವ ಬಭ್ರುವಾಹನನಿಗೆ, ಸನ್ಮಾನ ಮಾಡುವಂತೆ ಭೀಮಸೇನನಿಗೆ ಆದೇಶವನ್ನಿತ್ತುದು. 98

89. ಯುಧಿಷ್ಠಿರನು ಮೂರು ಮಂದಿ ಪಾಂಡವರಿಗೆ ಅರ್ಜುನನಿಗೆ ಉಂಟಾದ ಮಾರ್ಗಾಯಾಸವನ್ನು ಪರಿಹರಿಸಲು ಸೂಚಿಸಿದುದು. ಅರ್ಜುನನು ಈ ಕ್ರಮದಲ್ಲಿ ಆಯಾಸ ಪಡಲು ಕಾರಣವೇನೆಂಬುದನ್ನು ಕೃಷ್ಣನು ನಿರೂಪಿಸಿದುದು. ಅಶ್ವಮೇಧ ಕುದುರೆಯ ಜೊತೆಗೆ ಅರ್ಜುನನು ನಗರವನ್ನು ಪ್ರವೇಶಿಸಿದುದು. ಬಭ್ರುವಾಹನನು ಉಲೂಪಿ-ಚಿತ್ರಾಂಗದೆಯರ ಜೊತೆ ಯಾಗವನ್ನು ನೋಡಲು ಆಗಮಿಸಿದುದು 104

90. ಯುಧಿಷ್ಠಿರನ ಅಶ್ವಮೇಧಯಾಗಕ್ಕೆ ಆಗಮಿಸಿದ ವೇದವ್ಯಾಸರು ಋತ್ವಿಜರಿಂದ ಸೇರಿಕೊಂಡು ಅಶ್ವಮೇಧಯಾಗವನ್ನು ಆರಂಭಿಸಿದುದು 110

91. ಯುಧಿಷ್ಠಿರನು ಅಶ್ವಮೇಧ ಯಜ್ಞ ಮುಗಿದ ಬಳಿಕ ಯಥಾಯೋಗ್ಯವಾಗಿ ಬ್ರಾಹ್ಮಣರನ್ನು ದಕ್ಷಿಣೆ ಮೊದಲಾದವುಗಳಿಂದ ಸಂತೋಷಪಡಿಸಿದುದು. ರಾಜರನ್ನು ಪಾರಿತೋಷಕಗಳಿಂದ ಸಂತೋಷಪಡಿಸಿದುದು. ರಾಜರೆಲ್ಲರೂ ತಮ್ಮ ನಗರಗಳನ್ನು ಕುರಿತು ಪ್ರಯಾಣ ಬೆಳೆಸಿದುದು 119

92. ವೈಶಂಪಾಯನರು ಜನಮೇಜಯರಾಜನಿಗೆ ಮುಂಗುಸಿಯ ಕಥೆಯನ್ನು ಹೇಳಲು ಆರಂಭಿಸಿದುದು. ಅಶ್ವಮೇಧಯಾಗವು ಮುಗಿಯುತ್ತಿರಲು ಒಂದು ಬಿಲದಿಂದ ಹೊರಗೆ ಬಂದಿರುವ ಒಂದು ಬದಿಯಲ್ಲಿ ಬಂಗಾರದ

ಬಣ್ಣವುಳ್ಳ ಯಾವುದೋ ಮುಂಗುಸಿಯು ಸಭೆಯಲ್ಲಿ ಕುಳಿತಿರುವ ವ್ಯಕ್ತಿಗಳನ್ನು ಕುರಿತು ಉಂಛವೃತ್ತಿಯ ಬ್ರಾಹ್ಮಣನೊಬ್ಬನು ಹಿಟ್ಟನ್ನು ನೀಡಿದ ಪ್ರಸಂಗವನ್ನು ಪ್ರಶಂಸಿಸುತ್ತಾ ಯುಧಿಷ್ಠಿರನ ಅಶ್ವಮೇಧ ಯಾಗವನ್ನು ನಿಂದಿಸಿದುದು. ಸಭಾಸದರ ಪ್ರೇರಣೆಯಂತೆ ಕಥೆಯನ್ನು ವಿಸ್ತಾರವಾಗಿ ಹೇಳಿದುದು. 130

93. ಮುಂಗುಸಿಯು ಧರ್ಮರಾಜಾದಿಗಳಿಗೆ ಉಂಛವೃತ್ತಿ ಬ್ರಾಹ್ಮಣನ ಸಕ್ತುದಾನದ ಮಹಿಮೆಯನ್ನು ವರ್ಣನೆ ಮಾಡಿ ಅಂತರ್ಧಾನ ಹೊಂದಿದುದು 139

94. ಜನಮೇಜಯನು ಮುಂಗುಸಿಯು ಯಜ್ಞವನ್ನು ನಿಂದಿಸಲು ಕಾರಣವೇನೆಂದು ಕೇಳಿದುದು. ವೈಶಂಪಾಯನರು ಸತ್ಯ-ದಾನ-ತಪಸ್ಸಿನಿಂದಲೇ ಸ್ವರ್ಗವು ಲಭಿಸುತ್ತಿರಲು ಪಶುಹಿಂಸಾ ರೂಪವಾದ ಯಜ್ಞವು ಪ್ರಶಸ್ತವಾದುದಲ್ಲ ಎಂದು ಮುಂಗುಸಿಯ ಅಭಿಪ್ರಾಯವನ್ನು ವರ್ಣಿಸಿದುದು 162

95. ವೈಶಂಪಾಯನರು ಜನಮೇಜಯರಾಜನಿಗೆ ಧ್ಯಾನ-ದಾನಾದಿಗಳು ಸಿದ್ಧಿಗೆ ಕಾರಣವಾಗುತ್ತವೆ ಎಂದು ತಿಳಿಸಲು ಅಗಸ್ತ್ಯಮಹರ್ಷಿಗಳ ಯಜ್ಞದ ಕಥೆಯನ್ನು ಹೇಳಿದುದು 170

96. ವೈಶಂಪಾಯನರು ಜನಮೇಜಯನಿಗೆ ಆ ಮುಂಗುಸಿಯ ನಿಜಸ್ವರೂಪವನ್ನು ನಿರೂಪಿಸಿದುದು 179

97. ಕೃಷ್ಣನು ಯುಧಿಷ್ಠಿರನಿಗೆ ವೈಷ್ಣವಧರ್ಮವನ್ನು ಉಪದೇಶಿಸಲು ಪ್ರಾರಂಭಿಸಿದುದು 183

98. ಕೃಷ್ಣನು ಯುಧಿಷ್ಠಿರನನ್ನು ಕುರಿತು ನಾಲ್ಕು ಆಶ್ರಮಗಳ ಧರ್ಮವನ್ನು ನಿರೂಪಿಸಿದುದು. 198

99. ಕೃಷ್ಣನು ಯುಧಿಷ್ಠಿರನನ್ನು ಕುರಿತು ಏನೂ ಪ್ರಯೋಜನ ಸಿಗದೆ ಇರುವ ಜನ್ಮ-ದಾನ-ಜೀವಗಳ ಬಗ್ಗೆ ವರ್ಣಿಸಿದುದು. ದಾನಗಳಲ್ಲಿ ಸಾತ್ವಿಕ-ರಾಜಸ-ತಾಮಸ ಭೇದಗಳನ್ನೂ, ದಾನ ತೆಗೆದುಕೊಳ್ಳುವ ವ್ಯಕ್ತಿಯಲ್ಲಿರುವ ಅರ್ಹತೆಯನ್ನು ಹೇಳುವ ಮೂಲಕ ಬ್ರಾಹ್ಮಣನ ಮಹಿಮೆಯನ್ನು ವರ್ಣಿಸಿದುದು. 209

100. ಕೃಷ್ಣನು ಯುಧಿಷ್ಠಿರನನ್ನು ಕುರಿತು ಬೀಜಯೋನಿಗಳ ಶುದ್ಧಿ-ಅಶುದ್ಧಿಯನ್ನು ನಿರೂಪಿಸಿದುದು. ಗಾಯತ್ರಿ ಮಹಿಮೆಯನ್ನು ವರ್ಣಿಸಿದುದು. ಬ್ರಾಹ್ಮಣನ

ಮಹಿಮೆಯನ್ನು ಪ್ರಶಂಸಿದುದು. ಬ್ರಾಹ್ಮಣರನ್ನು ತಿರಸ್ಕರಿಸುವ ವ್ಯಕ್ತಿಗಳಿಗೆ ಉಂಟಾಗುವ ನರಕ ಯಾತನೆಗಳನ್ನು ವರ್ಣಿಸಿದುದು 230

101. ಯುಧಿಷ್ಠಿರನನ್ನು ಕುರಿತು ಕೃಷ್ಣನು ಸತ್ಕರ್ಮ-ದುಷ್ಕರ್ಮಗಳ ಫಲವಾಗಿ ನರಕಾದಿ ಲೋಕಗಳಿಗೆ ಹೋಗುವ ಪ್ರಕಾರವನ್ನು ವರ್ಣಿಸಿದುದು 245

102. ಕೃಷ್ಣನು ಯುಧಿಷ್ಠಿರನನ್ನು ಕುರಿತು ನೀರು-ಅನ್ನದಾನಗಳ ಫಲವನ್ನು ಹೇಳಿದುದು. ನೀರು, ಅನ್ನಗಳನ್ನು ನೀಡದಿದ್ದವನಿಗೆ ಆಗುವ ನರಕವನ್ನು ವರ್ಣಿಸಿದುದು. ಅನೇಕ ದಾನಗಳ ಫಲವನ್ನು ಹೇಳಿದುದು. ಅತಿಥಿಯ ಪೂಜೆಯ ಮಹತ್ವವನ್ನು ಬಣ್ಣಿಸಿದುದು. ಅತಿಥಿಯನ್ನು ಪೂಜಿಸದಿದ್ದಲ್ಲಿ ಆಗುವ ದೋಷವನ್ನು ಹೇಳಿದುದು. ಭೂಮಿ, ಗೋವು, ಎಳ್ಳು, ಕನ್ಯಾದಾನಗಳ ಫಲವನ್ನು ಪ್ರತಿಪಾದಿಸಿದುದು 272

103. ಕೃಷ್ಣನು ಯುಧಿಷ್ಠಿರನನ್ನು ಕುರಿತು ವೃಷಭ-ಗೃಹ-ಶಯ್ಯಾ ಮೊದಲಾದ ದಾನಗಳನ್ನು ಪ್ರಶಂಸಿದುದು. ಗೋ-ಬ್ರಾಹ್ಮಣರ ರಕ್ಷಣೆಯೇ ಮೊದಲಾದ ಅನೇಕ ಧರ್ಮಗಳನ್ನು ಹೇಳಿದುದು. 313

104. ಕೃಷ್ಣನು ಯುಧಿಷ್ಠಿರನಿಗೆ ಪಂಚಮಹಾಯಜ್ಞಗಳ ಬಗ್ಗೆ ನಿರೂಪಿಸಿದುದು. ಸ್ನಾನವಿಧಿಗಳನ್ನು ನಿರೂಪಿಸಿದುದು. ವೈಷ್ಣವರ ಲಕ್ಷಣವನ್ನು ಹೇಳಿದುದು. ಭಗವಂತನ ಪೂಜೆಗೆ ಯೋಗ್ಯವಾದ ಪುಷ್ಪಗಳ್ಯಾವವು ಎಂಬುದನ್ನು ತಿಳಿಸಿದುದು 340

105. ಕೃಷ್ಣನು ಯುಧಿಷ್ಠಿರನನ್ನು ಕುರಿತು ಹತ್ತು ಪ್ರಕಾರವಾದ ಕಪಿಲಗೋವುಗಳ ವಿಭಾಗವನ್ನು ಹೇಳುವ ಮೂಲಕ ಅದರ ದಾನದ ಮಹತ್ವವನ್ನು ಬಣ್ಣಿಸಿದುದು 366

106. ಕೃಷ್ಣನು ಯುಧಿಷ್ಠಿರನನ್ನು ಕುರಿತು ಕಪಿಲಾಧೇನುವಿನ ದಾನದ ಪ್ರಶಂಸೆಯನ್ನು ಮಾಡಿದುದು. ಚತುರ್ಮುಖ ಬ್ರಹ್ಮನಿಂದ ಅಗ್ನಿಕುಂಡದ ಮಧ್ಯದಲ್ಲಿ ಕಪಿಲಾಧೇನುವು ಸೃಷ್ಟವಾದುದು. ಆ ಪ್ರಸಂಗದಲ್ಲಿ ರುದ್ರಾದಿ ದೇವತೆಗಳು ಕಪಿಲಾಧೇನುವಿಗೆ ಎಲ್ಲ ಧೇನುಗಳಿಗಿಂತ ಅಧಿಕವಾದ ಪೂಜ್ಯತ್ವ ವರವನ್ನು ನೀಡಿದುದು. ದೇವತೆ-ಋಷಿ ಮುಂತಾದವರು ತಮ್ಮ ಆಶ್ರಯಕ್ಕಾಗಿ ಕಪಿಲಾಧೇನುವನ್ನು ಆಶ್ರಯಿಸಿದುದು. ಕೃಷ್ಣನು ಹವ್ಯ-ಕವ್ಯ ದಾನಗಳ ಕಾಲವನ್ನು ನಿರೂಪಿಸಿದುದು. ಶ್ರಾದ್ಧಭೋಜನಕ್ಕೆ ಅರ್ಹರಾದ ಬ್ರಾಹ್ಮಣರು, ಅನರ್ಹರಾದ ಬ್ರಾಹ್ಮಣರು ಯಾರೆಂದು ನಿರೂಪಿಸಿದುದು. ಸ್ವರ್ಗಪ್ರಾಪಕ ಸುಕೃತ-ದುಷ್ಕೃತಗಳನ್ನು ನಿರೂಪಿಸಿದುದು 386

107. ಕೃಷ್ಣನು ಯುಧಿಷ್ಠಿರನನ್ನು ಕುರಿತು ಸಾಕ್ಷಾತ್ ಬ್ರಹ್ಮಹತ್ಯೆಯನ್ನು ಮಾಡದಿದ್ದರೂ ಬ್ರಹ್ಮಹತ್ಯೆಗೆ ಸಮಾನವಾದ ದುಷ್ಕರ್ಮ ಯಾವುದು ಎಂದು ಹೇಳಿದುದು. ಅದರಂತೆ ಅಭೋಜ್ಯವೆನಿಸಿದ ಅನ್ನಗಳ ಬಗ್ಗೆ, ಪಾಪಿಗಳ ಲಕ್ಷಣದ ಬಗ್ಗೆ ನಿರೂಪಿಸಿದುದು 411

108. ಕೃಷ್ಣನು ಯುಧಿಷ್ಠಿರನನ್ನು ಕುರಿತು ಯತಿ-ಅಗ್ನಿಗಳ ಮಹಿಮೆಯನ್ನು ವರ್ಣಿಸಿದುದು. ದಾನಪಾತ್ರನಾದ ಬ್ರಾಹ್ಮಣನ ಲಕ್ಷಣವನ್ನು ಹೇಳಿದುದು. ಅದರಂತೆ ಅನ್ನದಾನದ ಮಹಿಮೆಯನ್ನು ನಿರೂಪಿಸಿದುದು 420

109. ಕೃಷ್ಣನು ಯುಧಿಷ್ಠಿರನನ್ನು ಕುರಿತು ಭೋಜನದ ವಿಧಿಯನ್ನು ನಿರೂಪಿಸಿದುದು. ಗೋಗ್ರಾಸವನ್ನು ಕೊಡುವ ಪ್ರಕಾರವನ್ನು ಹೇಳಿದುದು. ತಿಲದಾನದ ಪ್ರಶಂಸೆಯನ್ನು ಮಾಡುತ್ತಾ ಕಬ್ಬನ್ನು ಬ್ರಾಹ್ಮಣನು ತಾನೇ ಯಂತ್ರದಲ್ಲಿ ಹಾಕಬಾರದೆಂದು ನಿರಾಕರಿಸಿದುದು 432

110. ಕೃಷ್ಣನು ಯುಧಿಷ್ಠಿರನಿಗೆ ಆಪದ್ಧರ್ಮಗಳನ್ನು ಹೇಳಿದುದು. ಪ್ರಶಸ್ತ-ಅಪ್ರಶಸ್ತ ಬ್ರಾಹ್ಮಣರ ಲಕ್ಷಣಗಳನ್ನು ಹೇಳಿದುದು. ಸಾಮಾನ್ಯವಾಗಿ ನಾನಾ ಧರ್ಮಗಳನ್ನು ಹೇಳುವ ಮೂಲಕ ಬ್ರಾಹ್ಮಣ್ಯ ಸಿದ್ಧಿಯ ಪ್ರಕಾರವನ್ನು ನಿರೂಪಿಸಿದುದು. ಗುರು-ಆಚಾರ್ಯ-ಉಪಾಧ್ಯಾಯರ ಲಕ್ಷಣಗಳನ್ನು ಹೇಳಿದುದು. 439

111. ಕೃಷ್ಣನು ಯುಧಿಷ್ಠಿರನಿಗೆ ಅಗ್ನಿಸೃಷ್ಟಿಯ ಪ್ರಕಾರವನ್ನು ಹೇಳಿದುದು. ಆಹವನೀಯಾದಿ ಅಗ್ನಿಗಳ ವಿಭಾಗವನ್ನು ಹೇಳುವ ಮೂಲಕ ಅವುಗಳ ನಾಮವನ್ನು ಉಚ್ಚಾರಿಸಿದುದು. ಅದರಂತೆ ಯಜ್ಞ-ಅಗ್ನಿಹೋತ್ರಗಳ ಪ್ರಶಂಸೆಯನ್ನು ಮಾಡಿದುದು. 456

112. ಕೃಷ್ಣನು ಯುಧಿಷ್ಠಿರನನ್ನು ಕುರಿತು ಚಾಂದ್ರಾಯಣವ್ರತದ ವಿಧಿಗಳನ್ನು ನಿರೂಪಿಸಿದುದು. ಚಾಂದ್ರಾಯಣವ್ರತದ ಆಚರಣಶೀಲರಿಗೆ ದೊರೆಯುವ ಫಲವನ್ನು ಹೇಳಿದುದು 476

113. ಕೃಷ್ಣನು ಯುಧಿಷ್ಠಿರನನ್ನು ಕುರಿತು ಕಾರ್ತಿಕವೇ ಮೊದಲಾದ ಹನ್ನೆರಡು ಮಾಸಗಳಲ್ಲಿ ಏಕಭುಕ್ತ ವ್ರತವನ್ನು ಆಚರಿಸುವ ಪ್ರಕಾರವನ್ನು ನಿರೂಪಿಸುವ ಮೂಲಕ ಆ ವ್ರತಕ್ಕೆ ಲಭಿಸುವ ಫಲವನ್ನು ಹೇಳಿದುದು 487

114. ಶ್ರೀಕೃಷ್ಣನು ಯುಧಿಷ್ಠಿರನನ್ನು ಕುರಿತು ಒಂದು ಸಂವತ್ಸರದ ಕಾಲ ಏಕಭುಕ್ತವ್ರತವನ್ನು ಮಾಡಿದಾಗ ಉಂಟಾಗುವ ಫಲವೇನೆಂಬುದನ್ನು ಹೇಳಿದುದು. ಕೃಷ್ಣನು ಯುಧಿಷ್ಠಿರನನ್ನು ಕುರಿತು ಕೇಶವಾದಿ

ಭಗವನ್ಮೂರ್ತಿ ಉಪಾಸನೆ ಮಾಡುವ ಮೂಲಕ ಮಾರ್ಗಶೀರ್ಷಾದಿ ದ್ವಾದಶೀವ್ರತಾಚರಣೆಯ ಫಲವನ್ನು ಹೇಳಿದುದು. ಯುಧಿಷ್ಠಿರನು ವಿಸ್ತಾರವಾಗಿ ಕೃಷ್ಣನನ್ನು ಸ್ತುತಿಸಿದುದು. ಪುನಃ ಕೃಷ್ಣನು ಯುಧಿಷ್ಠಿರನಿಗೆ ಏಕಾದಶಿ ಉಪವಾಸ ಪೂರ್ವಕ ದ್ವಾದಶಿಯಂದು ಭಗವತ್ಪೂಜೆಯನ್ನು ಮಾಡಿದರೆ ಉಂಟಾಗುವ ಫಲವೇನೆಂಬುದನ್ನು ನಿರೂಪಿಸಿದುದು 499

115. ಕೃಷ್ಣನು ಯುಧಿಷ್ಠಿರನನ್ನು ಕುರಿತು ವಿಷುವ ಎಂಬ ಪುಣ್ಯಕಾಲದ ಮಹಿಮೆಯನ್ನು ವರ್ಣಿಸುವ ಮೂಲಕ ಅಲ್ಲಿ ಮಾಡಬೇಕಾದ ದಾನಾದಿಗಳನ್ನು ಪ್ರಶಂಸಿದುದು. ಇದರಂತೆ ಗಾಯತ್ರೀಜಪದ ಮಾಹಾತ್ಮ್ಯವನ್ನು ಹೇಳಿದುದು. ಅಶ್ವತ್ಥಮಾಹಾತ್ಮ್ಯವನ್ನು ಹೇಳಿದುದು. ಅದೇ ರೀತಿ ನಾನಾ ಧರ್ಮಗಳನ್ನು ಹೇಳುವ ಮೂಲಕ ಶಿಂಶುಮಾರ ಎಂಬ ರೂಪದ ಬಗ್ಗೆ ನಿರೂಪಿಸಿದುದು. ಪಂಚಗವ್ಯವಿಧಾನವನ್ನು ಹೇಳಿದುದು 511

116. ಕೃಷ್ಣನು ಯುಧಿಷ್ಠಿರನನ್ನು ಕುರಿತು, ಯಾವ ಮನುಷ್ಯನಲ್ಲಿ ಭಗವದ್ಭಕ್ತಿ, ಸಚ್ಚಾರಿತ್ರ್ಯ ಮೊದಲಾದ ಗುಣಗಳು ಇಲ್ಲದಿದ್ದಲ್ಲಿ ಬ್ರಾಹ್ಮಣನಾಗಿದ್ದರೂ ಅಗ್ನಿಹೋತ್ರ ಪರಾಯಣನಾಗಿದ್ದರೂ, ಸ್ವಾಧ್ಯಾಯ-ಅಧ್ಯಯನಾದಿ ಸತ್ಕರ್ಮವುಳ್ಳವನಾಗಿದ್ದರೂ ಅವನು ಸಾಫಲ್ಯವನ್ನು ಹೊಂದಲಾರ. ಶೂದ್ರನಾದವನು ಸ್ವಾಧ್ಯಾಯಾದಿ ಲಕ್ಷಣಗಳಿದ್ದರೂ ಭಕ್ತಿಯುಳ್ಳವನಾಗಿದ್ದಲ್ಲಿ, ತನ್ನ ಜಾತಿಗೆ ಸಂಬಂಧಿಸಿದ ಸ್ವಲ್ಪ ಸತ್ಕರ್ಮವನ್ನು ಮಾಡಿದರೂ ಸಫಲತೆಯನ್ನು ಹೊಂದುತ್ತಾನೆ ಎಂದು ಹೇಳಿದುದು 527

117. ಕೃಷ್ಣನು ಯುಧಿಷ್ಠಿರನನ್ನು ಕುರಿತು ಅಶ್ವತ್ಥ, ಗೋ, ಬ್ರಾಹ್ಮಣ- ಇವರ ಮಹತ್ವವನ್ನು ಹೇಳುವ ಮೂಲಕ ಬ್ರಾಹ್ಮಣ್ಯನಾಶಕವಾದ ದುಷ್ಕರ್ಮಗಳ್ಯಾವುವೆಂದು ನಿರೂಪಿಸಿದುದು. 534

118. ಕೃಷ್ಣನು ಯುಧಿಷ್ಠಿರನನ್ನು ಕುರಿತು ಪಾಲಾಶವಿಧಿಯ ಪ್ರಕಾರವನ್ನು ಹೇಳಿದುದು. ತೀರ್ಥಯಾತ್ರೆಯನ್ನು ಮಾಡಲು ಸಾಮರ್ಥ್ಯವಿಲ್ಲದವರಿಗೆ ತೀರ್ಥಯಾತ್ರೆಗೆ ಪ್ರತಿನಿಧಿಯಾದ ಕರ್ಮಗಳನ್ನು ವರ್ಣಿಸಿದುದು. ಭಗವದ್ಭಕ್ತನ ಲಕ್ಷಣವನ್ನು ಹೇಳುವ ಮೂಲಕ ಅವನನ್ನು ಪ್ರಶಂಸಿದುದು. ಸ್ವಯಂ ತನ್ನ ಸರ್ವೋತ್ತಮತ್ವವನ್ನು ಹೇಳುವ ಮೂಲಕ ತಾನು ಹೇಳಿದ ಧರ್ಮಗಳನ್ನು ಕೇಳಿದವರಿಗೆ ಫಲವನ್ನು ನಿರೂಪಿಸಿದುದು. ಬಳಿಕ ಯುಧಿಷ್ಠಿರಾದಿಗಳ ಆಮಂತ್ರಣದಿಂದ ದಾರುಕನಿಂದ ತರಲ್ಪಟ್ಟ ರಥವನ್ನು ಏರಿಕೊಂಡು ದ್ವಾರಕೆಯನ್ನು ಕುರಿತು ಹೊರಟಿದುದು 538

★ ★ ★ ★ ★

॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತನರಹರಿರಾಮಕೃಷ್ಣವೇದವ್ಯಾಸಾಯ ನಮಃ ॥

ಮಹಾಭಾರತ

ಆಶ್ವಮೇಧಿಕ ಪರ್ವ

ಎಪ್ಪತ್ತಾರನೆಯ ಅಧ್ಯಾಯ

ಅರ್ಜುನನಿಂದ ವಜ್ರದತ್ತನ ಪರಾಜಯ

ವೈಶಂಪಾಯನಃ

ಏವಂ ತ್ರಿರಾತ್ರಮಭವತ್ ತದ್ಯುದ್ಧಂ ಭರತರ್ಷಭ ।
ಅರ್ಜುನಸ್ಯ ನರೇಂದ್ರೇಣ ವೃತ್ರೇಣೇವ ಶತಕ್ರತೋಃ ॥೧॥

ವೈಶಂಪಾಯನ– ಹೀಗೆ ವಜ್ರದತ್ತನಿಗೂ ಅರ್ಜುನನಿಗೂ ಇಂದ್ರ-ವೃತ್ರರಿಗೂ ನಡೆದ ಯುದ್ಧದಂತೆ ಮೂರು ದಿವಸಗಳ ಪರ್ಯಂತ ಘೋರವಾದ ಯುದ್ಧವು ನಡೆಯಿತು.

ತತಶ್ಚತುರ್ಥೇ ದಿವಸೇ ವಜ್ರದತ್ತೋ ಮಹಾಬಲಃ ।
ಜಹಾಸ ಸಸ್ವನಂ ಹಾಸಂ ವಾಕ್ಯಂ ಚೇದಮಥಾಬ್ರವೀತ್ ॥೨॥

ನಾಲ್ಕನೆಯ ದಿವಸದಲ್ಲಿ ಮಹಾಬಲಿಷ್ಠನಾದ ವಜ್ರದತ್ತನು ಅಟ್ಟಹಾಸಪೂರ್ವಕವಾಗಿ ಜೋರಾಗಿ ನಗುತ್ತಾ ಇಂತು ನುಡಿದನು.

ವಜ್ರದತ್ತಃ

ಅರ್ಜುನಾರ್ಜುನ ತಿಷ್ಠ ತ್ವಂ ನ ಮೇ ಜೀವನ್ ವಿಮೋಕ್ಷ್ಯಸೇ ।
ತ್ವಾಂ ನಿಹತ್ಯ ಕರಿಷ್ಯಾಮಿ ಪಿತುಸ್ತೋಯಂ ಯಥಾವಿಧಿ ॥೩॥

ವಜ್ರದತ್ತ– ಎಲೈ ಅರ್ಜುನನೇ, ನಿಲ್ಲು. ಜೀವಸಹಿತವಾಗಿ ನನ್ನಿಂದ ಹೋಗಲಾರೆ. ನಿನ್ನನ್ನು ಸಂಹರಿಸಿ ನನ್ನ ತಂದೆಗೆ ವಿಧಿಬದ್ಧವಾದ ತರ್ಪಣವನ್ನು ನೀಡುತ್ತೇನೆ.

ತ್ವಯಾ ವೃದ್ಧೋ ಮಮ ಪಿತಾ ಭಗದತ್ತಃ ಪಿತುಃ ಸಖಾ ।
ಹತೋ ವೃದ್ಧೋऽಪಚಾಯಿತ್ವಾ ಶಿಶುಂ ಮಾಮದ್ಯ ಯೋಧಯ ॥೪॥

ವೃದ್ಧನಾದ ನಿನ್ನ ತಂದೆಯು ನನ್ನ ತಂದೆಗೆ ಮಿತ್ರನಾಗಿದ್ದನು. ಹೀಗಿದ್ದರೂ ಅಂತಹ ವೃದ್ಧನಾದ ನನ್ನ ತಂದೆಯನ್ನು ನೀನು ಸಂಹರಿಸಿರುವಿ. ನಾನು ಬಾಲಕನೇ ಆಗಿದ್ದರೂ ಸಾಮರ್ಥ್ಯವಿದ್ದಲ್ಲಿ ನನ್ನೊಡನೆ ಯುದ್ಧವನ್ನು ಮಾಡು.

ವೈಶಂಪಾಯನಃ

ಇತ್ಯೇವಮುಕ್ತ್ವಾ ಸಂಕ್ರುದ್ಧೋ ವಜ್ರದತ್ತೋ ನರಾಧಿಪಃ ।
ಪ್ರೇಷಯಾಮಾಸ ಕೌರವ್ಯ ವಾರಣಂ ಪಾಂಡವಂ ಪ್ರತಿ ॥೫॥

ವೈಶಂಪಾಯನ– ಹೀಗೆ ಕ್ರುದ್ಧನಾದ ವಜ್ರದತ್ತನು ಪುನಃ ತನ್ನ ಆನೆಯನ್ನು ಅರ್ಜುನನ ಮೇಲೆ ಅತಿಕ್ರಮಿಸುವಂತೆ ಪ್ರಚೋದಿಸಿದನು.

ಸ ಪ್ರೇಷ್ಯಮಾಣೋ ನಾಗೇಂದ್ರೋ ವಜ್ರದತ್ತೇನ ಧೀಮತಾ ।
ಉತ್ಪತಿಷ್ಯನ್ನಿವಾಕಾಶೇ ಹ್ಯಭಿದುದ್ರಾವ ಪಾಂಡವಮ್ ॥೬॥

ಬುದ್ಧಿವಂತನಾದ ವಜ್ರದತ್ತನಿಂದ ಪ್ರೇರಿತವಾದ ಗಜಶ್ರೇಷ್ಠವು ಆಕಾಶಕ್ಕೆ ಹಾರಿ ಹೋಗುತ್ತಿರುವುದೋ ಎಂಬಂತೆ ವೇಗವಾಗಿ ಅರ್ಜುನನ ಕಡೆ ಎಟ್ಟಿಸಿಕೊಂಡು ಬಂದಿತು.

ಅಗ್ರಹಸ್ತಪ್ರಯುಕ್ತೇನ ಶೀಕರೇಣ ಸ ಫಲ್ಗುನಮ್ ।
ಸಮುಕ್ಷತ ಮಹಾರಾಜ ಶೈಲಂ ನೀಲ ಇವಾಂಬುದಃ ॥೭॥

ಆ ಮಹಾಗಜವು ಮೇಘವೊಂದು ನೀಲಪರ್ವತದ ಮೇಲೆ ಮಳೆಗರೆಯುವಂತೆ ಸೊಂಡಿಲಿನಿಂದ ನೀರಿನ ತುಂತುರುವನ್ನು ಅರ್ಜುನನ ಮೇಲೆ ಪೂತ್ಕಾರದಿಂದ ಎರಚಿತು.

ಸ ತೇನ ಪ್ರೇಷಿತೋ ರಾಜ್ಞಾ ಮೇಘವದ್ ವಿನದನ್ ಮುಹುಃ ।
ಮುಖಾಡಂಬರಘೋಷೇಣ ಸಮಾದ್ರವತ ಫಲ್ಗುನಮ್ ॥೮॥

ವಜ್ರದತ್ತನಿಂದ ಪ್ರೇರಿತವಾದ ಆನೆಯು ಮೇಘದಂತೆ ಮತ್ತೆ ಮತ್ತೆ ಘೀಳಿಡುತ್ತಾ ಮುಖದಿಂದ ಹೊರಹೊಮ್ಮುವ ಚೀತ್ಕಾರ, ಕೋಲಾಹಲದ ಜೊತೆಗೆ ಅರ್ಜುನನನ್ನು ಆಕ್ರಮಿಸಲು ಜೋರಾಗಿ ಆಗಮಿಸಿತು.

ಸ ನೃತ್ಯನ್ನಿವ ನಾಗೇಂದ್ರೋ ವಜ್ರದತ್ತಪ್ರಚೋದಿತಃ ।
ಆಸಸಾದ ದ್ರುತಂ ರಾಜನ್ ಕೌರವಾಣಾಂ ಮಹಾರಥಮ್ ॥೯॥

ಆ ಗಜರಾಜನು ನರ್ತನ ಮಾಡುತ್ತಿರುವನೋ ಎಂಬಂತೆ ಹೆಜ್ಜೆಗಳನ್ನಿಡುತ್ತಾ ಮಹಾರಥಿಕನಾದ ಅರ್ಜುನನ ಬಳಿ ಧಾವಿಸಿ ಬಂದಿತು.

ತಮಾಪತಂತಂ ಸಂಪ್ರೇಕ್ಷ್ಯ ವಜ್ರದತ್ತಸ್ಯ ವಾರಣಮ್ ।
ಗಾಂಡೀವಮಾಶ್ರಿತ್ಯ ಬಲೀ ನ ಹ್ಯಕಂಪತ ಶತ್ರುಹಾ ॥೧೦॥

ತನ್ನ ಕಡೆಗೆ ವೇಗವಾಗಿ ಬರುತ್ತಿರುವ ವಜ್ರದತ್ತನ ಆನೆಯನ್ನು ಕಂಡ, ಶತ್ರುಹಂತಕನಾದ ಅರ್ಜುನನು ಹೆದರದೆ ಗಾಂಡೀವ ಧನುಸ್ಸನ್ನು ಆಶ್ರಯಿಸಿ ಯುದ್ಧ ಸನ್ನದ್ಧನಾಗಿ ನಿಂತನು.

ಚುಕ್ರೋಧ ಬಲವಚ್ಚಾಪಿ ಪಾಂಡವಸ್ತಸ್ಯ ಭೂಪತೇಃ ।
ಕಾರ್ಯವಿಘ್ನಮನುಸ್ಮೃತ್ಯ ಪೂರ್ವವೈರಂ ಚ ಭಾರತ ॥೧೧॥

ವಜ್ರದತ್ತನು ಯಜ್ಞದ ಕುದುರೆಯನ್ನು ಬಂಧಿಸಿದ್ದನ್ನೂ, ತನ್ನ ಸತ್ಕರ್ಮಗಳಿಗೆ ವಿಘ್ನವನ್ನುಂಟು ಮಾಡುತ್ತಿರುವುದನ್ನೂ, ಭಗದತ್ತನಿಗೂ ತನಗೂ ಇದ್ದ ವೈರವನ್ನೂ ಸ್ಮರಿಸಿ, ಎಲ್ಲವನ್ನೂ ಕಂಡು ಅರ್ಜುನನು ಬಹಳ ಸಿಟ್ಟುಕೊಂಡನು.

ತತಸ್ತು ವಾರಣಂ ಕ್ರುದ್ಧಃ ಶರಜಾಲೇನ ಪಾಂಡವಃ ।
ನಿವಾರಯಾಮಾಸ ತದಾ ವೇಲೇವ ಮಕರಾಲಯಮ್ ॥೧೨॥

ಬಳಿಕ ಅರ್ಜುನನು ಉಕ್ಕಿಬರುವ ಸಮುದ್ರವನ್ನು ತಡೆಯುವಂತೆ ಬಾಣಗಳನ್ನು ಪ್ರಯೋಗಿಸಿ ಮಹಾಗಜವನ್ನು ತಡೆದು ನಿಲ್ಲಿಸಿದನು.

ಸ ನಾಗಪ್ರವರೋ ವೀರ್ಯಾದ್ ಅರ್ಜುನೇನ ನಿವಾರಿತಃ ।
ತಸ್ಥೌ ಶರೈರ್ವಿನುನ್ನಾಂಗಃ ಶ್ವಾವಿಚ್ಛಲಲಿತೋ ಯಥಾ ॥೧೩॥

ಅರ್ಜುನನ ಬಾಣಗಳಿಂದ ತಡೆಯಲ್ಪಟ್ಟ ಶೋಭಿಸುತ್ತಿರುವ ಶ್ರೇಷ್ಠವಾದ ಆ ಗಜವು ಬಾಣಗಳಿಂದ ಚುಚ್ಚಲ್ಪಟ್ಟ ಅಂಗಾಂಗವುಳ್ಳದ್ದಾಗಿ ಮೈತುಂಬ ಮುಳ್ಳಿನಿಂದ ನಿಮಿರಿ ನಿಂತಿರುವ ಮುಳ್ಳುಹಂದಿಯಂತೆ ಕಾಣಿಸುತ್ತಿತ್ತು.

ನಿವಾರಿತಂ ಗಜಂ ದೃಷ್ಟ್ವಾ ಭಗದತ್ತಾತ್ಮಜೋ ನೃಪಃ ।
ಉತ್ಸಸರ್ಜ ಶಿತಾನ್ ಬಾಣಾನ್ ಅರ್ಜುನೇ ಕ್ರೋಧಮೂರ್ಚ್ಛಿತಃ ॥

ಅರ್ಜುನನು ಬಾಣಪ್ರಹಾರದಿಂದ ತನ್ನ ಮಹಾಗಜವನ್ನು ನಿಯಂತ್ರಿಸಿದ್ದನ್ನು ಕಂಡ ವಜ್ರದತ್ತನು ಅತ್ಯಂತ ಕ್ರೋಧದಿಂದ ಚೂಪಾದ ಬಾಣಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದನು.

ಅರ್ಜುನಸ್ತು ಮಹಾರಾಜಃ ಶರೈಃ ಶರವಿಘಾತಿಭಿಃ ।
ವಾರಯಾಮಾಸ ತಾನ್ ಬಾಣಾನ್ ತದದ್ಭುತಮಿವಾಭವತ್ ॥೧೫॥

ಮಹಾಬಾಹುವಾದ ಅರ್ಜುನನಾದರೂ ಶತ್ರುಗಳಿಗೆ ಘಾಸಿಯನ್ನುಂಟು ಮಾಡುವ ಬಾಣಗಳಿಂದ ವಜ್ರದತ್ತನು ಪ್ರಯೋಗಿಸಿದ ಎಲ್ಲ ಬಾಣಗಳನ್ನೂ ತಡೆದನು. ಈ ಅರ್ಜುನನ ಬಾಣಪ್ರಯೋಗದ ಕುಶಲತೆಯು ಪರಮಾದ್ಭುತವಾಗಿ ಕಾಣಿಸುತ್ತಿತ್ತು.

ತತಃ ಪುನರಪಿ ಕ್ರುದ್ಧೋ ರಾಜಾ ಪ್ರಾಗ್ಜ್ಯೋತಿಷಾಧಿಪಃ ।
ಪ್ರೇಷಯಾಮಾಸ ನಾಗೇಂದ್ರಂ ಬಲವತ್ ಪರ್ವತೋಪಮಮ್ ॥೧೬॥

ಪುನಃ ಪ್ರಾಗ್ಜ್ಯೋತಿಷಪುರದ ರಾಜನಾದ ವಜ್ರದತ್ತನು ಕ್ರುದ್ಧನಾಗಿ ಪರ್ವತದಂತಿರುವ ಮಹಾಗಜವನ್ನು ಬಲಾತ್ಕಾರವಾಗಿ ಅರ್ಜುನನ ಮೇಲೆ ನುಗ್ಗಿಸಿದನು.

ತಮಾಪತಂತಂ ಸಂಪ್ರೇಕ್ಷ್ಯ ಬಲವಾನ್ ಪಾಕಶಾಸನಿಃ ।
ನಾರಾಚಮಗ್ನಿಸಂಕಾಶಂ ಪ್ರಾಹಿಣೋದ್ ವಾರಣಂ ಪ್ರತಿ ॥೧೭॥

ಪಾಕಶಾಸನಿ ಎನಿಸಿದ ಅರ್ಜುನನು ಮಹಾಗಜವು ತನ್ನ ಮೇಲೆ ಎರಗಿ ಬರುತ್ತಿರುವುದನ್ನು ಕಂಡು ಅಗ್ನಿಗೆ ಸದೃಶವಾದ ಬಾಣ ಒಂದನ್ನು ಅದರ ಮೇಲೆ ಮಹಾಬಲವನ್ನು ಪ್ರಯೋಗಿಸಿ ಎಸೆದನು.

ತೇನ ತದ್ದಾರಣೋ ರಾಜನ್ ಮರ್ಮಣ್ಯಭಿಹತೋ ಭೃಶಮ್ ।
ಪಪಾತ ಭೂಮೌ ಸಹಸಾ ವಜ್ರಾಹತ ಇವಾಚಲಃ ॥೧೮॥

ಆ ಬಾಣವಾದರೂ ಮಹಾಗಜದ ಮರ್ಮಸ್ಥಳವನ್ನು ಹೊಕ್ಕು ಘಾಸಿಪಡಿಸಿತು. ಕೂಡಲೇ ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತದಂತೆ ಭೂಮಿಯ ಮೇಲೆ ಕುಸಿದು ಬಿದ್ದಿತು.

ಸ ಪತನ್ ಶುಶುಭೇ ನಾಗೋ ಧನಂಜಯಶರಾಹತಃ ।
ವಿಶನ್ನಿವ ಮಹಾಶೈಲೋ ಮಹೀಂ ವಜ್ರಪ್ರಪೀಡಿತಃ ॥೧೯॥

ಧನಂಜಯನ ಬಾಣದಿಂದ ಘಾಸಿಗೊಂಡು ನೆಲದ ಮೇಲೆ ಬೀಳುತ್ತಿದ್ದ ಆ ಆನೆಯು ವಜ್ರಾಯುಧದಿಂದ ಪೀಡಿಸಲ್ಪಟ್ಟು ಭೂಮಿಯ ಒಳಗೆ ಪರ್ವತವು ಕುಸಿಯುವಂತೆ ಕುಸಿಯುವುದು ಕಾಣಿಸುತ್ತಿತ್ತು.

ತಸ್ಮಿನ್ ನಿಪತಿತೇ ನಾಗೇ ವಜ್ರದತ್ತಸ್ಯ ಪಾಂಡವಃ ।
ತಂ ನ ಭೇತವ್ಯಮಿತ್ಯಾಹ ತತೋ ಭೂಮಿಗತಂ ನೃಪಮ್ ॥೨೦॥

ಆನೆಯ ಸಹಿತವಾಗಿ ವಜ್ರದತ್ತನೂ ಕೆಳಗೆ ಬೀಳುತ್ತಿರಲು ಅರ್ಜುನನು ಅವನನ್ನು ಸಮಾಧಾನ ಪಡಿಸುತ್ತಾ, ವಜ್ರದತ್ತನೇ ನೀನು ಭಯಪಡುವ ಕಾರಣವಿಲ್ಲ ಎಂದು ಕೂಗಿ ಹೇಳಿದನು.

ಅರ್ಜುನಃ

ಅಬ್ರವೀಚ್ಚ ಮಹಾತೇಜಾಃ ಪ್ರಸ್ಥಿತಂ ಮಾಂ ಯುಧಿಷ್ಠಿರಃ ।
ರಾಜಾನಸ್ತೇ ನ ಹಂತವ್ಯಾಃ ತಾನ್ ಮೋಚಯ ಕಥಂಚನ ॥೨೧॥

ಅರ್ಜುನ– ರಾಜಕುಮಾರನೇ, ಕುದುರೆಯ ರಕ್ಷಣೆಗಾಗಿ ಹೊರಟ ನನಗೆ ಯುಧಿಷ್ಠಿರನು ಹೇಳಿದ್ದಾನೆ. ಧನಂಜಯನೇ, ರಾಜರನ್ನು ಯಾವುದೇ ಕಾರಣದಿಂದ ಸಂಹರಿಸಬೇಡ ಎಂದು.

ಸರ್ವಮೇತನ್ನರವ್ಯಾಘ್ರ ಭವತ್ತೇತಾವತಾ ಕೃತಮ್ ।
ಯೋಧಾಶ್ಚಾಪಿ ನ ಹಂತವ್ಯಾ ಕಥಂಚನ ರಣೇ ತ್ವಯಾ ॥೨೨॥

ಆದ್ದರಿಂದ ನರವ್ಯಾಘ್ರನೇ, ಇಲ್ಲಿಯ ತನಕ ನಡೆದ ಈ ಯುದ್ಧ ಪ್ರಕ್ರಿಯೆ ಸಾಕು. ಯುದ್ದದಲ್ಲಿ ಯಾವ ಯೋಧರನ್ನೂ ಸಂಹರಿಸಬಾರದು ಎಂದು ನನಗೆ ಯುಧಿಷ್ಠಿರನು ಮತ್ತೂ ಹೇಳಿರುತ್ತಾನೆ.

ವಕ್ತವ್ಯಾಶ್ಚಾಪಿ ರಾಜಾನಃ ಸರ್ವೈಃ ಸಹ ಸುಹೃಜ್ಜನೈಃ ।
ಯುಧಿಷ್ಠಿರಸ್ಯಾಶ್ವಮೇಧೋ ಭವದ್ಭಿರನುಭೂಯತಾಮ್ ॥೨೩॥

ಇಷ್ಟೇ ಅಲ್ಲದೆ ಯುಧಿಷ್ಠಿರನು ಹೇಳಿದ್ದಾನೆ. ನೀನು ಯಾವ ರಾಜಧಾನಿಯಲ್ಲಿ ಸಾಗುತ್ತೀಯೋ ಅಲ್ಲಿರುವ ರಾಜರಿಗೆ ಅಶ್ವಮೇಧ ಯಾಗದ ಮಹೋತ್ಸವದಲ್ಲಿ ಭಾಗವಹಿಸಿ, ಆನಂದವನ್ನು ಅನುಭವಿಸಬೇಕೆಂದು ರಾಜರಿಗೆ ಆಮಂತ್ರಣವನ್ನು ನೀಡಬೇಕೆಂದೂ ಹೇಳಿರುವನು.

ಇತಿ ಭ್ರಾತೃವಚಃ ಶ್ರುತ್ವಾ ನ ಹನ್ಮಿ ತ್ವಾಂ ನರಾಧಿಪ ।
ಉತ್ತಿಷ್ಠ ನ ಭಯಂ ತೇऽಸ್ತಿ ಸ್ವಸ್ತಿಮಾನ್ ಭವ ಪಾರ್ಥಿವ ॥೨೪॥

ರಾಜಕುಮಾರನೇ, ಹೀಗೆ ನನ್ನ ಅಣ್ಣನು ಹೇಳಿರುವ ಮಾತನ್ನು ಕೇಳಿಸಿಕೊಂಡಿರುವ ನಾನು ಅವನ ಅಭಿಪ್ರಾಯಕ್ಕನುಗುಣವಾಗಿ ನಿನ್ನನ್ನು ಕೊಲ್ಲುವುದಿಲ್ಲ. ನನ್ನಿಂದ ನಿನಗೆ ಯಾವ ಭಯವೂ ಇಲ್ಲ.

ಆಗಚ್ಛೇಸ್ತ್ವಂ ಮಹಾರಾಜ ಪರಾಂ ಚೈತ್ರೀಮುಪಸ್ಥಿತಾಮ್ ।
ತದಾऽಶ್ವಮೇಧೋ ಭವಿತಾ ಧರ್ಮರಾಜಸ್ಯ ಧೀಮತಃ ॥೨೫॥

ನೀನು ಕ್ಷೇಮವಾಗಿ ಹಿಂದಿರುಗು. ಮುಂದೆ ಬರಲಿರುವ ಚೈತ್ರ ಮಾಸದ ಶುದ್ಧ ಹುಣ್ಣಿಮೆಯಂದು ಹಸ್ತಿನಾಪುರಕ್ಕೆ ಆಗಮಿಸು. ಧೀಮಂತನಾದ ಯುಧಿಷ್ಠಿರನ ಅಶ್ವಮೇಧ ಯಾಗವು ಅಂದು ಪ್ರಾರಂಭವಾಗುತ್ತದೆ.

ವೈಶಂಪಾಯನಃ

ಏವಮುಕ್ತಃ ಸ ರಾಜಾ ತು ಭಗದತ್ತಾತ್ಮಜಸ್ತದಾ ।
ತಥೇತ್ಯೇವಾಬ್ರವೀದ್ ವಾಕ್ಯಂ ಪಾಂಡವೇನಾಭಿನಿರ್ಜಿತಃ ॥೨೬॥

ವೈಶಂಪಾಯನ– ಅರ್ಜುನನು ಹೀಗೆ ಹೇಳಲು ಸೋಲನ್ನೊಪ್ಪಿದ ವಜ್ರದತ್ತನು ಹಾಗೆಯೇ ಆಗಲಿ ಎಂದು ಉತ್ತರಿಸಿ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅಶ್ವಮೇಧಿಕಪರ್ವಣಿ ಅಶ್ವಸಂಭರಣೇ ವಜ್ರದತ್ತವಿಸರ್ಜನಂ ನಾಮ ಷಟ್‌ಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಅಶ್ವಮೇಧಿಕಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೇಳನೆಯ ಅಧ್ಯಾಯ

ಅರ್ಜುನನು ಅಶ್ವವನ್ನು ಅನುಸರಿಸಿಕೊಂಡು ಸಿಂಧುದೇಶಕ್ಕೆ ಆಗಮಿಸಿ, ಸೈಂಧವರ ಜೊತೆ ಯುದ್ಧ ಮಾಡಿದುದು. ಅವರ ಬಳಿ ಯುದ್ಧ ಮಾಡುವಾಗ ಅರ್ಜುನನ ಗಾಂಡೀವ ಧನುಸ್ಸು ಬೀಳುವುದು. ಆ ಪ್ರಸಂಗದಲ್ಲಿ ದೇವತೆಗಳು, ಋಷಿಗಳು ಮೊದಲಾದವರು ಜಪವನ್ನು ಮಾಡಿ ಅರ್ಜುನನಿಗೆ ತೇಜಸ್ಸನ್ನು ತುಂಬುವುದು. ಪುನಃ ಅರ್ಜುನನು ಸೈಂಧವರೊಡನೆ ಯುದ್ಧ ಮಾಡಿದುದು.

ವೈಶಂಪಾಯನಃ

ಜಿತ್ವಾ ಪ್ರಸಾದ್ಯ ರಾಜಾನಂ ಭಗದತ್ತಸುತಂ ತದಾ ।
ವಿಸೃಜ್ಯ ಯಾತೇ ತುರಗೇ ಸೈಂಧವಾನ್ ಪ್ರತಿ ಭಾರತ ॥೧॥

ವೈಶಂಪಾಯನ– ಅರ್ಜುನನು ಭಗದತ್ತನ ಮಗನಾದ ವಜ್ರದತ್ತನನ್ನು ತನ್ನ ಮಾತುಗಳಿಂದ ಸಂತೋಷಪಡಿಸಿ ಅವನ ಬಳಿ ಇರುವ ಯಜ್ಞಾಶ್ವವನ್ನು ಬಿಡಿಸಿಕೊಂಡು ಅಲ್ಲಿಂದ ಸೈಂಧವರಿರುವ ದೇಶದ ಕಡೆ ಕುದುರೆಯ ಜೊತೆ ಪ್ರಯಾಣ ಬೆಳೆಸಿದನು.

ಸೈಂಧವೈರಭವದ್ ಯುದ್ಧಂ ತತಸ್ತಸ್ಯ ಕಿರೀಟಿನಃ ।
ಹತಶೇಷೈರ್ಮಹಾಯುದ್ಧೇ ಹತಾನಾಂ ಚ ಸುತೈರಪಿ ॥೨॥

ಆ ಸಿಂಧುದೇಶದಲ್ಲಿಯಾದರೂ ಸೈಂಧವರು ಕುದುರೆಯನ್ನು ಕಟ್ಟಿ ಹಾಕಿದರು. ಬಳಿಕ ಮಹಾಭಾರತದ ಯುದ್ಧದಲ್ಲಿ ಅಳಿದುಳಿದಿದ್ದ ಕ್ಷತ್ರಿಯರಿಗೂ, ಯುದ್ಧದಲ್ಲಿ ಮರಣವನ್ನು ಹೊಂದಿದ ಕ್ಷತ್ರಿಯರ ಮಕ್ಕಳಿಗೂ ಅರ್ಜುನನ ಜೊತೆಗೆ ಯುದ್ಧವು ಏರ್ಪಟ್ಟಿತು.

ತೇऽವತೀರ್ಣಮುಪಶ್ರುತ್ಯ ವಿಷಯಂ ಶ್ವೇತವಾಹನಮ್ ।
ಪ್ರತ್ಯುದ್ಯಯುರಮೃಷ್ಯಂತೋ ರಾಜಾನಃ ಪಾಂಡವರ್ಷಭಮ್ ॥೩॥

ಯಜ್ಞಾಶ್ವವು ಮತ್ತು ಅರ್ಜುನನು ತಮ್ಮ ದೇಶಕ್ಕೆ ಬಂದಿರುವುರೆಂಬುದನ್ನು ತಿಳಿದ ಸಿಂಧುದೇಶದ ಕ್ಷತ್ರಿಯರು ಈ ವಿಷಯವನ್ನು ಸಹಿಸಲಾರದೆ ಅರ್ಜುನನನ್ನು ಎದುರಿಸಲು ಧಾವಿಸಿ ಬಂದರು.

ಅಶ್ವವಂತಂ ಪರಾಮೃಶ್ಯ ವಿಷಯಾಂತೇ ವಿಗಾಹಿತಮ್ ।
ನ ಭಯಂ ಚಕ್ರಿರೇ ಪಾರ್ಥಾದ್ ಭೀಮಸೇನಾದನಂತರಾತ್ ॥೪॥

ದೂರದಿಂದ ಯಜ್ಞಾಶ್ವದ ಜೊತೆಗೆ ಬರುತ್ತಿರುವ ಅರ್ಜುನನನ್ನು ಕಂಡ ಸೈಂಧವರು ವಿಮರ್ಶೆಯನ್ನು ಮಾಡಿ, ಅಸ್ಪಷ್ಟವಾಗಿ ಕಾಣಿಸುತ್ತಿದ್ದರೂ ಆಗಮಿಸುತ್ತಿರುವವನು ಅರ್ಜುನನೆಂದೇ ತೀರ್ಮಾನಿಸಿದರು. ಭೀಮಸೇನನ ಸಹೋದರನಾದ ಅರ್ಜುನನ ವಿಷಯದಲ್ಲಿ ಅವರು ಭಯವನ್ನು ಹೊಂದಲಿಲ್ಲ.

ತೇऽವಿದೂರಾದ್ ಧನುಷ್ಪಾಣಿಂ ಯಾಜ್ಞಿಯಸ್ಯ ಹಯಸ್ಯ ಚ ।
ಬೀಭತ್ಸುಂ ಪ್ರತ್ಯಪಶ್ಯಂತ ಪದಾತಿಂ ಪ್ರತ್ಯುಪಸ್ಥಿತಮ್ ॥೫॥

ಅರ್ಜುನನು ಹತ್ತಿರ ಆಗಮಿಸಿದಾಗ ಅಶ್ವಮೇಧ ಯಜ್ಞಕ್ಕೆ ಕುದುರೆಯನ್ನು ಅನುಸರಿಸಿಕೊಂಡು ಬರುತ್ತಿರುವದು ಧನುಷ್ಪಾಣಿಯಾದ ಅರ್ಜುನನೇ ಎಂದು ನಿಶ್ಚಯಿಸಿಕೊಂಡರು. ಕಾಲ್ನಡಿಗೆಯಿಂದಲೇ ಆಗಮಿಸುತ್ತಿರುವ ಅರ್ಜುನನನ್ನು ನೋಡಿದರು.

ತತಸ್ತೇ ತಂ ಮಹಾವೀರ್ಯಂ ರಾಜಾನಃ ಪರ್ಯವಾರಯನ್ ।
ಜಿಗೀಷಂತೋ ನರವ್ಯಾಘ್ರಾಃ ಪೂರ್ವಂ ವಿನಿಕೃತಾ ಯುಧಿ ॥೬॥

ಬಳಿಕ ಮಹಾವೀರ್ಯನಾದ ಅರ್ಜುನನನ್ನು ರಾಜರೆಲ್ಲರೂ ತಡೆದು ನಿಲ್ಲಿಸಿದರು. ಆ ನರಶ್ರೇಷ್ಠರೆಲ್ಲರೂ ಹಿಂದೆ ಈ ಅರ್ಜುನನಿಂದ ಯುದ್ಧದಲ್ಲಿ ಪರಾಜಿತರಾಗಿದ್ದರು. ಈ ಪ್ರಸಂಗದಲ್ಲಿ ಅವನನ್ನು ಗೆಲ್ಲಬೇಕೆಂಬ ಛಲವು ಅವರಲ್ಲಿ ಹುಟ್ಟಿತು.

ತೇ ನಾಮಾನ್ಯಥ ಗೋತ್ರಾಣಿ ಕರ್ಮಾಣಿ ವಿವಿಧಾನಿ ಚ ।
ಕೀರ್ತಯಂತಸ್ತದಾ ಪಾರ್ಥಂ ಶರವರ್ಷೈರವಾಕಿರನ್ ॥೭॥

ಬಳಿಕ ಸೈಂಧವರು ತಮ್ಮ ಹೆಸರುಗಳನ್ನೂ, ಗೋತ್ರಗಳನ್ನೂ, ತಾವು ಮಾಡಿರುವ ಬೇರೆ ಬೇರೆ ಸಾಹಸಕರ್ಮಗಳನ್ನೂ ಪ್ರಶಂಸಾ ಪೂರ್ವಕವಾಗಿ ಹೇಳಿಕೊಳ್ಳುತ್ತಾ, ಅರ್ಜುನನನ್ನು ಬಾಣಗಳಿಂದ ಮುಚ್ಚಿದರು.

ತೇ ಕಿರಂತಃ ಶರಾಂಸ್ತೀಕ್ಷ್ಣಾನ್ ವಾರಣೇಂದ್ರನಿವಾರಣಾನ್ ।
ರಣೇ ಜಯಮಭೀಪ್ಸಂತಃ ಕೌಂತೇಯಂ ಪರ್ಯವಾರಯನ್ ॥೮॥

ಆನೆಗಳನ್ನೂ ತಡೆದು ನಿಲ್ಲಿಸಲು ಸಮರ್ಥವಾಗಿರುವಂತಹ ಬಾಣಗಳನ್ನು ಪ್ರಯೋಗಿಸುತ್ತಾ ವಿಜಯವನ್ನು ಬಯಸಿದ ಸೈಂಧವರು ಅರ್ಜುನನನ್ನು ಸುತ್ತುವರಿದರು.

ತೇ ಸಮೀಕ್ಷ್ಯ ತು ತಂ ವೀರಮುಗ್ರಕರ್ಮಾಣಮಾಹವೇ ।
ಸರ್ವೇ ಯುಯುಧಿರೇ ವೀರಾ ರಥಸ್ಥಾಸ್ತಂ ಪದಾತಿನಮ್ ॥೯॥

ಯುದ್ಧದಲ್ಲಿ ಭಯಂಕರವಾದ ಕರ್ಮವನ್ನು ಮಾಡುವ ಅರ್ಜುನನು ತಮ್ಮ ಮುಂದೆ ವಾಹನವನ್ನೇರದೇ ನೆಲದಲ್ಲಿ ನಿಂತಿರುವುದನ್ನು ಕಂಡು ರಥವನ್ನೇರಿದ ಆ ಎಲ್ಲ ಸೈಂಧವರು ಯುದ್ಧದಲ್ಲಿ ತೊಡಗಿದರು.

ತೇ ತಮಾಜಘ್ನಿರೇ ವೀರಾ ನಿವಾತಕವಚಾಂತಕಮ್ ।
ಸಂಶಪ್ತಕನಿಹಂತಾರಂ ಹಂತಾರಂ ಸೈಂಧವಸ್ಯ ಚ ॥೧೦॥

ನಿವಾತಕವಚರನ್ನು ಸಂಹರಿಸಿರುವ, ಸಂಶಪ್ತಕರನ್ನೂ ಸಂಹರಿಸಿರುವ, ಸೈಂಧವ ಹಂತಕನಾದ ಅರ್ಜುನನನ್ನು ಎಲ್ಲ ಸೈಂಧವ ವೀರರು ಬಾಣಗಳಿಂದ ಹೊಡೆಯಲು ಆರಂಭಿಸಿದರು.

ತತೋ ರಥಸಹಸ್ರೇಣ ಗಜಾನಾಮಯುತೇನ ಚ ।
ಕೋಷ್ಠಕೀಕೃತ್ಯ ಕೌಂತೇಯಂ ಸಂಪ್ರಸ್ಥಿತಮವಾರಯನ್ ॥೧೧॥

ಸಾವಿರ ರಥಸೈನ್ಯದಿಂದಲೂ, ಹತ್ತುಸಾವಿರ ಗಜಸೈನ್ಯದಿಂದಲೂ ಅರ್ಜುನನನ್ನು ಸುತ್ತುವರಿದು ಅವನನ್ನು ಮಧ್ಯದಲ್ಲಿ ಮಾಡಿಕೊಂಡು ಜಯಾಕಾಂಕ್ಷಿಗಳಾಗಿ ಸಂತುಷ್ಟರಾಗಿ ಯುದ್ಧಮಾಡಲು ಆರಂಭಿಸಿದರು.

ಸಂಸ್ಮರಂತೋ ವಧಂ ವೀರಾಃ ಸಿಂಧುರಾಜಸ್ಯ ಧೀಮತಃ ।
ಜಯದ್ರಥಸ್ಯ ಕೌರವ್ಯ ಸಮರೇ ಸವ್ಯಸಾಚಿನಾ ॥೧೨॥

ಹಿಂದೆ ನಡೆದ ಭಾರತ ಯುದ್ಧದಲ್ಲಿ ಅರ್ಜುನನು ಸಿಂಧುರಾಜನಾದ ಜಯದ್ರಥನನ್ನು ಸಂಹರಿಸಿದನೆಂದು ಸ್ಮರಿಸಿಕೊಳ್ಳುತ್ತಾ ಅವರೆಲ್ಲರೂ ಮೇಘದಂತಿರುವ ಅರ್ಜುನನ ಮೇಲೆ ಬಾಣಗಳನ್ನು ಎಸೆದರು.

ತತಃ ಪರ್ಜನ್ಯವತ್ ಸರ್ವೇ ಶರವೃಷ್ಟಿಮವಾಸೃಜನ್ ।
ತೈಃ ಕೀರ್ಣಃ ಶುಶುಭೇ ಪಾರ್ಥೋ ರವಿರ್ಮೇಘಾಂತರೇ ಯಥಾ ॥

ಪ್ರತಿಯೊಬ್ಬರೂ ಯುದ್ಧಮದದಿಂದ ಮಳೆಯಂತೆಯೇ ಬಾಣಗಳ ವೃಷ್ಟಿಯನ್ನು ಅರ್ಜುನನ ಮೇಲೆ ಸುರಿದರು. ಈ ಪ್ರಸಂಗದಲ್ಲಿ ಅರ್ಜುನನು ಸೂರ್ಯನು ಮೇಘಗಳ ಮಧ್ಯದಲ್ಲಿ ಶೋಭಿಸುವಂತೆ ಅವರು ಎಸೆದ ಬಾಣಗಳಿಂದ ಶೋಭಿಸಿದನು.

ಸ ಶರೈಃ ಸಮವಚ್ಛನ್ನೋ ದದೃಶೇ ಪಾಂಡವರ್ಷಭಃ ।
ಪಂಜರಾಂತರಸಂಚಾರೀ ಶಕುಂತ ಇವ ಭಾರತ ॥೧೪॥

ಸೈಂಧವರ ಬಾಣಗಳಿಂದ ಆಚ್ಛಾದಿತನಾದ ಪಾಂಡವಶ್ರೇಷ್ಠನು ಒಂದು ಪಂಜರದಲ್ಲಿ ಸಂಚರಿಸುವ ಶಕುಂತ ಪಕ್ಷಿಯಂತೆ ಕಂಡುಬಂದನು.

ತತೋ ಹಾಹಾಕೃತಂ ಸರ್ವಂ ಕೌಂತೇಯೇ ಶರಪೀಡಿತೇ ।
ತ್ರೈಲೋಕ್ಯಮಭವತ್ ಸರ್ವಂ ರವಿಶ್ಚಾಸೀದ್ ರಜೋರುಣಃ ॥೧೫॥

ಅರ್ಜುನನು ಬಾಣಗಳಿಂದ ಪೀಡಿತನಾಗುತ್ತಿರಲು ಅವರೆಲ್ಲರೂ ಸಂತೋಷದಿಂದ ಹಾಹಾಕಾರವನ್ನು ಮಾಡಿದರು. ಮೂರುಲೋಕಗಳಿಗೇ ಮುಸುಕು ಕವಿದಂತಾಯಿತು. ಸೂರ್ಯನು ಧೂಳು ಮುಚ್ಚಿದಂತಾದನು.

ತತೋ ವವೌ ಮಹಾರಾಜ ಮಾರುತೋ ರೋಮಹರ್ಷಣಃ ।
ರಾಹುರಗ್ರಸದಾದಿತ್ಯಂ ಯುಗಪತ್ ಸೋಮಮೇವ ಚ ॥೧೬॥

ಆ ಸಮಯದಲ್ಲಿ ರೋಮಾಂಚಕಾರಿಯಾದ ಚಂಡಮಾರುತವು ಬೀಸತೊಡಗಿತು. ರಾಹುವು ಸೂರ್ಯ-ಚಂದ್ರರಿಬ್ಬರನ್ನೂ ಏಕಕಾಲದಲ್ಲಿ ನುಂಗಿದನು.

ಉಲ್ಕಾಶ್ಚ ಜಘ್ನಿರೇ ಸೂರ್ಯಂ ಕೀರ್ಯಮಾಣಾಃ ಸಮಂತತಃ ।
ವೇಪಥುಶ್ಚಾಭವದ್ ರಾಜನ್ ಕೈಲಾಸಸ್ಯ ಮಹಾಗಿರೇಃ ॥೧೭॥

ಎಲ್ಲ ಕಡೆಗಳಲ್ಲಿಯೂ ಉಲ್ಕಾಪಾತಗಳಾದವು. ಸೂರ್ಯನ ಮೇಲೆಯೂ ಉಲ್ಕೆಗಳು ಬೀಳುತ್ತಿದ್ದವು. ಕೈಲಾಸ ಪರ್ವತವು ನಡುಗಲಾರಂಭಿಸಿತು.

ಮುಮುಚುಶ್ಚಾಸ್ತ್ರಮತ್ಯುಷ್ಣಂ ದುಃಖಶೋಕಸಮನ್ವಿತಾಃ ।
ಸಪ್ತರ್ಷಯೋ ಜಾತಭಯಾಸ್ತಥಾ ದೇವರ್ಷಯೋಽಪಿ ಚ ॥೧೮॥

ಅರ್ಜುನನಿಗುಂಟಾದ ದುಃಸ್ಥಿತಿಯನ್ನು ಕಂಡು ದುಃಖ-ಶೋಕಗಳಿಂದ ತುಂಬಿದ ಸಪ್ತರ್ಷಿಗಳು ಬಿಸಿಯಾದ ಕಣ್ಣೀರನ್ನು ಸುರಿಸಿದರು. ಭಯವನ್ನು ಹೊಂದಿದರು. ದೇವರ್ಷಿಗಳ ಸ್ಥಿತಿಯೂ ಹೀಗೇ ಆಯಿತು.

ಶಶಶ್ಚಾಶು ವಿನಿರ್ಭಿದ್ಯ ಮಂಡಲಂ ಶಶಿನೋಽಗಮತ್ ।
ವಿಪರೀತಸ್ತಥಾಽಽಕಾಶಸ್ತಸ್ಮಿನ್ನುತ್ಪಾತಲಕ್ಷಣೇ ॥೧೯॥

ಚಂದ್ರನಲ್ಲಿದ್ದ ಮೊಲವನ್ನು ಭೇದಿಸಿಕೊಂಡು ಉಲ್ಕೆಗಳು ಚಂದ್ರಮಂಡಲದ ಸುತ್ತಲೂ ಬೀಳತೊಡಗಿದವು. ಎಲ್ಲ ದಿಕ್ಕುಗಳೂ ಹೊಗೆಯಿಂದ ವ್ಯಾಪ್ತವಾಗಿದ್ದು ವಿಪರೀತವಾಗಿ ಕಾಣಿಸುತ್ತಿದ್ದವು.

ರಾಸಭಾರುಣಸಂಕಾಶಾ ಧನುಷ್ಮಂತಃ ಸವಿದ್ಯುತಃ ।
ಆವೃತ್ಯ ಗಗನಂ ಮೇಘಾ ಮುಮುಚುರ್ಮಾಂಸಶೋಣಿತಮ್ ॥೨೦॥

ಕತ್ತೆಯ ಬಣ್ಣದಂತೆ ಬಣ್ಣವುಳ್ಳ ಮತ್ತು ಎಣ್ಣೆಗೆಂಪಿನ ಬಣ್ಣಗಳಿಂದ ಉಂಟಾದ ಬಣ್ಣವುಳ್ಳ ಕಾಮನ ಬಿಲ್ಲಿನಿಂದ ಕೂಡಿದ, ಮಿಂಚಿನಿಂದ ಯುಕ್ತವಾದ ಮೇಘಗಳು ಆಕಾಶದಲ್ಲಿ ವ್ಯಾಪಿಸಿ ರಕ್ತ-ಮಾಂಸಗಳನ್ನು ಸುರಿಸಲಾರಂಭಿಸಿದವು.

ಏವಮಾಸೀತ್ ತದಾ ವೀರೇ ಶರವರ್ಷಾಭಿಸಂವೃತೇ ।
ಲೋಕೇಽಸ್ಮಿನ್ ಭರತಶ್ರೇಷ್ಠ ತದದ್ಭುತಮಿವಾಭವತ್ ॥೨೧॥

ಅರ್ಜುನನು ಶತ್ರುಗಳಿಂದ ಬಿಟ್ಟ ಬಾಣಗಳಿಂದ ಮುಚ್ಚಿಹೋದಾಗ ಇಂತಹ ಉತ್ಪಾತಗಳು ಪರಮಾದ್ಭುತವಾಗಿ ಕಾಣಿಸಿಕೊಂಡವು.

ತಸ್ಯ ತೇನಾಭಿಕೀರ್ಣೇನ ಶರಜಾಲೇನ ಸರ್ವತಃ ।
ಮೋಹಾತ್ ಪಪಾತ ಗಾಂಡೀವಮಾವಾಪಶ್ಚ ಕರಾದಪಿ ॥೨೨॥

ಎಲ್ಲ ಕಡೆಗಳಿಂದಲೂ ಎರಚಲ್ಪಟ್ಟ ಬಾಣಗಳ ಸಮುದಾಯದಿಂದ ಅರ್ಜುನನು ವಿಮೋಹಿತನಾದನು. ಅವನ ಕೈಯಲ್ಲಿರುವ ಗಾಂಡೀವವೂ, ಕೈಗೆ ಹಾಕಿಕೊಂಡಿರುವ ಕಂಕಣವೂ ಜಾರಿಬಿದ್ದವು.

ತಸ್ಮಿನ್ ಮೋಹಮನುಪ್ರಾಪ್ತೇ ಶರಜಾಲಂ ಮಹತ್ತರಮ್ ।
ಸೈಂಧವಾ ಮುಮುಚುಸ್ತೂರ್ಣಂ ಗತಸತ್ವೇ ಮಹಾರಥೇ ॥೨೩॥

ಹೀಗೆ ಮಹಾರಥನಾದ ಅರ್ಜುನನು ಮೋಹವನ್ನು ಹೊಂದಿದ್ದರೂ ಸೈಂಧವರು ಗತಸತ್ವನಾದ, ಮಹಾರಥನಾದ ಅರ್ಜುನನ ಮೇಲೆ ಬಾಣಗಳನ್ನು ಸುರಿಸುತ್ತಲೇ ಇದ್ದರು.

ತತೋ ಮೋಹಸಮಾಪನ್ನಂ ಜ್ಞಾತ್ವಾ ಪಾರ್ಥಂ ದಿವೌಕಸಃ ।
ಸರ್ವೇ ವಿತ್ರಸ್ತಮನಸಃ ಸರ್ವೇ ಶಾಂತಿಪರಾಃ ಸ್ಥಿತಾಃ ॥೨೪॥

ಅರ್ಜುನನು ಮೋಹವನ್ನು ಹೊಂದಿರುವನೆಂದು ತಿಳಿದಿರುವ ದೇವತೆಗಳು ಎಲ್ಲರೂ ಕಳವಳಗೊಂಡ ಮನಸ್ಸುಳ್ಳವರಾಗಿ ಶಾಂತಿಕರ್ಮವನ್ನು ಆಲೋಚಿಸಲು ಆರಂಭಿಸಿದರು.

ತತೋ ದೇವರ್ಷಯಃ ಸರ್ವೇ ತಥಾ ಸಪ್ತರ್ಷಯೋಽಪಿ ಚ ।
ಬ್ರಹ್ಮರ್ಷಯಶ್ಚ ವಿಜಯಂ ಜೇಪುಃ ಪಾರ್ಥಸ್ಯ ಧೀಮತಃ ॥೨೫॥

ಅರ್ಜುನನಿಗೆ ಜಯವಾಗಲೆಂದು ದೇವರ್ಷಿಗಳು, ಸಪ್ತರ್ಷಿಗಳು, ಬ್ರಹ್ಮರ್ಷಿಗಳು ಜಪಿಸಲಾರಂಭಿಸಿದರು.

ತತಃ ಪ್ರದೀಪಿತೇ ದೇವೈಃ ಪಾರ್ಥತೇಜಸಿ ಪಾರ್ಥಿವ ।
ತಸ್ಥಾವಚಲವದ್ಧೀಮಾನ್ ಸಂಗ್ರಾಮೇ ಪರಮಾಸ್ತ್ರವಿತ್ ॥೨೬॥

ದೇವತೆಗಳೆಲ್ಲರೂ ಅರ್ಜುನನು ತೇಜಸ್ಸಂಪನ್ನನಾಗಲೆಂದು ಪ್ರಾರ್ಥಿಸಿದಾಗ, ಅವರ ಮಂತ್ರದ ಬಲದಿಂದ ಅರ್ಜುನನು ತೇಜೋಯುಕ್ತನಾದನು. ಶ್ರೇಷ್ಠವಾದ ಅಸ್ತ್ರಜ್ಞನಾದ ಅರ್ಜುನನು ಯುದ್ಧದಲ್ಲಿ ಬುದ್ಧಿಸ್ವಾಸ್ಥ್ಯವನ್ನು ಪಡೆದು ಅಚಲನಾಗಿ ನಿಂತನು.

ವಿಚಕರ್ಷ ಧನುರ್ದಿವ್ಯಂ ತತಃ ಕೌರವನಂದನಃ ।
ವಜ್ರಸ್ಯೇವೇಹ ಶಬ್ದೋಽಭೂನ್ಮಹಾಂಸ್ತಸ್ಯ ಪುನಃ ಪುನಃ ॥೨೭॥

ಕೌರವನಂದನನಾದ ಅರ್ಜುನನು ದಿವ್ಯವಾದ ಧನುಸ್ಸಿನ ಜ್ಯಾವನ್ನು ಬಲವಾಗಿ ಸೆಳೆದನು. ಆ ಧನುಸ್ಸಿನ ಠೇಂಕಾರದಿಂದ ಉಂಟಾದ ಶಬ್ದದ ಅಲೆಯು ವಜ್ರಾಯುಧದ ಶಬ್ದದಂತೆ ಪುನಃ ಪುನಃ ಪ್ರತಿಧ್ವನಿಸಿತು.

ತತಃ ಸ ಶರವರ್ಷಾಣಿ ಪ್ರತ್ಯಮಿತ್ರಾನ್ ಪ್ರತಿ ಪ್ರಭುಃ ।
ವವರ್ಷ ಚ ತಥಾ ಪಾರ್ಥೋ ವರ್ಷಾಣೀವ ಪುರಂದರಃ ॥೨೮॥

ಶತ್ರುಗಳನ್ನು ಉದ್ದೇಶಿಸಿಕೊಂಡು ಪ್ರಭುವಾದ ಅರ್ಜುನನು ಬಾಣಗಳ ಮಳೆಯನ್ನೇ ಸುರಿದನು. ಇಂದ್ರದೇವನು ವರ್ಷಋತುವಿನಲ್ಲಿ ಸುರಿಸುವ ಮಳೆಹನಿಗಳಂತೆ ಅನೇಕ ಸಂಖ್ಯೆಯ ಬಾಣಗಳ ಮಳೆಯನ್ನು ಸೈಂಧವರ ಮೇಲೆ ಸುರಿದನು.

ತತಸ್ತೇ ಸೈಂಧವಾ ಯೋಧಾಃ ಸರ್ವ ಏವ ಸರಾಜಕಾಃ ।
ನಾದೃಶ್ಯಂತ ಶರೈಃ ಕೀರ್ಣಾಃ ಶಲಭೈರಿವ ಪಾದಪಾಃ ॥೨೯॥

ರಾಜರಿಂದ ಸಹಿತರಾದ ಸೈಂಧವ ಯೋಧರೆಲ್ಲರೂ ಅರ್ಜುನನ ಬಾಣಗಳಿಂದ ತುಂಬಿಹೋದರು. ಪರಸ್ಪರ ಯಾರೂ ಕಣ್ಣಿಗೆ ಕಾಣಿಸಲಿಲ್ಲ. ಪತಂಗಗಳಿಂದ ಆವೃತವಾದ ವೃಕ್ಷಗಳಂತೆ ಅರ್ಜುನನ ಬಾಣಗಳಿಂದ ಸೈಂಧವಯೋಧರೆಲ್ಲರೂ ಆವೃತವಾಗಿ ಅದೃಶ್ಯರಾದರು.

ತಸ್ಯ ಶಬ್ದೇನ ವಿತ್ರೇಸುರ್ಭಯಾರ್ತಾಶ್ಚ ವಿದುದ್ರುವುಃ ।
ಮುಮುಚುಶ್ಚಾಶ್ರು ಶೋಕಾರ್ತಾ ನಿಕೃತ್ತಾಶ್ಚಾಪಿ ಸೈಂಧವಾಃ ॥೩೦॥

ನಿರಂತರವೂ ಕೇಳಿಬರುತ್ತಿದ್ದ ಗಾಂಡೀವ ಧನುಸ್ಸಿನ ಠೇಂಕಾರ ಶಬ್ದದಿಂದ ಸೈಂಧವ ಕ್ಷತ್ರಿಯರೆಲ್ಲರೂ ಭಯ ಹೊಂದಿದರು. ಕೆಲವರು ಓಡಿಹೋದರು, ಮತ್ತೆ ಕೆಲವರು ದುಃಖಿತರಾಗಿ ಕಣ್ಣೀರನ್ನು ಸುರಿಸಿದರು. ಕೆಲವರು ಬಾಣಗಳಿಂದ ಅವಯವ ಛೇದವನ್ನೇ ಹೊಂದಿದರು.

ತಾಂಸ್ತು ಸರ್ವಾನ್ ನರಶ್ರೇಷ್ಠಃ ಸರ್ವತೋ ವಿಚರದ್ ಬಲೀ ।
ಅಲಾತಚಕ್ರವದ್ ರಾಜನ್ ಶರಜಾಲೈಃ ಸಮರ್ಪಯನ್ ॥೩೧॥

ಆ ಎಲ್ಲ ಸೈಂಧವ ಯೋಧರನ್ನು ನರಶ್ರೇಷ್ಠನಾದ ಅರ್ಜುನನು ಹತ್ತು ದಿಕ್ಕುಗಳಿಗೆ ಓಡಿಸಿದನು. ಪಂಜಿನ ಚಕ್ರದಂತೆ ಎಲ್ಲೆಡೆಯೂ ಸಂಚರಿಸುತ್ತಾ ಸೈಂಧವರ ಮೇಲೆ ಬಾಣಪ್ರಯೋಗಗಳನ್ನು ಮಾಡುತ್ತಲೇ ಇದ್ದನು.

ತಮಿಂದ್ರಜಾಲಪ್ರತಿಮಂ ಬಾಣಜಾಲಮಮಿತ್ರಹಾ ।
ವ್ಯಸೃಜದ್ ದಿಕ್ಷು ಸರ್ವಾಸು ಮಹೇಂದ್ರ ಇವ ಸರ್ವತಃ ॥೩೨॥

ಶತ್ರುಸೂದನನಾದ ಅರ್ಜುನನು ವಜ್ರಧರನಾದ ಇಂದ್ರನಂತೆ ಎಲ್ಲ ದಿಕ್ಕುಗಳಲ್ಲಿಯೂ ಇಂದ್ರಜಾಲಸದೃಶವಾದ ಬಾಣಜಾಲಗಳನ್ನು ಸುರಿಸಲಾರಂಭಿಸಿದನು.

ಮೇಘಜಾಲನಿಭಂ ಸೈನ್ಯಂ ವಿದಾರ್ಯ ಸ ರವಿಪ್ರಭಃ ।
ವಿಬಭೌ ಕೌರವಶ್ರೇಷ್ಠಃ ಶರದೀವ ದಿವಾಕರಃ ॥೩೩॥

ಶರತ್ಕಾಲದಲ್ಲಿ ಮೇಘಗಳ ಸಮೂಹವನ್ನು ಛಿನ್ನ-ಭಿನ್ನಗೊಳಿಸುವ ಸೂರ್ಯನಂತೆ ಮೇಘಸದೃಶವಾದ ಸೈಂಧವಸೈನ್ಯವನ್ನು ತನ್ನ ಬಾಣಗಳೆಂಬ ವೃಷ್ಟಿಯಿಂದ ಛಿನ್ನ-ಭಿನ್ನಗೊಳಿಸಿ ಅರ್ಜುನನು ಶೋಭಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಆಶ್ವಸಂಚರಣೇ ಸೈಂಧವಯುದ್ಧಂ ನಾಮ
ಸಪ್ತಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆಂಟನೆಯ ಅಧ್ಯಾಯ

ಅರ್ಜುನ-ಸೈಂಧವರ ಯುದ್ಧ.
ದುಶ್ಶಲೆಯ ಪ್ರಾರ್ಥನೆಯಂತೆ ಯುದ್ಧವನ್ನು ನಿಲ್ಲಿಸಿದುದು.

ವೈಶಂಪಾಯನಃ

ತತೋ ಗಾಂಡೀವಭೃಚ್ಛೂರೋ ಯುದ್ಧಾಯ ಸಮುಪಸ್ಥಿತಃ ।
ವಿಬಭೌ ಯುಧಿ ದುರ್ಧರ್ಷೋ ಹಿಮವಾನಚಲೋ ಯಥಾ ॥೧॥

ವೈಶಂಪಾಯನ– ಜನಮೇಜಯನೇ, ಗಾಂಡೀವಧನುರ್ಧಾರಿಯಾದ, ಯುದ್ಧಕ್ಕಾಗಿ ಸಿದ್ಧನಾಗಿ ನಿಂತಿರುವ, ಶತ್ರುಗಳಿಂದ ಎದುರಿಸಲು ಅಸಾಧ್ಯನಾದ ಅರ್ಜುನನು ರಣಭೂಮಿಯಲ್ಲಿ ಅಚಲವಾದ ಹಿಮವದ್ ಪರ್ವತದಂತೆ ಶೋಭಿಸಿದನು.

ತತಃ ಸೈಂಧವಯೋಧಾಸ್ತೇ ಪುನರೇವ ವ್ಯವಸ್ಥಿತಾಃ ।
ವಿಮುಂಚಂತಃ ಸುಸಂರಬ್ಧಾಃ ಶರವರ್ಷಾಣಿ ಭಾರತ ॥೨॥

ಬಳಿಕ ಬಹಳವಾಗಿ ಕೋಪಗೊಂಡಿರುವ ಸೈಂಧವ ಯೋಧರು ಪುನಃ ಒಟ್ಟಾಗಿ ಅರ್ಜುನನನ್ನು ಎದುರಿಸಲು ಬಾಣಗಳ ಮಳೆಯನ್ನು ಸುರಿದರು.

ತಾನ್ ಪ್ರಹಸ್ಯ ಮಹಾವೀರ್ಯಃ ಪುನರೇವ ವ್ಯವಸ್ಥಿತಾನ್ ।
ತತಃ ಪ್ರೋವಾಚ ಕೌಂತೇಯೋ ಮುಮೂರ್ಷುನ್ ಶ್ಲಕ್ಷ್ಣಯಾ ಗಿರಾ ॥

ಸೈಂಧವ ವೀರರು ಯುದ್ಧದಲ್ಲಿ ಮರಣವನ್ನು ಹೊಂದುವ ಆಸೆಯಿಂದಲೇ ಸಂಘಟಿತರಾಗಿ ಬಂದು ತಮ್ಮ ಮೇಲೆ ಬಾಣಗಳನ್ನು ಪ್ರಯೋಗಿಸುತ್ತಿರುವುದಾಗಿ ಅರ್ಜುನನು ನೋಡಿ ಮಧುರವಾದ ಮಾತುಗಳಿಂದಲೇ ಇಂತು ನುಡಿದನು.

ಅರ್ಜುನಃ

ಯುಧ್ಯಧ್ವಂ ಪರಯಾ ಶಕ್ತ್ಯಾ ಯತಧ್ವಂ ಚ ವಧೇ ಮಮ ।
ಕುರುಧ್ವಂ ಸರ್ವಕಾರ್ಯಾಣಿ ಮಹದ್ ವೋ ಭಯಮಾಗತಮ್ ॥೪॥

ಅರ್ಜುನ– ಸೈಂಧವ ವೀರರೇ, ನಿಮ್ಮಲ್ಲಿರುವ ಸಮಗ್ರ ಶಕ್ತಿಯನ್ನೂ ಪ್ರಯೋಗಿಸಿ ನನ್ನೊಡನೆ ಯುದ್ಧ ಮಾಡಿರಿ. ನನ್ನನ್ನು ಜಯಿಸುವ ದೃಷ್ಟಿಯಿಂದಲೇ ನಿಮ್ಮ ಸಮಗ್ರ ಪ್ರಯತ್ನವಿರಲಿ. ನೀವು ಮಾಡಬೇಕಾದ ಕರ್ಮಗಳನ್ನೆಲ್ಲ ಮುಗಿಸಿ ಬನ್ನಿರಿ. ನಿಮಗೆ ಪ್ರಾಣಭಯವು ಸನ್ನಿಹಿತವಾಗಿದೆ.

ಏಷ ಯೋತ್ಸ್ಯಾಮಿ ವಃ ಸರ್ವಾನ್ ನಿವಾರ್ಯ ಶರವಾಗುರಾಮ್ ।
ತಿಷ್ಠಧ್ವಂ ಯುದ್ಧಮನಸೋ ದರ್ಪಾನ್ ವಿನಯಿತಾಸ್ಮಿ ವಃ ॥೫॥

ನೀವು ಪ್ರಯೋಗಿಸುತ್ತಿರುವ ಬಾಣಗಳ ಸಮುದಾಯವೆಲ್ಲವನ್ನೂ ಕ್ಷಣಮಾತ್ರದಲ್ಲಿ ತುಂಡರಿಸುತ್ತೇನೆ. ಯುದ್ಧ ಮಾಡುವ ಮನಸ್ಸಿನಿಂದ ನನ್ನೆದುರು ನಿಲ್ಲಿರಿ. ನಿಮ್ಮೆಲ್ಲರ ದರ್ಪವನ್ನು ಕ್ಷಣಮಾತ್ರದಲ್ಲಿ ಶಾಂತಗೊಳಿಸುತ್ತೇನೆ.

ವೈಶಂಪಾಯನಃ

ಏತಾವದುಕ್ತ್ವಾ ಕೌರವ್ಯೋ ರೋಷಾದ್ ಗಾಂಡೀವಭೃತ್ ತದಾ ।
ನ ತತಾಪ ವಚಃ ಸ್ಮೃತ್ವಾ ಭ್ರಾತುರ್ಜ್ಯೇಷ್ಠಸ್ಯ ಭಾರತ ॥೬॥

ನ ಹಂತವ್ಯಾ ರಣೇ ತಾತ ಕ್ಷತ್ರಿಯಾ ವಿಜಿಗೀಷವಃ ।
ಜೇತವ್ಯಾಶ್ಚೇತಿ ಯತ್ಪೋಕ್ತಂ ಧರ್ಮರಾಜ್ಞಾ ಮಹಾತ್ಮನಾ ॥೭॥

ವೈಶಂಪಾಯನ– ಗಾಂಡೀವಧಾರಿಯಾದ ಅರ್ಜುನನು ರೋಷದಿಂದ ಹೀಗೆ ಹೇಳುತ್ತಾ ಯುದ್ಧಕ್ಕೆ ಸಜ್ಜಾಗಿ ನಿಂತನು. ಆದರೆ ಧರ್ಮಾತ್ಮನಾದ ಯುಧಿಷ್ಠಿರನು ಹೇಳಿದ ಯುದ್ಧದಲ್ಲಿ ಕ್ಷತ್ರಿಯರನ್ನು ಕೊಲ್ಲಬಾರದು, ಜಯಿಸಬೇಕು ಎಂಬ ಮಾತು ಅರ್ಜುನನಿಗೆ ನೆನಪಾಯಿತು.

ಚಿಂತಯಾಮಾಸ ಚ ತದಾ ಫಲ್ಗುನಃ ಪುರುಷರ್ಷಭಃ ॥೮॥

ಧರ್ಮರಾಜನ ಮಾತುಗಳನ್ನು ನೆನೆದು ಪುರುಷರ್ಷಭನಾದ ಫಲ್ಗುನನು ಹೀಗೆ ಆಲೋಚಿಸಿದನು.

ಇತ್ಯುಕ್ತೋಽಹಂ ನರೇಂದ್ರೇಣ ನ ಹಂತವ್ಯಾ ನೃಪಾ ಇತಿ ।
ಕಥಂ ತನ್ನ ಮೃಷೇಹ ಸ್ಯಾದ್ ಧರ್ಮರಾಜವಚಃ ಶುಭಮ್ ॥೯॥

ನರಶ್ರೇಷ್ಠನಾದ ಧರ್ಮರಾಜನು ಯಾವುದೇ ಕ್ಷತ್ರಿಯರನ್ನು ಕೊಲ್ಲಬಾರದು ಎಂದು ಹೇಳಿದ್ದಾನೆ. ಈ ಪ್ರಸಂಗದಲ್ಲಿ ಧರ್ಮರಾಜನ ಈ ಮಂಗಳಮಯವಾದ ಮಾತನ್ನು ನಾನು ಹೇಗೆ ಸುಳ್ಳಾಗದಿರುವಂತೆ ವರ್ತಿಸಲಿ?

ನ ಹಂತವ್ಯಾಶ್ಚ ರಾಜಾನೋ ರಾಜ್ಞಶ್ಚಾಜ್ಞಾ ಕೃತಾ ಭವೇತ್ ॥೧೦॥

ಯಾವುದೇ ರಾಜರನ್ನು ಸಂಹರಿಸಬಾರದು. ಕುದುರೆಯನ್ನು ರಕ್ಷಿಸಿಕೊಂಡು ಬರಬೇಕೆಂಬ ಆಜ್ಞೆಯನ್ನು ನಾನು ಹೇಗೆ ಸಾಧಿಸಲಿ?

ಇತಿ ಸಂಚಿಂತ್ಯ ತು ತದಾ ಭ್ರಾತುಃ ಪ್ರಿಯಹಿತೇ ರತಃ ।
ಪ್ರೋವಾಚ ವಾಕ್ಯಂ ಧರ್ಮಜ್ಞಃ ಸೈಂಧವಾನ್ ಯುದ್ಧದುರ್ಮದಾನ್ ॥

ಹೀಗೆ ಅರ್ಜುನನು ಸ್ವಲ್ಪ ಸಮಯ ಆಲೋಚಿಸಿ, ಯುದ್ಧದುರ್ಮದರಾದ ಸೈಂಧವರನ್ನು ಕುರಿತು, ಅಣ್ಣನಿಗೆ ಸಂತೋಷವನ್ನುಂಟು ಮಾಡುವ ಮಾತುಗಳನ್ನು ಆಡಿದನು.

ಅರ್ಜುನಃ

ಬಾಲಾಂಸ್ತ್ರಿಯೋ ವಾ ಯುದ್ಧೇಷು ನ ಹಿಂಸೇ ಸಮುಪಸ್ಥಿತಾನ್ ।
ಯಶ್ಚ ವಕ್ಷ್ಯತಿ ಸಂಗ್ರಾಮೇ ತವಾಸ್ಮೀತಿ ಪರಾಜಿತಃ ॥೧೨॥

ಅರ್ಜುನ– ಬಾಲಕರನ್ನಾಗಲೀ, ಸ್ತ್ರೀಯರನ್ನಾಗಲೀ ಯುದ್ಧಕ್ಕೆ ಆಗಮಿಸಿರುವ ಇವರನ್ನು ನಾನು ಹಿಂಸೆ ಪಡಿಸುವುದಿಲ್ಲ. ಯಾವ ಪರಾಕ್ರಮಿಯಾದ ವ್ಯಕ್ತಿಯು ನನ್ನಿಂದ ಪರಾಜಿತರಾಗಿ ಈ ಸಂಗ್ರಾಮದಲ್ಲಿ ನಾನು ನಿನ್ನ ಅಧೀನನಾಗಿದ್ದೇನೆ ಎಂದು ಹೇಳುತ್ತಾನೋ ಅವನನ್ನೂ ನಾನು ವಧಿಸುವುದಿಲ್ಲ.

ಏತಚ್ಛ್ರುತ್ವಾ ವಚೋ ಮಹ್ಯಂ ಕುರುಧ್ವಂ ಹಿತಮಾತ್ಮನಃ ॥೧೩॥

ಈ ನನ್ನ ಮಾತುಗಳನ್ನು ಕೇಳಿಸಿಕೊಂಡ ನೀವು ಹಿತವಾದುದು ಯಾವುದೆಂದು ಆಲೋಚಿಸಿ ಕೆಲಸ ಮಾಡಿರಿ.

ಅತೋಽನ್ಯಥಾ ಕೃಚ್ಛ್ರಗತಾ ಭವಿಷ್ಯಥ ಮಯಾರ್ದಿತಾಃ ॥೧೪॥

ಇದಕ್ಕೆ ವಿರುದ್ಧವಾಗಿ ವರ್ತಿಸಿದಲ್ಲಿ ನನ್ನ ಬಾಣಗಳಿಂದ ಪೀಡಿತರಾಗಿ ಕಷ್ಟವನ್ನು ಹೊಂದುತ್ತೀರಿ.

ವೈಶಂಪಾಯನಃ

ಏವಮುಕ್ತ್ವಾ ತು ತಾನ್ ವೀರಾನ್ ಯುಯುಧೇ ನರಪುಂಗವಃ ।
ಅತ್ವರಾವಾನಸಂರಬ್ಧಃ ಸಂರಬ್ಧೈರ್ವಿಜಿಗೀಷುಭಿಃ ॥೧೫॥

ವೈಶಂಪಾಯನ– ಅರ್ಜುನನು ಹೀಗೆ ಹೇಳಿ ಅವರ ಪ್ರತಿಕ್ರಿಯೆಯನ್ನು ವೀಕ್ಷಿಸಿದನು. ಆದರೆ ಯಾರೂ ಅರ್ಜುನನ ಮಾತಿಗೆ ಶರಣಾಗರಾಗಲಿಲ್ಲ. ಅತಿ ಕ್ರುದ್ಧರಾಗಿ ವಿಜಯವನ್ನು ಹೊಂದುವ ಆಸೆಯಿಂದಲೇ ಯುದ್ಧಕ್ಕೆ ಮುಂದೆ ಬಂದರು. ಅವರನ್ನು ಅರ್ಜುನನು ಎದುರಿಸಿದನು.

ತತಃ ಶತಸಹಸ್ರಾಣಿ ಶರಾಣಾಂ ನತಪರ್ವಣಾಮ್ ।
ಮುಮುಚುಃ ಸೈಂಧವಾ ರಾಜನ್ ತದಾ ಗಾಂಡೀವಧನ್ವನಿ ॥೧೬॥

ಆ ಸಮಯದಲ್ಲಿ ಸೈಂಧವರು ಬಗ್ಗಿದ ಬಿಲ್ಲುಗಳಿಂದ ಕೂಡಿರುವ ಒಂದು ಲಕ್ಷ ಬಾಣಗಳನ್ನು ಗಾಂಡೀವಧಾರಿಯಾದ ಅರ್ಜುನನ ಮೇಲೆ ನಿರಂತರ ಸುರಿಸಿದರು.

ಸ ತಾನಾಪತತಃ ಕ್ರೂರಾನ್ ಆಶೀವಿಷವಿಷೋಪಮಾನ್ ।
ಚಿಚ್ಛೇದ ನಿಶಿತೈರ್ಬಾಣೈರಂತರಿಕ್ಷೇ ಧನಂಜಯಃ ॥೧೭॥

ಸರ್ಪಗಳ ವಿಷಕ್ಕೆ ಸಮಾನವಾಗಿರುವ, ಅತ್ಯಂತ ಕ್ರೂರವಾದ ಬಾಣಗಳು ತನ್ನ ಮೇಲೆ ರಭಸದಿಂದ ಬರುತ್ತಿರುವುದನ್ನು ಕಂಡ ಅರ್ಜುನನು ಹರಿತವಾದ ಬಾಣಗಳಿಂದ ಅವುಗಳೆಲ್ಲವನ್ನೂ ತುಂಡರಿಸಿದನು.

ಛಿತ್ತ್ವಾ ತು ತಾನಾಶು ಜವಾನ್ ಕಂಕಪತ್ರಾನ್ ಶಿಲಾಸಿತಾನ್ ।
ಏಕೈಕಮೇಷ ದಶಭಿರ್ಬಿಭೇದ ಸಮರೇ ಶರೈಃ ॥೧೮॥

ಹದ್ದಿನ ರೆಕ್ಕೆಗಳನ್ನು ಹೊಂದಿರುವ, ಸೈಂಧವ ಯೋಧರಿಂದ ಪ್ರಯೋಗಿಸಲ್ಪಟ್ಟ ಬಾಣಗಳನ್ನು ವೇಗವಾಗಿ ಕತ್ತರಿಸಿ ಒಬ್ಬೊಬ್ಬ ಯೋಧನನ್ನೂ ತನ್ನ ಹರಿತವಾದ ಬಾಣಗಳಿಂದ ಘಾಸಿಗೊಳಿಸಿದನು.

ತತಃ ಪ್ರಾಸಾಂಶ್ಚ ಶಕ್ತೀಶ್ಚ ಪುನರೇವ ಧನಂಜಯೇ ।
ಜಯದ್ರಥಂ ಹತಂ ಸ್ಮೃತ್ವಾ ಚಿಕ್ಷಿಪುಃ ಸೈಂಧವಾ ನೃಪ ॥೧೯॥

ಜಯದ್ರಥನು ಅರ್ಜುನನಿಂದ ಹತನಾದನೆಂದು ಸ್ಮರಿಸಿಕೊಳ್ಳುತ್ತಾ ಸೈಂಧವ ಯೋಧರು ಅರ್ಜುನನ ಮೇಲೆ ಪ್ರಾಸ ಆಯುಧಗಳನ್ನೂ, ಶಕ್ತ್ಯಾಯುಧಗಳನ್ನೂ ಪುನಃ ಪುನಃ ಪ್ರಯೋಗಿಸುತ್ತಲೇ ಇದ್ದರು.

ತೇಷಾಂ ಕಿರೀಟೀ ಸಂಕಲ್ಪಂ ಮೋಘಂ ಚಕ್ರೇ ಮಹಾಮನಾಃ ।
ಸರ್ವಾಂಸ್ತಾನಂತರಾ ಛಿತ್ತ್ವಾ ಮುದಾ ಚುಕ್ರೋಶ ಪಾಂಡವಃ ॥೨೦॥

ಸಮಸ್ತ ಆಯುಧಗಳನ್ನು ಅರ್ಜುನನು ಮಧ್ಯದಲ್ಲಿಯೇ ಕತ್ತರಿಸಿ ಗರ್ಜನೆ ಮಾಡಿದನು. ಸೈಂಧವ ರಾಜರ ಸಂಕಲ್ಪವನ್ನು ವಿಫಲಗೊಳಿಸಿದನು.

ತಥೈವಾಪತತಾಂ ತೇಷಾಂ ಯೋಧಾನಾಂ ಜಯಗೃದ್ಧಿನಾಮ್ ।
ಶಿರಾಂಸಿ ಪಾತಯಾಮಾಸ ಭಲ್ಲೈಃ ಸನ್ನತಪರ್ವಭಿಃ ॥೨೧॥

ವಿಜಯವನ್ನು ಬಯಸುತ್ತಾ ಆಕ್ರಮಿಸಲು ಮುನ್ನುಗಿ ಬರುತ್ತಿದ್ದವರ ತಲೆಗಳನ್ನು ಬಗ್ಗಿದ ಗಿಣ್ಣುಗಳಿಂದ ಕೂಡಿದ ಭಲ್ಲಗಳಿಂದ ತುಂಡರಿಸಿದನು.

ತೇಷಾಂ ವಿದ್ರವತಾಂ ಚೈವ ಪುನರೇವ ಚ ಧಾವತಾಮ್ ।
ನಿವೃತ್ತಾನಾಂ ಚ ಶಬ್ದೋಽಭೂತ್ ಪೂರ್ಣಸ್ಯೇವ ಮಹೋದಧೇಃ ॥೨೨॥

ಅದರಿಂದ ಭಯಗ್ರಸ್ಥರಾದ ಸೈಂಧವ ಯೋಧರು ಪಲಾಯನರಾದರು. ಕೆಲವರು ಸಂಘಟಿತರಾಗಿ ಪುನಃ ಯುದ್ಧಕ್ಕೆ ಆಗಮಿಸುತ್ತಿದ್ದರು. ಹೀಗೆ ಸೈಂಧವ ಯೋಧರ ಗಮನಾಗಮನಗಳ ಶಬ್ದವು ತುಂಬಿದ ಮಹೋದಧಿಯ ಗಂಭೀರ ಧ್ವನಿಯನ್ನು ಅನುಕರಿಸುತ್ತಿತ್ತು.

ತೇ ವಧ್ಯಮಾನಾ ಹಿ ತದಾ ಪಾರ್ಥೇನಾಮಿತತೇಜಸಾ ।
ಯಥೋತ್ಸಾಹಂ ಯಥಾಶಕ್ತಿ ಯೋಧಯಾಮಾಸುರರ್ಜುನಮ್ ॥೨೩॥

ಅಮಿತ ತೇಜಸ್ವಿಯಾದ ಅರ್ಜುನನಿಂದ ಸೈಂಧವ ಯೋಧರು ಅಪಾರ ಸಂಖ್ಯೆಯಲ್ಲಿ ಹತರಾಗುತ್ತಿದ್ದರೂ ತಮಗೆ ಶಕ್ತಿ ಇರುವಷ್ಟು ಉತ್ಸಾಹದಿಂದಲೇ ಅರ್ಜುನನ ಬಳಿ ಯುದ್ಧ ಮಾಡಿದರು.

ತತಸ್ತೇ ಫಲ್ಗುನೇನಾಜೌ ಶರೈಃ ಸನ್ನತಪರ್ವಭಿಃ ।
ಕೃತಾ ವಿಸಂಜ್ಞಾ ಭೂಯಿಷ್ಠಾಃ ಕ್ಲಾಂತವಾಹನಸೈನಿಕಾಃ ॥೨೪॥

ಅರ್ಜುನನು ಪುನಃ ಬಗ್ಗಿದ ಗಿಣ್ಣುಗಳಿಂದ ಕೂಡಿದ ಬಾಣಗಳ ಪ್ರಹಾರದಿಂದ ಸೈಂಧವ ಸೈನಿಕರನ್ನು ಪ್ರಜ್ಞಾಹೀನರನ್ನಾಗಿ ಮಾಡಿದನು. ಅವರೆಲ್ಲರೂ, ಅವರ ವಾಹನಗಳೂ ಬಹಳವಾಗಿ ಅರ್ಜುನನಿಂದ ಬಳಲಿದವು.

ತಾಂಸ್ತು ಸರ್ವಾನ್ ಪರಿಗ್ಲಾನಾನ್ ವಿದಿತ್ವಾ ಧೃತರಾಷ್ಟ್ರಜಾ ।
ದುಃಶಲಾ ಬಾಲಮಾದಾಯ ನಪ್ತಾರಂ ಪ್ರಯಯೌ ತದಾ ॥೨೫॥

ಸೈಂಧವ ವೀರರೆಲ್ಲರೂ ತುಂಬಾ ದಣಿದಿದ್ದಾರೆಂದು ತಿಳಿದ ಧೃತರಾಷ್ಟ್ರನ ಮಗಳಾದ ದುಃಶಲೆಯು ಯೋಧರೆಲ್ಲರೂ ಶಾಂತರಾಗಲೆಂಬ ಅಭಿಲಾಷೆಯಿಂದ ಮೊಮ್ಮಗನನ್ನು ರಥದಲ್ಲಿ ಕೂಡಿಸಿಕೊಂಡು ಅರ್ಜುನನ ಸಮೀಪಕ್ಕೆ ಆಗಮಿಸಿದಳು.

ಮಹಾರಥಸುತಂ ವೀರಂ ರಥೇನಾನುಗತಂ ತದಾ ॥೨೬॥

ಮಹಾರಥನಾದ ಸುರಥನ ವೀರಪುತ್ರನಾದ ಮೊಮ್ಮಗನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಅರ್ಜುನನ ಸಮೀಪಕ್ಕೆ ಆಗಮಿಸಿದಳು.

ಶಾಂತ್ಯರ್ಥಂ ಸರ್ವಯೋಧಾನಾಮಭ್ಯಗಚ್ಛದ್ದಿ ಪಾಂಡವಮ್ ॥೨೭॥

ಆ ದುಃಶಲೆಯ ಉದ್ದೇಶವು ಎಲ್ಲಯೋಧರ ಶಾಂತಿಗಾಗಿ ಆಗಿತ್ತು. ಅರ್ಜುನನನ್ನು ದುಃಶಲೆಯು ಸಮೀಪಿಸಿದಳು.

ಸಾ ಧನಂಜಯಮಾಸಾದ್ಯ ಮುಮೋಚಾರ್ತಸ್ವರಂ ತದಾ ।
ಧನಂಜಯೋಽಪಿ ತಾಂ ದೃಷ್ಟ್ವಾ ಧನುರ್ವಿಸೃಜೇ ತದಾ ॥೨೮॥

ದುಃಶಲೆಯು ಅರ್ಜುನನನ್ನು ಸಮೀಪಿಸಿ ಆರ್ತಸ್ವರದಿಂದ ಅಳತೊಡಗಿದಳು. ಅರ್ಜುನನಾದರೂ ಧನುಸ್ಸನ್ನು ತ್ಯಜಿಸಿ ಅವಳನ್ನು ಸಂತೈಸಲಾರಂಭಿಸಿದನು.

ಸಮುತ್ಸೃಷ್ಟಧನುಃ ಪಾರ್ಥೋ ವಿಧಿವದ್ ಭಗಿನೀಂ ತದಾ ।
ಪ್ರಾಹ ಕಿಂ ಕರವಾಣೀತಿ ಸಾ ಚ ತಂ ವಾಕ್ಯಮಬ್ರವೀತ್ ॥೨೯॥

ತಂಗಿಯಾದ ದುಃಶಲೆಯನ್ನು ಉದ್ದೇಶಿಸಿ, ಧನುಸ್ಸನ್ನು ವಿಧಿಬದ್ಧವಾಗಿ ವಿಸರ್ಜಿಸಿದ ಅರ್ಜುನನು ಅವಳ ಬಳಿ, ನಿನಗಾಗಿ ಏನು ಮಾಡಲಿ ಎಂದು ಕೇಳಿದನು. ದುಃಶಲೆಯು ಅರ್ಜುನನ ಮಾತಿಗೆ ಇಂತು ನುಡಿದಳು.

ದುಃಶಲಾ

ಏಷ ತೇ ಭರತಶ್ರೇಷ್ಠ ಸ್ವಸ್ರೀಯಸ್ಯಾತ್ಮಜಃ ಶಿಶುಃ ।
ಅಭಿವಾದಯತೇ ವೀರ ತಂ ಪಶ್ಯ ಭರತರ್ಷಭ ॥೩೦॥

ದುಃಶಲೆ– ಪಾರ್ಥನೇ, ನಾನು ಕರೆದು ತಂದಿರುವ ಈ ಬಾಲಕನು ನಿನ್ನ ತಂಗಿಯ ಮಗನ ಮಗನು. ಅರ್ಥಾತ್ ನನ್ನ ಮೊಮ್ಮಗನು. ಇವನನ್ನು ನೋಡು. ಪುರುಷಶ್ರೇಷ್ಠನೇ, ಇವನು ನಿನಗೆ ಅಭಿವಾದನ ಮಾಡುತ್ತಿದ್ದಾನೆ.

ವೈಶಂಪಾಯನಃ

ಇತ್ಯುಕ್ತಸ್ತಸ್ಯ ಪಿತರಂ ಸ ಪಪ್ರಚ್ಛಾರ್ಜುನಸ್ತದಾ ।
ಕ್ವಾಸಾವಿತಿ ತತೋ ರಾಜನ್ ದುಃಶಲಾ ವಾಕ್ಯಮಬ್ರವೀತ್ ॥೩೧॥

ವೈಶಂಪಾಯನ– ದುಶ್ಶಲೆಯು ಹೀಗೆ ಹೇಳಲು ಅರ್ಜುನನು ಈ ಬಾಲಕನ ತಂದೆಯಾದ ಸುರಥನು ಎಲ್ಲಿದ್ದಾನೆ ಎಂದು ದುಶ್ಶಲೆಯನ್ನು ಪ್ರಶ್ನಿಸಿದನು. ಪ್ರತಿಯಾಗಿ ದುಶ್ಶಲೆಯು ಇಂತು ನುಡಿದಳು.

ದುಃಶಲಾ

ಪಿತೃಶೋಕಾಭಿಸಂತಪ್ತೋ ವಿಷಾದಾತ್ತೋ೯ऽಸ್ಯ ವೈ ಪಿತಾ ।
ಪಂಚತ್ವಮಗಮದ್ ವೀರೋ ಯಥಾ ತನ್ಮೇ ನಿಶಾಮಯ ॥೩೨॥

ದುಶ್ಶಲೆ– ಅರ್ಜುನನೇ, ಈ ಬಾಲಕನ ತಂದೆಯಾದ ಸುರಥನು ಪಿತೃಶೋಕದಿಂದ ದುಃಖಿತನಾಗಿ ತುಂಬಾ ದುಃಖದಿಂದ ಮೃತ್ಯುವಶನಾದನು.

ಸ ಪೂರ್ವಂ ಪಿತರಂ ಶ್ರುತ್ವಾ ಹತಂ ಯುದ್ಧೇ ತ್ವಯಾऽನಘ ।
ತ್ವಾಮಾಗತಂ ಚ ಸಂಶ್ರುತ್ಯ ಯುದ್ಧಾಯ ಹಯಸಾರಿಣಮ್ ॥೩೩॥

ಪಿತುಶ್ಚ ಮೃತ್ಯುದುಃಖಾತ್ತೋ೯ ಜಹೌ ಪ್ರಾಣಾನ್ ಧನಂಜಯ ॥೩೪॥

ಸುರಥನು ಹಿಂದೆ ಅರ್ಜುನನು ತನ್ನ ತಂದೆಯನ್ನು ಸಂಹರಿಸಿದನೆಂಬ ಸಮಾಚಾರವನ್ನು ಕೇಳಿದ್ದನು. ತಂದೆಯ ಮರಣದಿಂದ ದುಃಖಿತನಾದ ನನ್ನ ಮಗನಾದ ಸುರಥನು, ನೀನು ಯಜ್ಞಾಶ್ವದ ಜೊತೆಯಲ್ಲಿ ಆಗಮಿಸಿ ಸೈಂಧವರೊಡನೆ ಯುದ್ಧ ಮಾಡುತ್ತಿರುವಿ ಎಂಬ ವಾರ್ತೆಯನ್ನು ಕೇಳಿದೊಡನೆ ಪ್ರಾಣವನ್ನು ತೊರೆದುಬಿಟ್ಟನು.

ಪ್ರಾಪ್ತೋ ಬೀಭತ್ಸುರಿತ್ಯೇವ ನಾಮ ಶ್ರುತ್ವೈವ ತೇऽನಘ ।
ವಿಷಾದಾರ್ತಃ ಪಪಾತೋರ್ವ್ಯಾಂ ಮಮಾರ ಚ ಮಮಾತ್ಮಜಃ ॥೩೫॥

ಅರ್ಜುನನು ಬಂದಿದ್ದಾನೆ ಎಂಬ ನಾಮವನ್ನು ಕೇಳಿದೊಡನೆ ದುಃಖದಿಂದ ಆರ್ತನಾದ ನನ್ನ ಮಗನು ಭೂಮಿಯಲ್ಲಿ ಬಿದ್ದು ಮರಣವನ್ನು ಹೊಂದಿರುವನು.

ತಂ ದೃಷ್ಟ್ವಾಹಂ ನಿಪತಿತಂ ತತಸ್ತಸ್ಯಾತ್ಮಜಂ ವಿಭೋ ।
ಗೃಹೀತ್ವಾ ಸಮನುಪ್ರಾಪ್ತಾ ತ್ವಾಮದ್ಯ ಶರಣೈಷಿಣೀ ॥೩೬॥

ಅಂತಹ ಬಿದ್ದಿರುವ ಪುತ್ರನನ್ನು ನೋಡಿ ಬಳಿಕ ಅವನ ಮಗನಾಗಿರುವ ಇವನನ್ನು ಕರೆದುಕೊಂಡು ನಿನ್ನ ರಕ್ಷಣೆಯನ್ನು ಬಯಸಿ ನಾನು ಇಲ್ಲಿಗೆ ಆಗಮಿಸಿದ್ದೇನೆ.

ವೈಶಂಪಾಯನಃ

ಇತ್ಯುಕ್ತ್ವಾ ऽऽರ್ತಸ್ವರಂ ಸಾ ತು ಮುಮೋಚ ಧೃತರಾಷ್ಟ್ರಜಾ ।
ದೀನಾ ದೀನಂ ಸ್ಥಿತಂ ಪಾರ್ಥಮಬ್ರವೀಚ್ಚಾಪ್ಯಧೋಮುಖಿಮ್ ॥೩೭॥

ವೈಶಂಪಾಯನ– ಹೀಗೆ ಹೇಳಿದ ದೀನಳಾದ ದುಶ್ಶಲೆಯು ಪುನಃ ಆರ್ತಸ್ವರದಿಂದ ಅಳಲು ಆರಂಭಿಸಿದಳು. ಅವಳ ಹೃದಯವಿದ್ರಾವಕವಾದ ಮಾತನ್ನು ಕೇಳಿ ದೈನ್ಯದಿಂದ ಮುಖವನ್ನು ಕೆಳಗೆ ಮಾಡಿಕೊಂಡು ನಿಂತಿರುವ ಅರ್ಜುನನನ್ನು ಕುರಿತು ದುಶ್ಶಲೆಯು ಪುನಃ ಹೇಳಿದಳು.

ದುಃಶಲಾ

ಸ್ವಸಾರಂ ಮಾಮವೇಕ್ಷಸ್ವ ಸ್ವಸ್ರೀಯಾತ್ಮಜಮೇವ ಚ ।
ಕರ್ತುಮರ್ಹಸಿ ಧರ್ಮಜ್ಞ ದಯಾಂ ಮಯಿ ಕುರೂದ್ವಹ ॥೩೮॥

ದುಶ್ಶಲೆ– ಕುರುಕುಲಶ್ರೇಷ್ಠನೇ, ಧರ್ಮಜ್ಞನೇ, ದೀನಳಾದ, ಆರ್ತಳಾದ ನಿನ್ನ ಸಹೋದರಿಯನ್ನು ನೋಡು. ನಿನ್ನ ತಂಗಿಯ ಮೊಮ್ಮಗನಾದ ಈ ಹಸುಳೆ ಸುತನನ್ನು ನೋಡು.

ವಿಸ್ಮೃತ್ಯ ಕುರುರಾಜಾನಂ ತಂ ಚ ಮಂದಂ ಜಯದ್ರಥಮ್ ॥೩೯॥

ಅಭಿಮನ್ಯೋರ್ಯಥಾ ಜಾತಃ ಪರೀಕ್ಷಿತ್ ಪರವೀರಹಾ ।
ತಥಾ ऽಯಂ ಸುರಥಾಜ್ಜಾತೋ ಮಮ ಪೌತ್ರೋ ಮಹಾಭುಜ ॥೪೦॥

ನನ್ನ ಅಣ್ಣನಾದ ಮಂದಬುದ್ಧಿಯಾದ ದುರ್ಯೋಧನನನ್ನು, ನನ್ನ ಪತಿಯಾದ ಜಯದ್ರಥನನ್ನು ಮರೆತು, ಶತ್ರುಹಂತಕನಾದ ಪರೀಕ್ಷಿತನು ಅಭಿಮನ್ಯುವಿಗೆ ಹುಟ್ಟಿದಂತೆ ಮಹಾಭುಜನಾದ ನನ್ನ ಮೊಮ್ಮಗನು ಸುರಥನಿಗೆ ಹುಟ್ಟಿದ್ದಾನೆಂದು ಭಾವಿಸು.

ತಮಾದಾಯ ನರವ್ಯಾಘ್ರ ಪ್ರಾಪ್ತಾ ऽಸ್ಮ್ಯದ್ಯ ತವಾಂತಿಕಮ್ ।
ಶಮಾರ್ಥಂ ಸರ್ವಯೋಧಾನಾಂ ಶೃಣು ಚೇದಂ ವಚೋ ಮಮ॥೪೧॥

ನರವ್ಯಾಘ್ರನೇ, ಇವನನ್ನು ಕರೆದುಕೊಂಡು ಯುದ್ಧವನ್ನು ಶಾಂತಗೊಳಿಸುವ ದೃಷ್ಟಿಯಿಂದ ನಿನ್ನ ಬಳಿಗೆ ಆಗಮಿಸಿದ್ದೇನೆ. ಈ ನನ್ನ ಮಾತನ್ನು ಕೇಳಿಸಿಕೊ.

ಆಗತೋಽಯಂ ಮಹಾಬಾಹೋ ತಸ್ಯ ಮಂದಸ್ಯ ಪುತ್ರಕಃ ।
ಪ್ರಸಾದಮಸ್ಯ ಬಾಲಸ್ಯ ತಸ್ಮಾತ್ ತ್ವಂ ಕರ್ತುಮರ್ಹಸಿ ॥೪೨॥

ಮಹಾಬಾಹುವಾದ ಅರ್ಜುನನೇ, ಮಂದಬುದ್ಧಿಯವನಾದ ಜಯದ್ರಥನ ಮೊಮ್ಮಗನು ಶರಣಾರ್ಥಿಯಾಗಿ ಇಲ್ಲಿ ಆಗಮಿಸಿದ್ದಾನೆ. ಇವನ ವಿಷಯದಲ್ಲಿ ದಯೆ ತೋರುವುದು ಯೋಗ್ಯವಾಗಿದೆ.

ಏಷ ಪ್ರಸಾದ್ಯ ಶಿರಸಾ ಮಯಾ ಸಾರ್ಧಮರಿಂದಮ ।
ಯಾಚತೇ ತ್ವಾಂ ಮಹಾಬಾಹೋ ಶಮಂ ಗಚ್ಛ ಧನಂಜಯ ॥೪೩॥

ಅರಿಂದಮನೇ, ಈ ಬಾಲಕನು ತಲೆಬಾಗಿ ನಮಸ್ಕರಿಸುತ್ತಾ ಯುದ್ಧದ ಶಾಂತಿಯನ್ನು ನಿನ್ನಿಂದ ಬಯಸುತ್ತಿದ್ದಾನೆ. ಸಿಟ್ಟಾಗಬೇಡ. ಶಾಂತನಾಗು.

ಬಾಲಸ್ಯ ಹತಬಂಧೋಶ್ಚ ಪಾರ್ಥ ಕಿಂಚಿದಜಾನತಃ ।
ಪ್ರಸಾದಂ ಕುರು ಧರ್ಮಜ್ಞ ಮಾ ತ್ವಂ ಮನ್ಯುವಶಂ ಗಮಃ ॥೪೪॥

ಬಾಲಕನಾದ, ಬಂಧುಗಳನ್ನು ಕಳೆದುಕೊಂಡಿರುವ, ಏನೂ ತಿಳಿಯದ ಈ ಮಗುವಿನ ವಿಷಯದಲ್ಲಿ ಕೃಪೆ ತೋರು. ನೀನು ಖಂಡಿತ ಸಿಟ್ಟಾಗಬೇಡ.

ತಮನಾರ್ಯಂ ನೃಶಂಸಂ ಚ ವಿಸ್ಮೃತ್ಯಾಸ್ಯ ಪಿತಾಮಹಮ್ ।
ಆಗಸ್ಕಾರಿಣಮತ್ಯರ್ಥಂ ಪ್ರಸಾದಂ ಕರ್ತುಮರ್ಹಸಿ ॥೪೫॥

ಅನಾರ್ಯನಾದ, ಕ್ರೂರಿಯಾದ, ಪಾಂಡವರೆಲ್ಲರಿಗೂ ಅಪರಾಧವನ್ನೆಸಗಿದ ಈ ಬಾಲಕನ ಅಜ್ಜನಾದ ಜಯದ್ರಥನನ್ನು ಮರೆತುಬಿಡು. ಬಾಲಕನ ವಿಷಯದಲ್ಲಿ ಪ್ರಸನ್ನನಾಗು.

ವೈಶಂಪಾಯನಃ

ಏವಂ ಬ್ರುವತ್ಯಾಂ ಕರುಣಂ ದುಃಶಲಾಯಾಂ ಧನಂಜಯಃ ।
ಸಂಸ್ಮೃತ್ಯ ದೇವೀಂ ಗಾಂಧಾರೀಂ ಧೃತರಾಷ್ಟ್ರಂ ಜನೇಶ್ವರಮ್ ॥೪೬॥

ಪ್ರೋವಾಚ ಪುತ್ರಶೋಕಾರ್ತಃ ಕ್ಷತ್ರಧರ್ಮಂ ವಿಗರ್ಹಯನ್ ॥೪೭॥

ವೈಶಂಪಾಯನ– ಹೀಗೆ ಕರುಣಾಜನಕವಾದ ಮಾತುಗಳನ್ನು ದುಶ್ಶಲೆಯು ಹೇಳಿದಾಗ ಅರ್ಜುನನು ಗಾಂಧಾರಿಯನ್ನೂ, ರಾಜನಾದ ಧೃತರಾಷ್ಟ್ರನನ್ನೂ ಸ್ಮರಿಸಿಕೊಂಡು, ದುಃಖ-ಶೋಕಗಳಿಂದ ಕೂಡಿದವನಾಗಿ ಇದೆಲ್ಲದಕ್ಕೂ ಕಾರಣವಾದ ಕ್ಷತ್ರಧರ್ಮವನ್ನೇ ನಿಂದಿಸಿದನು.

ಅರ್ಜುನಃ

ಧಿಕ್ ತಂ ದುರ್ಯೋಧನಂ ಕ್ಷುದ್ರಂ ರಾಜ್ಯಲಬ್ಧಂ ಚ ಮಾನಿನಮ್ ।
ಯತ್ಕೃತೇ ಬಾಂಧವಾಃ ಸರ್ವೇ ಮಯಾ ನೀತಾ ಯಮಕ್ಷಯಮ್ ॥೪೮॥

ಅರ್ಜುನ– ರಾಜ್ಯಕಾಮುಕನಾದ, ದುರಭಿಮಾನಿಯಾದ, ಕ್ಷುದ್ರನಾದ ದುರ್ಯೋಧನನಿಗೆ ಧಿಕ್ಕಾರವಿರಲಿ. ಅವನ ನಿಮಿತ್ತದಿಂದಲೇ ನನ್ನ ಬಂಧು-ಬಾಂಧವರೆಲ್ಲರೂ ಯಮಪುರಿಗೆ ಸಾಗುವಂತಾಯಿತು.

ವೈಶಂಪಾಯನಃ

ಇತ್ಯುಕ್ತ್ವಾ ಬಹು ಸಾಂತ್ವಾದಿ ಪ್ರಸಾದಮಕರೋದರ್ಜುನಃ ।
ಪರಿಷ್ವಜ್ಯ ಚ ತಾಂ ಪ್ರೀತೋ ವಿಸಸರ್ಜ ಗೃಹಾನ್ ಪ್ರತಿ ॥೪೯॥

ವೈಶಂಪಾಯನ– ಈ ರೀತಿಯಾಗಿ ಅರ್ಜುನನು ಸಾಂತ್ವನ ಪೂರ್ವಕವಾದ ಅನೇಕ ಮಾತುಗಳಿಂದ ದುಶ್ಶಲೆಯನ್ನು ಸಂತೈಸಿದನು. ಪ್ರೀತಿಯಿಂದ ತಂಗಿ ಎಂಬ ಭಾವದಿಂದ ಅವಳನ್ನು ಆಲಿಂಗಿಸಿಕೊಂಡು ಒಳ್ಳೆಯ ಮಾತುಗಳನ್ನಾಡಿ ಅವಳನ್ನು ಮನೆಗೆ ಕಳುಹಿಸಿಕೊಟ್ಟನು.

ದುಃಶಲಾ ಚಾಪಿ ತಾನ್ ಸರ್ವಾನ್ ನಿವಾರ್ಯ ಮಹತೋ ರಣಾತ್ ।
ಸಂಪೂಜ್ಯ ಪಾರ್ಥಂ ಪ್ರಯಯೌ ಗೃಹಾನ್ ಪ್ರತಿ ಶುಭಾನನಾ ॥೫೦॥

ಸುಮುಖಿಯಾದ ದುಶ್ಶಲೆಯು ಮಹಾಸಮರದಿಂದ ತನ್ನ ಸಂಬಂಧಿಗಳಾದ ಯೋಧರಿಗೆಲ್ಲ ವಿಶ್ರಾಂತಿ ಹೊಂದುವಂತೆ ಉಪದೇಶಿಸಿದಳು. ಅರ್ಜುನನನ್ನು ಯಥೋಚಿತವಾಗಿ ಸತ್ಕರಿಸಿ ಸಂತೋಷದ ಮುಖದಿಂದ ಅರಮನೆಗೆ ಹಿಂದಿರುಗಿದಳು.

ತತಃ ಸೈಂಧವಕಾನ್ ಯೋಧಾನ್ ನಿರ್ಜಿತ್ಯ ಸ ನರರ್ಷಭಃ ॥೫೧॥

ನರಶ್ರೇಷ್ಠನಾದ ಅರ್ಜುನನು ಈ ಕ್ರಮದಲ್ಲಿ ಎಲ್ಲ ಯೋಧರನ್ನು ಗೆದ್ದನು.

ಪುನರೇವಾಶ್ವಮೇಧಾರ್ಥಂ ಹಯಂ ಕಾಮವಿಚಾರಿಣಮ್ ।
ತಾರಾಮೃಗಮಿವಾಕಾಶಂ ದೇವದೇವಃ ಪಿನಾಕಧೃಕ್ ॥೫೨॥

ಸಸಾರ ತಂ ತಥಾ ವೀರೋ ವಿಧಿವತ್ ಯಜ್ಞಿಯಂ ಹಯಮ್ ॥೫೩॥

ಯಾವ ರೀತಿಯಾಗಿ ಪಿನಾಕಪಾಣಿಯಾದ ಈಶ್ವರನು ನಕ್ಷತ್ರಗಳ ಮಧ್ಯದಲ್ಲಿ ಸಾಗುವ ಜಿಂಕೆಯನ್ನು ಅನುಸರಿಸಿ ಹೋಗುತ್ತಿರುವನೋ ಅಥವಾ ತಾರಕಾಸುರನನ್ನು ಎಲ್ಲ ಕಡೆಯೂ ಹುಡುಕುತ್ತಾ ಷಣ್ಮುಖನು ಹೇಗೆ ಸಾಗುತ್ತಾನೋ ಅದರಂತೆ ಅರ್ಜುನನು ಯಜ್ಞಸಂಬಂಧವಾದ ಕುದುರೆಯನ್ನು ಶಾಸ್ತ್ರವಿಧಿಗೆ ಅನುಸಾರವಾಗಿ ಅನುಸರಿಸಿ ಹೊರಟನು.

ವ್ಯಾಖ್ಯಾನ ವಿಶೇಷ– ಕೈಯಲ್ಲಿ ಜಿಂಕೆಯನ್ನು ಧರಿಸಿರುವ ಪಿನಾಕಧಾರಿಯಾದ ಈಶ್ವರನು ಹೇಗೆ ಆಕಾಶಮಾರ್ಗದಲ್ಲಿ ಸಂಚರಿಸುತ್ತಾನೋ ಅದರಂತೆ ಅರ್ಜುನನು ಮಣಲೂರು ಪತಿಯ ದೇಶಕ್ಕೆ ಆಗಮಿಸಿದನು ಎಂಬ ಈ ಕಥಾ ಪ್ರಸಂಗವು ಪುನಃ ಇಲ್ಲಿ ಹೇಳಲ್ಪಟ್ಟಿದೆ. ಇದೇ ಕಥಾ ಪ್ರಸಂಗವು ಆದಿಪರ್ವದಲ್ಲಿಯೂ ಹೇಳಲ್ಪಟ್ಟಿತ್ತು. ಈ ಕಥಾಪ್ರಸಂಗವು ಪುನರುಕ್ತವಾಗಿದೆಯೇ ವಿನಾ ಎರಡು ಬಾರಿ ನಡೆದಿಲ್ಲ ಎಂದು ತಿಳಿದುಕೊಳ್ಳಬೇಕು.

ಸ ಪಾರ್ಥಿವಾನ್ ವಶೇ ಕೃತ್ವಾ ತಾಂಸ್ತಾನ್ ದೇಶಾನ್ ಯಥಾಸುಖಮ್।
ವಿಚಚಾರ ಯಥಾಕಾಮಂ ಕರ್ಮ ಪಾರ್ಥಸ್ಯ ವರ್ಧಯನ್ ॥೫೪॥

ಯಜ್ಞಾಶ್ವವು ಮನಬಂದಂತೆ ಆಯಾ ದೇಶಗಳಲ್ಲಿ ಅರ್ಜುನನ ಯುದ್ಧಕರ್ಮವನ್ನು ಹೆಜ್ಜೆ ಹೆಜ್ಜೆಗೂ ಹೆಚ್ಚಿಸುತ್ತಾ ಕ್ರಮವಾಗಿ ಸಂಚರಿಸುತ್ತಿತ್ತು. ಹೀಗೆ ಸಂಚರಿಸುತ್ತಾ ಮಣಲೂರು ಅಧಿಪತಿಯಾದ ರಾಜನ ರಾಜ್ಯವನ್ನು ಅರ್ಜುನನ ಜೊತೆಗೆ ಪ್ರವೇಶಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಶ್ವಸಂಭರಣೇ ವಜ್ರದತ್ತವಿಸರ್ಜನಂ ನಾಮ
ಅಷ್ಟಸಪ್ತತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೦ನೇ ಅಧ್ಯಾಯ

ಅಥಾನುಮಂತ್ರಿತೋತ್ಸೃಷ್ಟಂ ಪುರೋಹಿತಪುರಸ್ಕೃತಮ್ ।
ತುರಗಂ ಕೃಷ್ಣಸಾರಂಗಮನುವವ್ರಾಜ ವಾಸವಿಃ ॥

ಬಳಿಕ ಪಾಂಡವರು ಕಪ್ಪು ಮತ್ತು ಚಿತ್ರ ಬಣ್ಣಗಳಿಂದ ಕೂಡಿದ ಕುದುರೆಯನ್ನು ಅಭಿಮಂತ್ರಿಸಿ ಬಿಟ್ಟರು. ಪುರೋಹಿತರಾದ ಧೌಮ್ಯರನ್ನು ಮುಂದೆ ಮಾಡಿಕೊಂಡು ಅರ್ಜುನನು ಕುದುರೆಯನ್ನು ಹಿಂಬಾಲಿಸಿದರು.

ಸ ಜಿತ್ವಾ ರುಂಧತಸ್ಸರ್ವಾನ್ ನೃಪತೀಂಧಸ್ತತ್ತೇಜಸಾ ।
ಚಾರಯಾಮಾಸ ಸರ್ವೇಷು ರಾಷ್ಟ್ರೇಷ್ವವಿಜಿತೋಽರಿಭಿಃ ॥

ಶತ್ರುಗಳಿಂದ ಪರಾಭವವಿಲ್ಲದ ಅರ್ಜುನನು ಆ ಕುದುರೆಯನ್ನು ತಡೆಯುವ ಎಲ್ಲ ರಾಜರನ್ನು ಶಸ್ತ್ರಬಲದಿಂದ ಗೆದ್ದು ಎಲ್ಲ ರಾಷ್ಟ್ರಗಳಲ್ಲಿ ತಿರುಗಿಸಿದನು.

ಯುಧಿಷ್ಠಿರಾಜ್ಞಯಾ ತೇನ ನ ಕಶ್ಚಿನ್ನಿಹತಸ್ತದಾ ।
ಆಹೂತಾಶ್ಚ ನೃಪಾಸ್ತೇನ ಯಜ್ಞಾರ್ಥಂ ಪ್ರೀಯತಾऽಖಿಲಾಃ ॥

ಯುಧಿಷ್ಠಿರನ ಆಜ್ಞೆ ಇದ್ದುದರಿಂದ ಅರ್ಜುನನು ಯಾರನ್ನೂ ಆಗ ಕೊಲ್ಲಲಿಲ್ಲ. ಸಂತುಷ್ಟನಾದ ಆತ ಯಜ್ಞಕ್ಕೆ ಎಲ್ಲ ರಾಜರನ್ನೂ ಆಹ್ವಾನಿಸಿದನು.

ಮಣಲೂರಂ ಕ್ರಮಾತ್ ಪ್ರಾಪ್ತಸ್ತತ್ಸೈನಂ ಬಭ್ರುವಾಹನಃ ।
ಅಭ್ಯಯಾದರ್ಘ್ಯಪಾದ್ಯಾದ್ಯೈಸ್ತಮಾಹ ವಿಜಯಃ ಸುತಮ್ ॥

ಅರ್ಜುನನು ಕ್ರಮವಾಗಿ ಮಣಲೂರಿಗೆ ಬಂದಾಗ ಬಭ್ರುವಾಹನನು ಅವನನ್ನು ಅರ್ಘ್ಯಪಾದ್ಯಾದಿಗಳಿಂದ ಎದುರುಗೊಂಡನು. ಅರ್ಜುನನು ಮಗನಿಗೆ ಹೇಳಿದನು.

ಯೋದ್ಧುಕಾಮೋऽರ್ಘ್ಯಮಾದಾಯ ತ್ವಯಾऽದ್ಯಾಭಿಗತೋ ಹ್ಯಹಮ್ ।
ನ ಪ್ರೀಯೇ ಪೌರುಷಂ ಧಿಕ್ತೇ ಯನ್ಮೇಧ್ಯಾಶ್ವೇ ನ ವಾರಿತಃ ॥

ಯುದ್ಧ ಮಾಡಲು ಬಯಸಿದ್ದ ನನ್ನನ್ನು ನೀನು ಅರ್ಘ್ಯವನ್ನು ಹಿಡಿದು ಎದುರುಗೊಂಡೆ. ಆದರಿಂದ ನನಗೆ ಸಂತೋಷವಿಲ್ಲ. ನನ್ನ ಯಜ್ಞಾಶ್ವವನ್ನು ನೀನು ತಡೆಯಲಿಲ್ಲ. ನಿನ್ನ ಪೌರುಷಕ್ಕೆ ಧಿಕ್ಕಾರವಿರಲಿ!

ತದಾऽಪಿ ಪಿತೃಭಕ್ತ್ಯೈನಮಯುಧ್ಯಂತಮುಲೂಪಿಕಾ ।
ಪ್ರಾಹ ಯುಧ್ಯಸ್ವ ಯತ್ಪ್ರೀತ್ಯೈ ಗುರೋಃ ಕಾರ್ಯಮಸಂಶಯಮ್ ॥

ಆಗಲೂ ತಂದೆಯ ಮೇಲಿನ ಭಕ್ತಿಯಿಂದ ಬಭ್ರುವಾಹನನು ಯುದ್ಧ ಮಾಡದಿದ್ದಾಗ ಉಲೂಪಿಯು ಹೇಳಿದಳು. 'ಯುದ್ಧಮಾಡು. ತಂದೆಗೆ ಯಾವುದು ಸಂತೋಷಕರವೋ ಅದನ್ನು ನಿಸ್ಸಂಶಯವಾಗಿ ಮಗ ಮಾಡಬೇಕು'.

ಪ್ರೀಣನಾಯೈವ ಯುಧ್ಯಸ್ವ ಪಿತ್ರೇ ಸಂದರ್ಶಯಂಬಲಮ್ ।
ಇತ್ಯುಕ್ತೋ ಯುಯುಧೇ ಪಿತ್ರಾ ಬಲಂ ಸರ್ವಂ ಪ್ರದರ್ಶಯನ್ ॥

'ತಂದೆಗೆ ನಿನ್ನ ಬಲವನ್ನು ತೋರುತ್ತ ಅವನನ್ನು ಸಂತೋಷಪಡಿಸುವುದಕ್ಕಾಗಿಯೇ ಯುದ್ಧಮಾಡು'. ಉಲೂಪಿ ಹೀಗೆ ಹೇಳಿದಾಗ ಬಭ್ರುವಾಹನನು ತನ್ನೆಲ್ಲ ಬಲವನ್ನೂ ತೋರುತ್ತಾ ತಂದೆಯೊಡನೆ ಯುದ್ಧಮಾಡಿದನು.

ಅರ್ಜುನಸ್ತು ಸುತಸ್ನೇಹಾನ್ಮಂದಂ ಯೋಧಯತಿ ಸ್ಮಯನ್ ।
ಸ ತು ಸರ್ವಾಯುಧಕ್ಷೇಪೇऽಪ್ಯವಿಕಾರಂ ಧನಂಜಯಮ್ ॥

ದೃಷ್ಟ್ವಾ ಬಾಲ್ಯಾತ್ ಪರೀಕ್ಷಾಯೈ ಮಂತ್ರಪೂತಂ ಮಹಾಶರಮ್ ।
ಚಿಕ್ಷೇಪ ಪಿತ್ರೇ ದೈವೇನ ತೇನೈನಂ ಮೋಹ ಆವಿಶತ್ ॥

ಅರ್ಜುನನು ಮಗನ ಮೇಲಿನ ಪ್ರೀತಿಯಿಂದ ನಗುತ್ತಾ ಮೆಲ್ಲಗೆ ಯುದ್ಧ ಮಾಡಿದನು. ಬಭ್ರುವಾಹನನು ಎಲ್ಲ ಆಯುಧಗಳನ್ನೆಸೆದರೂ ಅರ್ಜುನನಲ್ಲಿ ಏನೂ ವಿಕಾರವಾಗದಿದ್ದುದನ್ನು ಕಂಡು ಹುಡುಗತನದಿಂದ ಅರ್ಜುನನ ಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕಾಗಿ ದೈವಾತ್ ಮಂತ್ರಪೂರಿತವಾದ ಮಹಾಬಾಣವನ್ನೇ ಅವನ ಮೇಲೆ ಎಸೆದನು. ಅದರಿಂದ ಅವನನ್ನು ಮೂರ್ಛೆ ಕವಿಯಿತು.

ಮೂರ್ಚ್ಛಿತಂ ತಂ ಗುರುಂ ದೃಷ್ಟ್ವಾ ತದ್ಭಕ್ತ್ಯಾ ಭೃಶದುಃಖಿತಃ ।
ಪ್ರಾಯೋಪವಿಷ್ಟಸ್ತನ್ಮಾತಾ ವಿಲಲಾಪಾತಿದುಃಖಿತಾ ॥

ತಂದೆ ಮೂರ್ಛಿತನಾದುದನ್ನು ಕಂಡು ಅವನ ಮೇಲೆ ಭಕ್ತಿಯಿಂದ ಬಭ್ರುವಾಹನ ಬಹುದುಃಖಿತನಾಗಿ ಪ್ರಾಯೋಪ್ರವೇಶಕ್ಕೆ ಕುಳಿತನು. ಅವನ ತಾಯಿ ಚಿತ್ರಾಂಗದೆ ಅತಿ ದುಃಖಿತಳಾಗಿ ವಿಲಾಪ ಮಾಡಿದಳು.

ವಿಜಗರ್ಹ ತದೋಲೂಪೀಂ ಧಿಗ್ ಜಗತ್ತ್ರಯಪೂಜಿತಮ್ ।
ಅಜೀಘನೋ ಮೇ ಭರ್ತಾರಂ ಪುತ್ರೇಣೈವಾವಿಜಾನತಾ ॥

ಚಿತ್ರಾಂಗದೆ ಉಲೂಪಿಯನ್ನು ನಿಂದಿಸಿದಳು. 'ನಿನಗೆ ಧಿಕ್ಕಾರವಿರಲಿ, ಮೂರ್ಲೋಕದಲ್ಲಿ ಪೂಜಿತನಾದ ನನ್ನ ಪತಿಯನ್ನು ಏನೂ ತಿಳಿಯದ ಮಗನಿಂದಲೇ ಕೊಲ್ಲಿಸಿದೆ.

ಲೋಕವೀರಂ ಪತಿಂ ಹತ್ವಾ ನ ಮೇ ಕಾರ್ಯಂ ಸುತೇನ ಚ ।
ಪತಿಲೋಕಮಹಂ ಯಾಸ್ಯೇ ತೃಪ್ತಾ ಭವ ಕಲಿಪ್ರಿಯೇ ॥

ಲೋಕದಲ್ಲಿಯೇ ಶ್ರೇಷ್ಠ ವೀರನಾದ ಪತಿಯನ್ನು ಕಳೆದುಕೊಂಡು ನನಗೆ ಮಗನಿಂದ ಏನೂ ಪ್ರಯೋಜನ ಆಗಬೇಕಾಗಿಲ್ಲ. ಪತಿಲೋಕವನ್ನೇ ನಾನು ಸೇರುವೆ. ಕಲಪ್ರಿಯಳೇ, ನೀನು ತೃಪ್ತಳಾಗು.

ಇತ್ಯುಕ್ತ್ವಾ ಮರಣಾಯೈವ ತಾಂ ವಿನಿಶ್ಚಿತಮಾನಸಾಮ್ ।
ಧರಾಯಾಂ ವಿಲುಠಂತೀಂ ಚ ದೃಷ್ಟ್ವಾ ಭುಜಗನಂದಿನೀ ॥

ನಾಗಲೋಕಾತ್ ಸಮಾದಾಯ ವಿಶಲ್ಯಕರಣೀಂ ಕ್ಷಣಾತ್ ।
ಉತ್ಥಾಪಯಾಮಾಸ ಪತಿಂ ತ್ರಿಲೋಕಾತಿರಥಂ ತಯಾ ॥

ಹೀಗೆ ಹೇಳಿ ಚಿತ್ರಾಂಗದೆಯು ಪ್ರಾಣತ್ಯಾಗಕ್ಕೆ ಮನಸ್ಸಿನಲ್ಲಿ ನಿಶ್ಚಯಿಸಿ ನೆಲದಲ್ಲಿ ಹೊರಳಾಡುತ್ತಿದ್ದುದನ್ನು ಕಂಡು ಉಲೂಪಿಯು ಕ್ಷಣದಲ್ಲಿ ನಾಗಲೋಕದಿಂದ ವಿಶಲ್ಯಕರಣಿಯನ್ನು ಎತ್ತಿಕೊಂಡು ಅದರಿಂದ ಮೂರ್ಲೋಕದ ಅತಿರಥನಾದ ಪತಿಯನ್ನು ಎಬ್ಬಿಸಿದಳು.

ಪ್ರಹಸ್ಯೋವಾಚ ಚ ತದಾ ಶ್ರುತಂ ವಾಕ್ಯಂ ಪುರಾ ಮಯಾ ।
ಸುರಲೋಕೇ ಸುರೈಃ ಪ್ರೋಕ್ತಂ ಭೀಷ್ಮಾದ್ಯಾ ನಾತಿಧರ್ಮತಃ ॥

ಯದ್ಧತಾಸ್ತೇನ ದೋಷೇಣ ಪಾರ್ಥಸ್ತೇನಾತಿವೇದನಾಮ್ ।
ರಣೇ ವ್ರಜೇದಿತಿ ನ ತತ್ಪರತಃ ಸ್ಯಾದಿತಿ ಹ್ಯಹಮ್ ।
ವಚನಾದೇವ ದೇವಾನಾಂ ಯುದ್ಧ್ಯೇತ್ಯಾತ್ಮಜಮಬ್ರುವಮ್ ॥

ಬಳಿಕ ಉಲೂಪಿ ನಕ್ಕು ಹೇಳಿದಳು, 'ಅರ್ಜುನ ಭೀಷ್ಮಾದಿಗಳನ್ನು ಕೇವಲ ಧರ್ಮದಿಂದ ವಧಿಸಲಿಲ್ಲ. ಆ ದೋಷದಿಂದ ಅವನು ಯುದ್ಧದಲ್ಲಿ ಅತಿಯಾದ ವೇದನೆಯನ್ನು ಹೊಂದುವನು' ಎಂದು ದೇವಲೋಕದಲ್ಲಿ ವಸುದೇವತೆಗಳು ಹೇಳಿದ ಮಾತನ್ನು ಹಿಂದೆ ನಾನು ಕೇಳಿದ್ದೆ. ಅದು ಇನ್ನೊಬ್ಬನಿಂದಾಗಕೂಡದು ಎಂದು ದೇವತೆಗಳ ಮಾತಿನಿಂದಲೇ ಮಗನಿಗೆ 'ನೀನು ಯುದ್ಧಮಾಡು' ಎಂದು ಹೇಳಿದೆ.

ದೇವಾನಾಮೇವ ಸಂಕಲ್ಪಾನ್ಮೂರ್ಛಿತಶ್ಚಾರ್ಜುನೋऽಭವತ್ ।
ಭುಕ್ತದೋಷಫಲಶ್ಚಾಯಂ ಪುನರ್ಭೋಕ್ಷ್ಯತಿ ನಾನ್ಯತಃ ॥

ದೇವತೆಗಳ ಸಂಕಲ್ಪದಿಂದಲೇ ಅರ್ಜುನ ಮೂರ್ಛಿತನಾದ. ಈಗ ಅವನ ಅಪರಾಧದ ಫಲವನ್ನು ಅವನು ಭೋಗಿಸಿದ್ದಾನೆ. ಇನ್ನು ಪುನಃ ಇನ್ನೊಬ್ಬರಿಂದ ಅದನ್ನು ಭೋಗಿಸುವುದಿಲ್ಲ.

ಅನ್ಯೇನ ಪಾತಿತಸ್ಯಾಸ್ಯ ಯಶೋ ನಶ್ಯೇತ್ ತ್ರಿಲೋಕಗಮ್ ।
ನಾರ್ಜುನಸ್ಯ ಯಶೋ ನಶ್ಯೇದಿತಿ ದೈವೈರಿದಂ ಕೃತಮ್ ॥

ಬೇರೆಯವರಿಂದ ಅರ್ಜುನನು ಯುದ್ಧದಲ್ಲಿ ಬೀಳಿಸಲ್ಪಟ್ಟಿದ್ದರೆ ಮೂರ್ಲೋಕದಲ್ಲಿ ಹರಡಿದ್ದ ಅವನ ಕೀರ್ತಿ ನಶಿಸುತ್ತಿತ್ತು. ನಶಿಸಕೂಡದೆಂದೇ ದೇವತೆಗಳು ಈ ಕಾರ್ಯ ಮಾಡಿದರು.

ಇತ್ಯುಕ್ತಃ ಪ್ರೀತಿಮಾಪೇದೇ ಪುತ್ರಭಾರ್ಯಾಯುತೋऽರ್ಜುನಃ ।
ಯಜ್ಞಾರ್ಥಂ ತಾವಥಾಹೂಯ ಪೂಜಿತಃ ಪ್ರಯಯೌ ತತಃ ॥

ಉಲೂಪಿ ಹೀಗೆ ಹೇಳಿದಾಗ ಪುತ್ರ ಭಾರ್ಯೆಯರಿಂದ ಯುಕ್ತನಾದ ಅರ್ಜುನನು ಸಂತೋಷಗೊಂಡನು. ಯಜ್ಞಕ್ಕೆ ಅವರನ್ನು ಆಹ್ವಾನಿಸಿ ಸತ್ಕೃತನಾಗಿ ಅಲ್ಲಿಂದ ಮುಂದೆ ನಡೆದನು.

ದ್ವಾರಕಾಯಾಸ್ತಮೀಪಸ್ಥಂ ಪ್ರದ್ಯುಮ್ನಾದ್ಯಾಃ ಸುತಾ ಹರೇಃ ।
ಪ್ರಸಹ್ಯಾಶ್ವಮಪಾಜಹ್ರುರಾಹ್ವಯಂತೋऽರ್ಜುನಂ ಯುಧೇ ॥

ದ್ವಾರಕೆಯ ಸಮೀಪಕ್ಕೆ ಅರ್ಜುನನು ಬಂದಾಗ ಕೃಷ್ಣನ ಮಕ್ಕಳು ಪ್ರದ್ಯುಮ್ನ ಮುಂತಾದವರು ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸುತ್ತ ಬಲಾತ್ಕಾರವಾಗಿ ಕುದುರೆಯನ್ನು ಅಪಹರಿಸಿದರು.

ಸುಭದ್ರಾಹರಣಂ ಮಾರ್ಷ್ಟಂ ನೀತೇಽಶ್ವೇ ತೈರ್ಧನಂಜಯಃ ।
ಗೌರವಾದ್ ವಾಸುದೇವಸ್ಯ ಮಾತುಲಸ್ಯ ಚ ಕೇವಲಮ್ ॥

ಮಾತುಲಯಾಬ್ರವೀದಶ್ವಂ ಹೃತಂ ಪೌತ್ರೈರಬಂಧುವತ್ ।
ಸ ನಿರ್ಭರ್ತ್ಸ್ಯ ಕುಮಾರಾಂಸ್ತಾನ್ ಮೇಧ್ಯಮಶ್ವಮಮೋಚಯತ್ ॥

ಸುಭದ್ರಾಹರಣದಿಂದ ಬಂದ ಅಪಕೀರ್ತಿಯನ್ನು ತೊಡೆದುಕೊಳ್ಳಲು ಪ್ರದ್ಯುಮ್ನ ಮುಂತಾದವರು ಕುದುರೆಯನ್ನು ಅಪಹರಿಸಿದಾಗ ಅರ್ಜುನ ಕೃಷ್ಣನ ಹಾಗೂ ವಸುದೇವನ ಮೇಲಿನ ಗೌರವ ಭಾವನೆಯಿಂದ ವಸುದೇವನಿಗೆ ಹೇಳಿದ. ನಿನ್ನ ಮೊಮ್ಮಕ್ಕಳು ಶತ್ರುಗಳಂತೆ ನಮ್ಮ ಕುದುರೆಯನ್ನು ಅಪಹರಿಸಿದ್ದಾರೆ ಎಂದು. ಆಗ ವಸುದೇವ ಕುಮಾರರನ್ನು ಬೈದು ಯಾಗದ ಕುದುರೆಯನ್ನು ಬಿಡಿಸಿದನು.

ಮಾತುಲಂ ಸ ಪ್ರಣಮ್ಯಾಥ ಯಜ್ಞಾರ್ಥಂ ತಾನ್ ನಿಮಂತ್ರ್ಯ ಚ ।
ಗಚ್ಛನ್ ಗಜಾಹ್ವಯಂ ದೂತಮಗ್ರತೋಽಯಾಪಯನ್ನೃಪೇ ॥

ಬಳಿಕ ಅರ್ಜುನನು ವಸುದೇವನನ್ನು ನಮಿಸಿ ಯಜ್ಞಕ್ಕೆ ಅವರನ್ನು ಆಮಂತ್ರಿಸಿ ಹಸ್ತಿನಾವತಿಗೆ ಹೋಗುತ್ತ ಧರ್ಮರಾಜನಿಗೆ ದೂತನನ್ನು ಮುಂಚಿತವಾಗಿ ಕಳುಹಿಸಿಕೊಟ್ಟನು.

ಸಕೃಷ್ಣಃ ಸಹಸೋದರ್ಯಃ ಶ್ರುತ್ವಾಽಸೌ ಪ್ರಾಪ್ತಮರ್ಜುನಮ್ ।
ಪ್ರೀತೋ ಬಾಷ್ಪಾಭಿಪೂರ್ಣಾಕ್ಷೋ ಭ್ರಾತೃಸ್ನೇಹಾದಭಾಷತ ॥

ಶ್ರೀಕೃಷ್ಣನಿಂದಲೂ ಸೋದರರಿಂದಲೂ ಸಮೇತನಾದ ಧರ್ಮರಾಜ ಅರ್ಜುನನು ಹಿಂತಿರುಗಿ ಬಂದುದನ್ನು ಕೇಳಿ ಸಂತುಷ್ಟನಾಗಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಸೋದರಸ್ನೇಹದಿಂದ ಹೇಳಿದನು.

ವಾಸುದೇವ ನ ಪಶ್ಯಾಮಿ ದುಲರ್ಕ್ಷಣಮಜಾರ್ಜುನೇ ।
ಕೇನ ದುಲರ್ಕ್ಷಣೇನಾಯಂ ಬಹುದುಃಖೀ ಪ್ರವಾಸಗಃ ॥

'ಕೃಷ್ಣನೇ, ಅರ್ಜುನನಲ್ಲಿ ದುರ್ಲಕ್ಷಣವನ್ನು ನಾ ಕಾಣೆ. ಯಾವ ದುರ್ಲಕ್ಷಣದಿಂದ ಈತ ಸದಾ ಪ್ರವಾಸದಲ್ಲಿದ್ದು ಬಹಳ ಕ್ಲೇಶ ಅನುಭವಿಸುತ್ತಿದ್ದಾನೆ?'

ಪೃಷ್ಟಸ್ತಂ ಕೇಶವಃ ಪ್ರಾಹ ಭ್ರಾತಾ ತೇ ದೀರ್ಘಪಿಂಡಿಕಃ ।
ತೇನಾಯಂ ದುಃಖಬಹುಲ ಇತ್ಯುಕ್ತ್ವಾ ಪುನರೇವ ಚ ॥

ವದಂತಮೇವ ಪಾಂಚಾಲೀ ಕಟಾಕ್ಷೇಣ ನ್ಯವಾರಯತ್ ।
ಸಮಸ್ತಲಕ್ಷಣಾಭಿಜ್ಞಾಃ ಕೃಷ್ಣಃ ಸತ್ಯಾ ವೃಕೋದರಃ ॥

ಕೃಷ್ಣಾ ಚ ಪಂಚಮೋ ನಾಸ್ತಿ ವಿದ್ಯಾ ಶುದ್ಧೇಯಮಂಜಸಾ ।
ಪ್ರಸಂಗಾತ್ ಪ್ರಾಪ್ತುಮಿಚ್ಛೇತ್ತಾಂ ವಿದ್ಯಾಶೀಲೋ ಯುಧಿಷ್ಠಿರಃ ।
ಇತಿ ಲೋಭಾತ್ತು ಪಾಂಚಾಲೀ ವಾಸುದೇವಂ ನ್ಯವಾರಯತ್ ॥

ಧರ್ಮರಾಜನು ಹೀಗೆ ಕೇಳಿದಾಗ ಶ್ರೀಕೃಷ್ಣನು 'ಅರ್ಜುನನ ಶರೀರ ಉದ್ದ. ಅದರಿಂದ ಅವನಿಗೆ ಹೆಚ್ಚು ಕ್ಲೇಶ' ಹೀಗೆ ಹೇಳಿದ ಕೃಷ್ಣ ಪುನಃ ಮುಂದುವರಿದು ಹೇಳಲು ತೊಡಗಿದಾಗಲೇ ದ್ರೌಪದಿಯು ಕಡೆಗಣ್ಣ ನೋಟದಿಂದಲೇ ತಡೆದಳು. ಸಕಲ ಸಾಮುದ್ರಿಕ ಲಕ್ಷಣಜ್ಞರು ಶ್ರೀಕೃಷ್ಣ, ಸತ್ಯಭಾಮೆ, ಭೀಮ, ದ್ರೌಪದಿಯರು ಹೊರತು ಐದನೆಯವನಿಲ್ಲ. ಈ ಸಾಮುದ್ರಿಕಶಾಸ್ತ್ರ ಬಹಳ ಶುದ್ಧವಾದುದು. ವಿದ್ಯಾರ್ಜನ ಸ್ವಭಾವದವನಾದ ಧರ್ಮರಾಜ ಈ ಪ್ರಸಂಗದಿಂದ ಅದನ್ನು ಕಲಿಯಲು ಬಯಸಬಹುದೆಂದು ಲೋಭದಿಂದ ದ್ರೌಪದಿ ಕೃಷ್ಣನನ್ನು ತಡೆದಿದ್ದಳು.

ತದ್ಗೌರವಾದ್ ವಾಸುದೇವೋ ನೋತ್ತರಂ ಪ್ರತ್ಯಭಾಷತ ।
ವಿಸ್ಮಾರಯಾಮಾಸ ಚ ತಂ ಪ್ರಬ್ರುವಾಣಃ ಕಥಾಂತರಮ್ ॥

ದ್ರೌಪದಿಯ ಕಣ್ಣ ಸನ್ನೆಗೆ ಬೆಲೆಕೊಟ್ಟು ಶ್ರೀಕೃಷ್ಣನು ಮುಂದೆ ಹೇಳಲಿಲ್ಲ. ಬೇರೆ ಮಾತನ್ನು ಹೇಳುತ್ತಾ ಈ ಪ್ರಸಂಗವನ್ನು ಮರೆಸಿದನು.

ಉದರಸ್ಯ ಕಿಂಚಿದಾಧಿಕ್ಯಂ ವೃಷಣಾಧಿಕ್ಯಮೇವ ಚ ।
ಸವ್ಯಬಾಹೋಽಽಸ್ತಥಾಧಿಕ್ಯಂ ದುರ್ಲಕ್ಷಣಮತೋಽರ್ಜುನೇ ॥

ಅರ್ಜುನನಲ್ಲಿ ಹೊಟ್ಟೆ ಸ್ವಲ್ಪ ಉದ್ದವಾಗಿರುವುದು ವೃಷ್ಣವೂ ಸ್ವಲ್ಪ ದಪ್ಪವಾಗಿರುವುದು ಎಡತೋಳೂ ಉದ್ದವಾಗಿರುವುದು ಬೇರೆ ದುರ್ಲಕ್ಷಣವಾಗಿತ್ತು.

ನೈವೋಕ್ತಂ ವಾಸುದೇವೇನ ದೃಶ್ಯಮಾನಮಪಿ ಸ್ಫುಟಮ್ ।
ಜ್ಞಾನಾನಂದಹ್ರಾಸಕರಾ ಹ್ಯೇತೇ ದೋಷಾಃ ಸದಾತನಾಃ ॥

ಅದು ಸ್ಫುಟವಾಗಿ ಕಾಣುತ್ತಿದ್ದರೂ ಶ್ರೀಕೃಷ್ಣನು ಹೇಳಲಿಲ್ಲ. ಈ ದೋಷಗಳು ಸದಾ ಇದ್ದು ಜ್ಞಾನಾನಂದಗಳಿಗೆ ಹ್ರಾಸಕರವಾಗಿವೆ.

ಸಮಸ್ತಜೀವರಾಶೌ ತದ್ ದುರ್ಲಕ್ಷಣವಿವರ್ಜಿತೌ ।
ಪೂರ್ಣಚಿತ್ಸುಖಶಕ್ತ್ಯಾದೇರ್ಯೋಗ್ಯೌ ಕೃಷ್ಣಾ ಚ ಮಾರುತಿಃ ॥

ಅನಾದಿದುಃಖಹೀನತ್ವೇ ಸುಖಾಧಿಕ್ಯೇ ಚ ಲಕ್ಷಣಮ್ ।
ರುಗ್ಮಿಣೀಸತ್ಯಭಾಮಾದಿರೂಪಾಯಾಃ ಶ್ರಿಯ ಏವ ತು ॥

ಮುಖ್ಯಂ ತತೋಽಪಿ ಮುಖ್ಯಂ ತು ಸ್ವಾತಂತ್ರ್ಯಾದೇರಶೇಷತಃ ।
ಗುಣರಾಶೇಃ ಪರಂ ಲಿಂಗಂ ನಿತ್ಯಂ ವ್ಯಾಸಾದಿರೂಪಿಣಃ ।
ವಿಷ್ಣೋರೇವ ನ ಚಾನ್ಯಸ್ಯ ಸ ಹ್ಯೇಕಃ ಪೂರ್ಣಸದ್ಗುಣಃ ॥

ಸಮಸ್ತ ಜೀವರಾಶಿಯಲ್ಲಿ ದುರ್ಲಕ್ಷಣ ರಹಿತರು ಪೂರ್ಣ ಜ್ಞಾನಾನಂದ ಬಲಾದಿಗಳಿಗೆ ಯೋಗ್ಯರಾದ ದ್ರೌಪದೀ ಭೀಮರು ಮಾತ್ರ. ಅನಾದಿಕಾಲದಿಂದ ದುಃಖಹೀನರಾಗಿರುವುದರಲ್ಲಿಯೂ ಅಧಿಕ ಸುಖಿಗಳಾಗಿರುವುದರಲ್ಲಿಯೂ ಸೂಚಕವಾದ ಲಕ್ಷಣ ವಾಯುಭಾರತಿಯರಿಗಿಂತಲೂ ಮುಖ್ಯವಾಗಿ ರುಕ್ಮಿಣೀ ಸತ್ಯಭಾಮಾ ಮುಂತಾದ ರೂಪಗಳುಳ್ಳ ಲಕ್ಷ್ಮಿಗೇ ಇರುತ್ತದೆ. ಅವಳಿಗಿಂತಲೂ ಮುಖ್ಯವಾಗಿ ಸ್ವಾತಂತ್ರ್ಯಾದಿ ಸಕಲ ಗುಣರಾಶಿಗಳಿಗೆ ಉತ್ತಮ ಸೂಚಕವಾದ ಲಕ್ಷಣಗಳು ಸದಾಕಾಲ ವ್ಯಾಸಾದಿರೂಪನಾದ ವಿಷ್ಣುವಿಗೇ ಹೊರತು ಇನ್ನೊಬ್ಬನಿಗಿಲ್ಲ. ಅವನೊಬ್ಬನೇ ಪೂರ್ಣ ಸದ್ಗುಣ ಉಳ್ಳವನು.

ಸಾಶ್ವೇಽರ್ಜುನೇ ಯಜ್ಞವಾಟಂ ಪ್ರವಿಷ್ಟೇಽಸ್ಯ ಸಹೋದರಾಃ ।
ಪೂಜಿತಾಃ ಪೂಜಯಾಮಾಸುರ್ಮುದಿತಾಃ ಸಹಕೇಶವಾಃ ॥

ಅರ್ಜುನನು ಕುದುರೆಯೊಂದಿಗೆ ಯಜ್ಞಶಾಲೆಯನ್ನು ಪ್ರವೇಶಿಸಿದಾಗ ಅವನ ಸೋದರರೂ ಶ್ರೀಕೃಷ್ಣನೂ ಸಂತುಷ್ಟರಾದರು. ಪರಸ್ಪರ ಆಲಿಂಗನಾದಿಗಳಿಂದ ಸತ್ಕೃತರಾದರು ಮತ್ತು ಸತ್ಕರಿಸಿದರು.

★ ★ ★ ★ ★

ಎಪ್ಪತ್ತೊಂಬತ್ತನೆಯ ಅಧ್ಯಾಯ

ಅರ್ಜುನ-ಬಭ್ರುವಾಹನರ ಯುದ್ಧ. ಅರ್ಜುನನ ಮರಣ.

ವೈಶಂಪಾಯನಃ

ಕ್ರಮೇಣ ಸ ಹಯಸ್ತ್ವೇವಂ ವಿಚರನ್ ಭರತರ್ಷಭ ।
ಮಣಲೂರುಪತೇರ್ದೇಶಮುಪಾಯಾತ್ ಸಹಪಾಂಡವಃ ॥೧॥

ವೈಶಂಪಾಯನ– ಯಜ್ಞಾಶ್ವವು ಕ್ರಮವಾಗಿ ಸಂಚಾರ ಮಾಡುತ್ತಾ ಮಣಲೂರು ಪತಿಯಾದ ಬಭ್ರುವಾಹನನ ದೇಶಕ್ಕೆ ಆಗಮಿಸಿತು. ಅರ್ಜುನನು ಆ ಯಜ್ಞಾಶ್ವವನ್ನು ಅನುಸರಿಸಿಕೊಂಡು ಆಗಮಿಸಿದನು.

ಶ್ರುತ್ವಾ ತು ನೃಪತಿರ್ವೀರಂ ಪಿತರಂ ಬಭ್ರುವಾಹನಃ ।
ನಿರ್ಯಯೌ ವಿನಯೇನಾರ್ಘ್ಯೋ ಬ್ರಾಹ್ಮಣಾರ್ಘ್ಯಪುರಸ್ಸರಃ ॥೨॥

ಜನಮೇಜಯನೇ, ಆ ಸಮಯದಲ್ಲಿ ಮಣಲೂರ, ಪಟ್ಟಣಕ್ಕೆ ರಾಜನಾಗಿರುವ ಬಭ್ರುವಾಹನನು ತನ್ನ ತಂದೆಯಾದ ಅರ್ಜುನನು ಕುದುರೆಯನ್ನು ಹಿಂಬಾಲಿಸಿ ತನ್ನ ಪ್ರದೇಶಕ್ಕೆ ಬಂದಿರುವನೆಂಬ ವಾರ್ತೆಯನ್ನು ಕೇಳಿ, ವಿನಯದಿಂದ ಅವನನ್ನು ಎದುರುಗೊಳ್ಳಲು ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡು ಅರ್ಘ್ಯಪಾದ್ಯಾದಿಗಳಿಂದ ಸಹಿತನಾಗಿ ಹೋದನು.

ಮಣಲೂರೇಶ್ವರಂ ತ್ವೇವಮುಪಯಾತಂ ಧನಂಜಯಃ ।
ನಾಭ್ಯನಂದತ ಮೇಧಾವೀ ಕ್ಷಾತ್ರಧರ್ಮಮನುಸ್ಮರನ್ ॥೩॥

ಮೇಧಾವಿಯಾದ ಧನಂಜಯನು ಮಣಲೂರು ಪಟ್ಟಣಕ್ಕೆ ಒಡೆಯನಾದ ರಾಜನು ಕ್ಷತ್ರಧರ್ಮಕ್ಕೆ ವಿರುದ್ಧವಾಗಿ ವಿನೀತನಾಗಿ ತನ್ನ ಬಳಿ ಬರುತ್ತಿರುವುದನ್ನು ಅಭಿನಂದಿಸಲಿಲ್ಲ.

ಉವಾಚ ಚೈನಂ ಧರ್ಮಾತ್ಮಾ ಸಮನ್ಯುಃ ಫಲ್ಗುನಸ್ತದಾ ॥೪॥

ಧರ್ಮಾತ್ಮನಾದ ಫಲ್ಗುನನು ಸಿಟ್ಟಿನಿಂದ ತನ್ನ ಮಗನಿಗೆ ಹೀಗೆ ಹೇಳಿದನು.

ಅರ್ಜುನಃ

ಪ್ರಕ್ರಿಯೇಯಂ ನ ತೇ ಯುಕ್ತಾ ಬಹಿಸ್ತ್ವಂ ಕ್ಷತ್ರಧರ್ಮತಃ ॥೫॥

ಅರ್ಜುನ– ಮಗುವೇ, ಈ ವಿಧವಾದ ವ್ಯವಹಾರವು ನಿನಗೆ ಯೋಗ್ಯ ಎನಿಸುವುದಿಲ್ಲ. ಈ ರೀತಿಯಾದ ವಿನಯದ ವ್ಯವಹಾರದಿಂದ ನೀನು ಕ್ಷತ್ರಧರ್ಮದಿಂದ ಬಹಿಷ್ಕೃತನಾಗಿದ್ದಿ ಎಂದು ತಿಳಿಯುತ್ತೇನೆ.

ಸಂರಕ್ಷ್ಯಮಾಣಂ ತುರಗಂ ಯೌಧಿಷ್ಠಿರಮುಪಾಗತಮ್ ।
ಯಾಜ್ಞೀಯಂ ವಿಷಯಂ ತ್ವಂ ಮಾಂ ನಾಯೋತ್ಸೀಃ ಕಿಂ ನು ಪುತ್ರಕ ॥೬॥

ಯುಧಿಷ್ಠಿರನಿಗೆ ಸಂಬಂಧಿಸಿದ ಯಜ್ಞಾಶ್ವವನ್ನು ಸಂರಕ್ಷಿಸುತ್ತಾ ನಾನು ಈ ಕುದುರೆಯನ್ನೇ ಅನುಸರಿಸಿ ನಿನ್ನ ದೇಶಕ್ಕೆ ಆಗಮಿಸಿದ್ದೇನೆ. ಕ್ಷತ್ರಧರ್ಮಕ್ಕನುಗುಣವಾಗಿ ಯಜ್ಞದ ಕುದುರೆಯನ್ನು ಕಟ್ಟಿಹಾಕಬೇಕಿತ್ತು. ನನ್ನೊಡನೆ ಯುದ್ಧವನ್ನು ಮಾಡಬೇಕಿತ್ತು. ಮಗನೇ, ಹೀಗೇಕೆ ಆಚರಿಸಲಿಲ್ಲ?

ಧಿಕ್ ಧಿಕ್ ತ್ವಾಂ ತು ಸುದುರ್ಬುದ್ಧಿಂ ಕ್ಷತ್ರಧರ್ಮಾಽವಿಶಾರದಮ್ ।
ಯೋ ಮಾಂ ಯುಧಿ ಸುಸಂಪ್ರಾಪ್ತಂ ಸಾಮ್ನೈವಾಥೋ ತ್ವಮಗ್ರಹೀಃ ॥

ಕ್ಷತ್ರಧರ್ಮದಿಂದ ಬಹಿಷ್ಕೃತನಾದ, ದುರ್ಬುದ್ಧಿಯವನಾದ ನಿನಗೊಂದು ಧಿಕ್ಕಾರ. ಯುದ್ಧಕ್ಕಾಗಿ ಆಗಮಿಸಿರುವ ನನ್ನನ್ನು ಸಾಮೋಪಾಯದಿಂದ ಸ್ವಾಗತಿಸಿರುವುದು ಕ್ಷತ್ರಧರ್ಮಕ್ಕೆ ಮಾಡಿದ ಅವಮಾನ.

ನ ತ್ವಯಾ ಪುರುಷಾರ್ಥಶ್ಚ ಕಶ್ಚಿದಸ್ತೀಹ ಜೀವತಾ ।
ಯಸ್ತ್ವಂ ಸ್ತ್ರೀವದ್ ಯುಧಾ ಪ್ರಾಪ್ತಂ ಸಾಮ್ನಾ ಮಾಂ ಪ್ರತಿಗೃಹ್ಣಥಾಃ ॥

ನೀನು ಜೀವಂತವಾಗಿ ಬದುಕಿರುವಿ. ಯಾವ ಪುರುಷಾರ್ಥವನ್ನೂ ಸಾಧಿಸಿಲ್ಲ. ಯುದ್ಧ ಮಾಡಲು ಆಗಮಿಸಿರುವ ನನ್ನನ್ನು ಒಂದು ಸ್ತ್ರೀಯನ್ನು ವಿನಯದಿಂದ ಸ್ವಾಗತಿಸುವಂತೆ ಸ್ವಾಗತಿಸುತ್ತಿರುವಿ.

ಯದ್ಯಹಂ ನ್ಯಸ್ತಶಸ್ತ್ರಂ ತ್ವಾಮಾಗಚ್ಛೇಯಂ ಸುದುರ್ಮತೇ ।
ಪ್ರಕ್ರಿಯೇಯಂ ತತೋ ಯುಕ್ತಾ ಭವೇತ್ ತವ ನರಾಧಮ ॥೯॥

ದುರ್ಬುದ್ಧಿಯವನೇ, ನರಾಧಮನೇ, ನಾನೇನಾದರೂ ಶಸ್ತ್ರಗಳನ್ನು ಬದಿಗಿಟ್ಟು ಇಲ್ಲಿಗೆ ಬಂದಿದ್ದಲ್ಲಿ ನೀನು ಈ ಕ್ರಮದಲ್ಲಿ ಸ್ವಾಗತಿಸುವುದು ಯುಕ್ತವಾಗುತ್ತಿತ್ತು.

ವೈಶಂಪಾಯನಃ

ತಮೇವಮುಕ್ತಂ ಭರ್ತ್ರಾ ಚ ವಿದಿತ್ವಾ ಪನ್ನಗಾತ್ಮಜಾ ।
ಅಮೃಷ್ಯಮಾಣಾ ಭಿತ್ತ್ವೋರ್ವೀಮುಲೂಪೀ ತಮುಪಾಗಮತ್ ॥೧೦॥

ವೈಶಂಪಾಯನ– ಜನಮೇಜಯನೇ, ತನ್ನ ಪತಿಯು ಮಗನೊಡನೆ ಹೀಗೆ ಹೇಳುತ್ತಿರುವ ಮಾತನ್ನು ಕೇಳಿಸಿಕೊಂಡ ರಾಜಕನ್ಯೆಯಾದ ಉಲೂಪಿಯು ತನ್ನ ಮಗನಾದ ಬಭ್ರುವಾಹನನಿಗೆ ಅವಮಾನವಾಯಿತೆಂದು ಸಹಿಸಿಕೊಳ್ಳಲಾಗದೆ ಭೂಮಿಯನ್ನೇ ಭೇದಿಸಿಕೊಂಡು ಆ ಪ್ರಸಂಗದಲ್ಲಿ ಪ್ರತ್ಯಕ್ಷಳಾದಳು.

ಸಾ ದದರ್ಶ ತತಃ ಪುತ್ರಂ ವಿಮೃಶಂತಮಧೋಮುಖಮ್ ।
ಸಂತರ್ಜ್ಯಮಾನಮಸಕೃದ್ ಭರ್ತ್ರಾ ಯುದ್ಧಾರ್ಥಿನಾ ವಿಭೋ ॥೧೧॥

ಆ ಸಂದರ್ಭದಲ್ಲಿ ಬಭ್ರುವಾಹನನು ಏನು ಮಾಡಬೇಕೆಂದು ಸಮಾಲೋಚಿಸುತ್ತಾ ಮುಖವನ್ನು ತಗ್ಗಿಸಿಕೊಂಡು ನಿಂತಿರುವುದನ್ನೂ, ಯುದ್ಧಾರ್ಥಿಯಾದ ಅರ್ಜುನನು ಮಗನಿಗೆ ಪುನಃ ಪುನಃ ಕಠೋರವಾದ ಮಾತುಗಳಿಂದ ಧಿಕ್ಕರಿಸುತ್ತಿರುವ ದೃಶ್ಯವನ್ನು ಕಂಡಳು.

ತತಃ ಸಾ ಚಾರುಸರ್ವಾಂಗೀ ತಮುಪೇತ್ಯೋರಗಾತ್ಮಜಾ ।
ಉಲೂಪೀ ಪ್ರಾಹ ವಚನಂ ಕ್ಷತ್ರಧರ್ಮಾವಿಶಾರದಮ್ ॥೧೨॥

ಮನೋಹರವಾದ ಅಂಗಗಳಿಂದ ಕೂಡಿದ್ದ ನಾಗಕನ್ಯೆಯಾದ ಉಲೂಪಿಯು ಧರ್ಮವಿಶಾರದನಾದ ಬಭ್ರುವಾಹನನಿಗೆ ಧರ್ಮಸಮ್ಮತವಾದ ಮಾತುಗಳನ್ನು ಹೇಳಿದಳು.

ಉಲೂಪೀ

ಉಲೂಪೀಂ ಮಾಂ ನಿಬೋಧ ತ್ವಂ ಮಾತರಂ ಪನ್ನಗಾತ್ಮಜಾಮ್ ।
ಕುರುಷ್ವ ವಚನಂ ಪುತ್ರ ಧರ್ಮಸ್ತೇ ಭವಿತಾ ಮಹಾನ್ ॥೧೩॥

ಉಲೂಪೀ– ಮಗನೇ, ನನ್ನನ್ನು ನಾಗಕನ್ಯೆಯಾದ ಉಲೂಪಿ ಎಂದು ತಿಳಿ. ನಿನ್ನ ತಾಯಿ ನಾನು. ನನ್ನ ಮಾತಿನಂತೆ ನಡೆದುಕೊ. ಇದರಿಂದ ಮಹಾಧರ್ಮವೇ ನಿನಗೆ ಲಭಿಸುತ್ತದೆ.

ಯುದ್ಧ್ಯಸ್ವೈನಂ ಕುರುಶ್ರೇಷ್ಠಂ ಧನಂಜಯಮರಿಂದಮಮ್ ।
ಏವಮೇಷ ಪಿತಾ ಪ್ರೀತೋ ಭವಿಷ್ಯತಿ ನ ಸಂಶಯಃ ॥೧೪॥

ಯುದ್ಧದ ಮದದಿಂದ ಕೊಬ್ಬಿರುವ ಕುರುಕುಲಶ್ರೇಷ್ಠನಾದ ಅರ್ಜುನನೊಡನೆ ನೀನು ಸಂಶಯಪಡದೆ ಸೆಣೆಸು. ಹೀಗೆ ಯುದ್ಧ ಮಾಡುವುದರಿಂದ ನಿನ್ನ ತಂದೆಯು ಪ್ರಸನ್ನನಾಗುತ್ತಾನೆ. ಯಾವ ಸಂಶಯವನ್ನೂ ತಾಳಬೇಡ.

ವೈಶಂಪಾಯನಃ

ಏವಮುದ್ಧರ್ಷಿತೋ ಮಾತ್ರಾ ಸ ರಾಜಾ ಬಭ್ರುವಾಹನಃ ।
ಮನಶ್ಚಕ್ರೇ ಮಹಾತೇಜಾ ಯುದ್ಧಾಯ ಭರತರ್ಷಭ ॥೧೫॥

ವೈಶಂಪಾಯನ– ಹೀಗೆ ತಾಯಿಯಿಂದ ಉತ್ಸಾಹವನ್ನು ಪಡೆದ ತೇಜಸ್ವಿಯಾದ ಬಭ್ರುವಾಹನನು ತಂದೆಯೊಡನೆ ಸೆಣೆಸಾಡಲು ಮನಸ್ಸು ಮಾಡಿದನು.

ಸನ್ನಹ್ಯ ಕಾಂಚನಂ ವರ್ಮ ಶಿರಸ್ತ್ರಾಣಂ ಚ ಭಾನುಮತ್ ।
ತೂಣೀರಶರಸಂಬಾಧಮಾರುರೋಹ ಮಹಾರಥಮ್ ॥೧೬॥

ಬಳಿಕ ರಾಜಕುಮಾರನು ಸುವರ್ಣಕವಚವನ್ನು ತೊಟ್ಟು, ಶಿರಸ್ತ್ರಾಣವನ್ನು ಧರಿಸಿ, ನೂರಾರು ಬಾಣಗಳಿಂದ ತುಂಬಿದ ಬತ್ತಳಿಕೆ ಸಹಿತವಾಗಿ ರಥವನ್ನು ಯುದ್ಧಕ್ಕಾಗಿ ಏರಿದನು.

ಸರ್ವೋಪಕರಣೈರ್ಯುಕ್ತಂ ಯುಕ್ತಮಶ್ವೈರ್ಮನೋಜವೈಃ ।
ಸುಚಕ್ರೋಪಸ್ಕರಂ ಧೀಮಾನ್ ಹೇಮಭಾಂಡಪರಿಷ್ಕೃತಮ್ ॥೧೭॥

ಪರಮಾರ್ಚಿತಮುಚ್ಛ್ರಿತ್ಯ ಧ್ವಜಂ ಹಂಸಂ ಹಿರಣ್ಮಯಮ್ ।
ಪ್ರಯಯೌ ಪಾರ್ಥಮುದ್ದಿಶ್ಯ ಸ ರಾಜಾ ಬಭ್ರುವಾಹನಃ ॥೧೮॥

ಸಮಸ್ತ ಯುದ್ಧಕ್ಕೆ ಬೇಕಾದ ವಸ್ತುಗಳಿಂದ ತುಂಬಿರುವ, ಆಭರಣಗಳಿಂದ ಅಲಂಕೃತವಾದ, ಕಾಂತಿಯುಕ್ತವಾದ ಸುವರ್ಣಮಯ ರಥದಲ್ಲಿ ಕುಳಿತು, ಸಿಂಹಧ್ವಜವನ್ನು ರಥದ ಮೇಲಿರಿಸಿಕೊಂಡು, ಅರ್ಜುನನೊಡನೆ ಯುದ್ಧ ಮಾಡಲು ಹೊರಟನು. ಅವನ ರಥವು ಕಬ್ಬಿಣದ್ದಾಗಿತ್ತು, ಧ್ವಜವು ಬಂಗಾರಮಯವಾಗಿತ್ತು.

ತತೋಽಭ್ಯೇತ್ಯ ಹಯಂ ವೀರೋ ಯಾಜ್ಞಿಯಂ ಪಾರ್ಥರಕ್ಷಿತಮ್ ।
ಗ್ರಾಹಯಾಮಾಸ ಪುರುಷೈರ್ಹಯಶಿಕ್ಷಾವಿಶಾರದೈಃ ॥೧೯॥

ಬಳಿಕ ವೀರನಾದ ಅರ್ಜುನನ ಮಗನು ಪಾರ್ಥನಿಂದ ರಕ್ಷಿಸಲ್ಪಡುತ್ತಿದ್ದ ಯಜ್ಞದ ಕುದುರೆಯನ್ನು ಹಯಶಿಕ್ಷಾಪ್ರವೀಣರಾದ ಪುರುಷರ ಮೂಲಕ ಬಂಧಿಸಿದನು.

ಗೃಹೀತಂ ವಾಜಿನಂ ದೃಷ್ಟ್ವಾ ಪ್ರೀತಾತ್ಮಾ ಸ ಧನಂಜಯಃ ।
ಪುತ್ರಂ ರಥಸ್ಥಂ ಭೂಮಿಷ್ಠಃ ಸನ್ನ್ಯವಾರಯದಾಹವೇ ॥೨೦॥

ಯಜ್ಞಾಶ್ವವನ್ನು ಮಗನು ಬಂಧಿಸಿದ್ದನ್ನು ಕಂಡು ನಡೆದುಬರುತ್ತಿರುವ ಅರ್ಜುನನು ತಡೆದನು.

ತತಃ ಸ ರಾಜಾ ತಂ ವೀರಃ ಶರವ್ರಾತೈಃ ಸಹಸ್ರಶಃ ।
ಅರ್ದಯಾಮಾಸ ನಿಶಿತೈರಾಶೀವಿಷವಿಷೋಪಮೈಃ ॥೨೧॥

ಮಣಲೂರುಪುರದ ರಾಜನಾದ ಬಭ್ರುವಾಹನನು ಸರ್ಪದಂತಿರುವ ಹರಿತವಾದ ಬಾಣಗಳ ಸಮೂಹದಿಂದ ಅರ್ಜುನನನ್ನು ಏಕಪ್ರಕಾರವಾಗಿ ಪೀಡಿಸಿದನು.

ತಯೋಃ ಸಮಭವದ್ ಯುದ್ಧಂ ಪಿತುಃ ಪುತ್ರಸ್ಯ ಚಾತುಲಮ್ ।
ದೇವಾಸುರರಣಪ್ರಖ್ಯಮ್ ಉಭಯೋಃ ಪ್ರೀಯಮಾಣಯೋಃ ॥೨೨॥

ತಂದೆ-ಮಗನ ನಡುವೆ ಮಹಾಭಯಂಕರವಾದ, ದೇವಾಸುರರಿಗೆ ಸಮಾನವಾದ ಯುದ್ಧವೇ ಸಂತೋಷದಿಂದಲೇ ನಡೆಯುತ್ತಿತ್ತು.

ಕಿರೀಟಿನಂ ತು ವಿವ್ಯಾಧ ಶರೇಣಾನತಪರ್ವಣಾ ।
ಜತ್ರುದೇಶೇ ನರವ್ಯಾಘ್ರ ಪ್ರಹಸನ್ ಬಭ್ರುವಾಹನಃ ॥೨೩॥

ಆ ಯುದ್ಧಕ್ಕೆ ಸಮಾನವಾದ ಯುದ್ಧ ಹಿಂದೆಂದೂ ನಡೆದಿಲ್ಲವೋ ಎಂಬಂತೆ ನಡೆಯುತ್ತಿರುವಾಗ ಬಭ್ರುವಾಹನನು ನಗುತ್ತಲೇ ಬಗ್ಗಿದ ಗಿಣ್ಣಿನಿಂದ ಕೂಡಿದ ಬಾಣದಿಂದ ಅರ್ಜುನನ ಕೊರಳಿಗೆ ಹೊಡೆದನು.

ಸೋಽತ್ಯಗಾತ್ ಸಹ ಪುಂಖೇನ ವಲ್ಮೀಕಮಿವ ಪನ್ನಗಃ ।
ವಿನಿರ್ಭಿದ್ಯ ಚ ಕೌಂತೇಯಂ ಮಹೀತಲಮುಪಾವಿಶತ್ ॥೨೪॥

ಆ ಬಾಣವು ಬಿಲದೊಳಗೆ ಹಾವು ನುಸುಳಿ ಹೋಗುವಂತೆ ರೆಕ್ಕೆಗಳ ಸಹಿತವಾಗಿ ಅರ್ಜುನನ ಕುತ್ತಿಗೆ ಪ್ರದೇಶದಲ್ಲಿ ಹೊಕ್ಕು ಅವನ ಕೊರಳನ್ನೇ ಭೇದಿಸಿ ಹೊರಬಂದು ಭೂಮಿಯಲ್ಲಿ ಸೇರಿಕೊಂಡಿತು.

ಸ ಗಾಢವೇದನೋ ಧೀಮಾನ್ ಆಲಂಬ್ಯ ಧನುರುತ್ತಮಮ್ ।
ದಿವ್ಯಂ ತೇಜಃ ಸಮಾವಿಶ್ಯ ನಿಮೀಲಿತ ಇವಾಬಭೌ ॥೨೫॥

ಈ ಪ್ರಹಾರದಿಂದ ಧೀಮಂತನಾದ ಅರ್ಜುನನಿಗೆ ತಡೆಯಲಾರದ ವೇದನೆ ಉಂಟಾಯಿತು. ತನ್ನ ಧನುಸ್ಸನ್ನು ಅವಲಂಬಿಸಿ ಕಷ್ಟದಲ್ಲಿ ನಿಂತನು. ಆ ಸಂದರ್ಭದಲ್ಲಿ ಕಣ್ಣನ್ನು ಮುಚ್ಚಿ ಮೂರ್ಛಿತನಾಗುತ್ತಿರುವಂತೆ ಕಾಣಿಸುತ್ತಿದ್ದನು.

ಸ ಸಂಜ್ಞಾಮುಪಲಭ್ಯಾಥ ಪ್ರಶಸ್ಯ ಪುರುಷರ್ಷಭಃ ।
ಪುತ್ರಂ ಶಕ್ರಾತ್ಮಜೋ ವಾಕ್ಯಮಿದಮಾಹ ಮಹೀಪತೇ ॥೨೬॥

ಸ್ವಲ್ಪ ಸಮಯದ ಬಳಿಕ ಇಂದ್ರನ ಮಗನಾದ, ಪುರುಷಶ್ರೇಷ್ಠನಾದ ಅರ್ಜುನನು ಎಚ್ಚರಗೊಂಡು ಮಗನನ್ನು ಪ್ರಶಂಸಿಸುತ್ತಾ ಇಂತು ನುಡಿದನು.

ಅರ್ಜುನಃ

ಸಾಧು ಸಾಧು ಮಹಾಬಾಹೋ ವತ್ಸ ಚಿತ್ರಾಂಗದಾತ್ಮಜ ।
ಸದೃಶಂ ಕರ್ಮ ತೇ ದೃಷ್ಟ್ವಾ ಪ್ರೀತಿಮಾನಸ್ಮಿ ಪುತ್ರಕ ॥೨೭॥

ವಿಮುಂಚಾಮ್ಯದ್ಯ ಬಾಣಾಂಶ್ಚ ಯುದ್ಧೇ ಧೀರೋ ಭವಾದ್ಯ ವೈ ॥೨೮॥

ಸಾಧು-ಸಾಧು, ಮಹಾಬಾಹುವೇ, ಚಿತ್ರಾಂಗದೆಯ ಸುತನೇ, ವತ್ಸನೇ, ಭಲೆ, ಭಲೆ. ಅರ್ಜುನನಿಗೆ ಅನುರೂಪವಾದ ನಿನ್ನ ಸಾಹಸಕಾರ್ಯವನ್ನು ಕಂಡು ನಾನು ಸಂತುಷ್ಟನಾಗಿದ್ದೇನೆ. ನಾನೀಗಲೇ ನಿನ್ನ ಮೇಲೆ ಬಾಣಗಳನ್ನು ಬಿಡುತ್ತೇನೆ. ಸ್ಥಿರವಾಗಿ ಧೈರ್ಯದಿಂದ ನನ್ನ ಬಾಣಗಳನ್ನು ಎದುರಿಸಿ ನಿಲ್ಲು.

ವೈಶಂಪಾಯನಃ

ಇತ್ಯೇವಮುಕ್ತ್ವಾ ನಾರಾಚೈರಭ್ಯವರ್ಷದಮಿತ್ರಹಾ ॥೨೯॥

ವೈಶಂಪಾಯನ– ಹೀಗೆ ಶತ್ರುಹಂತಕನಾದ ಅರ್ಜುನನು ಬಭ್ರುವಾಹನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತಾಂಸ್ತಾನ್ ಗಾಂಡೀವನಿರ್ಮುಕ್ತಾನ್ ವಜ್ರಾಶನಿಸಮಸ್ವನಾನ್ ।
ನಾರಾಚಾನಚ್ಛಿನದ್ ರಾಜಾ ಸರ್ವಾನೇವ ತ್ರಿಧಾ ತ್ರಿಧಾ ॥೩೦॥

ಅರ್ಜುನನ ಗಾಂಡೀವ ಧನುಸ್ಸಿನಿಂದ ಬಿಡಲ್ಪಟ್ಟ ವಜ್ರಾಯುಧಕ್ಕೂ, ಸಿಡಿಲಿಗೂ ಸಮಾನವಾದ ಅರ್ಜುನನ ನಾರಾಚಗಳನ್ನು ಬಭ್ರುವಾಹನನು ಮೂರು-ಮೂರು ತುಂಡುಗಳಾಗಿ ಭಲ್ಲಗಳಿಂದ ಕತ್ತರಿಸಿದನು.

ತಸ್ಯ ಪಾರ್ಥಃ ಶರೈಸ್ತೀಕ್ಷ್ಣೈರ್ಧ್ವಜಂ ಹೇಮಪರಿಷ್ಕೃತಮ್ ।
ಸುವರ್ಣತಾಲಪ್ರತಿಮಂ ಕ್ಷಣೇನಾಪಾಹರದ್ ರಥಾತ್ ॥೩೧॥

ಮರುಕ್ಷಣದಲ್ಲಿಯೇ ಅರ್ಜುನನು ಸುವರ್ಣದಿಂದ ಪರಿಷ್ಕೃತವಾದ, ತಾಲ ವೃಕ್ಷದಂತಿದ್ದ, ಸುವರ್ಣಾಭರಣಭೂಷಿತವಾದ ಬಭ್ರುವಾಹನನ ರಥದ ಧ್ವಜವನ್ನು ದಿವ್ಯವಾದ ಬಾಣಗಳಿಂದ ಕ್ಷಣ ಮಾತ್ರದಲ್ಲಿ ರಥದಿಂದ ಕತ್ತರಿಸಿ ಕೆಡವಿದನು.

ಹಯಾಂಶ್ಚಾಸ್ಯ ಮಹಾಕಾಯಾನ್ ಮಹಾವೇಗಪರಾಕ್ರಮಾನ್ ।
ಚಕಾರ ರಾಜನ್ ನಿರ್ಜೀವಾನ್ ಪ್ರಹಸನ್ ಪಾಂಡವರ್ಷಭಃ ॥೩೨॥

ಪುನಃ ಅರ್ಜುನನು ನಗುತ್ತಲೇ ಮಹಾಕಾಯವುಳ್ಳ, ಮಹಾವೇಗ- ಪರಾಕ್ರಮದಿಂದ ಕೂಡಿರುವ ಬಭ್ರುವಾಹನನ ಕುದುರೆಗಳನ್ನು ಬಾಣದ ಪ್ರಹಾರದಿಂದ ನಿರ್ಜೀವಗಳನ್ನಾಗಿ ಮಾಡಿದನು.

ಸ ರಥಾದವತೀರ್ಯಾಶು ರಾಜಾ ಪರಮಕೋಪನಃ ।
ಪದಾತಿಃ ಪಿತರಂ ಕೋಪಾದ್ ಯೋಧಯಾಮಾಸ ಪಾಂಡವಮ್ ॥೩೩॥

ಆ ಪ್ರಸಂಗದಲ್ಲಿ ಬಭ್ರುವಾಹನನು ರಥದಿಂದ ಹಾರಿ, ಸಿಟ್ಟಿನಿಂದ ಪದಾತಿಯಾಗಿಯೇ ತಂದೆಯ ಬಳಿ ಯುದ್ಧವನ್ನು ಮಾಡಿದನು.

ಸಂಪ್ರೀಯಮಾಣಃ ಪಾಂಡೂನಾಮೃಷಭಃ ಪುತ್ರವಿಕ್ರಮಾತ್ ।
ನಾತ್ಯರ್ಥಂ ಪೀಡಯಾಮಾಸ ಪುತ್ರಂ ವಜ್ರಧರಾತ್ಮಜಃ ॥೩೪॥

ಅರ್ಜುನನು ಮಗನ ಪರಾಕ್ರಮವನ್ನು ಕಂಡು ಪ್ರೀತನಾದನು. ಮಗನನ್ನು ಬಹಳವಾಗಿ ಪೀಡಿಸಹೋಗಲಿಲ್ಲ.

ಸ ಹನ್ಯಮಾನೋಽಭಿಮುಖಂ ಪಿತರಂ ಬಭ್ರುವಾಹನಃ ।
ಶರೈರಾಶೀವಿಷಾಕಾರೈಃ ಪುನರೇವಾರ್ದಯದ್ ಬಲೀ ॥೩೫॥

ಹೀಗೆ ಅಭಿಮುಖವಾಗಿ ಯುದ್ಧಮಾಡುತ್ತಿರುವ ಅರ್ಜುನನನ್ನು ಬಭ್ರುವಾಹನನು ಸರ್ಪದ ಆಕಾರವುಳ್ಳ ಬಾಣಗಳಿಂದ ಪುನಃ ಚೆನ್ನಾಗಿ ಪೀಡಿಸಿದನು.

ತತಃ ಸ ಬಾಲ್ಯಾತ್ ಪಿತರಂ ವಿವ್ಯಾಧ ಹೃದಿ ಪತ್ರಿಣಾ ।
ನಿಶಿತೇನ ಸುಪುಂಖೇನ ಬಲವದ್ ಬಭ್ರುವಾಹನಃ ॥೩೬॥

ಬಾಲ್ಯಬುದ್ಧಿಯಿಂದ ತಂದೆಯನ್ನು ಹರಿತವಾದ, ರೆಕ್ಕೆಗಳಿಂದ ಕೂಡಿದ ಬಾಣಗಳಿಂದ ಬಭ್ರುವಾಹನನು ಪ್ರಬಲವಾಗಿ ಹೃದಯಕ್ಕೆ ಚುಚ್ಚಿದನು.

ಸ ಶರಸ್ತೇಜಸಾ ದೀಪ್ತೋ ಜ್ವಲನ್ನಿವ ಹುತಾಶನಃ ।
ವಿವೇಶ ಪಾಂಡವಂ ರಾಜನ್ ಮರ್ಮ ಭಿತ್ತ್ವಾಽತಿದುಃಖಕೃತ್ ॥೩೭॥

ಆ ಬಾಣವಾದರೂ ತೇಜಸ್ಸಿನಿಂದ ಬೆಳಗುತ್ತಾ, ಬೆಂಕಿಯಂತೆ ಜ್ವಲಿಸುತ್ತಾ, ಅರ್ಜುನನ ಕವಚವನ್ನು ಸೀಳಿಕೊಂಡು, ಅತ್ಯಂತ ದುಃಖವನ್ನುಂಟು ಮಾಡುತ್ತಾ ಹೃದಯವನ್ನು ಪ್ರವೇಶಿಸಿತು.

ಸ ತೇನಾತಿಭೃಶಂ ವಿದ್ಧಃ ಪುತ್ರೇಣ ಕುರುನಂದನಃ ।
ಮಹೀಂ ಜಗಾಮ ಮೋಹಾರ್ತಸ್ತತೋ ರಾಜನ್ ಧನಂಜಯಃ ॥೩೮॥

ಮಗನಿಂದ ಬಿಡಲ್ಪಟ್ಟ ಬಾಣದಿಂದ ಹೊಡೆತ ತಿಂದು ಅರ್ಜುನನು ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು.

ತಸ್ಮಿನ್ ನಿಪತಿತೇ ವೀರೇ ಕೌರವಾಣಾಂ ಧುರಂಧರೇ ।
ಸೋಽಪಿ ಮೋಹಂ ಜಗಾಮಾಶು ತತ್ರ ಚಿತ್ರಾಂಗದಾತ್ಮಜಃ ॥೩೯॥

ಕೌರವದುರಂಧರನಾದ ಅರ್ಜುನನು ಗತಪ್ರಾಣನಾಗಿ ನೆಲದ ಮೇಲೆ ಬಿದ್ದಾಗ, ಇದನ್ನು ಕಂಡು ಚಿತ್ರಾಂಗದನ ಸುತನಾದ ಬಭ್ರುವಾಹನನೂ ಮೋಹಿತನಾಗಿ ಕ್ಷಣಕಾಲ ಮೂರ್ಛಿತನಾದನು.

ವ್ಯಾಯಮ್ಯ ಸಂಯುಗೇ ರಾಜಾ ದೃಷ್ಟ್ವಾ ಚ ಪಿತರಂ ಹತಮ್ ।
ಪೂರ್ವಮೇವ ಚ ಬಾಣೌಘೈರ್ಗಾಢವಿದ್ಧೋರ್ಜುನೇನ ಸಃ ॥೪೦॥

ರಣಾಂಗಣದಲ್ಲಿ ಕಾದಾಡುತ್ತಾ ಅರ್ಜುನನ ಬಾಣಗಳಿಂದ ಗಾಯಗೊಂಡಿದ್ದ ಬಭ್ರುವಾಹನನು ಅರ್ಜುನನು ಯುದ್ಧದಲ್ಲಿ ಹತನಾದದ್ದನ್ನು ನೋಡಿದ ಕೂಡಲೇ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು.

ಭರ್ತಾರಂ ನಿಹತಂ ಶ್ರುತ್ವಾ ಪುತ್ರಂ ಚ ಪತಿತಂ ಭುವಿ ।
ಚಿತ್ರಾಂಗದಾ ಪರಿತ್ರಸ್ತಾ ಪ್ರವಿವೇಶ ರಣಾಜಿರಮ್ ॥೪೧॥

ಗಂಡನು ಹತನಾಗಿರುವುದನ್ನೂ, ಮಗನು ನೆಲಕ್ಕುರುಳಿರುವುದನ್ನೂ ಕೇಳಿದ ಚಿತ್ರಾಂಗದೆಯು ದುಃಖಿತಳಾಗಿ ರಣರಂಗಕ್ಕೆ ಪ್ರವೇಶಿಸಿದಳು.

ಶೋಕಸಂತಪ್ತಹೃದಯಾ ರುದತೀ ಸಾ ತತಃ ಶುಭಾ ।
ಮಣಲೂರಪತೇರ್ಮಾತಾ ದದರ್ಶ ನಿಹತಂ ಪತಿಮ್ ॥೪೨॥

ಶೋಕದಿಂದ ಸಂತಪ್ತವಾದ ಹೃದಯವುಳ್ಳ, ಗಳಗಳನೆ ಅಳುತ್ತಿರುವ, ಭಯಂಕರವಾದ ದೃಶ್ಯವನ್ನು ನೋಡುತ್ತಿದ್ದ ಮಣಲೂರಿನ ರಾಜನಾದ ಬಭ್ರುವಾಹನನ ತಾಯಿಯು ತನ್ನ ಗಂಡನು ಸತ್ತುಬಿದ್ದಿರುವುದನ್ನು ಕಂಡಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಬಭ್ರುವಾಹನೇನ ಅರ್ಜುನವಧೋ ನಾಮ
ಏಕೋನಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತನೆಯ ಅಧ್ಯಾಯ

ಚಿತ್ರಾಂಗದೆಯ ವಿಲಾಪ. ಮೂರ್ಛೆಯಿಂದ ಎಚ್ಚರಗೊಂಡ ಬಭ್ರುವಾಹನನ ಶೋಕ. ಉಲೂಪಿಯ ಪ್ರಯತ್ನದಿಂದ ಸಂಜೀವನಿ ಔಷಧಿಯ ಮೂಲಕ ಅರ್ಜುನನನ್ನು ಬದುಕಿಸಿದುದು.

ವೈಶಂಪಾಯನಃ

ತತೋ ಬಹುವಿಧಂ ಭೀರುರ್ವಿಲಪ್ಯ ಕಮಲೇಕ್ಷಣಾ ।
ಮುಮೋಹ ದುಃಖಾದ್ ದುರ್ಧರ್ಷಾ ನಿಪಪಾತ ಚ ಭೂತಲೇ ॥೧॥

ಸ ಹನ್ಯಮಾನೋಽಭಿಮುಖಂ ಪಿತರಂ ಬಭ್ರುವಾಹನಃ ।
ಶರೈರಾಶೀವಿಷಾಕಾರೈಃ ಪುನರೇವಾರ್ದಯದ್ ಬಲೀ ॥೩೫॥

ಹೀಗೆ ಅಭಿಮುಖವಾಗಿ ಯುದ್ಧಮಾಡುತ್ತಿರುವ ಅರ್ಜುನನನ್ನು ಬಭ್ರುವಾಹನನು ಸರ್ಪದ ಆಕಾರವುಳ್ಳ ಬಾಣಗಳಿಂದ ಪುನಃ ಚೆನ್ನಾಗಿ ಪೀಡಿಸಿದನು.

ತತಃ ಸ ಬಾಲ್ಯಾತ್ ಪಿತರಂ ವಿವ್ಯಾಧ ಹೃದಿ ಪತ್ರಿಣಾ ।
ನಿಶಿತೇನ ಸುಪುಂಖೇನ ಬಲವದ್ ಬಭ್ರುವಾಹನಃ ॥೩೬॥

ಬಾಲ್ಯಬುದ್ಧಿಯಿಂದ ತಂದೆಯನ್ನು ಹರಿತವಾದ, ರೆಕ್ಕೆಗಳಿಂದ ಕೂಡಿದ ಬಾಣಗಳಿಂದ ಬಭ್ರುವಾಹನನು ಪ್ರಬಲವಾಗಿ ಹೃದಯಕ್ಕೆ ಚುಚ್ಚಿದನು.

ಸ ಶರಸ್ತೇಜಸಾ ದೀಪ್ತೋ ಜ್ವಲನ್ನಿವ ಹುತಾಶನಃ ।
ವಿವೇಶ ಪಾಂಡವಂ ರಾಜನ್ ಮರ್ಮ ಭಿತ್ತ್ವಾತಿದುಃಖಕೃತ್ ॥೩೭॥

ಆ ಬಾಣವಾದರೂ ತೇಜಸ್ಸಿನಿಂದ ಬೆಳಗುತ್ತಾ, ಬೆಂಕಿಯಂತೆ ಜ್ವಲಿಸುತ್ತಾ, ಅರ್ಜುನನ ಕವಚವನ್ನು ಸೀಳಿಕೊಂಡು, ಅತ್ಯಂತ ದುಃಖವನ್ನುಂಟು ಮಾಡುತ್ತಾ ಹೃದಯವನ್ನು ಪ್ರವೇಶಿಸಿತು.

ಸ ತೇನಾತಿಭೃಶಂ ವಿದ್ಧಃ ಪುತ್ರೇಣ ಕುರುನಂದನಃ ।
ಮಹೀಂ ಜಗಾಮ ಮೋಹಾರ್ತಸ್ತತೋ ರಾಜನ್ ಧನಂಜಯಃ ॥೩೮॥

ಮಗನಿಂದ ಬಿಡಲ್ಪಟ್ಟ ಬಾಣದಿಂದ ಹೊಡೆತ ತಿಂದು ಅರ್ಜುನನು ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು.

ತಸ್ಮಿನ್ ನಿಪತಿತೇ ವೀರೇ ಕೌರವಾಣಾಂ ಧುರಂಧರೇ ।
ಸೋಽಪಿ ಮೋಹಂ ಜಗಾಮಾಶು ತತ್ರ ಚಿತ್ರಾಂಗದಾತ್ಮಜಃ ॥೩೯॥

ಕೌರವದುರಂಧರನಾದ ಅರ್ಜುನನು ಗತಪ್ರಾಣನಾಗಿ ನೆಲದ ಮೇಲೆ ಬಿದ್ದಾಗ, ಇದನ್ನು ಕಂಡು ಚಿತ್ರಾಂಗದನ ಸುತನಾದ ಬಭ್ರುವಾಹನನೂ ಮೋಹಿತನಾಗಿ ಕ್ಷಣಕಾಲ ಮೂರ್ಛಿತನಾದನು.

ವ್ಯಾಯಮ್ಯ ಸಂಯುಗೇ ರಾಜಾ ದೃಷ್ಟ್ವಾ ಚ ಪಿತರಂ ಹತಮ್ ।
ಪೂರ್ವಮೇವ ಚ ಬಾಣೌಘೈರ್ಗಾಢವಿದ್ಧೋರ್ಜುನೇನ ಸಃ ॥೪೦॥

ರಣಾಂಗಣದಲ್ಲಿ ಕಾದಾಡುತ್ತಾ ಅರ್ಜುನನ ಬಾಣಗಳಿಂದ ಗಾಯಗೊಂಡಿದ್ದ ಬಭ್ರುವಾಹನನು ಅರ್ಜುನನು ಯುದ್ಧದಲ್ಲಿ ಹತನಾದದ್ದನ್ನು ನೋಡಿದ ಕೂಡಲೇ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು.

ಭರ್ತಾರಂ ನಿಹತಂ ಶ್ರುತ್ವಾ ಪುತ್ರಂ ಚ ಪತಿತಂ ಭುವಿ ।
ಚಿತ್ರಾಂಗದಾ ಪರಿತ್ರಸ್ತಾ ಪ್ರವಿವೇಶ ರಣಾಜಿರಮ್ ॥೪೧॥

ಗಂಡನು ಹತನಾಗಿರುವುದನ್ನೂ, ಮಗನು ನೆಲಕ್ಕುರುಳಿರುವುದನ್ನೂ ಕೇಳಿದ ಚಿತ್ರಾಂಗದೆಯು ದುಃಖಿತಳಾಗಿ ರಣರಂಗಕ್ಕೆ ಪ್ರವೇಶಿಸಿದಳು.

ಶೋಕಸಂತಪ್ತಹೃದಯಾ ರುದತೀ ಸಾ ತತಃ ಶುಭಾ ।
ಮಣಲೂರಪತೇರ್ಮಾತಾ ದದರ್ಶ ನಿಹತಂ ಪತಿಮ್ ॥೪೨॥

ಶೋಕದಿಂದ ಸಂತಪ್ತವಾದ ಹೃದಯವುಳ್ಳ, ಗಳಗಳನೆ ಅಳುತ್ತಿರುವ, ಭಯಂಕರವಾದ ದೃಶ್ಯವನ್ನು ನೋಡುತ್ತಿದ್ದ ಮಣಲೂರಿನ ರಾಜನಾದ ಬಭ್ರುವಾಹನನ ತಾಯಿಯು ತನ್ನ ಗಂಡನು ಸತ್ತುಬಿದ್ದಿರುವುದನ್ನು ಕಂಡಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಬಭ್ರುವಾಹನೇನ ಅರ್ಜುನವಧೋ ನಾಮ
ಏಕೋನಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತನೆಯ ಅಧ್ಯಾಯ

ಚಿತ್ರಾಂಗದೆಯ ವಿಲಾಪ. ಮೂರ್ಛೆಯಿಂದ ಎಚ್ಚರಗೊಂಡ ಬಭ್ರುವಾಹನನ ಶೋಕ. ಉಲೂಪಿಯ ಪ್ರಯತ್ನದಿಂದ ಸಂಜೀವನಿ ಔಷಧಿಯ ಮೂಲಕ ಅರ್ಜುನನನ್ನು ಬದುಕಿಸಿದುದು.

ವೈಶಂಪಾಯನಃ

ತತೋ ಬಹುವಿಧಂ ಭೀರುರ್ವಿಲಪ್ಯ ಕಮಲೇಕ್ಷಣಾ ।
ಮುಮೋಹ ದುಃಖಾದ್ ದುರ್ಧರ್ಷಾ ನಿಪಪಾತ ಚ ಭೂತಲೇ ॥೧॥

ವೈಶಂಪಾಯನ– ಜನಮೇಜಯನೇ, ಭೀರುಸ್ವಭಾವದವಳಾದ, ಕಮಲ ನಯನಳಾದ ಚಿತ್ರಾಂಗದೆಯು ಪತಿವಿಯೋಗದಿಂದ ದುಃಖಿತಳಾಗಿ ಬಹಳ ಹೊತ್ತು ದುಃಖಿಸುತ್ತಲೇ ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು.

ಪ್ರತಿಲಭ್ಯ ಚ ಸಾ ಸಂಜ್ಞಾಂ ದೇವೀ ದಿವ್ಯವಪುರ್ಧರಾ ।
ಉಲೂಪೀಂ ಪನ್ನಗಸುತಾಂ ದೃಷ್ಟ್ವೈರ್ದಂ ವಾಕ್ಯಮಬ್ರವೀತ್ ॥೨॥

ಸ್ವಲ್ಪ ಸಮಯದ ಬಳಿಕ ದಿವ್ಯರೂಪವತಿಯಾದ ಚಿತ್ರಾಂಗದೆಯು ಎಚ್ಚರಗೊಂಡು ನಾಗಕನ್ಯೆಯಾದ ಉಲೂಪಿಯನ್ನು ನೋಡುತ್ತಾ ಇಂತು ನುಡಿದಳು.

ಚಿತ್ರಾಂಗದಾ

ಉಲೂಪಿ ಪಶ್ಯ ಭರ್ತಾರಂ ಶಯಾನಂ ನಿಹತಂ ರಣೇ ।
ತ್ವತ್ಕೃತೇ ಮಮ ಪುತ್ರೇಣ ಬಾಣೇನ ಸಮಿತಿಂಜಯಮ್ ॥೩॥

ಚಿತ್ರಾಂಗದೆ– ಉಲೂಪಿಯೆ, ನನ್ನ ಸ್ವಾಮಿಯಾದ ಅರ್ಜುನನು ರಣಭೂಮಿಯಲ್ಲಿ ಸತ್ತು ಬಿದ್ದಿರುವುದನ್ನು ನೋಡು. ಯುದ್ಧಭೂಮಿಯಲ್ಲಿ ಎಂದೂ ಜಯಶೀಲನಾಗಿರುವ ಅರ್ಜುನನು ನಿನ್ನ ಪ್ರೇರಣೆಯಿಂದಲೇ ನನ್ನ ಮಗನ ಬಾಣದಿಂದ ಹತನಾಗಿದ್ದಾನೆ.

ನನು ತ್ವಮಾರ್ಯಾ ಧರ್ಮಜ್ಞಾ ನನು ಚಾಸಿ ಪತಿವ್ರತಾ ।
ಯತ್ ತ್ವತ್ಕೃತೇऽಯಂ ಪತಿತಃ ಪತಿಸ್ತೇ ನಿಹತೋ ರಣೇ ॥೪॥

ಸಹೋದರಿಯೇ, ನೀನು ಆರ್ಯಧರ್ಮವನ್ನು ತಿಳಿದವಳು. ಪತಿವ್ರತೆಯು. ಹೀಗಿದ್ದರೂ ನನ್ನ ಪತಿಯೊಡನೆ ಯುದ್ಧ ಮಾಡುವಂತೆ ಮಗನನ್ನು ಏಕೆ ಪ್ರಚೋದಿಸಿದೆ? ನಿನ್ನ ಪ್ರೇರಣೆಯಿಂದಲೇ ಬಭ್ರುವಾಹನನು ಯುದ್ಧದಲ್ಲಿ ತಂದೆಯನ್ನು ಸಂಹರಿಸಿದ್ದಾನೆ.

ಕಿಂ ನು ಮಂದೋऽಪರಾದ್ಧೋऽಯಂ ಯದಿ ತೇऽದ್ಯ ಧನಂಜಯಃ ।
ಉಲೂಪಿ ಯಾಚ್ಯಮಾನಾ ಮೇ ಸಂಜೀವಯ ಧನಂಜಯಮ್ ॥೫॥

ಒಂದು ವೇಳೆ ಧನಂಜಯನು ನಿನಗೆ ಅನ್ಯಾಯವೆಸಗಿದ್ದಾನೆ ಎಂದು ಭಾವಿಸಿದ್ದರೂ ಅವನನ್ನು ನನಗಾಗಿ ಕ್ಷಮಿಸು. ನನ್ನ ಪ್ರಾರ್ಥನೆಯನ್ನು ಕೇಳಿಕೊ. ಅರ್ಜುನನನ್ನು ಬದುಕಿಸು.

ನನು ತ್ವಮಾರ್ಯಾ ಧರ್ಮಜ್ಞಾ ತ್ರೈಲೋಕ್ಯವಿದಿತಂ ಶುಭೇ ।
ಯದ್ ಘಾತಯಿತ್ವಾ ಭರ್ತಾರಂ ಪುತ್ರೇಣ ನ ಹಿ ಶೋಚಸಿ ॥೬॥

ನೀನು ಪೂಜ್ಯಳಾಗಿರುವಿ. ಶೋಭನಳೇ, ಧರ್ಮಜ್ಞಳಾಗಿರುವಿ. ಈ ಸತ್ಕರ್ಮದಿಂದ ಮೂರುಲೋಕದಗಳಲ್ಲಿ ಖ್ಯಾತಿಯನ್ನು ಪಡೆಯುವಿ. ಮಗನ ಮೂಲಕ ಪತಿಯು ಮರಣೋನ್ಮುಖನಾಗಿದ್ದರೂ ನೀನು ದುಃಖಿಸುತ್ತಿಲ್ಲ.

ನಾಹಂ ಶೋಚಾಮಿ ತನಯಂ ನಿಹತಂ ಪನ್ನಗಾತ್ಮಜೇ ।
ಪತಿಮೇವ ತು ಶೋಚಾಮಿ ಯಸ್ಯಾತಿಥ್ಯಮಿದಂ ಕೃತಮ್ ॥ ೭॥

ನಾನು ಮಗನು ಪೀಡಿತನಾಗಿರುವುದಕ್ಕೆ ದುಃಖಪಡುವುದಿಲ್ಲ. ಪತಿಯು ಹತನಾಗಿರುವುದಕ್ಕೆ ಶೋಕಿಸುತ್ತೇನೆ. ಅನೇಕ ದಿನಗಳ ನಂತರ ಆಗಮಿಸಿದ ಪತಿಗೆ ಇಂತಹ ಆತಿಥ್ಯವನ್ನು ನೀಡಿದ್ದು ಅಪರಾಧವಾಯಿತು ಎಂದು ಭಾವಿಸುತ್ತೇನೆ.

ವೈಶಂಪಾಯನಃ

ಇತ್ಯುಕ್ತ್ವಾ ಸಾ ತದಾ ದೇವೀಮುಲೂಪೀಂ ಪನ್ನಗಾತ್ಮಜಾಮ್ ।
ಭರ್ತಾರಮಭಿಗಮ್ಯೇದಮಿತ್ಯುವಾಚ ಯಶಸ್ವಿನೀ ॥೮॥

ವೈಶಂಪಾಯನ– ಜನಮೇಜಯನೇ, ಯಶಸ್ವಿನಿಯಾದ ಚಿತ್ರಾಂಗದೆಯು ನಾಗಕನ್ಯೆಯಾದ ಉಲೂಪಿಗೆ ಹೀಗೆ ಹೇಳುತ್ತಾ, ಕ್ರಿಯಾಶೂನ್ಯನಾದ ಪತಿಯ ಬಳಿ ಸಾಗಿ ಬಿಕ್ಕಿ ಬಿಕ್ಕಿ ಅಳುತ್ತಾ ಇಂತು ನುಡಿದಳು.

ಚಿತ್ರಾಂಗದಾ

ಉತ್ತಿಷ್ಠ ಕುರುಮುಖ್ಯ ತ್ವಂ ಪ್ರಿಯಕಾಮ ಮಮ ಪ್ರಿಯ ।
ಅಯಮಶ್ವೋ ಮಹಾಬಾಹೋ ಮಯಾ ತೇ ಪರಿಮೋಕ್ಷಿತಃ ॥೯॥

ಚಿತ್ರಾಂಗದೆ– ಕುರುರಾಜನಿಗೆ ಪ್ರಿಯನಾಗಿರುವ, ಮಹಾಬಾಹುವಾದ ಪ್ರಾಣಕಾಂತನೇ ಎದ್ದೇಳು. ಇದು ನಿನ್ನ ಯಜ್ಞದ ಕುದುರೆಯು. ನಾನೇ ಇದನ್ನು ಬಿಟ್ಟುಬಿಟ್ಟಿದ್ದೇನೆ.

ನನು ನಾಮ ತ್ವಯಾ ವೀರ ಧರ್ಮರಾಜಸ್ಯ ಯಾಜ್ಞಿಯಃ ।
ಅಯಮಶ್ವೋऽನುಸರ್ತವ್ಯಃ ಸಂಶೇಷೇ ಕಿಂ ಮಹೀತಲೇ ॥೧೦॥

ಧರ್ಮರಾಜನ ಯಜ್ಞಕ್ಕೆ ಸಂಬಂಧಿಸಿದ ಈ ಕುದುರೆಯ ಜೊತೆಯಲ್ಲೇ ನೀನು ಹೋಗಬೇಕಷ್ಟೆ! ಹೀಗಿದ್ದರೂ ಕರ್ತವ್ಯವನ್ನು ಮರೆತು ಏಕೆ ಮಲಗಿರುವಿ?

ತ್ವಯಿ ಪ್ರಾಣಾಃ ಸಮಾಯತ್ತಾಃ ಕುರೂಣಾಂ ಕುರುವರ್ಧನ ।
ಸ ಕಸ್ಮಾತ್ ಪ್ರಾಣದೋಽನ್ಯೇಷಾಂ ಪ್ರಾಣಾನ್ ಸಂತ್ಯಕ್ತವಾನಸಿ ॥೧೧॥

ಪ್ರಾಣಕಾಂತನೇ, ಯುಧಿಷ್ಠಿರಾದಿಗಳ ಪ್ರಾಣಗಳು ನಿನ್ನನ್ನೇ ಆಶ್ರಯಿಸಿವೆ. ಮತ್ತೊಬ್ಬರಿಗೆ ಪ್ರಾಣದಾನ ಮಾಡಬೇಕಾದ ನೀನು ಏಕೆ ಪ್ರಾಣವನ್ನು ತ್ಯಜಿಸಿರುವಿ?

ಉಲೂಪಿ ಸಾಧು ಸಂಪಶ್ಯ ಭರ್ತಾರಂ ನಿಹತಂ ರಣೇ ।
ಪುತ್ರಂ ಚೈನಂ ಸಮುತ್ಸಾಹ್ಯ ಪಾತಯಿತ್ವಾ ನ ಶೋಚಸಿ ॥೧೨॥

ಚಿತ್ರಾಂಗದೆಯು ಪುನಃ ಉಲೂಪಿಯ ಕಡೆ ತಿರುಗಿ ಹೇಳುತ್ತಾಳೆ. ಉಲೂಪಿಯೇ, ಗತಪ್ರಾಣನಾಗಿ ನೆಲದ ಮೇಲೆ ಬಿದ್ದಿರುವ ನಿನ್ನ ಗಂಡನನ್ನು ನೋಡು. ಮಗನನ್ನು ಪ್ರೋತ್ಸಾಹಿಸಿ ಪತಿಘಾತಿನಿ ಎನಿಸಿರುವಿ. ಹೀಗಿದ್ದರೂ ದುಃಖಪಡುತ್ತಿಲ್ಲ.

ಕಾಮಂ ಸ್ವಪಿತು ಬಾಲೋಽಯಂ ಭೂಮೌ ಪ್ರೇತಗತಿಂ ಗತಃ ।
ಲೋಹಿತಾಕ್ಷೋ ಗುಡಾಕೇಶೋ ವಿಜಯಃ ಸಾಧು ಜೀವತು ॥೧೩॥

ಮೋಹಪೀಡಿತನಾಗಿ ಭೂಮಿಯಲ್ಲಿ ಬಿದ್ದಿರುವ ಬಾಲಕನು ಬಹಳ ಹೊತ್ತು ಹೀಗೆಯೇ ಮಲಗಿರಲಿ. ಆದರೆ ಗುಡಾಕೇಶನಾದ, ಲೋಹಿತಾಕ್ಷನಾದ, ನನ್ನ ಪತಿಯಾದ ವಿಜಯನು ಚೆನ್ನಾಗಿ ಬದುಕಲಿ.

ನಾಪರಾಧೋಽಸ್ತಿ ಸುಭಗೇ ನರಾಣಾಂ ಬಹುಭಾರ್ಯತಾ ।
ನಾರೀಣಾಂ ನ ಭವತ್ಯೇತನ್ಮಾ ತೇ ಭೂದ್ ಬುದ್ಧಿರೀದೃಶೀ ॥೧೪॥

ಸೌಭಾಗ್ಯವತಿಯೇ, ಪುರುಷರಿಗೆ ಬಹುಪತ್ನಿಯರಿದ್ದರೆ ಅದು ದೋಷ ಎನಿಸುವುದಿಲ್ಲ. ಸ್ತ್ರೀಯರಿಗೆ ಬಹುಪತಿತ್ವವು ಅಪರಾಧವೆನಿಸುತ್ತದೆ. ಆದ್ದರಿಂದ ಇಂತಹ ಕ್ರೂರಬುದ್ಧಿಯನ್ನು ಹೊಂದಬೇಡ.

ಸಖ್ಯಂ ಚೈತತ್ ಕೃತಂ ಧಾತ್ರಾ ಶಾಶ್ವತಂ ಚಾವ್ಯಯಂ ಚ ತತ್ ।
ಸಖ್ಯಂ ಸಮಭಿಜಾನೀಹಿ ಸತ್ಯಂ ಸಂಗತಮಸ್ತು ತೇ ॥೧೫॥

ಪತಿ-ಪತ್ನಿಯರ ಸಂಬಂಧವು ಚತುರ್ಮುಖ ಬ್ರಹ್ಮನಿಂದಲೇ ಏರ್ಪಟ್ಟಿದೆ. ಅವರಿಬ್ಬರ ಮೈತ್ರಿಯು ನಾಶರಹಿತವಾದುದು, ಶಾಶ್ವತವಾದುದು. ನಿನಗೂ ಅರ್ಜುನನ ಜೊತೆ ಇಂತಹ ಸಂಬಂಧವಿದೆ. ಸಖ್ಯದ ಮರ್ಮವನ್ನರಿತು ಮೈತ್ರಿಯು ಸಾರ್ಥಕವಾಗುವಂತೆ ವರ್ತಿಸು.

ಪುತ್ರೇಣ ಪಾತಯಿತ್ವೇಮಂ ಪತಿಂ ಯದಿ ನ ಲಜ್ಜಸೇ ।
ಜೀವಿತಂ ದರ್ಶಯಸ್ವಾದ್ಯ ಪರಿತ್ಯಕ್ಷ್ಯಾಮಿ ಜೀವಿತಮ್ ॥೧೬॥

ಮಗನ ಮೂಲಕವಾಗಿ ಪತಿಯನ್ನು ಸಂಹರಿಸಿರುವ ನೀನು ನನ್ನ ಪತಿಯನ್ನು ಜೀವಂತಗೊಳಿಸದಿದ್ದರೆ ನಿನ್ನ ಹೆಸರಿನಲ್ಲಿ ನಾನು ಪ್ರಾಣತ್ಯಾಗವನ್ನು ಮಾಡುತ್ತೇನೆ.

ಸಾಽಹಂ ದುಃಖಾನ್ವಿತಾ ಭೀರುಃ ಪತಿಪುತ್ರವಿನಾಕೃತಾ ।
ಇಹೈವ ಪ್ರಾಯಮಾಸಿಷ್ಯೇ ಪಶ್ಯಂತ್ಯಾಸ್ತೇ ನ ಸಂಶಯಃ ॥೧೭॥

ದೇವಿ, ನಾನು ನನ್ನ ಪತಿಯಿಂದಲೂ, ಪುತ್ರನಿಂದಲೂ ವಿಹೀನಳಾಗಿ ದುಃಖದಿಂದ ಮುಳುಗಿದ್ದೇನೆ. ನೀನು ನೋಡುತ್ತಿರುವಂತೆ ಪ್ರಾಯೋಪ್ರವೇಶ ಮಾಡಿ ಪ್ರಾಣತ್ಯಾಗ ಮಾಡುತ್ತೇನೆ. ಸಂಶಯವಿಲ್ಲ.

ವೈಶಂಪಾಯನಃ

ಇತ್ಯುಕ್ತ್ವಾ ಪನ್ನಗಸುತಾಂ ಸಪತ್ನೀ ಚೈತ್ರವಾಹಿನೀ ।
ತತಃ ಪ್ರಾಯಮುಪಾಸೀನಾ ತೂಷ್ಣೀಮಾಸೀಜ್ಜನಾಧಿಪ ॥೧೮॥

ವೈಶಂಪಾಯನ– ಈ ರೀತಿಯಾಗಿ ಉಲೂಪಿಯನ್ನು ಕುರಿತು ಚಿತ್ರಾಂಗದೆಯು ಹೇಳುತ್ತಾ ಪ್ರಾಯೋಪ್ರವೇಶ ವ್ರತವನ್ನು ಕೈಗೊಂಡು ಮೌನವಾಗಿ ಕುಳಿತಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಶ್ವಸಂಚರಣೇ ಚಿತ್ರಾಂಗದಾಪ್ರಾಯೋಪವೇಶೋ ನಾಮ
ಅಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂದನೆಯ ಅಧ್ಯಾಯ

ಬಹಳ ಕಾಲದ ಬಳಿಕ ಎಚ್ಚರಗೊಂಡ ಬಭ್ರುವಾಹನನು
ಉಲೂಪಿಯನ್ನು ಕಂಡು ತಾನೂ ಪ್ರಾಯೋಪ್ರವೇಶಕ್ಕೆ ಕುಳಿತಿರುವುದು.

ವೈಶಂಪಾಯನಃ

ತಥಾ ವಿಲಪ್ಯೋಪರತಾ ಭರ್ತುಃ ಪಾದೌ ಪ್ರಗೃಹ್ಯ ಸಾ ।
ಉಪವಿಷ್ಟಾಭವದ್ ದೇವೀ ಸೋಚ್ಛ್ವಾಸಂ ಪುತ್ರಮೀಕ್ಷತೀ ॥೧॥

ವೈಶಂಪಾಯನ– ಹೀಗೆ ಚಿತ್ರಾಂಗದೆಯು ಬಹಳ ಕಾಲದ ತನಕ ಕಣ್ಣೀರಿಟ್ಟು, ಕೊನೆಯಲ್ಲಿ ಗಂಡನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತುಕೊಂಡಳು. ಕಣ್ಣೀರಿನ ಸಹಿತವಾಗಿ ಬಿಸಿ ಉಸಿರನ್ನು ಬಿಡುತ್ತಾ, ಪುತ್ರನನ್ನೇ ನೋಡುತ್ತಾ ಚಿತ್ರಾಂಗದೆಯು ಕುಳಿತಿದ್ದಳು.

ತತಃ ಸಂಜ್ಞಾಂ ಪುನರ್ಲಬ್ಧ್ವಾ ಸ ರಾಜಾ ಬಭ್ರುವಾಹನಃ ।
ಮಾತರಂ ತಾಮಥಾಲೋಕ್ಯ ರಣಭೂಮಾವಥಾಬ್ರವೀತ್ ॥೨॥

ಅದೇ ಸಮಯದಲ್ಲಿ ಬಭ್ರುವಾಹನನು ಎಚ್ಚರಗೊಂಡು ತನ್ನ ತಾಯಿಯಾದ ಚಿತ್ರಾಂಗದೆಯನ್ನು ನೋಡಿ ರಣಭೂಮಿಯಲ್ಲಿ ಇಂತು ನುಡಿದನು.

ಬಭ್ರುವಾಹನಃ

ಇತೋ ದುಃಖತರಂ ಕಿಂ ನು ಯನ್ಮೇ ಮಾತಾ ಸುಖೈಧಿತಾ ।
ಭೂಮೌ ನಿಪತಿತಂ ವೀರಮನುಶೇತೇ ಪತಿವ್ರತಾ ॥೩॥

. ಬಭ್ರುವಾಹನ– ಅಯ್ಯೋ ವಿಧಿಯೇ! ಇಷ್ಟರತನಕ ಸುಖದಿಂದಲೇ ವೃದ್ಧಿಯನ್ನು ಹೊಂದುತ್ತಿರುವ ನನ್ನ ತಾಯಿಯು ಈ ರಣಭೂಮಿಯಲ್ಲಿ ಬಿದ್ದಿರುವ ಮೃತನಾದ ನನ್ನ ತಂದೆಯೊಡನೆ ಮರಣ ಹೊಂದಲು ನಿಶ್ಚಯಿಸಿ ಮಲಗಿರುವುದು ಸಹಿಸಲಾರದ ದುಃಖವನ್ನು ಉಂಟುಮಾಡುತ್ತಿದೆ. ಇದಕ್ಕಿಂತ ಕಠಿಣವಾದ ದುಃಖವನ್ನು ಇನ್ನೆಲ್ಲಿ ನೋಡಲಿ?

ನಿಹಂತಾರಂ ರಣೇಽರೀಣಾಂ ಸರ್ವಶಸ್ತ್ರಭೃತಾಂ ವರಮ್ ।
ಮಯಾ ವಿನಿಹತಂ ಸಂಖ್ಯೇ ಪ್ರೇಕ್ಷತೇ ದುರ್ಮರಂ ಪತಿಮ್ ॥೪॥

ರಣರಂಗದಲ್ಲಿ ಶತ್ರುಗಳನ್ನು ಕೊಲ್ಲುತ್ತಿದ್ದ, ಸರ್ವಶಸ್ತ್ರಾಸ್ತ್ರವೇತ್ತರಲ್ಲಿ ಶ್ರೇಷ್ಠನಾಗಿರುವ ಯಾವ ಅರ್ಜುನನು ನನ್ನಿಂದಲೇ ಮರಣಹೊಂದಿರುವ ದೃಶ್ಯವನ್ನು ನನ್ನ ತಾಯಿ ನೋಡುತ್ತಿದ್ದಾಳೆ.

ಅಹೋऽಸ್ಯಾ ಹೃದಯಂ ದೇವ್ಯಾ ದೃಢಂ ಯನ್ನ ವಿದೀರ್ಯತೇ ।
ವ್ಯೂಢೋರಸ್ಕಂ ಮಹಾಬಾಹುಂ ಪ್ರೇಕ್ಷಂತ್ಯಾಃ ಪತಿತಂ ಪತಿಮ್ ॥೫॥

ನಿಶ್ಚಯವಾಗಿಯೂ ಚಿತ್ರಾಂಗದೆಯ ಹೃದಯವು ಬಹಳ ಗಟ್ಟಿಯಾದುದೆಂದೇ ಭಾವಿಸುತ್ತೇನೆ. ಕಾರಣ ವಿಶಾಲವಕ್ಷಸ್ಥಲದಿಂದ ಕೂಡಿರುವ ಮೃತನಾದ ಪತಿಯನ್ನು ಕಾಣುತ್ತಿದ್ದರೂ ಇವಳಿಗೆ ಹೃದಯಾಘಾತವಾಗಿಲ್ಲ.

ದುರ್ಮರಂ ಪುರುಷೇಣೇಹ ಮನ್ಯೇ ಕಾಲೇ ಹ್ಯನಾಗತೇ ।
ಯತ್ರ ನಾಹಂ ನ ಮೇ ಮಾತಾ ವಿಪ್ರಯುಕ್ತೌ ಸ್ವಜೀವಿತಾತ್ ॥೬॥

ಕಾಲವು ಸನ್ನಿಹಿತವಾಗದಿದ್ದಲ್ಲಿ ಮನುಷ್ಯನು ಯಾವುದೇ ಸ್ಥಿತಿಯಲ್ಲಿದ್ದರೂ ಮರಣ ಹೊಂದುವುದು ಕಠಿಣವೇ ಎಂದು ಭಾವಿಸುತ್ತೇನೆ. ಅತಿಸಂಕಟ ಒದಗಿಬಂದಾಗಲೂ ಮೂರ್ಖನು ಜೀವಿತಾಸೆಯನ್ನು ಹೊಂದುತ್ತಾನೆಯೇ ಹೊರತು ಪ್ರಾಣವನ್ನು ತ್ಯಜಿಸಲು ಇಚ್ಛಿಸುವುದಿಲ್ಲ. ಇಂತಹ ಸಂಕಟದ ಸಮಯದಲ್ಲಿಯೂ ನನ್ನ ಪ್ರಾಣವಾಗಲಿ, ನನ್ನ ತಾಯಿಯ ಪ್ರಾಣವಾಗಲಿ ಹೊರಟು ಹೋಗುತ್ತಿಲ್ಲ ಎಂದರೆ ಈ ಜೀವಿತಾಸೆಯು ಎಷ್ಟು ಬಲವಾದುದು!

ಅಹೋ ಧಿಕ್ ಕುರುವೀರಸ್ಯ ಕಿರೀಟಂ ಕಾಂಚನಂ ಭುವಿ ।
ಅಪವಿದ್ಧಂ ಹತಸ್ಯೇಹ ಮಯಾ ಪುತ್ರೇಣ ಪಶ್ಯತಾ ॥೭॥

ಭೋ ಭೋ ಪಶ್ಯತ ಮೇ ವೀರಂ ಪಿತರಂ ಬ್ರಾಹ್ಮಣಾ ಭುವಿ ।
ಶಯಾನಂ ವೀರಶಯನೇ ಮಯಾ ಪುತ್ರೇಣ ಪಾತಿತಮ್ ॥೮॥

ನನಗೆ ಧಿಕ್ಕಾರವಿರಲಿ! ಕುರುವೀರನಾದ ಅರ್ಜುನನ ಕವಚವು ಮಗನಾದ ನನ್ನಿಂದಲೇ ಕಳಚಿ ಬಿದ್ದಿರುವ ದೃಶ್ಯವನ್ನು ನೋಡಿರಿ. ಬ್ರಾಹ್ಮಣರೇ, ಮಗನಾದ ನಾನೇ ಕೊಂದಿರುವ ನನ್ನ ತಂದೆಯ ಕಳೆಬರಹವನ್ನು ನೀವು ನೋಡಿರಿ.

ಬ್ರಾಹ್ಮಣಾಃ ಕುರುಮುಖ್ಯಸ್ಯ ಪ್ರಯುಕ್ತಾ ಹಯಸಾರಿಣಃ ।
ಕುರ್ವಂತು ಶಾಂತಿಕಂ ತ್ವದ್ಯ ರಣೇ ಯೋಽಯಂ ಮಯಾ ಹತಃ ॥೯॥

ಬ್ರಾಹ್ಮಣರೇ, ಯಜ್ಞದ ಕುದುರೆಯನ್ನು ಅನುಸರಿಸಿ ಬಂದಿರುವ ಪಾಂಡವ ವೀರನಿಗೆ ಯಾವ ಶಾಂತಿಕರ್ಮವನ್ನು ನಾನು ಮಾಡಬೇಕು? ಅದನ್ನು ತಿಳಿಸಿರಿ.

ಆದಿಶಂತು ಚ ಕಿಂ ವಿಪ್ರಾಃ ಪ್ರಾಯಶ್ಚಿತ್ತಮಿಹಾದ್ಯ ಮೇ ।
ಸುನೃಶಂಸಸ್ಯ ಪಾಪಸ್ಯ ಪಿತೃಹಂತೂ ರಣಾಜಿರೇ ॥೧೦॥

ಬ್ರಾಹ್ಮಣರೇ, ಅತ್ಯಂತ ಕ್ರೂರನಾಗಿರುವ, ಪಾಪಿಷ್ಟನಾದ, ರಣರಂಗದಲ್ಲಿ ತಂದೆಯನ್ನೇ ಸಂಹರಿಸುವ ನನಗೆ ಯಾವ ಪ್ರಾಯಶ್ಚಿತ್ತವೆಂದು ನಿರ್ದೇಶಿಸಿರಿ.

ದುಶ್ಚರಾ ದ್ವಾದಶ ಸಮಾ ಹತ್ವಾ ಪಿತರಮದ್ಯ ವೈ ।
ಮಮೇಹ ಸುನೃಶಂಸಸ್ಯ ಸಂವೀತಸ್ಯಾಸ್ಯ ಕರ್ಮಣಾ ॥೧೧॥

ಶಿರಃಕಪಾಲೇ ಚಾಸ್ಯೈವ ಭುಂಜತಃ ಪಿತುರದ್ಯ ಮೇ ।
ಪ್ರಾಯಶ್ಚಿತ್ತಂ ಹಿ ನಾಸ್ತ್ಯನ್ಯದ್ಧತ್ವಾದ್ಯ ಪಿತರಂ ಮಮ ॥೧೨॥

ತಂದೆಯನ್ನು ಕೊಂದಿರುವ ನಾನು ಮುಂದಿನ ಹನ್ನೆರಡು ವರ್ಷಗಳನ್ನು ಕಷ್ಟದಿಂದ ಕಳೆಯಬೇಕಾಗಿದೆ. ಅತ್ಯಂತ ಕ್ರೂರಿಯಾದ ನಾನು ಮೃತನಾದ ತಂದೆಯ ಚರ್ಮವನ್ನು ಹೊದ್ದುಕೊಂಡು, ಇವನ ಕಪಾಲವನ್ನೇ ಕೈಯಲ್ಲಿ ಹಿಡಿದು ಈ ಭೂಮಂಡಲದಲ್ಲಿ ಸಂಚಾರವನ್ನು ಮಾಡಬೇಕು. ತಂದೆಯನ್ನು ಕೊಂದಿರುವವನಿಗೆ ಇದಕ್ಕಿಂತಲೂ ಬೇರೆಯಾದ ಪ್ರಾಯಶ್ಚಿತ್ತವು ಇರುವುದಿಲ್ಲ.

ಪಶ್ಯ ನಾಗೋತ್ತಮಸುತೇ ಭರ್ತಾರಂ ನಿಹತಂ ಮಯಾ ।
ಕೃತಂ ಪ್ರಿಯಂ ಮಯಾ ತೇಽದ್ಯ ನಿಹತ್ಯ ಸಮರೇಽರ್ಜುನಮ್ ॥೧೩॥

ಜನಮೇಜಯನೇ, ಬಭ್ರುವಾಹನನು ಹೀಗೆ ಅಳುತ್ತಾ ಮಲತಾಯಿಯಾದ ಉಲೂಪಿಯನ್ನು ನೋಡಿ ಇಂತು ನುಡಿದನು: ನಾಗರಾಜಸುತೆಯೇ, ಇಲ್ಲಿ ನೋಡು. ನಿನ್ನ ಪತಿಯನ್ನು ವಧಿಸಿದ್ದೇನೆ. ಅವನನ್ನು ಸಂಹರಿಸಿ ನಿನ್ನ ಈಪ್ಸಿತವನ್ನು ಸಾಧಿಸಿದ್ದೇನೆ.

ಸೋಽಹಮಪ್ಯದ್ಯ ಯಾಸ್ಯಾಮಿ ಗತಿಂ ಪಿತೃನಿಷೇವಿತಾಮ್ ।
ನ ಶಕ್ನೋಮ್ಯಾತ್ಮನಾಽಽತ್ಮಾನಮಹಂ ಧಾರಯಿತುಂ ಶುಭೇ ॥೧೪॥

ಇದರಿಂದ ನಾನು ಮಾತ್ರ ಇನ್ನು ಮುಂದೆ ಬದುಕಿರಲು ಸಾಧ್ಯವಿಲ್ಲ. ತಂದೆಯ ಮಾರ್ಗವನ್ನೇ ಅನುಸರಿಸಿ ಹೋಗುತ್ತೇನೆ.

ಸಾ ತ್ವಂ ಮಯಿ ಮೃತೇ ಮಾತಸ್ತಥಾ ಗಾಂಡೀವಧನ್ವನಿ ।
ಭವ ಪ್ರೀತಿಮತೀ ದೇವಿ ಸತ್ಯೇನಾತ್ಮಾನಮಾಲಭೇ ॥೧೫॥

ನಾನೂ ಅರ್ಜುನನ ಮಾರ್ಗವನ್ನು ಅನುಸರಿಸಿದ ಬಳಿಕ ನೀನು ಸಂಪ್ರೀತಳಾಗು. ತಂದೆಯಿಲ್ಲದೆ ನಾನು ಬದುಕಲಾರೆ ಎಂಬುದನ್ನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ.

ವೈಶಂಪಾಯನಃ

ಇತ್ಯುಕ್ತ್ವಾ ಸ ತತೋ ರಾಜಾ ದುಃಖಶೋಕಸಮಾಹತಃ ।
ಉಪಸ್ಪೃಶ್ಯ ಮಹಾರಾಜ ದುಃಖಾದ್ ವಚನಮಬ್ರವೀತ್ ॥೧೬॥

ವೈಶಂಪಾಯನ– ಜನಮೇಜಯನೇ, ಶೋಕದಿಂದ ಪೀಡಿತನಾದ ಬಭ್ರುವಾಹನನು ಹೀಗೆ ಹೇಳಿ ಆಚಮನ ಮಾಡಿ ದುಃಖದಿಂದ ಇಂತು ನುಡಿದನು.

ಬಭ್ರುವಾಹನಃ

ಶೃಣ್ವಂತು ಸರ್ವಭೂತಾನಿ ಸ್ಥಾವರಾಣಿ ಚರಾಣಿ ಚ ।
ತ್ವಂ ಚ ಮಾತರ್ಯಥಾ ಸತ್ಯಂ ಬ್ರವೀಮಿ ಭುಜಗೋತ್ತಮೇ ॥೧೭॥

ಬಭ್ರುವಾಹನ– ಪ್ರಪಂಚದಲ್ಲಿರುವ ಚರಾಚರ ಪ್ರಾಣಿಗಳೆಲ್ಲವೂ ನನ್ನ ಮಾತನ್ನು ಕೇಳಲಿ. ನಾಗರಾಜಕುಮಾರಿಯೇ, ತಾಯಿಯೇ, ನೀನು ನಾನು ಹೇಳಲಿರುವ ಸತ್ಯವಾದ ಮಾತುಗಳನ್ನು ಕೇಳಿಸಿಕೊ. ಸತ್ಯವನ್ನೇ ಹೇಳುತ್ತೇನೆ.

ಯದಿ ನೋತ್ತಿಷ್ಠತಿ ಜಯಃ ಪಿತಾ ಮೇ ಭರತರ್ಷಭಃ ।
ಅಸ್ಮಿನ್ನೇವ ರಣೋದ್ದೇಶೇ ಶಾಯಯಿಷ್ಯೇ ಕಲೇಬರಮ್ ॥೧೮॥

ನನ್ನ ಭರತವಂಶಶ್ರೇಷ್ಠನಾದ, ತಂದೆಯಾದ, ಜಯನಾಮಕನಾದ ಅರ್ಜುನನು ಈ ರಣಭೂಮಿಯಿಂದ ಬದುಕಿ ಏಳದಿದ್ದಲ್ಲಿ ನಾನು ಈ ರಣರಂಗದಲ್ಲಿಯೇ ಆಮರಣಾಂತವಾಗಿ ಉಪವಾಸವಿದ್ದು ದೇಹವನ್ನು ಹೀಗೆಯೇ ಒಣಗಿಸಿ ತ್ಯಜಿಸುತ್ತೇನೆ.

ನ ಹಿ ಮೇ ಪಿತರಂ ಹತ್ವಾ ನಿಷ್ಕೃತಿರ್ವಿದ್ಯತೇ ಕ್ವಚಿತ್ ।
ನರಕಂ ಪ್ರತಿಪತ್ಸ್ಯಾಮಿ ಧ್ರುವಂ ಗುರುವಧಾರ್ದಿತಃ ॥೧೯॥

ತಂದೆಯನ್ನು ಕೊಲೆ ಮಾಡಿದ ನನಗೆ ಪ್ರಾಯಶ್ಚಿತ್ತವೆಂಬುದೇ ಇರುವುದಿಲ್ಲ. ತಂದೆಯನ್ನು ವಧಿಸಿದ ಪಾಪದಿಂದ ನಿಶ್ಚಿತವಾಗಿಯೂ ನರಕದಲ್ಲಿ ಪತನ ಹೊಂದುತ್ತೇನೆ.

ವೀರಂ ಹಿ ಕ್ಷತ್ರಿಯಂ ಹತ್ವಾ ಗೋಸಹಸ್ರೇಣ ಮುಚ್ಯತೇ ।
ಪಿತರಂ ತು ನಿಹತ್ಯೈವಂ ದುಷ್ಕರಾ ನಿಷ್ಕೃತಿರ್ಮಮ ॥೨೦॥

ವೀರಕ್ಷತ್ರಿಯನೊಬ್ಬನನ್ನು ರಣರಂಗದಲ್ಲಿ ಎದುರಾಳಿಯಾಗಿ ಬಂದಾಗ ಕೊಂದರೆ ನೂರು ಗೋವುಗಳನ್ನು ದಾನ ಮಾಡಿದಾಗ ನಾಶವಾಗುವಷ್ಟು ಪಾಪಗಳು ನಾಶವಾಗುತ್ತವೆ. ಆದರೆ ತಂದೆಯನ್ನೇ ಕೊಂದಿರುವ ನನಗೆ ಮಹಾಪಾತಕವು ಉಂಟಾಗಿದೆ. ಈ ಕೃತಘ್ನತೆಗೆ ಬಿಡುಗಡೆಯೇ ಇರುವುದಿಲ್ಲ.

ಏವಂ ಹ್ಯೇಷ ಮಹಾತೇಜಾಃ ಪಾಂಡುಪುತ್ರೋ ಧನಂಜಯಃ ।
ಪಿತಾ ಚ ಮಮ ಧರ್ಮಾತ್ಮಾ ತಸ್ಯ ಮೇ ನಿಷ್ಕೃತಿಃ ಕುತಃ ॥೨೧॥

ಪಾಂಡುವಿನ ಸುತನಾದ ಧನಂಜಯನು ಅದ್ವಿತೀಯನಾದ ವೀರನೂ, ಮಹಾತೇಜಸ್ವಿಯೂ, ಧರ್ಮಾತ್ಮನು. ಇಂತಹ ತಂದೆಯನ್ನು ಕೊಂದ ನನಗೆ ಯಾವ ಪ್ರಾಯಶ್ಚಿತ್ತವೂ, ಪರಿಹಾರವೂ ಇರುವುದಿಲ್ಲ.

ವೈಶಂಪಾಯನಃ

ಇತ್ಯೇವಮುಕ್ತ್ವಾ ನೃಪತೇ ಧನಂಜಯಸುತೋ ನೃಪಃ ।
ಉಪಸ್ಪೃಶ್ಯಾಭವತ್ ತೂಷ್ಣೀಂ ಪ್ರಾಯೋಪೇತೋ ಮಹಾಮತಿಃ ॥೨೨॥

ವೈಶಂಪಾಯನ– ಧನಂಜಯನ ಮಗನಾದ, ಮಹಾಬುದ್ಧಿಶಾಲಿಯಾದ ಬಭ್ರುವಾಹನನು ಹೀಗೆ ಹೇಳಿ, ಆಚಮನ ಮಾಡಿ, ಆಮರಣಾಂತ ಉಪವಾಸ ವ್ರತವನ್ನು ಸ್ವೀಕರಿಸಿ ಮೌನವಾಗಿ ಕುಳಿತುಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅಶ್ವಸಂಚರಣೇ ಬಭ್ರುವಾಹನಪ್ರಾಯೋಪವೇಶೋ ನಾಮ ಏಕಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆರಡನೆಯ ಅಧ್ಯಾಯ

ಬಭ್ರುವಾಹನನು ಪ್ರಾಯೋಪ್ರವೇಶಕ್ಕೆ ಕುಳಿತಿದ್ದನ್ನು ಕಂಡು ಉಲೂಪಿಯು ಸಂಜೀವನ ಮಣಿಯನ್ನು ಸ್ಮರಿಸಿ, ಅದರ ಸಹಾಯದಿಂದ ಅರ್ಜುನನನ್ನು ಬದುಕಿಸಿದುದು. ಮಲಗಿ ಎದ್ದವನಂತೆ ಅರ್ಜುನನು ಮೇಲೆದ್ದು ಬಭ್ರುವಾಹನನನ್ನು ಕುರಿತು ಚಿತ್ರಾಂಗದೆ- ಉಲೂಪಿಯರು ಯುದ್ಧಭೂಮಿಗೆ ಏಕೆ ಬಂದಿದ್ದಾರೆಂದು ಪ್ರಶ್ನಿಸುವುದು.

ವೈಶಂಪಾಯನಃ

ಪ್ರಾಯೋಪವಿಷ್ಟೇ ನೃಪತೌ ಮಣಲೂರೇಶ್ವರೇ ತದಾ ।
ಪಿತೃಶೋಕಸಮಾವಿಷ್ಟೇ ಸಹ ಮಾತ್ರಾ ಪರಂತಪ ॥೧॥

ಉಲೂಪೀ ಚಿಂತಯಾಮಾಸ ತದಾ ಸಂಜೀವನಂ ಮಣಿಮ್ ॥೨॥

ವೈಶಂಪಾಯನ– ಮಣಲೂರಿನ ಒಡೆಯನಾದ ಬಭ್ರುವಾಹನನು ತನ್ನ ತಾಯಿಯ ಜೊತೆಗೆ ತಂದೆಯ ನಿಮಿತ್ತದಿಂದ ಪ್ರಾಯೋಪ್ರವೇಶ ವ್ರತವನ್ನು ಕೈಗೊಂಡಾಗ ನಾಗಕನ್ಯೆಯಾದ ಉಲೂಪಿಯು ಸಂಜೀವನ ಮಣಿಯನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡಳು.

ಸ ಚೋಪಾತಿಷ್ಠತ ತದಾ ಪನ್ನಗಾನಾಂ ಪರಾಯಣಮ್ ॥೩॥

ಸರ್ಪಗಳ ಜೀವನಕ್ಕೆ ಆಧಾರವೆನಿಸಿದ ಸಂಜೀವನ ಮಣಿಯು ಅವಳು ಸ್ಮರಿಸಿದ ಕೂಡಲೇ ಅವಳ ಸಮೀಪಕ್ಕೆ ಬಂದಿತು.

ತಂ ಗೃಹೀತ್ವಾ ತು ಕೌರವ್ಯ ಪನ್ನಗಾಧಿಪತೇಃ ಸುತಾ ।
ಮನಃಪ್ರಹ್ಲಾದನೀಂ ವಾಚಂ ಸೈನಿಕಾನಾಮಥಾಬ್ರವೀತ್ ॥೪॥

ನಾಗಕನ್ಯೆಯಾದ ಉಲೂಪಿಯು ಆ ಮಣಿಯನ್ನೆತ್ತಿಕೊಂಡು, ಸೈನಿಕರ ಮನಸ್ಸಿಗೆ ಸಂತೋಷವನ್ನುಂಟು ಮಾಡುವ ಮಾತುಗಳನ್ನು ಇಂತು ನುಡಿದಳು.

ಉಲೂಪೀ

ಉತ್ತಿಷ್ಠ ಮಾ ಶುಚಃ ಪುತ್ರ ನೈಷ ಜಿಷ್ಣುಸ್ತ್ವಯಾ ಹತಃ ।
ಅಜಯ್ಯಃ ಪುರುಷೈರನ್ಯೈರ್ದೇವೈರಪಿ ಸವಾಸವೈಃ ॥೫॥

ಉಲೂಪೀ– ಬಭ್ರುವಾಹನನೇ ಎದ್ದೇಳು, ದುಃಖಿಸಬೇಡ. ನೀನು ಅರ್ಜುನನನ್ನು ಜಯಿಸಿರುವುದಿಲ್ಲ. ಜಯಶೀಲನಾದ ಅರ್ಜುನನು ಅಜೇಯನಾಗಿದ್ದಾನೆ. ಯಾವ ಪುರುಷರಿಂದಲೂ, ದೇವತೆಗಳಿಂದಲೂ, ಇಂದ್ರನಿಂದಲೂ ಗೆಲ್ಲಲು ಸಾಧ್ಯವಿಲ್ಲದ ಅರ್ಜುನನನ್ನು ನೀನು ಕೊಂದಿರುವುದಿಲ್ಲ.

ಮಯಾ ತು ಮೋಹನೀ ನಾಮ ಮಾಯೈಷಾ ಸಂಪ್ರಯೋಜಿತಾ ।
ಪ್ರಿಯಾರ್ಥಂ ಪುರುಷವ್ಯಾಘ್ರ ಪಿತುಸ್ತೇऽದ್ಯ ಯಶಸ್ವಿನಃ ॥೬॥

ಜಿಜ್ಞಾಸುರ್ಹ್ಯೇಷ ವೈ ಪುತ್ರ ಬಲಸ್ಯ ತವ ಕೌರವಃ ।
ಸಂಗ್ರಾಮೇ ಯುದ್ಧ್ಯಮಾನಸ್ಯ ಸಂಪ್ರಾಪ್ತಃ ಪರವೀರಹಾ ॥೭॥

ನಾನು ಮೋಹಿನಿ ಎಂಬ ಮಾಯಾವಿದ್ಯೆಯನ್ನು ಇಲ್ಲಿ ಪ್ರಯೋಗಿಸಿದ್ದೇನೆ. ಶತ್ರುವೀರರನ್ನು ಸಂಹರಿಸಲು ಸಮರ್ಥನಾದ ಅರ್ಜುನನು ರಣರಂಗದಲ್ಲಿ ಯುದ್ಧ ಮಾಡುವಾಗ ತನ್ನ ಮಗನ ಬಲವೆಷ್ಟು ಎಂದು ಜಿಜ್ಞಾಸೆ ಮಾಡುತ್ತಿದ್ದನು. ಅವನ ಪ್ರೀತಿಯ ಇಂಗಿತವನ್ನು ತಿಳಿದ ನಾನು ನಿನ್ನನ್ನು, ನಿನ್ನ ಕೀರ್ತಿಯನ್ನು ಪ್ರಸಿದ್ಧಿಪಡಿಸಲು ಯುದ್ಧದಲ್ಲಿ ಪ್ರೇರಿಸಿದ್ದೇನೆ. ನಿನ್ನ ಮೇಲಿನ ಪ್ರೀತಿಯಿಂದಲೇ ಇಂತಹ ಪ್ರೇರಣೆಯನ್ನು ನಾನು ಮಾಡಿದ್ದೇನೆ.

ತಸ್ಮಾದಸಿ ಮಯಾ ಪುತ್ರ ಯುದ್ಧಾರ್ಥಂ ಪರಿಚೋದಿತಃ ।
ಸ ಪಾಪಮಾತ್ಮನಃ ಪುತ್ರ ಶಂಕೇಥಾ ಹ್ಯಣ್ವಪಿ ಪ್ರಭೋ ॥೮॥

ನಿನ್ನ ತಂದೆಯ ಇಚ್ಛೆಗೆ ಅನುಸಾರವಾಗಿ ಅವನೊಡನೆ ಯುದ್ಧ ಮಾಡುವಂತೆ ನಾನೇ ಪ್ರೇರಣೆ ಮಾಡಿರುವುದರಿಂದ ನಿನಗೆ ಅಣುಮಾತ್ರದಷ್ಟೂ ಪಾಪ ಬಂದಿರುವುದಿಲ್ಲ. ಪಾಪದ ಬಗ್ಗೆ ಸ್ವಲ್ಪವೂ ಸಂಶಯವನ್ನು ಹೊಂದಬೇಡ.

ಋಷಿರೇಷ ಮಹಾತೇಜಾಃ ಪುರುಷಃ ಶಾಶ್ವತೋऽವ್ಯಯಃ ।
ನೈನಂ ಶಕ್ತೋ ಹಿ ಸಂಗ್ರಾಮೇ ಜೇತುಂ ಶಕ್ರೋऽಪಿ ಪಾರ್ಥಿವ ॥೯॥

ಮಗುವೇ, ಅರ್ಜುನನು ಸಾಮಾನ್ಯ ಕ್ಷತ್ರಿಯನಲ್ಲ. ಮಹಾತ್ಮನಾದ ಇವನನ್ನು ಶಾಶ್ವತನೂ, ಅವ್ಯಯನೂ ಎಂದು ತಿಳಿ. ಬಭ್ರುವಾಹನನೇ, ಈ ಅರ್ಜುನನನ್ನು ಯುದ್ಧರಂಗದಲ್ಲಿ ಗೆಲ್ಲಲು ಇಂದ್ರನೂ ಸಮರ್ಥನಾಗಿರುವುದಿಲ್ಲ.

ಅಯಂ ತು ಮೇ ಮಣಿರ್ದಿವ್ಯಃ ಸಮಾನೀತೋ ವಿಶಾಂಪತೇ ।
ಮೃತಾನ್ ಮೃತಾನ್ ಪನ್ನಗೇಂದ್ರಾನ್ ಸಂಜೀವಯತಿ ಸರ್ವದಾ ॥೧೦॥

ಪ್ರಜಾನಾಥನೇ, ನಾನು ಈ ದಿವ್ಯಮಣಿಯನ್ನು ತಂದಿದ್ದೇನೆ. ಈ ಮಣಿಯು ಸಾಯುತ್ತಿರುವ ಸರ್ಪಗಳನ್ನು ನಿರಂತರ ಬದುಕಿಸುತ್ತಲೇ ಇರುತ್ತದೆ.

ಏನಮಸ್ಯೋರಸಿ ತ್ವಂ ಚ ಸ್ಥಾಪಯಾದ್ಯ ಪಿತುಃ ಪ್ರಭೋ ।
ಸಜೀವಿತಂ ಪುನಃ ಪುತ್ರ ತತೋ ದ್ರಷ್ಟಾಸಿ ಪಾಂಡವಮ್ ॥೧೧॥

ಈ ಮಣಿಯನ್ನು ನೀನು ಹಿಡಿದುಕೊ. ನೀನೇ ನಿನ್ನ ತಂದೆಯ ಎದೆಯ ಮೇಲೆ ಈ ಮಣಿಯನ್ನು ಇಡು. ಕೂಡಲೇ ಪುನಃ ಬದುಕಿ ಮೇಲೇಳುವ ಕುಂತೀಪುತ್ರನನ್ನು ಈ ಕ್ಷಣದಲ್ಲೇ ನೀನು ನೋಡುವೆ.

ವೈಶಂಪಾಯನಃ

ಇತ್ಯುಕ್ತಃ ಸ್ಥಾಪಯಾಮಾಸ ತಸ್ಯೋರಸಿ ಮಣಿಂ ತದಾ ।
(ಪಾರ್ಥಸ್ಯಾಮಿತತೇಜಾಃ ಸ ಪಿತುಃ ಸ್ನೇಹಾದಪಾಪಕೃತ್) ॥೧೨॥

ವೈಶಂಪಾಯನ– ಈ ರೀತಿಯಾಗಿ ಉಲೂಪಿಯು ಹೇಳುತ್ತಿರಲು ಮಹಾತೇಜಸ್ವಿಯಾದ ಬಭ್ರುವಾಹನನು ತನ್ನ ತಂದೆಯ ವಕ್ಷಸ್ಥಲದಲ್ಲಿ ಸಂಜೀವನ ಮಣಿಯನ್ನು ಸ್ನೇಹಪೂರ್ವಕವಾಗಿ ಇಟ್ಟನು. ಯಾವ ಅಪರಾಧವನ್ನೂ ಎಸಗದೆ ಸ್ನೇಹದಿಂದ ಆ ಮಣಿಯನ್ನು ಸ್ಪರ್ಶಿಸಿದನು.

ತಸ್ಮಿನ್ ನ್ಯಸ್ತೇ ಮಣೌ ವೀರ ಜಿಷ್ಣುರುಜ್ಜೀವಿತಃ ಪ್ರಭುಃ ।
ಸುಪ್ತೋತ್ಥಿತ ಇವೋತ್ತಸ್ಥೌ ಸ್ಪಷ್ಟರೋಹಿತಲೋಚನಃ ॥೧೩॥

ಆ ಮಣಿಯು ಇಡಲ್ಪಡುತ್ತಿರಲು ಜಯಶೀಲನಾದ, ಸಮರ್ಥನಾದ ಅರ್ಜುನನು ಮಲಗಿದವನು ಎದ್ದುಕುಳಿತುಕೊಳ್ಳುವಂತೆ ತನ್ನ ಕಣ್ಣುಗಳನ್ನು ಚೆನ್ನಾಗಿ ಅರಳಿಸಿ ಎದ್ದು ಕುಳಿತನು.

ತಮುತ್ಥಿತಂ ಮಹಾತ್ಮಾನಂ ಲಬ್ಧಸಂಜ್ಞಂ ಮನಸ್ವಿನಮ್ ।
ಸಮೀಕ್ಷ್ಯ ಪಿತರಂ ಸ್ವಸ್ಥಂ ವವಂದೇ ಬಭ್ರುವಾಹನಃ ॥೧೪॥

ಎದ್ದುಕುಳಿತಿರುವ, ಚೆನ್ನಾಗಿ ಎಚ್ಚರಗೊಂಡಿರುವ ಮಹಾತ್ಮನಾದ, ಮನನಶೀಲನಾದ ತಂದೆಯನ್ನು ನೋಡಿ ಬಭ್ರುವಾಹನನು ಅಭಿವಾದನ ಪೂರ್ವಕವಾಗಿ ನಮಸ್ಕರಿಸಿದನು.

ಉತ್ತಿಷ್ಠತೇ ಪುರುಷವ್ಯಾಘ್ರೇ ಪುನರಲಕ್ಷ್ಮ್ಯೀಪತಿಃ ಪ್ರಭೋ ।
ದಿವ್ಯಾಃ ಸುಮನಸಃ ಪುಣ್ಯಾ ವವರ್ಷ ಬಲಸೂದನಃ ॥೧೫॥

ಪುರುಷವ್ಯಾಘ್ರನಾದ ಅರ್ಜುನನು ಮೇಲೆದ್ದುಕುಳಿತುಕೊಳ್ಳಲು, ಸ್ವರ್ಗೈಶ್ವರ್ಯಾಧಿಪತಿಯಾದ ಅರ್ಜುನನು ಮೇಲೆದ್ದನೆಂದು ಸಂತುಷ್ಟರಾದ ದೇವತೆಗಳೆಲ್ಲರೂ ಸಂಭ್ರಮದಿಂದ ಅವನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು.

ಅನಾಹತಾ ದುಂದುಭಯೋ ಪ್ರಣೇದುರ್ಮೇಘನಿಃಸ್ವನಾಃ ।
ಸಾಧು ಸಾಧ್ವಿತಿ ಚಾಕಾಶೇ ಬಭೂವ ಸುಮಹಾನ್ ಸ್ವನಃ ॥೧೬॥

ಯಾರೂ ಬಾರಿಸದೆಯೇ ಇದ್ದರೂ ದೇವದುಂದುಭಿಗಳು ತಮ್ಮಷ್ಟಕ್ಕೆ ತಾವೇ ಮೊಳಗಿದವು. ಮೇಘದ ಗರ್ಜನೆಗೆ ಸಮಾನವಾಗಿ ಶಬ್ದ ಮಾಡಿದವು. ಆಕಾಶದಲ್ಲಿ ಸ್ಪಷ್ಟವಾಗಿ ಕೇಳಿಸುವಂತೆ 'ಸಾಧು-ಸಾಧು' ಎಂಬ ಶಬ್ದವು ಕೇಳಿಬರುತ್ತಿತ್ತು.

ಉತ್ಥಾಯ ತು ಮಹಾಬಾಹುಃ ಪರ್ಯಾಶ್ವಸ್ತೋ ಧನಂಜಯಃ ।
ಬಭ್ರುವಾಹನಮಾಲಿಂಗ್ಯ ಸಮಾಜಿಘ್ರತ ಮೂರ್ಧನಿ ॥೧೭॥

ಮಹಾಬಾಹುವಾದ ಧನಂಜಯನು ಮೇಲೆದ್ದ ಬಳಿಕ ರಥದಲ್ಲಿರುವ ಬಭ್ರುವಾಹನನನ್ನು ಆಲಿಂಗಿಸಿಕೊಂಡು ಅವನ ತಲೆಯನ್ನು ಆಘ್ರಾಣಿಸಿದನು.

ದದರ್ಶ ಚಾವಿದೂರೇಽಸ್ಯ ಮಾತರಂ ಶೋಕಕರ್ಶಿತಾಮ್ ।
ಉಲೂಪ್ಯಾ ಸಹ ತಿಷ್ಠಂತೀಂ ತತೋಽಪೃಚ್ಛದ್ ಧನಂಜಯಃ ॥೧೮॥

ಹತ್ತಿರದಲ್ಲಿಯೇ ಶೋಕಕರ್ಶಿತಳಾಗಿರುವ ತಾಯಿಯಾದ ಚಿತ್ರಾಂಗದೆಯನ್ನು ಉಲೂಪಿಯಿಂದ ಸಹಿತಳಾಗಿ ನಿಂತಿರುವುದನ್ನು ನೋಡಿದನು. ಅವರೀರ್ವರನ್ನು ನೋಡಿ ಪ್ರಶ್ನಿಸಿದನು.

ಅರ್ಜುನಃ

ಕಿಮಿದಂ ಲಕ್ಷ್ಯತೇ ಸರ್ವಂ ಶೋಕವಿಸ್ಮಯಹರ್ಷವತ್ ।
ರಣಾಜಿರಮಮಿತ್ರಘ್ನ ಯದಿ ಜಾನಾಸಿ ಶಂಸ ಮೇ ॥೧೯॥

ಅರ್ಜುನ– ಶತ್ರುಹಂತಕನೇ, ಈ ರಣಾಂಗಣವು ಶೋಕ-ವಿಸ್ಮಯ-ಹರ್ಷಗಳಿಂದ ತುಂಬಿರುವಂತೆ ಕಾಣಿಸುತ್ತಿದೆ. ಇದಕ್ಕೆ ಕಾರಣವೇನಾದರೂ ನಿನಗೆ ತಿಳಿದಿದ್ದಲ್ಲಿ ಹೇಳು.

ಜನನೀ ಚ ಕಿಮರ್ಥಂ ತೇ ರಣಭೂಮಿಮುಪಾಗತಾ ।
ನಾಗೇಂದ್ರದುಹಿತಾ ಚೇಯಮುಲೂಪೀ ಕಿಮಿಹಾಗತಾ ॥೨೦॥

ನಿನ್ನ ತಾಯಿಯು ಯುದ್ಧಭೂಮಿಗೆ ಏಕೆ ಆಗಮಿಸಿದಳು? ನಾಗಕನ್ಯೆಯಾದ ಉಲೂಪಿಯಾದರೂ ಇಲ್ಲಿಗೆ ಬಂದ ಕಾರಣವೇನು?

ಜಾನಾಮ್ಯಹಮಿದಂ ಯುದ್ಧಂ ತ್ವಯಾ ಮದ್ವಚನಾತ್ ಕೃತಮ್ ।
ಸ್ತ್ರೀಣಾಮತ್ಯಾಗಮೇ ಹೇತುಮಹಮಿಚ್ಛಾಮಿ ವೇದಿತುಮ್ ॥೨೧॥

ನನ್ನ ಮಾತಿನಿಂದಲೇ ರಣಾಂಗಣದಲ್ಲಿ ನಮ್ಮಿಬ್ಬರಿಗೂ ಪರಸ್ಪರವಾಗಿ ಯುದ್ಧ ನಡೆಯಿತು. ಈ ಸ್ತ್ರೀಯರೇಕೆ ಆಗಮಿಸಿದರೆಂಬುದನ್ನು ಅರ್ಥಮಾಡಿಕೊಳ್ಳಲಾಗುತ್ತಿಲ್ಲ. ಇದರ ಕಾರಣವನ್ನು ತಿಳಿಯಬಯಸುತ್ತೇನೆ.

ವೈಶಂಪಾಯನಃ

ತಮುವಾಚ ತತಃ ಪೃಷ್ಟೋ ಮಣಲೂರಪತಿಸ್ತದಾ ।
ಪ್ರಸಾದ್ಯ ಶಿರಸಾ ವಿದ್ವಾನ್ ಉಲೂಪೀ ಪೃಚ್ಛ್ಯತಾಮಿತಿ ॥೨೨॥

ವೈಶಂಪಾಯನ– ಜನಮೇಜಯನೆ, ಅರ್ಜುನನು ಹೀಗೆ ಪ್ರಶ್ನಿಸಿದಾಗ ಮಣಲೂರ ಪತಿಯಾದ ಬಭ್ರುವಾಹನನು ತಂದೆಯನ್ನು ಪ್ರಸನ್ನಗೊಳಿಸಿ, ರಣಾಂಗಣಕ್ಕೆ ಸ್ತ್ರೀಯರು ಬಂದ ಕಾರಣವೇನೆಂದು ಉಲೂಪಿಯನ್ನು ಕೇಳಿ ತಿಳಿದುಕೊ ಎಂದು ಪ್ರಾರ್ಥಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅಶ್ವಸಮ್ಭರಣೇ ಅರ್ಜುನಸಂಜೀವನಪ್ರಕಾರಕಥನಂ ನಾಮ ದ್ವ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ಮೂರನೆಯ ಅಧ್ಯಾಯ

ಉಲೂಪಿಯು ಅರ್ಜುನನನ್ನು ಕುರಿತು ಚಿತ್ರಾಂಗದೆ-ಉಲೂಪಿ ಇವರು ಯುದ್ಧಭೂಮಿಗೆ ಆಗಮಿಸಲು ಕಾರಣವೇನೆಂಬುದನ್ನು ಹೇಳಿದುದು. ಬಭ್ರುವಾಹನನಿಂದ ಅರ್ಜುನನು ಪರಾಜಯ ಹೊಂದಲು ಕಾರಣವೇನೆಂಬುದನ್ನು ವಿವರಿಸಿದುದು.

ಅರ್ಜುನಃ

ಕಿಮಾಗಮನಕೃತ್ಯಂ ತೇ ಕೌರವ್ಯಕುಲನಂದಿನಿ ।
ಮಣಲೂರಪತೇರ್ಮಾತುಸ್ತಥೈವ ಚ ರಣಾಜಿರೇ ॥೧॥

ಅರ್ಜುನ– ಸರ್ಪರಾಜನಾದ ಕೌರವ್ಯನ ಕುಲಕ್ಕೆ ಆನಂದವನ್ನು ನೀಡುವವಳೇ, ನಾಗಕನ್ಯೆಯೇ, ರಣಭೂಮಿಗೆ ನೀನು ಬರಲು ಕಾರಣವೇನು? ಈ ರಣಭೂಮಿಗೆ ಮಣಲೂರ ಪತಿಯಾದ ಬಭ್ರುವಾಹನನ ತಾಯಿಯಾದ ಚಿತ್ರಾಂಗದೆಯು ಬಂದಳೇಕೆ?

ಕಚ್ಚಿತ್ ಕುಶಲಕಾಮಾऽಸಿ ರಾಜ್ಞೋऽಸ್ಯ ಭುಜಗಾತ್ಮಜೇ ।
ಮಮ ವಾ ಚಂಚಲಾಪಾಂಗೇ ಕಚ್ಚಿತ್ ತ್ವಂ ಸುಖಮಿಚ್ಛಸಿ ॥೨॥

ನಾಗಕುವರಿಯೇ, ಚಂಚಲನೇತ್ರವುಳ್ಳವಳೇ, ಉಲೂಪಿಯೇ, ಈ ಮಣಲೂರಿನ ರಾಜನಿಗೆ ಹಿತವನ್ನುಂಟು ಮಾಡಬೇಕೆಂಬ ಅಭಿಲಾಷೆಯುಳ್ಳವಳು ಆಗಿರುವೆಯಲ್ಲವೇ? ನನ್ನ ಹಿತವನ್ನು ಬಯಸುವೆಯಲ್ಲವೇ?

ಕಚ್ಚಿತ್ ತೇ ಪೃಥುಶ್ರೋಣಿ ನಾಪ್ರಿಯಂ ಶುಭದರ್ಶನೇ ।
ಅಕಾರ್ಷಮಹಮಜ್ಞಾನಾದ್ ಅಯಂ ವಾ ಬಭ್ರುವಾಹನಃ ॥೩॥

ಸ್ಥೂಲವಾದ ನಿತಂಬದಿಂದ ಕೂಡಿರುವವಳೇ, ನಾನಾಗಲೀ, ನನ್ನ ಮಗನಾಗಲೀ, ತಿಳಿಯದೆ ಯಾವುದಾದರೂ ಅಪ್ರಿಯವಾದ ಕಾರ್ಯವನ್ನು ನಿನಗೆ ಮಾಡಿಲ್ಲವಷ್ಟೆ?

ಕಚ್ಚಿಚ್ಚ ರಾಜಪುತ್ರೀ ತೇ ಸಪತ್ನೀ ಚೈತ್ರವಾಹನೀ ।
ಚಿತ್ರಾಂಗದಾ ವರಾರೋಹಾ ನಾಪರಾಧ್ಯತಿ ಕಿಂಚನ ॥೪॥

ರಾಜಪುತ್ರಿಯಾದ, ನಿನಗೆ ಸವತಿಯಾದ, ಚಿತ್ರವಾಹನನ ಪುತ್ರಿಯಾದ, ಸುಂದರ ಕಟಿಪ್ರದೇಶವಿರುವ ಚಿತ್ರಾಂಗದೆಯು ನಿನಗೆ ಯಾವುದೇ ಅತ್ಯಲ್ಪ ಅಪರಾಧವನ್ನು ಮಾಡಿಲ್ಲವಷ್ಟೆ?

ವೈಶಂಪಾಯನಃ

ತಮುವಾಚೋರಗಪತೇರ್ದುಹಿತಾ ಪ್ರಹಸಂತ್ಯಥ ॥೫॥

ವೈಶಂಪಾಯನ– ಅರ್ಜುನನ ಈ ಮಾತುಗಳಿಗೆ ನಗುತ್ತಲೇ ಉಲೂಪಿಯು ಉತ್ತರಿಸಿದಳು.

ಉಲೂಪೀ

ನ ಮೇ ತ್ವಮಪರಾದ್ಧೋಽಸಿ ನ ನೃಪೋ ಬಭ್ರುವಾಹನಃ ।
ನ ಜನಿತ್ರೀ ತಥಾಽಸ್ಯೇಯಂ ಮಮ ಯಾ ಪ್ರೇಷ್ಯವತ್ ಸ್ಥಿತಾ ॥೬॥

ಉಲೂಪೀ– ಪ್ರಾಣಕಾಂತನೇ, ನೀನಾಗಲೀ, ಬಭ್ರುವಾಹನನಾಗಲೀ ನನಗೆ ಅಪರಾಧವನ್ನು ಮಾಡಿಲ್ಲ. ಬಭ್ರುವಾಹನನ ತಾಯಿಯಾದ ಚಿತ್ರಾಂಗದೆಯೂ ಯಾವ ಅಪರಾಧವನ್ನು ಮಾಡಿಲ್ಲ. ಇಷ್ಟಾಗಿ ಯಾವಾಗಲೂ ಈಕೆಯು ನನ್ನ ಸೇವಕಿಯಂತೆಯೇ ಇರುತ್ತಾಳೆ.

ಶ್ರೂಯತಾಂ ಯದ್ ಯಥಾ ಚೇದಂ ಮಯಾ ಸರ್ವಂ ವಿಚೇಷ್ಟಿತಮ್।
ನ ಮೇ ಕೋಪಸ್ತ್ವಯಾ ಕಾರ್ಯಃ ಶಿರಸಾ ತ್ವಾಂ ಪ್ರಸಾದಯೇ ॥೭॥

ನಾನು ಇಲ್ಲಿ ಬಂದು ಯಾವ ರೀತಿಯಾದ ಕಾರ್ಯಗಳನ್ನು ಮಾಡಿದೆ ಅವೆಲ್ಲವನ್ನೂ ಹೇಳಿದೆ. ಆದರೆ ಯಾವುದೇ ಕಾರಣದಿಂದಲೂ ನನ್ನ ವಿಷಯದಲ್ಲಿ ನೀನು ಕೋಪಿಸಿಕೊಳ್ಳಬಾರದು. ನಿನ್ನ ಅನುಗ್ರಹವನ್ನು ನಮಿಸಿ ಬೇಡಿಕೊಳ್ಳುತ್ತೇನೆ.

ತತ್ತ್ವೀತ್ಯರ್ಥಂ ಹಿ ಕೌರವ್ಯ ಕೃತಮೇತನ್ಮಯಾಽನಘ ।
ಯತ್ ತಚ್ಛೃಣು ಮಹಾಬಾಹೋ ನಿಖಿಲೇನ ಧನಂಜಯ ॥೮॥

ಅರ್ಜುನನೇ, ನಾನು ಇಲ್ಲಿಯತನಕ ಈ ರಣರಂಗದಲ್ಲಿ ಏನೆಲ್ಲ ಕರ್ಮಗಳನ್ನು ಮಾಡಿದ್ದೆನೋ ಅವೆಲ್ಲವೂ ನಿನಗೆ ಪ್ರಿಯವಾದ ಕರ್ಮಗಳೆಂದೇ ಮಾಡಿರುತ್ತೇನೆ. ವಿಸ್ತಾರವಾಗಿ ಅದನ್ನು ವಿವರಿಸುತ್ತೇನೆ, ಧನಂಜಯನೇ ಕೇಳಿಸಿಕೊ.

ಮಹಾಭಾರತಯುದ್ಧೇ ಯತ್ ತ್ವಯಾ ಶಾಂತನವೋ ನೃಪಃ ।
ಅಧರ್ಮೇಣ ಹತಃ ಪಾರ್ಥ ತಸ್ಯೈಷಾ ನಿಷ್ಕೃತಿಃ ಕೃತಾ ॥೯॥

ಮಹಾಭಾರತ ಯುದ್ಧದಲ್ಲಿ ಭೀಷ್ಮಾಚಾರ್ಯರನ್ನು ನೀನು ಅಧರ್ಮದಿಂದ ಸಂಹರಿಸಿರುವೆ. ಆ ಪಾಪಕ್ಕೆ ಪ್ರಾಯಶ್ಚಿತ್ತರೂಪವಾಗಿ ನಾನು ಈ ಕಾರ್ಯವನ್ನು ಮಾಡಿರುತ್ತೇನೆ.

ನ ಹಿ ಭೀಷ್ಮಸ್ತ್ವಯಾ ವೀರ ಯುಧ್ಯಮಾನೋ ನಿಪಾತಿತಃ ।
ಶಿಖಂಡಿನಾ ತು ಸಂಸಕ್ತಸ್ತಮಾಶ್ರಿತ್ಯ ಹತಸ್ತ್ವಯಾ ॥೧೦॥

ವೀರನೇ, ಭೀಷ್ಮರು ನಿನ್ನೊಡನೆ ನೇರವಾಗಿ ಯುದ್ಧಮಾಡುವಾಗ ಅವರನ್ನು ನೀನು ಸಂಹರಿಸಲಿಲ್ಲ. ಶಿಖಂಡಿಯನ್ನು ಮುಂದಿಟ್ಟುಕೊಂಡು ಭೀಷ್ಮರನ್ನು ಹೊಡೆದಿರುವಿ.

ತಸ್ಯ ಶಾಂತಿಮಕೃತ್ವಾ ತು ತ್ಯಜೇಸ್ತ್ವಂ ಯದಿ ಜೀವಿತಮ್ ।
ಕರ್ಮಣಾ ತೇನ ಪಾಪೇನ ಪತೇಥಾ ನಿರಯೇ ಧ್ರುವಮ್ ॥೧೧॥

ಆ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದೆ ನೀನು ಮರಣ ಹೊಂದಿದಲ್ಲಿ, ಆ ಪಾಪದ ಫಲವಾಗಿ ನಿಶ್ಚಿತವಾಗಿಯೂ ನರಕದಲ್ಲಿ ಬೀಳುವೆ.

ಏಷಾऽತ್ರ ವಿಹಿತಾ ಶಾಂತಿಃ ಪುತ್ರಾತ್ ತ್ವಂ ಪ್ರಾಪ್ತವಾನಸಿ ॥೧೨॥

ಆದ್ದರಿಂದ ಆ ಪಾಪಕರ್ಮಕ್ಕೆ ಶಾಂತಿಯನ್ನು ಮಾಡುವ ದೃಷ್ಟಿಯಿಂದ ನಿನ್ನ ಮಗನಿಂದಲೇ ಇಂತಹ ಶಿಕ್ಷೆಯನ್ನು ಅನುಭವಿಸಿದವನಾಗಿರುತ್ತಿ.

ವಸುಭಿರ್ವಸುಧಾಪಾಲ ಗಂಗಯಾ ಚ ಮಹಾಮತೇ ।
ಪುರಾ ಹಿ ಶ್ರುತಮೇತದ್ ವೈ ವಸುಭಿಃ ಕಥಿತಂ ಮಮ ॥೧೩॥

ಮಹಾಮತಿಯೇ, ಹಿಂದೆ ನೀನು ಮಾಡಿದ ಅಪರಾಧಕ್ಕೆ ವಸುದೇವತೆಗಳು, ಭೀಷ್ಮನ ತಾಯಿಯಾದ ಗಂಗಾದೇವಿಯು ನಿನಗೆ ಮಗನಿಂದಲೇ ಪರಾಜಯ ಹೊಂದುವ ಪ್ರಾಯಶ್ಚಿತ್ತವನ್ನು ವಿಧಿಸಿದ್ದರು. ನಾನೊಮ್ಮೆ ಗಂಗಾನದಿಯ ತೀರದಲ್ಲಿದ್ದಾಗ ವಸುಗಳು ಹೇಳಿದ ಆ ಮಾತನ್ನು ಕೇಳಿಸಿಕೊಂಡಿದ್ದೆನು.

ಗಂಗಾಯಾಸ್ತೀರಮಾಗಮ್ಯ ಹತೇ ಶಾಂತನವೇ ನೃಪ ।
ಆಪ್ಲುತ್ಯ ದೇವಾ ವಸವಃ ಸಮಾಪ್ಲುತ್ಯ ಮಹಾನದೀಮ್ ॥೧೪॥

ಇದಮೂಚುರ್ವಚೋ ಘೋರಂ ಭಾಗೀರಥ್ಯಾ ಮತೇ ತದಾ ॥೧೫॥

ಗಂಗಾ ತೀರದಲ್ಲಿ ಇದ್ದಾಗ ವಸುಗಳೆಲ್ಲರೂ ಒಟ್ಟಾಗಿ ಸೇರಿ, ಮಹಾನದಿಯಾದ ಗಂಗೆಯಲ್ಲಿ ಸ್ನಾನ ಮಾಡಿ, ಭಾಗೀರಥಿಯ ಸಮ್ಮತಿಯನ್ನು ಪಡೆದುಕೊಂಡು ಈ ಘೋರವಾದ ಮಾತನ್ನು ಹೇಳಿದರು.

ಏಷ ಶಾಂತನವೋ ಭೀಷ್ಮೋ ನಿಹತಃ ಸವ್ಯಸಾಚಿನಾ ।
ಅಯುದ್ಧ್ಯಮಾನಃ ಸಂಗ್ರಾಮೇ ಸಂಸಕ್ತೋಽನ್ಯೇನ ಭಾಮಿನಿ ॥೧೬॥

ಭಾಮಿನಿಯೇ, ಶಂತನು ಮತ್ತು ನಿನ್ನ ಮಗನಾದ ಭೀಷ್ಮನು ಬೇರೆಯವರೊಡನೆ ಯುದ್ಧವನ್ನು ಮಾಡುತ್ತಿದ್ದನು. ಅರ್ಜುನನೊಡನೆ ಯುದ್ಧ ಮಾಡುತ್ತಿರಲಿಲ್ಲ. ಆ ಸಮಯದಲ್ಲಿ ಅರ್ಜುನನು ಭೀಷ್ಮರನ್ನು ಸಂಗ್ರಾಮದಲ್ಲಿ ಸಂಹರಿಸಿದನು.

ತದನೇನಾಭಿಷಂಗೇಣ ವಯಮಪ್ಯರ್ಜುನಂ ಶುಭೇ ।
ಶಾಪೇನ ಯೋಜಯಾಮೇತಿ ತಥಾಽಸ್ತ್ವಿತಿ ಚ ಸಾಽಬ್ರವೀತ್ ॥೧೭॥

ಇಂತಹ ಪಾಪದ ಅಪರಾಧಕ್ಕಾಗಿ ನಾವೆಲ್ಲರೂ ಅವನಿಗೆ ಶಾಪ ಕೊಡುತ್ತೇವೆ. ಪತಿದೇವನೇ, ವಸುಗಳ ಈ ಮಾತನ್ನು ಕೇಳಿ ಗಂಗಾದೇವಿಯು 'ತಥಾಽಸ್ತು' 'ಹಾಗೆಯೇ ಆಗಲಿ' ಎಂದು ಆ ಶಾಪವನ್ನು ಅನುಮೋದಿಸಿದಳು.

ತದಹಂ ಪಿತುರಾವೇದ್ಯ ಭೃಶಂ ಪ್ರವ್ಯಥಿತೇಂದ್ರಿಯಾ ।
ಅಭವಂ ಸ ಚ ತಚ್ಛ್ರುತ್ವಾ ವಿಷಾದಮಗಮತ್ ಪರಮ್ ॥೧೮॥

ಪಿತಾ ತು ಮೇ ವಸೂನ್ ಗತ್ವಾ ತ್ವದರ್ಥಂ ಸಮಯಾಚತ ।
ಪುನಃ ಪುನಃ ಪ್ರಸಾದ್ಯೈನಾನ್ ತ ಏನಮಿದಮಬ್ರುವನ್ ॥೧೯॥

ಗಂಗೆಯ ಆ ಮಾತನ್ನು ಕೇಳಿಸಿಕೊಂಡ ನಾನು ಬಹಳ ದುಃಖಿತಳಾದೆನು. ಆ ವಾರ್ತೆಯನ್ನು ಕೇಳಿದ ನನ್ನ ತಂದೆಯೂ ದುಃಖಿತನಾಗಿ ವಸುಗಳ ಬಳಿ ನಿನ್ನ ಸಲುವಾಗಿ ಅವರನ್ನು ಬಹಳವಾಗಿ ಪ್ರಾರ್ಥಿಸಿಕೊಂಡನು. ಪುನಃ ಪುನಃ ಪ್ರಾರ್ಥಿಸಿಕೊಂಡಾಗ ಕೃಪಾಪೂರ್ಣರಾದ ವಸುಗಳು ನನ್ನ ತಂದೆಗೆ ಇಂತು ನುಡಿದರು.

ಪುತ್ರೋಽಸ್ಯ ತು ಮಹಾರಾಜೋ ಮಣಲೂರೇಶ್ವರೋ ಯುವಾ ।
ಸ ಏನಂ ರಣಮಧ್ಯಸ್ಥಂ ಶರೈಃ ಪಾತಯಿತಾ ಭುವಿ ॥೨೦॥

ಏವಂ ಕೃತೇ ಸ ನಾಗೇಂದ್ರ ಮುಕ್ತಶಾಪೋ ಭವಿಷ್ಯತಿ ।
ಗಚ್ಛೇತಿ ವಸುಭಿಶ್ಚೋಕ್ತೋ ಮಮ ಚೇದಂ ಶಶಂಸ ಸಃ ॥೨೧॥

ಮಹಾಭಾಗನೇ, ನಾಗೇಂದ್ರನೇ, ಮಣಲೂರಪುರಕ್ಕೆ ರಾಜನಾಗಿರುವ, ಯುವಕನಾದ ಬಭ್ರುವಾಹನನು ರಣಭೂಮಿಯಲ್ಲಿ ಬಾಣಗಳಿಂದ ಅರ್ಜುನನನ್ನು ಭೂಮಿಯಲ್ಲಿ ಕೆಡವಿದಾಗ ನಮ್ಮ ಶಾಪದಿಂದ ವಿಮುಕ್ತನಾಗುತ್ತಾನೆ. ನೀನು ಹೋಗಿ ಬಾ ಎಂದು ವಸುಗಳು ನನ್ನ ತಂದೆಗೆ ಹೇಳಿದರು. ತಂದೆಯು ನನಗೆ ಹೇಳಿದನು.

ತಚ್ಛ್ರುತ್ವಾ ತ್ವಂ ಮಯಾ ತಸ್ಮಾತ್ ಶಾಪಾದಸಿ ವಿಮೋಕ್ಷಿತಃ ।
ನ ಹಿ ತ್ವಾಂ ದೇವರಾಜೋಽಪಿ ಸಮರೇಷು ಪರಾಜಯೇತ್ ॥೨೨॥

ಆ ವಸುಗಳ ಮಾತಿನಂತೆ ಬಭ್ರುವಾಹನನಿಗೆ ನಿನ್ನ ಬಳಿ ಯುದ್ಧ ಮಾಡಲು ನಾನು ಪ್ರಚೋದಿಸಿದೆ. ಆದ್ದರಿಂದ ಇಂದು ನೀನು ವಸುಗಳ ಶಾಪದಿಂದ ವಿಮುಕ್ತನಾಗಿರುವಿ. ನಿನ್ನನ್ನು ದೇವರಾಜನೂ ಯುದ್ಧದಲ್ಲಿ ಪರಾಜಯಗೊಳಿಸಲಾರನು.

ಆತ್ಮಾ ಪುತ್ರಃ ಸ್ಮೃತಸ್ತಸ್ಮಾತ್ ತೇನೇಹಾಸಿ ಪರಾಜಿತಃ ।
ನಾತ್ರ ದೋಷೋ ಮಮ ಮತಃ ಕಥಂ ವಾ ಮನ್ಯಸೇ ವಿಭೋ ॥೨೩॥

ಮಗನಾದರೂ ನಿನ್ನ ಆತ್ಮನೇ ಆಗಿರುವುದರಿಂದ (ಆತ್ಮಾ ವೈ ಪುತ್ರನಾಮ ಎಂದು ವೇದಗಳು ಸಾರುವುದರಿಂದ) ಅವನಿಂದ ನೀನು ಪರಾಜಿತನಾಗಿರುವಿ. ಇದರಲ್ಲಿ ನನ್ನ ಯಾವ ದೋಷಗಳು ಇಲ್ಲ ಎಂದು ತಿಳಿದಿದ್ದೇನೆ. ಅರ್ಜುನನೇ, ನನ್ನ ಮಾತನ್ನು ಕೇಳಿ ಏನೆಂದು ಭಾವಿಸುವಿ?

ವೈಶಂಪಾಯನಃ

ಇತ್ಯೇವಮುಕ್ತೋ ವಿಜಯಃ ಪ್ರಸನ್ನಾತ್ಮಾಽಬ್ರವೀದಿದಮ್ ॥೨೪॥

ವೈಶಂಪಾಯನ– ಈ ರೀತಿಯಾಗಿ ಉಲೂಪಿಯು ಹೇಳುತ್ತಿರಲು ವಿಜಯನು ಪ್ರಸನ್ನಚಿತ್ತನಾಗಿ ಇಂತು ನುಡಿದನು.

ಅರ್ಜುನಃ

ಸರ್ವಂ ಮೇ ಸುಪ್ರಿಯಂ ದೇವಿ ಯದೇತತ್ ಕೃತವತ್ಯಸಿ ॥೨೫॥

ಅರ್ಜುನ– ಉಲೂಪಿಯೆ, ನನ್ನ ಪಾಪ ಪರಿಹಾರಕ್ಕಾಗಿ ನೀನು ಯಾವ ಕರ್ಮವನ್ನು ಮಾಡಿರುವೆಯೋ ಅವೆಲ್ಲವೂ ನನಗೆ ಪರಮಪ್ರಿಯವೇ ಆಗಿವೆ.

ವೈಶಂಪಾಯನಃ

ಇತ್ಯುಕ್ತ್ವಾ ಸೋಽಬ್ರವೀತ್ ಪುತ್ರಂ ಮಣಲೂರೇಶ್ವರಂ ಜಯಃ ।
ಚಿತ್ರಾಂಗದಾಯಾಃ ಶೃಣ್ವನ್ಯಾಃ ಕೌರವ್ಯದುಹಿತುಸ್ತಥಾ ॥೨೬॥

ವೈಶಂಪಾಯನ– ಅರ್ಜುನನು ಉಲೂಪಿಗೆ ಹೀಗೆ ಹೇಳಿ, ಚಿತ್ರಾಂಗದೆಗೂ ಉಲೂಪಿಗೂ ಕೇಳಿಸುವಂತೆ ಮಣಲೂರ ಅಧಿಪತಿಯಾದ ಬಭ್ರುವಾಹನನನ್ನು ಕುರಿತು ಇಂತು ನುಡಿದನು.

ಅರ್ಜುನಃ

ಯುಧಿಷ್ಠಿರಸ್ಯಾಶ್ವಮೇಧಃ ಪರಶ್ಚೈತ್ರ್ಯಾಂ ಭವಿಷ್ಯತಿ ।
ತತ್ರಾಗಚ್ಛೇಃ ಸಹಾಮಾತ್ಯೋ ಮಾತೃಭ್ಯಾಂ ಸಹಿತೋ ನೃಪ ॥೨೭॥

ಅರ್ಜುನ– ನರೇಶ್ವರನೇ, ಚೈತ್ರಮಾಸದ ಶುಕ್ಲಪಕ್ಷದ ಹುಣ್ಣಿಮೆಯ ದಿನದಂದು ಯುಧಿಷ್ಠಿರನ ಅಶ್ವಮೇಧ ಯಾಗವು ಆರಂಭವಾಗುತ್ತದೆ. ಅಲ್ಲಿಗೆ ನೀನು ನಿನ್ನ ತಾಯಂದಿರನ್ನೂ, ಅಮಾತ್ಯರನ್ನೂ ಕರೆದುಕೊಂಡು ಆಗಮಿಸು.

ವೈಶಂಪಾಯನಃ

ಇತ್ಯೇವಮುಕ್ತಃ ಪಾರ್ಥೇನ ಸ ರಾಜಾ ಬಭ್ರುವಾಹನಃ ।
ಉವಾಚ ಪಿತರಂ ಧೀಮಾನ್ ಇದಮಸ್ರಾವಿಲೇಕ್ಷಣಃ ॥೨೮॥

ವೈಶಂಪಾಯನ– ಜನಮೇಜಯನೇ, ಅರ್ಜುನನು ಹೀಗೆ ಹೇಳುತ್ತಿರಲು ಧೀಮಂತನಾದ ಬಭ್ರುವಾಹನ ರಾಜನು ಸಂತೋಷದಿಂದ ತುಂಬಿದ ಕಣ್ಣೀರಿನಿಂದ ಕೂಡಿದವನಾಗಿ ತಂದೆಯನ್ನು ಕುರಿತು ಹೀಗೆ ಹೇಳಿದನು.

ಬಭ್ರುವಾಹನಃ

ಉಪಯಾಸ್ಯಾಮಿ ಧರ್ಮಜ್ಞ ಭವತಃ ಶಾಸನಾದಹಮ್ ।
ಅಶ್ವಮೇಧಮಹಾಯಜ್ಞೇ ದ್ವಿಜಾತಿಪರಿವೇಷಕಃ ॥೨೯॥

ಬಭ್ರುವಾಹನ– ಧರ್ಮಜ್ಞನಾದ ತಂದೆಯೇ, ನಿನ್ನ ಆಜ್ಞಾನುಸಾರವಾಗಿ ಅಶ್ವಮೇಧ ಮಹಾಯಾಗಕ್ಕೆ ತಾಯಂದಿರನ್ನೂ, ಅಮಾತ್ಯರನ್ನೂ, ಬ್ರಾಹ್ಮಣರನ್ನೂ ಕರೆದುಕೊಂಡು ಬರುತ್ತೇನೆ. ಆ ಮಹಾಯಜ್ಞದಲ್ಲಿ ಬ್ರಾಹ್ಮಣರಿಗೆ ಊಟ ಬಡಿಸುವ ಸೇವೆಯನ್ನು ಮಾಡುತ್ತೇನೆ.

ಮಮ ತ್ವನುಗ್ರಹಾರ್ಥಂ ಹಿ ಪ್ರವಿಶಸ್ವ ಪುರಂ ಸ್ವಕಮ್ ।
ಭಾರ್ಯಾಭ್ಯಾಂ ಸಹ ಶತ್ರುಘ್ನ ಮಾ ಭೂತ್ ತೇಽತ್ರ ವಿಚಾರಣಾ ॥

ನನ್ನ ಮೇಲಿನ ಅನುಗ್ರಹದಿಂದ ನೀನು ದಯವಿಟ್ಟು ನಿನ್ನ ಪತ್ನಿಯರೊಡನೆ ನಿನ್ನದ್ದೇ ಆಗಿರುವ ಮಣಲೂರನ್ನು ಪ್ರವೇಶಿಸು. ಈ ವಿಷಯದಲ್ಲಿ ವಿಚಾರ ಮಾಡಬೇಡ.

ಉಷಿತ್ವಾ ಚ ವಿಶಲ್ಯಸ್ತ್ವಂ ಸುಖಂ ವೇಶ್ಮನಿ ಚ ಪ್ರಭೋ ।
ಪುನರಶ್ವಾನುಗಮನಂ ಕರ್ತಾಸಿ ಜಯತಾಂ ವರ ॥೩೧॥

ನಿನ್ನದ್ದೇ ಆಗಿರುವ ಅರಮನೆಯಲ್ಲಿ ಒಂದು ರಾತ್ರಿ ಸುಖವಾಗಿ ತಂಗಿದ್ದು, ನಾಳೆಯೇ ನೀನು ಕುದುರೆಯ ಜೊತೆಯಲ್ಲಿ ಪ್ರಯಾಣ ಮಾಡಬಹುದಾಗಿದೆ.

ವೈಶಂಪಾಯನಃ

ಇತ್ಯುಕ್ತಃ ಸ ತು ಪುತ್ರೇಣ ತದಾ ವಾನರಕೇತನಃ ।
ಹಸನ್ ಪ್ರೋವಾಚ ಕೌಂತೇಯಸ್ತದಾ ಚಿತ್ರಾಂಗದಾಸುತಮ್ ॥೩೨॥

ವೈಶಂಪಾಯನ– ಜನಮೇಜಯನೇ, ಕಪಿಧ್ವಜನಾದ ಅರ್ಜುನನಿಗೆ ಬಭ್ರುವಾಹನನು ಹೀಗೆ ಹೇಳುತ್ತಿರಲು, ಕೌಂತೇಯನು ಮಂದಹಾಸ ಬೀರುತ್ತಾ ಚಿತ್ರಾಂಗದೆಯ ಮಗನಿಗೆ ಇಂತು ನುಡಿದನು.

ಅರ್ಜುನಃ

ವಿದಿತಂ ತೇ ಮಹಾಬಾಹೋ ಯಥಾ ದೀಕ್ಷಾಂ ಚರಾಮ್ಯಹಮ್ ।
ನ ಹಿ ತಾವತ್ ಪ್ರವೇಕ್ಷ್ಯಾಮಿ ಪುರಂ ತೇ ಪೃಥುಲೋಚನ ॥೩೩॥

ಅರ್ಜುನ– ಮಹಾಬಾಹುವೇ, ನಾನು ಯಜ್ಞದೀಕ್ಷಿತನಾಗಿದ್ದೇನೆ. ಶಾಸ್ತ್ರೋಕ್ತ ನಿಯಮಗಳನ್ನು ಪಾಲಿಸುತ್ತಾ, ಯಜ್ಞಾಶ್ವದೊಡನೆ ಪ್ರತಿ ಊರುಗಳಿಗೆ ಸಾಗುತ್ತಿದ್ದೇನೆ

ಎಂಬ ವಿಷಯವು ನಿನಗೆ ತಿಳಿದಿದೆ. ವಿಶಾಲಾಕ್ಷನೇ, ನನ್ನ ದೀಕ್ಷೆಯು ಪೂರ್ಣವಾಗುವ ತನಕ ನಿನ್ನ ಪಟ್ಟಣವನ್ನು ನಾನು ಪ್ರವೇಶಿಸುವುದಿಲ್ಲ.

ಯಥಾಕಾಮಂ ಪ್ರಯಾತ್ವೇಷ ಯಾಜ್ಞಿಯಶ್ಚ ತುರಂಗಮಃ ।
ಸ್ವಸ್ತಿ ತೇಸ್ತು ಗಮಿಷ್ಯಾಮಿ ನ ಸ್ಥಾನಂ ವಿದ್ಯತೇ ಮಮ ॥೩೪॥

ಈ ಯಜ್ಞದ ಕುದುರೆಯು ಸ್ವೇಚ್ಛೆಯಿಂದ ಸಾಗುತ್ತಿರುತ್ತದೆ. ಅದರ ಹಿಂದೆ ನಾನು ಹೋಗುತ್ತಿರಬೇಕೇ ವಿನಾ ಯಾವುದೇ ಕಾರಣದಿಂದಲೂ ಅದರ ಗಮನವನ್ನು ನಿರ್ಬಂಧಿಸುವಂತಿಲ್ಲ. ಆದ್ದರಿಂದ ನನಗೆ ನಿರ್ದಿಷ್ಟವಾದ ಸ್ಥಾನವಿಲ್ಲ. ನಿನಗೆ ಮಂಗಳವಾಗಲಿ. ಹೋಗಿ ಬರುತ್ತೇನೆ.

ವೈಶಂಪಾಯನಃ

ಸ ತತ್ರ ವಿಧಿವತ್ ತೇನ ಪೂಜಿತಃ ಪಾಕಶಾಸನಿಃ ।
ಭಾರ್ಯಾಭ್ಯಾಮಭ್ಯನುಜ್ಞಾತಃ ಪ್ರಾಯಾದ್ ಭರತಸತ್ತಮಃ ॥೩೫॥

ವೈಶಂಪಾಯನ– ಜನಮೇಜಯನೇ, ಅರ್ಜುನನು ಹೀಗೆ ಹೇಳುತ್ತಿರಲು ಬಭ್ರುವಾಹನನು ತನ್ನ ತಂದೆಯನ್ನು ವಿಧಿವತ್ತಾಗಿ ಪೂಜಿಸಿದನು. ಬಳಿಕ ಅರ್ಜುನನ ಭಾರ್ಯೆಯರಾದ ಉಲೂಪಿ-ಚಿತ್ರಾಂಗದೆಯರ ಅನುಮತಿಯನ್ನು ಪಡೆದು ಅರ್ಜುನನು ಯಜ್ಞಾಶ್ವವನ್ನು ಅನುಸರಿಸಿ ಪ್ರಯಾಣ ಬೆಳೆಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಶ್ವಸಂಭರಣೇ ಅರ್ಜುನಸತ್ಕಾರೋ ನಾಮ
ತ್ರ್ಯಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ನಾಲ್ಕನೆಯ ಅಧ್ಯಾಯ

ಅರ್ಜುನನು ಯಜ್ಞಾಶ್ವವನ್ನು ಅನುಸರಿಸಿಕೊಂಡು ಮಗಧದೇಶಕ್ಕೆ ಬಂದಿದುದು. ಜರಾಸಂಧನ ಮೊಮ್ಮಗನಾದ ಮೇಘಸಂಧಿಯನ್ನು ಪರಾಜಯಗೊಳಿಸಿ ಮ್ಲೇಚ್ಛರನ್ನೂ ಸೋಲಿಸಿದುದು.

ವೈಶಂಪಾಯನಃ

ಸ ತು ವಾಜೀ ಸಮುದ್ರಾಂತಾಮ್ ಅಭ್ಯೇತ್ಯ ಪೃಥಿವೀಮಿಮಾಮ್ ।
ನಿವೃತ್ತೋಽಭಿಮುಖೋ ರಾಜನ್ ಯೇನ ನಾಗಾಹ್ವಯಂ ಪುರಮ್ ॥೧॥

ವೈಶಂಪಾಯನ– ಬಳಿಕ ಆ ಯಜ್ಞಾಶ್ವವು ಸಮುದ್ರಪುರಿಯಿಂದ ವ್ಯಾಪಿಸಿರುವ ಭೂಮಂಡಲದ ಎಲ್ಲ ಕಡೆಯೂ ಸಂಚರಿಸಿ ನಂತರ ಹಸ್ತಿನಾಪುರಕ್ಕೆ ಅಭಿಮುಖವಾಗಿ ಹೊರಟಿತು.

ಅನುಗಚ್ಛನ್ ಸ ತೇಜಸ್ವೀ ನಿವೃತ್ತೋಽಥ ಕಿರೀಟಧೃಕ್ ।
ಯದೃಚ್ಛಯಾ ಸಮಾಪೇದೇ ಪುರಂ ರಾಜಗೃಹಂ ತದಾ ॥೨॥

ಕಿರೀಟವನ್ನು ಧರಿಸಿದ ಅರ್ಜುನನು ಯಜ್ಞಾಶ್ವವನ್ನು ಅನುಸರಿಸಿಕೊಂಡು ಹರಿಸಂಕಲ್ಪದಂತೆ ಬರುತ್ತಿರುವಾಗ ಕುದುರೆಯು ರಾಜಗೃಹ ಎಂಬ ಪಟ್ಟಣವನ್ನು ಪ್ರವೇಶಿಸಿತು.

ತಮಭ್ಯಾಶಗತಂ ರಾಜಾ ಜರಾಸಂಧಾತ್ಮಜಾತ್ಮಜಃ ।
ಕ್ಷತ್ರಧರ್ಮೇ ಸ್ಥಿತೋ ವೀರಃ ಸಮರಾಯಾಜುಹಾವ ಹ ॥೩॥

ಕ್ಷತ್ರಧರ್ಮಪರಿಪಾಲಕನಾದ, ಸಹದೇವನ ಮಗನಾದ, ವೀರನಾದ ಮೇಘಸಂಧಿಯು ಯಜ್ಞಾಶ್ವವು ತನ್ನ ಪುರಕ್ಕೆ ಆಗಮಿಸಿದ್ದನ್ನು ಕಂಡು ಅರ್ಜುನನನ್ನು ಯುದ್ಧಕ್ಕೆ ಕರೆದನು.

ತತಃ ಪುರಾತ್ ಸ ನಿಷ್ಕ್ರಮ್ಯ ರಥೀ ಧನ್ವೀ ತಲೀ ಶರೀ ।
ಮೇಘಸಂಧಿಃ ಪದಾತಿಂ ತಂ ಧನಂಜಯಮುಪಾದ್ರವತ್ ॥೪॥

ಮೇಘಸಂಧಿಯು ಧನುರ್ಬಾಣಗಳನ್ನು, ಬತ್ತಳಿಕೆಯನ್ನು ತೆಗೆದುಕೊಂಡು,

ರಥವನ್ನೇರಿ ಪಟ್ಟಣದಿಂದ ಹೊರಬಂದು, ಪದಾತಿಯಾಗಿದ್ದ ಅರ್ಜುನನನ್ನು ಆಕ್ರಮಿಸಿದನು.

ಆಸಾದ್ಯ ತು ಮಹಾತೇಜಾ ಮೇಘಸಂಧಿರ್ಧನಂಜಯಮ್ ।
ಬಾಲಭಾವಾನ್ಮಹಾರಾಜ ಪ್ರೋವಾಚೇದಂ ನ ಕೌಶಲಾತ್ ॥೫॥

ಮಹಾತೇಜಸ್ವಿಯಾದ ಮೇಘಸಂಧಿಯು ಚಾಪಲ್ಯದಿಂದ ಅರ್ಜುನನ ಹತ್ತಿರಕ್ಕೆ ಬಂದು ಇಂತು ನುಡಿದನು. ಆ ಮಾತುಗಳಲ್ಲಿ ಕುಶಲತೆ ಇರಲಿಲ್ಲ.

ಮೇಘಸಂಧಿಃ

ಕಿಮಯಂ ಚಾರ್ಯತೇ ವಾಜೀ ಸ್ತ್ರೀಮಧ್ಯ ಇವ ಕೌರವ ।
ಹಯಮೇನಂ ಹರಿಷ್ಯಾಮಿ ಪ್ರಯತಸ್ವ ವಿಮೋಕ್ಷಣೇ ॥೬॥

ಮೇಘಸಂಧಿ– ಭರತವಂಶಜನೇ, ಇಲ್ಲಿಯ ತನಕ ನೀನು ಕುದುರೆಯನ್ನು ಹೆಂಗಸರ ಊರುಗಳಲ್ಲಿ ನಡೆಸಿಕೊಂಡು ಬಂದಿದ್ದಿ ಎಂದು ಭಾವಿಸುತ್ತೇನೆ. ಪುರುಷ ಶ್ರೇಷ್ಠನಾದ ನಾನು ನಿನ್ನ ಕುದುರೆಯನ್ನು ಕಟ್ಟಿಹಾಕುತ್ತೇನೆ. ಸಾಮರ್ಥ್ಯವಿದ್ದರೆ ಪ್ರಯತ್ನ ಪೂರ್ವಕವಾಗಿ ಬಿಡಿಸಿಕೊ.

ಆತೋ೯ ನನು ಪುರಾ ಯುದ್ಧೇ ಯದಿ ತ್ವಂ ಭ್ರಾತೃಭಿಃ ಸಹ ।
ಕರಿಷ್ಯಾಮಿ ತವಾತಿಥ್ಯಂ ಪ್ರಹರ ಪ್ರಹರಾಮಿ ಚ ॥೭॥

ಹಿಂದೆ ನನ್ನ ತಂದೆಯೇ ಮೊದಲಾದ ಪೂರ್ವಜನರು ಯುದ್ಧದಲ್ಲಿ ನಿನಗೆ ಸ್ವಾಗತಾದಿಗಳನ್ನು ನೀಡಿರಬಹುದು. ಅವರು ನಿನ್ನಿಂದ ದುಃಖಿತರಾಗಿರಬಹುದು. ಆದರೆ ಇಂದು ನಾನು ಹಾಗಲ್ಲ. ನಿನ್ನನ್ನು ಬಾಣಗಳಿಂದಲೇ ಆತಿಥ್ಯವನ್ನು ಮಾಡಿ ಸತ್ಕರಿಸುತ್ತೇನೆ. ಸಾಮರ್ಥ್ಯವಿದ್ದರೆ ನನ್ನನ್ನು ಎದುರಿಸು.

ವೈಶಂಪಾಯನಃ

ಇತ್ಯುಕ್ತಃ ಪ್ರತ್ಯುವಾಚೇದಂ ಪಾಂಡವಃ ಪ್ರಹಸನ್ನಿವ ॥೮॥

ವೈಶಂಪಾಯನ– ಜನಮೇಜಯನೇ, ಮೇಘಸಂಧಿಯು ಉದ್ಧಟತನದಿಂದ ಇಂತು ನುಡಿಯಲು ಅರ್ಜುನನು ಮಂದಹಾಸ ಬೀರುತ್ತಾ ಇಂತು ನುಡಿದನು.

ಅರ್ಜುನಃ

ವಿಘ್ನಕರ್ತಾ ಮಯಾ ವಾರ್ಯ ಇತಿ ಮೇ ವ್ರತಮಾಹಿತಮ್ ।
ಭ್ರಾತ್ರಾ ಜ್ಯೇಷ್ಠೇನ ನೃಪತೇ ತವಾಪಿ ವಿದಿತಂ ಧ್ರುವಮ್ ॥೯॥

ಪ್ರಹರಸ್ವ ಯಥಾಶಕ್ತಿ ನ ಮನ್ಯುರ್ವಿದ್ಯತೇ ಮಮ ॥೧೦॥

ಅರ್ಜುನ– ನರೇಶ್ವರನೇ, ನನ್ನ ಜ್ಯೇಷ್ಠ ಸಹೋದರನಾದ ಧರ್ಮರಾಜನು ಯಜ್ಞಾಶ್ವಕ್ಕೆ ವಿಘ್ನವನ್ನುಂಟು ಮಾಡಿದವರನ್ನು ನಿವಾರಿಸುವಂತೆ ದೀಕ್ಷೆಯನ್ನು ಕೊಟ್ಟಿರುತ್ತಾನೆ. ಈ ವಿಷಯವು ನಿನಗೆ ತಿಳಿದೇ ಇದೆ. ಆದ್ದರಿಂದ ನಿನ್ನಲ್ಲಿ ಶಕ್ತಿ ಇರುವಷ್ಟು ನನ್ನನ್ನು ಪ್ರಹರಿಸು. ನಿನ್ನ ಮೇಲೆ ಯಾವ ಸಿಟ್ಟೂ ನನಗೆ ಬರುವುದಿಲ್ಲ. ಇದಕ್ಕಾಗಿಯೇ ನನ್ನನ್ನು ಕಳುಹಿಸಿರುತ್ತಾನೆ.

ವೈಶಂಪಾಯನಃ

ಇತ್ಯುಕ್ತಃ ಪ್ರಾಹರತ್ ಪೂರ್ವಂ ಪಾಂಡವಂ ಮಗಧೇಶ್ವರಃ ।
ಕಿರನ್ ಶರಸಹಸ್ರಾಣಿ ವರ್ಷಾಣೀವ ಸಹಸ್ರದೃಕ್ ॥೧೧॥

ವೈಶಂಪಾಯನ– ಜನಮೇಜಯನೇ, ಅರ್ಜುನನು ಹೀಗೆ ಹೇಳುತ್ತಿರುವಾಗಲೇ ಮಗಧೇಶ್ವರನಾದ ಮೇಘಸಂಧಿಯು ಇಂದ್ರನು ಮಳೆಗರೆಯುವಂತೆ ಸಾವಿರಾರು ಬಾಣಗಳನ್ನು ಅರ್ಜುನನ ಮೇಲೆ ಸುರಿಸಿದನು.

ತತೋ ಗಾಂಡೀವಭೃತ್ ಶೂರೋ ಗಾಂಡೀವಪ್ರೇರಿತೈಃ ಶರೈಃ ।
ಚಕಾರ ಬಾಣಾಂಸ್ತಾನ್ ಮೋಘಾನ್ ಅಯತ್ನಾದ್ ಭರತರ್ಷಭ ॥೧೨॥

ಪ್ರತಿಯಾಗಿ ಆ ಕ್ಷಣದಲ್ಲಿಯೇ ಶೂರನಾದ ಗಾಂಡೀವಿಯು ಮೇಘಸಂಧಿಯು ಪ್ರಯತ್ನಪೂರ್ವಕವಾಗಿ ಬಿಡುತ್ತಿದ್ದ ನೂರಾರು ಬಾಣಗಳನ್ನು ತನ್ನ ಗಾಂಡೀವ ಧನುಸ್ಸಿನಿಂದ ಬಿಡಲ್ಪಟ್ಟ ಬಾಣಗಳಿಂದ ವ್ಯರ್ಥಗೊಳಿಸಿದನು.

ಸ ಮೋಘಂ ತಸ್ಯ ಬಾಣೌಘಂ ಕೃತ್ವಾ ವಾನರಕೇತನಃ ।
ಶರಾನ್ ಮುಮೋಚ ಜ್ವಲಿತಾನ್ ದೀಪ್ತಾಸ್ಯಾನಿವ ಪನ್ನಗಾನ್ ॥೧೩॥

ಮಗಧೇಶ್ವರನ ಬಾಣಗಳನ್ನು ಕಪಿಧ್ವಜನಾದ ಅರ್ಜುನನು ವ್ಯರ್ಥಗೊಳಿಸಿದ್ದು ಮಾತ್ರವಲ್ಲದೆ ಬೆಳಗುತ್ತಿರುವ ಮುಖಗಳುಳ್ಳ ಸರ್ಪಗಳಂತೆ ಶೋಭಿಸುತ್ತಿರುವ ಜಾಜ್ವಲ್ಯಮಾನವಾದ ಬಾಣಗಳನ್ನು ಮೇಘಸಂಧಿಯ ಮೇಲೆ ಪ್ರಯೋಗಿಸಿದನು.

ರಥೇ ಪತಾಕಾದಂಡೇ ಚ ರಥಯಂತ್ರಹಯೇಷು ಚ ।
ಅನ್ಯೇಷು ಚ ಹಯಾಂಗೇಷು ನ ಶರೀರೇ ನ ಸಾರಥೌ ॥೧೪॥

ಮೇಘಸಂಧಿಯ ಧ್ವಜ, ಪತಾಕೆ, ದಂಡ, ಯಂತ್ರ, ಕುದುರೆಗಳು, ರಥಾಂಗಗಳು ಎಲ್ಲದರ ಮೇಲೆಯೂ ಬಾಣಗಳನ್ನು ಪ್ರಯೋಗಿಸಿದನು. ಆದರೆ ಮೇಘಸಂಧಿಯ ಮೇಲಾಗಲಿ, ಅವನ ಸಾರಥಿಯ ಮೇಲಾಗಲಿ ಬಾಣಗಳನ್ನು ಪ್ರಯೋಗಿಸಲಿಲ್ಲ.

ಸಂರಕ್ಷ್ಯಮಾಣಃ ಪಾರ್ಥೇನ ಶರೀರೇ ಫಲ್ಗುನಸ್ಯ ಹ ।
ಮನ್ಯಮಾನಃ ಸ್ವವೀರ್ಯಂ ತಂ ಮಾಗಧಃ ಪ್ರಾಹಿಣೋಚ್ಛರಾನ್ ॥೧೫॥

ಅರ್ಜುನನು ಎದುರಾಳಿಯಾದ ಮೇಘಸಂಧಿಗೆ ಪೀಡೆಯಾಗದಂತೆ ಅಣ್ಣನ ಮಾತಿಗೆ ಬೆಲೆಕೊಟ್ಟು ಯುದ್ಧಮಾಡುತ್ತಿರುವಾಗ, ಮೇಘಸಂಧಿಯು ನನ್ನ ಪರಾಕ್ರಮಕ್ಕೆ ಅರ್ಜುನನು ಸೋತು ಹೀಗೆ ನಡೆದುಕೊಳ್ಳುತ್ತಿದ್ದಾನೆ ಎಂದು ಭಾವಿಸಿದನು. ತನ್ನ ಪರಾಕ್ರಮದಿಂದಲೇ ತನ್ನನ್ನು ರಕ್ಷಿಸಿಕೊಳ್ಳುತ್ತಿದ್ದೇನೆಂದು ತಪ್ಪಾಗಿ ಅರ್ಜುನನ ಪರಾಕ್ರಮವನ್ನು ತಿಳಿದನು.

ತತೋ ಗಾಂಡೀವಭೃಚ್ಛೂರೋ ಮಾಗಧೇನ ಭೃಶಾರ್ದಿತಃ ।
ಬಭೌ ವಾಸಂತಿಕ ಇವ ಪಲಾಶಃ ಪುಷ್ಪಿತೋ ಮಹಾನ್ ॥೧೬॥

ಬಳಿಕ ಅವ್ಯಾಹತವಾಗಿ ಅರ್ಜುನನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು. ಮಾಗಧನ ಬಾಣಗಳಿಂದ ಬಹಳಷ್ಟು ಗಾಯಗೊಂಡು ರಕ್ತಸಿಕ್ತನಾದ ಅರ್ಜುನನು ವಸಂತ ಋತುವಿನಲ್ಲಿ ಹೂವನ್ನು ಬಿಡುವ ಮುತ್ತುಗದ ಮರದಂತೆ ಬೆಳಗುತ್ತಿದ್ದನು.

ಅವಧ್ಯಮಾನಃ ಸೋಽಭ್ಯಘ್ನನ್ ಮಾಗಧಃ ಪಾಂಡವರ್ಷಭಮ್ ।
ತೇನ ತಸ್ಥೌ ಸ ಕೌರವ್ಯ ಲೋಕವೀರಸ್ಯ ದರ್ಶನೇ ॥೧೭॥

ಅರ್ಜುನನು ಧರ್ಮರಾಜನು ಹೇಳಿದಂತೆ ಮೇಘಸಂಧಿಯನ್ನು ಬಾಣಗಳಿಂದ ಹೊಡೆಯಲಿಲ್ಲ. ಮೇಘಸಂಧಿಯು ಅರ್ಜುನನನ್ನು ಹರಿತವಾದ ಬಾಣಗಳಿಂದ ಹೊಡೆಯದೆ ಇರಲಿಲ್ಲ. ಆದ್ದರಿಂದಲೇ ಲೋಕವೀರನಾದ ಅರ್ಜುನನ ಮುಂದೆ ಮೇಘಸಂಧಿಯು ಅಷ್ಟು ಹೊತ್ತು ನಿಲ್ಲಲು ಸಾಧ್ಯವಾಯಿತು.

ಸವ್ಯಸಾಚೀ ತು ಸಂಕ್ರುದ್ಧೋ ವಿಕೃಷ್ಯ ಬಲವದ್ಧನುಃ ।
ಹಯಾಂಶ್ಚಕಾರ ನಿರ್ದೇಹಾನ್ ಸಾರಥೇಶ್ಚ ಶಿರೋಽಹರತ್ ॥೧೮॥

ಸವ್ಯಸಾಚಿಯಾದ ಅರ್ಜುನನು ಕಾಲಕ್ರಮದಲ್ಲಿ ಕುಪಿತನಾಗಿ ಧನುಸ್ಸನ್ನು ಬಲವಾಗಿ ಸೆಳೆದು, ಬಾಣಗಳನ್ನು ವೇಗವಾಗಿ ಬಿಡುತ್ತಾ, ಮೇಘಸಂಧಿಯ ಕುದುರೆಗಳನ್ನೂ, ಸಾರಥಿಯನ್ನೂ ಕ್ಷಣಮಾತ್ರದಲ್ಲಿ ಸಂಹರಿಸಿದನು.

ಧನುಶ್ಚಾಸ್ಯ ಮಹಚ್ಚಿತ್ರಂ ಕ್ಷುರೇಣ ವಿಚಕರ್ತ ಹ ।
ಹಸ್ತಾವಾಪಂ ಪತಾಕಾಂ ಚ ಧ್ವಜಂ ಚಾಸ್ಯ ನ್ಯಪಾತಯತ್ ॥೧೯॥

ಮತ್ತೊಮ್ಮೆ ಮೇಘಸಂಧಿಯ ವಿಚಿತ್ರವಾದ ದೊಡ್ಡ ಧನುಸ್ಸನ್ನು ಕ್ಷುರದಿಂದ ಕತ್ತರಿಸಿದನು. ಅವನ ಕೈಚೀಲ, ಪತಾಕೆ, ಧ್ವಜಗಳೆಲ್ಲವೂ ಅರ್ಜುನನ ಬಾಣ ಪ್ರಹಾರದಿಂದ ಧರೆಗುರುಳಿದವು.

ಸ ರಾಜಾ ವ್ಯಥಿತೋ ವ್ಯಶ್ವೋ ವಿಧನುಷ್ಕೋ ವಿಸಾರಥಿಃ ।
ಗದಾಮಾದಾಯ ಕೌಂತೇಯಮಭಿದುದ್ರಾವ ವೇಗವಾನ್ ॥೨೦॥

ಕುದುರೆ, ಸಾರಥಿ, ಧನುಸ್ಸಿನಿಂದ ವಿಹೀನನಾದ ಮೇಘಸಂಧಿಯು ದುಃಖಿತನಾದನು. ಆದರೂ ಕ್ಷತ್ರಧರ್ಮವನ್ನು ಪರಿಪಾಲಿಸುತ್ತಾ ಗದೆಯನ್ನೆತ್ತಿಕೊಂಡು ಧೈರ್ಯದಿಂದ ಅರ್ಜುನನ ಕಡೆ ಧಾವಿಸಿದನು.

ತಸ್ಯಾಪತತ ಏವಾಶು ಗದಾಂ ಹೇಮಪರಿಷ್ಕೃತಾಮ್ ।
ಶರೈಶ್ಚಕರ್ತ ನಿಶಿತೈರ್ಬಹುಭಿರ್ಗ್ರಧ್ರವಾಜಿತೈಃ ॥೨೧॥

ಮೇಘಸಂಧಿಯು ಎಷ್ಟು ವೇಗವಾಗಿ ಅರ್ಜುನನ ಬಳಿ ಧಾವಿಸಿ ಬಂದನೋ ಅಷ್ಟೇ ವೇಗವಾಗಿ ಅವನ ಕೈಯಲ್ಲಿದ್ದ ಗದೆಯು ಕೆಳಗೆ ಜಾರಿತು. ಅರ್ಜುನನು ರಣಹದ್ದಿನ

ರೆಕ್ಕೆಗಳಿಂದ ಶೋಭಿಸುತ್ತಿರುವ, ಸುವರ್ಣಭೂಷಿತವಾದ ಗದೆಯನ್ನು ನುಚ್ಚುನೂರು ಮಾಡಿದನು.

ಸಾ ಗದಾ ಶಕಲೀಭೂತಾ ವಿಕೀರ್ಣಮಣಿಬಂಧನಾ ।
ವ್ಯಾಲೀ ನಿರ್ಮುಚ್ಯಮಾನೇವ ಪಪಾತ ಧರಣೀಂ ಪ್ರತಿ ॥೨೨॥

ಗದೆಯಲ್ಲಿದ್ದ ಮಣಿಕಟ್ಟು ಚೆಲ್ಲಾಪಿಲ್ಲಿಯಾಯಿತು. ಗದೆಯೂ ನುಚ್ಚುನೂರಾಯಿತು. ಮುಷ್ಟಿಯಿಂದ ಬಿಡಲ್ಪಟ್ಟ ಆ ಗದೆಯು ಸರ್ಪವು ಪೊರೆಯನ್ನು ಬಿಡುವಂತೆ ನೆಲದ ಮೇಲೆ ಬಿದ್ದುಹೋಯಿತು.

ವಿರಥಂ ತಂ ವಿಧನುಷಂ ಗದಯಾ ಪರಿವರ್ಜಿತಮ್ ।
ನೈಚ್ಛತ್ ತಾಡಯಿತುಂ ಧೀಮಾನ್ ಅರ್ಜುನಃ ಸಮರಾಗ್ರಣೀಃ ॥೨೩॥

ರಥ, ಧನುಸ್ಸು, ಗದೆಯಿಂದ ವಿಹೀನನಾದ ಮಾಗಧನನ್ನು ಬುದ್ಧಿವಂತನಾದ, ಸಮರಕುಶಲಿಯಾದ ಅರ್ಜುನನು ಹೊಡೆಯಲು ಬಯಸಲಿಲ್ಲ.

ತತ ಏನಂ ವಿಮನಸಂ ಕ್ಷತ್ರಧರ್ಮಂ ಸಮಾಸ್ಥಿತಮ್ ।
ಸಾಂತ್ವಪೂರ್ವಮಿದಂ ವಾಕ್ಯಮಬ್ರವೀತ್ ಕಪಿಕೇತನಃ ॥೨೪॥

ದುಃಖಿತವಾದ ಮನಸ್ಸಿನಿಂದ ಕೂಡಿರುವ, ಕ್ಷತ್ರಧರ್ಮವನ್ನು ರಕ್ಷಿಸಲಾರದೆ ದುಃಖಿಸುತ್ತಿರುವ ಮೇಘಸಂಧಿಯನ್ನು ಕುರಿತು ಕಪಿಧ್ವಜನಾದ ಅರ್ಜುನನು ಸಾಂತ್ವನದ ನುಡಿಗಳನ್ನು ಇಂತು ಹೇಳಿದನು.

ಅರ್ಜುನಃ

ಪರ್ಯಾಪ್ತಃ ಕ್ಷತ್ರಧರ್ಮೋ ಽಯಂ ದರ್ಶಿತಃ ಪುತ್ರ ಗಮ್ಯತಾಮ್ ।
ಬಹ್ವೇತತ್ ಸಮರೇ ಕರ್ಮ ತವ ಬಾಲಸ್ಯ ಪಾರ್ಥಿವ ॥೨೫॥

ಅರ್ಜುನ– ಸಾಕಷ್ಟು ಕ್ಷತ್ರಧರ್ಮವನ್ನು ಅನುಸರಿಸಿರುತ್ತಿ. ಮಗನೇ ಇನ್ನು ನಿನ್ನ ಪಟ್ಟಣಕ್ಕೆ ಹಿಂತಿರುಗು. ನೀನಿನ್ನು ಬಾಲಕ. ಸಾಕಷ್ಟು ಸಮರಕರ್ಮಗಳಲ್ಲಿ ಬಳಲಿರುವಿ.

ಯುಧಿಷ್ಠಿರಸ್ಯ ಸಂದೇಶೋ ನ ಹಂತವ್ಯಾ ನೃಪಾ ಇತಿ ।
ತೇನ ಜೀವಸಿ ರಾಜಂಸ್ತ್ವಮಪರಾದ್ಧೋ ಽಪಿ ಮೇ ರಣೇ ॥೨೬॥

ಎದುರಿಗೆ ಬಂದಿರುವ ರಾಜರನ್ನು ಯಾವುದೇ ಕಾರಣದಿಂದ ಸಂಹರಿಸ-ಬಾರದೆಂದು ಯುಧಿಷ್ಠಿರನು ಆದೇಶ ನೀಡಿದ್ದಾನೆ. ಈ ಕಾರಣದಿಂದ ನೀನು ಅಪರಾಧ ಮಾಡಿದರೂ ಜೀವಿಸಲು ಸಾಧ್ಯವಾಗಿದೆ.

ವೈಶಂಪಾಯನಃ

ಇತಿ ಮತ್ವಾ ಸ ಚಾತ್ಮಾನಂ ಪ್ರತ್ಯಾದಿಷ್ಟಃ ಸ ಮಾಗಧಃ ।
ತಥ್ಯಮಿತ್ಯಭಿಗಮ್ಯೈನಂ ಪ್ರಾಂಜಲಿಃ ಪ್ರತ್ಯಪೂಜಯತ್ ॥೨೭॥

ವೈಶಂಪಾಯನ– ಜನಮೇಜಯನೇ, ಅರ್ಜುನನ ಈ ಮಾತನ್ನು ಕೇಳಿಸಿಕೊಂಡ ಮೇಘಸಂಧಿಯು ಯುದ್ಧದಲ್ಲಿ ಅರ್ಜುನನಿಂದ ನಾನು ಸೋತಿದ್ದೇನೆಂದು ತಿಳಿದು, ಅವನ ಮಾತನ್ನು ಸತ್ಯವೆಂದು ಭಾವಿಸಿ, ಅರ್ಜುನನ ಬಳಿ ಕರಜೋಡಿಸಿ ಇಂತು ಪ್ರಾರ್ಥಿಸಿದನು.

ತಮರ್ಜುನಃ ಸಮಾಶ್ವಾಸ್ಯ ಪುನರೇವೇದಮಬ್ರವೀತ್ ॥೨೮॥

ಅರ್ಜುನನೇ ನಿನಗೆ ಮಂಗಳವಾಗಲಿ. ನಿನ್ನಿಂದ ಸೋತಿದ್ದೇನೆ ಎಂದು ಹೇಳಿದಾಗ ಅರ್ಜುನನು ಅವನನ್ನು ಇಂತು ಸಂತೈಸಿದನು.

ಅರ್ಜುನಃ

ಆಗಂತವ್ಯಂ ಪರಾಂ ಚೈತ್ರೀಮಶ್ವಮೇಧೇ ನೃಪಸ್ಯ ನಃ ॥೨೯॥

ಅರ್ಜುನ– ನರೇಶ್ವರನೇ, ಮುಂದಿನ ಚೈತ್ರ ಹುಣ್ಣಿಮೆಯಿಂದ ಪ್ರಾರಂಭವಾಗುವ ನಮ್ಮ ಅಶ್ವಮೇಧ ಯಾಗಕ್ಕೆ ನೀನು ಆಗಮಿಸಬೇಕು.

ವೈಶಂಪಾಯನಃ

ಇತ್ಯುಕ್ತಃ ಸ ತಥೇತ್ಯುಕ್ತ್ವಾ ಪೂಜಯಾಮಾಸ ತಂ ಹಯಮ್ ।
ಫಲ್ಗುನಂ ಚ ಯುಧಿ ಶ್ರೇಷ್ಠಂ ವಿಧಿವತ್ ಸಹದೇವಜಃ ॥೩೦॥

ವೈಶಂಪಾಯನ– ಅರ್ಜುನನು ಹೀಗೆ ಹೇಳಲು ಮೇಘಸಂಧಿಯು ಹಾಗೆಯೇ ಆಗಲೆಂದು ಹೇಳಿ, ಯುದ್ಧವೀರನಾದ ಅರ್ಜುನನನ್ನೂ, ಯಜ್ಞದ ಕುದುರೆಯನ್ನು ವಿಧಿವತ್ತಾಗಿ ಪೂಜಿಸಿದನು.

ತತೋ ಯಥೇಷ್ಟಮಗಮತ್ ಪುನರೇವ ಸ ಕೌರವಃ ।
ತತಃ ಸಮುದ್ರತೀರೇಣ ವಂಗಾನ್ ಪುಂಡ್ರಾನ್ ಸಕೇರಲಾನ್ ॥೩೧॥

ಅನಂತರ ಆ ಕುದುರೆಯು ಪುನಃ ಯಥೇಷ್ಟವಾಗಿ ಸಂಚರಿಸತೊಡಗಿತು. ಸಮುದ್ರ ತೀರದಲ್ಲಿ ಹೋಗುತ್ತಿದ್ದ ಆ ಕುದುರೆಯು ವಂಗ, ಪುಂಡ್ರ, ದೇಶಗಳನ್ನು, ಕೇರಳ ದೇಶಗಳೆಲ್ಲವನ್ನೂ ಕುರಿತು ಹೋಯಿತು.

ತತ್ರ ತತ್ರ ಚ ಭೂರೀಣಿ ಮ್ಲೇಚ್ಛಸೈನ್ಯಾನ್ಯನೇಕಶಃ ।
ವಿಜಿಗ್ಯೇ ಧನುಷಾ ರಾಜನ್ ಗಾಂಡೀವೇನ ಧನಂಜಯಃ ॥೩೨॥

ಆಯಾ ದೇಶಗಳಲ್ಲಿ ಅನೇಕ ಸಂಖ್ಯೆಯ ಮ್ಲೇಚ್ಛ ಸೈನ್ಯವು ತುಂಬಿದ್ದವು. ಅರ್ಜುನನು ಆ ಎಲ್ಲ ಮ್ಲೇಚ್ಛ ಸೈನಿಕರನ್ನು ತನ್ನ ಗಾಂಡೀವ ಧನುಸ್ಸಿನಿಂದ ಗೆದ್ದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಶ್ವಸಂಚರಣೇ ಮಾಗಧಯುದ್ಧಂ ನಾಮ
ಚತುರಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೈದನೆಯ ಅಧ್ಯಾಯ

ಕುದುರೆಯು ದಕ್ಷಿಣ ಮತ್ತು ಪಶ್ಚಿಮ ಸಮುದ್ರಗಳ ತೀರದಲ್ಲಿ ಸಂಚರಿಸುತ್ತಾ ಚೇದಿ ದೇಶವನ್ನು ಪ್ರವೇಶಿಸಿದುದು. ಶಿಶುಪಾಲನ ಮಗನಿಂದ ಅರ್ಜುನನು ಪೂಜೆಯನ್ನು ಸ್ವೀಕರಿಸಿದುದು. ನಂತರ ಕಾಶೀ, ಕೋಸಲ ದೇಶಾಧಿಪತಿ ರಾಜರನ್ನು ಜಯಿಸಿ, ಗಾಂಧಾರದೇಶದ ಕಡೆ ನಡೆದುದು.

ವೈಶಂಪಾಯನಃ

ಮಾಗಧೇನಾರ್ಚಿತೋ ರಾಜನ್ ಪಾಂಡವಃ ಶ್ವೇತವಾಹನಃ ।
ದಕ್ಷಿಣಾಂ ದಿಶಮಾಸ್ಥಾಯ ಚಾರಯಾಮಾಸ ತಂ ಹಯಮ್ ॥೧॥

ವೈಶಂಪಾಯನ– ಜನಮೇಜಯನೇ, ಮಗಧದೇಶದ ರಾಜನಾದ ಮೇಘಸಂಧಿಯಿಂದ ಸತ್ಕೃತನಾದ ಶ್ವೇತವಾಹನನಾದ ಅರ್ಜುನನು ದಕ್ಷಿಣ ದಿಕ್ಕಿನ ಕಡೆ ಕುದುರೆಯನ್ನು ನಡೆಸಿಕೊಂಡು ಹೊರಟನು.

ತತಃ ಸ ಪುನರಾವೃತ್ಯ ಹಯಃ ಕಾಮಚರೋ ಬಲೀ ।
ಆಸಸಾದ ಪುರೀಂ ರಮ್ಯಾಂ ಚೇದೀನಾಂ ಶುಕ್ತಿಸಾಹ್ವಯಾಮ್ ॥೨॥

ಸ್ವೇಚ್ಛೆಯಿಂದ ಸಂಚರಿಸುತ್ತಿದ್ದ ಬಲಿಷ್ಠವಾದ ಆ ಕುದುರೆಯು ಅಲ್ಲಿಂದ ಪುನಃ ಹಿಂದಿರುಗಿ ಚೇದಿ ದೇಶಿಯರ ಸುಂದರ ರಾಜಧಾನಿಯಾದ ಶುಕ್ತಿ ಎಂಬ ಹೆಸರಿನ (ಮಾಹೇಷ್ಮತಿ) ಪಟ್ಟಣವನ್ನು ಪ್ರವೇಶಿಸಿತು.

ಶರಭೇಣಾರ್ಚಿತಸ್ತತ್ರ ಶಿಶುಪಾಲಾತ್ಮಜೇನ ಸಃ ।
ಯುದ್ಧಪೂರ್ವೇಣ ಮಾನೇನ ಪೂಜಯಾ ಚ ಮಹಾಬಲಃ ॥೩॥

ಶಿಶುಪಾಲನ ಮಗನಾದ ಶರಭನು ಕ್ಷತ್ರಧರ್ಮಕ್ಕನುಗುಣವಾಗಿ ಯುದ್ಧ ಪೂರ್ವಕವಾಗಿಯೇ ಅರ್ಜುನನನ್ನು ಪೂಜಿಸಿದನು.

ತತೋಽರ್ಚಿತೋ ಯಯೌ ರಾಜನ್ ತದಾ ಸ ತುರಗೋತ್ತಮಃ ।
ಕಾಶೀನ್ ಮದ್ರಾನ್ ಕೋಸಲಾಂಶ್ಚ ಕಿರಾತಾನಥ ತಂಕಣಾನ್ ॥೪॥

ಜನಮೇಜಯನೇ, ಅವನಿಂದ ಅರ್ಚಿತವಾದ ಕುದುರೆಯು ಕಾಶೀ, ಕೋಸಲ, ಮದ್ರದೇಶ, ಕಿರಾತ, ತಂಕಣ ಮೊದಲಾದ ದೇಶಗಳನ್ನು ಕ್ರಮವಾಗಿ ಸಂಚರಿಸುತ್ತಾ ಹೋಯಿತು.

ತತ್ರ ಪೂಜಾಂ ಯಥಾನ್ಯಾಯಂ ಪ್ರತಿಗೃಹ್ಯ ಸ ಪಾಂಡವಃ ।
ಪುನರಾಗತ್ಯ ಕೌಂತೇಯೋ ದಶಾರ್ಣಾನಚರತ್ ತದಾ ॥೫॥

ಆ ಎಲ್ಲ ದೇಶಗಳಲ್ಲಿಯೂ ಪಾಂಡವನು ಯೋಗ್ಯವಾಗಿ ಸತ್ಕಾರವನ್ನು ಸ್ವೀಕರಿಸಿ ಪುನಃ ಹಿಂದಿರುಗಿ ಕುದುರೆಯನ್ನನುಸರಿಸಿಕೊಂಡು ದಾಶಾರ್ಣದೇಶಕ್ಕೆ ಆಗಮಿಸಿದನು.

ತತ್ರ ಚಿತ್ರಾಂಗದೋ ನಾಮ ಬಲವಾನ್ ವಸುಧಾಧಿಪಃ ।
ತೇನ ಯುದ್ಧಮಭೂತ್ ತಸ್ಯ ವಿಜಯಸ್ಯಾತಿಭೈರವಮ್ ॥೬॥

ಆ ದಾಶಾರ್ಣದೇಶದಲ್ಲಿ ಶತ್ರುಗಳನ್ನು ಸಂಹರಿಸಲು ಸಾಮರ್ಥ್ಯವನ್ನು ಹೊಂದಿರುವ ಚಿತ್ರಾಂಗದನೆಂಬ ರಾಜನಿದ್ದನು. ಅವನೊಡನೆ ಅರ್ಜುನನು ಭಯಂಕರವಾದ ಯುದ್ಧವನ್ನು ಮಾಡಿದನು.

ತಂ ಚಾಪಿ ವಶಮಾನೀಯ ಕಿರೀಟೀ ಪುರುಷರ್ಷಭಃ ।
ನಿಷಾದರಾಜ್ಞೋ ವಿಷಯಮೇಕಲವ್ಯಸ್ಯ ಜಗ್ಮಿವಾನ್ ॥೭॥

ಪುರುಷಶ್ರೇಷ್ಠನಾದ ಅರ್ಜುನನು ಚಿತ್ರಾಗಂದನನ್ನು ಜಯಿಸಿ, ಅವನನ್ನು ತನ್ನ ಸಾಮಂತನನ್ನಾಗಿ ಮಾಡಿಕೊಂಡು, ನಿಷಾದರಾಜನಾದ ಏಕಲವ್ಯನ ರಾಜ್ಯಕ್ಕೆ ಕುದುರೆಯನ್ನನುಸರಿಸಿ ಹೊರಟನು.

ಏಕಲವ್ಯಸುತಶ್ಚೈನಂ ಯುದ್ಧೇನ ಜಗೃಹೇ ತದಾ ।
ತತ್ರ ಚಕ್ರೇ ನಿಷಾದೈಶ್ಚ ಸಂಗ್ರಾಮಂ ರೋಮಹರ್ಷಣಮ್ ॥೮॥

ಏಕಲವ್ಯನ ಮಗನು ಅರ್ಜುನನನ್ನು ಯುದ್ಧದ ಮೂಲಕವಾಗಿಯೇ ಸ್ವಾಗತಿಸಿದನು. ನಿಷಾದರಿಗೂ ಅರ್ಜುನನಿಗೂ ರೋಮಾಂಚಕರವಾದ ಯುದ್ಧವು ಏರ್ಪಟ್ಟಿತು.

ತತಸ್ತಮಪಿ ಕೌಂತೇಯಃ ಸಮರೇಷ್ವಪರಾಜಿತಃ ।
ಜಿಗಾಯ ಸಮರೇ ವೀರೋ ಯಜ್ಞವಿಘ್ನಾರ್ಥಮುದ್ಯತಮ್ ॥೯॥

ಯುದ್ಧದಲ್ಲಿ ಎಂದೂ ಪರಾಜಿತನಾಗದಿರುವ, ಎದುರಿಸಲು ಅಸಾಧ್ಯನಾದ ಕೌಂತೇಯನು ಯಜ್ಞಕ್ಕೆ ವಿಘ್ನವನ್ನುಂಟು ಮಾಡುವ ಸಲುವಾಗಿ ಯುದ್ಧಕ್ಕೆ ಬಂದ ಏಕಲವ್ಯನ ಮಗನನ್ನು ಗೆದ್ದನು.

ಸ ತಂ ಜಿತ್ವಾ ಮಹಾರಾಜ ನೈಷಾದಿಂ ಪಾಕಶಾಸನಿಃ ।
ಅರ್ಚಿತಃ ಪ್ರಯಯೌ ಭೂಯೋ ದಕ್ಷಿಣಂ ಸಲಿಲರ್ಣವಮ್ ॥೧೦॥

ನಿಷಾದರಾಜನನ್ನು ಜಯಿಸಿದ ಬಳಿಕ ಇಂದ್ರನ ಮಗನಾದ ಅರ್ಜುನನು ಅವನಿಂದ ಸತ್ಕೃತನಾಗಿ ಕುದುರೆಯನ್ನನುಸರಿಸಿ ದಕ್ಷಿಣ ಸಮುದ್ರತೀರಪ್ರದೇಶಕ್ಕೆ ಹೊರಟನು.

ತತ್ರಾಪಿ ದ್ರಮಿಳೈರಾಂಧ್ರೈ ರೌದ್ರೈರ್ಮಾಹಿಷಕೈರಪಿ ।
ತಥಾ ಗೋಲ್ಲಗಿರೇಯೈಶ್ಚ ಯುದ್ಧಮಾಸೀತ್ ಕಿರೀಟಿನಃ ॥೧೧॥

ಆ ದಕ್ಷಿಣ ದೇಶದಲ್ಲಿ ದ್ರಾವಿಡರು, ಆಂಧ್ರರು, ರೌದ್ರರು, ಮಾಹಿಷಕರು, ಗೊಲ್ಲಗಿರಿಯ ಪ್ರಾಂತದಲ್ಲಿರುವವರು ಅರ್ಜುನನೊಡನೆ ಯುದ್ಧ ಮಾಡಿದರು.

ತುರಗಸ್ಯ ವಶೇನಾಥ ಸುರಾಷ್ಟ್ರಾನಭಿತೋ ಯಯೌ ॥೧೨॥

ಕುದುರೆಗೆ ಅಧೀನನಾಗಿದ್ದ ಅರ್ಜುನನು ಅದರ ಹಿಂದೆಯೇ ಸಾಗುತ್ತಾ ಸೌರಾಷ್ಟ್ರ ದೇಶಕ್ಕೆ ಹೊರಟನು.

ಗೋಕರ್ಣಮಥ ಚಾಸಾದ್ಯ ಪ್ರಭಾಸಮಪಿ ಜಗ್ಮಿವಾನ್ ॥೧೩॥

ಅಲ್ಲಿಂದ ಮುಂದೆ ಗೋಕರ್ಣಕ್ಕೂ, ಪ್ರಭಾಸ ಕ್ಷೇತ್ರಕ್ಕೂ ಹೊರಟನು.

ತತೋ ದ್ವಾರವತೀಂ ರಮ್ಯಾಂ ವೃಷ್ಣಿವೀರಾಭಿರಕ್ಷಿತಾಮ್ ।
ಆಸಸಾದ ಹಯಃ ಶ್ರೀಮಾನ್ ಕುರುರಾಜಸ್ಯ ಯಾಜ್ಞಿಯಃ ॥೧೪॥

ಬಳಿಕ ಕುರುಶ್ರೇಷ್ಠನಾದ ಯುಧಿಷ್ಠಿರನ ಕಾಂತಿಯುಕ್ತವಾದ ಆ ಕುದುರೆಯು ವೃಷ್ಣಿವೀರರಿಂದ ಪರಿಪಾಲಿಸುತ್ತಿದ್ದ ರಮಣೀಯವಾದ ದ್ವಾರಕೆಗೆ ಹೊರಟಿತು.

ತಮುನ್ಮಥ್ಯ ಹಯಶ್ರೇಷ್ಠಂ ಯಾದವಾನಾಂ ಕುಮಾರಕಾಃ ।
ಪ್ರಯಯುಸ್ತಾಂಸ್ತದಾ ರಾಜನ್ನುಗ್ರಸೇನೋ ನ್ಯವಾರಯತ್ ॥೧೫॥

ಯಾದವಕುಮಾರರು ಆ ಶ್ರೇಷ್ಠವಾದ ಯಜ್ಞಾಶ್ವವನ್ನು ಬಲಾತ್ಕಾರವಾಗಿ ಬಂಧಿಸಿ ಅರ್ಜುನನ ಮೇಲೆ ಯುದ್ಧಕ್ಕೆ ಹೊರಟರು. ಆದರೆ ಉಗ್ರಸೇನನು ಯಾದವರಿಗೆ ಯುದ್ಧಕ್ಕೆ ಹೋಗದಿರುವಂತೆ ತಡೆದನು.

ತತಃ ಪುರಾದ್ ವಿನಿಷ್ಕ್ರಮ್ಯ ವೃಷ್ಣ್ಯಂಧಕಪತಿಸ್ತದಾ ।
ಸಹಿತೋ ವಾಸುದೇವೇನ ಮಾತುಲೇನ ಕಿರೀಟಿನಾ ॥೧೬॥

ನಂತರ ವೃಷ್ಣಿ ಮತ್ತು ಅಂಧಕರ ಪತಿಯಾದ ಉಗ್ರಸೇನನು ಅರ್ಜುನನ ಸೋದರ ಮಾವನಾದ ವಸುದೇವನನ್ನು ಜೊತೆಯಲ್ಲಿ ಕರೆದುಕೊಂಡು ಅರ್ಜುನನ ಬಳಿ ಬಂದನು.

ತೌ ಸಮೇತ್ಯ ನರಶ್ರೇಷ್ಠಂ ವಿಧಿವತ್ ಪ್ರೀತಿಪೂರ್ವಕಮ್ ।
ಪರಯಾ ಭರತಶ್ರೇಷ್ಠ ಪೂಜಯಾ ಸಮವಸ್ಥಿತೌ ॥೧೭॥

ತತಸ್ತಾಭ್ಯಾಮನುಜ್ಞಾತೋ ಯಯೌ ಯೇನ ಹಯೋ ಗತಃ ॥೧೮॥

ವಸುದೇವ, ಉಗ್ರಸೇನರು ಅರ್ಜುನನನ್ನು ವಿಧಿವತ್ತಾಗಿ ಪೂಜಿಸಿ ಸತ್ಕರಿಸಿದರು. ಬಳಿಕ ಅರ್ಜುನನು ಉಗ್ರಸೇನ-ವಸುದೇವರ ಅನುಮತಿಯನ್ನು ಪಡೆದು ಕುದುರೆಯ ಮಾರ್ಗವನ್ನನುಸರಿಸಿ ಮುಂದೆ ಹೊರಟನು.

ತತಃ ಪಶ್ಚಿಮದೇಶೇನ ಸಮುದ್ರಾಂತಂ ತದಾ ಹಯಃ ।
ಕ್ರಮೇಣ ವ್ಯಚರತ್ ಸ್ಫೀತಂ ತತಃ ಪಂಚನದಂ ಯಯೌ ॥೧೯॥

ಕುದುರೆಯು ಸಮುದ್ರದ ಪಶ್ಚಿಮ ತೀರದಲ್ಲಿದ್ದ ಸಂಪದ್ಭರಿತವಾದ ದೇಶಗಳಲ್ಲಿ ಕ್ರಮವಾಗಿ ಸಂಚರಿಸುತ್ತಾ ಪಂಚನದ ಎಂಬ ಪ್ರದೇಶವನ್ನು ಪ್ರವೇಶಿಸಿತು.

ತಸ್ಮಾದಪಿ ಸ ಕೌರವ್ಯ ಗಾಂಧಾರವಿಷಯಂ ಹಯಃ ।
ವಿಚಚಾರ ಯಥಾಕಾಮಂ ಕೌಂತೇಯಾನುಗತಸ್ತಥಾ ॥೨೦॥

ಬಳಿಕ ಗಾಂಧಾರ ದೇಶವನ್ನು ಪ್ರವೇಶಿಸಿ ಸ್ವೇಚ್ಛೆಯಿಂದ ಸಂಚರಿಸತೊಡಗಿತು. ಅರ್ಜುನನು ಅದನ್ನೇ ಹಿಂಬಾಲಿಸುತ್ತಾ ಹೊರಟನು.

ತತ್ರ ಗಾಂಧಾರರಾಜೇನ ಯುದ್ಧಮಾಸೀನ್ಮಹಾತ್ಮನಃ ।
ಘೋರಂ ಶಕುನಿಪುತ್ರೇಣ ಪೂರ್ವವೈರಾನುಕಾರಿಣಾ ॥೨೧॥

ಗಾಂಧಾರ ದೇಶದ ರಾಜನಾದ ಶಕುನಿಯ ಮಗನು ಹಿಂದಿದ್ದ ವೈರವನ್ನೇ ಮುಂದುವರಿಸಿಕೊಂಡು ಅರ್ಜುನನ ಬಳಿ ಘೋರವಾದ ಯುದ್ಧವನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅಶ್ವಸಂಭರಣೇ ಗಾಂಧಾರದೇಶಪ್ರವೇಶೋ ನಾಮ
ಪಂಚಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತಾರನೆಯ ಅಧ್ಯಾಯ

ಶಕುನಿಯ ಮಗನ ಪರಾಜಯ.

ವೈಶಂಪಾಯನಃ

ಶಕುನೇಸ್ತನಯೋ ವೀರೋ ಗಾಂಧಾರಾಣಾಂ ಮಹಾರಥಃ ।
ಪ್ರತ್ಯುದ್ಯಯೌ ಗುಡಾಕೇಶಂ ಸೈನ್ಯೇನ ಮಹತಾ ವೃತಃ ॥೧॥

ಹಸ್ತ್ಯಶ್ವರಥಪೂರ್ಣೇನ ಪತಾಕಾಧ್ವಜಮಾಲಿನಾ ॥೨॥

ವೈಶಂಪಾಯನ– ಜನಮೇಜಯನೇ, ಗಾಂಧಾರದೇಶದ ರಾಜನಾದ, ಮಹಾರಥನಾದ ಶಕುನಿಯ ಮಗನು ಆನೆ, ಕುದುರೆ, ರಥಗಳಿಂದ ಕೂಡಿದ ಪತಾಕೆ, ಧ್ವಜಗಳ ಮಾಲೆಯಿಂದ ಅಲಂಕೃತವಾದ ಮಹಾಸೈನ್ಯದಿಂದ ಕೂಡಿಕೊಂಡು ಅರ್ಜುನನನ್ನು ಎದುರಿಸಲು ಹೊರಟನು.

ಅಮೃಷ್ಯಮಾಣಾಸ್ತೇ ಯೋಧಾ ನೃಪತೇಃ ಶಕುನೇರ್ವಧಮ್ ।
ಅಭ್ಯಯುಃ ಸಹಿತಾಃ ಪಾರ್ಥಂ ಪ್ರಗೃಹೀತಶರಾಸನಾಃ ॥೩॥

ಮಹಾಭಾರತ ಯುದ್ಧದಲ್ಲಿ ಶಕುನಿಯ ವಧೆಯನ್ನು ಶಕುನಿಯ ಮಗನು ಸಹಿಸಿಕೊಂಡಿರಲಿಲ್ಲ. ಇದರಿಂದ ಗಾಂಧಾರಯೋಧರೆಲ್ಲರೂ ಧನುಷ್ಪಾಣಿಗಳಾಗಿ ಸಂಘಟಿತರಾಗಿ ಅರ್ಜುನನ ಮೇಲೆ ದಾಳಿ ಮಾಡಿದರು.

ತಾನುವಾಚ ಸ ಧರ್ಮಾತ್ಮಾ ಬೀಭತ್ಸುರಪರಾಜಿತಃ ।
ಯುಧಿಷ್ಠಿರಸ್ಯ ವಚನಂ ನ ಚ ತೇ ಜಗೃಹುಸ್ತದಾ ॥೪॥

ಯುದ್ಧಮಾಡಲು ಬಂದಿರುವ ಗಾಂಧಾರ ಪ್ರಮುಖರನ್ನುದ್ದೇಶಿಸಿ ಧರ್ಮಾತ್ಮನಾದ ಅರ್ಜುನನು, ಯುಧಿಷ್ಠಿರನು ಹೇಳಿ ಕಳುಹಿಸಿದ ಸಂದೇಶವನ್ನು ಹೇಳಿದನು. ಆದರೆ ಆ ಸಂದೇಶವನ್ನು ಈ ಗಾಂಧಾರರು ಗೌರವಿಸಲಿಲ್ಲ.

ವಾರ್ಯಮಾಣಾಸ್ತು ಪಾರ್ಥೇನ ಸಾಂತ್ವಪೂರ್ವಮಮರ್ಷಿತಾಃ ।
ಪರಿವಾರ್ಯ ಹಯಂ ಜಹ್ರುಸ್ತತಶ್ಚುಕ್ರೋಧ ಪಾಂಡವಃ ॥೫॥

ಅರ್ಜುನನು ಸಮಾಧಾನದ ಮಾತುಗಳಿಂದ ಅವರನ್ನು ಯುದ್ಧ ಮಾಡದಂತೆ ತಡೆಯುತ್ತಿದ್ದರೂ ಅಸಹನೆಯುಳ್ಳ ಅವರೆಲ್ಲರೂ ಸುತ್ತುವರಿದು, ಯಜ್ಞಾಶ್ವವನ್ನು ಬಂಧಿಸಲು ಹೊರಟರು. ಅದನ್ನು ಕಂಡು ಅರ್ಜುನನು ಕುಪಿತನಾದನು.

ತತಃ ಶಿರಾಂಸಿ ದೀಪ್ತಾಗ್ರೈಸ್ತೇಷಾಂ ಚಿಚ್ಛೇದ ಪಾಂಡವಃ ।
ಶನೈರ್ಗಾಂಡೀವನಿರ್ಮುಕ್ತೈರ್ನಾತಿಯತ್ನಾದಿವಾರ್ಜುನಃ ॥೬॥

ಬಳಿಕ ಗಾಂಡೀವ ಧನುಸ್ಸಿನಿಂದ ಪ್ರದೀಪ್ತವಾದ ತುದಿಭಾಗಗಳುಳ್ಳ ಕ್ಷುರಗಳಿಂದ ಅರ್ಜುನನು ಅನಾಯಾಸವಾಗಿ ಗಾಂಧಾರ ಯೋಧರ ತಲೆಗಳನ್ನು ತುಂಡರಿಸಿದನು.

ತೇ ವಧ್ಯಮಾನಾಃ ಪಾರ್ಥೇನ ಹಯಮುತ್ಸೃಜ್ಯ ಸಂಭ್ರಮಾತ್ ।
ನ್ಯವರ್ತಂತ ಮಹಾರಾಜ ಶರವರ್ಷಾರ್ದಿತಾ ಭೃಶಮ್ ॥೭॥

ಬಾಣಗಳ ಪ್ರಹಾರದಿಂದ ಪೀಡಿತರಾದ ಗಾಂಧಾರ ಯೋಧರು ಪಾರ್ಥನಿಂದ ಸೋತು, ಕುದುರೆಯನ್ನು ಬಿಟ್ಟು ಅತ್ಯಂತ ವೇಗವಾಗಿ ಪಲಾಯನಗೈದರು.

ವಿರುದ್ಧ್ಯಮಾನಸ್ತೈಶ್ಚಾಪಿ ಗಾಂಧಾರೈಃ ಪಾಂಡವರ್ಷಭಃ ।
ಆದಿಶ್ಯಾದಿಶ್ಯ ತೇಜಸ್ವೀ ಪರಾನೇವ ನ್ಯಪಾತಯತ್ ॥೮॥

ಗಾಂಧಾರ ಯೋಧರು ಅರ್ಜುನನನ್ನು ಹರಿತವಾದ ಬಾಣಗಳಿಂದ ಪೀಡಿಸುತ್ತಿದ್ದರೂ ಅರ್ಜುನನು ಅವರನ್ನು ಹೆಸರಿಸುತ್ತಾ ಶಿರಸ್ಸುಗಳನ್ನು ಕತ್ತರಿಸುತ್ತಿದ್ದನು.

ವಧ್ಯಮಾನೇಷು ತೇಷ್ವಾಜೌ ಗಾಂಧಾರೇಷು ಸಮಂತತಃ ।
ಸ ರಾಜಾ ಶಕುನೇಃ ಪುತ್ರಃ ಪಾಂಡವಂ ಪ್ರತ್ಯವಾರಯತ್ ॥೯॥

ಯುದ್ಧರಂಗದಲ್ಲಿ ಗಾಂಧಾರ ಸೈನಿಕರು ಸಾಯುತ್ತಿರುವಾಗ, ಗಾಂಧಾರರಾಜನಾದ ಶಕುನಿಯ ಮಗನು ಅರ್ಜುನನನ್ನು ತಡೆದನು.

ತಂ ಯುಧ್ಯಮಾನಂ ರಾಜಾನಂ ಕ್ಷತ್ರಧರ್ಮೇ ವ್ಯವಸ್ಥಿತಮ್ ।
ಪಾರ್ಥೋಽಬ್ರವೀನ್ನ ಮೇ ವಧ್ಯಾ ರಾಜಾನೋ ರಾಜಶಾಸನಾತ್ ॥೧೦॥

ಅಲಂ ಯುದ್ಧೇನ ತೇ ವೀರ ನ ತೇಽದ್ಯಾಸ್ತಿ ಪರಾಜಯಃ ॥೧೧॥

ತನ್ನೊಡನೆ ಯುದ್ಧವನ್ನು ಮಾಡಲು ಬಂದಿರುವ ಶಕುನಿಯ ಮಗನನ್ನು ಉದ್ದೇಶಿಸಿ ಅರ್ಜುನನು ಮಹಾರಾಜನೇ, ಯುಧಿಷ್ಠಿರನ ಶಾಸನದಂತೆ ರಾಜನನ್ನು ನಾನು ಕೊಲ್ಲುವುದಿಲ್ಲ, ಯುದ್ಧ ನಿಲ್ಲಿಸು, ಪರಾಜಿತನಾಗಬೇಡ ಎಂದು ಬುದ್ಧಿವಾದವನ್ನು ಹೇಳಿದನು.

ಇತ್ಯುಕ್ತಸ್ತದನಾದೃತ್ಯ ವಾಕ್ಯಮಜ್ಞಾನಮೋಹಿತಃ ।
ಸ ಶಕ್ರಸಮಕರ್ಮಾಣಮವಾಕಿರತ ಸಾಯಕೈಃ ॥೧೨॥

ಜನಮೇಜಯನೇ, ಶಕುನಿಯ ಮಗನು ಅರ್ಜುನನ ಹಿತವಾದ ನುಡಿಗಳನ್ನೂ ಅನಾದರಿಸಿ, ಅಜ್ಞಾನಮೋಹಿತನಾಗಿ, ಇಂದ್ರನ ಪರಾಕ್ರಮಕ್ಕೆ ಸದೃಶವಾದ ಪರಾಕ್ರಮವುಳ್ಳ ಅರ್ಜುನನನ್ನು ಶೀಘ್ರವಾಗಿ ಸಾಗುವ ಬಾಣಗಳಿಂದ ಮುಚ್ಚಿದನು.

ತಸ್ಯ ಪಾರ್ಥಃ ಶಿರಸ್ತ್ರಾಣಮರ್ಧಚಂದ್ರೇಣ ಪತ್ರಿಣಾ ।
ಅಪಾಹರದಮೇಯಾತ್ಮಾ ಜಯದ್ರಥಶಿರೋ ಯಥಾ ॥೧೩॥

ಮಹಾತ್ಮನಾದ ಅರ್ಜುನನು ತತ್‌ಕ್ಷಣದಲ್ಲಿ ಶಕುನಿಯ ಮಗನ ಶಿರಸ್ತ್ರಾಣವನ್ನು ಅರ್ಧಚಂದ್ರದ ಬಾಣದಿಂದ ಜಯದ್ರಥನ ತಲೆಯನ್ನು ಹಾರಿಸಿದಂತೆ ಹಾರಿಸಿದನು.

ತಂ ದೃಷ್ಟ್ವಾ ವಿಸ್ಮಯಂ ಜಗ್ಮುರ್ಗಾಂಧಾರಾಃ ಸರ್ವ ಏವ ತೇ ।
ಇಚ್ಛತಾ ತೇನ ನ ಹತೋ ರಾಜೇತ್ಯಪಿ ಚ ತೇ ವಿದುಃ ॥೧೪॥

ಅರ್ಜುನನ ಕೈಚಳಕವನ್ನು ನೋಡಿದ ಗಾಂಧಾರ ಯೋಧರು ಆಶ್ಚರ್ಯಚಕಿತರಾದರು. ಅರ್ಜುನನು ತಮ್ಮ ರಾಜನನ್ನು ಉದ್ದೇಶದಿಂದಲೇ ಸಂಹರಿಸಲಿಲ್ಲ ಎಂದು ಅರ್ಥಮಾಡಿಕೊಂಡರು.

ಗಾಂಧಾರರಾಜಪುತ್ರಸ್ತು ಪಲಾಯನಕೃತಕ್ಷಣಃ ।
ಬಭೌ ತೈರೇವ ಸಹಿತಸ್ತ್ರಸ್ತೈಃ ಕ್ಷುದ್ರಮೃಗೈರಿವ ॥೧೫॥

ಆ ಸಮಯದಲ್ಲಿ ಶಕುನಿಯ ಮಗನು ಯುದ್ಧಭೂಮಿಯಿಂದ ಓಡಿಹೋಗಲು ಅವಕಾಶವನ್ನು ಕಾಯುತ್ತಿದ್ದನು. ಸಿಂಹವನ್ನು ಕಂಡ ಸಣ್ಣ ಸಣ್ಣ ಮೃಗಗಳು ಓಡಿಹೋಗುವಂತೆ ಅರ್ಜುನನ ಬಾಣಗಳಿಗೆ ಹೆದರಿ ಗಾಂಧಾರ ಯೋಧರೊಡನೆ ಶಕುನಿಯ ಮಗನು ಓಡಿಹೋದನು.

ತೇಷಾಂ ತು ತರಸಾ ಪಾರ್ಥಸ್ತತ್ರೈವ ಪರಿಧಾವತಾಮ್ ।
ವಿಜಹಾರೋತ್ತಮಾಂಗಾನಿ ಭಲ್ಲೈಃ ಸನ್ನತಪರ್ವಭಿಃ ॥೧೬॥

ಗಾಂಧಾರಯೋಧರ ಶಿರಸ್ಸುಗಳನ್ನು ಬಗ್ಗಿದ ಗಿಣ್ಣುಗಳಿಂದ, ಭಲ್ಲಗಳಿಂದ ಅರ್ಜುನನು ವೇಗವಾಗಿ ಕತ್ತರಿಸಿದನು.

ಉಚ್ಚಿತ್ತಾಂಶ್ಚ ಭುಜಾನ್ ಕೇಚಿನ್ನಾಬುಧ್ಯಂತ ಶರೈರ್ಹತಾನ್ ।
ಶಿತೈರ್ಗಾಂಡೀವನಿರ್ಮುಕ್ತೈಃ ಪೃಥುಭಿಃ ಪಾರ್ಥಚೋದಿತೈಃ ॥೧೭॥

ಗಾಂಧಾರಯೋಧರು ಅರ್ಜುನನ ಬಾಣಗಳಿಂದ ತಮ್ಮ ಭುಜಗಳನ್ನು ಕತ್ತರಿಸಿಕೊಂಡಿದ್ದರೂ ಸ್ವಲ್ಪ ಸಮಯ ಅವರಿಗೆ ತಿಳಿಯಲೇ ಇಲ್ಲ.

ಸಂಭ್ರಾಂತನರನಾಗಾಶ್ವಮಥ ತದ್ ವಿದ್ರುತಂ ಬಲಮ್ ।
ಹತವಿಧ್ವಸ್ತಭೂಯಿಷ್ಠಮವರ್ತತ ಮುಹುರ್ಮುಹುಃ ॥೧೮॥

ಗಾಂಧಾರ ಸೇನೆಯ ಆನೆಗಳು, ಕುದುರೆಗಳು ಅರ್ಜುನನ ಯುದ್ಧದಿಂದ ಹುಚ್ಚು ಹಿಡಿದಂತೆ ವರ್ತಿಸಿದವು. ಗಾಂಧಾರ ಸೇನೆಯು ಪಲಾಯನ ಮಾಡತೊಡಗಿತು. ಪುನಃ ಸಂಘಟಿತವಾಗಿ ಆಗಮಿಸಿದವು. ಹೀಗೆ ಅನೇಕ ಸಮಯ ಅರ್ಜುನನ ಜೊತೆ ಯುದ್ಧ ನಡೆಯುತ್ತಲೇ ಇತ್ತು.

ನ ಹ್ಯದೃಶ್ಯಂತ ವೀರಸ್ಯ ಕೇಚಿದಗ್ರೇऽಸ್ಯಕರ್ಮಣಃ ।
ರಿಪವಃ ಪಾತ್ಯಮಾನಾ ವೈ ಯೇ ಸಹೇರನ್ ಮಹಾಶರಾನ್ ॥೧೯॥

ಸ್ವಲ್ಪ ಹೊತ್ತಿನಲ್ಲಿಯೇ ಅವರೆಲ್ಲರನ್ನೂ ನಾಶಮಾಡಿದನು. ಉಳಿದವರು ಓಡಿ ಅರ್ಜುನನು ಹೋದರು. ವೀರನಾದ ಅರ್ಜುನನ ಮುಂದೆ ಯಾರೊಬ್ಬರೂ ಕಣ್ಣಿಗೆ ಕಾಣಿಸಲಿಲ್ಲ. ಅರ್ಜುನನ ಭಯಂಕರವಾದ ಬಾಣಗಳ ವೇಗವನ್ನು ಅವರ್ಯಾರಿಗೂ ಸಹಿಸಲಾಗಲಿಲ್ಲ.

ತತೋ ಗಾಂಧಾರರಾಜಸ್ಯ ಮಂತ್ರಿವೃದ್ಧಪುರಃಸರಾ ।
ಜನನೀ ನಿರ್ಯಯೌ ಭೀತಾ ಪುರಸ್ಕೃತ್ಯಾರ್ಘ್ಯಮುತ್ತಮಮ್ ॥೨೦॥

ಬಳಿಕ ಗಾಂಧಾರ ದೇಶದ ರಾಜನ ತಾಯಿಯು ಅರ್ಥಾತ್ ಶಕುನಿಯ ಪತ್ನಿಯು ವೃದ್ಧರಾದ ಮಂತ್ರಿಗಳನ್ನು ಮುಂದೆ ಮಾಡಿಕೊಂಡು, ಉತ್ತಮವಾದ ಅರ್ಘ್ಯ-ಪಾದ್ಯಾದಿಗಳನ್ನು ತೆಗೆದುಕೊಂಡು, ಪಟ್ಟಣದಿಂದ ಹೊರಟು ರಣಭೂಮಿಯ ಕಡೆ ಆಗಮಿಸಿದಳು.

ಸಾ ನ್ಯವಾರಯದವ್ಯಗ್ರಾ ತಂ ಪುತ್ರಂ ಯುದ್ಧದುರ್ಮದಮ್ ।
ಪ್ರಸಾದಯಾಮಾಸ ಚ ತಂ ಜಿಷ್ಣುಮಕ್ಲಿಷ್ಟಕರ್ಮಿಣಮ್ ॥೨೧॥

ಯುದ್ಧಮಾಡುವುದರಲ್ಲಿಯೇ ಏಕಾಗ್ರತೆಯನ್ನು ಹೊಂದಿರುವ, ಯುದ್ಧ ದುರ್ಮದನಾದ ಮಗನನ್ನು ಯುದ್ಧ ಮಾಡದಿರುವಂತೆ ಕೂಡಲೇ ತಡೆದಳು. ಕಷ್ಟಕರವಾದ ಕರ್ಮಗಳನ್ನು ಅನಾಯಾಸವಾಗಿ ಮಾಡುವ, ಜಯಶೀಲನಾದ ಅರ್ಜುನನನ್ನು ಪ್ರಿಯವಾದ ಮಾತುಗಳಿಂದ ಸಂತೈಸಿದಳು.

ತಾಂ ಪೂಜಯಿತ್ವಾ ಕೌಂತೇಯಃ ಪ್ರಸಾದಮಕರೋತ್ ತದಾ ।
ಶಕುನೇಶ್ಚಾಪಿ ತನಯಂ ಸಾಂತ್ವಯನ್ನಿದಮಬ್ರವೀತ್ ॥೨೨॥

ಅರ್ಜುನನು ಶಕುನಿಯ ಪತ್ನಿಯನ್ನು ಪ್ರತಿಯಾಗಿ ಪೂಜಿಸಿ, ಅವಳ ಮನಸ್ಸನ್ನು ಸಂತೋಷಪಡಿಸಿ, ಶಕುನಿಯ ಮಗನನ್ನು ಸಾಂತ್ವನ ಮಾಡಿ ಇಂತು ನುಡಿದನು.

ಅರ್ಜುನಃ

ನ ಮೇ ಪ್ರಿಯಂ ಮಹಾಬಾಹೋ ಯತ್ ತೇ ಬುದ್ಧಿರಿಯಂ ಕೃತಾ ।
ಪ್ರತಿಯೋದ್ಧುಮಮಿತ್ರಘ್ನ ಭ್ರಾತೈವ ತ್ವಂ ಮಮಾನಘ ॥೨೩॥

ಅರ್ಜುನ– ಮಹಾಬಾಹುವೇ, ಶತ್ರುಹಂತಕನೇ, ನಿಷ್ಪಾಪನೇ, ನನ್ನೊಡನೆ ಯುದ್ಧ ಮಾಡಬೇಕೆಂದು ನಿಶ್ಚಯಿಸಿದ ನಿನ್ನ ಬುದ್ಧಿಯು ನನಗೆ ಪ್ರಿಯವಾಗಲಿಲ್ಲ. ಕಾರಣ ನೀನು ನನ್ನ ಸಹೋದರನೇ ಆಗಿರುವಿ.

ಗಾಂಧಾರೀಂ ಮಾತರಂ ಸ್ಮೃತ್ವಾ ಧೃತರಾಷ್ಟ್ರಕೃತೇನ ಚ ।
ತೇನ ಜೀವಸಿ ರಾಜಂಸ್ತ್ವಂ ನಿಹತಾಸ್ತ್ವನುಗಾಸ್ತವ ॥೨೪॥

ನನ್ನ ತಾಯಿಯೂ ನಿನ್ನ ಸೋದರತ್ತೆಯೂ ಆದ ಗಾಂಧಾರಿಯನ್ನು ಸ್ಮರಿಸಿ, ಧೃತರಾಷ್ಟ್ರನ ನಿಮಿತ್ತದಿಂದ ನಿನ್ನನ್ನು ಉಪೇಕ್ಷಿಸಿದ್ದೇನೆ. ಆದ್ದರಿಂದಲೇ ನೀನು ಬದುಕಿ ಉಳಿದಿರುವಿ. ನಿನ್ನ ಅನುಯಾಯಿಗಳನ್ನು ಈಗಾಗಲೇ ಸಂಹಾರ ಮಾಡಿರುತ್ತೇನೆ.

ಮೈವಂ ಭೂಃ ಶಾಮ್ಯತಾಂ ವೈರಂ ಮಾ ತೇ ಭೂದ್ ಬುದ್ಧಿರೀದೃಶೀ ।
ಆಗಂತವ್ಯಂ ಪರಾಂ ಚೈತ್ರೀಮಶ್ವಮೇಧೇ ನೃಪಸ್ಯ ನಃ ॥೨೫॥

ಈ ವೈರವನ್ನು ಮುಂದುವರಿಸಬೇಡ. ನಿನ್ನ ಬುದ್ಧಿಯು ಈ ತಪ್ಪಾದ ಮಾರ್ಗವನ್ನು ಅನುಸರಿಸುವುದು ಬೇಡ. ಮುಂದೆ ಬರುವ ಚೈತ್ರಮಾಸದ ಹುಣ್ಣಿಮೆಯಿಂದ ಆರಂಭವಾಗುವ ಯುಧಿಷ್ಠಿರನ ಅಶ್ವಮೇಧ ಯಾಗಕ್ಕೆ ನೀನು ಆಗಮಿಸಬೇಕು.

ವೈಶಂಪಾಯನಃ

ಇತ್ಯುಕ್ತ್ವಾ ತ್ವನುಯಯೌ ಪಾರ್ಥೋ ಹಯಂ ತಂ ಕಾಮಚಾರಿಣಮ್ ।
ತೇ ನ್ಯವರ್ತಂತ ಗಾಂಧಾರಾ ಹತಾಶಿಷ್ಟಾಃ ಸ್ವಕಂ ಪುರಮ್ ॥೨೬॥

ವೈಶಂಪಾಯನ– ಈ ರೀತಿಯಾಗಿ ಅರ್ಜುನನು ಹೇಳಿ, ಕಾಮಚಾರಿಯಾದ ಆ ಕುದುರೆಯನ್ನು ಅನುಸರಿಸಿ ಹೊರಟನು. ಅಳಿದುಳಿದ ಗಾಂಧಾರ ವೀರರೆಲ್ಲರೂ ತಮ್ಮ ಪಟ್ಟಣಕ್ಕೆ ಪ್ರವೇಶಿಸಿದರು.

ನ್ಯವರ್ತತ ತತೋ ವಾಜೀ ಯತ್ರ ನಾಗಾಹ್ವಯಂ ಪುರಮ್ ।
ತಂ ನಿವೃತ್ತಂ ತು ಶುಶ್ರಾವ ಚಾರೇಣೈವ ಯುಧಿಷ್ಠಿರಃ ॥೨೭॥

ಯಜ್ಞಾಶ್ವವಾದರೂ ಹಸ್ತಿನಾವತಿಯ ಕಡೆಗೆ ಹಿಂದಿರುಗಿತು. ಒಬ್ಬ ಸೇವಕನ ಮೂಲಕ ಯಜ್ಞಾಶ್ವವು ತಿರುಗಿ ಬರುತ್ತಿರುವ ಸಮಾಚಾರವನ್ನು ಯುಧಿಷ್ಠಿರನು ಕೇಳಿಸಿಕೊಂಡನು.

ಶ್ರುತ್ವಾऽರ್ಜುನಂ ಕುಶಲಿನಂ ಸ ಚ ಹೃಷ್ಟಮನಾ ಹ್ಯಭೂತ್ ॥೨೮॥

ಅರ್ಜುನನು ಕುಶಲಿಯಾಗಿ, ಸಂತೋಷಮನಸ್ಕನಾಗಿ ಆಗಮಿಸುತ್ತಿರುವ ವಾರ್ತೆಯನ್ನು ಕೇಳಿಸಿಕೊಂಡನು.

ವಿಜಯಸ್ಯ ಚ ತತ್ ಕರ್ಮ ಗಾಂಧಾರವಿಷಯೇ ತದಾ ।
ಶ್ರುತ್ವಾ ಚಾನ್ಯೇಷು ದೇಶೇಷು ಸ ಸುಪ್ರೀತೋऽಭವನ್ನೃಪಃ ॥೨೯॥

ಅರ್ಜುನನು ಗಾಂಧಾರ ದೇಶದ ರಾಜರ ವಿಷಯದಲ್ಲಿ ನಡೆದುಕೊಂಡ ರೀತಿಯನ್ನೂ, ಬೇರೆ ದೇಶದ ರಾಜರ ವಿಷಯದಲ್ಲಿ ನಡೆದುಕೊಂಡ ಕ್ರಮವನ್ನು ಕೇಳಿಸಿಕೊಂಡು ಯುಧಿಷ್ಠಿರನು ಅತ್ಯಂತ ಸಂತುಷ್ಟನಾದನು.

ಏತಸ್ಮಿನ್ನೇವ ಕಾಲೇ ತು ದ್ವಾದಶೀಂ ಮಾಘಮಾಸಿಕೀಮ್ ।
ಇಷ್ಟಂ ಗೃಹೀತ್ವಾ ನಕ್ಷತ್ರಂ ಧರ್ಮರಾಜೋ ಯುಧಿಷ್ಠಿರಃ ॥೩೦॥

ಸಮಾನಾಯ್ಯ ಮಹಾತೇಜಾಃ ಸರ್ವಾನ್ ಭ್ರಾತೄನ್ ಮಹಾಮನಾಃ ।
ಭೀಮಂ ಚ ನಕುಲಂ ಚೈವ ಸಹದೇವಂ ಚ ಕೌರವಮ್ ॥೩೧॥

ಅರ್ಜುನನು ಆಗಮಿಸುವ ಅಂದು ಮಾಘಮಾಸದ ಶುದ್ಧ ದ್ವಾದಶೀ ಪುಷ್ಯಾ ನಕ್ಷತ್ರದಿಂದ ಕೂಡಿತ್ತು. ಈ ನಕ್ಷತ್ರದಲ್ಲಿಯೇ ಧರ್ಮರಾಜನಾದ ಯುಧಿಷ್ಠಿರನು ತನ್ನ ಸಹೋದರರಾದ ಭೀಮ-ನಕುಲ-ಸಹದೇವರನ್ನು ಕರೆಸಿಕೊಂಡನು.

ಪ್ರೋವಾಚೇದಂ ವಚಃ ಕಾಲೇ ತದಾ ಧರ್ಮಭೃತಾಂ ವರಃ ।
ಆಮಂತ್ರ್ಯ ವದತಾಂ ಶ್ರೇಷ್ಠೋ ಭೀಮಂ ಭೀಮಪರಾಕ್ರಮಮ್ ॥೩೨॥

ತನ್ನ ಸಹೋದರರನ್ನು ಉದ್ದೇಶಿಸಿ ಧರ್ಮರಕ್ಷಕರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ಹೇಳುವ ಮೊದಲು ಶ್ರೇಷ್ಠನಾದ, ಭೀಮಪರಾಕ್ರಮನಾದ ಭೀಮನನ್ನು ಕುರಿತು ಇಂತು ನುಡಿದನು.

ಯುಧಿಷ್ಠಿರಃ

ಆಯಾತಿ ಭೀಮಸೇನಾಸೌ ಸಹಾಶ್ವೇನ ತವಾನುಜಃ ।
ಯಥಾ ಮೇ ಪುರುಷಾಃ ಪ್ರಾಹುರ್ಯೇ ಧನಂಜಯಸಾರಿಣಃ ॥೩೩॥

ಯುಧಿಷ್ಠಿರ– ಭೀಮಸೇನನೇ, ನಿನ್ನ ತಮ್ಮನಾದ ಅರ್ಜುನನು ಯಜ್ಞಾಶ್ವದ ಜೊತೆಯಲ್ಲಿ ಬರುತ್ತಿದ್ದಾನೆಂದು ಅವನ ಜೊತೆಗೆ ಹೋದ ಪುರುಷರು ಮುಂದೆ ಬಂದು ತಿಳಿಸಿರುತ್ತಾರೆ.

ಉಪಸ್ಥಿತಶ್ಚ ಕಾಲೋಽಯಮಭಿತೋ ವರ್ತತೇ ಹಯಃ ।
ಮಾಘೀ ಚ ಪೌರ್ಣಮಾಸೀಯಂ ಮಾಸಃ ಶೇಷೋ ವೃಕೋದರ ॥೩೪॥

ಯಜ್ಞವನ್ನು ಆರಂಭಿಸಬೇಕಾದ ಕಾಲವು ಸನ್ನಿಹಿತವಾಗಿದೆ. ಕುದುರೆಯು ವಿಶ್ವಪರ್ಯಟನೆಯನ್ನು ಮಾಡಿ ನನ್ನ ಸಮೀಪಕ್ಕೆ ಆಗಮಿಸುತ್ತಿದೆ. ಈಗ ಮಾಘಮಾಸದ ಹುಣ್ಣಿಮೆ. ಇನ್ನು ಕೇವಲ ಫಾಲ್ಗುನ ಮಾಸ ಮಾತ್ರವೇ ಉಳಿದುಕೊಂಡಿದೆ.

ಪ್ರಸ್ಥಾಪ್ಯಂತಾಂ ಹಿ ವಿದ್ವಾಂಸೋ ಬ್ರಾಹ್ಮಣಾ ವೇದಪಾರಗಾಃ ।
ವಾಜಿಮೇಧಾರ್ಥಸಿದ್ಧ್ಯರ್ಥಂ ದೇಶಂ ಪಶ್ಯಂತು ಯಾಜ್ಞಿಯಮ್ ॥೩೫॥

ಅಶ್ವಮೇಧ ಯಜ್ಞದ ಸಿದ್ಧಿಗಾಗಿ ಪ್ರಶಸ್ತವಾದ ದೇಶ ಯಾವುದೆಂದು ತಿಳಿಯಲು ವೇದಪಾರಂಗತರಾದ, ವಿದ್ವಾಂಸರಾದ ಬ್ರಾಹ್ಮಣರ ಜೊತೆಗೆ ತೆರಳಿ ನಿಶ್ಚಯಿಸಿರಿ.

ವೈಶಂಪಾಯನಃ

ಇತ್ಯುಕ್ತಃ ಸ ತು ತಚ್ಚಕ್ರೇ ಭೀಮೋ ನೃಪತಿಶಾಸನಮ್ ।
ಹೃಷ್ಟಃ ಶ್ರುತ್ವಾ ನರವರೈರಾಯಾಂತಂ ಸವ್ಯಸಾಚಿನಮ್ ॥೩೬॥

ವೈಶಂಪಾಯನ– ಯುಧಿಷ್ಠಿರನು ಹೀಗೆ ಹೇಳುತ್ತಿರುವುದನ್ನು ಕೇಳಿಸಿಕೊಂಡ ಭೀಮನು ಯಜ್ಞನಿವೇಶನ ಪರೀಕ್ಷೆಗಾಗಿ ಸಂತುಷ್ಟನಾಗಿ ಬ್ರಾಹ್ಮಣರನ್ನು ಕಳುಹಿಸಿಕೊಟ್ಟನು. ಪುರುಷಶ್ರೇಷ್ಠನಾದ ಅರ್ಜುನನು ಆಗಮಿಸುತ್ತಿರುವ ವಾರ್ತೆಯನ್ನು ಕೇಳಿ ಸಂತುಷ್ಟನಾದನು.

ತತೋ ಯಯೌ ಭೀಮಸೇನಃ ಪ್ರಾಜ್ಞೈಃ ಸ್ಥಪತಿಭಿಃ ಸಹ ।
ಬ್ರಾಹ್ಮಣಾನಗ್ರತಃ ಕೃತ್ವಾ ಕುಶಲಾನ್ ಯಜ್ಞಕರ್ಮಸು ॥೩೭॥

ಬಳಿಕ ಭೀಮಸೇನನು ಬುದ್ಧಿವಂತರಾದ ಸ್ಥಪತಿಗಳಿಂದ ಸೇರಿಕೊಂಡು, ಯಜ್ಞಕರ್ಮದಲ್ಲಿ ಕುಶಲರಾದ ಬ್ರಾಹ್ಮಣರನ್ನೂ ಮುಂದೆ ಮಾಡಿಕೊಂಡು ಪಟ್ಟಣದಿಂದ ಹೊರಟನು.

ಯುತಂ ಸಾಲವನಗ್ರಾಮಂ ಸುಪ್ರತೋಲೀವಿಟಂಕಿನಮ್ ।
ಮಾಪಯಾಮಾಸ ಕೌರವ್ಯೋ ಯಜ್ಞವಾಟಂ ಯಥಾವಿಧಿ ॥೩೮॥

ಪ್ರಾಸಾದಶತಸಂಬಾಧಂ ಮಣಿಪ್ರವರಕುಟ್ಟಿಮಮ್ ।
ಸದಃ ಸಪತ್ನೀಸದನಂ ಸಾಗ್ನೀಧ್ರಮಪಿ ಚೋತ್ತರಮ್ ॥೩೯॥

ಕಾರಯಾಮಾಸ ವಿಧಿವನ್ಮಣಿಹೇಮವಿಭೂಷಿತಮ್ ॥೪೦॥

ಭೀಮಸೇನನು ಸಾಲವೃಕ್ಷಗಳ ಸಮೂಹದಿಂದ ಕೂಡಿರುವ ಭೂಪ್ರದೇಶವನ್ನು ಅಳತೆ ಮಾಡಿಸಿದನು. ಅನಂತರ ರಾಜಮಾರ್ಗಗಳಿಂದ ಕೂಡಿ ಸಂಘಟಿತವಾಗಿದ್ದ ಯಜ್ಞಶಾಲೆಯನ್ನು ವಿಧಿಬದ್ಧವಾಗಿ ನಿರ್ಮಾಣ ಮಾಡಿಸಿದನು. ಯಜ್ಞಶಾಲೆಯ ಸುತ್ತಲೂ ನೂರಾರು ಸೌಧಗಳಿದ್ದವು. ನೆಲವು ಶ್ರೇಷ್ಠವಾದ ಮಣಿಗಳಿಂದಲೂ, ರತ್ನಗಳಿಂದಲೂ ಖಚಿತವಾಗಿತ್ತು. ಹೀಗೆ ಅಲಂಕೃತವಾದ ಯಜ್ಞಶಾಲೆಯನ್ನು ಭೀಮಸೇನನು ವಿಧಿಬದ್ಧವಾಗಿ ನಿರ್ಮಿಸಿಸಿದನು. ಅಂತಃಪುರದ ಸ್ತ್ರೀಯರಿಗೂ, ಹಲವು ದೇಶದಿಂದ ಆಗಮಿಸುವ ರಾಜರಿಗೂ, ಯಜ್ಞವನ್ನು ಮಾಡುವ ಬ್ರಾಹ್ಮಣರಿಗೂ ಯೋಗ್ಯವಾದ ಆಲಯಗಳನ್ನು ವಿಧಿವತ್ತಾಗಿ ನಿರ್ಮಿಸಿಸಿದನು. ಪ್ರತಿ ಭವನಗಳು ಶುದ್ಧವಾದ ಸುವರ್ಣದಿಂದ ನಿರ್ಮಿತವಾಗಿದ್ದವು.

ಸ್ತಂಭಾನ್ ಕನಕಚಿತ್ರಾಂಶ್ಚ ತೋರಣಾನಿ ಬೃಹಂತಿ ಚ ।
ಯಜ್ಞಾಯತನದೇಶೇಷು ಸರ್ವೇಷ್ವೇವ ಚ ಕಾಂಚನಮ್ ॥೪೧॥

ಯಜ್ಞಶಾಲೆಯಲ್ಲಿದ್ದ ಸ್ತಂಭಗಳೆಲ್ಲವೂ ಸುವರ್ಣಮಯವಾಗಿದ್ದವು. ಚಿತ್ತಾರದಿಂದ ಕೂಡಿದ್ದವು. ಎಲ್ಲೆಡೆಯೂ ದೊಡ್ಡ ದೊಡ್ಡ ತೋರಣಗಳಿದ್ದವು. ಹೀಗೆ ಯಜ್ಞಶಾಲೆಯು ಅತ್ಯಂತ ಸುಂದರವಾಗಿ ಅಲಂಕೃತವಾಗಿತ್ತು.

ಅಂತಃಪುರಾಣಿ ರಾಜ್ಞಾಂ ಚ ನಾನಾದೇಶನಿವಾಸಿನಾಮ್ ।
ಕಾರಯಾಮಾಸ ಧರ್ಮಾತ್ಮಾ ತತ್ರ ತತ್ರ ಯಥಾವಿಧಿ ॥೪೨॥

ನಾನಾ ದೇಶದ ರಾಜರಿಗೆ ಯೋಗ್ಯವಾದ ಅಂತಃಪುರಗಳನ್ನೂ ಧರ್ಮಾತ್ಮನಾದ ಭೀಮಸೇನನು ವಿಧಿಬದ್ಧವಾಗಿ ನಿರ್ಮಾಣ ಮಾಡಿಸಿದನು.

ಬ್ರಾಹ್ಮಣಾನಾಂ ತು ವೇಶ್ಮಾನಿ ನಾನಾದೇಶಸಮೇಯುಷಾಮ್ ॥೪೩॥

ಬೇರೆ ಬೇರೆ ದೇಶಗಳಿಂದ ಆಗಮಿಸುವ ಬ್ರಾಹ್ಮಣರಿಗೂ ಮನೆಗಳನ್ನು ನಿರ್ಮಾಣ ಮಾಡಿಸಿದನು.

ತಥಾ ಸಂಪ್ರೇಷಯಾಮಾಸ ದೂತಾನ್ ನೃಪತಿಶಾಸನಾತ್ ।
ಭೀಮಸೇನೋ ಮಹಾರಾಜ ರಾಜ್ಞಾಮಕ್ಲಿಷ್ಟಕರ್ಮಣಾಮ್ ॥೪೪॥

ಭೀಮಸೇನನು ರಾಜನ ಆಜ್ಞಾನುಸಾರವಾಗಿ ಸುಲಭವಾಗಿ ಶ್ರೇಷ್ಠ ಕರ್ಮವನ್ನು ಮಾಡುವ ರಾಜರನ್ನು ಆಹ್ವಾನಿಸಲು ಎಲ್ಲ ದೇಶಗಳಿಗೂ ದೂತರನ್ನು ಕಳುಹಿಸಿಕೊಟ್ಟನು.

ತೇ ಪ್ರಿಯಾರ್ಥಂ ಕುರುಪತೇರಾಯಯುರ್ನೃಪಸತ್ತಮಾಃ ।
ರತ್ನಾನ್ಯನೇಕಾನ್ಯಾದಾಯ ಸ್ತ್ರಿಯೋಽಶ್ವಾನಾಯುಧಾನಿ ಚ ॥೪೫॥

ಯುಧಿಷ್ಠಿರನ ಆಹ್ವಾನವನ್ನು ಸ್ವೀಕರಿಸಿದ ರಾಜರು, ಕುರುಪತಿಯಾದ ಯುಧಿಷ್ಠಿರನಿಗೆ ಸಂತೋಷವನ್ನುಂಟು ಮಾಡಲು ಅನೇಕ ವಿಧವಾದ ರತ್ನಗಳನ್ನೂ, ಸ್ತ್ರೀಯರನ್ನೂ, ಕುದುರೆಗಳನ್ನೂ, ಆಯುಧಗಳನ್ನೂ ತೆಗೆದುಕೊಂಡು ಹಸ್ತಿನಾವತಿಗೆ ಆಗಮಿಸಿದರು.

ತೇಷಾಂ ನಿವಸತಾಂ ತೇಷು ಶಿಬಿರೇಷು ಸಹಸ್ರಶಃ ।
ನದತಃ ಸಾಗರಸ್ಯೇವ ಶಬ್ದೋ ದಿವಮಿವಾಸ್ಪೃಶತ್ ॥೪೬॥

ಆಗಮಿಸಿದ ರಾಜರು ತಮಗಾಗಿಯೇ ನಿರ್ಮಿತವಾಗಿದ್ದ ಶಿಬಿರಗಳನ್ನು ಪ್ರವೇಶಿಸಲು ಮಾಡುತ್ತಿದ್ದ ಕೋಲಾಹಲ ಶಬ್ದವು ಸಮುದ್ರದ ಗಂಭೀರ ಗರ್ಜನೆಯಂತೆ ಮುಗಿಲು ಮುಟ್ಟುತ್ತಿತ್ತು.

ಪ್ರತ್ಯುದ್ಗಮ್ಯ ನಮಸ್ಕೃತ್ಯ ಬ್ರಾಹ್ಮಣಾಂಶ್ಚ ನ್ಯವೇದಯತ್ ॥೪೭॥

ತೇಷಾಮಭ್ಯಾಗತಾನಾಂ ಚ ನಾನಾದೇಶನಿವಾಸಿನಾಮ್ ।
ವ್ಯಾದಿದೇಶಾನ್ನಪಾನಾನಿ ಶಯ್ಯಾಶ್ಚಾತೀವಮಾನುಷಾಃ ॥೪೮॥

ಕುಲವರ್ಧನನಾದ ಯುಧಿಷ್ಠಿರನು ಯಜ್ಞನಿಮಿತ್ತದಿಂದ ಆಗಮಿಸಿದ ಅಭ್ಯಾಗತರಾದ ಬ್ರಾಹ್ಮಣರಿಗೆ ಎದ್ದುನಮಸ್ಕರಿಸಿದನು. ನಾನಾ ದೇಶದಿಂದ ಆಗಮಿಸಿದ ರಾಜರನ್ನು ಅತಿಮಾನುಷವಾದ ಅನ್ನ, ಪಾನಾದಿಗಳಿಂದ ಮತ್ತು ಶಯನೀಯ ಹಾಸಿಗೆಗಳಿಂದ ಸತ್ಕರಿಸಿದನು.

ವಾಹನಾನಾಂ ಚ ವಿವಿಧಾಃ ಶಾಲಾಃ ಶಾಲೀಕ್ಷುಗೋರಸೈಃ ।
ಉಪೇತಾಃ ಪುರುಷವ್ಯಾಘ್ರ ವ್ಯಾದಿದೇಶ ಸ ಧರ್ಮರಾಟ್ ॥೪೯॥

ಭರತಶ್ರೇಷ್ಠನಾದ ಧರ್ಮಜನು ಎಲ್ಲ ರಾಜರ ಕುದುರೆ, ಆನೆಗಳಿಗೂ ಧಾನ್ಯದಿಂದ, ಕಬ್ಬಿನಿಂದ ಉಪಚರಿಸಲು ಆದೇಶಿಸಿದನು. ಅವುಗಳಿಗೆ ಸಮೃದ್ಧವಾಗಿ ಆಹಾರದಿಂದ ತುಂಬಿರುವ ಶಾಲೆಗಳನ್ನು ನಿರ್ಮಾಣ ಮಾಡಿಸಿಕೊಟ್ಟನು.

ವರ್ಣಾಃ ಪೃಥಕ್‌ಸನ್ನಿವಿಷ್ಟಾ ಹ್ಯುತ್ತರೋತ್ತರಪೂಜಕಾಃ ।
ತಥಾ ತಸ್ಮಿನ್ ಮಹಾಯಜ್ಞೇ ಧರ್ಮರಾಜಸ್ಯ ಧೀಮತಃ ॥೫೦॥

ಸಮಾಜಗ್ಮುರ್ಮುನಿಗಣಾ ಬಹವೋ ಬ್ರಹ್ಮವಾದಿನಃ ॥೫೧॥

ಧರ್ಮರಾಜನ ಮಹಾಯಾಗಕ್ಕೆ ಬ್ರಹ್ಮವಾದಿಗಳಾದ ಮುನಿಗಳು ಆಗಮಿಸಿದ್ದರು. ಆರಾಧನೆಗೆ ಅರ್ಹರಾದ ಯೋಗ್ಯರಾಜರುಗಳು, ಇತರ ಜಾತಿಯ ವ್ಯಕ್ತಿಗಳು ಆ ಮಹಾಯಜ್ಞಕ್ಕೆ ಆಗಮಿಸಿದ್ದರು.

ಯೇ ಚ ದ್ವಿಜಾತಿಪ್ರವರಾಸ್ತತ್ರಾऽಸನ್ ಪೃಥಿವೀಪತೇ ।
ಸಮಾಜಗ್ಮುಃ ಸಶಿಷ್ಯಾಸ್ತಾನ್ ಪ್ರತಿಜಗ್ರಾಹ ಕೌರವಃ ॥೫೨॥

ಭೂಮಂಡಲದಲ್ಲಿ ಶ್ರೇಷ್ಠರಾದ ಬ್ರಾಹ್ಮಣರೆಲ್ಲರೂ ಆ ಯಜ್ಞಕ್ಕೆ ಆಗಮಿಸಿದ್ದರು. ಶಿಷ್ಯ ಪರಿವಾರ ಸಹಿತರಾಗಿ ಆಗಮಿಸಿರುವ ಬ್ರಾಹ್ಮಣರನ್ನು ಕೌರವನು ಸ್ವಾಗತಿಸಿದನು.

ಸರ್ವಾಂಶ್ಚ ತಾನನುಯಯೌ ಯಾವದಾವಸಥಾಂತಿಕಮ್ ।
ಸ್ವಯಮೇವ ಮಹಾತೇಜಾ ದಂಭಂ ತ್ಯಕ್ತ್ವಾ ಯುಧಿಷ್ಠಿರಃ ॥೫೩॥

ಅವರೆಲ್ಲರೂ ಆಗಮಿಸಿದಾಗ ದಂಭವನ್ನು ಬಿಟ್ಟ ಧರ್ಮಜನು ತಾನೇ ಶಿಬಿರಗಳಿಗೆ ಹೋಗಿ ಸ್ವಾಗತಿಸಿದನು. ಶಿಬಿರಗಳಿಗೆ ಅವರನ್ನು ಅನುಸರಿಸಿ ಹೋಗುತ್ತಿದ್ದನು.

ತತಃ ಕೃತ್ವಾ ಸ್ಥಪತಯಃ ಶಿಲ್ಪಿನೋऽನ್ಯೇ ಚ ತೇ ತದಾ ।
ಕೃತ್ಸ್ನಂ ಯಜ್ಞವಿಧಿಂ ರಾಜನ್ ಧರ್ಮರಾಜ್ಞೇ ನ್ಯವೇದಯನ್ ॥೫೪॥

ಬಳಿಕ ಯಜ್ಞಮಂಟಪದ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದ, ಸ್ಥಪತಿಗಳು, ಇತರ ಶಿಲ್ಪಿಗಳು ಧರ್ಮರಾಜನಿಗೆ ಯಜ್ಞವಿಧಿಯನ್ನು ಕಲ್ಪಿಸುವಂತೆ ಪ್ರಾರ್ಥಿಸಿದರು.

ತಚ್ಛ್ರುತ್ವಾ ಧರ್ಮರಾಜಃ ಸ ಕೃತಂ ಸರ್ವಮನಿಂದಿತಮ್ ।
ಹೃಷ್ಟರೂಪೋऽಭವದ್ ರಾಜಾ ಸಹ ಭ್ರಾತೃಭಿರಚ್ಯುತಃ ॥೫೫॥

ಯಾವ ನ್ಯೂನತೆಯೂ ಇಲ್ಲದೆ ಯಜ್ಞಶಾಲೆಯು ನಿರ್ಮಿತವಾದುದನ್ನು ಕೇಳಿಸಿಕೊಂಡು, ಆಲಸ್ಯರಹಿತನಾದ ಯುಧಿಷ್ಠಿರನು ತನ್ನ ತಮ್ಮಂದಿರ ಜೊತೆಗೂಡಿ ಸಂತೋಷವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಆಶ್ವಸಂಭರಣೇ ಶಾಲಿನಿರ್ಮಾಣಕಥನಂ ನಾಮ
ಷಡಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೦ನೇ ಅಧ್ಯಾಯ

ತತಃ ಸ ಯಜ್ಞೋ ಯದುವೀರರಕ್ಷಿತೋ
ವ್ಯಾಸೋಪದಿಷ್ಟೋ ಮುನಿಭಿಃ ಪ್ರವರ್ತಿತಃ ।
ಅಶೋಭತಾಲಂ ಸಕಲೈರ್ನೃಪೈಶ್ಚ
ಸಮಾಗತೈರ್ವಿಪ್ರವರೈಶ್ಚ ಜುಷ್ಟಃ ॥

ಬಳಿಕ ಆ ಯಜ್ಞವು ಶ್ರೀಕೃಷ್ಣನ ರಕ್ಷಣೆಯಲ್ಲಿ ಮತ್ತು ಶ್ರೀವೇದವ್ಯಾಸರ ನೇತೃತ್ವದಲ್ಲಿ ಮುನಿಗಳಿಂದ ನಡೆಸಲ್ಪಟ್ಟಿತು. ರಾಜರೂ ಎಲ್ಲ ಮುನಿಗಳೂ ಬಂದು ಭಾಗವಹಿಸಿದ್ದರಿಂದ ಯಜ್ಞ ಬಹಳ ಶೋಭಿಸಿತು.

ಸ ಕೃಷ್ಣಯುಗ್ಮೇನ ಚ ಭಾರ್ಗವೇಣ
ತ್ರಿಧಾ ವಿಭಕ್ತೇನ ಪರೇಣ ಪುಂಸಾ ।
ಅಧಿಷ್ಠಿತೋಽಶೋಭತ ವಿಶ್ವಮೇತದ್
ವಿಶ್ವಾದಿರೂಪೇಣ ಯಥೈವ ತೇನ ॥

ಎಲ್ಲ ತೈಜಸ, ಪ್ರಾಜ್ಞರೂಪನಾದ ಹರಿಯಿಂದ ಅಧಿಷ್ಠಿತವಾದ ಲೋಕದಂತೆ ವಾಸಿಷ್ಠ ಕೃಷ್ಣ, ಯಾದವಕೃಷ್ಣ ಎಂಬ ಇಬ್ಬರು ಕೃಷ್ಣರಿಂದ ಮತ್ತು ಪರಶುರಾಮನಿಂದ ಹೀಗೆ ಮೂರಾಗಿ ವಿಭಾಗಗೊಂಡ ಪರಮ ಪುರುಷನಿಂದ ಅಧಿಷ್ಠಿತವಾದ ಆ ಯಜ್ಞವು ಶೋಭಿಸಿತು.

ಯಥಾ ವಿರಿಂಚಸ್ಯ ಪುರಾಽಽಸ ಯಜ್ಞೋ
ಯಥೈವ ಶಕ್ರಸ್ಯ ಶತಕ್ರತುತ್ವೇ ।
ತಥೈವ ಸೋಽಭೂದ್ ವಿಧಿಶರ್ವಶಕ್ರ-
ಪೂರ್ವೈಃ ಸುರೈರಾವಿರಲಂಕೃತೋಽಧಿಕಮ್ ॥

ಹಿಂದೆ ಬ್ರಹ್ಮನ ಯಜ್ಞ ಹೇಗೋ, ಇಂದ್ರ ಶತಕ್ರತುವೆನಿಸುವಾಗ ಅವನ ಯಜ್ಞವು ಹೇಗೋ ಹಾಗೇ ಪಾಂಡವರ ಯಜ್ಞವೂ ಕೂಡ ಬ್ರಹ್ಮ-ರುದ್ರ-ಇಂದ್ರ ಮುಂತಾದ ದೇವತೆಗಳಿಂದ ಪ್ರತ್ಯಕ್ಷವಾಗಿ ಚೆನ್ನಾಗಿ ಅಲಂಕೃತವಾಗಿತ್ತು.

ನ ದೇವಗಂಧರ್ವಮುನಿಸ್ವಧರ್ಮ
ಮತ್ಯಾ೯ದಿಕೇಷ್ವಾಸ ಸ ಯೋಽತ್ರ ನಾಽಸ ।
ಸ್ವಲಂಕೃತೈರ್ನಾಕಿಜನೈಃ ಸಕಾಂತೈ-
ರರೂರುಚನ್ನಾಕವದೇವ ಲೋಕಃ ॥

ದೇವ, ಗಂಧರ್ವ, ಮುನಿ, ಸ್ವಧರ್ಮನಿಷ್ಠರಾದ ಮಾನವರು ಮುಂತಾದವರಲ್ಲಿ ಯಾರೂ ಈ ಯಜ್ಞದಲ್ಲಿ ಭಾಗವಹಿಸದಿದ್ದವನು ಇರಲಿಲ್ಲ. ಒಳ್ಳೆಯ ಅಲಂಕೃತರಾದ, ಪತ್ನೀ ಸಮೇತರಾದ ದೇವತೆಗಳಿಂದ ಈ ಲೋಕವೇ ದೇವಲೋಕದಂತೆ ಶೋಭಿಸಿತು.

ತತ್ರೈವ ತತ್ತಾ ನಿ ಸಸಂಶಯಾನಿ
ನಿಸ್ಸಂಶಯಾನ್ಯಾಸುರಲಂ ವಿವಾದೇ ।
ಪರಸ್ಪರೋತ್ಥೇ ಹರಿಣಾ ತ್ರಿರೂಪಿಣಾ
ಸಂಸ್ಥಾಪಿತಾನ್ಯಗ್ರ್ಯವಚೋಭಿರುಚ್ಚೈಃ ॥

ಆ ಯಾಗಶಾಲೆಯಲ್ಲಿ ಚೆನ್ನಾಗಿ ಪರಸ್ಪರ ತತ್ವವಿಚಾರ ಉಂಟಾದಾಗ ಮೂರು ರೂಪನಾದ ಹರಿ ಉತ್ತಮ ವಚನಗಳಿಂದ ಉತ್ಕೃಷ್ಟವಾಗಿ ತತ್ತ್ವಗಳನ್ನು ಸ್ಥಾಪಿಸಿದನು. ಆಗ ಸಂಶಯಾಸ್ಪದವಾಗಿದ್ದ ಪ್ರಮೇಯಗಳೆಲ್ಲವೂ ಸಂಶಯಮುಕ್ತವಾದವು.

ಪ್ರಗೀತಗಂಧರ್ವವರಃ ಪ್ರನೃತ್ತ-
ಸದಪ್ಸರಾಃ ಸಂತತವಾದಿವಿಪ್ರಃ ।
ವಿವೇಚಯದ್ದೇವನೃಪೌಘ ಏಕೋ
ರರಾಜ ರಾಜಾಽಖಿಲಸತ್ಕ್ರತೂನಾಮ್ ॥

ಶ್ರೇಷ್ಠ ಗಂಧರ್ವರು ಹಾಡಿದರು. ಉತ್ತಮ ಅಪ್ಸರೆಯರು ಕುಣಿದರು. ಮುನಿಗಳು ನಿರಂತರ ತತ್ತ್ವವಿಚಾರ ಮಾಡಿದರು. ದೇವತೆಗಳ ಮತ್ತು ರಾಜರ ಸಮೂಹಗಳು ತಮ್ಮ ತಮ್ಮ ವೈಶಿಷ್ಟ್ಯಗಳನ್ನು ಪ್ರತ್ಯೇಕವಾಗಿ ತೋರಿದುವು. ಹೀಗೆ ಉತ್ತಮ ಯಜ್ಞಗಳಲ್ಲೆಲ್ಲ ಅತ್ಯುತ್ತಮವಾದ ಈ ಯಜ್ಞವು ಶೋಭಿಸಿತು.

ಸಮಸ್ತದೇವ್ಯಃ ಸಹವಾಸುದೇವ್ಯಃ
ಸ್ವಲಂಕೃತಾಃ ಫುಲ್ಲಮುಖಾರವಿಂದಾಃ ।

ವಿಚೇರುರತ್ಯೈವ ಸಹಾಪ್ಸರೋಭಿ-
ರ್ನಿಷೇದುರಪ್ಯಚ್ಯುತಸತ್ಕಥಾರಮಾಃ ॥

ಅರಳಿದ ಮುಖಕಮಲವುಳ್ಳ, ಚೆನ್ನಾಗಿ ಅಲಂಕೃತರಾದ ಎಲ್ಲ ದೇವತಾ ಸ್ತ್ರೀಯರೂ ಕೃಷ್ಣಪತ್ನಿಯರೊಂದಿಗೆ ಮತ್ತು ಅಪ್ಸರೆಯರೊಂದಿಗೆ ಯಾಗಶಾಲೆಯಲ್ಲಿ ಸಂಚರಿಸಿದರು. ಹರಿಯ ಉತ್ತಮ ಕಥೆಗಳಲ್ಲಿ ಆಸಕ್ತರಾಗಿ ಕುಳಿತರು.

ನ ವೈ ಮುಮುಕ್ಷುರ್ನ ಬುಭೂಷುರತ್ರ
ನ ವೈ ಪ್ರಪಿತ್ಸುಶ್ಚ ಕುತೋ ಬುಭುಕ್ಷುಃ ।
ನಾಸತ್ಯಕಾಮಾ ಅಭವನ್ ಕುತಶ್ಚಿತ್
ಪ್ರದಾತರಿ ಪ್ರಾಜ್ಞವರೇಽನಿಲಾತ್ಮಜೇ ॥

ಪ್ರಾಜ್ಞರಲ್ಲಿ ಶ್ರೇಷ್ಠರಾದ ಭೀಮಸೇನನು ಎಲ್ಲವನ್ನೂ ಕೊಡುತ್ತಿದ್ದಾಗ ಮೋಕ್ಷಾರ್ಥಿಯ ಬಯಕೆಯಾಗಲಿ, ಐಶ್ವರ್ಯಾರ್ಥಿಯ ಬಯಕೆಯಾಗಲಿ, ಜ್ಞಾನಾರ್ಥಿಯ ಬಯಕೆಯಾಗಲಿ ಸುಳ್ಳಾದುದಿಲ್ಲ. ಅನ್ನಾರ್ಥಿಯ ಬಯಕೆ ಸುಳ್ಳಾಗುವುದೆಂತು? ಯಾರೊಬ್ಬನ ಬಯಕೆಯೂ ಸುಳ್ಳಾಗಲಿಲ್ಲ.

ದಿನೇ ದಿನೇ ತತ್ರ ಮಹಾನ್ನಪರ್ವತಾಃ
ಸಭಕ್ಷ್ಯಸಾರಾ ರಸವಂತ ಊರ್ಜಿತಾಃ ।
ನದ್ಯಃ ಪಯಃ ಸರ್ಪಿರಜಸ್ರಪೂರ್ಣಾಃ
ಸಮಾಕ್ಷಿಕಾದ್ಯಾ ಅಪಿ ಪಾಯಸಹ್ರದಾಃ ॥

ಹ್ರದಾ ಮಹಾಂತಸ್ತ್ರಿದಶಾದಿಯೋಗ್ಯಾಃ
ಸುಯೋಗಯುಕ್ತಾ ಹರಿಚಂದನಾದೇಃ ।
ತಥಾಽಂಜನಾಲಕ್ತಕಮುಖ್ಯಮಂಡನ-
ದ್ರವ್ಯಾಗ್ಯವಾಪ್ಯೋ ಮಣಿಕಾಂಚನೋದ್ಭವಾಃ ॥

ಯಥೇಷ್ಟಪಾನಾಶನಭೋಗಶಿಷ್ಟಾಃ
ಸಹಸ್ರಶೋ ಮಾರುತಿನಾ ತು ಕಾರಿತಾಃ ।
ಗಂಧಾ ರಸಾದ್ಯಾಶ್ಚ ಸಮಸ್ತಭೋಗಾ
ದಿವೀವ ತತ್ರಾಽಸುರತೀವ ಹೃದ್ಯಾಃ ॥

ಪ್ರತಿದಿನವೂ ಅಲ್ಲಿ ರಸಭರಿತವಾದ ಉತ್ತಮ ಅನ್ನದ ದೊಡ್ಡ ಬೆಟ್ಟಗಳು, ಭಕ್ಷ್ಯ ವಿಶೇಷಗಳು, ಜೇನು ಹಾಲು ತುಪ್ಪ ಮುಂತಾದವುಗಳಿಂದ ತುಂಬಿ ಹರಿಯುವ ನದಿಗಳು, ಪಾಯಸದ ಮಡುಹುಗಳು, ಪರಿಮಳದ್ರವ್ಯಯುಕ್ತವಾದ ದೇವಾದಿಯೋಗ್ಯ ಶ್ರೀಗಂಧಾದಿಗಳು ನಿರ್ಮಿತವಾದ ದೊಡ್ಡ ಬಾವಿಗಳು, ಯಥೇಷ್ಟಪಾನ-ಭೋಜನ ಯೋಗ್ಯ ಭೋಗವಸ್ತುಗಳಿಂದ ಕೂಡಿದ ಉತ್ತಮವೆನಿಸಿದ ಗಂಧಗಳು, ರಸ ಮುಂತಾದ ಸಮಸ್ತ ಭೋಗಗಳು, ಇವೆಲ್ಲವನ್ನೂ ಸಹಸ್ರಾರು ಸಂಖ್ಯೆಯಲ್ಲಿ ಭೀಮಸೇನನು ಸಿದ್ಧಪಡಿಸಿದ್ದನು. ದೇವಲೋಕದಲ್ಲಿ ಹೇಗೋ ಹಾಗೆ ಆ ಯಾಗಶಾಲೆಯಲ್ಲಿ ಅವು ಮನೋಹರವಾಗಿ ಕಂಗೊಳಿಸಿದವು.

ನೈತಾದೃಶಃ ಕಶ್ಚನ ಭೂತಪೂರ್ವೋ
ಮಖೋ ವಿನಾ ರಾಮವಿರಿಂಚವಜ್ರಿಣಾಮ್ ।
ಮಖಾನಿತಿ ಪ್ರೋಚುರಲೇಷಲೋಕಾ
ದೃಷ್ಟ್ವಾ ಮಖಂ ತಂ ಪುರುಷೋತ್ತಮೇರಿತಮ್ ॥

ಶ್ರೀಹರಿಯಿಂದ ನಡೆಸಲ್ಪಟ್ಟ ಆ ಯಜ್ಞವನ್ನು ಕಂಡು ಎಲ್ಲರೂ ಹೇಳಿಕೊಂಡರು. 'ಶ್ರೀರಾಮನ, ಚತುರ್ಮುಖನ, ಇಂದ್ರನ ಯಜ್ಞಗಳ ಹೊರತು ಇಂಥ ಯಜ್ಞ ಬೇರೆ ಯಾವುದೂ ಹಿಂದೆ ನಡೆದಿರಲಿಲ್ಲ.

ಸ ಏವಮದ್ಧಾ ಹರಿದೈವತಃ ಕ್ರತುಃ
ಪಂಚಾಶ್ವಮೇಧಾತ್ಮಕ ಉಚ್ಚಕಲ್ಪಃ ।
ದಿನೇ ದಿನೇ ಸ್ವರ್ದ್ಧಗುಣೋ ಬಭೂವ
ಮುದಾವಹೋ ವತ್ಸರಪಂಚಕತ್ರಯಮ್ ॥

ದಿನೇ ದಿನೇ ಹೆಚ್ಚು ಹೆಚ್ಚು ಗುಣಗಳಿಂದ ಕೂಡಿ, ಉತ್ತಮ ಕಲ್ಪದ ಐದು ಅಶ್ವಮೇಧ ರೂಪವಾಗಿ ಹದಿನೈದು ವರ್ಷಪರ್ಯಂತ ಆ ವಿಷ್ಣುದೇವತಾಕವಾದ ಯಜ್ಞ ಚೆನ್ನಾಗಿ ಸಂತೋಷದಾಯಕವಾಗಿ ನಡೆಯಿತು.

ಯಜ್ಞಾವಸಾನೇ ನಿಖಿಲಾಶ್ಚ ಪಾಂಡವಾಃ
ಕೃಷ್ಣಾ ಚ ಪೃಥ್ವೀಮಖಿಲಾಂ ಸವಿತ್ತಾಮ್ ।

ಮಾಂಗಲ್ಯಮಿತ್ರೇ ದಯಿತಾಶರೀರೇ
ನಿಧಾಯ ಸರ್ವಾಭರಣಾನಿ ಚೈವ ॥

ಸಮರ್ಪಯಾಮಾಸುರಜೇ ವರೇಣ್ಯೇ
ವ್ಯಾಸೇ ವಿಭಾಗಾಯ ಯಥೋಕ್ತಮೃತ್ವಿಜಾಮ್ ।
ಪ್ರಿಯೋ ವಿಭಾಗೋ ಯದಮುಷ್ಯ ವಿಷ್ಣೋ-
ರತೋ ವಿಭಾಗಾರ್ಹಮಿವಾರ್ಪಯಂಸ್ತೇ ॥

ಹೃದಾ ಸಮಸ್ತಂ ಹರಯೇಽರ್ಪಿತಂ ತೈಃ
ಸ ಹಿ ದ್ವಿಜಸ್ಥೋಽಪಿ ಸಮಸ್ತಕರ್ತಾ ।
ದೇಹೇಂದ್ರಿಯಪ್ರಾಣಮನಾಂಸಿ ಚೇತನೈಃ
ಸಹೈವ ತಸ್ಮಾ ಅತಿಸೃಜ್ಯ ನೇಮುಃ ॥

ತ್ವದೀಯಮೇತನ್ನಿಖಿಲಂ ವಯಂ ಚ
ನಾಸ್ಮದೀಯಂ ಕ್ವ ಚ ಕಿಂಚಿನೇಶ ।
ಸ್ವತಂತ್ರ ಏಕೋಽಸಿ ನ ಕಶ್ಚಿದನ್ಯಃ
ಸರ್ವತ್ರ ಪೂರ್ಣೋಽಸಿ ಸದೇತಿ ಹೃಷ್ಟಾಃ ॥

ಯಾಗದ ಕೊನೆಯಲ್ಲಿ ಎಲ್ಲ ಪಾಂಡವರೂ ದ್ರೌಪದಿಯೂ ಕೋಶ ಸ
ಮಸ್ತ ಪೃಥಿವಿಯನ್ನೂ, ಪತ್ನಿಯರ ಮೈಯಲ್ಲಿ ಮಾಂಗಲ್ಯ ಒಂದನ್ನು
ಭರಣಗಳನ್ನೂ ಸರ್ವೋತ್ತಮರಾದ ವೇದವ್ಯಾಸರಲ್ಲಿ ಋತ್ವಿಜರಿಗೆ ವಿ
ಭಾಗ ಮಾಡಿಕೊಡುವುದಕ್ಕಾಗಿ ಸಮರ್ಪಿಸಿದಂತೆ ತೋರಿಕೊಂಡರು. ಏ
ೇದವ್ಯಾಸರೂಪಿ ಹರಿಗೆ ವಿಭಾಗ ಮಾಡುವುದು ಇಷ್ಟವಾನೆ? ವಸ್ತುತಃ ಆ
ಲ್ಲ ಋತ್ವಿಜರಲ್ಲಿದ್ದು ಎಲ್ಲ ಋತ್ವಿಜರ ಕರ್ಮವನ್ನೂ ಮಾಡುವವನಾದ್ದರಿಂದ
ಲ್ಲವನ್ನೂ ಮನಸ್ಸಿನಿಂದ ಅರ್ಪಿಸಿದರು. ಅವರು ಹೇಳಿದರು, 'ಪ್ರಭುವೇ,
ತ್ತದೇ. ನಾವೂ ನಿನ್ನವರೆ. ನಮ್ಮದು ಎಂದು ಏನೂ ಎಲ್ಲಿಯೂ ಇಲ್ಲ. ನಿ
ತಂತ್ರ. ಬೇರೆ ಯಾರೂ ಅಲ್ಲ. ನೀನೇ ಎಲ್ಲ ಕಡೆ ಯಾವಾಗಲೂ
ರ್ಣಪೂರ್ಣನಾಗಿರುವೆ' ಹೀಗೆ ಹೇಳುತ್ತ ಚೇತನಗಳೊಂದಿಗೆ ದೇಹ, ಇ
ಯ, ಮನಸ್ಸುಗಳನ್ನೂ ಹರಿಗೆ ಅರ್ಪಿಸಿ ಸಂತುಷ್ಟರಾಗಿ ನಮಿಸಿದರು.

ಪ್ರತಿದಿನವೂ ಅಲ್ಲಿ ರಸಭರಿತವಾದ ಉತ್ತಮ ಅನ್ನದ ದೊಡ್ಡ ಬೆಟ್ಟಗಳು, ಭಕ್ಷ್ಯ ವಿಶೇಷಗಳು, ಜೇನು ಹಾಲು ತುಪ್ಪ ಮುಂತಾದವುಗಳಿಂದ ತುಂಬಿ ಹರಿಯುವ ನದಿಗಳು, ಪಾಯಸದ ಮಡುಹುಗಳು, ಪರಿಮಳದ್ರವ್ಯಯುಕ್ತವಾದ ದೇವಾದಿಯೋಗ್ಯ ಶ್ರೀಗಂಧಾದಿಗಳು ನಿರ್ಮಿತವಾದ ದೊಡ್ಡ ಬಾವಿಗಳು, ಯಥೇಷ್ಟ ಪಾನ-ಭೋಜನ ಯೋಗ್ಯ ಭೋಗವಸ್ತುಗಳಿಂದ ಕೂಡಿದ ಉತ್ತಮವೆನಿಸಿದ ಗಂಧಗಳು, ರಸ ಮುಂತಾದ ಸಮಸ್ತ ಭೋಗಗಳು, ಇವೆಲ್ಲವನ್ನೂ ಸಹಸ್ರಾರು ಸಂಖ್ಯೆಯಲ್ಲಿ ಭೀಮಸೇನನು ಸಿದ್ಧಪಡಿಸಿದ್ದನು. ದೇವಲೋಕದಲ್ಲಿ ಹೇಗೋ ಹಾಗೆ ಆ ಯಾಗಶಾಲೆಯಲ್ಲಿ ಅವು ಮನೋಹರವಾಗಿ ಕಂಗೊಳಿಸಿದವು.

ನೈತಾದೃಶಃ ಕಶ್ಚನ ಭೂತಪೂರ್ವೋ
ಮಖೋ ವಿನಾ ರಾಮವಿರಿಂಚವಜ್ರಿಣಾಮ್ ।
ಮಖಾನಿತಿ ಪ್ರೋಚುರಲೇಷಲೋಕಾ
ದೃಷ್ಟ್ವಾ ಮಖಂ ತಂ ಪುರುಷೋತ್ತಮೇರಿತಮ್ ॥

ಶ್ರೀಹರಿಯಿಂದ ನಡೆಸಲ್ಪಟ್ಟ ಆ ಯಜ್ಞವನ್ನು ಕಂಡು ಎಲ್ಲರೂ ಹೇಳಿಕೊಂಡರು. 'ಶ್ರೀರಾಮನ, ಚತುರ್ಮುಖನ, ಇಂದ್ರನ ಯಜ್ಞಗಳ ಹೊರತು ಇಂಥ ಯಜ್ಞ ಬೇರೆ ಯಾವುದೂ ಹಿಂದೆ ನಡೆದಿರಲಿಲ್ಲ.

ಸ ಏವಮದ್ಧಾ ಹರಿದೈವತಃ ಕ್ರತುಃ
ಪಂಚಾಶ್ವಮೇಧಾತ್ಮಕ ಉಚ್ಚಕಲ್ಪಃ ।
ದಿನೇ ದಿನೇ ಸ್ಫೂರ್ದ್ಧಗುಣೋ ಬಭೂವ
ಮುದಾವಹೋ ವತ್ಸರಪಂಚಕತ್ರಯಮ್ ॥

ದಿನೇ ದಿನೇ ಹೆಚ್ಚು ಹೆಚ್ಚು ಗುಣಗಳಿಂದ ಕೂಡಿ, ಉತ್ತಮ ಕಲ್ಪದ ಐದು ಅಶ್ವಮೇಧ ರೂಪವಾಗಿ ಹದಿನೈದು ವರ್ಷಪರ್ಯಂತ ಆ ವಿಷ್ಣುದೇವತಾಕವಾದ ಯಜ್ಞ ಚೆನ್ನಾಗಿ ಸಂತೋಷದಾಯಕವಾಗಿ ನಡೆಯಿತು.

ಯಜ್ಞಾವಸಾನೇ ನಿಖಿಲಾಶ್ಚ ಪಾಂಡವಾಃ
ಕೃಷ್ಣಾ ಚ ಪೃಥ್ವೀಮಖಿಲಾಂ ಸವಿತ್ತಾಮ್ ।

ಮಾಂಗಲ್ಯಮಾತ್ರಂ ದಯಿತಾಶರೀರೇ
ನಿಧಾಯ ಸರ್ವಾಭರಣಾನಿ ಚೈವ ॥

ಸಮರ್ಪಯಾಮಾಸುರಜೇ ವರೇಣ್ಯೇ
ವ್ಯಾಸೇ ವಿಭಾಗಾಯ ಯಥೋಕ್ತಮೃತ್ವಿಜಾಮ್ ।
ಪ್ರಿಯೋ ವಿಭಾಗೋ ಯದಮುಷ್ಯ ವಿಷ್ಣೋ-
ರತೋ ವಿಭಾಗಾರ್ಥಮಿವಾರ್ಪಯಂಸ್ತೇ ॥

ಹೃದಾ ಸಮಸ್ತಂ ಹರಯೇಽರ್ಪಿತಂ ತೈಃ
ಸ ಹಿ ದ್ವಿಜಸ್ಥೋಽಪಿ ಸಮಸ್ತಕರ್ತಾ ।
ದೇಹೇಂದ್ರಿಯಪ್ರಾಣಮನಾಂಸಿ ಚೇತನೈಃ
ಸಹೈವ ತಸ್ಮಾ ಅತಿಸೃಜ್ಯ ನೇಮುಃ ॥

ತ್ವದೀಯಮೇತನ್ನಿಖಿಲಂ ವಯಂ ಚ
ನಾಸ್ಯಸ್ಮದೀಯಂ ಕ್ವ ಚ ಕಿಂಚಿನೇಶ ।
ಸ್ವತಂತ್ರ ಏಕೋಽಸಿ ನ ಕಶ್ಚಿದನ್ಯಃ
ಸರ್ವತ್ರ ಪೂರ್ಣೋಽಸಿ ಸದೇತಿ ಹೃಷ್ಟಾಃ ॥

ಯಾಗದ ಕೊನೆಯಲ್ಲಿ ಎಲ್ಲ ಪಾಂಡವರೂ ದ್ರೌಪದಿಯೂ ಕೋಶ ಸಮೇತವಾಗಿ ಸಮಸ್ತ ಪೃಥಿವಿಯನ್ನೂ, ಪತ್ನಿಯರ ಮೈಯಲ್ಲಿ ಮಾಂಗಲ್ಯ ಒಂದನ್ನುಳಿದು ಎಲ್ಲ ಆಭರಣಗಳನ್ನೂ ಸರ್ವೋತ್ತಮರಾದ ವೇದವ್ಯಾಸರಲ್ಲಿ ಋತ್ವಿಜರಿಗೆ ವಿಧ್ಯುಕ್ತವಾಗಿ ವಿಭಾಗ ಮಾಡಿಕೊಡುವುದಕ್ಕಾಗಿ ಸಮರ್ಪಿಸಿದಂತೆ ತೋರಿಕೊಂಡರು. ಏಕೆಂದರೆ ಈ ವೇದವ್ಯಾಸರೂಪಿ ಹರಿಗೆ ವಿಭಾಗ ಮಾಡುವುದು ಇಷ್ಟವಾನೆ? ವಸ್ತುತಃ ಆ ಹರಿಯೇ ಎಲ್ಲ ಋತ್ವಿಜರಲ್ಲಿದ್ದು ಎಲ್ಲ ಋತ್ವಿಜರ ಕರ್ಮವನ್ನೂ ಮಾಡುವವನಾದ್ದರಿಂದ ಅವನಿಗೇ ಎಲ್ಲವನ್ನೂ ಮನಸ್ಸಿನಿಂದ ಅರ್ಪಿಸಿದರು. ಅವರು ಹೇಳಿದರು, 'ಪ್ರಭುವೇ, ಇದೆಲ್ಲವೂ ನಿನ್ನದೇ. ನಾವೂ ನಿನ್ನವರೆ. ನಮ್ಮದು ಎಂದು ಏನೂ ಎಲ್ಲಿಯೂ ಇಲ್ಲ. ನೀನೊಬ್ಬನೇ ಸ್ವತಂತ್ರ. ಬೇರೆ ಯಾರೂ ಅಲ್ಲ. ನೀನೇ ಎಲ್ಲ ಕಡೆ ಯಾವಾಗಲೂ ಸಕಲ ಗುಣಪೂರ್ಣನಾಗಿರುವೆ' ಹೀಗೆ ಹೇಳುತ್ತ ಚೇತನಗಳೊಂದಿಗೆ ದೇಹ, ಇಂದ್ರಿಯ, ಪ್ರಾಣ, ಮನಸ್ಸುಗಳನ್ನೂ ಹರಿಗೆ ಅರ್ಪಿಸಿ ಸಂತುಷ್ಟರಾಗಿ ನಮಿಸಿದರು.

ತತೋ ವಿಭಕ್ತೇ ಮುನಯೋಽವದಂಸ್ತೇ
ಪ್ರತ್ಯರ್ಪಯಾಮೋ ವಯಮೇಷು ರಾಜ್ಯಮ್ ।
ಪೂರ್ಣಾ ಹಿರಣ್ಯೇನ ವಯಂ ಧರಾಯಾಃ
ಪ್ರಪಾಲನೇ ಯೋಗ್ಯತಮಾ ಇಮೇ ಹಿ ॥

ಋತ್ವಿಜರಿಗೆ ದಕ್ಷಿಣೆಯನ್ನು ವಿಭಾಗ ಮಾಡಿದಾಗ ಅವರು ಹೇಳಿದರು: ನಾವು ರಾಜ್ಯವನ್ನು ಪಾಂಡವರಿಗೇ ಹಿಂತಿರುಗಿ ಕೊಡುತ್ತೇವೆ. ಏಕೆಂದರೆ ಭೂಮಿಯನ್ನು ಆಳುವುದಕ್ಕೆ ಅವರೇ ಯೋಗ್ಯರು. ನಾವು ಸುವರ್ಣದಿಂದಲೇ ತೃಪ್ತರಾಗಿದ್ದೇವೆ.

ಪಾರ್ಥಾಃ ಸಭಾರ್ಯಾಃ ದ್ವಿಜವಾಕ್ಯಮೇತ-
ನ್ನಿಶಮ್ಯ ಕೃಷ್ಣಾಯ ಪುನಃ ಪ್ರಣಮ್ಯ ।
ಊಚುಸ್ತಪೋ ನೋಽಸ್ತು ವನೇಽರ್ಪಯಿತ್ವಾ
ರಾಜ್ಯಂ ಮಖಾಂತೇ ತ್ವಯಿ ಧರ್ಮಲಬ್ಧಮ್ ॥

ಸಪತ್ನೀಕರಾದ ಪಾಂಡವರು ಮುನಿಗಳ ಈ ಮಾತನ್ನು ಕೇಳಿ ವೇದವ್ಯಾಸರಿಗೆ ಪುನಃ ನಮಿಸಿ ಹೇಳಿದರು- ನಾವು ಧರ್ಮದಿಂದ ಗಳಿಸಿದ ಈ ರಾಜ್ಯವನ್ನು ಯಾಗದ ಕೊನೆಯಲ್ಲಿ ನಿಮಗೇ ಅರ್ಪಿಸಿ ಕಾಡಿಗೇ ಹೋಗುವೆವು. ನಮಗೆ ಆ ಕಾಡಿನಲ್ಲಿ ತಪಸ್ಸೇ ಇರಲಿ'.

ಇತೀರಿತಃ ಪ್ರಾಹ ಸ ಬಾದರಾಯಣೋ
ಮುನೀಶ್ವರೈರಪ್ಯನುಯಾಚಿತಃ ಪ್ರಭುಃ ।
ಹಿರಣ್ಯಮೇವ ಸ್ವಮಿದಂ ಮುನೀನಾಂ
ಮದಾಜ್ಞಯಾ ಭುಗ್ಧ್ವಮಶೇಷರಾಜ್ಯಮ್ ॥

ಪಾಂಡವರು ಹೀಗೆ ಹೇಳಿದಾಗ ಪ್ರಭು ಬಾದರಾಯಣರು ಮುನೀಶ್ವರರಿಂದ ಪ್ರಾರ್ಥಿತರಾಗಿ ನುಡಿದರು: 'ಮುನಿಗಳಿಗೆ ಈ ಸುವರ್ಣ ಸಂಪತ್ತೇ ಇರಲಿ. ನನ್ನಾಜ್ಞೆಯಿಂದ ನೀವೇ ಸಮಸ್ತ ರಾಜ್ಯವನ್ನು ಭೋಗಿಸಿರಿ'.

ಸಮರ್ಪಿತಂ ಮೇ ಫಲವಚ್ಚ ತತ್ ಸ್ಯಾತ್
ಪುನರ್ಗ್ರಹೋ ನೈವ ಚ ದೋಷಕಾರೀ ।

ಪಿತಾಮಹೋಽಹಂ ಭವತಾಂ ವಿಶೇಷತೋ
ಗುರುಃ ಪತಿಶ್ಚೈವ ತತೋ ಮದರ್ಹಥ ॥

ಆಗ ನನಗೆ ನೀವು ಎಲ್ಲವನ್ನೂ ಸಮರ್ಪಿಸಿದುದು ಸಫಲವಾಗುವುದು. ಒಮ್ಮೆ ಸಮರ್ಪಿಸಿದ್ದನ್ನು ಪುನಃ ತಮಗಾಗಿ ಸ್ವೀಕರಿಸಿದರೂ ನಿಮಗೆ ಅದು ದತ್ತಾಪಹಾರ ದೋಷಕ್ಕೆ ಕಾರಣವಾಗದು. ಏಕೆಂದರೆ ನಾನು ನಿಮಗೆ ತಾತ. ವಿಶೇಷವಾಗಿ ಗುರು ಮತ್ತು ಸ್ವಾಮಿ. ಅದರಿಂದ ನೀವು ನನ್ನಿಂದ ರಾಜ್ಯವನ್ನು ಪಡೆಯಲು ಅರ್ಹರಾಗಿರುವಿರಿ.

ಇತೀರಿತಾಸ್ತೇ ಪ್ರತಿಪದ್ಯ ರಾಜ್ಯಂ
ದದುರ್ಹಿರಣ್ಯಂ ನಿಖಿಲಂ ಚ ತಸ್ಮೈ ।
ವಿಭಜ್ಯ ವಿಪ್ರಾನ್ ಸ ನಿಜಂ ತು ಭಾಗ-
ಮದಾತ್ ಪೃಥಾಯೈ ನಿಖಿಲಂ ಪ್ರಸನ್ನಃ ॥

ವೇದವ್ಯಾಸರು ಹೀಗೆ ಹೇಳಿದಾಗ ಪಾಂಡವರು ರಾಜ್ಯವನ್ನು ಸ್ವೀಕರಿಸಿ ಎಲ್ಲ ಸುವರ್ಣವನ್ನು ಅವರಿಗೆ ನೀಡಿದರು. ಅವರು ಅದನ್ನು ಋತ್ವಿಜರಿಗೆ ಹಂಚಿದರು. ವೇದವ್ಯಾಸರು ತಮಗೆ ಸಂದ ಭಾಗವೆಲ್ಲವನ್ನೂ ಪ್ರಸನ್ನರಾಗಿ ಕುಂತಿಗೆ ಕೊಟ್ಟರು.

ಸಭಾರ್ಯಕಾಣಾಂ ವರರತ್ನಭೂಷಣಾ-
ನ್ಯಶೇಷತಃ ಪುತ್ರಭುವಾಂ ಪ್ರದಾಯ ।
ಪೃಥಕ್‌ಪೃಥಗ್ ಯೋಗ್ಯವರಾನಥೈಭ್ಯಃ
ಪ್ರಾದಾತ್ ಪ್ರಭುಸ್ತೇ ಮುದಿತಾಃ ಪ್ರಣೇಮುಃ ॥

ಪ್ರಭು ವೇದವ್ಯಾಸರು ಪಾಂಡವರಿಗೂ ಅವರ ಪತ್ನಿಯರಿಗೂ ಎಲ್ಲ ಉತ್ತಮ ರತ್ನಾಭರಣಗಳನ್ನು ಕೊಟ್ಟು ಪ್ರತ್ಯೇಕ ಪ್ರತ್ಯೇಕವಾಗಿ ಅವರಿಗೆ ಯೋಗ್ಯವಾದ ವರಗಳನ್ನು ನೀಡಿದರು. ಸಂತುಷ್ಟರಾದ ಪಾಂಡವರು ವ್ಯಾಸರನ್ನು ನಮಿಸಿದರು.

ತದ್ಯಜ್ಞಪಂಚಕಮಜಸ್ರಿಗುಣಾಂ ಸ ಏಭ್ಯಃ
ಸದ್ದಕ್ಷಿಣಾಂ ಕ್ರತುಪತಿರ್ನಿಖಿಲಾಮವಾಪ್ಯ ।
ಚಕ್ರೇಽಶ್ವಮೇಧತ್ರಯಮೇಕಮೇಕಂ
ತೇಷಾಂ ಹರಿರ್ಬಹುಸುವರ್ಣಕನಾಮಧೇಯಮ್ ॥

ಯಜ್ಞೇಶ್ವರರಾದ ವೇದವ್ಯಾಸರು 'ಬಹುಸುವರ್ಣಕ' ನಾಮಕವಾದ ಐದು ಯಜ್ಞಗಳನ್ನೂ, ಅವುಗಳಿಂದ ಮೂರುಪಾಲು ಉತ್ತಮ ದಕ್ಷಿಣೆಯನ್ನೂ ಪಡೆದು, ಅವುಗಳನ್ನು ಒಂದೊಂದನ್ನೂ ಮೂರು ಅಶ್ವಮೇಧಗಳಾಗುವಂತೆ ಮಾಡಿದರು.

★ ★ ★ ★ ★

ಎಂಬತ್ತೇಳನೆಯ ಅಧ್ಯಾಯ

ಅಶ್ವಮೇಧ ಯಾಗದ ಸಂದಿಗ್ಧಿಯ ವರ್ಣನೆ.

ವೈಶಂಪಾಯನಃ

ತಸ್ಮಿನ್ ಯಜ್ಞೇ ಪ್ರವೃತ್ತೇ ತು ವಾಗ್ಮಿನೋ ಹೇತುವಾದಿನಃ ।
ಹೇತುವಾದಾನ್ ಬಹೂನ್ ಪ್ರಾಹುಃ ಪರಸ್ಪರಜಿಗೀಷವಃ ॥೧॥

ವೈಶಂಪಾಯನ– ಯುಧಿಷ್ಠಿರನ ಮಹಾಯಜ್ಞವನ್ನು ಆರಂಭಿಸಲು ಬಂದಿರುವ ವಾಗ್ಮಿಗಳಾದ ಹೇತುವಾದಿಗಳು ಎದುರಾಳಿಗಳನ್ನು ಜಯಿಸುವ ದೃಷ್ಟಿಯಿಂದ ಅನೇಕ ರೀತಿಯಾದ ಯುಕ್ತಿಬದ್ಧವಾದ ವಾದಗಳನ್ನು ಹೇಳುತ್ತಿದ್ದರು.

ದದೃಶುಸ್ತಂ ನೃಪತಯೋ ಯಜ್ಞಸ್ಯ ವಿಧಿಮುತ್ತಮಮ್ ।
ದೇವೇಂದ್ರಸ್ಯೇವ ವಿಹಿತಂ ಭೀಮೇನ ಕುರುನಂದನ ॥೨॥

ಯಜ್ಞ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದ್ದ ರಾಜರೆಲ್ಲರೂ ಭೀಮಸೇನನಿಂದ ನಿರ್ಮಿತವಾಗಿದ್ದ ಯಜ್ಞಶಾಲೆಯ ಸೌಂದರ್ಯವನ್ನು ಇಂದ್ರನ ಯಜ್ಞಶಾಲೆಗೆ ಸದೃಶವನ್ನಾಗಿ ನೋಡಿದರು. ಉತ್ತಮವಾದ ವಿಧಿ-ವಿಧಾನಗಳಿಂದ ಆ ಯಜ್ಞವು ಕೂಡಿತ್ತು.

ದದೃಶುಸ್ತೋರಣಾನ್ಯತ್ರ ಶಾತಕುಂಭಮಯಾನಿ ತೇ ।
ಶಯ್ಯಾಸನವಿಹಾರಾಂಶ್ಚ ಸುಬಹೂನ್ ರತ್ನಭೂಷಿತಾನ್ ॥೩॥

ಆ ಯಜ್ಞಶಾಲೆಯ ಸುತ್ತಲೂ ಬಂಗಾರಮಯವಾದ ತೋರಣಗಳು ಹಾರಾಡುತ್ತಿದ್ದವು. ಹಂಸತೂಲಿಕಾತಲ್ಪಗಳನ್ನೂ, ರತ್ನಖಚಿತವಾದ ಸಿಂಹಾಸನಗಳನ್ನೂ, ರಮಣೀಯವಾದ ವಿಹಾರಸ್ಥಾನಗಳನ್ನೂ, ಅನೇಕ ರತ್ನರಾಶಿಗಳನ್ನೂ ಆಗಮಿಸಿರುವ ರಾಜರೆಲ್ಲರೂ ನೋಡುತ್ತಿದ್ದರು.

ಘಟಾನ್ ಪಾತ್ರೀಃ ಕಟಾಹಾನಿ ಕಲಶಾನ್ ವರ್ಧಮಾನಕಾನ್ ।
ನ ತೇ ಕಿಂಚಿದಸೌವರ್ಣಮಪಶ್ಯಂಸ್ತತ್ರ ಪಾರ್ಥಿವಾಃ ॥೪॥

ಕೊಡಗಳು, ಪಾತ್ರೆಗಳು, ಕಡಾಯಿಗಳು, ಕಲಶಗಳು, ಶರಾವಗಳು (ಮೊರಗಳು), ದೊಡ್ಡ ದೊಡ್ಡ ಆಕಾರದಿಂದ ಕೂಡಿದವಾಗಿದ್ದವು. ಈ ಯಾವ ಪದಾರ್ಥಗಳೂ ಚಿನ್ನ ಬಿಟ್ಟು ಬೇರೆ ಪದಾರ್ಥಗಳಿಂದ ರಚಿಸಿದವಾಗಿರಲಿಲ್ಲ. ಇಂತಹ ಪದಾರ್ಥಗಳನ್ನು ಕಂಡು ರಾಜರೆಲ್ಲರೂ ಆಶ್ಚರ್ಯಚಕಿತರಾದರು.

ಯೂಪಾಂಶ್ಚ ಶಾಸ್ತ್ರವಿಹಿತಾನ್ ತಾರವಾನ್ ಹೇಮಭೂಷಿತಾನ್ ।
ಉಪಕ್ಲೃಪ್ತಾನ್ ಯಥಾಕಾಲಂ ವಿಧಿವದ್ ಭೂರಿವರ್ಚಸಃ ॥೫॥

ಆ ಯಜ್ಞದ ಮಂಟಪದಲ್ಲಿ ಖದಿರ ಮೊದಲಾದ ಮರಗಳಿಂದ ಶಾಸ್ತ್ರಬದ್ಧವಾಗಿ ನಿರ್ಮಿತವಾದ ಬಂಗಾರದಿಂದ ಅಲಂಕೃತವಾದ ಯೂಪಗಳು ಇದ್ದವು. ಯಜ್ಞಕ್ಕೆ ಸಂಬಂಧಪಟ್ಟ ಯೂಪವೇ ಮೊದಲಾದ ಸಲಕರಣೆಗಳು ಯಾವ ಯಾವ ಮರಗಳಿಂದ, ಯಾವ ಯಾವ ಕಾಲದಲ್ಲಿ ವಿಧಿಬದ್ಧವಾಗಿ ನಿರ್ಮಿಸಬೇಕೋ ಆ ಕ್ರಮಕ್ಕನುಗುಣವಾಗಿ ನಿರ್ಮಿಸಲ್ಪಟ್ಟಿದ್ದವು. ಅಂತಹ ಯೂಪಸ್ತಂಭಗಳನ್ನು ಶ್ರೇಷ್ಠರಾದ ರಾಜರು ಕಂಡು ವಿಸ್ಮಿತರಾದರು.

ಸ್ಥಲಜಾ ಜಲಜಾ ಯೇ ಚ ಪಶವೋ ಯೇ ಚ ಸಂಭೃತಾಃ ।
ಸರ್ವಾನೇವ ಸಮಾನೀತಾನ್ ತಾನಪಶ್ಯಂತ ಭೂಮಿಪಾಃ ॥೬॥

ಭೂಮಿಯ ಮೇಲೆ ಸಂಚರಿಸುವ, ನೀರಿನಲ್ಲಿ ಸಂಚರಿಸುವ ಯಾವ ಯಾವ ಪ್ರಾಣಿಗಳಿವೆಯೋ ಆ ಎಲ್ಲ ಪ್ರಾಣಿಗಳನ್ನು ಅಲ್ಲಿಗೆ ಕರೆದು ತಂದಿದ್ದರು. ಅವುಗಳನ್ನು ಆಶ್ಚರ್ಯದಿಂದ ರಾಜರು ನೋಡಿದರು.

ಗಾಶ್ಚೈವ ಮಹಿಷೀಶ್ಚೈವ ತಥಾ ವೃದ್ಧಸ್ತ್ರಿಯೋಽಪಿ ಚ ।
ಔದಕಾನಿ ಚ ಸತ್ವಾನಿ ಶ್ವಾಪದಾನಿ ವಯಾಂಸಿ ಚ ॥೭॥

ಜರಾಯುಜಾನ್ಯಂಡಜಾನಿ ಸ್ವೇದಜಾನ್ಯುದ್ಭಿಜಾನಿ ಚ ।
ಪರ್ವತಾನುಪವನ್ಯಾನಿ ಭೂತಾನಿ ದದೃಶುಶ್ಚ ತೇ ॥೮॥

ಹಸುಗಳು, ಎಮ್ಮೆಗಳು, ವೃದ್ಧಸ್ತ್ರೀಯರು, ಜಲಚರ ಪ್ರಾಣಿಗಳು, ಮಾಂಸಾಹಾರಿ ಪ್ರಾಣಿಗಳು, ಪಕ್ಷಿಗಳು, ಜರಾಯುಜ, ಸ್ವೇದಜ, ಅಂಡಜ, ಉದ್ಭಿಜ ಎಂಬ ನಾಲ್ಕು ಪ್ರಕಾರವಾದ ಪ್ರಾಣಿಗಳು, ಪರ್ವತಜೀವಿಗಳಾದ ಪ್ರಾಣಿಗಳು, ಸಮುದ್ರತೀರದಲ್ಲಿ ವಾಸಿಸುವ ಪ್ರಾಣಿಗಳು - ಈ ಎಲ್ಲ ಪ್ರಾಣಿಗಳನ್ನು ಯಜ್ಞವನ್ನು ವೀಕ್ಷಿಸುವ ದೃಷ್ಟಿಯಿಂದ ಆಗಮಿಸಿದ ರಾಜರು ಆ ಪರಿಸರದಲ್ಲಿ ಕಂಡರು.

ಸರ್ವೇ ರಾಜನ್ ಯಥಾನ್ಯಾಯಮಾನೀತಾ ನೃಪಶಾಸನಾತ್ ॥೯॥

ಜನಮೇಜಯ ರಾಜನೇ, ಯುಧಿಷ್ಠಿರನ ಆದೇಶದಂತೆ ಎಲ್ಲ ರೀತಿಯಾದ ಜಗತ್ತಿನ ಪದಾರ್ಥಗಳು ಭೃತ್ಯರಿಂದ ಅಲ್ಲಿ ತರಲ್ಪಟ್ಟಿದ್ದವು.

ಏವಂ ಪ್ರಮುದಿತಂ ಸರ್ವಂ ಪಶುಗೋಧನಧಾನ್ಯತಃ ।
ಯಜ್ಞವಾಟಂ ನೃಪಾ ದೃಷ್ಟ್ವಾ ಪರಂ ವಿಸ್ಮಯಮಾಗಮನ್ ॥೧೦॥

ಈ ರೀತಿಯಾಗಿ ಪಶು, ಗೋವು, ಧನ, ಧಾನ್ಯಗಳಿಂದ ಯಜ್ಞಮಂಟಪವು ಸಮೃದ್ಧಿಯಿಂದ ತುಂಬಿತ್ತು. ಇಂತಹ ಎಲ್ಲಿಯೂ ಕಾಣದ, ಪರಮಾದ್ಭುತ ಪದಾರ್ಥಗಳಿಂದ ಕೂಡಿದ ಪರಿಸರವನ್ನು ಕಂಡು ಸಮಸ್ತರಾಜರು ಆಶ್ಚರ್ಯಚಕಿತರಾದರು.

ಅನಿಶಂ ದೀಯತೇ ಚ ಸ್ಮ ತತ್ರ ಭೋಜ್ಯಂ ಪೃಥಗ್ವಿಧಮ್ ।
ಬ್ರಾಹ್ಮಣಾನಾಂ ವಿಶಾಂ ಚೈವ ಬಹುನಿಷ್ಟಾನ್ನಮೃದ್ಧಿಮತ್ ॥೧೧॥

ಬಗೆ ಬಗೆಯಾದ ಭೋಜ್ಯಗಳಿಂದ ಕೂಡಿದ ಅನ್ನವನ್ನು ನಿರಂತರವೂ ಅಲ್ಲಿ ಬಂದವರಿಗೆಲ್ಲ ದಾನ ಮಾಡುತ್ತಿದ್ದರು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಹೀಗೆ ಎಲ್ಲರಿಗೂ ಮೃಷ್ಟಾನ್ನ ಭೋಜನದ ವ್ಯವಸ್ಥೆಯು ಸಮೃದ್ಧವಾಗಿತ್ತು. ಅನ್ನದ ಸುತ್ತಲೂ ತೊವ್ವೆ, ಬಗೆ ಬಗೆಯ ಶಾಕಪದಾರ್ಥಗಳಿಂದ ನಿರ್ಮಿತವಾದ ಪದಾರ್ಥಗಳು ಅತ್ಯಂತ ಶ್ರದ್ಧೆಯಿಂದ ರಚಿಸಲ್ಪಟ್ಟಿದ್ದವು.

ಪೂರ್ಣೇ ಶತಸಹಸ್ರೇ ತು ವಿಪ್ರಾಣಾಂ ತತ್ರ ಭುಂಜತಾಮ್ ।
ದುಂದುಭಿರ್ಮೇಘನಿರ್ಘೋಷೋ ಮುಹುರ್ಮುಹುರತಾಡ್ಯತ ॥೧೨॥

ಒಂದು ಬಾರಿಗೆ ಲಕ್ಷಜನ ಬ್ರಾಹ್ಮಣರ ಊಟವಾದ ಕೂಡಲೇ ಮೇಘಗರ್ಜನೆಗೆ ಸದೃಶವಾದ ಶಬ್ದವುಳ್ಳ ದುಂದುಭಿಗಳನ್ನು ಬಾರಿಸುತ್ತಿದ್ದರು.

ಏನನಾದಾಸಕೃತ್ ಸೋಽಥ ದಿವಸೇ ದಿವಸೇ ತಥಾ ।
ಏವಂ ಸ ವವೃತೇ ಯಜ್ಞೋ ಧರ್ಮರಾಜಸ್ಯ ಧೀಮತಃ ॥೧೩॥

ದಿನಗಳು ಉರುಳಿದಂತೆ ಅಂತಹ ಲಕ್ಷ ಬ್ರಾಹ್ಮಣರ ಭೋಜನವನ್ನು ಸೂಚಿಸುವ ದುಂದುಭಿಶಬ್ದಗಳು ಹೆಜ್ಜೆ ಹೆಜ್ಜೆಗೂ ಕೇಳಿಸುತ್ತಲೇ ಇದ್ದವು. ಧರ್ಮರಾಜನ ಅಶ್ವಮೇಧಯಾಗವು ಪ್ರತಿದಿವಸವೂ ಇಂತಹ ಸಮೃದ್ಧಿಯಿಂದ ನಡೆಯುತ್ತಿತ್ತು.

ಅನ್ನಸ್ಯ ಸುಬಹೂನ್ ರಾಜನ್ನುತ್ಸರ್ಗಾನ್ ಪರ್ವತೋಪಮಾನ್ ।
ದಧಿಕುಲ್ಯಾಶ್ಚ ದದೃಶುಃ ಸರ್ಪಿಷಶ್ಚ ಹ್ರದಾಂಜನಾಃ ॥೧೪॥

ಪ್ರತಿದಿವಸವೂ ಪರ್ವತದಂತೆ ಅನೇಕ ಅನ್ನದ ರಾಶಿಗಳನ್ನು ಪೇರಿಸುತ್ತಿದ್ದರು. ಮೊಸರಿನ ಕಾಲುವೆಗಳನ್ನು, ತುಪ್ಪದ ಕೊಳಗಗಳನ್ನು ರಾಜರು ನೋಡಿದರು.

ಜಂಬೂದಿರ್ಜಿಪೋ ಹಿ ಸಕಲೋ ನಾನಾಜಾನಪದೋ ಜನಃ ।
ರಾಜನ್ನದೃಶ್ಯತೈಕಸ್ಥೋ ರಾಜ್ಞಸ್ತಸ್ಯ ಮಹಾಕ್ರತೌ ॥೧೫॥

ಧರ್ಮರಾಜನ ಯಜ್ಞದಲ್ಲಿ ನಾನಾ ದೇಶಗಳಿಂದ ಜನರು ಬರುವುದನ್ನು ನೋಡಿದರೆ ಜಂಬೂದಿರ್ಜಿಪವೆಲ್ಲವೂ ಒಂದೇ ಜಾಗದಲ್ಲಿ ಸೇರಿರುವಂತೆ ಕಾಣಿಸುತ್ತಿತ್ತು.

ತತ್ರ ಜಾತಿಸಹಸ್ರಾಣಿ ಪುರುಷಾಣಾಂ ತತಸ್ತತಃ ।
ಗೃಹೀತ್ವಾ ಧನಮಾಜಗ್ಮುರ್ಬಹೂನಿ ಭರತರ್ಷಭ ॥೧೬॥

ಆ ಯಜ್ಞದ ಪರಿಸರದಲ್ಲಿ ಸಾವಿರಾರು ಜಾತಿಯ ಪುರುಷರು ಸಮೃದ್ಧವಾದ ಐಶ್ವರ್ಯಗಳೊಡನೆ ಅಲ್ಲಿಗೆ ಆಗಮಿಸಿದ್ದರು.

ರಾಜಾನಃ ಸ್ವರ್ಣಿಶಾಪಿ ಸುಮೃಷ್ಟಮಣಿಕುಂಡಲಾಃ ।
ಪರ್ಯವೇಷತ್ ದ್ವಿಜಾಗ್ರ್ಯಾಂಸ್ತಾನ್ ಶತಶೋಽಥ ಸಹಸ್ರಶಃ ॥೧೭॥

ಪ್ರತಿಯೊಬ್ಬ ರಾಜರೂ ಬಂಗಾರದಿಂದ ನಿರ್ಮಿತವಾದ, ಶ್ರೇಷ್ಠ ಮಣಿಗಳಿಂದ ವಿರಾಜಮಾನವಾದ ಹಾರಗಳನ್ನೂ, ಕುಂಡಲಗಳನ್ನೂ ಹಾಕಿಕೊಂಡು ಶೋಭಿಸುತ್ತಿದ್ದರು.

ಆ ರಾಜರು ಅಲ್ಲಿರುವ ಸಾವಿರಾರು ವಿಪ್ರರಿಗೆ ಸ್ವಯಂ ತಾವೇ ಊಟವನ್ನು ಬಡಿಸುತ್ತಿದ್ದರು.

ವಿವಿಧಾನ್ಯನ್ನಪಾನಾನಿ ಪುರುಷಾ ಯೇऽನುಯಾಯಿನಃ ।
ತೇಷಾಂ ನೃಪೋಪಭೋಗ್ಯಾನಿ ಬ್ರಾಹ್ಮಣಾನಾಂ ದದುಃ ಸ್ಮ ಹ ॥೧೮॥

ಬಗೆಬಗೆಯಾದ ಅನ್ನ, ಪಾಯಸ, ಪಾನೀಯ ಮೊದಲಾದವುಗಳನ್ನು ಈ ರಾಜರ ಸೇವಕರು ಬ್ರಾಹ್ಮಣರಿಗೆ ದಾನ ಮಾಡುತ್ತಿದ್ದರು. ಶ್ರೇಷ್ಠ ರಾಜರು ಸ್ವೀಕರಿಸುವ ಆಹಾರಗಳೆಲ್ಲವೂ ಎಲ್ಲರಿಗೂ ದಾನ ಮಾಡಲ್ಪಟ್ಟವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅನ್ನಾದಿಪರಿವೇಷಣಂ ನಾಮ ಸಪ್ತಾಶೀತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆಂಟನೆಯ ಅಧ್ಯಾಯ

ಕೃಷ್ಣನು ಬಲರಾಮಾದಿಗಳಿಂದ ಸಹಿತನಾಗಿ ಯುಧಿಷ್ಠಿರನ ಅಶ್ವಮೇಧ ಯಾಗಕ್ಕಾಗಿ ಹಸ್ತಿನಾವತಿಯನ್ನು ಕುರಿತು ಆಗಮಿಸಿದುದು. ಯುಧಿಷ್ಠಿರನು ನಾನಾ ದೇಶಗಳಿಂದ ಬರುತ್ತಿರುವ ರಾಜರನ್ನು ಯಥೋಚಿತವಾಗಿ ಸತ್ಕರಿಸುವಂತೆ ಮಣಲೂರಿನಿಂದ ಬರುವ ಬಭ್ರುವಾಹನನಿಗೆ, ಸನ್ಮಾನ ಮಾಡುವಂತೆ ಭೀಮಸೇನನಿಗೆ ಆದೇಶವನ್ನಿತ್ತುದು.

ವೈಶಂಪಾಯನಃ

ಸಮಾಗತಾನ್ ವೇದವಿದೋ ರಾಜ್ಞಶ್ಚ ಪೃಥಿವೀಶ್ವರಾನ್ ।
ದೃಷ್ಟ್ವಾ ಯುಧಿಷ್ಠಿರೋ ರಾಜಾ ಭೀಮಸೇನಮಥಾಬ್ರವೀತ್ ॥೧॥

ವೈಶಂಪಾಯನ– ಆಗಮಿಸುತ್ತಿರುವ ಬ್ರಾಹ್ಮಣರನ್ನೂ, ಪೃಥಿವೀಶ್ವರರಾದ ರಾಜರನ್ನೂ ರಾಜನಾದ ಯುಧಿಷ್ಠಿರನು ನೋಡುತ್ತಾ ಭೀಮಸೇನನಿಗೆ ಇಂತು ನುಡಿದನು.

ಯುಧಿಷ್ಠಿರಃ

ಉಪಯಾತಾ ನರವ್ಯಾಘ್ರಾ ಯ ಇಮೇ ಜಗತೀಶ್ವರಾಃ ।
ಏತೇಷಾಂ ಕ್ರಿಯತಾಂ ಪೂಜಾ ಪೂಜಾರ್ಹಾ ಹಿ ನರೇಶ್ವರಾಃ ॥೨॥

ಯುಧಿಷ್ಠಿರ– ಭೀಮಸೇನನೇ, ಪೂಜಿಸಲು ಯೋಗ್ಯರಾದ ಅನೇಕ ಭೂಪಾಲಕರು ಈ ಯಜ್ಞದ ಮಂಟಪಕ್ಕೆ ಆಗಮಿಸುತ್ತಿದ್ದಾರೆ. ಅವರನ್ನು ಯಥಾಯೋಗ್ಯವಾಗಿ ನೀನು ಸತ್ಕರಿಸು.

ವೈಶಂಪಾಯನಃ

ಇತ್ಯುಕ್ತಃ ಸ ತಥಾ ಚಕ್ರೇ ನರೇಂದ್ರೇಣ ಯಶಸ್ವಿನಾ ।
ಭೀಮಸೇನೋ ಮಹಾರಾಜ ಯಮಾಭ್ಯಾಂ ಸಹ ಕೌರವ ॥೩॥

ವೈಶಂಪಾಯನ– ಮಹಾಯಶಸ್ಸಂಪನ್ನನಾದ ಧರ್ಮರಾಜನು ಭೀಮಸೇನನಿಗೆ ಹೀಗೆ ಆದೇಶಿಸುತ್ತಿರಲು ಜನಮೇಜಯನೇ, ಭೀಮಸೇನನು ನಕುಲ-ಸಹದೇವರಿಂದ ಕೂಡಿಕೊಂಡು ಯಥಾಯೋಗ್ಯವಾಗಿ ಆಗಮಿಸಿದವರನ್ನು ಸತ್ಕರಿಸುತ್ತಿದ್ದನು.

ಅಥಾಭ್ಯಗಚ್ಛದ್ ಗೋವಿಂದೋ ವೃಷ್ಣಿಭಿಃ ಸಹ ಧರ್ಮಜಮ್ ।
ಬಲದೇವಂ ಪುರಸ್ಕೃತ್ಯ ಸರ್ವಪ್ರಾಣಭೃತಾಂ ವರಃ ॥೪॥

ಯುಯುಧಾನೇನ ಸಹಿತಃ ಪ್ರದ್ಯುಮ್ನೇನ ಗದೇನ ಚ ।
ನಿಶಠೇನಾಥ ಸಾಂಬೇನ ತಥೈವ ಕೃತವರ್ಮಣಾ ॥೫॥

ಬಳಿಕ ಇದೇ ಪ್ರಸಂಗದಲ್ಲಿ ವೃಷ್ಣಿಕುಲದವರಿಂದ ಸಹಿತನಾದ ಗೋವಿಂದನು ಬಲರಾಮನಿಂದ ಕೂಡಿಕೊಂಡು ಧರ್ಮಜನ ಯಜ್ಞಮಂಟಪಕ್ಕೆ ಆಗಮಿಸಿದನು. ಸಮಸ್ತ ಜೀವಾಧಾರಕರಿಗೆ ನಿಯಾಮಕನಾದ ಗೋವಿಂದನು ಯುಯುಧಾನನಿಂದ ಸಹಿತನಾಗಿ, ಪ್ರದ್ಯುಮ್ನನೆಂಬ ಮಗನಿಂದ, ಗದನಿಂದ, ನಿಶಠನಿಂದ, ಸಾಂಬ, ಕೃತವರ್ಮರಿಂದ ಕೂಡಿಕೊಂಡು ಆಗಮಿಸಿದನು.

ತೇಷಾಮಪಿ ಪರಾಂ ಪೂಜಾಂ ಚಕ್ರೇ ಭೀಮೋ ಮಹಾಭುಜಃ ।
ವಿವಿಶುಸ್ತೇ ಚ ವೇಶ್ಮಾನಿ ರತ್ನವಂತಿ ನರರ್ಷಭಾಃ ॥೬॥

ಮಹಾಬಲಿಷ್ಠನಾದ ಭೀಮಸೇನನು ಆಗಮಿಸಿದ ಅವರೆಲ್ಲರನ್ನೂ ವಿಶೇಷವಾಗಿ ಸತ್ಕರಿಸಿದನು. ಆ ರಾಜಶ್ರೇಷ್ಠರೆಲ್ಲರೂ ರತ್ನಮಯವಾದ, ಅವರಿಗಾಗಿಯೇ ನಿರ್ಮಿಸಿದ ಅರಮನೆಗಳನ್ನು ಪ್ರವೇಶಿಸಿದರು.

ಯುಧಿಷ್ಠಿರಸಮೀಪೇ ತು ಕಥಾಂತೇ ಮಧುಸೂದನಃ ।
ಅರ್ಜುನಂ ಕಥಯಾಮಾಸ ಬಹುಸಂಗ್ರಾಮಕರ್ಶಿತಮ್ ॥೭॥

ಬಳಿಕ ವಿಶ್ರಾಂತಿಯನ್ನು ಪಡೆದು ಮಧುಸೂದನನು ಯುಧಿಷ್ಠಿರನ ಸಮೀಪದಲ್ಲಿ ಆಗಮಿಸಿ, ಅವನ ಕುಶಲಪ್ರಶ್ನೆಗಳನ್ನು ವಿಚಾರಿಸಿದನು. ನಂತರ ಅರ್ಜುನನು ಯಜ್ಞಾಶ್ವವನ್ನು ಹಿಂಬಾಲಿಸಿ ಆಗಮಿಸಿರುವ ವಿಚಾರವನ್ನೂ, ಅನೇಕ ಯುದ್ಧಗಳಿಂದ ಬಳಲಿದ್ದಾನೆ ಎಂಬ ವಾರ್ತೆಯನ್ನು ಶ್ರೀಕೃಷ್ಣನು ಕೇಳಿಸಿಕೊಂಡನು.

ಸ ತಂ ಪಪ್ರಚ್ಛ ಕೌಂತೇಯಃ ಪುನಃಪುನರರಿಂದಮಃ ।
ಧರ್ಮರಾಟ್ ಭ್ರಾತರಂ ಜಿಷ್ಣುಂ ಸ ಚಾಚಷ್ಟ ಜಗತ್ಪತಿಃ ॥೮॥

ಧರ್ಮರಾಜನು ಪುನಃ ಪುನಃ ಕೃಷ್ಣನ ಬಳಿ ಅರ್ಜುನನ ದಿಗ್ವಿಜಯದ ಬಗ್ಗೆ ಪ್ರಶ್ನೆಗಳನ್ನು ಕೇಳಿದನು. ಜಯಶೀಲನಾದ ಅರ್ಜುನನ ವೈಭವಗಳನ್ನು ಯುಧಿಷ್ಠಿರನಿಗೆ ಶ್ರೀಕೃಷ್ಣನು ಬೋಧಿಸಿದನು.

ಶ್ರೀಭಗವಾನ್

ಆಗಮದ್ ದ್ವಾರಕಾವಾಸೀ ಸಮಾಪ್ತಃ ಪುರುಷೋ ನೃಪ ।
ಸೋಽದ್ರಾಕ್ಷೀತ್ ಪಾಂಡವಶ್ರೇಷ್ಠಂ ಬಹುಸಂಗ್ರಾಮಕರ್ಶಿತಮ್ ॥೯॥

ಶ್ರೀಭಗವಾನ್– ಯುಧಿಷ್ಠಿರನೇ, ನನ್ನ ಬಳಿಗೆ ದ್ವಾರಕಾವಾಸಿಯೂ, ನನ್ನ ಆಪ್ತನೂ ಆಗಿರುವ ಪುರುಷನೊಬ್ಬನು ಆಗಮಿಸಿದನು. ಅವನು ಯುದ್ಧದಿಂದ ಬಳಲಿ ಬಹಳ ಕೃಶನಾಗಿದ್ದ ಪಾಂಡವಶ್ರೇಷ್ಠನಾದ ಅರ್ಜುನನನ್ನು ಚೆನ್ನಾಗಿ ನೋಡಿಕೊಂಡು ಬಂದಿದ್ದನು.

ಸಮೀಪೇ ಚ ಮಹಾಬಾಹುಮಾಚಷ್ಟ ಮಮ ಸ ಪ್ರಭೋ ।
ಕುರು ಕಾರ್ಯಾಣಿ ಕೌಂತೇಯ ಹಯಮೇಧಾರ್ಥಸಿದ್ಧಯೇ ॥೧೦॥

ಆ ಪುರುಷನು ನನ್ನ ಬಳಿ ಆಗಮಿಸಿ ಇಂತಹ ಮಾತುಗಳನ್ನು ಹೇಳಿದನು. ಮಹಾಬಾಹುವಾದ ಅರ್ಜುನನು ಈ ಪ್ರಸಂಗದಲ್ಲಿ ಹಸ್ತಿನಾವತಿಯ ಸಮೀಪದಲ್ಲೇ ಇದ್ದಾನೆ. ಅಶ್ವಮೇಧ ಯಜ್ಞದ ಸಿದ್ಧಿಗಾಗಿ ಮಾಡಬೇಕಾಗಿರುವ ಎಲ್ಲ ಕಾರ್ಯಗಳನ್ನು ಧರ್ಮರಾಜನು ಮಾಡಬಹುದು ಎಂದು.

ವೈಶಂಪಾಯನಃ

ಇತ್ಯುಕ್ತಃ ಪ್ರತ್ಯುವಾಚೈನಂ ಧರ್ಮರಾಜೋ ಯುಧಿಷ್ಠಿರಃ ॥೧೧॥

ವೈಶಂಪಾಯನ– ಕೃಷ್ಣನು ಹೀಗೆ ಉತ್ತರಿಸಲು ಯುಧಿಷ್ಠಿರನು ಹೇಳುತ್ತಾನೆ.

ಯುಧಿಷ್ಠಿರಃ

ದಿಷ್ಟ್ಯಾ ಸ ಕುಶಲೀ ಜಿಷ್ಣುರುಪಯಾತಃ ಸ ಮಾಧವ ॥೧೨॥

ಯುಧಿಷ್ಠಿರ– ಮಾಧವನೇ, ನನ್ನ ಅದೃಷ್ಟದ ದೆಸೆಯಿಂದ ಜಯಶೀಲನಾದ ಅರ್ಜುನನು ಪುನಃ ಯಜ್ಞಾಶ್ವವನ್ನು ಕರೆದುಕೊಂಡು ಇಲ್ಲಿಗೆ ಆಗಮಿಸಿದ್ದಾನೆ ಎಂದು ಭಾವಿಸುತ್ತೇನೆ.

ತವ ಯತ್ ಸಂದಿದೇಶಾಸೌ ಪಾಂಡವಾನಾಂ ಬಲಾಗ್ರಣೀಃ ।
ತದಾಖ್ಯಾತುಮಿಹೇಚ್ಛಾಮಿ ಭವತಾ ಕುರುನಂದನ ॥೧೩॥

ಪಾಂಡವಸೇನೆಗೆ ಪ್ರಮುಖನಾಗಿರುವ ಅರ್ಜುನನು ಯಜ್ಞಕ್ಕೆ ಸಂಬಂಧಿಸಿದ ಯಾವುದಾದರೂ ಸಂದೇಶವನ್ನು ನಿನ್ನ ಬಳಿ ಹೇಳಿ ಕಳುಹಿಸಿರುವನೆ? ಆ ಸಂದೇಶವನ್ನು ನಿನ್ನ ಮುಖದಿಂದಲೇ ತಿಳಿಯಬಯಸುತ್ತೇನೆ.

ವೈಶಂಪಾಯನಃ

ಇತ್ಯುಕ್ತೋ ರಾಜಶಾರ್ದೂಲ ವೃಷ್ಣ್ಯಂಧಕಪತಿಸ್ತದಾ ।
ಪ್ರೋವಾಚೇದಂ ವಚೋ ವಾಗ್ಮೀ ಧರ್ಮಾತ್ಮಾನಂ ಯುಧಿಷ್ಠಿರಮ್ ॥

ವೈಶಂಪಾಯನ– ಧರ್ಮಾತ್ಮನಾದ ಯುಧಿಷ್ಠಿರನು ಇಂತು ನುಡಿಯಲು ವೃಷ್ಣ್ಯಂಧಕ ನಾಯಕನಾದ ಕೃಷ್ಣನು ಹೀಗೆ ಹೇಳಿದನು.

ಶ್ರೀಭಗವಾನ್

ಇದಮಾಹ ಮಹಾರಾಜ ಪಾರ್ಥವಾಕ್ಯಂ ನರೇಶ್ವರ ।
ಯದ್ವಾಚ್ಯಂ ಭವತಾ ಕಷ್ಣ ಕಾಲೇ ವಾಕ್ಯಮಿದಂ ಮಮ ॥೧೫॥

ಶ್ರೀಭಗವಾನ್– ಯುಧಿಷ್ಠಿರನೇ, ಆ ನನ್ನ ಆಪ್ತಪುರುಷನು ಪಾರ್ಥನ ಮಾತನ್ನೇ ಸ್ಮರಿಸಿಕೊಳ್ಳುತ್ತಾ, ಸಕಾಲದಲ್ಲಿ ಈ ಮಾತನ್ನು ನಿನಗೆ ತಿಳಿಸಬೇಕು ಎಂದು ಹಿಂದೆ ಆ

ಪುರುಷನನ್ನು ನನ್ನ ಬಳಿ ಅರ್ಜುನನು ಕಳುಹಿಸಿದ್ದನು. ಅಂತಹ ಅರ್ಜುನನು ಹೇಳಿದ ಸಂದೇಶವನ್ನು ಯಥಾವತ್ತಾಗಿ ನಿನಗೆ ಹೇಳುತ್ತೇನೆ.

ಆಗಮಿಷ್ಯಂತಿ ರಾಜಾನಃ ಸರ್ವತಃ ಕೌರವಾನ್ ಪ್ರತಿ ।
ತೇಭ್ಯ ಏಕೈಕಶಃ ಪೂಜಾ ಕಾರ್ಯೇತ್ಯೇತತ್ ಕ್ಷಮಂ ಹಿತಮ್ ॥೧೬॥

ಕೌರವಶ್ರೇಷ್ಠನೇ, ಧರ್ಮಜನೇ, ಭೂಮಂಡಲದ ಸಮಸ್ತ ರಾಜರು ಅಶ್ವಮೇಧ ಯಜ್ಞದಲ್ಲಿ ಭಾಗವಹಿಸಲು ಆಗಮಿಸುತ್ತಾರೆ. ಅಂತಹ ಸಮಸ್ತ ರಾಜರನ್ನು ಯಥಾಯೋಗ್ಯವಾಗಿ ಸತ್ಕರಿಸುವುದು ನಮಗೆ ಕರ್ತವ್ಯವೂ ಆಗಿದೆ, ಹಿತವೂ ಆಗಿದೆ.

ಇತ್ಯೇತದ್ ವಚನಾದ್ ರಾಜಾ ವಿಜ್ಞಾಪ್ಯೋ ಮಮ ಮಾನದ ।
ನ ತದಾಪ್ಯಾಯಿಕಂ ನ ಸ್ಯಾದ್ ಯದರ್ಘ್ಯಾನಯನೇ ಭವೇತ್ ॥೧೭॥

ಈ ರೀತಿಯಾಗಿ ಹೇಳಿದ ಅರ್ಜುನನು ಮತ್ತೂ ಮುಂದುವರಿದು ಹೇಳುತ್ತಾನೆ: ಮಾನದನೇ, ನನ್ನ ಪರವಾಗಿ ಯುಧಿಷ್ಠಿರನನ್ನು ಹೀಗೆ ವಿಜ್ಞಾಪಿಸಿಕೊ. ಧರ್ಮರಾಜನೇ, ರಾಜಸೂಯ ಯಾಗದ ಸಮಯದಲ್ಲಿ ನೀನೇ ಅರ್ಘ್ಯ-ಪಾದ್ಯಾದಿಗಳನ್ನು ನೀಡಬೇಕು. ಧರ್ಮರಾಜನು ಸ್ವತಃ ತಾನೇ ಅರ್ಘ್ಯ-ಪಾದ್ಯಾದಿಗಳನ್ನು ನೀಡಿದಾಗ ಸಮಸ್ತ ರಾಜರು ನಿಶ್ಚಿತವಾಗಿಯೂ ತೃಪ್ತಿ ಹೊಂದುತ್ತಾರೆ.

ಕರ್ತುಮರ್ಹತಿ ತದ್ ರಾಜಾ ಭವಾಂಶ್ಚಾಪ್ಯನುಮನ್ಯತಾಮ್ ।
ರಾಜಾನೋ ನ ವಿನಶ್ಯೇಯುರ್ನೋ ರಾಜನ್ ಪ್ರಜಾಃ ಪುನಃ ॥೧೮॥

ಹೀಗೆ ಆಪ್ತ ಪುರುಷನು ಅರ್ಜುನನ ಸಂದೇಶವನ್ನು ಹೇಳಿ ಪುನಃ ಇಂತು ನುಡಿದನು. ಕೃಷ್ಣನೇ, ಅರ್ಜುನನ ಆದೇಶದಂತೆ ಯುಧಿಷ್ಠಿರನು ನಡೆದುಕೊಳ್ಳುವುದು ಯುಕ್ತವಾಗಿದೆ. ನೀನು ಅವನನ್ನು ಹೀಗೆ ಪ್ರಚೋದಿಸು. ಯಾವ ರಾಜರೂ ದುಃಖಿತರಾಗದ ರೀತಿಯಲ್ಲಿ, ಪ್ರಜೆಗಳೂ ಅತೃಪ್ತಿ ಹೊಂದದ ರೀತಿಯಲ್ಲಿ ರಾಜಸೂಯ ಯಾಗದಲ್ಲಿ ಸತ್ಕಾರವನ್ನು ನೀಡಬೇಕು ಎಂದು ನುಡಿದನು.

ಇದಮನ್ಯಚ್ಚ ಕೌರವ್ಯ ವಚಃ ಸ ಪುರುಷೋಽಬ್ರವೀತ್ ।
ಧನಂಜಯಸ್ಯ ನೃಪತೇ ತನ್ಮೇ ನಿಗದತಃ ಶೃಣು ॥೧೯॥

ಕೌರವ್ಯನೇ, ಆ ಪುರುಷನು ಇಷ್ಟು ಅರ್ಜುನನ ಸಂದೇಶವನ್ನು ನನ್ನ ಬಳಿ ತಿಳಿಸಿ ಧನಂಜಯ ಮತ್ತೊಂದು ಮಾತನ್ನು ಹೇಳಿದ್ದಾನೆ. ಅದನ್ನೂ ಹೇಳುತ್ತೇನೆ, ಕೇಳಿಸಿಕೊ.

'ಉಪಾಯಾಸ್ಯತಿ ಯಜ್ಞಂ ನೋ ಮಣಲೂರಪತಿರ್ನೃಪಃ ।
ಪುತ್ರೋ ಮಮ ಮಹಾತೇಜಾ ದಯಿತೋ ಬಭ್ರುವಾಹನಃ ॥೨೦॥

ತಂ ಭವಾನ್ ಮದಪೇಕ್ಷಾರ್ಥಂ ವಿಧಿವತ್ ಪ್ರತಿಪೂಜಯೇತ್ ।
ಸ ಹಿ ಭಕ್ತೋಽನುರಕ್ತಶ್ಚ ಮಮ ನಿತ್ಯಮಿ'ತಿ ಪ್ರಭೋ ॥೨೧॥

ಮಣಲೂರ ಪತಿಯಾಗಿರುವಂತಹ ಬಭ್ರುವಾಹನನು ನಮ್ಮ ಯಜ್ಞದ ವೈಭವಕ್ಕೆ ಆಗಮಿಸುತ್ತಿದ್ದಾನೆ. ನನ್ನ ಮಗನೇ ಆಗಿರುವ, ಮಹಾತೇಜಸ್ವಿಯಾಗಿರುವ ಬಭ್ರುವಾಹನನು ನಮ್ಮ ಯಜ್ಞಕ್ಕೆ ಆಗಮಿಸಿದಾಗ ನನ್ನ ಅಪೇಕ್ಷೆಯಂತೆ ವಿಧಿವತ್ತಾಗಿ ಅವನನ್ನು ಸತ್ಕರಿಸಬೇಕು. ಆ ಬಭ್ರುವಾಹನನು ನನ್ನ ಭಕ್ತನೂ ಆಗಿದ್ದಾನೆ. ನಿತ್ಯವೂ ನನ್ನಲ್ಲಿ ಅಸಾಧಾರಣವಾದ ಪಿತೃಭಕ್ತಿಯನ್ನು ಹೊಂದಿದ್ದಾನೆ.

ವೈಶಂಪಾಯನಃ

ಇತ್ಯೇತದ್ ವಚನಂ ಶ್ರುತ್ವಾ ಧರ್ಮರಾಜೋ ಯುಧಿಷ್ಠಿರಃ ।
ಅಭಿನಂದ್ಯ ಸ ತದಾ ತ್ವಮಿದಂ ವಚನಮಬ್ರವೀತ್ ॥೨೨॥

ವೈಶಂಪಾಯನ– ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿಸಿಕೊಂಡ, ಯುದ್ಧದಲ್ಲಿ ಸ್ಥಿರವಾದ ಬುದ್ಧಿಯುಳ್ಳ ಧರ್ಮರಾಜನು ಕೃಷ್ಣನ ಮಾತುಗಳನ್ನು ಅಭಿನಂದಿಸಿ ಕೃಷ್ಣನನ್ನುದ್ದೇಶಿಸಿ ಇಂತು ನುಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಅರ್ಜುನರಹಸ್ಯವಚನಕಥನಂ ನಾಮ
ಅಷ್ಟಾಶೀತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂಬತ್ತನೆಯ ಅಧ್ಯಾಯ

ಯುಧಿಷ್ಠಿರನು ಮೂರು ಮಂದಿ ಪಾಂಡವರಿಗೆ ಅರ್ಜುನನಿಗೆ ಉಂಟಾದ ಮಾರ್ಗಾಯಾಸವನ್ನು ಪರಿಹರಿಸಲು ಸೂಚಿಸಿದುದು. ಅರ್ಜುನನು ಈ ಕ್ರಮದಲ್ಲಿ ಆಯಾಸ ಪಡಲು ಕಾರಣವೇನೆಂಬುದನ್ನು ಕೃಷ್ಣನು ನಿರೂಪಿಸಿದುದು. ಅಶ್ವಮೇಧ ಕುದುರೆಯ ಜೊತೆಗೆ ಅರ್ಜುನನು ನಗರವನ್ನು ಪ್ರವೇಶಿಸಿದುದು. ಬಭ್ರುವಾಹನನು ಉಲೂಪಿ-ಚಿತ್ರಾಂಗದೆಯರ ಜೊತೆ ಯಾಗವನ್ನು ನೋಡಲು ಆಗಮಿಸಿದುದು.

ಯುಧಿಷ್ಠಿರಃ

ಶ್ರುತಂ ಪ್ರಿಯಮಿದಂ ಕೃಷ್ಣ ಯತ್ ತ್ವಯಾ ಮಮ ಭಾಷಿತಮ್ ।
ತನ್ಮೇऽಮೃತರಸಪ್ರಖ್ಯಂ ಮನೋ ಹ್ಲಾದಯತೇ ವಿಭೋ ॥೧॥

ಯುಧಿಷ್ಠಿರ– ಪ್ರಭುವೇ, ಶ್ರೀಕೃಷ್ಣ, ನಿನ್ನಿಂದ ಇಲ್ಲಿಯ ತನಕ ಪರಮಪ್ರಿಯವಾದ ಅರ್ಜುನನ ಸಂದೇಶವನ್ನು ಕೇಳಿದೆನು. ಕರ್ಣಾನಂದಕರವಾದ ಇಂತಹ ಮಾತುಗಳನ್ನು ಹೇಳಲು ನೀನು ಮಾತ್ರ ಸಮರ್ಥನಾಗಿರುವೆ. ನಿನ್ನ ಮಾತುಗಳು ನನಗೆ ಅಮೃತದಂತೆ ಆಪ್ಯಾಯಮಾನವಾಗಿವೆ, ಪುಣ್ಯಪ್ರಾಪಕವಾಗಿವೆ. ಮನಸ್ಸು ಸಂತುಷ್ಟವಾಗಿದೆ.

ಬಹೂನಿ ಕಿಲ ಯುದ್ಧಾನಿ ವಿಜಯಸ್ಯ ನರಾಧಿಪೈಃ ।
ಪುನರಾಸನ್ ಹೃಷೀಕೇಶ ತತ್ರ ತತ್ರ ಮಯಾ ಶ್ರುತಮ್ ॥೨॥

ಹೃಷೀಕೇಶನೇ, ಅರ್ಜುನನು ಬೇರೆ ಬೇರೆ ದೇಶಗಳಲ್ಲಿ ಕುದುರೆಯನ್ನನುಸರಿಸಿ ಸಂಚರಿಸಿದ್ದಾನೆ. ಅಲ್ಲಿಯ ರಾಜರಿಗೂ ಅರ್ಜುನನಿಗೂ ಯುದ್ಧವಾಗಿದೆ ಎಂಬುದನ್ನು ನಾನು ಕೇಳಿದ್ದೇನೆ.

ಮನ್ನಿಮಿತ್ತಂ ಹಿ ಸ ತದಾ ಪಾರ್ಥಃ ಸುಖವಿವರ್ಜಿತಃ ।
ಅತೀವ ವಿಜಯೋ ಧೀಮಾನ್ ಇತಿ ಮೇ ದೂಯತೇ ಮನಃ ॥೩॥

ಧೀಮಂತನೇ, ಅರ್ಜುನನು ಎಂದಿಗೂ ಸುಖದಿಂದ ವಂಚಿತನೇ ಆಗಿದ್ದಾನೆ. ಯಾವಾಗಲೂ ಕಷ್ಟದಲ್ಲಿಯೇ ಇರುವ ಈ ಅರ್ಜುನನಿಗೆ ಯಾವ ಕರ್ಮವು ಕಾರಣವಾಗಿದೆ? ನನ್ನ ಮನಸ್ಸು ಅವನ ವಿಷಯದಲ್ಲಿ ಸಂಕಟಪಡುತ್ತಿರುತ್ತದೆ.

ಸಂಚಿಂತಯಾಮಿ ವಾರ್ಷ್ಣೇಯ ಸದಾ ಕುಂತೀಸುತಂ ರಹಃ ॥೪॥

ವೃಷ್ಣಿಕುಲದೊರೆಯೇ, ಅರ್ಜುನನ ವಿಷಯದಲ್ಲಿಯೇ ಏಕಾಂತದಲ್ಲೂ ಚಿಂತಿಸುತ್ತಲೇ ಇರುತ್ತೇನೆ.

ಕಿಂ ನು ತಸ್ಯ ಶರೀರೇऽಸ್ತಿ ಸರ್ವಲಕ್ಷಣಪೂಜಿತೇ ।
ಅನಿಷ್ಟಂ ಲಕ್ಷಣಂ ಕೃಷ್ಣ ಯೇನ ದುಃಖಾನ್ಯುಪಾಶ್ನುತೇ ॥೫॥

ಸರ್ವಲಕ್ಷಣಗಳಿಂದ ಸಂಪನ್ನವಾಗಿರುವ ಅವನ ಶರೀರದಲ್ಲಿ ಯಾವ ಅನಿಷ್ಟ ಲಕ್ಷಣವು ಸೇರಿಕೊಂಡಿದೆ? ಯಾವ ಕಾರಣದಿಂದ ಅರ್ಜುನನು ನಿರಂತರ ಸಂಚಾರಶೀಲನಾಗಿ ನಿರಂತರ ದುಃಖವನ್ನು ಅನುಭವಿಸುತ್ತಿರುತ್ತಾನೆ?

ಅತೀವ ದುಃಖಭಾಗೀ ಸ ಸತತಂ ಕುಂತಿನಂದನಃ ।
ನ ಚ ಪಶ್ಯಾಮಿ ಬೀಭತ್ಸೋರ್ನಿಂದ್ಯಂ ಗಾತ್ರೇಷು ಕಿಂಚನ ॥೬॥

ಶ್ರೋತವ್ಯಂ ಚೇನ್ಮಯೈತದ್ ವೈ ತನ್ಮೇ ವ್ಯಾಖ್ಯಾತುಮರ್ಹಸಿ ॥೭॥

ಕುಂತೀಸುತನಾದ ವಿಜಯನು ನಿರಂತರ ಬಹಳವಾದ ಕಷ್ಟಗಳನ್ನೇ ಅನುಭವಿಸುತ್ತಿದ್ದಾನೆ. ಅವನ ಅವಯವಗಳಲ್ಲಿ ಅಶುಭವಾದ ಒಂದು ಲಕ್ಷಣವನ್ನೂ ನಾನು ಕಾಣುತ್ತಿಲ್ಲ. ಹೀಗಿರುವಾಗ ಅವನೇಕೆ ಇಷ್ಟು ಸಂಚಾರದ ದುಃಖವನ್ನು ಅನುಭವಿಸುತ್ತಿದ್ದಾನೆ? ಅವನ ದೇಹದಲ್ಲಿರುವ ಅವಲಕ್ಷಣ ಯಾವುದು? ಇವೆಲ್ಲವನ್ನೂ ನಾನು ಕೇಳಿಸಿಕೊಳ್ಳಲು ಅರ್ಹನಾಗಿದ್ದಲ್ಲಿ ಯಥಾವತ್ತಾಗಿ ತಿಳಿಸಲು ಕೇಳಿಕೊಳ್ಳುತ್ತೇನೆ.

ವೈಶಂಪಾಯನಃ

ಇತ್ಯುಕ್ತಃ ಸ ಹೃಷೀಕೇಶೋ ಧ್ಯಾತ್ವಾ ಸುಮಹದಂತರಮ್ ।
ರಾಜಾನಂ ಭೋಜರಾಜನ್ಯವರ್ಧನೋ ವಿಷ್ಣುರಬ್ರವೀತ್ ॥೮॥

ವೈಶಂಪಾಯನ– ಈ ರೀತಿಯಾಗಿ ಯುಧಿಷ್ಠಿರನು ಪ್ರಶ್ನಿಸಿದಾಗ ಭೋಜವಂಶದ ಕ್ಷತ್ರಿಯರನ್ನು ಅಭಿವೃದ್ಧಿಗೊಳಿಸುವ ಇಚ್ಛೆಯುಳ್ಳ ವಿಷ್ಣುವು ಸ್ವಲ್ಪ ಸಮಯ ಯೋಚಿಸಿದವನಂತೆ ಇದ್ದು ನಂತರ ಉತ್ತರಿಸಿದನು.

ಶ್ರೀಭಗವಾನ್

ನ ಹ್ಯಸ್ಯ ನೃಪತೇ ಕಿಂಚಿದ್ ಅನಿಷ್ಟಮುಪಲಕ್ಷಯೇ ।
ಋತೇ ಪುರುಷಸಿಂಹಸ್ಯ ಪಿಂಡಿಕೇऽಸ್ಯಾಧಿಕೇ ಯತಃ ॥೯॥

ಶ್ರೀಭಗವಾನ್– ನರೇಶ್ವರನೇ, ಅರ್ಜುನನ ಮೊಣಕಾಲುಗಳ ಹಿಂಭಾಗಗಳು ಯಾವ ಕ್ರಮದಲ್ಲಿ ಇರಬೇಕೋ ಅದಕ್ಕಿಂತಲೂ ಸ್ವಲ್ಪ ದಪ್ಪವಾಗಿರುವುದರಿಂದ ನಿರಂತರವೂ ಸಂಚಾರಶೀಲನಾಗಿದ್ದಾನೆ. ಇದು ಅವನ ದೇಹದಲ್ಲಿ ಸೇರಿದ ಅನಿಷ್ಟ ಲಕ್ಷಣವೆಂದು ಭಾವಿಸುತ್ತೇನೆ. ಈ ಅವಲಕ್ಷಣವನ್ನು ಬಿಟ್ಟು ಇನ್ನು ಯಾವ ಅವಲಕ್ಷಣವನ್ನೂ ನಾನು ಕಾಣುತ್ತಿಲ್ಲ.

ವ್ಯಾಖ್ಯಾನ ವಿಶೇಷ– ಕೃಷ್ಣನು ಹೀಗೆ ಹೇಳುತ್ತಿರುವಾಗ ದ್ರೌಪದಿಯು ಕಣ್ಸನ್ನೆಯಿಂದ ಕೃಷ್ಣನನ್ನು ತಡೆಯುತ್ತಾಳೆ. ಎಲ್ಲ ಲಕ್ಷಣಗಳನ್ನೂ ಕೃಷ್ಣ, ಸತ್ಯಭಾಮೆ, ಭೀಮಸೇನ, ದ್ರೌಪದಿಯರು ತಿಳಿದಿದ್ದಾರೆ. ಐದನೆಯ ವ್ಯಕ್ತಿಗೆ ತಿಳಿದಿರುವುದಿಲ್ಲ. ವಿದ್ಯಾಶೀಲನಾದ ಯುಧಿಷ್ಠಿರನು ಅದನ್ನು ತಿಳಿಯಲು ಬಯಸಿದನು. ಅರ್ಹತೆಯಿಲ್ಲದೆ ತಿಳಿಯಬಾರದು ಎಂದು ದ್ರೌಪದಿಯು ಕಣ್ಸನ್ನೆಯನ್ನು ಮಾಡಿದಳು. ವಾಸ್ತವಿಕವಾಗಿ ಅರ್ಜುನನ ಉದರವೂ ಸ್ವಲ್ಪ ಅಧಿಕವಾಗಿತ್ತು. ವೃಷ್ಣನವೂ ಅಧಿಕವಾಗಿತ್ತು. ಎಡಗೈ ಸ್ವಲ್ಪ ಅಧಿಕವಾಗಿತ್ತು. ಅರ್ಜುನನಲ್ಲಿ ಅನೇಕ ದೋಷಗಳಿದ್ದರೂ ಕೃಷ್ಣನು ಅವುಗಳನ್ನು ಹೇಳಲಿಲ್ಲ. ಈ ರೀತಿಯಾದ ದೇಹದ ದೋಷಗಳು ಜ್ಞಾನ-ಆನಂದಗಳಿಗೆ ಕೊರತೆಯನ್ನುಂಟು ಮಾಡುತ್ತವೆ. ಇಂತಹ ದುರ್ಲಕ್ಷಣಗಳು ಇರುವವರು ದ್ರೌಪದಿ-ಭೀಮಸೇನ ಇಬ್ಬರೇ. ರುಗ್ಮಿಣಿ-ಸತ್ಯಭಾಮೆಯರು ಸಾಕ್ಷಾತ್ ಜಗನ್ಮಾತೆಯರಾಗಿರುವುದರಿಂದ ಅವರಿಗೆ ಯಾವ ವಿಧವಾದ ಕೊರತೆಗಳೂ ಇರುವುದಿಲ್ಲ ಎಂದು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಮಧ್ವಾಚಾರ್ಯರು ತಿಳಿಸಿರುತ್ತಾರೆ.

ತಾಭ್ಯಾಂ ಸ ಪುರುಷವ್ಯಾಘ್ರೋ ನಿತ್ಯಮಧ್ವಸು ಯುಜ್ಯತೇ ।
ನ ಹ್ಯನ್ಯಮನುಪಶ್ಯಾಮಿ ಯೇನಾಸೌ ದುಃಖಭಾಗ್ ಜಯಃ ॥೧೦॥

ಅಂಥ ಕಾಲುಗಳಿಂದ ನಿತ್ಯ ದಾರಿಯನ್ನು ಕ್ರಮಿಸುವುದರಿಂದ ಪುರುಷ ಶ್ರೇಷ್ಠನಾದ ಅರ್ಜುನನು ದುಃಖ ಅನುಭವಿಸುತ್ತಿದ್ದಾನೆ. ಅದನ್ನು ಬಿಟ್ಟು ಬೇರೆ ಯಾವುದೇ ಕಾರಣವನ್ನು ತಿಳಿಯುತ್ತಿಲ್ಲ.

ವೈಶಂಪಾಯನಃ

ಇತ್ಯುಕ್ತಃ ಸ ಕುರುಶ್ರೇಷ್ಠಃ ಸತ್ಯಂ ಕೃಷ್ಣೇನ ಧೀಮತಾ ।
ಪ್ರೋವಾಚ ವೃಷ್ಣಿಶಾರ್ದೂಲಮೇವಮೇತದಿತಿ ಪ್ರಭುಃ ॥೧೧॥

ವೈಶಂಪಾಯನ– ಜ್ಞಾನಿಯಾದ ಕೃಷ್ಣನು ಇಂತು ನುಡಿಯಲಾಗಿ, ಪುರುಷಶ್ರೇಷ್ಠನಾದ ಧರ್ಮಜನು ವೃಷ್ಣಿವೀರನಾದ ಕೃಷ್ಣನನ್ನುದ್ದೇಶಿಸಿ ಪ್ರಭುವೇ, ನೀನು ಹೇಳಿದಂತೆಯೇ ಸರಿ ಎಂದು ಹೇಳಿದನು.

ಕೃಷ್ಣಾ ತು ದ್ರೌಪದೀ ಕೃಷ್ಣಂ ತಿರ್ಯಕ್ ಸಾಸೂಯಮೈಕ್ಷತ ।
ಪ್ರತಿಜಗ್ರಾಹ ತಸ್ಯಾಸ್ತಂ ಪ್ರಣಯಂ ಚಾಪಿ ಕೇಶಿಹಾ ॥೧೨॥

ಈ ಸಮಯದಲ್ಲಿ ದ್ರೌಪದಿಯು ಕೃಷ್ಣನನ್ನು ನೋಡುತ್ತಾ ಅಸೂಯಾ ಸೂಚಕವಾದ ಕಣ್ಣೋಟವನ್ನು ಬೀರಿದಳು. ಕೇಶಿಹಂತಕನಾದ ಕೃಷ್ಣನು ದ್ರೌಪದಿಯ ಸೂಚನೆಯನ್ನು ಆನಂದದಿಂದಲೇ ನೋಡಿದನು.

ಸಖ್ಯುಃ ಸಖಾ ಹೃಷೀಕೇಶಃ ಸಾಕ್ಷಾದಿವ ಧನಂಜಯಃ ॥೧೩॥

ಅರ್ಜುನನ ಮಿತ್ರನಾದ ಹೃಷೀಕೇಶನು ಅರ್ಜುನನಿಗೆ ಆತ್ಮೀಯ ಮಿತ್ರನಾಗಿದ್ದನು.

ತತ್ರ ಭೀಮಾದಯಸ್ತೇ ತು ಕುರವೋ ಯಾದವಾಸ್ತದಾ ।
ವಿಚಿತ್ರಾ ರೇಮಿರೇ ಶ್ರುತ್ವಾ ಧನಂಜಯಕಥಾಂ ವಿಭೋ ॥೧೪॥

ಧನಂಜಯನ ಈ ದೇಹಲಕ್ಷಣವು ಕೃಷ್ಣನಿಂದ ಹೇಳಲ್ಪಡುತ್ತಿರಲು ಭೀಮಸೇನನೇ ಮೊದಲಾದ ಕೌರವರು, ಯಾದವರು ಧನಂಜಯನ ಕಥೆಯನ್ನು ಕೇಳಿ ಆಶ್ಚರ್ಯಚಕಿತರಾದರು.

ತಥಾ ಕಥಯತಾಮೇವ ತೇಷಾಮರ್ಜುನಸಂಕಥಾಃ ।
ಉಪಾಯಾದ್ ವಚನಾನ್ಮತ್ಯೋ೯ ವಿಜಯಸ್ಯ ಮಹಾತ್ಮನಃ ॥೧೫॥

ಸೋಽಭಿಗಮ್ಯ ಕುರುಶ್ರೇಷ್ಠಂ ನಮಸ್ಕೃತ್ಯ ಚ ಬುದ್ಧಿಮಾನ್ ।
ಉಪಾಯಾತಂ ನರವ್ಯಾಘ್ರಮರ್ಜುನಂ ಪ್ರತ್ಯವೇದಯತ್ ॥೧೬॥

ತಚ್ಛ್ರುತ್ವಾ ನೃಪತಿಸ್ತಸ್ಮೈ ಹರ್ಷಬಾಷ್ಪಾಕುಲೇಕ್ಷಣಃ ।
ಪ್ರಿಯಾಖ್ಯಾನನಿಮಿತ್ತಂ ವೈ ದದೌ ಬಹುಧನಂ ತದಾ ॥೧೭॥

ಹೀಗೆ ಮಹಾತ್ಮನಾದ ಅರ್ಜುನನಿಗೆ ಸಂಬಂಧಿಸಿದಂತೆ ಅವರೆಲ್ಲರೂ ಮಾತನಾಡುತ್ತಿರುವಾಗಲೇ ಬುದ್ಧಿವಂತನಾದ ದೂತನು ಕುರುಶ್ರೇಷ್ಠನಾದ ಯುಧಿಷ್ಠಿರನ ಬಳಿ ಬಂದು ನಮಸ್ಕರಿಸಿ, ಅರ್ಜುನನು ನಗರದ ಸಮೀಪಕ್ಕೆ ಬಂದಿರುವ ವಾರ್ತೆಯನ್ನು ಅರುಹಿದನು. ಕೂಡಲೇ ಧರ್ಮಜನು ಆನಂದಬಾಷ್ಪಗಳಿಂದ ಕೂಡಿದ ಕಣ್ಣುಗಳಿಂದ ಸಂತುಷ್ಟನಾಗಿ ದೂತನಿಗೆ ಅಪಾರವಾದ ಧನವನ್ನು ನೀಡಿದನು.

ತತೋ ದ್ವಿತೀಯೇ ದಿವಸೇ ಮಹಾನ್ ಶಬ್ದೋಽಭ್ಯವರ್ತತ ।
ಆಯಾತಿ ಪುರುಷವ್ಯಾಘ್ರೇ ಪಾಂಡವಾನಾಂ ಧುರಂಧರೇ ॥೧೮॥

ಬಳಿಕ ಎರಡನೆಯ ದಿವಸ ಕೌರವಶ್ರೇಷ್ಠನಾದ ಅರ್ಜುನನು ಹಸ್ತಿನಾವತಿಗೆ ಅಭಿಮುಖವಾಗಿ ಆಗಮಿಸುತ್ತಿರಲು, ಕುತೂಹಲದಿಂದ, ಸೇರಿದ ನೂರಾರು ಜನರ ಸಂಮರ್ದದಿಂದ ಕೋಲಾಹಲವು ಉಂಟಾಯಿತು.

ತತೋ ರೇಣುಃ ಸಮುದ್ಭೂತೋ ವಿಬಭೌ ತಸ್ಯ ವಾಜಿನಃ ।
ಅಭಿತೋ ವರ್ತಮಾನಸ್ಯ ಯಥೋಚ್ಚೈಃಶ್ರವಸಸ್ತಥಾ ॥೧೯॥

ಇಂದ್ರನ ಉಚ್ಚೈಃಶ್ರವಸ್ ಎಂಬ ಕುದುರೆಯ ಸಮಾನವಾದ ವೇಗವುಳ್ಳ, ಹತ್ತಿರಕ್ಕೆ ಆಗಮಿಸುತ್ತಿದ್ದ ಯಜ್ಞಾಶ್ವದ ಗೊರಸಿನಿಂದ ಉಂಟಾದ ಧೂಳು ಆಕಾಶದಲ್ಲಿ ಅದ್ಭುತವಾಗಿ ಶೋಭಿಸುತ್ತಿತ್ತು.

ತತ್ರ ಹರ್ಷಕಲಾ ವಾಚೋ ನರಾಣಾಂ ಶುಶ್ರುವೇಽರ್ಜುನಃ ।
ದಿಷ್ಟ್ಯಾ ಹಿ ಪಾರ್ಥಃ ಕುಶಲೀ ಧನ್ಯೋ ರಾಜಾ ಯುಧಿಷ್ಠಿರಃ ॥೨೦॥

ಅರ್ಜುನನು ಮಾರ್ಗದಲ್ಲಿ ಆಗಮಿಸುತ್ತಾ, ಜನರು ಪರಸ್ಪರ ಹೇಳುತ್ತಿದ್ದ ಹರ್ಷದಾಯಕವಾದ ಮಾತುಗಳನ್ನು ಕೇಳಿಸಿಕೊಂಡನು. ಪಾರ್ಥನೇ, ಸೌಭಾಗ್ಯದಿಂದ ನೀನು ಕುಶಲಿಯಾಗಿರುವೆ. ನಿನ್ನ ಆಗಮನವನ್ನು ಕಾಣುತ್ತಿರುವ ಯುಧಿಷ್ಠಿರನು ಧನ್ಯನು.

ಕೋಽನ್ಯೋ ಹಿ ಪೃಥಿವೀಂ ಕೃತ್ಸ್ನಾತ್ ಅಭಿಜಿತ್ಯ ಸಪಾರ್ಥಿವಾಮ್ ।
ಚಾರಯಿತ್ವಾ ಹಯಶ್ರೇಷ್ಠಮುಪೇಯಾದರ್ಜುನಾದೃತೇ ॥೨೧॥

ಅರ್ಜುನನನ್ನು ಬಿಟ್ಟು ಸಮಸ್ತ ರಾಜರನ್ನು ಜಯಿಸಿ, ಈ ಸಮಗ್ರ ಭೂಮಂಡಲದಲ್ಲಿ ಯಜ್ಞಾಶ್ವವನ್ನು ಸಂಚರಿಸಿಕೊಂಡು ಬರುವ ವ್ಯಕ್ತಿ ಬೇರೆ ಯಾರಿದ್ದಾರೆ?

ಯೇ ವ್ಯತೀತಾ ಮಹಾತ್ಮಾನೋ ರಾಜಾನಃ ಸಗರಾದಯಃ ।
ತೇಷಾಮಪೀದೃಶಂ ಕರ್ಮ ನ ಕಿಂಚಿದಪಿ ಶುಶ್ರುಮಃ ॥೨೨॥

ಹಿಂದಿನ ಕಾಲದಲ್ಲಿ ಯಾವ ಸಗರನೇ ಮೊದಲಾದ ಚಕ್ರವರ್ತಿಗಳು ಆಗಿಹೋದರೋ ಅಂತಹವರೂ ಇಂತಹ ಅದ್ಭುತವಾದ ಕರ್ಮವನ್ನು ಮಾಡಿದ್ದಾರೆಂದು ನಾವು ಕೇಳಿಸಿಕೊಂಡಿಲ್ಲ.

ನೈತದನ್ಯೇ ಕರಿಷ್ಯಂತಿ ಭವಿಷ್ಯಂತೋ ನರಾಧಿಪಾಃ ।
ಯತ್ ತ್ವಂ ಕುರುಕುಲಶ್ರೇಷ್ಠ ದುಷ್ಕರಂ ಕೃತವಾನಿಹ ॥೨೩॥

ಕುಲಶ್ರೇಷ್ಠನೇ, ಮುಂದಿನ ರಾಜರೂ ಕೂಡ ನೀನು ಇಂದು ಆಚರಿಸುವ ದುಷ್ಕರವಾದ ಕರ್ಮವನ್ನು ಆಚರಿಸಲು ಸಮರ್ಥರಾಗಲಾರರು.

ಇತ್ಯೇವಂ ವದತಾಂ ನೃಣಾಂ ತೇಷಾಂ ಶ್ರುತಿಸುಖಾವಹಾಃ ।
ಶೃಣ್ವನ್ ವಿವೇಶ ಧರ್ಮಾತ್ಮಾ ಫಲ್ಗುನೋ ಯಜ್ಞಸಂಸ್ತರಮ್ ॥೨೪॥

ಇವೇ ಮೊದಲಾದ ಮಾತುಗಳನ್ನು ಕರ್ಣಾನಂದಕರವಾಗಿ ಜನರೆಲ್ಲರೂ ಹೇಳುತ್ತಿರಲು, ಧರ್ಮಾತ್ಮನಾದ ಫಲ್ಗುನನು ಆ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ಯಜ್ಞಮಂಟಪವನ್ನು ಪ್ರವೇಶಿಸಿದನು.

ತತೋ ರಾಜಾ ಸಹಾಮಾತ್ಯಃ ಕೃಷ್ಣಶ್ಚ ಯದುನಂದನಃ ।
ಧೃತರಾಷ್ಟ್ರಂ ಪುರಸ್ಕೃತ್ಯ ತೇ ತಂ ಪ್ರತ್ಯುದ್ಯಯುಸ್ತದಾ ॥೨೫॥

ಆ ಸಮಯದಲ್ಲಿ ಮಂತ್ರಿಗಳಿಂದ ಸಹಿತನಾದ ಯುಧಿಷ್ಠಿರನು, ಯದುನಂದನನಾದ ಕೃಷ್ಣನು, ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ಅರ್ಜುನನನ್ನು ಎದುರುಗೊಂಡರು.

ಸೋಽಭಿವಾದ್ಯ ಪಿತುಃ ಪಾದೌ ಧರ್ಮರಾಜಸ್ಯ ಧೀಮತಃ ।
ಭೀಮಾದೀಂಶ್ಚಾಪಿ ಸಂಪೂಜ್ಯ ಪರ್ಯಷ್ವಜತ ಕೇಶವಮ್ ॥೨೬॥

ಅರ್ಜುನನಾದರೂ ಧೃತರಾಷ್ಟ್ರನ ಪಾದಗಳಿಗೆ ವಂದಿಸಿ, ಧೀಮಂತನಾದ ಧರ್ಮರಾಜನ ಪಾದಗಳಿಗೂ ವಂದಿಸಿ, ಭೀಮಾದಿಗಳನ್ನು ಪೂಜಿಸಿ, ಕೇಶವನನ್ನು ಆಲಿಂಗಿಸಿಕೊಂಡನು.

ತೈಃ ಸಮೇತ್ಯಾರ್ಚಿತಸ್ತಾನ್ ಸ ಪ್ರತ್ಯರ್ಚ್ಯಾಥ ಯಥಾವಿಧಿ ।
ವಿಶಶ್ರಾಮ ಸ ಧರ್ಮಾತ್ಮಾ ತೀರಂ ಲಬ್ಧ್ವೇವ ಪಾರಗಃ ॥೨೭॥

ಕೃಷ್ಣನೇ ಮೊದಲಾದವರಿಂದ ಕೂಡಿಕೊಂಡು ಯುಧಿಷ್ಠಿರನು ಅರ್ಜುನನನ್ನು ಸ್ವಾಗತಿಸಿ, ಸತ್ಕರಿಸಿದನು. ಪ್ರತಿಯಾಗಿ ಅರ್ಜುನನೂ ಸತ್ಕರಿಸಿದನು. ಸಮುದ್ರದ ತೀರವನ್ನು ಸೇರಬಯಸಿ ಈಜಿಕೊಂಡು ಆಗಮಿಸಿದ ವ್ಯಕ್ತಿಯು ವಿಶ್ರಾಂತಿಯನ್ನು

ಬಯಸುವಂತೆ ಮಹಾಬಾಹುವಾದ ಅರ್ಜುನನು ದುಸ್ತರವಾದ ಕಾರ್ಯವನ್ನು ಮುಗಿಸಿ ವಿಶ್ರಾಂತಿಯನ್ನು ಹೊಂದಿದನು.

ಏತಸ್ಮಿನ್ನೇವ ಕಾಲೇ ತು ಸ ರಾಜಾ ಬಭ್ರುವಾಹನಃ ।
ಮಾತೃಭ್ಯಾಂ ಸಹಿತೋ ಧೀಮಾನ್ ಕುರೂನಭ್ಯಾಜಗಾಮ ಹ ॥೨೮॥

ಇದೇ ಸಮಯದಲ್ಲಿ ಬಭ್ರುವಾಹನನು ತನ್ನ ತಾಯಂದಿರಿಂದ ಕೂಡಿಕೊಂಡು ಹಸ್ತಿನಾವತಿಗೆ ಆಗಮಿಸಿದನು.

ಸ ಸಮೇತ್ಯ ಕುರೂನ್ ಸರ್ವಾನ್ ಸರ್ವೈಸ್ತೈರಭಿನಂದಿತಃ ।
ಪ್ರವಿವೇಶ ಪಿತಾಮಹ್ಯಾಃ ಕುಂತ್ಯಾ ಭವನಮುತ್ತಮಮ್ ॥೨೯॥

ಅರ್ಜುನನ ಸುತನು ಹಸ್ತಿನಾವತಿಗೆ ಆಗಮಿಸಿದೊಡನೆ ಕುರುವೃದ್ಧರನ್ನೂ, ರಾಜರನ್ನೂ ನಮಸ್ಕರಿಸಿದನು. ಅವರೂ ಯಥೋಚಿತವಾಗಿ ಸತ್ಕರಿಸಲು, ಪಿತಾಮಹಿಯಾದ ಕುಂತಿಯ ಶ್ರೇಷ್ಠವಾದ ಅರಮನೆಗೆ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅರ್ಜುನಾಗಮನಂ ನಾಮ ಏಕೋನನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತನೆಯ ಅಧ್ಯಾಯ

ಯುಧಿಷ್ಠಿರನ ಅಶ್ವಮೇಧಯಾಗಕ್ಕೆ ಆಗಮಿಸಿದ ವೇದವ್ಯಾಸರು ಋತ್ವಿಜರಿಂದ ಸೇರಿಕೊಂಡು ಅಶ್ವಮೇಧಯಾಗವನ್ನು ಆರಂಭಿಸಿದುದು.

ವೈಶಂಪಾಯನಃ

ಸ ಪ್ರವಿಶ್ಯ ಯಥಾನ್ಯಾಯಂ ಪಾಂಡವಾನಾಂ ನಿವೇಶನಮ್ ।
ಪಿತಾಮಹೀಮಭ್ಯವದತ್ ಸಾಮ್ನಾ ಪರಮವಲ್ಗುನಾ ॥೧॥

ವೈಶಂಪಾಯನ– ಜನಮೇಜಯನೇ, ಮಹಾಬಾಹುವಾದ ಬಭ್ರುವಾಹನನು ಪಾಂಡವರ ಅರಮನೆಯನ್ನು ಪ್ರವೇಶಿಸಿ, ವಿನಯದಿಂದ ಕೂಡಿದ ಮಧುರವಾದ ಮಾತುಗಳನ್ನು ಕೇಳುತ್ತಾ ಪಿತಾಮಹಿಯಾದ ಕುಂತಿಗೆ ನಮಸ್ಕರಿಸಿದನು.

ತಥಾ ಚಿತ್ರಾಂಗದಾ ದೇವೀ ಕೌರವಸ್ಯಾತ್ಮಜಾऽಪಿ ಚ ।
ಪೃಥಾಂ ಕೃಷ್ಣಾಂ ಚ ಸಹಿತೇ ವಿನಯೇನಾಭಿಜಗ್ಮತುಃ ॥೨॥

ನಂತರ ಚಿತ್ರಾಂಗದೆಯು, ಕೌರವ್ಯ ಎಂಬ ನಾಗನ ಮಗಳಾದ ಉಲೂಪಿಯೂ ವಿನೀತರಾಗಿ ಕುಂತಿ ಮತ್ತು ದ್ರೌಪದಿಯರ ಬಳಿಗೆ ಹೋದರು.

ಸುಭದ್ರಾಂ ಚ ಯಥಾನ್ಯಾಯಂ ಯಾಶ್ಚಾನ್ಯಾಃ ಕುರುಯೋಷಿತಃ ॥೩॥

ಉಲೂಪಿ, ಚಿತ್ರಾಂಗದೆಯರು ಸುಭದ್ರೆಯನ್ನೂ, ಇತರ ಕುರುಕುಲ ಸ್ತ್ರೀಯರನ್ನು ಕಂಡು ಮಾತನಾಡಿಸಿದರು.

ದದೌ ಕುಂತೀ ತತಸ್ತಾಭ್ಯಾಂ ರತ್ನಾನಿ ವಿವಿಧಾನಿ ಚ ।
ದ್ರೌಪದೀ ಚ ಸುಭದ್ರಾ ಚ ಯಾಶ್ಚಾಪ್ಯನ್ಯಾಃ ಕುರುಸ್ತ್ರಿಯಃ ॥೪॥

ಬಳಿಕ ಕುಂತಿಯು ಇವರೀರ್ವರಿಗೂ ಬಗೆ ಬಗೆಯಾದ ರತ್ನಗಳನ್ನು ದಾನವಾಗಿ ಕೊಟ್ಟಳು. ದ್ರೌಪದಿ-ಸುಭದ್ರೆ, ಇತರ ಕುಲಸ್ತ್ರೀಯರು ಇವರೀರ್ವರಿಗೆ ಅನೇಕ ಪಾರಿತೋಷಕಗಳನ್ನು ನೀಡಿದರು.

ಊಷತುಸ್ತತ್ರ ತೇ ದೇವ್ಯೌ ಮಹಾರ್ಹಶಯನಾಸನೇ ।
ಸುಪೂಜಿತೇ ಸ್ವಯಂ ಕುಂತ್ಯಾ ಪಾರ್ಥಸ್ಯ ಪ್ರಿಯಕಾಮ್ಯಯಾ ॥೫॥

ಬಳಿಕ ಅವರೀರ್ವರೂ ಬಹುಮೌಲ್ಯಭರಿತವಾದ ಹಾಸಿಗೆಗಳಿಂದ, ಆಸನಗಳಿಂದ ಅಲಂಕೃತವಾದ ಭವನಗಳಲ್ಲಿ ತಂಗಿದರು. ಅರ್ಜುನನಿಗೆ ಹಿತವನ್ನು ಉಂಟುಮಾಡುವ ದೃಷ್ಟಿಯಿಂದ ಇವರೀರ್ವರನ್ನು ಕುಂತಿಯೇ ಉಪಚರಿಸಿದಳು.

ಸ ಚ ರಾಜಾ ಮಹಾವೀರ್ಯಃ ಪೂಜಿತೋ ಬಭ್ರುವಾಹನಃ ।
ಧೃತರಾಷ್ಟ್ರಂ ಮಹೀಪಾಲಮುಪತಸ್ಥೇ ಯಥಾವಿಧಿ ॥೬॥

ಆ ಕುಂತೀದೇವಿಯಿಂದಲೇ ಮಹಾತೇಜಸ್ವಿಯಾದ ಬಭ್ರುವಾಹನನು ಸತ್ಕೃತನಾದನು. ಬಭ್ರುವಾಹನನೂ ಕೂಡ ಯಥೋಚಿತವಾಗಿ ಧೃತರಾಷ್ಟ್ರನನ್ನು ಸೇವಿಸಿದನು.

ಯುಧಿಷ್ಠಿರಂ ಚ ರಾಜಾನಂ ಭೀಮಾದೀಂಶ್ಚಾಪಿ ಪಾಂಡವಾನ್ ।
ಉಪಗಮ್ಯ ಮಹಾತೇಜಾ ವಿನಯೇನಾಭ್ಯವಾದಯತ್ ॥೭॥

ಮಹಾತೇಜಸ್ವಿಯಾದ ಬಭ್ರುವಾಹನನು ರಾಜನಾದ ಯುಧಿಷ್ಠಿರನನ್ನೂ, ಭೀಮನೇ ಮೊದಲಾದ ಪಾಂಡವರನ್ನೂ ಸಂಪರ್ಕಿಸಿ ವಿನಯಪೂರ್ವಕವಾಗಿ ನಮಸ್ಕರಿಸಿದನು.

ಸ ತೈಃ ಪ್ರೇಮ್ಣಾ ಪರಿಷ್ವಕ್ತಃ ಪೂಜಿತಶ್ಚ ಯಥಾವಿಧಿ ।
ಧನಂ ಚಾಸ್ಮೈ ದದುರ್ಭೂರಿ ಪ್ರೀಯಮಾಣಾ ಮಹಾರಥಾಃ ॥೮॥

ಅರ್ಜುನನ ಪ್ರೀತಿಯ ಪುತ್ರನಾದ ಮಣಲೂರಿನ ರಾಜನಾದ ಬಭ್ರುವಾಹನನನ್ನು ಯುಧಿಷ್ಠಿರಾದಿಗಳು ಗಾಢವಾಗಿ ಆಲಿಂಗಿಸಿಕೊಂಡು ಸತ್ಕರಿಸಿದರು. ಅವನಿಗೆ ಅಪಾರವಾದ ಪಾರಿತೋಷಕಗಳನ್ನು ನೀಡಿದರು.

ತಥೈವ ಸ ಮಹೀಪಾಲಃ ಕೃಷ್ಣಂ ಚಕ್ರಗದಾಧರಮ್ ।
ಪ್ರದ್ಯುಮ್ನವದ್ ಹೃಷೀಕೇಶಂ ವಿನಯೇನೋಪಜಗ್ಮಿವಾನ್ ॥೯॥

ಈ ಕ್ರಮದಲ್ಲಿಯೇ ಬಭ್ರುವಾಹನು ಚಕ್ರಗದಾಧರನಾದ ಕೃಷ್ಣನನ್ನು ಪ್ರದ್ಯುಮ್ನನು ವಂದಿಸುವಂತೆ ವಿನಯಪೂರ್ವಕವಾಗಿ ನಮಸ್ಕರಿಸಿದನು.

ತಸ್ಮೈ ಕೃಷ್ಣೋ ದದೌ ರಾಜ್ಞೇ ರಾಜಾರ್ಹಮಭಿಪೂಜಿತಮ್ ।
ರಥಂ ಹೇಮಪರಿಷ್ಕಾರಂ ದಿವ್ಯಾಶ್ವಯುಜಮುತ್ತಮಮ್ ॥೧೦॥

ಆ ಬಭ್ರುವಾಹನನಿಗೆ ಕೃಷ್ಣನೂ ಬಹುಮೌಲ್ಯಯುತವಾದ, ಎಲ್ಲರ ಪ್ರಶಂಸೆಗೆ ಪಾತ್ರವಾದ, ಸುವರ್ಣಾಭರಣಗಳಿಂದ ಅಲಂಕೃತವಾದ, ದಿವ್ಯವಾದ ಕುದುರೆಗಳಿಂದ ಸಹಿತವಾದ ರಥವನ್ನು ಪಾರಿತೋಷಕವಾಗಿ ಕೊಟ್ಟನು.

ಧರ್ಮರಾಜಶ್ಚ ಭೀಮಶ್ಚ ಯಮಜೌ ಫಲ್ಗುನಸ್ತಥಾ ।
ಪೃಥಕ್ ಪೃಥಗಥೈವೈನಂ ಮಹಾರ್ಘೈರಭ್ಯಪೂಜಯನ್ ॥೧೧॥

ಬಳಿಕ ಧರ್ಮರಾಜ, ಭೀಮಸೇನ, ಅರ್ಜುನ, ನಕುಲ-ಸಹದೇವರು ಪ್ರತ್ಯೇಕ ಪ್ರತ್ಯೇಕವಾಗಿ ಬಭ್ರುವಾಹನನನ್ನು ಸತ್ಕರಿಸಿ, ಐಶ್ವರ್ಯಗಳನ್ನು ನೀಡಿದರು.

ತತಸ್ತೃತೀಯೇ ದಿವಸೇ ಸತ್ಯವತ್ಯಾಃ ಸುತೋ ಮುನಿಃ ।
ಯುಧಿಷ್ಠಿರಂ ಸಮಾನೀಯ ವಾಗ್ಮೀ ವಚನಮಬ್ರವೀತ್ ॥೧೨॥

ಅಂದಿನಿಂದ ಮೂರನೆಯ ದಿವಸದಲ್ಲಿ ಸತ್ಯವತಿಯ ಮಗನೆನಿಸಿದ ವ್ಯಾಸ ಮುನಿಗಳು ಯುಧಿಷ್ಠಿರನ ಬಳಿ ಆಗಮಿಸಿ ಇಂತು ನುಡಿದರು.

ವ್ಯಾಸಃ

ಅದ್ಯಪ್ರಭೃತಿ ಕೌಂತೇಯ ಯಜ್ಞಸ್ಯ ಸಮಯೋ ಹಿ ತೇ ।
ಮುಹೂರ್ತೋ ಯಾಜ್ಞಿಯಃ ಪ್ರಾಪ್ತಃ ಚೋದಯಂತ್ಯೇವ ಯಾಜಕಾಃ ॥

ವ್ಯಾಸರು– ಕೌಂತೇಯನೆ, ಇಂದಿನಿಂದ ನೀನು ಯಜ್ಞವನ್ನು ಆರಂಭಿಸು. ಯಜ್ಞವನ್ನು ಪ್ರಾರಂಭಿಸಲು ಇಂದು ಉತ್ತಮವಾದ ಮುಹೂರ್ತವು ಲಭಿಸಿದೆ. ಯಜ್ಞದ ಮುಹೂರ್ತವು ಉಪಸ್ಥಿತವಾಗಿದೆ. ಯಾಜ್ಞಿಕರು ಯಜ್ಞವನ್ನು ಮಾಡುವಂತೆ ಪ್ರೇರಿಸುತ್ತಿದ್ದಾರೆ.

ಅಹೀನೋ ನಾಮ ರಾಜೇಂದ್ರ ಕ್ರತುಸ್ತೇಯಂ ವಿಕಲ್ಪವಾನ್ ।
ಬಹುತ್ವಾತ್ ಕಾಂಚನಸ್ಯಾಸ್ಯ ಖ್ಯಾತೋ ಬಹುಸುವರ್ಣಕಃ ॥೧೪॥

ರಾಜೇಂದ್ರನೇ, ಯಜ್ಞದಲ್ಲಿ ಯಾವುದಕ್ಕೂ ಕೊರತೆ ಇರುವುದಿಲ್ಲ. ಅನೇಕ ವಿಧವಾದ ಪರಿಕರಗಳೆಲ್ಲವೂ ಸಿದ್ಧಗೊಂಡಿವೆ. ಬಹುಸಂಖ್ಯೆಯಲ್ಲಿ ಸುವರ್ಣವು ಉಪಯೋಗಿಸಲ್ಪಡುವ ಯಜ್ಞವು ಇದಾಗಿರುವುದರಿಂದ ಬಹುಸುವರ್ಣಕ ಯಜ್ಞವೆಂದೇ ಈ ಯಜ್ಞವು ಖ್ಯಾತಿ ಹೊಂದುತ್ತದೆ.

ಏವಮೇವ ಮಹಾರಾಜ ದಕ್ಷಿಣಾಂ ತ್ರಿಗುಣಾಂ ಕುರು ।
ತ್ರಿತ್ವಂ ವ್ರಜತು ತೇ ರಾಜನ್ ಬ್ರಾಹ್ಮಣಾ ಹ್ಯತ್ರ ಕಾರಣಮ್ ॥೧೫॥

ಆದ್ದರಿಂದ ಈ ಯಜ್ಞಕ್ಕೆ ಆಗಮಿಸಿದ ಋತ್ವಿಜರಿಗೆ ಮೂರುಪಟ್ಟು ಅಧಿಕವಾದ ದಕ್ಷಿಣೆಯನ್ನು ನೀನು ನೀಡು. ಹೀಗೆ ಮಾಡುವುದರಿಂದ ಒಂದೇ ಯಜ್ಞವಾದರೂ ಮೂರು ಯಜ್ಞಗಳನ್ನು ಮಾಡಿದ ಫಲವು ಲಭಿಸುತ್ತದೆ. ಯಜ್ಞಕ್ಕೆ ಪ್ರಧಾನಕಾರಣರು ಬ್ರಾಹ್ಮಣರೇ ಆಗಿರುತ್ತಾರೆ.

ತ್ರೀನಶ್ವಮೇಧಾನತ್ರ ತ್ವಂ ಸಂಪ್ರಾಪ್ಯ ಬಹುದಕ್ಷಿಣಾನ್ ।
ಜ್ಞಾತಿಹತ್ಯಾಕೃತಂ ಪಾಪಂ ಪ್ರಹಾಸ್ಯಸಿ ನರಾಧಿಪ ॥೧೬॥

ಬಹುದಕ್ಷಿಣಾಯುಕ್ತವಾದ ಮೂರು ಅಶ್ವಮೇಧಯಾಗಗಳ ಫಲವನ್ನು ಪಡೆದು ನೀನು, ಜ್ಞಾತಿಗಳ ವಧೆಯಿಂದ ಉಂಟಾದ ಪಾಪವನ್ನು ಕಳೆದುಕೊಳ್ಳುತ್ತಿ.

ಪವಿತ್ರಂ ಪರಮಂ ಹ್ಯೇತತ್ ಪಾವನಾನಾಂ ಚ ಪಾವನಮ್ ।
ಯದಶ್ವಮೇಧಾವಭೃಥಂ ಪ್ರಾಪ್ಸ್ಯಸೇ ಕುರುನಂದನ ॥೧೭॥

ನಿನಗೆ ಅಶ್ವಮೇಧ ಯಜ್ಞದಲ್ಲಿ ಲಭಿಸುವ ಅವಭೃಥಸ್ನಾನವು ಪವಿತ್ರವೆನಿಸಿದೆ. ಅಂತಹ ಶ್ರೇಷ್ಠವಾದ, ಉತ್ತಮವಾದ ಅವಭೃಥ ಸ್ನಾನವನ್ನು ನೀನು ಹೊಂದುವಿ.

ವೈಶಂಪಾಯನಃ

ಇತ್ಯುಕ್ತಃ ಸ ತು ತೇಜಸ್ವೀ ವ್ಯಾಸೇನಾಮಿತಬುದ್ಧಿನಾ ।
ದೀಕ್ಷಾಂ ವಿವೇಶ ಧರ್ಮಾತ್ಮಾ ವಾಜಿಮೇಧಾಪ್ತಯೇ ತದಾ ॥೧೮॥

ವೈಶಂಪಾಯನ– ಜನಮೇಜಯನೇ, ಮಹಾಜ್ಞಾನಿಗಳಾದ ವ್ಯಾಸರು ಹೀಗೆ ನುಡಿಯಲು ಧರ್ಮಾತ್ಮನಾದ, ತೇಜಸ್ವಿಯಾದ ಯುಧಿಷ್ಠಿರನು ಅಶ್ವಮೇಧ ಯಜ್ಞದ ಸಿದ್ಧಿಗಾಗಿ ದೀಕ್ಷೆಯನ್ನು ಸ್ವೀಕರಿಸಿದನು.

ನರಾಧಿಪಃ ಪ್ರಾಯಜತ ವಾಜಿಮೇಧಂ ಮಹಾಕ್ರತುಮ್ ।
ವಿಧಿವದ್ ದಕ್ಷಿಣಂ ರಾಜಾ ಸರ್ವಯಜ್ಞಗುಣಾನ್ವಿತಮ್ ॥೧೯॥

ಮಹಾಬಾಹುವಾದ ಯುಧಿಷ್ಠಿರನು ಅನೇಕ ಪ್ರಕಾರಗಳಿಂದ ಮಹಾ ಅಶ್ವಮೇಧ ಯಾಗವನ್ನು ಸಮಸ್ತ ಗುಣಸಂಪನ್ನವಾಗಿ ಮಾಡಲಾರಂಭಿಸಿದನು. ವಿಧಿವತ್ತಾಗಿ ದಕ್ಷಿಣೆಗಳನ್ನೂ ನೀಡಿದನು.

ತತ್ರ ವೇದವಿದೋ ರಾಜನ್ ಚಕ್ರುಃ ಕರ್ಮಾಣಿ ಯಾಜಕಾಃ ।
ಪರಿಕ್ರಾಮಂತಿ ಶಾಸ್ತ್ರಜ್ಞಾ ಯಥಾವದ್ ದ್ವಿಜಸತ್ತಮಾಃ ॥೨೦॥

ಆ ಅಶ್ವಮೇಧ ಯಜ್ಞಮಂಟಪದಲ್ಲಿ ವೇದಜ್ಞರಾದ ಯಾಜಕರು ಉತ್ತಮ ರೀತಿಯಲ್ಲಿ ಕರ್ಮಗಳನ್ನು ಆಚರಿಸಿದರು. ಶ್ರೇಷ್ಠರಾದ, ಶಾಸ್ತ್ರಜ್ಞರಾದ ಬ್ರಾಹ್ಮಣರು ಆ ಯಜ್ಞದ ಪರಿಕರಗಳನ್ನು ನೀಡಲು ಸುತ್ತ ಸಂಚರಿಸುತ್ತಿದ್ದರು.

ನ ತೇಷಾಂ ಸ್ಖಲಿತಂ ತತ್ರ ನಾಸೀದಪಹುತಂ ತದಾ ।
ಕ್ರಮಯುಕ್ತಂ ಚ ಯುಕ್ತಂ ಚ ಚಕ್ರುಸ್ತತ್ರ ದ್ವಿಜರ್ಷಭಾಃ ॥೨೧॥

ಆ ಯಾಜಕರು ಮಾಡುತ್ತಿದ್ದ ಕರ್ಮದಲ್ಲಿ ಸ್ಖಲಿತ್ಯವಿರಲಿಲ್ಲ. ಯಾವ ಕರ್ಮಗಳಲ್ಲೂ ಲೋಪವಿರಲಿಲ್ಲ. ಶ್ರೇಷ್ಠರಾದ ಬ್ರಾಹ್ಮಣರು ಕ್ರಮಬದ್ಧವಾಗಿ, ವಿಧಿ ಬದ್ಧವಾಗಿ ಯಜ್ಞವನ್ನು ಆಚರಿಸುತ್ತಿದ್ದರು.

ಕೃತ್ವಾ ಪ್ರವರ್ಗ್ಯಂ ಧರ್ಮಜ್ಞಾ ಯಥಾವದ್ ದ್ವಿಜಸತ್ತಮಾಃ ।
ಚಕ್ರುಸ್ತೇ ವಿಧಿವದ್ ರಾಜನ್ ತಥೈವಾಭಿಷವಂ ದ್ವಿಜಾಃ ॥೨೨॥

ಆ ಯಾಜ್ಞಿಕರು ಧರ್ಮಜ್ಞರಾಗಿದ್ದರು. ವಿಧಿಬದ್ಧವಾಗಿ ಪ್ರವರ್ಗ ಎಂಬ ಕರ್ಮವನ್ನು ಮಾಡುತ್ತಾ, ಸೋಮಲತೆಯನ್ನು ಕುಟ್ಟಿ ರಸವನ್ನು ತೆಗೆಯುವ ಅಭಿಷವ ಕರ್ಮವನ್ನು ವಿಧಿವತ್ತಾಗಿ ಆಚರಿಸಿದರು.

ಅಭಿಷೂಯ ತತೋ ರಾಜನ್ ಸೋಮಂ ಸೋಮಪಸತ್ತಮಾಃ ।
ಸವನಾನ್ಯಾನುಪೂರ್ವ್ಯೇಣ ಚಕ್ರುಃ ಶಾಸ್ತ್ರಾನುಸಾರಿಣಃ ॥೨೩॥

ಸೋಮಪಾನ ಮಾಡುವುದರಲ್ಲಿ ಶ್ರೇಷ್ಠರಾದ ವಿದ್ವಾಂಸರು ಸೋಮಲತೆಯಿಂದ ರಸವನ್ನು ತೆಗೆದು, ಯಜ್ಞದಲ್ಲಿ ನೀಡಿ ಪ್ರಾತಃಸವನವೇ ಮೊದಲಾದ ಮೂರು ಸವನಗಳನ್ನು ಶಾಸ್ತ್ರಾನುಸಾರವಾಗಿ ಆಚರಿಸಿದರು.

ನ ತತ್ರ ಕೃಪಣಃ ಕಶ್ಚಿನ್ನ ದರಿದ್ರೋ ಬಭೂವ ಹ ।
ಕ್ಷುಧಿತೋ ದುಃಖಿತೋ ವಾऽಪಿ ಪ್ರಾಕೃತೋ ವಾऽಪಿ ಮಾನವಃ ॥೨೪॥

ಆ ಯಜ್ಞಕ್ಕೆ ಆಗಮಿಸಿದ ವ್ಯಕ್ತಿಗಳಲ್ಲಿ ಜಿಪುಣರೂ, ದರಿದ್ರರೂ, ಹಸಿದವರೂ, ದುಃಖಿತರೂ, ಅಸಂಸ್ಕೃತರೂ ಎಂಬ ಒಬ್ಬ ಮನುಷ್ಯನೂ ಇರಲಿಲ್ಲ.

ಭೋಜನಂ ಭೋಜನಾರ್ಥಿಭ್ಯೋ ದಾಪಯಾಮಾಸ ಸರ್ವದಾ ।
ಭೀಮಸೇನೋ ಮಹಾತೇಜಾಃ ಸತತಂ ರಾಜಶಾಸನಾತ್ ॥೨೫॥

ಮಹಾತೇಜಸ್ವಿಯಾದ ಭೀಮಸೇನನು ನಿರಂತರವೂ ಯುಧಿಷ್ಠಿರನ ಆದೇಶದಂತೆ ಭೋಜನಾರ್ಥಿಗಳಿಗೆ ಭೋಜನವನ್ನು ಮಾಡಿಸುತ್ತಿದ್ದನು.

ಸಂಸ್ತರೇ ಕುಶಲಾಶ್ಚಾಪಿ ಸರ್ವಕರ್ಮಾಣಿ ಯಾಜಕಾಃ ।
ದಿವಸೇ ದಿವಸೇ ಚಕ್ರುರ್ಯಥಾಶಾಸ್ತ್ರಾರ್ಥಚಕ್ಷುಷಃ ॥೨೬॥

ಯಜ್ಞವೇದಿಯನ್ನು ನಿರ್ಮಾಣ ಮಾಡುವುದರಲ್ಲಿ ನಿಷ್ಣಾತರಾದ ಯಾಜಕರು ವಿಧಿಬದ್ಧವಾಗಿ ಸಮಸ್ತ ಕಾರ್ಯಗಳನ್ನೂ ಆಚರಿಸುತ್ತಿದ್ದರು. ಶಾಸ್ತ್ರವನ್ನು ಚೆನ್ನಾಗಿ ಅರಿತು ಪ್ರತಿದಿವಸದಲ್ಲಿಯೂ ಯೋಗ್ಯವಾದ ಕರ್ಮಗಳನ್ನು, ದರ್ಭೆಗಳನ್ನು ಹಾಸುವುದನ್ನು ಕುಶಲಿಗಳಾದ ಬ್ರಾಹ್ಮಣರು ಆಚರಿಸುತ್ತಿದ್ದರು.

ನಾಷಡಂಗವಿದತ್ರಾಸೀತ್ ಸದಸ್ಯೋ ನಾಬಹುಶ್ರುತಃ ।
ನಾವ್ರತೋ ನಾನುಪಾಧ್ಯಾಯೋ ನ ಚ ವಾದಾಕ್ಷಮೋ ದ್ವಿಜಃ ॥೨೭॥

ಷಡಂಗ ಅಧ್ಯಯನ, ವೇದವನ್ನು ಅಧ್ಯಯನ ಮಾಡದವರು ಅಲ್ಲಿ ಯಾರೂ ಇರಲಿಲ್ಲ. ವ್ರತಾನುಷ್ಠಾನ ಮಾಡದ, ಅಧ್ಯಾಪನ ಕರ್ಮದಲ್ಲಿ ಕುಶಲನಲ್ಲದ, ವಾದದಲ್ಲಿ ದಕ್ಷತೆಯಿಲ್ಲದ ಒಬ್ಬ ದ್ವಿಜನೂ ಆ ಯಜ್ಞದಲ್ಲಿ ಕಾಣಿಸಲಿಲ್ಲ.

ಯೂಪೋಚ್ಛ್ರಯೇ ತತಃ ಪ್ರಾಪ್ತೇ ಷಟ್ ಬೈಲ್ವಾನ್ ಭರತರ್ಷಭ ।
ಖಾದಿರಾನ್ ಬಿಲ್ವಸಹಿತಾನ್ ತಾವತಃ ಸರ್ವವರ್ಣಿನಃ ॥೨೮॥

ದೇವದಾರುಮಯೌ ದ್ವೌ ತು ಯೂಪೌ ಕುರುಪತೇಃ ಕ್ರತೌ ।
ಶ್ಲೇಷ್ಮಾತ್ಮಕಮಯಂ ಚೈಕಂ ಯಾಜಕಾಃ ಸಮಕಾರಯನ್ ॥೨೯॥

ಯಜ್ಞಕ್ಕೆ ಸಂಬಂಧಪಟ್ಟಂಥ ಯೂಪಸ್ಥಾಪನೆಯ ಸಮಯವು ಸನ್ನಿಹಿತವಾದಾಗ ಯಾಜಕರು ಯಜ್ಞಭೂಮಿಯಲ್ಲಿ ಬಿಲ್ವಮರದಿಂದ ನಿರ್ಮಿಸಲ್ಪಟ್ಟ ಆರು, ಹಗ್ಗಗಳಿಂದ ನಿರ್ಮಿಸಲ್ಪಟ್ಟ ಆರು, ಹೊಲಾಸದಿಂದ ನಿರ್ಮಿಸಲ್ಪಟ್ಟ ಆರು, ದೇವದಾರು ವೃಕ್ಷದಿಂದ ನಿರ್ಮಿಸಲ್ಪಟ್ಟ ಎರಡು, ಚಳ್ಳೆ ಮರದಿಂದ ನಿರ್ಮಿಸಲ್ಪಟ್ಟ ಒಂದು ಯೂಪಗಳನ್ನು ಸ್ಥಾಪಿಸಿದರು (ಒಟ್ಟು ಇಪ್ಪತ್ತೊಂದು ಯೂಪಗಳು).

ಸರ್ವಾನೇತಾನ್ ಯಥಾಶಾಸ್ತ್ರಂ ಯಾಜಕಾಃ ಸಮಯೋಜಯನ್ ॥೩೦॥

ಕ್ರಮಬದ್ಧವಾಗಿ ಮಾಡಿದ ಈ ಎಲ್ಲ ಮರಗಳ ಯೂಪಗಳನ್ನು ಯಾಜಕರು ಶಾಸ್ತ್ರದ ವಿಧಿಗೆ ಅನುಸಾರವಾಗಿ ಯಜ್ಞಪ್ರಕ್ರಿಯೆಯಲ್ಲಿ ಬಳಸಿಕೊಂಡರು.

ಶೋಭಾರ್ಥಂ ಚಾಪರಾನ್ ಯೂಪಾನ್ ಕಾಂಚನಾನ್ ಭರತರ್ಷಭ ।
ಸ ಭೀಮಃ ಕಾರಯಾಮಾಸ ಧರ್ಮರಾಜಸ್ಯ ಶಾಸನಾತ್ ॥೩೧॥

ಯಜ್ಞಮಂಟಪದ ಅಲಂಕಾರಕ್ಕಾಗಿ ಭೀಮಸೇನನು ಧರ್ಮರಾಜನ ಆದೇಶದಂತೆ ಸುವರ್ಣಮಯವಾದ ಬೇರೆ ಅನೇಕ ಯೂಪಗಳನ್ನು ಮಾಡಿಸಿದನು.

ತೇ ವ್ಯರಾಜಂತ ರಾಜರ್ಷೇರ್ವಾಸೋಭಿರುಪಶೋಭಿತಾಃ ।
ನರೇಂದ್ರಾಭಿಗತಾ ದೇವೈರ್ಯಥಾ ಸಪ್ತರ್ಷಯೋ ದಿವಿ ॥೩೨॥

ಅನೇಕ ಬಣ್ಣಗಳಿಂದ, ವಸ್ತ್ರಗಳಿಂದ ಅಲಂಕೃತವಾದ ಯುಧಿಷ್ಠಿರನ ಯಜ್ಞ ಸಂಬಂಧವಾದ ಯೂಪಗಳು ಆಕಾಶದಲ್ಲಿ ಮಹೇಂದ್ರನನ್ನು ಅನುಸರಿಸುವ ಸ್ವಭಾವವುಳ್ಳ ಸಪ್ತರ್ಷಿಗಳಿಂದ ಸಹಿತರಾದ ದೇವತೆಗಳಂತೆ ಬೆಳಗಿದವು.

ಇಷ್ಟಕಾಃ ಕಾಂಚನಾಶ್ಚಾತ್ರ ಚಯನಾರ್ಥಂ ಕೃತಾ ಭವನ್ ।
ಶುಶುಭೇ ಚಯನಂ ತಸ್ಯ ದಕ್ಷಸ್ಯೇವ ಪ್ರಜಾಪತೇಃ ॥೩೩॥

ಆ ಯಜ್ಞಕ್ಕೆ ಸಂಬಂಧಿಸಿದ ಅಗ್ನಿಯನ್ನು ಭರಿಸಲು ಬಂಗಾರಮಯವಾದ ಇಟ್ಟಿಗೆಗಳು ತರಲ್ಪಟ್ಟಿದ್ದವು. ಧರ್ಮರಾಜನ ಯಜ್ಞಕುಂಡವು ದಕ್ಷಪ್ರಜಾಪತಿಯ ಅಗ್ನಿಕುಂಡದಂತೆ ಪ್ರಕಾಶಿಸುತ್ತಿತ್ತು.

ಚತುಶ್ಚೈತ್ಯಃ ಸ ತಸ್ಯಾಸೀದಷ್ಟಾದಶಕರಾತ್ಮಕಃ ।
ಸ ರುಗ್ಮಪಕ್ಷೋ ನಿಚಿತಸ್ತ್ರಿಗುಣೋ ಗರುಡಾಕೃತಿಃ ॥೩೪॥

ಆ ಯಜ್ಞವೇದಿಕೆಯ ಒಂದೊಂದು ದಿಕ್ಕುಗಳಲ್ಲಿಯೂ ನಾಲ್ಕು-ನಾಲ್ಕು ಬಂಗಾರದ ಇಟ್ಟಿಗೆಯು ಇಡಲ್ಪಟ್ಟಿದ್ದವು. ಪ್ರತಿಯೊಂದು ಇಟ್ಟಿಗೆಗಳು ಹದಿನೆಂಟು ಗೇಣುಗಳ ಉದ್ದಳತೆಯನ್ನು ಹೊಂದಿದ್ದವು. ಬಂಗಾರದ ರೆಕ್ಕೆಗಳನ್ನು ಹೊಂದಿದ್ದ ಪ್ರಧಾನವಾದ ಇಟ್ಟಿಗೆಯು ಗರುಡನ ಆಕಾರದಲ್ಲಿ ತ್ರಿಕೋಣಾಕಾರದಲ್ಲಿ ಕೂಡಿತ್ತು.

ತತೋ ನಿಯುಕ್ತಾಃ ಪಶವೋ ಯಥಾಶಾಸ್ತ್ರಂ ಮನೀಷಿಭಿಃ ।
ತಂ ತಂ ದೇವಂ ಸಮುದ್ದಿಶ್ಯ ಪಕ್ಷಿಣಃ ಪಶವಶ್ಚ ಯೇ ॥೩೫॥

ಋಷಭಾಃ ಶಾಸ್ತ್ರಪಠಿತಾಸ್ತಥಾ ಜಲಚರಾಶ್ಚ ಯೇ ।
ಸರ್ವಾಂಸ್ತಾನಭ್ಯಯುಂಜಂಸ್ತೇ ತತ್ರಾಗ್ನಿಚಯಕರ್ಮಣಿ ॥೩೬॥

ಬಳಿಕ ವಿದ್ವಾಂಸರು ಶಾಸ್ತ್ರವಿಧಿಗೆ ಅನುಸಾರವಾಗಿ ಪಶುಗಳನ್ನು ನಿಯೋಗಿಸಿದರು. ಭಿನ್ನಭಿನ್ನ ದೇವತೆಗಳನ್ನು ಉದ್ದೇಶಿಸಿ ಯಾಜಕರು ಅಗ್ನಿಚಯನಕರ್ಮಗಳಲ್ಲಿ ಪಕ್ಷಿಗಳನ್ನು, ಪಶುಗಳನ್ನು, ಲಕ್ಷಣಭರಿತವಾದ ವೃಷಭಗಳನ್ನು, ಜಲಚರಪ್ರಾಣಿಗಳನ್ನು ಒಟ್ಟಾಗಿ ಸೇರಿಸಿದರು.

ಯೂಪೇಷು ನಿಯತಂ ಚಾಸೀತ್ ಪಶೂನಾಂ ತ್ರಿಶತಂ ತಥಾ ।
ಅಶ್ವರತ್ನೋತ್ತಮಂ ರಾಜ್ಞಃ ಕೌಂತೇಯಸ್ಯ ಮಹಾತ್ಮನಃ ॥೩೭॥

ಆ ಯಜ್ಞಯೂಪದಲ್ಲಿ ಮುನ್ನೂರು ಪಶುಗಳು ಬಂಧಿಸಲ್ಪಟ್ಟಿದ್ದವು. ಅವುಗಳಲ್ಲಿ ಶ್ರೇಷ್ಠವಾದ ಅರ್ಜುನನ ಯಜ್ಞಾಶ್ವವು ಉತ್ತಮವಾಗಿ ಶೋಭಿಸುತ್ತಿತ್ತು.

ಸ ಯಜ್ಞಃ ಶುಶುಭೇ ತಸ್ಯ ಸಾಕ್ಷಾದ್ ದೇವರ್ಷಿಸಂಕುಲಃ ।
ಗಂಧರ್ವಗಣಸಂಕೀರ್ಣಃ ಶೋಭಿತೋಽಪ್ಸರಸಾಂ ಗಣೈಃ ॥೩೮॥

ಸಾಕ್ಷಾತ್ ದೇವತೆಗಳಿಂದ, ಋಷಿಗಳಿಂದ ತುಂಬಿರುವ ಆ ಯುಧಿಷ್ಠಿರನ ಯಜ್ಞವು ಶೋಭಾಯಮಾನವಾಗಿ ಕಾಣಿಸುತ್ತಿತ್ತು. ಗಂಧರ್ವರ ಸಮುದಾಯದಿಂದ, ಅಪ್ಸರಾ ಸ್ತ್ರೀಯರ ಸಮುದಾಯದಿಂದಲೂ ಶೋಭೆಯನ್ನು ಹೆಚ್ಚಿಸಿತು.

ಸ ಕಿಂಪುರುಷಗೀತೈಶ್ಚ ಕಿನ್ನರೈರುಪಶೋಭಿತಃ ।
ಸಿದ್ಧವಿಪ್ರನಿವಾಸೈಶ್ಚ ಸಮಂತಾದಭಿಶೋಭಿತಃ ॥೩೯॥

ಆ ಯಜ್ಞಮಂಟಪವು ಕಿಂಪುರುಷರ ಗೀತೆಗಳಿಂದ, ಕಿನ್ನರರಿಂದಲೂ, ಸಿದ್ಧ ಪುರುಷರಿಂದ, ಬ್ರಾಹ್ಮಣರ ಸನ್ನಿಧಾನದಿಂದ ಎಲ್ಲವಿಧದಲ್ಲಿಯೂ ಶೋಭಿಸಿತು.

ತಸ್ಮಿನ್ ಸದಸಿ ನಿತ್ಯಾಸ್ತು ವ್ಯಾಸಶಿಷ್ಯಾ ದ್ವಿಜೋತ್ತಮಾಃ ।
ಸರ್ವಶಾಸ್ತ್ರಪ್ರಣೇತಾರಃ ಕುಶಲಾ ಯಜ್ಞಕರ್ಮಣಿ ॥೪೦॥

ದ್ವಿಜಶ್ರೇಷ್ಠರಾದ, ವೇದವ್ಯಾಸದೇವರ ಶಿಷ್ಯರಾದ, ಸರ್ವಶಾಸ್ತ್ರಗಳ ಪ್ರಣೇತೃಗಳಾದ, ಕುಶಲರಾದ ಯಾಜ್ಞಿಕರು ಯಾವಾಗಲೂ ಯಜ್ಞಸಭೆಯಲ್ಲಿ ಇರುತ್ತಿದ್ದರು.

ನಾರದಶ್ಚ ಬಭೂವಾತ್ರ ತುಂಬುರುಶ್ಚ ಮಹಾದ್ಯುತಿಃ ।
ವಿಶ್ವಾವಸುಶ್ಚಿತ್ರಸೇನಸ್ತಥಾಽನ್ಯೇ ಗೀತಕೋವಿದಾಃ ॥೪೧॥

ನಾರದರು, ತುಂಬುರರು, ವಿಶ್ವಾವಸುಗಳು, ಚಿತ್ರಸೇನ, ಇನ್ನೂ ಮೊದಲಾದ ಗಾನಕೋವಿದರೆಲ್ಲರೂ ಅಲ್ಲಿ ನೆರೆದಿದ್ದರು.

ಗಂಧರ್ವಾ ಗೀತಕುಶಲಾ ನೃತ್ತೇಷು ಚ ವಿಶಾರದಾಃ ।
ರಮಯಂತಿ ಸ್ಮ ತಾನ್ ವಿಪ್ರಾನ್ ಯಜ್ಞಕರ್ಮಾಂತರೇಷ್ವಥ ॥೪೨॥

ಹಾಡು ಹೇಳುವುದರಲ್ಲಿ ಕುಶಲರಾದ ಗಂಧರ್ವರು, ನರ್ತನ ಮಾಡುವುದರಲ್ಲಿ ವಿಶಾರದರಾದ ಗಂಧರ್ವರು ಆ ಯಜ್ಞಮಂಟಪದಲ್ಲಿದ್ದರು. ಯಜ್ಞದ ಕರ್ಮದ ಮಧ್ಯದಲ್ಲಿ ಆಲಸ್ಯ ಉಂಟಾಗದಂತೆ ಬ್ರಾಹ್ಮಣರನ್ನು ಇವರೆಲ್ಲರೂ ಸಂತೋಷ ಪಡಿಸುತ್ತಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಯೂಪಸ್ತಂಭಸ್ಥಾಪನಂ ನಾಮ ನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂದನೆಯ ಅಧ್ಯಾಯ

ಯುಧಿಷ್ಠಿರನು ಅಶ್ವಮೇಧ ಯಜ್ಞ ಮುಗಿದ ಬಳಿಕ ಯಥಾಯೋಗ್ಯವಾಗಿ ಬ್ರಾಹ್ಮಣರನ್ನು ದಕ್ಷಿಣೆ ಮೊದಲಾದವುಗಳಿಂದ ಸಂತೋಷಪಡಿಸಿದುದು. ರಾಜರನ್ನು ಪಾರಿತೋಷಕಗಳಿಂದ ಸಂತೋಷಪಡಿಸಿದುದು. ರಾಜರೆಲ್ಲರೂ ತಮ್ಮ ನಗರಗಳನ್ನು ಕುರಿತು ಪ್ರಯಾಣ ಬೆಳೆಸಿದುದು.

ವೈಶಂಪಾಯನಃ

ಶ್ರಪಯಿತ್ವಾ ಪಶೂನನ್ಯಾನ್ ವಿಧಿವದ್ ದ್ವಿಜಸತ್ತಮಾಃ ।
ತುರಗಂ ತಂ ಯಥಾಶಾಸ್ತ್ರಮಾಲಭಂತ ದ್ವಿಜಾತಯಃ ॥೧॥

ವೈಶಂಪಾಯನ– ಜನಮೇಜಯನೇ, ಬ್ರಾಹ್ಮಣಶ್ರೇಷ್ಠರು ವಿಧಿವತ್ತಾಗಿ ಪಶುಗಳನ್ನು ಯಜ್ಞದಲ್ಲಿ ಹೋಮಿಸಿ, ಬಳಿಕ ವಿಧಿವತ್ತಾಗಿ ಯಜ್ಞಾಶ್ವವನ್ನು ಆಲಂಬನ (ವಿಪಸನ) ಮಾಡಿದರು.

ತತಃ ಸಂಜ್ಞಪ್ಯ ತುರಗಂ ವಿಧಿವದ್ಯಾಜಕರ್ಷಭಾಃ ।
ಉಪಸಂವೇಶಯಾಂಚಕ್ರುಸ್ತತಸ್ತಾಂ ದ್ವಿಜಸತ್ತಮಾಃ ॥೨॥

ಕಾಲಭಿಸ್ತ್ರಿಭೀ ರಾಜನ್ ಯಥಾವಿಧಿ ಸಮನ್ವಿತಾಮ್ ॥೩॥

ವಿಧಿವತ್ತಾಗಿ ಯಜ್ಞ ಮಾಡುವುದರಲ್ಲಿ ಶ್ರೇಷ್ಠರಾದ ಬ್ರಾಹ್ಮಣರು ಯಜ್ಞದ ಕುದುರೆಯನ್ನು ವಿಧಿವತ್ತಾಗಿ ಬೇಯಿಸಿ, ಹಿಂಸೆಗೊಳಿಸಿ ಯಜ್ಞದ ಆಹುತಿಗಾಗಿ ಸಿದ್ಧಪಡಿಸಿಕೊಂಡರು. ಆ ಸಭೆಯು ಇಂದ್ರ-ಅಗ್ನಿ-ಸೂರ್ಯ ಎಂಬ ಮೂರು ದೇವತಾ ಕಲೆಗಳಿಂದ ಸನ್ನಿಧಾನವನ್ನು ಹೊಂದಿತ್ತು. ಶಾಸ್ತ್ರೋಕ್ತವಾದ ವಿಧಿಗಳಿಂದ ಆ ಸಭೆಯು ವಿರಾಜಮಾನವಾಗಿತ್ತು.

ಉದ್ಧೃತ್ಯ ತು ವಪಾಂ ತತ್ರ ಯಥಾಶಾಸ್ತ್ರಂ ದ್ವಿಜರ್ಷಭಾಃ ।
ಶ್ರಪಯಾಮಾಸುರಪರಾಃ ಶಾಸ್ತ್ರವದ್ ಭರತರ್ಷಭ ॥೪॥

ಶಾಸ್ತ್ರಕ್ಕನುಸಾರವಾಗಿ ಬ್ರಾಹ್ಮಣಶ್ರೇಷ್ಠರು ಆ ವಪೆಯನ್ನು ಉದ್ಧರಿಸಿ ಶಾಸ್ತ್ರಬದ್ಧವಾಗಿಯೇ ಇತರ ಬ್ರಾಹ್ಮಣರಿಂದ ಸಹಿತರಾಗಿ ಆಹುತಿಯನ್ನು ನೀಡಿದರು.

ತಂ ವಪಾಧೂಮಗಂಧಂ ತು ಧರ್ಮರಾಜಃ ಸಹಾನುಜಃ ।
ಉಪಾಜಿಘ್ರದ್ ಯಥಾನ್ಯಾಯಂ ಸರ್ವಪಾಪ್ಮಾಪಹಂ ತದಾ ॥೫॥

ಆ ವಪೆಯಿಂದ ಹೊರಟ ಹೊಗೆಯ ವಾಸನೆಯನ್ನು ಧರ್ಮರಾಜನು ತನ್ನ ಸಹೋದರರ ಜೊತೆಗೆ ಶಾಸ್ತ್ರವಿಧಿಗನುಗುಣವಾಗಿ ಆಘ್ರಾಣಿಸಿದನು. ಈ ಧೂಮವು ಸಮಸ್ತ ಪಾಪಪರಿಹಾರಕವಾಗಿತ್ತು.

ಶಿಷ್ಟಾನ್ಯಂಗಾನಿ ಯಾನ್ಯಾಸನ್ ತಸ್ಯಾಶ್ವಸ್ಯ ನರಾಧಿಪ ।
ತಾನ್ಯಗ್ನೌ ಜುಹುವುರ್ಧೀರಾಃ ಸಮಸ್ತಾಃ ಷೋಡಶರ್ತ್ವಿಜಃ ॥೬॥

ಕುದುರೆಯ ಉಳಿದ ಅಂಗಗಳನ್ನು ಹದಿನಾರು ಮಂದಿ ಋತ್ವಿಜರು ತುಂಡರಿಸಿ ಅಗ್ನಿಯಲ್ಲಿ ಹೋಮ ಮಾಡಿದರು.

ಸಂಸ್ಥಾಪ್ಯೈವಂ ತಸ್ಯ ರಾಜ್ಞಸ್ತಂ ಕ್ರತುಂ ಶಕ್ರತೇಜಸಃ ।
ಯಥಾಶಾಸ್ತ್ರಂ ಮಹಾರಾಜ ಋಷಯಃ ಶಕ್ರತೇಜಸಃ ॥೭॥

ಈ ಕ್ರಮದಲ್ಲಿ ಯುಧಿಷ್ಠಿರನು ಅಶ್ವಮೇಧ ಯಾಗವನ್ನು ಸಮಾಪನಗೊಳಿಸಿ ಇಂದ್ರನಿಗೆ ಸಮಾನವಾದ ತೇಜಸ್ಸನ್ನು ಹೊಂದಿದನು. ವಿಧಿಬದ್ಧವಾಗಿ ಯಜ್ಞವನ್ನು ಅನುಷ್ಠಾನ ಮಾಡಿದ ಋಷಿಗಳು ಇಂದ್ರನ ತೇಜಸ್ಸಿನಂತೆಯೇ ಬೆಳಗಿದರು.

ವ್ಯಾಸಃ ಸಶಿಷ್ಯೋ ಭಗವಾನ್ ವರ್ಧಯಾಮಾಸ ತಂ ನೃಪಮ್ ॥೮॥

ವೇದವ್ಯಾಸದೇವರು ತಮ್ಮ ಶಿಷ್ಯರಿಂದ ಸಹಿತರಾಗಿ ಆ ಯುಧಿಷ್ಠಿರ ರಾಜನನ್ನು ಅಭ್ಯುದಯ ಹೊಂದುವಂತೆ ಆಶೀರ್ವದಿಸಿದರು.

ತತೋ ಯುಧಿಷ್ಠಿರಃ ಪ್ರಾದಾತ್ ಸದಸ್ಯೇಭ್ಯೋ ಯಥಾವಿಧಿ ।
ಕೋಟೀಃ ಸಹಸ್ರಂ ನಿಷ್ಕಾಣಾಂ ವ್ಯಾಸಾಯ ತು ವಸುಂಧರಾಮ್ ॥೯॥

ಬಳಿಕ ಯುಧಿಷ್ಠಿರನು ಸಮಸ್ತ ಬ್ರಾಹ್ಮಣರಿಗೂ ಒಂದುಸಾವಿರ ಕೋಟಿ ಸುವರ್ಣ ನಾಣ್ಯಗಳನ್ನು ಕೊಟ್ಟು ವೇದವ್ಯಾಸರಿಗೆ ಸಮಸ್ತ ಭೂಮಂಡಲವನ್ನೇ ದಾನವಾಗಿ ಕೊಟ್ಟನು.

ಪ್ರತಿಗೃಹ್ಯ ಧರಾಂ ರಾಜನ್ ವ್ಯಾಸಃ ಸತ್ಯವತೀಸುತಃ ।
ಅಬ್ರವೀದ್ ಭರತಶ್ರೇಷ್ಠಂ ಧರ್ಮಾತ್ಮಾನಂ ಯುಧಿಷ್ಠಿರಮ್ । ॥೧೦॥

ಸತ್ಯವತೀಸುತರಾದ ವ್ಯಾಸರು ಸಮಗ್ರ ಭೂಮಂಡಲವನ್ನು ದಾನವನ್ನಾಗಿ ಪಡೆದು ಧರ್ಮಜನನ್ನು ಕುರಿತು ಹೀಗೆ ಹೇಳಿದರು.

ವ್ಯಾಸಃ

ಪೃಥಿವೀ ಭವತಸ್ತ್ವೇಷಾ ಸನ್ನ್ಯಸ್ತಾ ರಾಜಸತ್ತಮ ।
ನಿಷ್ಕ್ರಯೋ ದೀಯತಾಂ ಮಹ್ಯಂ ಬ್ರಾಹ್ಮಣಾ ಹಿ ಧನಾರ್ಥಿನಃ ॥೧೧॥

ವ್ಯಾಸರು– ರಾಜಶ್ರೇಷ್ಠನೇ, ಇಲ್ಲಿಯ ತನಕ ನಿನ್ನ ಆಧಿಪತ್ಯಕ್ಕೆ ಒಳಪಟ್ಟಿರುವ ಈ ಭೂಮಂಡಲವನ್ನು ಪುನಃ ನಿನ್ನ ಅಧಿಕಾರಕ್ಕೆ ಸಮರ್ಪಿಸುತ್ತೇನೆ. ಯುಧಿಷ್ಠಿರನೇ, ಬ್ರಾಹ್ಮಣರು ರಾಜ್ಯಾರ್ಥಿಗಳಲ್ಲ, ಧನಾರ್ಥಿಗಳಾಗಿದ್ದಾರೆ. ಆದ್ದರಿಂದ ಈ ಪೃಥಿವಿಯನ್ನು ನಿನಗೇ ನೀಡುತ್ತೇನೆ. ನನಗೆ ಧನವನ್ನು ನೀಡು.

ವೈಶಂಪಾಯನಃ

ಯುಧಿಷ್ಠಿರಸ್ತು ತಾನ್ ವಿಪ್ರಾನ್ ಪ್ರತ್ಯುವಾಚ ಮಹಾಮನಾಃ ।
ಭ್ರಾತೃಭಿಃ ಸಹಿತೋ ಧೀಮಾನ್ ಮಧ್ಯೇ ರಾಜ್ಞಾಂ ಮಹಾತ್ಮನಾಮ್ ॥

ವೈಶಂಪಾಯನ– ವ್ಯಾಸರು ಹೀಗೆ ಹೇಳಲು ಸಹೋದರರ ಜೊತೆಯಲ್ಲಿರುವ ಮಹಾತ್ಮನಾದ ಯುಧಿಷ್ಠಿರನು ಅಲ್ಲಿ ನೆರೆದಿರುವ ರಾಜರ ಮಧ್ಯದಲ್ಲಿ ಬ್ರಾಹ್ಮಣರನ್ನುದ್ದೇಶಿಸಿ ಹೀಗೆ ಹೇಳಿದನು.

ಯುಧಿಷ್ಠಿರಃ

ಅಶ್ವಮೇಧೇ ಮಹಾಯಜ್ಞೇ ಪೃಥಿವೀ ದಕ್ಷಿಣಾ ಸ್ಮೃತಾ ।
ಅರ್ಜುನೇನ ಜಿತಾ ಸೇಯಮೃತ್ವಿಗ್ಭ್ಯಃ ಪ್ರಾಪಿತಾ ಮಯಾ ॥೧೩॥

ಯುಧಿಷ್ಠಿರ– ವಿಪ್ರಶ್ರೇಷ್ಠರೇ, ಅಶ್ವಮೇಧ ಮಹಾಯಜ್ಞದಲ್ಲಿ ಸಮಗ್ರ ಭೂಮಂಡಲವನ್ನೇ ದಕ್ಷಿಣೆಯನ್ನಾಗಿ ನೀಡಬೇಕೆಂಬ ವಿಧಿ ಇದೆ. ಈ ಭೂಮಂಡಲವು ಅರ್ಜುನನಿಂದ ಜಯಿಸಲ್ಪಟ್ಟಿದೆ. ಇದನ್ನೇ ಋತ್ವಿಜರಿಗೆ ದಕ್ಷಿಣಾರೂಪದಲ್ಲಿ ನಾನು ದಾನ ಮಾಡಿದ್ದೇನೆ.

ವನಂ ಯಾಸ್ಯಾಮಿ ವಿಪ್ರೇಂದ್ರಾ ವಿಭಜ್ಯಧ್ವಂ ಮಹೀಮಿಮಾಮ್ ।
ಚತುರ್ಧಾ ಪೃಥಿವೀಂ ಕೃತ್ವಾ ಚಾತುರ್ಹೋತ್ರಪ್ರಮಾಣತಃ ॥೧೪॥

ಬ್ರಾಹ್ಮಣರೇ, ನಾನು ದಾನ ಮಾಡಿದ ಭೂಮಿಯನ್ನು ನೀವೇ ಹಂಚಿಕೊಳ್ಳಿರಿ. ನಾನು ಅರಣ್ಯಕ್ಕೆ ಹೋಗುತ್ತೇನೆ. ನೀವು ಅಧ್ವರ್ಯು, ಉದ್ಗಾತೃ, ಹೋತೃ, ಬ್ರಹ್ಮ ಎಂಬ ವಿಭಾಗದಿಂದ ನಿಂತು ಈ ಯಾಗವನ್ನು ನಡೆಸಿರುತ್ತೀರಿ. ಚಾತುರ್ಹೋತ್ರ ಯಜ್ಞದಲ್ಲಿ ನಿರತರಾದವರು ಯಾವ ಕ್ರಮದಲ್ಲಿ ಭೂಮಿಯನ್ನು ವಿಂಗಡಿಸಿಕೊಳ್ಳಬೇಕೋ ಅದರಂತೆ ನಾಲ್ಕು ಭಾಗಗಳನ್ನಾಗಿ ಹಂಚಿಕೊಳ್ಳಿರಿ.

ನಾಹಮಾದಾತುಮಿಚ್ಛಾಮಿ ಬ್ರಹ್ಮಸ್ವಂ ಮುನಿಸತ್ತಮಾಃ ।
ಇದಂ ಮತಂ ಹಿ ಮೇ ನಿತ್ಯಂ ಭ್ರಾತೄಣಾಂ ಚ ಮಮಾನಘಾಃ ॥೧೫॥

ಬ್ರಾಹ್ಮಣರ ಈ ಸ್ವತ್ತನ್ನು ನಾನು ಸ್ವೀಕರಿಸಲು ಇಚ್ಛಿಸುವುದಿಲ್ಲ. ನನ್ನಂತೆ ನನ್ನ ಸಹೋದರರ ಅಭಿಪ್ರಾಯವೂ ದೃಢವಾಗಿಯೇ ಇದೆ.

ವೈಶಂಪಾಯನಃ

ಇತ್ಯುಕ್ತವತಿ ತಸ್ಮಿಂಸ್ತೇ ಭ್ರಾತರೋ ದ್ರೌಪದೀ ಚ ಸಾ ।
ಏವಮೇತದಿತಿ ಪ್ರಾಹುಸ್ತದಭೂದ್ ರೋಮಹರ್ಷಣಮ್ ॥೧೬॥

ವೈಶಂಪಾಯನ– ಜನಮೇಜಯನೇ, ಯುಧಿಷ್ಠಿರನು ಹೀಗೆ ಹೇಳುತ್ತಿರಲು ಭೀಮಸೇನನೇ ಮೊದಲಾದ ಸಹೋದರರು, ದ್ರೌಪದಿಯು ಹೀಗೆಯೇ ಆಗಲಿ. ಮಹಾರಾಜನು ಹೇಳಿದುದು ನಮಗೂ ಸಮ್ಮತವೇ ಎಂದು ಹೇಳಿದಾಗ ಇವರ ಅಭಿಪ್ರಾಯವನ್ನು ಕೇಳಿಸಿಕೊಂಡ ಸಮಸ್ತ ಜನರೂ ಆಶ್ಚರ್ಯದಿಂದ ರೋಮಾಂಚಿತರಾದರು.

ತತೋಽಂತರಿಕ್ಷೇ ವಾಗಾಸೀತ್ ಸಾಧು ಸಾಧ್ವಿತಿ ಭಾರತ ।
ತಥೈವ ದ್ವಿಜಸಂಘಾನಾಂ ಶಂಸತಾಂ ವಿಬಭೌ ಸ್ವನಃ ॥೧೭॥

ಈ ಸಂದರ್ಭದಲ್ಲಿ ಆಕಾಶದಲ್ಲಿ 'ಸಾಧು-ಸಾಧು' ಎಂಬ ಶಬ್ದವು ಕೇಳಿಬಂದಿತು. ಪಾಂಡವರ ಈ ಶುದ್ಧಭಾವವನ್ನು ಪ್ರಶಂಸೆ ಮಾಡುತ್ತಾ ಬ್ರಾಹ್ಮಣರು ಹೀಗೆ ಹೇಳುತ್ತಿರುವ ಶಬ್ದವು ಕೇಳಿಸುತ್ತಿತ್ತು.

ದ್ವೈಪಾಯನಸ್ತಥೋಕ್ತಸ್ತು ಪುನರೇವ ಯುಧಿಷ್ಠಿರಮ್ ।
ಉವಾಚ ಮಧ್ಯೇ ವಿಪ್ರಾಣಾಮಿದಂ ಸಂಪೂಜಯನ್ ಮುನಿಃ ॥೧೮॥

ಪಾಂಡವರ ಮಾತನ್ನು ಪ್ರಶಂಸಿಸುತ್ತಾ ಮುನಿಶ್ರೇಷ್ಠರಾದ ಕೃಷ್ಣದ್ವೈಪಾಯನರು ಬ್ರಾಹ್ಮಣರ ಮಧ್ಯದಲ್ಲಿ ಯುಧಿಷ್ಠಿರನನ್ನು ಪ್ರಶಂಸಿಸುತ್ತಾ ಹೀಗೆ ಹೇಳಿದರು.

ವ್ಯಾಸಃ

ದತ್ತೈಷಾ ಭವತಾ ಮಹ್ಯಂ ತಾಂ ತೇ ಪ್ರತಿದದಾಮ್ಯಹಮ್ ।
ಹಿರಣ್ಯಂ ದೀಯತಾಮೇಭ್ಯೋ ದ್ವಿಜಾತಿಭ್ಯೋ ಧರಾಸ್ತು ತೇ ॥೧೯॥

ವ್ಯಾಸರು– ಯುಧಿಷ್ಠಿರನೇ, ನೀನು ಸಮಗ್ರ ಭೂಮಂಡಲವನ್ನು ನನಗೆ ದಾನ ಮಾಡಿರುವಿ. ಇದರ ಹೊಣೆಗಾರಿಕೆಯನ್ನು ನಿನಗೆ ವಹಿಸುತ್ತೇನೆ. ನೀನು ಭೂಮಿಯನ್ನು ಸ್ವೀಕರಿಸಿ, ಇದರ ಬದಲು ಸುವರ್ಣವನ್ನು ಬ್ರಾಹ್ಮಣರಿಗೆ ನೀಡು. ಭೂಮಿಯು ನಿನ್ನ ಅಧಿಕಾರದಲ್ಲೇ ಇರಲಿ.

ವೈಶಂಪಾಯನಃ

ತತೋಽಬ್ರವೀದ್ ವಾಸುದೇವೋ ಧರ್ಮರಾಜಂ ಯುಧಿಷ್ಠಿರಮ್ ॥

ವೈಶಂಪಾಯನ– ಬಳಿಕ ಕೃಷ್ಣನು ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವ ಧರ್ಮರಾಜನನ್ನು ಕುರಿತು ಹೀಗೆ ಹೇಳಿದನು.

ಶ್ರೀಭಗವಾನ್

ಯಥಾऽऽಹ ಭಗವಾನ್ ವ್ಯಾಸಸ್ತಥಾ ತ್ವಂ ಕರ್ತುಮರ್ಹಸಿ ॥೨೧॥

ಶ್ರೀಭಗವಾನ್– ಧರ್ಮರಾಜನೇ, ವೇದವ್ಯಾಸರು ಹೇಗೆ ಹೇಳುತ್ತಾರೋ ಅದರಂತೆ ಮಾಡಲು ಅರ್ಹನಾಗಿರುವಿ.

ವೈಶಂಪಾಯನಃ

ಇತ್ಯುಕ್ತಃ ಸ ಕುರುಶ್ರೇಷ್ಠಃ ಪ್ರೀತಾತ್ಮಾ ಭ್ರಾತೃಭಿಃ ಸಹ ।
ಕೋಟಿಂ ಕೋಟಿಂ ಗವಾಂ ಪ್ರಾದಾದ್ ದಕ್ಷಿಣಾಂ ತ್ರಿಗುಣಾಂ ಕ್ರತೌ ॥

ವೈಶಂಪಾಯನ– ಜನಮೇಜಯನೇ, ವಾಸುದೇವನು ಹೀಗೆ ಹೇಳಲು ಸಂತುಷ್ಟನಾದ ಯುಧಿಷ್ಠಿರನು ಸಹೋದರರ ಜೊತೆಗೂಡಿ ಕೋಟಿ, ಕೋಟಿ ಹಸುಗಳನ್ನು ಮೂರುಪಟ್ಟು ಅಧಿಕವಾದ ದಕ್ಷಿಣೆಗಳಿಂದ ಸಹಿತವಾಗಿ ಬ್ರಾಹ್ಮಣರಿಗೆ ನೀಡಿದನು.

ನ ಕರಿಷ್ಯತಿ ತಲ್ಲೋಕೇ ಕಶ್ಚಿದನ್ಯೋ ನರಾಧಿಪ ।
ಯತ್ಕೃತಂ ಕುರುಸಿಂಹೇನ ಮರುತ್ತಮನುಕುರ್ವತಾ ॥೨೩॥

ದಕ್ಷಿಣೆಯನ್ನು ಕೊಡುವುದರಲ್ಲಿ ಮರುತ್ತರಾಜನ ಮಾರ್ಗವನ್ನೇ ಅನುಸರಿಸಿದ ಯುಧಿಷ್ಠಿರನು ಅದ್ಭುತವಾದ ಅಶ್ವಮೇಧಯಾಗವನ್ನು ಮಾಡಿದನು. ಯುಧಿಷ್ಠಿರನು ಮಾಡಿದಂತಹ ಅಶ್ವಮೇಧ ಯಾಗವನ್ನು ಲೋಕದಲ್ಲಿ ಬೇರೆ ಯಾವ ರಾಜರೂ ಮಾಡಲಾರರು.

ಪ್ರತಿಗೃಹ್ಯ ತು ತದ್ರತ್ನಂ ಕೃಷ್ಣದ್ವೈಪಾಯನಃ ಪ್ರಭುಃ ।
ಋತ್ವಿಗ್ಭ್ಯಃ ಪ್ರದದೌ ವಿದ್ವಾನ್ ಚತುರ್ಧಾ ವ್ಯಭಜಂಶ್ಚ ತೇ ॥೨೪॥

ಕೃಷ್ಣದ್ವೈಪಾಯನರು ರಾಶಿರಾಶಿಯಾಗಿರುವ ಸುವರ್ಣವನ್ನು ದಾನವನ್ನಾಗಿ ಸ್ವೀಕರಿಸಿ ಅವೆಲ್ಲವನ್ನೂ ನಾಲ್ಕುಭಾಗವನ್ನಾಗಿ ವಿಂಗಡಿಸಿ ಬ್ರಾಹ್ಮಣರಿಗೆ ಹಂಚಿಬಿಟ್ಟರು.

ಪೃಥಿವ್ಯಾ ನಿಷ್ಕ್ರಯಂ ದತ್ತ್ವಾ ತದ್ಧಿರಣ್ಯಂ ಯುಧಿಷ್ಠಿರಃ ।
ಧೂತಪಾಪ್ಮಾ ಜಿತಸ್ವರ್ಗೋ ಮುಮುದೇ ಭ್ರಾತೃಭಿಃ ಸಹ ॥೨೫॥

ಯುಧಿಷ್ಠಿರನು ಭೂಮಿಯ ಮೌಲ್ಯವನ್ನು ಬಂಗಾರದ ರೂಪದಲ್ಲಿ ಕೊಟ್ಟು ಪಾಪಗಳನ್ನೆಲ್ಲ ಪರಿಹರಿಸಿಕೊಂಡು ಸ್ವರ್ಗವನ್ನು ಜಯಿಸಿ ತನ್ನ ಸಹೋದರರೊಡನೆ ಸಂತೋಷಪಟ್ಟನು.

ಋತ್ವಿಜಸ್ತಮಪರ್ಯಂತಂ ಸುವರ್ಣನಿಚಯಂ ತದಾ ।
ವ್ಯಭಜಂತ ದ್ವಿಜಾತಿಭ್ಯೋ ಯಥೋತ್ಸಾಹಂ ಯಥಾವಿಧಿ ॥೨೬॥

ಋತ್ವಿಜರಾದರೂ ಅನಂತವಾದ ಸುವರ್ಣರಾಶಿಯನ್ನು ಪಡೆದುಕೊಂಡು ಅತ್ಯಂತ ಉತ್ಸಾಹ ಮತ್ತು ಆನಂದದಿಂದ ತಾವು ಪಡೆದುದ್ದರಲ್ಲಿ ಇತರ ಬ್ರಾಹ್ಮಣರಿಗೂ ಹಂಚಿದರು.

ಯಜ್ಞವಾಟೇ ತು ಯತ್ ಕಿಂಚಿದ್ಧಿರಣ್ಯಮಪಿ ಭೂಷಣಮ್ ।
ತೋರಣಾನಿ ಚ ಯೂಪಾಂಶ್ಚ ಘಟಾನ್ ಪಾತ್ರೀಸ್ತಥೇಷ್ಟಕಾಃ ॥೨೭॥

ಯುಧಿಷ್ಠಿರಾಭ್ಯನುಜ್ಞಾತಾಸ್ತತ್ ಸರ್ವಂ ವ್ಯಭಜನ್ ದ್ವಿಜಾಃ ॥೨೮॥

ಯಜ್ಞಮಂಟಪದಲ್ಲಿ ಅಲಂಕಾರಕ್ಕೋಸ್ಕರ ಯಾವ ಸುವರ್ಣಾಭರಣಗಳಿದ್ದವೋ, ಬಂಗಾರದ ತೋರಣಗಳಿದ್ದವೋ, ಯೂಪಗಳಿದ್ದವೋ, ಬಿಂದಿಗೆಗಳಿದ್ದವೋ ಅಂತಹ ಪಾತ್ರೆ, ಇಟ್ಟಿಗೆ, ಸಮಗ್ರ ವಸ್ತುಗಳೆಲ್ಲವನ್ನೂ ಯುಧಿಷ್ಠಿರನ ಆದೇಶದಂತೆ ಪರಸ್ಪರವಾಗಿ ಹಂಚಿಕೊಂಡರು.

ಅನಂತರಂ ಬ್ರಾಹ್ಮಣೇಭ್ಯಃ ಕ್ಷತ್ರಿಯಾ ಜಹ್ರಿರೇ ವಸು ॥೨೯॥

ತಥಾ ಶೂದ್ರಸಂಘಾಶ್ಚ ತಥಾಽನ್ಯೇ ಮ್ಲೇಚ್ಛಜಾತಯಃ ।
ಕಾಲೇನ ಮಹತಾ ಜಹ್ರುಸ್ತತ್ ಸುವರ್ಣಂ ತತಸ್ತತಃ ॥೩೦॥

ಅನಂತರ ಆ ಯಜ್ಞಕರ್ಮದಲ್ಲಿ ಭಾಗವಹಿಸಿದ ಬ್ರಾಹ್ಮಣರಿಗೆ ಇತರ ಕ್ಷತ್ರಿಯರು, ಶೂದ್ರರು, ವೈಶ್ಯರು, ಮ್ಲೇಚ್ಛ ಜಾತಿಯವರು ಯಥಾಶಕ್ತಿ ಬಂಗಾರವನ್ನು ದಾನ ಮಾಡಿದರು.

ತತಸ್ತೇ ಬ್ರಾಹ್ಮಣಾಃ ಸರ್ವೇ ಮುದಿತಾ ಜಗ್ಮುರಾಲಯಾನ್ ।
ತರ್ಪಿತಾ ವಸುನಾ ಚೈವ ಧರ್ಮರಾಜ್ಞಾ ಮಹಾತ್ಮನಾ ॥೩೧॥

ಇದರಿಂದ ಅತ್ಯಂತ ಸಂತುಷ್ಟರಾದ ಬ್ರಾಹ್ಮಣರೆಲ್ಲರೂ ಆನಂದದಿಂದ ಕೂಡಿದವರಾಗಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಹೀಗೆ ಮಹಾತ್ಮನಾದ ಧರ್ಮರಾಜನು ಸಂಪತ್ತಿನಿಂದ ಎಲ್ಲರನ್ನೂ ಸಂತೋಷಗೊಳಿಸಿದನು.

ಸ್ವಮಂಶಂ ಭಗವಾನ್ ವ್ಯಾಸಃ ಕುಂತ್ಯೈ ಪಾದಾಭಿವಾದಿತಃ ।
ಪ್ರದದೌ ತಸ್ಯ ಮಹತೋ ಹಿರಣ್ಯಸ್ಯ ಮಹಾದ್ಯುತಿಃ ॥೩೨॥

ಮಹಾಕಾಂತಿಯಿಂದ ಕೂಡಿದ ವೇದವ್ಯಾಸದೇವರು ತಮಗೆ ವಿಭಾಗದಲ್ಲಿ ಸಿಕ್ಕ ಸಂಪತ್ತೆಲ್ಲವನ್ನೂ ಕುಂತೀದೇವಿಗೆ ನಮಸ್ಕಾರಪೂರ್ವಕವಾಗಿ ಕೊಟ್ಟರು.

ಶ್ವಶುರಾತ್ ಪ್ರೀತಿದಾನಂ ತತ್ ಪ್ರಾಪ್ಯ ಸಾ ಪ್ರೀತಮಾನಸಾ ।
ಚಕಾರ ಪುಣ್ಯಂ ಕಾಲೇನ ಸುಮಹದ್ಧಿ ಪೃಥಾ ತಥಾ ॥೩೩॥

ವೇದವ್ಯಾಸರು ಪ್ರೀತಿಯಿಂದ ಕೊಟ್ಟ ಮಹಾಧನವನ್ನು ಸ್ವೀಕರಿಸಿದ ಕುಂತಿಯು ಪ್ರಸನ್ನಚಿತ್ತಳಾಗಿ ಆ ವೇದವ್ಯಾಸರು ಕೊಟ್ಟ ಐಶ್ವರ್ಯದಿಂದ ತನಗೆ ಬೇಕಾದಂತಹ ಪುಣ್ಯಕರ್ಮಗಳನ್ನು ಕಾಲಕ್ರಮದಲ್ಲಿ ಮಾಡಿದಳು.

ಗತ್ವಾ ತ್ವವಭೃಥಂ ರಾಜಾ ವಿಪಾಪ್ಮಾ ಭ್ರಾತೃಭಿಃ ಸಹ ।
ಸಭಾಜ್ಯಮಾನಃ ಶುಶುಭೇ ಮಹೇಂದ್ರೋ ದೈವತೈರಿವ ॥೩೪॥

ಯುಧಿಷ್ಠಿರನು ಯಜ್ಞದ ಕೊನೆಯಲ್ಲಿ ಅವಭೃಥಸ್ನಾನವನ್ನು ಮಾಡಿ ಪಾಪರಹಿತನಾದನು. ಮಹೇಂದ್ರನು ದೇವತೆಗಳ ಜೊತೆ ಪ್ರಕಾಶಿಸುವಂತೆ ತನ್ನ ಅನುಜರೊಂದಿಗೆ ಯುಧಿಷ್ಠಿರನು ಶೋಭಿಸಿದನು.

ಪಾಂಡವಾಶ್ಚ ಮಹೀಪಾಲೈಃ ಸಮೇತೈಃ ಸಂವೃತಾಸ್ತದಾ ।
ಅಶೋಭಂತ ಮಹಾರಾಜ ಗ್ರಹಾಸ್ತಾರಾಗಣೈರ್ಯಥಾ ॥೩೫॥

ಯಜ್ಞದಲ್ಲಿ ಭಾಗವಹಿಸುವ ದೃಷ್ಟಿಯಿಂದ ಆಗಮಿಸಿದ ರಾಜರೆಲ್ಲರೂ ಈ ಪಾಂಡವರನ್ನು ಸುತ್ತುವರಿದಿದ್ದರು. ಈ ದೃಶ್ಯವು ನಕ್ಷತ್ರಗಳ ಸಮುಧಾಯದಿಂದ ಆವೃತವಾದ ಗ್ರಹಗಳು ಹೇಗೆ ಶೋಭಿಸುತ್ತವೋ ಅದರಂತೆ ಕಾಣಿಸುತ್ತಿತ್ತು.

ರಾಜಭ್ಯೋಽಪಿ ತತಃ ಪ್ರಾದಾದ್ ರತ್ನಾನಿ ವಿವಿಧಾನಿ ಚ ।
ಗಜಾನಶ್ವಾನಲಂಕಾರಾನ್ ಸ್ತ್ರೀಶ್ಚ ರತ್ನಾನಿ ಕಾಂಚನಮ್ ॥೩೬॥

ನಂತರ ಧರ್ಮರಾಜನು ಯಜ್ಞಕ್ಕೆ ಆಗಮಿಸಿದ ರಾಜರೆಲ್ಲರಿಗೂ ನಾನಾ ವಿಧವಾದ ರತ್ನಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ಸ್ತ್ರೀಯರನ್ನೂ, ವಸ್ತ್ರಗಳನ್ನೂ, ಬಂಗಾರವನ್ನೂ ಪಾರಿತೋಷಕವಾಗಿ ನೀಡಿದನು.

ತದ್ದನೌಘಮಪರ್ಯಂತಂ ಪಾರ್ಥಃ ಪಾರ್ಥಿವಮಂಡಲೇ ।
ವಿಸೃಜನ್ ಶುಶುಭೇ ರಾಜನ್ ಯಥಾ ವೈಶ್ರವಣಸ್ತಥಾ ॥೩೭॥

ಲೆಕ್ಕ ಮಾಡಲಾಗದಷ್ಟು ರಾಜರ ಸಮುದಾಯವು ಅಲ್ಲಿ ಸೇರಿತ್ತು. ಅವರೆಲ್ಲರಿಗೂ ಐಶ್ವರ್ಯವನ್ನು ಹಂಚಿ ಕುಂತೀಸುತನಾದ ಧರ್ಮರಾಜನು ಕುಬೇರನನ್ನೂ ಕರೆಯಿಸಿ ವಿಪುಲವಾದ ಐಶ್ವರ್ಯವನ್ನು ಅವನಿಗೂ ಕೊಟ್ಟು ಕಳುಹಿಸಿದನು.

ಆನೀಯ ಚ ತಥಾ ವೀರಂ ರಾಜಾನಂ ಬಭ್ರುವಾಹನಮ್ ।
ಪ್ರದಾಯ ಬಹುಲಂ ವಿತ್ತಂ ಗೃಹಾನ್ ಪ್ರಾಸ್ಥಾಪಯತ್ ತದಾ ॥೩೮॥

ಬಳಿಕ ಧೀಮಂತನಾದ ಧರ್ಮರಾಜನು ಬಭ್ರುವಾಹನನನ್ನು ಕರೆಯಿಸಿ ಅವನಿಗೆ ವಿಪುಲವಾದ ಐಶ್ವರ್ಯವನ್ನು ಕೊಟ್ಟು ಮನೆಗೆ ಕಳುಹಿಸಿಕೊಟ್ಟನು.

ದುಃಶಲಾಯಾಶ್ಚ ತಂ ಪೌತ್ರಂ ಬಾಲಕಂ ಭರತರ್ಷಭ ।
ಸ್ವರಾಜ್ಯೇ ಪಿತೃಭಿರ್ಭುಕ್ತೇ ಪ್ರೀತ್ಯಾ ಸಮಭಿಷೇಚಯತ್ ॥೩೯॥

ಧೀಮಂತನಾದ ಧರ್ಮರಾಜನು ದುಶ್ಶಲೆಯ ಮೊಮ್ಮಗನಾದ, ಇನ್ನೂ ಬಾಲಕನಾಗಿದ್ದ ರಾಜಕುಮಾರನನ್ನು ತಂಗಿಯ ಮೇಲಿನ ಪ್ರೀತಿಯಿಂದ ಅವನ ತಂದೆಯ ರಾಜ್ಯಕ್ಕೆ ರಾಜನನ್ನಾಗಿ ಮಾಡಿದನು.

ರಾಜ್ಞಶ್ಚೈವಾಪಿ ತಾನ್ ಸರ್ವಾನ್ ಸುವಿಭಕ್ತಾನ್ ಸುಪೂಜಿತಾನ್ ।
ಪ್ರಸ್ಥಾಪಯಾಮಾಸ ವಶೀ ಕುರುರಾಜೋ ಯುಧಿಷ್ಠಿರಃ ॥೪೦॥

ಜಿತೇಂದ್ರಿಯನಾದ ರಾಜನು ಉಳಿದೆಲ್ಲ ರಾಜರಿಗೂ ಅಪಾರವಾದ ಸಂಪತ್ತನ್ನು ಯೋಗ್ಯವಾಗಿ ದಾನ ಮಾಡಿ ಅವರವರ ದೇಶಗಳಿಗೆ ಕಳುಹಿಸಿಕೊಟ್ಟನು.

ಏವಂ ಬಭೂವ ಯಜ್ಞಃ ಸ ಧರ್ಮರಾಜಸ್ಯ ಧೀಮತಃ ।
ಬಹ್ವನ್ನಧನರತ್ನೌಘಃ ಸುರಾಮೈರೇಯಸಾಗರಃ ॥೪೧॥

ಮಹಾನುಭಾವನಾದ ಯುಧಿಷ್ಠಿರನ ಅಶ್ವಮೇಧ ಯಾಗವು ಅನ್ನ, ಧನ, ರತ್ನ ಇವುಗಳ ರಾಶಿಗಳಿಂದಲೇ ತುಂಬಿಹೋಗಿತ್ತು. ಸುರೆ, ಮೈರೇಯಗಳ ಸಮುದ್ರವೇ ಅಲ್ಲಿ ಹರಿಯುತ್ತಿತ್ತು.

ಸರ್ಪಿಷಶ್ಚ ಹ್ರದಾ ಯತ್ರ ಬಹವಶ್ಚಾನ್ನಪರ್ವತಾಃ ।
ರಸಾಲಕರ್ದಮಾಃ ಕುಲ್ಯಾ ಬಭೂವುರ್ಭರತರ್ಷಭ ॥೪೨॥

ತುಪ್ಪವನ್ನೇ ಕೆಸರಿನಂತೆ ಹೊಂದಿರುವ ಅನೇಕ ಸರೋವರಗಳು ಅಲ್ಲಿ ತುಂಬಿದ್ದವು. ಅನ್ನದ ಪರ್ವತಗಳು, ರಸದಿಂದ ತುಂಬಿದ ಕೆಸರಿಲ್ಲದ ನದಿಗಳಂತೆ ಭೋಗ್ಯ ನದಿಗಳಾಗಿ ಹರಿಯುತ್ತಿದ್ದವು.

ಭಕ್ಷ್ಯಾಃ ಷಡವರಾಂಗಾನಾಂ ಕ್ರಿಯತಾಂ ಭುಜ್ಯತಾಮಿತಿ ।
ಪಶೂನಾಂ ವಧ್ಯಮಾನಾನಾಂ ನಾಂತಂ ದದೃಶಿರೇ ಜನಾಃ ॥೪೩॥

ಅಲ್ಲಿ ಸೇರಿರುವ ಕುರುಡರು, ಕುಂಟರು ಮೊದಲಾದವರಿಗೆ ಚೋಷ್ಯ, ಪೇಯ, ಭೋಜ್ಯ, ಭಕ್ಷ್ಯ, ಲೇಹ್ಯ ಮೊದಲಾದ ಆರು ಆರು ದ್ರವ್ಯಗಳನ್ನು ತಿನ್ನಿರಿ, ತಿನ್ನಿರಿ ಎಂದು ನೀಡುತ್ತಲೇ ಇದ್ದರು. ಅಲ್ಲಿ ವಧ್ಯವಾದ ಪಶುಗಳ ಸಂಖ್ಯೆಗೆ ಕೊನೆಯೇ ಇಲ್ಲವೆಂದು ಜನರು ನೋಡಿದರು.

ಮತ್ತೋನ್ಮತ್ತಪ್ರಮುದಿತಂ ಪ್ರಗೀತವನಿತಾಜನಮ್ ।
ಮೃದಂಗಶಂಖನಾದೈಶ್ಚ ಮನೋರಮಮಭೂತ್ ತದಾ ॥೪೪॥

ನಿರಂತರವೂ ಯಜ್ಞಮಂಟಪವು ತಿಂದು, ಕುಡಿದು ಅಮಲೇರಿದ್ದ, ಆನಂದಮತ್ತರಾಗಿದ್ದ ಪುರುಷರ ಸಮುದಾಯದಿಂದಲೂ, ಹಾಡುಗಳನ್ನು ಹೇಳುವ ಯುವತಿಯರಿಂದಲೂ ಮೃದಂಗ-ಶಂಖ ನಿನಾದಗಳಿಂದಲೂ ಮನೋಹರವಾಗಿ ಕಾಣಿಸುತ್ತಿತ್ತು.

ದೀಯತಾಂ ಭುಜ್ಯತಾಂ ಚೇತಿ ತತ್ರ ಶಬ್ದೋ ಮಹಾನಭೂತ್ ।
ಪೀಯತಾಂ ದೀಯತಾಂ ಚೇತಿ ದಿವಾರಾತ್ರಮವಾರಿತಾಃ - ॥೪೫॥

ಎಲ್ಲ ಕಡೆಯೂ ಇಂತಹ ಪದಾರ್ಥಗಳನ್ನು ಕುಡಿಯಿರಿ, ಈ ಪದಾರ್ಥಗಳನ್ನು ಸವಿಯಿರಿ, ಈ ದ್ರವಪದಾರ್ಥವನ್ನು ಕುಡಿಯಿರಿ, ಅವರಿಗೆ ಕೊಡಿರಿ ಎಂಬ ಶಬ್ದ ಸಮುದಾಯಗಳು ಹಗಲೂ, ರಾತ್ರಿ ತಡೆಯಿಲ್ಲದಂತೆ ಆ ಯಜ್ಞವೇದಿಕೆಯ ಸುತ್ತಲೂ ಹೊರಹೊಮ್ಮಿದವು.

ವ್ಯಾಖ್ಯಾನ ವಿಶೇಷ– ಅಶ್ವಮೇಧಯಾಗಕ್ಕೂ, ರಾಜಾಶ್ವಮೇಧಯಾಗಕ್ಕೂ ವ್ಯತ್ಯಾಸವಿದೆ. ಧರ್ಮರಾಜನು ಮಾಡಿದ ಯಾಗವು ರಾಜಾಶ್ವಮೇಧ ಎನಿಸಿದೆ. ಕುದುರೆಗಳನ್ನು ರಾಜರ ಮುಂದೆ ಕರೆದುಕೊಂಡು ಹೋಗಿ ಆ ಕುದುರೆಯನ್ನು ತಡೆಯುವವರನ್ನು ಜಯಿಸಿಕೊಂಡು ಬಂದು ಯಾಗವನ್ನು ಮಾಡಿದರೆ ಅದನ್ನು ಅಶ್ವಮೇಧ ಯಾಗವೆಂದು ಕರೆಯುತ್ತಾರೆ. ಈ ಅಶ್ವಮೇಧ ಯಾಗಕ್ಕೆ ರಾಜನೇ ಹೋಗಬೇಕೆಂಬ ನಿಯಮವಿರುವುದಿಲ್ಲ. ತನ್ನ ಪರಿವಾರದವರನ್ನು ಕಳುಹಿಸಿ ರಾಜನನ್ನು ಗೆದ್ದು ಬಂದರೆ ಈ ಯಾಗವನ್ನು ಆಚರಿಸಬಹುದು. ಆದರೆ ಯಜ್ಞಮಾಡುವ ರಾಜನೇ ನಾಲ್ಕು ದಿಕ್ಕುಗಳಲ್ಲಿ ಸಂಚರಿಸಿ ರಾಜರನ್ನೆಲ್ಲ ಗೆದ್ದು ಅಶ್ವಮೇಧಯಾಗ ಮಾಡುವುದು ರಾಜಾಶ್ವಮೇಧ ಯಾಗ ಎನಿಸಿದೆ. ಅಶ್ವಪ್ರಧಾನವಾದ ಯಾಗ ಅಶ್ವಮೇಧಯಾಗ. ರಾಜನೇ ಪ್ರಧಾನವಾದ ಯಾಗ ರಾಜಾಶ್ವಮೇಧ ಎಂದು ಕರೆಸಿದೆ. ಯುಧಿಷ್ಠಿರನು ಮಾಡುವ ಯಾಗದಲ್ಲಿ ಸಹೋದರನಾದ ಅರ್ಜುನನೇ ನಾಲ್ಕು ದಿಕ್ಕುಗಳಲ್ಲಿ ದಿಗ್ವಿಜಯವನ್ನು ಸಾಧಿಸಿಕೊಂಡು ಬಂದಿದುದರಿಂದ ಈ ಯಾಗಕ್ಕೆ ರಾಜಸೂಯ ಎಂದು ಹೆಸರು ಬಂದಿದೆ ಎಂದು ಲಕ್ಷಾಲಂಕಾರದಲ್ಲಿ ಶ್ರೀವಾದಿರಾಜ ಗುರುಸಾರ್ವಭೌಮರು ವಿವರಿಸಿದ್ದಾರೆ.

ತಂ ಮಹೋತ್ಸವಸಂಕಾಶಮತಿಹೃಷ್ಟಜನಾಕುಲಮ್ ।
ಕಥಯಂತಿ ಸ್ಮ ಪುರುಷಾ ನಾನಾದೇಶನಿವಾಸಿನಃ ॥೪೬॥

ಮಹೋತ್ಸವಕ್ಕೆ ಸದೃಶವಾದ ಧರ್ಮರಾಜನ ಮಹಾಯಜ್ಞವನ್ನು ಕುರಿತು ಅನೇಕ ಪ್ರದೇಶಗಳಲ್ಲಿ ವಾಸಿಸುವ ಪ್ರಜೆಗಳು ಬಹಳ ದಿವಸಗಳ ತನಕ ಈ ಯಜ್ಞದ ಬಗ್ಗೆಯೇ ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು.

ವರ್ಷಿತ್ವಾ ಧನಧಾರಾಭಿಃ ಕಾಮ್ಯೈ ರತ್ನೈರ್ಧನೈಸ್ತಥಾ ।
ವಿಪಾಪ್ಮಾ ಭರತಶ್ರೇಷ್ಠಃ ಕೃತಾರ್ಥಂ ಪ್ರಾವಿಶತ್ ಪುರೀಮ್ ॥೪೭॥

ಯುಧಿಷ್ಠಿರನು ಆ ಮಹಾಯಜ್ಞದಲ್ಲಿ ಸಂಪತ್ತಿನ ಸಮಸ್ತ ಕಾಮನಾ ಪದಾರ್ಥಗಳ, ರತ್ನರಸಗಳ ಮಹಾಮಳೆಯನ್ನೇ ಸುರಿಸಿದನು. ಸಮಸ್ತ ಪಾಪಗಳಿಂದ ವಿಮುಕ್ತನಾಗಿ, ಕೃತಕೃತ್ಯನಾಗಿ ಹಸ್ತಿನಾವತಿಯನ್ನು ಪ್ರವೇಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಪಾಂಡವಾನಾಂ ಪುರಪ್ರವೇಶೋ ನಾಮ
ಏಕನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆರಡನೆಯ ಅಧ್ಯಾಯ

ವೈಶಂಪಾಯನರು ಜನಮೇಜಯರಾಜನಿಗೆ ಮುಂಗುಸಿಯ ಕಥೆಯನ್ನು ಹೇಳಲು ಆರಂಭಿಸಿದುದು. ಅಶ್ವಮೇಧಯಾಗವು ಮುಗಿಯುತ್ತಿರಲು ಒಂದು ಬಿಲದಿಂದ ಹೊರಗೆ ಬಂದಿರುವ ಒಂದು ಬದಿಯಲ್ಲಿ ಬಂಗಾರದ ಬಣ್ಣವುಳ್ಳ ಯಾವುದೋ ಮುಂಗುಸಿಯು ಸಭೆಯಲ್ಲಿ ಕುಳಿತಿರುವ ವ್ಯಕ್ತಿಗಳನ್ನು ಕುರಿತು ಉಂಛವೃತ್ತಿಯ ಬ್ರಾಹ್ಮಣನೊಬ್ಬನು ಹಿಟ್ಟನ್ನು ನೀಡಿದ ಪ್ರಸಂಗವನ್ನು ಪ್ರಶಂಸಿಸುತ್ತಾ ಯುಧಿಷ್ಠಿರನ ಅಶ್ವಮೇಧ ಯಾಗವನ್ನು ನಿಂದಿಸಿದುದು. ಸಭಾಸದರ ಪ್ರೇರಣೆಯಂತೆ ಕಥೆಯನ್ನು ವಿಸ್ತಾರವಾಗಿ ಹೇಳಿದುದು.

ಜನಮೇಜಯಃ

ಪಿತಾಮಹಸ್ಯ ಮೇ ಯಜ್ಞೇ ಧರ್ಮಪುತ್ರಸ್ಯ ಧೀಮತಃ ।
ಯದಾಶ್ಚರ್ಯಮಭೂತ್ ಕಿಂಚಿದ್ ತದ್ಭವಾನ್ ವಕ್ತುಮರ್ಹತಿ ॥೧॥

ಜನಮೇಜಯ– ವೈಶಂಪಾಯನರೇ, ನನ್ನ ಪಿತಾಮಹನಾದ, ಜ್ಞಾನಿಯಾದ ಧರ್ಮರಾಜನ ಅಶ್ವಮೇಧಯಾಗದ ಸಮಯದಲ್ಲಿ ಯಾವುದಾದರೂ ಆಶ್ಚರ್ಯಕರವಾದ ಘಟನೆಯು ನಡೆಯಿತೆ? ಹಾಗೇನಾದರೂ ನಡೆದಿದ್ದಲ್ಲಿ ಅದನ್ನು ಹೇಳುವ ಕೃಪೆ ತೋರಿರಿ.

ವೈಶಂಪಾಯನಃ

ಶ್ರೂಯತಾಂ ರಾಜಶಾರ್ದೂಲ ಮಹದಾಶ್ಚರ್ಯಮುತ್ತಮಮ್ ।
ಅಶ್ವಮೇಧೇ ಮಹಾಯಜ್ಞೇ ನಿವೃತ್ತೇ ಯದಭೂದ್ ವಿಭೋ ॥೨॥

ವೈಶಂಪಾಯನ– ರಾಜಸಿಂಹನೇ, ಅಶ್ವಮೇಧ ಮಹಾಯಾಗವು ಮುಗಿದ ಬಳಿಕ ಅತ್ಯಂತ ಆಶ್ಚರ್ಯಕರವಾದ ಘಟನೆಯೊಂದು ನಡೆಯಿತು. ಅದೇನೆಂದು ಹೇಳುತ್ತೇನೆ, ಕೇಳು.

ತರ್ಪಿತೇಷು ದ್ವಿಜಾಗ್ರ್ಯೇಷು ಜ್ಞಾತಿಸಂಬಂಧಿಬಂಧುಷು ।
ದೀನಾಂಧಕೃಪಣೇ ಚಾಽಪಿ ತದಾ ಭರತಸತ್ತಮ ॥೩॥

ಘುಷ್ಯಮಾಣೇ ಮಹಾನಾದೇ ದಿಕ್ಷು ಸರ್ವಾಸು ಭಾರತ ।
ಪತತ್ಸು ಪುಷ್ಪವರ್ಷೇಷು ಧರ್ಮರಾಜಸ್ಯ ಮೂರ್ಧನಿ ॥೪॥

ಭರತಶ್ರೇಷ್ಠನೇ, ಯುಧಿಷ್ಠಿರನ ಮಹಾಯಜ್ಞದಲ್ಲಿ ಬ್ರಾಹ್ಮಣಶ್ರೇಷ್ಠರು, ಬಂಧುಗಳು, ಜ್ಞಾನಿಗಳು, ದೀನರು, ಅಂಧರು, ಕೃಪಣರು, ತೃಪ್ತರಾದ ಅನಂತರ ಅವರು ಮಾಡಿದ ದಾನವು ಸಮಸ್ತ ದಿಕ್ಕುಗಳಲ್ಲೂ ಕೀರ್ತಿಯಿಂದ ವ್ಯಾಪ್ತವಾಯಿತು. ಧರ್ಮರಾಜನ ತಲೆಯ ಮೇಲೆ ಪುಷ್ಪವೃಷ್ಟಿಯು ಸುರಿಯಿತು.

ಬಿಲಾನ್ನಿಸೃತ್ಯ ನಕುಲೋ ರುಗ್ಮಪಾರ್ಶ್ವಸ್ತದಾ ನೃಪ ।
ವಜ್ರಾಶನಿಸಮಂ ನಾದಮಮುಂಚತ ವಿಶಾಂಪತೇ ॥೫॥

ಅದೇ ಸಮಯದಲ್ಲಿ ಒಂದು ಮುಂಗುಸಿಯು ಆ ಅಶ್ವಮೇಧ ಯಜ್ಞದ ವೇದಿಕೆಯ ಬಳಿ ಆಗಮಿಸಿತು. ಅದರ ಒಂದು ಭಾಗವು ಸುವರ್ಣಮಯವಾಗಿತ್ತು. ಬಂದೊಡನೆ ಸಿಡಿಲಿನಂತೆ ಭಯಂಕರವಾಗಿ ಗರ್ಜಿಸಿತು.

ಸಕೃದುತ್ಸೃಜ್ಯ ತಂ ನಾದಂ ತ್ರಾಸಯಾನೋ ಮೃಗದ್ವಿಜಾನ್ ।
ಮಾನುಷಂ ವಚನಂ ಪ್ರಾಹ ಧೃಷ್ಟೋ ಬಿಲಶಯೋ ಮಹಾನ್ ॥೬॥

ಬಿಲದಲ್ಲಿ ವಾಸ ಮಾಡುವ ಧೈರ್ಯಶಾಲಿಯಾದ ಆ ದೊಡ್ಡ ಮುಂಗುಸಿಯು ಒಮ್ಮೆ ಘೋರವಾದ ಗರ್ಜನೆಯನ್ನು ಮಾಡಿ ಮೃಗ-ಪಕ್ಷಿಗಳನ್ನು ಭಯಗೊಳಿಸುತ್ತಾ ಮನುಷ್ಯರಂತೆಯೇ ಮಾತನಾಡುತ್ತಾ ಹೀಗೆ ಹೇಳಿತು.

ನಕುಲಃ

ಸಕ್ತುಪ್ರಸ್ಥೇನ ವೋ ನಾಯಂ ಯಜ್ಞಸ್ತುಲ್ಯೋ ನರಾಧಿಪಾಃ ।
ಉಂಛವೃತ್ತೇರ್ವದಾನ್ಯಸ್ಯ ಕುರುಕ್ಷೇತ್ರನಿವಾಸಿನಃ ॥೭॥

ಮುಂಗುಸಿ– ನರಾಧಿಪನೇ, ನಿಮ್ಮ ಈ ಯಜ್ಞದಲ್ಲಿ ಮಾಡಲ್ಪಟ್ಟ ದಾನವು ಕುರುಕ್ಷೇತ್ರದಲ್ಲಿ ವಾಸಮಾಡುತ್ತಿರುವ, ಉಂಛವೃತ್ತಿಯಿಂದ ಜೀವಿಸುವ ಉದಾರಿಯಾದ ಬ್ರಾಹ್ಮಣನು ಒಂದು ಸೇರು ಹಿಟ್ಟನ್ನು ದಾನಮಾಡಿದ್ದಕ್ಕೂ ಸಮಾನವಾಗಲಿಲ್ಲ.

ವೈಶಂಪಾಯನಃ

ತಸ್ಯ ತದ್ ವಚನಂ ಶ್ರುತ್ವಾ ನಕುಲಸ್ಯ ವಿಶಾಂಪತೇ ।
ವಿಸ್ಮಯಂ ಪರಮಂ ಜಗ್ಮುಃ ಸರ್ವೇ ತೇ ಬ್ರಾಹ್ಮಣರ್ಷಭಾಃ ॥೮॥

ತತಃ ಸಮೇತ್ಯ ನಕುಲಂ ಪರ್ಯಪೃಚ್ಛತ ತೇ ದ್ವಿಜಾಃ ॥೯॥

ವೈಶಂಪಾಯನ– ಮುಂಗುಸಿಯ ಆ ಮಾತನ್ನು ಕೇಳಿ ಬ್ರಾಹ್ಮಣರೆಲ್ಲರೂ ಆಶ್ಚರ್ಯಚಕಿತರಾದರು. ಅವರೆಲ್ಲರೂ ಒಟ್ಟಾಗಿ ಸೇರಿ ಮುಂಗುಸಿಯನ್ನು ಪ್ರಶ್ನಿಸಿದರು.

ದ್ವಿಜಾಃ

ಕುತಸ್ತ್ವಂ ಸಮನುಪ್ರಾಪ್ತೋ ಯಜ್ಞಂ ಸಾಧುಸಮಾಗಮಮ್ ।
ಕಿಂ ಬಲಂ ಪರಮಂ ತೇ ಹ ಕಿಂ ಶ್ರುತಂ ಕಿಂ ಪರಾಯಣಮ್ ॥೧೦॥

ಬ್ರಾಹ್ಮಣರು– ಮುಂಗುಸಿಯೇ, ಯುಧಿಷ್ಠಿರನು ಮಾಡಿದ ಯಜ್ಞಕ್ಕೆ ಅನೇಕ ಸತ್ಪುರುಷರು ಆಗಮಿಸಿದ್ದಾರೆ. ಆದರೆ ನೀನು ಎಲ್ಲಿಂದ ಬಂದಿರುವಿ? ಆ ಶ್ರೇಷ್ಠವಾದ ಬಲ ಯಾವುದು? ನಿನಗೆ ಶಾಸ್ತ್ರಜ್ಞಾನವೇನಿದೆ? ಯಾರನ್ನು ಆಶ್ರಯಿಸಿರುವಿ?

ಕಥಂ ಭವಂತಂ ವಿದ್ಯಾಮ ಯೋ ನೋ ಯಜ್ಞಂ ವಿಗರ್ಹತೇ ॥೧೧॥

ನಮ್ಮ ಯಜ್ಞವನ್ನು ನಿಂದಿಸುತ್ತಿರುವ ನಿನ್ನನ್ನು ಯಾರೆಂದು ತಿಳಿಯಬೇಕು?

ಅವಿಲುಪ್ಯಾಗಮಂ ಕೃತ್ಸ್ನಂ ವಿವಿಧೈರ್ಯಾಜಕೈರ್ಹುತಮ್ ।
ಯಥಾಗಮಂ ಯಥಾನ್ಯಾಯಂ ಕರ್ತವ್ಯಂ ಚ ತಥಾ ಕೃತಮ್ ॥೧೨॥

ನಾವೆಲ್ಲರೂ ನಾನಾ ವಿಧವಾದ ಯಜ್ಞಸಾಮಗ್ರಿಗಳನ್ನು ಒಂದೆಡೆ ಸಂಗ್ರಹಿಸಿ ಯಜ್ಞವನ್ನು ಆಚರಿಸಿರುತ್ತೇವೆ. ಶಾಸ್ತ್ರದಲ್ಲಿ ತಿಳಿಸಿದಂತೆ ಯೋಗ್ಯ ರೀತಿಯಲ್ಲಿ ಮಾಡಬೇಕಾದ ಕರ್ತವ್ಯವನ್ನು ನಿರ್ವಹಿಸಿದ್ದೇವೆ.

ಪೂಜಾರ್ಹಾಃ ಪೂಜಿತಾಶ್ಚಾತ್ರ ವಿಧಿವಜ್ಜ್ಞಾನಚಕ್ಷುಷಃ ।
ಮಂತ್ರಪೂತಂ ಹುತಶ್ಚಾಗ್ನಿರ್ದತ್ತಂ ದೇಯಮಮತ್ಸರಮ್ ॥೧೩॥

ಪೂಜೆಗೆ ಅರ್ಹರಾದವರನ್ನು ಶಾಸ್ತ್ರವಿಧಿಗೆ ಅನುಗುಣವಾಗಿ ಆರಾಧಿಸಿದ್ದೇವೆ. ಮಂತ್ರಪೂರ್ವಕವಾಗಿ ಅಗ್ನಿಯು ಆಹುತಿಗಳಿಂದ ಆರಾಧಿಸಲ್ಪಟ್ಟಿದೆ. ಯಾವ ವಿಧವಾದ ಮಾತ್ಸರ್ಯವೂ ಇಲ್ಲದೆ ಕೊಡಬೇಕಾದ ಪದಾರ್ಥಗಳನ್ನೆಲ್ಲ ದಾನ ಮಾಡಿದ್ದೇವೆ.

ತುಷ್ಟಾ ದ್ವಿಜರ್ಷಭಾಶ್ಚಾತ್ರ ದಾನೈರ್ಬಹುವಿಧೈರಪಿ ।
ಕ್ಷತ್ರಿಯಾಶ್ಚ ಸುಯುದ್ಧೇನ ಶ್ರಾದ್ಧೈರಪಿ ಪಿತಾಮಹಾಃ ॥೧೪॥

ಪಾಲನೇನ ವಿಶಸ್ತುಷ್ಟಾಃ ಕಾಮೈಸ್ತುಷ್ಟಾ ವರಸ್ತ್ರಿಯಃ ।
ಅನುಕ್ರೋಶೈಸ್ತಥಾ ಶೂದ್ರಾ ದಾನೈಃ ಶೇಷಾ ಪೃಥಗ್ ಜನಾಃ ॥೧೫॥

ಬಹುವಿಧವಾದ ದಾನಗಳಿಂದ ಬ್ರಾಹ್ಮಣರು ತೃಪ್ತರಾಗಿದ್ದಾರೆ. ಅಶ್ವಮೇಧ ಯಾಗಕ್ಕೆ ಮೊದಲು ಮಾಡಿದ ಧರ್ಮಯುದ್ಧದಿಂದ ಕ್ಷತ್ರಿಯರೂ ತೃಪ್ತರಾಗಿದ್ದಾರೆ. ನಾಂದೀ ಶ್ರಾದ್ಧಗಳ ಮೂಲಕ ಪಿತಾಮಹ, ಪ್ರಪಿತಾಮಹರು ತೃಪ್ತರಾಗಿದ್ದಾರೆ. ಪಾಲನೆಯಿಂದ ವೈಶ್ಯರು ತೃಪ್ತರಾಗಿದ್ದಾರೆ. ಕಾಮನಾಪೂರ್ತಿಗಳಿಂದ ಸ್ತ್ರೀಯರು ಸಂತುಷ್ಟರಾಗಿದ್ದಾರೆ. ದಯಾಪೂರ್ಣವಾಗಿ ನೋಡಿಕೊಳ್ಳುವುದರಿಂದ ಶೂದ್ರರೂ ತೃಪ್ತರಾಗಿದ್ದಾರೆ. ದಾನ ಕೊಟ್ಟು ಉಳಿದ ಪದಾರ್ಥಗಳನ್ನು ಬೇರೆ ಜಾತಿಯವರಿಗೆ ನೀಡಿ ಅವರನ್ನೂ ತೃಪ್ತಿಪಡಿಸಿದ್ದೇವೆ.

ಜ್ಞಾತಿಸಂಬಂಧಿನಸ್ತುಷ್ಟಾಃ ಶೌಚೇನ ಚ ನೃಪಸ್ಯ ನಃ ।
ದೇವಾ ಹವಿರ್ಭಿಃ ಪುಣ್ಯೈಶ್ಚ ರಕ್ಷಣೈಃ ಶರಣಾಗತಾಃ ॥೧೬॥

ಜ್ಞಾನಿಗಳು, ಸಂಬಂಧಿಗಳು ನಮ್ಮ ರಾಜನ ಶುದ್ಧವಾದ ವ್ಯವಹಾರದಿಂದ ತೃಪ್ತರಾಗಿದ್ದಾರೆ. ಹವಿಸ್ಸಿನಿಂದ ದೇವತೆಗಳೆಲ್ಲರೂ ತೃಪ್ತರಾಗಿದ್ದಾರೆ. ಶರಣಾಗತರಾಗಿ ಬಂದವರು ರಕ್ಷಣೆಯಿಂದ ತೃಪ್ತರಾಗಿದ್ದಾರೆ.

ಯದತ್ರ ತಥ್ಯಂ ತದ್ ಬ್ರೂಹಿ ಸತ್ಯಸಂಧ ದ್ವಿಜಾತಿಷು ।
ಯಥಾಶ್ರುತಂ ಯಥಾದೃಷ್ಟಂ ಪೃಷ್ಟೋ ಬ್ರಾಹ್ಮಣಕಾಮ್ಯಯಾ ॥೧೭॥

ಹೀಗೆ ಎಲ್ಲರಿಗೂ ಯಥಾರ್ಥವಾಗಿ ತೃಪ್ತಿಯಾಗಿರುವಾಗ ಈ ಯಜ್ಞದಲ್ಲಿ ಯಾವ ನ್ಯೂನತೆಯನ್ನು ಕಂಡು ಈ ಯಜ್ಞವನ್ನು ಧಿಕ್ಕರಿಸುತ್ತಿರುವಿ?

ಶ್ರದ್ದೇಯವಾಕ್ಯಃ ಪ್ರಾಜ್ಞಸ್ತ್ವಂ ದಿವ್ಯರೂಪಂ ಬಿಭರ್ಷಿ ಚ ।
ಸಮಾಗತಶ್ಚ ವಿಪ್ರೇಸ್ತ್ವಂ ತತ್ತ್ವತೋ ವಕ್ತುಮರ್ಹಸಿ ॥೧೮॥

ಸತ್ಯಸಂಧನೇ, ಬ್ರಾಹ್ಮಣರ ಅಪೇಕ್ಷೆಯಂತೆ ನೀನು ಸತ್ಯವನ್ನು ಹೇಳು. ನಿನ್ನ ಮಾತು ನಮಗೆ ವಿಶ್ವಾಸಕ್ಕೆ ಯೋಗ್ಯವಾಗಿದೆ. ನೀನು ಜಾಣನಾಗಿರುವಿ. ದಿವ್ಯರೂಪವನ್ನು ಹೊಂದಿರುವಿ. ಬ್ರಾಹ್ಮಣರ ಹತ್ತಿರ ಆಗಮಿಸಿರುವಿ. ಆದ್ದರಿಂದ ಯೋಗ್ಯವಾದ ಉತ್ತರವನ್ನು ನೀಡಲು ಅರ್ಹನಾಗಿರುವಿ.

ವೈಶಂಪಾಯನಃ

ಏವಂ ಪೃಷ್ಟೋ ದ್ವಿಜೈಸ್ತೈಃ ಸ ಪ್ರಹಸ್ಯ ನಕುಲೋಽಬ್ರವೀತ್ ॥೧೯॥

ವೈಶಂಪಾಯನ– ಬ್ರಾಹ್ಮಣರು ಹೀಗೆ ಪ್ರಶ್ನಿಸಲಾಗಿ ಮುಂಗುಸಿಯು ಮಂದಹಾಸಯುಕ್ತವಾಗಿ ಇಂತು ನುಡಿಯಿತು.

ನಕುಲಃ

ನೈಷಾ ಮೃಷಾ ಮಯಾ ವಾಣೀ ಪ್ರೋಕ್ತಾ ದರ್ಪೇಣ ವಾ ದ್ವಿಜಾಃ ।
ಯನ್ಮಯೋಕ್ತಮಿದಂ ಕಿಂಚಿದ್ ಯುಷ್ಮಾಭಿಶ್ಚಾಪ್ಯುಪಶ್ರುತಮ್ ॥೨೦॥

ಮುಂಗುಸಿ– ಬ್ರಾಹ್ಮಣರೇ, ನಾನು ಎಂದಿಗೂ ಸುಳ್ಳನ್ನು ಹೇಳುವುದಿಲ್ಲ. ದರ್ಪದಿಂದಲೂ ಈ ಮಾತನ್ನು ಹೇಳುತ್ತಿಲ್ಲ. ನಾನು ಹೇಳಿದ ಈ ಮಾತು ನೀವೂ ಸಹ ಕೇಳಿರುವಿರಿ.

ಸಕ್ತುಪ್ರಸ್ಥೇನ ವೋ ನಾಯಂ ಯಜ್ಞಸ್ತುಲ್ಯೋ ದ್ವಿಜರ್ಷಭಾಃ ।
ಉಂಛವೃತ್ತೇರ್ವದಾನ್ಯಸ್ಯ ಕುರುಕ್ಷೇತ್ರನಿವಾಸಿನಃ ॥೨೧॥

ಯದ್ಯವಶ್ಯಂ ಮಯೈವೈತದ್ ವಕ್ತವ್ಯಂ ದ್ವಿಜಪುಂಗವಾಃ ।
ಶ್ರುಣುತಾವ್ಯಗ್ರಮನಸಸ್ತನ್ಮೇ ಸರ್ವಂ ದ್ವಿಜರ್ಷಭಾಃ ॥೨೨॥

ದ್ವಿಜಸತ್ತಮರೇ, ಯಥಾವತ್ತಾಗಿ ಈ ವಿಷಯವನ್ನು ಹೇಳುತ್ತೇನೆ. ಕುರುಕ್ಷೇತ್ರದಲ್ಲಿ ಉಂಛವೃತ್ತಿಯನ್ನು ಮಾಡಿಕೊಂಡು ವಾಸಮಾಡುತ್ತಿರುವ ಉದಾರಿಯಾದ ಬ್ರಾಹ್ಮಣನು

ಅದ್ಭುತವೂ, ಉತ್ತಮವೂ ಆದ ದಾನವನ್ನು ಮಾಡಿದ್ದನ್ನು ನಾನು ನೋಡಿದ್ದೇನೆ. ಅದರ ಫಲವನ್ನೂ ಅನುಭವಿಸಿದ್ದೇನೆ. ಈ ಕಥೆಯನ್ನು ಯಥಾರ್ಥವಾಗಿ ಅವ್ಯಗ್ರಮನಸ್ಸಿನಿಂದ ಕೇಳಿರಿ.

ಅನುಭೂತಂ ಚ ದೃಷ್ಟಂ ಚ ಯನ್ಮಯಾऽದ್ಭುತಮುತ್ತಮಮ್ ।
ಉಂಛವೃತ್ತೇರ್ಯಥಾ ವೃತ್ತಂ ದಾನಧರ್ಮಂ ಚ ಯಾದೃಶಮ್ ॥೨೩॥

ಉಂಛವೃತ್ತಿಯಲ್ಲಿರುವ ಬ್ರಾಹ್ಮಣನು ಆಚರಿಸಿದ ಧರ್ಮ, ಮಾಡಿದ ದಾನ ಇವೆಲ್ಲವೂ ಅದ್ಭುತ ಮತ್ತು ಉತ್ತಮವಾಗಿದ್ದು, ನಾನು ನೋಡಿದ್ದೇನೆ ಮತ್ತು ಅನುಭವಿಸಿದ್ದೇನೆ.

ಸ್ವರ್ಗಂ ಸ್ಥಾನಂ ಚ ಸಂಪ್ರಾಪ್ತಃ ಸಭಾರ್ಯಃ ಸಸುತಸ್ನುಷಃ ।
ಯಥಾ ಚಾರ್ಧಂ ಶರೀರಸ್ಯ ಮಮೇದಂ ಕಾಂಚನೀಕೃತಮ್ ॥೨೪॥

ಆ ಬ್ರಾಹ್ಮಣನು ಒಂದು ಸೇರು ಹಿಟ್ಟಿನ ಪ್ರಭಾವದಿಂದ ಹೆಂಡತಿ, ಮಗ, ಸೊಸೆಯರಿಂದ ಕೂಡಿಕೊಂಡು ಸ್ವರ್ಗವನ್ನು ಹೊಂದಿದನು. ನನ್ನ ಈ ಶರೀರದ ಅರ್ಧಭಾಗವು ಸುವರ್ಣಮಯವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ನಕುಲಶರೀರದರ್ಶನಂ ನಾಮ ದ್ವಿನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ - ೩೦ನೇ ಅಧ್ಯಾಯ

ಸಕೃಷ್ಣೇಷ್ವಥ ಪಾರ್ಥೇಷು ಸುಸ್ನಾತಾವಭೃಥೇಷ್ವಲಮ್ ।
ಪಂಚೇಂದ್ರವದ್ ವಿರಾಜತ್ಸು ಸ್ತೂಯಮಾನೇಷ್ವಪೀಶ್ವರೈಃ ॥

ಸ್ತೂಯಮಾನೇ ಚ ತದ್ಯಜ್ಞೇ ಕ್ರೋಧೋ ನಕುಲತಾಂ ಗತಃ ।
ಕೃತ್ವೋಗ್ರಗರ್ಜನಂ ಯಜ್ಞಂ ತಾಂಶ್ಚ ಯಜ್ಞಕೃತೋऽಖಿಲಾನ್ ॥

ಗರ್ಹಯನ್ನೂಚಿವಾನಿತ್ಥಂ ಭಾರ್ಯಾಪುತ್ರಸ್ನುಷಾಯುತಃ ।
ಸಕ್ತುಪ್ರಸ್ಥಮದಾದ್ ವಿಪ್ರ ಉಂಛವೃತ್ತಿಃ ಸುಭಕ್ತಿತಃ ॥

ಧರ್ಮಾಯಾತಿಥಯೇ ತಸ್ಯ ಕಲಾಂ ನಾರ್ಹತಿ ಷೋಡಶೀಮ್ ।
ಯಜ್ಞೋಽಯಮಿತಿ ಹೇತುಂ ಚ ವಿಪ್ರೈಃ ಪೃಷ್ಟೋಽಭ್ಯಭಾಷತ ॥

ಪಾಂಡವರು ದ್ರೌಪದಿಯೊಂದಿಗೆ ಅವಭೃಥ ಸ್ನಾನಮಾಡಿ, ಐವರೂ ಇಂದ್ರರಂತೆ ಶೋಭಿಸುತ್ತಿದ್ದಾಗ ರಾಜರು ಅವರನ್ನು ಕೊಂಡಾಡಿದರು. ಯಜ್ಞವನ್ನೂ ಕೊಂಡಾಡಿದರು. ಆಗ ಕ್ರೋಧಾಭಿಮಾನಿ ಅಸುರನು ಮುಂಗುಸಿಯಾಗಿ ಭಯಂಕರ ಗರ್ಜನೆ ಮಾಡಿ, ಯಜ್ಞವನ್ನೂ ಯಜ್ಞ ಮಾಡಿದ ಎಲ್ಲ ಪಾಂಡವರನ್ನೂ ನಿಂದಿಸುತ್ತ ಹೇಳಿದ- 'ಉಂಛ ವೃತ್ತಿಯಿಂದ ಜೀವಿಸುತ್ತಿದ್ದ ಒಬ್ಬ ಬ್ರಾಹ್ಮಣ, ಹೆಂಡತಿ ಮಗ ಸೊಸೆಯರಿಂದೊಡಗೂಡಿ ಬಹಳ ಭಕ್ತಿಯಿಂದ ಹಿಟ್ಟಿನ ರಾಶಿಯನ್ನು ಅತಿಥಿಯಾಗಿ ಬಂದ ಯಮನಿಗೆ ದಾನ ಮಾಡಿದ. ಅದರ ಹದಿನಾರನೆಯ ಒಂದಂಶಕ್ಕೂ ಈ ಯಜ್ಞ ಸಮವಾಗದು' ಎಂದು. ಮುನಿಗಳು ಇದಕ್ಕೆ ಕಾರಣವನ್ನು ಕೇಳಲು ಅಸುರ ಹೇಳಿದ–

ಅತಿಥೇಸ್ತಸ್ಯ ಪಾದೋದಕ್ಲಿನ್ನಃ ಪಾರ್ಶ್ವೋ ಹಿರಣ್ಮಯಃ ।
ಏಕೋ ಮಮಾಭೂದಪರಃ ಸರ್ವತೀರ್ಥಾದಿಕೇಷ್ವಪಿ ॥

ಮಜ್ಜತೋಽವಭೃಥೇಷ್ವದ್ಧಾ ಯಜ್ಞಾನಾಮತ್ರ ಚಾऽದರಾತ್ ।
ನಾಭೂದಿತ್ಯಥ ತತ್ತತ್ತ್ವವೇದಿಭಿರ್ಮುನಿಪುಂಗವೈಃ ॥

ಕೃಷ್ಣೇನ ಚ ತಮೋಽಂಧಂ ತಂ ಪ್ರಾಪಯದ್ಭಿಃ ಸ್ಮಿತೇ ಕೃತೇ ।
ಅದರ್ಶನಂ ಜಗಾಮಾऽಶು ತಮಃ ಪ್ರಾಪ ಚ ಕಾಲತಃ ॥

'ಆ ಅತಿಥಿಯ ಪಾದೋದಕದಿಂದ ಒದ್ದೆಯಾದ ನನ್ನ ಮೈಯ ಒಂದು ಪಾರ್ಶ್ವ ಸುವರ್ಣವಾಯಿತು. ಬಳಿಕ ಎಲ್ಲ ಪವಿತ್ರ ಜಲಗಳಲ್ಲಿಯೂ ಇಲ್ಲಿನ ಯಜ್ಞದ ಅವಭೃಥ ಜಲಗಳಲ್ಲಿಯೂ ಆದರದಿಂದ ನಾನು ಚೆನ್ನಾಗಿ ಮುಳುಗಿದರೂ ಇನ್ನೊಂದು ಪಾರ್ಶ್ವ ಸುವರ್ಣಮಯವಾಗಲೇ ಇಲ್ಲ'. ಪಾಂಡವರ ಯಜ್ಞದ ನಿಜವಾದ ಮಹತ್ವವನ್ನು ಅರಿತಿದ್ದ ಮುನಿಪುಂಗವರೂ ಕೃಷ್ಣನೂ ಕ್ರೋಧಾಸುರನನ್ನು ಅಂಧಂತಮಸ್ಸಿಗೆ ಕಳಿಸಲು ಬಯಸಿ, ಮುಗುಳು ನಕ್ಕಾಗ ಅಸುರನು ಅದೃಶ್ಯನಾದ. ಸ್ವಲ್ಪಕಾಲವಾದ ಬಳಿಕ ತಮಸ್ಸನ್ನು ಹೊಂದಿದ.

ತದರ್ಥಮೇವ ಹೈರಣ್ಯಃ ಪಾರ್ಶ್ವಸ್ತಸ್ಯಾಭವತ್ಪುರಾ ।
ಕೃಷ್ಣಸ್ಯ ಪಾಂಡವಾನಾಂ ಚ ಮಖಾದೇಶ್ಚ ಗುಣಾನ್ ಬಹೂನ್ ।
ವದಂತೋ ಭರ್ತ್ಸಯಾಂಚಕ್ರುಸ್ತನ್ಮತಜ್ಞಾ ಮಧುದ್ವಿಷಃ ॥

ಅದಕ್ಕಾಗಿಯೇ ಅವನ ಒಂದು ಪಾರ್ಶ್ವ ಹಿಂದೆ ಬಂಗಾರವಾಗಿತ್ತು. ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದಿದ್ದ ಮುನಿಗಳು ಶ್ರೀಕೃಷ್ಣನ, ಪಾಂಡವರ ಮತ್ತು ಯಜ್ಞಾದಿಗಳ ಬಹಳ ಗುಣಗಳನ್ನು ಹೇಳುತ್ತ ಅಸುರನನ್ನು ನಿಂದಿಸಿದರು.

ಶ್ರಾದ್ಧಾರ್ಥಂ ಹಿ ಪಯಃ ಪೂರ್ವಂ ಜಮದಗ್ನೇರದೂಷಯತ್ ।
ನಾಕುಲೇನೈವ ರೂಪೇಣ ಕ್ರೋಧಸ್ತಂ ಪಿತರೋಽಶಪನ್ ॥

ಭವ ತ್ವಂ ನಕುಲಸ್ತಾವದ್ ಯಾವದ್ಧರ್ಮಾದಿಕಾನ್ ಸುರಾನ್ ।
ಕ್ಷೇಪ್ಸ್ಯಸೀತಿ ತಮೋ ಘೋರಂ ಭೂಯಃ ಪಾಪೇನ ಯಾತ್ವಯಮ್ ।
ಇತ್ಯಭಿಪ್ರೇತ್ಯ ತೈಃ ಶಪ್ತಸ್ತಥಾ ಕೃತ್ವಾ ತಮೋಽಭ್ಯಯಾತ್ ॥

ಶ್ರಾದ್ಧಕ್ಕಾಗಿ ಇಟ್ಟಿದ್ದ ಜಮದಗ್ನಿಯ ಹಾಲನ್ನು ಹಿಂದೆ ಈ ಕ್ರೋಧಾಸುರ ಮುಂಗುಸಿಯ ರೂಪದಿಂದಲೇ ಎಂಜಲು ಮಾಡಿದ್ದ. ಅವನನ್ನು ಪಿತೃಗಳು ಶಪಿಸಿದರು. 'ಧರ್ಮರಾಜಾದಿ ದೇವತೆಗಳನ್ನು ನಿಂದಿಸುವವರೆಗೂ ನೀನು ಮುಂಗುಸಿಯಾಗಿರು' ಎಂದು ಮಹಾಪಾಪದಿಂದ ಈತ ಘೋರವಾದ ಅಂಧಂತಮಸ್ಸನ್ನು ಹೊಂದಲಿ ಎಂದು ಬಯಸಿಯೆ ಅವರು ಹಾಗೆ ಮಾಡಿದ್ದರು. ಕ್ರೋಧಾಸುರ ಹಾಗೇ ಮಾಡಿ ತಮಸ್ಸನ್ನು ಹೊಂದಿದ.

ಯದ್ಯಪ್ಯಲ್ಪಧನತ್ಯಕ್ತಂ ವಿತ್ತಂ ಬಹುಫಲಂ ಭವೇತ್ ।
ತಥಾಽಪ್ಯನಂತಫಲದಾಃ ಕರ್ತುರೇವ ಮಹಾಗುಣಾಃ ॥

ಸತಾಂ ಪ್ರೀತಿಶ್ಚ ತತ್ರಾಪಿ ಸದ್ವರೋ ಹರಿರೇವ ಹಿ ।
ಪಾರ್ಥೇಭ್ಯೋಽಭ್ಯಧಿಕಃ ಕರ್ತಾ ಸಮೋ ವಾ ಕೋ ಗುಣೈರ್ಭವೇತ್ ॥

ಅಲ್ಪಧನ ಉಳ್ಳವನು ಕೊಟ್ಟ ಧನ ಅಧಿಕಫಲವನ್ನು ಕೊಟ್ಟೀತು. ಆದರೂ ಕರ್ತನ ಜ್ಞಾನ-ಭಕ್ತ್ಯಾದಿ ಮಹಾಗುಣಗಳು ಮತ್ತು ಅವುಗಳಿಂದ ಉಂಟಾಗುವ ಸಜ್ಜನರ ಸಂತೋಷಗಳೇ ಅನಂತಫಲದಾಯಕಗಳು. ಸಜ್ಜನರಲ್ಲಿ ಉತ್ತಮನು ಶ್ರೀಹರಿಯೇ.

ಭಕ್ತಾದಿಗುಣಗಳಲ್ಲಿ ಪಾಂಡವರಿಗಿಂತಲೂ ಶ್ರೇಷ್ಠನಾದ ಅಥವಾ ಅವರಿಗೆ ಸಮನಾದ ಕರ್ತನು ಯಾರು ಇರಬಲ್ಲರು?

ಸತಾಂ ಚ ಪ್ರವರೋ ವಿಷ್ಣುಃ ಸದ್ಭಿರ್ಮುನಿಸುರೈರ್ಯುತಃ ।
ಪ್ರತ್ಯಕ್ಷತಃ ಕಾರಯತಿ ಪಾರ್ಥೈಃ ಪ್ರಿಯತಮೈಶ್ಚ ತೈಃ ॥

ಯಂ ಮಖಪ್ರವರಂ ತಸ್ಯ ಸಮಂ ಕಿಂ ಶುಭಸಾಧನಮ್ ।
ಪಠಂತಿ ಪೈಂಗಿನಶ್ಚೈತಾನ್ ಮಂತ್ರಾನನರ್ಥಕಾನಿಹ ॥

ಸಜ್ಜನರಲ್ಲಿ ಶ್ರೇಷ್ಠನಾದ ವಿಷ್ಣು ಸಜ್ಜನರಾದ ಮುನಿವರರಿಂದ ಯುಕ್ತನಾಗಿ, ಅತ್ಯಂತ ಪ್ರಿಯರಾದ ಪಾಂಡವರ ಮೂಲಕ ಶುಭಸಾಧನಗಳಿಂದ ಪ್ರತ್ಯಕ್ಷವಾಗಿ ಯಾವ ಯಜ್ಞವನ್ನು ಮಾಡಿಸುತ್ತಿರುವನೋ ಆ ಯಜ್ಞಕ್ಕೆ ಸಮಾನವಾಗಿ ಪುಣ್ಯಕರವಾದ ಇನ್ನೊಂದು ಕರ್ಮ ಯಾವುದು? ಏಕೆಂದರೆ ಪೈಂಗಿ ಶಾಖೆಯವರು ಅರ್ಥ ಗರ್ಭಿತವಾದ ಮುಂದೆ ಹೇಳುವ ಮಂತ್ರಗಳನ್ನು ಪಠಿಸುತ್ತಾರೆ.

'ಅವೈಷ್ಣವಕೃತಂ ಕರ್ಮ ಸರ್ವಮಂತವದುಚ್ಯತೇ ।
ಅನಂತಂ ವೈಷ್ಣವಕೃತಂ ತತ್ರ ವರ್ಣಕ್ರಮಾತ್ಪರಮ್ ॥

ವೈಷ್ಣವೈರಪಿ ಮರ್ತ್ಯೈರ್ಯತ್ಕೃತಂ ಶತಗುಣಂ ತತಃ ।
ಗಾಂಧರ್ವಂ ಕರ್ಮ ತಸ್ಮಾಚ್ಚ ಪಿತೃಭಿರ್ಮುನಿಭಿಸ್ತತಃ ॥

ದೇವಶಕ್ರಶಿವಬ್ರಹ್ಮಕೃತಂ ತಸ್ಮಾತ್ತಮೇಣ ಚ ।
ಶತೋತ್ತರಮಿತಿ ಜ್ಞೇಯಂ ನಾನ್ಯದ್ ಬ್ರಹ್ಮಕೃತೋಪಮಮ್ ॥

'ವಿಷ್ಣುಭಕ್ತರಲ್ಲದವರು ಮಾಡಿದ ಎಲ್ಲ ಕರ್ಮವೂ ಅಲ್ಪಫಲ ಉಳ್ಳದ್ದೆನಿಸುತ್ತದೆ. ವಿಷ್ಣುಭಕ್ತರು ಮಾಡಿದ್ದು ಅನಂತಫಲ ಉಳ್ಳದ್ದು. ಅದರಲ್ಲಿಯೂ ವರ್ಣಕ್ರಮದಿಂದ ಮೇಲು ಮೇಲಿನವರ ಕರ್ಮ ಹೆಚ್ಚು ಫಲ ಉಳ್ಳದ್ದು. ವೈಷ್ಣವರಲ್ಲಿಯೂ ಮಾನವರು ಮಾಡಿದ್ದಕ್ಕಿಂತ ನೂರು ಪಾಲು ಗಂಧವರು ಮಾಡಿದ್ದು ಶ್ರೇಷ್ಠ. ಅದಕ್ಕಿಂತ ಪಿತೃಗಳು ಮಾಡಿದ್ದು ನೂರುಪಾಲು ಶ್ರೇಷ್ಠ. ಅದಕ್ಕಿಂತಲೂ ಮುನಿಗಳು ಮಾಡಿದ್ದು ನೂರು ಪಾಲು ಶ್ರೇಷ್ಠ. ಅದಕ್ಕಿಂತ ದೇವತೆಗಳು, ಇಂದ್ರ, ರುದ್ರ, ಬ್ರಹ್ಮರು ಮಾಡಿದ್ದು ಕ್ರಮವಾಗಿ ನೂರು ನೂರು ಪಟ್ಟು ಹೆಚ್ಚು ಶ್ರೇಷ್ಠವೆಂದು ತಿಳಿಯಬೇಕು. ಬ್ರಹ್ಮ ಮಾಡಿದ್ದಕ್ಕೆ ಸಮಾನವಾದದ್ದು ಇನ್ನೊಂದಿಲ್ಲ.

'ವೈಷ್ಣವತ್ವಂ ಕ್ರಮಾದ್ ವೃದ್ಧಂ ಬ್ರಹ್ಮಾಂತಂ ಜೀವರಾಶಿಷು ।
ಫಲಾಧಿಕ್ಯಂ ಕರ್ಮಣಾಂ ಹಿ ವಿಷ್ಣೋಃ ಪ್ರೀತ್ಯೈವ ನಾನ್ಯಥಾ ॥'

ವಿಷ್ಣುಭಕ್ತಿ ಜೀವರಾಶಿಗಳಲ್ಲಿ ಕ್ರಮಕ್ರಮವಾಗಿ ಬ್ರಹ್ಮನವರೆಗೆ ಹೆಚ್ಚು ಹೆಚ್ಚಾಗಿರುತ್ತದೆ. ಕರ್ಮಗಳಿಗೆ ಅಧಿಕ ಫಲ ಸಿಗುವುದು ಶ್ರೀಹರಿಗೆ ಆಗುವ ತೃಪ್ತಿಯಿಂದಲೇ ಹೊರತು ಬೇರಾವುದರಿಂದಲೂ ಅಲ್ಲ.

ಇತಿ ತೇನ ನ ಪಾರ್ಥಾನಾಂ ಕರ್ಮಣಾऽನ್ಯತ್ಸಮಂ ಕ್ವಚಿತ್ ।
ಗುಣೈರ್ಜ್ಞಾನಾದಿಭಿರ್ವಾऽಪಿ ತಸ್ಮಾತ್ ಕ್ರೋಧಃ ಸ ತಾಮಸಃ ।
ವಿನಿಂದ್ಯ ತಾನ್ ಸುಸತ್ತ್ವಸ್ಥಾಂಸ್ತಮೋऽಂಧಮುಪಜಗ್ಮಿವಾನ್ ॥

ಹೀಗೆ ಪೈಂಗಿಶಾಖೆಯ ಮಂತ್ರಗಳಿರುವುದರಿಂದ ಪಾಂಡವರ ಯಜ್ಞಕ್ಕೆ ಸಮಾನ ಇನ್ನೊಂದು ಎಲ್ಲಿಯೂ ಇಲ್ಲ. ಅವರ ಜ್ಞಾನಾದಿ ಗುಣಗಳಿಗೂ ಸಮಾನವಾದ ಗುಣ ಇನ್ನೊಂದು ಎಲ್ಲಿಯೂ ಇಲ್ಲ. ಅದರಿಂದ ತಾಮಸನಾದ ಆ ಕ್ರೋಧಾಸುರ ಮಹಾ ಸಾತ್ವಿಕರಾದ ಆ ಪಾಂಡವರನ್ನು ನಿಂದಿಸಿ ಅಂಧಂತಮಸ್ಸನ್ನು ಹೊಂದಿದ.

ಅಥ ಪೃಷ್ಟೋ ವಾಸುದೇವಃ ಸುರವಿಪ್ರಾದಿಸಂಸದಿ ।
ಯುಧಿಷ್ಠಿರೇಣ ಸಂಹೃಷ್ಟೋ ಜಗಾದಾಶೇಷತಃ ಪ್ರಭುಃ ।

ಬಳಿಕ ದೇವತೆಗಳು, ಮುನಿಗಳು ಮುಂತಾದವರ ಸಭೆಯಲ್ಲಿ ಧರ್ಮರಾಜ ಪ್ರಶ್ನೆಗಳನ್ನು ಕೇಳಿದಾಗ ಶ್ರೀಕೃಷ್ಣನು ಎಲ್ಲ ವೈಷ್ಣವ ಧರ್ಮಗಳನ್ನೂ ಉಪದೇಶಿಸಿದನು.

★ ★ ★ ★ ★

ತೊಂಬತ್ಮೂರನೆಯ ಅಧ್ಯಾಯ

ಮುಂಗುಸಿಯು ಧರ್ಮರಾಜಾದಿಗಳಿಗೆ ಉಂಛವೃತ್ತಿ ಬ್ರಾಹ್ಮಣನ ಸಕ್ತುದಾನದ ಮಹಿಮೆಯನ್ನು ವರ್ಣನೆ ಮಾಡಿ ಅಂತರ್ಧಾನ ಹೊಂದಿದುದು.

ನಕುಲಃ

ಅತ್ರ ವೋ ವರ್ತಯಿಷ್ಯಾಮಿ ದಾನಸ್ಯ ಫಲಮುತ್ತಮಮ್ ।
ನ್ಯಾಯಲಬ್ಧಸ್ಯ ಸೂಕ್ಷ್ಮಸ್ಯ ವಿಪ್ರೇ ದತ್ತಸ್ಯ ವೈ ದ್ವಿಜಾಃ ॥೧॥

ಮುಂಗುಸಿ– ಬ್ರಾಹ್ಮಣನು ಸ್ವಲ್ಪವೇ ಆಗಿದ್ದರೂ ನ್ಯಾಯವಾದ ರೀತಿಯಲ್ಲಿ ಸಂಪಾದಿಸಿದ ದಾನದ ಮಹತ್ವವನ್ನು, ಅದರ ಫಲವನ್ನು ಹೇಳುತ್ತೇನೆ, ಎಲ್ಲ ಬ್ರಾಹ್ಮಣರೇ ಕೇಳಿಸಿಕೊಳ್ಳಿರಿ.

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಧರ್ಮಜ್ಞೈರ್ಬಹುಭಿರ್ವೃತೇ ।
ಉಂಛವೃತ್ತಿರ್ದ್ವಿಜಃ ಕಶ್ಚಿತ್ ಕಾಪೋತಿರಭವತ್ ತದಾ(ಪುರಾ) ॥೨॥

ಧರ್ಮಜ್ಞ ಪುರುಷರಿಂದ ಸುತ್ತುವರಿದ, ಧರ್ಮಕ್ಷೇತ್ರವೆನಿಸಿದ ಕುರುಕ್ಷೇತ್ರದಲ್ಲಿ ಉಂಛವೃತ್ತಿಯಿಂದ ಜೀವನವನ್ನು ನಿರ್ವಹಿಸುತ್ತಿದ್ದ ಬ್ರಾಹ್ಮಣನು ಕಪೋತದಂತೆ (ಪಾರಿವಾಳ) ಯದೃಚ್ಛಾಲಾಭನಾಗಿ ಜೀವನವನ್ನು ನಿರ್ವಹಿಸುತ್ತಿದ್ದನು.

ಸಭಾರ್ಯಃ ಸಹ ಪುತ್ರೇಣ ಸಸ್ನುಷಸ್ತಪಸಿ ಸ್ಥಿತಃ ॥೩॥

ತನ್ನ ಹೆಂಡತಿ, ಮಕ್ಕಳು, ಸೊಸೆಯಂದಿರೊಡನೆ ಯಾವಾಗಲೂ ತಪಸ್ಸಿನಲ್ಲೇ ನಿರತನಾಗಿದ್ದನು.

ವಧೂಚತುರ್ಥೋ ವೃದ್ಧಃ ಸ ಧರ್ಮಾತ್ಮಾ ನಿಯತೇಂದ್ರಿಯಃ ।
ಷಷ್ಠೇ ಕಾಲೇ ಸದಾ ವಿಪ್ರೋ ಭುಂಕ್ತೇ ತೈಃ ಸಹ ಸುವ್ರತಃ ॥೪॥

ಪ್ರತಿದಿವಸವೂ ಆರನೆಯ ಕಾಲದಲ್ಲಿ ಹೆಂಡತಿ, ಸೊಸೆ, ಮಗ, ಮಗಳು ಎಂಬ ನಾಲ್ಕು ಜನರಿಂದ ಕೂಡಿಕೊಂಡಿರುವ ಧರ್ಮಾತ್ಮನಾದ, ಜಿತೇಂದ್ರಿಯನಾದ ವೃದ್ಧ ಬ್ರಾಹ್ಮಣನು ವ್ರತನಿಷ್ಠನಾಗಿ ಊಟಮಾಡುತ್ತಿದ್ದನು.

ಷಷ್ಠೇ ಕಾಲೇ ಕದಾಚಿತ್ತು ತಸ್ಯಾಹಾರೋ ನ ವಿದ್ಯತೇ ।
ಭುಂಕ್ತೇಽನ್ಯಸ್ಮಿನ್ ಕದಾಚಿತ್ ಸ ಷಷ್ಠೇ ಕಾಲೇ ದ್ವಿಜೋತ್ತಮಃ ॥೫॥

ಒಂದುವೇಳೆ ಆರನೆಯ ಕಾಲದಲ್ಲಿ ಆಹಾರವು ಲಭಿಸದಿದ್ದಲ್ಲಿ ಮರುದಿವಸದ ಆರನೆಯ ಕಾಲ ಬರುವ ತನಕ ಉಪವಾಸವಿದ್ದು ಮರುದಿವಸವೇ ಊಟ ಮಾಡುತ್ತಿದ್ದನು.

ಕಾಪೋತಧರ್ಮಿಣಸ್ತಸ್ಯ ದುರ್ಭಿಕ್ಷೇ ಸತಿ ದಾರುಣೇ ।
ನಾವಿದ್ಯತ ತದಾ ವಿಪ್ರಾಃ ಸಂಚಯಸ್ತನ್ನಿಬೋಧತ ॥೬॥

ಹೀಗೆ ಹೊಲ-ಗದ್ದೆಗಳಲ್ಲಿ ಬಿದ್ದಿರುವ ಕಾಳುಗಳನ್ನು ಹೆಕ್ಕಿತಿನ್ನುವ ಕಪೋತದಂತೆ ವ್ರತಾನುಷ್ಠಾನ ನಿರತನಾಗಿ ಬ್ರಾಹ್ಮಣನು ಇರುತ್ತಿರಲು ಒಮ್ಮೆ ಭೀಕರವಾದ ಕ್ಷಾಮವು ಒದಗಿಬಂದಿತು. ಆ ದಿನಗಳಲ್ಲಿ ಬ್ರಾಹ್ಮಣನಿಂದ ಕಾಳುಗಳನ್ನು ಸಂಗ್ರಹಿಸಲಾಗುತ್ತಿರಲಿಲ್ಲ.

ಕ್ಷೀಣೌಷಧಿಸಮಾವಾಪೋ ದ್ರವ್ಯಹೀನೋಽಭವತ್ ತದಾ ।
ಕ್ಷೀಣೇ ಕಾಲೇಽಸ್ಯ ಸಂಪ್ರಾಪ್ತೇ ನೈವಾವಿದ್ಯತ ಭೋಜನಮ್ ॥೭॥

ಭೂಮಿಯೆಲ್ಲವೂ ಗಿಡ-ಮರಗಳಿಂದ, ಸಸ್ಯರಾಶಿಗಳಿಂದ ದ್ರವ್ಯಹೀನವಾಗಿ ಬಂಜರಾಗಿದ್ದಿತು. ಇಂತಹ ದುರ್ಭಿಕ್ಷೆಯ ಸಮಯದಲ್ಲಿ ಅವನಿಗೆ ಆಹಾರವೇ ದೊರೆಯುತ್ತಿರಲಿಲ್ಲ.

ಕ್ಷುಧಾಪರಿಗತಾಃ ಸರ್ವೇ ಪ್ರಾತಿಷ್ಠಂತ ತದಾ ತು ತೇ ।
ಉಂಛಂ ತದಾ ಶುಕ್ಲಪಕ್ಷೇ ಮಧ್ಯಂ ತಪತಿ ಭಾಸ್ಕರೇ ॥೮॥

ಮನೆಯ ಎಲ್ಲಸದ್ಯಸರು ಆಹಾರ ಇಲ್ಲದೆ ಹಸಿವೆಯಿಂದ ಒಂದು ದಿನ ಕಂಗೆಟ್ಟರು. ಶುಕ್ಲಪಕ್ಷದ ಒಂದು ದಿವಸದ ಮಧ್ಯಾಹ್ನದ ವೇಳೆಯಲ್ಲಿ ಅವರೆಲ್ಲರೂ ಆಹಾರಕ್ಕಾಗಿ ಪರಿಭ್ರಮಣ ಮಾಡುತ್ತಿದ್ದರು.

ಉಷ್ಣಾರ್ತಶ್ಚ ಕ್ಷುಧಾರ್ತಶ್ಚ ವಿಪ್ರಸ್ತಪಸಿ ನಿಷ್ಠಿತಃ ।
ಉಂಛಮಪ್ರಾಪ್ತವಾನೇವ ಸಾರ್ಧಂ ಪರಿಜನೇನ ಹ ॥೯॥

ನಡುಮಧ್ಯಾಹ್ನದ ವೇಳೆ ಸೂರ್ಯನು ಪ್ರಖರವಾಗಿ ತಾಪವನ್ನುಂಟು ಮಾಡುತ್ತಿದ್ದ. ಉದರದಲ್ಲಿ ಹಸಿವೆಯಿಂದ ಅಗ್ನಿಜ್ವಾಲೆಯು ದಹಿಸುತ್ತಿತ್ತು. ತಪೋನಿರತನಾದ ಬ್ರಾಹ್ಮಣನು ಹಸಿವೆಯಿಂದ, ಸೂರ್ಯನ ತಾಪದಿಂದ ಪೀಡಿತನಾಗಿದ್ದನು. ಎಲ್ಲಿಯೂ ಅವನಿಗೆ ಕಾಳುಗಳು ಸಿಕ್ಕಲಿಲ್ಲ. ಬಂಧುಜನರಿಂದ ಕೂಡಿಕೊಂಡು ಹಸಿವೆಯಿಂದಲೇ ದುಃಖದಿಂದ ಕಾಲಕಳೆಯುತ್ತಿದ್ದನು.

ಸ ತಥೈವ ಕ್ಷುಧಾವಿಷ್ಟಃ ಸ್ಪಷ್ಟಾ ತೋಯಂ ಯಥಾವಿಧಿ ।
ಕ್ಷಪಯಾಮಾಸ ತಂ ಕಾಲಂ ಸಾರ್ಧಂ ಪರಿಜನೇನ ಹ ॥೧೦॥

ಪ್ರಾಣವನ್ನು ಉಳಿಸಿಕೊಳ್ಳುವುದು ಅವನಿಗೆ ಕಷ್ಟಸಾಧ್ಯವಾಗಿತ್ತು. ಮತ್ತೊಮ್ಮೆ ಆರನೆಯ ಕಾಲವು ಪ್ರಾಪ್ತವಾಗಲು ಬ್ರಾಹ್ಮಣನು ಮತ್ತು ಅವನ ಕುಟುಂಬದವರು ಒಟ್ಟಾಗಿ ಕಷ್ಟದಿಂದ ಸಿಕ್ಕಿದ ಸ್ವಲ್ಪ ನೀರನ್ನೇ ಕುಡಿದುಕೊಂಡು ಎಲ್ಲರೂ ಕಾಲಕಳೆದರು.

ಅಥ ಷಷ್ಠೇ ಗತೇ ಕಾಲೇ ತೇ ಯವಪ್ರಸ್ಥಮಾರ್ಜಯನ್ ।
ಯವಪ್ರಸ್ಥಂ ಚ ತತ್ ಸಕ್ತೂನ್ ಅಕುರ್ವಂತ ತಪಸ್ವಿನಃ ॥೧೧॥

ಬಳಿಕ ದಿನದ ಆರನೆಯ ಕಾಲವು ಬರುತ್ತಿರಲು ಮರುದಿವಸ ಕಷ್ಟದಿಂದ ಸ್ವಲ್ಪವೇ ಯವಧಾನ್ಯವನ್ನು ಸಂಗ್ರಹಿಸಿಕೊಂಡರು. ಅವರೆಲ್ಲರೂ ತಪಸ್ವಿಗಳಾಗಿದ್ದು ಆ ಯವಧಾನ್ಯವನ್ನು ಉಪಭುಂಜಿಸಲು ಹಿಟ್ಟನ್ನಾಗಿ ಮಾಡಿಕೊಂಡರು.

ಕೃತಜಪ್ಯಾಹ್ನಿಕಾಸ್ತೇ ತು ಹುತ್ವಾ ವಹ್ನಿಂ ಯಥಾವಿಧಿ ।
ಕುಡುಪಂ ಕುಡುಪಂ ಸರ್ವೇ ವ್ಯಭಜಂತ ತಪಸ್ವಿನಃ ॥೧೨॥

ಬಳಿಕ ಎಲ್ಲರೂ ಸ್ನಾನ, ಆಹ್ನಿಕಾದಿ ಸತ್ಕರ್ಮಗಳನ್ನು ಪೂರೈಸಿ ಅಗ್ನಿಯಲ್ಲಿ ವಿಧಿವತ್ತಾಗಿ ಹೋಮಮಾಡುತ್ತಾ ಒಂದೊಂದು ಕುಡತೆಯಷ್ಟು ಹಿಟ್ಟನ್ನು ಉಪಭುಂಜಿಸಲು ವಿಭಾಗ ಮಾಡಿಕೊಂಡರು.

ಅಥಾಗಮದ್ ದ್ವಿಜಃ ಕಶ್ಚಿದ್ ಅತಿಥಿರ್ಭುಂಜತಾಂ ತದಾ ।
ತೇ ತಂ ದೃಷ್ಟ್ವಾತಿಥಿಂ ತತ್ರ ಪ್ರಹೃಷ್ಟಮನಸೋಽಭವನ್ ॥೧೩॥

ತೇಽಭಿವಾದ್ಯ ಸುಖಪ್ರಶ್ನಂ ಪೃಷ್ಟ್ವಾ ತಮತಿಥಿಂ ತದಾ ।
ವಿಶುದ್ಧಮನಸೋ ದಾಂತಾಃ ಶ್ರದ್ಧಾದಮಸಮನ್ವಿತಾಃ ॥೧೪॥

ಅನಸೂಯಾ ಗತಕ್ರೋಧಾಃ ಸಾಧವೋ ಗತಮತ್ಸರಾಃ ।
ತ್ಯಕ್ತಾತ್ಮಾನೋ ಜಿತಕ್ರೋಧಾ ಧರ್ಮಜ್ಞಾ ದ್ವಿಜಸತ್ತಮಾಃ ॥೧೫॥

ಸಬ್ರಹ್ಮಚರ್ಯಂ ತೇ ಗೋತ್ರಮಾಖ್ಯಾಯಾಥ ಪರಸ್ಪರಮ್ ।
ಕುಟೀಂ ಪ್ರವೇಶಯಾಮಾಸುಃ ಕ್ಷುಧಾರ್ಥಮತಿಥಿಂ ತದಾ ॥೧೬॥

ಇನ್ನೇನು ಆ ಹಿಟ್ಟನ್ನು ತಿನ್ನಬೇಕೆನ್ನುವ ಸಮಯಕ್ಕೆ ಸರಿಯಾಗಿ ಬ್ರಾಹ್ಮಣನೊಬ್ಬ ಅತ್ಯಂತ ಹಸಿವೆಯಿಂದ ಬಳಲಿ ಅತಿಥಿಯಾಗಿ ಬಂದನು. ಆ ಅತಿಥಿಯನ್ನು ಕಂಡು ಅವರೆಲ್ಲರೂ ತುಂಬಾ ಸಂತೋಷದಿಂದ ಅವನನ್ನು ನಮಸ್ಕರಿಸಿ ಕುಶಲಪ್ರಶ್ನೆಯನ್ನು ಮಾಡಿದರು. ಶುದ್ಧವಾದ ಮನಸ್ಸಿನಿಂದ ಜಿತೇಂದ್ರಿಯರಾಗಿ, ಭಗವದ್ಭಕ್ತಿಯುಳ್ಳವರಾಗಿ, ಮನಸ್ಸನ್ನು ನಿಗ್ರಹಿಸಿಕೊಂಡು ದೋಷದೃಷ್ಟಿಯಿಲ್ಲದೆ, ಕ್ರೋಧರಹಿತರಾಗಿ ಸತ್ಪುರುಷರಾದ, ಮಾತ್ಸರ್ಯವಿಲ್ಲದ, ಮಾನ-ಮದ-ಕ್ರೋಧಗಳನ್ನು ಜಯಿಸಿಕೊಂಡಿರುವ,

ಧರ್ಮಜ್ಞರಾದ ಆ ಎಲ್ಲ ದ್ವಿಜಶ್ರೇಷ್ಠರೂ ತಮ್ಮ ಗೋತ್ರಗಳನ್ನು ಆ ಅತಿಥಿಯ ಮುಂದೆ ಹೇಳಿಕೊಂಡು ನಮಸ್ಕರಿಸಿ ಹಸಿವೆಯಿಂದ ಕಂಗಾಲಾದ ಅತಿಥಿಯನ್ನು ತಮ್ಮ ಮನೆಯ ಒಳಗಡೆ ಕರೆದುಕೊಂಡು ಹೋದರು.

ಇದಮರ್ಘ್ಯಂ ಚ ಪಾದ್ಯಂ ಚ ಬೃಸೀ ಚೇಯಂ ತವಾನಘ ।
ಶುಚಯಃ ಸಕ್ತವಶ್ಚೇಮೇ ನಿಯಮೋಪಾರ್ಜಿತಾಃ ಪ್ರಭೋ ॥೧೭॥

ಪ್ರತಿಗೃಹ್ಣೀಷ್ವ ಭದ್ರಂ ತೇ ಮಯಾ ದತ್ತಾನ್ ದ್ವಿಜೋತ್ತಮ ॥೧೮॥

ನಂತರ ಅತಿಥಿಗೆ ಬೇಕಾದ ಅರ್ಘ್ಯವನ್ನು, ಆಸನವನ್ನು, ಪಾದ್ಯವನ್ನು ಸ್ವೀಕರಿಸುವಂತೆ ಹೇಳುತ್ತಾ ನಿಯಮಬದ್ಧವಾಗಿ ಉಪಚರಿಸುತ್ತಾ ಶುದ್ಧವಾದ ಹಿಟ್ಟಿನ ಉಂಡೆಗಳನ್ನು ಧರ್ಮದಿಂದ ಸಂಪಾದಿಸಿದ್ದೇವೆಂದು ಹೇಳುತ್ತಾ, ಪೂಜ್ಯರೇ, ನಿಮಗೆ ಮಂಗಳವಾಗಲಿ. ನಾವು ಕೊಡುತ್ತಿರುವ ಈ ಹಿಟ್ಟಿನ ಉಂಡೆಗಳನ್ನು ಸ್ವೀಕರಿಸಿ ಎಂದು ಹೇಳಿದರು.

ಇತ್ಯುಕ್ತಃ ಪ್ರತಿಗೃಹ್ಯಾಥ ಸಕ್ತೂನಾಂ ಕುಡುಪಂ ದ್ವಿಜಃ ।
ಭಕ್ಷಯಾಮಾಸ ರಾಜೇಂದ್ರ ನ ಚ ತುಷ್ಟಿಂ ಜಗಾಮ ಸಃ ॥೧೯॥

ಈ ರೀತಿಯಾಗಿ ಬ್ರಾಹ್ಮಣನನ್ನು ಪ್ರಾರ್ಥಿಸುತ್ತಾ ಒಂದು ಕುಡತೆ ಪ್ರಮಾಣದ ಹಿಟ್ಟಿನ ಉಂಡೆಯನ್ನು ಸ್ವೀಕರಿಸಲು ಕೊಟ್ಟರು. ಅಂತೆಯೇ ಅತಿಥಿಯು ಆ ಹಿಟ್ಟನ್ನು ಸ್ವೀಕರಿಸಿದನು. ಆದರೆ ಅಷ್ಟರಿಂದ ಆತನು ತೃಪ್ತನಾಗಲಿಲ್ಲ.

ಸ ಉಂಛವೃತ್ತಿಸ್ತಂ ಪ್ರೇಕ್ಷ್ಯ ಕ್ಷುಧಾಪರಿಗತಂ ದ್ವಿಜಮ್ ।
ಆಹಾರಂ ಚಿಂತಯಾಮಾಸ ಕಥಂ ತುಷ್ಟೋ ಭವೇದಿತಿ ॥೨೦॥

ಉಂಛವೃತ್ತಿಯ ಬ್ರಾಹ್ಮಣನು ಆಗಮಿಸಿರುವ ಅತಿಥಿಯು ಹಸಿವೆಯಿಂದ ಮತ್ತೂ ಬಳಲುತ್ತಿರುವುದನ್ನು ಕಂಡು ಅವನನ್ನು ಆಹಾರದಿಂದ ತೃಪ್ತಿಪಡಿಸುವುದು ಹೇಗೆ ಎಂದು ಚಿಂತಿಸತೊಡಗಿದನು.

ತಸ್ಯ ಭಾರ್ಯಾऽಬ್ರವೀದ್ ರಾಜನ್ ಮದ್ಭಾಗೋ ದೀಯತಾಮಯಮ್ ।
ಗಚ್ಛತ್ವೇಷ ಯಥಾಕಾಮಂ ಸಂತುಷ್ಟೋ ದ್ವಿಜಸತ್ತಮಃ ॥೨೧॥

ಅದೇ ಸಮಯದಲ್ಲಿ ಉಂಛವೃತ್ತಿ ಬ್ರಾಹ್ಮಣನ ಪತ್ನಿಯು ಗಂಡನನ್ನು ಕುರಿತು ಹೇಳಿದಳು- 'ಪತಿದೇವನೇ, ನನ್ನ ಭಾಗದ ಹಿಟ್ಟನ್ನೂ ಈ ಅತಿಥಿಗೆ ನೀಡು. ಇದನ್ನು ಸ್ವೀಕರಿಸಿದ ಬಳಿಕವಾದರೂ ಅತಿಥಿಯು ಸಂತುಷ್ಟನಾಗಿ ಅವನ ಪ್ರಯಾಣವನ್ನು ಮುಂದುವರಿಸಲಿ' ಎಂದು ಹೇಳಿದನು.

ಇತಿ ಬ್ರುವಂತೀಂ ತಾಂ ಸಾಧ್ವೀಂ ಧರ್ಮಾತ್ಮಾ ಸ ದ್ವಿಜರ್ಷಭಃ ।
ಕ್ಷುಧಾಪರಿಗತಾಂ ಜ್ಞಾತ್ವಾ ಸಕ್ತೂಂಸ್ತಾನ್ ನಾಭ್ಯನಂದತ ॥೨೨॥

ಸಾಧ್ವಿ ಪತಿವ್ರತೆಯು ಹೀಗೆ ಹೇಳುತ್ತಿರಲು ಧರ್ಮಾತ್ಮನಾದ ಉಂಛವೃತ್ತಿ ಬ್ರಾಹ್ಮಣನು ತನ್ನ ಪತ್ನಿಯು ಹಸಿವೆಯಿಂದ ಕಂಗಾಲಾಗಿದ್ದಾಳೆಂದು ತಿಳಿದು ಅವಳ ಭಾಗವನ್ನು ಸ್ವೀಕರಿಸಲು ಇಷ್ಟಪಡಲಿಲ್ಲ.

ಜಾನನ್ ವೃದ್ಧಾಂ ಕ್ಷುಧಾರ್ತಾಂ ಚ ಶ್ರಾಂತಾಂ ಗ್ಲಾನಾಂ ತಪಸ್ವಿನೀಮ್ ।
ತ್ವಗಸ್ಥಿಭೂತಾಂ ಧ್ಯಾಯಂತೀಂ ತತೋ ಭಾರ್ಯಾಮುವಾಚ ತಾಮ್ ॥

ವಿದ್ವಾಂಸನಾದ ವಿಪ್ರಶ್ರೇಷ್ಠನು ತನ್ನ ಮನಸ್ಸಿನಲ್ಲಿಯೇ ಅವಳು ಹಸಿವೆಯಿಂದ ಪೀಡಿತಳು ಎಂದು ಚೆನ್ನಾಗಿ ಅರ್ಥೈಸಿಕೊಂಡು, ಅತ್ಯಂತ ಬಳಲಿರುವ, ಬಾಡಿದ ಮುಖವುಳ್ಳ, ಚರ್ಮ-ಮೂಳೆಗಳನ್ನು ಮಾತ್ರ ಹೊಂದಿರುವ ಹೀಗಿದ್ದರೂ ಭಗವಂತನ ಧ್ಯಾನದಲ್ಲಿ ರತಳಾಗಿರುವ ಪತ್ನಿಯನ್ನುದ್ದೇಶಿಸಿ ಹೇಳಿದನು.

ಬ್ರಾಹ್ಮಣಃ

ಅಪಿ ಕೀಟಪತಂಗಾನಾಂ ಮೃಗಾಣಾಂ ಚೈವ ಶೋಭನೇ ।
ಸ್ತ್ರಿಯೋ ರಕ್ಷ್ಯಾಶ್ಚ ಪೋಷ್ಯಾಶ್ಚ ನೈವಂ ತ್ವಂ ವಕ್ತುಮರ್ಹಸಿ ॥೨೪॥

ಬ್ರಾಹ್ಮಣ– ಕೀಟಗಳು, ಚಿಟ್ಟೆಗಳು, ಮೃಗಗಳೂ ಕೂಡ ಹೆಣ್ಣುಕೀಟ, ಹೆಣ್ಣು ಚಿಟ್ಟೆ, ಹೆಣ್ಣು ಮೃಗಗಳನ್ನು ಪೋಷಿಸುವುದು ಕರ್ತವ್ಯವಾಗಿದೆ. ಹೀಗಿರುವಾಗ ನಿನ್ನ ಪೋಷಣೆಗೆ ನಾನು ನೀಡಿರುವುದು ಉಚಿತವಲ್ಲವೆಂದು ಭಾವಿಸುತ್ತೇನೆ.

ಅನುಕಂಪ್ಯೋ ನರಃ ಪತ್ನ್ಯಾ ಪುಷ್ಟೋ ರಕ್ಷಿತ ಏವ ಚ ।
ಪ್ರಪತೇನ್ನಿರಯಂ ದೀಪ್ತಂ ನ ಚ ಲೋಕಾನವಾಪ್ನುಯಾತ್ ॥೨೫॥

ಯಾವ ಪುರುಷನು ಹೆಂಡತಿಯ ಕೃಪೆಗೆ ಪಾತ್ರನಾಗಿ ಅವನಿಂದಲೇ ಜೀವನವನ್ನು ನಿರ್ವಹಿಸುತ್ತಾನೋ, ಅವಳಿಂದ ರಕ್ಷಣೆಯನ್ನು ಹೊಂದುತ್ತಾನೋ ಅಂತಹ ಪುರುಷನು ಉಜ್ವಲವಾದ ಕೀರ್ತಿಯಿಂದ ಭ್ರಷ್ಟನಾಗುತ್ತಾನೆ. ಉತ್ತಮ ಲೋಕಗಳು ಅವನ ಪಾಲಿಗೆ ದೊರಕವು.

ಇತ್ಯುಕ್ತಃ ಸ ತಥಾ ಪ್ರಾಹ ಧರ್ಮಾರ್ಥೌ ತೌ ಸಮೌ ಮುನೇ ॥೨೬॥

ಸಕ್ತುಪ್ರಸ್ಥ ಚತುರ್ಭಾಗಂ ಗೃಹಾಣ ತ್ವಂ ಪ್ರಸೀದ ಮೇ ॥೨೭॥

ಈ ರೀತಿಯಾಗಿ ಬ್ರಾಹ್ಮಣನು ಹೇಳಲು ದ್ವಿಜಪತ್ನಿಯು ಹೇಳುತ್ತಾಳೆ- ಬ್ರಾಹ್ಮಣನೇ, ಧರ್ಮಾರ್ಥಗಳು ನಮ್ಮಿಬ್ಬರಿಗೂ ಸಮಾನವಲ್ಲವೆ? ಆದ್ದರಿಂದ ನಾಲ್ಕು ಭಾಗದಲ್ಲಿ ಒಂದು ಭಾಗದ ಹಿಟ್ಟನ್ನು ನನ್ನಿಂದ ಸ್ವೀಕರಿಸು. ನೀನು ಈ ಆತಿಥ್ಯದಿಂದ ಸಂತುಷ್ಟನಾಗು.

ಸತ್ಯಂ ರತಿಶ್ಚ ಧರ್ಮಶ್ಚ ಸ್ವರ್ಗಶ್ಚ ಗುಣನಿರ್ಜಿತಃ ।
ಸ್ತ್ರೀಣಾಂ ಪತಿಸಮಾಧಾನಂ ತಪಶ್ಚೈದಂ ದ್ವಿಜೋತ್ತಮ ॥೨೮॥

ದ್ವಿಜಶ್ರೇಷ್ಠನೇ, ಸ್ತ್ರೀಯರು ಹೇಳುವ ಸತ್ಯಮಾತುಗಳು, ರತಿ, ಧರ್ಮ, ಸ್ವರ್ಗ, ತನ್ನ ಗುಣದಿಂದ ಜಯಿಸಲ್ಪಟ್ಟ ಎಲ್ಲ ಸುಖಗಳು ಗಂಡನ ಮನಸ್ಸಿಗೆ ಸುಖವನ್ನು ನೀಡುವಂತೆ ಇರಬೇಕು. ಆಚರಿಸುವ ತಪಸ್ಸು ಗಂಡನಿಗೆ ಸಂತೋಷವಾಗುವಂತೆ ಇರಬೇಕು.

ಭ್ರಾತುರ್ಮಾತುಃ ಪಿತುರ್ಬೀಜಂ ದೈವತಂ ಪರಮಂ ಪತಿಃ ।
ಭರ್ತುಃ ಪ್ರಸಾದಾತ್ ಸ್ತ್ರೀಣಾಂ ವೈ ರತಿಪುತ್ರಫಲಂ ತಥಾ ॥೨೯॥

ದ್ವಿಜಶ್ರೇಷ್ಠನೇ, ತಾಯಿಯ ರಜಸ್ಸು, ತಂದೆಯ ರೇತಸ್ಸು ಇವೆರಡರ ಸಮಾಗಮದಿಂದ ವಂಶದ ಅಭಿವೃದ್ಧಿಯು ಉಂಟಾಗುತ್ತದೆ. ಪತಿಯೇ ಸ್ತ್ರೀಗೆ ಶ್ರೇಷ್ಠನಾದ ದೇವತೆ. ಬೀಜಸ್ಥಾನೀಯನಾಗಿ ಈರ್ವರಲ್ಲಿ ಪುರುಷನೇ ಇದ್ದಾನೆ. ಪತಿಯ ಪ್ರಸನ್ನತೆಯಿಂದ ಸ್ತ್ರೀಯರಿಗೆ ರತಿಸುಖವೂ, ಪುತ್ರನೆಂಬ ಫಲವು ಪ್ರಾಪ್ತವಾಗುತ್ತದೆ.

ಪಾಲನಾದ್ಧಿ ಪತಿಸ್ತ್ವಂ ಮೇ ಭರ್ತಾऽಸಿ ಭರಣಾನ್ವಿತಃ ।
ಪುತ್ರಪ್ರದಾನಾದ್ ವರದಃ ತಸ್ಮಾತ್ ಸಕ್ತೂನ್ ಗೃಹಾಣ ಮೇ ॥೩೦॥

ನನ್ನನ್ನು ಪಾಲಿಸಿರುವುದರಿಂದಲೇ ಪತಿ ಎಂಬ ಹೆಸರನ್ನು ಹೊಂದಿರುವಿ. ಭರಣ ಮಾಡಿರುವುದರಿಂದ ಭರ್ತೃ ಎನಿಸಿರುವಿ. ಸಂತಾನವನ್ನು ದಾನ ಮಾಡಿರುವುದರಿಂದ ವರಪ್ರದನೂ ಆಗಿರುವಿ. ಆದ್ದರಿಂದ ನನ್ನಲ್ಲಿರುವ ಹಿಟ್ಟನ್ನು ಸ್ವೀಕರಿಸಿ ಅತಿಥಿಗೆ ನೀಡು.

ಜರಾಪರಿಗತೋ ವೃದ್ಧಃ ಕ್ಷುಧಾರ್ತೋ ದುಬರ್ಲೋಽದೃಢಃ ।
ಉಪವಾಸಪರಿಶ್ರಾಂತೋ ಯದಾ ತ್ವಮಪಿ ಕರ್ಶಿತಃ ॥೩೧॥

ನಿನ್ನ ದೇಹವು ಮುಪ್ಪಿನಿಂದ ಶಿಥಿಲವಾಗಿದೆ. ವೃದ್ಧನಾಗಿರುವ ನೀನು ಹಸಿವೆಯಿಂದ ಬಳಲುತ್ತಿರುವಿ. ಅತಿದುರ್ಬಲನಾಗಿರುವಿ. ಉಪವಾಸ ಮಾಡಿ ಶ್ರಾಂತನಾಗಿರುವಿ. ಕ್ಷೀಣಕಾಯನಾಗಿರುವಿ. ಹೀಗಿರಲು ನನ್ನ ವಿಷಯದಲ್ಲಿ ಮಾತ್ರ ದುಃಖಿಸುವುದೇನಿದೆ?

ವೈಶಂಪಾಯನಃ

ಇತ್ಯುಕ್ತಃ ಸ ತಯಾ ಸಕ್ತೂನ್ ಪ್ರಗೃಹ್ಯೇದಂ ವಚೋಽಬ್ರವೀತ್ ॥೩೨॥

ವೈಶಂಪಾಯನ– ಪತ್ನಿಯು ಹೀಗೆ ಹೇಳಲು ಉಂಛವೃತ್ತಿಯ ಬ್ರಾಹ್ಮಣನು ಅವಳ ಮಾತನ್ನು ಒಪ್ಪಿ ಅವಳಿಂದ ಹಿಟ್ಟನ್ನು ಸ್ವೀಕರಿಸಿ ಅತಿಥಿಯನ್ನುದ್ದೇಶಿಸಿ ಹೇಳುತ್ತಾನೆ.

ಭರ್ತಾ

ದ್ವಿಜ ಸಕ್ತೂನಿಮಾನ್ ಭೂಯಃ ಪ್ರತಿಗೃಹ್ಣೀಷ್ವ ಸತ್ತಮ ॥೩೩॥

ಬ್ರಾಹ್ಮಣ– ಬ್ರಾಹ್ಮಣಶ್ರೇಷ್ಠರೇ, ಈ ಹಿಟ್ಟನ್ನು ನಿಮ್ಮ ಭೋಜನಕ್ಕಾಗಿ ಸ್ವೀಕರಿಸಿ.

ವೈಶಂಪಾಯನಃ

ಸ ತಾನ್ ಪ್ರಗೃಹ್ಯ ಭುಕ್ತ್ವಾ ಚ ನ ತುಷ್ಟಿಮಗಮನ್ಮುನಿಃ ।
ತಮುಂಛವೃತ್ತಿರಾಲಕ್ಷ್ಯ ತತಶ್ಚಿಂತಾಪರೋಽಭವತ್ ॥೩೪॥

ವೈಶಂಪಾಯನ– ಅತಿಥಿಯು ಆ ಹಿಟ್ಟನ್ನು ಸ್ವೀಕರಿಸಿ ಭಕ್ಷಿಸಿದನು. ಆದರೆ ಅದರಿಂದಲೂ ಅವನು ತೃಪ್ತಿಯನ್ನು ಹೊಂದಲಿಲ್ಲ. ಉಂಛವೃತ್ತಿಯ ಬ್ರಾಹ್ಮಣನು ಅತೃಪ್ತನಾದ ಅತಿಥಿಯನ್ನು ಕಂಡು ಪುನಃ ಚಿಂತಾಕ್ರಾಂತನಾದನು.

ಪುತ್ರಃ

ಸಕ್ತೂನಿಮಾನ್ ಪ್ರಗೃಹ್ಯ ತ್ವಂ ದೇಹಿ ವಿಪ್ರಾಯ ಸತ್ತಮ ।
ಇತ್ಯೇವ ಸುಕೃತಂ ಮನ್ಯೇ ತಸ್ಮಾದೇತತ್ ಕರೋಮ್ಯಹಮ್ ॥೩೫॥

ಪುತ್ರ– ತಂದೆಯೇ, ನನ್ನ ಬಳಿ ಇರುವ ಹಿಟ್ಟನ್ನು ಸ್ವೀಕರಿಸಿ ಅತಿಥಿಯನ್ನು ತೃಪ್ತಿಪಡಿಸು. ಹೀಗೆ ಮಾಡುವುದೇ ಪುಣ್ಯಕರ್ಮವೆಂದು ಭಾವಿಸುತ್ತೇನೆ. ನಾನು ಹಿಟ್ಟನ್ನು ಅತಿಥಿಗೋಸ್ಕರ ನೀಡುತ್ತಿದ್ದೇನೆ.

ಭವಾನ್ ಹಿ ಪರಿಪಾಲ್ಯೋ ಮೇ ಸರ್ವಯತ್ನೈರ್ದ್ವಿಜೋತ್ತಮ ।
ಸಾಧೂನಾಂ ಕಾಂಕ್ಷಿತಂ ಹ್ಯೇತತ್ ಪಿತುರ್ವೃದ್ಧಸ್ಯ ಪೋಷಣಮ್ ॥೩೬॥

ನಾನು ನಿಮ್ಮನ್ನು ಪ್ರಯತ್ನಪೂರ್ವಕವಾಗಿ ನಿರಂತರ ರಕ್ಷಿಸಬೇಕು. ವೃದ್ಧರಾದ ತಂದೆ-ತಾಯಂದಿರನ್ನು ರಕ್ಷಿಸಬೇಕೆಂಬುದು ಸಜ್ಜನರ ನಿಯಮವಾಗಿದೆ.

ಪುತ್ರಾಧೋ ವಿಹಿತೋ ಹ್ಯೇಷ ಸ್ಥಾವಿರ್ಯೇ ಪರಿಪಾಲನಮ್ ।
ಶ್ರುತಿರೇಷಾ ಹಿ ವಿಪ್ರರ್ಷೇ ತ್ರಿಷು ಲೋಕೇಷು ಶಾಶ್ವತೀ ॥೩೭॥

ವೃದ್ಧರಾದ ತಂದೆಯ ಪರಿಪಾಲನೆ ಪುತ್ರನ ವಿಹಿತಧರ್ಮವೆನಿಸಿದೆ. ಬ್ರಹ್ಮರ್ಷಿಯೇ, ಮೂರುಲೋಕದಲ್ಲಿಯೂ ಇದಕ್ಕೆ ಪೂರಕವಾದ ಸನಾತನ ಶ್ರುತಿಯು ಪ್ರಸಿದ್ಧವಾಗಿದೆ.

ಪ್ರಾಣಧಾರಣಮಾತ್ರೇಣ ಶಕ್ಯಂ ಕರ್ತುಂ ತಪಸ್ತ್ವಯಾ ।
ಪ್ರಾಣಾ ಹಿ ಪರಮೋ ಧರ್ಮಃ ಸ್ಥಿತಾ ದೇಹೇಷು ದೇಹಿನಾಮ್ ॥೩೮॥

ಪ್ರಾಣಗಳನ್ನು ಧರಿಸಿದ ಬಳಿಕವೇ ನಿನ್ನಿಂದ ತಪಸ್ಸು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ದೇಹಧಾರಿಗಳಿಗೆ ಶರೀರಗತ ಪ್ರಾಣರಕ್ಷಣೆಯು ಪರಮಧರ್ಮ ಎನಿಸಿದೆ.

ಪಿತಾ

ಅಪಿ ವರ್ಷಸಹಸ್ರಂ ಬಾಲ ಏವ ಮತೋ ಮಮ ।
ಉತ್ಪಾದ್ಯ ಪುತ್ರಂ ಹಿ ಪಿತಾ ಕೃತಕೃತ್ಯೋ ಭವತ್ಯುತ ॥೩೯॥

ತಂದೆ– ಮಗುವೇ, ನಿನಗೆ ಸಾವಿರವರ್ಷಗಳಾದರೂ ನನ್ನ ದೃಷ್ಟಿಯಿಂದ ನೀನು ನನ್ನ ಮಗನೇ ಆಗಿರುತ್ತಿ. ಮಗನನ್ನು ಪಡೆದ ಬಳಿಕ ತಂದೆಯು ಕೃತಕೃತ್ಯನೆಂದು ತನ್ನನ್ನು ಭಾವಿಸುತ್ತಾನೆ.

ಬಾಲಾನಾಂ ಕ್ಷುದ್ಬಲವತೀ ಜಾನಾಮ್ಯೇತದಹಂ ತವ ।
ವೃದ್ಧೋಽಹಂ ಧಾರಯಿಷ್ಯಾಮಿ ತ್ವಂ ಬಲೀ ಭವ ಪುತ್ರಕ ॥೪೦॥

ನನ್ನನ್ನು ಪಾಲಿಸಿರುವುದರಿಂದಲೇ ಪತಿ ಎಂಬ ಹೆಸರನ್ನು ಹೊಂದಿರುವಿ. ಭರಣ ಮಾಡಿರುವುದರಿಂದ ಭರ್ತೃ ಎನಿಸಿರುವಿ. ಸಂತಾನವನ್ನು ದಾನ ಮಾಡಿರುವುದರಿಂದ ವರಪ್ರದನೂ ಆಗಿರುವಿ. ಆದ್ದರಿಂದ ನನ್ನಲ್ಲಿರುವ ಹಿಟ್ಟನ್ನು ಸ್ವೀಕರಿಸಿ ಅತಿಥಿಗೆ ನೀಡು.

ಜರಾಪರಿಗತೋ ವೃದ್ಧಃ ಕ್ಷುಧಾರ್ತೋ ದುಬಲೋ೯ऽದೃಢಃ ।
ಉಪವಾಸಪರಿಶ್ರಾಂತೋ ಯದಾ ತ್ವಮಪಿ ಕರ್ಶಿತಃ ॥೩೧॥

ನಿನ್ನ ದೇಹವು ಮುಪ್ಪಿನಿಂದ ಶಿಥಿಲವಾಗಿದೆ. ವೃದ್ಧನಾಗಿರುವ ನೀನು ಹಸಿವೆಯಿಂದ ಬಳಲುತ್ತಿರುವಿ. ಅತಿದುರ್ಬಲನಾಗಿರುವಿ. ಉಪವಾಸ ಮಾಡಿ ಶ್ರಾಂತನಾಗಿರುವಿ. ಕ್ಷೀಣಕಾಯನಾಗಿರುವಿ. ಹೀಗಿರಲು ನನ್ನ ವಿಷಯದಲ್ಲಿ ಮಾತ್ರ ದುಃಖಿಸುವುದೇನಿದೆ?

ವೈಶಂಪಾಯನಃ

ಇತ್ಯುಕ್ತಃ ಸ ತಯಾ ಸಕ್ತೂನ್ ಪ್ರಗೃಹ್ಯೇದಂ ವಚೋऽಬ್ರವೀತ್ ॥೩೨॥

ವೈಶಂಪಾಯನ– ಪತ್ನಿಯು ಹೀಗೆ ಹೇಳಲು ಉಂಛವೃತ್ತಿಯ ಬ್ರಾಹ್ಮಣನು ಅವಳ ಮಾತನ್ನು ಒಪ್ಪಿ ಅವಳಿಂದ ಹಿಟ್ಟನ್ನು ಸ್ವೀಕರಿಸಿ ಅತಿಥಿಯನ್ನುದ್ದೇಶಿಸಿ ಹೇಳುತ್ತಾನೆ.

ಭರ್ತಾ

ದ್ವಿಜ ಸಕ್ತೂನಿಮಾನ್ ಭೂಯಃ ಪ್ರತಿಗೃಹ್ಣೀಷ್ವ ಸತ್ತಮ ॥೩೩॥

ಬ್ರಾಹ್ಮಣ– ಬ್ರಾಹ್ಮಣಶ್ರೇಷ್ಠರೇ, ಈ ಹಿಟ್ಟನ್ನು ನಿಮ್ಮ ಭೋಜನಕ್ಕಾಗಿ ಸ್ವೀಕರಿಸಿ.

ವೈಶಂಪಾಯನಃ

ಸ ತಾನ್ ಪ್ರಗೃಹ್ಯ ಭುಕ್ತ್ವಾ ಚ ನ ತುಷ್ಟಿಮಗಮನ್ಮುನಿಃ ।
ತಮುಂಛವೃತ್ತಿರಾಲಕ್ಷ್ಯ ತತಶ್ಚಿಂತಾಪರೋऽಭವತ್ ॥೩೪॥

ವೈಶಂಪಾಯನ– ಅತಿಥಿಯು ಆ ಹಿಟ್ಟನ್ನು ಸ್ವೀಕರಿಸಿ ಭಕ್ಷಿಸಿದನು. ಆದರೆ ಅದರಿಂದಲೂ ಅವನು ತೃಪ್ತಿಯನ್ನು ಹೊಂದಲಿಲ್ಲ. ಉಂಛವೃತ್ತಿಯ ಬ್ರಾಹ್ಮಣನು ಅತೃಪ್ತನಾದ ಅತಿಥಿಯನ್ನು ಕಂಡು ಪುನಃ ಚಿಂತಾಕ್ರಾಂತನಾದನು.

ಪುತ್ರಃ

ಸಕ್ತೂನಿಮಾನ್ ಪ್ರಗೃಹ್ಯ ತ್ವಂ ದೇಹಿ ವಿಪ್ರಾಯ ಸತ್ತಮ ।
ಇತ್ಯೇವ ಸುಕೃತಂ ಮನ್ಯೇ ತಸ್ಮಾದೇತತ್ ಕರೋಮ್ಯಹಮ್ ॥೩೫॥

ಪುತ್ರ– ತಂದೆಯೇ, ನನ್ನ ಬಳಿ ಇರುವ ಹಿಟ್ಟನ್ನು ಸ್ವೀಕರಿಸಿ ಅತಿಥಿಯನ್ನು ತೃಪ್ತಿಪಡಿಸು. ಹೀಗೆ ಮಾಡುವುದೇ ಪುಣ್ಯಕರ್ಮವೆಂದು ಭಾವಿಸುತ್ತೇನೆ. ನಾನು ಹಿಟ್ಟನ್ನು ಅತಿಥಿಗೋಸ್ಕರ ನೀಡುತ್ತಿದ್ದೇನೆ.

ಭವಾನ್ ಹಿ ಪರಿಪಾಲ್ಯೋ ಮೇ ಸರ್ವಯತ್ನೈರ್ದ್ವಿಜೋತ್ತಮ ।
ಸಾಧೂನಾಂ ಕಾಂಕ್ಷಿತಂ ಹ್ಯೇತತ್ ಪಿತುರ್ವೃದ್ಧಸ್ಯ ಪೋಷಣಮ್ ॥೩೬॥

ನಾನು ನಿಮ್ಮನ್ನು ಪ್ರಯತ್ನಪೂರ್ವಕವಾಗಿ ನಿರಂತರ ರಕ್ಷಿಸಬೇಕು. ವೃದ್ಧರಾದ ತಂದೆ-ತಾಯಂದಿರನ್ನು ರಕ್ಷಿಸಬೇಕೆಂಬುದು ಸಜ್ಜನರ ನಿಯಮವಾಗಿದೆ.

ಪುತ್ರಾರ್ಥೋ ವಿಹಿತೋ ಹ್ಯೇಷ ಸ್ಥವಿರೋ ಪರಿಪಾಲನಮ್ ।
ಶ್ರುತಿರೇಷಾ ಹಿ ವಿಪ್ರರ್ಷೇ ತ್ರಿಷು ಲೋಕೇಷು ಶಾಶ್ವತೀ ॥೩೭॥

ವೃದ್ಧರಾದ ತಂದೆಯ ಪರಿಪಾಲನೆ ಪುತ್ರನ ವಿಹಿತಧರ್ಮವೆನಿಸಿದೆ. ಬ್ರಹ್ಮರ್ಷಿಯೇ, ಮೂರುಲೋಕದಲ್ಲಿಯೂ ಇದಕ್ಕೆ ಪೂರಕವಾದ ಸನಾತನ ಶ್ರುತಿಯು ಪ್ರಸಿದ್ಧವಾಗಿದೆ.

ಪ್ರಾಣಧಾರಣಮಾತ್ರೇಣ ಶಕ್ಯಂ ಕರ್ತುಂ ತಪಸ್ತ್ವಯಾ ।
ಪ್ರಾಣಾ ಹಿ ಪರಮೋ ಧರ್ಮಃ ಸ್ಥಿತಾ ದೇಹೇಷು ದೇಹಿನಾಮ್ ॥೩೮॥

ಪ್ರಾಣಗಳನ್ನು ಧರಿಸಿದ ಬಳಿಕವೇ ನಿನ್ನಿಂದ ತಪಸ್ಸು ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ದೇಹಧಾರಿಗಳಿಗೆ ಶರೀರಗತ ಪ್ರಾಣರಕ್ಷಣೆಯು ಪರಮಧರ್ಮ ಎನಿಸಿದೆ.

ಪಿತಾ

ಅಪಿ ವರ್ಷಸಹಸ್ರಂ ಬಾಲ ಏವ ಮತೋ ಮಮ ।
ಉತ್ಪಾದ್ಯ ಪುತ್ರಂ ಹಿ ಪಿತಾ ಕೃತಕೃತ್ಯೋ ಭವತ್ಯುತ ॥೩೯॥

ತಂದೆ– ಮಗುವೇ, ನಿನಗೆ ಸಾವಿರವರ್ಷಗಳಾದರೂ ನನ್ನ ದೃಷ್ಟಿಯಿಂದ ನೀನು ನನ್ನ ಮಗನೇ ಆಗಿರುತ್ತಿ. ಮಗನನ್ನು ಪಡೆದ ಬಳಿಕ ತಂದೆಯು ಕೃತಕೃತ್ಯನೆಂದು ತನ್ನನ್ನು ಭಾವಿಸುತ್ತಾನೆ.

ಬಾಲಾನಾಂ ಕ್ಷುದ್ಬಲವತೀ ಜಾನಾಮ್ಯೇತದಹಂ ತವ ।
ವೃದ್ಧೋಽಹಂ ಧಾರಯಿಷ್ಯಾಮಿ ತ್ವಂ ಬಲೀ ಭವ ಪುತ್ರಕ ॥೪೦॥

ಮಗುವೇ, ಬಾಲಕರಾದ ನಿಮಗೆ ನಮಗಿಂತ ಅಧಿಕವಾದ ಹಸಿವು ಉಂಟಾಗುತ್ತದೆ ಎಂದು ತಿಳಿದಿರುತ್ತೇನೆ. ಮಂದ ಜಠರಾಗ್ನಿವುಳ್ಳವನಾದ ವೃದ್ಧನಾದ ನಾನು ಹಸಿವನ್ನು ಸಹಿಸಿಕೊಂಡು ಪ್ರಾಣಧಾರಣೆ ಮಾಡಿಕೊಳ್ಳಬಲ್ಲೆ. ಆದ್ದರಿಂದ ನಿನ್ನ ಭಾಗಕ್ಕೆ ಬಂದಿರುವ ಹಿಟ್ಟನ್ನು ತಿಂದು ಬಲಿಷ್ಠನಾಗು.

ಜೀರ್ಣೇನ ವಯಸಾ ಪುತ್ರ ನ ಮಾಂ ಕ್ಷುದ್ಬಾಧತೇಽಪಿ ಚ ।
ದೀರ್ಘಕಾಲಂ ತಪಸ್ತಪ್ತಂ ನ ಮೇ ಮರಣತೋ ಭಯಮ್ ॥೪೧॥

ಮಗನೇ, ವೃದ್ಧನಾಗಿ ಜೀರ್ಣಶರೀರವನ್ನು ಹೊಂದಿರುವ ನನ್ನನ್ನು ಹಸಿವು ಅತಿಯಾಗಿ ಸಂಕಟಪಡಿಸುವುದಿಲ್ಲ. ಇಷ್ಟಾಗಿ ನಾನು ತಪೋನಿರತನಾಗಿ ಜೀವನ ಕಳೆದಿದ್ದೇನೆ. ಆದ್ದರಿಂದ ನನಗೆ ಮರಣದ ಭೀತಿಯೂ ಇಲ್ಲ.

ಪುತ್ರಃ

ಅಪತ್ಯಮಸ್ಮಿ ತೇ ಪುತ್ರಃ ತ್ರಾಣಾತ್ ಪುತ್ರೋ ಹಿ ವಿಶ್ರುತಃ ।
ಆತ್ಮಾ ಪುತ್ರಃ ಸ್ಮೃತಸ್ತಸ್ಮಾತ್ ತ್ರಾಹ್ಯಾತ್ಮಾನಮಿಹಾತ್ಮನಾ ॥೪೨॥

ಪುತ್ರ– ತಂದೆಯೇ, ನಾನು ನಿನ್ನ ಮಗನಾಗಿದ್ದೇನೆ. ತಂದೆಯನ್ನು ಸರಿಯಾಗಿ ರಕ್ಷಣೆ ಮಾಡುವ ಕಾರಣದಿಂದಲೇ ಅವನಲ್ಲಿ ಪುತ್ರತ್ವವು ಉಳಿಯುತ್ತದೆ. ಮಗನೇ ತಂದೆಯ ಆತ್ಮವೆಂದು ಶ್ರುತಿಯು ಹೇಳಿದೆ. ಆದ್ದರಿಂದ ಆತ್ಮಭೂತನಾದ ಮಗನ ಮೂಲಕವಾಗಿ ನಿನ್ನ ರಕ್ಷಣೆಯು ನನ್ನ ಕರ್ತವ್ಯ ಎಂದು ಭಾವಿಸುತ್ತೇನೆ.

ಪಿತಾ

ರೂಪೇಣ ಸದೃಶಸ್ತ್ವಂ ಮೇ ಶೀಲೇನ ಚ ಬಲೇನ ಚ ।
ಪರೀಕ್ಷಿತಸ್ಯ ಬಹುಧಾ ಸಕೃನಾದದ್ಮಿ ತೇ ಸುತ ॥೪೩॥

ತಂದೆ– ಮಗುವೇ, ನೀನು ಸಚ್ಚಾರಿತ್ರ್ಯ, ಇಂದ್ರಿಯನಿಗ್ರಹ, ಬಲ ಇವುಗಳಿಂದ ನನಗೆ ಸದೃಶನೇ ಆಗಿರುವಿ. ಈ ಗುಣಗಳು ನಿನ್ನಲ್ಲಿ ಇವೆಯೆಂಬುದನ್ನು ಹತ್ತಾರು ಬಾರಿ ಪರೀಕ್ಷಿಸಿಕೊಂಡು ನಿಶ್ಚಯಿಸಿಕೊಂಡಿದ್ದೇನೆ. ಆದ್ದರಿಂದ ನಿನ್ನ ಆಶಯದಂತೆ ನಿನ್ನ ಬಳಿ ಇರುವ ಹಿಟ್ಟಿನ ಉಂಡೆಗಳನ್ನು ಅತಿಥಿಗೋಸ್ಕರ ಸ್ವೀಕರಿಸುತ್ತೇನೆ.

ವೈಶಂಪಾಯನಃ

ಇತ್ಯುಕ್ತ್ವಾ ऽऽದಾಯ ತಾನ್ ಸಕ್ತೂನ್ ಪ್ರೀತಾತ್ಮಾ ದ್ವಿಜಸತ್ತಮಃ ।
ಪ್ರಹಸನ್ನಿವ ವಿಪ್ರಾಯ ಸ ತಸ್ಮೈ ಪ್ರದದೌ ತದಾ ॥೪೪॥

ವೈಶಂಪಾಯನ– ಬ್ರಾಹ್ಮಣಶ್ರೇಷ್ಠರೇ, ತಂದೆಯು ಹೀಗೆ ಹೇಳಿ ಸಂತುಷ್ಟನಾದ ಮಗನ ಮೂಲಕ ಅವನ ಪಾಲಿನ ಹಿಟ್ಟಿನ ಉಂಡೆಯನ್ನು ಸ್ವೀಕರಿಸಿ, ಸಂತೋಷದಿಂದಲೇ ಅತಿಥಿಗೆ ನೀಡಿದನು.

ಭುಕ್ತ್ವಾ ತಾನಪಿ ಸಕ್ತೂನ್ ಸ ನೈವ ತುಷ್ಟೋ ಬಭೂವ ಹ ।
ಉಂಛವೃತ್ತಿಸ್ತು ಸವ್ರೀಡೋ ಬಭೂವ ದ್ವಿಜಸತ್ತಮಃ ॥೪೫॥

ಆ ಹಿಟ್ಟಿನ ಭಾಗಗಳನ್ನು ಅತಿಥಿಯು ಸ್ವೀಕರಿಸಿದರೂ ಸಂತುಷ್ಟನಾಗಲಿಲ್ಲ. ಉಂಛವೃತ್ತಿಯ ಬ್ರಾಹ್ಮಣನು ಅತಿಥಿಯ ಅವಸ್ಥೆಯಿಂದ ನಾಚಿಕೆಯನ್ನು ಹೊಂದಿದನು.

ತದಾ ವಧೂಃ ಸ್ಥಿತಾ ಸಾಧ್ವಿ ಬ್ರಾಹ್ಮಣಪ್ರಿಯಕಾಮ್ಯಯಾ ।
ಸಕ್ತೂನಾದಾಯ ಸಂಹೃಷ್ಟಾ ಗುರುಂ ತಂ ವಾಕ್ಯಮಬ್ರವೀತ್ ॥೪೬॥

ಬ್ರಾಹ್ಮಣೋತ್ತಮರೇ, ಹಿಂದೆಯೇ ಹೇಳಿದಂತೆ ಉಂಛಬ್ರಾಹ್ಮಣಗೆ ಸದ್ಗುಣಶೀಲ ಸಂಪನ್ನಳಾದ ಸೊಸೆಯೊಬ್ಬಳು ಇದ್ದಳು. ಬ್ರಾಹ್ಮಣನಿಗೆ ಹಿತವನ್ನುಂಟು ಮಾಡಬೇಕೆಂಬ ಆಸೆಯಿಂದ ತನ್ನ ಪಾಲಿಗೆ ಬಂದಿರುವ ಹಿಟ್ಟಿನ ಉಂಡೆಯನ್ನು ಮಾವನ ಮುಂದಿಟ್ಟು ಹೀಗೆ ಹೇಳಿದಳು.

ವಧೂಃ

ಸಂತಾನಾತ್ ತವ ಸಂತಾನಂ ಮಮಾಪಿ ಪ್ರಭವಿಷ್ಯತಿ ।
ಸಕ್ತೂನಿಮಾನತಿಥಯೇ ಗೃಹೀತ್ವಾ ತ್ವಂ ಪ್ರಯಚ್ಛ ಮೇ ॥೪೭॥

ಸೊಸೆ– ಪೂಜ್ಯರೇ, ನಿಮ್ಮ ಸಂತಾನವೆನಿಸಿದ ಮಗನಿಂದಲೇ ನನಗೆ ಸಂತಾನ ಆಗುತ್ತದೆ. ನನ್ನ ವಿಷಯದಲ್ಲಿ ನೀವು ಪೂಜ್ಯರಾಗಿರುತ್ತೀರಿ. ಆದ್ದರಿಂದ ಈ ಹಿಟ್ಟಿನ ಉಂಡೆಗಳನ್ನು ಅತಿಥಿಗೆ ನೀವು ದಾನ ಮಾಡಿರಿ.

ತವ ಪ್ರಸವನಿರ್ವೃತ್ಯಾ ಮಮ ಲೋಕಾಃ ಕಿಲಾಕ್ಷಯಾಃ ।
ಪೌತ್ರೇಣ ತಾನವಾಪ್ನೋತಿ ಯತ್ರ ಗತ್ವಾ ನ ಶೋಚತಿ ॥೪೮॥

ನಿಮ್ಮ ಕುಲಕ್ಕೆ ಯೋಗ್ಯವಾದ ಸಂತಾನವನ್ನು ನೀಡಿದ ಬಳಿಕ ನನಗೆ ಅಕ್ಷಯವಾದ ಲೋಕಗಳು ಸಿದ್ಧವಾಗುತ್ತವೆ. ಅಂತಹ ಶುಭಲೋಕಗಳನ್ನು ಮೊಮ್ಮಗನ ಮೂಲಕ ಪಡೆದುಕೊಳ್ಳಬಹುದು. ಪುಣ್ಯಲೋಕಗಳಿಗೆ ಹೋದ ಬಳಿಕ ದುಃಖದ ಪ್ರಸಂಗವು ಒದಗುವುದಿಲ್ಲ.

ಧರ್ಮಂ ಯಾತಿ ತಥಾ ತ್ರೇತಾ ವಹ್ನಿತ್ರೇತಾ ತಥೈವ ಚ ।
ತಥೈವ ಪುತ್ರಪೌತ್ರಾಣಾಂ ಸ್ವರ್ಗೇ ತ್ರೇತಾಃ ಕಿಲಾಕ್ಷಯಾಃ ॥೪೯॥

ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿ ಎಂಬ ಮೂರು ಅಗ್ನಿಗಳಂತೆ ತಂದೆ, ತಾತ, ಮುತ್ತಾತಂದಿರು ಇರುತ್ತಾರೆ. ಪುತ್ರ-ಪೌತ್ರ-ಪ್ರಪೌತ್ರರ ಮೂಲಕ ಈ ಮೂವರು ಅಕ್ಷಯವಾದ ಸ್ವರ್ಗವನ್ನು ಹೊಂದುತ್ತಾರೆ.

ಪಿತೄಣಾಂ ತಾರಣಾತ್ ತಸ್ಮಾತ್ ಪುತ್ರ ಇತ್ಯನುಶುಶ್ರುಮಃ ।
ಪುತ್ರಪೌತ್ರೈಶ್ಚ ನಿಯತಃ ಸಾಧುಲೋಕಾನುಪಾಶ್ನುತೇ ॥೫೦॥

ಪುತ್ರನು ತಂದೆಯನ್ನು ಪಿತೃಋಣದಿಂದ ಮುಕ್ತನನ್ನಾಗಿಸುತ್ತಾನೆ ಎಂಬುದನ್ನು ನಾವು ಕೇಳಿದ್ದೇವೆ. ಪುತ್ರ-ಪೌತ್ರರ ಮೂಲಕ ನಿಶ್ಚಿತವಾದ ಲೋಕಗಳನ್ನು ಪಡೆದು ಸುಖವನ್ನು ಅನುಭವಿಸುತ್ತಾನೆ.

ಶ್ವಶುರಃ

ವಾತಾತಪವಿಶೀರ್ಣಾಂಗೀಂ ತ್ವಾಂ ವಿಶೀರ್ಣಾಂ ನಿರೀಕ್ಷ್ಯ ವೈ ।
ಕರ್ಶಿತಾಂ ಸುವ್ರತಾಚಾರೈಃ ಕ್ಷುಧಾವಿಹ್ವಲಚೇತಸಮ್ ॥೫೧॥

ಕಥಂ ಸಕ್ತೂನ್ ಗ್ರಹೀಷ್ಯಾಮಿ ಭೂತ್ವಾ ಧರ್ಮೋಪಘಾತಕಃ ।
ಕಲ್ಯಾಣವೃತ್ತೇ ಕಲ್ಯಾಣಿ ನೈವಂ ತ್ವಂ ವಕ್ತುಮರ್ಹಸಿ ॥೫೨॥

ಮಾವ– ಉತ್ತಮ ಚಾರಿತ್ರ್ಯಸಂಪನ್ನಳೇ, ನಿನ್ನ ಶರೀರವೆಲ್ಲವೂ ಗಾಳಿ, ಬಿಸಿಲುಗಳ ಹೊಡೆತಕ್ಕೆ ಸಿಲುಕಿ ಜರ್ಝರಿತವಾಗಿದೆ. ಕಾಂತಿಯಿಂದ ಹೀನಳಾಗಿರುವ, ಕೃಶಕಾಯಳಾಗಿರುವ, ಹಸಿವೆಯಿಂದ ದುಃಖಿತಳಾಗಿರುವ ನಿನ್ನನ್ನು ನೋಡಿಯೂ ಕರುಣೆಯಿಲ್ಲದೆ ನಿನ್ನ ಕೈಯಿಂದ ಆ ಹುರಿದ ಹಿಟ್ಟಿನ ಉಂಡೆಗಳನ್ನು ಹೇಗೆ ಸ್ವೀಕರಿಸಲಿ? ಮಂಗಳವಾದ ವ್ಯವಹಾರವುಳ್ಳ ಕಲ್ಯಾಣಿಯೇ, ಈ ಹಿಟ್ಟುಗಳನ್ನು ನೀನು ಕೊಡುತ್ತೇನೆಂದು ಹೇಳುವುದು ನನಗೆ ಉಚಿತವೆನಿಸುವುದಿಲ್ಲ.

ಷಷ್ಠೇ ಕಾಲೇ ವ್ರತವತೀಂ ಶೀಲಶೌಚತಪೋನ್ವಿತಾಮ್ ।
ಕೃಚ್ಛ್ರವೃತ್ತಿಂ ನಿರಾಹಾರಾಂ ದ್ರಕ್ಷ್ಯಾಮಿ ತ್ವಾಂ ಕಥಂ ನ್ವಹಮ್ ॥೫೩॥

ನೀನು ಪ್ರತಿದಿವಸವೂ ಶೌಚ, ಸದಾಚಾರ, ತಪಸ್ಸುಗಳಲ್ಲಿ ಆಸಕ್ತಳಾಗಿದ್ದು, ಆರನೆಯ ಕಾಲದಲ್ಲಿ ಊಟ ಮಾಡುವ ವ್ರತವನ್ನು ಸ್ವೀಕರಿಸಿರುತ್ತಿ. ಇಂತಹ ಕಷ್ಟದ ಜೀವಿಕೆಯನ್ನು ನಡೆಸುತ್ತಿರುವ ನಿನ್ನ ಬಳಿ ಆ ಹಿಟ್ಟನ್ನು ಸ್ವೀಕರಿಸಿ ನಿನ್ನ ಉಪವಾಸವನ್ನು ನಾನು ಹೇಗೆ ನೋಡಲಿ?

ಬಾಲಾ ಕ್ಷುಧಾರ್ತಾ ನಾರೀ ಚ ರಕ್ಷ್ಯಾ ತ್ವಂ ಸತತಂ ಮಯಾ ।
ಉಪವಾಸಪರಿಶ್ರಾಂತಾ ತ್ವಂ ಹಿ ಬಾಂಧವನಂದಿನೀ ॥೫೪॥

ಬಾಲಕಿಯಾಗಿರುವ, ಹಸಿವೆಯಿಂದ ಪೀಡಿತಳಾಗಿರುವ, ಅಬಲೆಯಾಗಿರುವ, ಉಪವಾಸದಿಂದ ಈಗಾಗಲೇ ಬಳಲಿರುವ, ಬಂಧುಪ್ರೀತಿಗೆ ಪಾತ್ರಳಾಗಿರುವ ನಿನ್ನನ್ನು ಎಲ್ಲ ಪ್ರಕಾರದಿಂದಲೂ ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆಯಷ್ಟೆ!

ಸ್ನುಷಾ

ಗುರೋರ್ಮಮ ಗುರುಸ್ತ್ವಂ ಹಿ ಯತೋ ದೈವತದೈವತಮ್ ।
ದೇವಾತಿದೇವಸ್ತಸ್ಮಾತ್ ತ್ವಂ ಸಕ್ತೂನಾದತ್ಸ್ವ ಮೇ ವಿಭೋ ॥೫೫॥

ಸೊಸೆ– ಪೂಜ್ಯರೇ, ನೀವೇ ನನ್ನ ಗುರುವು. ನೀವೇ ನನ್ನ ಪತಿದೇವನಿಗೂ ದೇವತೆಯಾಗಿರುವಿರಿ. ಆದ್ದರಿಂದ ಅತಿಥಿ-ಅಭ್ಯಾಗತರಲ್ಲಿ ಆದರವುಳ್ಳ ನೀವು ಈ ಹಿಟ್ಟಿನ ಉಂಡೆಗಳನ್ನು ಅತಿಥಿಯ ಹಸಿವೆಯನ್ನು ನೀಗಿಸುವುದಕ್ಕಾಗಿ ಸ್ವೀಕರಿಸಿರಿ.

ದೇಹಃ ಪ್ರಾಣಾಶ್ಚ ಧರ್ಮಶ್ಚ ಶುಶ್ರೂಷಾರ್ಥಮಿದಂ ಗುರೋ ।
ತವ ವಿಪ್ರ ಪ್ರಸಾದೇನ ಲೋಕಾನ್ ಪ್ರಾಪ್ಸ್ಯಾಮ್ಯಭೀಪ್ಸಿತಾನ್ ॥೫೬॥

ಈ ನನ್ನ ಶರೀರ, ಪ್ರಾಣ, ಧರ್ಮ ಎಲ್ಲವೂ ನಿಮ್ಮ ಸೇವೆಗಾಗಿಯೇ ಮೀಸಲಾಗಿದೆ. ವಿಪ್ರಶ್ರೇಷ್ಠರೇ, ನಿಮ್ಮ ಅನುಗ್ರಹದಿಂದಲೇ ನಾನು ಬಯಸಿದ ಲೋಕಗಳನ್ನು ಮುಂದೆ ಪಡೆಯುತ್ತೇನೆ.

ಅವೇಕ್ಷ್ಯ ಹೀತಿ ಕೃತ್ವಾ ತ್ವಂ ದೃಢಭಕ್ತೇತಿ ಮಾಂ ದ್ವಿಜ ।
ಚಿಂತ್ಯಾ ಮಮೇಯಮಿತಿ ವಾ ಸಕ್ತೂನಾದಾತುಮರ್ಹಸಿ ॥೫೭॥

'ಸೊಸೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕು', 'ಈಕೆಯು ನನ್ನಲ್ಲಿ ದೃಢವಾದ ಭಕ್ತಿಯುಳ್ಳವಳಾಗಿದ್ದಾಳೆ', 'ಇವಳ ಮಾತುಗಳನ್ನು ನಾನು ಆಲೋಚಿಸಬೇಕು' ಈ ರೀತಿಯಾದ ಪ್ರಕಾರಗಳಿಂದ ನಿಮ್ಮ ಮನಸ್ಸು ಕೂಡಿದ್ದರೂ ಈ ಹಿಟ್ಟಿನ ಉಂಡೆಗಳನ್ನು ಸ್ವೀಕರಿಸಲು ನೀವು ಅರ್ಹರಾಗಿರುವಿರಿ.

ಶ್ವಶುರಃ

ಅನೇನ ನಿತ್ಯಂ ಸಾಧ್ವಿರ್ ತ್ವಂ ಶೀಲವೃತ್ತೇನ ಶೋಭಸೇ ।
ಯತ್ ತ್ವಂ ಧರ್ಮಪಥೋಪೇತಾ ಗುರುವೃತ್ತಿಮವೇಕ್ಷಸೇ ॥೫೮॥

ತಸ್ಮಾತ್ ಸಕ್ತೂನ್ ಗ್ರಹೀಷ್ಯಾಮಿ ವಧೂರ್ನಾರ್ಹಸಿ ವಂಚನಾಮ್ ।
ಗಣಯಿತ್ವಾ ಮಹಾಭಾಗೇ ತ್ವಂ ಹಿ ಧರ್ಮಭೃತಾಂ ವರೇ ॥೫೯॥

ಮಾವ– ಮಗಳೇ, ಅತಿಥಿಸತ್ಕಾರವೆಂಬ ಧರ್ಮದ ಪರಿಪಾಲನೆಗಾಗಿ ನಿನ್ನ ಪ್ರಾಣರಕ್ಷಣೆಗೆ ಆಧಾರವಾದ ಹಿಟ್ಟನ್ನು ಕೊಡಲು ಸಿದ್ಧಳಾಗಿರುವಿ. ಆದ್ದರಿಂದ ನಿನ್ನ ಸೌಶೀಲ್ಯ, ಸದಾಚಾರದಿಂದ ಸಾಧ್ವಿಶಿರೋಮಣಿ ಎನಿಸಿರುವಿ. ಧರ್ಮದ ಮಾರ್ಗದಲ್ಲಿಯೇ ಸಂಚರಿಸುತ್ತಿರುವ ನೀನು ಗುರುಜನರ ಸೇವೆಯಲ್ಲಿ ಆಸಕ್ತಳಾಗಿರುವಿ. ಆದ್ದರಿಂದ ಅತಿಥಿಸತ್ಕಾರದಿಂದ ಲಭಿಸುವ ಪುಣ್ಯವು ನಿನಗೆ ತಪ್ಪಬಾರದು. ಧರ್ಮಾತ್ಮರಲ್ಲಿ ಉತ್ತಮಳೇ, ಪುಣ್ಯಾತ್ಮರಲ್ಲಿ ಒಬ್ಬಳಾಗಿರುವ ನಿನ್ನಿಂದ ಆ ಹಿಟ್ಟಿನ ಉಂಡೆಗಳನ್ನು ಅತಿಥಿಗೋಸ್ಕರವಾಗಿ ಸ್ವೀಕರಿಸುತ್ತೇನೆ.

ವೈಶಂಪಾಯನಃ

ಇತ್ಯುಕ್ತ್ವಾ ತಾನುಪಾದಾಯ ಸಕ್ತೂನ್ ಪ್ರಾದಾದ್ ದ್ವಿಜಾತಯೇ ।
ತತಸ್ತುಷ್ಟೋऽಭವದ್ ವಿಪ್ರಸ್ತಸ್ಯ ಸಾಧೋರ್ಮಹಾತ್ಮನಃ ॥೬೦॥

ವೈಶಂಪಾಯನ– ಬ್ರಾಹ್ಮಣರೇ, ಹೀಗೆ ಉಂಛವೃತ್ತಿಯ ಬ್ರಾಹ್ಮಣನು ಸೊಸೆಯಿಂದ ಹಿಟ್ಟಿನ ಉಂಡೆಗಳನ್ನು ಸ್ವೀಕರಿಸಿ ಅತಿಥಿಗೆ ಭುಂಜಿಸಲು ಕೊಟ್ಟನು. ಅದನ್ನು ಭುಂಜಿಸಿದ ಬಳಿಕ ಮಹಾತ್ಮನಾದ ಬ್ರಾಹ್ಮಣನ ವಿಷಯದಲ್ಲಿ ಅತಿಥಿಯು ಸಂತುಷ್ಟನಾದನು.

ಪ್ರೀತಾತ್ಮಾ ಸ ತು ತಂ ವಾಕ್ಯಮಿದಮಾಹ ದ್ವಿಜರ್ಷಭಮ್ ।
ವಾಗ್ಮೀ ತದಾ ದ್ವಿಜಶ್ರೇಷ್ಠೋ ಧರ್ಮಃ ಪುರುಷವಿಗ್ರಹಃ ॥೬೧॥

ಸಂತುಷ್ಟನಾದ ಆ ದ್ವಿಜವರ್ಯನು ವಾಗ್ಮಿಯಾಗಿದ್ದನು, ಬ್ರಾಹ್ಮಣಶ್ರೇಷ್ಠನಾಗಿದ್ದನು. ಪುರುಷವೇಷವನ್ನು ಧರಿಸಿದ ಧರ್ಮಸ್ವರೂಪಿಯಾಗಿದ್ದನು. ಅಂತಹ ಪ್ರೀತನಾದ ಅತಿಥಿಯು ಬ್ರಾಹ್ಮಣನ್ನು ಉದ್ದೇಶಿಸಿ ಹೀಗೆ ಹೇಳಿದನು.

ಬ್ರಾಹ್ಮಣಃ

ಅನೇನ ಸಕ್ತುದಾನೇನ ನ್ಯಾಯೋಪೇತೇನ ತತ್ತ್ವತಃ ।
ಯಥಾಶಕ್ತಿ ವಿಮುಕ್ತೇನ ಪ್ರೀತೋಽಸ್ಮಿ ತವ ಸತ್ತಮ ॥೬೨॥

ಬ್ರಾಹ್ಮಣ– ದ್ವಿಜಶ್ರೇಷ್ಠನೇ, ನ್ಯಾಯವಾದ ರೀತಿಯಿಂದ ಗಳಿಸಿದ ಹಿಟ್ಟಿನ ಉಂಡೆಗಳನ್ನು ಯಥಾರ್ಥವಾಗಿ ಯಥಾಶಕ್ತಿ ನನ್ನ ಪಾಲಿಗೆ ನೀಡಿರುತ್ತಿ. ಪೂಜ್ಯನೇ, ಇದರಿಂದ ನಾನು ಸಂಪ್ರೀತನಾಗಿರುತ್ತೇನೆ.

ಅಹೋ ದಾನಂ ವಿಶುಷ್ಟಂ ತೇ ಸ್ವರ್ಗೇ ಸ್ವರ್ಗನಿವಾಸಿಭಿಃ ।
ಗಗನಾತ್ ಪುಷ್ಪವರ್ಷಂ ಚ ಪಶ್ಯ ತ್ವಂ ಪತಿತಂ ಭುವಿ ॥೬೩॥

ಸ್ವರ್ಗವಾಸಿಗಳಾದ ದೇವತೆಗಳೂ ಕೂಡ ನೀನು ಮಾಡಿರುವ ಈ ಶುದ್ಧವಾದ ದಾನವನ್ನು ಮಹತ್ವಪೂರ್ಣವಾಗಿದೆ ಎಂದೇ ಹೇಳುತ್ತಾರೆ. ಬ್ರಾಹ್ಮಣನೇ ಅತ್ತ ನೋಡು. ಆಕಾಶದಿಂದ ಭೂಮಿಯಲ್ಲಿ ಪುಷ್ಪವೃಷ್ಟಿಯು ಆಗುತ್ತಿದೆ.

ಸುರಾ ದೇವರ್ಷಿಗಂಧರ್ವಾ ಯೇ ಚ ದೇವಪುರಃಸರಾಃ ।
ಸ್ತುವಂತೋ ದೇವದೂತಾಶ್ಚ ಸಿದ್ಧಾಶ್ಚಾಪಿ ಸುವಿಸ್ಮಿತಾಃ ॥೬೪॥

ದೇವತೆಗಳು ಋಷಿಗಳು, ಗಂಧರ್ವರು ಎಲ್ಲರೂ ಇಂದ್ರನನ್ನು ಮುಂದಿಟ್ಟುಕೊಂಡು ನಿನ್ನ ಔದಾರ್ಯವನ್ನು ಆಶ್ಚರ್ಯಚಕಿತರಾಗಿ ಸಿದ್ಧರು, ದೇವದೂತರಿಂದ ಸಹಿತರಾಗಿ ಪ್ರಶಂಸಿಸುತ್ತಿದ್ದಾರೆ.

ಬ್ರಹ್ಮರ್ಷಯೋ ವಿಮಾನಸ್ಥಾ ಬ್ರಹ್ಮಲೋಕಗತಾಶ್ಚ ಯೇ ।
ಕಾಕ್ಷಂತೇ ದರ್ಶನಂ ತವ್ಯ ದಿವಂ ಗಚ್ಛ ದ್ವಿಜರ್ಷಭ ॥೬೫॥

ಬ್ರಹ್ಮಲೋಕದಲ್ಲಿ ಸಂಚರಿಸುವ ಬ್ರಹ್ಮರ್ಷಿಗಳೂ ವಿಮಾನವನ್ನು ಏರಿಕೊಂಡು ನಿನ್ನ ದರ್ಶನವನ್ನು ಬಯಸುತ್ತಿದ್ದಾರೆ. ಬ್ರಾಹ್ಮಣಶ್ರೇಷ್ಠನೇ, ಆ ಪುಣ್ಯದಿಂದ ಈಗಲೇ ಸ್ವರ್ಗಲೋಕಕ್ಕೆ ನೀನು ಹೋಗು.

ಪಿತೃಲೋಕಗತಾಃ ಸರ್ವೇ ತಾರಿತಾಃ ಪಿತರಸ್ತ್ವಯಾ ।
ಅನಾಗತಾಶ್ಚ ಬಹವಃ ಸುಬಹೂನಿ ಯುಗಾನಿ ಚ ॥೬೬॥

ಈ ಪುಣ್ಯದಿಂದ ಪಿತೃಲೋಕಕ್ಕೆ ಹೋಗಿರುವ ನೀನು ನಿನ್ನ ಪಿತೃಗಳನ್ನು ಉದ್ಧರಿಸಿರುತ್ತಿ. ಮುಂದೆ ಅನೇಕ ಯುಗಗಳ ತನಕ ನಿನ್ನ ವಂಶದಲ್ಲಿ ಉತ್ಪನ್ನರಾಗುವವರೆಲ್ಲರೂ ನಿನ್ನ ಪ್ರಭಾವದಿಂದ ಉದ್ಧಾರ ಹೊಂದುತ್ತಾರೆ.

ಬ್ರಹ್ಮಚರ್ಯೇಣ ಯಜ್ಞೇನ ದಾನೇನ ತಪಸಾऽಥವಾ ।
ಅಗರ್ಹ್ಯೇಣ ಧರ್ಮೇಣ ತಸ್ಮಾದ್ ಗಚ್ಛ ದಿವಂ ದ್ವಿಜ ॥೬೭॥

ಬ್ರಾಹ್ಮಣನೇ, ದಾನದಿಂದಲೂ, ಬ್ರಹ್ಮಚರ್ಯದಿಂದಲೂ, ಯಜ್ಞದಿಂದಲೂ ಅಥವಾ ತಪಸ್ಸಿನಿಂದಲೂ, ನಿಂದಿತವಲ್ಲದ ಧರ್ಮದಿಂದಲೂ ನೀನು ಸ್ವರ್ಗಲೋಕಕ್ಕೆ ಹೋಗಲು ಯೋಗ್ಯನಾಗಿರುತ್ತಿ.

ಶ್ರದ್ಧಯಾ ಪರಯಾ ಯತ್ ತ್ವಂ ತಪಶ್ಚರಸಿ ಸುವ್ರತ ।
ತಸ್ಮಾದ್ ದೇವಾಸ್ತವಾನೇನ ಪ್ರೀತಾ ದ್ವಿಜವರೋತ್ತಮ ॥೬೮॥

ಉತ್ತಮವ್ರತನಿಷ್ಠನಾದ ಬ್ರಾಹ್ಮಣನೇ, ನೀನು ಶ್ರದ್ಧೆಯಿಂದ ತಪಸ್ಸನ್ನು ಗೈದಿರುವಿ. ಆದ್ದರಿಂದ ಶ್ರದ್ಧಾಪೂರ್ಣವಾದ ನಿನ್ನ ದಾನದಿಂದ ದೇವತೆಗಳು ಪ್ರೀತರಾಗಿದ್ದಾರೆ.

ಸರ್ವಸ್ವಮೇತದ್ ಯಸ್ಮಾತ್ ತೇ ತ್ಯಕ್ತಂ ಶುದ್ಧೇನ ಚೇತಸಾ ।
ಕೃಚ್ಛ್ರಕಾಲೇ ತತಃ ಸ್ವರ್ಗೋ ಜಿತೋऽಯಂ ತವ ಕರ್ಮಣಾ ॥೬೯॥

ಇಂತಹ ಕಷ್ಟದ ಸಮಯದಲ್ಲಿಯೂ ನಿನ್ನ ಸರ್ವಸ್ವವನ್ನು ಶುದ್ಧವಾದ ಮನಸ್ಸಿನಿಂದಲೇ ದಾನ ಮಾಡಿರುತ್ತಿ. ಈ ಪುಣ್ಯದ ಪ್ರಭಾವದಿಂದ ಸ್ವರ್ಗಲೋಕವು ನಿನ್ನಿಂದ ಜಿತವಾಗಿದೆ.

ಕ್ಷುಧಾ ನಿರ್ಹರತಿ ಪ್ರಜ್ಞಾಂ ಧರ್ಮ್ಯಾಂ ಬುದ್ಧಿಂ ವ್ಯಪೋಹತಿ ।
ಕ್ಷುಧಾಪರಿಗತಜ್ಞಾನೋ ಧೃತಿಂ ತ್ಯಜತಿ ಚೈವ ಹಿ ॥೭೦॥

ಹಸಿವು ಪ್ರಜ್ಞೆಯನ್ನು ಕೊಲ್ಲುತ್ತದೆ, ಧರ್ಮಬುದ್ಧಿಯನ್ನು ನಾಶಮಾಡುತ್ತದೆ. ಹಸಿವೆಯಿಂದ ಜ್ಞಾನಹೀನನಾದ ಮನುಷ್ಯನು ಧೈರ್ಯವನ್ನೇ ಕಳೆದುಕೊಳ್ಳುತ್ತಾನೆ.

ಬುಭುಕ್ಷಾಂ ಜಯತೇ ಯಸ್ತು ಸ ಸ್ವರ್ಗಂ ಜಯತೇ ಧ್ರುವಮ್ ।
ಯದಾ ದಾನರುಚೇರ್ಭಾವಸ್ತದಾ ಧರ್ಮೋ ನು ಸಿದ್ಧ್ಯತಿ ॥೭೧॥

ಯಾವನು ಹಸಿವೆಯನ್ನು ಗೆಲ್ಲುತ್ತಾನೋ ಅವನು ಸ್ವರ್ಗವನ್ನೇ ಗೆದ್ದಂತೆ. ಹಸಿವೆಯಲ್ಲಿಯೂ ದಾನ ಮಾಡುವ ಬುದ್ಧಿಯುಳ್ಳವನಿಗೆ ಧರ್ಮವು ಸಿದ್ಧಿಸುತ್ತದೆ.

ಅನವೇಕ್ಷ್ಯ ಸುತಸ್ನೇಹಂ ಕಲತ್ರಸ್ನೇಹಮೇವ ಚ ।
ಧರ್ಮಮೇವ ಗುರುಂ ಜ್ಞಾತ್ವಾ ತೃಷ್ಣಾ ನ ಗಣಿತಾ ತ್ವಯಾ ॥೭೨॥

ನೀನು ನಿನ್ನ ಮಗನ ಸ್ನೇಹವನ್ನು, ಹೆಂಡತಿಯ ಸ್ನೇಹವನ್ನು, ಸೊಸೆಯ ಸ್ನೇಹವನ್ನು ಪರಿಗಣಿಸದೆ ಧರ್ಮವೇ ಗುರುವೆಂದು ನಂಬಿ ಹಸಿವೆ-ಬಾಯಾರಿಕೆಗಳನ್ನು ಗಣನೆಗೆ ತಂದುಕೊಳ್ಳದೆ ಧರ್ಮದಿಂದ ಮೆರೆದಿರುವಿ.

ದ್ರವ್ಯಾಗಮೋ ನೃಣಾಂ ಸೂಕ್ಷ್ಮಃ ಪಾತ್ರೇ ದಾನಂ ತತಃ ಪರಮ್ ।
ಕಾಲಃ ಪರತರೋ ದಾನಾತ್ ಶ್ರದ್ಧಾ ಚಾಪಿ ತತಃ ಪರಾ ॥೭೩॥

ಮನುಷ್ಯನಿಗೆ ಹಣವನ್ನು ಗಳಿಸುವ ಉಪಾಯವು ಅತ್ಯಂತ ಸೂಕ್ಷ್ಮವಾದುದು. ಪ್ರಾಮಾಣಿಕವಾಗಿ ಗಳಿಸಿದ ದಾನವನ್ನು ಸತ್ಪಾತ್ರರಿಗೆ ಮಾಡಬೇಕೆಂಬುದು ಅತ್ಯಂತ ಸೂಕ್ಷ್ಮವಾದುದು. ಪ್ರಾಮಾಣಿಕ ಧನಕ್ಕಿಂತ, ಪ್ರಾಮಾಣಿಕ ವ್ಯಕ್ತಿಗೆ ದಾನ ಶ್ರೇಷ್ಠ. ಅದಕ್ಕಿಂತಲೂ ಕಾಲವನ್ನರಿತು ದಾನವನ್ನು ಮಾಡುವುದು, ಅದಕ್ಕಿಂತಲೂ ಶ್ರದ್ಧೆಯಿಂದ ಮಾಡುವ ದಾನವೇ ಶ್ರೇಷ್ಠವೆಂಬುದು ಬಲ್ಲವರ ಭಾವ.

ಸ್ವರ್ಗದ್ವಾರಂ ಸುಸೂಕ್ಷ್ಮಂ ಹಿ ನರೈರ್ಮೋಹಾನ್ನ ದೃಶ್ಯತೇ ।
ಸಂಗಾರ್ಗಲಂ ಲೋಭಕೀಲಂ ರಾಗಗುಪ್ತಂ ದುರಾಸದಮ್ ॥೭೪॥

ಸ್ವರ್ಗದ ದ್ವಾರವು ಅತ್ಯಂತ ಸೂಕ್ಷ್ಮವಾದುದು. ಮೋಹದಿಂದ ಕೂಡಿರುವ ಮನುಷ್ಯರಿಂದ ಈ ಸ್ವರ್ಗದ ದ್ವಾರವು ನೋಡಲಾಗದು. ಸ್ವರ್ಗದ ಬಾಗಿಲಿಗೆ ಲೋಭವೆಂಬ ಬೀಜವು ತಡೆಯಾಗಿದೆ. ಅಂತಹ ಲೋಭದಿಂದ ಸ್ವರ್ಗವನ್ನು ಪ್ರವೇಶಿಸುವುದು ಸಾಧ್ಯವಾಗುವುದಿಲ್ಲ.

ತಂ ತು ಪಶ್ಯಂತಿ ಪುರುಷಾ ಜಿತಕ್ರೋಧಾ ಜಿತೇಂದ್ರಿಯಾಃ ।
ಬ್ರಾಹ್ಮಣಾಸ್ತಪಸಾ ಯುಕ್ತಾ ಯಥಾಶ್ರದ್ಧಾಪ್ರದಾಯಿನಃ ॥೭೫॥

ಕೋಪವನ್ನು ಜಯಿಸಿದ, ಜಿತೇಂದ್ರಿಯರಾದ, ತಪೋನಿಷ್ಠರಾದ, ದಾನಾಸಕ್ತರಾದ ಬ್ರಾಹ್ಮಣರು ಲೋಭ, ಮೋಹಗಳನ್ನು ತ್ಯಜಿಸಿ ಸ್ವರ್ಗವನ್ನು ಹೊಂದುತ್ತಾರೆ.

ಸಹಸ್ರಶಕ್ತಿಶ್ಚ ಶತಂ ಶತಶಕ್ತಿರ್ದಶಾಪಿ ಚ ।
ದದ್ಯಾದಪಶ್ಚ ಯಃ ಶಕ್ತ್ಯಾ ಸರ್ವೇ ತುಲ್ಯಫಲಾಃ ಸ್ಮೃತಾಃ ॥೭೬॥

ದಾನ ಮಾಡುವ ವ್ಯಕ್ತಿಗೆ ಸಾವಿರ ವಸ್ತುಗಳನ್ನು ದಾನ ಮಾಡಲು ಸಾಮರ್ಥ್ಯವಿದ್ದಾಗ ಶ್ರದ್ಧೆಯಿಂದ ನೂರುವಸ್ತುಗಳನ್ನಾದರೂ ದಾನ ಮಾಡಬೇಕು. ಇಷ್ಟು ಮಾಡಿದಾಗಲೂ ಸಾವಿರ ವಸ್ತುಗಳನ್ನು ದಾನ ಮಾಡಿದ ಪುಣ್ಯವೇ ಲಭಿಸುತ್ತದೆ. ತನ್ನ ಯೋಗ್ಯತೆಗೆ ಅನುಗುಣವಾಗಿ ಪ್ರಾಮಾಣಿಕವಾಗಿ ನೀರನ್ನು ದಾನ ಮಾಡಿದರೂ ಅನ್ನದಾನ ಮಾಡಿದ ಫಲವೇ ಲಭಿಸುತ್ತದೆ.

ರಂತಿದೇವೋಽಪಿ ನೃಪತಿರಾಪಃ ಪ್ರಾದಾದಕಿಂಚನಃ ।
ಶುದ್ಧೇನ ಮನಸಾ ವಿಪ್ರ ನಾಕಪೃಷ್ಠಂ ತತೋ ಗತಃ ॥೭೭॥

ವಿಪ್ರಶ್ರೇಷ್ಠನೇ, ರಂತಿದೇವನು ದರಿದ್ರನಾದ ಸಮಯದಲ್ಲಿ ಅತಿಥಿಗೆ ತನ್ನ ಬಳಿ ಇರುವ ನೀರನ್ನು ಶುದ್ಧವಾದ ಮನಸ್ಸಿನಿಂದಲೇ ದಾನ ಮಾಡಿದನು. ಆ ಪುಣ್ಯದಿಂದ ಸ್ವರ್ಗದ ಬೆನ್ನನ್ನೇರಿದನು.

ನ ಧರ್ಮಃ ಪ್ರೀಯತೇ ತಾತ ದಾನೈರ್ದತ್ತೈರ್ಮಹಾಫಲೈಃ ।
ನ್ಯಾಯಲಬ್ಧೈರ್ಯಥಾ ಸೂಕ್ಷ್ಮೈಃ ಶ್ರದ್ಧಾಪೂತೈಃ ಸ ತುಷ್ಯತಿ ॥೭೮॥

ನ್ಯಾಯವಲ್ಲದ ರೀತಿಯಲ್ಲಿ ಗಳಿಸಿದ ಹಣದಿಂದ ಮಹಾಫಲವನ್ನು ಕೊಡುವ ದೊಡ್ಡ ದೊಡ್ಡ ದಾನಗಳನ್ನು ಮಾಡುವುದು ಧರ್ಮಕ್ಕೆ ಸಂತೋಷವನ್ನು ನೀಡುವುದಿಲ್ಲ. ಅತಿಸಣ್ಣದೇ ಆಗಿದ್ದರೂ ಶ್ರದ್ಧೆಯಿಂದ ಆ ದಾನವು ಪವಿತ್ರವಾಗಿದ್ದರೆ ಭಗವಂತನು ಅದರಿಂದಲೇ ಸಂತುಷ್ಟನಾಗುತ್ತಾನೆ.

ಗೋಪ್ರದಾನಸಹಸ್ರಾಣಿ ದ್ವಿಜಾತಿಭ್ಯೋ ನೃಗೋ ನೃಪಃ ।
ಏಕಂ ದತ್ತ್ವಾ ಪರಸ್ವಂ ತು ನರಕಂ ಸಮವಾಪ್ತವಾನ್ ॥೭೯॥

ನೃಗರಾಜನು ಸಾವಿರಾರು ಹಸುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದ್ದನು.

ಅವುಗಳಲ್ಲಿ ದಾನ ಮಾಡಿದ ಒಂದು ಹಸುವನ್ನು ಪುನಃ ಸ್ವೀಕರಿಸಿ ನರಕವನ್ನೇ ಹೊಂದಿರುತ್ತಾನೆ.

ಆತ್ಮಮಾಂಸಪ್ರದಾನೇನ ಶಿಬಿರೌಶೀನರೋ ನೃಪಃ ।
ಪ್ರಾಪ್ಯ ಪುಣ್ಯಕೃತಾನ್ ಲೋಕಾನ್ ಮೋದತೇ ದಿವಿ ಸುವ್ರತಃ ॥೮೦॥

ಔಶೀನರನ ಮಗನಾದ, ವ್ರತಶೀಲನಾದ ಶಿಬಿಚಕ್ರವರ್ತಿಯು ತನ್ನ ಶರೀರದ ಮಾಂಸವನ್ನೇ ದಾನವನ್ನಾಗಿ ಕೊಟ್ಟು ಪುಣ್ಯಾತ್ಮರು ಹೊಂದುವ ಲೋಕವನ್ನು ಹೊಂದಿ ಇಂದಿಗೂ ಸಂತುಷ್ಟನಾಗಿರುತ್ತಾನೆ.

ವಿಭವೇನ ನೃಣಾಂ ಪುಣ್ಯಂ ಸ್ವಶಕ್ತ್ಯಾ ಸ್ವಾರ್ಜಿತಂ ನೃಣಾಮ್ ।
ನ ಯಜ್ಞೈರ್ವಿವಿಧೈರ್ವಿಪ್ರ ಯಥಾ ನ್ಯಾಯೇನ ಸಂಚಿತೈಃ ॥೮೧॥

ವೈಭವೀಕರಿಸುವುದರಿಂದ ಮನುಷ್ಯರು ಪುಣ್ಯವನ್ನು ಹೊಂದುವುದಿಲ್ಲ. ತನ್ನ ಯೋಗ್ಯತೆಗನುಗುಣವಾಗಿ ಪ್ರಾಮಾಣಿಕವಾಗಿ ಗಳಿಸಿದ ಹಣವನ್ನು ದಾನ ಮಾಡುವುದರಿಂದಲೇ ಪುಣ್ಯವನ್ನು ಹೊಂದುತ್ತಾನೆ. ನ್ಯಾಯದಿಂದ ಆರ್ಜಿತವಾದ ದ್ರವ್ಯವನ್ನು ದಾನ ಮಾಡುವುದರಿಂದ ಯಾವ ಫಲವನ್ನು ಹೊಂದುತ್ತಾನೋ ಅಂತಹ ಫಲವನ್ನು ಅನ್ಯಾಯದಿಂದ ಆರ್ಜಿತವಾದ ನೂರಾರು ಯಜ್ಞಗಳನ್ನು ಆಚರಿಸಿಯೂ ಹೊಂದಲಾರ.

ಕ್ರೋಧೋ ದಾನಫಲಂ ಹಂತಿ ಲೋಭಾತ್ ಸ್ವರ್ಗಂ ನ ಗಚ್ಛತಿ ।
ನ್ಯಾಯವೃತ್ತಿರ್ಹಿ ತಪಸಾ ದಾನವಿತ್ ಸ್ವರ್ಗಮಶ್ನುತೇ ॥೮೨॥

ದಾನ ಮಾಡುವಾಗ ಕೋಪದಿಂದ ಮಾಡಿದರೆ ದಾನದ ಫಲವು ನಾಶವಾಗುತ್ತದೆ. ಲೋಭದಿಂದ ದಾನ ಮಾಡಿದರೆ ಸ್ವರ್ಗವು ಲಭಿಸುವುದಿಲ್ಲ. ತಪಸ್ಸಿನಿಂದ ಕೂಡಿ ಪ್ರಾಮಾಣಿಕವಾದ ಜೀವನವನ್ನು ಮಾಡುತ್ತಿರುವ ವ್ಯಕ್ತಿಯು ದಾನದ ಮಹಿಮೆಯನ್ನು ಸರಿಯಾಗಿ ತಿಳಿದು ದಾನ ಮಾಡಿದಲ್ಲಿ ಸ್ವರ್ಗವನ್ನು ಸೇರುತ್ತಾನೆ.

ನ ರಾಜಸೂಯೈರ್ಬಹುಭಿರಿಷ್ಟ್ವಾ ವಿಪುಲದಕ್ಷಿಣೈಃ ।
ನ ಚಾಶ್ವಮೇಧೈರ್ಬಹುಭಿಃ ಫಲಂ ಸಮಮಿದಂ ತವ ॥೮೩॥

ಬ್ರಾಹ್ಮಣನೇ, ಇಂದು ನೀನು ಮಾಡಿರುವ ಈ ಹುರಿಹಿಟ್ಟಿನ ದಾನದ ಫಲವನ್ನು ಅನೇಕ ರಾಜಸೂಯಯಾಗಗಳನ್ನು ಮಾಡಿ, ಬಹುದಕ್ಷಿಣೆಯನ್ನು ಕೊಟ್ಟು, ಹತ್ತಾರು ಅಶ್ವಮೇಧ ಯಾಗಗಳನ್ನು ಮಾಡಿದರೂ ನಿನ್ನ ದಾನಕ್ಕೆ ಸಮಾನವಾದ ಫಲವನ್ನು ಹೊಂದಲಾಗುವುದಿಲ್ಲ.

ಸಕ್ತುಪ್ರಸ್ಥೇನ ಹಿ ಜಿತೋ ಬ್ರಹ್ಮಲೋಕಸ್ತ್ವಯಾऽನಘ ।
ವಿರಜೋ ಬ್ರಹ್ಮಸದನಂ ಗಚ್ಛ ವಿಪ್ರ ಯಥೇಪ್ಸಿತಮ್ ॥೮೪॥

ನಿರ್ದುಷ್ಟನಾದ ಬ್ರಾಹ್ಮಣನೇ, ಈ ಹಿಟ್ಟಿನ ಉಂಡೆಗಳನ್ನು ಕೊಡುವ ಮೂಲಕ ಬ್ರಹ್ಮಲೋಕವನ್ನೇ ನೀನು ಗೆದ್ದಿರುವಿ. ದೋಷಗಳನ್ನು ಇದರ ಮೂಲಕ ಪರಿಹರಿಸಿಕೊಂಡಿರುವ ನೀನು ನಿನಗೆ ಇಷ್ಟವಾದ ಬ್ರಹ್ಮನ ಲೋಕವನ್ನು ಕುರಿತು ಪ್ರಯಾಣ ಬೆಳೆಸು.

ಸರ್ವೇಷಾಂ ವೋ ದ್ವಿಜಶ್ರೇಷ್ಠ ದಿವ್ಯಂ ಯಾನಮುಪಸ್ಥಿತಮ್ ।
ಆರೋಹತ ಯಥಾಕಾಮಂ ಧರ್ಮೋऽಸ್ಮಿ ದ್ವಿಜಸತ್ತಮ ॥೮೫॥

ಬ್ರಾಹ್ಮಣಶ್ರೇಷ್ಠನೇ, ನಾನು ಧರ್ಮದೇವತೆಯಾಗಿದ್ದೇನೆ. ನಿಮ್ಮೆಲ್ಲರಿಗೂ ಸ್ವರ್ಗಲೋಕದಿಂದ ವಿಮಾನವು ಬಂದಿರುತ್ತದೆ. ಸಂತುಷ್ಟರಾಗಿ ಈ ವಿಮಾನವನ್ನು ಏರಿರಿ.

ಪಾವಿತೋ ಹಿ ತ್ವಯಾ ದೇಹೋ ಲೋಕೇ ಕೀರ್ತಿಃ ಸ್ಥಿರಾ ಚ ತೇ ।
ಸಭಾರ್ಯಃ ಸಹಪುತ್ರಶ್ಚ ಸಸ್ನುಷಶ್ಚ ದಿವಂ ವ್ರಜ ॥೮೬॥

ನಿನ್ನ ಈ ಸತ್ಕರ್ಮಾನುಷ್ಠಾನದಿಂದ ನಿನ್ನ ದೇಹವನ್ನು ಪವಿತ್ರೀಕರಿಸಿಕೊಂಡಿರುವಿ. ಸ್ಥಿರವಾದ ಕೀರ್ತಿಯನ್ನು ಹೊಂದಿರುವಿ. ಈ ಪುಣ್ಯದಿಂದ ನಿನ್ನ ಹೆಂಡತಿ, ಮಗ, ಸೊಸೆಯ ಜೊತೆಗೆ ಸ್ವರ್ಗಲೋಕಕ್ಕೆ ತೆರಳು.

ನಕುಲಃ

ಇತ್ಯುಕ್ತವಾಕ್ಯೋ ಧರ್ಮೇಣ ಯಾನಮಾರುಹ್ಯ ಸ ದ್ವಿಜಃ ।
ಸಭಾರ್ಯಃ ಸಸ್ನುಷಶ್ಚಾಪಿ ಸಸುತಶ್ಚ ದಿವಂ ಯಯೌ ॥೮೭॥

ಮುಂಗುಸಿ– ಈ ರೀತಿಯಾಗಿ ಧರ್ಮಪುರುಷನು ನುಡಿಯುತ್ತಿರಲು ಬ್ರಾಹ್ಮಣನು ಆ ವಿಮಾನವನ್ನು ಹೆಂಡತಿ, ಸೊಸೆ, ಮಗನ ಜೊತೆ ಏರಿ ಸ್ವರ್ಗಕ್ಕೆ ಹೋದನು.

ತಸ್ಮಿನ್ ವಿಪ್ರೇ ಗತೇ ಸ್ವರ್ಗಂ ಸಪುತ್ರೇ ಸಸ್ನುಷೇ ತದಾ ।
ಭಾರ್ಯಾಚತುರ್ಥೇ ಧರ್ಮಜ್ಞೇ ತತೋಽಹಂ ನಿಃಸೃತೋ ಬಿಲಾತ್ ॥

ಆ ಬ್ರಾಹ್ಮಣನು ತನ್ನ ಮಗ, ಹೆಂಡತಿ, ಸೊಸೆಯ ಜೊತೆಗೆ ಸ್ವರ್ಗವನ್ನು ಏರಲು, ನಾನು ಆ ದಾನ ನಡೆದ ಜಾಗದಲ್ಲೇ ಒಂದು ಬಿಲದಲ್ಲಿ ವಾಸ ಮಾಡಿದ್ದೆನು. ಅವರು ಅತ್ತ ತೆರಳಿದ ಮೇಲೆ ಆ ಬಿಲದಿಂದ ಹೊರಬಂದೆನು.

ತತಸ್ತು ಸಕ್ತುಗಂಧೇನ ಕ್ಲೇದೇನ ಸಲಿಲಸ್ಯ ಚ ।
ದಿವ್ಯಪುಷ್ಪಾವಮರ್ದಾಚ್ಚ ಸಾಧೋರ್ದಾನಲವೈಶ್ಚ ತೈಃ ॥೮೯॥

ಆ ದಾನ ಮಾಡಿದ ಸ್ಥಳದಲ್ಲಿ ಹರಡಿದ್ದ ಹಿಟ್ಟಿನ ವಾಸನೆಯನ್ನು ಆಘ್ರಾಣಿಸಿದೆ. ದಾನದ ನೀರಿನಲ್ಲಿ ಹೊರಳಾಡಿದೆ. ಅಲ್ಲಿ ಉದುರಿದ ದಿವ್ಯಪುಷ್ಪಗಳ ಮೇಲೆ ಓಡಾಡಿದೆ. ಆ ಉಂಛವೃತ್ತಿ ಬ್ರಾಹ್ಮಣನು ದಾನ ಮಾಡಿದ ಹಿಟ್ಟಿನ ಕಣಗಳ ಸಂಪರ್ಕವು ನನ್ನ ಶರೀರಕ್ಕುಂಟಾಯಿತು.

ವಿಪ್ರಸ್ಯ ತಪಸಾ ತಸ್ಯ ಶಿರೋ ಮೇ ಕಾಂಚನೀಕೃತಮ್ ॥೯೦॥

ಆ ಬ್ರಾಹ್ಮಣನ ತಪಸ್ಸಿನ ಪ್ರಭಾವದಿಂದಲೇ ನನ್ನ ತಲೆಯು ಸುವರ್ಣಮಯ-ವಾಯಿತು.

ತಸ್ಯ ಸತ್ಯಾಭಿಸಂಧಸ್ಯ ಸೂಕ್ಷ್ಮದಾನೇನ ಚೈವ ಹ ।
ಶರೀರಾರ್ಧಂ ಚ ಮೇ ವಿಪ್ರಾಃ ಶಾತಕುಂಭಮಯಂ ಕೃತಮ್ ॥೯೧॥

ವಿಪ್ರಶ್ರೇಷ್ಠರೇ, ಸತ್ಯನಿಷ್ಠನಾದ ಆ ಉಂಛವೃತ್ತಿ ಬ್ರಾಹ್ಮಣನು ಹಿಟ್ಟನ್ನು ಪ್ರಾಮಾಣಿಕವಾಗಿ ದಾನ ಮಾಡಿದ ಪದಾರ್ಥಗಳಲ್ಲಿ ಸಂಚರಿಸಿದ ಪ್ರಭಾವದಿಂದ ನನ್ನ ಅರ್ಧಶರೀರವೇ ಸುವರ್ಣಮಯವಾಯಿತು.

ಪಶ್ಯತೇದಂ ಸುವಿಪುಲಂ ತಪಸಾ ತಸ್ಯ ಧೀಮತಃ ।
ಕಥಮೇವಂವಿಧಂ ಮೇ ಸ್ಯಾತ್ ಅನ್ಯತ್ ಪಾರ್ಶ್ವಮಿತಿ ದ್ವಿಜಾಃ ॥೯೨॥

ಧೀಮಂತನಾದ ಆ ಬ್ರಾಹ್ಮಣನ ತಪಸ್ಸಿನ ಪ್ರಭಾವದಿಂದ ನನ್ನ ಶರೀರವು ಸುವರ್ಣಮಯವಾಗಿರುವುದನ್ನು ನೀವೇ ನೋಡಿರಿ. ಅಂದಿನಿಂದ ನನ್ನ ದೇಹದ ಮತ್ತೊಂದು ಭಾಗವನ್ನೂ ಹೇಗೆ ಸುವರ್ಣಮಯವಾಗಿಸಬೇಕೆಂದು ಚಿಂತಿಸುತ್ತಲೇ ಇದ್ದೇನೆ.

ತಪೋವನಾನಿ ಯಜ್ಞಾಂಶ್ಚ ಹೃಷ್ಟೋಽಭ್ಯೇಮಿ ಪುನಃ ಪುನಃ ॥೯೩॥

ಈ ದೃಷ್ಟಿಯಿಂದ ನಾನು ತಪೋವನಗಳಿಗೂ ಯಜ್ಞನಡೆಯುವ ಸ್ಥಳಗಳಿಗೂ ಪುನಃ ಪುನಃ ಹೋಗುತ್ತಲೇ ಇದ್ದೇನೆ.

ಯಜ್ಞಂ ತ್ವಹಮಿಮಂ ಶ್ರುತ್ವಾ ಕುರುರಾಜಸ್ಯ ಧೀಮತಃ ।
ಆಶಯಾ ಪರಯಾ ಪ್ರಾಪ್ತೋ ನ ಚಾಹಂ ಕಾಂಚನಃ ಕೃತಃ ॥೯೪॥

ಧೀಮಂತನಾದ ಕುರುರಾಜನ ಯಜ್ಞವು ನಡೆಯುತ್ತಿರುವುದೆಂದು ತಿಳಿದು ಅತ್ಯಂತ ಆಸೆಯಿಂದ ಇಲ್ಲಿಗೆ ಆಗಮಿಸಿದ್ದೇನೆ. ಆದರೆ ಈ ಯಜ್ಞಮಂಟಪದಲ್ಲಿ ಆಘ್ರಾಣಿಸಿಕೊಂಡು ಓಡಾಡಿದ ನನ್ನ ದೇಹವು ಹಿಂದಿನಂತೆ ಸುವರ್ಣಮಯವಾಗಲಿಲ್ಲ.

ತತೋ ಮಯೋಕ್ತಂ ತತ್ಪುಣ್ಯಂ ಪ್ರಶಸ್ಯ ದ್ವಿಜಸತ್ತಮಾಃ ।
ಸಕ್ತುಪ್ರಸ್ಥೇನ ಯಜ್ಞೋಽಯಂ ಸಮ್ಮಿತೋ ನೇತಿ ಸರ್ವಥಾ ॥೯೫॥

ಬ್ರಾಹ್ಮಣರೇ, ಈ ಕಾರಣದಿಂದ ನಾನು ಉಂಛವೃತ್ತಿಯ ಬ್ರಾಹ್ಮಣನ ಒಂದು ಸೇರುಹಿಟ್ಟಿನ ದಾನಕ್ಕೆ ಈ ಯಜ್ಞವು ಸಮಾನವಾಗಿರುವುದಿಲ್ಲ ಎಂದು ಹೇಳಿದೆನು.

ಸಕ್ತುಪ್ರಸ್ಥಲವೈಸ್ಪೈರ್ಹಿ ತದಾಽಹಂ ಕಾಂಚನೀಕೃತಃ ।
ನ ಹಿ ಯಜ್ಞೋ ಮಹಾನೇಷ ಸದೃಶಸ್ತೈರ್ಮತೋ ಮಮ ॥೯೬॥

ಹಿಟ್ಟಿನ ಕಣಗಳ ಸ್ಪರ್ಶದಿಂದ ನನ್ನ ದೇಹದ ಒಂದು ಭಾಗವು ಸುವರ್ಣಮಯ-ವಾಯಿತು. ಆದರೆ ನಿಮ್ಮ ಯಜ್ಞದಲ್ಲಿ ಹೀಗಾಗಲಿಲ್ಲ. ಆದ್ದರಿಂದ ನಿಮ್ಮ ಯಜ್ಞವು ಆ ಉಂಛವೃತ್ತಿಯ ಬ್ರಾಹ್ಮಣನ ಹಿಟ್ಟಿನ ದಾನಕ್ಕೆ ಸಮಾನವಾದ ಫಲವನ್ನು ಕೊಡಲು ಸಮರ್ಥವಾಗಿಲ್ಲ ಎಂದು ನನ್ನ ಅಭಿಪ್ರಾಯ.

ವೈಶಂಪಾಯನಃ

ಇತ್ಯುಕ್ತ್ವಾ ನಕುಲಃ ಸರ್ವಾನ್ ಯಜ್ಞೇ ದ್ವಿಜವರಾಂಸ್ತದಾ ।
ಜಗಾಮಾದರ್ಶನಂ ರಾಜನ್ ತೇ ಚ ವಿಪ್ರಾ ಯಯುರ್ಗೃಹಾನ್ ॥೯೭॥

ವೈಶಂಪಾಯನ– ಜನಮೇಜಯನೇ, ಮುಂಗುಸಿಯು ಈ ಕ್ರಮದಲ್ಲಿ ಧರ್ಮರಾಜನ ಯಜ್ಞದಲ್ಲಿ ಪಾತ್ರವಹಿಸಿದ ಬ್ರಾಹ್ಮಣರ ಬಳಿ ಹೇಳಿ ಅಲ್ಲಿಂದ ಮಾಯವಾಯಿತು. ಆ ಬ್ರಾಹ್ಮಣರೆಲ್ಲ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಏತತ್ ತೇ ಸರ್ವಮಾಖ್ಯಾತಂ ಮಯಾ ಪರಪುರಂಜಯ ।
ಯದಾಶ್ಚರ್ಯಮಭೂತ್ ತಸ್ಮಿನ್ನಶ್ವಮೇಧೇ ಮಹಾಕ್ರತೌ ॥೯೮॥

ಮಹಾರಾಜನೇ, ಅಶ್ವಮೇಧ ಯಜ್ಞವು ನಡೆಯುತ್ತಿರುವಲ್ಲಿ ನಡೆದ ಆಶ್ಚರ್ಯಕರವಾದ ಘಟನೆಯನ್ನು ನಿನಗೆ ಸಮಗ್ರವಾಗಿ ಹೇಳಿದ್ದೇನೆ. ಈ ಯಜ್ಞದ ಸಂಬಂಧದಲ್ಲಿ ಜರುಗಿದ ಇಂತಹ ಆಶ್ಚರ್ಯಕರ ಘಟನೆಯನ್ನು ಕೇಳಿ ನೀನು ಆಶ್ಚರ್ಯಪಡಬೇಕಾಗಿಲ್ಲ.

ನ ವಿಸ್ಮಯಸ್ತೇ ನೃಪತೇ ಯಜ್ಞೇ ಕಾರ್ಯಃ ಕಥಂಚನ ।
ಋಷಿಕೋಟಿಸಹಸ್ರಾಣಿ ತಪೋಭಿರ್ಯೇ ದಿವಂ ಗತಾಃ ॥೯೯॥

ನಕುಲ (ಮುಂಗುಸಿ)ನ ವಾಕ್ಯವನ್ನು ಕೇಳಿಕೊಂಡು ನಿನ್ನನ್ನು ಅದು ಗೇಲಿ ಮಾಡಿತು ಎಂದು ಎಂದಿಗೂ ದುಃಖಿಸಬೇಡ. ನಕುಲನು ಸಾವಿರಾರು ಕೋಟಿ ಮಂದಿ ಋಷಿಗಳು ಯಜ್ಞವನ್ನು ಮಾಡದೆ ತಪಸ್ಸಿನ ಪ್ರಭಾವದಿಂದಲೇ ಸ್ವರ್ಗಕ್ಕೆ ಹೋಯಿತು ಎಂದು ಏನು ಹೇಳಿತೋ ಇಂತಹ ಅಪಹಾಸ್ಯದ ಮಾತನ್ನು ಕೇಳಿಸಿಕೊಂಡು ನೀನು ಆಶ್ಚರ್ಯವನ್ನು ಪಡಬೇಡ. ಯಾರಿಗೆ ಧನವೇ ಇಲ್ಲವೋ ಅವರು ತಪಸ್ಸಿನ ಲೋಭವನ್ನು ಹೊಂದುತ್ತಾರೆ. ರಾಜರಾದವರಿಗೆ ಯಜ್ಞವೇ ಶ್ರೇಯಸ್ಕರ. ಆ ಮುಂಗುಸಿಯ ವಂಚನೆಯ ಮಾತುಗಳಿಂದ ನೀನು ಮೋಹಿತನಾಗಬೇಡ.

ವ್ಯಾಖ್ಯಾನ ವಿಶೇಷ– ಧರ್ಮರಾಜನು ಮಾಡಿದ ಯಜ್ಞದಲ್ಲಿ ಲಭಿಸಿದ ಪುಣ್ಯದ ಫಲಕ್ಕೆ ಬ್ರಾಹ್ಮಣನು ಮಾಡಿದ ಹಿಟ್ಟಿನ ಉಂಡೆಯ ದಾನವು ಒಂದು ಕಲೆಯನ್ನೂ ಹೊಂದುವುದಿಲ್ಲ. ಯುಧಿಷ್ಠಿರನ ಅಶ್ವಮೇಧ ಯಜ್ಞಕ್ಕೆ ಬ್ರಾಹ್ಮಣನ ದಾನವು ತಿಲಮಾತ್ರವೂ ಸದೃಶವಾಗುವುದಿಲ್ಲ. ಹೀಗೆ ಭಾರತದ ಶ್ಲೋಕಕ್ಕೆ ವ್ಯಾಖ್ಯಾನಿಸಬೇಕು. ಇಲ್ಲಾವಾದಲ್ಲಿ ಯುಧಿಷ್ಠಿರನ ಅಶ್ವಮೇಧ ಯಜ್ಞವನ್ನು ಮುಂದೆ ವ್ಯಾಸರು ವಿಸ್ತಾರವಾಗಿ ಪ್ರಶಂಸಿಸಿರುವುದರ ವಿರೋಧವು ಬರುತ್ತದೆ. ಆದ್ದರಿಂದ ಮುಂಗುಸಿಯು ಧರ್ಮರಾಜನನ್ನು ಮೋಹಗೊಳಿಸಲು ಬಂದ ದೈತ್ಯನೆಂದೇ ತಿಳಿಯಬೇಕು.

ಅದ್ರೋಹಃ ಸರ್ವಭೂತೇಷು ಸಂತೋಷಃ ಶೀಲಮಾರ್ಜವಮ್ ।
ತಪೋ ದಮಶ್ಚ ಸತ್ಯಂ ಚ ಪ್ರದಾನಂ ಚೇತಿ ಸಮ್ಮಿತಮ್ ॥೧೦೦॥

ಯಾವ ಪ್ರಾಣಿಗಾದರೂ ದ್ರೋಹವನ್ನು ಮಾಡಬಾರದು. ಎಲ್ಲರ ವಿಷಯದಲ್ಲಿಯೂ ಸಂತುಷ್ಟರಾಗಿರಬೇಕು. ಸಚ್ಚಾರಿತ್ರ್ಯ, ಸಹನೆ, ತಪಸ್ಸಿನ ಆಚರಣೆ, ಜಿತೇಂದ್ರಿಯತ್ವ, ಸತ್ಯನಿಷ್ಠೆ, ನ್ಯಾಯಾರ್ಜಿತ ಪದಾರ್ಥವನ್ನು ಶ್ರದ್ಧೆಯಿಂದ ದಾನ ಮಾಡುವುದು - ಇವೆಲ್ಲವೂ ಶ್ರೇಷ್ಠವಾದ ಫಲವನ್ನೇ ಕೊಡುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಸಕ್ತುಪ್ರಸ್ಥಯಜ್ಞಪ್ರಶಂಸನಂ ನಾಮ ತ್ರಿನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ನಾಲ್ಕನೆಯ ಅಧ್ಯಾಯ

ಜನಮೇಜಯನು ಮುಂಗುಸಿಯು ಯಜ್ಞವನ್ನು ನಿಂದಿಸಲು ಕಾರಣವೇನೆಂದು ಕೇಳಿದುದು. ವೈಶಂಪಾಯನರು ಸತ್ಯ-ದಾನ-ತಪಸ್ಸಿನಿಂದಲೇ ಸ್ವರ್ಗವು ಲಭಿಸುತ್ತಿರಲು ಪಶುಹಿಂಸಾ ರೂಪವಾದ ಯಜ್ಞವು ಪ್ರಶಸ್ತವಾದುದಲ್ಲ ಎಂದು ಮುಂಗುಸಿಯ ಅಭಿಪ್ರಾಯವನ್ನು ವರ್ಣಿಸಿದುದು.

ಜನಮೇಜಯಃ

ಯಜ್ಞೇ ಸಕ್ತಾ ನೃಪತಯಸ್ತಪಃ ಸಕ್ತಾ ಮಹರ್ಷಯಃ ।
ಶಾಂತಿವ್ಯವಸಿತಾ ವಿಪ್ರಾಃ ಶಮೇ ದಮ ಇತಿ ಪ್ರಭೋ ॥೧॥

ಜನಮೇಜಯ- ವೈಶಂಪಾಯನರೇ, ರಾಜರೆಲ್ಲರೂ ಯಜ್ಞ ಮಾಡುವುದರಲ್ಲಿ ಆಸಕ್ತರಾಗಿರುತ್ತಾರೆ. ಮಹರ್ಷಿಗಳು ತಪಸ್ಸಿನಲ್ಲಿ, ಬ್ರಾಹ್ಮಣರು ಭಗವಂತನಲ್ಲಿ, ಶಮ-ದಮಗಳಲ್ಲಿ ಆಸಕ್ತರಾಗಿರುತ್ತಾರೆ.

ತಸ್ಮಾದ್ ಯಜ್ಞಫಲೈಸ್ತುಲ್ಯಂ ನ ಕಿಂಚಿದಿಹ ವಿದ್ಯತೇ ।
ಇತಿ ಮೇ ವರ್ತತೇ ಬುದ್ಧಿಸ್ತಥಾ ಚೈತನ್ನ ಸಂಶಯಃ ॥೨॥

ಆದರೆ ಯಜ್ಞಗಳನ್ನು ಮಾಡುವುದರಿಂದ ಲಭಿಸುವ ಫಲವು ಬೇರೆ ಯಾವುದೇ

ಕರ್ಮಗಳಿಂದ ಲಭಿಸುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಇದರಲ್ಲಿ ಯಾವ ಸಂಶಯವೂ ನನಗೆ ಇರುವುದಿಲ್ಲ.

ಯಜ್ಞೈರಿಷ್ಟ್ವಾ ಚ ಬಹವೋ ರಾಜಾನೋ ದ್ವಿಜಸತ್ತಮಾಃ ।
ಇಹ ಕೀರ್ತಿಂ ಪರಾಂ ಪ್ರಾಪ್ಯ ಪ್ರೇತ್ಯ ಸ್ವರ್ಗಮಿತೋ ಗತಾಃ ॥೩॥

ಅನೇಕ ರಾಜರು, ಬ್ರಾಹ್ಮಣರು ಯಜ್ಞಗಳಿಂದ ದೇವತೆಗಳನ್ನು ಆರಾಧಿಸಿ, ಅವಸಾನವಾದಾಗ ಸತ್ಕೀರ್ತಿಸಂಪನ್ನರಾಗಿ ಸ್ವರ್ಗವನ್ನು ಸೇರಿರುತ್ತಾರೆ.

ದೇವರಾಜಃ ಸಹಸ್ರಾಕ್ಷಃ ಕ್ರತುಭಿರ್ಭೂರಿದಕ್ಷಿಣೈಃ ।
ದೇವರಾಜ್ಯಂ ಮಹಾತೇಜಾಃ ಪ್ರಾಪ್ತವಾನಖಿಲಂ ವಿಭುಃ ॥೪॥

ಸಹಸ್ರಾಕ್ಷನಾದ ದೇವೇಂದ್ರನು ಅಪಾರವಾದ ದಕ್ಷಿಣೆಗಳಿಂದ ಕೂಡಿರುವ ಯಜ್ಞಗಳನ್ನಾಚರಿಸಿ ಸಮಸ್ತ ದೇವರಾಜ್ಯಕ್ಕೆ ಅಧಿಪತಿಯಾಗಿದ್ದಾನೆ.

ಅತೋ ಯುಧಿಷ್ಠಿರೋ ರಾಜಾ ಭೀಮಾರ್ಜುನಪುರಃಸರಃ ।
ಸದೃಶೋ ದೇವರಾಜೇನ ಸಮೃದ್ಧ್ಯಾ ವಿಕ್ರಮೇಣ ಚ ॥೫॥

ಆದ್ದರಿಂದಲೇ ಧರ್ಮರಾಜನು ಭೀಮಾರ್ಜುನರನ್ನು ಮುಂದಿಟ್ಟುಕೊಂಡು ಸಮೃದ್ಧಿಯಿಂದ, ಪರಾಕ್ರಮದಿಂದ ದೇವರಾಜನಿಗೆ ಸದೃಶನಾಗಿದ್ದಾನೆ.

ಅಥ ಕಸ್ಮಾತ್ ಸ ನಕುಲೋ ಗರ್ಹಯಾಮಾಸ ತಂ ನೃಪಮ್ ।
ಅಶ್ವಮೇಧಂ ಮಹಾಯಜ್ಞಂ ರಾಜ್ಞಸ್ತಸ್ಯ ಮಹಾತ್ಮನಃ ॥೬॥

ಹೀಗಿದ್ದರೂ ಆ ಮುಂಗುಸಿಯು ಬಂದು, ಈ ಧರ್ಮರಾಜನನು ನಿಂದಿಸಿದುದು ಏಕೆ? ಮಹಾನುಭಾವನಾದ ಧರ್ಮರಾಜನ ಮಹಾ ಅಶ್ವಮೇಧಯಾಗವನ್ನು ನಿಂದಿಸಿದುದರ ಕಾರಣವನ್ನು ತಿಳಿಸಿ.

ವೈಶಂಪಾಯನಃ

ಯಜ್ಞಸ್ಯ ವಿಧಿಮಗ್ರ್ಯಂ ವೈ ಫಲಂ ಚೈವ ನರರ್ಷಭ ।
ಗದತಃ ಶೃಣು ಮೇ ರಾಜನ್ ಯಥಾವದಿಹ ಭಾರತ ॥೭॥

ವೈಶಂಪಾಯನ– ಜನಮೇಜಯನೇ, ನಾನು ನಿನಗೆ ಯಜ್ಞದ ಶ್ರೇಷ್ಠವಾದ ವಿಧಿಗಳನ್ನು ಮತ್ತು ಅದರ ಫಲಗಳನ್ನು ಯಥಾವತ್ತಾಗಿ ಹೇಳುತ್ತೇನೆ, ಕೇಳಿಸಿಕೊ.

ಪುರಾ ಶಕ್ರಸ್ಯ ಯಜತಃ ಸರ್ವ ಊಚುರ್ಮಹರ್ಷಯಃ ।
ಋತ್ವಿಕ್ಷು ಕರ್ಮ ಕುರ್ವತ್ಸು ವಿತತೇ ಯಜ್ಞಕರ್ಮಣಿ ॥೮॥

ಹಿಂದೆ ಇಂದ್ರನು ಯಜ್ಞವನ್ನು ಮಾಡುತ್ತಿದ್ದನು. ಋಷಿಗಳೆಲ್ಲರೂ ಮಂತ್ರವನ್ನು ಉಚ್ಚರಿಸುತ್ತಿದ್ದರು. ಬ್ರಾಹ್ಮಣರೆಲ್ಲರೂ ತಮ್ಮ ಮಂತ್ರಪಠಣ ಕರ್ಮಗಳಲ್ಲಿ ಏಕಾಗ್ರತೆಯನ್ನು ಹೊಂದಿದ್ದರು.

ಹೂಯಮಾನೇ ತಥಾ ವಹ್ನೌ ಹೋತ್ರೇ ಗುಣಸಮನ್ವಿತೇ ।
ದೇವೇಷ್ವಾಹೂಯಮಾನೇಷು ಸ್ಥಿತೇಷು ಪರಮರ್ಷಿಷು ॥೯॥

ವಿಧ್ಯುಕ್ತವಾದ ರೀತಿಯಲ್ಲಿ ಯಜ್ಞವು ನಡೆಯುತ್ತಿತ್ತು. ಉತ್ತಮ ಗುಣಯುಕ್ತವಾದ ಆಹುತಿಗಳನ್ನು ನೀಡುತ್ತಾ ಋಷಿಗಳು ಕ್ರಮವಾಗಿ ದೇವತೆಗಳನ್ನು ಮಂತ್ರಪೂರ್ವಕವಾಗಿ ಕರೆಯುತ್ತಿದ್ದರು.

ಸುವ್ರತೈಸ್ತೈಸ್ತದಾ ವಿಪ್ರೈಃ ಸ್ವಾಗಮೈಃ ಸುಸ್ವರೈರ್ನೃಪ ।
ಅಶ್ರಾಂತೈಶ್ಚಾಪಿ ಲಘುಭಿರಧ್ವರ್ಯುರ್ವೃಷಭೈಸ್ತಥಾ ॥೧೦॥

ಆ ಶ್ರೇಷ್ಠವಾದ ಯಜ್ಞದಲ್ಲಿ ಬ್ರಾಹ್ಮಣರೆಲ್ಲರೂ ವ್ರತನಿಷ್ಠರಾಗಿ, ನಿರಂತರವೂ ಚತುರ್ವೇದಗಳನ್ನು ಸುಸ್ವರವಾಗಿ ಪಠಿಸುತ್ತಿರುವಾಗ ಪಶುಗಳ ಆಲಂಭನದ (ವಧೆಯ) ಸಮಯವು ಸನ್ನಿಹಿತವಾಯಿತು.

ಆಲಂಭಸಮಯೇ ತಸ್ಮಿನ್ ಗೃಹೀತೇಷು ಪಶುಷ್ವಥ ।
ಮಹರ್ಷಯೋ ಮಹಾರಾಜ ಸಂಬಭೂವುಃ ಕೃಪಾನ್ವಿತಾಃ ॥೧೧॥

ಆ ಪಶುವಿನ ಆಲಂಭನದ ಸಮಯದಲ್ಲಿ ಹಿಡಿದುಕೊಂಡು ಬಂದಿರುವ ಪಶುಗಳನ್ನು ನೋಡಿ ಮಹರ್ಷಿಗಳು ಜನಮೇಜಯನೇ, ಆ ಪಶುಗಳ ಮೇಲೆ ಅತ್ಯಂತ ಕರುಣೆಯನ್ನು ಹೊಂದಿದರು.

ತತೋ ದೀನಾನ್ ಪಶೂನ್ ದೃಷ್ಟ್ವಾ ಋಷಯಸ್ತೇ ತಪೋಧನಾಃ ।
ಊಚುಃ ಶಕ್ರಂ ಸಮಾಗಮ್ಯ ನಾಯಂ ಯಜ್ಞವಿಧಿಃ ಶುಭಃ ॥೧೨॥

ತಪೋಧನರಾದ ಮಹರ್ಷಿಗಳು ದುಃಖಿತವಾಗಿರುವ ಪಶುಗಳನ್ನು ನೋಡಿ ಇಂದ್ರನನ್ನು ಸಂಪರ್ಕಿಸಿ ಪಶುಬಲಿಯಿಂದ ಕೂಡಿರುವ ಯಜ್ಞವು ಶುಭವಲ್ಲವೆಂದು ಹೇಳಿದರು.

ಅಪರಿಜ್ಞಾನಮೇತತ್ ತೇ ಮಹಾಂತಂ ಧರ್ಮಮಿಚ್ಛತಃ ।
ನ ಹಿ ಯಜ್ಞೇ ಪಶುವಧೋ ವಿಧಿದೃಷ್ಟಃ ಪುರಂದರ ॥೧೩॥

ಇಂದ್ರನೇ, ನೀನು ಯಜ್ಞದ ಮೂಲಕ ಮಹಾಪುಣ್ಯ ಸಂಪಾದಿಸಬೇಕೆಂದು ಬಯಸಿರುವಿ. ಆದರೆ ಅಜ್ಞಾನದಿಂದ ಪಶುಬಲಿಯಿಂದ ಉದ್ಯುಕ್ತನಾಗಿರುವಿ. ಯಜ್ಞದಲ್ಲಿ ಪಶುಗಳನ್ನು ಬಲಿ ಕೊಡುವುದು ಶಾಸ್ತ್ರಸಮ್ಮತವಲ್ಲ.

ಧರ್ಮೋಪಘಾತಕಸ್ತ್ವೇಷ ಸಮಾರಂಭಸ್ತವ ಪ್ರಭೋ ।
ನಾಯಂ ಧರ್ಮಕೃತೇ ಯಜ್ಞೋ ನ ಹಿಂಸಾ ಧರ್ಮ ಉಚ್ಯತೇ ॥೧೪॥

ಪಶುಗಳ ಆಲಂಭನದಿಂದ ಕೂಡಿರುವ ಈ ಯಜ್ಞವು ಧರ್ಮಕ್ಕೆ ಅನ್ಯಾಯವನ್ನೇ ಉಂಟು ಮಾಡುತ್ತದೆ. ಹಿಂಸೆಯಿಂದ ಕೂಡಿರುವ ಯಜ್ಞವು ಎಂದಿಗೂ ಧರ್ಮದಿಂದ ಕೂಡಿರುವುದಿಲ್ಲ.

ಆಗಮೇನೈವ ತೇ ಯಜ್ಞಂ ಕುರ್ವಂತು ಯದಿಹೇಚ್ಛಸಿ ।
ವಿಧಿದೃಷ್ಟೇನ ಯಜ್ಞೇನ ಧರ್ಮಸ್ತೇ ಸುಮಹಾನ್ ಭವೇತ್ ॥೧೫॥

ನಿನ್ನ ಇಚ್ಛೆಯಂತೆ ಬ್ರಾಹ್ಮಣರು ಶಾಸ್ತ್ರವಿಧಿಗೆ ಅನುಸಾರವಾಗಿ ಯಜ್ಞವನ್ನು ಆಚರಿಸಲಿ. ಶಾಸ್ತ್ರಬದ್ಧವಾಗಿ ಮಾಡುವ ಯಜ್ಞದಿಂದ ಮಹತ್ತರವಾದ ಪುಣ್ಯ ಲಾಭವಾಗುತ್ತದೆ.

ಯಜ ಬೀಜೈಃ ಸಹಸ್ರಾಕ್ಷ ತ್ರಿವರ್ಷಪರಮೋತ್ಥಿತೈಃ ।
ಏಷ ಧರ್ಮೋ ಮಹಾನ್ ಶಕ್ರ ಮಹಾಗುಣಫಲೋದಯಃ ॥೧೬॥

ಸಹಸ್ರಾಕ್ಷನೇ, ಮೂರು ವರ್ಷ ಹಳೆಯದಾದ ಗೋಧಿ ಮೊದಲಾದ ಧಾನ್ಯಗಳಿಂದ ಯಜ್ಞವನ್ನು ಆಚರಿಸು. ಅದು ಯಜ್ಞವೆನಿಸುತ್ತದೆ. ಇಂದ್ರನೇ, ಈ ರೀತಿಯಾದ ಯಜ್ಞವು ನಿನಗೆ ಮಹಾಫಲವನ್ನು ನೀಡುತ್ತದೆ.

ಶತಕ್ರತುಸ್ತು ತದ್ ವಾಕ್ಯಮೃಷಿಭಿಸ್ತತ್ತ್ವದರ್ಶಿಭಿಃ ।
ಉಕ್ತಂ ನ ಪ್ರತಿಜಗ್ರಾಹ ಮಾನಮೋಹವಶಾನುಗಃ ॥೧೭॥

ತತ್ತ್ವದರ್ಶಿಗಳಾದ ಋಷಿಗಳು ಹೇಳಿದ ಮಾತನ್ನು ಇಂದ್ರನು ಸ್ವೀಕರಿಸಲಿಲ್ಲ. ಕಾರಣ, ಯಜ್ಞವನ್ನು ವಿಧಾನ ಮಾಡುವ ವೇದಗಳು ಪ್ರಾಮಾಣಿಕವಾಗಿರುತ್ತವೆ. ಈ ವಿಷಯವನ್ನರಿಯದ ಋಷಿಗಳು ಈ ಕಾಲದಲ್ಲಿ ಮಿಥ್ಯಾಜ್ಞಾನ ವಶರಾಗಿದ್ದಾರೆ. ಆದ್ದರಿಂದ ಅವರ ಮಾತನ್ನು ಅನುಸರಿಸುವುದು ಉಚಿತವಲ್ಲ ಎಂದು ಇಂದ್ರದೇವನು ಋಷಿಗಳ ಮಾತನ್ನು ಸ್ವೀಕರಿಸಲಿಲ್ಲ. ಋಷಿಗಳ ಮಾತೆಲ್ಲವೂ ಅವೈದಿಕವಾದ ಪಾಷಂಡ ಮತ ಎಂದು ಉಪೇಕ್ಷಿಸಿದನು ಎಂದು ಭಾವ.

ತೇಷಾಂ ವಿವಾದಃ ಸುಮಹಾನ್ ಜಜ್ಞೇ ಶಕ್ರಮಹರ್ಷಿಣಾಮ್ ।
ಜಂಗಮೈಃ ಸ್ಥಾವರೈಶ್ಚಾಪಿ ಯಷ್ಟವ್ಯಮಿತಿ ಭಾರತ ॥೧೮॥

ಇಂದ್ರನ ಯಜ್ಞದ ಸಮಯದಲ್ಲಿ ತಪಸ್ವಿಗಳಲ್ಲಿ ಪರಸ್ಪರ ವಿವಾದವೇ ಉಂಟಾಯಿತು. ಜಂಗಮ ಪ್ರಾಣಿಗಳೆನಿಸಿದ ಆಡು-ಕುದುರೆಗಳ ಮೂಲಕ ಯಜ್ಞ ಮಾಡಬೇಕೆಂದು ಕೆಲವರು ಗೋಧಿ ಮೊದಲಾದ ಧಾನ್ಯಗಳಿಂದ ಯಜ್ಞ ಮಾಡಬೇಕೆಂದು ಕೆಲವರು- ಹೀಗೆ ವಿವಾದವು ಆರಂಭವಾಯಿತು.

ತೇ ತು ಖಿನ್ನಾ ವಿವಾದೇನ ಋಷಯಸ್ತತ್ತ್ವದರ್ಶಿನಃ ।
ಅಭಿಸಂಧಾಯ ಶಕ್ರೇಣ ಪಪ್ರಚ್ಛುರ್ನೃಪತಿಂ ವಸುಮ್ ॥೧೯॥

ತತ್ತ್ವದರ್ಶಿಗಳಾದ ಋಷಿಗಳು ಈ ಚರ್ಚೆಯಿಂದ ಬಹಳ ದುಃಖಿತರಾದರು. ಆ ಸಂದರ್ಭದಲ್ಲಿ ಅವರೆಲ್ಲರೂ ಇಂದ್ರನ ಬಳಿ ಸಮಾಲೋಚಿಸಿ ಉಪರಿಚರ ವಸುವಿನ ಬಳಿ ಹೋಗಿ ಈ ವಿಷಯದಲ್ಲಿ ಪ್ರಶ್ನಿಸಿದರು.

ಋಷಯಃ

ಮಹಾಪ್ರಾಜ್ಞ ಕಥಂ ಯಜ್ಞೇಷ್ವಾಗಮೋ ನೃಪತೇ ಸ್ಮೃತಃ ।
ಯಷ್ಟವ್ಯಂ ಪಶುಭಿರ್ಮೇಧ್ಯೈರಥೋ ಬೀಜೈರಜೈರಿತಿ ॥೨೦॥

ಋಷಿಗಳು– ಮಹೀಪತಿಯೇ, ಧರ್ಮದ ವಿಷಯದಲ್ಲಿ ನಾವೆಲ್ಲರೂ ಸಂದೇಹಗ್ರಸ್ಥರಾಗಿದ್ದೇವೆ. ನೀನೇ ಸತ್ಯ ಹೇಳು. ಆಡು-ಕುದುರೆ ಮುಂತಾದವುಗಳಿಂದ

ಯಜ್ಞವನ್ನು ಆಚರಿಸಬೇಕೋ ಅಥವಾ ಫಲವನ್ನು ನೀಡದಿರುವ ಗೋಧಿ ಮೊದಲಾದ ಬೀಜಗಳಿಂದ ಯಜ್ಞವನ್ನು ಆಚರಿಸಬೇಕೋ? ನೀನೇ ತಿಳಿಸು.

ವೈಶಂಪಾಯನಃ

ತಚ್ಛ್ರುತ್ವಾ ತು ವಸುಸ್ತೇಷಾಮವಿಚಾರ್ಯ ಬಲಾಬಲಮ್ ।
ಯಥೋಪನೀತೈರ್ಯಷ್ಟವ್ಯಮಿತಿ ಪ್ರೋವಾಚ ಪಾರ್ಥಿವಃ ॥೨೧॥

ವೈಶಂಪಾಯನ– ಜನಮೇಜಯನೇ, ಉಪರಿಚರ ವಸುವು ಅವರ ಮಾತುಗಳನ್ನು ಕೇಳಿಸಿಕೊಂಡು, ಪಕ್ಷ-ಪ್ರತಿಪಕ್ಷಗಳ ಸಾರಾಸಾರವನ್ನು ವಿಚಾರ ಮಾಡದೆ ಸಾಮಾನ್ಯವಾಗಿ ಹೀಗೆ ಉತ್ತರಿಸಿದನು: ಋಷಿಗಳೇ, ಪಶುಗಳು ಲಭಿಸಿದಾಗ ಪಶುಗಳಿಂದ ಯಜ್ಞವನ್ನು ಮಾಡಬೇಕು. ಧಾನ್ಯಗಳು ಲಭಿಸಿದಾಗ ಧಾನ್ಯದಿಂದಲೂ ಯಜ್ಞವನ್ನು ಮಾಡಬೇಕು ಎಂದು ಸಾಮಾನ್ಯವಾಗಿ ಉತ್ತರಿಸಿದನು. ವೈದಿಕ ಯಜ್ಞವನ್ನೇ ಮಾಡಬೇಕು ಎಂದು ಹೇಳಲಿಲ್ಲ.

ಧರ್ಮಸಂಶಯಮಾಪನ್ನಾನ್ ಸತ್ಯಂ ಬ್ರೂಹಿ ಮಹಾಮತೇ ।
ಮಹಾಭಾಗ ಕಥಂ ಯಜ್ಞೇಷ್ವಾಗಮೇ ನೃಪತಿಸ್ಥಿತೇ ॥೨೨॥

ಉಪರಿಚರ ವಸುವು ಹೀಗೆ ಪ್ರಾಮಾಣಿಕವಾದ ಆಡು ಮೊದಲಾದವಿಂದ ಯಜ್ಞ ಮಾಡುವಿಕೆಯು ಕ್ಷತ್ರಿಯರಿಗೆ ಯೋಗ್ಯವಾಗಿದೆ ಎಂಬ ವೇದಗಳಿದ್ದರೂ ಅವುಗಳನ್ನು ಉದಾಹರಿಸದೆ ಸಾಮಾನ್ಯವಾಗಿ ಮಾತನಾಡಿದಾಗ ಸಂಶಯಗ್ರಸ್ಥರಾದ ಅವರೆಲ್ಲರೂ ಸತ್ಯವನ್ನು ತಿಳಿಯಲು ಪುನಃ ಪ್ರಶ್ನಿಸಿದರು.

ಏವಮುಕ್ತೇ ಸ ನೃಪತಿಃ ಪ್ರವಿವೇಶ ರಸಾತಲಮ್ ।
ಉಕ್ತೇ ತ್ವೇಹ ವಿತಥಂ ರಾಜನ್ ಚೇದೀನಾಮೀಶ್ವರಃ ಪ್ರಭುಃ ॥೨೩॥

ಮಹರ್ಷಿಗಳ ಪ್ರಶ್ನೆಗೆ ಉಪರಿಚರ ವಸುವು ಪುನಃ ಹಾಗೆಯೇ ಉತ್ತರಿಸಿದನು. ಸರಿಯಾದ ನಿರ್ಣಯವನ್ನು ನೀಡದ ಕಾರಣದಿಂದ, ಚೇದಿದೇಶರಾಜನಾದ ಉಪರಿಚರ ವಸುವು ರಸಾತಲ ಲೋಕಕ್ಕೆ ಹೊರಟು ಹೋದನು.

ಅನ್ಯಾಯೋಪಗತಂ ದ್ರವ್ಯಂ ಸತತಂ ಯೋಽಹ್ಯಪಂಡಿತಃ ।
ಧರ್ಮಾಭಿಕಾಂಕ್ಷೀ ತ್ಯಜತಿ ನ ಧರ್ಮಫಲಮಶ್ನುತೇ ॥೨೪॥

ಅನ್ಯಾಯದಿಂದ ಆರ್ಜಿತವಾದ ದ್ರವ್ಯವನ್ನು ಭಂಡನಾದವನು ಧರ್ಮದ ಬುದ್ಧಿಯಿಂದ ದಾನ ಮಾಡಿದಲ್ಲಿ ಆತನು ಧರ್ಮದ ಫಲವನ್ನು ಹೊಂದುವುದಿಲ್ಲ.

ಧರ್ಮವೈತಂಸಿಕೋ ಹ್ಯೇಷ ಪಾಪಾತ್ಮಾ ಪುರುಷಾಧಮಃ ।
ದದಾತಿ ದಾನಂ ವಿಪ್ರೇಭ್ಯೋ ಲೋಕೇ ವಿಶ್ವಾಸಕಾರಕಮ್ ॥೨೫॥

ಯಾವನು ಅಧರ್ಮಾರ್ಜಿತವಾದ ಪದಾರ್ಥಗಳನ್ನು ಧರ್ಮದ ಹೆಸರಿನಲ್ಲಿ ದಾನ ಮಾಡುತ್ತಾನೋ ಅವನು ಧರ್ಮಕ್ಕೇ ಅನ್ಯಾಯ ಮಾಡಿದವನು: ಪುರುಷಾಧಮ ಎನಿಸುತ್ತಾನೆ. ಧರ್ಮವನ್ನು ಮಾಡಿದವನಂತೆ ಬ್ರಾಹ್ಮಣರಿಗೆ ವಿಶ್ವಾಸ ಹುಟ್ಟಿಸಿ ಆತನು ದಾನ ಮಾಡಿರುತ್ತಾನೆ.

ಪಾಪೇನ ಕರ್ಮಣಾ ವಿಪ್ರೋ ಧನಂ ಲಬ್ಧ್ವಾ ನಿರಂಕುಶಃ ।
ರಾಗಮೋಹಾನ್ವಿತಃ ಸೋಽಂತೇ ಕುಲಘಾಂ ಗತಿಮಶ್ನುತೇ ॥೨೬॥

ಈ ಪಾಪಕರ್ಮದಿಂದಾಗಿ ರಾಗ-ಮೋಹಗಳಿಂದ ಧರ್ಮದ ಬುದ್ಧಿಯಿಲ್ಲದೆ ಹಣವನ್ನೂ ಸಂಗ್ರಹಿಸಿ ದಾನ ಮಾಡಿದರೂ ಕೊನೆಗೆ ಅವನು ನರಕಕ್ಕೇ ಹೋಗುತ್ತಾನೆ.

ತೇನ ದಾನಾನಿ ದತ್ತಾನಿ ಪಾಪೇನ ಹತಬುದ್ಧಿನಾ ।
ತಾನಿ ಸತ್ವಮನಾಸಾದ್ಯ ನಶ್ಯಂತಿ ವಿಪುಲಾನ್ಯಪಿ ॥೨೭॥

ಅಶುದ್ಧ ಬುದ್ಧಿಯವನಾದ ವ್ಯಕ್ತಿಯಿಂದ ಮೂಡಲ್ಪಟ್ಟ ದಾನವು ಎಷ್ಟೇ ಅಧಿಕವಾಗಿದ್ದರೂ ಅದು ಸಾತ್ವಿಕವೆನಿಸದೆ ಸತ್ಫಲವನ್ನು ನಾಶಮಾಡುತ್ತದೆ. ಇದರಿಂದ ಹಾನಿಗೀಡಾಗುತ್ತಾನೆ.

ತಸ್ಯಾಧರ್ಮೇ ಪ್ರವೃತ್ತಸ್ಯ ಹಿಂಸಕಸ್ಯ ದುರಾತ್ಮನಃ ।
ಏತೇನಾಕೀರ್ತಿರ್ಭವತಿ ಪ್ರೇತ್ಯ ಚೇಹ ಚ ದುರ್ಮತೇಃ ॥೨೮॥

ಅಧರ್ಮಪ್ರವೃತ್ತನಾದ ಹಿಂಸಾಕಾರ್ಯಗಳನ್ನು ಮಾಡುತ್ತಿರುವ ವ್ಯಕ್ತಿಗೆ ಇದರಿಂದ ಅಕೀರ್ತಿಯೇ ಉಂಟಾಗುತ್ತದೆ. ಪರಲೋಕವು ಲಭಿಸುವುದಿಲ್ಲ.

ಅಪಿ ಸಂಶಯಬುದ್ಧಿರ್ಹಿ ಲೋಭಮೋಹವಶಾನುಗಃ ।
ಯಜ್ಞಂ ಕರೋತಿ ಭೂತಾನಿ ಹಿಂಸಯನ್ ಪಾಪಚೇತನಃ ॥೨೯॥

ಲೋಭ, ಮೋಹಗಳಿಗೆ ವಶನಾಗಿ, ಸಂಶಯ ಬುದ್ಧಿಯನ್ನು ಹೊಂದಿದವನಾಗಿ ಯಾವನು ಪಶುಹಿಂಸಾ ರೂಪವಾದ ಯಜ್ಞವನ್ನು ಮಾಡುತ್ತಾನೋ ಅವನು ಪಾಪಚೇತನನೇ ಎನಿಸುತ್ತಾನೆ.

ಏವಂ ಲಬ್ಧ್ವಾ ಧನಂ ಮೋಹಾದ್ ಯಜತೇ ಯೋ ದದಾತಿ ಚ ।
ಸ ಕೃತ್ವಾ ಕರ್ಮಣಾ ತೇನ ನ ಸಿದ್ಧ್ಯತಿ ದುರಾಗಮಾತ್ ॥೩೦॥

ಯಾವನು ಅನ್ಯಾಯದಿಂದ, ಮೋಹದಿಂದ ಧನವನ್ನು ಸಂಗ್ರಹಿಸಿ, ಧರ್ಮದ ಹೆಸರಿನಲ್ಲಿ ಯಜ್ಞವನ್ನು ಆಚರಿಸುತ್ತಾನೋ ಅವನು ಆ ಕರ್ಮದಿಂದ ಉತ್ತಮವಾದ ಸಿದ್ಧಿಯನ್ನು ಹೊಂದುವುದಿಲ್ಲ. ಅನ್ಯಾಯದಿಂದ ಉಪಾರ್ಜಿತವಾದ ಧನವು ಯಜ್ಞಕ್ಕೆ ಯೋಗ್ಯ ಎಂದು ಭಾವಿಸುವುದು ದುರಾಗಮದ ಕಲ್ಪನೆಯಾಗಿದೆ.

ಇಚ್ಛನ್ ಮೂಲಂ ಫಲಂ ಶಾಕಮುದಪಾನಂ ತಪೋವನಮ್ ।
ದಾನಂ ವಿಭವತೋ ದತ್ತ್ವಾ ತತಃ ಸ್ವರ್ಯಾತಿ ಧಾರ್ಮಿಕಃ ॥೩೧॥

ಯಾವನು ಪುಣ್ಯವನ್ನು ನೀಡುವ ಗೆಡ್ಡೆ-ಗೆಣಸುಗಳನ್ನು, ಹಣ್ಣುಗಳನ್ನು, ತರಕಾರಿಗಳನ್ನು, ನೀರನ್ನು ದಾನ ಮಾಡಲು ಬಯಸುತ್ತಾನೋ ಅಂತಹ ದಾನಗಳನ್ನು ಅಥವಾ ಪ್ರಾಮಾಣಿಕವಾದ ಸಂಪತ್ತಿನ ದಾನಗಳನ್ನು ಮಾಡಿದ ಬಳಿಕ ಧಾರ್ಮಿಕನಾದ ಅವನು ಸ್ವರ್ಗಲೋಕವನ್ನು ಹೊಂದುತ್ತಾನೆ.

ಏಷ ಧರ್ಮೋ ಮಹಾಪುಣ್ಯೋ ದಾನಂ ಭೂತದಯಾ ತಥಾ ।
ಬ್ರಹ್ಮಚರ್ಯಂ ತಥಾ ಸತ್ಯಮನುಕ್ರೋಶೋ ಧೃತಿಃ ಕ್ಷಮಾ ॥೩೨॥
ಸನಾತನಸ್ಯ ಧರ್ಮಸ್ಯ ಫಲಮೇತತ್ ಸನಾತನಮ್ ॥೩೩॥

ಇದೇ ಧರ್ಮವು, ಮಹಾಪುಣ್ಯಕರವಾದುದು. ದಾನ, ಪ್ರಾಣಿದಯೆ, ಬ್ರಹ್ಮಚರ್ಯ, ಸತ್ಯನಿಷ್ಠೆ, ಕಾರುಣ್ಯ, ಧೈರ್ಯ, ಕ್ಷಮೆ ಇವುಗಳು ಸನಾತನ ಧರ್ಮದ ಬೇರುಗಳೆನಿಸಿವೆ.

ಶ್ರೂಯಂತೇ ಹಿ ಪುರಾ ವಿಪ್ರಾ ವಿಶ್ವಾಮಿತ್ರಾದಯೋ ನೃಪಾಃ ॥೩೪॥

ವಿಶ್ವಾಮಿತ್ರರೇ ಮೊದಲಾದ ರಾಜರು ಇದರಿಂದಲೇ ಸಿದ್ಧಿಪಡೆದಿದ್ದಾರೆಂಬುದನ್ನು ನಾವು ಕೇಳಿದ್ದೇವೆ.

ವಿಶ್ವಾಮಿತ್ರೋಽಸಿತಶ್ಚೈವ ಜನಕಶ್ಚ ಮಹೀಪತಿಃ ।
ಕಕ್ಷಸೇನಾರ್ಷ್ಟಿಷೇಣೌ ಚ ಸಿಂಧುದಿರ್ಯಿಪಶ್ಚ ಪಾರ್ಥಿವಃ ॥೩೫॥

ಏತೇ ಚಾನ್ಯೇ ಚ ಬಹವಃ ಸಿದ್ಧಿಂ ಪರಮಿಕಾಂ ಗತಾಃ ।
ನೃಪಾಃ ಸತ್ಯೈಶ್ಚ ದಾನೈಶ್ಚ ನ್ಯಾಯಲಬ್ಧೈಸ್ತಪೋಧನಾಃ ॥೩೬॥

ವಿಶ್ವಾಮಿತ್ರ, ಅಸಿತ, ಜನಕ, ಕಕ್ಷಸೇನ, ಆರ್ಷ್ಟಿಷೇಣ, ಸಿಂಧುದಿರ್ಯಿಪ ಇವರೇ ಮೊದಲಾದ ಅನೇಕ ರಾಜರು ಪ್ರಾಮಾಣಿಕವಾದ ಯಜ್ಞಗಳನ್ನಾಚರಿಸಿ, ನ್ಯಾಯಲಬ್ಧವಾದ ಸಂಪತ್ತುಗಳನ್ನು ದಾನ ಮಾಡಿದ ವ್ಯಕ್ತಿಗಳು, ಸತ್ಯವಾದ ಧರ್ಮಾಚರಣೆಯ ಫಲದಿಂದ ಸಿದ್ಧಿಯನ್ನು ಪಡೆದಿರುತ್ತಾರೆ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಯೇ ಚಾಶ್ರಿತಾಸ್ತಪಃ ।
ದಾನಧರ್ಮಾಶ್ರಿತಾಃ ಶುದ್ಧಾಸ್ತೇ ಸ್ವರ್ಗಂ ಯಾಂತಿ ಭಾರತ ॥೩೭॥

ಎಲೈ ಭಾರತನೇ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವರಲ್ಲಿ ಯಾರೇ ಆಗಲಿ, ತಪಸ್ಸನ್ನು ಆಚರಿಸಿ ದಾನ, ಧರ್ಮ ಎಂಬ ಅಗ್ನಿಯಿಂದ ಪರಿಶುದ್ಧರಾಗುತ್ತಾರೋ ಅವರು ಸ್ವರ್ಗಕ್ಕೆ ಹೋಗುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ದಾನಧರ್ಮತಪಃಪ್ರಶಂಸನಂ ನಾಮ
ಚತುರ್ನವತಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೈದನೆಯ ಅಧ್ಯಾಯ

ವೈಶಂಪಾಯನರು ಜನಮೇಜಯರಾಜನಿಗೆ ಧ್ಯಾನ-ದಾನಾದಿಗಳು ಸಿದ್ಧಿಗೆ ಕಾರಣವಾಗುತ್ತವೆ ಎಂದು ತಿಳಿಸಲು ಅಗಸ್ತ್ಯಮಹರ್ಷಿಗಳ ಯಜ್ಞದ ಕಥೆಯನ್ನು ಹೇಳಿದುದು.

ಜನಮೇಜಯಃ

ಧರ್ಮಾಗತೇನ ತ್ಯಾಗೇನ ಭಗವಾನ್ ಸರ್ವಮಸ್ತಿ ಚೇತ್ ।
ಏತನ್ಮೇ ಸರ್ವಮಾಚಕ್ಷ್ವ ಕುಶಲೋ ಹ್ಯಸಿ ಭಾಷಿತುಮ್ ॥೧॥

ಜನಮೇಜಯ– ಪೂಜ್ಯರೇ, ಧರ್ಮದಿಂದ ಹಣವನ್ನು ಸಂಪಾದಿಸಿ ಅದನ್ನು ತ್ಯಾಗ ಮಾಡಿದರೆ ಸ್ವರ್ಗಲೋಕವು ಪ್ರಾಪ್ತವಾಗುತ್ತದೆ ಎಂದು ಹೇಳಿದಿರಿ. ನೀವು ಪ್ರವಚನ ಮಾಡುವುದರಲ್ಲಿ ಮೇಧಾವಿಗಳಾಗಿದ್ದೀರಿ. ಇದೇ ವಿಷಯದ ಬಗ್ಗೆ ನನಗೆ ವಿಸ್ತಾರವಾಗಿ ತಿಳಿಸಿರಿ.

ತಸ್ಯೋಂಛವೃತ್ತೇರ್ಯದ್ ವೃತ್ತಂ ಸಕ್ತುದಾನಂ ಮಹಾಫಲಮ್ ।
ಕಥಿತಂ ಮೇ ಮಹದ್ ಬ್ರಹ್ಮನ್ ತಥ್ಯಮೇತದಸಂಶಯಮ್ ॥೨॥

ಉಂಛವೃತ್ತಿಯನ್ನು ಮಾಡುವ ಬ್ರಾಹ್ಮಣನು ನ್ಯಾಯಮಾರ್ಗದಲ್ಲಿ ಸಂಪಾದಿಸಿದ ಹಿಟ್ಟನ್ನು ದಾನ ಮಾಡಿ ಎಂತಹ ಫಲವನ್ನು ಹೊಂದಿದನು ಎಂಬುದನ್ನು ತಿಳಿಸಿದ್ದೀರಿ. ನೀವು ಹೇಳಿದ ವಿಷಯವೆಲ್ಲ ಯಥಾರ್ಥವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಕಥಂ ಹಿ ಸರ್ವಯಜ್ಞೇಷು ನಿಶ್ಚಯಃ ಪರಮೋ ಭವೇತ್ ।
ಏತದರ್ಹಸಿ ಮೇ ವಕ್ತುಂ ನಿಖಿಲೇನ ದ್ವಿಜರ್ಷಭ ॥೩॥

ಆದರೆ ಎಲ್ಲ ಯಜ್ಞಗಳ ವಿಷಯದಲ್ಲಿಯೂ ಹೀಗೆ ನಿರ್ಣಯವನ್ನು ಮಾಡಬಹುದೇ? ಯಜ್ಞಕ್ಕೆ ಮಹತ್ವವೇ ಇರುವುದಿಲ್ಲವೇ? ಇದರ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡಿರಿ.

ವೈಶಂಪಾಯನಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅಗಸ್ತ್ಯಸ್ಯ ಮಹಾಯಜ್ಞೇ ಪುರಾ ವೃತ್ತಮರಿಂದಮ ॥೪॥

ವೈಶಂಪಾಯನ– ಜನಮೇಜಯನೇ, ಈ ವಿಷಯದಲ್ಲಿ ಹಿಂದೆ ಅಗಸ್ತ್ಯರು ಮಹಾಯಾಗವನ್ನು ಮಾಡುತ್ತಿದ್ದಾಗ ನಡೆದ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಪುರಾऽಗಸ್ತ್ಯೋ ಮಹಾತೇಜಾ ದೀಕ್ಷಾಂ ದ್ವಾದಶವಾರ್ಷಿಕೀಮ್ ।
ಪ್ರವಿವೇಶ ಮಹಾರಾಜ ಸರ್ವಭೂತಹಿತೇ ರತಃ ॥೫॥

ಹಿಂದೆ ಎಲ್ಲ ಪ್ರಾಣಿಗಳ ಹಿತವನ್ನು ಬಯಸುವ, ಮಹಾತೇಜಸ್ವಿಗಳಾದ ಅಗಸ್ತ್ಯರು ಹನ್ನೆರಡು ವರ್ಷಗಳಲ್ಲಿ ಮುಗಿಯುವ ಮಹಾಯಜ್ಞವೊಂದರಲ್ಲಿ ದೀಕ್ಷಿತರಾದರು.

ತತ್ರಾಗ್ನಿಕಲ್ಪಾ ಹೋತಾರಶ್ಚಾಸನ್ ಸರ್ವೇ ಮಹಾತ್ಮನಃ ।
ಮೂಲಹಾರಾ ನಿರಾಹಾರಾಶ್ಚಾಶ್ಮಕುಟ್ಟಾ ಮರೀಚಿಪಾಃ ॥೬॥

ಆ ಮಹಾಯಜ್ಞದಲ್ಲಿ ಯಜ್ಞೇಶ್ವರನಿಗೆ ಸಮಾನರಾದ, ತೇಜಸ್ವಿಗಳಾದ ಹೋತೃಗಳಿದ್ದರು. ಅವರು ಫಲ-ಮೂಲಗಳನ್ನೇ ಆಹಾರವನ್ನಾಗಿ ಮಾಡಿಕೊಂಡಿದ್ದರು. ತಿನ್ನುವ ಪದಾರ್ಥಗಳನ್ನು ಕಲ್ಲಿನಲ್ಲಿ ಜಜ್ಜಿ ತಿನ್ನುತ್ತಿದ್ದರು. ಸೂರ್ಯನ ಕಿರಣಗಳನ್ನೇ ಪಾನ ಮಾಡುತ್ತಿದ್ದರು.

ಪರಿಪುಷ್ಪಿಕಾ ವೈಘಸಿಕಾಃ ಪ್ರಸಂಖ್ಯಾನಾಸ್ತಥೈವ ಚ ।
ಯತಯೋ ಭಿಕ್ಷವಶ್ಚಾತ್ರ ಬಭೂವುಃ ಪರ್ಯವಸ್ಥಿತಾಃ ॥೭॥

ಇನ್ನೊಬ್ಬರು ಕೊಟ್ಟ ಆಹಾರವನ್ನು ಮಾತ್ರ ಸೇವಿಸುತ್ತಿದ್ದ ಪರಿಪುಷ್ಪಿಕರು, ಯಜ್ಞವಾದ ಬಳಿಕವೇ ಊಟ ಮಾಡುವ ವೈಘಸಿಕರು, ಸದಾ ಕಾಲವೂ ಭಗವಂತನ ಬಗ್ಗೆಯೇ ಚಿಂತೆ ಮಾಡುತ್ತಿದ್ದ ಪ್ರಸಂಖ್ಯಾನರು, ಯತಿಗಳು, ಭಿಕ್ಷುಗಳು ಅರ್ಥಾತ್ ಬ್ರಹ್ಮಚಾರಿಗಳು ಆ ಯಜ್ಞದಲ್ಲಿ ಭಾಗವಹಿಸಿದ್ದರು.

ಸರ್ವೇ ಪ್ರತ್ಯಕ್ಷಧರ್ಮಾಣೋ ಜಿತಕ್ರೋಧಾ ಜಿತೇಂದ್ರಿಯಾಃ ।
ದಮೇ ಸ್ಥಿತಾಶ್ಚ ಸರ್ವೇ ತೇ ದಂಭಮೋಹವಿವರ್ಜಿತಾಃ ॥೮॥

ಎಲ್ಲರೂ ಧರ್ಮದ ಬಗ್ಗೆ ಎಚ್ಚರವನ್ನು ವಹಿಸಿ, ಕಾಮ-ಕ್ರೋಧಗಳನ್ನು ಗೆದ್ದು, ಜಿತೇಂದ್ರಿಯರಾಗಿ, ಇಂದ್ರಿಯ ನಿಗ್ರಹದಲ್ಲಿ ಆಸಕ್ತರಾಗಿ, ದಂಭ-ಮೋಹಗಳಿಂದ ರಹಿತರಾಗಿ ಇದ್ದರು.

ವೃದ್ಧೈಃ ಶುದ್ಧೈಸ್ತಥಾ ನಿತ್ಯಮಿಂದ್ರಿಯೈಶ್ಚಾಪ್ಯವಾಹಿತಾಃ ।
ಉಪಾಸತೇ ಸ್ಮ ತಂ ಯಜ್ಞಂ ಭುಂಜಾನಾಸ್ತೇ ಮಹರ್ಷಯಃ ॥೯॥

ವೃದ್ಧರೂ, ಶುದ್ಧರೂ, ನಿತ್ಯವೂ ಇಂದ್ರಿಯಜಯಶೀಲರೂ ಆದ ಮಹರ್ಷಿಗಳು ಆ ಅಗಸ್ತ್ಯರ ಮಹಾಯಜ್ಞದಲ್ಲಿ ಭಾಗವಹಿಸಿದ್ದರು.

ಯಥಾಶಕ್ತಿ ಭಗವತಾ ತದನ್ನಂ ಸಮುಪಾರ್ಜಿತಮ್ ।
ತಸ್ಮಿನ್ ಸತ್ರೇ ತು ಯತ್ ಕಿಂಚಿತ್ ಅಯೋಗ್ಯಂ ತತ್ರ ನಾಭವತ್ ॥೧೦॥

ಪೂಜ್ಯರಾದ ಅಗಸ್ತ್ಯರು ಆ ಯಜ್ಞಕ್ಕಾಗಿ ತಮ್ಮ ಶಕ್ತಿಗೆ ಅನುಗುಣವಾಗಿ ಶುದ್ಧವಾದ ಅನ್ನವನ್ನೇ ನ್ಯಾಯರೀತಿಯಲ್ಲಿ ಸಂಗ್ರಹಿಸಿದ್ದರು. ಆ ಯಜ್ಞದಲ್ಲಿ ಅಯೋಗ್ಯವಾದ ಯಾವ ವಸ್ತುಗಳೂ ಇರಲಿಲ್ಲ.

ಯಥಾ ಹ್ಯನೇಕೈರ್ಮುನಿಭಿರ್ಬಹವಃ ಕ್ರತವಃ ಕೃತಾಃ ॥೧೧॥

ಅದರಂತೆ ಅಲ್ಲಿ ಸೇರಿದ್ದ ಮುನಿಗಳು ಶುದ್ಧರಾಗಿದ್ದರು. ಅವರೆಲ್ಲರೂ ಮಹಾ ಮಹಾ ಯಜ್ಞಗಳನ್ನು ಮಾಡುತ್ತಿದ್ದರು.

ಏವಂವಿಧೇ ತ್ವಗಸ್ತ್ಯಸ್ಯ ವರ್ತಮಾನೇ ಮಹಾಧ್ವರೇ ।
ನ ವವರ್ಷ ಸಹಸ್ರಾಕ್ಷಃ ತದಾ ಭರತಸತ್ತಮ ॥೧೨॥

ಹೀಗೆ ಅಗಸ್ತ್ಯರ ದ್ವಾದಶವಾರ್ಷಿಕ ಮಹಾಯಜ್ಞವು ನಡೆಯುತ್ತಿರಲು ಇಂದ್ರನು ಮಳೆಯನ್ನು ಸುರಿಸುವುದನ್ನೇ ನಿಲ್ಲಿಸಿದನು.

ತತಃ ಕರ್ಮಾಂತರೇ ರಾಜನ್ನಗಸ್ತ್ಯಸ್ಯ ಮಹಾತ್ಮನಃ ।
ಕಥೇಯಮಭಿನಿರ್ವೃತ್ತಾ ಮುನೀನಾಂ ಭಾವಿತಾತ್ಮನಾಮ್ ॥೧೩॥

ಮಹಾತ್ಮರಾದ ಅಗಸ್ತ್ಯರು ಯಜ್ಞಕರ್ಮದ ಮಧ್ಯದಲ್ಲಿ ಅವಕಾಶವು ಸಿಕ್ಕಾಗ ಪರಸ್ಪರ ಶುದ್ಧ ಅಂತಃಕರಣದಿಂದ ಕೂಡಿದ ಮುನಿಗಳೊಡನೆ ಸೇರಿ ಧಾರ್ಮಿಕವಾದ ವಿಷಯದಲ್ಲಿ ಚರ್ಚಿಸುತ್ತಿದ್ದರು.

ಮುನಯಃ

ಅಗಸ್ತ್ಯೋ ಯಜಮಾನೋऽಯಂ ದದಾತ್ಯನ್ನಂ ವಿಮತ್ಸರಃ ।
ನ ಚ ವರ್ಷತಿ ಪರ್ಜನ್ಯಃ ಕಥಮನ್ನಂ ಭವಿಷ್ಯತಿ ॥೧೪॥

ಮುನಿಗಳು– ಈ ಯಜಮಾನರಾದ ಅಗಸ್ತ್ಯರು ಮಾತ್ಸರ್ಯರಹಿತರಾಗಿ ನಮ್ಮೆಲ್ಲರಿಗೂ ಅನ್ನವನ್ನು ನೀಡುತ್ತಿದ್ದಾರೆ. ನಮಗೆ ಮಳೆಯಿಲ್ಲದಿದ್ದರೂ ಈ ರೀತಿಯಾಗಿ ಅನ್ನವನ್ನು ಹೇಗೆ ನೀಡುತ್ತಿದ್ದಾರೆ?

ಸತ್ರಂ ಚೇದಂ ಮಹದ್ವಿಪ್ರಾ ಮುನೇರ್ದ್ವಾದಶವಾರ್ಷಿಕಮ್ ।
ನ ಹಿ ವರ್ಷತಿ ದೇವಶ್ಚ ವರ್ಷಾಣ್ಯೇತಾನಿ ದ್ವಾದಶ ॥೧೫॥

ಮಳೆಯೇ ಸುರಿಯದೆ ಮುಂದೆ ಅನ್ನವು ದೊರಕುವುದಾದರೂ ಹೇಗೆ? ಈ ದೊಡ್ಡ ದ್ವಾದಶವಾರ್ಷಿಕ ಮಹಾಸತ್ರವು ಹನ್ನೆರಡು ವರ್ಷಗಳ ತನಕ ಮಳೆಗರೆಯದೆ ಇದ್ದಲ್ಲಿ ನಡೆಯುವುದು ಹೇಗೆ?

ಏತದ್ ಭವಂತಃ ಸಂಚಿಂತ್ಯ ಮಹರ್ಷೇರತ್ರ ಧೀಮತಃ ।
ಅಗಸ್ತ್ಯಸ್ಯಾತಿತಪಸಃ ಕರ್ತುಮರ್ಹಂತ್ಯನುಗ್ರಹಮ್ ॥೧೬॥

ಈ ವಿಷಯವನ್ನು ನೀವೆಲ್ಲರೂ ಪರಸ್ಪರ ಸಮಾಲೋಚಿಸಿ, ಮಹಾತಪಸ್ವಿಗಳಾದ, ಬುದ್ಧಿಶಾಲಿಗಳಾದ ಅಗಸ್ತ್ಯಋಷಿಗಳು ಆರಂಭಿಸಿದ ಯಜ್ಞವು ನಿರ್ವಿಘ್ನವಾಗಿ ನಡೆಯುವಂತೆ ಅನುಗ್ರಹಿಸಬೇಕು.

ವೈಶಂಪಾಯನಃ

ಇತ್ಯೇವಮುಕ್ತೇ ವಚನೇ ತತೋಽಗಸ್ತ್ಯಃ ಪ್ರತಾಪವಾನ್ ।
ಪ್ರೋವಾಚೇದಂ ವಚೋ ವಾಗ್ಮೀ ಪ್ರಸಾದ್ಯ ಶಿರಸಾ ಮುನೀನ್ ॥೧೭॥

ವೈಶಂಪಾಯನ– ಯಜ್ಞದಲ್ಲಿ ಭಾಗವಹಿಸಿದ ಒಬ್ಬ ಮಹರ್ಷಿಯು ಇತರ ಋಷಿಗಳನ್ನು ಕುರಿತು ಹೀಗೆ ಹೇಳಿದಾಗ, ಪ್ರತಾಪಶಾಲಿಗಳಾದ ಅಗಸ್ತ್ಯರು ಮುನಿಗಳೆಲ್ಲರಿಗೂ ನಮಸ್ಕರಿಸುತ್ತಾ ಇಂತು ನುಡಿದರು.

ಅಗಸ್ತ್ಯಃ

ಯದಿ ದ್ವಾದಶ ವರ್ಷಾಣಿ ನ ವರ್ಷಿಷ್ಯತಿ ವಾಸವಃ ।
ಚಿಂತಾಯಜ್ಞಂ ಕರಿಷ್ಯಾಮಿ ವಿಧಿರೇಷ ಸನಾತನಃ ॥೧೮॥

ಅಗಸ್ತ್ಯ– ಪೂಜ್ಯರೇ, ಒಂದುವೇಳೆ ಹನ್ನೆರಡು ವರ್ಷಗಳ ಕಾಲ ಇಂದ್ರನು ಮಳೆಯನ್ನು ಸುರಿಸದಿದ್ದಲ್ಲಿ ನಾನು ಮಾನಸಿಕ ಯಜ್ಞವನ್ನೇ ಮಾಡುತ್ತೇನೆ. ಈ ವಿಧಿಯು ಹಿಂದಿನಿಂದಲೂ ನಡೆದು ಬಂದಿದೆ.

ಯದಿ ದ್ವಾದಶ ವರ್ಷಾಣಿ ನ ಚ ವರ್ಷತಿ ವಾಸವಃ ।
ಸ್ವರ್ಶಯಜ್ಞಂ ಕರಿಷ್ಯಾಮಿ ವಿಧಿರೇಷ ಸನಾತನಃ ॥೧೯॥

ಒಂದು ವೇಳೆ ಹನ್ನೆರಡು ವರ್ಷಗಳ ಕಾಲ ಇಂದ್ರನು ಮಳೆಯನ್ನು ಸುರಿಸದಿದ್ದರೆ ಶಾಲಗ್ರಾಮಾದಿಗಳನ್ನು ಮುಟ್ಟಿ ಮಾಡುವ ದೇವಪೂಜಾದಿ ಯಜ್ಞವನ್ನೇ ನಾನು ಮಾಡುತ್ತೇನೆ. ಇದು ಹಿಂದಿನಿಂದ ನಡೆದು ಬಂದ ಪದ್ಧತಿಯಾಗಿದೆ.

ಯದಿ ದ್ವಾದಶ ವರ್ಷಾಣಿ ನ ಚ ವರ್ಷತಿ ವಾಸವಃ ।
ವ್ಯಾಯಾಮೇನಾಹರಿಷ್ಯಾಮಿ ಯಜ್ಞಾನೇತಾನ್ ಯತವ್ರತಃ ॥೨೦॥

ಒಂದು ವೇಳೆ ಹನ್ನೆರಡು ವರ್ಷಗಳ ಕಾಲ ಇಂದ್ರನು ಮಳೆಯನ್ನು ಸುರಿಸದಿದ್ದರೆ ವ್ರತ-ನಿಯಮಗಳನ್ನು ಪರಿಪಾಲಿಸುತ್ತಾ , ತೀರ್ಥಯಾತ್ರೆಗಳನ್ನು ಮಾಡುತ್ತಾ ಇಂತಹ ಸತ್ಕರ್ಮರೂಪವಾದ ಯಜ್ಞವನ್ನೇ ಅನುಷ್ಠಾನ ಮಾಡುತ್ತೇನೆ.

ಬೀಜಯಜ್ಞೋ ಮಯಾऽಯಂ ಭೋ ಬಹುವರ್ಷಸಮಾಚಿತಃ ।
ಬೀಜೈಃ ಕೃತೈಃ ಕರಿಷ್ಯೇ ಚ ನಾತ್ರ ವಿಘ್ನೋ ಭವಿಷ್ಯತಿ ॥೨೧॥

ನಾನು ಬೀಜಯಜ್ಞವನ್ನು ಮಾಡಲೆಂದೇ ಅನೇಕ ವರ್ಷಗಳಿಂದ ಬೀಜವನ್ನು ಸಂಗ್ರಹಿಸಿದ್ದೇನೆ. ಈ ಬೀಜಗಳಿಂದಲೇ ನಾನು ಯಜ್ಞ ಮಾಡುತ್ತೇನೆ. ನನಗೆ ಈ ವಿಷಯದಲ್ಲಿ ಯಾವ ವಿಘ್ನವೂ ಇರುವುದಿಲ್ಲ.

ನೇದಂ ಶಕ್ಯಂ ವೃಥಾ ಕರ್ತುಂ ಮಮ ಸತ್ರಂ ಕಥಂಚನ ।
ನ ವರ್ಷಿಷ್ಯತಿ ವಾ ದೇವೋ ನ ವಾ ದೇವೋ ಭವಿಷ್ಯತಿ ॥೨೨॥

ಇಂದ್ರನು ಇಲ್ಲಿ ಮಳೆ ಸುರಿಸಲಿ ಬಿಡಲಿ, ನಾನು ಆರಂಭಿಸಿರುವ ಯಾಗವನ್ನು ಮಾತ್ರ ಯಾವುದೇ ಕಾರಣದಿಂದಲೂ ವ್ಯರ್ಥವಾಗಲು ಬಿಡುವುದಿಲ್ಲ.

ಅಥವಾऽಭ್ಯರ್ಥನಾಮಿಂದ್ರಃ ಕುರ್ಯಾನ್ನ ತ್ವಿಹ ಕಾಮತಃ ।
ಸ್ವಯಮಿಂದ್ರೋ ಭವಿಷ್ಯಾಮಿ ಜೀವಯಿಷ್ಯಾಮಿ ಚ ಪ್ರಜಾಃ ॥೨೩॥

ಅಥವಾ ನಾನು ಇಂದ್ರನ ಬಳಿ ಮಳೆಯನ್ನು ಸುರಿಸೆಂದು ಪ್ರಾರ್ಥಿಸುತ್ತೇನೆ. ನನ್ನ ಪ್ರಾರ್ಥನೆಯನ್ನು ಇಂದ್ರನು ನಿರಾಕರಿಸಿದಲ್ಲಿ ನಾನೇ ಇಂದ್ರನಾಗುತ್ತೇನೆ. ಸಮಸ್ತ ಪ್ರಜೆಗಳನ್ನು ನಾನೇ ರಕ್ಷಿಸುತ್ತೇನೆ.

ಯೋ ಯದಾಹಾರದಾನಶ್ಚ ಸ ತಥೈವ ಭವಿಷ್ಯತಿ ।
ವಿಶೇಷಂ ಚೈವ ಕರ್ತಾಸ್ಮಿ ಪುನಃ ಪುನರತೀವ ಹಿ ॥೨೪॥

ಯಾರು ಯಾವ ಆಹಾರದಿಂದ ಹುಟ್ಟುತ್ತಾರೋ ಅವರು ಅದೇ ಆಹಾರವನ್ನು ಅವಲಂಬಿಸಬೇಕಾಗುತ್ತದೆ. ಅದಕ್ಕಾಗಿ ಪುನಃ ಪುನಃ ವಿಶೇಷವಾದ ಆಹಾರವನ್ನು ಆಯಾ ಜೀವರಿಗೆ ವ್ಯವಸ್ಥೆ ಮಾಡುತ್ತೇನೆ.

ಅದ್ಯೇಹ ಸ್ವರ್ಣಮಭ್ಯೇತು ಯಚ್ಚಾನ್ಯದ್ ವಸು ದುರ್ಲಭಮ್ ।
ತ್ರಿಷು ಲೋಕೇಷು ಯಚ್ಚಾಸ್ತಿ ತದಿಹಾಗಚ್ಛತು ಸ್ವಯಮ್ ॥೨೫॥

ಮೂರುಲೋಕಗಳಲ್ಲಿ ಎಷ್ಟು ಸುವರ್ಣವಿದೆಯೋ, ಐಶ್ವರ್ಯವಿದೆಯೋ ಅವೆಲ್ಲವೂ ಇಲ್ಲಿ ತಾವಾಗಿಯೇ ಆಗಮಿಸಲಿ.

ದಿವಿ ಚಾಪ್ಸರಸಾಂ ಸಂಘಾಃ ಸಗಂಧರ್ವಾಃ ಸಕಿನ್ನರಾಃ ।
ವಿಶ್ವಾವಸುಶ್ಚ ಯೇ ಚಾನ್ಯೇ ತೇ ಚ ಯುಷ್ಮಾನುಪಾಸತಾಮ್ ॥೨೬॥

ದೇವಲೋಕದ ಅಪ್ಸರೆಯರ ಸಂಘಗಳು, ವಿಶ್ವಾವಸು ಮೊದಲಾದ ಗಂಧರ್ವರು, ಕಿನ್ನರರು, ಮುಂತಾದವರು ಇಲ್ಲಿಗೆ ಆಗಮಿಸಿ ಈ ಯಜ್ಞವನ್ನು ಉಪಾಸಿಸಲಿ.

ಉತ್ತರೇಭ್ಯಃ ಕುರುಭ್ಯಶ್ಚ ಯತ್ ಕಿಂಚಿದ್ ವಸು ವಿದ್ಯತೇ ।
ಸರ್ವಂ ತದಿಹ ಯಜ್ಞೇ ಮೇ ಸ್ವಯಮೇವೋಪತಿಷ್ಠತಾಮ್ ॥೨೭॥

ಸ್ವರ್ಗಃ ಸ್ವರ್ಗಸದಶ್ಚೈವ ಧರ್ಮಶ್ಚ ಸ್ವಯಮೇವ ಮೇ ॥೨೮॥

ಉತ್ತರ ಕುರುಗಳಲ್ಲಿ ಯಾವ ಐಶ್ವರ್ಯವಿದೆಯೋ ಅವೆಲ್ಲವೂ ಈ ಯಜ್ಞಕ್ಕೆ ಆಗಮಿಸಲಿ. ಸ್ವರ್ಗವಾಸಿಗಳಾದ ದೇವತೆಗಳು, ಸ್ವರ್ಗ, ಧರ್ಮ, ಎಲ್ಲವೂ ತಾವಾಗಿಯೇ ಈ ಯಜ್ಞಕ್ಕೆ ಆಗಮಿಸಲಿ.

ವೈಶಂಪಾಯನಃ

ಇತ್ಯುಕ್ತೇ ಸರ್ವಮೇವೈತದ್ ಅಭವತ್ ತಸ್ಯ ಧೀಮತಃ ।
ತಸ್ಯ ದೀಪ್ತಾಗ್ನಿಮಹಸಃ ತ್ವಗಸ್ಯಾಸ್ಯಾತಿತೇಜಸಾ ॥೨೯॥

ವೈಶಂಪಾಯನ– ಅಮಿತವಾದ ತೇಜಸ್ಸುಳ್ಳ, ಪ್ರಜ್ವಲಿಸುವ ಅಗ್ನಿಯಂತೆ ಬೆಳಗುತ್ತಿರುವ ಅಗಸ್ತ್ಯರು ಹೀಗೆ ಹೇಳಿದ ಕೂಡಲೇ ಮುನಿಗಳ ತಪಸ್ಸಿನ ಪ್ರಭಾವದಿಂದ ಸಮಸ್ತ ಐಶ್ವರ್ಯಗಳೂ ಅಲ್ಲಿಗೆ ಆಗಮಿಸಿದವು.

ತತಸ್ತೇ ಮುನಯೋ ದೃಷ್ಟ್ವಾ ಮುನೇಸ್ತಸ್ಯ ತಪೋ ಬಲಮ್ ।
ವಿಸ್ಮಿತಾ ವಚನಂ ಪ್ರಾಹುರಿದಂ ಸರ್ವೇ ಮಹಾರ್ಥವತ್ ॥೩೦॥

ಬಳಿಕ ಅವರ ತಪಸ್ಸಿನಿಂದ ಪ್ರಭಾವವನ್ನು ಕಂಡ ಸದಸ್ಯರಾದ ಋಷಿಗಳೆಲ್ಲರೂ ಅಗಸ್ತ್ಯರ ಶಕ್ತಿಯನ್ನು ಕಂಡು ಹೃಷ್ಟರಾದರು, ವಿಸ್ಮಿತರಾದರು. ಅರ್ಥವತ್ತಾದ ಮಾತುಗಳನ್ನು ಹೇಳಿದರು.

ಋಷಯಃ

ಪ್ರೀತಾಃ ಸ್ಮ ತವ ವಾಕ್ಯೇನ ನ ತ್ವಿಚ್ಛಾಮಸ್ತಪೋಧನ ।
ಸ್ವೈರೇವ ಯಜ್ಞೈಸ್ತುಷ್ಟಾಃ ಸ್ಮ ನ್ಯಾಯೇನೇಚ್ಛಾಮಹೇ ವಯಮ್ ॥೩೧॥

ಋಷಿಗಳು– ಮಹರ್ಷಿಗಳೇ, ನಿಮ್ಮ ಮಾತಿನಿಂದ ನಾವು ಸಂತುಷ್ಟರಾಗಿದ್ದೇವೆ. ಆದರೆ ನಿಮ್ಮ ತಪಸ್ಸನ್ನು ವ್ಯರ್ಥಗೊಳಿಸಲು ಬಯಸುವುದಿಲ್ಲ. ನೀವು ಮಾಡುತ್ತಿರುವ ಯಜ್ಞದಿಂದಲೇ ನಾವು ಸಂತುಷ್ಟರಾಗಿದ್ದೇವೆ. ನ್ಯಾಯದಿಂದ ಅನ್ನವನ್ನು ನಾವು ಬಯಸುತ್ತೇವೆ.

ಯಜ್ಞದೀಕ್ಷಾಸ್ತಥಾ ಹೋಮಾನ್ ಯಚ್ಚಾನ್ಯನ್ಮಗಯಾಮಹೇ ।
ತನ್ನೋऽಸ್ತು ಸ್ವರ್ಗದೈರ್ಯಜ್ಞೈರ್ನಾನ್ಯತೋ ಮೃಗಯಾಮಹೇ ॥೩೨॥

ನ್ಯಾಯೇನೋಪಾರ್ಜಿತಾಹಾರಾಃ ಸ್ವಕರ್ಮನಿರತಾ ವಯಮ್ ।
ದೇವಾಂಶ್ಚ ಬ್ರಹ್ಮಚರ್ಯೇಣ ನ್ಯಾಯೇನ ಪ್ರಾರ್ಥಯಾಮಹೇ ॥೩೩॥

ಯಜ್ಞದೀಕ್ಷೆ, ಹೋಮ, ನಾವು ಅಪೇಕ್ಷಿಸಿದ ಯಾವುದೇ ವಸ್ತುಗಳು ಇಲ್ಲಿ ನಮಗೆ ದೊರೆಯುತ್ತಿವೆ. ನ್ಯಾಯದಿಂದ ಸಂಪಾದಿಸಿದ ಆಹಾರವನ್ನೇ ಸ್ವೀಕರಿಸುತ್ತಾ ನಮ್ಮ ಕರ್ಮಗಳಲ್ಲಿ ನಾವು ಆಸಕ್ತರಾಗಿದ್ದೇವೆ. ಈ ಪದಾರ್ಥಗಳು ನಮಗೆ ಸ್ವರ್ಗದ ಸುಖವನ್ನೇ ನೀಡುತ್ತಿವೆ. ನಾವು ಬ್ರಹ್ಮಚರ್ಯವನ್ನು ಪಾಲಿಸುತ್ತಾ, ನ್ಯಾಯರೀತಿಯಲ್ಲಿಯೇ ವೇದಗಳನ್ನು ಪಠಿಸುತ್ತಾ ದೇವತೆಗಳನ್ನು ಪ್ರಾರ್ಥಿಸುತ್ತಿದ್ದೇವೆ.

ನ್ಯಾಯೇನ ರಂಜಿತಾಃ ಕಾಲೇ ಗೃಹೇಭ್ಯೋ ನಿಃಸೃತಾ ವಯಮ್ ।
ದೃಷ್ಟ್ವಾ ಚ ವಿಧಿವದ್ ದಾರ್ವೈಸ್ತಪಸ್ತಪ್ಸ್ಯಾಮಹೇ ವಯಮ್ ॥೩೪॥

ಭವತಃ ಸಮ್ಯಗೇಷಾ ಹಿ ಬುದ್ಧಿರ್ಹಿಂಸಾವಿವರ್ಜಿತಾ ।
ಏತಾಮಹಿಂಸಾಂ ಯಜ್ಞೇಷು ಬ್ರೂಯಾಸ್ತ್ವಂ ಸತತಂ ವಿಭೋ ॥೩೫॥

ನಾವು ಪ್ರಕೃತ ಮನೆಯನ್ನು ತೊರೆದು ವಾನಪ್ರಸ್ಥಾಶ್ರಮಿಗಳಾಗಿದ್ದೇವೆ. ಧರ್ಮಾನುಸಾರವಾಗಿ ತಪಸ್ಸನ್ನು ಆಚರಿಸಿದೆವು. ಹಿಂಸೆಯನ್ನು ತ್ಯಾಗ ಮಾಡಿ ಸತ್ಕರ್ಮಾನುಷ್ಠಾನ ಮಾಡುವ ನಿಮ್ಮ ಆಚಾರವು ನಮಗೆ ಇಷ್ಟವಾಗಿದೆ. ನೀವು ಯಜ್ಞದಲ್ಲಿ ಹಿಂಸೆಯನ್ನು ಮಾಡಬಾರದೆಂದೇ ಯಾವಾಗಲೂ ಹೇಳುತ್ತಿರುತ್ತೀರಿ. ಈ ವಿಷಯವು ನಮ್ಮೆಲ್ಲರಿಗೂ ಸಂತೋಷವನ್ನುಂಟು ಮಾಡಿದೆ.

ಪ್ರೀತಾಸ್ತತೋ ಭವಿಷ್ಯಾಮೋ ವಯಂ ದ್ವಿಜವರೋತ್ತಮ ।
ವಿಸರ್ಜಿತಾಃ ಸಮಾಪ್ತೌ ಚ ಸತ್ರಾದಸ್ಮಾದ್ ವ್ರಜೇಮಹಿ ॥೩೬॥

ಯಜ್ಞವು ಸಮಾಪ್ತವಾದ ಬಳಿಕ ನಿಮ್ಮಿಂದ ಬೀಳ್ಕೊಡಲ್ಪಟ್ಟ ನಾವು ನಮ್ಮ ನಮ್ಮ ಆಶ್ರಮಗಳಿಗೆ ಸಂತುಷ್ಟರಾಗಿ ನಿರ್ಗಮಿಸುತ್ತೇವೆ.

ವೈಶಂಪಾಯನಃ

ತಥಾ ಕಥಯತಾಮೇವಂ ದೇವರಾಜಃ ಪುರಂದರಃ ।
ವವರ್ಷ ಸುಮಹಾತೇಜಾ ದೃಷ್ಟ್ವಾ ತಸ್ಯ ತಪೋಬಲಮ್ ॥೩೭॥

ವೈಶಂಪಾಯನ– ಮಹರ್ಷಿಗಳೆಲ್ಲರೂ ಹೀಗೆ ಹೇಳುತ್ತಿರುವಾಗಲೇ ತೇಜಸ್ವಿಯಾದ ಇಂದ್ರನು ಅಗಸ್ತ್ಯರ ತಪೋಬಲವನ್ನು ನೋಡಿ ಯಥೇಷ್ಟವಾಗಿ ಮಳೆ ಸುರಿಸಿದನು.

ಅಸಮಾಪ್ತೌ ಚ ಯಜ್ಞಸ್ಯ ತಸ್ಯಾಮಿತಪರಾಕ್ರಮಃ ।
ನಿಕಾಮವರ್ಷೀ ದೇವೇಂದ್ರೋ ಬಭೂವ ಜನಮೇಜಯ ॥೩೮॥

ಜನಮೇಜಯನೇ, ಅಮಿತಪರಾಕ್ರಮಿಯಾದ ಇಂದ್ರನು ಅಗಸ್ತ್ಯರ ಯಜ್ಞವು ಮುಗಿಯುವ ತನಕ ಕೇಳಿದಷ್ಟು ಮಳೆಯನ್ನು ಸುರಿಸುತ್ತಿದ್ದನು.

ಪ್ರಸಾದಯಾಮಾಸ ಚ ತಮಗಸ್ತ್ಯಂ ತ್ರಿದಶೇಶ್ವರಃ ।
ಸ್ವಯಮಭ್ಯೇತ್ಯ ರಾಜರ್ಷೇ ಪುರಸ್ಕೃತ್ಯ ಬೃಹಸ್ಪತಿಮ್ ॥೩೯॥

ಇಂದ್ರದೇವನು ಬೃಹಸ್ಪತಿಯನ್ನು ಮುಂದೆ ಮಾಡಿಕೊಂಡು ಅಗಸ್ತ್ಯರ ಯಜ್ಞಭೂಮಿಗೆ ಆಗಮಿಸಿ ಅವರನ್ನು ಸಂತೋಷಗೊಳಿಸಿದನು.

ತತೋ ಯಜ್ಞಸಮಾಪ್ತೌ ತಾನ್ ವಿಸಸರ್ಜ ಮಹಾಮುನೀನ್ ।
ಅಗಸ್ತ್ಯಃ ಪರಮಪ್ರೀತಃ ಪೂಜಯಿತ್ವಾ ಯಥಾವಿಧಿ ॥೪೦॥

ಇದರಿಂದ ಪ್ರೀತರಾದ ಅಗಸ್ತ್ಯರು ಹನ್ನೆರಡು ವರ್ಷಗಳ ಯಜ್ಞವನ್ನು ನಿರಾತಂಕವಾಗಿ ಪರಿಸಮಾಪ್ತಿಗೊಳಿಸಿದರು. ಆ ಯಜ್ಞದಲ್ಲಿ ಋತ್ವಿಕ್ಕುಗಳಾಗಿ ಭಾಗವಹಿಸಿದ ಮುನಿಗಳೆಲ್ಲರನ್ನೂ ವಿಧಿಗನುಗುಣವಾಗಿ ಸತ್ಕರಿಸಿ, ಅವರವರ ಆಶ್ರಮಗಳಿಗೆ ಕಳುಹಿಸಿಕೊಟ್ಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ಅಗಸ್ತ್ಯಯಜ್ಞಪ್ರಶಂಸನಂ ನಾಮ ಪಂಚನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತಾರನೆಯ ಅಧ್ಯಾಯ

ವೈಶಂಪಾಯನರು ಜನಮೇಜಯನಿಗೆ ಆ ಮುಂಗುಸಿಯ ನಿಜಸ್ವರೂಪವನ್ನು ನಿರೂಪಿಸಿದುದು.

ಜನಮೇಜಯಃ

ಕೋऽಸೌ ನಕುಲರೂಪೇಣ ಶಿರಸಾ ಕಾಂಚನೇನ ಹ ।
ಪ್ರಾಹ ಮಾನುಷಯಾ ವಾಚಾ ಹ್ಯೇತತ್ ಪೃಷ್ಟೋ ವದಸ್ವ ಮೇ ॥೧॥

ಜನಮೇಜಯ– ಮಹರ್ಷಿಗಳೇ, ಬಂಗಾರದ ತಲೆಯಿಂದ ಕೂಡಿದ್ದ ಮುಂಗುಸಿಯ ರೂಪದಿಂದ ಧರ್ಮಜನ ಯಜ್ಞಮಂಟಪಕ್ಕೆ ಆಗಮಿಸಿದ ವ್ಯಕ್ತಿಯು ಯಾರು? ಮನುಷ್ಯನಂತೆ ಮಾತನಾಡಿದ ಆ ಮುಂಗುಸಿಯನ್ನು ನೋಡಿದರೆ ನನಗೆ ಈ ಪ್ರಶ್ನೆ ಹುಟ್ಟುತ್ತಿದೆ. ದಯಮಾಡಿ ಉತ್ತರಿಸಿ.

ವೈಶಂಪಾಯನಃ

ಏತತ್ಪೂರ್ವಂ ನ ಪೃಷ್ಟೋऽಹಂ ನ ಚಾಸ್ಮಾಭಿಃ ಪ್ರಭಾಷಿತಮ್ ।
ಶ್ರೂಯತಾಂ ನಕುಲೋ ಯೋಸೌ ಯಥಾ ವಾಕ್ ಚಾಸ್ಯ ಮಾನುಷೀ ॥

ವೈಶಂಪಾಯನ– ಜನಮೇಜಯನೇ, ಈ ವಿಷಯವನ್ನು ಹಿಂದೆ ನೀನು ಪ್ರಶ್ನಿಸಲಿಲ್ಲ. ಆದ್ದರಿಂದ ನಾನು ಹೇಳಲಿಲ್ಲ. ಆ ಮುಂಗುಸಿ ಯಾರೆಂಬುದನ್ನು, ಅದಕ್ಕೆ ಮನುಷ್ಯರಂತೆ ಮಾತನಾಡಲು ಹೇಗೆ ಸಾಧ್ಯವಾಯಿತೆಂಬುದನ್ನು ಹೇಳುತ್ತೇನೆ, ಕೇಳಿಸಿಕೊ.

ಶ್ರಾದ್ಧಂ ಸಂಕಲ್ಪಯಾಮಾಸ ಜಮದಗ್ನಿಃ ಪುರಾ ಕಿಲ ।
ಹೋಮಧೇನುಸ್ತಮಾಗಚ್ಛತ್ ಸ್ವಯಂ ಚಾಪಿ ದುದೋಹ ತಾಮ್ ॥೩॥

ಹಿಂದೊಮ್ಮೆ ಜಮದಗ್ನಿ ಋಷಿಯು ಶ್ರಾದ್ಧ ಮಾಡಲು ಸಂಕಲ್ಪಿಸಿದ್ದನು. ಅದಕ್ಕೆ ಸರಿಯಾಗಿ ಹೋಮಧೇನುವು ಜಗದಗ್ನಿಯ ಸಮೀಪ ಆಗಮಿಸಿತು. ಅದರ ಹಾಲನ್ನು ಜಮದಗ್ನಿಯು ಸ್ವಯಂ ತಾವೇ ಕರೆದರು.

ತತ್ ಕ್ಷೀರಂ ಸ್ಥಾಪಯಾಮಾಸ ಹೇಮಭಾಂಡೇ ಶುಭೇ ಶುಚೌ ।
ತಚ್ಚ ಕ್ರೋಧಃ ಸ್ವರೂಪೇಣ ಪಿತರಂ ಪರ್ಯಧರ್ಷಯತ್ ॥೪॥

ಆ ಹಾಲನ್ನು ನೂತನವಾದ, ದೃಢವಾದ, ಪವಿತ್ರವಾದ ಪಾತ್ರೆಯಲ್ಲಿ ಜಮದಗ್ನಿಯು ಇಟ್ಟರು. ಆ ಪಾತ್ರೆಯಲ್ಲಿ ಕ್ರೋಧಾಭಿಮಾನಿಯಾದ ದೈತ್ಯನು ಪ್ರವೇಶಿಸಿದನು.

ಜಿಜ್ಞಾಸುಸ್ತಮೃಷಿಶ್ರೇಷ್ಠಂ ಕಿಂ ಕುರ್ಯಾದ್ ವಿಪ್ರಿಯೇ ಕೃತೇ ।
ಇತಿ ಸಂಚಿಂತ್ಯ ದುರ್ಮೇಧಾ ಧರ್ಷಯಾಮಾಸ ತತ್ ಪಯಃ ॥೫॥

ಜಮದಗ್ನಿಗಳಿಗೆ ಅಹಿತವಾದ ಕಾರ್ಯವನ್ನು ಮಾಡಿದರೆ ಅವರು ಏನು ಮಾಡುತ್ತಾರೆ ಎಂಬ ಆಶಯದಿಂದ ಕ್ರೋಧಾಭಿಮಾನಿ ದೈತ್ಯನು ಆ ಹಾಲನ್ನು ಹಾಳು ಮಾಡಿದನು.

ತಮಾಜ್ಞಾಯ ಮುನಿಃ ಕ್ರೋಧಂ ನೈವಾಸ್ಮೈ ಚುಕುಪೇ ತತಃ ।
ಸ ತು ಕ್ರೋಧಸ್ತಮಾಸಾದ್ಯ ಪ್ರಾಂಜಲಿರ್ಮೂರ್ತಿಮಾನ್ ಸ್ಥಿತಃ ॥೬॥

ದೈತ್ಯನು ಹಾಲನ್ನು ಕೆಡಿಸಿದ ವಿಷಯವನ್ನು ತಿಳಿದ ಋಷಿಗಳು ಅವನ ಮೇಲೆ ಸಿಟ್ಟಾಗಲಿಲ್ಲ. ಮರುಕ್ಷಣದಲ್ಲಿಯೇ ಕ್ರೋಧಾಭಿಮಾನಿ ದೈತ್ಯನು ಪ್ರತ್ಯಕ್ಷನಾಗಿ ನಿಂತು ಕೈಮುಗಿದು ಹೀಗೆ ಹೇಳಿದನು.

ಜಿತೋಽಸ್ಮೀತಿ ಭೃಗುಶ್ರೇಷ್ಠಂ ಭೃಗವೋ ಹ್ಯತಿರೋಷಣಾಃ ।
ಲೋಕೇ ಮಿಥ್ಯಾಪ್ರವಾದೋಽಯಂ ಯತ್ ತ್ವಯಾಽಸ್ಮಿ ಪರಾಜಿತಃ ॥೭॥

ಮುನಿಶ್ರೇಷ್ಠನೇ, ಭೃಗುಶ್ರೇಷ್ಠನೇ, ಭೃಗುವಂಶದವರು ಮಹಾಕೋಪಿಷ್ಠರು ಎಂದು ಲೋಕದಲ್ಲಿ ಪ್ರವಾದವಿತ್ತು. ಅದನ್ನು ನೀನು ಸುಳ್ಳಾಗಿಸಿರುವಿ. ನಿನಗೆ ನಾನು ಅಧೀನನಾಗಿದ್ದೇನೆ.

ಸೋಽಯಂ ತ್ವಯಿ ಸ್ಥಿತೋ ಹ್ಯದ್ಯ ಕ್ಷಮಾವತಿ ಮಹಾತ್ಮನಿ ।
ಬಿಭೇಮಿ ತಪಸಃ ಸಾಧೋ ಪ್ರಸಾದಂ ಕುರು ಮೇ ಪ್ರಭೋ ॥೮॥

ನಾನು ಅಪರಾಧವನ್ನು ಮಾಡಿದ್ದರೂ ಕ್ಷಮಾಶೀಲನಾಗಿರುವ ನಿನ್ನಂತಹ ಮಹಾತ್ಮರಿಗೆ ನಾನು ಹೆದರುತ್ತಿದ್ದೇನೆ. ತಪಸ್ವಿಯಾದ ಸಜ್ಜನನೇ ನನ್ನಲ್ಲಿ ಕರುಣೆ ತೋರು.

ಜಮದಗ್ನಿಃ

ಸಮ್ಯಗ್ ದೃಷ್ಟೋಽಸಿ ಮೇ ಕ್ರೋಧ ಗಚ್ಛ ತ್ವಂ ವಿಗತಜ್ವರಃ ।
ನ ಮಮಾಪಕೃತಂ ತೇಽದ್ಯ ನ ಮನ್ಯುರ್ವಿದ್ಯತೇ ತ್ವಯಿ ॥೯॥

ಜಮದಗ್ನಿ– ಕ್ರೋಧನೇ, ನಿನ್ನನ್ನು ನಾನು ಚೆನ್ನಾಗಿ ನೋಡಿದ್ದೇನೆ. ನಿನ್ನನ್ನು ನಾನು ಶಪಿಸುವುದಿಲ್ಲ. ನೀನು ನನಗೆ ಅಪರಾಧವನ್ನು ಎಸಗಿಲ್ಲವಾದ್ದರಿಂದ ನಿನ್ನ ವಿಷಯದಲ್ಲಿ ನಾನು ಸಿಟ್ಟಾಗಲಿಲ್ಲ.

ಯಾನುದ್ದಿಶ್ಯ ತು ಸಂಕಲ್ಪಃ ಪಯಸೋಽದ್ಯ ಕೃತೋ ಮಯಾ ।
ಪಿತರಸ್ತೇ ಮಹಾಭಾಗಾಸ್ತೇಭ್ಯೋ ಬುದ್ಧ್ಯಸ್ವ ಗಮ್ಯತಾಮ್ ॥೧೦॥

ಆದರೆ ನಾನು ಯಾವ ಪಿತೃಗಳ ಶ್ರಾದ್ಧವನ್ನು ಸಂಕಲ್ಪಿಸಿ ಅವರಿಗಾಗಿ ಹಾಲನ್ನು ಇಟ್ಟಿದ್ದೆನೋ ಆ ಭಾಗ್ಯಶಾಲಿಗಳಾದ ಪಿತೃಗಳು ನಾನಿಟ್ಟಿರುವ ಹಾಲಿಗೆ ಅಧಿಪತಿಗಳಾಗಿದ್ದರು. ಆದ್ದರಿಂದ ನೀನು ಅವರ ಬಳಿಯೇ ಹೋಗಿ ನೀನು ಮಾಡಿದ ಅಪರಾಧವನ್ನು ತಿಳಿಸು.

ವೈಶಂಪಾಯನಃ

ಇತ್ಯುಕ್ತೋ ಜಾತಸನ್ತ್ರಾಸಸ್ತತ್ರೈವಾಂತರಧೀಯತ ।
ಪಿತೄಣಾಮಭಿಷಂಗಾತ್ ತು ನಕುಲತ್ವಮುಪಾಗತಃ ॥೧೧॥

ಜಮದಗ್ನಿಗಳು ಹೀಗೆ ಹೇಳಿದ ಕೂಡಲೇ ಶಾಪದ ಭಯದಿಂದ ಕ್ರೋಧನಾಮಕ ದೈತ್ಯನು ಅಲ್ಲಿಂದ ಕಣ್ಮರೆಯಾದನು. ಮುಂದೆ ಆ ಪಿತೃಗಳ ಶಾಪದಿಂದ ಮುಂಗುಸಿಯಾಗಿ ಹುಟ್ಟಿದನು.

ಸ ತಾನ್ ಪ್ರಸಾದಯಾಮಾಸ ಶಾಪಸ್ಯಾಂತೋ ಭವೇದಿತಿ ।
ತೈಶ್ಚಾಪ್ಯುಕ್ತೋ ಯದಾ ಧರ್ಮಂ ಕ್ಷೇಪ್ಸ್ಯಸೇ ಮೋಕ್ಷ್ಯಸೇ ತದಾ ॥೧೨॥

ಪಿತೃದೇವತೆಗಳು ನನ್ನನ್ನು ಶಪಿಸುತ್ತಾರೆಂದು ಭಾವಿಸಿದ ಕ್ರೋಧ ದೈತ್ಯನು ಪಿತೃದೇವತೆಗಳನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದನು. ಅದಕ್ಕೆ ಪ್ರತಿಯಾಗಿ ಪಿತೃಗಳು ನೀನು ಧರ್ಮರಾಜನನ್ನು ನಿಂದಿಸಿದಾಗ ಶಾಪದ ವಿಮೋಚನೆಯಾಗುತ್ತದೆ ಎಂದು ಹೇಳಿದರು.

ಇತ್ಯುಕ್ತೋ ಯಜ್ಞಿಯಾನ್ ದೇಶಾನ್ ಧರ್ಮಾರಣ್ಯಾನಿ ಚೈವ ಹ ।
ಜುಗುಪ್ಸನ್ ಪರಿಧಾವನ್ ಸ ತಂ ಯಜ್ಞಂ ಸಮುಪಾಸದತ್ ॥೧೩॥

ಹೀಗೆ ಹೇಳಿದ ಬಳಿಕ ಮುಂಗುಸಿಯಾದ ಕ್ರೋಧನು ಜುಗುಪ್ಸಿತನಾಗಿ, ದೇಶ ದೇಶಗಳಲ್ಲಿದ್ದ ಯಜ್ಞಮಂಟಪಗಳನ್ನೂ, ಧರ್ಮಾರಣ್ಯಗಳನ್ನು ಸುತ್ತುತ್ತಾ ಕೊನೆಗೆ ಧರ್ಮರಾಜನ ಯಜ್ಞಮಂಟಪಕ್ಕೆ ಆಗಮಿಸಿದನು.

ಧರ್ಮಪುತ್ರಮಥಾಕ್ಷಿಪ್ಯ ಸಕ್ತುಪ್ರಸ್ಥೇನ ತೇನ ಸಃ ।
ಮುಕ್ತಶಾಪಸ್ತತಃ ಕ್ರೋಧೋ ಧರ್ಮೋ ಹ್ಯಾಸೀದ್ ಯುಧಿಷ್ಠಿರಃ ॥೧೪॥

ಮುಂಗುಸಿಯ ರೂಪದಲ್ಲಿರುವ ಕ್ರೋಧನಾಮಕ ದೈತ್ಯನು ಒಂದು ಸೇರು ಹಿಟ್ಟಿನ ದಾನದ ಮಹಿಮೆಯನ್ನು ಹೇಳಿ, ಧರ್ಮರಾಜನ ಯಜ್ಞವನ್ನು ನಿಂದಿಸಿ, ಶಾಪದಿಂದ ಮುಕ್ತನಾಗಿ ಅಂಧಂತಮಸ್ಸನ್ನೇ ಪಡೆದನು. ಆದ್ದರಿಂದ ಯುಧಿಷ್ಠಿರನು ಮಾಡಿದ ಸತ್ಕರ್ಮವು ಧರ್ಮಯುತವೇ ಆಗಿತ್ತು.

ಏವಮೇತದ್ ಯಥಾ ವೃತ್ತಂ ತಸ್ಯ ಯಜ್ಞೇ ಮಹಾತ್ಮನಃ ।
ಪಶ್ಯತಾಂ ಚಾಪಿ ನಸ್ತತ್ರ ನಕುಲೋಽಂತರ್ಹಿತಸ್ತದಾ ॥೧೫॥

ಮಹಾತ್ಮನಾದ ಯುಧಿಷ್ಠಿರನ ಯಾಗವು ಪರಿಸಮಾಪ್ತಿ ಹೊಂದಿದ ಬಳಿಕ ಈ ಘಟನೆಯು ನಡೆಯಿತು. ನಾವೆಲ್ಲರೂ ನೋಡುತ್ತಿದ್ದಂತೆ ಆ ಮುಂಗುಸಿಯು ಅಲ್ಲಿಂದ ಕಣ್ಮರೆಯಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ನಕುಲಸ್ವರೂಪಕಥನಂ ನಾಮ ಷಣ್ಣವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೇಳನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನಿಗೆ ವೈಷ್ಣವಧರ್ಮವನ್ನು ಉಪದೇಶಿಸಲು ಪ್ರಾರಂಭಿಸಿದುದು.

ಜನಮೇಜಯಃ

ಅಶ್ವಮೇಧೇ ಪುರಾ ವೃತ್ತೇ ಕೇಶವಂ ಕೇಶಿಸೂದನಮ್ ।
ಧರ್ಮಸಂಶಯಮುದ್ದಿಶ್ಯ ಕಿಮಪೃಚ್ಛತ್ ಪಿತಾಮಹಃ ॥೧॥

ಜನಮೇಜಯ– ಪೂಜ್ಯರೇ, ಅಶ್ವಮೇಧಯಜ್ಞವು ಪರಿಸಮಾಪ್ತಿ ಹೊಂದಿದ ಬಳಿಕ ನನ್ನ ಅಜ್ಜನಾದ ಯುಧಿಷ್ಠಿರನು ಧರ್ಮಸಂಶಯದ ನಿವಾರಣೆಗಾಗಿ ಕೇಶಿನಾಮಕ ದೈತ್ಯನನ್ನು ಕೊಂದಿರುವ ಕೃಷ್ಣನ ಬಳಿ ಏನೆಂದು ಪ್ರಶ್ನಿಸಿದನು?

ವೈಶಂಪಾಯನಃ

ಪಶ್ಚಿಮೇನಾಶ್ವಮೇಧೇನ ಯದಾ ಸ್ನಾತೋ ಯುಧಿಷ್ಠಿರಃ ।
ತದಾ ರಾಜಾ ನಮಸ್ಕೃತ್ಯ ಕೇಶವಂ ವಾಕ್ಯಮಬ್ರವೀತ್ ॥೨॥

ವೈಶಂಪಾಯನ– ಜನಮೇಜಯನೇ, ಸಮಸ್ತ ಅಶ್ವಮೇಧಯಾಗದ ಪರಿಸಮಾಪ್ತಿಯ ಬಳಿಕ ಅವಭೃಥಸ್ನಾನವನ್ನು ಮಾಡಿದ ಯುಧಿಷ್ಠಿರನು ಕೇಶವನನ್ನು ನಮಸ್ಕರಿಸಿ ಹೀಗೆ ಹೇಳಿದನು.

ಯುಧಿಷ್ಠಿರಃ

ಭಗವನ್ ವೈಷ್ಣವಾ ಧರ್ಮಾಃ ಕಿಂಫಲಾಃ ಕಿಂಪರಾಯಣಾಃ ।
ಕಿಂ ಧರ್ಮಮಧಿಕೃತ್ಯಾಥ ಭವತೋತ್ಪಾದಿತಾಃ ಪುರಾ ॥೩॥

ಯುಧಿಷ್ಠಿರ– ಶ್ರೀಕೃಷ್ಣನೇ, ವೈಷ್ಣವಧರ್ಮಗಳಿಗೆ ಏನು ಫಲವಿದೆ? ಯಾರು ಈ ಧರ್ಮಗಳನ್ನು ಆಶ್ರಯಿಸಿರುತ್ತಾರೆ? ಈ ಧರ್ಮಗಳನ್ನು ಯಾರನ್ನು ಉದ್ದೇಶಿಸಿಕೊಂಡು ನೀನು ಸ್ಥಾಪಿಸಿರುವಿ?

ಯದಿ ತೇऽಹಮನುಗ್ರಾಹ್ಯಃ ಪ್ರಿಯೋ ವಾ ಮಧುಸೂದನ ।
ಶ್ರೋತವ್ಯಾ ಯದಿ ವಾ ಕೃಷ್ಣ ತಾನ್ ಮೇ ಕಥಯ ಸುವ್ರತ ॥೪॥

ಈ ವೈಷ್ಣವ ಧರ್ಮಗಳನ್ನು ನನಗೆ ಉಪದೇಶಿಸಬೇಕೆಂದು ಪ್ರೀತಿಯುಳ್ಳವನಾಗಿದ್ದಲ್ಲಿ, ನಾನು ಕೇಳಲು ಅರ್ಹನಾಗಿದ್ದಲ್ಲಿ ಮಧುಸೂದನನೇ, ಆ ವೈಷ್ಣವಧರ್ಮಗಳನ್ನು ನನಗೆ ಬೋಧಿಸು.

ಪವಿತ್ರಾಃ ಕಿಲ ತೇ ಧರ್ಮಾಃ ಸರ್ವೇ ಪಾಪಪ್ರಣಾಶನಾಃ ।
ಸರ್ವಧರ್ಮೋತ್ತಮಾಃ ಪುಣ್ಯಾ ಭಗವಂಸ್ತ್ವನ್ಮುಖೋದ್ಗತಾಃ ॥೫॥

ಆ ವೈಷ್ಣವಧರ್ಮಗಳು ಪವಿತ್ರವಾದವುಗಳು. ಕೇಳುವುದರಿಂದಲೇ ಪಾಪಗಳನ್ನು ಪರಿಹರಿಸುವ ಸಾಮರ್ಥ್ಯವುಳ್ಳವುಗಳು. ನಿನ್ನ ಮುಖದಿಂದ ಹೊರಹೊಮ್ಮಿದ ಪುಣ್ಯತಮವಾದ ಧರ್ಮಗಳು ಎಲ್ಲ ಧರ್ಮಗಳಿಗಿಂತಲೂ ಉತ್ತಮ ಎಂದು ಕರೆಸಿಕೊಂಡಿವೆ.

ಯಚ್ಛ್ರುತ್ವಾ ಬ್ರಹ್ಮಹಾ ಗೋಘ್ನೋ ಮಾತೃಹಾ ಗುರುತಲ್ಪಗಃ ।
ಪಾಕಭೇದೀ ಕೃತಘ್ನಶ್ಚ ಸುರಾಪೋ ಬ್ರಹ್ಮವಿಕ್ರಯೀ ॥೬॥

ಯಾವ ವೈಷ್ಣವಧರ್ಮಗಳನ್ನು ಕೇಳಿದ ಬಳಿಕ ಬ್ರಹ್ಮಹತ್ಯೆಯನ್ನು ಮಾಡಿದವನು, ಗೋಹತ್ಯೆಯನ್ನು ಮಾಡಿದವನು, ಪಿತೃಹತ್ಯೆಯನ್ನು ಮಾಡಿದವನು, ಮಾತೃಹತ್ಯೆಯನ್ನು ಎಸಗಿದವನು, ಗುರುತಲ್ಪಗಾಮಿಯಾದವನು, ಸ್ವಾರ್ಥಿಯಾಗಿ ಉಂಡವನು, ಕೃತಘ್ನನು, ಸುರಾಪಾನ ಮಾಡಿದವನು, ವೇದಗಳನ್ನು ಮಾರಾಟ ಮಾಡಿದವನು;

ಮಿತ್ರವಿಶ್ವಾಸಘಾತೀ ಚ ಭ್ರೂಣಹಾ ವೀರಹಾ ತಥಾ ।
ತಪೋವಿಕ್ರಯಿಣಶ್ಚೈವ ದಾನವಿಕ್ರಯಿಣಸ್ತಥಾ ॥೭॥

ಮಿತ್ರರಲ್ಲಿ ವಿಶ್ವಾಸಘಾತ ಮಾಡಿದವನು, ಭ್ರೂಣಹತ್ಯೆಯನ್ನು ಮಾಡಿದವನು,

ವೀರರನ್ನು ಕೊಂದವನು, ತಪಸ್ಸನ್ನು ಮಾರಾಟ ಮಾಡಿದವನು, ದಾನವನ್ನು ಮಾರಾಟ ಮಾಡಿದವನು;

ಆತ್ಮವಿಕ್ರಯಿಣೋ ಮೂಢಾ ಜೀವೇದ್ಯಶ್ಚ ವಿಕರ್ಮಭಿಃ ।
ಪಾಪಾಚಾರಾ ನೈಕೃತಿಕಾ ಡಾಂಭಿಕಾ ದೂಷಕಾಸ್ತಥಾ ॥೮॥

ತನ್ನನ್ನೇ ಮಾರಿಕೊಂಡವನು, ಮೂರ್ಖನು, ದುಷ್ಕರ್ಮಗಳಲ್ಲಿ ರತನಾದವನು, ಪಾಪಾಚಾರಿಯು, ಡಾಂಭಿಕನು, ದೂಷಕನು, ಕರ್ಮಭ್ರಷ್ಟನು;

ರಸಭೇದಕರಾ ಯೇ ಚ ಯೇ ಚ ಸ್ಯುರ್ಬ್ರಹ್ಮದೂಷಕಾಃ ।
ಶೂದ್ರಪ್ರೇಷ್ಯಕರಾಶ್ಚೋರಾ ವಿಪ್ರಾ ಯೇ ಚ ಪುರೋಹಿತಾಃ ॥೯॥

ಆಹಾರಗಳಲ್ಲಿ ಅನ್ಯಾಯವನ್ನು ಎಸಗಿದವನು, ಬ್ರಾಹ್ಮಣರನ್ನು ದೂಷಿಸಿದವನು, ವೇದಗಳನ್ನು ದೂಷಿಸಿದವನು, ಶೂದ್ರರಿಂದ ಉಪಚರಿಸಿಕೊಂಡ ಕಳ್ಳರಾದ ಪುರೋಹಿತರು, ಬ್ರಾಹ್ಮಣರು;

ನಿಕ್ಷೇಪಹಾರಿಣಃ ಸ್ತ್ರೀಘ್ನಾಸ್ತಥಾ ಯೇ ಪಾರದಾರಿಕಾಃ ।
ಏತೇ ಚಾನ್ಯೇ ಚ ಬಹವೋ ಮುಚ್ಯಂತೇ ತೇಪಿ ಕಿಲ್ಬಿಷಾತ್ ॥೧೦॥

ಅಡವಿಟ್ಟ ವಸ್ತುವನ್ನು ಅಪಹರಿಸಿದವರು, ಸ್ತ್ರೀಹತ್ಯೆ ಮಾಡಿದವರು, ಮತ್ತೊಬ್ಬರ ಹೆಣ್ಣನ್ನು ಅಪೇಕ್ಷಿಸಿದವರು, ಇನ್ನೂ ತಿಳಿಯದೆ ಇರುವ ಅನೇಕ ಪಾಪಗಳನ್ನು ಮಾಡಿದವರು ಎಲ್ಲ ಪಾಪಗಳಿಂದಲೂ ಮುಕ್ತರಾಗುತ್ತರೆ.

ತಾನಾಚಕ್ಷ್ವ ಸುರಶ್ರೇಷ್ಠ ತ್ವದ್ಭಕ್ತಸ್ಯ ಮಮಾಚ್ಯುತ ॥೧೧॥

ಅಂತಹ ವೈಷ್ಣವಧರ್ಮಗಳನ್ನು ನಿನ್ನ ಭಕ್ತನಾದ ನನಗೆ ಅಚ್ಯುತನೇ, ಸುರಶ್ರೇಷ್ಠನೇ ಉಪದೇಶಿಸು.

ವೈಶಂಪಾಯನಃ

ಇತ್ಯೇವಂ ಕಥಿತೇ ದೇವೇ ಧರ್ಮಪುತ್ರೇಣ ಸಂಸದಿ ।
ವಸಿಷ್ಠಾದ್ಯಾಸ್ತಪೋಯುಕ್ತಾ ಮುನಯಸ್ತತ್ತ್ವದರ್ಶಿನಃ ॥೧೨॥

ಧರ್ಮಪುತ್ರನಾದ ಯುಧಿಷ್ಠಿರನು ಸಭೆಯ ಮಧ್ಯದಲ್ಲಿ ಭಗವಂತನನ್ನು ಕುರಿತು ಹೀಗೆ ಹೇಳುತ್ತಿರಲು ತಪೋನಿರತರಾದ ತತ್ತ್ವದರ್ಶಿಗಳಾದ ವಸಿಷ್ಠಾದಿ ಋಷಿಗಳು, ಭಕ್ತವೃಂದವು ಅಲ್ಲಿ ಸೇರಿತ್ತು.

ಶ್ರೋತುಕಾಮಾಃ ಪರಂ ಗುಹ್ಯಂ ಭಕ್ತಿಮಂತೋ ನಿರತ್ಯಯಾಃ ।
ತಥಾ ಭಾಗವತಾಶ್ಚೈವ ತತಸ್ತಂ ಪರ್ಯವಾರಯನ್ ॥೧೩॥

ಪರಮಶ್ರೇಷ್ಠವಾದ, ಉತ್ತಮೋತ್ತಮವಾದ ವೈಷ್ಣವಧರ್ಮವನ್ನು ಕೇಳಬೇಕೆಂಬ ಬಯಕೆಯಿಂದ ಭಾಗವತೋತ್ತಮರೆಲ್ಲರೂ ಭಕ್ತಿಯಿಂದ ಕೃಷ್ಣನನ್ನು ಸುತ್ತುವರಿದರು.

ಯುಧಿಷ್ಠಿರಃ

ತತ್ತ್ವತಸ್ತವ ಭಾವೇನ ಪಾದಮೂಲಮುಪಾಗತಮ್ ।
ಯದಿ ಜಾನಾಸಿ ಮಾಂ ಭಕ್ತಂ ಸ್ನಿಗ್ಧಂ ವಾ ಭಕ್ತವತ್ಸಲ ॥೧೪॥

ಭಕ್ತವತ್ಸಲನೇ, ನಾನು ಶುದ್ಧವಾದ ಭಾವನೆಯಿಂದ ನಿನ್ನ ಪಾದಕಮಲಗಳನ್ನು ಆಶ್ರಯಿಸಿರುತ್ತೇನೆ. ನನ್ನನ್ನು ಪ್ರೀತಿಪಾತ್ರನೆಂದು, ಭಕ್ತನೆಂದು, ನಿನ್ನ ಅನುಗ್ರಹಕ್ಕೆ ಯೋಗ್ಯನೆಂದು ಭಾವಿಸಿದಲ್ಲಿ ವೈಷ್ಣವಧರ್ಮವನ್ನು ಉಪದೇಶಿಸು.

ಧರ್ಮಗುಹ್ಯಾನಿ ಸರ್ವಾಣಿ ವೇತ್ತುಮಿಚ್ಛಾಮಿ ತತ್ತ್ವತಃ ।
ಧರ್ಮಾನ್ ಕಥಯ ದೇವೇಶ ಯದ್ಯನುಗ್ರಹಭಾಗಹಮ್ ॥೧೫॥

ರಹಸ್ಯವಾದ ವೈಷ್ಣವಧರ್ಮಗಳನ್ನು ನಿನ್ನ ಮುಖದಿಂದ ಯಥಾರ್ಥವಾಗಿ ತಿಳಿಯಬೇಕೆಂದುಕೊಂಡಿರುವೆ. ನಾನು ನಿನ್ನ ಅನುಗ್ರಹಕ್ಕೆ ಪಾತ್ರನಾದವನು ಎಂದಿದ್ದಲ್ಲಿ ದೇವೇಶನೇ, ಆ ವೈಷ್ಣವಧರ್ಮಗಳನ್ನು ಉಪದೇಶಿಸು.

ಶ್ರುತಾ ಮೇ ಮಾನವಾ ಧರ್ಮಾ ವಾಸಿಷ್ಠಾಃ ಕಾಶ್ಯಪಾಸ್ತಥಾ ।
ಗಾರ್ಗೀಯಾ ಗೌತಮೀಯಾಶ್ಚ ತಥಾ ಗೋಪಾಲಕಸ್ಯ ಚ ॥೧೬॥

ಪರಾಶರಕೃತಾಃ ಪೂರ್ವಮಾತ್ರೇಯಸ್ಯ ಚ ಧೀಮತಃ ।
ಔಮಾ ಮಾಹೇಶ್ವರಾಶ್ಚೈವ ನಂದಿಧರ್ಮಾಶ್ಚ ಪಾವನಾಃ ॥೧೭॥

ನಾನು ಮಾನವ ಧರ್ಮಗಳನ್ನು ಕೇಳಿದ್ದೇನೆ. ವಸಿಷ್ಠ, ಕಶ್ಯಪ, ಗರ್ಗ, ಗೌತಮ,

ಗೋಪಾಲಕ, ಪರಾಶರ, ಬುದ್ಧಿವಂತನಾದ ಅತ್ರಿ, ಉಮೆ, ಮಹೇಶ್ವರ, ನಂದಿ ಇವರೆಲ್ಲರಿಗೂ ಸಂಬಂಧಿಸಿದ ಪುಣ್ಯಪ್ರದವಾದ ಧರ್ಮಗಳನ್ನೂ ಕೇಳಿದ್ದೇನೆ.

ಬ್ರಹ್ಮಣಾ ಕಥಿತಾ ಯೇ ಚ ಕೌಮಾರಾಶ್ಚ ಶ್ರುತಾ ಮಯಾ ।
ಧೂಮಾಯನಕೃತಾ ಧರ್ಮಾಃ ಕಾಂಡವೈಶ್ವಾನರಾ ಅಪಿ ॥೧೮॥

ಭಾರ್ಗವಾ ಯಾಜ್ಞವಲ್ಕ್ಯಶ್ಚ ಮಾರ್ಕಂಡೇಯಕೃತಾಸ್ತಥಾ ।
ಭಾರದ್ವಾಜಕೃತಾ ಯೇ ಚ ಬೃಹಸ್ಪತಿಕೃತಾಶ್ಚ ಯೇ ॥೧೯॥

ಕುಣೇಶ್ಚ ಕುಣಿಬಾಹೋಶ್ಚ ವಿಶ್ವಾಮಿತ್ರಕೃತಾಶ್ಚ ಯೇ ।
ಸುಮಂತುಜೈಮಿನಿಕೃತಾಃ ಶಾಕುನೇಯಾಸ್ತಥೈವ ಚ ॥೨೦॥

ಪುಲಸ್ತ್ಯಪುಲಹೋದ್ಗೀತಾಃ ಪಾವಕೀಯಾಸ್ತಥೈವ ಚ ।
ಅಗಸ್ತ್ಯಗೀತಾ ಮೌದ್ಗಲ್ಯಾಃ ಶಾಂಡಿಲ್ಯಾಃ ಶಲಭಾಯನಾಃ ॥೨೧॥

ವಾಲಖಿಲ್ಯಕೃತಾ ಯೇ ಚ ಯೇ ಚ ಸಪ್ತರ್ಷಿಭಿಃ ಕೃತಾಃ ।
ಆಪಸ್ತಂಬಕೃತಾ ಧರ್ಮಾಃ ಶಂಖಸ್ಯ ಲಿಖಿತಸ್ಯ ಚ ॥೨೨॥

ಹಾಗೆಯೇ ಕಾರ್ತಿಕೇಯ, ಧೂಮಾಯನ, ಕಾಂಡ, ವೈಶ್ವಾನರ, ಭಾರ್ಗವ, ಯಾಜ್ಞವಲ್ಕ್ಯ, ಮಾರ್ಕಂಡೇಯ, ಭಾರದ್ವಾಜ, ಬೃಹಸ್ಪತಿ, ಕುಣಿ, ಕುಣಿಬಾಹು, ವಿಶ್ವಾಮಿತ್ರ, ಸುಮಂತು, ಜೈಮಿನಿ, ಶಕುನಿ, ಪುಲಸ್ತ್ಯ, ಪುಲಹ, ಅಗ್ನಿ, ಅಗಸ್ತ್ಯ, ಮುದ್ಗಲ, ಶಾಂಡಿಲ್ಯ, ಶಲಭ, ವಾಲಖಿಲ್ಯ, ಸಪ್ತರ್ಷಿಗಳು, ಆಪಸ್ತಂಭ, ಶಂಖ, ಲಿಖಿತ - ಇವರೆಲ್ಲರೂ ಹೇಳಿರುವ ಧರ್ಮಪ್ರವಚನಗಳನ್ನೂ ಕೇಳಿದ್ದೇನೆ.

ಪ್ರಾಜಾಪತ್ಯಾಸ್ತಥಾ ಯಾಮ್ಯಾ ಮಾಹೇಂದ್ರಾಶ್ಚ ಶ್ರುತಾ ಮಯಾ ।
ವೈಯಾಘ್ರವ್ಯಾಸಗೀತಾಶ್ಚ ವಿಭಾಂಡಕಕೃತಾಶ್ಚ ಯೇ ॥೨೩॥

ನಾರದೀಯಾಃ ಶ್ರುತಾ ಧರ್ಮಾಃ ಕಾಪೋತಾಶ್ಚ ಶ್ರುತಾ ಮಯಾ ।
ತಥಾ ವಿದುರವಾಕ್ಯಾನಿ ಭೃಗೋರಂಗಿರಸಸ್ತಥಾ ॥೨೪॥

ಕ್ರೌಂಚಿ ಮೃದಂಗಗೀತಾಶ್ಚ ಸೌರ್ಯಾ ಹಾರೀತಕಾಸ್ತಥಾ ।
ಪಿಂಗವರ್ಮಕೃತಾಶ್ಚಾಪಿ ಕೌಂತಪಾಃ ಪಾಂಸುಬಾಲಿಕಾಃ ॥೨೫॥

ಉದ್ದಾಲಕಕೃತಾ ಧರ್ಮಾ ಔಶನಸ್ಯಾಸ್ತಥೈವ ಚ ।
ವೈಶಂಪಾಯನಗೀತಾಶ್ಚ ಯೇ ಚಾನ್ಯೇಪ್ಯೇಽವಮಾದಯಃ ॥೨೬॥

ಪ್ರಜಾಪತಿ, ಯಮ, ಮಹೇಂದ್ರ, ವೈಯಾಘ್ರಪಾದ, ವ್ಯಾಸ, ವಿಭಾಂಡಕರು, ನಾರದರು, ಕಪೋತರು, ವಿದುರ, ಭೃಗು, ಅಂಗಿರಸರು, ಕ್ರೌಂಚರು, ಮೃದಂಗ, ಸೂರ್ಯ, ಹಾರೀತ, ಪಿಂಗವರ್ಮ, ಕುಂತಪ, ಪಾಂಸುಬಾಲ, ಉದ್ದಾಲಕ, ಶುಕ್ರ, ವೈಶಂಪಾಯನ ಮುಂತಾದ ಮಹಾನುಭಾವರು ಹೇಳಿದ ಧರ್ಮಪ್ರವಚನಗಳನ್ನು ಕೇಳಿದ್ದೇನೆ.

ಏತೇಭ್ಯಃ ಸರ್ವಧರ್ಮೇಭ್ಯೋ ದೇವ ತ್ವನ್ಮುಖನಿಃಸೃತಾಃ ।
ಪಾವನತ್ವಾತ್ ಪವಿತ್ರತ್ವಾದ್ ವಿಶಿಷ್ಟಾ ಇತಿ ಮೇ ಮತಿಃ ॥೨೭॥

ಇವರೇ ಮೊದಲಾದವರ ಧರ್ಮಪ್ರವಚನಗಳನ್ನು ಕೇಳಿದ್ದರೂ ನಿನ್ನ ಮುಖದಿಂದ ಹೊರಹೊಮ್ಮುವ ಧರ್ಮವಾಣಿಯು ಅತ್ಯಂತ ಪಾವನವೆಂದೂ, ಪವಿತ್ರವೆಂದೂ, ವಿಶಿಷ್ಟವಾದುದೆಂದು ನನ್ನ ಬುದ್ಧಿಯು.

ತಸ್ಮಾದ್ಧಿ ತ್ವಾಂ ಪ್ರಪನ್ನಸ್ಯ ತ್ವದ್ಭಕ್ತಸ್ಯ ಚ ಭಾವತಃ ।
ಯುಷ್ಮದೀಯಾನ್ ಪರಾನ್ ಧರ್ಮಾನ್ ಪುಣ್ಯಾನ್ ಕಥಯ ಮೇಽಚ್ಯುತ ॥

ಆದ್ದರಿಂದ ಕೇಶವನೇ, ಶರಣಾಗತನಾಗಿರುವ, ಭಕ್ತನಾಗಿರುವ ನನಗೆ ಪವಿತ್ರವೂ ಶ್ರೇಷ್ಠವೂ ಆಗಿರುವ ನಿನ್ನ ಧರ್ಮವನ್ನು ಅರ್ಥಾತ್ ವೈಷ್ಣವಧರ್ಮವನ್ನು ಬೋಧಿಸು.

ವೈಶಂಪಾಯನಃ

ಏವಮುಕ್ತಸ್ತು ಧರ್ಮಜ್ಞೋ ಧರ್ಮಪುತ್ರೇಣ ಮಾಧವಃ ।
ಉವಾಚ ಧರ್ಮಾನ್ ಸೂಕ್ಷ್ಮಾರ್ಥಾನ್ ಧರ್ಮಪುತ್ರಸ್ಯ ಧೀಮತಃ ॥೨೯॥

ವೈಶಂಪಾಯನ– ಜನಮೇಜಯ, ಧರ್ಮಜನಾದ ಯುಧಿಷ್ಠಿರನು ಹೀಗೆ ಪ್ರಶ್ನಿಸುತ್ತಿರಲು ಮಾಧವನು ಅತ್ಯಂತ ಸಂತೋಷದಿಂದ, ಸೂಕ್ಷ್ಮವಾದ ಅರ್ಥಗಳಿಂದ ಕೂಡಿದ ಧರ್ಮಗಳನ್ನು ಹೇಳಲಾರಂಭಿಸಿದನು.

ಶ್ರೀಭಗವಾನ್

ಏವಂ ತೇ ಯಸ್ಯ ಕೌಂತೇಯ ಯತ್ನೋ ಧರ್ಮೇಷು ಸುವ್ರತ ।
ತ್ವತ್ಸಮೋ ದುರ್ಲಭೋ ಲೋಕೇ ನ ಕಶ್ಚಿದಿಹ ವಿದ್ಯತೇ ॥೩೦॥

ಶ್ರೀಭಗವಾನ್– ವ್ರತನಿಷ್ಠನೇ, ಕುಂತೀಸುತನೇ, ಧರ್ಮಗಳನ್ನು ತಿಳಿಯುವುದರಲ್ಲಿ, ಧರ್ಮಾನುಷ್ಠಾನ ಮಾಡುವುದರಲ್ಲಿ ಪ್ರಯತ್ನಶೀಲನಾಗಿರುವ ನಿನಗೆ ಈ ಲೋಕದಲ್ಲಿ ದುರ್ಲಭವಾದುದು ಯಾವುದೂ ಇರುವುದಿಲ್ಲ.

ಧರ್ಮಃಶ್ರುತೋ ವಾ ದೃಷ್ಟೋ ವಾ ಕಥಿತೋ ವಾ ಕೃತೋಽಪಿ ವಾ ।
ಅನುಮೋದಿತೋ ವಾ ರಾಜೇಂದ್ರ ಪುನಾತೀಹ ಸದಾ ನರಮ್ ॥೩೧॥

ಧರ್ಮದ ವಿಷಯವನ್ನು ಕೇಳಿದರೂ, ಧರ್ಮಕಾರ್ಯವನ್ನು ನೋಡಿದರೂ, ಧರ್ಮಪ್ರವಚನ ಮಾಡಿದರೂ, ಧರ್ಮಕಾರ್ಯಕ್ಕೆ ಅನುಮೋದನೆ ನೀಡಿದರೂ ಮನುಷ್ಯನು ಇಂದ್ರಪದವಿಯನ್ನು ಹೊಂದುತ್ತಾನೆ.

ಧರ್ಮಃ ಪಿತಾ ಚ ಮಾತಾ ಚ ಧರ್ಮೋಽಥ ಸುಹೃದಸ್ತಥಾ ।
ಧರ್ಮೋ ಭ್ರಾತಾ ಸಖಾ ಚೈವ ಧರ್ಮಃ ಸ್ವಾಮೀ ಪರಂತಪ ॥೩೨॥

ಪರಂತಪನೇ, ಧರ್ಮವೇ ತಂದೆ, ಧರ್ಮವೇ ತಾಯಿ, ಧರ್ಮವೇ ರಕ್ಷಕ, ಧರ್ಮವೇ ಸ್ನೇಹಿತ, ಧರ್ಮವೇ ಸಹೋದರ, ಧರ್ಮವೇ ಸ್ವಾಮಿ.

ಧರ್ಮಾದರ್ಥಶ್ಚ ಕಾಮಶ್ಚ ಧರ್ಮಾದ್ ಭೋಗಾಃ ಸುಖಾನಿ ಚ ।
ಧರ್ಮಾದೈಶ್ವರ್ಯಮೇವಾಗ್ರ್ಯಂ ಧರ್ಮಾತ್ ಸ್ವರ್ಗಗತಿಃ ಪರಾ ॥೩೩॥

ಧರ್ಮದಿಂದಲೇ ಅರ್ಥ-ಕಾಮ-ಭೋಗ-ಸುಖ-ಉತ್ತಮವಾದ ಐಶ್ವರ್ಯ, ಸರ್ವೋತ್ತಮವಾದ ಸ್ವರ್ಗ ಇವೆಲ್ಲವೂ ಲಭಿಸುತ್ತವೆ.

ಧರ್ಮೋಽಯಂ ಸೇವಿತಃ ಶುದ್ಧಸ್ತ್ರಾಯತೇ ಮಹತೋ ಭಯಾತ್ ।
ದ್ವಿಜತ್ವಂ ದೇವತಾತ್ವಂ ಚ ಧರ್ಮಃ ಪ್ರಾಪಯತೇ ನರಮ್ ॥೩೪॥

ಇಂತಹ ಶುದ್ಧವಾದ ಧರ್ಮವನ್ನು ಅನುಷ್ಠಾನ ಮಾಡಿದರೆ ಆ ಧರ್ಮವು ಅನುಷ್ಠಾನಶೀಲನನ್ನು ಮಹಾಭಯದಿಂದ ರಕ್ಷಿಸುತ್ತದೆ. ಧರ್ಮದಿಂದಲೇ ದ್ವಿಜತ್ವ, ದೇವತ್ವಗಳು ಲಭಿಸುತ್ತವೆ. ಮನುಷ್ಯನನ್ನು ಪಾವನಗೊಳಿಸುವುದೂ ಧರ್ಮವೇ ಆಗಿದೆ.

ಯದಾ ಚ ಕ್ಷೀಯತೇ ಪಾಪಂ ಕಾಲೇನ ಪುರುಷಸ್ಯ ತು ।
ಸದಾ ಸಂಜ್ಞಾಯತೇ ಬುದ್ಧಿರ್ಧರ್ಮಂ ಕರ್ತುಂ ಯುಧಿಷ್ಠಿರ ॥೩೫॥

ಕಾಲಕ್ರಮವಾಗಿ ಮನುಷ್ಯನ ಪಾಪವು ಯಾವಾಗ ನಾಶವಾಗುತ್ತದೋ ಆಗ ಮನುಷ್ಯನಿಗೆ ಧರ್ಮಕಾರ್ಯವನ್ನು ಮಾಡುವ ಬುದ್ಧಿಯು ಉಂಟಾಗುತ್ತದೆ.

ಜನ್ಮಾಂತರಸಹಸ್ರೈಸ್ತು ಮಾನುಷತ್ವಂ ಹಿ ದುಲರ್ಭಮ್ ।
ತಲ್ಲಬ್ಧ್ವಾऽಪೀಹ ಯೋ ಧರ್ಮಂ ನ ಕರೋತಿ ಸ ವಂಚಿತಃ ॥೩೬॥

ಮನುಷ್ಯರಿಗೆ ಮನುಷ್ಯತ್ವವು ತುಂಬಾ ದುರ್ಲಭವಾದುದು. ಸಾವಿರ ಯೋನಿಗಳಲ್ಲಿ ಹುಟ್ಟಿದರೂ ಮನುಷ್ಯಜನ್ಮ ಸಿಗುವುದು ಬಹಳ ಕಷ್ಟ. ಅಂತಹ ಮನುಷ್ಯತ್ವ ಪಡೆದ ಬಳಿಕವೂ ಧರ್ಮಾಚರಣೆಯನ್ನು ಮಾಡದಿದ್ದಲ್ಲಿ ಆತನು ಪುಣ್ಯದಿಂದ ವಂಚಿತನಾಗುತ್ತಾನೆ.

ಕುತ್ಸಿತಾಶ್ಚ ದರಿದ್ರಾಶ್ಚ ವಿರೂಪಾ ವ್ಯಾಧಿತಾಸ್ತಥಾ ।
ಪರದ್ವೇಷ್ಯಾಶ್ಚ ಮೂರ್ಖಾಶ್ಚ ನ ತೈರ್ಧರ್ಮಃ ಕೃತಃ ಪುರಾ ॥೩೭॥

ಈ ಲೋಕದಲ್ಲಿ ಯಾರು ನಿಂದನೆಗೆ ಗುರಿಯಾಗಿರುತ್ತಾರೋ, ದರಿದ್ರರೋ, ಕುರೂಪಿಗಳೋ, ದೀರ್ಘಕಾಲದ ರೋಗಗಳಿಂದ ಪೀಡಿತರೋ, ಕಾರಣವಿಲ್ಲದೆ ಮತ್ತೊಬ್ಬರನ್ನು ದ್ವೇಷಿಸುವರೋ, ಮೂರ್ಖರೋ ಅವರೆಲ್ಲರೂ ಈ ಧರ್ಮವನ್ನು ಆಚರಿಸುವುದಿಲ್ಲ. ಆದ್ದರಿಂದ ಅವರ ದುಃಖವು ಪರಿಹಾರವಾಗುವುದಿಲ್ಲ.

ಯೇ ತು ದೀರ್ಘಾಯುಷಃ ಶೂರಾಃ ಪಂಡಿತಾ ಭೋಗಿನಸ್ತಥಾ ।
ನೀರೋಗಾ ರೂಪಸಂಪನ್ನಾಸ್ತೈರ್ಧರ್ಮಾಃ ಸುಕೃತಾಃ ಪುರಾ ॥೩೮॥

ಯಾರು ದೀರ್ಘಾಯುಷಿಗಳೋ, ಶೂರರೋ, ಪಂಡಿತರೋ, ಭೋಗಿಗಳೋ, ರೂಪಸಂಪನ್ನರೋ ಅವರು ಹಿಂದೆ ಧರ್ಮವನ್ನು ಆಚರಿಸಿದ್ದರೆಂದು, ಅದರ ಪರಿಣಾಮವಾಗಿ ಈ ಜನ್ಮದಲ್ಲಿಯೂ ಉತ್ತಮಸ್ಥಿತಿ ಪ್ರಾಪ್ತವಾಗಿರುವುದೆಂದು ತಿಳಿಯಬೇಕು.

ಏವಂ ಧರ್ಮಃ ಕೃತಃ ಸದ್ಯೋ ನಯತೇ ಗತಿಮುತ್ತಮಾಮ್ ।
ಅಧರ್ಮಃ ಸೇವ್ಯಮಾನಸ್ತು ತಿರ್ಯಗ್ಯೋನಿಂ ನಯತ್ಯಮುಮ್ ॥೩೯॥

ಹೀಗೆ ಶುದ್ಧಭಾವದಿಂದ ಯಾವ ಪುರುಷನು ಧರ್ಮವನ್ನು ಆಚರಿಸುತ್ತಾನೋ ಅವನು ಉತ್ತಮ ಗತಿಯನ್ನು ಹೊಂದುತ್ತಾನೆ. ಅಧರ್ಮಾಚರಣೆಯಲ್ಲಿ ಆಸಕ್ತನಾದವನು ಪಶು-ಪಕ್ಷ್ಯಾದಿ ಯೋನಿಗಳಲ್ಲಿ ಹುಟ್ಟುತ್ತಾನೆ.

ಇದಂ ರಹಸ್ಯಂ ಕೌಂತೇಯ ಶ್ರೂಯತಾಮಿದಮುತ್ತಮಮ್ ।
ಕಥಯಿಷ್ಯೇ ಪರಂ ಗುಹ್ಯಂ ಮಮ ಭಕ್ತಸ್ಯ ಪಾಂಡವ ॥೪೦॥

ಕೌಂತೇಯನೇ, ಪರಮಶ್ರೇಷ್ಠವಾದ ಧರ್ಮರಹಸ್ಯವನ್ನು ಕೇಳು. ಭಕ್ತನಾದ ನಿನಗೆ ಶ್ರೇಷ್ಠಧರ್ಮವನ್ನು ಬೋಧಿಸುತ್ತೇನೆ.

ಇಷ್ಟಸ್ತ್ವಮಸಿ ಮೇಽತ್ಯರ್ಥಂ ಪ್ರಪನ್ನಶ್ಚಾಸಿ ಮಾಂ ಸದಾ ।
ಪರಮಾರ್ಥಮಪಿ ಬ್ರೂಯಾಂ ಕಿಂ ಪುನರ್ಧರ್ಮಸಂಹಿತಾಮ್ ॥೪೧॥

ಧರ್ಮಜನೇ, ನೀನು ನನಗೆ ಇಷ್ಟನಾಗಿರುವಿ. ಶರಣಾಗತನಾಗಿರುವಿ. ಪರಮ ಶ್ರೇಷ್ಠವಾದ ಭಗವತತ್ತ್ವವನ್ನೇ ನಿನಗೆ ಹೇಳುತ್ತೇನೆ, ಹೀಗಿರುವಾಗ ಧರ್ಮದ ರಹಸ್ಯವನ್ನು ಹೇಳದಿರುತ್ತೇನೆಯೇ?

ಇದಂ ಮೇ ಮಾನುಷಂ ಜನ್ಮ ಕೃತಮಾತ್ಮನಿ ಮಾಯಯಾ ।
ಧರ್ಮಸಂಸ್ಥಾಪನಾಯೈವ ದುಷ್ಟಾನಾಂ ಶಾಸನಾಯ ಚ ॥೪೨॥

ನಾನು ನನ್ನ ಸಂಕಲ್ಪಕ್ಕನುಗುಣವಾಗಿ ಮನುಷ್ಯಯೋನಿಯನ್ನು ಆಶ್ರಯಿಸಿ ಧರ್ಮಸ್ಥಾಪನೆ, ದುಷ್ಟರ ಶಾಸನ- ಇವೆರಡು ಕಾರಣದಿಂದ ಅವತಾರ ಮಾಡಿದ್ದೇನೆ.

ಮಾನುಷ್ಯಂ ಭಾವಮಾಪನ್ನಂ ಯೇ ಮಾಂ ಗೃಹ್ಣಂತ್ಯವಜ್ಞಯಾ ।
ಸಂಸರಂತೀಹ ತೇ ಮೂಢಾಸ್ತಿರ್ಯಗ್ಯೋನಿಷ್ವನೇಕಶಃ ॥೪೩॥

ಮನುಷ್ಯನ ಶರೀರವನ್ನು ಧಾರಣೆ ಮಾಡಿರುವ ನನ್ನನ್ನು ಯಾರು ಮನುಷ್ಯನೆಂದೇ ಭಾವಿಸಿ ತಿರಸ್ಕರಿಸುತ್ತಾರೋ ಅಂತಹ ಮೂಢರು ಸಂಸಾರಚಕ್ರದಲ್ಲಿ ಸಿಲುಕಿ ಪುನಃ ಪುನಃ ಪಶು-ಪಕ್ಷಿಗಳಾಗಿ ಹುಟ್ಟುತ್ತಾರೆ.

ಯೇ ಚ ಮಾಂ ಸರ್ವಭೂತಸ್ಥಂ ಪಶ್ಯಂತಿ ಜ್ಞಾನಚಕ್ಷುಷಃ ।
ಮದ್ಭಕ್ತಾಂಸ್ತಾನ್ ಸದಾ ಯುಕ್ತಾನ್ ಮತ್ಸಮೀಪಂ ನಯಾಮ್ಯಹಮ್ ॥

ಎಲ್ಲರ ಪ್ರಾಣಿಗಳ ಹೃದಯಗುಹಾವಾಸಿಯಾಗಿ ಇರುವ ನನ್ನನ್ನು ಯಾರು ಜ್ಞಾನದ ದೃಷ್ಟಿಯಿಂದ ತಿಳಿಯುತ್ತಾರೋ, ನನ್ನಲ್ಲಿ ಆಸಕ್ತರಾಗುತ್ತಾರೋ ಅಂತಹ ಭಕ್ತರು ನನ್ನ ಮನೆಗೇ ಆಗಮಿಸುತ್ತಾರೆ. ಅವರನ್ನು ಮೃತ್ಯುಸಂಸಾರದಿಂದ ಪಾರು ಮಾಡುತ್ತೇನೆ.

ಮದ್ಭಕ್ತಾ ನ ವಿನಶ್ಯಂತಿ ಮದ್ಭಕ್ತಾ ವೀತಕಲ್ಮಷಾಃ ।
ಮದ್ಭಕ್ತಾನಾಂ ತು ಮಾನುಷ್ಯೇ ಸಫಲಂ ಜನ್ಮ ಪಾಂಡವ ॥೪೫॥

ನನ್ನ ಭಕ್ತರೆಂದಿಗೂ ನಾಶವನ್ನು ಹೊಂದುವುದಿಲ್ಲ. ಸಮಸ್ತ ಪಾಪಗಳಿಂದ ವಿಮುಕ್ತರಾಗಿರುತ್ತಾರೆ. ನನ್ನ ಭಕ್ತರಿಗೆ ನಾನು ನೀಡಿರುವ ಮನುಷ್ಯಜನ್ಮವು ಸಫಲವಾಗುತ್ತದೆ.

ಅಪಿ ಪಾಪೇಷ್ವಭಿರತಾ ಮದ್ಭಕ್ತಾಃ ಪಾಂಡುನಂದನ ।
ಮುಚ್ಯಂತೇ ಪಾತಕೈಃ ಸರ್ವೈಃ ಪದ್ಮಪತ್ರಮಿವಾಂಭಸಾ ॥೪೬॥

ನನ್ನ ಭಕ್ತರು ಒಂದುವೇಳೆ ಪಾಪಕರ್ಮದಲ್ಲಿ ಆಸಕ್ತರಾಗಿದ್ದರೂ ಕಮಲಪತ್ರದಂತೆ ನಿರ್ಲಿಪ್ತರಾಗಿ ಪಾಪದಿಂದ ಮುಕ್ತರಾಗುತ್ತಾರೆ.

ಜನ್ಮಾಂತರಸಹಸ್ರೇಷು ತಪಸಾ ಭಾವಿತಾತ್ಮನಾಮ್ ।
ಮದ್ಭಕ್ತಿರ್ವಿದ್ಯತೇ ತಾತ ಮನುಷ್ಯಾಣಾಂ ನ ಸಂಶಯಃ ॥೪೭॥

ಸಾವಿರಾರು ಜನ್ಮಗಳಲ್ಲಿ ಮಾಡಿದ ತಪಸ್ಸಿನ ಫಲದಿಂದ ಮನುಷ್ಯರ ಹೃದಯವು ಶುದ್ಧವಾಗುತ್ತದೆ. ಅಂತಹ ಶುದ್ಧಚೇತನರಲ್ಲಿ ಭಕ್ತಿಯು ಮೂಡುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯಚ್ಚ ರೂಪಂ ಪರಂ ಗುಹ್ಯಂ ಕೂಟಸ್ಥಮಚಲಂ ಧ್ರುವಮ್ ।
ನ ದೃಶ್ಯತೇ ತಥಾ ದೇವೈರ್ಮದ್ಭಕ್ತೈರ್ದೃಶ್ಯತೇ ಯಥಾ ॥೪೮॥

ಕೂಟಸ್ಥನಾದ, ಅಚಲವಾದ, ಶಾಶ್ವತವಾದ, ರಹಸ್ಯವಾದ ನನ್ನ ರೂಪವನ್ನು ನನ್ನ ಭಕ್ತರು ನೋಡುವಂತೆ ದೇವತೆಗಳೂ ನೋಡಲಾರರು.

ಅಪರಂ ಯಚ್ಚ ಮೇ ರೂಪಂ ಪ್ರಾದುರ್ಭಾವೇಷು ದೃಶ್ಯತೇ ।
ತದರ್ಚಯಂತಿ ಸರ್ವಾರ್ಥೈಃ ಸರ್ವಭೂತಾನಿ ಪಾಂಡವ ॥೪೯॥

ನನ್ನ ಅವತಾರದ ಪ್ರಸಂಗದಲ್ಲಿ ನನ್ನ ಬೇರೆ ಯಾವ ರೂಪವನ್ನು ನೋಡುತ್ತಾರೋ ಸಮಸ್ತ ಜೀವಿಗಳೂ ಅಂತಹ ಬೇರೆ ಬೇರೆ ರೂಪಗಳನ್ನು ಪುರುಷಾರ್ಥಗಳಿಂದ ಆರಾಧಿಸುತ್ತಾರೆ.

ಕಲ್ಪಕೋಟಿಸಹಸ್ರೇಷು ವ್ಯತೀತೇಷ್ವಾಗತೇಷು ಚ ।
ದರ್ಶಯಾಮಿ ತು ಯದ್ರೂಪಂ ತತ್ ಪ್ರಪಶ್ಯಂತಿ ಮೇ ಸುರಾಃ ॥೫೦॥

ಸಾವಿರಕೋಟಿ ಕಲ್ಪಗಳು ಕಳೆದ ಬಳಿಕ ದೇವತೆಗಳು ಕಾಣುವ ನನ್ನ ರೂಪವನ್ನು ಭಕ್ತರಿಗೆ ತೋರಿಸುತ್ತೇನೆ.

ಸ್ಥಿತ್ಯುತ್ಪತ್ತಿಪ್ಲವಕರಂ ಯೋ ಮಾಂ ಜ್ಞಾತ್ವಾ ಪ್ರಪದ್ಯತೇ ।
ಅನುಗೃಹ್ಣಾಮ್ಯಹಂ ತಂ ವೈ ಸಂಸಾರಾನ್ಮೋಚಯಾಮಿ ಚ ॥೫೧॥

ಜಗತ್ತಿನ ಉತ್ಪತ್ತಿ , ಸ್ಥಿತಿ, ಲಯಗಳಿಗೆ ನಾನೇ ಕಾರಣನೆಂದು ಯಾವನು ತಿಳಿದು ಕೊಳ್ಳುತ್ತಾನೋ ಅವನನ್ನು ಅನುಗ್ರಹಿಸುತ್ತೇನೆ. ಸಂಸಾರಬಂಧನದಿಂದ ಬಿಡಿಸುತ್ತೇನೆ.

ಅಹಮಾದಿರ್ಹಿ ದೇವಾನಾಂ ಸೃಷ್ಟಾ ಬ್ರಹ್ಮಾದಯೋ ಮಯಾ ।
ಪ್ರಕೃತಿಂ ಸ್ವಾಮವಷ್ಟಭ್ಯ ಜಗತ್ಸರ್ವಂ ಸೃಜಾಮ್ಯಹಮ್ ॥೫೨॥

ದೇವತೆಗಳಿಗೆ ನಾನೇ ಮೂಲಕಾರಣ. ಬ್ರಹ್ಮನನ್ನು ಸೃಷ್ಟಿಸಿದವನು ನಾನೇ. ಇತರ ದೇವತೆಗಳಿಗೂ ನಾನೇ ಸ್ವಾಮಿ. ಪ್ರಕೃತಿಯನ್ನು ಉಪಯೋಗಿಸಿಕೊಂಡು ಸಮಗ್ರ ಜಗತ್ತನ್ನು ನಾನೇ ಸೃಷ್ಟಿಸುತ್ತೇನೆ.

ತಮೋಮೂಲೋಽಹಮವ್ಯಕ್ತೋ ರಜೋಮಧ್ಯೇ ಪ್ರತಿಷ್ಠಿತಃ ।
ಊರ್ಧ್ವಂ ಸತ್ತ್ವವಿಶಾಲೋಽಹಂ ಬ್ರಹ್ಮಾದಿಸ್ತಂಭಸಂಹಿತಃ ॥೫೩॥

ನಾನು ತಮೋಗುಣಕ್ಕೆ ಆಧಾರನಾಗಿದ್ದೇನೆ. ಅವ್ಯಕ್ತನಾಗಿ ರಜೋಗುಣದ ಮಧ್ಯದಲ್ಲಿಯೂ ಪ್ರತಿಷ್ಠಿತನಾಗಿದ್ದೇನೆ. ಉತ್ಕೃಷ್ಟವಾದ ಸತ್ತ್ವಗುಣದಲ್ಲಿಯೂ ವ್ಯಾಪಿಸಿದ್ದೇನೆ. ಬ್ರಹ್ಮಾದಿಸ್ತಂಭಪರ್ಯಂತವೂ ಸಮಸ್ತ ಜೀವರಲ್ಲಿಯೂ ಸನ್ನಿಹಿತನಾಗಿರುತ್ತೇನೆ.

ಮೂರ್ಧಾನಂ ಮೇ ದಿವಂ ವಿದ್ಧಿ ಚಂದ್ರಾದಿತ್ಯೌ ಚ ಲೋಚನೇ ।
ಗಾವೋಽಗ್ನಿರ್ಬ್ರಾಹ್ಮಣೋ ವಕ್ತ್ರಂ ಮಾರುತಃ ಶ್ವಸನಂ ಚ ಮೇ ॥೫೪॥

ಸ್ವರ್ಗವೇ ನನ್ನ ತಲೆ. ಸೂರ್ಯ-ಚಂದ್ರರು ನನ್ನ ಎರಡು ಕಣ್ಣುಗಳು. ಗೋವು, ಅಗ್ನಿ, ಬ್ರಾಹ್ಮಣರು ನನ್ನ ಮುಖಸ್ಥಾನೀಯರು. ವಾಯುವು ನನ್ನ ಶ್ವಾಸವಾಗಿದೆ.

ದಿಶೋ ಮೇ ಬಾಹವಶ್ಚಾಷ್ಟೌ ನಕ್ಷತ್ರಾಣಿ ವಿಭೂಷಣಮ್ ।
ಅಂತರಿಕ್ಷಮುರೋ ವಿದ್ಧಿ ಸರ್ವಭೂತಪ್ರಕಾಶಕಮ್ ॥೫೫॥

ಎಂಟುದಿಕ್ಕುಗಳು ನನ್ನ ಬಾಹುಗಳು. ನಕ್ಷತ್ರಗಳೇ ನನ್ನ ಆಭರಣ. ಸಮಸ್ತ ಚೇತನರಿಗೆ ಅವಕಾಶಪ್ರದವಾದ ಅಂತರಿಕ್ಷವೇ ನನ್ನ ಎದೆ ಎಂದು ತಿಳಿ.

ಮಾರ್ಗೋ ಮೇಘಾನಿಲಾಭ್ಯಾಂ ತು ಯನ್ಮಮೋದರಮವ್ಯಯಮ್ ॥

ಮೇಘ ಮತ್ತು ವಾಯುಗಳು ಸಂಚರಿಸುವ ಯಾವ ಸ್ಥಳವಿದೆಯೋ ಅದು ನನ್ನ ನಾಶರಹಿತವಾದ ಹೊಟ್ಟೆ ಎಂದು ತಿಳಿ.

ಪೃಥಿವೀಮಂಡಲಂ ಯದ್ವೈ ದಿರ್ಯಿಪಾರ್ಣವನಗೈರ್ಯುತಮ್ ।
ಸರ್ವಸಂಧಾರಣೋಪೇತಂ ಪಾದೌ ಮಮ ಯುಧಿಷ್ಠಿರ ॥೫೭॥

ಸಪ್ತದಿರ್ಯಿಪಗಳು, ಸಪ್ತಸಮುದ್ರಗಳು, ಅರಣ್ಯಗಳು, ಚರಾಚರ ವಸ್ತುಗಳು, ಇವುಗಳನ್ನು ಧರಿಸಿರುವ ಭೂದೇವಿಯೇ ನನ್ನ ಎರಡು ಪಾದಗಳಾಗಿವೆ.

ಸ್ಥಿತೋ ಹ್ಯೇಕಗುಣಃ ಖೇಽಹಂ ದ್ವಿಗುಣಶ್ಚಾಸ್ಮಿ ಮಾರುತೇ ।
ತ್ರಿಗುಣೋಽಗ್ನೌ ಸ್ಥಿತೋಽಹಂ ವೈ ಸಲಿಲೇ ತು ಚತುರ್ಗುಣಃ ॥೫೮॥

ಆಕಾಶದಲ್ಲಿ ಒಂದು ಗುಣವನ್ನೂ, ವಾಯುರೂಪದಲ್ಲಿ ಒಂದು ಗುಣವನ್ನೂ, ಅಗ್ನಿಯ ರೂಪದಲ್ಲಿ ಮೂರು ಗುಣಗಳನ್ನೂ, ನೀರಿನಲ್ಲಿ ನಾಲ್ಕು ಗುಣಗಳನ್ನೂ, ಭೂಮಿಯಲ್ಲಿ ಐದು ಗುಣಗಳನ್ನೂ ಇಟ್ಟಿರುತ್ತೇನೆ.

ಶಬ್ದಾದ್ಯಾ ಯೇ ಗುಣಾಃ ಪಂಚ ಮಹಾಭೂತೇಷು ಪಂಚಸು ।
ತನ್ಮಾತ್ರಸಂಸ್ಥಿತಃ ಸೋಽಹಂ ಪೃಥಿವ್ಯಾಂ ಪಂಚಧಾ ಸ್ಥಿತಃ ॥೫೯॥

ಶಬ್ದ-ಸ್ಪರ್ಶವೇ ಮೊದಲಾದ ಯಾವ ಐದು ಗುಣಗಳಿವೆಯೋ ಅವೆಲ್ಲವೂ ನನ್ನ ಸ್ವರೂಪವೇ ಆಗಿವೆ. ಪಂಚಮಹಾಭೂತಗಳಲ್ಲಿ ಆಯಾ ರೂಪಗಳಲ್ಲಿ ನಿಂತು ವ್ಯಾಪಾರವನ್ನು ಮಾಡುತ್ತೇನೆ.

ಅಹಂ ಸಹಸ್ರಶೀರ್ಷಸ್ತು ಸಹಸ್ರವದನೇಕ್ಷಣಃ ।
ಸಹಸ್ರಬಾಹೂದರಭೃತ್ ಸಹಸ್ರಾಕ್ಷಃ ಸಹಸ್ರಪಾತ್ ॥೬೦॥

ನಾನು ಅನಂತ ಬಾಹುಗಳುಳ್ಳವನು. ಅನಂತರ ಹೊಟ್ಟೆಗಳುಳ್ಳವನೂ, ಅನಂತ ಶಿರಗಳುಳ್ಳವನು. ಅನಂತ ಮುಖಗಳಿಂದ, ನೋಡುವವನೂ, ಅನಂತ ಕಣ್ಣುಗಳುಳ್ಳವನು. ಅನಂತ ಪಾದಗಳುಳ್ಳವನೂ ಆಗಿದ್ದೇನೆ.

ಧೃತ್ವೋರ್ವೀಂ ಸರ್ವತಃ ಸಮ್ಯಗತ್ಯತಿಷ್ಠದ್ ದಶಾಂಗುಲಮ್ ।
ಸರ್ವಭೂತಾತ್ಮಭೂತಸ್ಥಃ ಸರ್ವವ್ಯಾಪೀ ನರೋ ಹ್ಯಹಮ್ ॥೬೧॥

ಭೂಮಿಯನ್ನು ಸಮಸ್ತ ವಿಧದಿಂದ ಧರಿಸಿರುವ ನಾನು ಸಮಸ್ತ ಭೂಮಂಡಲವನ್ನು ದಾಟಿ ಹತ್ತಾರು ಪಟ್ಟು ಮೇಲೆ ನಿಂತಿದ್ದೇನೆ. ಸಮಸ್ತ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿ ವ್ಯಾಪಕನಾಗಿದ್ದೇನೆ.

ಅಚಿಂತ್ಯೋಽಹಮನಂತೋಽಹಮಜರೋಽಹಮಜೋ ಹ್ಯಹಮ್ ।
ಅನಾದ್ಯೋಽಹಮವಧ್ಯೋಽಹಮ್ ಅಪ್ರಮೇಯೋಽಹಮವ್ಯಯಃ ॥

ನಾನು ಅಚಿಂತ್ಯಮಹಿಮನು, ಅನಂತನು, ಅವಧ್ಯನು, ಅಪ್ರಮೇಯನು, ಅಜರನು (ವಾರ್ಧಕ್ಯರಹಿತನು), ಅಜನು, ಅನಾದಿಯೂ, ಅವ್ಯಯನೂ ಆಗಿದ್ದೇನೆ.

ನಿರ್ಗುಣೋಽಹಂ ನಿಗೂಢಾತ್ಮಾ ನಿತ್ಯೋಽಹಂ ನಿರ್ಮಮೋಽಪಿ ಚ ।
ನಿರ್ದ್ವಂದ್ವೋ ನಿರ್ವಿಕಾರೋಽಹಂ ನಿದಾನಂ ಚಾಮೃತಸ್ಯ ಹ ॥೬೩॥

ನಾನು ಪ್ರಾಕೃತಗುಣರಹಿತನು. ಸಮಸ್ತ ಜೀವರಲ್ಲಿ ಕಣ್ಣಿಗೆ ಕಾಣದೆ ಇರುವ ಅಂತರ್ಯಾಮಿಯು. ನಿತ್ಯನೂ, ನಿರ್ಮಮನೂ, ದ್ವಂದ್ವಾತೀತನೂ, ನಿರ್ವಿಕಾರಿಯೂ, ಸಮಸ್ತರಿಗೂ ಕಾರಣನೂ, ಅಮೃತಪ್ರಾಪ್ತಿಗೆ ಹೇತುವೂ ಆಗಿದ್ದೇನೆ.

ಸ್ವಧಾ ಚಾಹಂ ಸುಧಾ ಚಾಹಂ ಸ್ವಾಹಾಕಾರೋ ನರಾಧಿಪ ॥೬೪॥

ದೇವತೆಗಳಿಗಾಗಿ ನೀಡುವ ಹವಿಷ್ಯಪದಾರ್ಥಗಳಲ್ಲಿ 'ಸ್ವಾಹಾ' ಎಂಬ ಆಕಾರವನ್ನು ಹೊಂದಿದ್ದೇನೆ. ಪಿತೃಗಳಲ್ಲಿ 'ಸ್ವಧಾ' ಎಂದು, ಅಮೃತಪಾನಿಗಳಲ್ಲಿ 'ಸುಧಾ' ಎಂದು ಕರೆಸಿಕೊಳ್ಳುತ್ತೇನೆ.

ತೇಜಸಾ ತಪಸಾ ಚಾಹಂ ಭೂತಗ್ರಾಮಂ ಚತುರ್ವಿಧಮ್ ।
ಸ್ನೇಹಪಾಶಗುಣೈರ್ಬದ್ಧ್ವಾ ಧಾರಯಾಮ್ಯಾತ್ಮಮಾಯಯಾ ॥೬೫॥

ನಾಲ್ಕುಪ್ರಕಾರವಾದ ಇಂದ್ರಿಯಗಳನ್ನು ತೇಜಸ್ಸಿನಿಂದಲೂ, ತಪಸ್ಸಿನಿಂದಲೂ, ಸ್ನೇಹಪಾಶಗಳಿಂದ ಕಟ್ಟಿ ನನ್ನ ಸಂಕಲ್ಪದಂತೆ ಮುನ್ನಡೆಸುತ್ತೇನೆ.

ಚಾತುರಾಶ್ರಮಧರ್ಮೋSಹಂ ಚಾತುಹೋರ್ತ್ರಫಲಾಶನಃ ।
ಚತುರ್ಮೂರ್ತಿಶ್ಚತುರ್ವ್ಯೂಹಃ ಚತುರಾಶ್ರಮಭಾಜನಮ್ ॥೬೬॥

ನಾಲ್ಕು ಆಶ್ರಮಧರ್ಮಗಳನ್ನು ಅಭಿವ್ಯಕ್ತಿಗೊಳಿಸಿದವನು ನಾನು. ದ್ರವ್ಯಯಜ್ಞ, ತಪೋಯಜ್ಞ, ಜ್ಞಾನಯಜ್ಞ, ಸ್ವಾಧ್ಯಾಯ ಯಜ್ಞ ಎಂಬ ನಾಲ್ಕು ಯಜ್ಞಗಳಿಗೂ ನಿಯಾಮಕನು ನಾನು. ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಎಂಬ ಚತುರ್ಮೂರ್ತಿಯೂ ನಾನು. ನಾಲ್ಕು ಆಶ್ರಮಗಳಿಗೆ ನಿಯಾಮಕನೂ ನಾನು.

ಸಂಹೃತ್ಯಾಹಂ ಜಗತ್ಸರ್ವಂ ಕೃತ್ವಾ ವೈ ಗರ್ಭಮಾತ್ಮನಃ ।
ಶಯಾಮಿ ದಿವ್ಯಯೋಗೇನ ಪ್ರಲಯೇಷು ಯುಧಿಷ್ಠಿರ ॥೬೭॥

ಧರ್ಮಜನೇ, ಸಮಗ್ರ ಜಗತ್ತನ್ನು ಪ್ರಲಯಕಾಲದಲ್ಲಿ ಸಂಹರಿಸಿ, ಆ ಜೀವರನ್ನೆಲ್ಲ ಗರ್ಭದಲ್ಲಿ ಧರಿಸಿ, ದಿವ್ಯಯೋಗವನ್ನು ಆಶ್ರಯಿಸಿ ಪ್ರಲಯಕಾಲದಲ್ಲಿ ನಿದ್ರಿಸುತ್ತೇನೆ.

ಸಹಸ್ರಯುಗಪರ್ಯಂತಾಂ ಬ್ರಾಹ್ಮೀಂ ರಾತ್ರಿಂ ಮಹಾರ್ಣವೇ ।
ಸ್ಥಿತ್ವಾ ಸೃಜಾಮಿ ಭೂತಾನಿ ಜಂಗಮಾನಿ ಸ್ಥಿರಾಣಿ ಚ ॥೬೮॥

ಬ್ರಹ್ಮದೇವರ ಸಾವಿರ ಯುಗಗಳ ತನಕ ಪ್ರಲಯಸಮುದ್ರದಲ್ಲಿ ರಾತ್ರಿ ನಿದ್ರಿಸುತ್ತಾ, ಸ್ಥಾವರ-ಜಂಗಮರೂಪವಾದ ಸಮಸ್ತ ಪ್ರಾಣಿಗಳನ್ನು ನಾನೇ ಸೃಷ್ಟಿಸುತ್ತೇನೆ.

ಕಲ್ಪೇ ಕಲ್ಪೇ ಚ ಭೂತಾನಿ ಸಂಹರಾಮಿ ಸೃಜಾಮಿ ಚ ।
ನ ಚ ಮಾಂ ತಾನಿ ಜಾನಂತಿ ಮಾಯಯಾ ಮೋಹಿತಾನಿ ಹ ॥೬೯॥

ಪ್ರತಿಕಲ್ಪಗಳಲ್ಲಿಯೂ ಸಮಸ್ತ ಜೀವರಾಶಿಗಳನ್ನು ನಾನೇ ಸಂಹರಿಸುತ್ತೇನೆ, ಸೃಷ್ಟಿಸುತ್ತೇನೆ. ಆ ಪ್ರಕೃತಿಯ ಮಾಯೆಯು ಎಲ್ಲರನ್ನೂ ಆವರಿಸಿರುವುದರಿಂದ ಯಾರೂ ನನ್ನನ್ನು ಸೃಷ್ಟಿಕರ್ತನೆಂದು ಕರೆಯುವುದಿಲ್ಲ.

ಮಮ ಚೈವಾಂಧಕಾರಸ್ಯ ಮಾರ್ಗಿತವ್ಯಸ್ಯ ನಿತ್ಯಶಃ ।
ನಿರ್ವಾಣಸ್ಯೇವ (ಪ್ರಶಾಂತಸ್ಯೇವ) ದೀಪಸ್ಯ ಗತಿರ್ನೈವೋಪಲಭ್ಯತೇ ॥

ಅಂಧಕಾರದಲ್ಲಿರುವ ಪದಾರ್ಥವನ್ನು ಶಾಂತವಾದ ದೀಪವು ಹೇಗೆ ತಿಳಿಯಲಾಗದೋ ಹಾಗೆ ಅಜ್ಞಾನ, ಅಂಧಕಾರದಿಂದ ಜೀವರು, ಉದ್ದೀಪನಗೊಳ್ಳದೆ ತತ್ತ್ವಜ್ಞಾನವುಳ್ಳವರಾಗದೆ ನನ್ನನ್ನು ಹೋದಲಾರರು.

ನ ತದಸ್ತಿ ಕ್ವಚಿದ್ ರಾಜನ್ ಯತ್ರಾಹಂ ನ ಪ್ರತಿಷ್ಠಿತಃ ।
ನ ಚ ತದ್ ವಿದ್ಯತೇ ಭೂತಂ ಮಯಿ ಯನ್ನ ಪ್ರತಿಷ್ಠಿತಮ್ ॥೭೧॥

ಧರ್ಮರಾಜನೇ, ನಾನು ಸನ್ನಿಹಿತನಾಗದಿರುವ ಯಾವ ಪದಾರ್ಥಗಳೂ ಇಲ್ಲ. ನನ್ನನ್ನು ಆಶ್ರಯಿಸದೇ ಇರುವ ಯಾವ ಪದಾರ್ಥಗಳೂ ಜಗತ್ತಿನಲ್ಲಿ ಇರುವುದಿಲ್ಲ.

ಯಾವನ್ಮಾತ್ರಂ ಭವೇದ್ ಭೂತಂ ಸ್ಥೂಲಸೂಕ್ಷ್ಮಮಿದಂ ಜಗತ್ ।
ಜೀವಭೂತೋ ಹ್ಯಹಂ ತಸ್ಮಿಂಸ್ತಾವನ್ಮಾತ್ರಪ್ರತಿಷ್ಠಿತಃ ॥೭೨॥

ಈ ಜಗತ್ತಿನಲ್ಲಿ ಸೂಕ್ಷ್ಮವಾದ, ಸ್ಥೂಲವಾದ ಯಾವ ಪದಾರ್ಥಗಳಿವೆಯೋ ಅವುಗಳಲ್ಲಿ ಸೂಕ್ಷ್ಮ, ಸ್ಥೂಲರೂಪದಲ್ಲಿ ನಾನೇ ಸನ್ನಿಹಿತನಾಗಿದ್ದೇನೆ.

ಕಿಂ ಚಿತ್ರಂ ಬಹುನೋಕ್ತೇನ ಸತ್ಯಮೇತದ್ ಬ್ರವೀಮಿ ತೇ ।
ಯದ್ಭೂತಂ ಯದ್ಭವಿಷ್ಯದ್ವಾ ತತ್ಸರ್ವಮಹಮೇವ ತು ॥೭೩॥

ಯುಧಿಷ್ಠಿರನೇ, ಹೆಚ್ಚೇನು ಹೇಳಲಿ? ಸತ್ಯವಾದ ಒಂದು ಮಾತಿನ ಮೂಲಕ ನಾನು ಯಾರು ಎಂಬುದನ್ನು ನಿನಗೆ ತಿಳಿಸುತ್ತೇನೆ. ಹಿಂದೆ ಯಾವ ಜಗತ್ತು ಇತ್ತೋ, ಮುಂದೆ ಯಾವ ಜಗತ್ತು ಹುಟ್ಟುತ್ತದೋ, ಈಗ ಕಾಣುವ ಜಗತ್ತು ಯಾವುದಿದೆಯೋ ಅದೆಲ್ಲದಕ್ಕೂ ನಾನೇ ಮುಖ್ಯಕಾರಣನು.

ಮಯಾ ಸೃಷ್ಟಾನಿ ಭೂತಾನಿ ಮನ್ಮಯಾನಿ ಚ ಪಾಂಡವ ।
ಮಾಮೇವ ನ ವಿಜಾನಂತಿ ಮಾಯಯಾ ಮೋಹಿತಾನಿ ಮೇ ॥೭೪॥

ಸಮಸ್ತ ಪ್ರಾಣಿಗಳು ನನ್ನಿಂದಲೇ ಜನ್ಮವನ್ನು ತಾಳಿವೆ. ಆದ್ದರಿಂದ ಎಲ್ಲ ಪ್ರಾಣಿಗಳಲ್ಲಿಯೂ ನಾನೇ ಅಂತರ್ಯಾಮಿಯಾಗಿದ್ದೇನೆ. ಆದರೆ ಅಜ್ಞಾನದಿಂದ ಈ ಜೀವರು ಅಂತರ್ಯಾಮಿಯಾದ ನನ್ನನ್ನು ಅರ್ಥೈಸಿಕೊಂಡಿರುವುದಿಲ್ಲ.

ಏವಂ ಸರ್ವಂ ಜಗದಿದಂ ಸದೇವಾಸುರಮಾನುಷಮ್ ।
ಮತ್ತಃ ಪ್ರಭವತೇ ರಾಜನ್ ಮಯ್ಯೇವ ಪ್ರವಿಲೀಯತೇ ॥೭೫॥

ದೇವತೆಗಳು, ಅಸುರರು, ಮನುಷ್ಯರಿಂದ ಕೂಡಿರುವ ಈ ಸಮಗ್ರ ಜಗತ್ತು ನನ್ನಿಂದಲೇ ಹುಟ್ಟುತ್ತದೆ. ನನ್ನಲ್ಲೇ ಲಯ ಹೊಂದುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ಶ್ರೀಕೃಷ್ಣಸ್ಯ ಜಗದ್ ವ್ಯಾಪಕತ್ವಕಥನಂ ನಾಮ
ಸಪ್ತನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆಂಟನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ನಾಲ್ಕು ಆಶ್ರಮಗಳ ಧರ್ಮವನ್ನು ನಿರೂಪಿಸಿದುದು.

ವೈಶಂಪಾಯನಃ

ಏವಮಾತ್ಮೋದ್ಭವಂ ಸರ್ವಂ ಜಗದುದ್ದಿಶ್ಯ ಕೇಶವಃ ।
ಧರ್ಮಾನ್ ಧರ್ಮಾತ್ಮಜಸ್ಯೈವ ಪುಣ್ಯಾನಕಥಯತ್ ಪ್ರಭುಃ ॥೧॥

ವೈಶಂಪಾಯನ– ಜನಮೇಜಯನೇ, ಕೇಶವನು ತನ್ನಿಂದ ಉತ್ಪನ್ನವಾದ ಸಮಗ್ರ ಜಗತ್ತನ್ನು ಉದ್ದೇಶಿಸಿಕೊಂಡು, ಧರ್ಮಾತ್ಮಜನಾದ ಯುಧಿಷ್ಠಿರನನ್ನು ನೆಪಮಾಡಿಕೊಂಡು ಶ್ರೇಷ್ಠವಾದ ಪುಣ್ಯಕರವಾದ ಧರ್ಮಗಳನ್ನು ಬೋಧಿಸಿದನು.

ಶ್ರೀಭಗವಾನ್

ಶೃಣು ಪಾಂಡವ ತತ್ತೆ ರ್ಯಿನ ಪವಿತ್ರಂ ಪಾಪನಾಶನಮ್ ।
ಕಥ್ಯಮಾನಂ ಮಯಾ ಪುಣ್ಯಂ ಧರ್ಮಶಾಸ್ತ್ರಫಲಂ ಮಹತ್ ॥೨॥

ಶ್ರೀಭಗವಾನ್– ಪಾಂಡವನೇ, ನಾನು ಹೇಳುವ ಪವಿತ್ರವಾದ, ಪಾಪನಾಶಕವಾದ, ಪುಣ್ಯಪ್ರದವಾದ ಧರ್ಮಶಾಸ್ತ್ರಫಲವನ್ನು ಕೇಳಿಸಿಕೊ.

ಯಃ ಶೃಣೋತಿ ಶುಚಿರ್ಭೂತ್ವಾ ಏಕಚಿತ್ತಸ್ತಪೋಯುತಃ ।
ಸ್ವರ್ಗ್ಯಂ ಯಶಸ್ಯಮಾಯುಷ್ಯಂ ಧರ್ಮಂ ಜ್ಞೇಯಂ ಯುಧಿಷ್ಠಿರ ॥೩॥

ಶ್ರದ್ಧಧಾನಸ್ಯ ತಸ್ಯೇಹ ಯತ್ ಪಾಪಂ ಪೂರ್ವಸಂಚಿತಮ್ ।
ವಿನಶ್ಯತ್ಯಾಶು ತತ್ಸರ್ವಂ ಮದ್ಭಕ್ತಸ್ಯ ವಿಶೇಷತಃ ॥೪॥

ಯೋಗ್ಯನಾದ ಯಾವ ವ್ಯಕ್ತಿಯು ನಿರ್ಮಲವಾದ ಮನಸ್ಸಿನಿಂದ ತಪೋನುಷ್ಠಾನ ನಿರತನಾಗಿ, ಶುಚಿಯಾಗಿ, ಸ್ವರ್ಗವನ್ನು ನೀಡುವ, ಕೀರ್ತಿಯನ್ನು ನೀಡುವ, ಆಯುಷ್ಯವನ್ನು ಅಭಿವೃದ್ಧಿಗೊಳಿಸುವ ಧರ್ಮವನ್ನು ಕೇಳುತ್ತಾನೋ ಅಂತಹ ಶ್ರದ್ಧಾಯುಕ್ತನಾಗಿ ಶ್ರವಣ ಮಾಡಿದ ವ್ಯಕ್ತಿಯ ಪೂರ್ವಸಂಚಿತವಾದ ಸಕಲ ಪಾಪಗಳೂ ನನ್ನ ಧರ್ಮೋಪದೇಶದಿಂದ ನಾಶ ಹೊಂದುತ್ತವೆ. ವಿಶೇಷವಾಗಿ ನನ್ನ ಭಕ್ತನಾದವನಿಗೆ ಸಮಸ್ತ ಪಾಪಗಳೂ ನಾಶ ಹೊಂದುತ್ತವೆ.

ವೈಶಂಪಾಯನಃ

ಏವಂ ಶ್ರುತ್ವಾ ವಚಃ ಪುಣ್ಯಂ ಸತ್ಯಂ ಕೇಶವಭಾಷಿತಮ್ ।
ಪ್ರಹೃಷ್ಟಮನಸೋ ಭೂತ್ವಾ ಚಿಂತಯಂತೋऽದ್ಭುತಂ ಪರಮ್ ॥೫॥

ವೈಶಂಪಾಯನ– ಜನಮೇಜಯನೇ, ಪರಮಪವಿತ್ರವಾದ, ಸತ್ಯವಾದ ಶ್ರೀಕೃಷ್ಣನ ಇಂತಹ ಮಾತುಗಳನ್ನು ಸಂತುಷ್ಟವಾದ ಮನಸ್ಸಿನಿಂದ ಆಲೋಚಿಸುತ್ತಿದ್ದರು.

ದೇವಬ್ರಹ್ಮರ್ಷಯಃ ಸರ್ವೇ ಗಂಧರ್ವಾಪ್ಸರಸಸ್ತಥಾ ।
ಭೂತಯಕ್ಷಗ್ರಹಗಣಾ ಗುಹ್ಯಕಾ ಭುಜಗಾಸ್ತಥಾ ॥೬॥

ವಾಲಖಿಲ್ಯಾ ಮಹಾತ್ಮಾನೋ ಯೋಗಿನಸ್ತತ್ತ್ವದರ್ಶಿನಃ ।
ತಥಾ ಭಾಗವತಾಶ್ಚಾಪಿ ಪಂಚಕಾಲಮುಪಾಸಕಾಃ ॥೭॥

ಕೌತೂಹಲಸಮಾವಿಷ್ಟಾಃ ಪ್ರಹೃಷ್ಟಾಃ ಪರಮರ್ಷಯಃ ।
ಶ್ರೋತುಕಾಮಾಃ ಪರಂ ಗುಹ್ಯಂ ವೈಷ್ಣವಂ ಧರ್ಮಶಾಸನಮ್ ॥೮॥

ಹೃದಿ ಕರ್ತುಂ ಚ ತದ್ ವಾಕ್ಯಂ ಪ್ರಣೇಮುಃ ಶಿರಸಾ ತದಾ ॥೯॥

ದೇವತೆಗಳು, ಬ್ರಹ್ಮರ್ಷಿಗಳು, ಗಂಧರ್ವರು, ಅಪ್ಸರೆಯರು, ಭೂತ-ಯಕ್ಷ-ಗ್ರಹ ಗಣಗಳು, ಗುಹ್ಯಕರು, ಸರ್ಪಗಳು, ಮಹಾತ್ಮರಾದ ಜ್ಞಾನಿಗಳಾದ ವಾಲಖಿಲ್ಯರು,

ಯೋಗಿಗಳು, ತತ್ತ್ವದರ್ಶಿಗಳು, ಅದರಂತೆ ಭಗವಂತನನ್ನು ಐದು ಕಾಲದಲ್ಲಿ ಉಪಾಸನೆ ಮಾಡುವ ಪರಮಭಾಗವತೋತ್ತಮರು, ಕುತೂಹಲದಿಂದ ತುಂಬಿರುವ, ಸಂತುಷ್ಟವಾದ ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ಕೂಡಿರುವ ಪರಮಶ್ರೇಷ್ಠವಾದ ಗುಹ್ಯವಾದ ವೈಷ್ಣವಧರ್ಮವನ್ನು ಕೇಳಲು, ಹೃದಯದಲ್ಲಿ ಅದನ್ನು ಧರಿಸಲು ಸರ್ವೋತ್ತಮನಾದ ಕೃಷ್ಣನನ್ನು ಶಿರಸಾ ನಮಸ್ಕರಿಸಿದರು.

ತತಸ್ತಾನ್ ವಾಸುದೇವೇನ ದೃಷ್ಟಾನ್ ಸೌಮ್ಯೇನ ಚಕ್ಷುಷಾ ।
ವಿಮುಕ್ತಪಾಪಾನಾಲೋಕ್ಯ ಪ್ರಣಮ್ಯ ಶಿರಸಾ ಹರಿಮ್ ॥೧೦॥

ಪಪ್ರಚ್ಛ ಕೇಶವಂ ಧರ್ಮಾನ್ ಧರ್ಮಪುತ್ರಃ ಪ್ರತಾಪವಾನ್ ॥೧೧॥

ಭಗವಂತನ ದಿವ್ಯದೃಷ್ಟಿಯು ಅವರೆಲ್ಲರ ಮೇಲೆ ಬೀಳಲು ಅವರೆಲ್ಲರೂ ತಮ್ಮ ಪಾಪಗಳಿಂದ ಮುಕ್ತರಾದರು. ಪ್ರತಾಪಶಾಲಿಯಾದ, ಧರ್ಮಪುತ್ರನಾದ ಯುಧಿಷ್ಠಿರನು ಕೃಷ್ಣನನ್ನು ತಲೆಬಾಗಿ ನಮಸ್ಕರಿಸಿ, ಕೇಶವನನ್ನು ವಿಷ್ಣುಧರ್ಮಗಳನ್ನು ಬೋಧಿಸೆಂದು ಕೇಳಿಕೊಂಡನು.

ಯುಧಿಷ್ಠಿರಃ

ಕೀದೃಶೀ ಬ್ರಾಹ್ಮಣಸ್ಯಾಥ ಕೀದೃಶೀ ಕ್ಷತ್ರಿಯಸ್ಯ ವೈ ।
ವೈಶ್ಯಸ್ಯ ಕೀದೃಶೀ ದೇವ ಗತಿಃ ಶೂದ್ರಸ್ಯ ಕೀದೃಶೀ ॥೧೨॥

ಯುಧಿಷ್ಠಿರ– ಶ್ರೀಕೃಷ್ಣನೇ, ಬ್ರಾಹ್ಮಣನಿಗೆ ಪ್ರತ್ಯೇಕವಾದ ಮಾರ್ಗವು ಯಾವುದು? ಕ್ಷತ್ರಿಯನಿಗೆ ಯಾವ ಮಾರ್ಗವು? ವೈಶ್ಯನಿಗೆ ಯಾವ ಮಾರ್ಗವು? ಶೂದ್ರನಿಗೆ ಯಾವ ಮಾರ್ಗವು?

ಕಥಂ ವಧ್ಯೇತ ಪಾಪೇನ ಬ್ರಾಹ್ಮಣಸ್ತು ಯಮಾಲಯೇ ।
ಕ್ಷತ್ರಿಯೋ ವಾऽಥ ವೈಶ್ಯೋ ವಾ ಶೂದ್ರೋ ವಾ ಬಧ್ಯತೇ ಕಥಮ್ ॥

ಬ್ರಾಹ್ಮಣನು ಯಾವ ಪಾಪವನ್ನು ಮಾಡಿ ಯಮಪುರಿಯಲ್ಲಿ ಶಿಕ್ಷೆಗೆ ಗುರಿಯಾಗುತ್ತಾನೆ? ಕ್ಷತ್ರಿಯನಿಗೆ ನರಕವಾಗಲು ಯಾವ ಪಾಪವು ಕಾರಣ? ವೈಶ್ಯ-ಶೂದ್ರರಿಗೂ ನರಕಬಂಧನಕ್ಕೆ ಕಾರಣವಾದ ಪಾಪಗಳು ಯಾವುವು?

ಏತತ್ ಕಥಯ ದೇವೇಶ ಲೋಕನಾಥ ನಮೋಽಸ್ತು ತೇ ॥೧೪॥

ಲೋಕನಾಥನೇ, ನಿನಗೆ ನಮಸ್ಕಾರ. ನನ್ನ ಈ ಪ್ರಶ್ನೆಗಳಿಗೆ ಉತ್ತರಿಸು.

ವೈಶಂಪಾಯನಃ

ಸ ಪೃಷ್ಟಃ ಕೇಶವೋಽಪ್ಯೇವಂ ಧರ್ಮಪುತ್ರೇಣ ಧೀಮತಾ ।
ಉವಾಚ ಸಂಸಾರಗತಿಂ ಚಾತುರ್ವರ್ಣ್ಯಸ್ಯ ಕರ್ಮಜಾಮ್ ॥೧೫॥

ವೈಶಂಪಾಯನ– ಧರ್ಮಪುತ್ರನಾದ, ಜ್ಞಾನಿಯಾದ ಯುಧಿಷ್ಠಿರನು ಕೇಶವನನ್ನು ಕುರಿತು ಹೀಗೆ ಪ್ರಶ್ನಿಸಲು, ಕರ್ಮದಿಂದ ಉತ್ಪನ್ನವಾಗುವ ಚಾತುರ್ವರ್ಣ್ಯ ಗತಿಯನ್ನು, ಸಂಸಾರದ ಗತಿಯನ್ನು ಶ್ರೀಕೃಷ್ಣನು ಹೇಳಿದನು.

ಶ್ರೀಭಗವಾನ್

ಶೃಣು ವರ್ಣಕ್ರಮೇಣೈವ ಧರ್ಮಂ ಧರ್ಮಭೃತಾಂ ವರ ।
ನಾಸ್ತಿ ಕಿಂಚಿನ್ನರಶ್ರೇಷ್ಠ ಬ್ರಾಹ್ಮಣಸ್ಯ ತು ದುಷ್ಕೃತಮ್ ॥೧೬॥

ಶ್ರೀಭಗವಾನ್– ಧರ್ಮಧರಿಸಿದವರಲ್ಲಿಶ್ರೇಷ್ಠನಾದ ಯುಧಿಷ್ಠಿರನೇ, ಬ್ರಾಹ್ಮಣಾದಿ ವರ್ಣಕ್ರಮದಿಂದಲೇ ಅವರ ಧರ್ಮಗಳನ್ನು ಹೇಳುತ್ತೇನೆ, ಕೇಳಿಸಿಕೊ. ಬ್ರಾಹ್ಮಣನಿಗೆ ದುಷ್ಕರವಾದುದು ಯಾವುದೂ ಇಲ್ಲ.

ಶಿಖಾಯಜ್ಞೋಪವೀತೀ ಸ್ಯಾತ್ ಸಂಧ್ಯಾಂ ಯೇ ಚಾಪ್ಯುಪಾಸತೇ ।
ಯೈಶ್ಚ ಪೂರ್ಣಾಹುತಿಃ ಪ್ರಾಪ್ತಾ ವಿಧಿವಜ್ಜುಹ್ವತೇ ಚ ಯೇ ॥೧೭॥

ಯಾವ ಬ್ರಾಹ್ಮಣನು ಶಿಖಾ-ಯಜ್ಞೋಪವೀತಗಳನ್ನು ಧರಿಸಿಕೊಂಡು ಸಂಧ್ಯೋಪಾಸನೆಯನ್ನು ಮಾಡುತ್ತಾನೋ, ಅಗ್ನಿಯಲ್ಲಿ ಪೂರ್ಣಾಹುತಿಗಳನ್ನು ನೀಡುತ್ತಾನೋ, ವಿಧಿವತ್ತಾಗಿ ಅಗ್ನಿಹೋತ್ರಗಳನ್ನು ಮಾಡುತ್ತಾನೋ;

ವೈಶ್ವದೇವಂ ಚ ಯೇ ಕುರ್ಯುಃ ಪೂಜಯಂತ್ಯತಿಥೀಂಶ್ಚ ಯೇ ।
ನಿತ್ಯಂ ಸ್ವಾಧ್ಯಾಯಶೀಲಾಶ್ಚ ಜಪಯಜ್ಞಪರಾಸ್ತಥಾ ॥೧೮॥

ವೈಶ್ವದೇವ, ಬಲಿಹರಣಗಳನ್ನು ಮಾಡುತ್ತಾನೋ, ಅತಿಥಿಗಳನ್ನು ಸತ್ಕರಿಸುತ್ತಾನೋ, ನಿತ್ಯವೂ ಸ್ವಾಧ್ಯಾಯಶೀಲನಾಗಿರುತ್ತಾನೋ, ಜಪ-ಯಜ್ಞಗಳಲ್ಲಿ ಆಸಕ್ತನಾಗಿರುತ್ತಾನೋ;

ಸಾಯಂಪ್ರಾತರ್ಹುತಾಶಾಶ್ಚ ಶೂದ್ರಭೋಜನವರ್ಜಿತಾಃ ।
ಡಂಭಾನೃತವಿನಿರ್ಮುಕ್ತಾಃ ಸ್ವದಾರನಿರತಾಃ ಸದಾ ॥೧೯॥

ಪ್ರಾತಃ-ಸಾಯಂಕಾಲಗಳಲ್ಲಿ ಹೋಮ ಮಾಡಿದ ನಂತರವೇ ಊಟ ಮಾಡುತ್ತಾನೋ, ಶೂದ್ರಾನ್ನವನ್ನು ತಿನ್ನುವುದಿಲ್ಲವೋ, ಡಂಭ, ಸುಳ್ಳುಗಳಿಂದ ದೂರನಾಗಿರುತ್ತಾನೋ, ತನ್ನ ಪತ್ನಿಯಲ್ಲೇ ಆಸಕ್ತನಾಗಿರುತ್ತಾನೋ;

ಪಂಚಯಜ್ಞಪರಾಶ್ಚೈವ ಯೇऽಗ್ನಿಹೋತ್ರಮುಪಾಸತೇ ॥೨೦॥

ಪಂಚಮಹಾಯಜ್ಞಗಳನ್ನು ಮಾಡುತ್ತಿರುತ್ತಾನೋ, ಅಗ್ನಿಹೋತ್ರಗಳನ್ನು ಮಾಡುತ್ತಿರುತ್ತಾನೋ;

ದಹಂತಿ ದುಷ್ಕೃತಂ ಯೇಷಾಂ ಹೂಯಮಾನಾಸ್ತ್ರಯೋऽಗ್ನಯಃ ।
ನಷ್ಟದುಷ್ಕೃತಕರ್ಮಾಣೋ ಬ್ರಹ್ಮಲೋಕಂ ವ್ರಜಂತಿ ತೇ ॥೨೧॥

ಅಂತಹ ವ್ಯಕ್ತಿಯ ಪಾಪಗಳನ್ನು ಅವನು ಉಪಾಸನೆ ಮಾಡುವ ಮೂರು ಅಗ್ನಿಗಳೇ ನಾಶಮಾಡುತ್ತವೆ. ಹೀಗೆ ಅವರ ಸತ್ಕರ್ಮದ ಫಲವಾಗಿ ಬ್ರಹ್ಮಲೋಕವನ್ನು ಹೊಂದುತ್ತಾರೆ.

ಬ್ರಹ್ಮಲೋಕೇ ತತಃ ಕಾಮಂ ಗಂಧರ್ವೈರ್ಬ್ರಹ್ಮಗಾಯನೈಃ ।
ಉಪಗೀಯಮಾನಾಃ ಪ್ರಯತೈಃ ಪೂಜ್ಯಮಾನಾಃ ಸ್ವಯಂಭುವಾ ॥೨೨॥

ಅವರು ಬ್ರಹ್ಮಲೋಕದಲ್ಲಿ ಗಂಧರ್ವರಿಂದ, ಬ್ರಹ್ಮರ ಗಾಯನದಿಂದ ಚತುರ್ಮುಖಬ್ರಹ್ಮದೇವರಿಂದಲೂ ಸತ್ಕರಿಸಲ್ಪಟ್ಟವರಾಗಿ, ವಿಶೇಷವಾಗಿ ಜಿತೇಂದ್ರಿಯನರಾಗಿ ಭಗವಂತನನ್ನು ಸ್ತುತಿಸುತ್ತಾ, ಮನಸ್ಸಿನ ಕಾಮನೆಗಳನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

ಬ್ರಹ್ಮಲೋಕೇ ಪ್ರಮೋದಂತೇ ಯಾವದಾಭೂತಸಂಪ್ಲವಮ್ ॥೨೩॥

ಪ್ರಲಯ ಮುಗಿಯುವ ತನಕವೂ ಸತ್ಕರ್ಮಗಳ ಫಲವಾಗಿ ಬ್ರಹ್ಮಲೋಕದಲ್ಲಿ ಸಂತೋಷವನ್ನು ಹೊಂದುತ್ತಾರೆ.

ಕ್ಷತ್ರಿಯೋಽಪಿ ಸ್ಥಿತೋ ರಾಜ್ಯೇ ಸ್ವಧರ್ಮಂ ಪರಿಪಾಲಯನ್ ।
ಸಮ್ಯಕ್ ಪ್ರಜಾಃ ಪಾಲಯಿತ್ವಾ ಸ್ವಧರ್ಮನಿರತಃ ಸದಾ ॥೨೪॥

ಯಜ್ಞದಾನರತೋ ಧೀರಃ ಸ್ವದಾರನಿರತಃ ಶುಚಿಃ ।
ಶಾಸ್ತ್ರಾನುಕಾರೀ ತತ್ತ್ವಜ್ಞಃ ಪ್ರಜಾಕಾರ್ಯಪರಾಯಣಃ ॥೨೫॥

ಕ್ಷತ್ರಿಯನು ರಾಜ್ಯಸಿಂಹಾಸನದಲ್ಲಿ ಕುಳಿತು ಸ್ವಧರ್ಮನಿಷ್ಠನಾಗಿ ಪ್ರಜೆಗಳನ್ನು ರಕ್ಷಿಸುತ್ತಾ, ಯಜ್ಞ-ದಾನಗಳಲ್ಲಿ ಆಸಕ್ತನಾಗಿ, ತನ್ನ ಪತ್ನಿಯಲ್ಲಿಯೇ ನಿರತನಾಗಿ, ಶಾಸ್ತ್ರಕ್ಕೆ ಅನುಗುಣವಾಗಿ ಸತ್ಕರ್ಮಗಳನ್ನು ಆಚರಿಸುತ್ತಾ, ಪ್ರಜೆಗಳನ್ನು ರಕ್ಷಿಸುತ್ತಾ, ಭಗವತತ್ತ್ವಗಳನ್ನು ತಿಳಿದುಕೊಳ್ಳುತ್ತಾ;

ವಿಪ್ರೇಭ್ಯಃ ಕಾಮದೋ ನಿತ್ಯಂ ಭೃತ್ಯಾನಾಂ ಭರಣೇ ರತಃ ।
ಸತ್ಯಸಂಧಃ ಶುಚಿರ್ನಿತ್ಯಂ ಲೋಭಡಂಭವಿವರ್ಜಿತಃ ॥೨೬॥

ಕ್ಷತ್ರಿಯೋಽಪ್ಯುತ್ತಮಾಂ ಯಾತಿ ಗತಿಂ ದೇವನಿಷೇವಿತಾಮ್ ॥೨೭॥

ಪ್ರತಿದಿನವೂ ಬ್ರಾಹ್ಮಣರಿಗೆ ಬಯಸಿದ್ದನ್ನು ನೀಡುತ್ತಾ, ಸೇವಕರನ್ನು ಚೆನ್ನಾಗಿ ರಕ್ಷಿಸುತ್ತಾ, ಸತ್ಯಸಂಧನಾಗಿ, ಶುಚಿಯಾಗಿ, ಲೋಭ-ಡಂಭಗಳಿಂದ ದೂರನಾಗಿ, ನಿತ್ಯವೂ ಧರ್ಮಶೀಲನಾಗಿರಲು ದೇವತೆಗಳಿಂದ ಸೇವಿಸಲ್ಪಡುವ ಉತ್ತಮವಾದ ಗತಿಯನ್ನೇ ಕ್ಷತ್ರಿಯನು ಹೊಂದುತ್ತಾನೆ.

ತತ್ರ ದಿವ್ಯಾಪ್ಸರೋಭಿಸ್ತು ಗಂಧರ್ವೈಶ್ಚ ಪ್ರಯತ್ನತಃ ।
ಸೇವ್ಯಮಾನೋ ಮಹಾತೇಜಾಃ ಕ್ರೀಡತೇ ಶಕ್ರಪೂಜಿತಃ ॥೨೮॥

ಆ ಸ್ವರ್ಗದಲ್ಲಿಯಾದರೂ ಶೋಭಿಸುವ ಅಪ್ಸರೆಯರಿಂದ, ಗಂಧರ್ವರಿಂದ ವಿಶೇಷವಾಗಿ ಸೇವ್ಯಮಾನನಾಗಿ, ಇಂದ್ರನಿಂದಲೂ ಸಮ್ಮಾನಿತನಾಗಿ, ಮಹಾತೇಜಸ್ವಿಯಾಗಿ ಸಂತೋಷದಿಂದ ಕ್ರೀಡಿಸುತ್ತಾನೆ.

ಚತುರ್ಯುಗಾನಿ ವೈ ತ್ರಿಂಶತ್ ಕ್ರೀಡಿತ್ವಾ ದಿವಿ ದೇವವತ್ ।
ಇಹ ಮಾನುಷ್ಯಲೋಕೇ ತು ಚತುರ್ವೇದೀ ದ್ವಿಜೋ ಭವೇತ್ ॥೨೯॥

ಮೂವತ್ತು ಚತುರ್ಯುಗಗಳನ್ನು ದೇವಲೋಕದಲ್ಲಿ ಸುಖವಾಗಿ ಕಳೆದು, ದೇವನಂತೆಯೇ ಮನುಷ್ಯಲೋಕದಲ್ಲಿ ನಾಲ್ಕುವೇದಗಳನ್ನು ಅರಿಯುವ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಕೃಷಿಗೋಪಾಲನಿರತಃ ಸ್ವಧರ್ಮಾನ್ವೇಷಣೇ ರತಃ ।
ದಾನಧರ್ಮೇಽಪಿ ನಿರತೋ ವಿಪ್ರಶುಶ್ರೂಷಕಸ್ತಥಾ ॥೩೦॥

ಕೃಷಿ, ಗೋವುಗಳ ರಕ್ಷಣೆಯಲ್ಲಿ ನಿರತನಾದ, ತನ್ನ ಧರ್ಮದಲ್ಲಿ ಆಸಕ್ತನಾಗಿರುವ, ದಾನ-ಧರ್ಮಗಳಲ್ಲಿ ನಿರತನಾಗಿರುವ, ಬ್ರಾಹ್ಮಣರ ಸೇವೆಯಲ್ಲಿ ಆಸಕ್ತನಾಗಿರುವ;

ಸತ್ಯಸಂಧಃ ಶುಚಿರ್ನಿತ್ಯಂ ಲೋಭಡಂಭವಿವರ್ಜಿತಃ ।
ಋಜುಃ ಸ್ವದಾರನಿರತೋ ಹಿಂಸಾದ್ರೋಹವಿವರ್ಜಿತಃ ॥೩೧॥

ಸತ್ಯಸಂಧನಾದ, ನಿತ್ಯವೂ ಶುಚಿಯಾದ, ಲೋಭ-ಡಂಭಗಳಿಂದ ದೂರನಾದ, ನೇರವಾಗಿ ವರ್ತಿಸುವ ಸ್ವಭಾವವುಳ್ಳ, ತನ್ನ ಪತ್ನಿಯಲ್ಲೇ ನಿರತನಾದ, ಹಿಂಸಾ-ದ್ರೋಹ-ಗಳಿಂದ ದೂರನಾದ;

ವಣಿಗ್ಧರ್ಮಾನಮುಂಚನ್ ವೈ ದೇವಬ್ರಾಹ್ಮಣಪೂಜಕಃ ।
ವಣಿಕ್ ಚ ಸ್ವರ್ಗಮಾಪ್ನೋತಿ ಪೂಜ್ಯಮಾನೋಽಪ್ಸರೋಗಣೈಃ ॥೩೨॥

ವಾಣಿಜ್ಯಧರ್ಮಗಳನ್ನು ಬಿಡದಿರುವ, ದೇವ-ಬ್ರಾಹ್ಮಣ ಪೂಜಕನಾದ ವೈಶ್ಯನು ಅಪ್ಸರೋಗಣದಿಂದ ಸೇವಿತವಾದ ಸ್ವರ್ಗವನ್ನು ಹೊಂದುತ್ತಾನೆ.

ಚತುರ್ಯುಗಾನಿ ವೈ ತ್ರಿಂಶತ್ ಕ್ರೀಡಿತ್ವಾ ದಶ ಪಂಚ ಚ ।
ಇಹ ಮಾನುಷ್ಯಕೇ ಲೋಕೇ ರಾಜಾ ಭವತಿ ವೀರ್ಯವಾನ್ ॥೩೩॥

ನಲವತ್ತೈದು ಚತುರ್ಯುಗಗಳ ಕಾಲ ಸ್ವರ್ಗದಲ್ಲಿ ಸುಖವನ್ನು ಅನುಭವಿಸಿ, ಮನುಷ್ಯಲೋಕದಲ್ಲಿ ವೀರ್ಯವಂತನಾದ ಕ್ಷತ್ರಿಯನಾಗಿ ಜನ್ಮವನ್ನು ತಾಳುತ್ತಾನೆ.

ತ್ರಯಾಣಾಮಪಿ ವರ್ಣಾನಾಂ ಶುಶ್ರೂಷಾನಿರತಃ ಸದಾ ।
ವಿಶೇಷೇಣೈವ ವಿಪ್ರಾಣಾಂ ದಾಸವದ್ಯಸ್ತು ತಿಷ್ಠತಿ ॥೩೪॥

ಅಯಾಚಿತಪ್ರದಾತಾ ಚ ಸತ್ಯಶೌಚಸಮನ್ವಿತಃ ।
ಗುರುದೇವಾರ್ಚನರತಃ ಪರದಾರವಿವರ್ಜಿತಃ ॥೩೫॥

ಮೂರು ವರ್ಣದವರನ್ನು ವಿಶೇಷವಾಗಿ ಸೇವಿಸುತ್ತಾ, ಅದರಲ್ಲಿಯೂ ಬ್ರಾಹ್ಮಣರಿಗೆ ದಾಸನಂತೆ ಇರುವಂತಹ, ಯಾರಲ್ಲಿಯೂ ಬೇಡದೆ ದಾನ ಮಾಡುವ ಸ್ವಭಾವದವನಾದ, ಸತ್ಯ-ಶೌಚದಲ್ಲಿ ನಿರತನಾದ, ಗುರು-ದೇವತೆಗಳ ಅರ್ಚನೆಯಲ್ಲಿ ಆಸಕ್ತನಾದ, ಮತ್ತೊಬ್ಬರ ಪತ್ನಿಯಲ್ಲಿ ಆಸಕ್ತಿಯನ್ನು ಹೊಂದದ;

ಪರಪೀಡಾಮಕೃತ್ವೈವ ಭೃತ್ಯವರ್ಗಂ ಬಿಭರ್ತಿ ಯಃ ।
ಶೂದ್ರೋಽಪಿ ಸ್ವರ್ಗಮಾಪ್ನೋತಿ ಜೀವಾನಾಮಭಯಪ್ರದಃ ॥೩೬॥

ಮತ್ತೊಬ್ಬರನ್ನು ಪೀಡಿಸದೆಯೇ ಹೆಂಡತಿ-ಮಕ್ಕಳನ್ನು ರಕ್ಷಿಸುವ ಯಾವ ಶೂದ್ರನಿದ್ದಾನೋ ಅವನು ಸಮಸ್ತ ಜೀವರಿಗೆ ಅಭಯವನ್ನುಂಟು ಮಾಡಿದ ಫಲದಿಂದ ಸ್ವರ್ಗಲೋಕವನ್ನು ಹೊಂದುತ್ತಾನೆ.

ಸ ಸ್ವರ್ಗಲೋಕೇ ಕ್ರೀಡಿತ್ವಾ ವರ್ಷಕೋಟಿಂ ಮಹಾತಪಾಃ ।
ಇಹ ಮಾನುಷ್ಯಕೇ ಲೋಕೇ ವೈಶ್ಯೋ ಧನಪತಿರ್ಭವೇತ್ ॥೩೭॥

ಕೋಟಿವರ್ಷಗಳ ಕಾಲ ಸತ್ಕರ್ಮಶೀಲನಾದ ಶೂದ್ರನು ಸ್ವರ್ಗಲೋಕದಲ್ಲಿ ವಿಹರಿಸಿ ಪುನಃ ಮನುಷ್ಯಲೋಕದಲ್ಲಿ ಧನಿಕನಾದ ವೈಶ್ಯಜನ್ಮವನ್ನು ಹೊಂದುತ್ತಾನೆ.

ಏವಂ ಧರ್ಮಾತ್ ಪರಂ ನಾಸ್ತಿ ಮಹತ್ ಸಂಸಾರಮೋಕ್ಷಣಮ್ ।
ನ ಚ ಧರ್ಮಾತ್ ಪರಂ ಕಿಂಚಿತ್ ಪಾಪಕರ್ಮವ್ಯಪೋಹನಮ್ ॥

ಈ ರೀತಿಯಾಗಿ ಸಂಸಾರದಿಂದ ಬಿಡುಗಡೆಯನ್ನು ಹೊಂದಿಸುವ ಧರ್ಮಾಚರಣೆಗಿಂತ ಶ್ರೇಷ್ಠವಾದ, ಮಹತ್ವಪೂರ್ಣವಾದ ಕಾರ್ಯವು ಬೇರೆ ಯಾವುದೂ ಇರುವುದಿಲ್ಲ. ಪಾಪಕರ್ಮಗಳನ್ನು ದಾಟಲು ಸ್ವಧರ್ಮಾಚರಣೆಯೇ ಶ್ರೇಷ್ಠವಾದ ಉಪಾಯವೆನಿಸಿದೆ. ಇದನ್ನು ಬಿಟ್ಟು ಯಾವುದೇ ಉಪಾಯಗಳು ಇರುವುದಿಲ್ಲ.

ತಸ್ಮಾದ್ ಧರ್ಮಃ ಸದಾ ಕಾರ್ಯೋ ಮಾನುಷ್ಯಂ ಪ್ರಾಪ್ಯ ದುಲರ್ಭಮ್ ।
ನ ಹಿ ಧರ್ಮಾನುರಕ್ತಾನಾಂ ಲೋಕೇ ಕಿಂಚನ ದುರ್ಲಭಮ್ ॥೩೯॥

ಆದ್ದರಿಂದ ದುರ್ಲಭವಾದ ಮನುಷ್ಯಜನ್ಮವನ್ನು ಹೊಂದಿದ ಪ್ರತಿಯೊಬ್ಬರೂ ಅವರವರಿಗೆ ವಿಹಿತವಾದ ಧರ್ಮಾನುಷ್ಠಾನಗಳನ್ನು ಮಾಡಬೇಕು. ಧರ್ಮದಲ್ಲಿ

ಅನುರಕ್ತರಾದ ಪುರುಷರಿಗೆ ಲೋಕದಲ್ಲಿ ಲಭಿಸದೆ ಇರುವ ಪದಾರ್ಥಗಳೇ ಇರುವುದಿಲ್ಲ.

ಸ್ವಯಂಭುವಿಹಿತೋ ಧರ್ಮೋ ಯೋ ಯಸ್ಯೇಹ ನರೇಶ್ವರ ।
ಸ ತೇನ ಕ್ಷಪಯೇತ್ ಪಾಪಂ ಸಮ್ಯಗಾಚರಿತೇನ ಚ ॥೪೦॥

ನರೇಶ್ವರನೇ, ಚತುರ್ಮುಖಬ್ರಹ್ಮದೇವರು ಯಾವ ಯಾವ ಜಾತಿಯವರಿಗೆ ಯಾವ ಯಾವ ಧರ್ಮಗಳನ್ನು ವಿಧಾನ ಮಾಡಿದ್ದಾರೋ, ಆಯಾ ಧರ್ಮಗಳನ್ನು ಆಚರಿಸುತ್ತಾ , ಶ್ರದ್ಧಾಪೂರ್ವಕವಾದ ಆಚರಣೆಗಳಿಂದಲೇ ಪಾಪವನ್ನು ಕಳೆದುಕೊಳ್ಳಬೇಕು.

ಸಹಜಂ ಯದ್ಭವೇತ್ ಕರ್ಮ ನ ತತ್ ತ್ಯಾಜ್ಯಂ ಹಿ ಕೇನಚಿತ್ ।
ಸ ಏವ ತಸ್ಯ ಧರ್ಮೋ ಹಿ ತೇನ ಸಿದ್ಧಿಂ ಸ ಗಚ್ಛತಿ ॥೪೧॥

ಭಗವಂತನು ಜನ್ಮದಿಂದಲೇ ಯಾವ ಧರ್ಮವನ್ನು ನೀಡಿದ್ದಾನೋ ಅಂತಹ ಜನ್ಮಕ್ಕೆ ಅನುಗುಣವಾದ ಧರ್ಮ-ಕರ್ಮಗಳನ್ನು ಎಂದಿಗೂ ಯಾರು ಬಿಡಬಾರದು. ಇದೇ ಅವನ ಧರ್ಮವಾಗಿದೆ, ಇದೇ ಅವನ ಸಿದ್ಧಿಗೆ ಹೇತುವಾಗಿದೆ. ಹೀಗೆ ವರ್ತಿಸಿದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ.

ನಿರ್ಗುಣೋಽಪಿ ಸ್ವಧರ್ಮಸ್ತು ಪಾಪಕರ್ಮ ವ್ಯಪೋಹತಿ ।
ಏವಮೇವ ತು ಧರ್ಮೋಽಪಿ ಕ್ಷೀಯತೇ ಪಾಪವರ್ಧನಾತ್ ॥೪೨॥

ಸ್ವಧರ್ಮನಿರತನಾದ ವ್ಯಕ್ತಿಯಲ್ಲಿ ಗುಣಗಳು ಕಡಿಮೆಯಿದ್ದರೂ ಆ ಸ್ವಧರ್ಮಾಚರಣೆಯ ಪುಣ್ಯವು ಅವನ ಪಾಪಗಳನ್ನು ಕಳೆಯುತ್ತದೆ. ಇದರಂತೆ ಪಾಪಕರ್ಮಗಳನ್ನು ಚೆನ್ನಾಗಿ ಮಾಡುವುದರಿಂದ ಧರ್ಮವು ಕ್ಷೀಣಿಸುತ್ತದೆ.

ಯುಧಿಷ್ಠಿರಃ

ಭಗವನ್ ದೇವದೇವೇಶ ಶ್ರೋತುಂ ಕೌತೂಹಲಂ ಹಿ ಮೇ ।
ಶುಭಸ್ಯಾಪ್ಯಶುಭಸ್ಯಾಪಿ ಕ್ಷಯವೃದ್ಧೀ ಯಥಾಕ್ರಮಮ್ ॥೪೩॥

ಯುಧಿಷ್ಠಿರ– ದೇವದೇವೇಶನೇ, ಷಡ್ಗುಣೈಶ್ವರ್ಯಸಂಪನ್ನನೇ, ಶುಭಕರ್ಮಗಳಿಗೆ ಅಶುಭಕರ್ಮಗಳಿಗೆ ಸಿಗುವ ವೃದ್ಧಿ-ಕ್ಷಯಗಳನ್ನು ಯಥಾಕ್ರಮದಲ್ಲಿ ಉಪದೇಶಿಸು. ಈ ವಿಷಯದಲ್ಲಿ ನನಗೆ ಅತಿಯಾದ ಕುತೂಹಲವಿದೆ.

ಶ್ರೀಭಗವಾನ್

ಶೃಣು ಪಾಂಡವ ತತ್ಸರ್ವಂ ಧರ್ಮಸೂಕ್ಷ್ಮಂ ಸನಾತನಮ್ ।
ದುರ್ವಿಜ್ಞೇಯತಮಂ ನಿತ್ಯಂ ಮಮ ಭಕ್ತೈರ್ಮಹಾತ್ಮಭಿಃ ॥೪೪॥

ಶ್ರೀಭಗವಾನ್– ಪಾಂಡವನೇ, ಸನಾತನವಾದ ಸಮಗ್ರ ಧರ್ಮಸೂಕ್ಷ್ಮವನ್ನು ಕೇಳಿಸಿಕೊ. ಮಹಾತ್ಮರಾದ ನನ್ನ ಭಕ್ತರಿಗೂ ನಾನು ನಿನಗೆ ಮಾಡುವ ಈ ಉಪದೇಶವು ಅತ್ಯಂತ ದುರ್ಲಭವಾದುದು ಎಂದು ತಿಳಿ.

ಯಥೈವ ಶೀತಮುದಕಮುಷ್ಣೇನ ಬಹುನಾ ವೃತಮ್ ।
ಭವೇತ್ತು ತತ್ಕ್ಷಣಾದುಷ್ಣಂ ಶೀತತ್ವಂ ಚ ವಿನಶ್ಯತಿ ॥೪೫॥

ಯಥೋಷ್ಣಂ ವಾ ಭವೇದಲ್ಪಂ ಶೀತೇನ ಬಹುನಾ ವೃತಮ್ ।
ಶೀತಲಂ ತದ್ ಭವೇತ್ ಸರ್ವಮುಷ್ಣತ್ವಂ ಚ ವಿನಶ್ಯತಿ ॥೪೬॥

ಏವಂ ತು ಯದ್ಭವೇದ್ ಭೂರಿ ಸುಕೃತಂ ವಾऽಥ ದುಷ್ಕೃತಮ್ ।
ತದಲ್ಪಂ ಕ್ಷಪಯೇಚ್ಚೀಘ್ರಂ ನಾತ್ರ ಕಾರ್ಯಾ ವಿಚಾರಣಾ ॥೪೭॥

ಯಾವ ರೀತಿಯಾಗಿ ತಣ್ಣಗಿರುವ ನೀರು ಅತಿಯಾದ ಬಿಸಿನೀರಿನಿಂದ ಮೇಲನ ಹೊಂದಿದಾಗ ತತ್‌ಕ್ಷಣದಲ್ಲಿಯೇ ಆ ತಣ್ಣೀರು ಬಿಸಿಯಾಗುತ್ತದೋ, ಅದರಲ್ಲಿರುವ ಶೈತ್ಯವು ನಾಶ ಹೊಂದುತ್ತದೋ ಅಥವಾ ತುಂಬಾ ತಣ್ಣಗಿರುವ ನೀರಿಗೆ ಸ್ವಲ್ಪ ಬಿಸಿನೀರಿನ ಮೇಲನವನ್ನು ಮಾಡಿದಾಗ ಬಿಸಿಯಾದ ನೀರು ತಣ್ಣಗಾಗುತ್ತದೋ, ತನ್ನಲ್ಲಿರುವ ಉಷ್ಣತ್ವವನ್ನು ಕಳೆದುಕೊಳ್ಳುತ್ತದೋ, ಇದೇ ರೀತಿಯಾಗಿ ಪುಣ್ಯಕರ್ಮವನ್ನಾಗಲಿ, ಪಾಪಕರ್ಮವನ್ನಾಗಲಿ ಅಲ್ಪಪ್ರಮಾಣದಲ್ಲಿ ಆಚರಿಸಿದಾಗ ಅದು ನಾಶವನ್ನೇ ಹೊಂದುತ್ತದೆ. ಅತಿಯಾದ ಪಾಪಕರ್ಮವನ್ನು ಮಾಡಿ ಸ್ವಲ್ಪ ಪುಣ್ಯಕರ್ಮವನ್ನು ಮಾಡಿದರೂ ಅವನು ಪಾಪಕರ್ಮಿ ಎಂದೇ ಕರೆಸಿಕೊಳ್ಳುತ್ತಾನೆ. ಅತಿಯಾದ ಪುಣ್ಯಕರ್ಮವನ್ನು ಮಾಡಿ ಸ್ವಲ್ಪ ಪಾಪಕರ್ಮವನ್ನು ಮಾಡಿದರೂ ಅವನು ಪುಣ್ಯಕರ್ಮಿ ಎಂದೇ ಕರೆಸಿಕೊಳ್ಳುತ್ತಾನೆ. ಇದರಲ್ಲಿ ವಿಚಾರ ಮಾಡುವ ಅಂಶವು ಇರುವುದಿಲ್ಲ.

ಸಮತ್ವೇ ಸತಿ ರಾಜೇಂದ್ರ ತಯೋಃ ಸುಕೃತಪಾಪಯೋಃ ।
ಗೂಹಿತಸ್ಯ ಭವೇದ್ ವೃದ್ಧಿಃ ಕೀರ್ತಿತಸ್ಯ ಭವೇತ್ ಕ್ಷಯಃ ॥೪೮॥

ಸುಕೃತ-ದುಷ್ಕೃತಗಳು ಎರಡೂ ಸಮವಾಗಿರುವುದಾದರೆ ತಾನು ಮಾಡಿದ ಸುಕೃತವನ್ನಾಗಲಿ, ದುಷ್ಕೃತವನ್ನಾಗಲಿ ಮನುಷ್ಯನು ಹೇಳಿಕೊಂಡರೆ ಅದು ಕ್ಷೀಣಿಸುತ್ತದೆ.

ಅನುರಕ್ತರಾದ ಪುರುಷರಿಗೆ ಲೋಕದಲ್ಲಿ ಲಭಿಸದೆ ಇರುವ ಪದಾರ್ಥಗಳೇ ಇರುವುದಿಲ್ಲ.

ಸ್ವಯಂಭುವಿಹಿತೋ ಧರ್ಮೋ ಯೋ ಯಸ್ಯೇಹ ನರೇಶ್ವರ ।
ಸ ತೇನ ಕ್ಷಪಯೇತ್ ಪಾಪಂ ಸಮ್ಯಗಾಚರಿತೇನ ಚ ॥೪೦॥

ನರೇಶ್ವರನೇ, ಚತುರ್ಮುಖಬ್ರಹ್ಮದೇವರು ಯಾವ ಯಾವ ಜಾತಿಯವರಿಗೆ ಯಾವ ಯಾವ ಧರ್ಮಗಳನ್ನು ವಿಧಾನ ಮಾಡಿದ್ದಾರೋ, ಆಯಾ ಧರ್ಮಗಳನ್ನು ಆಚರಿಸುತ್ತಾ , ಶ್ರದ್ಧಾಪೂರ್ವಕವಾದ ಆಚರಣೆಗಳಿಂದಲೇ ಪಾಪವನ್ನು ಕಳೆದುಕೊಳ್ಳಬೇಕು.

ಸಹಜಂ ಯದ್ಭವೇತ್ ಕರ್ಮ ನ ತತ್ ತ್ಯಾಜ್ಯಂ ಹಿ ಕೇನಚಿತ್ ।
ಸ ಏವ ತಸ್ಯ ಧರ್ಮೋ ಹಿ ತೇನ ಸಿದ್ಧಿಂ ಸ ಗಚ್ಛತಿ ॥೪೧॥

ಭಗವಂತನು ಜನ್ಮದಿಂದಲೇ ಯಾವ ಧರ್ಮವನ್ನು ನೀಡಿದ್ದಾನೋ ಅಂತಹ ಜನ್ಮಕ್ಕೆ ಅನುಗುಣವಾದ ಧರ್ಮ-ಕರ್ಮಗಳನ್ನು ಎಂದಿಗೂ ಯಾರು ಬಿಡಬಾರದು. ಇದೇ ಅವನ ಧರ್ಮವಾಗಿದೆ, ಇದೇ ಅವನ ಸಿದ್ಧಿಗೆ ಹೇತುವಾಗಿದೆ. ಹೀಗೆ ವರ್ತಿಸಿದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ.

ನಿರ್ಗುಣೋಽಪಿ ಸ್ವಧರ್ಮಸ್ತು ಪಾಪಕರ್ಮ ವ್ಯಪೋಹತಿ ।
ಏವಮೇವ ತು ಧರ್ಮೋಽಪಿ ಕ್ಷೀಯತೇ ಪಾಪವರ್ಧನಾತ್ ॥೪೨॥

ಸ್ವಧರ್ಮನಿರತನಾದ ವ್ಯಕ್ತಿಯಲ್ಲಿ ಗುಣಗಳು ಕಡಿಮೆಯಿದ್ದರೂ ಆ ಸ್ವಧರ್ಮಾಚರಣೆಯ ಪುಣ್ಯವು ಅವನ ಪಾಪಗಳನ್ನು ಕಳೆಯುತ್ತದೆ. ಇದರಂತೆ ಪಾಪಕರ್ಮಗಳನ್ನು ಚೆನ್ನಾಗಿ ಮಾಡುವುದರಿಂದ ಧರ್ಮವು ಕ್ಷೀಣಿಸುತ್ತದೆ.

ಯುಧಿಷ್ಠಿರಃ

ಭಗವನ್ ದೇವದೇವೇಶ ಶ್ರೋತುಂ ಕೌತೂಹಲಂ ಹಿ ಮೇ ।
ಶುಭಸ್ಯಾಪ್ಯಶುಭಸ್ಯಾಪಿ ಕ್ಷಯವೃದ್ಧೀ ಯಥಾಕ್ರಮಮ್ ॥೪೩॥

ಯುಧಿಷ್ಠಿರ– ದೇವದೇವೇಶನೇ, ಷಡ್ಗುಣೈಶ್ವರ್ಯಸಂಪನ್ನನೇ, ಶುಭಕರ್ಮಗಳಿಗೆ ಅಶುಭಕರ್ಮಗಳಿಗೆ ಸಿಗುವ ವೃದ್ಧಿ-ಕ್ಷಯಗಳನ್ನು ಯಥಾಕ್ರಮದಲ್ಲಿ ಉಪದೇಶಿಸು. ಈ ವಿಷಯದಲ್ಲಿ ನನಗೆ ಅತಿಯಾದ ಕುತೂಹಲವಿದೆ.

ಶ್ರೀಭಗವಾನ್

ಶೃಣು ಪಾಂಡವ ತತ್ಸರ್ವಂ ಧರ್ಮಸೂಕ್ಷ್ಮಂ ಸನಾತನಮ್ ।
ದುರ್ವಿಜ್ಞೇಯತಮಂ ನಿತ್ಯಂ ಮಮ ಭಕ್ತೈರ್ಮಹಾತ್ಮಭಿಃ ॥೪೪॥

ಶ್ರೀಭಗವಾನ್– ಪಾಂಡವನೇ, ಸನಾತನವಾದ ಸಮಗ್ರ ಧರ್ಮಸೂಕ್ಷ್ಮವನ್ನು ಕೇಳಿಸಿಕೊ. ಮಹಾತ್ಮರಾದ ನನ್ನ ಭಕ್ತರಿಗೂ ನಾನು ನಿನಗೆ ಮಾಡುವ ಈ ಉಪದೇಶವು ಅತ್ಯಂತ ದುರ್ಲಭವಾದುದು ಎಂದು ತಿಳಿ.

ಯಥೈವ ಶೀತಮುದಕಮುಷ್ಣೇನ ಬಹುನಾ ವೃತಮ್ ।
ಭವೇತ್ತು ತತ್ಕ್ಷಣಾದುಷ್ಣಂ ಶೀತತ್ವಂ ಚ ವಿನಶ್ಯತಿ ॥೪೫॥

ಯಥೋಷ್ಣಂ ವಾ ಭವೇದಲ್ಪಂ ಶೀತೇನ ಬಹುನಾ ವೃತಮ್ ।
ಶೀತಲಂ ತದ್ ಭವೇತ್ ಸರ್ವಮುಷ್ಣತ್ವಂ ಚ ವಿನಶ್ಯತಿ ॥೪೬॥

ಏವಂ ತು ಯದ್ಭವೇದ್ ಭೂರಿ ಸುಕೃತಂ ವಾऽಥ ದುಷ್ಕೃತಮ್ ।
ತದಲ್ಪಂ ಕ್ಷಪಯೇಚ್ಛೀಘ್ರಂ ನಾತ್ರ ಕಾರ್ಯಾ ವಿಚಾರಣಾ ॥೪೭॥

ಯಾವ ರೀತಿಯಾಗಿ ತಣ್ಣಗಿರುವ ನೀರು ಅತಿಯಾದ ಬಿಸಿನೀರಿನಿಂದ ಮೇಲನ ಹೊಂದಿದಾಗ ತತ್‌ಕ್ಷಣದಲ್ಲಿಯೇ ಆ ತಣ್ಣೀರು ಬಿಸಿಯಾಗುತ್ತದೋ, ಅದರಲ್ಲಿರುವ ಶೈತ್ಯವು ನಾಶ ಹೊಂದುತ್ತದೋ ಅಥವಾ ತುಂಬಾ ತಣ್ಣಗಿರುವ ನೀರಿಗೆ ಸ್ವಲ್ಪ ಬಿಸಿನೀರಿನ ಮೇಲನವನ್ನು ಮಾಡಿದಾಗ ಬಿಸಿಯಾದ ನೀರು ತಣ್ಣಗಾಗುತ್ತದೋ, ತನ್ನಲ್ಲಿರುವ ಉಷ್ಣತ್ವವನ್ನು ಕಳೆದುಕೊಳ್ಳುತ್ತದೋ, ಇದೇ ರೀತಿಯಾಗಿ ಪುಣ್ಯಕರ್ಮವನ್ನಾಗಲಿ, ಪಾಪಕರ್ಮವನ್ನಾಗಲಿ ಅಲ್ಪಪ್ರಮಾಣದಲ್ಲಿ ಆಚರಿಸಿದಾಗ ಅದು ನಾಶವನ್ನೇ ಹೊಂದುತ್ತದೆ. ಅತಿಯಾದ ಪಾಪಕರ್ಮವನ್ನು ಮಾಡಿ ಸ್ವಲ್ಪ ಪುಣ್ಯಕರ್ಮವನ್ನು ಮಾಡಿದರೂ ಅವನು ಪಾಪಕರ್ಮಿ ಎಂದೇ ಕರೆಸಿಕೊಳ್ಳುತ್ತಾನೆ. ಅತಿಯಾದ ಪುಣ್ಯಕರ್ಮವನ್ನು ಮಾಡಿ ಸ್ವಲ್ಪ ಪಾಪಕರ್ಮವನ್ನು ಮಾಡಿದರೂ ಅವನು ಪುಣ್ಯಕರ್ಮಿ ಎಂದೇ ಕರೆಸಿಕೊಳ್ಳುತ್ತಾನೆ. ಇದರಲ್ಲಿ ವಿಚಾರ ಮಾಡುವ ಅಂಶವು ಇರುವುದಿಲ್ಲ.

ಸಮತ್ವೇ ಸತಿ ರಾಜೇಂದ್ರ ತಯೋಃ ಸುಕೃತಪಾಪಯೋಃ ।
ಗೂಹಿತಸ್ಯ ಭವೇದ್ ವೃದ್ಧಿಃ ಕೀರ್ತಿತಸ್ಯ ಭವೇತ್ ಕ್ಷಯಃ ॥೪೮॥

ಸುಕೃತ-ದುಷ್ಕೃತಗಳು ಎರಡೂ ಸಮವಾಗಿರುವುದಾದರೆ ತಾನು ಮಾಡಿದ ಸುಕೃತವನ್ನಾಗಲಿ, ದುಷ್ಕೃತವನ್ನಾಗಲಿ ಮನುಷ್ಯನು ಹೇಳಿಕೊಂಡರೆ ಅದು ಕ್ಷೀಣಿಸುತ್ತದೆ.

ಮಾಡಿದ ಪಾಪವನ್ನು ಪಶ್ಚಾತ್ತಾಪದಿಂದ ಹೇಳಿಕೊಂಡರೆ ಆ ಪಾಪವು ನಾಶ ಹೊಂದುತ್ತದೆ. ಮಾಡಿದ ಪುಣ್ಯಕರ್ಮವನ್ನು ಹೇಳಿಕೊಂಡರೆ ಪುಣ್ಯವು ನಾಶ ಹೊಂದುತ್ತದೆ ಎಂದು ಅಭಿಪ್ರಾಯ. ಹೇಳಿಕೊಳ್ಳದೆ ರಹಸ್ಯವಾಗಿ ಇಟ್ಟುಕೊಂಡರೆ ಅಭಿವೃದ್ಧಿಯನ್ನು ಹೊಂದುತ್ತದೆ.

ಖ್ಯಾಪನೇನಾನುತಾಪೇನ ಪ್ರಾಯಃ ಪಾಪಂ ಪ್ರಣಶ್ಯತಿ ।
ತಥಾಕೃತಶ್ಚ(ಸ್ತು) ರಾಜೇಂದ್ರ ಧರ್ಮೋ ನಶ್ಯತಿ ಭಾರತ ॥೪೯॥

ಮಾಡಿದ ಪಾಪಗಳನ್ನು ಗುಟ್ಟಾಗಿ ಇಡಬಾರದು. ಅವುಗಳನ್ನು ಬಹಿರಂಗ ಪಡಿಸುವುದರಿಂದ ಪಾಪಕರ್ಮಗಳು ಸವಿಯುತ್ತವೆ. ಮಾಡಿದ ಒಳ್ಳೆಯ ಕಾರ್ಯಗಳನ್ನು ಹೇಳಿಕೊಳ್ಳಬಾರದು. ಹೇಳಿಕೊಂಡರೆ ಪುಣ್ಯಕರ್ಮವು ಸವೆದು ಹೋಗುತ್ತದೆ.

ತಾವುಭೌ ಗೂಹಿತೌ ಸಮ್ಯಗ್ ವೃದ್ಧಿಂ ಯಾತೌ ನ ಸಂಶಯಃ ।
ತಸ್ಮಾತ್ ಸರ್ವಪ್ರಯತ್ನೇನ ನ ಪಾಪಂ ಗೂಹಯೇದ್ ಬುಧಃ ॥೫೦॥

ಪಾಪಕರ್ಮವೇ ಆಗಲಿ, ಪುಣ್ಯಕರ್ಮವೇ ಆಗಲಿ ಮುಚ್ಚಿಟ್ಟಲ್ಲಿ ಅವುಗಳು ವೃದ್ಧಿಯನ್ನು ಹೊಂದುತ್ತವೆ. ಆದ್ದರಿಂದ ಜ್ಞಾನಿಯಾದವನು ಸಮಸ್ತ ಪ್ರಯತ್ನದಿಂದಲೂ ಮಾಡಿದ ಪಾಪವನ್ನು ಮುಚ್ಚಿಡಬಾರದು.

ತಸ್ಮಾದೇತತ್ ಪ್ರಯತ್ನೇನ ಕೀರ್ತನಂ ಕ್ಷಯಕಾರಣಮ್ ।
ತಸ್ಮಾತ್ ಸಂಕೀರ್ತಯೇತ್ ಪಾಪಂ ನಿತ್ಯಂ ಧರ್ಮಂ ಚ ಗೂಹಯೇತ್ ॥

ಪ್ರಯತ್ನಪೂರ್ವಕವಾಗಿ ಮಾಡಿದ ಪಾಪವನ್ನು ಹೇಳಿಕೊಳ್ಳುತ್ತಿದ್ದರೆ ಆ ಪಾಪಕರ್ಮದ ಫಲವು ನಾಶವಾಗುತ್ತದೆ. ಆದ್ದರಿಂದ ಮಾಡಿದ ಪಾಪಕರ್ಮಗಳನ್ನು ಹೇಳಿಕೊಳ್ಳುತ್ತಿರಬೇಕು. ನಿತ್ಯವೂ ತಾನು ಅನುಷ್ಠಾನ ಮಾಡಿದ ಧರ್ಮಗಳನ್ನು ಮುಚ್ಚಿಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಚಾತುರ್ವರ್ಣ್ಯಧರ್ಮಫಲಕಥನಂ ನಾಮ ಅಷ್ಟನವತಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂಬತ್ತನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಏನೂ ಪ್ರಯೋಜನ ಸಿಗದೆ ಇರುವ ಜನ್ಮ-ದಾನ-ಜೀವಗಳ ಬಗ್ಗೆ ವರ್ಣಿಸಿದುದು. ದಾನಗಳಲ್ಲಿ ಸಾತ್ವಿಕ-ರಾಜಸ-ತಾಮಸ ಭೇದಗಳನ್ನೂ, ದಾನ ತೆಗೆದುಕೊಳ್ಳುವ ವ್ಯಕ್ತಿಯಲ್ಲಿರುವ ಅರ್ಹತೆಯನ್ನು ಹೇಳುವ ಮೂಲಕ ಬ್ರಾಹ್ಮಣನ ಮಹಿಮೆಯನ್ನು ವರ್ಣಿಸಿದುದು.

ವೈಶಂಪಾಯನಃ

ಏವಂ ಶ್ರುತ್ವಾ ವಚಸ್ತಥ್ಯಂ ಧರ್ಮಪುತ್ರೋಽಚ್ಯುತಸ್ಯ ತು ।
ಪಪ್ರಚ್ಛ ಪುನರಪ್ಯನ್ಯಾನ್ ಧರ್ಮಾನ್ ಧರ್ಮಾತ್ಮಜೋ ನೃಪ ॥೧॥

ವೈಶಂಪಾಯನ– ಜನಮೇಜಯನೇ, ಧರ್ಮಜನು ಅಚ್ಯುತನು ಹೇಳಿದ ಮಾತುಗಳನ್ನು ಕೇಳಿಸಿಕೊಂಡು ಪುನಃ ಧರ್ಮದ ವಿಷಯವಾಗಿ ಕೃಷ್ಣನ ಬಳಿ ಪ್ರಶ್ನಿಸಿದನು.

ಯುಧಿಷ್ಠಿರಃ

ವೃಥಾ ಚ ಕತಿ ಜನ್ಮಾನಿ ವೃಥಾ ದಾನಾನಿ ವಾ ಕತಿ ।
ವೃಥಾ ಚ ಜೀವನಂ ಯೇಷಾಂ ನರಾಣಾಂ ಪುರುಷೋತ್ತಮ ॥೨॥

ಅಚ್ಯುತನೇ, ಯಾವ ಜನ್ಮವು ವ್ಯರ್ಥವೆಂದು ಶಾಸ್ತ್ರ ಹೇಳುತ್ತದೆ? ವ್ಯರ್ಥವಾದ ಫಲವನ್ನು ನೀಡದಿರುವ ದಾನವು ಯಾವುದು? ವ್ಯರ್ಥವಾದ ಜೀವನವು ಯಾವುದು?

ಕೀದೃಶಾಸು ಹ್ಯವಸ್ಥಾಸು ದಾನಂ ದತ್ತಂ ಜನಾರ್ದನ ।
ಇಹ ಲೋಕೇ ಚ ಭಜತಿ ಪುರುಷಃ ಪುರುಷೋತ್ತಮ ॥೩॥

ಪುರುಷೋತ್ತಮನೇ, ಯಾವ ಅವಸ್ಥೆಯಲ್ಲಿ ಮನುಷ್ಯನು ಮಾಡಿದ ದಾನದ ಫಲವನ್ನು ಈ ಲೋಕದಲ್ಲಿ ಅನುಭವಿಸುತ್ತಾನೆ?

ಗರ್ಭಸ್ಥೇ ಕರ್ಮ ಚಾಯಾತಿ ಕಿಂ ಬಾಲ್ಯೇ ವಾಪಿ ಶೈಶವೇ ।
ಯೌವನೇ ಚಾಪಿ ಕಿಂ ಕೃಷ್ಣ ವೃದ್ಧತ್ವೇ ಚಾಪಿ ಕಿಂ ಭವೇತ್ ॥೪॥

ಕೃಷ್ಣ, ಮಗು ಇದ್ದಾಗ ಅನುಭವಿಸುತ್ತಾನೆಯೋ, ಯುವಕನಾದಾಗ ಅನುಭವಿಸುತ್ತಾನೆಯೋ, ಮುದುಕನಾದಾಗ ದಾನದ ಫಲವನ್ನು ಅನುಭವಿಸುತ್ತಾನೆಯೋ?

ಸಾತ್ವಿಕಂ ಕೀದೃಶಂ ದಾನಂ ರಾಜಸಂ ಕೀದೃಶಂ ಭವೇತ್ ।
ತಾಮಸಂ ಕೀದೃಶಂ ದೇವ ತರ್ಪಯಿಷ್ಯತಿ ಕಿಂ ಪ್ರಭೋ ॥೫॥

ಸಾತ್ವಿಕ ದಾನವು ಯಾವುದು? ರಾಜಸ ದಾನವು ಯಾವುದು? ತಾಮಸ ದಾನವು ಯಾವುದು? ಎಂತಹ ದಾನದಿಂದ ದಾನ ತೆಗೆದುಕೊಳ್ಳುವವನು ಸಂತೋಷವನ್ನು ಹೊಂದುತ್ತಾನೆ?

ಉತ್ತಮಂ ಕೀದೃಶಂ ದಾನಂ ಮಧ್ಯಮಂ ಕೀದೃಶಂ ಭವೇತ್ ।
ಅಧಮಂ ಕೀದೃಶಂ ದಾನಂ ತೇಷಾಂ ಯಾದವ ಕಿಂ ಫಲಮ್ ॥೬॥

ಯಾದವನೇ, ಉತ್ತಮವಾದ ದಾನವು ಯಾವುದು? ಮಧ್ಯಮ ದಾನವು ಯಾವುದು? ಅಧಮ ದಾನವು ಯಾವುದು? ಆ ದಾನಗಳಿಗಿರುವ ಫಲವೇನು?

ಕಿಂ ದಾನಂ ನಯತಿ ಹ್ಯೂರ್ಧ್ವಂ ಕಿಂ ಗತಿಂ ಮಧ್ಯಮಾಂ ನಯೇತ್ ।
ಗತಿಂ ಜಘನ್ಯಾಮಥವಾ ದೇವದೇವ ಬ್ರವೀಹಿ ಮೇ ॥೭॥

ಯಾವ ದಾನವು ಸ್ವರ್ಗಲೋಕಕ್ಕೆ ಒಯ್ಯುತ್ತದೆ? ಯಾವ ದಾನವು ಮನುಷ್ಯ ಲೋಕದಲ್ಲಿ ಇರುವಂತೆ ಮಾಡುತ್ತದೆ? ಯಾವ ದಾನವು ಅಧಮಲೋಕಕ್ಕೆ ಕೊಂಡೊಯ್ಯುತ್ತದೆ? ದೇವದೇವನೇ, ಇವೆಲ್ಲವನ್ನೂ ಹೇಳು.

ಏತದಿಚ್ಛಾಮಿ ವಿಜ್ಞಾತುಂ ಪರಂ ಕೌತೂಹಲಂ ಹಿ ಮೇ ।
ತ್ವದೀಯಂ ವಚನಂ ಸತ್ಯಂ ಪುಣ್ಯಂ ಚ ಮಧುಸೂದನ ॥೮॥

ಈ ದಾನದ ರಹಸ್ಯವನ್ನು ತಿಳಿಯಲು ಬಯಸಿದ್ದೇನೆ. ನನಗೆ ಅತಿಯಾದ ಕುತೂಹಲವಿದೆ. ಮಧುಸೂದನನೇ, ನಿನ್ನ ಮಾತು ಸತ್ಯವೂ, ಪುಣ್ಯಪ್ರದವೂ ಆಗಿದೆ.

ವೈಶಂಪಾಯನಃ

ಏವಂ ಧರ್ಮಂ ಪ್ರಯತ್ನೇನ ಪೃಷ್ಟಃ ಪಾಂಡುಸುತೇನ ವೈ ।
ಉವಾಚ ವಾಸುದೇವೋಽಥ ಧರ್ಮಾನ್ ಧರ್ಮಾತ್ಮಜಸ್ಯ ಸಃ ॥೯॥

ವೈಶಂಪಾಯನ– ಈ ರೀತಿಯಾಗಿ ಪಾಂಡುಸುತನಾದ ಧರ್ಮಜನು ಕೃಷ್ಣನನ್ನು ಧರ್ಮದ ಬಗ್ಗೆ ಪ್ರಯತ್ನಪೂರ್ವಕವಾಗಿ ಕೇಳುತ್ತಿರಲು ಯುಧಿಷ್ಠಿರನಿಗೆ ಸಮಸ್ತ ಧರ್ಮಗಳನ್ನು ವಾಸುದೇವನು ವಿವರಿಸಿದನು.

ಶ್ರೀಭಗವಾನ್

ಶೃಣು ರಾಜನ್ ಯಥಾನ್ಯಾಯಂ ವಚನಂ ತಥ್ಯಮುತ್ತಮಮ್ ।
ಕಥ್ಯಮಾನಂ ಮಯಾ ಪುಣ್ಯಂ ಸರ್ವಪಾಪವ್ಯಪೋಹನಮ್ ॥೧೦॥

ಶ್ರೀಭಗವಾನ್– ಯುಧಿಷ್ಠಿರನೇ, ನಿನಗೆ ಯೋಗ್ಯವಾದ ಸಮಸ್ತ ಧರ್ಮದ ವಿಷಯಗಳನ್ನು ಯಥಾವತ್ತಾಗಿ ಬೋಧಿಸುತ್ತೇನೆ. ಏಕಾಗ್ರತೆಯಿಂದ ಕೇಳಿಸಿಕೊ. ಪುಣ್ಯಪ್ರದವಾದ ನನ್ನ ಪ್ರವಚನದಿಂದ ನಿನ್ನ ಸಮಸ್ತ ಪಾಪಗಳೂ ಪರಿಹಾರವಾಗಲಿ.

ವೃಥಾ ಚ ದಶ ಜನ್ಮಾನಿ ಚತ್ವಾರಿ ಚ ನರಾಧಿಪ ।
ವೃಥಾ ದಾನಾನಿ ಪಂಚಾಶತ್ ಪಂಚ ಚೈವ ಯಥಾಕ್ರಮಮ್ ॥೧೧॥

ವೃಥಾ ಚ ಜೀವಿತಂ ಯೇಷಾಂ ತೇ ಚ ಷಟ್ ಪರಿಕೀರ್ತಿತಾಃ ।
ಅನುಕ್ರಮೇಣ ಸರ್ವಾಣಿ ತಾನಿ ವಕ್ಷ್ಯಾಮಿ ಪಾಂಡವ ॥೧೨॥

ಹದಿನಾಲ್ಕು ಜನ್ಮಗಳು ವ್ಯರ್ಥವಾದವುಗಳು. ಐವತ್ತೈದು ದಾನಗಳು ವ್ಯರ್ಥವಾದವು. ಆರು ಪ್ರಕಾರವಾದ ಮನುಷ್ಯನ ಜೀವಿಕೆಗಳು ವ್ಯರ್ಥವಾದವುಗಳು. ಅದೆಲ್ಲವನ್ನೂ ಕ್ರಮವಾಗಿ ಹೇಳುತ್ತೇನೆ.

ಧರ್ಮಘ್ನಾನಾಂ ತಥಾ ಜನ್ಮ ಲುಬ್ಧಾನಾಂ ಪಾಪಿನಾಂ ತಥಾ ।
ವೃಥಾ ಪಾಕಂ ಚ ಯೇऽಶ್ನಂತಿ ಪರದಾರರತಾಶ್ಚ ಯೇ ॥೧೩॥

ಪಾಕಭೇದಕರಾ ಯೇ ಚ ಯೇ ಚ ಸ್ಯುಃ ಸತ್ಯವರ್ಜಿತಾಃ ॥೧೪॥

ಧರ್ಮವನ್ನು ನಾಶಮಾಡುವವರ, ಲೋಭಿಗಳ, ಪಾಪಿಜನರ, ಬಲಿಹರಣ-ವೈಶ್ವದೇವಾದಿಗಳನ್ನು ಮಾಡದೆ, ಅತಿಥಿಗಳನ್ನು ಸತ್ಕರಿಸದೆ, ಕೇವಲ ತಮಗೋಸ್ಕರ ಪದಾರ್ಥಗಳನ್ನು ಬೇಯಿಸಿ ತಿನ್ನುವವರ, ಪರಸ್ತ್ರೀಯರಲ್ಲಿ ಅನುರಕ್ತರಾಗಿರುವವರ, ಊಟದಲ್ಲಿ ಪಂಕ್ತಿಭೇದವನ್ನು ಮಾಡುವವರ, ಅಸತ್ಯವಾದಿಗಳ ಜನ್ಮವು ವ್ಯರ್ಥವಾಗಿದೆ.

ಮೃಷ್ಟಮಶ್ನಾತಿ ಯಶ್ಚೈಕೋ ದೃಶ್ಯಮಾನಸ್ತು ಬಾಂಧವೈಃ ।
ಪಿತರಂ ಮಾತರಂ ಚೈವ ಉಪಾಧ್ಯಾಯಂ ಗುರುಂ ತಥಾ ॥೧೫॥

ಯಾರು ಕಷ್ಟಪಡುತ್ತಿರುವ ಬಂಧುಗಳು ಜೊತೆಗಿದ್ದರೂ ಅವರ ಲೆಕ್ಕಿಸದೆ ಒಬ್ಬನೇ ಉತ್ತಮವಾದ ಅನ್ನವನ್ನು ಉಣ್ಣುತ್ತಾನೋ ಅಂತಹವನ ಜನ್ಮವು ವ್ಯರ್ಥವಾದುದು. ಯಾರು ತಂದೆ-ತಾಯಿಗಳನ್ನು, ಉಪಾಧ್ಯಾಯರನ್ನು, ಗುರುಗಳನ್ನು ಸೇವಿಸುವುದಿಲ್ಲವೋ ಅವನ ಜನ್ಮವು ವ್ಯರ್ಥವು.

ಮಾತುಲಂ ಮಾತುಲಾನೀಂ ಚ ಯೋ ವಿಹನ್ಯಾಚ್ಚಪೇತ ವಾ ॥೧೬॥

ಸೋದರಮಾವನನ್ನು, ಅವನ ಪತ್ನಿಯನ್ನು ಹಿಂಸಿಸುತ್ತಾನೋ, ನಿಂದಿಸುತ್ತಾನೋ ಅವನ ಜನ್ಮವು ವ್ಯರ್ಥವು.

ಬ್ರಾಹ್ಮಣಾಶ್ಚೈವ ಯೇ ಭೂತಾಃ ಸಂಧ್ಯೋಪಾಸನವರ್ಜಿತಾಃ ।
ನಿಃಸ್ವಾಹಾ ನಿಃಸ್ವಧಾಶ್ಚೈವ ಯಶ್ಚ ಶೂದ್ರಾನ್ನಭುಗ್ ದ್ವಿಜಃ ॥೧೭॥

ಬ್ರಾಹ್ಮಣನಾಗಿದ್ದು ಸಂಧ್ಯಾವಂದನೆಯನ್ನು ಮಾಡದಿರುವ, ಅಗ್ನಿಹೋತ್ರಾದಿಗಳನ್ನು ಮಾಡದಿರುವ, ಪಿತೃಕರ್ಮಗಳನ್ನು ಮಾಡದಿರುವವನ ಜನ್ಮವು, ಶೂದ್ರಾದಿಗಳು ನೀಡುವ ಅನ್ನವನ್ನು ತಿನ್ನುವ ಬ್ರಾಹ್ಮಣನ ಜನ್ಮವು ವ್ಯರ್ಥವೇ ಸರಿ.

ಮಮ ವಾ ಶಂಕರಸ್ಯಾಪಿ ಬ್ರಹ್ಮಣೋ ವಾ ಯುಧಿಷ್ಠಿರ ।
ಅಥವಾ ಬ್ರಾಹ್ಮಣಾನಾಂ ತು ಯೇ ನ ಭಕ್ತಾ ನರಾಧಿಪ ॥೧೮॥

ವೃಥಾ ಜನ್ಮಾನ್ಯಥೈತೇಷಾಂ ಪಾಪಿನಾಂ ವಿದ್ಧಿ ಪಾಂಡವ ॥೧೯॥

ಶ್ರೇಷ್ಠರಾಜನೇ, ನನಗಾಗಲೀ, ಶಂಕರನಿಗಾಗಲೀ, ಬ್ರಹ್ಮನಿಗಾಗಲೀ, ಬ್ರಾಹ್ಮಣರಿಗಾಗಲೀ ಭಕ್ತರಾಗದ ಮನುಷ್ಯರ ಜನ್ಮವು ವ್ಯರ್ಥವೇ ಸರಿ. ಪಾಂಡವನೇ, ಇಂತಹ ಪಾಪಿಷ್ಠರ ಜನ್ಮವು ವ್ಯರ್ಥವಾಗುತ್ತದೆ ಎಂದು ತಿಳಿ.

ಅಶ್ರದ್ಧಯಾ ಚ ಯದ್ದತ್ತಮ್ ಅವಮಾನೇನ ವಾऽಪಿ ಯತ್ ।
ಡಂಭಾರ್ಥಮಪಿ ಯದ್ದತ್ತಂ ಯತ್ ಪಾಷಂಡಿಹೃತಂ ನೃಪ ॥೨೦॥

ಶೂದ್ರಾಚಾರಾಯ ಯದ್ದತ್ತಂ ಯದ್ದತ್ತ್ವಾ ಚಾನುಕೀರ್ತಿತಮ್ ।
ರೋಷಯುಕ್ತಂ ಚ ಯದ್ದತ್ತಂ ಯದ್ದತ್ತಮನುಶೋಚಿತಮ್ ॥೨೧॥

ಡಂಭಾರ್ಜಿತಂ ಚ ಯದ್ದತ್ತಂ ಯಚ್ಚ ವಾऽಪ್ಯನೃತಾರ್ಜಿತಮ್ ।
ಬ್ರಾಹ್ಮಣಸ್ವಂ ಚ ಯದ್ದತ್ತಂ ಚೌರ್ಯೇಣಾಪ್ಯಾರ್ಜಿತಂ ಚ ಯತ್ ॥೨೨॥

ಅಭಿಶಾಪಹೃತಂ ಯತ್ತು ಯದ್ದತ್ತಂ ಪತಿತೇ ದ್ವಿಜೇ ।
ಯದ್ದತ್ತಂ ಸ್ಪೈರಿಣೇಭರ್ತುರ್ಬಹುಕಾರ್ಯಾನುವರ್ತಿನೇ ॥೨೩॥

ನಿರ್ಬ್ರಹ್ಮಭಿಹೃತಂ ಯತ್ತು ಯದ್ದತ್ತಂ ಸರ್ವಯಾಜಕೇ ।
ವ್ರಾತ್ಯೇ ತು ಯತ್ಕೃತಂ ದತ್ತಮಾರೂಢಪತಿತೇ ಚ ಯತ್ ॥೨೪॥

ಯದ್ ಗ್ರಾಮಯಾಜಕಹೃತಂ ಯತ್ ಕೃತಘ್ನಹೃತಂ ತಥಾ ।
ಉಪಪಾತಕಿನೇ ದತ್ತಂ ವೇದವಿಕ್ರಯಿಣೇ ಚ ಯತ್ ॥೨೫॥

ಸ್ತ್ರೀಜಿತಾಯ ಚ ಯದ್ದತ್ತಂ ಯದ್ದತ್ತಂ ರಾಜಸೇವಿನೇ ।
ಗಣಕಾಯ ಚ ಯದ್ದತ್ತಂ ಯಚ್ಚ ಕಾರಣಿಕಾಯ ಚ ॥೨೬॥

ವೃಷಲೀಪತಯೇ ದತ್ತಂ ಯದ್ದತ್ತಂ ಶಸ್ತ್ರಜೀವಿನೇ ।
ಭೃತಕಾಯ ಚ ಯದ್ದತ್ತಂ ವ್ಯಾಲಗ್ರಾಹಿಹೃತಂ ಚ ಯತ್ ॥೨೭॥

ದೇವದ್ರವ್ಯಾಶಿನೇ ದತ್ತಂ ಯದ್ದತ್ತಂ ಚಿತ್ರಕರ್ಮಿಣೇ ॥೨೮॥

ರಂಗೋಪಜೀವಿನೇ ದತ್ತಂ ಯಚ್ಚ ಮಾಂಸೋಪಜೀವಿನೇ ।
ಸೇವಕಾಯ ಚ ಯದ್ದತ್ತಂ ಯದ್ದತ್ತಂ ಬ್ರಾಹ್ಮಣಬ್ರುವೇ ॥೨೯॥

ಅದೇಶಿನೇ ಚ ಯದ್ದತ್ತಂ ದತ್ತಂ ವಾರ್ಧುಷಿಕಾಯ ಯತ್ ।
ಯದನಾಚಾರಿಣೇ ದತ್ತಂ ಯತ್ತು ದತ್ತಮನಗ್ನಯೇ ॥೩೦॥

ಅಸಂಧ್ಯೋಪಾಸಿನೇ ದತ್ತಂ ಯಚ್ಚೂದ್ರಗ್ರಾಮವಾಸಿನೇ ।
ಯನ್ಮಿಥ್ಯಾಲಿಂಗಿನೇ ದತ್ತಂ ದತ್ತಂ ಸರ್ವಾಶಿನೇ ಚ ಯತ್ ॥೩೧॥

ನಾಸ್ತಿಕಾಯ ಚ ಯದ್ದತ್ತಂ ಧರ್ಮವಿಕ್ರಯಿಣೇ ಚ ಯತ್ ।
ಚೋರಕಾಯ ಚ ಯದ್ದತ್ತಂ ಯದ್ದತ್ತಂ ಕೂಟಸಾಕ್ಷಿಣೇ ॥೩೨॥

ಗ್ರಾಮಕೂಟಾಯ ಯದ್ದತ್ತಂ ದಾನಂ ಪಾರ್ಥಿವಪುಂಗವ ।
ವೃಥಾ ಭವತಿ ತತ್ ಸರ್ವಂ ನಾತ್ರ ಕಾರ್ಯಾ ವಿಚಾರಣಾ ॥೩೩॥

ಅಶ್ರದ್ಧೆಯಿಂದ ಮಾಡಿದ ದಾನ, ಅವಮಾನ ಮಾಡಿ ನೀಡಿದ ದಾನ, ಡಾಂಭಿಕವಾಗಿ ನೀಡಿದ ದಾನ, ವೈದಿಕ ಧರ್ಮವನ್ನು ದ್ವೇಷಿಸುವವನಿಗೆ ನೀಡಿದ ದಾನ, ಶೂದ್ರಾಚಾರ ಉಳ್ಳವನಿಗೆ ನೀಡಿದ ದಾನ, ಕೀರ್ತಿಗಾಗಿ ನೀಡಿದ ದಾನ, ಕೋಪದಿಂದ ಕೊಟ್ಟದ್ದು, ದಾನ ಕೊಟ್ಟ ಬಳಿಕ ಕೊಟ್ಟೆನೆಂದು ಸಂಕಟಪಟ್ಟದ್ದು, ಡಂಭದಿಂದ ಸಂಪಾದಿಸಿದ್ದನ್ನು ನೀಡುವುದು, ಸುಳ್ಳು ಹೇಳಿ ಸಂಪಾದಿಸಿದ್ದನ್ನು ನೀಡುವುದು, ಬ್ರಾಹ್ಮಣರ ಸ್ವತ್ತನ್ನು ಅಪಹರಿಸಿ ಅದನ್ನು ದಾನವಾಗಿ ನೀಡುವುದು, ಕಳ್ಳತನ ಮಾಡಿ ಸಂಪಾದಿಸಿದ್ದನ್ನು ದಾನವಾಗಿ ಕೊಡುವುದು, ಶಪಿಸಿಕೊಂಡು ನೀಡುವ ವ್ಯಕ್ತಿಯಿಂದ ಸ್ವೀಕರಿಸಿದ ದಾನವು, ಪತಿತನಾದ ಬ್ರಾಹ್ಮಣನಿಗೆ ಕೊಟ್ಟ ದಾನ, ವೇದವಿಹೀನರಾದವರಿಗೆ ಕೊಟ್ಟ ದಾನ, ಎಲ್ಲರ ಮನೆಯಲ್ಲಿಯೂ ಬೇಡಿ ತಂದ ಪದಾರ್ಥವನ್ನು ಮಾಡಿದ ದಾನ, ಸಂಸ್ಕಾರ ಹೀನರಾದ, ದಾನ ಮಾಡಲು ಅರ್ಹತೆಯಿಲ್ಲದ ವ್ರಾತ್ಯರಿಂದ ಸ್ವೀಕರಿಸಿದ ದಾನ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಬಳಿಕ ಪುನಃ ಗೃಹಸ್ಥಾಶ್ರಮವನ್ನು ಪ್ರವೇಶಿಸಿದಾಗ ಪತಿತನೆನಿಸಿಕೊಂಡ ವ್ಯಕ್ತಿಯು ತಂದುಕೊಟ್ಟಿರುವ ದಾನ, ಇಂದ್ರಿಯಲೋಲುಪನು ನೀಡಿರುವ ದಾನ, ಕೃತಘ್ನನು ಕೊಟ್ಟಿರುವ ದಾನ, ಉಪಪಾತಕಗಳನ್ನು ಮಾಡಿರುವ ವ್ಯಕ್ತಿಯಿಂದ ದಾನ, ವೇದವನ್ನು ಮಾರಿಕೊಳ್ಳುವ ವ್ಯಕ್ತಿಯಲ್ಲಿ ಮಾಡುವ ದಾನ, ಸ್ತ್ರೀಜಿತನಾದ ವ್ಯಕ್ತಿಯಿಂದ ಕೊಡಲ್ಪಟ್ಟ ದಾನ, ರಾಜಸೇವಕನು ನೀಡಿರುವ ದಾನ, ಗಣಿಕಾ ಸ್ತ್ರೀ ನೀಡುವ ದಾನ, ಶೂದ್ರಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದ ವ್ಯಕ್ತಿಯಿಂದ ಪಡೆದ ದಾನ, ವೃಷಲೀಪತಿಯಿಂದ ಪಡೆದ ದಾನ, ಶಸ್ತ್ರಜೀವಿಯಾದ ವ್ಯಕ್ತಿಯಿಂದ ಪಡೆದ ದಾನ, ಕೂಲಿ ತೆಗೆದುಕೊಂಡು ಜೀವಿಸುವವನಿಗೆ ಕೊಟ್ಟ ದಾನ, ಹಾವುಗಳನ್ನು ಹಿಡಿಯುವವನಿಗೆ ಕೊಟ್ಟ ದಾನ, ವ್ಯಾಪಾರದಿಂದ ಜೀವಿಸುವವನಿಗೆ ಕೊಟ್ಟ ದಾನ, ಕ್ಷುದ್ರವಾದ ಮಂತ್ರಗಳನ್ನು ಜಪಿಸಿಕೊಂಡು ಜೀವಿಕೆಯನ್ನು ನಡೆಸುವವನಿಗೆ ಕೊಟ್ಟ ದಾನ, ಶೂದ್ರನಂತೆ ಜೀವಿಸುವವನಿಗೆ ನೀಡಿದ ದಾನ, ವೇತನವನ್ನು ಪಡೆದು ದೇವಮಂದಿರದಲ್ಲಿ ಪೂಜೆ ಮಾಡುವವನಿಗೆ ಕೊಟ್ಟ ದಾನ, ದೇವರ ದ್ರವ್ಯವನ್ನು ಅಪಹರಿಸಿದವನಿಗೆ ನೀಡಿದ ದಾನ, ಚಿತ್ರಬರೆಯುವವನಿಗೆ ಕೊಟ್ಟ ದಾನ, ನಾಟಕ ವೃತ್ತಿಯಿಂದ ಜೀವಿಸುವವನಿಗೆ ಕೊಟ್ಟ ದಾನ, ಮಾಂಸವನ್ನು ಮಾರಿ ಜೀವನವನ್ನು ನಡೆಸುವವನಿಗೆ ಕೊಟ್ಟ ದಾನ, ಸೇವಕನಿಗೆ ಕೊಟ್ಟ ದಾನ, ಬ್ರಾಹ್ಮಣೋಚಿತವಾದ ಆಚಾರ-ವ್ಯವಹಾರವಿಲ್ಲದಿದ್ದರೂ ಬ್ರಾಹ್ಮಣನೆಂದು ಹೇಳಿಕೊಳ್ಳುವ ವ್ಯಕ್ತಿಗೆ ನೀಡಿದ

ದಾನ, ಉಪದೇಶಿಸಲು ಶಕ್ತಿಯಿಲ್ಲದವನಿಗೆ ನೀಡಿದ ದಾನ, ಬಡ್ಡಿಹಣದಿಂದ ಜೀವನ ನಡೆಸುವವನಿಗೆ ನೀಡುವ ದಾನ, ಆಚಾರಹೀನನಿಗೆ ನೀಡಿದ ದಾನ್ನ, ಅಗ್ನಿಹೋತ್ರ ಮಾಡದವನಿಗೆ ನೀಡಿದ ದಾನ, ಸಂಧ್ಯಾವಂದನೆ ಮಾಡದವನಿಗೆ ನೀಡಿದ ದಾನ, ಶೂದ್ರಗ್ರಾಮದಲ್ಲಿವಾಸ ಮಾಡುವ ಬ್ರಾಹ್ಮಣನಿಗೆ ನೀಡಿದ ದಾನ, ಸುಳ್ಳು ವೇಷಗಳನ್ನು ಧರಿಸುವವನಿಗೆ ನೀಡಿದ ದಾನ, ಸಿಕ್ಕಿದ್ದನ್ನು ತಿಂದು ಬದುಕುವವನಿಗೆ ನೀಡಿದ ದಾನ, ನಾಸ್ತಿಕನಿಗೆ, ಧರ್ಮವಿಕ್ರಯ ಮಾಡುವವನಿಗೆ, ನೀಚವೃತ್ತಿಯವನಿಗೆ, ಕಳ್ಳನಿಗೆ, ಸುಳ್ಳು ಸಾಕ್ಷಿ ಹೇಳುವವನಿಗೆ, ಕೂಟನೀತಿಯನ್ನು ಆಶ್ರಯಿಸಿ ಜಗಳ ತಂದೊಡ್ಡುವ ಬ್ರಾಹ್ಮಣನಿಗೆ ನೀಡಿದ ದಾನ - ಇವೆಲ್ಲವೂ ವ್ಯರ್ಥವಾಗುತ್ತವೆ. ಇದರಲ್ಲಿ ಯಾವ ಸಂಶಯವೂ ಬೇಡ.

ವಿಪ್ರನಾಮಧರಾ ಹ್ಯೇತೇ ಲೋಲುಪಾ ಬ್ರಾಹ್ಮಣಾಧಮಾಃ ।
ನಾತ್ಮಾನಂ ತಾರಯಂತ್ಯೇತೇ ನ ದಾತಾರಂ ಯುಧಿಷ್ಠಿರ ॥೩೪॥

ಯುಧಿಷ್ಠಿರನೇ, ಹಿಂದೆ ಹೇಳಿದ ವ್ಯಕ್ತಿಗಳೆಲ್ಲರೂ ವಿಷಯಗಳಲ್ಲಿಯೇ ಆಸಕ್ತರು. ಹೆಸರಿಗೆ ಮಾತ್ರ ದಾನಪಾತ್ರರು ಎಂದು ಕರೆಸಿಕೊಳ್ಳುತ್ತಾರೆ. ಇವರು ತಮ್ಮನ್ನೂ ಉದ್ಧರಿಸಿಕೊಳ್ಳುವುದಿಲ್ಲ, ದಾನ ಕೊಟ್ಟವರನ್ನೂ ಉದ್ಧರಿಸುವುದಿಲ್ಲ. ಇವರು ಬ್ರಾಹ್ಮಣಾಧಮರು.

ಏತೇಭ್ಯೋ ದತ್ತಮಾತ್ರಾಣಿ ದಾನಾನಿ ಸುಬಹೂನ್ಯಪಿ ।
ವೃಥಾ ಭವಂತಿ ರಾಜೇಂದ್ರ ಭಸ್ಮನ್ಯಾಜ್ಯಾಹುತಿರ್ಯಥಾ ॥೩೫॥

ಎಲೈ ರಾಜೇಂದ್ರನೇ, ಇವರಿಗೆ ಕೊಡುವ ದಾನವು ಅಪರಿಮಿತವಾಗಿದ್ದರೂ ಬೂದಿಯಲ್ಲಿ ಹೋಮ ಮಾಡಿದಂತೆ ಎಲ್ಲವೂ ವ್ಯರ್ಥವಾಗುತ್ತದೆ.

ಏತೇಷು ಯತ್ ಫಲಂ ಕಿಂಚಿದ್ ಭವಿಷ್ಯತಿ ಕಥಂಚನ ।
ರಾಕ್ಷಸಾಶ್ಚ ಪಿಶಾಚಾಶ್ಚ ತದ್ವಿಲ್ಲುಂಪಂತಿ ಹರ್ಷಿತಾಃ ॥೩೬॥

ಒಂದು ವೇಳೆ ಇಂತಹವರಿಗೆ ಕೊಟ್ಟ ದಾನದಿಂದ ಅಲ್ಪಸ್ವಲ್ಪ ಫಲವು ದೊರಕಿದರೂ ರಾಕ್ಷಸರು, ಪಿಶಾಚಿಗಳು ಸಂತೋಷದಿಂದ ಆ ಫಲವನ್ನು ಅಪಹರಿಸಿಬಿಡುತ್ತಾರೆ.

ವೃಥಾ ಹ್ಯೇತಾನಿ ದಾನಾನಿ ಕಥಿತಾನಿ ಸಮಾಸತಃ ॥೩೭॥

ಇಂತಹವರಿಗೆ ಕೊಡುವ ದಾನವು ವ್ಯರ್ಥವಾಗುವುದೆಂದು ಸಂಕ್ಷೇಪವಾಗಿ ಹೇಳಿದ್ದೇನೆ.

ಜೀವಿತಂ ಚ ವೃಥಾ ಯೇಷಾಂ ತಚ್ಛೃಣುಷ್ವ ಯುಧಿಷ್ಠಿರ ॥೩೮॥

ಇನ್ನು ಮುಂದೆ ನಾನು ಯಾವ ಯಾವ ಮನುಷ್ಯರ ಜೀವನವು ವ್ಯರ್ಥ ಎಂಬುದನ್ನು ತಿಳಿಸುತ್ತೇನೆ, ತಿಳಿದುಕೊ.

ಯೇ ಚ ಮಾಂ ನ ಪ್ರಪದ್ಯಂತೇ ಶಂಕರಂ ವಾ ನರಾಧಮಾಃ ।
ಬ್ರಾಹ್ಮಣಾನ್ ವಾ ಮಹಾದೇವಾನ್ ವೃಥಾ ಜೀವಂತಿ ತೇ ನರಾಃ ॥೩೯॥

ಯಾವ ನರಾಧಮನು ನನ್ನನ್ನಾಗಲೀ, ಶಂಕರನ್ನಾಗಲೀ, ಭೂದೇವತೆ ಎನಿಸಿದ ಬ್ರಾಹ್ಮಣರನ್ನಾಗಲೀ, ಶರಣು ಹೊಂದುವುದಿಲ್ಲವೋ ಅವರ ಜೀವನವು ವ್ಯರ್ಥ.

ಯೇ ಚ ನಿಂದಂತಿ ಮಾಂ ಮೂಢಾಃ ಶಂಕರಂ ವಾ ನರಾಧಮಾಃ ।
ಬ್ರಾಹ್ಮಣಾನ್ ವಾ ದ್ವಿಜಾನ್ ವೇದಾನ್ ವೃಥಾ ಜೀವಂತಿ ತೇ ನರಾಃ ॥

ಯಾರು ನನ್ನನ್ನು ನಿಂದಿಸುತ್ತಾರೋ, ಮೂರ್ಖರಾದ ನರಾಧಮರು ರುದ್ರನನ್ನು ನಿಂದಿಸುತ್ತಾರೋ, ಬ್ರಾಹ್ಮಣರನ್ನು, ವೇದಗಳನ್ನು ವ್ಯರ್ಥವಾಗಿ ಜರೆಯುತ್ತಾರೊ ಅವರು ನರಾಧಮರು.

ಹೇತುಶಾಸ್ತ್ರೇಷು ಯೇ ಹೃಷ್ಟಾಃ ಕುದೃಷ್ಟಿಪಥಮಾಶ್ರಿತಾಃ ।
ವೇದಾನ್ ನಿಂದಂತ್ಯನಾಚಾರಾ ವೃಥಾ ಜೀವಂತಿ ತೇ ನರಾಃ ॥೪೧॥

ಯಾರು ತರ್ಕಶಾಸ್ತ್ರದಲ್ಲಿಯೇ ಆಸಕ್ತರಾಗಿರುತ್ತಾರೋ, ನಾಸ್ತಿಕರ ಮಾರ್ಗವನ್ನು ಅನುಸರಿಸುತ್ತಾರೋ, ದೇವನಿಂದಕರೂ, ಸದಾಚಾರಹೀನರೋ ಅಂತಹವರ ಜೀವನವು ವ್ಯರ್ಥ.

ಕುಶಲೈಃ ಕೃತಶಾಸ್ತ್ರಾಣಿ ಪಠಿತ್ವಾ ಯೇ ನರಾಧಮಾಃ ।
ವಿಪ್ರಾನ್ ನಿಂದಂತಿ ಯಜ್ಞಾಂಶ್ಚ ವೃಥಾ ಜೀವಂತಿ ತೇ ನರಾಃ ॥೪೨॥

ಯಾವ ನರಾಧಮರು ನಾಸ್ತಿಕನಿಷ್ಠರಾದ ವ್ಯಕ್ತಿಗಳಿಂದ ರಚಿತವಾದ ಶಾಸ್ತ್ರಗಳನ್ನು ಓದುತ್ತಾ ಬ್ರಾಹ್ಮಣರನ್ನು, ಯಜ್ಞಗಳನ್ನು ನಿಂದಿಸುತ್ತಾರೋ ಅಂತಹವರ ಜೀವನವು ವ್ಯರ್ಥ.

ಯೇ ಚ ದುರ್ಗಾಂ ಕುಮಾರಂ ವಾ ವಾಯುಮಗ್ನಿಂ ಜಲಂ ರವಿಮ್ ।
ಪಿತರಂ ಮಾತರಂ ಚೈವ ಗುರುಂ ನಿತ್ಯಂ ನಿಶಾಕರಮ್ ॥೪೩॥

ಮೂಢಾ ನಿಂದಂತ್ಯನಾಚಾರಾ ವೃಥಾ ಜೀವಂತಿ ತೇ ನರಾಃ ॥೪೪॥

ಯಾರು ಆಚಾರಹೀನರಾಗಿ ದುರ್ಗೆಯನ್ನು, ಷಣ್ಮುಖನನ್ನು, ವಾಯುವನ್ನು, ಅಗ್ನಿಯನ್ನು, ಜಲವನ್ನು, ಸೂರ್ಯನನ್ನು, ತಂದೆ-ತಾಯಿಯರನ್ನು, ಗುರುವನ್ನು, ಇಂದ್ರನನ್ನು, ಚಂದ್ರನನ್ನು ನಿಂದಿಸುತ್ತಾರೋ ಅಂತಹವರ ಜೀವನವು ವ್ಯರ್ಥವೇ ಸರಿ.

ವಿದ್ಯಮಾನೇ ಧನೇ ಯಸ್ತು ದಾನಧರ್ಮವಿವರ್ಜಿತಃ ।
ಮೃಷ್ಟಮಶ್ನಾತಿ ಯಶ್ಚೈಕೋ ವೃಥಾ ಜೀವತಿ ಸೋಽಪ್ಯುತ ॥೪೫॥

ಯಾವನು ಧನವಂತನಾಗಿದ್ದರೂ ದಾನ-ಧರ್ಮಗಳನ್ನು ಮಾಡುವುದಿಲ್ಲವೋ, ಯಾರಿಗೂ ನೀಡದೆ ಮೃಷ್ಟಾನ್ನವನ್ನು ಸ್ವಯಂ ಭುಂಜಿಸುತ್ತಾನೋ ಅಂತಹವನ ಜೀವನವು ವ್ಯರ್ಥ.

ವೃಥಾ ಜೀವಿತಮಾಖ್ಯಾತಂ ದಾನಕಾಲಂ ಬ್ರವೀಮಿ ತೇ ॥೪೬॥

ಯುಧಿಷ್ಠಿರನೇ, ವ್ಯರ್ಥವಾದ ಜೀವಿತವನ್ನು ಹೇಳಿದ್ದೇನೆ. ಮುಂದೆ ಯಾವ ಕಾಲದಲ್ಲಿ ದಾನವು ಶ್ರೇಷ್ಠ ಎಂಬುದನ್ನು ಹೇಳುತ್ತೇನೆ.

ತಮೋನಿವಿಷ್ಟಚಿತ್ತೇನ ದತ್ತಂ ದಾನಂ ತು ಯದ್ಭವೇತ್ ।
ಸ ತಸ್ಯ ಫಲಮಶ್ನಾತಿ ನರೋ ಗರ್ಭಗತೋ ನೃಪ ॥೪೭॥

ಮನಸ್ಸು ತಮೋಗುಣದಿಂದ ಕೂಡಿದಾಗ ದಾನ ಮಾಡಿದವನು ಅದರ ಫಲವನ್ನು ಗರ್ಭದಲ್ಲಿರುವಾಗ ಅನುಭವಿಸುತ್ತಾನೆ.

ಈರ್ಷ್ಯಾಮಾತ್ಸರ್ಯಸಂಯುಕ್ತೋ ಡಂಭಾರ್ಥಂ ಚಾರ್ಥಕಾರಣಾತ್ ।
ದದಾತಿ ದಾನಂ ಯೋ ಮರ್ತ್ಯೋ ಬಾಲಭಾವೇ ತದಶ್ನುತೇ ॥೪೮॥

ಡಾಂಭಿಕವಾಗಿ, ಈರ್ಷ್ಯೆ-ಮಾತ್ಸರ್ಯಗಳಿಂದ ಕೂಡಿದವನಾಗಿ, ಅರ್ಥದ ಕಾರಣದಿಂದ ದಾನ ಮಾಡುವವನು ಬಾಲಕನಾಗಿದ್ದಾಗಲೇ ಅದರ ಫಲವನ್ನು ಅನುಭವಿಸುತ್ತಾನೆ. ಹೊಟ್ಟೆಕಿಚ್ಚು ಮೊದಲಾದ ದೋಷಗಳಿಂದ ದೂಷಿತವಾದ ದಾನವನ್ನು ಮಾಡಿದ್ದರಿಂದ ದುಃಖದಿಂದ ಕೂಡಿದಾಗ ಸುಖವನ್ನು ಅನುಭವಿಸುತ್ತಾನೆ. ಅರ್ಥಾತ್ ಗರ್ಭ ದುಃಖವನ್ನು ಅನುಭವಿಸುತ್ತಲೇ ಆ ಸುಖವನ್ನು ಅನುಭವಿಸುತ್ತಾನೆ.

ಭೋಕ್ತು ಭೋಗಾನ(ಭೋಗಮ)ಶಕ್ತಸ್ತು ವ್ಯಾಧಿಭಿಃ ಪೀಡಿತೋ ಭೃಶಮ್ ।
ದದಾತಿ ದಾನಂ ಯೋ ಮರ್ತ್ಯೋ ವೃದ್ಧಭಾವೇ ತದಶ್ನುತೇ ॥೪೯॥

ಭೋಗಗಳನ್ನು ಅನುಭವಿಸಲು ಅಶಕ್ತನಾಗಿ, ವ್ಯಾಧಿಗಳಿಂದ ಪೀಡಿಸಲ್ಪಡುತ್ತಿದ್ದರೂ ಆ ಕಾಲದಲ್ಲಿ ದಾನವನ್ನು ಮಾಡಿದರೆ ಅದರ ಫಲವಾಗಿ ಅವನಿಗೆ ವೃದ್ಧಾಪ್ಯದಲ್ಲಿ ಆ ದಾನದ ಫಲವಾಗಿ ಸುಖವು ದೊರೆಯುತ್ತದೆ.

ಶ್ರದ್ಧಾಯುಕ್ತಃ ಶುಚಿಃ ಸ್ನಾತಃ ಪ್ರಸನ್ನೇಂದ್ರಿಯಮಾನಸಃ ।
ದಾನಂ ದದಾತಿ ಯೋ ಮರ್ತ್ಯೋ ಯೌವನೇ ಸ ತದಶ್ನುತೇ ॥೫೦॥

ಯಾರು ಸ್ನಾನ ಮಾಡಿ, ಶುಚಿಯಾಗಿ, ಶ್ರದ್ಧಾಯುಕ್ತನಾಗಿ, ನಿರ್ಮಲವಾದ ಇಂದ್ರಿಯಗಳಿಂದ, ಮನಸ್ಸಿನಿಂದ ಕೂಡಿದವನಾಗಿ ದಾನವನ್ನು ನೀಡುತ್ತಾನೋ ಅಂತಹ ಮನುಷ್ಯನು ತನ್ನ ಯೌವನಾವಸ್ಥೆಯಲ್ಲಿಯೇ ಆ ದಾನದ ಶ್ರೇಷ್ಠಫಲವನ್ನು ಹೊಂದುತ್ತಾನೆ.

ಸ್ವಯಂ ನೀತ್ವಾ ತು ಯದ್ದಾನಂ ಭಕ್ತ್ಯಾ ಪಾತ್ರೇ ಪ್ರದೀಯತೇ ।
ತತ್ ಸಾರ್ವಕಾಲಿಕಂ ವಿದ್ಧಿ ದಾನಮಾಮರಣಾಂತಿಕಮ್ ॥೫೧॥

ಯಾವ ವ್ಯಕ್ತಿಯು ದಾನ ಕೊಡಲು ಯೋಗ್ಯವಾದ ವಸ್ತುವನ್ನು ತಾನೇ ತೆಗೆದುಕೊಂಡು ಹೋಗಿ ಭಕ್ತಿಯಿಂದ ಸತ್ಪಾತ್ರರಿಗೆ ದಾನ ಮಾಡುತ್ತಾನೋ ಅವನು ಹುಟ್ಟಿನಿಂದ ಸಾಯುವ ತನಕ ಸಮೃದ್ಧವಾದ ದಾನದ ಫಲವನ್ನು ಅನುಭವಿಸುತ್ತಾನೆ.

ಸಾತ್ವಿಕಂ ರಾಜಸಂ ಚೈವ ತಾಮಸಂ ಚ ಯುಧಿಷ್ಠಿರ ।
ದಾನಂ ದಾನಫಲಂ ಚೈವ ಗತಿಂ ಚ ತ್ರಿವಿಧಾಂ ಶೃಣು ॥೫೨॥

ಯುಧಿಷ್ಠಿರನೇ, ಸಾತ್ವಿಕ, ರಾಜಸ, ತಾಮಸಗಳೆಂದು ಮೂರು ವಿಧವಾಗಿ ದಾನದ ಫಲವು ಇವೆ. ದಾನದ ಗತಿಯೂ ಮೂರು ಪ್ರಕಾರವಾಗಿದೆ. ಅದನ್ನು ಹೇಳುತ್ತೇನೆ, ಕೇಳು.

ದಾನಂ ದಾತವ್ಯಮಿತ್ಯೇವ ಮತಿಂ ಕೃತ್ವಾ ದ್ವಿಜಾಯ ವೈ ।
ಉಪಕಾರವಿಯುಕ್ತಾಯ ಯದ್ದತ್ತಂ ತದ್ಧಿ ಸಾತ್ವಿಕಮ್ ॥೫೩॥

ಯಾವ ವ್ಯಕ್ತಿಯು ದಾನ ಕೊಡುವುದು ನನ್ನ ಕರ್ತವ್ಯವಾಗಿದೆ ಎಂದು ಭಾವಿಸಿಕೊಂಡು ಯಾವ ಉಪಕಾರವನ್ನೂ ಮಾಡದಿರುವ ಬ್ರಾಹ್ಮಣನಿಗೆ ದಾನವನ್ನು ಮಾಡುತ್ತಾನೋ ಅದು ಸಾತ್ವಿಕ ಎನಿಸಿದೆ.

ಶ್ರೋತ್ರಿಯಾಯ ದರಿದ್ರಾಯ ಬಹುಪುತ್ರಾಯ ಪಾಂಡವ ।
ದೀಯತೇ ಯತ್ ಪ್ರಹೃಷ್ಟೇನ ತತ್ ಸಾತ್ವಿಕಮುದಾಹೃತಮ್ ॥೫೪॥

ಶ್ರೋತ್ರಿಯನಾದ, ದರಿದ್ರನಾದ, ಬಹುಕುಟುಂಬಿಯಾಗಿರುವ ಬ್ರಾಹ್ಮಣನಿಗೆ ಸಂತುಷ್ಟವಾದ ಮನಸ್ಸಿನಿಂದ ಕೊಡುವ ದಾನವು ಸಾತ್ವಿಕವಾದುದು.

ವೇದಾಕ್ಷರವಿಹೀನಾಯ ಯತ್ತು ಪೂರ್ವೋಪಕಾರಿಣೇ ।
ಸಮೃದ್ಧಾಯ ಚ ಯದ್ದತ್ತಂ ತದ್ದಾನಂ ರಾಜಸಂ ಸ್ಮೃತಮ್ ॥೫೫॥

ವೇದಾಕ್ಷರಗಳ ಗಂಧವೇ ಇಲ್ಲದ, ಹಿಂದೆ ಉಪಕರಿಸಿರುವ ಐಶ್ವರ್ಯವಂತನಾದ ವ್ಯಕ್ತಿಗೆ ಕೊಡುವ ದಾನವು ರಾಜಸವು.

ಸಂಬಂಧಿನೇ ಚ ಯದ್ದತ್ತಮ್ ಅವ್ರತಾಯ ಚ ಪಾಂಡವ ।
ಲೋಭಾದಿತರ(ಭಿರ)ಪಾತ್ರಾಯ ತದ್ದಾನಂ ರಾಜಸಂ ಸ್ಮೃತಮ್ ॥೫೬॥

ಸಂಬಂಧಿಗೆ, ಪ್ರಮತ್ತನಾದವನಿಗೆ, ಅಪಾತ್ರನಿಗೆ ಫಲದ ಅಭಿಲಾಷೆಯಿಂದ ನೀಡುವ ದಾನವು, ಅತಿಶಯವಾದ ಲೋಭವನ್ನು ಹೊಂದಿದ ವ್ಯಕ್ತಿಗೆ ನೀಡುವ ದಾನವು ರಾಜಸ ಎನಿಸಿದೆ.

ವೈಶ್ವದೇವವಿಹೀನಾಯ ದಾನಮಶ್ರೋತ್ರಿಯಾಯ ಯತ್ ।
ದೀಯತೇ ತಸ್ಕರಾಯಾಪಿ ತದ್ದಾನಂ ತಾಮಸಂ ಸ್ಮೃತಮ್ ॥೪೭॥

ಶ್ರೋತ್ರಿಯನೆನಿಸದ, ವೈಶ್ವದೇವವಿಹೀನನಾದ, ಕಳ್ಳನಂತಿರುವ ವ್ಯಕ್ತಿಗೆ ನೀಡುವ ದಾನವು ತಾಮಸ ಎನಿಸಿದೆ.

ಸರೋಷಮವಧೂತಂ ಚ ಕೋಪಯುಕ್ತಮವಜ್ಞಯಾ ।
ಸೇವಕಾಯ ಚ ಯದ್ದತ್ತಂ ತದ್ದಾನಂ ತಾಮಸಂ ಸ್ಮೃತಮ್ ॥೫೮॥

ಕೋಪದಿಂದ ಅವಹೇಳನಪೂರ್ವಕವಾಗಿ, ತಿರಸ್ಕಾರಪೂರ್ವಕವಾಗಿ ನೀಡುವ ದಾನವು, ಸೇವಕನಿಗೆ ಕೊಡುವ ದಾನವು ತಾಮಸ ಎನಿಸಿದೆ.

ದೇವಾಃ ಪಿತೃಗಣಾಶ್ಚೈವ ಪಿತರಶ್ಚಾಗ್ನಯಸ್ತಥಾ ।
ಸಾತ್ವಿಕಂ ದಾನಮಶ್ನಂತಿ ತುಷ್ಯಂತಿ ಚ ನರೇಶ್ವರ ॥೫೯॥

ದೇವತೆಗಳು, ಪಿತೃಗಳು, ಮುನಿಗಳು, ಅಗ್ನಿಗಳು ಸಾತ್ವಿಕವಾದ ದಾನಗಳನ್ನು ಸ್ವೀಕರಿಸಿ ನರೇಶ್ವರನೇ, ಅವರು ಸಂತುಷ್ಟರಾಗುತ್ತಾರೆ.

ದಾನವಾ ದೈತ್ಯಸಂಘಾಶ್ಚ ಗ್ರಹಾ ಯಕ್ಷಾಶ್ಚ ರಾಕ್ಷಸಾಃ ।
ರಾಜಸಂ ದಾನಮಶ್ನಂತಿ ವರ್ಜಿತಂ ಪಿತೃದೈವತೈಃ ॥೬೦॥

ದಾನವರು, ದೈತ್ಯರು, ಗ್ರಹಗಳು, ಯಕ್ಷರು, ರಾಕ್ಷಸರು ರಾಜಸ ದಾನವನ್ನು ಸ್ವೀಕರಿಸುತ್ತಾರೆ. ರಾಜಸ ದಾನವನ್ನು ದೇವ-ಪಿತೃಗಳು ಸ್ವೀಕರಿಸುವುದಿಲ್ಲ.

ಪಿಶಾಚಾಃ ಪ್ರೇತಸಂಘಾಶ್ಚ ಕಶ್ಮಲಾ ಯೇ ಮಲೀಮಸಾಃ ।
ತಾಮಸಂ ದಾನಮಶ್ನಂತಿ ಗತಿಂ ಚ ತ್ರಿವಿಧಾಂ ಶೃಣು ॥೬೧॥

ಪಿಶಾಚಗಳು, ಪ್ರೇತಗಳು, ಮಲಿನವಾದ ಕರ್ಮಗಳನ್ನು ಮಾಡುವ ವ್ಯಕ್ತಿಗಳು ತಾಮಸವಾದ ದಾನವನ್ನು ಸ್ವೀಕರಿಸುತ್ತಾರೆ. ಸಾತ್ವಿಕ-ರಾಜಸ-ತಾಮಸ ಎಂಬ ಮೂರು ವಿಧವಾದ ದಾನದ ಗತಿಗಳನ್ನು ತಿಳಿದುಕೊ.

ಸಾತ್ವಿಕಾನಾಂ ತು ದಾನಾನಾಮುತ್ತಮಂ ಫಲಮಿಷ್ಯತೇ ।
ಮಧ್ಯಮಂ ರಾಜಸಾನಾಂ ತು ತಾಮಸಾನಾಂ ತು ಪಶ್ಚಿಮಮ್ ॥೬೨॥

ಸಾತ್ವಿಕರಲ್ಲಿ ಮಾಡುವ ದಾನದಿಂದ ಉತ್ತಮವಾದ ಫಲವನ್ನು ಹೊಂದುತ್ತಾನೆ. ರಾಜಸ ರೀತಿಯಲ್ಲಿ ಮಾಡುವ ದಾನದಿಂದ ಮಧ್ಯಮ ಫಲವನ್ನೂ, ತಾಮಸ ರೀತಿಯಲ್ಲಿ ಮಾಡುವ ದಾನದಿಂದ ಅಧಮ ಫಲವನ್ನು ಹೊಂದುತ್ತಾನೆ.

ಅಭಿಗಮ್ಯೋಪನೀತಾನಾಂ ದಾನಾನಾಮುತ್ತಮಂ ಫಲಮ್ ।
ಮಧ್ಯಮಂ ತು ಸಮಾನೀಯ ಜಘನ್ಯಂ ಯಾಚತೇ ಫಲಮ್ ॥೬೩॥

ಸತ್ಪಾತ್ರರನ್ನು ಹುಡುಕಿಕೊಂಡು ಹೋಗಿ ದಾನವನ್ನು ಕೊಡುವುದು ಉತ್ತಮವಾದ ಫಲ ನೀಡುತ್ತದೆ. ಸತ್ಪಾತ್ರರಿಗೆ ಮನೆಗೆ ಕರೆಸಿಕೊಂಡು ಮಾಡುವ ದಾನವು ಮಧ್ಯಮ ಫಲವನ್ನು ನೀಡುತ್ತದೆ.

ಅಯಾಚಿತಪ್ರದಾತಾ ವೈ ಸ ಯಾತಿ ಗತಿಮುತ್ತಮಾಮ್ ।
ಸಮಾಹೂಯ ತು ವೈ ದದ್ಯಾನ್ಮಧ್ಯಮಾಂ ಸ ಗತಿಂ ವ್ರಜೇತ್ ॥೬೪॥

ಯಾಚನೆ ಮಾಡದೆ ಇರುವ ಕಷ್ಟದಲ್ಲಿರುವ ವ್ಯಕ್ತಿಗೆ ನೀಡುವ ದಾನವು ಉತ್ತಮವಾದ ಗತಿಗೆ ಹೇತುವಾಗುತ್ತದೆ. ಅದೇ ವ್ಯಕ್ತಿಯನ್ನು ಮನೆಗೆ ಕರೆಸಿ ದಾನ ಮಾಡಿದಾಗ ಮಧ್ಯಮ ಫಲವನ್ನೇ ನೀಡುತ್ತದೆ.

ಯಾಚಿತೋ ಯಸ್ತು ವೈ ದದ್ಯಾತ್ ಜಘನ್ಯಾಂ ಸ ಗತಿಂ ವ್ರಜೇತ್॥೬೫॥

ಉತ್ತಮವಾದ ವ್ಯಕ್ತಿಯು ಕೇಳುವಂತೆ ಮಾಡಿ ಅವನಿಗೆ ದಾನವನ್ನು ನೀಡಿದಾಗ ಅಧಮ ಫಲವನ್ನು ನೀಡುತ್ತದೆ.

ಉತ್ತಮಾ ದೈವಿಕೀ ಜ್ಞೇಯಾ ಮಧ್ಯಮಾ ಮಾನುಷೀ ಗತಿಃ ।
ಜಘನ್ಯಾ ಚೈವ ತಿರ್ಯಕ್ಷು ಗತಿರೇಷಾ ತ್ರಿಧಾ ಮತಾ ॥೬೬॥

ಇಲ್ಲಿ ಉತ್ತಮ ಫಲವೆಂದರೆ ದೈವೀಗತಿ ಎನಿಸಿದೆ. ಮಧ್ಯಮ ಫಲವು ಮಾನುಷೀ ಗತಿ ಎನಿಸಿದೆ. ಅಧಮ ಫಲವು ತಿರ್ಯಗ್‌ಜೀವಿಗಳಲ್ಲಿ ಜನಿಸುವುದು ಎನಿಸಿದೆ.

ಪಾತ್ರಭೂತೇಷು ವಿಪ್ರೇಷು ಸುಸ್ಥಿತೇಷ್ವಾಹಿತಾಗ್ನಿಷು ।
ಯತ್ತು ಪ್ರಕ್ಷಿಪ್ಯತೇ ದಾನಮಕ್ಷಯ್ಯಂ ತತ್ ಪ್ರಕೀರ್ತ್ಯತೇ ॥೬೭॥

ಸತ್ಪಾತ್ರರಾದ ಅಗ್ನಿಹೋತ್ರಗಳನ್ನು ಆಚರಿಸುವ ಆಹಿತಾಗ್ನಿಗಳು ದಾನಕ್ಕೆ ಯೋಗ್ಯ ಎನಿಸಿದ್ದಾರೆ. ಅಂತಹ ವಿಪ್ರರಿಗೆ ಕೊಡುವ ದಾನವು ಅಕ್ಷಯವಾದ ಫಲವನ್ನು ನೀಡುತ್ತದೆ ಎಂದು ಹೇಳಲ್ಪಟ್ಟಿದೆ.

ಶ್ರೋತ್ರಿಯಾಣಾಂ ದರಿದ್ರಾಣಾಂ ಭರಣಂ ಕುರು ಪಾಂಡವ ।
ಸಮೃದ್ಧಾನಾಂ ದ್ವಿಜಾತೀನಾಂ ಕಾರ್ಯಂ ತೇ ಪರಿರಕ್ಷಣಮ್ ॥೬೮॥

ಯುಧಿಷ್ಠಿರನೇ, ದರಿದ್ರರಾಗಿರುವ ಶ್ರೋತ್ರಿಯ ಬ್ರಾಹ್ಮಣರ ರಕ್ಷಣೆಯನ್ನು ಮಾಡು. ಐಶ್ವರ್ಯವಂತರಾದ ಬ್ರಾಹ್ಮಣರನ್ನೂ ರಕ್ಷಿಸು.

ದರಿದ್ರಾನ್ ವೃತ್ತಿಹೀನಾಂಶ್ಚ ಪ್ರದಾನೈಸ್ತು ಸುಪೂಜಯೇತ್ ।
ಆತುರಸ್ಯೌಷಧೈಃ ಕಾರ್ಯಂ ನೀರುಜಸ್ಯ ಕಿಮೌಷಧೈಃ ॥೬೯॥

ದರಿದ್ರರಾಗಿರುವ ವ್ಯಕ್ತಿಗಳನ್ನು, ನಿರುದ್ಯೋಗಿಗಳನ್ನು ದಾನಗಳ ಪ್ರದಾನದಿಂದ ಪೂಜಿಸು. ರೋಗಿಯಾದವನಿಗೆ ಔಷಧಿಗಳನ್ನು ಕೊಟ್ಟು ಉಪಚರಿಸಬೇಕು. ದೃಢಕಾಯನಿಗೆ ಔಷಧಿಯಿಂದ ಏನು ಪ್ರಯೋಜನ?

ಪಾಪಂ ಪ್ರತಿಗ್ರಹೀತಾರಂ ಪ್ರದಾತುರುಪಗಚ್ಛತಿ ।
ಪ್ರತಿಗ್ರಹೀತುರ್ಯತ್ ಪುಣ್ಯಂ ಪ್ರದಾತಾರಮುಪೈತಿ ತತ್ ॥೭೦॥

ತಸ್ಮಾದ್ ದಾನಂ ಸದಾ ಕಾರ್ಯಂ ಪರತ್ರ ಹಿತಮಿಚ್ಛತಾ ॥೭೧॥

ದಾನಿಯ ಪಾಪವು ದಾನದೊಡನೆ ದಾನವನ್ನು ತೆಗೆದುಕೊಳ್ಳುವ ವ್ಯಕ್ತಿಗೆ ಹೋಗಿ ಸೇರುತ್ತದೆ. ಇಷ್ಟು ಮಾತ್ರವಲ್ಲದೆ ದಾನ ತೆಗೆದುಕೊಳ್ಳುವವನಲ್ಲಿರುವ ಪುಣ್ಯವು ದಾನಿಗೆ ಸೇರುತ್ತದೆ. ಆದ್ದರಿಂದ ಪರಲೋಕದ ಹಿತವನ್ನು ಬಯಸುವ ವ್ಯಕ್ತಿಯು ಯಾವಾಗಲೂ ದಾನವನ್ನು ಮಾಡುತ್ತಲೇ ಇರಬೇಕು.

ವೇದವಿದ್ಯಾವದಾತೇಷು ಸದಾ ಶೂದ್ರಾನ್ನವರ್ಜಿಷು ।
ಪ್ರಯತ್ನೇನ ನಿಧಾತವ್ಯೋ ಮಹಾದಾನಮಯೋ ನಿಧಿಃ ॥೭೨॥

ವೇದಾಧ್ಯಯನ ಮಾಡಿರುವ, ಶುದ್ಧವಾದ ಆಚಾರ ಸಂಪನ್ನನಾದ, ಶೂದ್ರಾನ್ನ ವರ್ಜಿಸಿರುವ ವಿದ್ವಾಂಸರಿಗೆ ಮಹಾದಾನವನ್ನು ವಿಧಿಬದ್ಧವಾಗಿ ನೀಡಬೇಕು.

ಯೇಷಾಂ ದಾತಾ ಪ್ರತೀಕ್ಷೇತ ಸಹಸ್ರಸ್ಯೇವ ಲಂಭನಮ್ ।
ಭುಕ್ತಶೇಷಸ್ಯ ಭಕ್ತಸ್ಯ ತಾನ್ ನಿಮಂತ್ರಯ ಭಾರತ ॥೭೩॥

ಪ್ರಾಮಾಣಿಕವಾದ, ಶುದ್ಧ ಆಚಾರಸಂಪನ್ನನಾದ, ಯೋಗ್ಯನಾದ ಒಬ್ಬ ಬ್ರಾಹ್ಮಣನಿಗೆ ಯಾವ ವ್ಯಕ್ತಿಯು ದಾನ ಮಾಡುತ್ತಾನೋ ಆ ವ್ಯಕ್ತಿಯು ಸಾವಿರ ಬ್ರಾಹ್ಮಣರನ್ನು ಉದ್ದೇಶಿಸಿ ದಾನ ಮಾಡಿದ್ದೇನೆ ಎಂದು ತಿಳಿಯಬಹುದು. ಯೋಗ್ಯನಾದ ಒಬ್ಬ ಬ್ರಾಹ್ಮಣನು ಆಗಮಿಸಿದರೆ ಸಾವಿರ ಬ್ರಾಹ್ಮಣರು ಆಗಮಿಸಿದ್ದಾರೆಂದು

ಚಿಂತಿಸಬೇಕು ಎಂದು ಅಭಿಪ್ರಾಯ. ಬಡತನದಲ್ಲಿರುವ, ಸದಾಚಾರಸಂಪನ್ನರಾದ, ಜ್ಞಾನಿಗಳಾದ ಬ್ರಾಹ್ಮಣರನ್ನು ದಾನಸ್ವೀಕಾರಕ್ಕಾಗಿ ನಿಮಂತ್ರಿಸಬೇಕು.

ಆಮಂತ್ರ್ಯ ತು ನಿರಾಶಾನಿ ನ ಕರ್ತವ್ಯಾನಿ ಪಾಂಡವ ।
ಕುಲಾನಿ ಸುದರಿದ್ರಾಣಿ ತೇಷಾಮಾಶಾ ಹತಾ ಭವೇತ್ ॥೭೪॥

ದಾನಕ್ಕಾಗಿ ಆಮಂತ್ರಿಸಿದ ವ್ಯಕ್ತಿಯ ಆಸೆಯು ಸಂಪೂರ್ಣವಾಗಿ ಫಲ ಹೊಂದುವಂತೆ ಮತ್ತೆ ಅವನಿಗೆ ಆಸೆ ಹುಟ್ಟದಂತೆ ದಾನ ಮಾಡಬೇಕು. ಯೋಗ್ಯನಾದ ವ್ಯಕ್ತಿಯು ದಾನಕ್ಕಾಗಿ ಆಗಮಿಸಿ ಹತಾಶನಾದರೆ ಅವನ ಕುಲಕ್ಕೇ ದಾರಿದ್ರ್ಯವು ಉಂಟಾದೀತು.

ಮದ್ಭಕ್ತಾ ಯೇ ನರಶ್ರೇಷ್ಠ ಮದ್ಗತಾ ಮತ್ಪರಾಯಣಾಃ ।
ಮದ್ ಯಾಜಿನೋ ಮನ್ನಿಯಮಾಸ್ತಾನ್ ಪ್ರಯತ್ನೇನ ಪೂಜಯೇತ್ ॥

ಯಾರು ನನ್ನ ಭಕ್ತರೋ, ನನ್ನಲ್ಲೇ ಮನಸ್ಸುಳ್ಳವರೋ, ನನ್ನನ್ನೇ ಏಕಾಶ್ರಯನನ್ನಾಗಿ ಹೊಂದಿರುವರೋ, ನನ್ನನ್ನೇ ಪೂಜಿಸುವರೋ, ನನ್ನ ನಿಯಮ-ವ್ರತಾನುಷ್ಠಾನಗಳಲ್ಲೇ ನಿರತರಾಗಿರುವರೋ ಅಂತಹವರನ್ನು ಪ್ರಯತ್ನಪೂರ್ವಕವಾಗಿ ಸತ್ಕರಿಸಬೇಕು.

ತೇಷಾಂ ತು ಪಾವನಾಯಾಹಂ ನಿತ್ಯಮೇವ ಯುಧಿಷ್ಠಿರ ।
ಉಭೇ ಸಂಧ್ಯೇऽಪಿ ತಿಷ್ಠಾಮಿ ಹ್ಯಸ್ಖನ್ನಂ ತದ್ ವ್ರತಂ ಮಮ ॥೭೬॥

ಅಂತಹ ಬ್ರಾಹ್ಮಣರು ಪಾವಿತ್ರ್ಯ ಹೊಂದಲೆಂದೇ ನಾನು ಎರಡು ಸಂಧ್ಯೆಗಳನ್ನು ಅನುಸರಿಸಿಕೊಂಡಿದ್ದೇನೆ. ಎರಡು ಸಂಧ್ಯೆಗಳಲ್ಲಿಯೂ ಯೋಗದಿಂದ ಇದ್ದೇನೆ. ಬ್ರಾಹ್ಮಣನು ಅಂತಹ ಸಂಧ್ಯಾಕರ್ಮಗಳು ನಾಶವಾಗದಂತೆ ನಡೆಸಬೇಕು. ನಾನು ಆ ಸಂಧ್ಯೆಯಲ್ಲಿ ನಿರಂತರವೂ ಇರುತ್ತೇನೆ.

ತಸ್ಮಾದಷ್ಟಾಕ್ಷರಂ ಮಂತ್ರಂ ಮದ್ಭಕ್ತೈರ್ವಿತಕಲ್ಮಷೈಃ ।
ಸಂಧ್ಯಾಕಾಲೇಷು ಜಪ್ತವ್ಯಂ ಸತತಂ ಚಾತ್ಮಶುದ್ಧಯೇ ॥೭೭॥

ಆದ್ದರಿಂದ ಪಾಪರಹಿತರಾದ ಭಕ್ತರು ಆತ್ಮಶುದ್ಧಿಗಾಗಿ ಎರಡು ಸಂಧ್ಯೆಗಳಲ್ಲಿಯೂ ಕಶ್ಮಲಗಳನ್ನು ತೊರೆದು ಅಷ್ಟಾಕ್ಷರ ಮಂತ್ರಗಳನ್ನು ಪ್ರಣವ ಸಹಿತವಾಗಿ ಜಪಿಸಬೇಕು.

ಅನ್ಯೇಷಾಮಪಿ ವಿಪ್ರಾಣಾಂ ಕಿಲ್ಬಿಷಂ ಹಿ ಪ್ರಣಶ್ಯತಿ ।
ಉಭೇ ಸಂಧ್ಯೇऽಪ್ಯುಪಾಸೀತ ತಸ್ಮಾದ್ ವಿಪ್ರೋ ವಿಶುದ್ಧಯೇ ॥೭೮॥

ಆದ್ದರಿಂದ ಬೇರೆ ಬ್ರಾಹ್ಮಣರ ಸಂಧ್ಯಾವಂದನೆಯಿಂದ ಪಾಪಗಳೆಲ್ಲವೂ ತೊಳೆದು ಹೋಗುತ್ತವೆಯೋ ಅಂತಹ ಎರಡು ಸಂಧ್ಯೆಗಳನ್ನು ಆತ್ಮಶುದ್ಧಿಗಾಗಿ ಅನುಷ್ಠಾನ ಮಾಡಬೇಕು.

ದೈವೇ ಶ್ರಾದ್ಧೇ ಚ ವಿಪ್ರಃ ಸ ನಿಯೋಕ್ತವ್ಯೋ೭ಜುಗುಪ್ಸಿತಃ ।
ಜುಗುಪ್ಸಿತಸ್ತು ತಚ್ಛ್ರಾದ್ಧಂ ದಹತ್ಯಗ್ನಿರಿವೇಂಧನಮ್ ॥೭೯॥

ಅಷ್ಟಾಕ್ಷರ ಮಂತ್ರಗಳನ್ನು ಜಪಿಸುವ ವ್ಯಕ್ತಿಯನ್ನು ದೇವ-ಪಿತೃಕಾರ್ಯಗಳಿಗೆ ಜುಗುಪ್ಸೆಯಿಲ್ಲದೆ ಆಹ್ವಾನಿಸಬೇಕು. ಅಂತಹ ಬ್ರಾಹ್ಮಣನು ನಿಂದಿತನಾದರೆ ಅಗ್ನಿಯು ಕಟ್ಟಿಗೆಯನ್ನು ದಹಿಸುವಂತೆ ಅವನು ಮಾಡುವ ಶ್ರಾದ್ಧಕರ್ಮವನ್ನೇ ಧ್ವಂಸ ಮಾಡುತ್ತದೆ.

ಪುರಾಣಂ ಮಾನವೋ ಧರ್ಮೋ ವೇದಾಃ ಸಾಂಗಾಶ್ಚಿಕಿತ್ಸಿತಮ್ ।
ಆಜ್ಞಾಸಿದ್ಧಾನಿ ಚತ್ವಾರಿ ನ ಹಂತವ್ಯಾನಿ ಹೇತುಭಿಃ ॥೮೦॥

ಪುರಾಣ, ಮನುಸ್ಮೃತಿ, ನಾಲ್ಕು ವೇದಗಳು, ಷಡಂಗಗಳು- ಇವುಗಳೆಲ್ಲವೂ ಭಗವಂತನ ಆಜ್ಞೆಯಿಂದ ಸಿದ್ಧವಾದವುಗಳು. ಕುತರ್ಕಗಳಿಂದ ನಾಲ್ಕು ವೇದಗಳನ್ನು ನಿಂದಿಸಬಾರದು.

ನ ಬ್ರಾಹ್ಮಣಾನ್ ಪರೀಕ್ಷೇತ ದೈವೇ ಕರ್ಮಣಿ ಧರ್ಮವಿತ್ ।
ಮಹಾನ್ ಭವೇತ್ ಪರೀವಾದೋ ಬ್ರಾಹ್ಮಣಾನಾಂ ಪರೀಕ್ಷಣೇ ॥೮೧॥

ಧರ್ಮಜ್ಞನಾದ ವ್ಯಕ್ತಿಯು ಪೂಜಾದಿ ಕರ್ಮಗಳಲ್ಲಿ ಬ್ರಾಹ್ಮಣರನ್ನು ಪರೀಕ್ಷಿಸಬಾರದು. ಬ್ರಾಹ್ಮಣರನ್ನು ಅವಮಾನಿಸುವಂತೆ ಪರೀಕ್ಷಿಸಲು ಹೋದರೆ ಮಹಾಪಾಪಕ್ಕೆ ತುತ್ತಾಗಬೇಕಾಗುತ್ತದೆ. ಅಂತಹ ವ್ಯಕ್ತಿಯು ಬಹಳ ನಿಂದಿತನಾಗುತ್ತಾನೆ.

ಬ್ರಾಹ್ಮಣಾನಾಂ ಪರೀವಾದಂ ಯಃ ಕುರ್ಯಾತ್ ಸ ನರಾಧಮಃ ।
ಸಹಸೈವ ಶುನಾಂ ಯೋನಿಂ ಸ ಗಚ್ಛೇದ್ ಬ್ರಹ್ಮದೂಷಕಃ ॥೮೨॥

ಯಾವ ಅಧಮ ಮಾನವನು ಬ್ರಾಹ್ಮಣರ ಮೇಲೆ ದೋಷಾರೋಪವನ್ನು ಮಾಡಲು ಪ್ರಯತ್ನಿಸುತ್ತಾನೋ ಅವನು ಬ್ರಹ್ಮದ್ವೇಷಿ ಎನಿಸಿ ಕೂಡಲೇ ನಾಯಿಯಾಗಿ ಹುಟ್ಟುತ್ತಾನೆ.

ಶ್ವಭ್ರಂ ಪ್ರಾಪ್ನೋತಿ ನಿಂದಿತ್ವಾ ಪರೀವಾದಾತ್ ಖರೋ ಭವೇತ್ ।
ಪರಿಭೂಯ ಕೃಮಿರ್ಭವತಿ ಕೀಟೋ ಭವತಿ ಮತ್ಸರೀ ॥೮೩॥

ಬ್ರಾಹ್ಮಣರನ್ನು ವಿನಾ ಕಾರಣ ನಿಂದಿಸಿದ ವ್ಯಕ್ತಿಯು ನಾಯಿಯಾಗಿ ಹುಟ್ಟಿ ಅದೇ ಅಪವಾದದಿಂದಲೇ ಕತ್ತೆಯೂ ಆಗುತ್ತಾನೆ. ಅವಮಾನದಿಂದಾದ ಪರಿಣಾಮ ಕ್ರಿಮಿಯೂ ಆಗುತ್ತಾನೆ, ಕೀಟವೂ ಆಗುತ್ತಾನೆ, ಮತ್ಸರಿಯೂ ಆಗುತ್ತಾನೆ.

ದುರ್ವೃತ್ತಾ ವಾ ಸುವೃತ್ತಾ ವಾ ಪ್ರಾಕೃತಾ ವಾ ಸುಸಂಸ್ಕೃತಾಃ ।
ಬ್ರಾಹ್ಮಣಾ ನಾವಮಂತವ್ಯಾ ಭಸ್ಮಚ್ಛನ್ನಾ ಇವಾಗ್ನಯಃ ॥೮೪॥

ಬ್ರಾಹ್ಮಣರು ಒಳ್ಳೆಯ ನಡತೆಯವರೇ ಆಗಲಿ, ಕೆಟ್ಟ ನಡತೆಯವರೇ ಆಗಲಿ, ಪ್ರಾಕೃತವಾದ ಬುದ್ಧಿಯನ್ನು ಹೊಂದಿದವರೇ ಆಗಲಿ, ಸುಸಂಸ್ಕೃತರೇ ಆಗಿರಲಿ, ಅವರನ್ನು ಎಂದಿಗೂ ಅವಮಾನಿಸಬಾರದು. ಅವರು ಬೂದಿ ಮುಚ್ಚಿದ ಕೆಂಡದಂತೆ.

ಕ್ಷತ್ರಿಯಂ ಚೈವ ಸರ್ಪಂ ಚ ಬ್ರಾಹ್ಮಣಂ ಚ ಬಹುಶ್ರುತಮ್ ।
ನಾವಮನ್ಯೇತ ಮೇಧಾವೀ ಕೃಶಾನಪಿ ಕದಾಚನ ॥೮೫॥

ಕ್ಷತ್ರಿಯರನ್ನಾಗಲೀ, ಸರ್ಪಗಳನ್ನಾಗಲೀ, ಬಹುಶ್ರುತನಾದ ಬ್ರಾಹ್ಮಣನನ್ನಾಗಲೀ, ಕೃಶನನ್ನಾಗಲೀ ಮೇಧಾವಿಯಾದವನು ಎಂದೂ ಅವಮಾನಿಸಬಾರದು.

ಏತತ್ ತ್ರಯಂ ಹಿ ಪುರುಷಂ ನಿರ್ದಹೇದವಮಾನಿನಮ್ ।
ತಸ್ಮಾದೇತತ್ ಪ್ರಯತ್ನೇನ ನಾವಮನ್ಯೇತ ಬುದ್ಧಿಮಾನ್ ॥೮೬॥

ಈ ಮೂರು ವ್ಯಕ್ತಿಗಳ ಅವಮಾನಗಳು ಅವಮಾನ ಮಾಡಿದ ವ್ಯಕ್ತಿಯನ್ನು ಸುಟ್ಟು ಬಿಡುತ್ತವೆ. ಆದ್ದರಿಂದ ಪ್ರಯತ್ನಪೂರ್ವಕವಾಗಿ ಈ ಮೂವರನ್ನು ಅವಮಾನಿಸಬಾರದು.

ಯಥಾ ಸರ್ವಾಸ್ವವಸ್ಥಾಸು ಪಾವಕೋ ದೈವತಂ ಮಹತ್ ।
ತಥಾ ಸರ್ವಾಸ್ವವಸ್ಥಾಸು ಬ್ರಾಹ್ಮಣೋ ದೈವತಂ ಮಹತ್ ॥೮೭॥

ಹೇಗೆ ಯಾವುದೇ ಅವಸ್ಥೆಯಲ್ಲಿದ್ದರೂ ಅಗ್ನಿದೇವನು ಪೂಜ್ಯನೇ ಎಂದು ಕರೆಸಿಕೊಳ್ಳುತ್ತಾನೋ, ಅದೇ ರೀತಿಯಲ್ಲಿ ಯಾವುದೇ ಸ್ಥಿತಿಯಲ್ಲಿದ್ದರೂ ಬ್ರಾಹ್ಮಣನು ಪರಮದೇವತೆಯೇ ಎಂದು ಕರೆಸಿಕೊಳ್ಳುತ್ತಾನೆ.

ವ್ಯಂಗಾಃ ಕುಬ್ಜಾಶ್ಚ ಕಾಣಾಶ್ಚ ವಾಮನಾಂಗಾಸ್ತಥೈವ ಚ ।
ಸರ್ವೇ ದೈವೇ ನಿಯೋಕ್ತವ್ಯಾ ವ್ಯಾಮಿಶ್ರಾ ವೇದಪಾರಗೈಃ ॥೮೮॥

ಅಂಗಹೀನರು, ಕುರುಡರು, ಕುರೂಪಿಗಳು, ಕುಳ್ಳರೂ ಆಗಿರುವ ಬ್ರಾಹ್ಮಣರನ್ನು ವೇದಪಾರಂಗತರಾದ ವಿದ್ವಾಂಸರ ಜೊತೆಯಲ್ಲಿ ದೇವಕಾರ್ಯದಲ್ಲಿ ನಿಯೋಜಿಸಬೇಕು.

ಮನ್ಯುಂ ನೋತ್ಪಾದಯೇತ್ ತೇಷಾಂ ನ ಚಾನಿಷ್ಟಂ ಸಮಾಚರೇತ್ ।
ಮನ್ಯುಪ್ರಹರಣಾ ವಿಪ್ರಾ ನ ವಿಪ್ರಾಃ ಶಸ್ತ್ರಪಾಣಯಃ ॥೮೯॥

ಅವರಿಗೆ ಕೋಪವುಂಟಾಗುವಂತೆ ವರ್ತಿಸಬಾರದು. ಅವರಿಗೆ ಕೇಡನ್ನು ಮಾಡಬಾರದು. ಕೋಪವೆಂಬ ಆಯುಧದಿಂದ ಹೊಡೆಯುವ ಸಾಮರ್ಥ್ಯ ಬ್ರಾಹ್ಮಣರಿಗಿದೆ. ಅವರು ಶಸ್ತ್ರಪಾಣಿಗಳಾಗಿ ಪ್ರಹರಿಸಬೇಕಾಗಿಲ್ಲ.

ಮನ್ಯುನಾ ಘ್ನಂತಿ ತೇ ಶತ್ರೂನ್ ವಜ್ರೇಣೇಂದ್ರ ಇವಾಸುರಾನ್ ॥೯೦॥

ಬ್ರಾಹ್ಮಣರು ತಮ್ಮ ಕೋಪದಿಂದಲೇ ಇಂದ್ರನು ವಜ್ರಾಯುಧದಿಂದ ಅಸುರರನ್ನು ಬಡಿಯುವಂತೆ ಕೊಲ್ಲುತ್ತಾರೆ.

ಬ್ರಾಹ್ಮಣೋ ಹಿ ಮಹದ್ದೈವಂ ಜಾತಮಾತ್ರೇಣ ಜಾಯತೇ ।
ಈಶ್ವರಃ ಸರ್ವಭೂತಾನಾಂ ಧರ್ಮಕೋಶಸ್ಯ ಗುಪ್ತಯೇ ॥೯೧॥

ಬ್ರಾಹ್ಮಣರು ಜಾತಿಮಾತ್ರದಿಂದಲೇ ಮಹತ್ತಾದ ದೇವತಾ ಸನ್ನಿಧಾನವನ್ನು ಹೊಂದಿರುತ್ತಾರೆ. ಸಕಲ ಪ್ರಾಣಿಗಳ ಧರ್ಮಬಂಡಾರವನ್ನು ರಕ್ಷಿಸಲು ಬ್ರಾಹ್ಮಣರ ಸೃಷ್ಟಿಯಾಗಿರುತ್ತದೆ.

ಕಿಂ ಪುನರ್ಯೇ ಚ ಕೌಂತೇಯ ಸಂಧ್ಯೇ ನಿತ್ಯಮುಪಾಸತೇ ॥೯೨॥

ಹೀಗಿರಲು ಯುಧಿಷ್ಠಿರನೇ, ಯಾರು ನಿತ್ಯವೂ ಸಂಧ್ಯಾಕರ್ಮಗಳಲ್ಲಿ ನಿರತರಾಗಿರುತ್ತಾರೋ ಅವರನ್ನು ನಿಂದಿಸಬಾರದು.

ಯಸ್ಯಾಸ್ಯೇನ ಸಮಶ್ನಂತಿ ಹವ್ಯಾನಿ ತ್ರಿದಿವೌಕಸಃ ।
ಕವ್ಯಾನಿ ಚೈವ ಪಿತರಃ ಕಿಂ ಭೂತಮಧಿಕಂ ತತಃ ॥೯೩॥

ಶ್ರೇಷ್ಠರಾದ ಶ್ರೋತ್ರೀಯ ಬ್ರಾಹ್ಮಣರ ಮುಖದಿಂದಲೇ ದೇವತೆಗಳು ಹವಿಷ್ಯ ಪದಾರ್ಥಗಳನ್ನು ಸ್ವೀಕರಿಸುತ್ತಾರೆ. ಪಿತೃಗಳು ಕವ್ಯಪದಾರ್ಥಗಳನ್ನು ಸ್ವೀಕರಿಸುತ್ತಾರೆ. ಹೀಗಿರಲು ಬ್ರಾಹ್ಮಣರ ಮಹಿಮೆಯನ್ನು ಏನೆಂದು ಹೇಳಲಿ?

ಉತ್ಪತ್ತಿರೇವ ವಿಪ್ರಸ್ಯ ಮೂರ್ತಿರ್ಧರ್ಮಸ್ಯ ಶಾಶ್ವತೀ ।
ಸ ಹಿ ಧರ್ಮಾರ್ಥಮುತ್ಪನ್ನೋ ಬ್ರಹ್ಮಭೂಯಾಯ ಕಲ್ಪತೇ ॥೯೪॥

ಬ್ರಾಹ್ಮಣರ ಉತ್ಪತ್ತಿಯು ಧರ್ಮದ ಶಾಶ್ವತ ಉತ್ಪತ್ತಿ ಎನಿಸಿದೆ. ಧರ್ಮದ ರಕ್ಷಣೆಗೋಸ್ಕರವೇ ಉತ್ಪನ್ನನಾದವನು ಬ್ರಾಹ್ಮಣ. ಅವನು ಪರಬ್ರಹ್ಮನನ್ನು ಹೊಂದಲು ಅರ್ಹನಾಗಿರುತ್ತಾನೆ.

ಸ್ವಮೇವ ಬ್ರಾಹ್ಮಣೋ ಭುಂಕ್ತೇ ಸ್ವಂ ವಸ್ತೇ ಸ್ವಂ ದದಾತಿ ಚ ।
ಆನೃಶಂಸ್ಯಾದ್ ಬ್ರಾಹ್ಮಣಸ್ಯ ಭುಂಜತೇ ಹೀತರೇ ಜನಾಃ ॥೯೫॥

ಬ್ರಾಹ್ಮಣನು ತನ್ನದೇ ಆದ ಪದಾರ್ಥವನ್ನು ತಿನ್ನುತ್ತಾನೆ. ಬ್ರಾಹ್ಮಣನು ಬೇಡಿ ತಿನ್ನುವ ಅಗತ್ಯವಿಲ್ಲ ಎಂದು ಅಭಿಪ್ರಾಯ. ಬ್ರಾಹ್ಮಣನು ತನ್ನದೇ ಆದ ವಸ್ತುವನ್ನು ಕದಿಯುತ್ತಾನೆ. ತನ್ನದೇ ಆದ ವಸ್ತುಗಳನ್ನು ಇನ್ನೊಬ್ಬರಿಗೆ ನೀಡುತ್ತಾನೆ. ಬ್ರಾಹ್ಮಣನ ಸದ್ಗುಣದಿಂದಲೇ ಇತರ ಜನರು ಸುಖಗಳನ್ನು ಅನುಭವಿಸುತ್ತಿದ್ದಾರೆ. ದರ್ಪಶೀಲರಾದ ಜನರಿಗೆ ಕ್ಷೇಮವನ್ನು ಮಾಡುವ ಬ್ರಾಹ್ಮಣನಿಂದಲೇ ಜಗತ್ತಿನಲ್ಲಿ ಕ್ಷೇಮವುಂಟಾಗುತ್ತಿರುವುದರಿಂದ ಸಕಲ ಪದಾರ್ಥಗಳಿಗೂ ಬ್ರಾಹ್ಮಣನು ಸ್ವಾಮಿಯಾಗಿದ್ದಾನೆ. ಆದ್ದರಿಂದ ಅವನು ಎಂದೂ ಬೇಡುವ ವ್ಯಕ್ತಿಯಾಗಿರುವುದಿಲ್ಲ ಎಂದು ಅಭಿಪ್ರಾಯ.

ತಸ್ಮಾತ್ ತೇ ನಾವಮಂತವ್ಯಾ ಮದ್ಭಕ್ತಾ ಹಿ ದ್ವಿಜಾಃ ಸದಾ ॥೯೬॥

ಬ್ರಾಹ್ಮಣರು ಎಂದಿಗೂ ನನ್ನ ಭಕ್ತರಾಗಿರುವುದರಿಂದ ಅವರನ್ನು ಎಂದಿಗೂ ಅವಮಾನಿಸಬಾರದು.

ಆರಣ್ಯಕೋಪನಿಷದಿ ಯೇ ತು ಪಶ್ಯಂತಿ ಮಾಂ ದ್ವಿಜಾಃ ।
ನಿಗೂಢಂ ನಿಷ್ಕಲಾವಸ್ಥಂ ತಾನ್ ಪ್ರಯತ್ನೇನ ಪೂಜಯೇತ್ ॥೯೭॥

ಯಾವ ದ್ವಿಜಶ್ರೇಷ್ಠರು ಆರಣ್ಯಕಗಳಲ್ಲಿ, ಉಪನಿಷತ್ತುಗಳಲ್ಲಿ ನನ್ನನ್ನೇ ತಿಳಿಯುತ್ತಿರುತ್ತಾರೋ, ಅಂತಹ ನಿಗೂಢರಾದ, ಪ್ರಾಕೃತಗುಣರಹಿತರಾದ, ನನ್ನನ್ನು ನಿರಂತರ ಧ್ಯಾನ ಮಾಡುವ ಬ್ರಾಹ್ಮಣರನ್ನು ಪ್ರಯತ್ನಪೂರ್ವಕವಾಗಿ ಪೂಜಿಸಬೇಕು.

ಸ್ವಗೃಹೇ ವಾ ಪ್ರವಾಸೇ ವಾ ದಿವಾ ರಾತ್ರೌ ತಥೈವ ಚ ।
ಶ್ರದ್ಧಯಾ ಬ್ರಾಹ್ಮಣಾಃ ಪೂಜ್ಯಾ ಮದ್ಭಕ್ತಾ ಯೇ ಚ ಪಾಂಡವ ॥೯೮॥

ಯುಧಿಷ್ಠಿರನೇ, ಮನೆಯಲ್ಲಾಗಲಿ, ಪ್ರಯಾಣದ ಸಮಯದಲ್ಲಾಗಲಿ, ಹಗಲಿನಲ್ಲಾಗಲಿ, ರಾತ್ರಿಯಲ್ಲಾಗಲಿ ನನ್ನ ಭಕ್ತರಾದ ಬ್ರಾಹ್ಮಣರನ್ನು ಶ್ರದ್ಧೆಯಿಂದ ಆರಾಧಿಸಬೇಕು.

ನಾಸ್ತಿ ವಿಪ್ರಸಮಂ ದೈವಂ ನಾಸ್ತಿ ವಿಪ್ರಸಮೋ ಗುರುಃ ।
ನಾಸ್ತಿ ವಿಪ್ರಸಮೋ ಬಂಧುರ್ನಾಸ್ತಿ ವಿಪ್ರಸಮೋ ನಿಧಿಃ ॥೯೯॥

ವಿಪ್ರನಿಗೆ ಸಮಾನವಾದ ದೇವತೆಯಿಲ್ಲ. ವಿಪ್ರನಿಗೆ ಸಮಾನವಾದ ಗುರುವಿಲ್ಲ. ವಿಪ್ರನಿಗೆ ಸಮಾನವಾದ ಬಂಧುವಿಲ್ಲ. ವಿಪ್ರನಿಗೆ ಸಮಾನವಾದ ನಿಧಿಯೂ ಇಲ್ಲ.

ನಾಸ್ತಿ ವಿಪ್ರಸಮಂ ತೀರ್ಥಂ ನ ಪುಣ್ಯಂ ಬ್ರಾಹ್ಮಣಾತ್ ಪರಮ್ ।
ನ ಪವಿತ್ರಂ ಪರಂ ವಿಪ್ರಾನ್ನ ವಿಪ್ರಾತ್ ಪಾವನಂ ಪರಮ್ ॥೧೦೦॥

ನಾಸ್ತಿ ವಿಪ್ರಾತ್ ಪರೋ ಧರ್ಮೋ ನಾಸ್ತಿ ವಿಪ್ರಾತ್ ಪರಾ ಗತಿಃ ॥

ವಿಪ್ರನಿಗೆ ಸಮಾನವಾದ ತೀರ್ಥವಿಲ್ಲ. ಬ್ರಾಹ್ಮಣನಿಗಿಂತ ಶ್ರೇಷ್ಠವಾದ ಪುಣ್ಯವಿಲ್ಲ. ಬ್ರಾಹ್ಮಣನಿಗಿಂತ ಪವಿತ್ರವಾದ ವಸ್ತುವಿಲ್ಲ. ಬ್ರಾಹ್ಮಣನಂತೆ ಪವಿತ್ರ ಮಾಡುವ ಪದಾರ್ಥಗಳು ಯಾವುದೂ ಇಲ್ಲ. ಬ್ರಾಹ್ಮಣನಿಗಿಂತ ಶ್ರೇಷ್ಠವಾದ ಧರ್ಮವೂ ಇಲ್ಲ. ಬ್ರಾಹ್ಮಣನಿಗಿಂತ ಶ್ರೇಷ್ಠವಾದ ಗತಿಯೂ ಇಲ್ಲ.

ಪಾಪಕರ್ಮಸಮಾಕ್ಷಿಪ್ತಂ ಪತಂತಂ ನರಕೇ ನರಮ್ ।
ತ್ರಾಯತೇ ದಾನಮಪ್ಯೇಕಂ ಪಾತ್ರಭೂತೇ ದ್ವಿಜೇ ಕೃತಮ್ ॥೧೦೨॥

ಯೋಗ್ಯನಾದ ಒಬ್ಬ ವ್ಯಕ್ತಿಗೆ ಕೊಡಲ್ಪಟ್ಟ ದಾನವು ಪಾಪಕರ್ಮಗಳಿಂದ ದೂಷಿತನಾಗಿ ನರಕದಲ್ಲಿ ಬಿದ್ದಿರುವ ವ್ಯಕ್ತಿಯನ್ನು ಉದ್ಧರಿಸಲು ಸಮರ್ಥವಾಗುತ್ತದೆ.

ಬಾಲಾಹಿತಾಗ್ನಯೋ ಯೇ ಚ ಶಾಂತಾಃ ಶೂದ್ರಾನ್ನವರ್ಜಿತಾಃ ।
ಮಾಮರ್ಚಯಂತಿ ಮದ್ಭಕ್ತಾಸ್ತೇಭ್ಯೋ ದತ್ತಂ ತದಕ್ಷಯಮ್ ॥೧೦೩॥

ಬಾಲ್ಯದಿಂದಲೂ ಆಹಿತಾಗ್ನಿಗಳಾಗಿರುವ, ಶಾಂತರಾಗಿರುವ, ಶೂದ್ರಾನ್ನವನ್ನು ತಿನ್ನದಿರುವ, ನನ್ನ ಪೂಜೆಯಲ್ಲಿಯೇ ಆಸಕ್ತರಾಗಿರುವ ನನ್ನ ಭಕ್ತರಾದ ಬ್ರಾಹ್ಮಣರಿಗೆ ಕೊಡುವ ದಾನವು ಅಕ್ಷಯಫಲವನ್ನು ನೀಡುತ್ತದೆ.

ಪ್ರದಾನೈಃ ಪೂಜಿತೋ ವಿಪ್ರೋ ವಂದಿತೋ ವಾಪಿ ಕೃತ್ಸ್ನಶಃ ।
ಸಂಭಾವಿತೋ ವಾ ವಿಪ್ರೋ ವೈ ಮದ್ಭಕ್ತೋ ದಿವಮುನ್ನಯೇತ್ ॥೧೦೪॥

ನನ್ನ ಭಕ್ತನಾದ ಬ್ರಾಹ್ಮಣನಿಗೆ ದಾನವನ್ನು ಕೊಡುವುದರಿಂದ, ನಮಸ್ಕರಿಸುವುದರಿಂದ ಸತ್ಕಾರ ಮಾಡುವುದರಿಂದ, ಗೌರವಿಸುವುದರಿಂದ, ಅವನನ್ನು ಸಂದರ್ಶಿಸುವುದರಿಂದ ಮಾನವನು ಸ್ವರ್ಗವನ್ನು ಹೊಂದುತ್ತಾನೆ.

ಯೇ ಪಶ್ಯಂತಿ ನಮಸ್ಯಂತಿ ಧ್ಯಾಯಂತಿ ಪುರುಷಾಸ್ತು ಮಾಮ್ ।
ತಾಂಶ್ಚ ಸ್ಪೃಷ್ಟ್ವಾಽಥವಾ ದೃಷ್ಟ್ವಾ ನರಃ ಪಾಪೈಃ ಪ್ರಮುಚ್ಯತೇ ॥೧೦೫॥

ಯಾವನು ನನ್ನ ಭಕ್ತನಾದ ಬ್ರಾಹ್ಮಣನನ್ನು ನಮಸ್ಕರಿಸುತ್ತಾನೋ, ಧ್ಯಾನ ಮಾಡುತ್ತಾನೋ ಅಂತಹ ಪುರುಷನು ಅಂತಹ ಬ್ರಾಹ್ಮಣನನ್ನು ನೋಡಿದ ಅಥವಾ ಮುಟ್ಟಿದ ಪುಣ್ಯದಿಂದ ಸಮಸ್ತ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಮದ್ಭಕ್ತಾ ಮದ್ಗತಪ್ರಾಣಾ ಮದ್ಗತಾ ಮತ್ಪರಾಯಣಾಃ ।
ಬೀಜಯೋನಿವಿಶುದ್ಧಾ ಯೇ ಶ್ರೋತ್ರಿಯಾಃ ಸಂಯತೇಂದ್ರಿಯಾಃ ॥

ಶೂದ್ರಾನ್ನವಿರತಾ ನಿತ್ಯಂ ತೇ ಪುನಂತೀಹ ದರ್ಶನಾತ್ ॥೧೦೬॥

ನನ್ನ ಭಕ್ತರಾಗಿರುವ, ನನ್ನಲ್ಲೇ ಇಂದ್ರಿಯಗಳನ್ನು ಸಮರ್ಪಿಸುವ, ನನ್ನನ್ನೇ ಕೊಂಡಾಡುವ, ನನ್ನಲ್ಲೇ ಮನಸ್ಸನ್ನು ನೆಲೆಗೊಳಿಸುವ, ಯೋಗ್ಯರಾದ ತಂದೆ ತಾಯಿಗಳನ್ನು ಹೊಂದಿರುವ, ಜಿತೇಂದ್ರಿಯರಾಗಿರುವ, ಶೂದ್ರಾನ್ನವನ್ನು ಬಿಟ್ಟಿರುವ ಶ್ರೋತ್ರಿಯರು ದರ್ಶನ ಮಾತ್ರದಿಂದಲೇ ಜಗತ್ತನ್ನು ಪವಿತ್ರಗೊಳಿಸುತ್ತಾರೆ.

ಸ್ವಯಂ ನೀತ್ವಾ ವಿಶೇಷೇಣ ದಾನಂ ತೇಷಾಂ ಗೃಹೇಷ್ವಥ ।
ನಿಧಾಪಯೇತ್ತು ಯದ್ಭಕ್ತ್ಯಾ ತದ್ದಾನಂ ಕೋಟಿಸಮ್ಮಿತಮ್ ॥೧೦೮॥

ಇಂತಹ ಶ್ರೋತ್ರಿಯರ ಮನೆಗೆ ನೀನೇ ಹೋಗಿ ವಿಶೇಷವಾದ ಗೌರವದಿಂದ ಅವರಿಗೆ ದಾನವನ್ನು ಮಾಡು. ಹೀಗೆ ಭಕ್ತಿಪೂರ್ವಕವಾಗಿ ಕೊಡಲ್ಪಡುವ ದಾನವು ಇತರ ದಾನಗಳಿಗಿಂತ ಕೋಟಿಪಟ್ಟು ಅಧಿಕ ಫಲವನ್ನು ನೀಡುತ್ತದೆ.

ಜಾಗ್ರತಃ ಸ್ವಪತೋ ವಾಽಪಿ ಪ್ರವಾಸೇ ಸ್ವಗೃಹೇಽಥವಾ ।
ಹೃದಯೇ ನ ಪ್ರಣಶ್ಯಾಮಿ ಯಸ್ಯ ವಿಪ್ರಸ್ಯ ಭಾರತ ॥೧೦೯॥

ಬ್ರಾಹ್ಮಣನು ಎಚ್ಚರದಲ್ಲಿರಲಿ, ಮಲಗಿರಲಿ, ಪ್ರಯಾಣ ಮಾಡುತ್ತಿರಲಿ, ಮನೆಯಲ್ಲಿಯೇ ಇರಲಿ ಅವನು ನನಗೆ ಪರಮಭಕ್ತನಾದುದರಿಂದ ಅವನ ಹೃದಯ ಗುಹೆಯನ್ನು ಬಿಟ್ಟುನಾನು ಎಂದೂ ಕದಲುವುದಿಲ್ಲ.

ಸ ಪೂಜಿತೋ ವಾ ದೃಷ್ಟೋ ವಾ ಸ್ಪಷ್ಟೋ ವಾಽಪಿ ದ್ವಿಜೋತ್ತಮಃ ।
ಸಂಭಾಷಿತೋ ವಾ ರಾಜೇಂದ್ರ ಪುನಾತೀಹ ನರಂ ಸದಾ ॥೧೧೦॥

ರಾಜೇಂದ್ರನೇ, ಅಂತಹ ಬ್ರಾಹ್ಮಣರನ್ನು ಪೂಜಿಸಿದರೂ, ನೋಡಿದರೂ, ಸ್ಪರ್ಶಿಸಿದರೂ, ಮಾತನಾಡಿದರೂ ಮನುಷ್ಯನು ಪೂತನಾಗುತ್ತಾನೆ.

ಏವಂ ಸರ್ವಾಸ್ವವಸ್ಥಾಸು ಸರ್ವದಾನಾನಿ ಪಾಂಡವ ।
ಮದ್ಭಕ್ತೇಭ್ಯಃ ಪ್ರದತ್ತಾನಿ ಸ್ವರ್ಗಮಾರ್ಗಪ್ರದಾನಿ ವೈ ॥೧೧೧॥

ಯುಧಿಷ್ಠಿರನೇ, ಹೀಗೆ ಎಲ್ಲ ಅವಸ್ಥೆಗಳಲ್ಲಿ ಎಲ್ಲ ವಿಧವಾದ ದಾನಗಳನ್ನು ನನ್ನ ಭಕ್ತನಾದ ವ್ಯಕ್ತಿಗೆ ಕೊಟ್ಟಾಗ ಆ ದಾನಗಳು ಸ್ವರ್ಗಮಾರ್ಗವನ್ನೇ ತೋರಿಸುತ್ತವೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ವಿಪ್ರಮಾಹಾತ್ಮ್ಯಂ ನಾಮ
ಏಕೋನಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಬೀಜಯೋನಿಗಳ ಶುದ್ಧಿ-ಅಶುದ್ಧಿಯನ್ನು ನಿರೂಪಿಸಿದುದು. ಗಾಯತ್ರಿ ಮಹಿಮೆಯನ್ನು ವರ್ಣಿಸಿದುದು. ಬ್ರಾಹ್ಮಣನ ಮಹಿಮೆಯನ್ನು ಪ್ರಶಂಸಿದುದು. ಬ್ರಾಹ್ಮಣರನ್ನು ತಿರಸ್ಕರಿಸುವ ವ್ಯಕ್ತಿಗಳಿಗೆ ಉಂಟಾಗುವ ನರಕ ಯಾತನೆಗಳನ್ನು ವರ್ಣಿಸಿದುದು.

ವೈಶಂಪಾಯನಃ

ಶ್ರುತ್ವೈವಂ ಸಾತ್ವಿಕಂ ದಾನಂ ರಾಜಸಂ ತಾಮಸಂ ತಥಾ ।
ಪೃಥಕ್ ಪೃಥಕ್ ಫಲಂ ಚೈವ ಗತಿಂ ಚಾಪಿ ಪೃಥಕ್ ಪೃಥಕ್ ॥೧॥

ವೈಶಂಪಾಯನ– ಜನಮೇಜಯನೇ, ಯುಧಿಷ್ಠಿರನು ಕೃಷ್ಣನ ಮುಖದಿಂದ ಸಾತ್ತ್ವಿಕ, ರಾಜಸ, ತಾಮಸ ದಾನಗಳ ಸ್ವರೂಪಗಳನ್ನೂ, ಅವುಗಳಿಂದ ಆಗುವ ಭಿನ್ನ ಭಿನ್ನ ಗತಿಗಳನ್ನೂ, ಪ್ರತ್ಯೇಕ ಪ್ರತ್ಯೇಕ ಫಲಗಳನ್ನೂ ಕೇಳಿಸಿಕೊಂಡನು.

ಅವಿತೃಪ್ತಃ ಪ್ರಹೃಷ್ಟಾತ್ಮಾ ಪುಣ್ಯಂ ಧರ್ಮಾಮೃತಂ ಪುನಃ ।
ಯುಧಿಷ್ಠಿರೋ ಧರ್ಮನಿತ್ಯಃ ಕೇಶವಂ ಪುನರಬ್ರವೀತ್ ॥೨॥

ಭಗವಂತನ ಉಪದೇಶಗಳಿಂದ ಸಂತುಷ್ಟನಾದ ಧರ್ಮರಾಜನಿಗೆ ಆ ಧರ್ಮಾಮೃತದ ಪಾನದಿಂದ ಪೂರ್ಣತೃಪ್ತಿಯಾಗಲಿಲ್ಲ. ಮತ್ತೂ ಕೇಳಬೇಕೆನಿಸಿತು. ಆದ್ದರಿಂದ ಧರ್ಮಜನು ಕೇಶವನ ಬಳಿ ಹೀಗೆ ಹೇಳಿದನು.

ಯುಧಿಷ್ಠಿರಃ

ಬೀಜಯೋನಿವಿಶುದ್ಧಾನಾಂ ಲಕ್ಷಣಾನಿ ವದಸ್ವ ಮೇ ।
ಬೀಜದೋಷೇಣ ಲೋಕೇ ಚ ಜಾಯಂತೇ ಚ ಕಥಂ ನರಾಃ ॥೩॥

ಯುಧಿಷ್ಠಿರ– ಜಗದೊಡೆಯನೇ, ಬೀಜ ಮತ್ತು ಯೋನಿಗಳಿಂದ ಶುದ್ಧರಾಗಿರುವವರ ಲಕ್ಷಣಗಳನ್ನು ತಿಳಿಸು. ಬೀಜದೋಷಗಳಿಂದ ಹುಟ್ಟುವವರ ಲಕ್ಷಣಗಳನ್ನು ತಿಳಿಸು.

ಆಚಾರದೋಷಾನ್ ದೇವೇಶ ವಕ್ತುಮರ್ಹಸ್ಯಶೇಷತಃ ।
ಬ್ರಾಹ್ಮಣಾನಾಂ ವಿಶೇಷಂ ಚ ಗುಣದೋಷೌ ಚ ಕೇಶವ ॥೪॥

ಆಚಾರದೋಷಗಳನ್ನು, ಬ್ರಾಹ್ಮಣರ ಉತ್ತಮ-ಮಧ್ಯಮ ಭೇದಗಳನ್ನು, ಅವರಲ್ಲಿರುವ ಗುಣದೋಷಗಳನ್ನು ತಿಳಿಸು.

ಚಾತುರ್ವರ್ಣ್ಯಸ್ಯ ಕೃತ್ಸ್ನಸ್ಯ ವರ್ತಮಾನಾಃ ಪ್ರತಿಗ್ರಹೇ ।
ಕೇನ ವಿಪ್ರಾ ವಿಶೇಷೇಣ ತರಂತೇ ತಾರಯಂತಿ ಚ ॥೫॥

ಏತತ್ ಕಥಯ ದೇವೇಶ ತ್ವದ್ಭಕ್ತಸ್ಯ ನಮೋಽಸ್ತು ತೇ ॥೬॥

ನಾಲ್ಕು ಆಶ್ರಮಧರ್ಮಗಳನ್ನು ಸಮಗ್ರವಾಗಿ ಆಚರಿಸುವ ಬ್ರಾಹ್ಮಣರು ಯಾವ ಆಶ್ರಮಧರ್ಮದಿಂದ ಸಂಸಾರದ ಕಷ್ಟದಿಂದ ಬಿಡುಗಡೆ ಹೊಂದುತ್ತಾರೆ?

ಮತ್ತೊಬ್ಬರನ್ನೂ ಪಾರು ಮಾಡುತ್ತಾರೆ? ಇವೆಲ್ಲವನ್ನೂ ನಿನ್ನ ಭಕ್ತನಾದ ನನಗೆ ದೇವೇಶನೇ ತಿಳಿಸು. ನಿನಗೆ ನಮಸ್ಕಾರವು.

ಶ್ರೀಭಗವಾನ್

ಶೃಣು ರಾಜನ್ ಯಥಾತತ್ತ್ವಂ ಬೀಜಯೋನಿಶುಭಾಶುಭಮ್ ।
ಯೇನ ತಿಷ್ಠತಿ ಲೋಕೋಽಯಂ ವಿನಶ್ಯತಿ ಚ ಪಾಂಡವ ॥೭॥

ಶ್ರೀಭಗವಾನ್– ಯುಧಿಷ್ಠಿರನೇ, ಯಥಾವತ್ತಾದ ಬೀಜ-ಯೋನಿಗಳ ಶುಭಾಶುಭಗಳನ್ನು ನಿರೂಪಿಸುತ್ತೇನೆ, ಕೇಳು. ಬೀಜ-ಯೋನಿಗಳು ಶುದ್ಧವಾಗಿದ್ದರೆ ಅದರಿಂದ ಸತ್ಸಂತಾನವು ಬೆಳೆದು ಲೋಕವು ಕ್ಷೇಮವಾಗಿರುತ್ತದೆ. ಬೀಜ-ಯೋನಿಗಳೇ ಅಶುದ್ಧವಾಗಿದ್ದರೆ ಲೋಕವೇ ವಿನಾಶ ಹೊಂದುತ್ತದೆ.

ಅವಿಪ್ಲುತಬ್ರಹ್ಮಚರ್ಯೋ ಯಸ್ತು ವಿಪ್ರೋ ಯಥಾವಿಧಿ ।
ಸ ಬೀಜೇ ನಾಮ ವಿಜ್ಞೇಯಸ್ತಸ್ಯ ಬೀಜಂ ಶುಭಂ ಭವೇತ್ ॥೮॥

ಎಂದೂ ನಾಶಹೊಂದದ ಬ್ರಹ್ಮಚರ್ಯವನ್ನು ಯಾವ ಬ್ರಾಹ್ಮಣನು ವಿಧಿವತ್ತಾಗಿ ಪರಿಪಾಲಿಸುತ್ತಾನೋ ಅಂತಹ ವಿಪ್ರನನ್ನೇ ಉತ್ತಮ ಬೀಜವೆನ್ನುತ್ತಾರೆ. ಅವನ ವೀರ್ಯದಿಂದ ಉತ್ತಮ ಸಂತಾನವಾಗುತ್ತದೆ.

ಕನ್ಯಾ ಚಾಕ್ಷತಯೋನಿರ್ವಾ ಕುಲೀನಾ ಪಿತೃಮಾತೃತಃ ।
ಬ್ರಾಹ್ಮಾದಿಷು ವಿವಾಹೇಷು ಪರಿಣೀತಾ ಯಥಾವಿಧಿ ॥೯॥

ಇದರಂತೆ ಕನ್ಯೆಯು ಉತ್ತಮ ಕುಲದ ತಂದೆ-ತಾಯಿಗಳಿಂದ ಉತ್ಪನ್ನಳಾಗಿರಬೇಕು. ಬ್ರಾಹ್ಮಣವೇ ಮೊದಲಾದ ಉತ್ತಮ ರೀತಿಯ ಪದ್ಧತಿಯಂತೆ ವಿಧಿಬದ್ಧವಾಗಿ ವಿವಾಹಿತಳಾಗಿರಬೇಕು.

ಸಾ ಪ್ರಶಸ್ತಾ ವರಾರೋಹಾ ಶುದ್ಧಯೋನಿಃ ಪ್ರಶಸ್ಯತೇ ॥೧೦॥

ಅಂತಹ ಕನ್ಯೆಯು ಗರ್ಭಾಧಾರಕ್ಕೆ ಪ್ರಶಸ್ತಳಾದವಳೆಂದು ಕರೆಸಿಕೊಳ್ಳುತ್ತಾಳೆ.

ಮನಸಾ ಕರ್ಮಣಾ ವಾಚಾ ಯಾ ಗಚ್ಛೇತ್ ಪರಪೂರುಷಮ್ ।
ಯೋನಿಸ್ತಸ್ಯಾ ನರಶ್ರೇಷ್ಠ ಗರ್ಭಾಧಾನಂ ನ ಚಾರ್ಹತಿ ॥೧೧॥

ಮನಸ್ಸಿನಿಂದ, ಕರ್ಮದಿಂದ, ಮಾತಿನಿಂದ ಪರಪುರುಷನ ಸಮಾಗಮ ಮಾಡಿದ ಸ್ತ್ರೀಯು ಗರ್ಭಾಧಾರಕ್ಕೆ ಯೋಗ್ಯಳೆನಿಸುವುದಿಲ್ಲ.

ಸ್ವೈರಿಣ್ಯಾ ಯಸ್ತು ಪಾಪಾತ್ಮಾ ಸಂತಾನಾರ್ಥಮಿಹೇಚ್ಛತಿ ।
ಸ ಕುಲನ್ ಪಾತಯತ್ಯಾಶು ದಶ ಪೂರ್ವಾನ್ ದಶಾಪರಾನ್ ॥೧೨॥

ಸ್ವೈರಿಣಿ ಎನಿಸಿದ ಸ್ತ್ರೀಯಲ್ಲಿ ಹುಟ್ಟಿದ ಸಂತಾನವು ಅಯೋಗ್ಯವೆನಿಸಿಕೊಳ್ಳುವುದರಿಂದ ಸ್ವೈರಿಣಿಯಿಂದ ಸಂತಾನವನ್ನು ಬಯಸುವವನು ಪಾಪಾತ್ಮ ಎನಿಸುತ್ತಾನೆ. ಅವನು ಕುಲಗಳನ್ನು ನಾಶಗೈಯ್ಯುತ್ತಾನೆ. ಹಿಂದಿನ ಹತ್ತು ತಲೆಗಳು, ಮುಂದಿನ ಹತ್ತು ತಲೆಗಳು ಸ್ವೈರಿಣಿಯಿಂದ ಸಂತಾನ ಪಡೆದಲ್ಲಿ ನಾಶಹೊಂದುತ್ತವೆ.

ದುಷ್ಟಯೋನೌ ತು ಯೋ ಮೋಹಾದ್ ರೇತಃ ಸಿಂಚತಿ ಮೂಢಧೀಃ ।
ತದ್ ರೇತಸಾ ಸಮುತ್ಪನ್ನಃ ಷಡಂಗವಿದಪಿ ದ್ವಿಜಃ ॥೧೩॥

ಸಾಧುಭಿಃ ಸ ಬಹಿಷ್ಕಾರ್ಯಃ ಶ್ವಪಾಕ ಇವ ಪಾರ್ಥಿವ ॥೧೪॥

ಯಾವನು ಮೋಹದಿಂದ ಪ್ರಜ್ಞಾಹೀನನಾಗಿ ದುಷ್ಟಸ್ತ್ರೀಯಲ್ಲಿ ಗರ್ಭಾಧಾನವನ್ನು ಮಾಡುತ್ತಾನೋ ಅವನ ರೇತಸ್ಸಿನಿಂದ ಉತ್ಪನ್ನನಾದ ಬ್ರಾಹ್ಮಣನು ಆರು ವೇದಗಳನ್ನು ಅಧ್ಯಯನ ಮಾಡಿದರೂ ಸಜ್ಜನರಿಂದ ಶ್ವಪಾಕಿಯಂತೆ (ಚಾಂಡಾಲ) ಅವನು ಬಹಿಷ್ಕಾರಕ್ಕೆ ಅರ್ಹನಾಗಿದ್ದಾನೆ.

ಕರ್ಮಣಾ ಮನಸಾ ವಾಚಾ ಯಾ ಭವೇತ್ ಸ್ವೈರಚಾರಿಣೀ ।
ಸಾ ಕುಲಘ್ನೇತಿ ವಿಜ್ಞೇಯಾ ತಸ್ಯಾಂ ಜಾತಃ ಶ್ವಪಾಚಕಃ ॥೧೫॥

ಯಾವಳು ಕರ್ಮದಿಂದ, ಮನಸ್ಸಿನಿಂದ, ಮಾತಿನಿಂದ ಪರಪುರುಷನನ್ನು ಬಯಸಿರುತ್ತಾಳೋ ಅವಳು ಕುಲಕ್ಕೆ ಹಾನಿಯುಂಟು ಮಾಡುವವಳು ಎಂದು ತಿಳಿಯಬೇಕು. ಅವಳಿಂದ ಉತ್ಪನ್ನನಾದವನು ಶ್ವಪಾಚಕಿಯು ಎನಿಸುತ್ತಾನೆ.

ದೈವೇ ಪಿತ್ರ್ಯೇ ತಥಾ ದಾನೇ ಭೋಜನೇ ಸಹ ಭಾಷಣೇ ।
ಶಯನೇ ಸಹ ಸಂಬಂಧೇ ನ ಯೋಗ್ಯಾ ದುಷ್ಟಯೋನಿಜಾಃ ॥೧೬॥

ದುಷ್ಟಯೋನಿಯಲ್ಲಿ ಹುಟ್ಟಿದವರು ದೇವ-ಪಿತೃಕಾರ್ಯಗಳಲ್ಲಿ ಭಾಗವಹಿಸಲು,

ದಾನ ತೆಗೆದುಕೊಳ್ಳಲು, ಒಟ್ಟಿಗೆ ಕುಳಿತು ಊಟ ಮಾಡಲು, ಮಾತಾಡಲು, ಮಲಗಲು, ಸಂಬಂಧ ಮಾಡಲು ಯೋಗ್ಯರಾಗಿರುವುದಿಲ್ಲ.

ನ ತಸ್ಮಾದ್ ದುಷ್ಟಯೋನ್ಯಾಂ ತು ಗರ್ಭಮುತ್ಪಾದಯೇದ್ ಬುಧಃ ।
ಮೋಹೇನ ಕುರುತೇ ಯಸ್ತು ಕುಲಂ ಹಂತಿ ತ್ರಿಪೂರುಷಮ್ ॥೧೭॥

ಆದ್ದರಿಂದ ಜ್ಞಾನಿಯಾದವನು ದುಷ್ಟಯೋನಿಯಲ್ಲಿ ಗರ್ಭಾಧಾನವನ್ನು ಮಾಡಬಾರದು. ಮೋಹದಿಂದ ಮಾಡಿದರೆ ಅವನು ಮೂರು ತಲೆಯ ಕುಲದವರನ್ನು ನಾಶಪಡಿಸಿದ ಪಾಪಕ್ಕೆ ಭಾಗಿಯಾಗುತ್ತಾನೆ.

ಕಾನೀನಶ್ಚ ಸಹೋಢಶ್ಚ ತಥೋಭೌ ಕುಂಡಗೋಲಕೌ ।
ಆರೂಢಪತಿತಾಜ್ಜಾತಃ ಪತಿತಸ್ಯಾಪಿ ಯಃ ಸುತಃ ॥೧೮॥

ಷಡೇತೇ ವಿಪ್ರಚಂಡಾಲಾ ನಿಷಿದ್ಧಾಃ ಶ್ವಪಚಾದಪಿ ॥೧೯॥

ವಿವಾಹವಾಗದ ಕನ್ಯೆಯಲ್ಲಿ ಹುಟ್ಟಿದವನು, ಸಾಮೂಹಿಕ ವಿವಾಹದಲ್ಲಿ ಭಾಗವಹಿಸಿ ಅವಿವೇಕದಿಂದ ಹೆಂಡತಿಯು ವ್ಯತ್ಯಸ್ತಳಾದಾಗ ಹುಟ್ಟುವ ಮಗನು ಸಹೋಢ ಎನಿಸುತ್ತಾನೆ. ಪತಿಯು ಜೀವಿಸಿರುವಾಗಲೇ ಪತ್ನಿಯ ವ್ಯಭಿಚಾರದಿಂದ ಹುಟ್ಟಿದವನು, ಪತಿಯ ಮರಣಾನಂತರ ಅನ್ಯಪುರುಷರಿಂದ ಹುಟ್ಟಿದವನು, ಭ್ರಷ್ಟ ಸಂನ್ಯಾಸಿಯ ವೀರ್ಯದಿಂದ ಹುಟ್ಟಿದವನು, ಪತಿತನಾದ ಮನುಷ್ಯನಿಂದ ಹುಟ್ಟಿದವನು - ಈ ಆರು ಜನರು ವಿಪ್ರಚಂಡಾಲರು ಎಂದು ಕರೆಸಿಕೊಳ್ಳುತ್ತಾರೆ. ಇವರು ಚಂಡಾಲರಿಗಿಂತಲೂ ನಿಕೃಷ್ಟರಾದವರು.

ಯೋ ಯತ್ರ ತತ್ರ ವಾ ರೇತಃ ಸಿಕ್ತ್ವಾ ಶೂದ್ರಾಸು ವಾ ಚರೇತ್ ।
ಕಾಮಚಾರೀ ಸ ಪಾಪಾತ್ಮಾ ಬೀಜಂ ತಸ್ಯಾಶುಭಂ ಭವೇತ್ ॥೨೦॥

ಯಾವ ಬ್ರಾಹ್ಮಣನು ಕಂಡ ಕಂಡಲ್ಲಿ ಯಾವ ಜಾತಿಭೇದಗಳನ್ನೂ ಪರಿಗಣಿಸದೆ ಶೂದ್ರ ಸ್ತ್ರೀಯರಲ್ಲಿಯೂ ರೇತಸ್ಸಿಂಚನದಿಂದ ಕಾಮುಕತನದಿಂದ ಮಾಡುತ್ತಾನೋ ಅವನು ಪಾಪಾತ್ಮ ಎನಿಸುತ್ತಾನೆ. ಅಂತಹವನು ಬೀಜವು ಶುದ್ಧವಲ್ಲ.

ಅಶುಭಂ ತದ್ ಭವೇದ್ ಬೀಜಂ ಶುದ್ಧಾಂ ಯೋನಿಂ ಚ ನಾರ್ಹತಿ ।
ಶುದ್ಧಾಂ ಹವಿರ್ಭುಜೋ ಜ್ವಾಲಾಂ ಶುನಾ ಲೀಢಂ ಹವಿರ್ಯಥಾ ॥೨೧॥

ಸ್ತ್ರೀಯರು ಶುದ್ಧಳಾಗಿದ್ದರೂ ಅಯೋಗ್ಯ ಬ್ರಾಹ್ಮಣನ ರೇತಸ್ಸಿನ ಸಂಪರ್ಕದಿಂದ ನಾಯಿ ನೆಕ್ಕಿದ ಹವಿಸ್ಸಿನಂತೆ ಶುದ್ಧ ಯೋನಿಯೂ ಅಶುದ್ಧವಾಗುತ್ತದೆ.

ಶೂದ್ರಯೋನೌ ಪತೇದ್ ಬೀಜಂ ಹಾಹಾಶಬ್ದಂ ದ್ವಿಜನ್ಮನಃ ।
ಕುರ್ಯಾತ್ ಪುರೀಷಮಾರ್ಗೇಷು ಪತಿತೋಽಸ್ಮೀತಿ ದುಃಖಿತಃ ॥೨೨॥

ಶೂದ್ರಯೋನಿಯಲ್ಲಿ ಬ್ರಾಹ್ಮಣನು ರೇತಸ್ಸಿಂಚನವನ್ನು ಮಾಡಿದರೆ ಆ ವೀರ್ಯಾಭಿಮಾನಿ ದೇವತೆಯು ಹಾಹಾಶಬ್ದವನ್ನು ಮಾಡುತ್ತಾ, ಮಲದ ಮಾರ್ಗದಲ್ಲಿ ನಾನು ಬೀಳುತ್ತಿದ್ದೇನೆ ಎಂದು ದುಃಖವನ್ನು ಹೊಂದುತ್ತಾನೆ.

ಮಾಮಧಃ ಪಾತಯತ್ಯೇಷ ಪಾಪಾತ್ಮಾ ಕಾಮಮೋಹಿತಃ ।
ಅಧೋಗತಿಂ ವ್ರಜೇತ್ ಕ್ಷಿಪ್ರಮಿತಿ ಶಪ್ತ್ವಾ ಪತೇತ್ ತು ತತ್ ॥೨೩॥

ನನ್ನನ್ನು ಈ ಮೂರ್ಖನು, ಪಾಪಿಷ್ಠನು ಕಾಮಮೋಹಿತನಾಗಿ ಕೆಳಗೆ ಬೀಳಿಸುತ್ತಿದ್ದಾನೆ ಅಧೋಗತಿಗೆ ನನ್ನನ್ನು ಕೆಡವುತ್ತಿದ್ದಾನೆ. ಇದರಿಂದ ಅವನೂ ಅಧೋಗತಿಯನ್ನು ಹೊಂದಲಿ ಎಂದು ಆ ರೇತೋಭಿಮಾನಿಯು ಶಪಿಸುತ್ತದೆ.

ಆತ್ಮಾ ಹಿ ಶುಕ್ಲಮುದ್ದಿಷ್ಟಂ ದೈವತಂ ಪರಮಂ ಮಹತ್ ।
ತಸ್ಮಾತ್ ಸರ್ವಪ್ರಯತ್ನೇನ ನಿರುಂಧ್ಯಾಚ್ಛುಕ್ಲಮಾತ್ಮನಃ ॥೨೪॥

ವೀರ್ಯವನ್ನು ಆತ್ಮ ಎನ್ನುತ್ತಾರೆ. ಆದ್ದರಿಂದ ಅದು ಶ್ರೇಷ್ಠವಾದ ದೇವತೆಯೇ ಆಗಿದೆ. ಬ್ರಾಹ್ಮಣನು ಇದನ್ನು ಅರಿತು ಸರ್ವಪ್ರಯತ್ನದಿಂದಲೂ ತನ್ನ ವೀರ್ಯವನ್ನು ಸರಿಯಾಗಿ ರಕ್ಷಿಸಿಕೊಳ್ಳಬೇಕು.

ಆಯುಸ್ತೇಜೋ ಬಲಂ ವೀರ್ಯಂ ಪ್ರಜ್ಞಾ ಶ್ರೀಶ್ಚ ಮಹಾಯಶಃ ।
ಪುಣ್ಯಂ ಚ ಮತ್ಪ್ರಿಯತ್ವಂ ಚ ಲಭತೇ ಬ್ರಹ್ಮಚರ್ಯಯಾ ॥೨೫॥

ಯಾವ ಮನುಷ್ಯನು ಅಸ್ಖಲಿತವಾದ ಬ್ರಹ್ಮಚರ್ಯವ್ರತವನ್ನು ಪರಿಪಾಲನೆ ಮಾಡುತ್ತಾನೋ ಅವನ ಆಯುಸ್ಸು, ತೇಜಸ್ಸು, ಬಲ, ವೀರ್ಯ, ಬುದ್ಧಿ, ಸಂಪತ್ತು, ಯಶಸ್ಸು, ಪುಣ್ಯ, ನನ್ನ ಪ್ರೀತಿ ಎಲ್ಲವನ್ನೂ ಪಡೆದುಕೊಳ್ಳುತ್ತಾನೆ.

ಅವಿಪ್ಲುತಬ್ರಹ್ಮಚರ್ಯೈರ್ಗೃಹಸ್ಥಾಶ್ರಮಮಾಶ್ರಿತೈಃ ।
ಪಂಚಯಜ್ಞಪರೈರ್ಧರ್ಮಃ ಸ್ಥಾಪ್ಯತೇ ಪೃಥಿವೀತಳೇ ॥೨೬॥

ಗೃಹಸ್ಥಾಶ್ರಮದಲ್ಲಿ ಇದ್ದುಕೊಂಡು ನಾಶವಾಗದ ಬ್ರಹ್ಮಚರ್ಯವನ್ನು ಪರಿಪಾಲಿಸುತ್ತಾ ಪಂಚಯಜ್ಞಗಳ ಅನುಷ್ಠಾನದಲ್ಲಿ ನಿರತರಾದ ಬ್ರಾಹ್ಮಣರು ಭೂಮಿಯಲ್ಲಿ ಧರ್ಮವನ್ನು ಸ್ಥಾಪಿಸಲು ಅರ್ಹರಾಗಿರುತ್ತಾರೆ.

ಸಾಯಂ ಪ್ರಾತಸ್ತು ಯೇ ಸಂಧ್ಯಾಂ ಸಮ್ಯಗ್ ನಿತ್ಯಮುಪಾಸತೇ ।
ನಾವಂ ವೇದಮಯೀಂ ಕೃತ್ವಾ ತರಂತೇ ತಾರಯಂತಿ ಚ ॥೨೭॥

ಯಾವ ಬ್ರಾಹ್ಮಣರು ಪ್ರಾತಃಕಾಲ, ಸಾಯಂಕಾಲಗಳಲ್ಲಿ ವಿಧಿಬದ್ಧವಾಗಿ ಸಂಧ್ಯೋಪಾಸನೆಯನ್ನು ಮಾಡುತ್ತಾರೋ ಅಂತಹ ಬ್ರಾಹ್ಮಣರು ವೇದಮಯವಾದ ದೋಣಿಯ ಮೂಲಕ ಸಂಸಾರವನ್ನು ದಾಟುತ್ತಾರೆ, ದಾಟಿಸುತ್ತಾರೆ.

ಯೋ ಜಪೇತ್ ಪಾವನೀಂ ದೇವೀಂ ಗಾಯತ್ರೀಂ ವೇದಮಾತರಮ್ ।
ನ ಸೀದೇತ್ ಪ್ರತಿಗೃಹ್ಣನಃ ಪೃಥಿವೀಂ ಚ ಸಸಾಗರಾಮ್ ॥೨೮॥

ಯಾವ ಬ್ರಾಹ್ಮಣನು ಜಗತ್ತನ್ನೇ ಪಾವನಗೊಳಿಸುವ ವೇದಮಾತೆಯಾದ ಗಾಯತ್ರಿ ಮಂತ್ರವನ್ನು ಜಪಿಸುತ್ತಾನೋ ಅಂತಹವನು ಸಮುದ್ರಪರ್ಯಂತವಾದ ಅಖಂಡ ಭೂಮಂಡಲವನ್ನೇ ದಾನವನ್ನಾಗಿ ಸ್ವೀಕರಿಸಿದರೂ ಪ್ರತಿಗ್ರಹದೋಷದಿಂದ ಲಿಪ್ತನಾಗುವುದಿಲ್ಲ.

ಯೇ ಚ ಸ್ಯುರ್ದುಃಸ್ಥಿತಾಃ ಕೇಚಿದ್ ಗ್ರಹಾಃ ಸೂರ್ಯಾದಯೋ ದಿವಿ ।
ತೇ ಚಾಸ್ಯ ಸೌಮ್ಯಾ ಜಾಯಂತೇ ಶಿವಾಃ ಶುಭಕರಾಸ್ತಥಾ ॥೨೯॥

ನಿರಂತರ ಜಪಿಸುವ ವ್ಯಕ್ತಿಯ ಜಾತಕದಲ್ಲಿ ಯಾವ ಗ್ರಹಗಳು ಅಶುಭ ಸ್ಥಾನದಲ್ಲಿ ಇರುತ್ತವೆಯೋ ಅಂತಹ ಸೂರ್ಯಾದಿ ಗ್ರಹಗಳು ಗಾಯತ್ರಿ ಜಪದ ಪ್ರಭಾವದಿಂದಾಗಿ ಶುಭಫಲವನ್ನೇ ನೀಡುತ್ತವೆ.

ಯತ್ರ ತತ್ರ ಸ್ಥಿತಾಶ್ಚೈವ ದಾರುಣಾಃ ಪಿಶಿತಾಶನಾಃ ।
ಘೋರರೂಪಾ ಮಹಾಕಾಯಾ ಧರ್ಷಯಂತಿ ನ ತಂ ದ್ವಿಜಮ್ ॥೩೦॥

ಯಾವ ಯಾವ ಪ್ರದೇಶಗಳಲ್ಲಿ ಭಯಂಕರವಾದ ಮಾಂಸಾಹಾರಿಗಳಾದ, ಘೋರ ರೂಪವನ್ನು ಧರಿಸಿರುವ ಪಿಶಾಚಿಗಳು ಇದ್ದಾವೋ ಅವು ಗಾಯತ್ರಿಮಂತ್ರವನ್ನು ಸಂಧ್ಯಾಕಾಲದಲ್ಲಿ ಜಪಿಸುವ ಬ್ರಾಹ್ಮಣರನ್ನು ಭಯಪಡಿಸಲಾರವು.

ಪುನಂತೀಹ ಪೃಥಿವ್ಯಾಂ ಹಿ ಚೀರ್ಣವೇದವ್ರತಾ ನರಾಃ ॥೩೧॥

ವೇದಾಧ್ಯಯನವನ್ನು ಮಾಡಿ ವೇದವ್ರತಗಳನ್ನು ಅನುಷ್ಠಾನ ಮಾಡುವ ಬ್ರಾಹ್ಮಣರು ಭೂಮಂಡಲವನ್ನೇ ಪವಿತ್ರಗೊಳಿಸುತ್ತಾರೆ.

ಅಚೀರ್ಣವ್ರತವೇದಾ ಯೇ ವಿಕರ್ಮಪಥಮಾಶ್ರಿತಾಃ ।
ಬ್ರಾಹ್ಮಣಾ ನಾಮಮಾತ್ರೇಣ ತೇऽಪಿ ಪೂಜ್ಯಾ ನರಾಧಿಪ ॥೩೨॥

ಯುಧಿಷ್ಠಿರನೇ, ನಾಲ್ಕು ವೇದಗಳಲ್ಲಿ ಇರುವ ಮಂತ್ರಗಳಲ್ಲಿ ಗಾಯತ್ರಿಮಂತ್ರವು ಶ್ರೇಷ್ಠವಾದುದು. ಯಾರು ವೇದಗಳನ್ನು ಅಧ್ಯಯನ ಮಾಡದೆ, ವೇದವ್ರತಗಳನ್ನೂ ಅನುಷ್ಠಾನ ಮಾಡದೆ ದುಷ್ಕರ್ಮಿಗಳಾಗಿದ್ದರೂ ಹೆಸರಿಗೆ ಮಾತ್ರ ಬ್ರಾಹ್ಮಣರಾದ ವ್ಯಕ್ತಿಗಳು ಗಾಯತ್ರಿ ಮಂತ್ರವನ್ನು ಜಪಿಸುತ್ತಿದ್ದರೆ ಅವರು ಪೂಜ್ಯರೇ ಎನಿಸುತ್ತಾರೆ.

ಕಿಂ ಪುನರ್ಯಸ್ತು ಸಂಧ್ಯೇ ದ್ವೇ ನಿತ್ಯಮೇವೋಪತಿಷ್ಠತೇ ॥೩೩॥

ಹೀಗಿದ್ದಾಗ ಎರಡು ಸಂಧ್ಯಾಕಾಲಗಳನ್ನು ನಿಯಮಬದ್ಧರಾಗಿ ಅನುಷ್ಠಾನ ಮಾಡುತ್ತಾರೋ ಅವರ ವಿಷಯದಲ್ಲಿ ಹೇಳುವುದೇನಿದೆ?

ಶೀಲಮಧ್ಯಯನಂ ದಾನಂ ಶೌಚಂ ಮಾರ್ದವಮಾರ್ಜವಮ್ ।
ತಸ್ಮಾದ್ ವೇದಾದ್ ವಿಶಿಷ್ಟಾನ್ ವೈ ಮನುರಾಹ ಪ್ರಜಾಪತಿಃ ॥೩೪॥

ಶೀಲ, ಅಧ್ಯಯನ, ದಾನ, ಶೌಚ, ಮೃದುತ್ವ, ಋಜುತ್ವ - ಈ ಗುಣಗಳು ವೇದಕ್ಕಿಂತಲೂ ವಿಶಿಷ್ಟವಾದ ಗುಣಗಳೆಂದು ಮನುಪ್ರಜಾಪತಿಯು ಹೇಳಿರುತ್ತಾನೆ.

ಭೂರ್ಭುವಃಸ್ವರಿತಿ ಬ್ರಹ್ಮ ಯೋ ವೇದನಿರತೋ ದ್ವಿಜಃ ।
ಸ್ವದಾರನಿರತೋ ದಾಂತಃ ಸ ವಿದ್ವಾನ್ ಸ ಚ ಭೂಸುರಃ ॥೩೫॥

ಯಾವ ಬ್ರಾಹ್ಮಣನು 'ಭೂರ್ಭುವಸ್ಸ್ವಃ' ಎಂಬ ವ್ಯಾಹೃತಿಯ ಜೊತೆಗೆ ಗಾಯತ್ರಿ ಮಂತ್ರವನ್ನು ಜಪಿಸುತ್ತಾನೋ, ವೇದಗಳ ಅಧ್ಯಯನ, ಅಧ್ಯಾಪನಗಳಲ್ಲಿ ನಿರತನಾಗಿರುತ್ತಾನೋ, ತನ್ನ ಪತ್ನಿಯಲ್ಲಿ ಮಾತ್ರವೇ ಆಸಕ್ತನಾಗಿರುತ್ತಾನೋ ಅವನು ನಿಜವಾದ ವಿದ್ವಾಂಸನು. ಅವನೇ ನಿಜವಾದ ಬ್ರಾಹ್ಮಣನು.

ಸಂಧ್ಯಾಮುಪಾಸತೇ ವಿಪ್ರಾ ನಿಯಮೇನ ದ್ವಿಜೋತ್ತಮಾಃ ।
ತೇ ಯಾಂತಿ ನರಶಾರ್ದೂಲ ಬ್ರಹ್ಮಲೋಕಂ ನ ಸಂಶಯಃ ॥೩೬॥

ಯಾವ ಬ್ರಾಹ್ಮಣರು ನಿಯಮಬದ್ಧರಾಗಿ ಸಂಧ್ಯಾವಂದನೆಯನ್ನು ಮಾಡುತ್ತಾರೋ ಅವರು ನರಶಾರ್ದೂಲನೇ, ನಿಶ್ಚಿತವಾಗಿಯೂ ಬ್ರಹ್ಮಲೋಕಕ್ಕೆ ಹೋಗುತ್ತಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಸಾವಿತ್ರೀಮಾತ್ರಸಾರೋಽಪಿ ವರೋ ವಿಪ್ರಃ ಸುಯಂತ್ರಿತಃ ।
ನಾಯಂತ್ರಿತಶ್ಚತುರ್ವೇದೀ ಸರ್ವಾಶೀ ಸರ್ವವಿಕ್ರಯೀ ॥೩೭॥

ಅಧ್ಯಯನವಿಲ್ಲದಿದ್ದರೂ ವೇದಮಾತೆಯಾದ ಗಾಯತ್ರಿಮಂತ್ರವನ್ನು ನಿಯಮ ಬದ್ಧವಾಗಿ ಯಾವನು ಜಪಿಸುತ್ತಾನೋ, ನಾಲ್ಕು ವೇದಗಳನ್ನು ಓದದೆ, ನಿಯಮಾನುಷ್ಠಾನ- ವಿಲ್ಲದೆ ಕಂಡಲ್ಲಿ ತಿನ್ನುವ, ಸಮಸ್ತ ಪದಾರ್ಥಗಳನ್ನು ಮಾರಾಟ ಮಾಡುವ ವ್ಯಕ್ತಿಯು ಉತ್ತಮ ಬ್ರಾಹ್ಮಣ ಎನಿಸುವುದಿಲ್ಲ.

ಸಾವಿತ್ರೀಂ ಚೈವ ವೇದಾಂಶ್ಚ ತುಲಯಾಽತುಲಯನ್ ಪುರಾ ।
ದೇವಾ ಋಷಿಗಣಾಶ್ಚೈವ ಸರ್ವೇ ಬ್ರಹ್ಮಪುರಃಸರಾಃ ॥೩೮॥

ಹಿಂದೊಮ್ಮೆ ದೇವತೆಗಳು ಬ್ರಹ್ಮನನ್ನು ಮುಂದಿಟ್ಟುಕೊಂಡು, ಋಷಿಗಳನ್ನೂ ಮುಂದಿಟ್ಟುಕೊಂಡು ತಕ್ಕಡಿಯಲ್ಲಿ ಒಂದು ಭಾಗದಲ್ಲಿ ವೇದಗಳನ್ನು, ಮತ್ತೊಂದು ಭಾಗದಲ್ಲಿ ಗಾಯತ್ರಿಯನ್ನು ಇಟ್ಟು ತೂಗಿದರು.

ಚತುರ್ಣಾಮಪಿ ವೇದಾನಾಂ ಸಾ ಹಿ ರಾಜನ್ ಗರೀಯಸೀ ॥೩೯॥

ಆಗ ನಾಲ್ಕು ವೇದಗಳಿಗಿಂತಲೂ ಗಾಯತ್ರಿಯೇ ಭಾರವಾಗಿದ್ದುದನ್ನು ಕಂಡು ಆಶ್ಚರ್ಯಪಟ್ಟರು.

ಯಥಾ ವಿಕಸಿತೇ ಪುಷ್ಪೇ ಮಧು ಗೃಹ್ಣಂತಿ ಷಟ್‌ಪದಾಃ ।
ಸಮುತ್ಸೃಜ್ಯ ರಸಂ ಸರ್ವಂ ನಿರರ್ಥಕಮಸಾರವತ್ ॥೪೦॥

ಹೇಗೆ ದುಂಬಿಗಳು ಅರಳಿದ ಹೂವುಗಳಲ್ಲಿ ತುಂಬಿದ ಮಕರಂದವನ್ನು ಸ್ವೀಕರಿಸುತ್ತವೆಯೋ ಅದರಂತೆ ವೇದಗಳೆಂಬ ಪುಷ್ಪಗಳಿಂದ ಸಂಗ್ರಹಿಸಿದ ಸಾರವೇ ಗಾಯತ್ರಿ ಎನಿಸಿದೆ.

ಏವಂ ಗೃಹೀತಾ ಸಾವಿತ್ರೀ ಸರ್ವವೇದೇ ಚ ಪಾಂಡವ ॥೪೧॥

ಈ ರೀತಿಯಾಗಿ ಸಮಸ್ತ ವೇದಗಳಿಂದ ಸ್ವೀಕರಿಸಿದ ಸಾರ ಗಾಯತ್ರಿ ಎಂದು ತಿಳಿದುಕೊ.

ಏವಂ ಹಿ ಸರ್ವವೇದಾನಾಂ ಸಾವಿತ್ರೀ ಪ್ರಾಣ ಉಚ್ಯತೇ ।
ನಿರ್ಜೀವಾ ಹೀತರೇ ವೇದಾ ಏನಾ ಸಾವಿತ್ರಿಯಾ ನೃಪ ॥೪೨॥

ಸಮಸ್ತ ವೇದಗಳಿಗೂ ಈ ಕಾರಣದಿಂದಲೇ ಗಾಯತ್ರಿಯು ಪ್ರಾಣ ಎಂದು ಕರೆಸಿಕೊಳ್ಳುತ್ತದೆ. ಗಾಯತ್ರಿ ಇಲ್ಲದಿರುವ ವೇದಗಳು ಮಕರಂದವಿಲ್ಲದ ಪುಷ್ಪಗಳಂತೆ ನಿರ್ಜೀವವೆನಿಸಿದೆ.

ಏವಂ ಹಿ ಯಶ್ಚತುರ್ವೇದೀ ಶೀಲಭ್ರಷ್ಟಃ ಸ ಕುತ್ಸಿತಃ ।
ಶೀಲವೃತ್ತಸಮಾಯುಕ್ತಃ ಸಾವಿತ್ರೀಪಾಠಕೋ ವರಃ ॥೪೩॥

ಆದ್ದರಿಂದ ನೀತಿ-ನಿಯಮಗಳಿಂದಲೂ, ಸದಾಚಾರಗಳಿಂದಲೂ ಭ್ರಷ್ಟನಾಗಿರುವ ಬ್ರಾಹ್ಮಣನು ಚತುರ್ವೇದಿಯಾಗಿದ್ದರೂ ನಿಂದ್ಯನಾಗಿದ್ದಾನೆ. ಶೀಲಸದಾಚಾರ ಸಂಪನ್ನನಾದ ಬ್ರಾಹ್ಮಣನು ಗಾಯತ್ರಿ ಮಾತ್ರ ಜಪಿಸುತ್ತಿದ್ದರೂ ಚತುರ್ವೇದಿಯಾದ ಬ್ರಾಹ್ಮಣನಿಗಿಂತಲೂ ಶ್ರೇಷ್ಠನಾಗಿದ್ದಾನೆ.

ಸಹಸ್ರಪರಮಾಂ ದೇವೀಂ ಶತಮಧ್ಯಾಂ ದಶಾವರಾಮ್ ।
ಸಾವಿತ್ರೀಂ ಜಪ ಕೌಂತೇಯ ಸರ್ವಪಾಪಪ್ರಣಾಶಿನೀಮ್ ॥೪೪॥

ಪ್ರತಿದಿನವೂ ಒಂದುಸಾವಿರ ಗಾಯತ್ರಿಯನ್ನು ಜಪಿಸುವುದು ಉತ್ತಮ. ನೂರು ಬಾರಿ ಜಪಿಸುವುದು ಮಧ್ಯಮ. ಹತ್ತು ಬಾರಿ ಜಪಿಸುವುದು ಅಧಮ ಎಂದು ಹೇಳುತ್ತಾರೆ. ಯುಧಿಷ್ಠಿರನೇ, ಆದ್ದರಿಂದ ಸಮಸ್ತ ಪಾಪಗಳನ್ನು ಜಪಿಸುವ ಗಾಯತ್ರಿ ಮಂತ್ರವನ್ನು ನೀನು ಜಪಿಸು.

ಯುಧಿಷ್ಠಿರಃ

ತ್ರೈಲೋಕ್ಯನಾಥ ಭೋ ಕೃಷ್ಣ ಸರ್ವಭೂತಾತ್ಮಕೋ ಹ್ಯಸಿ ।
ನಾನಾಯೋಗಧರ ಶ್ರೇಷ್ಠ ತುಷ್ಯಸೇ ಕೇನ ಕರ್ಮಣಾ ॥೪೫॥

ಯುಧಿಷ್ಠಿರ– ತ್ರೈಲೋಕ್ಯನಾಥನೇ, ಕೃಷ್ಣನೇ, ಸಮಸ್ತ ಪ್ರಾಣಿಗಳಿಗೂ ನೀನು ಆತ್ಮಸ್ವರೂಪನಾಗಿರುವೆ. ನಾನಾವಿಧವಾದ ಯೋಗಗಳನ್ನು ಧರಿಸಿರುವೆ. ಅಂತಹ ನೀನು ಜೀವರು ಮಾಡುವ ಯಾವ ಕರ್ಮದಿಂದ ಸಂತುಷ್ಟನಾಗುತ್ತಿ ? ತಿಳಿಸು.

ಶ್ರೀಭಗವಾನ್

ಯದಿ ಭಾರಸಹಸ್ರಂ ತು ಗುಗುಲ್ವಾದಿ ಪ್ರಧೂಪಯೇತ್ ।
ಕರೋತಿ ಚೇನ್ನಮಸ್ಕಾರಮುಪಹಾರಂ ಚ ಕಾರಯೇತ್ ॥೪೬॥

ಪೂಜಯೇತ್ ಸ್ತುತಿಭಿರ್ಮಾಂ ಚ ಋಗ್ಯಜುಃಸಾಮಭಿಃ ಸದಾ ।
ನ ತೋಷಯತಿ ಚೇದ್ ವಿಪ್ರಾನ್ ನಾಹಂ ತುಷ್ಯಾಮಿ ಭಾರತ ॥೪೭॥

ಶ್ರೀಭಗವಾನ್– ಯುಧಿಷ್ಠಿರನೇ, ಒಂದು ಸಾವಿರ ಭಾರದಷ್ಟು ಗುಗ್ಗುಲವೇ ಮೊದಲಾದ ಸುಗಂಧದ್ರವ್ಯಗಳನ್ನು ನನ್ನ ಮುಂದೆ ಹಚ್ಚಿಟ್ಟು, ನಮಸ್ಕಾರ ಮಾಡುತ್ತಾ, ಭಕ್ಷ್ಯಭೋಜ್ಯಗಳನ್ನು ಸಮರ್ಪಿಸಿದರೂ, ಋಗ್ವೇದ, ಯಜುರ್ವೇದ, ಸಾಮವೇದಗಳ ಮೂಲಕವಾಗಿ ನನ್ನನ್ನು ಸ್ತೋತ್ರ ಮಾಡುತ್ತಿದ್ದರೂ, ಬ್ರಾಹ್ಮಣರನ್ನು ಸಂತೋಷಗೊಳಿಸದಿದ್ದರೆ ನಾನು ಅವರ ವಿಷಯದಲ್ಲಿ ಸಂತುಷ್ಟನಾಗುವುದಿಲ್ಲ.

ಬ್ರಾಹ್ಮಣೇ ಪೂಜಿತೇ ನಿತ್ಯಂ ಪೂಜಿತೋಽಸ್ಮಿ ನ ಸಂಶಯಃ ।
ಆಕ್ರುಷ್ಟೇ ಚಾಹಮಾಕ್ರುಷ್ಟೋ ಭವಾಮಿ ಭರತರ್ಷಭ ॥೪೮॥

ಭರತಶ್ರೇಷ್ಠನೇ, ಬ್ರಾಹ್ಮಣನು ಪೂಜಿತನಾದರೆ ನಾನೇ ಪೂಜಿತನಾದಂತೆ. ಇದರಲ್ಲಿ ಸಂಶಯವಿಲ್ಲ. ಬ್ರಾಹ್ಮಣನನ್ನು ದೂಷಿಸಿದರೆ ನನ್ನನ್ನೇ ದೂಷಿಸಿದಂತೆ.

ಪರಾ ಮಯಿ ಗತಿಸ್ತೇಷಾಂ ಪೂಜಯಂತೀಹ ಮಾಂ ಹಿ ತೇ ।
ಯದಹಂ ದ್ವಿಜರೂಪೇಣ ವಸಾಮಿ ವಸುಧಾತಲೇ ॥೪೯॥

ಯಾವ ವ್ಯಕ್ತಿಗಳು ಬ್ರಾಹ್ಮಣರನ್ನು ಚೆನ್ನಾಗಿ ಪೂಜಿಸುತ್ತಾರೋ ಅವರಿಗೆ ಶ್ರೇಷ್ಠವಾದ ಗತಿಯು ದೊರೆಯುತ್ತದೆ. ಕಾರಣ ನಾನೇ ಬ್ರಾಹ್ಮಣರೂಪದಿಂದ ಭೂಮಂಡಲದಲ್ಲಿ ಸಂಚರಿಸುತ್ತೇನೆ.

ಯಸ್ತಾನ್ ಪೂಜಯತಿ ಪ್ರಾಜ್ಞೋ ಮದ್ಗತೇನಾಂತರಾತ್ಮನಾ ।
ತಮಹಂ ಸ್ವೇನ ರೂಪೇಣ ಪಶ್ಯಾಮಿ ನರಪುಂಗವ ॥೫೦॥

ಯಾವ ಪ್ರಾಜ್ಞನು ನನ್ನಲ್ಲಿಯೇ ಮನಸ್ಸು ಇರಿಸಿ ಬ್ರಾಹ್ಮಣನನ್ನು ಸತ್ಕರಿಸುತ್ತಾನೋ ಅವನನ್ನು ನಾನು ನನ್ನ ಸನ್ನಿಧಾನದಿಂದಲೇ ಕಾಣುತ್ತೇನೆ.

ಕಾಣಾಃ ಕುಬ್ಜಾ ವಾಮನಾಶ್ಚ ದರಿದ್ರಾ ವ್ಯಾಧಿತಾಸ್ತಥಾ ।
ನಾವಮಾನ್ಯಾಃ ದ್ವಿಜಾಃ ಪ್ರಾಜ್ಞೈರ್ಮಮ ರೂಪಾ ಹಿ ತೇ ದ್ವಿಜಾಃ ॥೫೧॥

ಬ್ರಾಹ್ಮಣರಾದವರು ಕುರೂಪಿಗಳೇ ಆಗಿರಲಿ, ಕುರುಡರು, ಕುಳ್ಳರು, ದರಿದ್ರರೇ ಆಗಿರಲಿ, ರೋಗಿಗಳೇ ಆಗಿರಲಿ ಅವರನ್ನು ತಿಳಿದವರು ತಿರಸ್ಕರಿಸಬಾರದು. ಏಕೆಂದರೆ ಬ್ರಾಹ್ಮಣರೇ ನನ್ನ ರೂಪರಾಗಿದ್ದಾರೆ.

ಯೇ ಕೇಚಿತ್ ಸಾಗರಾಂತಾಯಾಂ ಪೃಥಿವ್ಯಾಂ ದ್ವಿಜಸತ್ತಮಾಃ ।
ಮಮ ರೂಪೇಷು ತೇಷ್ವೇವಮರ್ಚಿತೇಷ್ವರ್ಚಿತೋಽಸ್ಮ್ಯಹಮ್ ॥೫೨॥

ಯಾವ ಬ್ರಾಹ್ಮಣರು ಸಮುದ್ರಪರ್ಯಂತವಾದ ಭೂಮಂಡಲದಲ್ಲಿ ಇರುವರೋ ಅವರೆಲ್ಲರಲ್ಲಿಯೂ ನಾನೇ ಅಂತರ್ಯಾಮಿಯಾಗಿ ಇರುತ್ತೇನೆ. ಆದ್ದರಿಂದ ಅವರು ಪೂಜಿತರಾದರೆ ನಾನೇ ಪೂಜಿತನಾದಂತೆ.

ಬಹವಸ್ತು ನ ಜಾನಂತಿ ನರಾ ಜ್ಞಾನಬಹಿಷ್ಕೃತಾಃ ।
ಯಥಾ ಹಿ ದ್ವಿಜರೂಪೇಣ ವಸಾಮಿ ವಸುಧಾತಳೇ ॥೫೩॥

ಅಜ್ಞಾನಿಗಳಾದ ಅನೇಕ ಜನರು ನಾನು ಬ್ರಾಹ್ಮಣರೂಪದಿಂದ ಭೂಮಂಡಲದಲ್ಲಿ ಇದ್ದೇನೆ ಎಂಬುದನ್ನು ತಿಳಿದಿರುವುದಿಲ್ಲ.

ಅವಮನ್ಯಂತಿ ಯೇ ವಿಪ್ರಾನ್ ಸ್ವಧರ್ಮಾತ್ ಪಾತಯಂತಿ ಚ ।
ಪ್ರೇಷಯಂತೇ ಚ ಸತತಂ ಶುಶ್ರೂಷಾಂ ಕಾರಯಂತಿ ಚ ॥೫೪॥

ಮೃತಾಂಸ್ತಾನ್ ಕ್ಷುರಪತ್ರೇಣ ಯಮದೂತಾ ಮಹಾಬಲಾಃ ।
ನಿಕೃಂತಂತಿ ಯಥಾಕಾಮಂ ಸೂತ್ರಮಾರ್ಗೇಣ ಶಿಲ್ಪಿನಃ ॥೫೫॥

ಯಾರು ಬ್ರಾಹ್ಮಣರನ್ನು ಅವಮಾನಿಸುತ್ತಾರೋ, ಅವರನ್ನು ಸ್ವಧರ್ಮದಿಂದ ವಂಚಿತರನ್ನಾಗಿ ಮಾಡುತ್ತಾರೋ, ಬ್ರಾಹ್ಮಣರನ್ನು ಕೆಲಸಕ್ಕೆ ನಿಯೋಗಿಸಿಕೊಂಡು ಅವರಿಂದ ಸೇವೆಯನ್ನು ಸ್ವೀಕರಿಸುತ್ತಾರೋ ಸತ್ತ ಬಳಿಕ ಅಂತಹ ವ್ಯಕ್ತಿಗಳನ್ನು

ಯಮಕಿಂಕರರು ಮಹಾಬಲಿಷ್ಠರಾಗಿ ನರಕ ಲೋಕದಲ್ಲಿ ಗರಗಸಗಳಿಂದ ದೇಹವನ್ನು ಕುಯ್ಯುತ್ತಾರೆ. ಕೆಳಕ್ಕೆ ಕೆಡವಿ ಹಗ್ಗಗಳಿಂದ ಸೆಳೆಯುತ್ತಾರೆ.

ಆಕ್ರೋಶಪರಿವಾದಾಭ್ಯಾಂ ಯೇ ರಮಂತೇ ದ್ವಿಜಾತಿಷು ।
ತಾನ್ ಮೃತಾನ್ ಯಮಲೋಕಸ್ಥಾನ್ ನಿಪಾತ್ಯ ಧರಣೀತಳೇ ॥೫೬॥

ಯಾರು ಬ್ರಾಹ್ಮಣರ ವಿಷಯದಲ್ಲಿ ಸಿಟ್ಟಿನಿಂದ ಅಪವಾದಗಳನ್ನು ಮಾಡುತ್ತಾರೋ ಅಂತಹ ವ್ಯಕ್ತಿಗಳನ್ನು ಯಮಲೋಕದಲ್ಲಿ ಯಮಕಿಂಕರರು ಭೂಮಿಯ ಮೇಲೆ ಬೀಳಿಸಿ, ಅವರ ಎದೆಯ ಮೇಲೆ ಕುಳಿತು, ಕೆಂಪಾದ ಕಣ್ಣುಗಳಿಂದ ಕ್ರುದ್ಧರಾಗಿ ಕಾಲಿನಿಂದ ತುಳಿಯುತ್ತಾ, ಇಕ್ಕಳಗಳಿಂದ ಅವರ ನಾಲಿಗೆಗಳನ್ನು ಕಿತ್ತು ತೆಗೆಯುತ್ತಾರೆ.

ಆಕ್ರಮ್ಯೋರಸಿ ಪಾದೇನ ಕ್ರುದ್ಧಾಃ ಸಂರಕ್ತಲೋಚನಾಃ ।
ಅಗ್ನಿವರ್ಣೈಸ್ತು ಸಂದಂಶೈರ್ಯಮೋ ಜಿಹ್ವಾಂ ಸಮುದ್ಧರೇತ್ ॥೫೭॥

ಯೇ ಚ ವಿಪ್ರಾನ್ ನಿರೀಕ್ಷಂತೇ ಪಾಪಾಃ ಪಾಪೇನ ಚಕ್ಷುಷಾ ।
ಅಬ್ರಹ್ಮಣ್ಯಾಃ ಶ್ರುತೇರ್ಬಾಹ್ಯಾ ನಿತ್ಯಂ ಬ್ರಹ್ಮದ್ವಿಷೋ ನರಾಃ ॥೫೮॥

ತೇಷಾಂ ಘೋರಾ ಮಹಾಕಾಯಾ ವಕ್ರತುಂಡಾ ಮಹಾಬಲಾಃ ।
ಉದ್ಧರಂತಿ ಮುಹೂರ್ತೇನ ಖಗಾಶ್ಚಕ್ಷುರ್ಯಮಾಜ್ಞಯಾ ॥೫೯॥

ಯಾವ ವ್ಯಕ್ತಿಗಳು ಬ್ರಾಹ್ಮಣರನ್ನು ಕೆಟ್ಟ ಕಣ್ಣುಗಳಿಂದ ಸಿಟ್ಟಿನಿಂದ ನೋಡುತ್ತಾರೋ, ವೇದಗಳನ್ನು ದೂಷಿಸಿ, ಬ್ರಾಹ್ಮಣ್ಯವನ್ನು ತಿರಸ್ಕರಿಸಿ, ಬ್ರಹ್ಮದ್ವೇಷವನ್ನು ಮಾಡುವ ಆ ವ್ಯಕ್ತಿಗಳನ್ನು ಮಹಾಕಾಯವನ್ನು ಹೊಂದಿದ, ವಕ್ರವಾದ ಕೊಕ್ಕುಗಳನ್ನು ಹೊಂದಿರುವ ಬಲಿಷ್ಠವಾದ, ಘೋರವಾದ ಪಕ್ಷಿಗಳು ಅಂತಹ ವ್ಯಕ್ತಿಗಳ ಕಣ್ಣುಗಳನ್ನು ಯಮದೇವರ ಆಜ್ಞೆಯಿಂದ ಮುಹೂರ್ತದಲ್ಲಿ ಕೊಕ್ಕಿನಿಂದ ಕಿತ್ತು ತೆಗೆಯುತ್ತವೆ.

ಯಃ ಪ್ರಹಾರಂ ದ್ವಿಜೇಂದ್ರಾಯ ದದ್ಯಾತ್ ಕುರ್ಯಾಚ್ಚ ಶೋಣಿತಮ್ ।
ಅಸ್ಥಿಭಂಗಂ ಚ ಯಃ ಕುರ್ಯಾತ್ ಪ್ರಾಣೈರ್ವಾ ವಿಪ್ರಯೋಜಯೇತ್ ॥

ಸೋಽನುಪೂರ್ವ್ಯೇಣ ಯಾತೀಮಾನ್ ನರಕಾನೇಕವಿಂಶತಿಮ್ ॥೬೧॥

ಯಾವ ಶ್ರೇಷ್ಠನಾದ ಬ್ರಾಹ್ಮಣನನ್ನು ರಕ್ತ ಬರುವವರೆಗೂ ಹೊಡೆಯುತ್ತಾನೋ ಅಂತಹ ವ್ಯಕ್ತಿಯು, ಬ್ರಾಹ್ಮಣನ ಮೂಳೆಯನ್ನು ಮುರಿಯುವ ವ್ಯಕ್ತಿಯು, ಬ್ರಾಹ್ಮಣನ

ಪ್ರಾಣ ತೆಗೆಯುವ ವ್ಯಕ್ತಿಯು ಸತ್ತ ಬಳಿಕ ಕ್ರಮವಾಗಿ ಇಪ್ಪತ್ತೊಂದು ಭಯಂಕರವಾದ ನರಕಗಳನ್ನು ಹೊಂದುತ್ತಾನೆ.

ಶೂಲಮಾರೋಪಿತೋ ಗತ್ವಾ ಜ್ವಲನೇನಾಪಿ ದಹ್ಯತೇ ॥೬೨॥

ಬಳಿಕ ಅವನನ್ನು ಯಮಭಟರು ಶೂಲಕ್ಕೆ ಏರಿಸಿ ಬೆಂಕಿಯಿಂದ ಬೇಯಿಸುತ್ತಾರೆ.

ಬಹುವರ್ಷಸಹಸ್ರಾಣಿ ಪಚ್ಯಮಾನಸ್ತ್ವಾಕ್ಛಿರಾಃ ।
ನಾವಮುಂಚತಿ ದುರ್ಮೇಧಾ ನ ತಸ್ಯ ಕ್ಷೀಯತೇ ಮತಿಃ ॥೬೩॥

ಅನೇಕ ಸಾವಿರ ವರ್ಷಗಳ ತನಕ ಅವನನ್ನು ತಲೆಕೆಳಗಾಗಿ ನಿಲ್ಲಿಸಿ ಬೇಯಿಸುತ್ತಲೇ ಇರುತ್ತಾರೆ. ದುರ್ಬುದ್ಧಿಯಾದ ಆ ಮನುಷ್ಯನಿಗೆ ಈ ವಿಧವಾದ ನರಕ ಯಾತನೆಗಳು ಇಂತಹ ಪಾಪದಿಂದಲೇ ಉಂಟಾಗಿ ನನಗೆ ಇಂತಹ ದುರ್ಬುದ್ಧಿಯುಂಟಾಯಿತು ಎಂದು ಎಲ್ಲಿಯ ತನಕ ಅನ್ನಿಸುವುದಿಲ್ಲವೋ ಅಲ್ಲಿಯ ತನಕವೂ ಈ ಶಿಕ್ಷೆಯು ಮುಗಿಯುವುದಿಲ್ಲ.

ಬ್ರಾಹ್ಮಣಾಯವಗುರ್ಯ್ಯೈವ ವ್ರಜಂತಿ ವಧಕಾಂಕ್ಷಯಾ ।
ಶತವರ್ಷಸಹಸ್ರಾಣಿ ತಾಮಿಸ್ರೇ ಪರಿಪಚ್ಯತೇ ॥೬೪॥

ಯಾವಾತನು ಬ್ರಾಹ್ಮಣರನ್ನು ಅವಮಾನಗೊಳಿಸಬೇಕೆಂದು ಅಥವಾ ಅವರನ್ನು ವಧಿಸಬೇಕೆಂದು ವಿಚಾರ ಮಾಡಿ ಹೋಗುತ್ತಾನೋ ಅವನು ಒಂದು ಲಕ್ಷ ವರ್ಷದ ತನಕ ತಾಮಿಸ್ರವೆಂಬ ನರಕದಲ್ಲಿ ಬೇಯಿಸಲ್ಪಡುತ್ತಾನೆ.

ಉತ್ಪಾದ್ಯ ಶೋಣಿತಂ ಗಾತ್ರಾತ್ ಸಂರಂಭಾನ್ಮತಿಪೂರ್ವಕಮ್ ।
ಸ ಪರ್ಯಾಯೇಣ ಯಾತೀಮಾನ್ ನರಕಾನೇಕವಿಂಶತಿಮ್ ॥೬೫॥

ಯಾವ ವ್ಯಕ್ತಿಯು ಉದ್ವೇಗದಿಂದ, ಬುದ್ಧಿಪೂರ್ವಕವಾಗಿ ಬ್ರಾಹ್ಮಣನ ದೇಹದಲ್ಲಿ ರಕ್ತವನ್ನು ಉಂಟುಮಾಡುತ್ತಾನೋ ಅವನು ಸತ್ತ ಬಳಿಕ ಕ್ರಮವಾಗಿ ಇಪ್ಪತ್ತೊಂದು ನರಕಗಳನ್ನು ಹೊಂದುತ್ತಾನೆ.

ತಸ್ಮಾನ್ನಾಕುಶಲಂ ಬ್ರೂಯಾತ್ ನ ಶುಗ್ದಾಂ ಗಿರಮೀರಯೇತ್ ।
ನ ಬ್ರೂಯಾತ್ ಪರುಷಾಂ ವಾಣೀಂ ನ ಚೈವೈತಾನತಿಕ್ರಮೇತ್ ॥೬೬॥

ಆದ್ದರಿಂದ ಬ್ರಾಹ್ಮಣನನ್ನು ಕುರಿತು ಅಮಂಗಳವಾದ ಮಾತುಗಳನ್ನು ಹೇಳಬಾರದು. ಹಗುರವಾದ, ಕಠಿಣವಾದ ಮಾತುಗಳನ್ನೂ ಆಡಬಾರದು. ಯಾವಾಗಲೂ ಅವಮಾನಿಸಬಾರದು. ಬ್ರಾಹ್ಮಣನನ್ನು ಮೀರಿ ವರ್ತಿಸಬಾರದು. ದುಃಖವನ್ನುಂಟು ಮಾಡುವ ಮಾತುಗಳನ್ನು ಹೇಳಬಾರದು.

ಯೇ ವಿಪ್ರಾನ್ ಶ್ರದ್ಧಯಾ ವಾಚಾ ಪೂಜಯಂತಿ ನರೋತ್ತಮಾಃ ।
ಅರ್ಚಿತಶ್ಚ ಸ್ತುತಶ್ಚೈವ ತೈರ್ಭವಾಮಿ ಯುಧಿಷ್ಠಿರ ॥೬೭॥

ಧರ್ಮಜನೇ, ಯಾರು ಮಧುರವಾದ ಮಾತುಗಳಿಂದ ಶ್ರದ್ಧೆಯಿಂದ ಬ್ರಾಹ್ಮಣರನ್ನು ಪೂಜಿಸುತ್ತಾರೋ ಅಂತಹ ವ್ಯಕ್ತಿಗಳಿಂದ ನಾನೇ ಪೂಜಿತನಾಗುತ್ತೇನೆ. ನಾನೇ ಸ್ತುತಿಸಲ್ಪಡುತ್ತೇನೆ.

ತರ್ಜಯಂತಿ ಚ ಯೇ ವಿಪ್ರಾನ್ ಕ್ರೋಶಯಂತಿ ಚ ಭಾರತ ।
ಆಕ್ರುಷ್ಟಸ್ತರ್ಜಿತಶ್ಚಾಹಂ ತೈರ್ಭವಾಮಿ ನ ಸಂಶಯಃ ॥೬೮॥

ಯಾರು ಬ್ರಾಹ್ಮಣರನ್ನು ಹೆದರಿಸುತ್ತಾರೋ, ಅಳಿಸುತ್ತಾರೋ ಅಂತಹ ವ್ಯಕ್ತಿಗಳು ನನ್ನನ್ನೇ ಹೆದರಿಸಿದ, ಅಳಿಸಿದ ಪಾಪಕ್ಕೆ ಭಾಗಿಗಳಾಗುತ್ತಾರೆ.

ಯಶ್ಚಂದನೈಶ್ಚಾಗರುಧೂಪದೀಪೈಃ
ಅಭ್ಯರ್ಚಯೇತ್ ಕಾಷ್ಠಮಯೀಂ ಮಮಾರ್ಚಾಮ್ ।
ತೇನಾರ್ಚಿತೋ ನೈವ ಭವಾಮಿ ಸಮ್ಯಗ್
ವಿಪ್ರಾರ್ಚನಾದರ್ಚಿತೋಽಹಂ ಭವಾಮಿ ॥೬೯॥

ಯಾರು ನನ್ನನ್ನು ಚಂದನಗಳಿಂದ, ಅಗರು-ಧೂಪ-ದೀಪಗಳಿಂದ ಕಾಷ್ಠದಲ್ಲಿ ಸನ್ನಿಹಿತನಾಗಿದ್ದೇನೆಂದು ಪೂಜಿಸುತ್ತಾರೋ ಅವರಿಂದ ನಾನು ಸರಿಯಾಗಿ ಅರ್ಚಿತನಾಗಿರುವುದಿಲ್ಲ. ಭಕ್ತಿಯಿಂದ ಬ್ರಾಹ್ಮಣರನ್ನು ಅರ್ಚಿಸುವ ವ್ಯಕ್ತಿಗಳಿಂದ ನಾನು ಅರ್ಚಿತನಾಗಿರುತ್ತೇನೆ.

ವಿಪ್ರಪ್ರಸಾದಾದ್ ಧರಣೀಧರೋಽಹಂ
ವಿಪ್ರಪ್ರಸಾದಾದಸುರಾನ್ ಜಯಾಮಿ ।

ವಿಪ್ರಪ್ರಸಾದಾಚ್ಚ ಸದಕ್ಷಿಣೋಽಹಂ
ವಿಪ್ರಪ್ರಸಾದಾದಜಿತೋಽಹಮಸ್ಮಿ ॥೭೦॥

ಬ್ರಾಹ್ಮಣರ ಅನುಗ್ರಹದಿಂದಲೇ ನಾನು ಭೂಮಿಯನ್ನು ಎತ್ತಿರುತ್ತೇನೆ. ಬ್ರಾಹ್ಮಣರ ಪ್ರಸನ್ನತೆಯಿಂದಲೇ ಅಸುರರನ್ನು ಜಯಿಸಿರುತ್ತೇನೆ. ಬ್ರಾಹ್ಮಣರ ಪ್ರಸನ್ನತೆಯಿಂದಲೇ ನಾನು ಎಲ್ಲ ವಿಧವಾದ ವೈಭವಗಳನ್ನು ಹೊಂದಿರುತ್ತೇನೆ. ಬ್ರಾಹ್ಮಣರ ಪ್ರಸನ್ನತೆಯಿಂದಲೇ ನಿತ್ಯವೂ ಜಯಶೀಲನಾಗಿರುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ
ವಿಪ್ರಪ್ರಸಾದಮಾಹಾತ್ಮ್ಯಂ ನಾಮ ಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂದನೆಯ ಅಧ್ಯಾಯ

ಯುಧಿಷ್ಠಿರನನ್ನು ಕುರಿತು ಕೃಷ್ಣನು ಸತ್ಕರ್ಮ-ದುಷ್ಕರ್ಮಗಳ ಫಲವಾಗಿ ನರಕಾದಿ ಲೋಕಗಳಿಗೆ ಹೋಗುವ ಪ್ರಕಾರವನ್ನು ವರ್ಣಿಸಿದುದು.

ಯುಧಿಷ್ಠಿರಃ

ದೇವದೇವೇಶ ದೈತ್ಯಘ್ನ ಪರಂ ಕೌತೂಹಲಂ ಹಿ ಮೇ ।
ಏತತ್ ಕಥಯ ಸರ್ವಜ್ಞ ತ್ವದ್ಭಕ್ತಸ್ಯ ಜನಾರ್ದನ ॥೧॥

ಮಾನುಷಸ್ಯ ಚ ಲೋಕಸ್ಯ ಯಮಲೋಕಸ್ಯ ಚಾಂತರಮ್ ॥೨॥

ಯುಧಿಷ್ಠಿರ– ದೈತ್ಯರನ್ನು ನಾಶಗೊಳಿಸುವ ದೇವದೇವೇಶ್ವರನೇ, ಸರ್ವಜ್ಞನೇ, ಜನಾರ್ದನನೇ, ಮನುಷ್ಯಲೋಕದ, ಯಮಲೋಕದ ಅಂತರವೇನು ಎಂಬುದನ್ನು ನನಗೆ ತಿಳಿಸು. ಈ ವಿಷಯದಲ್ಲಿ ನನಗೆ ತುಂಬಾ ಕುತೂಹಲವಿದೆ.

ಕೀದೃಶಂ ಕಿಂ ಪ್ರಮಾಣಂ ವಾ ಕಿಮಧಿಷ್ಠಾನಮೇವ ವಾ ।
ತರಂತಿ ಮಾನವಾ ದೇವ ಕೇನೋಪಾಯೇನ ಮಾಧವ ॥೩॥

ಭಗವಂತನೇ, ನರಕಲೋಕವು ಯಾವ ರೀತಿಯಲ್ಲಿದೆ? ಅದರ ಸುತ್ತಳತೆಯಷ್ಟು? ಅಲ್ಲಿರುವವರು ಹೇಗಿರುತ್ತಾರೆ? ಯಾವ ಉಪಾಯದಿಂದ ಈ ನರಕಲೋಕವನ್ನು ಮಾನವರು ದಾಟುತ್ತಾರೆ? ಇವೆಲ್ಲವನ್ನೂ ತಿಳಿಸು.

ತ್ವಗಸ್ಥಿಮಾಂಸನಿರ್ಮುಕ್ತೇ ಪಂಚಭೂತವಿವರ್ಜಿತೇ ।
ಕಥಯಸ್ವ ಮಹಾದೇವ ಸುಖದುಃಖಮಶೇಷತಃ ॥೪॥

ಯಾವ ಮನುಷ್ಯನು ಪಂಚಭೂತಾತ್ಮಕವಾದ ಶರೀರದಿಂದ ಬಿಟ್ಟುತೆರಳುತ್ತಾನೋ, ಚರ್ಮ-ಮೂಳೆ-ಮಾಂಸದಿಂದ ರಹಿತನಾಗುತ್ತಾನೋ ಆಗ ಅವನು ಅನುಭವಿಸುವ ಸುಖ-ದುಃಖಗಳು ಏನೆಂಬುದನ್ನು ತಿಳಿಸು.

ಜೀವಸ್ಯ ಯಮಲೋಕೇ ತು ಕರ್ಮಭಿಸ್ತು ಶುಭಾಶುಭೈಃ ।
ಅನುಬದ್ಧಸ್ಯ ತೈಃ ಪಾಶೈರ್ನೀಯಮಾನಸ್ಯ ದಾರುಣೈಃ ॥೫॥

ಮನುಷ್ಯಲೋಕದಲ್ಲಿ ಜೀವನು ಬುದ್ಧಿಪೂರ್ವಕವಾಗಿ ಆಚರಿಸಿದ ಶುಭಾಶುಭ ಕರ್ಮಗಳಿಂದ ಬಂಧಿತನಾಗಿರುತ್ತಾನೆ. ಮರಣದ ಬಳಿಕ ಆತನು ಯಮಭಟರಿಂದ ಬಂಧಿತನಾಗಿ ಕರೆದೊಯ್ಯಲ್ಪಡುತ್ತಾನೆ.

ಮೃತ್ಯುದೂತೈರ್ದುರಾಧರ್ಷೈರ್ಘೋರೈರ್ಘೋರಪರಾಕ್ರಮೈಃ ।
ಬದ್ಧಸ್ಯಾಕ್ಷಿಪ್ಯಮಾಣಸ್ಯ ವಿದ್ರುತಸ್ಯ ಯಮಾಜ್ಞಯಾ ॥೬॥

ಎದುರಿಸಲು ಅಸಾಧ್ಯರಾದ, ಘೋರಪರಾಕ್ರಮಿಗಳಾದ ಯಮಕಿಂಕರರು ಯಮನ ಆಜ್ಞೆಯಿಂದ ಜೀವನನ್ನು ಕಠಿಣವಾದ ಪಾಶಗಳಿಂದ ಬಿಗಿದು ಸೆಳೆದುಕೊಂಡು ಹೋಗುತ್ತಾರೆ.

ಪುಣ್ಯಪಾಪಕೃತಸ್ತಿಷ್ಠೇತ್ ಸುಖದುಃಖಮಶೇಷತಃ ॥೭॥

ಪುಣ್ಯ-ಪಾಪಗಳೆರಡನ್ನೂ ಮಾಡಿರುವ ಜೀವರು ಅಲ್ಲಿ ಸುಖದುಃಖಗಳೆರಡನ್ನೂ ಅನುಭವಿಸುತ್ತಾರೆ.

ಯಮದೂತೈರ್ದುರಾಧರ್ಷೈರ್ನೀಯತೇ ವಾ ಕಥಂ ಪುನಃ ।
ಕಿಂ ವಾ ತತ್ರ ಮಹಾದೇವ ಕರ್ಮ ಕುರ್ವಂತಿ ಮಾನವಾಃ ॥೮॥

ದುರ್ಧರ್ಷರಾದ ಯಮಕಿಂಕರರು ಜೀವರನ್ನು ಹೇಗೆ ಯಮಲೋಕಕ್ಕೆ ಸೆಳೆದೊಯ್ಯುತ್ತಾರೆ? ಯಮಲೋಕಕ್ಕೆ ಹೋಗುವ ಸಮಯದಲ್ಲಿ ಆ ಜೀವರು ಯಾವ ಕರ್ಮಗಳನ್ನು ಮಾಡುತ್ತಾರೆ?

ಕಥಂ ಧರ್ಮರತಾ ಯಾಂತಿ ದೇವತಾದ್ವಿಜಪೂಜಕಾಃ ।
ಕಥಂ ವಾ ಪಾಪಕರ್ಮಾಣೋ ಯಾಂತಿ ಪ್ರೇತಪುರಂ ನರಾಃ ॥೯॥

ದೇವತಾ, ಬ್ರಾಹ್ಮಣರನ್ನು ಪೂಜಿಸುವ ವ್ಯಕ್ತಿಗಳು ಯಾವ ಮಾರ್ಗವನ್ನು ಅನುಭವಿಸುತ್ತಾರೆ? ಪಾಪಕರ್ಮಗಳನ್ನೇ ಮಾಡಿದ ವ್ಯಕ್ತಿಗಳು ಯಮಪುರಿಗೆ ಹೇಗೆ ತೆರಳುತ್ತಾರೆ?

ಕಿಂ ರೂಪಂ ಕಿಂ ಪ್ರಮಾಣಂ ವಾ ವರ್ಣಃ ಕೋ ವಾऽಸ್ಯ ಕೇಶವ ।
ಜೀವಸ್ಯ ಗಚ್ಛತೋ ನಿತ್ಯಂ ಯಮಲೋಕಂ ಬ್ರವೀಹಿ ಮೇ ॥೧೦॥

ಯಮಲೋಕಕ್ಕೆ ಸಾಗುವ ಜೀವನಿಗೆ ಯಾವ ರೂಪವಿರುತ್ತದೆ? ಅವನ ಗಾತ್ರವೆಷ್ಟು? ಯಾವ ಬಣ್ಣದಲ್ಲಿರುತ್ತಾನೆ? ಕೇಶವನೇ, ಯಮಲೋಕಕ್ಕೆ ಸಾಗುವ ಜೀವನ ಸಮಗ್ರ ಅವಸ್ಥೆಗಳನ್ನು ನನಗೆ ತಿಳಿಸು.

ಶ್ರೀಭಗವಾನ್

ಶೃಣು ರಾಜನ್ ಯಥಾತತ್ತ್ವಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ತತ್ ತೇऽಹಂ ಕಥಯಿಷ್ಯಾಮಿ ಮದ್ಭಕ್ತಸ್ಯ ನರೇಶ್ವರ ॥೧೧॥

ಶ್ರೀಭಗವಾನ್– ನರೇಶ್ವರನೇ, ನನ್ನ ಭಕ್ತನಾದ ನಿನಗೆ ನೀನು ಹೇಗೆ ಪ್ರಶ್ನಿಸಿರುವೆಯೋ ಅದರಂತೆ ಎಲ್ಲ ಪ್ರಶ್ನೆಗಳಿಗೂ ಉತ್ತರಿಸುತ್ತೇನೆ.

ಷಡಶೀತಿಸಹಸ್ರಾಣಿ ಯೋಜನಾನಾಂ ಶತಾನಿ ಚ ।
ಮಾನುಷಸ್ಯ ಚ ಲೋಕಸ್ಯ ಯಮಲೋಕಸ್ಯ ಚಾಂತರಮ್ ॥೧೨॥

ಮನುಷ್ಯಲೋಕಕ್ಕೂ ಯಮಲೋಕಕ್ಕೂ ಎಂಬತ್ತಾರು ಸಾವಿರ ಯೋಜನ ಅಂತರವಿದೆ.

ನ ತತ್ರ ವೃಕ್ಷಚ್ಛಾಯಾ ವಾ ನ ತಟಾಕಂ ಸರೋऽಪಿ ವಾ ।
ನ ವಾಪ್ಯೋ ದೀರ್ಘಿಕಾ ವಾऽಪಿ ನ ಕೂಪಂ ವಾ ಯುಧಿಷ್ಠಿರ ॥೧೩॥

ಆ ಯಮಮಾರ್ಗದಲ್ಲಿ ವೃಕ್ಷಗಳ ನೆರಳಾಗಲಿ, ಬಾವಿಗಳಾಗಲಿ, ಸರೋವರಗಳಾಗಲಿ, ತಟಾಕೆಗಳಾಗಲಿ, ಸಣ್ಣನದಿ, ಹಳ್ಳಗಳಾಗಲಿ ಇರುವುದಿಲ್ಲ.

ನ ಮಂಟಪಂ ಸಭಾ ವಾಽಪಿ ನ ಪ್ರಪಾ ನ ನಿವೇಶನಮ್ ।
ನ ಪರ್ವತೋ ನದೀ ವಾಽಪಿ ನ ಭೂಮೇರ್ವಿವರಂ ಕ್ವಚಿತ್ ॥೧೪॥

ಮಂಟಪಗಳಾಗಲಿ, ಸಭಾಮಂದಿರಗಳಾಗಲಿ, ಅರವಟ್ಟಿಗೆಗಳಾಗಲಿ, ಮನೆಗಳಾಗಲಿ, ಪರ್ವತ-ನದಿಗಳಾಗಲಿ, ಗುಹೆಗಳಾಗಲಿ ಇರುವುದಿಲ್ಲ.

ನ ಗ್ರಾಮೋ ನಾಶ್ರಮೋ ವಾಽಪಿ ನೋದ್ಯಾನಂ ಕಾನನಾನಿ ವಾ ।
ನ ಕಿಂಚಿದ್ವಿಶ್ರಮಸ್ಥಾನಂ ಪಥಿ ತಸ್ಮಿನ್ ಯುಧಿಷ್ಠಿರ ॥೧೫॥

ಗ್ರಾಮವಾಗಲಿ, ಆಶ್ರಮವಾಗಲಿ, ಉದ್ಯಾನವನವಾಗಲಿ, ಕಾಡುಗಳಾಗಲಿ, ಯಾವುದೇ ಆಶ್ರಯ ಸ್ಥಾನವಾಗಲಿ, ಯಮಲೋಕದ ಮಾರ್ಗದಲ್ಲಿ ಇರುವುದಿಲ್ಲ.

ಜಂತೋಃ ಸಂಪ್ರಾಪ್ತಕಾಲಸ್ಯ ವೇದನಾರ್ತಸ್ಯ ವೈ ಭೃಶಮ್ ।
ಕರಣೈಸ್ತ್ಯಕ್ತದೇಹಸ್ಯ ಪ್ರಾಣೈಃ ಕಂಠಗತೈಃ ಪುನಃ ॥೧೬॥

ಮರಣಕಾಲವು ಸನ್ನಿಹಿತವಾದಾಗ ಜೀವನು ಮರಣಸಂಕಟಕ್ಕೆ ತುತ್ತಾಗಿರುತ್ತಾನೆ. ಸ್ವಲ್ಪಹೊತ್ತು ಮರಣವೇದನೆಯನ್ನು ಅನುಭವಿಸಿದ ಬಳಿಕ ಪ್ರಾಣಗಳು ಕಂಠಕ್ಕೆ ಆಗಮಿಸಿ ಕ್ರಮವಾಗಿ ಸಣ್ಣನಿಮಿತ್ತದಿಂದ ಪ್ರಾಣವನ್ನು ತ್ಯಜಿಸುತ್ತಾನೆ.

ಶರೀರಾಚ್ಛೋದ್ಯತೇ ಜೀವೋ ಹ್ಯವಶೋ ಮಾತರಿಶ್ವನಾ ॥೧೭॥

ಜೀವನು ಅಸ್ವತಂತ್ರನಾಗಿ ಶರೀರದಿಂದ ವಾಯುವಿನ ಜೊತೆಗೆ ದೇಹದಿಂದ ಹೊರಬರುತ್ತಾನೆ.

ನಿರ್ಗತೋ ವಾಯುಭೂತಸ್ತು ಷಟ್‌ಕೋಶಾತ್ ತು ಕಲೇಬರಾತ್ ।
ಶರೀರಮನ್ಯತ್ ತದ್ರೂಪಂ ತದ್ವರ್ಣಂ ತತ್ಪ್ರಮಾಣಕಮ್ ॥೧೮॥

ಸಪ್ತಧಾತುಗಳೆಂಬ ಕೋಶಗಳಿಂದ ಕೂಡಿರುವ ಶರೀರದಿಂದ ವಾಯುರೂಪನಾಗಿ ಹೊರಬಂದ ಜೀವನು ಬೇರೆಯಾದ ಮತ್ತೊಂದು ಶರೀರವನ್ನು ಅದೇ ವಾಯು ರೂಪದಿಂದ ಅದೇ ಪ್ರಮಾಣದಿಂದ ಪ್ರವೇಶಿಸುತ್ತಾನೆ.

ವ್ಯಾಖ್ಯಾನ ವಿಶೇಷ– ಇಲ್ಲಿ ಷಟ್‌ಕೋಶಗಳೆಂದರೆ ಸಪ್ತಧಾತುಗಳು. ತ್ವಕ್, ಚರ್ಮಗಳನ್ನು ಒಂದು ಎಂದು ಇಟ್ಟುಕೊಂಡು ಷಟ್‌ಕೋಶ ಎಂದಿದ್ದಾರೆ.

ಅದೃಶ್ಯಂ ಸಂಪ್ರವಿಷ್ಟಸ್ತು ಸೋಽಪ್ಯದೃಷ್ಟೇನ ಕೇನಚಿತ್ ॥೧೯॥

ಅದೃಶ್ಯವಾದ ಶರೀರವನ್ನು ಪ್ರವೇಶಿಸಿದ ಬಳಿಕ ಜೀವನು ಅದೃಶ್ಯನಾಗಿಯೇ ಇರುತ್ತಾನೆ.

ಸೋಽಂತರಾತ್ಮಾ ದೇಹವತಾಮಷ್ಟಾಂಗೋ ಯಸ್ತು ಸಂಚರೇತ್ ।
ಛೇದನಾದ್ ದಾಹನಾದ್ ಭೇದಾತ್ ತಾಡನಾದ್ ವಾ ನ ನಶ್ಯತಿ ॥

ದೇಹಧಾರಿಗಳ ಅಂತರಾತ್ಮನೆನಿಸಿದ ಜೀವನು ಎಂಟು ಅಂಗಗಳಿಂದ ಕೂಡಿಕೊಂಡು, ಅಣಿಮಾದಿ ಐಶ್ವರ್ಯಶಕ್ತಿಗಳಿಂದ ಕೂಡಿಕೊಂಡು ಅಥವಾ ಪಾದಾದಿ ಅವಯವಗಳಿಂದ ಕೂಡಿಕೊಂಡು ಇರುತ್ತಾನೆ. ಈ ದೇಹ ತ್ಯಜಿಸಿದ ವ್ಯಕ್ತಿಯ ದೇಹದಲ್ಲಿ ಪರಮಾತ್ಮನೇ ಅಂತರ್ಯಾಮಿಯಾಗಿ ಸಂಚರಿಸುತ್ತಿರುತ್ತಾನೆ. ಆದ್ದರಿಂದ ಈ ಜೀವನ ದೇಹವನ್ನು ಕತ್ತರಿಸಲಾಗುವುದಿಲ್ಲ, ಒಡೆದು ಹಾಕಲಾಗುವುದಿಲ್ಲ, ಸುಟ್ಟು ಹಾಕಲಾಗುವುದಿಲ್ಲ, ಪ್ರಹರಿಸಿದರೂ ನಾಶವನ್ನು ಹೊಂದುವುದಿಲ್ಲ.

ನಾನಾರೂಪಧರೈಘೋರ್ಯೈಃ ಪ್ರಚಂಡೈಶ್ಚಂಡವಿಕ್ರಮೈಃ ।
ಹ್ರಿಯಮಾಣೋ ದುರಾಧರ್ಷೈರ್ಯಮದೂತೈರ್ಯಮಾಜ್ಞಯಾ ॥೨೧॥

ಯಮದೇವನ ಆಜ್ಞಾನುಸಾರ ನಾನಾ ರೂಪಗಳನ್ನು ಧರಿಸಿರುವ ಭಯಂಕರ ಪ್ರಚಂಡರಾದ, ಎದುರಿಸಲು ಅಸಾಧ್ಯರಾದ, ಆಯುಧಧಾರಿಗಳಾದ ಯಮಕಿಂಕರರು ಅಷ್ಟಾಂಗಯುಕ್ತರಾದ ಜೀವನನ್ನು ಸೆಳೆದೊಯ್ಯುತ್ತಾರೆ.

ಪುತ್ರದಾರಮಯೈಃ ಪಾಶೈಃ ಸನ್ನಿರುದ್ಧೋಽವಶಾದ್ ಬಲಾತ್ ।
ಸ್ವಕರ್ಮಭಿಶ್ಚಾನುಗತೈಃ ಕೃತೈಃ ಸುಕೃತದುಷ್ಕೃತೈಃ ॥೨೨॥

ಆ ಸಮಯದಲ್ಲಿ ಜೀವನು ಪತ್ನಿ-ಪುತ್ರರೂಪವಾದ ಸ್ನೇಹಬಂಧದಿಂದ ಕಟ್ಟಲ್ಪಟ್ಟಿರುತ್ತಾನೆ. ಅಸ್ವತಂತ್ರನಾದ ಜೀವನು ಯಮಭಟರಿಂದ ಸೆಳೆಯುತ್ತಿರುವಾಗ ತನ್ನ ಪುಣ್ಯ-ಪಾಪಗಳನ್ನು ಅನುಸರಿಸಿ ಸಾಗುತ್ತಿರುತ್ತಾನೆ.

ಆಕ್ರಂದಮಾನಃ ಕರುಣಂ ಬಂಧುಭಿರ್ದುಃಖಪೀಡಿತೈಃ ।
ತ್ಯಕ್ತ್ವಾ ಬಂಧುಜನಂ ಸರ್ವಂ ನಿರಪೇಕ್ಷಸ್ತು ಗಚ್ಛತಿ ॥೨೩॥

ಆ ಸಮಯದಲ್ಲಿ ದುಃಖಿತರಾದ ಆ ಜೀವನಿಗೆ ಸಂಬಂಧಿಸಿದ ಬಂಧುಜನರು ಕರುಣಾಜನಕವಾದ ಧ್ವನಿಯಲ್ಲಿ ರೋದಿಸುತ್ತಿರುತ್ತಾರೆ. ಆ ಎಲ್ಲ ಬಂಧುಜನರನ್ನು ಬಿಟ್ಟು, ಯಾವುದರಲ್ಲಿಯೂ ಆಸಕ್ತಿಯಿಲ್ಲದೆ ಯಮಭಟರ ಜೊತೆಗೆ ಸಾಗುತ್ತಾನೆ.

ಮಾತೃಭಿಃ ಪಿತೃಭಿಶ್ಚೈವ ಭ್ರಾತೃಭಿರ್ಮಾತುಲೈಸ್ತಥಾ ।
ದಾರೈಃ ಪುತ್ರೈರ್ವಯಸ್ಯೈಶ್ಚ ರುದದ್ಭಿಸ್ತ್ಯಜ್ಯತೇ ನರಃ ॥೨೪॥

ಅಳುತ್ತಿರುವ ತಾಯಿ, ತಂದೆ, ಸಹೋದರ, ಮಾವ, ಹೆಂಡತಿ, ಮಕ್ಕಳು, ಮಿತ್ರರು ಇವರೆಲ್ಲರೊಡನೆಯೂ ಆ ಜೀವನ ಸಂಬಂಧವು ಕಡೆದು ಹೋಗುತ್ತದೆ.

ಅದೃಶ್ಯಮಾನಸ್ತೈರ್ದೀನೈರಶ್ರುಪೂರ್ಣಮುಖೇಕ್ಷಣೈಃ ।
ಸ್ವಶರೀರಂ ಪರಿತ್ಯಜ್ಯ ವಾಯುಭೂತಸ್ತು ಗಚ್ಛತಿ ॥೨೫॥

ದೀನವಾದ, ಕಣ್ಣೀರಿನಿಂದ ತುಂಬಿದ ಮುಖಗಳಿಂದ, ಕಣ್ಣುಗಳಿಂದ ಕೂಡಿದ ಬಂಧುಗಳಿಗೆ ಕಾಣಿಸದಂತೆ ಪಂಚಭೂತಾತ್ಮಕವಾದ ಶರೀರವನ್ನು ತ್ಯಜಿಸಿ ವಾಯು ಶರೀರದಿಂದ ಯಮಲೋಕಕ್ಕೆ ಪ್ರಯಾಣ ಮಾಡುತ್ತಾನೆ.

ಅಂಧಕಾರಮಪಾರಂ ತಂ ಮಹಾಘೋರಂ ತಮೋವೃತಮ್ ।
ದುಃಖಾಂತಂ ದುಷ್ಪ್ರತಾರಂ ಚ ದುಷ್ಪ್ರಕಾರಂ ಚ ದುರ್ಗಮಮ್ ॥೨೬॥

ಆ ಯಮಪುರಿಯು ಪಾಪಿಷ್ಠ ಜೀವರಿಗೆ ಅಂಧಕಾರಮಯವಾಗಿರುತ್ತದೆ. ಎಷ್ಟು ನಡೆದರೂ ಮುಗಿಯುವುದೇ ಇಲ್ಲ. ಅಪಾರವೂ, ಮಹಾಘೋರವೂ, ಭಯಂಕರವೂ, ದುಸ್ತರವೂ, ದುರ್ಗಮವೂ ಆಗಿರುತ್ತದೆ.

ದುಃಸಹಂ ಯದ್ ದುರಂತಂ ಚ ದುರ್ನಿರೀಕ್ಷಂ ದುರಾಸದಮ್ ।
ದುರಾಪಮತಿದುರ್ಗಂ ಚ ಪಾಪಿಷ್ಠಾನಾಂ ನರೋತ್ತಮ ॥೨೭॥

ಸಹಿಸಲು ಅಸಾಧ್ಯವಾದ, ದುರಂತವಾದ, ನೋಡಲು ಅಸಹ್ಯವಾದ, ಹೊಂದಲು ಅಶಕ್ಯವಾದ, ಅತ್ಯಂತ ಕಠಿಣವಾದ ಮಾರ್ಗಗಳಲ್ಲಿ ಪಾಪಿಷ್ಠರು ಸಂಚರಿಸುತ್ತಾರೆ.

ಋಷಿಭಿಃ ಕಥ್ಯಮಾನಂ ತತ್ ಪಾರಂಪರ್ಯೇಣ ಪಾರ್ಥಿವ ।
ತ್ರಾಸಂ ಜನಯತಿ ಪ್ರಾಯಃ ಶ್ರೂಯಮಾಣಃ ಕಥಾಸ್ವಪಿ ॥೨೮॥

ಈ ನರಕದ ವರ್ಣನೆಯನ್ನು ಋಷಿಗಳು ತಿಳಿಸುವಾಗ ಯುಧಿಷ್ಠಿರನೇ, ಕಥೆಯನ್ನು ಕೇಳುತ್ತಿರುವ ವ್ಯಕ್ತಿಗಳಿಗೂ ತಡೆಯಲಾರದ ದುಃಖವು ಉಂಟಾಗುತ್ತದೆ.

ಅವಶ್ಯಂ ಚೈವ ಗಂತವ್ಯಸ್ತದಧ್ವಾ ತು ಯುಧಿಷ್ಠಿರ ।
ಪ್ರಾಪ್ತಕಾಲೇನ ಸಂತ್ಯಜ್ಯ ಬಂಧೂನ್ ಭೋಗಾನ್ ಧನಾನಿ ಚ ॥೨೯॥

ಯುಧಿಷ್ಠಿರನೇ, ಕಾಲವು ಸನ್ನಿಹಿತವಾದಾಗ ಬಂಧುಗಳನ್ನೂ, ಭೋಗಗಳನ್ನೂ, ಧನಗಳನ್ನೂ, ಎಲ್ಲವನ್ನೂ ನಿಶ್ಚಿತವಾಗಿ ತ್ಯಜಿಸಿ ಯಮಪುರಿಗೆ ಹೋಗಲೇಬೇಕಾಗಿರುತ್ತದೆ.

ಜರಾಯುಜೈರಂಡಜೈಶ್ಚ ಸ್ವೇದಜೈರುದ್ಭಿಜ್ಜೈಸ್ತಥಾ ।
ಜಂಗಮೈಃ ಸ್ಥಿರಸಂಜ್ಞೈಶ್ಚ ಗಂತವ್ಯಂ ಹಿ ಯಮಾಲಯಮ್ ॥೩೦॥

ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ, ಜಂಗಮ, ಸ್ಥಾವರ ಎಲ್ಲ ಪ್ರಾಣಿಗಳೂ ಈ ಯಮಪುರಿಗೆ ಹೋಗಲೇಬೇಕು.

ದೇವಾಸುರೈರ್ಮನುಷ್ಯಾದ್ಯೈರ್ವೈವಸ್ವತವಶಾನುಗೈಃ ।
ಸ್ತ್ರೀಪುಂನಪುಂಸಕೈಶ್ಚಾಪಿ ಪೃಥಿವ್ಯಾಂ ಜೀವಸಂಜ್ಞಿತೈಃ ॥೩೧॥

ಮಧ್ಯಮೈರ್ಯುವಭಿಶ್ಚಾಪಿ ಬಾಲೈರ್ವೃದ್ಧೈಸ್ತಥೈವ ಚ ।
ಜಾತಮಾತ್ರೈಶ್ಚ ಗರ್ಭಸ್ಥೈರ್ಗಂತವ್ಯಃ ಸ ಮಹಾಪಥಃ ॥೩೨॥

ಜೀವ ಎಂದು ಹೆಸರನ್ನು ಪಡೆದ ದೇವತೆಗಳೇ ಆಗಲಿ, ಅಸುರರೇ ಆಗಲಿ, ಮನುಷ್ಯರೇ ಆಗಲಿ, ಸ್ತ್ರೀ-ಪುರುಷ-ನಪುಂಸಕರೇ ಆಗಲಿ, ವೃದ್ಧರೇ ಆಗಲಿ, ತರುಣರೇ ಆಗಲಿ, ಹುಟ್ಟಿದ ಶಿಶುವೇ ಆಗಲಿ, ಗರ್ಭಸ್ಥ ಶಿಶುವೇ ಆಗಲಿ, ಜೀವಸಂಜ್ಞೆ ಹೊಂದಿರುವ ಎಲ್ಲರೂ ಈ ಯಮಪುರಿಗೆ ಒಂದು ದಿನ ಪ್ರಯಾಣ ಬೆಳೆಸಲೇಬೇಕು.

ಪೂರ್ವಾಹ್ಣೇ ವಾऽಪರಾಹ್ಣೇ ವಾ ಸಂಧ್ಯಾಕಾಲೇऽಥವಾ ಪುನಃ ।
ಪ್ರದೋಷೇ ವಾऽರ್ಧರಾತ್ರೇ ವಾ ಪ್ರತ್ಯೂಷೇ ವಾऽಪ್ಯುಪಸ್ಥಿತೇ ॥೩೩॥

ಆಕ್ರಂದಮಾನಃ ಕರುಣಂ ಬಂಧುಭಿರ್ದುಃಖಪೀಡಿತೈಃ ।
ತ್ಯಕ್ತ್ವಾ ಬಂಧುಜನಂ ಸರ್ವಂ ನಿರಪೇಕ್ಷಸ್ತು ಗಚ್ಛತಿ ॥೨೩॥

ಆ ಸಮಯದಲ್ಲಿ ದುಃಖಿತರಾದ ಆ ಜೀವನಿಗೆ ಸಂಬಂಧಿಸಿದ ಬಂಧುಜನರು ಕರುಣಾಜನಕವಾದ ಧ್ವನಿಯಲ್ಲಿ ರೋದಿಸುತ್ತಿರುತ್ತಾರೆ. ಆ ಎಲ್ಲ ಬಂಧುಜನರನ್ನು ಬಿಟ್ಟು, ಯಾವುದರಲ್ಲಿಯೂ ಆಸಕ್ತಿಯಿಲ್ಲದೆ ಯಮಭಟರ ಜೊತೆಗೆ ಸಾಗುತ್ತಾನೆ.

ಮಾತೃಭಿಃ ಪಿತೃಭಿಶ್ಚೈವ ಭ್ರಾತೃಭಿರ್ಮಾತುಲೈಸ್ತಥಾ ।
ದಾರೈಃ ಪುತ್ರೈರ್ದಯಸ್ಯೈಶ್ಚ ರುದದ್ಭಿಸ್ತ್ಯಜ್ಯತೇ ನರಃ ॥೨೪॥

ಅಳುತ್ತಿರುವ ತಾಯಿ, ತಂದೆ, ಸಹೋದರ, ಮಾವ, ಹೆಂಡತಿ, ಮಕ್ಕಳು, ಮಿತ್ರರು ಇವರೆಲ್ಲರೊಡನೆಯೂ ಆ ಜೀವನ ಸಂಬಂಧವು ಕಡೆದು ಹೋಗುತ್ತದೆ.

ಅದೃಶ್ಯಮಾನಸ್ತೈರ್ದೀನೈರಶ್ರುಪೂರ್ಣಮುಖೇಕ್ಷಣೈಃ ।
ಸ್ವಶರೀರಂ ಪರಿತ್ಯಜ್ಯ ವಾಯುಭೂತಸ್ತು ಗಚ್ಛತಿ ॥೨೫॥

ದೀನವಾದ, ಕಣ್ಣೀರಿನಿಂದ ತುಂಬಿದ ಮುಖಗಳಿಂದ, ಕಣ್ಣುಗಳಿಂದ ಕೂಡಿದ ಬಂಧುಗಳಿಗೆ ಕಾಣಿಸದಂತೆ ಪಂಚಭೂತಾತ್ಮಕವಾದ ಶರೀರವನ್ನು ತ್ಯಜಿಸಿ ವಾಯು ಶರೀರದಿಂದ ಯಮಲೋಕಕ್ಕೆ ಪ್ರಯಾಣ ಮಾಡುತ್ತಾನೆ.

ಅಂಧಕಾರಮಪಾರಂ ತಂ ಮಹಾಘೋರಂ ತಮೋವೃತಮ್ ।
ದುಃಖಾಂತಂ ದುಷ್ಪ್ರತಾರಂ ಚ ದುಷ್ಕೃತಾರಂ ಚ ದುರ್ಗಮಮ್ ॥೨೬॥

ಆ ಯಮಪುರಿಯು ಪಾಪಿಷ್ಠ ಜೀವರಿಗೆ ಅಂಧಕಾರಮಯವಾಗಿರುತ್ತದೆ. ಎಷ್ಟು ನಡೆದರೂ ಮುಗಿಯುವುದೇ ಇಲ್ಲ. ಅಪಾರವೂ, ಮಹಾಘೋರವೂ, ಭಯಂಕರವೂ, ದುಸ್ತರವೂ, ದುರ್ಗಮವೂ ಆಗಿರುತ್ತದೆ.

ದುಃಸಹಂ ಯದ್ ದುರಂತಂ ಚ ದುರ್ನಿರೀಕ್ಷಂ ದುರಾಸದಮ್ ।
ದುರಾಪಮತಿದುರ್ಗಂ ಚ ಪಾಪಿಷ್ಠಾನಾಂ ನರೋತ್ತಮ ॥೨೭॥

ಸಹಿಸಲು ಅಸಾಧ್ಯವಾದ, ದುರಂತವಾದ, ನೋಡಲು ಅಸಹ್ಯವಾದ, ಹೊಂದಲು ಅಶಕ್ಯವಾದ, ಅತ್ಯಂತ ಕಠಿಣವಾದ ಮಾರ್ಗಗಳಲ್ಲಿ ಪಾಪಿಷ್ಠರು ಸಂಚರಿಸುತ್ತಾರೆ.

ಋಷಿಭಿಃ ಕಥ್ಯಮಾನಂ ತತ್ ಪಾರಂಪರ್ಯೇಣ ಪಾರ್ಥಿವ ।
ತ್ರಾಸಂ ಜನಯತಿ ಪ್ರಾಯಃ ಶ್ರೂಯಮಾಣಃ ಕಥಾಸ್ವಪಿ ॥೨೮॥

ಈ ನರಕದ ವರ್ಣನೆಯನ್ನು ಋಷಿಗಳು ತಿಳಿಸುವಾಗ ಯುಧಿಷ್ಠಿರನೇ, ಕಥೆಯನ್ನು ಕೇಳುತ್ತಿರುವ ವ್ಯಕ್ತಿಗಳಿಗೂ ತಡೆಯಲಾರದ ದುಃಖವು ಉಂಟಾಗುತ್ತದೆ.

ಅವಶ್ಯಂ ಚೈವ ಗಂತವ್ಯಸ್ತದಧ್ವಾ ತು ಯುಧಿಷ್ಠಿರ ।
ಪ್ರಾಪ್ತಕಾಲೇನ ಸಂತ್ಯಜ್ಯ ಬಂಧೂನ್ ಭೋಗಾನ್ ಧನಾನಿ ಚ ॥೨೯॥

ಯುಧಿಷ್ಠಿರನೇ, ಕಾಲವು ಸನ್ನಿಹಿತವಾದಾಗ ಬಂಧುಗಳನ್ನೂ, ಭೋಗಗಳನ್ನೂ, ಧನಗಳನ್ನೂ, ಎಲ್ಲವನ್ನೂ ನಿಶ್ಚಿತವಾಗಿ ತ್ಯಜಿಸಿ ಯಮಪುರಿಗೆ ಹೋಗಲೇಬೇಕಾಗಿರುತ್ತದೆ.

ಜರಾಯುಜೈರಂಡಜೈಶ್ಚ ಸ್ವೇದಜೈರುದ್ಭಿಜ್ಜೈಸ್ತಥಾ ।
ಜಂಗಮೈಃ ಸ್ಥಿರಸಂಜ್ಞೈಶ್ಚ ಗಂತವ್ಯಂ ಹಿ ಯಮಾಲಯಮ್ ॥೩೦॥

ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ, ಜಂಗಮ, ಸ್ಥಾವರ ಎಲ್ಲ ಪ್ರಾಣಿಗಳೂ ಈ ಯಮಪುರಿಗೆ ಹೋಗಲೇಬೇಕು.

ದೇವಾಸುರೈರ್ಮನುಷ್ಯಾದ್ಯೈರ್ವೈವಸ್ವತವಶಾನುಗೈಃ ।
ಸ್ತ್ರೀಪುಂನಪುಂಸಕೈಶ್ಚಾಪಿ ಪೃಥಿವ್ಯಾಂ ಜೀವಸಂಜ್ಞಿತೈಃ ॥೩೧॥

ಮಧ್ಯಮೈರ್ಯುವಭಿಶ್ಚಾಪಿ ಬಾಲೈರ್ವೃದ್ಧೈಸ್ತಥೈವ ಚ ।
ಜಾತಮಾತ್ರೈಶ್ಚ ಗರ್ಭಸ್ಥೈರ್ಗಂತವ್ಯಃ ಸ ಮಹಾಪಥಃ ॥೩೨॥

ಜೀವ ಎಂದು ಹೆಸರನ್ನು ಪಡೆದ ದೇವತೆಗಳೇ ಆಗಲಿ, ಅಸುರರೇ ಆಗಲಿ, ಮನುಷ್ಯರೇ ಆಗಲಿ, ಸ್ತ್ರೀ-ಪುರುಷ-ನಪುಂಸಕರೇ ಆಗಲಿ, ವೃದ್ಧರೇ ಆಗಲಿ, ತರುಣರೇ ಆಗಲಿ, ಹುಟ್ಟಿದ ಶಿಶುವೇ ಆಗಲಿ, ಗರ್ಭಸ್ಥ ಶಿಶುವೇ ಆಗಲಿ, ಜೀವಸಂಜ್ಞೆ ಹೊಂದಿರುವ ಎಲ್ಲರೂ ಈ ಯಮಪುರಿಗೆ ಒಂದು ದಿನ ಪ್ರಯಾಣ ಬೆಳೆಸಲೇಬೇಕು.

ಪೂರ್ವಾಹ್ಣೇ ವಾऽಪರಾಹ್ಣೇ ವಾ ಸಂಧ್ಯಾಕಾಲೇऽಥವಾ ಪುನಃ ।
ಪ್ರದೋಷೇ ವಾऽರ್ಧರಾತ್ರೇ ವಾ ಪ್ರತ್ಯೂಷೇ ವಾऽಪ್ಯುಪಸ್ಥಿತೇ ॥೩೩॥

ಆಕ್ರಂದಮಾನಃ ಕರುಣಂ ಬಂಧುಭಿರ್ದುಃಖಪೀಡಿತೈಃ ।
ತ್ಯಕ್ತ್ವಾ ಬಂಧುಜನಂ ಸರ್ವಂ ನಿರಪೇಕ್ಷಸ್ತು ಗಚ್ಛತಿ ॥೨೩॥

ಆ ಸಮಯದಲ್ಲಿ ದುಃಖಿತರಾದ ಆ ಜೀವನಿಗೆ ಸಂಬಂಧಿಸಿದ ಬಂಧುಜನರು ಕರುಣಾಜನಕವಾದ ಧ್ವನಿಯಲ್ಲಿ ರೋದಿಸುತ್ತಿರುತ್ತಾರೆ. ಆ ಎಲ್ಲ ಬಂಧುಜನರನ್ನು ಬಿಟ್ಟು ಯಾವುದರಲ್ಲಿಯೂ ಆಸಕ್ತಿಯಿಲ್ಲದೆ ಯಮಭಟರ ಜೊತೆಗೆ ಸಾಗುತ್ತಾನೆ.

ಮಾತೃಭಿಃ ಪಿತೃಭಿಶ್ಚೈವ ಭ್ರಾತೃಭಿರ್ಮಾತುಲೈಸ್ತಥಾ ।
ದಾರೈಃ ಪುತ್ರೈರ್ದಯಸ್ಯೈಶ್ಚ ರುದದ್ಭಿಸ್ತ್ಯಜ್ಯತೇ ನರಃ ॥೨೪॥

ಅಳುತ್ತಿರುವ ತಾಯಿ, ತಂದೆ, ಸಹೋದರ, ಮಾವ, ಹೆಂಡತಿ, ಮಕ್ಕಳು, ಮಿತ್ರರು ಇವರೆಲ್ಲರೊಡನೆಯೂ ಆ ಜೀವನ ಸಂಬಂಧವು ಕಡೆದು ಹೋಗುತ್ತದೆ.

ಅದೃಶ್ಯಮಾನಸ್ತೈರ್ದೀನೈರಶ್ರುಪೂರ್ಣಮುಖೇಕ್ಷಣೈಃ ।
ಸ್ವಶರೀರಂ ಪರಿತ್ಯಜ್ಯ ವಾಯುಭೂತಸ್ತು ಗಚ್ಛತಿ ॥೨೫॥

ದೀನವಾದ, ಕಣ್ಣೀರಿನಿಂದ ತುಂಬಿದ ಮುಖಗಳಿಂದ, ಕಣ್ಣುಗಳಿಂದ ಕೂಡಿದ ಬಂಧುಗಳಿಗೆ ಕಾಣಿಸದಂತೆ ಪಂಚಭೂತಾತ್ಮಕವಾದ ಶರೀರವನ್ನು ತ್ಯಜಿಸಿ ವಾಯು ಶರೀರದಿಂದ ಯಮಲೋಕಕ್ಕೆ ಪ್ರಯಾಣ ಮಾಡುತ್ತಾನೆ.

ಅಂಧಕಾರಮಪಾರಂ ತಂ ಮಹಾಘೋರಂ ತಮೋವೃತಮ್ ।
ದುಃಖಾಂತಂ ದುಷ್ಪ್ರತಾರಂ ಚ ದುಷ್ಕೃತಾರಂ ಚ ದುರ್ಗಮಮ್ ॥೨೬॥

ಆ ಯಮಪುರಿಯು ಪಾಪಿಷ್ಠ ಜೀವರಿಗೆ ಅಂಧಕಾರಮಯವಾಗಿರುತ್ತದೆ. ಎಷ್ಟು ನಡೆದರೂ ಮುಗಿಯುವುದೇ ಇಲ್ಲ. ಅಪಾರವೂ, ಮಹಾಘೋರವೂ, ಭಯಂಕರವೂ, ದುಸ್ತರವೂ, ದುರ್ಗಮವೂ ಆಗಿರುತ್ತದೆ.

ದುಃಸಹಂ ಯದ್ ದುರಂತಂ ಚ ದುರ್ನಿರೀಕ್ಷಂ ದುರಾಸದಮ್ ।
ದುರಾಪಮತಿದುರ್ಗಂ ಚ ಪಾಪಿಷ್ಠಾನಾಂ ನರೋತ್ತಮ ॥೨೭॥

ಸಹಿಸಲು ಅಸಾಧ್ಯವಾದ, ದುರಂತವಾದ, ನೋಡಲು ಅಸಹ್ಯವಾದ, ಹೊಂದಲು ಅಶಕ್ಯವಾದ, ಅತ್ಯಂತ ಕಠಿಣವಾದ ಮಾರ್ಗಗಳಲ್ಲಿ ಪಾಪಿಷ್ಠರು ಸಂಚರಿಸುತ್ತಾರೆ.

ಋಷಿಭಿಃ ಕಥ್ಯಮಾನಂ ತತ್ ಪಾರಂಪರ್ಯೇಣ ಪಾರ್ಥಿವ ।
ತ್ರಾಸಂ ಜನಯತಿ ಪ್ರಾಯಃ ಶ್ರೂಯಮಾಣಃ ಕಥಾಸ್ವಪಿ ॥೨೮॥

ಈ ನರಕದ ವರ್ಣನೆಯನ್ನು ಋಷಿಗಳು ತಿಳಿಸುವಾಗ ಯುಧಿಷ್ಠಿರನೇ, ಕಥೆಯನ್ನು ಕೇಳುತ್ತಿರುವ ವ್ಯಕ್ತಿಗಳಿಗೂ ತಡೆಯಲಾರದ ದುಃಖವು ಉಂಟಾಗುತ್ತದೆ.

ಅವಶ್ಯಂ ಚೈವ ಗಂತವ್ಯಸ್ತದಧ್ವಾ ತು ಯುಧಿಷ್ಠಿರ ।
ಪ್ರಾಪ್ತಕಾಲೇನ ಸಂತ್ಯಜ್ಯ ಬಂಧೂನ್ ಭೋಗಾನ್ ಧನಾನಿ ಚ ॥೨೯॥

ಯುಧಿಷ್ಠಿರನೇ, ಕಾಲವು ಸನ್ನಿಹಿತವಾದಾಗ ಬಂಧುಗಳನ್ನೂ, ಭೋಗಗಳನ್ನೂ, ಧನಗಳನ್ನೂ, ಎಲ್ಲವನ್ನೂ ನಿಶ್ಚಿತವಾಗಿ ತ್ಯಜಿಸಿ ಯಮಪುರಿಗೆ ಹೋಗಲೇಬೇಕಾಗಿರುತ್ತದೆ.

ಜರಾಯುಜೈರಂಡಜೈಶ್ಚ ಸ್ವೇದಜೈರುದ್ಭಿಜ್ಜೈಸ್ತಥಾ ।
ಜಂಗಮೈಃ ಸ್ಥಿರಸಂಜ್ಞೈಶ್ಚ ಗಂತವ್ಯಂ ಹಿ ಯಮಾಲಯಮ್ ॥೩೦॥

ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ, ಜಂಗಮ, ಸ್ಥಾವರ ಎಲ್ಲ ಪ್ರಾಣಿಗಳೂ ಈ ಯಮಪುರಿಗೆ ಹೋಗಲೇಬೇಕು.

ದೇವಾಸುರೈರ್ಮನುಷ್ಯಾದ್ಯೈರ್ಯೈರ್ಯೈರ್ವಸ್ತವಶಾನುಗೈಃ ।
ಸ್ತ್ರೀಪುಂನಪುಂಸಕೈಶ್ಚಾಪಿ ಪೃಥಿವ್ಯಾಂ ಜೀವಸಂಜ್ಞಿತೈಃ ॥೩೧॥

ಮಧ್ಯಮೈರ್ಯುವಭಿಶ್ಚಾಪಿ ಬಾಲೈರ್ವೃದ್ಧೈಸ್ತಥೈವ ಚ ।
ಜಾತಮಾತ್ರೈಶ್ಚ ಗರ್ಭಸ್ಥೈರ್ಗಂತವ್ಯಃ ಸ ಮಹಾಪಥಃ ॥೩೨॥

ಜೀವ ಎಂದು ಹೆಸರನ್ನು ಪಡೆದ ದೇವತೆಗಳೇ ಆಗಲಿ, ಅಸುರರೇ ಆಗಲಿ, ಮನುಷ್ಯರೇ ಆಗಲಿ, ಸ್ತ್ರೀ-ಪುರುಷ-ನಪುಂಸಕರೇ ಆಗಲಿ, ವೃದ್ಧರೇ ಆಗಲಿ, ತರುಣರೇ ಆಗಲಿ, ಹುಟ್ಟಿದ ಶಿಶುವೇ ಆಗಲಿ, ಗರ್ಭಸ್ಥ ಶಿಶುವೇ ಆಗಲಿ, ಜೀವಸಂಜ್ಞೆ ಹೊಂದಿರುವ ಎಲ್ಲರೂ ಈ ಯಮಪುರಿಗೆ ಒಂದು ದಿನ ಪ್ರಯಾಣ ಬೆಳೆಸಲೇಬೇಕು.

ಪೂರ್ವಾಹ್ಣೇ ವಾऽಪರಾಹ್ಣೇ ವಾ ಸಂಧ್ಯಾಕಾಲೇऽಥವಾ ಪುನಃ ।
ಪ್ರದೋಷೇ ವಾऽರ್ಧರಾತ್ರೇ ವಾ ಪ್ರತ್ಯೂಷೇ ವಾऽಪ್ಯುಪಸ್ಥಿತೇ ॥೩೩॥

ಪೂರ್ವಾಹ್ಣದಲ್ಲಿ, ಅಪರಾಹ್ಣದಲ್ಲಿ, ಸಂಧ್ಯಾಕಾಲಗಳಲ್ಲಿ, ಪ್ರದೋಷಕಾಲಗಳಲ್ಲಿ, ಅರ್ಧರಾತ್ರಿಯಲ್ಲಿ, ಮುಂಜಾನೆಯಲ್ಲಿ, ಸಮಸ್ತ ಸಮಯದಲ್ಲಿಯೂ ಯಮಪುರಿಗೆ ಹೋಗುವವರು ಇದ್ದೇ ಇರುತ್ತಾರೆ.

ಪ್ರವಾಸಸ್ಥೈರ್ವನಸ್ಥೈರ್ವಾ ಪರ್ವತಸ್ಥೈರ್ಜಲಸ್ಥಿತೈಃ ।
ಕ್ಷೇತ್ರಸ್ಥೈರ್ವಾ ನಭಃಸ್ಥೈರ್ವಾ ಗೃಹಮಧ್ಯಗತೈರಪಿ ॥೩೪॥

ಭುಂಜದ್ಭಿರ್ವಾ ಪಿಬದ್ಭಿರ್ವಾ ಖಾದದ್ಭಿರ್ವಾ ನರೋತ್ತಮ ।
ಆಸೀನೈರ್ವಾ ಸ್ಥಿತೈರ್ವಾऽಪಿ ಶಯನೀಯಗತೈರಪಿ ॥೩೫॥

ಜಾಗ್ರದ್ಭಿರ್ವಾ ಪ್ರಸುಪ್ತೈರ್ವಾ ಗಂತವ್ಯಃ ಸ ಮಹಾಪಥಃ ॥೩೬॥

ಪ್ರಯಾಣ ಬೆಳೆಸುವವರು, ಕಾಡಿನಲ್ಲಿರುವವರು, ಪರ್ವತದಲ್ಲಿರುವವರು, ನೀರಿನ ಮಧ್ಯದಲ್ಲಿರುವವರು, ಕ್ಷೇತ್ರದಲ್ಲಿರುವವರು, ಅಂತರಿಕ್ಷದಲ್ಲಿರುವವರು, ಗೃಹದ ಮಧ್ಯದಲ್ಲಿರುವವರು, ಊಟಮಾಡುವವರು, ನೀರು ಕುಡಿಯುವವರು, ಭಕ್ಷ್ಯಗಳನ್ನು ತಿನ್ನುವವರು, ಕುಳಿತವರು, ನಿಂತವರು, ಮಲಗಿದವರು, ಎಚ್ಚರದಲ್ಲಿರುವವರು, ಗಾಢವಾಗಿ ನಿದ್ರಿಸುತ್ತಿರುವವರು ಎಲ್ಲರೂ ಆಯಾ ಕಾಲಗಳಲ್ಲಿ ಆಯಾ ಅವಸ್ಥೆಗಳಲ್ಲಿಯೇ ಈ ದೇಹವನ್ನು ತ್ಯಜಿಸಿ ಯಮಮಾರ್ಗದಲ್ಲಿ ಸಾಗುತ್ತಾರೆ.

ಮೃತ್ಯುದೂತೈರ್ದುರಾಧರ್ಷೈಃ ಪ್ರಚಂಡೈಶ್ಚಂಡವಿಕ್ರಮೈಃ ।
ಆಕ್ಷಿಪ್ಯಮಾಣಾ ವಿವಶಂ ಯಾಂತಿ ಶೀಘ್ರಂ ಯಮಾಲಯಮ್ ॥೩೭॥

ಸಹಿಸಲು ಅಸಾಧ್ಯವಾದ, ಪ್ರಚಂಡರಾದ ಚಂಡವಿಕ್ರಮರೆನಿಸಿದ ಮೃತ್ಯುದೂತರಿಂದ ಬಂಧಿತರಾದ ಜೀವರು ಅಸ್ವತಂತ್ರರಾಗಿ ಯಮಪುರಿಯನ್ನು ಕುರಿತು ಸಾಗುತ್ತಾರೆ.

ಕ್ವಚಿದ್ ಭೀತೈಃ ಕ್ವಚಿತ್ ತ್ರಸ್ತೈಃ ಪ್ರಸ್ಖಲದ್ಭಿಃ ಕ್ವಚಿತ್ ಕ್ವಚಿತ್ ।
ಕ್ರಂದದ್ಭಿರ್ವೇದನಾರ್ತೈಸ್ತು ಗಂತವ್ಯಂ ಯಮಸಾದನಮ್ ॥೩೮॥

ಕೆಲವರು ಹೆದರಿ ನಡುಗುತ್ತಿರುತ್ತಾರೆ. ಕೆಲವರು ಹೆದರಿಕೆಯಿಂದ ಎಡವಿ ಬೀಳುತ್ತಿರುತ್ತಾರೆ. ಕೆಲವರು ಕಿರುಚಿಕೊಳ್ಳುತ್ತಿರುತ್ತಾರೆ. ವೇದನೆಯಿಂದ ನಾನಾ ಅವಸ್ಥೆಗಳನ್ನು ಹೊಂದುತ್ತಾ ಇದ್ದರೂ ಈ ಯಮಪುರಿಗೆ ಸಾಗಲೇಬೇಕಾಗುತ್ತದೆ.

ನಿರ್ಭರ್ತ್ಸ್ಯಮಾನೈರುದ್ವಿಗ್ನೈರ್ವಿಧೃತೈರ್ಭಯವಿಹ್ವಲೈಃ ।
ಕಲ್ಪ್ಯಮಾನಶರೀರೈಸ್ತು ಗಂತವ್ಯಂ ಸ್ತ್ರೀಜಿತೈಃ ಸದಾ ॥೩೯॥

ಯಮಕಿಂಕರರಿಂದ ಹೆದರಿಸಲ್ಪಟ್ಟವರಾಗಿ, ಉದ್ವಿಗ್ನತೆಯನ್ನು ಹೊಂದಿದವರಾಗಿ, ಹೊಡೆಯಲ್ಪಟ್ಟವರಾಗಿ, ಭಯದಿಂದ ಸಂಕಟ ಹೊಂದಿದವರಾಗಿ, ಅನೇಕ ಶರೀರ ಬಂಧನಗಳನ್ನು ಹೊಂದಿದವರಾಗಿ ಯಮಪುರಿಗೆ ಹೋಗಲೇಬೇಕಾಗುತ್ತದೆ. ಸ್ತ್ರೀಜಿತರು ಇಂದಿಗೂ ಈ ನರಕಕ್ಕೆ ನಿಶ್ಚಿತವಾಗಿಯೂ ತೆರಳುತ್ತಾರೆ.

ಕಂಟಕಾಕೀರ್ಣಮಾರ್ಗೇಣ ತಪ್ತವಾಲುಕಪಾಂಸುನಾ ।
ದಹ್ಯಮಾನೈಸ್ತು ಗಂತವ್ಯೋ ನರೈರ್ದಾನವಿವರ್ಜಿತೈಃ ॥೪೦॥

ಮುಳ್ಳುಗಳಿಂದ ತುಂಬಿದ ಮಾರ್ಗದಲ್ಲಿ, ಬಿಸಿಯಾದ ಮರಳುಗಳಿಂದ ತುಂಬಿದ ಮಾರ್ಗದಲ್ಲಿ, ಬಿಸಿಯಿಂದ ದಹಿಸಿಕೊಳ್ಳುತ್ತಾ ದಾನ-ಧರ್ಮಗಳನ್ನು ಮಾಡದೆ ಇರುವ ವ್ಯಕ್ತಿಗಳು ಸಾಗಲೇಬೇಕಾಗುತ್ತದೆ.

ಕಾಷ್ಠೋಪಲಶಿಲಾಘಾತೈರ್ದಂಡೋಲ್ಮುಕಕಶಾಂಕುಶೈಃ ।
ಹನ್ಯಮಾನೈರ್ಯಮಪುರಂ ಗಂತವ್ಯಂ ಧರ್ಮವರ್ಜಿತೈಃ ॥೪೧॥

ಧರ್ಮಹೀನರಾದ ಜೀವರು ಕಟ್ಟಿಗೆ, ಕಲ್ಲು, ದಂಡ, ಚಾವಟಿ, ಅಂಕುಶ ಮುಂತಾದವುಗಳಿಂದ ಯಮಕಿಂಕರರಿಂದ ಪೆಟ್ಟುತಿನ್ನುತ್ತಾ ಯಮನ ಪಟ್ಟಣಕ್ಕೆ ಪ್ರಯಾಣ ಬೆಳೆಸುತ್ತಾರೆ.

ಮೇದಃ ಶೋಣಿತಪೂಯಾದ್ಯೈರ್ವಕ್ತ್ರೈರ್ಗಾತ್ರೈಶ್ಚ ಸವ್ರಣೈಃ ।
ದಗ್ಧಕ್ಷತವ್ರಣಾಕೀರ್ಣೈರ್ಗಂತವ್ಯಂ ಜೀವಘಾತಕೈಃ ॥೪೨॥

ಜೀವಹತ್ಯೆ ಮಾಡಿದವರು ಮೇಧಸ್ಸು, ರಕ್ತ, ಮಲ ಇವುಗಳಿಂದ ತುಂಬಿದ ಮುಖವುಳ್ಳವರಾಗಿ, ಮೈತುಂಬ ಗಾಯಗಳಿಂದ ಕೂಡಿದವರಾಗಿ, ಸುಡಲ್ಪಟ್ಟ ದೇಹವುಳ್ಳವರಾಗಿ, ತುಂಡರಿಸಲ್ಪಟ್ಟ ಅವಯವವುಳ್ಳವರಾಗಿ ಮಾರಣಾಂತಿಕವಾದ ಗಾಯಗಳಿಂದ ಶಿಕ್ಷೆಯನ್ನು ಅನುಭವಿಸುತ್ತಾ ಯಮಪುರಿಗೆ ಸಾಗಲೇಬೇಕಾಗುತ್ತದೆ.

ಕ್ರಂದದ್ಭಿಶ್ಚ ರುದದ್ಭಿಶ್ಚ ಕ್ರೋಶದ್ಭಿಶ್ಚಾಪಿ ವಿಸ್ವರಮ್ ।
ವೇದನಾರ್ತೈಃ ಪತದ್ಭಿಶ್ಚ ಗಂತವ್ಯಂ ಜೀವಘಾತಕೈಃ ॥೪೩॥

ಜೀವಘಾತಕರು ಯಮಪುರಿಗೆ ಸಾಗುವಾಗ ಯಮಕಿಂಕರರ ಅಂಕುಶದ ಪ್ರಹಾರದಿಂದ ಕೆಲವರು ಕಿರುಚಿಕೊಳ್ಳುತ್ತಾರೆ, ವಿಕಾರದ ಧ್ವನಿಯಿಂದ ಅಳುತ್ತಾರೆ, ಜೋರಾಗಿ ಒದರುತ್ತಾರೆ. ವೇದನೆಯಿಂದ ಆರ್ತರಾಗಿ ಬೀಳುತ್ತಾ, ಏಳುತ್ತಾ ಯಮಲೋಕದ ಮಾರ್ಗದಲ್ಲಿ ಸಾಗಲೇಬೇಕಾಗುತ್ತದೆ.

ಭಗ್ನಪಾದೋರುಹಸ್ತಾಂಗೈರ್ಭಗ್ನದಂತಶಿರೋಧರೈಃ ।
ಛಿನ್ನಕರ್ಣೋಷ್ಠನಾಸೈಶ್ಚ ಗಂತವ್ಯಂ ಜೀವಘಾತಕೈಃ ॥೪೪॥

ಜೀವಘಾತಕರು ತುಂಡಾದ ಕೈ-ಕಾಲುಗಳಿಂದ, ತುಂಡಾದ ಹಲ್ಲು-ಕುತ್ತಿಗೆಗಳಿಂದ, ತುಂಡಾದ ಕಿವಿ- ತುಟಿ-ಮೂಗುಗಳಿಂದ ನರಕಲೋಕಕ್ಕೆ ಪ್ರಯಾಣ ಬೆಳೆಸುತ್ತಾರೆ.

ಶಕ್ತಿಭಿರ್ಭಿಂಡಿಪಾಲೈಶ್ಚ ಶಂಕುತೋಮರಸಾಯಕೈಃ ।
ತುದ್ಯಮಾನೈಸ್ತು ಶೂಲಗ್ರೈರ್ಗಂತವ್ಯಂ ಜೀವಘಾತಕೈಃ ॥೪೫॥

ಜೀವಘಾತಕರು ಹೋಗುತ್ತಿರುವಾಗ ಶಕ್ತಿ-ಭಿಂಡಿಪಾಲ-ಶಂಕು-ತೋಮರ-ಬಾಣ-ತ್ರಿಶೂಲಾಗ್ರ ಇವುಗಳಿಂದ ಪ್ರಹಾರವನ್ನು ತಿನ್ನುತ್ತಾ ಯಮಲೋಕಕ್ಕೆ ಸಾಗಬೇಕಾಗುತ್ತದೆ.

ಶ್ವಭಿರ್ವ್ಯಾಘ್ರೈರ್ವೃಕೈಃ ಕಂಕೈರ್ಭಕ್ಷ್ಯಮಾಣಾಃ ಸಮಂತತಃ ।
ತುದ್ಯಮಾನಾಶ್ಚ ಗಚ್ಛಂತಿ ರಾಕ್ಷಸೈರ್ಮಾಂಸಖಾದಿಭಿಃ ॥೪೬॥

ಇಷ್ಟು ಮಾತ್ರವಲ್ಲದೆ, ನಾಯಿಗಳು, ಹುಲಿಗಳು, ತೋಳಗಳು, ಕಾಗೆಗಳು ಎಲ್ಲ ಕಡೆಯಿಂದಲೂ ಆಗಮಿಸಿ ಸಾಗುವ ವ್ಯಕ್ತಿಯನ್ನು ಚುಚ್ಚಿ ತಿನ್ನುತ್ತಿರುತ್ತವೆ. ಮಾಂಸವನ್ನು ಕತ್ತರಿಸುವ ರಾಕ್ಷಸರು ಯಮಪುರಿಯ ಮಾರ್ಗದಲ್ಲಿ ಪೀಡಿಸುತ್ತಾರೆ.

ಮಹಿಷೈಶ್ಚ ಮೃಗೈಶ್ಚಾಪಿ ಸೂಕರೈರ್ಜಂಬುಕೈಸ್ತಥಾ ।
ಭಕ್ಷ್ಯಮಾಣೈಸ್ತದಧ್ವಾನಂ ಗಂತವ್ಯಂ ಮಾಂಸಖಾದಿಭಿಃ ॥೪೭॥

ಮಾಂಸಗಳನ್ನು ತಿನ್ನುತ್ತಿದ್ದ ಜೀವನನ್ನು ಯಮಮಾರ್ಗದಲ್ಲಿ ಎಮ್ಮೆಗಳು, ಮೃಗಗಳು, ಹಂದಿಗಳು, ನರಿಗಳು ಕಿತ್ತು ತಿನ್ನುತ್ತಿರುತ್ತವೆ. ಇಂತಹ ಯಮಮಾರ್ಗದಲ್ಲಿ ದಾರುಣವಾದ ವೇದನೆಯನ್ನು ಅನುಭವಿಸುತ್ತಾ ಸಾಗಬೇಕಾಗುತ್ತದೆ.

ಸೂಚೀಸುತೀಕ್ಷ್ಣತುಂಡಾಭಿರ್ಮಕ್ಷಿಕಾಭಿಃ ಸಮಂತತಃ ।
ತುದ್ಯಮಾನೈಶ್ಚ ಗಂತವ್ಯಂ ಪಾಪಿಷ್ಠೈರ್ಬಾಲಘಾತಕೈಃ ॥೪೮॥

ಬಾಲಕರನ್ನು ಕೊಲೆ ಮಾಡಿದ ಪಾಪಿಷ್ಠರನ್ನು ಸೂಜಿಯಂತೆ ತೀಕ್ಷ್ಣವಾದ ಮುಖಾಗ್ರಗಳನ್ನು ಹೊಂದಿರುವ ನೊಣಗಳು ಎಲ್ಲ ಕಡೆಯಿಂದಲೂ ಮುತ್ತಿಕೊಂಡು ಪೀಡಿಸುತ್ತವೆ. ಅವುಗಳ ಪೀಡೆಯನ್ನು ಸಹಿಸಿಕೊಂಡು ಜೀವಿಯು ಸಾಗಬೇಕಾಗುತ್ತದೆ.

ವಿಶ್ವಸ್ತಂ ಸ್ವಾಮಿನಂ ವಿಪ್ರಂ ಸ್ತ್ರಿಯಂ ವಾ ಘ್ನಂತಿ ಯೇ ನರಾಃ ।
ಶಸ್ತ್ರೈರ್ನಿರ್ಭಿದ್ಯಮಾನೈಸ್ತು ಗಂತವ್ಯಂ ತೈರ್ಯಮಕ್ಷಯಮ್ ॥೪೯॥

ಬ್ರಾಹ್ಮಣನನ್ನು, ವಿಶ್ವಾಸವನ್ನಿಟ್ಟುಕೊಂಡಿರುವ ಸ್ವಾಮಿಯನ್ನು, (ಮಿತ್ರನನ್ನು), ಸ್ತ್ರೀಯನ್ನು ಯಾರು ಕೊಲೆ ಮಾಡಿರುತ್ತಾರೋ ಅಂತಹ ವ್ಯಕ್ತಿಗಳು ಯಮಕಿಂಕರರ ಶಸ್ತ್ರಗಳಿಂದ ಸೀಳಿಸಿಕೊಳ್ಳುತ್ತಾ ಯಮಲೋಕಕ್ಕೆ ಸಾಗಬೇಕಾಗುತ್ತದೆ.

ಘಾತಯಂತಿ ಚ ಯೇ ಜೀವಾನ್ ದುಃಖಮಾಪಾದಯಂತಿ ಚ ।
ರಾಕ್ಷಸೈಶ್ಚ ಪಿಶಾಚೈಶ್ಚ ಭಕ್ಷ್ಯಮಾಣಾ ವ್ರಜಂತಿ ತೇ ॥೫೦॥

ಯಾರು ಇತರ ಪ್ರಾಣಿಗಳನ್ನು ಮಾಂಸದಾಸೆಯಿಂದ ಕೊಲ್ಲುತ್ತಾರೋ, ಅವುಗಳಿಗೆ ದುಃಖವನ್ನುಂಟು ಮಾಡುತ್ತಾರೋ ಅವರನ್ನು ರಾಕ್ಷಸರು, ಪಿಶಾಚರು ಯಮ ಮಾರ್ಗದಲ್ಲಿ ಕಿತ್ತು ಕಿತ್ತು ತಿನ್ನುತ್ತಾರೆ. ಅವರಿಂದ ತಿನ್ನಿಸಿಕೊಂಡೇ ಮುಂದೆ ಸಾಗಬೇಕು.

ಯೇ ಹರಂತೀಹ ವಸ್ತ್ರಾಣಿ ಶಯ್ಯಾಂ ಪ್ರಾವರಣಾನಿ ಚ ।
ತೇ ಯಾಂತಿ ವಿದ್ರುತಾ ನಗ್ನಾಃ ಪಿಶಾಚಾ ಇವ ತತ್ಪಥಮ್ ॥೫೧॥

ಯಾರು ಮತ್ತೊಬ್ಬರ ಬಟ್ಟೆಗಳನ್ನೂ, ಹಾಸಿಗೆ ಹೊದ್ದಿಗೆಗಳನ್ನು ಅಪಹರಿಸಿರುತ್ತಾರೋ ಅವರು ಪಿಶಾಚಿಗಳಂತೆ ನಗ್ನರಾಗಿ ಯಮಲೋಕದ ಕಡೆ ಓಡಿಹೋಗುತ್ತಾರೆ.

ಗಾಶ್ಚ ಧಾನ್ಯಂ ಹಿರಣ್ಯಂ ವಾ ಬಲಾತ್ ಕ್ಷೇತ್ರಂ ಗೃಹಂ ತಥಾ ।
ಯೇ ಹರಂತಿ ದುರಾತ್ಮಾನಃ ಪರಸ್ವಂ ಪಾಪಕಾರಿಣಃ ॥೫೨॥

ಪಾಷಾಣೈರುಲ್ಮುಕೈರ್ದಂಡೈಃ ಕಾಷ್ಠಘಾತೈಶ್ಚ ಜರ್ಝರೈಃ ।
ಹನ್ಯಮಾನೈಃ ಕ್ಷತಾಕೀರ್ಣೈರ್ಗಂತವ್ಯಂ ತೈರ್ಯಮಾಲಯಮ್ ॥೫೩॥

ಯಾರು ಗೋವುಗಳು, ಧಾನ್ಯ, ಸುವರ್ಣ, ಕ್ಷೇತ್ರ, ಗೃಹ ಇವೇ ಮೊದಲಾದ ಬೇರೆಯವರ ಸಂಪತ್ತನ್ನು ಬಲಾತ್ಕಾರದಿಂದ ಅಪಹರಿಸಿರುತ್ತಾರೋ ಅಂತಹ ಪಾಪಿಷ್ಠರು ಯಮಕಿಂಕರರಿಂದ ಕಲ್ಲು-ಪಂಜು-ದಂಡ-ಕಟ್ಟಿಗೆ ಇವುಗಳಿಂದ ಹೊಡೆಯಲ್ಪಟ್ಟು ಗಾಯಗೊಂಡ ಶರೀರವುಳ್ಳವರಾಗಿ ಯಮಾಲಯಕ್ಕೆ ಸಾಗುತ್ತಾರೆ.

ಬ್ರಹ್ಮಸ್ವಂ ಯೇ ಹರಂತೀಹ ನರಾ ನರಕಪಾತಿನಃ ।
ಆಕ್ರೋಶಂತೀಹ ಯೇ ನಿತ್ಯಂ ಪ್ರಹರಂತಿ ಚ ಯೇ ದ್ವಿಜಾನ್ ॥೫೪॥

ಶುಷ್ಕಕಂಠಾ ನಿಬದ್ಧಾಸ್ತೇ ಛಿನ್ನಜಿಹ್ವಾಕ್ಷಿನಾಸಿಕಾಃ ।
ಪೂಯಶೋಣಿತದುರ್ಗಂಧಾ ಭಕ್ಷ್ಯಮಾಣಾಶ್ಚ ಜಂಬುಕೈಃ ॥೫೫॥

ಯಾರು ಬ್ರಾಹ್ಮಣರ ಸ್ವತ್ತನ್ನು ನರಕದ ಭಯವನ್ನು ಬಿಟ್ಟು ಅಪಹರಿಸಿರುತ್ತಾರೋ, ಬ್ರಾಹ್ಮಣರನ್ನು ನಿಂದಿಸಿರುತ್ತಾರೋ, ಹೊಡೆದಿರುತ್ತಾರೋ ಅಂತಹವರು ಯಮಲೋಕಕ್ಕೆ ಸಾಗುವಾಗ ಒಣಗಿದ ಕಂಠವುಳ್ಳವರಾಗಿ ಯಮಕಿಂಕರರಿಂದ ಬಂಧಿತರಾಗಿ, ನಾಲಿಗೆ-ಕಣ್ಣು-ಮೂಗುಗಳನ್ನು ತುಂಡರಿಸಿಕೊಂಡು ಸಾಗುತ್ತಾರೆ. ಅವರ ಶರೀರದಿಂದ ರಕ್ತ-ಕೀವು-ದುರ್ಗಂಧಗಳು ಹೊರಹೊಮ್ಮುತ್ತಿರುತ್ತವೆ. ಗುಳ್ಳೆನರಿಗಳು ಅವರನ್ನು ಕಿತ್ತು ತಿನ್ನುತ್ತಿರುತ್ತವೆ.

ಚಂಡಾಲೈರ್ನಿರ್ಘೃಣೈಶ್ಚಂಡೈಸ್ತುದ್ಯಮಾನಾಃ ಸಮಂತತಃ ।
ಕ್ರೋಶಂತಃ ಕರುಣಂ ಘೋರಂ ಗಚ್ಛಂತಿ ಯಮಸಾದನಮ್ ॥೫೬॥

ಕೋಪಿಷ್ಠರಾದ, ಭಯಂಕರರಾದ ಚಂಡಾಲರು ಎಲ್ಲ ಕಡೆಯಿಂದಲೂ ಅವರನ್ನು ಹಿಂಸಿಸುತ್ತಾರೆ. ಇದರಿಂದ ಕರುಣಾಜನಕವಾದ ಧ್ವನಿಯಲ್ಲಿ ಕಿರುಚುತ್ತಾ ಯಮಲೋಕಕ್ಕೆ ಸಾಗುತ್ತಾರೆ.

ತತ್ರೈವ ಪತಿತಾಃ ಪಾಪಾ ವಿಷ್ಠಾಕೂಪೇಷ್ವನೇಕಶಃ ।
ಮಜ್ಜಂತೇ ವರ್ಷಕೋಟೀಸ್ತು ಕ್ಲಿಶ್ಯಂತೋ ವೇದನಾರ್ದಿತಾಃ ॥೫೭॥

ಯಮಲೋಕದ ಪ್ರವೇಶದ ಬಳಿಕ ಆ ಪಾಪಿಷ್ಠರನ್ನು ಅನೇಕ ಮಲಗಳು ತುಂಬಿದ ಬಾವಿಗಳಿಗೆ ತಳ್ಳುತ್ತಾರೆ. ಅಲ್ಲಿ ಅವರು ನಾನಾ ವಿಧವಾದ ವೇದನೆಗಳನ್ನು ಕೋಟಿ ಕೋಟಿ ವರ್ಷಗಳ ತನಕ ಹೊಂದುತ್ತಾ ಜೀವಿಸಬೇಕಾಗುತ್ತದೆ.

ತತಶ್ಚ ಮುಕ್ತಾಃ ಕಾಲೇನ ಲೋಕೇ ಚಾಸ್ಮಿನ್ ನರಾಧಮಾಃ ।
ವಿಷ್ಠಾಕ್ರಿಮಿತ್ವಂ ಗಚ್ಛಂತಿ ಜನ್ಮಕೋಟಿಶತಂ ನೃಪ ॥೫೮॥

ಅನೇಕ ಕೋಟಿ ವರ್ಷಗಳ ಬಳಿಕ ನರಕದಿಂದ ಮುಕ್ತರಾದ ಪಾಪಿಷ್ಠರು ಲೋಕದಲ್ಲಿ ಮಲದಲ್ಲಿಯೇ ಕ್ರಿಮಿಯಾಗಿ ಹುಟ್ಟಿ, ನೂರು ಕೋಟಿ ವರ್ಷಗಳನ್ನು ಅದೇ ಅವಸ್ಥೆಯಲ್ಲಿಯೇ ಕಳೆಯಬೇಕಾಗುತ್ತದೆ.

ವಿದ್ಯಮಾನಧನೈರ್ಯೈಸ್ತು ಲೋಭಡಂಭಾನೃತಾನ್ವಿತೈಃ ।
ಶ್ರೋತ್ರಿಯೇಭ್ಯೋ ನ ದತ್ತಾನಿ ದಾನಾನಿ ಬಹುಧಾ ನೃಪ ॥೫೯॥

ಗ್ರೀವಾಪಾಶನಿಬದ್ಧಾಸ್ತೇ ಹನ್ಯಮಾನಾಶ್ಚ ರಾಕ್ಷಸೈಃ ।
ಕ್ಷುತ್ತಿಪಾಸಾಶ್ರಮಾರ್ತಾಸ್ತು ಯಾಂತಿ ಪ್ರೇತಪುರಂ ನರಾಃ ॥೬೦॥

ಯಾರು ಈ ಜನ್ಮದಲ್ಲಿ ದಾನ ಮಾಡುವ ಅರ್ಹತೆಯಿದ್ದರೂ ದಾನ ಮಾಡುವುದಿಲ್ಲವೋ, ಲೋಭ, ಡಂಭ, ಸುಳ್ಳುಗಳಿಂದ ಶ್ರೋತ್ರಿಯರನ್ನು ವಂಚಿಸಿ ದಾನಗಳನ್ನು ನೀಡದೆ ಪಾಪಿಗಳಾಗಿ ಬದುಕುತ್ತಾರೋ ಅವರು ಕುತ್ತಿಗೆಯಲ್ಲಿ ಯಮಪಾಶಗಳಿಂದ ಕಟ್ಟಲ್ಪಟ್ಟವರಾಗಿ, ರಾಕ್ಷಸರಿಂದ ಕೊಲ್ಲಲ್ಪಟ್ಟವರಾಗಿ, ಹಸಿವು-ನೀರಡಿಕೆಯಿಂದ ಪೀಡಿತರಾಗಿ ಪ್ರೇತಪುರಿಗೆ ಸಾಗುತ್ತಾರೆ.

ಅದತ್ತದಾನಾ ಗಚ್ಛಂತಿ ಶುಷ್ಕಕಂಠಾಸ್ಯತಾಲುಕಾಃ ।
ಅನ್ನಂ ಪಾನೀಯಸಹಿತಂ ಪ್ರಾರ್ಥಯಂತಃ ಪುನಃ ಪುನಃ ॥೬೧॥

ದಾನ ಮಾಡದ ವ್ಯಕ್ತಿಗಳು ಯಮಲೋಕಕ್ಕೆ ಸಾಗುವಾಗ ಒಣಗಿದ ಕಂಠ, ಮುಖ, ದವಡೆಗಳುಳ್ಳವರಾಗಿ ತಮ್ಮ ಜೊತೆಗಿರುವ ಯಮಭಟರ ಬಳಿ ಪಾನೀಯವನ್ನೂ, ಅನ್ನವನ್ನೂ ಹೆಜ್ಜೆ ಹೆಜ್ಜೆಗೂ ಪ್ರಾರ್ಥಿಸುತ್ತಾರೆ.

ಸ್ವಾಮಿನ್ ಬುಭುಕ್ಷಾತೃಷ್ಣಾರ್ತಾ ಗಂತುಂ ನೈವಾದ್ಯ ಶಕ್ನುಮಃ ।
ಮಮಾನ್ನಂ ದೀಯತಾಂ ಸ್ವಾದು ಪಾನೀಯಂ ದೀಯತಾಮಿತಿ ॥೬೨॥

ಇತಿ ಬ್ರುವಾಣಾಂಸ್ತಾನ್ ದೂತಾಃ ಪ್ರಾಪಯಂತಿ ಯಮಾಲಯಮ್ ॥

ಪ್ರಭುಗಳೇ, ಹಸಿವೆ-ಬಾಯಾರಿಕೆಗಳಿಂದ ಪೀಡಿತರಾಗಿದ್ದೇವೆ. ಮುಂದೆ ಸಾಗಲು ನಮಗೆ ಶಕ್ತಿಯಿಲ್ಲ. ನಮಗೆ ಅನ್ನವನ್ನು ಕೊಡಿರಿ, ನೀರನ್ನು ಕೊಡಿರಿ - ಹೀಗೆ ಬೇಡುತ್ತಾ ದಾನ ಮಾಡದ ದುಃಖದಿಂದ ಯಮಾಲಯವನ್ನು ಸೇರುತ್ತಾರೆ. ಹೀಗೆ ದೈನ್ಯದಿಂದಲೇ ಬೇಡುತ್ತಿರುವವರನ್ನು ಯಮಕಿಂಕರರು ನರಕಲೋಕಕ್ಕೆ ಸೇರಿಸುತ್ತಾರೆ.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ವಿಷ್ಣೋಃ ಪಪಾತ ಭುವಿ ಪಾಂಡವಃ ।
ನಿಃಸಂಜ್ಞೋ ಭಯಸಂತ್ರಸ್ತೋ ನಿಶ್ಚೇಷ್ಟೋ ಭಯವಿಹ್ವಲಃ ॥೬೪॥

ವೈಶಂಪಾಯನ– ಕೃಷ್ಣನ ಈ ಮಾತುಗಳನ್ನು ಕೇಳುತ್ತಿರುವಾಗಲೇ ಧರ್ಮರಾಜನು ಭೂಮಿಯಲ್ಲಿ ಮೂರ್ಛಿತನಾಗಿ ಬಿದ್ದನು. ಪ್ರಜ್ಞಾಶೂನ್ಯನಾದ, ಭಯಗ್ರಸ್ತನಾದ ಯುಧಿಷ್ಠಿರನು ಚೇಷ್ಟಾರಹಿತನಾಗಿ ಭೂಮಿಯಲ್ಲಿ ಬಹಳ ಕಾಲ ಬಿದ್ದಿದ್ದನು.

ತತೋ ಲಬ್ಧ್ವಾ ಶನೈಃಸಂಜ್ಞಾಂ ಸಮಾಶ್ವಸ್ತೋಽಚ್ಯುತೇನ ಸಃ ।
ನೇತ್ರೇ ಪ್ರಕ್ಷಾಲ್ಯ ತೋಯೇನ ಭೂಯಃ ಕೇಶವಮಬ್ರವೀತ್ ॥೬೫॥

ಬಳಿಕ ಎಚ್ಚರಗೊಂಡಿರುವ ಯುಧಿಷ್ಠಿರನನ್ನು ಅಚ್ಯುತನು ಸಮಾಧಾನ ಪಡಿಸಿದನು. ಕಣ್ಣುಗಳನ್ನು ನೀರಿನಿಂದ ತೊಳೆದುಕೊಂಡ ಯುಧಿಷ್ಠಿರನು ಪುನಃ ಕೃಷ್ಣನ ಬಳಿ ಹೀಗೆ ನುಡಿದನು.

ಯುಧಿಷ್ಠಿರಃ

ಭೀತೋಽಸ್ಮ್ಯಹಂ ಮಹಾದೇವ ಶ್ರುತ್ವಾ ಮಾರ್ಗಸ್ಯ ವಿಸ್ತರಮ್ ।
ಕೇನ ದಾನೇನ ತನ್ಮಾರ್ಗಂ ತರಂತಿ ಪುರುಷಾಃ ಸುಖಮ್ ॥೬೬॥

ಯುಧಿಷ್ಠಿರ– ಸರ್ವೋತ್ತಮನಾದ ಶ್ರೀಕೃಷ್ಣನೇ, ವಿಸ್ತಾರವಾಗಿ ನೀನು ಬಣ್ಣಿಸಿರುವ ಯಮಮಾರ್ಗದ ವರ್ಣನೆಯಿಂದ ನಾನು ಭೀತನಾಗಿದ್ದೇನೆ. ಯಾವ ದಾನಗಳಿಂದ ಈ ಘೋರವಾದ ಯಮಮಾರ್ಗವನ್ನು ಮನುಷ್ಯರು ದಾಟಲಾಗುತ್ತದೆ?

ಶ್ರೀಭಗವಾನ್

ಇಹ ಯೇ ಧಾರ್ಮಿಕಾ ಲೋಕೇ ಜೀವಘಾತವಿವರ್ಜಿತಾಃ ।
ಗುರುಶುಶ್ರೂಷಣೇ ಯುಕ್ತಾ ದೇವಬ್ರಾಹ್ಮಣಪೂಜಕಾಃ ॥೬೭॥

ಅಸ್ಮಾನ್ಮಾನುಷ್ಯಲೋಕಾತ್ ತೇ ಸಭಾರ್ಯಾಃ ಸಹಬಾಂಧವಾಃ ।
ಯಮಧ್ವಾನಂ ತು ಗಚ್ಛಂತಿ ಯಥಾವತ್ ತಂ ನಿಬೋಧ ಮೇ ॥೬೮॥

ಶ್ರೀಭಗವಾನ್– ಯಾರು ಈ ಲೋಕದಲ್ಲಿ ಮತ್ತೊಬ್ಬರನ್ನು ಹಿಂಸಿಸದೆ ಧಾರ್ಮಿಕರಾಗಿ ಗುರುಗಳ ಸೇವೆಯಲ್ಲಿಯೇ, ದೇವ-ಬ್ರಾಹ್ಮಣರ ಪೂಜೆಯಲ್ಲಿಯೇ ಆಸಕ್ತರಾಗಿರುತ್ತಾರೋ ಅವರು ಈ ಮನುಷ್ಯಲೋಕದಿಂದ ಬಂಧು-ಬಾಂಧವರು ಪತ್ನಿಯರಿಂದಲೂ ಸಹಿತರಾಗಿ ಯಾವ ಮಾರ್ಗದಲ್ಲಿ ಸಾಗುತ್ತಾರೆ ಎಂಬುದನ್ನು ಹೇಳುತ್ತೇನೆ, ಕ್ರಮವಾಗಿ ವರ್ಣಿಸುವ ನನ್ನ ಮಾತನ್ನು ಕೇಳಿಸಿಕೊ.

ಬ್ರಾಹ್ಮಣೇಭ್ಯಃ ಪ್ರದಾನಾನಿ ನಾನಾರೂಪಾಣಿ ಪಾರ್ಥಿವ ।
ಯೇ ಪ್ರಯಚ್ಛಂತಿ ವಿಪ್ರೇಭ್ಯಸ್ತೇ ಸುಖಂ ಯಾಂತಿ ತತ್ಪಥಮ್ ॥೬೯॥

ರಾಜನೇ, ಬ್ರಾಹ್ಮಣರಿಗೆ ಅನೇಕ ರೀತಿಯ ದಾನಗಳನ್ನು ಯಾರು ಮಾಡುತ್ತಾರೋ ಅವರು ಸುಖವಾದ ಮಾರ್ಗದಲ್ಲಿಯೇ ಸಾಗುತ್ತಾರೆ.

ಅನ್ನಂ ಚ ಯೇ ಪ್ರಯಚ್ಛಂತಿ ಬ್ರಾಹ್ಮಣೇಭ್ಯಃ ಸುಸಂಸ್ಕೃತಮ್ ।
ಶ್ರೋತ್ರಿಯೇಭ್ಯೋ ವಿಶೇಷೇಣ ಭಕ್ತ್ಯಾ ಪರಮಯಾ ಯುತಾಃ ॥೭೦॥

ತೇ ವಿಮಾನೈರ್ಮಹಾತ್ಮಾನೋ ಯಾಂತಿ ಚಿತ್ರೈರ್ಯಮಾಲಯಮ್ ।
ಸೇವ್ಯಮಾನಾ ವರಸ್ತ್ರೀಭಿರಪ್ಸರೋಭಿರ್ಮಹಾಪಥಿ ॥೭೧॥

ಯಾರು ಸುಸಂಸ್ಕೃತವಾದ ಅನ್ನವನ್ನು ಬ್ರಾಹ್ಮಣರಿಗೆ ನೀಡುತ್ತಾರೋ, ವಿಶೇಷವಾದ ಭಕ್ತಿಯಿಂದ ಶ್ರೋತ್ರಿಯರಿಗೆ ನೀಡಿದ ದಾನದ ಮಹಿಮೆಯಿಂದ ಆ ವ್ಯಕ್ತಿಗಳು ಮೃತರಾದ ಬಳಿಕ ಶ್ರೇಷ್ಠರಾದ ಉತ್ತಮ ಸ್ತ್ರೀಯರಿಂದ, ಅಪ್ಸರೆಯರಿಂದ ಸತ್ಕೃತರಾಗಿ ರಾಜಮಾರ್ಗದಲ್ಲಿ ಚಿತ್ರ-ವಿಚಿತ್ರವಾದ ವಿಮಾನಗಳನ್ನು ಏರಿಕೊಂಡು ಯಮ ಲೋಕಕ್ಕೆ ತೆರಳುತ್ತಾರೆ.

ಯೇ ಚ ನಿತ್ಯಂ ಪ್ರಭಾಷಂತೇ ಪ್ರಿಯಂ ನಿಷ್ಕಲ್ಮಷಂ ವಚಃ ।
ತೇ ಚ ಯಾಂತ್ಯಮಲಾಭ್ರಾಭೈಃ ಉದ್ಯಾನೈಃ ವೃಷಯೋಜಿತೈಃ ॥೭೨॥

ಯಾವ ವ್ಯಕ್ತಿಗಳು ದೋಷವಿಲ್ಲದೆ ಇರುವ ಪ್ರಿಯವಾದ ಮಾತುಗಳನ್ನೇ ಆಡಿರುತ್ತಾರೋ ಅಂತಹ ವ್ಯಕ್ತಿಗಳು ನಿರ್ಮಲವಾದ ಕಾಂತಿಯಿಂದ ಕೂಡಿದ, ನಿರ್ಮಲವಾದ ಎತ್ತುಗಳನ್ನು ಕಟ್ಟಿದ ರಥಗಳಲ್ಲಿ ಕುಳಿತುಕೊಂಡು ಸಂಚರಿಸುತ್ತಾರೆ.

ಕಪಿಲಾದೀನಿ ದಾನಾನಿ ಶ್ರದ್ಧಾಯುಕ್ತಾಶ್ಚ ಯೇ ನರಾಃ ।
ಬ್ರಾಹ್ಮಣೇಭ್ಯಃ ಪ್ರಯಚ್ಛಂತಿ ಶ್ರೋತ್ರಿಯೇಭ್ಯೋ ವಿಶೇಷತಃ ॥೭೩॥

ತೇ ಯಾಂತ್ಯಾದಿತ್ಯವರ್ಣಾಭೈರ್ವಿಮಾನೈರ್ಹೇಮಭೂಷಣೈಃ ।
ವೈವಸ್ವತಪುರಂ ರಮ್ಯಮಪ್ಸರೋಭಿರ್ನಿಷೇವಿತಮ್ ॥೭೪॥

ಯಾರು ಶ್ರೋತ್ರಿಯಬ್ರಾಹ್ಮಣರಿಗೆ ಶ್ರದ್ಧೆಯಿಂದ ಕಪಿಲಾ ಮೊದಲಾದ ಗೋವುಗಳನ್ನು ದಾನ ಮಾಡಿರುತ್ತಾರೋ ಅವರು ಸೂರ್ಯಸದೃಶವಾದ ಕಾಂತಿಯಿಂದ ಬೆಳಗುವ ವಿಮಾನಗಳಲ್ಲಿ ಬಂಗಾರಗಳಿಂದ ಅಲಂಕೃತರಾಗಿ, ಅಪ್ಸರಾಸ್ತ್ರೀಯರಿಂದ ಸೇವಿಸಲ್ಪಡುವ ರಮಣೀಯವಾದ ಯಮಪುರಿಗೆ ಸಾಗುತ್ತಾರೆ.

ಉಪಾನಹೌ ಚ ಛತ್ರಂ ಚ ಶಯನಾನ್ಯಾಸನಾನಿ ಚ ।
ವಿಪ್ರೇಭ್ಯೋ ಯೇ ಪ್ರಯಚ್ಛಂತಿ ವಸ್ತ್ರಾಣ್ಯಾಭರಣಾನಿ ಚ ॥೭೫॥

ತೇ ಯಾಂತ್ಯಶ್ವೈರ್ವರ್ಷೈರ್ವಾऽಪಿ ಕುಂಜರೈರಪ್ಯಲಂಕೃತಾಃ ।
ಧನದಸ್ಯ ಪುರಂ ರಮ್ಯಂ ಸೌವರ್ಣಚ್ಛತ್ರಶೋಭಿತಾಃ ॥೭೬॥

ಯಾರು ಶ್ರೇಷ್ಠರಾದ ಶ್ರೋತ್ರಿಯ ಬ್ರಾಹ್ಮಣರಿಗೆ ಪಾದುಕೆಗಳನ್ನು, ಛತ್ರಿಯನ್ನು, ಹಾಸಿಗೆ-ಆಸನಗಳನ್ನು, ವಸ್ತ್ರಾಭರಣಗಳನ್ನು ನೀಡಿರುತ್ತಾರೋ ಅವರು ಕುದುರೆಗಳಲ್ಲಿ, ಎತ್ತುಗಳಲ್ಲಿ, ಆನೆಗಳಲ್ಲಿ ಅಲಂಕೃತವಾದ ವಾಹನಗಳನ್ನು ಏರಿ, ಬಂಗಾರದ ಶ್ವೇತಚ್ಛತ್ರದಿಂದ ಶೋಭಿತರಾಗಿ ಕುಬೇರನ ಪಟ್ಟಣವನ್ನು ಕುರಿತು ಸಾಗುತ್ತಾರೆ.

ಯೇ ಚ ಭಕ್ಷ್ಯಾಣಿ ದಾಸ್ಯಂತಿ ಭೋಜ್ಯಂ ಪೇಯಂ ತಥೈವ ಚ ।
ಸ್ನಿಗ್ಧಾನ್ನಂ ಚಾಪಿ ವಿಪ್ರೇಭ್ಯಃ ಶ್ರದ್ಧಯಾ ಪರಯಾ ಯುತಾಃ ॥೭೭॥

ತೇ ಯಾಂತಿ ಕಾಂಚನೈರ್ಯಾನೈಃ ಸುಖಿಂ ವೈವಸ್ವತಾಲಯಮ್ ।
ವರಸ್ತ್ರೀಭಿರ್ಯುವತಿಭಿಃ ಸೇವ್ಯಮಾನಾಃ ಸಮಂತತಃ ॥೭೮॥

ಯಾರು ಶ್ರೇಷ್ಠರಾದ ಬ್ರಾಹ್ಮಣರಿಗೆ ಭಕ್ಷ್ಯಗಳನ್ನು, ತಿನ್ನುವ ಪದಾರ್ಥಗಳನ್ನು, ಕುಡಿಯುವ ಪದಾರ್ಥಗಳನ್ನು, ರಸಯುಕ್ತವಾದ ತುಪ್ಪದ ಪದಾರ್ಥಗಳನ್ನು ಭಕ್ತಿ ಶ್ರದ್ಧೆಗಳಿಂದ ದಾನ ಮಾಡಿರುತ್ತಾರೋ ಅವರು ಶ್ರೇಷ್ಠರಾದ ಸ್ತ್ರೀಯರಿಂದ ಸೇವ್ಯಮಾನರಾಗಿ ಬಂಗಾರದ ವಾಹನಗಳನ್ನು ಏರಿಕೊಂಡು ಯಮಪುರಿಗೆ ಸಾಗುತ್ತಾರೆ.

ಯೇ ಚ ಕ್ಷೀರಂ ಪ್ರಯಚ್ಛಂತಿ ಘೃತಂ ದಧಿ ಗುಡಂ ಮಧು ।
ಬ್ರಾಹ್ಮಣೇಭ್ಯಃ ಪ್ರಯತ್ನೇನ ಶ್ರದ್ದಧಾನಾಃ ಸುಸಂಸ್ಕೃತಾಃ ॥೭೯॥

ಚಕ್ರವಾಕಪ್ರಯುಕ್ತೈಸ್ತು ಯಾನೈಃ ರುಗ್ಮಮಯೈಃ ಶುಭೈಃ ।
ಯಾಂತಿ ಗಂಧರ್ವವಾದಿತ್ರೈಃ ಸೇವ್ಯಮಾನಾ ಯಮಾಲಯಮ್ ॥೮೦॥

ಯಾರು ಬ್ರಾಹ್ಮಣರಿಗೆ ಪ್ರಯತ್ನಪೂರ್ವಕವಾಗಿ, ಶ್ರದ್ಧೆಯಿಂದ ಸಂಸ್ಕರಿಸಲ್ಪಟ್ಟ ಹಾಲನ್ನು, ತುಪ್ಪವನ್ನು, ಮೊಸರನ್ನು, ಬೆಲ್ಲವನ್ನು, ಜೇನುತುಪ್ಪವನ್ನು ನೀಡಿರುತ್ತಾರೋ ಅವರು ಚಕ್ರವಾಕ ಪಕ್ಷಿಗಳಿಂದ ಸೆಳೆಯಲ್ಪಡುವ ಬಂಗಾರಮಯವಾದ ವಾಹನಗಳನ್ನು ಏರಿಕೊಂಡು, ಗಂಧರ್ವರೇ ಮೊದಲಾದ ಉತ್ತಮ ಪುರುಷರಿಂದ ಸೇವಿಸಲ್ಪಡುತ್ತಾ ಯಮಪುರಿಗೆ ಸಾಗುತ್ತಾರೆ.

ಯೇ ಫಲಾನಿ ಪ್ರಯಚ್ಛಂತಿ ಪುಷ್ಪಾಣಿ ಸುರಭೀಣಿ ಚ ।
ಹಂಸಯುಕ್ತೈರ್ವಿಮಾನೈಸ್ತು ಯಾಂತಿ ಧರ್ಮಪುರಂ ನರಾಃ ॥೮೧॥

ಯಾರು ಶ್ರೇಷ್ಠರಾದ ಬ್ರಾಹ್ಮಣರಿಗೆ ಹಣ್ಣುಗಳನ್ನು, ಪುಷ್ಪಗಳನ್ನು, ಪರಿಮಳ ಭರಿತವಾದ ಫಲಗಳನ್ನು ನೀಡಿರುತ್ತಾರೋ ಅವರು ಹಂಸಯುಕ್ತವಾದ ವಿಮಾನಗಳಿಂದ ಯಮಪುರಿಗೆ ಸಾಗುತ್ತಾರೆ.

ಯೇ ಪ್ರಯಚ್ಛಂತಿ ವಿಪ್ರೇಭ್ಯೋ ವಿವಿಧಾನ್ನಂ ಘೃತಾಪ್ಲುತಮ್ ।
ತೇ ವ್ರಜಂತ್ಯಮಲಾಭ್ರಾಭೈರ್ವಿಮಾನೈರ್ವಾಯುವೇಗಿಭಿಃ ॥೮೨॥

ಯಾರು ಶ್ರೇಷ್ಠರಾದ ಬ್ರಾಹ್ಮಣರಿಗೆ ತುಪ್ಪದಿಂದ ಕೂಡಿದ ಬಗೆಬಗೆಯ ಅನ್ನಗಳನ್ನು ನೀಡಿರುತ್ತಾರೋ ಅವರು ವಾಯುವೇಗದಿಂದ ಸಂಚರಿಸುವ ವಿಮಾನವನ್ನು ಏರಿಕೊಂಡು ಯಮಾಲಯಕ್ಕೆ ಸಾಗುತ್ತಾರೆ.

ಪುರಂ ತತ್ ಪ್ರೇತನಾಥಸ್ಯ ನಾನಾಜನಸಮಾಕುಲಮ್ ॥೮೩॥

ಆ ಪ್ರೇತನಾಥನ ಪುರವಾದರೂ ಅನೇಕ ಜನರಿಂದ ತುಂಬಿಹೋಗಿದೆ.

ಪಾನೀಯಂ ಯೇ ಪ್ರಯಚ್ಛಂತಿ ಸರ್ವಭೂತಪ್ರಜೀವನಮ್ ।
ತೇ ಸುತೃಪ್ತಾಃ ಸುಖಂ ಯಾಂತಿ ವಿಮಾನೈರ್ಹಂಸಚೋದಿತೈಃ ॥೮೪॥

ಯಾರು ಸಮಸ್ತ ಜೀವರಿಗೆ ಜೀವಪ್ರದವಾದ ನೀರನ್ನು ದಾನ ಮಾಡಿರುತ್ತಾರೋ ಅವರು ಸಂತೃಪ್ತರಾಗಿ ಹಂಸಗಳು ಸೆಳೆಯುವ ವಿಮಾನಗಳಲ್ಲಿ ಏರಿಕೊಂಡು ಸಾಗುತ್ತಾರೆ.

ಯೇ ತಿಲಾಂಸ್ತಿಲಧೇನುಂ ವಾ ಘೃತಧೇನುಮಥಾಪಿ ವಾ ।
ಶ್ರೋತ್ರಿಯೇಭ್ಯಃ ಪ್ರಯಚ್ಛಂತಿ ಸೌಮ್ಯಭಾವಸಮನ್ವಿತಾಃ ॥೮೫॥

ಸೋಮಮಂಡಲಸಂಕಾಶೈರ್ಯಾನೈಸ್ತೇ ಯಾಂತಿ ನಿರ್ಮಲೈಃ ।
ಗೀಯಮಾನಾಸ್ತು ಗಂಧರ್ವೈರ್ವೈವಸ್ವತಪುರಂ ನರಾಃ ॥೮೬॥

ಯಾರು ಸೌಮ್ಯಭಾವದಿಂದ ಶ್ರೋತ್ರಿಯ ಬ್ರಾಹ್ಮಣರಿಗೆ ವಿನೀತರಾಗಿ, ಭಕ್ತಿಯಿಂದ ಕೂಡಿದವರಾಗಿ ಎಳ್ಳನ್ನು, ತಿಲಧೇನುವನ್ನೂ, ಘೃತಧೇನುವನ್ನು ದಾನ ಮಾಡಿರುತ್ತಾರೋ ಅವರು ಚಂದ್ರಮಂಡಲದಂತೆ ಹೊಳೆಯುವ ನಿರ್ಮಲವಾದ ವಾಹನಗಳನ್ನು ಏರಿಕೊಂಡು, ಗಂಧರ್ವರಿಂದ ಹೊಗಳಿಸಿಕೊಳ್ಳುತ್ತಾ ಯಮಪುರಿಗೆ ಸಾಗುತ್ತಾರೆ.

ಯೇಷಾಂ ವಾಪ್ಯಶ್ಚ ಕೂಪಾಶ್ಚ ತಟಾಕಾನಿ ಸರಾಂಸಿ ಚ ।
ದೀರ್ಘಿಕಾಃ ಪುಷ್ಕರಿಣ್ಯಶ್ಚ ಸಜಲಾಶ್ಚ ಜಲಾಶಯಾಃ ॥೮೭॥

ಯಾನೈಸ್ತೇ ಯಾಂತಿ ಚಂದ್ರಾಭೈರ್ದಿವ್ಯಘಂಟಾನಿನಾದಿತೈಃ ।
ಚಾಮರೈಸ್ತಾಲವೃಂತೈಶ್ಚ ವೀಜ್ಯಮಾನಾ ಮಹಾಪ್ರಭಾಃ ॥೮೮॥

ನಿತ್ಯತೃಪ್ತಾ ಮಹಾತ್ಮಾನೋ ಗಚ್ಛಂತಿ ಯಮಸಾದನಮ್ ॥೮೯॥

ಯಾರು ನಿರ್ಮಲವಾದ ವಾಪಿ (ಬಾವಿ), ಕೂಪ, ತಟಾಕ, ಸರೋವರ, ವಿಸ್ತಾರವಾದ ಪುಷ್ಕರಿಣಿ, ದೊಡ್ಡ ಜಲಾಶಯಗಳನ್ನು ನಿರ್ಮಿಸಿರುತ್ತಾರೋ ಅವರು ಅನೇಕ ಘಂಟೆಗಳಿಂದ ಅಲಂಕೃತವಾದ, ಚಂದ್ರನಂತೆ ಬೆಳಗುವ, ಮಹಾಪ್ರಭೆಗಳಿಂದ ಕೂಡಿದ ಚಾಮರಗಳನ್ನು ಬೀಸುವ ವ್ಯಕ್ತಿಗಳಿಂದ ಸೇವಿತರಾಗಿ, ಶ್ರೇಷ್ಠವಾದ ವಾಹನಗಳನ್ನು ಏರಿ, ಮಹಾತ್ಮರಾದ ಅವರು ಯಮಪುರಿಗೆ ನಿತ್ಯತೃಪ್ತರಾಗಿ ಸಾಗುತ್ತಾರೆ.

ಯೇಷಾಂ ದೇವಗೃಹಾಣೀಹ ಚಿತ್ರಾಣ್ಯಾಯತನಾನಿ ಚ ।
ಮನೋಹರಾಣಿ ಕಾಂತಾನಿ ದರ್ಶನೀಯಾನಿ ಭಾಂತ್ಯುತ ॥೯೦॥

ತೇ ವ್ರಜಂತ್ಯಮಲಾಭ್ರಾಭೈರ್ವಿಮಾನೈರ್ವಾಯುವೇಗಿಭಿಃ ।
ಪುರಂ ತತ್ ಪ್ರೇತನಾಥಸ್ಯ ನಾನಾಜನಸಮಾಕುಲಮ್ ॥೯೧॥

ಯಾರು ದೇವಮಂದಿರಗಳನ್ನು ಅಲಂಕರಿಸಿ, ವಿಶಾಲವಾಗಿ ರಚಿಸಿರುತ್ತಾರೋ, ಯಾವ ವ್ಯಕ್ತಿಯಿಂದ ನಿರ್ಮಿತ ದೇವಗೃಹಗಳು ನೋಡಲು ಸುಂದರವಾಗಿ ಕಾಣಿಸುತ್ತವೆಯೋ ಅವರು ನಿರ್ಮಲವಾದ, ವಾಯುವೇಗದಿಂದ ಕೂಡಿದ ವಿಮಾನಗಳನ್ನು ಏರಿ ನಾನಾ ಜನರಿಂದ ಅಲಂಕೃತನಾದ ಪ್ರೇತನಾಥನ ಪುರಿಗೆ ಸಾಗುತ್ತಾರೆ.

ವೈವಸ್ವತಂ ಚ ಪಶ್ಯಂತಿ ಸುಖಚಿತ್ತಂ ಸುಖಸ್ಥಿತಮ್ ।
ಯಮೇನ ಪೂಜಿತಾ ಯಾಂತಿ ಯಮಸಾಲೋಕ್ಯತಾಂ ಗತಾಃ ॥೯೨॥

ಅಂತಹ ದೇವತಾರಾಧಕರು ಸುಖದಿಂದ ಕೂಡಿರುವ, ಸುಖವಾಗಿ ಕುಳಿತಿರುವ ಯಮನನ್ನು ನೋಡುತ್ತಾರೆ. ಯಮನಿಂದ ಪೂಜಿತರಾಗುತ್ತಾರೆ. ಯಮನ ಮನೆಯಲ್ಲಿಯೇ ಸುಖ ಹೊಂದುತ್ತಾರೆ.

ಮೃತಾನುದ್ದಿಶ್ಯ ಲೋಕೇಷು ಪ್ರಪಾಸು ಕರಕೋದ್ಧತಮ್ ।
ಶೀತಂ ಸಲಿಲಂ ರಮ್ಯಂ ತೃಷಿತೇಭ್ಯೋ ದಿಶಂತಿ ಯೇ ॥೯೩॥

ತೇ ತು ತೃಪ್ತಿಂ ಪರಾಂ ಪ್ರಾಪ್ತಾಃ ಸುಖಂ ಯಾಂತಿ ಮಹಾಪಥಮ್ ॥

ಯಾರು ಗತಿಸಿದವರನ್ನು ಉದ್ದೇಶಿಸಿ ಬಾವಿಗಳಿಂದ ನೀರನ್ನು ಸೇದಿ ಶೀತಲವಾದ ನೀರನ್ನು ಭೂಮಿಯಲ್ಲಿ ಬಾಯಾರಿದವರಿಗೆ ನೀಡುತ್ತಾರೋ ಅವರು ಯಾರನ್ನು ಉದ್ದೇಶಿಸಿಕೊಂಡು ಬಾಯಾರಿದವರಿಗೆ ನೀರು ನೀಡಿದ್ದಾರೋ ಆ ಪುಣ್ಯದಿಂದ ಯಮಪುರಿಗೆ ಸಾಗುವ ವ್ಯಕ್ತಿಗಳು ತೃಪ್ತಿಯನ್ನು ಹೊಂದುತ್ತಾರೆ.

ಕಾಷ್ಠಪಾದುಕದಾ ಯಾಂತಿ ತದಧ್ವಾನಂ ಸುಖಂ ನರಾಃ ।
ಸುವರ್ಣಮಣಿಪೀಠೇ ತು ಪಾದಂ ಕೃತ್ವಾ ರಥೋತ್ತಮೇ ॥೯೫॥

ಯಾರು ಯಾರ ಹೆಸರಿನಲ್ಲಿ ಮರದಿಂದ ಮಾಡಿದ ಪಾದುಕೆಗಳನ್ನು ದಾನ ಮಾಡಿರುತ್ತಾರೋ, ಅವರು ಶ್ರೇಷ್ಠವಾದ ರಥದಲ್ಲಿ ಕುಳಿತು, ಸುವರ್ಣಪೀಠದಲ್ಲಿ ಪಾದಗಳನ್ನಿಟ್ಟುಕೊಂಡು ಯಮಲೋಕದ ಕಡೆ ಪ್ರಯಾಣ ಬೆಳೆಸುತ್ತಾರೆ.

ಆರಾಮಾನ್ ವೃಕ್ಷಷಂಡಾಂಶ್ಚ ರೋಪಯಂತಿ ಚ ಯೇ ನರಾಃ ।
ಸಂವರ್ಧಯಂತಿ ಚಾವ್ಯಗ್ರಾ ಫಲಪುಷ್ಪೈಶ್ಚ ಶೋಭಿತಾಃ ॥೯೬॥

ವೃಕ್ಷಚ್ಛಾಯಾಸು ರಮ್ಯಾಸು ಶೀತಾಸು ಸ್ವಲಂಕೃತಾಃ ।
ಯಾಂತಿ ತೇ ವಾಹನೈರ್ದಿವ್ಯೈಃ ಪೂಜ್ಯಮಾನಾ ಮುಹುರ್ಮುಹುಃ ॥

ತೋಟಗಳನ್ನು, ವೃಕ್ಷಗಳ ಸಮುದಾಯವನ್ನು ಯಾರು ಬೆಳೆಸಿರುತ್ತಾರೋ, ಅವುಗಳಿಗೆ ಗೊಬ್ಬರ, ನೀರುಗಳನ್ನು ಉಣಿಸುತ್ತಾ, ಚೆನ್ನಾಗಿ ಫಲ-ಪುಷ್ಪಗಳಿಂದ ಶೋಭಾಯಮಾನ- ವಾಗುವಂತೆ ಬೆಳೆಸಿರುತ್ತಾರೋ ಅಂತಹವರು ಆಭೂಷಣಗಳಿಂದ ಅಲಂಕೃತರಾಗಿ, ದಿವ್ಯವಾದ ವಾಹನಗಳಲ್ಲಿ ಕುಳಿತು ದಿವ್ಯಪುರುಷರಿಂದ ಪೂಜಿತರಾಗುತ್ತಾ ಶೀತಲವಾದ ವೃಕ್ಷಗಳ ನೆರಳಿನಲ್ಲಿ ಯಮಲೋಕಕ್ಕೆ ಪ್ರಯಾಣ ಬೆಳೆಸುತ್ತಾರೆ.

ಸುವರ್ಣಂ ರಜತಂ ವಾऽಪಿ ವಿದ್ರುಮಂ ಮೌಕ್ತಿಕಂ ತಥಾ ।
ಯೇ ಪ್ರಯಚ್ಛಂತಿ ತೇ ಯಾಂತಿ ವಿಮಾನೈಃ ಕನಕೋಜ್ಜ್ವಲೈಃ ॥೯೮॥

ಸೇವ್ಯಮಾನಾಃ ಸುರೂಪಾಭಿರಕೃಶಾಭಿಃ ಪ್ರಯತ್ನತಃ ।
ಸ್ತ್ರೀಭಿಃ ಕನಕವರ್ಣಾಭಿರ್ಯಥಾಕಾಮಂ ಯಥಾಸುಖಮ್ ॥೯೯॥

ಯಾರು ಬ್ರಾಹ್ಮಣರಿಗೆ ಬಂಗಾರವನ್ನು, ಬೆಳ್ಳಿಯನ್ನು, ಹವಳ ಮುತ್ತುಗಳನ್ನು ದಾನವಾಗಿ ನೀಡುತ್ತಾರೋ ಅವರು ಬಂಗಾರದಿಂದ ಅಲಂಕೃತವಾದ ವಿಮಾನಗಳಿಂದ, ಸುರೂಪಸ್ತ್ರೀಯರಿಂದ ಸೇವ್ಯಮಾನರಾಗಿ, ಬಂಗಾರದ ಬಣ್ಣದಿಂದ ಬೆಳಗುತ್ತಾ ಯಮಪುರಿಗೆ ಸುಖವಾಗಿ ಪ್ರಯಾಣ ಬೆಳೆಸುತ್ತಾರೆ.

ಅಶ್ವದಾನಂ ತು ಗೋದಾನಂ ಹಸ್ತಿದಾನಮಥಾಪಿ ವಾ ।
ಯೇ ಪ್ರಯಚ್ಛಂತಿ ವಿಪ್ರೇಭ್ಯೋ ವಿಮಾನೈಃ ಕನಕೋಜ್ಜ್ವಲೈಃ ॥೧೦೦॥

ತೇ ವ್ರಜಂತಿ ವರಸ್ತ್ರೀಭಿರ್ಸೇವ್ಯಮಾನಾ ಯಥಾಸುಖಮ್ ॥೧೦೧॥

ಯಾರು ಬ್ರಾಹ್ಮಣರಿಗೆ ಕುದುರೆ, ಹಸು, ಆನೆ ಮೊದಲಾದ ಪ್ರಯಾಣ ಯೋಗ್ಯವಾದ ವಾಹನಗಳನ್ನು ದಾನ ಮಾಡಿರುತ್ತಾರೋ ಅವರು ಸುವರ್ಣಸದೃಶವಾದ ವಿಮಾನದಲ್ಲಿ ಕುಳಿತು ಉತ್ತಮ ಸ್ತ್ರೀಯರಿಂದ ಸೇವ್ಯಮಾನರಾಗಿ ಸುಖವಾಗಿ ಯಮಪುರಿಗೆ ಸೇರುತ್ತಾರೆ.

ಭೂಮಿದಾ ಯಾಂತಿ ತಂ ಲೋಕಂ ಸರ್ವಕಾಮೈಃ ಸುತರ್ಪಿತಾಃ ।
ಉದಿತಾದಿತ್ಯಸಂಕಾಶೈರ್ವಿಮಾನೈಸ್ತೇ ಯಮಾಲಯಮ್ ॥೧೦೨॥

ಯಾರು ಭೂದಾನ ಮಾಡಿರುತ್ತಾರೋ ಅವರು ಸಕಲ ವಿಧವಾದ ಕಾಮನೆಗಳನ್ನೂ ಪಡೆದು, ಬಾಲಸೂರ್ಯಸದೃಶವಾದ ವಿಮಾನಗಳಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ಕನ್ಯಾಂ ಯೇ ಚ ಪ್ರಯಚ್ಛಂತಿ ವಿಪ್ರಾಯ ಶ್ರೋತ್ರಿಯಾಯ ಚ ।
ದಿವ್ಯಕನ್ಯಾವೃತಾ ಯಾಂತಿ ವಿಮಾನೈಸ್ತೇ ಯಮಾಲಯಮ್ ॥೧೦೩॥

ಯಾರು ಶ್ರೇಷ್ಠರಾದ ಬ್ರಾಹ್ಮಣರಿಗೆ ಕನ್ಯಾದಾನವನ್ನು ಮಾಡಿರುತ್ತಾರೋ ಅವರು ದಿವ್ಯಕನ್ಯೆಯರಿಂದ ಆವೃತರಾಗಿ ವಿಮಾನದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ಸುಗಂಧಾನ್ ಗಂಧಸಂಯೋಗಾನ್ ಪುಷ್ಪಾಣಿ ಸುರಭೀಣಿ ಚ ।
ಪ್ರಯಚ್ಛಂತಿ ದ್ವಿಜಾಗ್ರೇಭ್ಯೋ ಭಕ್ತ್ಯಾ ಪರಮಯಾ ಯುತಾಃ ॥೧೦೪॥

ತೇ ಸುಗಂಧಾಃ ಸುವೇಷಾಶ್ಚ ಸುಪ್ರಭಾಃ ಸ್ರಗ್ವಿಭೂಷಿತಾಃ ।
ಯಾಂತಿ ಧರ್ಮಪುರಂ ಯಾನೈರ್ವಿಚಿತ್ರೈರಪ್ಯಲಂಕೃತಾಃ ॥೧೦೫॥

ಯಾರು ಸುಗಂಧಯುಕ್ತವಾದ, ಘಮಘಮಿಸುವ ಪುಷ್ಪಗಳನ್ನು ದಾನವಾಗಿ ನೀಡಿರುತ್ತಾರೋ, ಅವರು ಸುಗಂಧಯುಕ್ತರಾಗಿ, ಸುಂದರವಾಗಿ ಅಲಂಕೃತರಾಗಿ ವಿಚಿತ್ರವಾದ ವಾಹನದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ದೀಪದಾ ಯಾಂತಿ ಯಾನೈಶ್ಚ ದೀಪಯಂತೋ ದಿಶೋ ದಶ ।
ಆದಿತ್ಯಸದೃಶಾಕಾರೈರ್ದೀಪ್ಯಮಾನಾ ಯಥಾಽಗ್ನಯಃ ॥೧೦೬॥

ದೀಪದಾನ ಮಾಡಿದ ಮನುಷ್ಯರು ಸೂರ್ಯನ ತೇಜಸ್ಸಿನಿಂದ ಬೆಳಗುವ ವಿಮಾನದಲ್ಲಿ ಕುಳಿತು ಪ್ರಜ್ವಲಿಸುವ ಪ್ರೇತಾಗ್ನಿಗಳಂತೆ ತಮ್ಮ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗುತ್ತಾ ಯಮಪುರಿಗೆ ಸಾಗುತ್ತಾರೆ.

ಗೃಹಾವಸಥದಾತಾರೋ ಗೃಹೈಃ ಕಾಂಚನವೇದಿಕೈಃ ।
ವ್ರಜಂತಿ ಬಾಲಸೂರ್ಯಾಭೈರ್ಧರ್ಮರಾಜಪುರಂ ನರಾಃ ॥೧೦೭॥

ಯಾರು ಮನೆಗಳನ್ನು, ಆಶ್ರಮಗಳನ್ನು ದಾನವಾಗಿ ನೀಡಿರುತ್ತಾರೋ ಅವರು ಸುವರ್ಣಮಯವಾದ ವೇದಿಕೆಗಳಿಂದ ಕೂಡಿದ, ಬಾಲಸೂರ್ಯಕಾಂತಿಗೆ ಸದೃಶವಾದ ವಿಮಾನದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ಜಲಭಾಜನದಾತಾರಃ ಕುಂಡಿಕಾಕರಕಪ್ರದಾಃ ।
ಪೂಜ್ಯಮಾನಾ ವರಸ್ತ್ರೀಭಿರ್ಯಾಂತಿ ತೃಪ್ತಾ ಮಹಾಗಜೈಃ ॥೧೦೮॥

ಯಾರು ಬ್ರಾಹ್ಮಣರಿಗೆ ನೀರು ತುಂಬುವ ಪಾತ್ರೆಗಳನ್ನು ದಾನ ಮಾಡಿರುತ್ತಾರೋ, ಬುಟ್ಟಿಗಳನ್ನು ದಾನ ಮಾಡಿರುತ್ತಾರೋ ಅವರು ವರಸ್ತ್ರೀಯರಿಂದ ಪೂಜಿತರಾಗಿ ಮಹಾಗಜಗಳನ್ನು ಏರಿಕೊಂಡು ತೃಪ್ತರಾಗಿ ಯಮಪುರಿಗೆ ಸೇರುತ್ತಾರೆ.

ಪಾದಾಭ್ಯಂಗಂ ಶಿರೋಭ್ಯಂಗಂ ಯಾನಂ ಪಾದೋದಕಂ ತಥಾ ।
ಯೇ ಪ್ರಯಚ್ಛಂತಿ ವಿಪ್ರೇಭ್ಯಸ್ತೇ ಯಾಂತ್ಯಶ್ವೈರ್ಯಮಾಲಯಮ್ ॥

ಯಾರು ಬ್ರಾಹ್ಮಣರಿಗೆ ಕಾಲು ಮತ್ತು ತಲೆಗಳಿಗೆ ಲೇಪಿಸಲು ತೈಲವನ್ನು ನೀಡಿರುತ್ತಾರೋ, ಕಾಲು ತೊಳೆಯಲು ನೀರನ್ನು ನೀಡಿರುತ್ತಾರೋ, ಕುಡಿಯಲು ನೀರನ್ನು ನೀಡಿರುತ್ತಾರೋ ಅವರು ಕುದುರೆಗಳಲ್ಲಿ ಕುಳಿತು ಯಮಪುರಿಗೆ ಸೇರುತ್ತಾರೆ.

ವಿಶ್ರಾಮಯಂತಿ ಯೇ ವಿಪ್ರಾನ್ ಶ್ರಾಂತಾನಧ್ವನಿ ಕರ್ಶಿತಾನ್ ।
ಚಕ್ರವಾಕಪ್ರಯುಕ್ತೇನ ಯಾಂತಿ ಯಾನೇನ ತೇಽಪಿ ಚ ॥೧೧೦॥

ಬ್ರಾಹ್ಮಣರನ್ನು ಮನೆಗೆ ಕರೆದು ತಂದು, ಅವರನ್ನು ಉಪಚರಿಸಿ, ವಿಶ್ರಾಂತಿಯನ್ನು ಪಡೆಯುವಂತೆ ಮಾಡಿದವರು ಚಕ್ರವಾಕಪಕ್ಷಿಗಳಿಂದ ಕೂಡಿದ ವಿಮಾನದಲ್ಲಿ ಯಮಪುರಿಗೆ ಸಾಗುತ್ತಾರೆ.

ಸ್ವಾಗತೇನ ಚ ಯೋ ವಿಪ್ರಂ ಪೂಜಯೇದಾಸನೇನ ಚ ।
ಸ ಗಚ್ಛತಿ ತಮಧ್ವಾನಂ ಸುಖಂ ಪರಮನಿರ್ವೃತಃ ॥೧೧೧॥

ಯಾರು ಬ್ರಾಹ್ಮಣರನ್ನು ಮನೆಗೆ ಸ್ವಾಗತಿಸಿ, ಅರ್ಘ್ಯ-ಪಾದ್ಯಾದಿ ಆಸನಗಳಿಂದ ಸತ್ಕರಿಸಿರುತ್ತಾರೋ ಅವರು ಪರಮಾನಂದದಿಂದ ಕೂಡಿದ ಯಮಲೋಕದ ಮಾರ್ಗದಲ್ಲಿ ಪ್ರಯಾಣ ಬೆಳೆಸುತ್ತಾರೆ.

ನಮೋ ಬ್ರಹ್ಮಣ್ಯದೇವಾಯ ಯೋ ಮಾಂ ದೃಷ್ಟ್ವಾಽಭಿವಾದಯೇತ್ ।
ವ್ರತವತ್ ಪ್ರಯತೋ ನಿತ್ಯಂ ಸ ಸುಖಂ ಯಾತಿ ತತ್ಪಥಮ್ ॥೧೧೨॥

ಯಾರು ಬ್ರಾಹ್ಮಣರಲ್ಲಿ ನನ್ನನ್ನೇ ಅಂತರ್ಯಾಮಿಯಾಗಿ ಕಂಡು, ಕೂಡಲೇ ಅವರನ್ನು ನಮಸ್ಕರಿಸಿರುತ್ತಾರೋ, ಬ್ರಾಹ್ಮಣರನ್ನು ಸತ್ಕರಿಸುವ ವ್ರತನಿಷ್ಠರು ಸುಖವಾದ ಯಮ ಮಾರ್ಗದಲ್ಲಿ ಸಾಗುತ್ತಾರೆ.

ನಮಃ ಸರ್ವಸಹಾಭ್ಯಶ್ಚೇತ್ಯಭಿಧಾಯ ದಿನೇ ದಿನೇ ।
ನಮಸ್ಕರೋತಿ ಗೋಭ್ಯೋ ಯಃ ಸ ಸುಖಂ ಯಾತಿ ತತ್ಪಥಮ್ ॥೧೧೩॥

ಯಾರು ಗೋವುಗಳನ್ನು ಕುರಿತು, ಸಹನಶೀಲರಾದ ಗೋವುಗಳೇ ನಿಮಗೆ ನಮಸ್ಕಾರ ಎನ್ನುತ್ತಾ ಪ್ರತಿದಿನವೂ ಗೋವುಗಳನ್ನು ನಮಸ್ಕರಿಸಿರುತ್ತಾರೋ ಅವರು ಸುಖವಾಗಿ ಯಮಪುರಿಗೆ ಸಾಗುತ್ತಾರೆ.

ನಮೋಽಸ್ತು ಪ್ರಿಯದತ್ತಾಯೈತ್ಯೇವಂವಾದೀ ದಿನೇ ದಿನೇ ।
ಭೂಮಿಮಾಕ್ರಮತೇ ಪ್ರಾತಃ ಶಯನಾದುತ್ಥಿತಸ್ತು ಯಃ ॥೧೧೪॥

ಸ ಸರ್ವಕಾಮತೃಪ್ತಾತ್ಮಾ ಸರ್ವಭೂಷಣಭೂಷಿತಃ ।
ಯಾತಿ ಯಾನೇನ ದಿವ್ಯೇನ ಸುಖಂ ವೈವಸ್ವತಾಲಯಮ್ ॥೧೧೫॥

ಯಾರು ಧನ-ಧಾನ್ಯಾದಿಗಳನ್ನು ನೀಡುವ ಭೂಮಿಗೆ ಪ್ರತಿದಿನವೂ ನಮಸ್ಕರಿಸಿರುತ್ತಾರೋ, ಎದ್ದ ಕೂಡಲೇ ಭೂಮಿಯನ್ನು ನಮಸ್ಕರಿಸಿ ಸತ್ಕರ್ಮಗಳನ್ನು ಮಾಡಿರುತ್ತಾರೋ, ಎದ್ದ ಕೂಡಲೇ ಭೂಮಿಗೆ ನಮಸ್ಕರಿಸಿ ಹೆಜ್ಜೆಯನ್ನಿಡುವ ವ್ಯಕ್ತಿಗಳು ಇಹಲೋಕದಲ್ಲಿ ಸಮಸ್ತ ಕಾಮನೆಗಳನ್ನು ಪಡೆದು ತೃಪ್ತರಾಗಿ, ಅವಸಾನದ ಬಳಿಕ ಸರ್ವಾಲಂಕಾರದಿಂದ ಕೂಡಿದವರಾಗಿ, ದಿವ್ಯವಾದ ವಿಮಾನದಲ್ಲಿ ಕುಳಿತು ವೈವಸ್ವತನ ಪುರಿಗೆ ಸುಖವಾಗಿ ಪ್ರಯಾಣ ಬೆಳೆಸುತ್ತಾರೆ.

ಅನಂತರಾಶಿನೋ ಯೇ ತು ಡಂಭಾಹಂಕಾರವರ್ಜಿತಾಃ ।
ತೇಽಪಿ ಸಾರಸಯುಕ್ತೇನ ಯಾಂತಿ ಯಾನೇನ ವೈ ಸುಖಮ್ ॥೧೧೬॥

ಯಾರು ಮಧ್ಯಾಹ್ನ ಮತ್ತು ರಾತ್ರಿಗಳ ಊಟವನ್ನು ಬಿಟ್ಟು ಮಧ್ಯದಲ್ಲಿ ಯಾವ ಪದಾರ್ಥಗಳನ್ನೂ ತಿನ್ನುವುದಿಲ್ಲವೋ, ಡಂಭವನ್ನು, ಸುಳ್ಳನ್ನು ಬಿಟ್ಟಿರುತ್ತಾರೋ ಅಂತಹ

ವ್ಯಕ್ತಿಗಳು ಸಾರಸಪಕ್ಷಿಗಳಿಂದ ಕೂಡಿದ ವಿಮಾನದಲ್ಲಿ ಸುಖವಾಗಿ ಯಮಪುರಿಗೆ ಸಾಗುತ್ತಾರೆ.

ಯೇ ಚಾಪ್ಯೇಕೇನ ಭುಕ್ತೇನ ವರ್ತಂತೇ ಡಂಭವರ್ಜಿತಾಃ ।
ಹಂಸಯುಕ್ತೈರ್ವಿಮಾನೈಸ್ತು ಸುಖಂ ಯಾಂತಿ ಯಮಾಲಯಮ್ ॥

ಯಾರು ಪ್ರತಿದಿನವೂ ಡಂಭವರ್ಜಿತರಾಗಿ ಒಂದು ಹೊತ್ತು ಮಾತ್ರ ಊಟ ಮಾಡಿರುತ್ತಾರೋ, ಸತ್ಯವಾದಿಗಳಾದ ಆ ವ್ಯಕ್ತಿಗಳು ಹಂಸಗಳಿಂದ ಕೂಡಿದ ವಿಮಾನದಲ್ಲಿ ಕುಳಿತು ಯಮಪುರಿಗೆ ಸುಖವಾಗಿ ಸಾಗುತ್ತಾರೆ.

ಚತುರ್ಥೇನ ಹಿ ಭುಕ್ತೇನ ವರ್ತಂತೇ ಯೇ ಜಿತೇಂದ್ರಿಯಾಃ ।
ಯಾಂತಿ ತೇ ಧರ್ಮನಗರಂ ಯಾನೈರ್ಬರ್ಹಿಣಯೋಜಿತೈಃ ॥೧೧೮॥

ಯಾರು ನಾಲ್ಕನೆಯ ಯಾಮದಲ್ಲಿ ಊಟವನ್ನು ಸ್ವೀಕರಿಸಿ, ಜಿತೇಂದ್ರಿಯರಾಗಿ ಇರುತ್ತಾರೋ ಅವರು ಅನೇಕ ನವಿಲುಗಳಿಂದ ಕೂಡಿರುವ ವಿಮಾನದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ತೃತೀಯದಿವಸೇನೇಹ ಭುಂಜತೇ ಯೇ ಜಿತೇಂದ್ರಿಯಾಃ ।
ತೇಽಪಿ ಹಸ್ತಿರಥೈರ್ಯಾಂತಿ ತತ್ಪಥಂ ಕನಕೋಜ್ಜ್ವಲೈಃ ॥೧೧೯॥

ಯಾರು ಮೂರುದಿನಕ್ಕೊಮ್ಮೆ ಊಟಮಾಡುತ್ತಾ, ಜಿತೇಂದ್ರಿಯರಾಗಿರುತ್ತಾರೋ ಅವರು ಸುವರ್ಣದಂತೆ ಉಜ್ವಲವಾಗಿ ಪ್ರಕಾಶಿಸುವ ಆನೆಗಳಿಂದ ಕೂಡಿರುವ ರಥಗಳಲ್ಲಿ ಕುರಿತು ಯಮಪುರಿಗೆ ಸಾಗುತ್ತಾರೆ.

ವ್ಯಾಖ್ಯಾನ ವಿಶೇಷ– ಇಲ್ಲಿ ಮೂರನೆಯ ದಿವಸ ಎಂದು ಇದೆ. ಇದಕ್ಕೆ ಮೂರನೆಯ ದಿವಸದ ಮೂರನೆಯ ಯಾಮದಲ್ಲಿ ಎಂದು ಅರ್ಥ.

ಷಷ್ಠಾನ್ನಕಾಲಿಕೋ ಯಸ್ತು ವರ್ಷಮೇಕಂ ತು ವರ್ತತೇ ।
ಕಾಮಕ್ರೋಧವಿನಿರ್ಮುಕ್ತಃ ಶುಚಿರ್ನಿತ್ಯಂ ಜಿತೇಂದ್ರಿಯಃ ॥೧೨೦॥

ಸ ಯಾತಿ ಕುಂಜರಸ್ಥಸ್ತು ಜಯಶಬ್ದರವೈರ್ಯುತಃ ॥೧೨೧॥

ಯಾರು ಆರು ದಿನಗಳಿಗೊಮ್ಮೆ ಊಟ ಮಾಡಿರುತ್ತಾರೋ, ಒಂದು ವರ್ಷದ ಕಾಲ ಆರು ದಿನಗಳಿಗೊಮ್ಮೆ ಊಟ ಮಾಡಿದ ವ್ಯಕ್ತಿಯು ಜಿತೇಂದ್ರಿಯನೂ, ಕಾಮ-ಕ್ರೋಧರಹಿತ ವ್ಯಕ್ತಿಯೂ, ಶುಚಿಯೂ ಆದ ಆತನು ಆನೆಯಿಂದ ಕೂಡಿದ ರಥದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾನೆ. ಆ ದಾರಿಯಲ್ಲಿ ಅವನನ್ನು ಜಯ ಶಬ್ದಗಳಿಂದ ಸ್ವಾಗತಿಸುತ್ತಾರೆ.

ಪಕ್ಷೋಪವಾಸಿನೋ ಯಾಂತಿ ಯಾನೈಃ ಶಾರ್ದೂಲಯೋಜಿತೈಃ ।
ಧರ್ಮರಾಜಪುರಂ ರಮ್ಯಂ ದಿವ್ಯಸ್ತ್ರೀಗಣಸೇವಿತಮ್ ॥೧೨೨॥

ಯಾರು ಒಂದು ವರ್ಷದ ತನಕ ಹದಿನೈದು ದಿವಸಗಳಿಗೊಮ್ಮೆ ಊಟ ಮಾಡಿರುತ್ತಾರೋ ಅವರು ಸಿಂಹಗಳಿಂದ ಕೂಡಿದ ವಿಮಾನದಲ್ಲಿ ಕುಳಿತು, ದಿವ್ಯಸ್ತ್ರೀಯರ ಸಮುದಾಯದಿಂದ ಸೇವಿಸಲ್ಪಡುತ್ತಿರುವ ರಮಣೀಯವಾದ ಧರ್ಮರಾಜನ ಪುರಿಗೆ ಸಾಗುತ್ತಾರೆ.

ಯೇ ಚ ಮಾಸೋಪವಾಸಂ ವೈ ಕುರ್ವತೇ ಸಂಯತೇಂದ್ರಿಯಾಃ ।
ತೇಪಿ ಸೂರ್ಯೋದಯಪ್ರಖ್ಯೈ ರ್ಯಾಂತಿ ಯಾನೈರ್ಯಮಾಲಯಮ್॥

ಯಾರು ಒಂದುವರ್ಷದ ತನಕ ತಿಂಗಳಿಗೊಮ್ಮೆ ಊಟಮಾಡಿಕೊಂಡಿರುತ್ತಾರೋ ಅಂತಹ ಜಿತೇಂದ್ರಿಯರು ಸೂರ್ಯೋದಯದಂತಹ ಪ್ರಕಾಶಮಾನವಾದ ವಿಮಾನದಲ್ಲಿ ಕುಳಿತು ಯಮಸದನಕ್ಕೆ ಸಾಗುತ್ತಾರೆ.

ಅಗ್ನಿಪ್ರವೇಶಂ ಯಶ್ಚಾಪಿ ಕುರುತೇ ಮದ್ಗತಾತ್ಮನಾ ।
ಸ ಯಾತ್ಯಗ್ನಿಪ್ರಕಾಶೇನ ವಿಮಾನೇನ ಯಮಾಲಯಮ್ ॥೧೨೪॥

ಯಾರು ಅಂತ್ಯಕಾಲವು ಸನ್ನಿಹಿತವಾದಾಗ ನನ್ನನ್ನೇ ಧ್ಯಾನಿಸುತ್ತಾ ಅಗ್ನಿಪ್ರವೇಶವನ್ನು ಮಾಡುತ್ತಾರೋ ಅವರು ಅಗ್ನಿಯಂತೆ ಬೆಳಗುವ ವಿಮಾನದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ಪ್ರಾಣಾಂಸ್ತ್ಯಜತಿ ಯೋ ವಿಪ್ರೋ ಮಾಂ ಪ್ರಪನ್ನೋ ಹ್ಯನಾಶಕಃ ।
ಸ ಬಾಲಾರ್ಕಪ್ರಕಾಶೇನ ವ್ರಜೇದ್ ಯಾನೇನ ತತ್ಪಥಮ್ ॥೧೨೫॥

ಯಾರು ಊಟವನ್ನೇ ಮಾಡದೆ ನನ್ನನ್ನೇ ಧ್ಯಾನಿಸುತ್ತಾ, ಪ್ರಾಣಗಳನ್ನು ತ್ಯಾಗ ಮಾಡಿರುತ್ತಾರೋ ಅವರು ಬಾಲಸೂರ್ಯನಂತೆ ಬೆಳಗುವ ವಾಹನಗಳನ್ನು ಏರಿ ಯಮಸದನಕ್ಕೆ ಸಾಗುತ್ತಾರೆ.

ಪ್ರವಿಷ್ಟೋಂತರ್ಜಲೇ ಯಸ್ತು ಪ್ರಾಣಾಂಸ್ಯಜತಿ ಮಾನವಃ ।
ಸೋಮಮಂಡಲಯಾನೇನ ಯಾತಿ ಯಾನೇನ ತತ್ಪಥಮ್ ॥೧೨೬॥

ಯಾರು ನೀರಿನಲ್ಲಿ ಕುಳಿತು ನನ್ನನ್ನೇ ಧ್ಯಾನಿಸುತ್ತಾ ಪ್ರಾಣವನ್ನು ಬಿಟ್ಟಿರುತ್ತಾರೋ ಅವರು ಚಂದ್ರಮಂಡಲದ ವಾಹನದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ಸ್ವಶರೀರಂ ಹಿ ಗೃಧ್ನಾಣಾಂ ಮನ್ಮನಾ ಯಃ ಪ್ರಯಚ್ಛತಿ ।
ಸ ಯಾತಿ ರಥಮುಖ್ಯೇನ ಕಾಂಚನೇನ ಯಮಾಲಯಮ್ ॥೧೨೭॥

ಯಾರು ತಮ್ಮ ಶರೀರದಲ್ಲಿ ಮೋಹವನ್ನು ಬಿಟ್ಟು ನನ್ನನ್ನೇ ಮನಸ್ಸನ್ನಿಟ್ಟು ಪ್ರಾಣವನ್ನು ಬಿಟ್ಟಿರುತ್ತಾರೋ ಅವರು ಬಂಗಾರದ ರಥದಲ್ಲಿ ಕುಳಿತು ಯಮಪುರಿಗೆ ಸಾಗುತ್ತಾರೆ.

ಗೋಕೃತೇ ಸ್ತ್ರೀಕೃತೇ ಚೈವ ಹತಾ ವಿಪ್ರಕೃತೇಽಪಿ ಯೇ ।
ತೇ ಯಾಂತ್ಯಮರಕನ್ಯಾಭಿಃ ಸೇವ್ಯಮಾನಾ ರವಿಪ್ರಭಾಃ ॥೧೨೮॥

ಯಾರು ಗೋವಿಗಾಗಿ, ಸ್ತ್ರೀಯರಿಗಾಗಿ, ಬ್ರಾಹ್ಮಣರಿಗಾಗಿ ಪ್ರಾಣವನ್ನು ತ್ಯಾಗ ಮಾಡಿರುತ್ತಾರೋ ಅವರು ಅಮರಸ್ತ್ರೀಯರಿಂದ ಸೇವ್ಯಮಾನರಾಗಿ ಸೂರ್ಯ ಪ್ರಭೆಯಿಂದ ಬೆಳಗುವ ಯಮಪುರಿಗೆ ಸಾಗುತ್ತಾರೆ.

ಯೇ ಚ ಕುರ್ವಂತಿ ಮದ್ಭಕ್ತ್ಯಾ ತೀರ್ಥಯಾತ್ರಾಂ ಜಿತೇಂದ್ರಿಯಾಃ ।
ತೇ ಪಂಥಾನಂ ಮಹಾತ್ಮಾನೋ ಯಾನೈರ್ಯಾಂತಿ ಸುಖಂ ನರಾಃ ॥

ಯಾವ ನನ್ನ ಭಕ್ತರು ಜಿತೇಂದ್ರಿಯರಾಗಿ ತೀರ್ಥಯಾತ್ರೆಯನ್ನು ಮಾಡಿರುತ್ತಾರೋ ಅಂತಹ ಮಹಾತ್ಮರು ಯಮಮಾರ್ಗವನ್ನು ವಾಹನಗಳನ್ನು ಏರಿಕೊಂಡು ಸುಖವಾಗಿ ದಾಟುತ್ತಾರೆ.

ಯೇ ಯಜಂತಿ ದ್ವಿಜಶ್ರೇಷ್ಠಾಃ ಕ್ರತುಭಿರ್ಭೂರಿದಕ್ಷಿಣೈಃ ।
ಹಂಸಸಾರಸಯುಕ್ತೇನ ಯಾಂತಿ ಯಾನೇನ ತತ್ಪಥಮ್ ॥೧೩೦॥

ಯಾವ ಬ್ರಾಹ್ಮಣರು ಬಹುದಕ್ಷಿಣೆಯಿಂದ ಕೂಡಿದ ಯಜ್ಞಗಳನ್ನು ಮಾಡಿರುತ್ತಾರೋ ಅಂತಹವರು ಹಂಸ-ಸಾರಸ ಪಕ್ಷಿಗಳಿಂದ ಕೂಡಿದ ರಥದಲ್ಲಿ ಕುಳಿತು ಯಮಪುರಿಯನ್ನು ಸೇರುತ್ತಾರೆ.

ಪರಪೀಡಾಮಕೃತ್ವೈವ ಭೃತ್ಯಾನ್ ಬಿಭ್ರತಿ ಯೇ ನರಾಃ ।
ತತ್ಪಥಂ ತೇ ಸುಖಂ ಯಾಂತಿ ವಿಮಾನೈಃ ಕಾಂಚನೋಜ್ಜ್ವಲೈಃ ॥೧೩೧೧॥

ಯಾರು ಪರಪೀಡೆಯನ್ನು ಮಾಡದೆ ತಮ್ಮ ಕುಟುಂಬವನ್ನು ಪಾಲನೆ ಮಾಡಿರುತ್ತಾರೋ ಅವರು ಸುವರ್ಣಮಯವಾದ ವಾಹನದಲ್ಲಿ ಕುಳಿತು ಸುಖವಾಗಿ ಯಮಮಾರ್ಗದಲ್ಲಿ ಪ್ರಯಾಣ ಮಾಡುತ್ತಾರೆ.

ಯೇ ಸಮಾಃ ಸರ್ವಭೂತೇಷು ಜೀವಾನಾಮಭಯಪ್ರದಾಃ ।
ಕ್ರೋಧಲೋಭವಿನಿರ್ಮುಕ್ತಾ ನಿಗೃಹೀತೇಂದ್ರಿಯಾಸ್ತಥಾ ॥೧೩೧೨॥

ಪೂರ್ಣಚಂದ್ರಪ್ರತೀಕಾಶೈರ್ವಿಮಾನೈಸ್ತೇ ಮಹಾಪ್ರಭಾಃ ।
ಯಾಂತಿ ವೈವಸ್ವತಪುರಂ ದೇವಗಂಧರ್ವಸೇವಿತಾಃ ॥೧೩೧೩॥

ಯಾರು ಸಮಸ್ತ ಪ್ರಾಣಿಗಳಲ್ಲಿಯೂ ಭಗವಂತನು ಅಂತರ್ಯಾಮಿಯಾಗಿದ್ದಾನೆಂದು ಚಿಂತಿಸುತ್ತಾ, ಜೀವರಿಗೆ ಅಭಯದಾನ ಮಾಡುತ್ತಾ, ಕ್ರೋಧ-ಮೋಹಗಳಿಂದ ದೂರರಾಗಿ, ಜಿತೇಂದ್ರಿಯರಾಗಿ ಇರುತ್ತಾರೋ ಅವರು ಹುಣ್ಣಿಮೆಯ ಚಂದ್ರನಂತೆ ಮಹಾಪ್ರಭೆಯಿಂದ ಬೆಳಗುವ ವಿಮಾನಗಳಲ್ಲಿ ಕುಳಿತು ದೇವ-ಗಂಧರ್ವರಿಂದ ಸೇವಿತರಾಗಿ ವೈವಸ್ವತ ಪುರವನ್ನು ಸೇರುತ್ತಾರೆ.

ಯೇ ಮಾಮೇಕಾಂತಭಾವೇನ ಭಕ್ತ್ಯಾ ತ್ರ್ಯಂಬಕಮೇವ ವಾ ।
ಪೂಜಯಂತಿ ನಮಸ್ಯಂತಿ ಸ್ತುವಂತಿ ಚ ದಿನೇ ದಿನೇ ॥೧೩೧೪॥

ಧರ್ಮರಾಜಪುರಂ ಯಾಂತಿ ಯಾನೈಸ್ತೇಽರ್ಕಸಮಪ್ರಭೈಃ ॥೧೩೧೫॥

ಯಾರು ನನ್ನನ್ನು ಭಕ್ತಿಯಿಂದ ಏಕಾಂತದಲ್ಲಿ ಭಜಿಸುತ್ತಾರೋ, ರುದ್ರಾಂತರ್ಯಾಮಿಯಾದ ನನ್ನನ್ನು ಪೂಜಿಸುತ್ತಾರೋ, ನಮಸ್ಕರಿಸುತ್ತಾರೋ, ಪ್ರತಿದಿನವು ಸ್ತೋತ್ರ ಮಾಡುತ್ತಾರೋ ಅವರು ಸೂರ್ಯಸದೃಶವಾದ ಪ್ರಭೆಯಿಂದ ಕೂಡಿದ ವಾಹನಗಳಲ್ಲಿ ಧರ್ಮರಾಜನ ಪಟ್ಟಣಕ್ಕೆ ಹೋಗುತ್ತಾರೆ.

ಪೂಜಿತಾಸ್ತತ್ರ ಧರ್ಮೇಣ ಸ್ವಯಂ ಮಾಲ್ಯಾದಿಭಿರ್ಮಣೈಃ ।
ಯಾಂತ್ಯೇವ ಮಮ ಲೋಕಂ ವಾ ರುದ್ರಲೋಕಮಥಾಪಿ ವಾ ॥೧೩೬॥

ಅವರು ಆ ಯಮಪುರಿಯಲ್ಲಿ ಸಾಕ್ಷಾತ್ ಯಮಧರ್ಮನಿಂದಲೇ ಮಾಲ್ಯಾದಿ ಆಭರಣಗಳಿಂದ ಪೂಜಿತರಾಗಿ ನನ್ನ ಲೋಕವನ್ನು ಹೊಂದುತ್ತಾರೆ ಅಥವಾ ರುದ್ರಲೋಕವನ್ನು ಹೊಂದುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಏಕಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎರಡನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ನೀರು-ಅನ್ನದಾನಗಳ ಫಲವನ್ನು ಹೇಳಿದುದು. ನೀರು, ಅನ್ನಗಳನ್ನು ನೀಡದಿದ್ದವನಿಗೆ ಆಗುವ ನರಕವನ್ನು ವರ್ಣಿಸಿದುದು. ಅನೇಕ ದಾನಗಳ ಫಲವನ್ನು ಹೇಳಿದುದು. ಅತಿಥಿಯ ಪೂಜೆಯ ಮಹತ್ವವನ್ನು ಬಣ್ಣಿಸಿದುದು. ಅತಿಥಿಯನ್ನು ಪೂಜಿಸದಿದ್ದಲ್ಲಿ ಆಗುವ ದೋಷವನ್ನು ಹೇಳಿದುದು. ಭೂಮಿ, ಗೋವು, ಎಳ್ಳು, ಕನ್ಯಾದಾನಗಳ ಫಲವನ್ನು ಪ್ರತಿಪಾದಿಸಿದುದು.

ವೈಶಂಪಾಯನಃ

ಶ್ರುತ್ವಾ ಯಮಪುರಾಧ್ವಾನಂ ಜೀವಾನಾಂ ಗಮನಂ ತಥಾ ।
ಧರ್ಮಪುತ್ರಃ ಪ್ರಹೃಷ್ಟಾತ್ಮಾ ಕೇಶವಂ ಪುನರಬ್ರವೀತ್ ॥೧॥

ವೈಶಂಪಾಯನ– ಜನಮೇಜಯನೇ, ಯಮನ ಪಟ್ಟಣಕ್ಕೆ ಹೋಗುವ ದಾರಿಯ ವಿಷಯದಲ್ಲಿ ಯುಧಿಷ್ಠಿರನು ಕೃಷ್ಣನಿಂದ ಅನೇಕ ರೀತಿಯ ವಿವರಣೆಗಳನ್ನು ಕೇಳಿ ಸಂತುಷ್ಟನಾಗಿ ಪುನಃ ಪ್ರಶ್ನಿಸಿದನು.

ಯುಧಿಷ್ಠಿರಃ

ದೇವದೇವೇಶ ದೈತ್ಯಘ್ನ ಸದಾ ದೇವೈರಭಿಷ್ಟುತ ।
ಭವಾನ್ ಭವಕರಃ ಶ್ರೀಮಾನ್ ಸಹಸ್ರಾದಿತ್ಯಸಪ್ರಭ ॥೨॥

ಯುಧಿಷ್ಠಿರ– ದೇವದೇವೇಶನೇ, ದೈತ್ಯರ ಸಂಹಾರಕನೇ, ದೇವತೆಗಳಿಂದ ಸ್ತೋತ್ರ ಪಾತ್ರನೇ, ಶೋಭನಕರನಾದ ನೀನು ಕಾಂತಿಯುಕ್ತನಾಗಿರುವಿ, ಸಾಸಿರಸೂರ್ಯ ಸಮಪ್ರಭೆಯುಳ್ಳವನಾಗಿರುವಿ.

ಸರ್ವಸಂಭವ ಧರ್ಮಜ್ಞ ಸರ್ವಧರ್ಮಪ್ರವರ್ತಕ ।
ಸರ್ವದಾನಫಲಂ ಸೌಮ್ಯ ಕಥಯಸ್ವ ಮಮಾಚ್ಯುತ ॥೩॥

ಎಲ್ಲರ ಉತ್ಪತ್ತಿಗೂ ಪ್ರಭುವಾಗಿರುವಿ, ಎಲ್ಲರ ಧರ್ಮಪ್ರವರ್ತಕನಾಗಿರುವಿ. ಅಂತಹ ಅಚ್ಯುತನೇ, ನೀನು ಎಲ್ಲ ದಾನಗಳ ಫಲವನ್ನು ತಿಳಿಸು.

ದಾನಂ ಕೃತ್ವಾ ಕಥಂ ಕೃಷ್ಣ ಕೀದೃಶಸ್ಯ ದ್ವಿಜಾಯ ವೈ ।
ಕೀದೃಶಂ ವಾ ತಪಃ ಕೃತ್ವಾ ತತ್ಫಲಂ ವಾऽಥ ಭುಜ್ಯತೇ ॥೪॥

ಎಂತಹ ಬ್ರಾಹ್ಮಣನಿಗೆ ಯಾವ ದಾನವನ್ನು ಮಾಡಿ ಶ್ರೇಯಸ್ಸನ್ನು ಹೊಂದಬೇಕು? ಯಾವ ರೀತಿಯಾದ ತಪಸ್ಸನ್ನು ಆಚರಿಸಬೇಕು? ಅದೆಲ್ಲವನ್ನೂ ತಿಳಿಸು.

ವೈಶಂಪಾಯನಃ

ಏವಮುಕ್ತೋ ಹೃಷೀಕೇಶೋ ಧರ್ಮಪುತ್ರೇಣ ಧೀಮತಾ ।
ಉವಾಚ ಧರ್ಮಪುತ್ರಾಯ ಧರ್ಮಾನ್ ಪುಣ್ಯಾನ್ ಮಹೋದಯಾನ್ ॥

ವೈಶಂಪಾಯನ– ಜನಮೇಜಯನೇ, ಈ ರೀತಿಯಾಗಿ ಪ್ರಶ್ನಿಸಿದ ಧೀಮಂತನಾದ ಧರ್ಮಪುತ್ರನಿಗೆ ಹೃಷೀಕೇಶನು ಉನ್ನತಿಗೆ ಸಾಧಕವಾದ ಪುಣ್ಯವಾದ ಧರ್ಮಗಳನ್ನು ಬಣ್ಣಿಸತೊಡಗಿದನು.

ಶ್ರೀಭಗವಾನ್

ಶೃಣುಷ್ವಾವಹಿತೋ ರಾಜನ್ ಪೂತಂ ಪಾಪಘ್ನಮುತ್ತಮಮ್ ।
ಸರ್ವದಾನಫಲಂ ಸೌಮ್ಯ ನ ಶ್ರಾವ್ಯಂ ಪಾಪಕರ್ಮಣಾಮ್ ॥೬॥

ಶ್ರೀಭಗವಾನ್– ಯುಧಿಷ್ಠಿರನೇ, ಏಕಾಗ್ರತೆಯಿಂದ ಸಮಸ್ತ ಪಾಪಗಳನ್ನು ಪರಿಹರಿಸುವ, ಉತ್ತಮವಾದ ಸಮಸ್ತ ದಾನಗಳ ಫಲಗಳನ್ನು ನಿರೂಪಿಸುತ್ತೇನೆ. ನಾನು ಹೇಳುವ ಉಪದೇಶವು ಪಾಪಿಷ್ಠರಿಗೆ ಕೇಳಲು ಅರ್ಹವಾಗಿರುವುದಿಲ್ಲ.

ಯಚ್ಛ್ರುತ್ವಾ ಪುರುಷಃ ಸ್ತ್ರೀ ವಾ ನಷ್ಟಪಾಪಾಃ ಸಮಾಹಿತಾಃ ।
ತತ್ಕ್ಷಣಾತ್ ಪೂತತಾಂ ಯಾಂತಿ ಪಾಪಕರ್ಮರತಾ ಅಪಿ ॥೭॥

ನಾನು ಹೇಳುವ ಯಾವ ಧರ್ಮವಿಚಾರವನ್ನಾಗಲಿ ಸ್ತ್ರೀಯಾಗಲಿ, ಪುರುಷನಾಗಲಿ ಕೇಳಿಸಿಕೊಂಡಲ್ಲಿ ಕೂಡಲೇ ಅವರು ಪಾಪಗಳಿಂದ ವಿಮುಕ್ತರಾಗುತ್ತಾರೆ. ಕೇಳಿಸಿಕೊಂಡ ಕ್ಷಣದಲ್ಲಿಯೇ ಪಾವಿತ್ರ್ಯವನ್ನು ಹೊಂದುತ್ತಾರೆ. ಪಾಪಕರ್ಮಶೀಲರಾಗಿದ್ದರೂ ಶ್ರದ್ಧೆಯಿಂದ ಕೇಳಿದವರಿಗೆ ಪಾಪವನ್ನು ಪರಿಹರಿಸುವಂಥ ಉಪದೇಶಗಳು ನನ್ನವು.

ಏಕಾಹಮಪಿ ಕೌಂತೇಯ ಭೂಮಾವುತ್ಪಾದಿತಂ ಜಲಮ್ ।
ಸಪ್ತ ತಾರಯತೇ ಪೂರ್ವಾನ್ ಏತೃಷ್ಣಾ ಯತ್ರ ಗೌರ್ಭವೇತ್ ॥೮॥

ಯುಧಿಷ್ಠಿರನೇ, ಭೂಮಿಯಲ್ಲಿ ಉತ್ಪನ್ನವಾದ ನೀರನ್ನು ಒಂದು ಹಗಲಿನಲ್ಲಿ ಹಸಿದ ಗೋವಿಗೆ ಉಣಿಸಿದರೂ ಅದರ ಫಲದಿಂದಾಗಿ ಏಳು ತಲೆಗಳ ಪಾಪವು ಪರಿಹಾರವಾಗುತ್ತದೆ.

ಪಾನೀಯಂ ಪರಮಂ ಲೋಕೇ ಜೀವಾನಾಂ ಜೀವನಂ ಸ್ಮೃತಮ್ ।
ಪಾನೀಯಸ್ಯ ಪ್ರದಾನೇನ ತೃಪ್ತಿರ್ಭವತಿ ಶಾಶ್ವತೀ ॥೯॥

ಸಮಸ್ತ ಜೀವರಿಗೂ ನೀರು ಜೀವನ ಎನಿಸಿದೆ. ಲೋಕದಲ್ಲಿ ನೀರನ್ನು ಪ್ರಾಣಿಗಳ ಜೀವನಕ್ಕೆ ಆಧಾರವೆಂದಿದ್ದಾರೆ. ನೀರಡಿಕೆಯಾದವರಿಗೆ ನೀರನ್ನು ನೀಡುವುದರಿಂದ ತೃಪ್ತಿಯುಂಟಾಗುವುದರಿಂದ ಅದರ ಫಲವಾಗಿ ದಾನ ಮಾಡಿದವರಿಗೆ ಶಾಶ್ವತವಾದ ತೃಪ್ತಿಯುಂಟಾಗುತ್ತದೆ.

ಪಾನೀಯಸ್ಯ ಗುಣಾ ದಿವ್ಯಾಃ ಪರಲೋಕೇ ಸುಖಾವಹಾಃ ॥೧೦॥

ನೀರಿನ ದಾನದಿಂದ ಉಂಟಾಗುವ ಗುಣಗಳು ಅತ್ಯಂತ ಶ್ರೇಷ್ಠವಾದವುಗಳು. ಪರಲೋಕದಲ್ಲಿಯೂ ಸುಖವನ್ನು ನೀಡುವ ಶಕ್ತಿಯು ಜಲದಾನಕ್ಕಿದೆ.

ತತ್ರ ಪುಷ್ಪೋದಕೀ ನಾಮ ನದೀ ಪರಮಪಾವನೀ ।
ಕಾಮಂ ದದಾತಿ ರಾಜೇಂದ್ರ ತೋಯದಾನಾಂ ಯಮಾಲಯೇ ॥೧೧॥

ಅದರಲ್ಲಿಯೂ ಯಮನ ಪಟ್ಟಣದಲ್ಲಿ ಪುಷ್ಪೋದಕಿ ಎಂಬ ಹೆಸರಿನ ಪರಮ

ಪಾವನವಾದ ನದಿಯಿದೆ. ಈ ಭೂಲೋಕದಲ್ಲಿ ಪಾನೀಯವನ್ನು ದಾನ ಮಾಡಿದವರಿಗೆ ಯಮಲೋಕದಲ್ಲಿರುವ ಆ ನದಿಯು ಸಕಲ ಕಾಮನೆಗಳನ್ನು ನೀಡುತ್ತದೆ.

ಶೀತಲಂ ಸಲಿಲಂ ಯಸ್ಯಾಮಕ್ಷಯ್ಯಮಮೃತೋಪಮಮ್ ।
ಕ್ಷೀರಂ ತೋಯಪ್ರದಾತೄಣಾಂ ಭವೇದ್ ದಿವ್ಯಂ ಸುಖಾವಹಮ್ ॥೧೨॥

ಆ ನದಿಯ ನೀರು ಶೀತಲವಾಗಿಯೂ, ಅಕ್ಷಯವಾಗಿಯೂ, ಅಮೃತಕ್ಕೆ ಸಮಾನವಾಗಿಯೂ ಇದೆ. ಈ ಲೋಕದಲ್ಲಿ ಶೀತಲವಾದ ಪಾನೀಯವನ್ನು ದಾನ ಮಾಡಿದವರಿಗೆ ಆ ನದಿಯು ನಿತ್ಯವೂ ಸುಖವನ್ನು ನೀಡುತ್ತದೆ.

ಯೇ ಚಾಪ್ಯತೋಯದಾತಾರಃ ಪೂಯಂ ತೇಷಾಂ ವಿಧೀಯತೇ ॥೧೩॥

ಯಾರು ಬಾಯಾರಿದವರಿಗೆ ನೀರನ್ನು ನೀಡುವುದಿಲ್ಲವೋ ಅವರು ಹೊಲಸನ್ನೇ ಸ್ವೀಕರಿಸುತ್ತಾರೆ.

ಪ್ರಶಾಮ್ಯತ್ಯಂಬುಪಾನೇನ ಬುಭುಕ್ಷಾ ಚ ಯುಧಿಷ್ಠಿರ ।
ತೃಷಿತಸ್ಯ ನ ಚಾನ್ನೇನ ಪಿಪಾಸಾऽಪಿ ಪ್ರಣಶ್ಯತಿ ॥೧೪॥

ಯುಧಿಷ್ಠಿರನೇ, ನೀರನ್ನು ಪಾನ ಮಾಡುವುದರಿಂದ ಬಾಯಾರಿಕೆಯು ಪರಿಹಾರವಾಗುತ್ತದೆ, ಹಸಿವೆಯೂ ಕೂಡ ಶಾಂತವಾಗುತ್ತದೆ. ಬಾಯಾರಿದವರಿಗೆ ಅನ್ನದಾನ ಮಾಡಿದಾಗ ಬಾಯಾರಿಕೆಯು ನೀಗುವುದಿಲ್ಲ.

ತಸ್ಮಾತ್ ತೋಯಂ ಸದಾ ದೇಯಂ ತೃಷಿತೇಭ್ಯೋ ವಿಜಾನತಾ ॥೧೫॥

ಆದ್ದರಿಂದ ಬಾಯಾರಿದವರಿಗೆ ತಿಳಿದ ವ್ಯಕ್ತಿಯು ನೀರನ್ನೇ ದಾನ ಮಾಡಬೇಕೇ ವಿನಾ ಅನ್ನವನ್ನಲ್ಲ.

ಅಗ್ನೇರ್ಮೂರ್ತಿಃ ಕ್ಷಿತೇರ್ಯೋನಿರಮೃತಸ್ಯ ಚ ಸಂಭವಃ ।
ತತ್ ತೋಯಂ ಸರ್ವಭೂತಾನಾಂ ಮೂಲಮಿತ್ಯುಚ್ಯತೇ ಬುಧೈಃ ॥೧೬॥

ನೀರು ಅಗ್ನಿಮೂರ್ತಿ ಎನಿಸಿದೆ. ಅಮೃತಕ್ಕೂ ಉತ್ಪತ್ತಿ ಸ್ಥಾನವಾಗಿದೆ. ಆದ್ದರಿಂದ ನೀರು ಸಕಲ ಪ್ರಾಣಿಗಳಿಗೂ ಮೂಲಭೂತವಾದುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಅದ್ಭಿಃ ಸರ್ವಾಣಿ ಭೂತಾನಿ ಜೀವಂತಿ ಪ್ರಭವಂತಿ ಚ ।
ತಸ್ಮಾತ್ ಸರ್ವೇಷು ದಾನೇಷು ತೋಯದಾನಂ ವಿಶಿಷ್ಯತೇ ॥೧೭॥

ಸಮಸ್ತ ಪ್ರಾಣಿಗಳು ನೀರನ್ನು ಆಶ್ರಯಿಸಿಕೊಂಡೇ ಉತ್ಪತ್ತಿಯನ್ನು ಹೊಂದುತ್ತವೆ, ಜೀವನವನ್ನು ಧರಿಸುತ್ತವೆ. ಆದ್ದರಿಂದ ಸಮಸ್ತ ದಾನಗಳಿಗಿಂತಲೂ ಜಲದಾನವು ವಿಶಿಷ್ಟವಾದುದು.

ಸರ್ವದಾನತಪೋಯಜ್ಞೈರ್ಯತ್ ಪ್ರಾಪ್ಯಂ ಫಲಮುತ್ತಮಮ್ ।
ತತ್ ಸರ್ವಂ ತೋಯದಾನೇನ ಪ್ರಾಪ್ಯತೇ ನಾತ್ರ ಸಂಶಯಃ ॥೧೮॥

ಯಾರು ಬ್ರಾಹ್ಮಣರಿಗೆ ನೀರನ್ನು ನೀಡುತ್ತಾರೋ ಅವರು ಸಮಸ್ತ ದಾನಗಳ, ತಪಸ್ಸುಗಳ, ಯಜ್ಞಗಳ ಉತ್ತಮವಾದ ಫಲವನ್ನು ಹೊಂದುತ್ತಾರೆ. ಆದ್ದರಿಂದ ಸಮಸ್ತ ದಾನಗಳ ಫಲವನ್ನು ಬಯಸುವವರು ನೀರನ್ನೇ ದಾನ ಮಾಡಬೇಕು. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಯೇ ಪ್ರಯಚ್ಛಂತಿ ವಿಪ್ರೇಭ್ಯಸ್ತ್ವನ್ನದಾನಂ ಸುಸಂಸ್ಕೃತಮ್ ।
ತೈಸ್ತು ದತ್ತಾಃ ಸ್ವಯಂ ಪ್ರಾಣಾ ಭವಂತಿ ಪುರುಷರ್ಷಭ ॥೧೯॥

ಯಾವ ಬ್ರಾಹ್ಮಣರಿಗೆ ಸುಸಂಸ್ಕೃತವಾದ ಅನ್ನವನ್ನು ದಾನ ಮಾಡುತ್ತಾರೋ ಅವರು ಅನ್ನಗತಪ್ರಾಣರಾದುದರಿಂದ ಪ್ರಾಣವನ್ನೇ ದಾನ ಮಾಡಿದಂತಾಗುತ್ತದೆ.

ಅನ್ನಾದ್ ರಕ್ತಂ ಚ ಶುಕ್ಲಂ ಚ ಅನ್ನೇ ಜೀವಃ ಪ್ರತಿಷ್ಠಿತಃ ।
ಇಂದ್ರಿಯಾಣಿ ಚ ಬುದ್ಧಿಶ್ಚ ಪುಷ್ಣಂತ್ಯನ್ನೇನ ನಿತ್ಯಶಃ ॥೨೦॥

ಅನ್ನದಿಂದ ರಕ್ತ ಮತ್ತು ವೀರ್ಯಗಳು ಉತ್ಪನ್ನವಾಗುತ್ತವೆ. ಅನ್ನದಲ್ಲಿಯೇ ಪ್ರಾಣಿಗಳ ಜೀವನವು ಪ್ರತಿಷ್ಠಿತವಾಗಿದೆ. ಇಂದ್ರಿಯಗಳು, ಬುದ್ಧಿ ಅನ್ನದಿಂದಲೇ ಪುಷ್ಟವಾಗುತ್ತವೆ.

ಅನ್ನಹೀನಾನಿ ಸೀದಂತಿ ಸರ್ವಭೂತಾನಿ ಪಾಂಡವ ॥೨೧॥

ಧರ್ಮರಾಜನೇ, ಸಮಸ್ತ ಪ್ರಾಣಿಗಳು ಅನ್ನವಿಲ್ಲದಿದ್ದರೆ ವಿನಾಶ ಹೊಂದುತ್ತವೆ.

ತೇಜೋ ಬಲಂ ಚ ರೂಪಂ ಚ ಸತ್ವಂ ವೀರ್ಯಂ ದ್ಯುತಿರ್ಧೃತಿಃ ।
ಜ್ಞಾನಂ ಮೇಧಾ ತಥಾऽऽಯುಶ್ಚ ಸರ್ವಮನ್ನೇ ಪ್ರತಿಷ್ಠಿತಮ್ ॥೨೨॥

ತೇಜಸ್ಸು, ಬಲ, ರೂಪ, ಸತ್ವ, ವೀರ್ಯ, ಕಾಂತಿ, ಧೈರ್ಯ, ಜ್ಞಾನ, ಮೇಧಾ, ಆಯುಷ್ಯ ಎಲ್ಲವೂ ಅನ್ನದಲ್ಲೇ ಪ್ರತಿಷ್ಠಿತವಾಗಿವೆ.

ದೇವದಾನವತಿರ್ಯಕ್ಷು ಸರ್ವಲೋಕೇಷು ಸರ್ವದಾ ।
ಸರ್ವಕಾಲಂ ಹಿ ಸರ್ವೇಷಾಮನ್ನೇ ಪ್ರಾಣಾಃ ಪ್ರತಿಷ್ಠಿತಾಃ ॥೨೩॥

ಸಮಸ್ತ ಲೋಕದಲ್ಲಿಯೂ, ಸಮಸ್ತ ಕಾಲಗಳಲ್ಲಿಯೂ ಇರುವ ದೇವತೆಗಳು, ಮನುಷ್ಯರು ಹಾಗೆ ತ್ರಿವಿಧಯೋನಿಗಳಲ್ಲಿ ಹುಟ್ಟಿದ ಪ್ರಾಣಿಗಳು ಇವರೆಲ್ಲರ ಪ್ರಾಣಗಳು ಅನ್ನದಲ್ಲಿಯೇ ಪ್ರತಿಷ್ಠಿತವಾಗಿವೆ.

ಅನ್ನಂ ಪ್ರಜಾಪತೇ ರೂಪಮನ್ನಂ ಪ್ರಜನನಂ ಸ್ಮೃತಮ್ ।
ಸರ್ವಭೂತಮಯಂ ಚಾನ್ನಂ ಜೀವಶ್ಚಾನ್ನಮಯಃ ಸ್ಮೃತಃ ॥೨೪॥

ಅನ್ನವು ಚತುರ್ಮುಖಬ್ರಹ್ಮನ ರೂಪವೆನಿಸಿದೆ. ಅನ್ನವೇ ಪ್ರಾಣಿಗಳ ಉತ್ಪತ್ತಿಗೆ ಕಾರಣವಾಗಿದೆ. ಆದ್ದರಿಂದ ಅನ್ನವು ಸರ್ವಭೂತಮಯವಾಗಿದೆ. ಸಮಸ್ತ ಜೀವರು ಅನ್ನಮಯರೆಂದೇ ಕರೆಸಿಕೊಳ್ಳುತ್ತಾರೆ.

ಅನ್ನೇನಾಧಿಷ್ಠಿತಃ ಪ್ರಾಣೋ ಹ್ಯಪಾನೋ ವ್ಯಾನ ಏವ ಚ ।
ಉದಾನಶ್ಚ ಸಮಾನಶ್ಚ ಧಾರಯಂತಿ ಶರೀರಿಣಮ್ ॥೨೫॥

ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನ ಎಂಬ ಐದು ಪ್ರಾಣರು ಅನ್ನವನ್ನೇ ಆಶ್ರಯಿಸಿಕೊಂಡು ಪ್ರಾಣಿಗಳನ್ನು ರಕ್ಷಿಸುತ್ತಾರೆ.

ಶಯನೋತ್ಥಾನಗಮನಗ್ರಹಣಾಕರ್ಷಣಾನಿ ಚ ।
ಸರ್ವಸತ್ತ್ವಕೃತಂ ಕರ್ಮ ಚಾನ್ನಾದೇವ ಪ್ರವರ್ತತೇ ॥೨೬॥

ಸಮಸ್ತ ಪ್ರಾಣಿಗಳು ಮಲಗುವುದು, ಎಚ್ಚರಗೊಳ್ಳುವುದು, ಓಡಾಡುವುದು, ಆಗಮಿಸುವುದು, ಸ್ವೀಕರಿಸುವುದು, ಹೊಂದುವುದು - ಸಮಸ್ತ ಈ ವಿಧವಾದ ಸಕಲ ಕರ್ಮಗಳೂ ನಾವು ಸ್ವೀಕರಿಸುವ ಅನ್ನದಿಂದಲೇ ನಡೆಯುತ್ತವೆ.

ಚತುರ್ವಿಧಾನಿ ಭೂತಾನಿ ಜಂಗಮಾನಿ ಸ್ಥಿರಾಣಿ ಚ ।
ಅನ್ನಾದ್ ಭವಂತಿ ರಾಜೇಂದ್ರ ಸೃಷ್ಟಿರೇಷಾ ಸನಾತನೀ ॥೨೭॥

ನಾಲ್ಕುವಿಧವಾದ ಚರಾಚರ ಪ್ರಾಣಿಗಳು ಅನ್ನದಿಂದಲೇ ಹುಟ್ಟುತ್ತವೆ. ಇದು ಪ್ರಜಾಪತಿಯ ಸನಾತನ ಸೃಷ್ಟಿಯಾಗಿದೆ.

ವಿದ್ಯಾಸ್ಥಾನಾನಿ ಸರ್ವಾಣಿ ಸರ್ವಯಜ್ಞಾಶ್ಚ ಪಾವನಾಃ ।
ಅನ್ನಾದ್ ಯಸ್ಮಾತ್ ಪ್ರವರ್ತಂತೇ ತಸ್ಮಾದನ್ನಂ ಪರಂ ಸ್ಮೃತಮ್ ॥೨೮॥

ಅನ್ನದಿಂದಲೇ ಸಮಸ್ತ ವಿದ್ಯಾಸ್ಥಾನಗಳು, ಪಾವನಗೊಳಿಸುವ ಎಲ್ಲ ಯಜ್ಞಗಳು ಪ್ರವೃತ್ತಿಯನ್ನು ಹೊಂದುತ್ತವೆ. ಆದ್ದರಿಂದ ಅನ್ನವೇ ಶ್ರೇಷ್ಠವಾದುದು ಎಂಬುದು ಜ್ಞಾನಿಗಳ ಅಭಿಪ್ರಾಯ.

ದೇವಾ ರುದ್ರಾದಯಃ ಸರ್ವೇ ಪಿತರೋಽಪ್ಯಗ್ನಯಸ್ತಥಾ ।
ಯಸ್ಮಾದನ್ನೇನ ತುಷ್ಯಂತಿ ತಸ್ಮಾದನ್ನಂ ವಿಶಿಷ್ಯತೇ ॥೨೯॥

ರುದ್ರಾದಿ ದೇವತೆಗಳು, ಸಮಸ್ತ ಪಿತೃಗಳು, ಅಗ್ನಿಗಳು ಯಾವ ಅನ್ನದಿಂದ ಸಂತೋಷ ಹೊಂದುತ್ತಾರೋ ಆದ್ದರಿಂದ ಅನ್ನವು ಶ್ರೇಷ್ಠವಾದುದು ಎಂದು ಹೇಳಲ್ಪಟ್ಟಿದೆ.

ಯಸ್ಮಾದನ್ನಾತ್ ಪ್ರಜಾಃ ಸರ್ವಾಃ ಕಲ್ಪೇ ಕಲ್ಪೇಽಸೃಜತ್ ಪ್ರಭುಃ ।
ತಸ್ಮಾದನ್ನಾತ್ ಪರಂ ದಾನಂ ನ ಭೂತಂ ನ ಭವಿಷ್ಯತಿ ॥೩೦॥

ಯಾವ ಕಾರಣದಿಂದ ಚತುರ್ಮುಖಬ್ರಹ್ಮನು ಕಲ್ಪ ಕಲ್ಪದಲ್ಲಿಯೂ ಅನ್ನದಿಂದಲೇ ಪ್ರಜೆಗಳನ್ನು ಸೃಷ್ಟಿಸಿದನೋ ಈ ಕಾರಣದಿಂದ ಅನ್ನದಾನಕ್ಕಿಂತ ಶ್ರೇಷ್ಠವಾದ ದಾನವು ಹಿಂದೆಯೂ ಇರಲಿಲ್ಲ, ಮುಂದೆಯೂ ಉಂಟಾಗುವುದಿಲ್ಲ.

ಯಸ್ಮಾದನ್ನಾತ್ ಪ್ರವರ್ತಂತೇ ಧರ್ಮಾರ್ಥೌ ಕಾಮ ಏವ ಚ ।
ತಸ್ಮಾದನ್ನಾತ್ ಪರಂ ದಾನಂ ನಾಮುತ್ರೇಹ ಚ ಪಾಂಡವ ॥೩೧॥

ಅನ್ನದಿಂದಲೆ ಧರ್ಮ, ಅರ್ಥ, ಕಾಮಗಳ ಪ್ರವೃತ್ತಿಯು ಉಂಟಾಗುವುದರಿಂದ ಈ ಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಅನ್ನದಾನಕ್ಕಿಂತ ಶ್ರೇಷ್ಠವಾದ ದಾನವು ಬೇರೆ ಇರುವುದಿಲ್ಲ.

ಯಕ್ಷರಕ್ಷೋಗಣಾ ನಾಗಾ ಭೂತಾ ದೈತ್ಯಾಶ್ಚ ದಾನವಾಃ ।
ತುಷ್ಯಂತ್ಯನ್ನೇನ ಯಸ್ಮಾತ್ತು ತಸ್ಮಾದನ್ನಂ ಪರಂ ಭವೇತ್ ॥೩೨॥

ಯಕ್ಷರು, ರಾಕ್ಷಸರು, ಗ್ರಹಗಳು, ನಾಗಗಳು, ಭೂತಗಳು, ದೈತ್ಯರು, ದಾನವರು ಇವರೆಲ್ಲರೂ ಅನ್ನದಿಂದಲೇ ಸಂತುಷ್ಟರಾಗುತ್ತಾರೆ. ಆದ್ದರಿಂದ ಅನ್ನವು ಪರಮಶ್ರೇಷ್ಠವಾದುದು.

ಪರಾನ್ನಮುಪಭುಂಜಾನೋ ಯತ್ ಕರ್ಮ ಕುರುತೇ ಶುಭಮ್ ।
ತಚ್ಛುಭಸ್ಯೈಕಭಾಗಸ್ತು ಕರ್ತುರ್ಭವತಿ ಭಾರತ ॥೩೩॥

ಯಾರು ಪರಾನ್ನವನ್ನು ಊಟಮಾಡುತ್ತಾ ಸತ್ಕರ್ಮಗಳನ್ನು ಆಚರಿಸುತ್ತಾರೋ ಆ ಸತ್ಕರ್ಮದ ಒಂದು ಭಾಗವು ಊಟ ಹಾಕಿದವನಿಗೆ ದೊರೆಯುತ್ತದೆ.

ಅನ್ನದಸ್ಯ ತ್ರಯೋ ಭಾಗಾ ಭವಂತಿ ಪುರುಷರ್ಷಭ ।
ತಸ್ಮಾದನ್ನಂ ಪ್ರದಾತವ್ಯಂ ಬ್ರಾಹ್ಮಣೇಭ್ಯೋ ವಿಶೇಷತಃ ॥೩೪॥

ಅನ್ನದಾನ ಮಾಡಿದ ವ್ಯಕ್ತಿಗೆ ಅನ್ನದಲ್ಲಿ ಮೂರು ಭಾಗಗಳು ಉಂಟಾಗುತ್ತವೆ. ಒಂದು ಭಾಗವು ಭೋಕ್ತವಿಗೂ, ಮತ್ತೊಂದು ಭಾಗವು ಯಜಮಾನನಿಗೂ, ಮತ್ತೊಂದು ಭಾಗವು ದೇವತೆಗಳಿಗೂ ತಲುಪುತ್ತದೆ. ಆದ್ದರಿಂದ ಬ್ರಾಹ್ಮಣರಿಗೆ ವಿಶೇಷವಾಗಿ ಅನ್ನದಾನ ಮಾಡಬೇಕು.

ಬ್ರಾಹ್ಮಣಾಯ ದರಿದ್ರಾಯ ಯೋಽನ್ನಂ ಸಂವತ್ಸರಂ ನೃಪ ।
ಶ್ರೋತ್ರಿಯಾಯ ಪ್ರಯಚ್ಛೇದ್ ವೈ ಪಾಕಭೇದವಿವರ್ಜಿತಃ ॥೩೫॥

ದರಿದ್ರನಾದ ಬ್ರಾಹ್ಮಣನಿಗೆ ಯಾವ ಪುರುಷನು ಒಂದು ವರ್ಷಗಳ ಕಾಲ ಅನ್ನವನ್ನು ನೀಡುತ್ತಾನೋ, ಶ್ರೋತ್ರಿಯನಾದ ದರಿದ್ರನಾದ ಬ್ರಾಹ್ಮಣನಿಗೆ ಪಾಕಭೇದವನ್ನು ಮಾಡದೆ ಅನ್ನದಾನವನ್ನು ಮಾಡುತ್ತಾನೋ,

ಡಂಭಾನೃತವಿಮುಕ್ತಸ್ತು ಪರಾಂ ಭಕ್ತಿಮುಪಾಗತಃ ।
ಸ್ವಧರ್ಮೇಣಾರ್ಜಿತಫಲಂ ತಸ್ಯ ಪುಣ್ಯಫಲಂ ಶೃಣು ॥೩೬॥

ಜಂಭ, ಸುಳ್ಳು ಇವುಗಳಿಂದ ಮುಕ್ತನಾಗಿ, ಭಕ್ತಿಯಿಂದ ಕೂಡಿದವನಾಗಿ, ಸ್ವಧರ್ಮದಿಂದ ಆರ್ಜಿತವಾದ ಧನದಿಂದ ಅನ್ನದಾನ ಮಾಡುತ್ತಾನೋ ಅವನ ಪುಣ್ಯವನ್ನು ಹೇಳುತ್ತೇನೆ, ಕೇಳಿಸಿಕೊ.

ಶತವರ್ಷಸಹಸ್ರಾಣಿ ಕಾಮಗಃ ಕಾಮರೂಪಧೃತ್ ।
ಮೋದತೇऽಮರಲೋಕಸ್ಥಃ ಪೂಜ್ಯಮಾನಃ ಸುರೋತ್ತಮೈಃ ॥೩೭॥

ಲಕ್ಷವರ್ಷಗಳ ಕಾಲ ಇಚ್ಛಾರೂಪವನ್ನು ಧರಿಸಿ, ಮನಸ್ಸು ಬಂದಲ್ಲಿ ಸ್ವರ್ಗಲೋಕದಲ್ಲಿ ಸಮಸ್ತ ದೇವತೆಗಳಿಂದ ಆರಾಧಿಸಲ್ಪಡುತ್ತಾ ಸಂತೋಷವನ್ನು ಹೊಂದುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾನ್ನರಲೋಕೇ ದ್ವಿಜೋ ಭವೇತ್ ॥೩೮॥

ಬಳಿಕ ಸ್ವರ್ಗಲೋಕದಿಂದ ಭೂಮಿಯಲ್ಲಿ ಚ್ಯುತನಾದರೂ ಆ ಅನ್ನದಾನ ಮಾಡಿದ ಪುರುಷನು ಮನುಷ್ಯಲೋಕದಲ್ಲಿ ಬ್ರಾಹ್ಮಣ ಯೋನಿಯಲ್ಲಿಯೇ ಹುಟ್ಟುತ್ತಾನೆ.

ಅಗ್ರಭಿಕ್ಷಾಂ ಚ ಯೋ ದದ್ಯಾದ್ ದರಿದ್ರಾಯ ದ್ವಿಜಾತಯೇ ।
ಷಣ್ಮಾಸಾದ್ ವಾರ್ಷಿಕಂ ಶ್ರಾದ್ಧಂ ತಸ್ಯ ಪುಣ್ಯಫಲಂ ಶೃಣು ॥೩೯॥

ಯಾರು ಆರು ತಿಂಗಳವರೆಗೆ ಪ್ರತಿನಿತ್ಯವೂ ದರಿದ್ರನಾದ ಬ್ರಾಹ್ಮಣನಿಗೆ ಮೊದಲು ಭಿಕ್ಷೆಯನ್ನು ನೀಡುತ್ತಾನೋ, ವರ್ಷಪರ್ಯಂತವೂ ಶ್ರಾದ್ಧ ಮಾಡಿ ಭೋಜನ ಮಾಡಿಸುತ್ತಾನೋ ಅಂತಹವನಿಗೆ ಲಭಿಸುವ ಪುಣ್ಯವೇನೆಂಬುದನ್ನು ಕೇಳು.

ಗೋಸಹಸ್ರಪ್ರದಾನೇನ ಯತ್ಪುಣ್ಯಂ ಸಮುದಾಹೃತಮ್ ।
ತತ್ಪುಣ್ಯಫಲಮಾಪ್ನೋತಿ ನರೋ ವೈ ನಾತ್ರ ಸಂಶಯಃ ॥೪೦॥

ಸಾವಿರ ಗೋವುಗಳನ್ನು ದಾನ ಮಾಡುವುದರಿಂದ ಎಷ್ಟು ಪುಣ್ಯವು ಲಭಿಸುತ್ತದೋ ಅಷ್ಟು ಪುಣ್ಯವು ಬ್ರಾಹ್ಮಣನಿಗೆ ಆರು ತಿಂಗಳುಗಳ ಕಾಲ ಮೊದಲು ಊಟ ಹಾಕುವುದರಿಂದ ಉಂಟಾಗುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಅಥ ಸಂವತ್ಸರಂ ದದ್ಯಾದಗ್ರಭಿಕ್ಷಾಮಯಾಚತೇ ।
ಪ್ರಚ್ಛಾದ್ಯೈವ ಸ್ವಯಂ ನೀತ್ವಾ ತಸ್ಯ ಪುಣ್ಯಫಲಂ ಶೃಣು ॥೪೧॥

ಧರ್ಮರಾಜನೇ, ಯಾರು ಒಂದು ವರ್ಷಗಳ ಕಾಲ ಬೇಡದಿರುವ ಬ್ರಾಹ್ಮಣನಿಗೆ ತಾನೇ ಪಾಕವನ್ನು ತಯಾರಿಸಿ, ಆ ಪಾಕವನ್ನು ಮುಚ್ಚಿಕೊಂಡು ಅವನ ಮನೆಗೆ ಹೋಗಿ ನೀಡುವುದರಿಂದ ಲಭಿಸುವ ಪುಣ್ಯದ ಫಲವೇನೆಂಬುದನ್ನು ತಿಳಿಸುತ್ತೇನೆ, ಕೇಳು.

ಕಪಿಲಾನಾಂ ಸಹಸ್ರೇ ತು ದತ್ತೇ ಯತ್ಪುಣ್ಯಮುಚ್ಯತೇ ।
ತತ್ಪುಣ್ಯಮಖಿಲಂ ಪ್ರಾಪ್ಯ ಶಕ್ರಲೋಕೇ ಮಹೀಯತೇ ॥೪೨॥

ಅನ್ನದಾನಿಯು, ಸಾವಿರ ಕಪಿಲಧೇನುಗಳನ್ನು ದಾನ ಮಾಡಿದಾಗ ಯಾವ ಪುಣ್ಯವನ್ನು ಹೊಂದುತ್ತಾನೋ ಆ ಸಮಸ್ತ ಪುಣ್ಯವನ್ನು ಪಡೆದವನಾಗಿ ಇಂದ್ರದೇವನ ಲೋಕದಲ್ಲಿ ಪೂಜ್ಯನಾಗುತ್ತಾನೆ.

ಸ ಶಕ್ರಭವನೇ ರಮ್ಯೇ ವರ್ಷಕೋಟಿಶತಂ ನೃಪ ।
ಯಥಾಕಾಮಂ ಮಹಾತೇಜಾಃ ಕ್ರೀಡತ್ಯಪ್ಸರಸಾಂ ಗಣೈಃ ॥೪೩॥

ಆ ಅನ್ನದಾನ ಮಾಡಿದ ವ್ಯಕ್ತಿಯು ರಮಣೀಯವಾದ ಇಂದ್ರನ ಭವನದಲ್ಲಿ ನೂರು ಕೋಟಿ ವರ್ಷಗಳ ಕಾಲ ಅಪ್ಸರಾಸ್ತ್ರೀಯರಿಂದ ಕೂಡಿದವನಾಗಿ ತೇಜಃಸಂಪನ್ನನಾಗಿ ಮನಬಂದಂತೆ ಸಂತೋಷ ಹೊಂದುತ್ತಾನೆ.

ಅಗ್ರಾನ್ನಂ ಯಸ್ತು ವೈ ದದ್ಯಾದ್ ದ್ವಿಜಾಯ ನಿಯತವ್ರತಃ ।
ದಶ ವರ್ಷಾಣಿ ರಾಜೇಂದ್ರ ತಸ್ಯ ಪುಣ್ಯಫಲಂ ಶೃಣು ॥೪೪॥

ಯಾವ ವ್ಯಕ್ತಿಯು ಜಿತೇಂದ್ರಿಯನಾದ ಬ್ರಾಹ್ಮಣನಿಗೆ ಮೊದಲು ಅನ್ನದಾನವನ್ನು ಹತ್ತು ವರ್ಷಗಳ ಕಾಲ ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯಫಲವನ್ನು ಕೇಳಿಸಿಕೊ.

ಕಪಿಲಾಶತಸಹಸ್ರಸ್ಯ ವಿಧಿದತ್ತಸ್ಯ ಯತ್ಫಲಮ್ ।
ತತ್ಪುಣ್ಯಫಲಮಾಸಾದ್ಯ ಪುರಂದರಪುರಂ ವ್ರಜೇತ್ ॥೪೫॥

ಯಾರು ಹತ್ತು ವರ್ಷಗಳ ಕಾಲ ಅನ್ನದಾನವನ್ನು ಮಾಡುತ್ತಾರೋ ಅವರು ಹತ್ತು ಲಕ್ಷ ಕಪಿಲಧೇನುವನ್ನು ವಿಧಿಬದ್ಧವಾಗಿ ದಾನ ಮಾಡಿದಾಗ ಎಷ್ಟು ಪುಣ್ಯವು ಲಭಿಸುತ್ತದೋ ಅಷ್ಟು ಪುಣ್ಯವನ್ನು ಹೊಂದಿ ಪುರಂದರನ ಪಟ್ಟಣಕ್ಕೆ ಹೋಗುತ್ತಾರೆ.

ಸ ಶಕ್ರಭವನೇ ರಮ್ಯೇ ಕಾಮರೂಪೀ ಯಥಾಸುಖಮ್ ।
ದಶಕೋಟಿಸಮಾ ರಾಜನ್ ಕ್ರೀಡತೇ ಸುರಪೂಜಿತಃ ॥೪೬॥

ಅವನು ರಮಣೀಯವಾದ ಇಂದ್ರನ ಭವನಕ್ಕೆ ತೆರಳಿ, ಕಾಮರೂಪಿಯಾಗಿ,

ಸುಖವಾಗಿ ದೇವತೆಗಳಿಂದ ಪೂಜಿತನಾಗಿ ಹತ್ತು ಕೋಟಿ ವರ್ಷಗಳ ಕಾಲ ಸಂತೋಷವನ್ನು ಹೊಂದುತ್ತಾನೆ.

ಶಕ್ರಲೋಕಾವತೀರ್ಣಶ್ಚೇದ್ ಇಹ ಲೋಕೇ ಮಹಾದ್ಯುತಿಃ ।
ಚತುರ್ವೇದೀ ದ್ವಿಜಃ ಶ್ರೀಮಾನ್ ಜಾಯತೇ ರಾಜಪೂಜಿತಃ ॥೪೭॥

ಬಳಿಕ ಶಕ್ರಲೋಕದಿಂದ ಭೂಮಿಗೆ ಇಳಿದು ಬಂದ ಆತನು ಈ ಲೋಕದಲ್ಲಿ ಕಾಂತಿಸಂಪನ್ನನಾಗಿ, ನಾಲ್ಕು ವೇದಗಳನ್ನು ಅಧ್ಯಯನ ಮಾಡಿದ ಬ್ರಾಹ್ಮಣನಾಗಿ ಹುಟ್ಟುತ್ತಾನೆ. ರಾಜರಿಂದ ಸಮ್ಮಾನಿತನಾಗುತ್ತಾನೆ.

ಅಧ್ವಶ್ರಾಂತಾಯ ವಿಪ್ರಾಯ ಕ್ಷುಧಿತಾಯಾನ್ನಕಾಂಕ್ಷಿಣೇ ।
ದೇಶಕಾಲಾಭಿಯಾತಾಯ ದೀಯತೇ ಪಾಂಡುನಂದನ ॥೪೮॥

ಪಾಂಡವನೇ, ದಾರಿಯಲ್ಲಿ ನಡೆದು ಆಯಾಸ ಹೊಂದಿರುವ, ಹಸಿವಿನಿಂದ ಬಳಲಿರುವ, ಅನ್ನವನ್ನು ಅಪೇಕ್ಷಿಸುವ ಬ್ರಾಹ್ಮಣನಿಗೆ ದೇಶ-ಕಾಲಾದಿಗಳನ್ನು ವಿಮರ್ಶಿಸದೆ ಅನ್ನವನ್ನು ನಿಶ್ಚಿತವಾಗಿ ದಾನ ಮಾಡಬೇಕು.

ಯಾಚಿತೋಽನ್ನಂ ನ ದದ್ಯಾದ್ ಯೋ ವಿದ್ಯಮಾನೇ ಧನಾಗಮೇ ।
ಸ ಲಬ್ಧೋ ನರಕಂ ಯಾತಿ ಕೃಮೀಣಾಂ ಕಾಲಸೂತ್ರಕಮ್ ॥೪೯॥

ತನ್ನ ಬಳಿ ಯಥೇಷ್ಟವಾದ ಧನವಿದ್ದಾಗಲೂ, ಅನ್ನವನ್ನು ಬೇಡುವ ವ್ಯಕ್ತಿಗಳು ಆಗಮಿಸಿದಾಗಲೂ ಯಾರು ಮೋಹದಿಂದ ಅನ್ನದಾನವನ್ನು ಮಾಡುವುದಿಲ್ಲವೋ ಅಂತಹ ಜಿಪುಣನು ಕ್ರಿಮಿಗಳಿಂದ ಕೂಡಿದ ಕಾಲಸೂತ್ರಕ ಎಂಬ ನರಕದಲ್ಲಿ ಬೀಳುತ್ತಾನೆ.

ಸ ತತ್ರ ನರಕೇ ಘೋರೇ ಲೋಭಮೋಹಿತಚೇತನಃ ।
ದಶವರ್ಷಸಹಸ್ರಾಣಿ ಕ್ಲಿಶ್ಯತೇ ವೇದನಾರ್ದಿತಃ ॥೫೦॥

ಆತನು ಕಾಲಸೂತ್ರ ನರಕದಲ್ಲಿ ಲೋಭದಿಂದ ಮೋಹಿತವಾದ ಮನಸ್ಸುಳ್ಳವನಾಗಿ ಹತ್ತು ಸಾವಿರ ವರ್ಷಗಳ ಕಾಲ ವೇದನೆಯಿಂದ ಸಂಕಟ ಪಡುತ್ತಾನೆ.

ತಸ್ಮಾಚ್ಚ ನರಕಾನ್ಮುಕ್ತಃ ಕಾಲೇನ ಮಹತಾ ಹಿ ಸಃ ।
ದರಿದ್ರೋ ಮಾನುಷೇ ಲೋಕೇ ಚಂಡಾಲೇಷ್ವೇವ ಜಾಯತೇ ॥೫೧॥

ಅವನು ಬಳಿಕ ಆ ನರಕದಿಂದ ಮುಕ್ತನಾದರೂ ತುಂಬಾ ಕಾಲ ಶಿಕ್ಷೆಯನ್ನು ಅನುಭವಿಸಿ ಈ ಭೂಲೋಕಕ್ಕೆ ಆಗಮಿಸಿ, ದರಿದ್ರನಾಗಿ ಚಂಡಾಲಯೋನಿಯಲ್ಲಿ ಹುಟ್ಟುತ್ತಾನೆ.

ಯಸ್ತು ಪಾಂಸುಲಪಾದಶ್ಚ ದೂರಾಧ್ವಶ್ರಮಕರ್ಶಿತಃ ।
ಕ್ಷುತ್ತಿಪಾಸಾಶ್ರಮಶ್ರಾಂತಃ ಶ್ರಮಖಿನ್ನಗತಿರ್ದ್ವಿಜಃ ॥೫೨॥

ಪೃಚ್ಛನ್ ವೈ ಹ್ಯನ್ನದಾತಾರಂ ಗೃಹಮಭ್ಯೇತಿ ಚಾಶಯಾ ।
ತಂ ಪೂಜಯೇತ ಯತ್ನೇನ ಸೋಽತಿಥಿಃ ಸ್ವರ್ಗಸಂಕ್ರಮಃ ॥೫೩॥

ತಸ್ಮಿಂಸ್ತುಷ್ಟೇ ನರಶ್ರೇಷ್ಠ ತುಷ್ಟಾಃ ಸ್ಯುಃ ಸರ್ವದೇವತಾಃ ॥೫೪॥

ಯಾವನು ಬಹಳ ದೂರ ನಡೆದು ಶ್ರಮದಿಂದ ದುಃಖಿತನಾಗಿರುವ, ಹಸಿವು ಬಾಯಾರಿಕೆಗಳ ಶ್ರಮದಿಂದ ಆಯಾಸಗೊಂಡಿರುವ, ಆರ್ತನಾದ, ಬಹಳ ಕಷ್ಟದಿಂದ ಹೆಜ್ಜೆಗಳನ್ನಿಡುತ್ತಿರುವ, ಧೂಳಿನಿಂದ ಮುಚ್ಚಿಹೋದ ಪಾದಗಳುಳ್ಳ ಬ್ರಾಹ್ಮಣನಿಗೆ, ಈ ಊರಿನಲ್ಲಿ ಅನ್ನದಾನವನ್ನು ಮಾಡುವವರು ಯಾರು ಎಂದು ಕೇಳುತ್ತಾ ಅನ್ನದಾನ ಮಾಡುವವನ ಮನೆಗೆ ಆಗಮಿಸಿ ಅನ್ನವನ್ನು ಬೇಡುತ್ತಾನೋ, ಆ ಸಮಯದಲ್ಲಿ ಗೃಹಸ್ಥನು ಪ್ರಯತ್ನಪೂರ್ವಕವಾಗಿ ಸತ್ಕರಿಸಬೇಕು. ಕಾರಣ, ಆ ಆಗಮಿಸಿದ ಅತಿಥಿಯೇ ಧಾತೃವಿನ ಸ್ವರ್ಗಕ್ಕೆ ಸೋಪಾನದಂತಿದ್ದಾನೆ. ಅಂತಹ ಬಳಲಿದ ಅತಿಥಿಯು ತುಷ್ಟನಾದರೆ ಸಮಸ್ತ ದೇವತೆಗಳು ತುಷ್ಟರಾಗುತ್ತಾರೆ.

ನ ತಥಾ ಹವಿಷಾ ಹೋಮೈರ್ನ ಪುಷ್ಪೈರ್ನಾನುಲೇಪನೈಃ ।
ಅಗ್ನಯಃ ಪಾರ್ಥ ತುಷ್ಯಂತಿ ಯಥಾ ಹ್ಯತಿಥಿಪೂಜನಾತ್ ॥೫೫॥

ಪಾರ್ಥನೇ, ಅತಿಥಿಸತ್ಕಾರದಿಂದ ಅಗ್ನಿಗಳು ತೃಪ್ತಿಪಡುವಂತೆ ಹವಿಸ್ಸಿನಿಂದಾಗಲಿ, ಹೋಮದಿಂದಾಗಲಿ, ಪುಷ್ಪಗಳಿಂದಾಗಲಿ, ಚಂದನಾದಿ ಲೇಪನಗಳಿಂದಾಗಲಿ ತೃಪ್ತಿಯನ್ನು ಹೊಂದುವುದಿಲ್ಲ.

ಕಪಿಲಾಯಾಂ ತು ದತ್ತಾಯಾಂ ವಿಧಿವಜ್ಜ್ಯೇಷ್ಠಪುಷ್ಕರೇ ।
ನ ತತ್ಫಲಮವಾಪ್ನೋತಿ ಯತ್ಫಲಂ ವಿಪ್ರಭೋಜನಾತ್ ॥೫೬॥

ಬ್ರಾಹ್ಮಣರನ್ನು ಭೋಜಿಸಿದಾಗ ಯಾವ ಫಲವು ಲಭಿಸುತ್ತದೋ, ಕಪಿಲಧೇನುವನ್ನು ವಿಧಿಬದ್ಧವಾಗಿ ಜ್ಯೇಷ್ಠಪುಷ್ಕರದಲ್ಲಿ ದಾನ ಮಾಡಿದಾಗಲೂ ಬ್ರಾಹ್ಮಣ ಭೋಜನದ ಫಲವು ಲಭಿಸುವುದಿಲ್ಲ.

ದ್ವಿಜಪಾದೋದಕಕ್ಲಿನ್ನಾ ಯಾವತ್ ತಿಷ್ಠತಿ ಮೇದಿನೀ ।
ತಾವತ್ ಪುಷ್ಕರಪರ್ಣೇನ ಪಿಬಂತಿ ಪಿತರೋ ಜಲಮ್ ॥೫೭॥

ಮನೆಗೆ ಬ್ರಾಹ್ಮಣನೊಬ್ಬನು ಬಂದಾಗ ಅವನ ಪಾದಕ್ಕೆ ನೀರನ್ನು ಹಾಕಬೇಕು. ಬ್ರಾಹ್ಮಣನ ಪಾದಕ್ಕೆ ಹಾಕಿದ ನೀರಿನಿಂದ ಭೂಮಿಯು ಎಷ್ಟುಕಾಲ ಒದ್ದೆಯಾಗಿರುತ್ತದೋ ಅಷ್ಟು ಕಾಲದವರೆಗೆ ಗತಿಸಿದ ಪಿತೃಗಳು ಕಮಲದ ಎಲೆಯಲ್ಲಿ ನೀರನ್ನು ಕುಡಿದು ತೃಷೆಯನ್ನು ಪರಿಹರಿಸಿಕೊಳ್ಳುತ್ತಾರೆ.

ದೇವಮಾಲ್ಯೋಪನಯನಂ ದ್ವಿಜೋಚ್ಛಿಷ್ಟಾವಮಾರ್ಜನಮ್ ।
ಶ್ರಾಂತಸಂವಾಹನಂ ಚೈವ ತಥಾ ಪಾದಾವಸೇಚನಮ್ ॥೫೮॥

ಪ್ರತಿಶ್ರಯಪ್ರದಾನಂ ಚ ತಥಾ ಶಯ್ಯಾಸನಸ್ಯ ಚ ।
ಏಕೈಕಂ ಪಾಂಡವಶ್ರೇಷ್ಠ ಗೋಪ್ರದಾನಾದ್ ವಿಶಿಷ್ಯತೇ ॥೫೯॥

ಪಾಂಡವನೇ, ದೇವತಾವಿಗ್ರಹಗಳ ಮೇಲಿರುವ ನಿರ್ಮಾಲ್ಯವನ್ನು ಶುದ್ಧಿಗೊಳಿಸುವುದು, ಬ್ರಾಹ್ಮಣರು ಊಟ ಮಾಡಿದ ಬಳಿಕ ಅವರ ಎಲೆಗಳನ್ನು ತೆಗೆದು ಗೋಮಯದಿಂದ ಶುದ್ಧಿಗೊಳಿಸುವುದು, ದಾರಿಯಲ್ಲಿ ನಡೆದು ಬಳಲಿ ಬಂದ ಬ್ರಾಹ್ಮಣರ ಕಾಲುಗಳನ್ನು ಒತ್ತುವುದು, ಅವರ ಕಾಲುಗಳನ್ನು ತೊಳೆದು ಅವರಿಗೆ ವಿಶ್ರಾಂತಿಯನ್ನು ಕಲ್ಪಿಸುವುದು, ಮಲಗಲು ಹಾಸಿಗೆಯನ್ನು ನೀಡುವುದು, ಕುಳಿತುಕೊಳ್ಳಲು ಆಸನವನ್ನು ಕೊಡುವುದು - ಇವುಗಳಲ್ಲಿ ಒಂದೊಂದು ಕಾರ್ಯವೂ ಗೋದಾನಕ್ಕಿಂತಲೂ ಹೆಚ್ಚಿನ ಫಲವನ್ನು ಕೊಡುತ್ತದೆ.

ಪಾದೋದಕಂ ಪಾದಧೃತಂ ದೀಪಮನ್ನಂ ಪ್ರತಿಶ್ರಯಮ್ ।
ಯೇ ಪ್ರಯಚ್ಛಂತಿ ವಿಪ್ರೇಭ್ಯೋ ನೋಪಸರ್ಪಂತಿ ತೇ ಯಮಮ್ ॥

ಕಾಲು ತೊಳೆಯಲು ನೀರು, ಕಾಲಿಗೆ ತಿಕ್ಕಿಕೊಳ್ಳಲು ತುಪ್ಪ, ದೀಪ, ಅನ್ನ, ವಾಸ ಮಾಡಲು ಮನೆ- ಇವುಗಳನ್ನು ಬ್ರಾಹ್ಮಣರಿಗೆ ದಾನ ಮಾಡುವವರು ಯಮಪುರಿಗೆ ಸಾಗುವುದಿಲ್ಲ.

ವಿಪ್ರಾತಿಥ್ಯೇ ಕೃತೇ ರಾಜನ್ ಭಕ್ಯಾ ಶುಶ್ರೂಷಿತೇಽಪಿ ಚ ।
ದೇವಾಃ ಶುಶ್ರೂಷಿತಾಃ ಸರ್ವೇ ತ್ರಯಸ್ತ್ರಿಂಶದ್ ಭವಂತ್ಯುತ ॥೬೧॥

ರಾಜನೇ, ಬ್ರಾಹ್ಮಣನ ಆತಿಥ್ಯವನ್ನು, ಭಕ್ತಿಪೂರ್ವಕವಾದ ಸೇವೆಯನ್ನು ಮಾಡಿದರೆ ಮೂವತ್ತಮೂರು (ಕೋಟಿ) ದೇವತೆಗಳನ್ನೂ ಸೇವಿಸಿದಂತಾಗುತ್ತದೆ.

ಅಭ್ಯಾಗತೋ ಜ್ಞಾತಪೂರ್ವೋ ಹ್ಯಜ್ಞಾತೋಽತಿಥಿರುಚ್ಯತೇ ।
ತಯೋಃ ಪೂಜಾಂ ದ್ವಿಜಃ ಕುರ್ಯಾದ್ ಇತಿ ಪೌರಾಣಿಕೀ ಶ್ರುತಿಃ ॥೬೨॥

ಹಿಂದೆ ಪರಿಚಯವಿದ್ದ ಮನುಷ್ಯನು ಮನೆಗೆ ಬಂದರೆ ಅವನನ್ನು ಅಭ್ಯಾಗತ ಎನ್ನುತ್ತಾರೆ. ಪರಿಚಯವೇ ಇಲ್ಲದ ವ್ಯಕ್ತಿಯು ಮನೆಗೆ ಬಂದರೆ ಅವನನ್ನು ಅತಿಥಿ ಎನ್ನುತ್ತಾರೆ. ಬ್ರಾಹ್ಮಣನು ಈ ಈರ್ವರನ್ನು ಆದರ ಪೂರ್ವಕವಾಗಿ ಸತ್ಕರಿಸಬೇಕೆಂದು ಪುರಾಣದ ಮಾತಿದೆ.

ಪಾದಾಭ್ಯಂಗಾನ್ನಪಾನೈಸ್ತು ಯೋಽತಿಥಿಂ ಪೂಜಯೇನ್ನರಃ ।
ಪೂಜಿತಸ್ತೇನ ರಾಜೇಂದ್ರ ಭವಾಮ್ಯೇವ ನ ಸಂಶಯಃ ॥೬೩॥

ರಾಜೇಂದ್ರನೇ, ಯಾವ ಮನುಷ್ಯನು ಮನೆಗೆ ಆಗಮಿಸಿದ ಅತಿಥಿಗೆ ಕಾಲಿಗೆ ತಿಕ್ಕಿಕೊಳ್ಳಲು ಎಣ್ಣೆಯನ್ನು ಕೊಟ್ಟು, ಅನ್ನ-ಪಾನಾದಿಗಳಿಂದ ಸತ್ಕರಿಸುತ್ತಾನೋ ಅವನು ನನ್ನನ್ನೇ ಪೂಜಿಸಿದಂತಾಗುತ್ತದೆ. ಈ ಅತಿಥಿಸತ್ಕಾರದಿಂದ ನಾನೇ ತೃಪ್ತಿಯನ್ನು ಹೊಂದುತ್ತೇನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಶೀಘ್ರಂ ಪಾಪಾದ್ ವಿನಿರ್ಮುಕ್ತೋ ಮಯಾ ಚಾನುಗ್ರಹೀಕೃತಃ ।
ವಿಮಾನೇನೇಂದುಕಲ್ಪೇನ ಮಮ ಲೋಕಂ ಸ ಗಚ್ಛತಿ ॥೬೪॥

ಇಂತಹ ಅತಿಥಿಸತ್ಕಾರವನ್ನು ಮಾಡುವವನು ಶೀಘ್ರವಾಗಿ ಪಾಪದಿಂದ ಬಿಡುಗಡೆಯನ್ನು ಹೊಂದಿ, ನನ್ನ ಅನುಗ್ರಹಕ್ಕೆ ಪಾತ್ರನಾಗಿ, ಚಂದ್ರಸದೃಶವಾದ ವಿಮಾನದಲ್ಲಿ ಕುಳಿತು ನನ್ನ ಲೋಕವನ್ನೇ ಹೊಂದುತ್ತಾನೆ.

ಅಭ್ಯಾಗತಂ ಶ್ರಾಂತಮನುವ್ರಜಂತಿ
ದೇವಾಶ್ಚ ಸರ್ವೇ ಪಿತರೋಽಗ್ನಯಶ್ಚ ।

ತಸ್ಮಿನ್ ದ್ವಿಜೇ ಪೂಜಿತೇ ಪೂಜಿತಾಃ ಸ್ಯುಃ
ಗತೇ ನಿರಾಶಾಃ ಪಿತರೋ ವ್ರಜಂತಿ ॥೬೫॥

ಆಯಾಸಗೊಂಡಿರುವ ಅಭ್ಯಾಗತರನ್ನು ಎಲ್ಲ ದೇವತೆಗಳು, ಪಿತೃಗಳು, ಅಗ್ನಿಗಳು ಅನುಸರಿಸಿ ಬರುತ್ತಾರೆ. ಅಭ್ಯಾಗತ ಬ್ರಾಹ್ಮಣನು ಸತ್ಕೃತನಾದರೆ ದೇವತೆಗಳೇ ಮೊದಲಾದವರು ಪೂಜಿತರಾಗುತ್ತಾರೆ. ಅಭ್ಯಾಗತನೇನಾದರೂ ಸತ್ಕೃತನಾಗದಿದ್ದಲ್ಲಿ ಪಿತೃಗಳೂ ನಿರಾಶರಾಗಿ ಹಿಂದಿರುಗುತ್ತಾರೆ.

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ ಪ್ರತಿನಿವರ್ತತೇ ।
ಪಿತರಸ್ತಸ್ಯ ನಾಶ್ನಂತಿ ದಶ ವರ್ಷಾಣಿ ಪಂಚ ಚ । ॥೬೬॥

ಅತಿಥಿಯು ನಿರಾಶನಾಗಿ ಯಾವ ಗೃಹಸ್ಥನ ಮನೆಯಿಂದ ಹಿಂದಿರುಗುತ್ತಾನೋ ಆ ಗೃಹಸ್ಥನ ಪಿತೃಗಳು ಹದಿನೈದು ವರ್ಷಗಳ ತನಕ ಭೋಜನ ಮಾಡುವುದಿಲ್ಲ.

ವರ್ಜಿತಃ ಪಿತೃಭಿರ್ಬಭ್ರೂ ಸ ದೇವೈರಗ್ನಿಭಿಃ ಸದಾ ।
ನಿರಯಂ ರೌರವಂ ಗತ್ವಾ ದಶ ವರ್ಷಾಣಿ ಪಚ್ಯತೇ ॥೬೭॥

ಜಿಪುಣತನದಿಂದ ಅತಿಥಿಯನ್ನು ಸತ್ಕರಿಸದೆ ಇದ್ದ ದೇವತೆಗಳನ್ನೂ, ಅಗ್ನಿಯನ್ನೂ, ಪಿತೃಗಳನ್ನು ಆರಾಧಿಸದೇ ಇರುವ ವ್ಯಕ್ತಿಯು ರೌರವ ನರಕಕ್ಕೆ ಬಿದ್ದು ಹತ್ತು ವರ್ಷಗಳ ಕಾಲ ದುಃಖವನ್ನು ಅನುಭವಿಸುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದಿಹ ಚೋಚ್ಛಿಷ್ಟಭುಗ್ ಭವೇತ್ ॥೬೮॥

ಬಳಿಕ ಅಲ್ಲಿಂದ ಭೂಮಿಗೆ ಆಗಮಿಸಿದರೂ ಭೂಮಿಯಲ್ಲಿ ಮತ್ತೊಬ್ಬರ ಎಂಜಲನ್ನು ತಿಂದುಕೊಂಡೇ ಬದುಕುತ್ತಾನೆ.

ವೈಶ್ವದೇವಾಂತಿಕೇ ಪ್ರಾಪ್ತಮತಿಥಿಂ ಯೋ ನ ಪೂಜಯೇತ್ ।
ಸ ಚಂಡಾಲತ್ವಮಾಪ್ನೋತಿ ಸದ್ಯ ಏವ ನ ಸಂಶಯಃ ॥೬೯॥

ವೈಶ್ವದೇವವು ಮುಗಿದ ಬಳಿಕ ಆಗಮಿಸಿದ ಅತಿಥಿಯನ್ನು ಯಾವ ವ್ಯಕ್ತಿಯು ಪೂಜಿಸುವುದಿಲ್ಲವೋ ಅವನು ಚಂಡಾಲತ್ವವನ್ನು ಹೊಂದಿ, ಕೂಡಲೇ ಪತಿತನಾಗುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ನಿರ್ವಾಸಯತಿ ಯೋ ವಿಪ್ರಂ ದೇಶಕಾಲೇಽತಿಥಿಂ ಗೃಹಾತ್ ।
ಪತಿತಸ್ತತ್ಕ್ಷಣಾದೇವ ಜಾಯತೇ ನಾತ್ರ ಸಂಶಯಃ ॥೭೦॥

ದೇಶ-ಕಾಲಗಳನ್ನನುಸರಿಸಿ ಮನೆಗೆ ಆಗಮಿಸಿರುವ ಅತಿಥಿರೂಪನಾದ ಬ್ರಾಹ್ಮಣನನ್ನು ಯಾವನು ಮನೆಯಿಂದ ಹೊರಗಟ್ಟುತ್ತಾನೋ ಅಂತಹ ಗೃಹಸ್ಥನು ಕೂಡಲೇ ಪತಿತನಾಗುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ನರಕೇ ರೌರವೇ ಘೋರೇ ವರ್ಷಕೋಟಿಂ ಸ ಪಚ್ಯತೇ ॥೭೧॥

ಬಳಿಕ ಕೋಟಿ ವರ್ಷಗಳ ಕಾಲ ರೌರವ ನರಕದಲ್ಲಿ ದುಃಖಿತನಾಗುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದಿಹ ಲೋಕೇ ನರಾಧಮಃ ।
ಶ್ವಾ ವೈ ದ್ವಾದಶ ಜನ್ಮಾನಿ ಜಾಯತೇ ಕ್ಷುತ್ಪಿಪಾಸಿತಃ ॥೭೨॥

ಬಳಿಕ ರೌರವ ನರಕದಿಂದ ಕಾಲಾಂತರದಲ್ಲಿ ಭೂಮಿಗೆ ಆಗಮಿಸಿದ ಆ ನರಾಧಮನು ಹಸಿವು-ನೀರಡಿಕೆಗಳಿಂದ ಬಳಲುವ ನಾಯಿಯಾಗಿ ಹನ್ನೆರಡು ಜನ್ಮವನ್ನು ಕಳೆಯುತ್ತಾನೆ.

ಚಂಡಾಲೋಽಪ್ಯತಿಥಿಃ ಪ್ರಾಪ್ತೋ ದೇಶಕಾಲೇಽನ್ನಕಾಂಕ್ಷಯಾ ।
ಅಭ್ಯುದ್ಗಮ್ಯೋ ಗೃಹಸ್ಥೇನ ಪೂಜನೀಯಃ ಸ ಸರ್ವದಾ ॥೭೩॥

ದೇಶ-ಕಾಲಗಳನ್ನನುಸರಿಸಿ ಅನ್ನವನ್ನು ಬಯಸಿ ಚಂಡಾಲನೇ ಅತಿಥಿಯಾಗಿ ಬಂದರೂ ಗೃಹಸ್ಥನು ಮುಂದೆ ಹೋಗಿ ಅವನನ್ನು ಸ್ವಾಗತಿಸಿ ಸತ್ಕರಿಸಬೇಕು.

ಅನರ್ಚಯಿತ್ವಾ ಯೋಽಶ್ನಾತಿ ಲೋಭಮೋಹಿತಚೇತನಃ ।
ಸ ಚಂಡಾಲತ್ವಮಾಪ್ನೋತಿ ದಶ ಜನ್ಮಾನಿ ಪಾಂಡವ ॥೭೪॥

ಯಾವನು ಅತಿಥಿಯನ್ನು ಸತ್ಕರಿಸದೆ, ಮೋಹ-ಲೋಭಗಳಿಂದ ಕೂಡಿದ ಮನಸ್ಸುಳ್ಳವನಾಗಿ ಊಟವನ್ನು ಮಾಡುತ್ತಾನೋ ಅವನು ಚಂಡಾಲತ್ವವನ್ನು ಹೊಂದಿ ಹತ್ತು ಜನ್ಮಗಳನ್ನು ಕಳೆಯುತ್ತಾನೆ.

ನಿರಾಶಮತಿಥಿಂ ಕೃತ್ವಾ ಭುಂಜಾನೋ ಯಃ ಪ್ರಹೃಷ್ಟವಾನ್ ।
ನ ಜಾನಾತ್ಯಾತ್ಮನಾऽऽತ್ಮಾನಂ ವಿಷ್ಠಾಕೂಪೇ ನಿಪಾತಿತಮ್ ॥೭೫॥

ಯಾವಾತನು ಅತಿಥಿಯನ್ನು ಸತ್ಕರಿಸದೆ ಸಂತೋಷದಿಂದ ಬಾಗಿಲನ್ನು ಹಾಕಿಕೊಂಡು ಊಟ ಮಾಡುತ್ತಾನೋ ಅವನು ತನ್ನನ್ನು ಮಲ-ಮೂತ್ರಗಳ ಹೊಂಡದಲ್ಲಿ ಬಿದ್ದ ವ್ಯಕ್ತಿಯಾಗಿದ್ದೇನೆ ಎಂಬುದನ್ನು ತಿಳಿಯುವುದೇ ಇಲ್ಲ.

ಮೋಘಂ ಧ್ರುವಂ ಪ್ರೋರ್ಣಯತಿ ಮೋಘಮಸ್ಯ ತು ಪಶ್ಯತೇ ।
ಮೋಘಮನ್ನಂ ಸದಾऽಶ್ನಾತಿ ಯೋऽತಿಥಿಂ ನ ಚ ಪೂಜಯೇತ್ ॥೭೬॥

ಯಾವನು ಅತಿಥಿಯನ್ನು ಆರಾಧಿಸದೆ, ಸುಂದರವಾದ ಗೃಹವನ್ನು ನಿರ್ಮಾಣ ಮಾಡಿಕೊಂಡು ಇರುತ್ತಾನೋ ಅವನು, ಪ್ರಾಣಿಹಿಂಸೆಯನ್ನು ಮಾಡುವ ದೃಷ್ಟಿಯಿಂದ ಜೇಡವು ಬಲೆಯನ್ನು ನಿರ್ಮಾಣ ಮಾಡಿ ವಾಸಿಸುವಂತೆ ಹಿಂಸಕನಾಗಿಯೇ ಆ ಗೃಹದಲ್ಲಿ ವ್ಯರ್ಥವಾಗಿ ವಾಸಿಸುತ್ತಾನೆ. ಅತಿಥಿಗೆ ನೀಡದೇ ತಿನ್ನುವ ಅನ್ನವು ಅವನಿಗೆ ಅನರ್ಥವನ್ನು ಉಂಟುಮಾಡುತ್ತದೆ. ಮತ್ತೊಬ್ಬರಿಗೆ ಉಪದ್ರವವನ್ನು ಮಾಡಿ ಸ್ವಾರ್ಥಿಯಾಗಿ ಯಾವನು ಅನ್ನವನ್ನು ಉಣ್ಣುತ್ತಾನೋ ಅವನು ಮತ್ತೊಬ್ಬರಿಗೆ ಹಿಂಸೆಯನ್ನು ಮಾಡಿದಂತೆಯೇ ಸರಿ.

ಸಾಂಗೋಪಾಂಗಾಂಸ್ತು ಯೋ ವೇದಾನ್ ಪಠತೀಹ ದಿನೇ ದಿನೇ ।
ನ ಚಾತಿಥಿಂ ಪೂಜಯತಿ ವೃಥಾ ಸ ಪಠತಿ ದ್ವಿಜಃ ॥೭೭॥

ಯಾವ ಬ್ರಾಹ್ಮಣನು ಪ್ರತಿದಿನವೂ ಷಡಂಗಸಹಿತವಾಗಿ ವೇದಾಧ್ಯಯನವನ್ನು ಮಾಡುತ್ತಿದ್ದರೂ ಅತಿಥಿಯನ್ನು ಆರಾಧಿಸದಿದ್ದಲ್ಲಿ ಆ ಅಧ್ಯಯನವು ವ್ಯರ್ಥವಾದುದೇ ಸರಿ.

ಪಾಕಯಜ್ಞಮಹಾಯಜ್ಞೈಃ ಸೋಮಸಂಸ್ಥಾಭಿರೇವ ಚ ।
ಯೇ ಯಜಂತಿ ನ ಚಾರ್ಚಂತಿ ಗೃಹೇಷ್ವತಿಥಿಮಾಗತಮ್ ॥೭೮॥

ತೇಷಾಂ ಯಶೋಭಿಕಾಮಾನಾಂ ದತ್ತಮಿಷ್ಟಂ ಚ ಯದ್ಭವೇತ್ ।
ವೃಥಾ ಭವತಿ ತತ್ಸರ್ವಮಾಶಯಾ ಹಿ ತಯಾ ಹತಮ್ ॥೭೯॥

ಯಾವನು ಪಾಕಯಜ್ಞ, ಪಿಂಡಮಹಾಯಜ್ಞ, ಸೋಮಯಾಗ ಮೊದಲಾದವುಗಳ ಮೂಲಕ ದೇವತೆಗಳನ್ನು ಪೂಜಿಸುತ್ತಾರೋ ಆದರೆ ಆಗಮಿಸಿದ ಅತಿಥಿಯನ್ನು ಸತ್ಕರಿಸುವುದಿಲ್ಲವೋ ಅಂತಹವನ ಯಶಸ್ಸು, ಅವನು ಮಾಡಿದ ದಾನವು, ಯಜ್ಞವು

ಎಲ್ಲವೂ ವ್ಯರ್ಥವಾಗುತ್ತದೆ. ನಿರಾಶನಾಗಿ ಅತಿಥಿಯು ಸಾಗಿದಾಗ ಸಮಸ್ತ ಶುಭಕರ್ಮಗಳು ನಾಶ ಹೊಂದುತ್ತವೆ.

ದೇಶಂ ಕಾಲಂ ಚ ಪಾತ್ರಂ ಚ ಸ್ವಶಕ್ತಿಂ ಚ ನಿರೀಕ್ಷ್ಯ ಚ ।
ಅಲ್ಪಂ ಸಮಂ ಮಹದ್ವಾಽಪಿ ಕುರ್ಯಾದಾತಿಥ್ಯಮಾತ್ಮವಾನ್ ॥೮೦॥

ಗೃಹಸ್ಥನು ಶ್ರದ್ಧೆಯಿಂದ ದೇಶ, ಕಾಲ, ಪಾತ್ರ, ತನ್ನ ಶಕ್ತಿ ಎಲ್ಲವನ್ನೂ ವಿಚಾರ ಮಾಡಿ ಅತ್ಯಲ್ಪವಾದರೂ, ಸಾಧಾರಣವಾಗಿಯಾದರೂ, ಮಹತ್ತರವಾಗಿಯಾದರೂ ಅತಿಥಿ ಸತ್ಕಾರವನ್ನು ಮಾಡಬೇಕು.

ಸುಮುಖಃ ಸುಪ್ರಸನ್ನಾತ್ಮಾ ಧೀಮಾನತಿಥಿಮಾಗತಮ್ ।
ಸ್ವಾಗತೇನಾಸನೇನಾದ್ಭಿರನ್ನಾದ್ಯೇನ ಚ ಪೂಜಯೇತ್ ॥೮೧॥

ಅತಿಥಿಯು ತನ್ನ ಮನೆಯ ಬಾಗಿಲಿಗೆ ಬಂದ ಕೂಡಲೇ ಧೀಮಂತನಾದ ಗೃಹಸ್ಥನು ಮುಖವನ್ನು ಪ್ರಸನ್ನತೆಯಿಂದ ಅರಳಿಸಿ ಸ್ವಾಗತಿಸಬೇಕು, ಆಸನವನ್ನು ನೀಡಬೇಕು, ಅರ್ಘ್ಯ-ಪಾದ್ಯಗಳಿಂದ ಸತ್ಕರಿಸಬೇಕು. ಅನ್ನ-ಪಾನಾದಿಗಳಿಂದಲೂ ಸತ್ಕರಿಸಬೇಕು.

ಪ್ರಿಯೋ ವಾ ಯದಿ ವಾ ದ್ವೇಷ್ಯೋ ಮೂರ್ಖಃ ಪಂಡಿತ ಏವ ವಾ ।
ಪ್ರಾಪ್ತೋ ಯೋ ವೈಶ್ವದೇವಾಂತೇ ಸೋಽತಿಥಿಃ ಸ್ವರ್ಗಸಂಕ್ರಮಃ ॥೮೨॥

ವೈಶ್ವದೇವ, ಬಲಿಹರಣಗಳನ್ನು ಮಾಡಿದ ಬಳಿಕ ಮನೆಗೆ ಆಗಮಿಸಿದ ವ್ಯಕ್ತಿಯು ಪ್ರಿಯನೇ ಆಗಲಿ, ಹಿತಕರನೇ ಆಗಲಿ, ದ್ವೇಷಿಯೇ ಆಗಲಿ, ಮೂರ್ಖನೇ ಆಗಲಿ, ಪಂಡಿತನೇ ಆಗಲಿ, ಅವನು ಯಜಮಾನನು ಸ್ವರ್ಗಕ್ಕೆ ಏರಲು ಸೋಪಾನದಂತೆ ಇರುತ್ತಾನೆ.

ಕ್ಷುತ್ಪಿಪಾಸಾಶ್ರಮಾರ್ತಾಯ ದೇಶಕಾಲಾಗತಾಯ ಚ ।
ಸತೃತ್ಯಾನ್ನಂ ಪ್ರದಾತವ್ಯಂ ಸ್ವರ್ಗಸ್ಯ ಫಲಮಿಚ್ಛತಾ ॥೮೩॥

ಸ್ವರ್ಗದ ಫಲವನ್ನು ಬಯಸುವ ವ್ಯಕ್ತಿಯು ಹಸಿವು, ನೀರಡಿಕೆಗಳಿಂದ ಬಳಲಿದ, ಯೋಗ್ಯವಾದ ದೇಶ-ಕಾಲಗಳಲ್ಲಿ ಆಗಮಿಸಿದ ವ್ಯಕ್ತಿಗೆ ಸತ್ಕರಿಸಿ, ಅನ್ನವನ್ನು ದಾನ ಮಾಡಬೇಕು.

ಭೋಜಯೇದಾತ್ಮನಃ ಶ್ರೇಷ್ಠಾನ್ ವಿಧಿವದ್ದವ್ಯಕವ್ಯಯೋಃ ।
ಅನ್ನಂ ಪ್ರಾಣೋ ಮನುಷ್ಯಾಣಾಮನ್ನದಃ ಪ್ರಾಣದೋ ಭವೇತ್ ॥೮೪॥

ಯಾವಾತನು ಹವ್ಯ-ಕವ್ಯಗಳಲ್ಲಿ ತನಗಿಂತಲೂ ಶ್ರೇಷ್ಠರಾದವರನ್ನು ಆಮಂತ್ರಿಸಿ, ವಿಧಿವತ್ತಾಗಿ ಭೋಜನ ಮಾಡಿಸುತ್ತಾನೋ ಅವನು ಅನ್ನವನ್ನು ನೀಡುವ ಮೂಲಕ ಪ್ರಾಣವನ್ನೇ ದಾನ ಮಾಡಿದ್ದಾನೆ ಎಂದು ಕರೆಸಿಕೊಳ್ಳುತ್ತಾನೆ.

ದೇವಾ ರುದ್ರಾದಯಃ ಸರ್ವೇ ಪಿತರೋ ಹ್ಯಗ್ನಯಸ್ತಥಾ ।
ಯಸ್ಮಾದನ್ನೇನ ತುಷ್ಯಂತಿ ತಸ್ಮಾದನ್ನಂ ವಿಶಿಷ್ಯತೇ ॥೮೫॥

ಯಾವ ಕಾರಣದಿಂದ ರುದ್ರಾದಿ ದೇವತೆಗಳು, ಪಿತೃಗಳು, ಅಗ್ನಿಗಳು ಯಾವ ಅನ್ನದಿಂದಲೇ ಸಂತುಷ್ಟರಾಗುತ್ತಾರೆಯಾದ್ದರಿಂದ ಅನ್ನವೇ ಶ್ರೇಷ್ಠವೆನಿಸುತ್ತದೆ.

ತಸ್ಮಾದನ್ನಪರಂ ದಾನಂ ನ ಭೂತಂ ನ ಭವಿಷ್ಯತಿ ॥೮೬॥

ಆದ್ದರಿಂದ ಅನ್ನಕ್ಕಿಂತ ಶ್ರೇಷ್ಠವಾದ ಮತ್ತೊಂದು ದಾನವು ಹಿಂದೆಯೂ, ಮುಂದೆಯೂ, ಇಂದಿಗೂ ಇರುವುದಿಲ್ಲ.

ತಸ್ಮಾದನ್ನಂ ವಿಶೇಷೇಣ ದಾತವ್ಯಂ ಭೂತಿಮಿಚ್ಛತಾ ॥೮೭॥

ಐಶ್ವರ್ಯವನ್ನು ಬಯಸುವ ವ್ಯಕ್ತಿಯು ವಿಶಿಷ್ಟವಾದ ಅನ್ನದಾನವನ್ನು ಈ ಕಾರಣದಿಂದ ಮಾಡಲೇಬೇಕು.

ಅನ್ನದಃ ಸರ್ವಕಾಮೈಸ್ತು ಸುತೃಪ್ತಸ್ತ್ವಭ್ಯಲಂಕೃತಃ ।
ಪೂರ್ಣಚಂದ್ರಪ್ರಕಾಶೇನ ವಿಮಾನೇನ ವಿರಾಜತಾ ॥೮೮॥

ಸೇವ್ಯಮಾನೋ ವರಸ್ತ್ರೀಭಿರ್ದೇವಲೋಕಂ ಸ ಗಚ್ಛತಿ ॥೮೯॥

ಯಾವ ವ್ಯಕ್ತಿಯು ಅನ್ನದಾನವನ್ನು ಮಾಡುತ್ತಾನೋ ಅವನು ಈ ಲೋಕದಲ್ಲಿ ಸಕಲ ವಿಧವಾದ ಕಾಮನೆಗಳನ್ನೂ ಪಡೆದು ಸಂತೃಪ್ತನಾಗಿ, ಗತಿಸಿದ ಬಳಿಕ ಚೆನ್ನಾಗಿ ಅಲಂಕೃತವಾದ, ಪೂರ್ಣಚಂದ್ರನಂತೆ ಬೆಳಗುವ ವಿಮಾನದಲ್ಲಿ ಕುಳಿತು, ಶ್ರೇಷ್ಠರಾದ ಸ್ತ್ರೀಯರಿಂದ ಸತ್ಕರಿಸಲ್ಪಡುತ್ತಾ ದೇವಲೋಕಕ್ಕೆ ಸಾಗುತ್ತಾನೆ.

ಕ್ರೀಡಿತ್ವಾ ತು ತತಸ್ತಸ್ಮಿನ್ ವರ್ಷಕೋಟಿಂ ಯಥಾऽಮರಃ ।
ತತಶ್ಚಾಪಿ ಚ್ಯುತಃ ಕಾಲಾದಿಹ ಲೋಕೇ ಮಹಾಯಶಾಃ ॥೯೦॥

ವೇದಶಾಸ್ತ್ರಾರ್ಥತತ್ತ್ವಜ್ಞೋ ಭೋಗವಾನ್ ಬ್ರಾಹ್ಮಣೋ ಭವೇತ್ ॥೯೧॥

ದೇವಲೋಕದಲ್ಲಿ ಕೋಟಿವರ್ಷಗಳ ತನಕ ವಿಹರಿಸಿ ಪುಣ್ಯವು ಕ್ಷೀಣಿಸಿದ ಬಳಿಕ ಸ್ವರ್ಗಲೋಕದಿಂದ ಭೂಮಿಗೆ ಬಂದರೂ ಅವನು ಇಲ್ಲಿ ಮಹಾಕೀರ್ತಿವಂತನಾಗಿ ಬ್ರಾಹ್ಮಣನಾಗಿ ಹುಟ್ಟಿ, ವೇದಶಾಸ್ತ್ರಾರ್ಥ ತತ್ತ್ವಜ್ಞನಾಗಿ ಭೋಗವಂತನೂ ಆಗುತ್ತಾನೆ.

ಯಥಾಶ್ರದ್ಧಂ ತು ಯಃ ಕುರ್ಯಾನ್ಮನುಷ್ಯೇಷು ಪ್ರಜಾಯತೇ ।
ಮಹಾಧನಪತಿಃ ಶ್ರೀಮಾನ್ ವೇದವೇದಾಂಗಪಾರಗಃ ॥೯೨॥

ಸರ್ವಶಾಸ್ತ್ರಾರ್ಥವಿದ್ ವಿದ್ವಾನ್ ಭೋಗವಾನ್ ಬ್ರಾಹ್ಮಣೋ ಭವೇತ್ ॥

ಯಾವಾತನು ಮನುಷ್ಯರಲ್ಲಿ ಹುಟ್ಟಿ, ಶ್ರದ್ಧೆಯಿಂದ ಅನ್ನದಾನವನ್ನು ಮಾಡಿರುವನೋ, ಅವನು ಮಹಾಶ್ರೀಮಂತ, ವೇದ-ವೇದಾಂಗಗಳಲ್ಲಿ ಜ್ಞಾನಿ, ಸರ್ವಶಾಸ್ತ್ರಾರ್ಥ ತಿಳಿದವನು, ಪಂಡಿತನು, ಸುಖಿಯು, ಬ್ರಾಹ್ಮಣನೂ ಆಗಿ ಜನಿಸುತ್ತಾನೆ.

ಸರ್ವಾತಿಥ್ಯಂ ತು ಯಃ ಕುರ್ಯಾದ್ ವರ್ಷಮೇಕಮಕಲ್ಮಷಃ ।
ಧರ್ಮಾರ್ಜಿತಧನೋ ಭೂತ್ವಾ ಪಾಕಭೇದವಿವರ್ಜಿತಃ ॥೯೪॥

ದೇವಾನಿವ ಸ್ವಯಂ ವಿಪ್ರಾನರ್ಚಯಿತ್ವಾ ಪಿತೄನಪಿ ।
ವಿಪ್ರಾನುಗ್ರಾಸಮಾಶೀ ಯಸ್ತಸ್ಯ ಪುಣ್ಯಫಲಂ ಶೃಣು ॥೯೫॥

ಯಾವ ಮನುಷ್ಯನು ಶ್ರದ್ಧೆಯಿಂದ ಒಂದು ವರ್ಷದ ಕಾಲ ಮಾನಸಿಕವಾಗಿ ಯಾವ ಕಶ್ಮಲಗಳನ್ನು ಹೊಂದದೇ ಬಂದ ಅತಿಥಿಗಳನ್ನೆಲ್ಲ ಆರಾಧಿಸುತ್ತಾನೋ, ಪಂಕ್ತಿ ಭೇದವನ್ನು ಮಾಡದೆ ಅನ್ನದಾನವನ್ನು ಮಾಡಿದ್ದಾನೋ ಅವನು ಧರ್ಮದ ಫಲವನ್ನು ಸಂಪಾದಿಸಿಕೊಂಡು, ಸ್ವಯಂ ದೇವತೆಗಳಂತೆ ಬ್ರಾಹ್ಮಣರನ್ನು ಪೂಜಿಸಿ, ಪಿತೃಗಳನ್ನೂ ಪೂಜಿಸಿ, ಬ್ರಾಹ್ಮಣರು ಭೋಜನ ಮಾಡಿದ ಬಳಿಕ ತಾನು ಊಟ ಮಾಡಿದ ಪುಣ್ಯದಿಂದ ಯಾವ ಫಲವನ್ನು ಹೊಂದುತ್ತಾನೋ ಅದನ್ನು ವಿವರಿಸುತ್ತೇನೆ, ಕೇಳಿಸಿಕೊ.

ವರ್ಷೇಣೈಕೇನ ಯಾವಂತಿ ಪಿಂಡಾನ್ಯಶ್ನಂತಿ ಯೇ ದ್ವಿಜಾಃ ।
ತಾವದ್ ವರ್ಷಸಹಸ್ರಾಣಿ ಮಮ ಲೋಕೇ ಮಹೀಯತೇ ॥೯೬॥

ಒಂದು ವರ್ಷದಲ್ಲಿ ಮನೆಗೆ ಆಗಮಿಸಿದ ಅತಿಥಿಗಳು ಎಷ್ಟು ತುತ್ತುಗಳನ್ನು ಸ್ವೀಕರಿಸುತ್ತಾರೋ ಅಷ್ಟು ಸಾವಿರ ವರ್ಷಗಳ ಕಾಲ ನನ್ನ ಲೋಕದಲ್ಲಿ ಪೂಜ್ಯನಾಗುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದಿಹ ಲೋಕೇ ಮಹಾಯಶಾಃ ।
ವೇದಶಾಸ್ತ್ರಾರ್ಥತತ್ತ್ವಜ್ಞೋ ಭೋಗವಾನ್ ಬ್ರಾಹ್ಮಣೋ ಭವೇತ್ ॥೯೭॥

ಪುಣ್ಯವು ಕ್ಷೀಣಿಸಿದ ಬಳಿಕ ಕಾಲಾಂತರದಲ್ಲಿ ಮನುಷ್ಯಲೋಕಕ್ಕೆ ಆಗಮಿಸಿದ ಆತನು ಮಹಾಕೀರ್ತಿಸಂಪನ್ನನಾಗಿ, ವೇದಶಾಸ್ತ್ರಾರ್ಥ ತತ್ತ್ವಜ್ಞನಾಗಿ, ಭೋಗವಂತನಾಗಿಯೂ, ಬ್ರಾಹ್ಮಣನಾಗಿಯೂ ಹುಟ್ಟುತ್ತಾನೆ.

ಸರ್ವಾತಿಥ್ಯಂ ತು ಯಃ ಕುರ್ಯಾದ್ ಯಥಾಶ್ರದ್ಧಂ ನರೇಶ್ವರ ।
ಅಕಾಲನಿಯಮೇನಾಪಿ ಸತ್ಯವಾದೀ ಜಿತೇಂದ್ರಿಯಃ ॥೯೮॥

ಸತ್ಯಸಂಧೋ ಜಿತಕ್ರೋಧಃ ಶಾಖಾಧರ್ಮವಿವರ್ಜಿತಃ ।
ಅಧರ್ಮಭೀರುರ್ಧರ್ಮಿಷ್ಠೋ ಮಾಯಾಮಾತ್ಸರ್ಯವರ್ಜಿತಃ ॥೯೯॥

ಧರ್ಮರಾಜನೇ, ಯಾವ ವ್ಯಕ್ತಿಯು ಶ್ರದ್ಧೆಯಿಂದ ಕೂಡಿದವನಾಗಿ ಆಗಮಿಸಿದವರನ್ನೆಲ್ಲ ಸತ್ಕರಿಸುತ್ತಾನೋ, ಕಾಲದ ನಿಯಮವಿಲ್ಲದೆ ಯಾವ ಸಮಯದಲ್ಲಿಯೂ ಅತಿಥಿಗಳಾಗಿ ಆಗಮಿಸಿದವರನ್ನು ಸತ್ಕರಿಸುತ್ತಾನೋ ಅಂತಹ ಸತ್ಯವಾದಿಯಾದ, ಜಿತೇಂದ್ರಿಯನಾದ, ಸತ್ಯಸಂಧನಾದ, ಕ್ರೋಧವನ್ನು ಗೆದ್ದಿರುವ, ಶಾಖಾಧರ್ಮವನ್ನು ಬಿಟ್ಟು ಅತಿಥಿಗಳನ್ನು ಪೂಜಿಸಿರುತ್ತಾನೋ, ಅಧರ್ಮ-ಭೀರುವಾಗಿದ್ದಾನೋ, ಧರ್ಮಿಷ್ಠನಾಗಿದ್ದಾನೋ, ವಂಚನೆ-ಮಾತ್ಸರ್ಯಗಳಿಂದ ವರ್ಜಿತನಾಗಿದ್ದಾನೋ;

ವ್ಯಾಖ್ಯಾನ ವಿಶೇಷ– 'ಶಾಖಾಧರ್ಮವಿವರ್ಜಿತಃ' ಎಂದರೆ ಒಂದು ಮರದ ಕೊಂಬೆಯು ಕೆಲವೊಮ್ಮೆ ಹೂವನ್ನು ಬಿಡುತ್ತದೆ, ಆದರೆ ಹಣ್ಣು ಕಚ್ಚುವುದಿಲ್ಲ. ಕೆಲವೊಮ್ಮೆ ಹಣ್ಣನ್ನೇ ಬಿಡುತ್ತದೆ, ಹೂವನ್ನು ನೀಡುವುದಿಲ್ಲ. ಹೀಗೆ ಆಗಮಿಸಿದ ಅತಿಥಿಯನ್ನು ಕುರಿತು ಕೆಲವೊಮ್ಮೆ ಪ್ರಿಯವಾದ ಮಾತುಗಳನ್ನೇ ಆಡುತ್ತಾನೆ, ಆದರೆ ಅನ್ನದಾನ ಮಾಡುವುದಿಲ್ಲ. ಕೇವಲ ಮಾತಿನಿಂದಲೇ ಅತಿಥಿಯನ್ನು ಸಾಗಿಸುತ್ತಾನೆ. ಕೆಲವೊಮ್ಮೆ ಅತಿಥಿಯನ್ನು ಸತ್ಕರಿಸುತ್ತಾನೆ, ಆದರೆ ಪ್ರಿಯವಾದ ಮಾತುಗಳನ್ನಾಡುವುದಿಲ್ಲ. ಕಠಿಣವಾದ ಮುಖಮುದ್ರೆಯಿಂದ ಅನ್ನದಾನವನ್ನು ಮಾಡುತ್ತಾನೆ. ಈ ರೀತಿಯಾದ ವ್ಯಕ್ತಿಯನ್ನು ಶಾಖಾಧರ್ಮಿ ಎಂದು ಮಹಾಭಾರತವು ಕರೆದಿದೆ.

ಶಾಖಾಧರ್ಮಿಯಾಗಿ ಸತ್ಕರಿಸಬಾರದು. ಆಗಮಿಸಿದ ಅತಿಥಿಗೆ ಸಂತೋಷದ ಮುಖಮುದ್ರೆಯಿಂದ ಅನ್ನದಾನವನ್ನೂ ಮಾಡಬೇಕು ಎಂಬುದು ಗೃಹಸ್ಥನ ಧರ್ಮವಾಗಿದೆ. ಅಥವಾ ಶಾಖಾಧರ್ಮ ಎಂದರೆ ಮರದ ಕೊಂಬೆಯು ತನ್ನ ಬುಡದಲ್ಲಿ ಆಗಮಿಸಿದ ವ್ಯಕ್ತಿಗೆ ಮಾತ್ರ ನೆರಳನ್ನು ನೀಡುತ್ತದೆ. ದೂರದಲ್ಲಿರುವ ವ್ಯಕ್ತಿಗೆ ನೆರಳನ್ನು ನೀಡುವುದಿಲ್ಲ. ಹಾಗೆ ಗೃಹಸ್ಥನು ತನ್ನ ಮನೆಗೆ ಬಂದವರಿಗೆ ಮಾತ್ರ ಅನ್ನವನ್ನು ನೀಡುತ್ತಾನೆ, ಬೇರೆ ಕಡೆಗೆ ಹೋಗಿ ದಾನವನ್ನು ಮಾಡುವುದಿಲ್ಲ ಎಂದಾಗಬಾರದು. ಶಾಖಾ ಧರ್ಮವನ್ನು ಅನುಷ್ಠಾನ ಮಾಡಬಾರದು. ಹಸಿದ ವ್ಯಕ್ತಿಯು ದೂರದಲ್ಲಿದ್ದಾಗಲೂ ಅವನ ಹಸಿವನ್ನು ಅರಿತು ಯಾಚಿಸುವ ವ್ಯಕ್ತಿಗೆ ಅನ್ನದಾನವನ್ನು ಮಾಡುವುದು ಗೃಹಸ್ಥನ ಧರ್ಮವಾಗಿದೆ.

ಶ್ರದ್ದಧಾನಃ ಶುಚಿರ್ನಿತ್ಯಂ ಪಾಕಭೇದವಿವರ್ಜಿತಃ ॥೧೦೦॥

ಸ ವಿಮಾನೇನ ದಿವ್ಯೇನ ದಿವ್ಯರೂಪೀ ಮಹಾಯಶಾಃ ।
ಪುರಂದರಪುರಂ ಯಾತಿ ಗೀಯಮಾನೋಽಪ್ಸರೋಗಣೈಃ ॥೧೦೧॥

ಪಂಕ್ತಿಭೇದವನ್ನು ಮಾಡದೆ, ಶುಚಿಯಾಗಿ ನಿತ್ಯವೂ ಶ್ರದ್ಧೆಯಿಂದ ಯಾವನು ಅನ್ನದಾನವನ್ನು ಮಾಡುತ್ತಾನೋ ಅವನು ದಿವ್ಯರೂಪವನ್ನು ಧರಿಸಿದವನಾಗಿ ಮಹಾಕೀರ್ತಿಸಂಪನ್ನನಾಗಿ, ಅಪ್ಸರಾಗಣದಿಂದ ಸೇವ್ಯಮಾನನಾಗಿ ಪುರಂದರನ (ಇಂದ್ರನ) ಲೋಕಕ್ಕೆ ದಿವ್ಯವಾದ ವಿಮಾನದಿಂದ ಹೋಗುತ್ತಾನೆ.

ಮನ್ವಂತರಂ ತು ತತ್ರೈಕಂ ಕ್ರೀಡಿತ್ವಾ ದೇವಪೂಜಿತಃ ।
ಮನುಷ್ಯಲೋಕಮಾಗಮ್ಯ ಭೋಗವಾನ್ ಬ್ರಾಹ್ಮಣೋ ಭವೇತ್ ॥

ಒಂದು ಮನ್ವಂತರಗಳ ಕಾಲ ದೇವಪೂಜಿತನಾಗಿ, ಇಂದ್ರಲೋಕದಲ್ಲಿ ಸುಖವಾಗಿ ವಿಹರಿಸಿ, ಪುಣ್ಯ ಕ್ಷೀಣವಾದ ನಂತರ ಮನುಷ್ಯಲೋಕಕ್ಕೆ ಆಗಮಿಸಿ ಭೋಗವಂತನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ದಶ ಜನ್ಮನಿ ವಿಪ್ರತ್ವಂ ಪ್ರಾಪ್ನುಯಾದ್ ರಾಜಪೂಜಿತಃ ।
ಜಾತಿಸ್ಮರಶ್ಚ ಭವತಿ ಯತ್ರ ಯತ್ರೈವ ಜಾಯತೇ ॥೧೦೨॥

ಹತ್ತು ಜನ್ಮಗಳ ಕಾಲ ರಾಜಪೂಜಿತನಾಗಿ ಬ್ರಾಹ್ಮಣನಾಗಿಯೇ ಹುಟ್ಟುತ್ತಾನೆ. ಯಾವ ಯಾವ ಜನ್ಮದಲ್ಲಿ ಹುಟ್ಟನ್ನು ಪಡೆದರೂ ಹಿಂದಿನ ಜನ್ಮದ ಸ್ಮರಣೆಯನ್ನು ಹೊಂದಿದವನಾಗಿರುತ್ತಾನೆ.

ಅತಃ ಪರಂ ಪ್ರವಕ್ಷ್ಯಾಮಿ ಭೂಮಿದಾನಮನುತ್ತಮಮ್ ॥೧೦೪॥

ಯುಧಿಷ್ಠಿರನೇ, ಇನ್ನು ಮುಂದೆ ಭೂಮಿದಾನಕ್ಕೆ ಲಭಿಸುವ ಶ್ರೇಷ್ಠವಾದ ಫಲವನ್ನು ವರ್ಣಿಸುತ್ತೇನೆ, ಕೇಳಿಸಿಕೊ.

ಯಃ ಪ್ರಯಚ್ಛತಿ ವಿಪ್ರಾಯ ಭೂಮಿಂ ರಮ್ಯಾಂ ಸದಕ್ಷಿಣಮ್ ।
ಶ್ರೋತ್ರಿಯಾಯ ದರಿದ್ರಾಯ ಸಾಗ್ನಿಹೋತ್ರಾಯ ಪಾಂಡವ ॥೧೦೫॥

ಸ ಸರ್ವಕಾಮತೃಪ್ತಾತ್ಮಾ ಸರ್ವರತ್ನವಿಭೂಷಿತಃ ।
ಸರ್ವಪಾಪವಿನಿರ್ಮುಕ್ತೋ ದೀಪ್ಯಮಾನೋಽರ್ಕವತ್ ಸದಾ ॥೧೦೬॥

ಯಾವನು ರಮಣೀಯವಾದ ಭೂಮಿಯನ್ನು ದಕ್ಷಿಣಾ ಸಹಿತವಾಗಿ ಶ್ರೋತ್ರಿಯನಾದ ದರಿದ್ರನಾದ, ಅಗ್ನಿಹೋತ್ರಸಂಪನ್ನನಾದ ಬ್ರಾಹ್ಮಣನಿಗೆ ದಾನ ಮಾಡುತ್ತಾನೋ ಅವನು ಸಮಸ್ತ ಕಾಮನೆಗಳಿಂದಲೂ ತೃಪ್ತನಾಗಿ, ಸಮಸ್ತ ರತ್ನಗಳಿಂದ ಅಲಂಕೃತನಾಗಿ, ಸಮಸ್ತ ಪಾಪಗಳಿಂದ ಮುಕ್ತನಾಗಿ ಸೂರ್ಯನಂತೆ ಯಾವಾಗಲೂ ಬೆಳಗುತ್ತಾನೆ.

ಬಾಲಸೂರ್ಯಪ್ರಕಾಶೇನ ವಿಚಿತ್ರಧ್ವಜಶೋಭಿನಾ ।
ಯಾತಿ ಯಾನೇನ ದಿವ್ಯೇನ ಮಮ ಲೋಕಂ ಮಹಾಯಶಾಃ ॥೧೦೭॥

ತತ್ರ ದಿವ್ಯಾಂಗನಾಭಿಸ್ತು ಸೇವ್ಯಮಾನೋ ಯಥಾಸುಖಮ್ ।
ಕಾಮಗಃ ಕಾಮರೂಪೀ ಚ ಕ್ರೀಡತ್ಯಪ್ಸರಸಾಂ ಗಣೈಃ ॥೧೦೮॥

ಅಂತಹ ವ್ಯಕ್ತಿಯು ಗತಿಸಿದ ಬಳಿಕ ವಿಚಿತ್ರವಾದ ಧ್ವಜಗಳಿಂದ ಶೋಭಿಸುವ, ಉದಿಸುವ ಸೂರ್ಯನಂತೆ ಪ್ರಕಾಶವುಳ್ಳ, ದಿವ್ಯವಾದ ವಿಮಾನವನ್ನು ಏರಿಕೊಂಡು, ಕೀರ್ತಿಸಂಪನ್ನನಾಗಿ, ದಿವ್ಯಾಂಗನೆಯರಿಂದ ಸೇವ್ಯಮಾನನಾಗಿ, ಇಚ್ಛಾರೂಪವನ್ನು ಪಡೆದು, ಅಪ್ಸರಾಗಣಗಳಿಂದ ಸಂತೋಷಪಡುತ್ತಾ ಸ್ವರ್ಗಲೋಕವನ್ನು ಹೊಂದುತ್ತಾನೆ.

ಯಾವದ್ ಬಿಭರ್ತಿ ಲೋಕಾನ್ ವೈ ಭೂಮಿಃ ಕುರುಕುಲೋದ್ವಹ ।
ತಾವದ್ ಭೂಮಿಪ್ರದಃ ಕಾಮಂ ಮಮ ಲೋಕೇ ಮಹೀಯತೇ ॥

ಎಲ್ಲಿಯ ತನಕವೂ ಈ ಭೂಮಿಯು ಲೋಕವನ್ನು ಧರಿಸಿಕೊಂಡಿರುತ್ತದೋ

ಅಲ್ಲಿಯ ತನಕವೂ ಭೂಮಿಯನ್ನು ದಾನ ಮಾಡಿದ ವ್ಯಕ್ತಿಯು ನನ್ನ ಲೋಕದಲ್ಲಿ ಸುಖವಾಗಿ ಸತ್ಕೃತನಾಗುತ್ತಾನೆ.

ನ ಹಿ ಭೂಮಿಪ್ರದಾನಾದ್ ವೈ ದಾನಮನ್ಯದ್ ವಿಶಿಷ್ಯತೇ ।
ನ ಚಾಪಿ ಭೂಮಿಹರಣಾತ್ ಪಾಪಮನ್ಯದ್ ವಿಶಿಷ್ಯತೇ ॥೧೧೦॥

ಯುಧಿಷ್ಠಿರನೇ, ಭೂದಾನಕ್ಕಿಂತಲೂ ಶ್ರೇಷ್ಠವಾದ ಮತ್ತೊಂದು ದಾನವು ಇರುವುದಿಲ್ಲ. ಅದರಂತೆ ಭೂಮಿಯನ್ನು ಅಪಹರಿಸುವುದಕ್ಕಿಂತಲೂ ಬೇರೆಯಾದ ಪಾಪಕರ್ಮವು ಜಗತ್ತಿನಲ್ಲಿ ಇರುವುದಿಲ್ಲ.

ದಾನಾನ್ಯನ್ಯಾನಿ ಹೀಯಂತೇ ಕಾಲೇನ ಕುರುಪುಂಗವ ।
ಭೂಮಿದಾನಸ್ಯ ಪುಣ್ಯಸ್ಯ ಕ್ಷಯೋ ನೈವೋಪಪದ್ಯತೇ ॥೧೧೧॥

ಕುರುಶ್ರೇಷ್ಠನೇ, ಇತರ ದಾನಗಳೆಲ್ಲವೂ ಕಾಲಾಂತರದಲ್ಲಿ ದಾನದ ಫಲವನ್ನು ಕ್ಷಯಗೊಳಿಸಿಕೊಳ್ಳುತ್ತವೆ. ಆದರೆ ಭೂದಾನಕ್ಕೆ ಲಭಿಸುವ ಫಲವು ಎಂದಿಗೂ ಕ್ಷೀಣವಾಗುವುದೇ ಇಲ್ಲ.

ಬ್ರಾಹ್ಮಣಾಯ ದರಿದ್ರಾಯ ಭೂಮಿಂ ದತ್ತ್ವಾ ತು ಯೋ ನರಃ ।
ನ ಹಿಂಸತಿ ನರವ್ಯಾಘ್ರ ತಸ್ಯ ಪುಣ್ಯಫಲಂ ಶೃಣು ॥೧೧೨॥

ಯಾವ ವ್ಯಕ್ತಿಯು ದರಿದ್ರನಾದ ಬ್ರಾಹ್ಮಣನಿಗೆ ಭೂಮಿಯನ್ನು ದಾನ ಮಾಡಿ, ಯಾವ ವ್ಯಕ್ತಿಗಳನ್ನೂ ಹಿಂಸಿಸದೆ ಭೂಮಿಯಲ್ಲಿ ವಾಸ ಮಾಡುತ್ತಾನೋ ಅಂತಹ ವ್ಯಕ್ತಿಗೆ ಲಭಿಸುವ ಪುಣ್ಯವೇನೆಂಬುದನ್ನು ನರವ್ಯಾಘ್ರನೇ, ನಿನಗೆ ತಿಳಿಸುತ್ತೇನೆ, ಕೇಳಿಸಿಕೊ.

ಸಪ್ತದಿರ್ಯಿಪಸಮುದ್ರಾಂತಾ ರತ್ನಧಾನ್ಯಸಮಾಕುಲಾ ।
ಸಶೈಲವನದುರ್ಗಾಢ್ಯಾ ತೇನ ದತ್ತಾ ಮಹೀ ಭವೇತ್ ॥೧೧೩॥

ಸಮುದ್ರಾಂತವಾದ ಏಳು ದಿರ್ಯಿಪಗಳಲ್ಲಿ ರತ್ನ-ಧಾನ್ಯಗಳನ್ನು ತುಂಬಿ ಬೆಟ್ಟ, ವನ, ದುರ್ಗಗಳಿಂದ ಕೂಡಿದ ಸಪ್ತದಿರ್ಯಿಪಗಳ ದಾನವು ಯಾವ ಫಲವನ್ನು ಕೊಡುತ್ತದೋ ದರಿದ್ರ ಬ್ರಾಹ್ಮಣನಿಗೆ ಕೊಟ್ಟ ಭೂದಾನವು ಅಷ್ಟೇ ಫಲವನ್ನು ಹೊಂದುತ್ತದೆ.

ಭೂಮಿಂ ದೃಷ್ಟ್ವಾ ದೀಯಮಾನಾಂ ಶ್ರೋತ್ರಿಯಾಯಾಹಿತಾಗ್ನಯೇ ।
ಸರ್ವಭೂತಾನಿ ಮನ್ಯಂತೇ ಮಾಂ ದದಾತೀತಿ ಹರ್ಷವತ್ ॥೧೧೪॥

ಆಹಿತಾಗ್ನಿಯಾದ, ಶ್ರೋತ್ರಿಯನಾದ ಬ್ರಾಹ್ಮಣನಿಗೆ ಕೊಡುವ ಭೂದಾನವು ನನ್ನನ್ನೇ ದಾನ ಮಾಡಿದ ಫಲವನ್ನು ನೀಡುತ್ತದೆ.

ಸುವರ್ಣಮಣಿರತ್ನಾನಿ ಧನಧಾನ್ಯವಸೂನಿ ಚ ।
ಸರ್ವದಾನಾನಿ ವೈ ರಾಜನ್ ದದಾತಿ ವಸುಧಾಂ ದದತ್ ॥೧೧೫॥

ಭೂಮಿಯನ್ನು ದಾನ ಮಾಡಿದ ವ್ಯಕ್ತಿಯು ಸಮಸ್ತ ವಿಧವಾದ ಬಂಗಾರ, ಮಣಿರತ್ನಗಳನ್ನು, ಧನ-ಧಾನ್ಯಗಳನ್ನು, ಸಂಪತ್ತುಗಳನ್ನು, ಸಮಸ್ತ ವಿಧವಾದ ದಾನಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಸಾಗರಾನ್ ಸರಿತಃ ಶೈಲಾನ್ ಸಮಾನಿ ವಿಷಮಾಣಿ ಚ ।
ಸರ್ವಗಂಧರಸಾಂಶ್ಚೈವ ದದಾತಿ ವಸುಧಾಂ ದದತ್ ॥೧೧೬॥

ಭೂಮಿಯನ್ನು ದಾನಮಾಡಿದ ವ್ಯಕ್ತಿಯು ಸಮುದ್ರಗಳನ್ನೂ, ಸರೋವರಗಳನ್ನೂ, ಬೆಟ್ಟಗಳನ್ನೂ, ಸಮಸ್ತ ಗಂಧ-ರಸಗಳನ್ನೂ ದಾನ ಮಾಡಿದ ಫಲವನ್ನು ಹೊಂದುತ್ತಾನೆ.

ಓಷಧೀಃ ಫಲಸಂಪನ್ನಾ ನಾನಾಪುಷ್ಪಸಮನ್ವಿತಾಃ ।
ಕಮಲೋತ್ಪಲಷಂಡಾಶ್ಚ ದದಾತಿ ವಸುಧಾಂ ದದತ್ ॥೧೧೭॥

ಫಲ-ಪುಷ್ಪಗಳಿಂದ ಸಮೃದ್ಧವಾದ ಗಿಡ-ಮರಗಳನ್ನೂ, ನಾನಾ ಪುಷ್ಪಗಳಿಂದ ಕೂಡಿದ ಮರಗಳನ್ನೂ, ಕಮಲಪುಷ್ಪಗಳನ್ನೂ, ನೀಲಕಮಲಗಳನ್ನೂ, ಅನೇಕ ಮರಗಳನ್ನು ದಾನ ಮಾಡಿದ ಫಲವನ್ನು ಭೂದಾನ ಮಾಡಿದ ವ್ಯಕ್ತಿಯು ಹೊಂದುತ್ತಾನೆ.

ಧರ್ಮಂ ಕಾಮಂ ತಥಾ ಚಾರ್ಥಂ ವೇದಾನ್ ಯಜ್ಞಾಂಸ್ತಥೈವ ಚ ।
ಸ್ವರ್ಗಮೋಕ್ಷಗತೀಶ್ಚೈವ ದದಾತಿ ವಸುಧಾಂ ದದತ್ ॥೧೧೮॥

ಯಾವಾತನು ಭೂಮಿಯನ್ನು ದಾನ ಮಾಡುತ್ತಾನೋ ಧರ್ಮ-ಅರ್ಥ-ಕಾಮ, ಸಮಸ್ತ ಯಜ್ಞಗಳ ಫಲ, ಸ್ವರ್ಗ-ಮೋಕ್ಷಗಳ ಗತಿಯನ್ನು ಹೊಂದುವವನಾಗುತ್ತಾನೆ.

ಅಗ್ನಿಷ್ಟೋಮಾದಿಭಿರ್ಯಜ್ಞೈರ್ಯೇ ಯಜಂತಿ ಸದಕ್ಷಿಣೈಃ ।
ನ ತತ್ಫಲಂ ಭವೇತ್ ತೇಷಾಂ ಭೂಮಿದಾನಸ್ಯ ಯತ್ಫಲಮ್ ॥೧೧೯॥

ಯಾವಾತನು ಭೂದಾನದಿಂದ ಯಾವ ಫಲವನ್ನು ಹೊಂದುತ್ತಾನೋ ಆ ಫಲವನ್ನು ಅಗ್ನಿಷ್ಟೋಮ ಮೊದಲಾದ ಯಜ್ಞಗಳಿಂದಾಗಲಿ, ಭೂರಿದಕ್ಷಿಣೆಗಳಿಂದಾಗಲಿ ಹೊಂದಲಾಗದು.

ಶ್ರೋತ್ರಿಯಾಯ ಮಹೀಂ ದತ್ತ್ವಾ ಯೋ ನ ಹಿಂಸತಿ ಪಾಂಡವ ॥

ತಂ ಜನಾಃ ಕಥಯಿಷ್ಯಂತಿ ಯಾವಲ್ಲೋಕಾಃ ಪ್ರತಿಷ್ಠಿತಾಃ ।
ತಾವತ್ ಸ್ವರ್ಗೋಪಭೋಗಾನಾಂ ಭೋಕ್ತಾರಂ ಪಾಂಡುನಂದನ ॥

ಯಾವ ವ್ಯಕ್ತಿಯು ಶ್ರೋತ್ರಿಯಬ್ರಾಹ್ಮಣನಿಗೆ ಭೂಮಿಯನ್ನು ದಾನ ಮಾಡಿ, ಹಿಂಸೆಯನ್ನು ತ್ಯಜಿಸಿರುತ್ತಾನೋ ಅಂತಹ ವ್ಯಕ್ತಿಯನ್ನು ದೇವತೆಗಳು ಸಮಸ್ತ ಲೋಕಗಳು ಇರುವ ತನಕವೂ ಸುಖ ಹೊಂದುವಂತೆ ಮಾಡುತ್ತಾರೆ. ಇಂಥವರು ಸಮಸ್ತ ಸ್ವರ್ಗಲೋಕದ ಸುಖಗಳಿಗೂ ಅರ್ಹರೆಂದು ಭಾವಿಸುತ್ತಾರೆ.

ಸಸ್ಯಪೂರ್ಣಾಂ ಮಹೀಂ ಯಸ್ತು ಶ್ರೋತ್ರಿಯಾಯ ಪ್ರಯಚ್ಛತಿ ।
ಪಿತರಸ್ತಸ್ಯ ತೃಪ್ಯಂತಿ ಯಾವದಾಭೂತಸಂಪ್ಲವಮ್ ॥೧೨೨॥

ಸಸ್ಯಗಳಿಂದ ತುಂಬಿರುವ ಭೂಮಿಯನ್ನು ಶ್ರೋತ್ರಿಯ ಬ್ರಾಹ್ಮಣರಿಗೆ ಯಾವನು ದಾನ ಮಾಡುತ್ತಾನೋ ಅಂತಹ ವ್ಯಕ್ತಿಯ ಪಿತೃಗಳು ಪ್ರಲಯವಾಗುವ ತನಕವೂ ತಮ್ಮ ಲೋಕದಲ್ಲಿ ಸುಖವನ್ನು ಹೊಂದುತ್ತಾರೆ.

ಮಮ ರುದ್ರಸ್ಯ ಸವಿತುಸ್ತ್ರಿದಶಾನಾಂ ತಥೈವ ಚ ।
ಪ್ರೀತಯೇ ವಿದ್ಧಿ ರಾಜೇಂದ್ರ ಭೂಮಿರ್ದತ್ತಾ ದ್ವಿಜಾಯ ವೈ ॥೧೨೩॥

ಯಾವ ವ್ಯಕ್ತಿಯು ಬ್ರಾಹ್ಮಣನಿಗೆ ಭೂಮಿಯನ್ನು ದಾನ ಮಾಡುತ್ತಾನೋ ಆ ದಾನದಿಂದ ನನಗೆ, ಮಹರುದ್ರನಿಗೆ, ಸೂರ್ಯನಿಗೆ, ಸಮಸ್ತ ದೇವತೆಗಳಿಗೆ ಸಂತೋಷ ಉಂಟಾಗುತ್ತದೆ ಎಂದು ತಿಳಿದುಕೊ.

ತೇನ ಪುಣ್ಯೇನ ಪೂತಾತ್ಮಾ ದಾತಾ ಭೂಮೇರ್ಯುಧಿಷ್ಠಿರ ।
ಮಮ ಸಾಲೋಕ್ಯಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥೧೨೪॥

ಯಾವನು ಭೂದಾನ ಮಾಡುತ್ತಾನೋ ಆ ವ್ಯಕ್ತಿಯು ಲಭಿಸಿದ ಪುಣ್ಯದಿಂದ ಪೂತಾತ್ಮನಾಗಿ ನನ್ನ ಲೋಕವನ್ನೇ ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಯತ್ ಕಿಂಚಿತ್ ಕುರುತೇ ಪಾಪಂ ಪುರುಷೋ ವೃತ್ತಿಕರ್ಶಿತಃ ।
ಸ ಚ ಗೋಕರ್ಣಮಾತ್ರೇಣ ಭೂಮಿದಾನೇನ ಶುದ್ಧ್ಯತಿ ॥೧೨೫॥

ಯಾವ ವ್ಯಕ್ತಿಯು ವೃತ್ತಿಯನ್ನವಲಂಬಿಸಿ ಪಾಪಗಳನ್ನು ಎಸಗಿದ್ದಾನೋ ಅಂತಹ ವ್ಯಕ್ತಿಯು ಗೋಕರ್ಣಪರಿಮಾಣದ ಭೂಮಿಯನ್ನು ದಾನ ಮಾಡುವುದರಿಂದಲೂ ಶುದ್ಧಿಯನ್ನು ಹೊಂದುತ್ತಾನೆ.

ಮಾಸೋಪವಾಸೇ ಯತ್ಪುಣ್ಯಂ ಕೃಚ್ಛ್ರೇ ಚಾಂದ್ರಾಯಣೇऽಪಿ ಚ ।
ಭೂಮಿಗೋಕರ್ಣಮಾತ್ರೇಣ ತತ್ಪುಣ್ಯಂ ತು ವಿಧೀಯತೇ ॥೧೨೬॥

ಒಂದು ತಿಂಗಳು ಉಪವಾಸ ಮಾಡಿದಾಗ ಯಾವ ಪುಣ್ಯ ಲಭಿಸುತ್ತದೋ, ಕೃಚ್ಛ್ರ, ಚಾಂದ್ರಾಯಣಗಳನ್ನು ಆಚರಿಸಿದಾಗ ಯಾವ ಪುಣ್ಯವು ಲಭಿಸುತ್ತದೋ ಅಷ್ಟು ಪುಣ್ಯವು ಕೇವಲ ಗೋಕರ್ಣ ಪರಿಮಾಣದ ಭೂಮಿಯನ್ನು ದಾನ ಮಾಡುವುದರಿಂದ ಲಭಿಸುತ್ತದೆ.

ವೇದಾನಾಂ ಪಾರಣೇ ಯತ್ತು ಪರಂ ಪುಣ್ಯಮುದಾಹೃತಮ್ ।
ಭೂಮಿಗೋಕರ್ಣಮಾತ್ರೇಣ ತತ್ಪುಣ್ಯಂ ತು ವಿಧೀಯತೇ ॥೧೨೭॥

ವೇದಗಳನ್ನು ಪಾರಾಯಣ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೋ ಅಷ್ಟು ಪುಣ್ಯವು ಕೇವಲ ಗೋಕರ್ಣಪರಿಮಾಣದ ಭೂಮಿಯನ್ನು ದಾನ ಮಾಡಿದವನಿಗೆ ಲಭಿಸುತ್ತದೆ.

ಸರ್ವತೀರ್ಥಾಭಿಷೇಕೇ ಚ ಯತ್ಪುಣ್ಯಂ ಸಮುದಾಹೃತಮ್ ।
ಭೂಮಿಗೋಕರ್ಣಮಾತ್ರೇಣ ತತ್ಪುಣ್ಯಂ ತು ವಿಧೀಯತೇ ॥೧೨೮॥

ಸಮಸ್ತ ತೀರ್ಥಗಳನ್ನು ಸೇವಿಸಿದಾಗ, ಆಯಾ ತೀರ್ಥಗಳಿಂದ ಅಭಿಷೇಕ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೋ ಆ ಪುಣ್ಯವು ಕೇವಲ ಗೋಕರ್ಣ ಪರಿಮಾಣದ ಭೂಮಿಯನ್ನು ದಾನ ಮಾಡಿದಾಗ ಲಭಿಸುತ್ತದೆ.

ಯುಧಿಷ್ಠಿರಃ

ದೇವದೇವ ನಮಸ್ತೇಽಸ್ತು ವಾಸುದೇವ ಸುರೇಶ್ವರ ।
ಗೋಕರ್ಣಸ್ಯ ಪ್ರಮಾಣಂ ವೈ ವಕ್ತುಮರ್ಹಸಿ ತತ್ತ್ವತಃ ॥೧೨೯॥

ಯುಧಿಷ್ಠಿರ– ದೇವದೇವನೇ, ವಾಸುದೇವನೇ, ದೇವತೆಗಳಿಗೆಲ್ಲ ಅಧೀಶನೇ, ನಿನಗೆ ನಮಸ್ಕಾರ. ಗೋಕರ್ಣ ಪರಿಮಾಣದ ಭೂಮಿ ಎಂದು ಹೇಳುತ್ತಿರುವಿ. ಗೋಕರ್ಣ ಪರಿಮಾಣವೆಂದರೆ ಎಷ್ಟು? ಇದನ್ನು ಯಥಾರ್ಥವಾಗಿ ತಿಳಿಸು.

ಶ್ರೀಭಗವಾನ್

ಶೃಣು ಗೋಕರ್ಣಮಾತ್ರಸ್ಯ ಪ್ರಮಾಣಂ ಪಾಂಡುನಂದನ ॥೧೩೦॥

ಶ್ರೀಭಗವಾನ್– ಯುಧಿಷ್ಠಿರನೇ, ಗೋಕರ್ಣದ ಪ್ರಮಾಣವೆಷ್ಟೆಂಬುದನ್ನು ಹೇಳುತ್ತೇನೆ, ಕೇಳಿಸಿಕೊ.

ತ್ರಿಂಶದಂಡಪ್ರಮಾಣೇನ ಪ್ರಮಿತಂ ಸರ್ವತೋದಿಶಮ್ ।
ಪ್ರತ್ಯಕ್ ಪ್ರಾಗಪಿ ರಾಜೇಂದ್ರ ತತ್ ತಥಾ ದಕ್ಷಿಣೋತ್ತರಮ್ ॥೧೩೧॥

ಗೋಕರ್ಣಂ ತದ್ವಿದಃ ಪ್ರಾಹುಃ ಪ್ರಮಾಣಂ ಧರಣೇರ್ನೃಪ ॥೧೩೨॥

ಪೂರ್ವ-ಪಶ್ಚಿಮವಾಗಿ ಮತ್ತು ದಕ್ಷಿಣೋತ್ತರವಾಗಿ ಮೂವತ್ತು ದಂಡಗಳನ್ನು (ಒಂದು ಮಾರು= ಒಂದು ದಂಡ) ಮೂವತ್ತು ದಂಡಗಳನ್ನು ಅಳೆದರೆ ಎಷ್ಟು ವಿಸ್ತಾರವಿರುವುದೋ ಅದಕ್ಕೆ ಗೋಕರ್ಣವೆಂದು ಭೂಮಿಯ ಅಳತೆಯನ್ನು ತಿಳಿದವರು ಹೇಳುತ್ತಾರೆ.

ಸವೃಷಂ ಗೋಶತಂ ಯತ್ರ ಸುಖಂ ತಿಷ್ಠತ್ಯಯಂತ್ರಿತಮ್ ।
ಸವತ್ಸಂ ಕುರುಶಾರ್ದೂಲ ತಚ್ಚ ಗೋಕರ್ಣಮುಚ್ಯತೇ ॥೧೩೩॥

ಎಷ್ಟು ವಿಸ್ತಾರವಾದ ಪ್ರದೇಶದಲ್ಲಿ ಹೋರಿಗಳಿಂದಲೂ, ಕರುಗಳಿಂದಲೂ

ಕೂಡಿರುವ ನೂರು ಗೋವುಗಳು ಸುಖವಾಗಿ, ಆರಾಮವಾಗಿ ಇಕ್ಕಟ್ಟಿಲ್ಲದೆ ಇರಲು ಅವಕಾಶ ಇರುತ್ತದೋ ಅಷ್ಟು ವಿಸ್ತಾರವಾದ ಪ್ರದೇಶಕ್ಕೆ ಗೋಕರ್ಣ ಎಂದು ಹೆಸರು.

ಕಿಂಕರಾ ಮೃತ್ಯುದಂಡಾಶ್ಚ ಕುಂಭೀಪಾಕಾಶ್ಚ ದಾರುಣಾಃ ।
ಘೋರಾಶ್ಚ ವಾರುಣಾಃ ಪಾಶಾ ನೋಪಸರ್ಪಂತಿ ಭೂಮಿದಮ್ ॥

ಭೂದಾನವನ್ನು ಮಾಡಿದ ವ್ಯಕ್ತಿಯ ಸಮೀಪಕ್ಕೆ ಯಮಭಟರು ಸುಳಿಯುವುದಿಲ್ಲ. ಮೃತ್ಯುವಿನ ದಂಡಗಳು ಭೂದಾನಿಯನ್ನು ಪ್ರಹರಿಸುವುದಿಲ್ಲ. ಕುಂಭೀಪಾಕ ಮುಂತಾದ ದಾರುಣವಾದ ನರಕ ಶಿಕ್ಷೆಗಳು ಬಾಧಿಸವು. ಘೋರವಾದ ವರುಣನ ಪಾಶುಗಳು ಭೂದಾನಿಯನ್ನು ಬಂಧಿಸುವುದಿಲ್ಲ.

ನಿರಯಾ ರೌರವಾದ್ಯಾಶ್ಚ ತಥಾ ವೈತರಣೀ ನದೀ ।
ತೀವ್ರಾಶ್ಚ ಯಾತನಾಃ ಕಷ್ಟಾ ನೋಪಸರ್ಪಂತಿ ಭೂಮಿದಮ್ ॥೧೩೫॥

ದಾರುಣವಾದ ರೌರವ ನರಕಗಳನ್ನಾಗಲಿ, ವೈತರಣಿ ನದಿಯನ್ನಾಗಲಿ ನೋಡಬೇಕಾಗಿಲ್ಲ. ತೀವ್ರವಾದ ಯಮ ಯಾತನೆಗಳ ಕಷ್ಟಕ್ಕೆ ಭೂದಾನ ಮಾಡಿದವರು ಗುರಿಯಾಗುವುದಿಲ್ಲ.

ಚಿತ್ರಗುಪ್ತಃ ಕಲಿಃ ಕಾಲಃ ಕೃತಾಂತೋ ಮೃತ್ಯುರೇವ ಚ ।
ಯಮಶ್ಚ ಭಗವಾನ್ ಸಾಕ್ಷಾತ್ ಪೂಜಯಂತಿ ಮಹೀಪ್ರದಮ್ ॥೧೩೬॥

ಅದಕ್ಕೆ ಬದಲಾಗಿ ಚಿತ್ರಗುಪ್ತ, ಕಲಿ, ಕಾಲ, ಕೃತಾಂತ, ಮೃತ್ಯು, ಪೂಜ್ಯನಾದ ಯಮಧರ್ಮ- ಇವರೆಲ್ಲರೂ ಸಾಕ್ಷಾತ್ತಾಗಿಯೇ ಭೂದಾನ ಮಾಡಿದ ವ್ಯಕ್ತಿಯನ್ನು ಸತ್ಕರಿಸುತ್ತಾರೆ.

ರುದ್ರಃ ಪಶುಪತಿಃ ಶಕ್ರಃ ಸುರಾ ಋಷಿಗಣಾಸ್ತಥಾ ।
ಅಹಂ ಚ ಪ್ರೀತಿಮಾನ್ ರಾಜನ್ ಪೂಜಯಾಮಿ ಮಹೀಪ್ರದಮ್ ॥

ಯುಧಿಷ್ಠಿರನೇ, ನಾನೂ ಕೂಡ ಭೂದಾನ ಮಾಡಿದ ವ್ಯಕ್ತಿಯನ್ನು ಪ್ರೀತಿಯಿಂದ ಸತ್ಕರಿಸುತ್ತೇನೆ. ರುದ್ರದೇವನು, ಚತುರ್ಮುಖ ಬ್ರಹ್ಮನು, ಇಂದ್ರನು, ದೇವತೆಗಳು, ಋಷಿಗಳು ಎಲ್ಲರೂ ಭೂದಾನ ಮಾಡಿದ ವ್ಯಕ್ತಿಯನ್ನು ಆದರದಿಂದ ಸತ್ಕರಿಸುತ್ತಾರೆ.

ಕೃಶವೃತ್ತಸ್ಯ ಕೃಶಗೋಃ ಕೃಶಾಶ್ವಸ್ಯ ಕೃಶಾತಿಥೇಃ ।
ಭೂಮಿರ್ದೇಯಾ ನರಶ್ರೇಷ್ಠ ಸ ನಿಧಿಃ ಪಾರಲೌಕಿಕಃ ॥೧೩೮॥

ಯಾವ ವ್ಯಕ್ತಿಯ ಕುಟುಂಬದ ಜನರು ಜೀವಿಕೆಗಾಗಿ ತೊಂದರೆಗೀಡಾಗಿ ಕೃಶರಾಗಿದ್ದಾರೋ, ಯಾವನ ಹಸುಗಳು, ಕುದುರೆಗಳು ದುರ್ಬಲವಾಗಿವೆಯೋ, ಯಾವನು ಯಾವಾಗಲೂ ಅತಿಥಿ ಸತ್ಕಾರದಲ್ಲೇ ನಿರತನಾಗಿದ್ದಾನೋ ಅಂತಹ ವ್ಯಕ್ತಿಗೆ ಭೂದಾನವನ್ನು ಮಾಡಬೇಕು. ಭೂದಾನದ ಫಲವು ಪರಲೋಕಕ್ಕೆ ಕಾರಣವಾಗುವ ನಿಧಿಯಂತೆ ಇದೆ.

ಸೀದಮಾನಕುಟುಂಬಾಯ ಶ್ರೋತ್ರಿಯಾಯಾಹಿತಾಗ್ನಯೇ ।
ವ್ರತಸ್ಥಾಯ ದರಿದ್ರಾಯ ಭೂಮಿರ್ದೇಯಾ ನರಾಧಿಪ ॥೧೩೯॥

ಯಾವನ ಕುಟುಂಬವು ಜೀವಿಕೆಗೆ ಅವಕಾಶವಿಲ್ಲದೆ ನಶಿಸಿ ಹೋಗುತ್ತಿರುತ್ತದೋ ಅಂತಹ ದರಿದ್ರನಾದ, ಶ್ರೋತ್ರಿಯನಾದ, ವ್ರತನಿಯಮಾದಿಗಳನ್ನು ಆಚರಿಸುವ ಅಗ್ನಿಹೋತ್ರಿಯಾದ ಬ್ರಾಹ್ಮಣನಿಗೆ ಭೂದಾನವನ್ನು ಮಾಡಬೇಕು.

ಯಥಾ ಜನಿತ್ರೀ ಕ್ಷೀರೇಣ ಪುತ್ರಂ ವರ್ಧಯತಿ ಧ್ರುವಮ್ ।
ದಾತಾರಮನುಗೃಹ್ಣಾತಿ ದತ್ತಾ ಹ್ಯೇವಂ ವಸುಂಧರಾ ॥೧೪೦॥

ಯಾವ ರೀತಿಯಲ್ಲಿ ತಾಯಿಯಾದವಳು ಹಾಲಿನಿಂದ ಮಗುವನ್ನು ಪೋಷಿಸಿ ಬೆಳೆಸುತ್ತಾಳೋ ಹಾಗೆ ಭೂಮಿಯನ್ನು ದಾನ ಮಾಡಿದ ವ್ಯಕ್ತಿಯನ್ನು ಭೂದೇವಿಯು ಎಲ್ಲ ಪ್ರಕಾರದಿಂದಲೂ ವೃದ್ಧಿ ಹೊಂದುವಂತೆ ಅನುಗ್ರಹಿಸುತ್ತಾಳೆ.

ಯಥಾ ಬಿಭರ್ತಿ ಗೌರ್ವತ್ಸಂ ಸೃಜಂತೀ ಕ್ಷೀರಮಾತ್ಮನಃ ।
ತಥಾ ಸರ್ವಗುಣೋಪೇತಾ ಭೂಮಿರ್ವಹತಿ ಭೂಮಿದಮ್ ॥೧೪೧॥

ಯಾವ ರೀತಿಯಲ್ಲಿ ಗೋವು ತನ್ನಲ್ಲಿಯೇ ಹಾಲನ್ನು ಸೃಷ್ಟಿಸಿ ತನ್ನ ಕರುವಿನ ಧಾರಣೆ, ಪೋಷಣೆಯನ್ನು ಮಾಡುವುದೋ ಅದೇ ರೀತಿಯಲ್ಲಿ ಸರ್ವಗುಣೋಪೇತಳಾದ ಭೂದೇವಿಯು ತನ್ನನ್ನು ಸತ್ಪಾತ್ರನಿಗೆ ದಾನ ಮಾಡಿದ ವ್ಯಕ್ತಿಯನ್ನು ಧರಿಸಿ, ಪೋಷಿಸುತ್ತಾಳೆ.

ಯಥಾ ಬೀಜಾನಿ ರೋಹಂತಿ ಜಲಸಿಕ್ತಾನಿ ಭೂತಲೇ ।
ತಥಾ ಕಾಮಾಃ ಪ್ರರೋಹಂತಿ ಭೂಮಿದಸ್ಯ ದಿನೇ ದಿನೇ ॥೧೪೨॥

ಯಾವ ರೀತಿಯಾಗಿ ನೀರಿನಿಂದ ನೆನೆದ ಬೀಜಗಳು ಮೊಳಕೆಯಾಗುತ್ತವೋ, ಅದೇ ರೀತಿ ಭೂದಾನ ಮಾಡಿದವನಿಗೆ ಪ್ರತಿದಿನವೂ ಅವನ ಮನಸ್ಸಿನಲ್ಲಿ ಸಂಕಲ್ಪಿಸುವ ಮನೋರಥಗಳು ಪೂರ್ಣವಾಗುತ್ತಲೇ ಇರುತ್ತವೆ.

ಯಥೋದಯಸ್ತು ಸೂರ್ಯಸ್ಯ ತಮಃ ಸರ್ವಂ ವ್ಯಪೋಹತಿ ।
ತಥಾ ಪಾಪಂ ನರಸ್ಯೇಹ ಭೂಮಿದಾನಂ ವ್ಯಪೋಹತಿ ॥೧೪೩॥

ಯಾವ ರೀತಿಯಾಗಿ ಸೂರ್ಯನ ತೇಜಸ್ಸು ಸಮಸ್ತ ತಮಸ್ಸನ್ನು ಪರಿಹರಿಸುತ್ತದೋ, ಅದೇ ರೀತಿ ಭೂದಾನವು ದಾನಿಯ ಸಮಸ್ತ ಪಾಪಗಳನ್ನು ಪರಿಹರಿಸುತ್ತದೆ.

ದಾತಾ ದಶಾನುಗೃಹ್ಣಾತಿ ಯೋ ಹರೇದ್ದಶ ಹಂತಿ ಚ ।
ಅತೀತಾನ್ಯಾಗತಾನೀಹ ಕುಲಾನಿ ಕುರುಪುಂಗವ ॥೧೪೪॥

ಆಶ್ರುತ್ಯ ಭೂಮಿದಾನಂ ತು ದತ್ತಾ ತ್ವ ಯೋ ವಾ ಹರೇತ್ ಪುನಃ ।
ಸ ಬದ್ಧೋ ವಾರುಣೈಃ ಪಾಶೈಃ ಕ್ಷಿಪ್ಯತೇ ಪೂಯಶೋಣಿತೇ ॥೧೪೫॥

ಯಾವ ವ್ಯಕ್ತಿಯು ಭೂಮಿಯನ್ನು ದಾನ ಮಾಡುತ್ತೇನೆಂದು ಹೇಳಿ, ದಾನವನ್ನು ಮಾಡುವುದಿಲ್ಲವೋ, ಕೊಟ್ಟದ್ದನ್ನು ಪುನಃ ಹಿಂತೆಗೆದುಕೊಳ್ಳುತ್ತಾನೋ ಅಂತಹ ವ್ಯಕ್ತಿಯು ವರುಣನ ಘೋರವಾದ ಪಾಶಗಳಿಂದ ಬಂಧಿತನಾಗಿ ಕೀವು, ರಕ್ತಗಳಿಂದ ತುಂಬಿದ ನರಕದಲ್ಲಿ ದೂಡಲ್ಪಡುತ್ತಾನೆ.

ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಮ್ ।
ನ ತಸ್ಯ ನರಕಾದ್ ಘೋರಾದ್ ವಿದ್ಯತೇ ನಿಷ್ಕೃತಿಃ ಕ್ವಚಿತ್ ॥೧೪೬॥

ಒಬ್ಬ ಸತ್ಪಾತ್ರನಿಗೆ ಭೂಮಿಯನ್ನು ಸ್ವಯಂ ತಾನೇ ದಾನವಾಗಿ ಕೊಟ್ಟಿರಲಿ, ಬೇರೆಯವರೇ ಕೊಟ್ಟಿರಲಿ, ಯಾವುದಾದರೂ ನೆಪದಿಂದ ಅಂತಹ ಕೊಟ್ಟ ಭೂಮಿಯನ್ನು ಅಪಹರಿಸುವ ವ್ಯಕ್ತಿಯು ಘೋರವಾದ ನರಕದಲ್ಲಿ ಬೀಳುವುದರ ಜೊತೆಗೆ ಪ್ರಾಯಶ್ಚಿತ್ತ ಇಲ್ಲದವನಾಗುತ್ತಾನೆ.

ಬ್ರಾಹ್ಮಣಸ್ಯ ಹೃತೇ ಕ್ಷೇತ್ರೇ ಹನ್ಯಾದ್ ದ್ವಾದಶ ಪೂರ್ವಜಾನ್ ।
ಸ ಗಚ್ಛೇತ್ ಕೃಮಿಯೋನಿಂ ಚ ನ ಚ ಮುಚ್ಯೇತ ಜಾತು ಸಃ ॥೧೪೭॥

ಯಾವನು ಬ್ರಾಹ್ಮಣಶ್ರೇಷ್ಠನಿಗೆ ಭೂಮಿಯನ್ನು ದಾನವಾಗಿ ಕೊಟ್ಟು ಅದರ ಪ್ರತಿಫಲವನ್ನು ತಾನೇ ಪಡೆಯುತ್ತಾನೋ ಅಂತಹ ದುಷ್ಟಾತ್ಮನಾದ ಮೂಢನು ಇಪ್ಪತ್ತೊಂದು ವಿಧವಾದ ನರಕದಲ್ಲಿ ಬೀಳುತ್ತಾನೆ. ತನ್ನ ಹನ್ನೆರಡು ತಲೆಯವರಿಗೆ ಕಂಟಕನಾಗುತ್ತಾನೆ. ಕ್ರಿಮಿಯೋನಿಯಲ್ಲಿ ಹುಟ್ಟುತ್ತಾನೆ. ಎಂದಿಗೂ ಬಂಧನದಿಂದ ಬಿಡುಗಡೆ ಹೊಂದುವುದಿಲ್ಲ.

ದತ್ತ್ವಾ ಭೂಮಿಂ ದ್ವಿಜೇಂದ್ರಾಯ ಯಸ್ತಾಮೇವೋಪಜೀವತಿ ।
ಗವಾಂ ಶತಸಹಸ್ರಸ್ಯ ಹಂತುಃ ಸ ಲಭತೇ ಫಲಮ್ ॥೧೪೮॥

ಯಾವ ವ್ಯಕ್ತಿಯು ದ್ವಿಜಶ್ರೇಷ್ಠನಿಗೆ ಭೂಮಿಯನ್ನು ದಾನ ಮಾಡಿ ಆ ಭೂಮಿಯಲ್ಲಿ ತಾನೇ ಜೀವನವನ್ನು ಮಾಡುತ್ತಾನೋ ಅವನು ನೂರು ಸಾವಿರ ಹಸುಗಳನ್ನು ಕೊಂದ ಪಾಪಕ್ಕೆ ಭಾಗಿಯಾಗುತ್ತಾನೆ.

ಸೋಧಃಶಿರಾಸ್ತು ಪಾಪಾತ್ಮಾ ಕುಂಭೀಪಾಕೇಷು ಪಚ್ಯತೇ ॥೧೪೯॥

ಅವನು ತಲೆಕೆಳಕಾಗಿ ಕುಂಭೀಪಾಕ ನರಕದಲ್ಲಿ ಬಿದ್ದು ದುಃಖಕ್ಕೀಡಾಗುತ್ತಾನೆ.

ದಿವ್ಯೈರ್ವರ್ಷಸಹಸ್ರೈಸ್ತು ಕುಂಭೀಪಾಕಾದ್ ವಿನಿಃಸೃತಃ ।
ಇಹ ಲೋಕೇ ಭವೇತ್ ಸ ಶ್ವಾ ಶತಜನ್ಮಾನಿ ಪಾಂಡವ ॥೧೫೦॥

ದೇವಮಾನದ ಸಾವಿರ ವರ್ಷಗಳ ಕಾಲ ಕುಂಭೀಪಾಕ ನರಕದಲ್ಲಿ ಶಿಕ್ಷೆಯನ್ನು ಅನುಭವಿಸಿದ ಆ ವ್ಯಕ್ತಿಯು ಪುನಃ ಭೂಮಿಗೆ ಬಂದು ನೂರು ಜನ್ಮಗಳಲ್ಲಿ ನಾಯಿಯಾಗಿ ಹುಟ್ಟುತ್ತಾನೆ.

ದತ್ತ್ವಾ ಭೂಮಿಂ ದ್ವಿಜೇಂದ್ರಾಣಾಂ ಯಸ್ತಾಮೇವೋಪಜೀವತಿ ।
ಸ ಮೂಢೋ ಯಾತಿ ದುಷ್ಟಾತ್ಮಾ ನರಕಾನೇಕವಿಂಶತಿಮ್ ॥೧೫೧॥

ಯಾವ ವ್ಯಕ್ತಿಯು ಬ್ರಾಹ್ಮಣನಿಗೆ ಭೂದಾನವನ್ನು ಮಾಡಿ ಆ ಭೂಮಿಯಲ್ಲಿ ತಾನೇ ಜೀವನವನ್ನು ನಡೆಸುತ್ತಾನೋ ಅಂತಹ ಮೂರ್ಖನು ದುಷ್ಟಾತ್ಮನಾಗಿ ಇಪ್ಪತ್ತೊಂದು ನರಕದಲ್ಲಿ ದುಃಖವನ್ನು ಅನುಭವಿಸುತ್ತಾನೆ.

ನರಕೇಭ್ಯೋ ವಿನಿಮುಕ್ತಃ ಶುನಾಂ ಯೋನಿಂ ಸ ಗಚ್ಛತಿ ॥೧೫೨॥

ಆ ವ್ಯಕ್ತಿಯು ನರಕವಾಸವನ್ನು ಅನುಭವಿಸಿ ಬಂದ ಬಳಿಕ ಭೂಮಿಯಲ್ಲಿ ನಾಯಿಯಾಗಿ ಹುಟ್ಟುತ್ತಾನೆ.

ಹಲಕೃಷ್ಟಾ ಮಹೀ ದೇಯಾ ಸಬೀಜಾ ಸಸ್ಯಶಾಲಿನೀ ।
ಅಥವಾ ಸೋದಕಾ ದೇಯಾ ದರಿದ್ರಾಯ ದ್ವಿಜಾತಯೇ ॥೧೫೩॥

ನೇಗಿಲಿನಿಂದ ಉತ್ತು ಬಿತ್ತಿರುವ ಭೂಮಿಯನ್ನಾಗಲಿ, ಪೈರಿನಿಂದ ತುಂಬಿರುವ ಭೂಮಿಯನ್ನಾಗಲಿ, ನೀರಿನ ಆಶ್ರಯವಿರುವ ಭೂಮಿಯನ್ನಾಗಲಿ, ದರಿದ್ರನಾದ ಬ್ರಾಹ್ಮಣನಿಗೆ ದಾನವಾಗಿ ಕೊಡಬೇಕು.

ಏವಂ ದತ್ತಾ ಮಹೀ ರಾಜನ್ ಪ್ರಹೃಷ್ಟೇನಾಂತರಾತ್ಮನಾ ।
ಸರ್ವಾನ್ ಕಾಮಾನವಾಪ್ನೋತಿ ಮನಸಾ ಚಿಂತಿತಾನ್ಯಪಿ ॥೧೫೪॥

ಸಂತುಷ್ಟವಾದ ಮನಸ್ಸಿನಿಂದ ಇಂತಹ ಭೂಮಿಯನ್ನು ದಾನವಾಗಿ ನೀಡಿದರೆ ಭೂದಾನ ಮಾಡಿದವನು ಮನಸ್ಸಿನಲ್ಲಿ ಚಿಂತಿಸಿದ ಸಮಸ್ತ ಕಾಮನೆಗಳನ್ನೂ ಹೊಂದುತ್ತಾನೆ.

ಬಹುಭಿರ್ವಸುಧಾ ದತ್ತಾ ದೀಯತೇ ಚ ನರಾಧಿಪೈಃ ।
ಯಸ್ಯ ಯಸ್ಯ ಯದಾ ಭೂಮಿಃ ತಸ್ಯ ತಸ್ಯ ತದಾ ಫಲಮ್ ॥೧೫೫॥

ಅನೇಕ ರಾಜರಿಂದ ಭೂಮಿಯು ದಾನ ಮಾಡಲ್ಪಟ್ಟಿದೆ. ದಾನ ಮಾಡಲ್ಪಡುತ್ತಲೂ ಇದೆ. ಭೂಮಿಯು ಯಾವಾಗ ಯಾವನ ಅಧಿಕಾರದಲ್ಲಿರುತ್ತದೋ ಅವನು ಆ ಭೂಮಿಯನ್ನು ದಾನ ಮಾಡಿದರೆ ಅದರ ಫಲವು ಅವನಿಗೆ ಲಭಿಸುತ್ತದೆ.

ಯಃ ಪ್ರಯಚ್ಛತಿ ಕನ್ಯಾಂ ವೈ ಸುರೂಪಾಂ ಶ್ರೋತ್ರಿಯಾಯ ವೈ ।
ಸ ಬ್ರಹ್ಮದೇವೋ ರಾಜೇಂದ್ರ ತಸ್ಯ ಪುಣ್ಯಫಲಂ ಶೃಣು ॥೧೫೬॥

ಯಾವ ವ್ಯಕ್ತಿಯು ಶ್ರೋತ್ರಿಯ ಬ್ರಾಹ್ಮಣರಿಗೆ ಸ್ವರೂಪಳಾದ ಕನ್ಯೆಯನ್ನು ದಾನ ಮಾಡುತ್ತಾನೋ ಅಂತಹ ವ್ಯಕ್ತಿಯು ಹೊಂದುವ ಪುಣ್ಯದ ಫಲವನ್ನು ಹೇಳುತ್ತೇನೆ, ರಾಜಶ್ರೇಷ್ಠನೇ ಕೇಳಿಸಿಕೊ.

ಬಲೀವರ್ದಸಹಸ್ರಾಣಾಂ ದತ್ತಾನಾಂ ಧುರ್ಯವಾಹಿನಾಮ್ ।
ತತ್ಫಲಂ ಲಭತೇ ರಾಜನ್ ಕನ್ಯಾದಾನೇನ ಯತ್ಫಲಮ್ ॥೧೫೭॥

ಗಾಡಿಯನ್ನು ಎಳೆಯುವ ಸಾವಿರ ಎತ್ತುಗಳನ್ನು ದಾನ ಮಾಡಿದಾಗ ಯಾವ ಫಲವು ಲಭಿಸುತ್ತದೋ ಶ್ರೋತ್ರಿಯ ಬ್ರಾಹ್ಮಣರಿಗೆ ಕನ್ಯಾದಾನ ಮಾಡಿದಾಗ ಅಷ್ಟು ಫಲವು ಲಭಿಸುತ್ತದೆ.

ಗವಾಂ ಶತಸಹಸ್ರಸ್ಯ ಸಮ್ಯಗ್ ದತ್ತಸ್ಯ ಯತ್ಫಲಮ್ ।
ತತ್ಫಲಂ ಸಮವಾಪ್ನೋತಿ ಯಃ ಪ್ರಯಚ್ಛತಿ ಕನ್ಯಕಾಮ್ ॥೧೫೮॥

ಒಂದು ಲಕ್ಷ ಗೋವುಗಳನ್ನು ದಾನ ಮಾಡಿದಾಗ ಯಾವ ಫಲವು ಲಭಿಸುತ್ತದೋ, ಶ್ರೋತ್ರಿಯನಾದ ಬ್ರಾಹ್ಮಣನಿಗೆ ಕನ್ಯಾದಾನ ಮಾಡಿದ ವ್ಯಕ್ತಿಗೆ ಅಷ್ಟು ಫಲವು ಲಭಿಸುತ್ತದೆ.

ಯಾವಂತಿ ಚೈವ ರೋಮಾಣಿ ಕನ್ಯಾಯಾಃ ಕುರುಪುಂಗವ ।
ತಾವದ್ ವರ್ಷಸಹಸ್ರಾಣಿ ಮಮ ಲೋಕೇ ಮಹೀಯತೇ ॥೧೫೯॥

ಕನ್ಯಾದಾನ ಮಾಡಿದ ಕನ್ಯೆಯಲ್ಲಿ ಎಷ್ಟು ರೋಮರಂಧ್ರಗಳಿವೆಯೋ ಅಷ್ಟು ವರ್ಷಗಳ ಕಾಲ ದಾನ ಮಾಡಿದ ವ್ಯಕ್ತಿಯು ನನ್ನ ಲೋಕದಲ್ಲಿ ಪೂಜಿತನಾಗುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದಿಹ ಲೋಕೇ ಸ ಜಾಯತೇ ।
ಷಡಂಗವಿಚ್ಚತುರ್ವೇದೀ ಸರ್ವದೇವಾರ್ಚಿತೋ ದ್ವಿಜಃ ॥೧೬೦॥

ಪುಣ್ಯಲೋಕದಿಂದ ಮರ್ತ್ಯಲೋಕಕ್ಕೆ ಆಗಮಿಸಿದ ಬಳಿಕ ಆ ವ್ಯಕ್ತಿಯು ಕನ್ಯಾದಾನದ ಫಲವಾಗಿ ಆರು ಅಂಗಗಳಿಂದ ಸಹಿತವಾದ ನಾಲ್ಕು ವೇದಗಳನ್ನು ಅಧ್ಯಯನ ಮಾಡುವವನಾಗಿ, ಸಮಸ್ತ ದೇವತೆಗಳ ಅನುಗ್ರಹಕ್ಕೂ ಪಾತ್ರನಾಗಿ ಭೂಮಿಯಲ್ಲಿ ಹುಟ್ಟುತ್ತಾನೆ.

ಯಃ ಸುವರ್ಣಂ ದರಿದ್ರಾಯ ಬ್ರಾಹ್ಮಣಾಯ ಪ್ರಯಚ್ಛತಿ ।
ಶ್ರೋತ್ರಿಯಾಯ ಸುವೃತ್ತಾಯ ಬಹುಪುತ್ರಾಯ ಪಾಂಡವ ॥೧೬೧॥

ಸ ಮುಕ್ತಃ ಸರ್ವಪಾಪೇಭ್ಯೋ ಬಾಲಸೂರ್ಯಸಮಪ್ರಭಃ ।
ವಿಮಾನಂ ದಿವ್ಯಮಾರೂಢಃ ಕಾಮಗಃ ಕಾಮಭೋಗವಾನ್ ॥೧೬೨॥

ವರ್ಷಕೋಟಿಂ ಮಹಾತೇಜಾ ಮಮ ಲೋಕೇ ಪ್ರಮೋದತೇ ॥೧೬೩॥

ಯಾವ ವ್ಯಕ್ತಿಯು ಸದಾಚಾರ ಸಂಪನ್ನನಾದ, ಅನೇಕ ಸಂತಾನಗಳನ್ನು ಹೊಂದಿರುವ ಶ್ರೋತ್ರಿಯನಾದ ಬ್ರಾಹ್ಮಣನಿಗೆ ಬಂಗಾರವನ್ನು ದಾನ ಮಾಡುತ್ತಾನೋ ಅವನು ಸಮಸ್ತ ಪಾಪಗಳಿಂದ ಮುಕ್ತನಾಗಿ, ಉದಿಸಿದ ಸೂರ್ಯನಂತೆ ಕಾಂತಿಯುಕ್ತನಾಗಿ, ಸಮಸ್ತ ಭೋಗಗಳನ್ನೂ ಪಡೆದವನಾಗಿ ದಿವ್ಯವಾದ ವಿಮಾನವನ್ನು ಏರಿ ಸ್ವರ್ಗಲೋಕಕ್ಕೆ ಸಾಗಿ ಕೋಟಿ ವರ್ಷಗಳ ಕಾಲ ತೇಜಸ್ವಿಯಾಗಿ ನನ್ನ ಲೋಕದಲ್ಲಿ ಸಂತೋಷ ಹೊಂದುತ್ತಾನೆ.

ತತಃ ಕಾಲಾವತೀರ್ಣಶ್ಚ ಸೋಽಸ್ಮಿನ್ ಲೋಕೇಽಭಿಜಾಯತೇ ।
ವೇದವೇದಾಂಗವಿದ್ ವಿಪ್ರಃ ಕೋಟೀಧನಪತಿರ್ಮಹಾನ್ ॥೧೬೪॥

ಕಾಲಾಂತರದಲ್ಲಿ ಭೂಮಿಗೆ ಆಗಮಿಸಿದ ಆತನು ಸಮಸ್ತ ವೇದ-ವೇದಾಂಗಗಳನ್ನು ಬಲ್ಲವನಾಗಿ ಕೋಟ್ಯಧೀಶನಾಗಿ ಹುಟ್ಟುತ್ತಾನೆ.

ಯಶ್ಚ ರೂಪ್ಯಂ ಪ್ರಯಚ್ಛೇದ್ ವೈ ದರಿದ್ರಾಯ ದ್ವಿಜಾತಯೇ ।
ಕೃಶವೃತ್ತಯೇ ಕೃಶಗವೇ ಸ ಮುಕ್ತಃ ಸರ್ವಕಿಲ್ಬಿಷೈಃ ॥೧೬೫॥

ಯಾವ ವ್ಯಕ್ತಿಯು ಗೋವುಗಳನ್ನು ಪರಿಪಾಲಿಸುತ್ತಾ, ಗೋವುಗಳನ್ನು ಸಾಕಲು ಅಶಕ್ತನಾಗಿರುತ್ತಾನೋ, ತನ್ನ ಬದುಕಿಗೆ ಆಹಾರದ ಕೊರತೆಯನ್ನು ಅನುಭವಿಸುತ್ತಿರುತ್ತಾನೋ ಅಂತಹ ದರಿದ್ರನಾದ ಬ್ರಾಹ್ಮಣನಿಗೆ ಬೆಳ್ಳಿಯನ್ನು ದಾನ ಮಾಡಿದ ವ್ಯಕ್ತಿಯು ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೆ.

ಪೂರ್ಣಚಂದ್ರಪ್ರಕಾಶೇನ ವಿಮಾನೇನ ವಿರಾಜತಾ ।
ಕಾಮರೂಪೀ ಯಥಾಕಾಮಂ ಸ್ವರ್ಗಲೋಕೇ ಮಹೀಯತೇ ॥೧೬೬॥

ಆತನು ಪೂರ್ಣಚಂದ್ರನಂತೆ ಪ್ರಕಾಶಿಸುವ ವಿಮಾನದಲ್ಲಿ ಏರಿಕೊಂಡು ಶೋಭಿಸುತ್ತಾ, ಸ್ವರ್ಗಲೋಕದಲ್ಲಿ ತನ್ನ ಮನಸ್ಸಿನ ಸಮಸ್ತ ಕಾಮನೆಗಳನ್ನು ಹೊಂದಿದವನಾಗಿ ಶೋಭಿಸುತ್ತಾನೆ.

ತತೋಽವತೀರ್ಣಃ ಕಾಲೇನ ಲೋಕೇ ಚಾಸ್ಮಿನ್ ಮಹಾಯಶಾಃ ।
ಸರ್ವಲೋಕಾರ್ಚಿತಃ ಶ್ರೀಮಾನ್ ರಾಜಾ ಭವತಿ ವೀರ್ಯವಾನ್ ॥

ಕಾಲಾಂತರದಲ್ಲಿ ಭೂಮಿಗೆ ಆಗಮಿಸಿದ, ಕೀರ್ತಿಸಂಪನ್ನನಾದ ಆ ವ್ಯಕ್ತಿಯು ಸಮಸ್ತ ಜನರಿಂದಲೂ ಸತ್ಕೃತನಾಗಿ ಕಾಂತಿಯುಕ್ತನಾದ, ವೀರ್ಯವಂತನಾದ ರಾಜನಾಗುತ್ತಾನೆ.

ತಿಲಪರ್ವತಕಂ ಯಸ್ತು ಶ್ರೋತ್ರಿಯಾಯ ಪ್ರಯಚ್ಛತಿ ।
ವಿಶೇಷೇಣ ದರಿದ್ರಾಯ ತಸ್ಯಾಪಿ ಶೃಣು ಯತ್ಫಲಮ್ ॥೧೬೮॥

ಯಾವ ವ್ಯಕ್ತಿಯು ವಿಶೇಷವಾಗಿ ದರಿದ್ರನಾದ, ಶ್ರೋತ್ರಿಯ ಬ್ರಾಹ್ಮಣನಿಗೆ ಎಳ್ಳಿನ ಪರ್ವತವನ್ನು ದಾನ ಮಾಡುತ್ತಾನೋ ಅದರ ಫಲವನ್ನು ಹೇಳುತ್ತೇನೆ, ಕೇಳಿಸಿಕೊ.

ಪುಣ್ಯಂ ವೃಷಾಯುತೋತ್ಸರ್ಗೇ ಯತ್ಪ್ರೋಕ್ತಂ ಪಾಂಡುನಂದನ ।
ತತ್ಪುಣ್ಯಂ ಸಮನುಪ್ರಾಪ್ತಃ ತತ್ಕ್ಷಣಾದ್ ವಿರಜಾ ಭವೇತ್ ॥೧೬೯॥

ಹತ್ತುಸಾವಿರ ಗೂಳಿಗಳನ್ನು ಬಿಟ್ಟಾಗ ಯಾವ ಪುಣ್ಯವನ್ನು ಹೊಂದುತ್ತಾನೋ ಆ ಪುಣ್ಯವು ಎಳ್ಳಿನ ಪರ್ವತವನ್ನು ದಾನ ಮಾಡಿದ ವ್ಯಕ್ತಿಗೆ ಆ ಕ್ಷಣದಲ್ಲಿಯೇ ಲಭಿಸುತ್ತದೆ.

ಯಥಾ ತ್ವಚಂ ಭುಜಂಗೋ ವೈ ತ್ಯಕ್ತ್ವಾ ದಿವ್ಯತನುರ್ಭವೇತ್ ।
ತಥಾ ತಿಲಪ್ರದಾನಾದ್ ವೈ ಪಾಪಂ ತ್ಯಕ್ತ್ವಾ ವಿಶುದ್ಧ್ಯತಿ ॥೧೭೦॥

ಯಾವ ರೀತಿಯಾಗಿ ಸರ್ಪವು ತನ್ನ ಪೊರೆಯನ್ನು ಕಳಚಿ ಶ್ರೇಷ್ಠವಾದ ಶರೀರದಿಂದ ಬೆಳಗುತ್ತದೋ ಅದೇ ರೀತಿ ತಿಲದಾನವನ್ನು ಮಾಡಿದ ವ್ಯಕ್ತಿಯು ಪಾಪಗಳಿಂದ ಮುಕ್ತನಾಗಿ ಶುದ್ಧಾತ್ಮನಾಗಿ ಬೆಳಗುತ್ತಾನೆ.

ತಿಲಷಂಡಪ್ರಯುಕ್ತಂ ಚ ಜಾಂಬೂನದವಿಭೂಷಿತಮ್ ।
ವಿಮಾನಂ ದಿವ್ಯಮಾರೂಢಃ ಪಿತೃಲೋಕೇ ಮಹೀಯತೇ ॥೧೭೧॥

ಬಂಗಾರದಿಂದ ಅಲಂಕೃತವಾದ ಎಳ್ಳಿನ ರಾಶಿಯನ್ನು ಯಾವ ವ್ಯಕ್ತಿಯು ದಾನ ಮಾಡುತ್ತಾನೋ ಆ ವ್ಯಕ್ತಿಯು ದಿವ್ಯವಾದ ವಿಮಾನವನ್ನೇರಿಕೊಂಡು ಹೋಗಿ ಪಿತೃಲೋಕದಲ್ಲಿ ಪೂಜಿತನಾಗುತ್ತಾನೆ.

ಷಷ್ಟಿಂ ವರ್ಷಸಹಸ್ರಾಣಿ ಕಾಮರೂಪೀ ಮಹಾಯಶಾಃ ।
ಕೀರ್ತಿಪ್ರದಾತಾ ರಮತೇ ಪಿತೃಲೋಕೇ ಯಥಾಸುಖಮ್ ॥೧೭೨॥

ಪಿತೃಲೋಕದಲ್ಲಿ ಆ ವ್ಯಕ್ತಿಯು ಅರವತ್ತು ಸಾವಿರ ವರ್ಷಗಳ ಕಾಲ ಕೀರ್ತಿ ಸಂಪನ್ನನಾಗಿ, ತನ್ನ ಇಷ್ಟಾರ್ಥಗಳನ್ನೆಲ್ಲ ಹೊಂದಿದವನಾಗಿ ಪಿತೃಲೋಕದಲ್ಲಿ ವಿಹರಿಸುತ್ತಾನೆ.

ಯಃ ಪ್ರಯಚ್ಛತಿ ವಿಪ್ರಾಯ ತಿಲಧೇನುಂ ನರಾಧಿಪ ।
ಶ್ರೋತ್ರಿಯಾಯ ದರಿದ್ರಾಯ ಶೃಣು ತಸ್ಯಾಪಿ ಯತ್ಫಲಮ್ ॥೧೭೩॥

ಯಾವ ವ್ಯಕ್ತಿಯು ದರಿದ್ರನಾದ ಶ್ರೋತ್ರಿಯ ಬ್ರಾಹ್ಮಣನಿಗೆ ತಿಲಧೇನುವನ್ನು ದಾನ ಮಾಡುತ್ತಾನೋ ಅಂತಹವನಿಗೆ ಲಭಿಸುವ ಫಲವೇನೆಂದು ಹೇಳುತ್ತೇನೆ, ಕೇಳಿಸಿಕೊ.

ಗೋಸಹಸ್ರಪ್ರದಾನೇನ ಯತ್ಪುಣ್ಯಂ ಸಮುದಾಹೃತಮ್ ।
ತತ್ಪುಣ್ಯಫಲಮಾಪ್ನೋತಿ ತಿಲಧೇನುಪ್ರದಾನತಃ ॥೧೭೪॥

ಸಾವಿರ ಗೋವುಗಳನ್ನು ದಾನ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೋ ಆ ಪುಣ್ಯವು ತಿಲಧೇನುವನ್ನು ದಾನ ಮಾಡಿದ ವ್ಯಕ್ತಿಗೆ ಲಭಿಸುತ್ತದೆ.

ತಿಲಾನಾಂ ಕುಡುಪೈರ್ಯಸ್ತು ತಿಲಧೇನುಂ ಪ್ರಯಚ್ಛತಿ ।
ತಾವತ್ ಕೋಟಿಸಮಾ ರಾಜನ್ ಸ್ವರ್ಗಲೋಕೇ ಮಹೀಯತೇ ॥೧೭೫॥

ಯಾವ ವ್ಯಕ್ತಿಯು ಪಾತ್ರೆಗಳಲ್ಲಿ ತುಂಬಿದ ತಿಲಧೇನುವನ್ನು ದಾನ ಮಾಡುತ್ತಾನೋ ಆ ವ್ಯಕ್ತಿಯು ಕೋಟಿವರ್ಷಗಳ ಕಾಲ ಸ್ವರ್ಗದಲ್ಲಿ ಪೂಜಿತನಾಗುತ್ತಾನೆ.

ಅಷ್ಟಾಢಕೈಸ್ತಿಲೈಃ ಕೃತ್ವಾ ತಿಲಧೇನುಂ ನರಾಧಿಪ ।
ದ್ವಾತ್ರಿಂಶನ್ನಿಷ್ಕಸಂಯುಕ್ತಂ ವಿಷ್ಣವೇ ಯಃ ಪ್ರಯಚ್ಛತಿ ॥೧೭೬॥

ಮದ್ಭಕ್ತ್ಯಾ ಮದ್ಗತಾತ್ಮಾ ವೈ ತಸ್ಯ ಪುಣ್ಯಫಲಂ ಶೃಣು ॥೧೭೭॥

ಯಾವ ವ್ಯಕ್ತಿಯು ಎಂಟು ದ್ರೋಣಪರಿಮಾಣದಲ್ಲಿ ತಿಲಗಳನ್ನು ತುಂಬಿ ತಿಲಧೇನುವನ್ನು ಮೇಷಸಂಕ್ರಮಣ, ತುಲಾಸಂಕ್ರಮಣಗಳಲ್ಲಿ ದಾನ ಮಾಡುತ್ತಾನೋ ಆ ವ್ಯಕ್ತಿಯು ನನ್ನ ಭಕ್ತನಾಗಿ, ನನ್ನ ಪ್ರೀತಿಯನ್ನೇ ಬಯಸಿದವನಾಗಿ, ಮಾಡಿದ ದಾನದ ಪುಣ್ಯದ ಫಲವನ್ನು ಎಷ್ಟು ಹೊಂದಿರುತ್ತಾನೆಂದು ಕೇಳಿಸಿಕೊ.

ಕನ್ಯಾದಾನಸಹಸ್ರಸ್ಯ ವಿಧಿದತ್ತಸ್ಯ ಯತ್ಫಲಮ್ ।
ತತ್ಪುಣ್ಯಂ ಸಮನುಪ್ರಾಪ್ತೋ ಮಮ ಲೋಕೇ ಮಹೀಯತೇ ॥೧೭೮॥

ಸಾವಿರ ಕನ್ಯಾದಾನಗಳನ್ನು ವಿಧಿವತ್ತಾಗಿ ಮಾಡಿದಾಗ ಯಾವ ಫಲವನ್ನು ಹೊಂದುತ್ತಾನೋ ಅಂತಹ ಫಲವನ್ನು ಹೊಂದಿದವನಾಗಿ ನನ್ನ ಲೋಕದಲ್ಲಿ ಪೂಜಿತನಾಗುತ್ತಾನೆ.

ಮಮ ಲೋಕಾವತೀರ್ಣಶ್ಚ ಸೋಽಸ್ಮಿನ್ ಲೋಕೇಽಭಿಜಾಯತೇ ।
ಋಗ್ಯಜುಃ ಸಾಮವೇದಾನಾಂ ಪಾರಗೋ ಬ್ರಾಹ್ಮಣರ್ಷಭಃ ॥೧೭೯॥

ನನ್ನ ಲೋಕದಿಂದ ಭೂಮಿಗೆ ಬಂದ ಬಳಿಕ ಋಗ್ವೇದ, ಯಜುರ್ವೇದ, ಸಾಮವೇದಗಳ ಅರ್ಥವನ್ನು ಮಾಡಿಕೊಂಡಿರುವ ಶ್ರೇಷ್ಠ ಬ್ರಹ್ಮಜ್ಞಾನಿಯಾಗಿ ಹುಟ್ಟುತ್ತಾನೆ.

ಗಾಂ ತು ಯಸ್ತು ದರಿದ್ರಾಯ ಬ್ರಾಹ್ಮಣಾಯ ಪ್ರಯಚ್ಛತಿ ।
ಪ್ರಸನ್ನಾಂ ಕ್ಷೀರಿಣೀಂ ಪುಣ್ಯಾಂ ಸವತ್ಸಾಂ ಕಾಂಸ್ಯದೋಹನೀಮ್ ॥೧೮೦॥

ಯತ್ ಕಿಂಚಿದ್ ದುಷ್ಕೃತಂ ಕರ್ಮ ತಸ್ಯ ಪೂರ್ವಕೃತಂ ನೃಪ ।
ತತ್ಸರ್ವಂ ತತ್ಕ್ಷಣಾದೇವ ವಿನಶ್ಯತಿ ನ ಸಂಶಯಃ ॥೧೮೧॥

ಯಾವ ವ್ಯಕ್ತಿಯು ಕಂಚಿನ ಪಾತ್ರೆಯಲ್ಲಿ ಹಾಲನ್ನು ಸುರಿಸುವ, ಕರುವಿನಿಂದ ಕೂಡಿರುವ, ಸಾಧುವಾದ, ಕ್ಷೀರಸಮೃದ್ಧಿಯಿಂದ ಪ್ರಸನ್ನವಾಗಿರುವ ಹಸುವನ್ನು ದರಿದ್ರನಾದ ಬ್ರಾಹ್ಮಣನಿಗೆ ದಾನ ಮಾಡುತ್ತಾನೋ ಆ ವ್ಯಕ್ತಿಯು ಯಾವುದಾದರೂ ದುಷ್ಕರ್ಮಗಳನ್ನು ಈ ಜನ್ಮದಲ್ಲಿ, ಹಿಂದಿನ ಜನ್ಮದಲ್ಲಿ ಮಾಡಿದ್ದರೆ ಆ ಕ್ಷಣದಲ್ಲಿಯೇ ಅದೆಲ್ಲವೂ ನಾಶ ಹೊಂದುತ್ತದೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಯಾನಂ ಚ ವೃಷಸಂಯುಕ್ತಂ ದೀಪ್ಯಮಾನಮಲಂಕೃತಮ್ ।
ಆರೂಢಃ ಕಾಮಗಂ ದಿವ್ಯಂ ಗೋಲೋಕಮಧಿಗಚ್ಛತಿ ॥೧೮೨॥

ಇಂತಹ ಗೋದಾನವನ್ನು ಮಾಡಿದ ವ್ಯಕ್ತಿಯು ಎತ್ತುಗಳಿಂದ ಸಂಯೋಜಿತವಾದ, ಅಲಂಕೃತವಾದ, ಹೊಳೆಯುವ ವಾಹನವನ್ನು ಏರಿಕೊಂಡು ಸ್ವೇಚ್ಛಾರೂಪಿಯಾಗಿ ಗೋಲೋಕವನ್ನು ಹೊಂದುತ್ತಾನೆ.

ಯಾವಂತಿ ಚೈವ ರೋಮಾಣಿ ತಸ್ಯಾ ಗೋಸ್ತು ನರಾಧಿಪ ।
ತಾವದ್ ವರ್ಷಸಹಸ್ರಾಣಿ ಗವಾಂ ಲೋಕೇ ಮಹೀಯತೇ ॥೧೮೩॥

ಯಾವ ದಾನ ಮಾಡಿದ ಹಸುವಿಗೆ ಎಷ್ಟು ರೋಮಗಳಿವೆಯೋ ಅಷ್ಟು ವರ್ಷಗಳ ಕಾಲ ಗೋಲೋಕದಲ್ಲಿ ಪೂಜಿತನಾಗಿರುತ್ತಾನೆ.

ಗೋಲೋಕಾದವತೀರ್ಣಸ್ತು ಲೋಕೇऽಸ್ಮಿನ್ ಬ್ರಾಹ್ಮಣೋ ಭವೇತ್ ।
ಸತ್ರಯಾಜೀ ಶತಾಯುಶ್ಚ ಸರ್ವರಾಜಾಭಿರರ್ಚಿತಃ ॥೧೮೪॥

ಗೋಲೋಕದಿಂದ ಭೂಮಿಗೆ ಬಂದ ಬಳಿಕ ಬ್ರಾಹ್ಮಣನಾಗಿ ನೂರು ವರ್ಷಗಳ ದೀರ್ಘ ಆಯುಷ್ಯವುಳ್ಳವನಾಗಿ, ಸತ್ರಯಾಗಗಳನ್ನು ಮಾಡುವವನಾಗಿ, ಸಮಸ್ತ ರಾಜರಿಂದ ಪೂಜಿತನಾಗಿಯೂ ಇರುತ್ತಾನೆ.

ತಿಲಂ ಗಾವಃ ಸುವರ್ಣಂ ಚಾಪ್ಯನ್ನಂ ಕನ್ಯಾ ವಸುಂಧರಾ ।
ತಾರಯಂತೀಹ ದತ್ತಾನಿ ಬ್ರಾಹ್ಮಣೇಭ್ಯೋ ಮಹಾಭುಜ ॥೧೮೫॥

ತಿಲ, ಗೋವು, ಸುವರ್ಣ, ಅನ್ನ, ಕನ್ಯಾ, ಭೂಮಿ ಇವುಗಳನ್ನು ಬ್ರಾಹ್ಮಣರಿಗೆ ದಾನ ಮಾಡುವುದರಿಂದ ಆ ಪುಣ್ಯವು ನಮ್ಮನ್ನು ಕಷ್ಟಗಳಿಂದ ಪಾರು ಮಾಡುತ್ತದೆ.

ಬ್ರಾಹ್ಮಣಂ ವೃತ್ತಸಂಪನ್ನಮಾಹಿತಾಗ್ನಿಮಲೋಲುಪಮ್ ।
ತರ್ಪಯೇದ್ ವಿಧಿವದ್ ರಾಜನ್ ಸ ನಿಧಿಃ ಪಾರಲೌಕಿಕಃ ॥೧೮೬॥

ಸಚ್ಚಾರಿತ್ರ್ಯಸಂಪನ್ನನಾದ, ಆಹಿತಾಗ್ನಿಯಾದ, ಉದಾರಿಯಾದ ಬ್ರಾಹ್ಮಣನನ್ನು ವಿಧಿವತ್ತಾಗಿ ಸಂತೋಷಪಡಿಸಬೇಕು. ಅಂತಹ ಬ್ರಾಹ್ಮಣನು ಪರಲೋಕದ ನಿಧಿ ಎನಿಸಿದ್ದಾನೆ.

ಆಹಿತಾಗ್ನಿಂ ದರಿದ್ರಂ ಚ ಶ್ರೋತ್ರಿಯಂ ಚ ಜಿತೇಂದ್ರಿಯಮ್ ।
ಶೂದ್ರಾನ್ನವಿರತಂ ಚೈವ ದ್ವಿಜಂ ಯತ್ನೇನ ಪೂಜಯೇತ್ ॥೧೮೭॥

ಆಹಿತಾಗ್ನಿಯಾದ, ದರಿದ್ರನಾದ, ಶ್ರೋತ್ರಿಯನಾದ, ಜಿತೇಂದ್ರಿಯನಾದ, ಶೂದ್ರಾನ್ನವನ್ನು ತ್ಯಾಗ ಮಾಡಿರುವ ಬ್ರಾಹ್ಮಣನನ್ನು ಪ್ರಯತ್ನಪೂರ್ವಕವಾಗಿ ಪೂಜಿಸಬೇಕು.

ಆಹಿತಾಗ್ನಿಃ ಸದಾ ಪಾತ್ರಂ ಸಾಗ್ನಿಹೋತ್ರಶ್ಚ ವೇದವಿತ್ ।
ಪಾತ್ರಾಣಾಮಪಿ ತತ್ಪಾತ್ರಂ ಶೂದ್ರಾನ್ನಂ ಯಸ್ಯ ನೋದರೇ ॥೧೮೮॥

ಯಾವ ವ್ಯಕ್ತಿಯ ಉದರದಲ್ಲಿ ಶೂದ್ರಾನ್ನವು ಸೇರಿಲ್ಲವೋ, ಆಹಿತಾಗ್ನಿಯಾಗಿದ್ದಾನೋ, ಅಗ್ನಿಹೋತ್ರವನ್ನು ವೇದಜ್ಞನಾಗಿ ಆಚರಿಸುತ್ತಾನೋ ಅವನು ಸತ್ಪಾತ್ರರಲ್ಲಿ ಪಾತ್ರನೆನಿಸಿದ್ದಾನೆ.

ಯಚ್ಚ ವೇದಮಯಂ ಪಾತ್ರಂ ಯಚ್ಚ ಪಾತ್ರಂ ತಪೋಮಯಮ್ ।
ಅಸಂಕೀರ್ಣಂ ಚ ಯತ್ಪಾತ್ರಂ ತತ್ಪಾತ್ರಂ ತಾರಯಿಷ್ಯತಿ ॥೧೮೯॥

ಯಾವ ಬ್ರಾಹ್ಮಣನು ವೇದಾಧ್ಯಯನವನ್ನು ಮಾಡಿರುತ್ತಾನೋ, ತಪೋಯುಕ್ತನಾಗಿರುತ್ತಾನೋ, ಧರ್ಮದ ಸಾಂಕರ್ಯವನ್ನು ಹೊಂದಿರುವುದಿಲ್ಲವೋ ಅಂತಹ ಸತ್ಪಾತ್ರನು ಸಂಸಾರದಿಂದ ನಮ್ಮನ್ನು ದಾಟಿಸುತ್ತಾನೆ.

ನಿತ್ಯಸ್ವಾಧ್ಯಾಯನಿರತಾಃ ತ್ವಸಂಕೀರ್ಣೇಂದ್ರಿಯಾಶ್ಚ ಯೇ ।
ಪಂಚಯಜ್ಞಪರಾ ನಿತ್ಯಂ ಪೂಜಿತಾಸ್ತಾರಯಂತಿ ತೇ ॥೧೯೦॥

ಯಾವ ಸ್ವಾಧ್ಯಾಯನಿರತರಾದ ಬ್ರಾಹ್ಮಣರು ಇದ್ದಾರೋ, ಧರ್ಮದಲ್ಲಿ ಸಂಕೀರ್ಣತೆಯನ್ನು ಹೊಂದದೆ, ಇಂದ್ರಿಯಲೋಲುಪರಾಗದೆ, ಪಂಚಯಜ್ಞ ಪರಾಯಣರಾಗಿ ಇರುತ್ತಾರೋ ಅಂತಹ ಬ್ರಾಹ್ಮಣರನ್ನು ಪೂಜಿಸಿದಲ್ಲಿ ನಮ್ಮನ್ನು ಈ ಸಂಸಾರದಿಂದ ಪುಣ್ಯದ ಮೂಲಕ ದಾಟಿಸುತ್ತಾರೆ.

ಯೇ ಕ್ಷಾಂತಿದಾಂತಾಃ ಶ್ರುತಿಪೂರ್ಣಕರ್ಣಾ
ಜಿತೇಂದ್ರಿಯಾಃ ಪ್ರಾಣಿವಧೇ ನಿವೃತ್ತಾಃ ।
ಪ್ರತಿಗ್ರಹೇ ಸಂಕುಚಿತಾ ಗೃಹಸ್ಥಾಃ
ತೇ ಬ್ರಾಹ್ಮಣಾಸ್ತಾರಯಿತುಂ ಸಮರ್ಥಾಃ ॥೧೯೧॥

ಯಾವ ಬ್ರಾಹ್ಮಣರು ಕ್ಷಮೆ ಎಂಬ ಆಭರಣವನ್ನು ಹೊಂದಿರುತ್ತಾರೋ, ಇಂದ್ರಿಯ ನಿಗ್ರಹಶೀಲರಾಗಿರುತ್ತಾರೋ, ವೇದೋಕ್ತವಾದ ವಿಚಾರಗಳನ್ನು ಕಿವಿಗಳಲ್ಲಿ ತುಂಬಿಸಿಕೊಂಡಿರುತ್ತಾರೋ, ಜಿತೇಂದ್ರಿಯರಾದ, ಪ್ರಾಣಿವಧೆಯಿಂದ ನಿವೃತ್ತರಾದ, ದಾನವನ್ನು ಸ್ವೀಕರಿಸುವುದರಲ್ಲಿ ದಾಕ್ಷಿಣ್ಯ ಹೊಂದಿದವರಾದ ಗೃಹಸ್ಥರಾದ ಬ್ರಾಹ್ಮಣರು ನಮ್ಮನ್ನು ದುಃಖದಿಂದ ದಾಟಿಸಲು ಸಮರ್ಥರಾಗಿರುತ್ತಾರೆ.

ನಿತ್ಯೋದಕೀ ನಿತ್ಯಯಜ್ಞೋಪವೀತೀ
ನಿತ್ಯಸ್ವಾಧ್ಯಾಯೀ ವೃಷಲಾನ್ನವರ್ಜೀ ।

ಋತೌ ಗಚ್ಛನ್ ವಿಧಿವಚ್ಚಾಪಿ ಜುಹ್ವತ್
ಸ ಬ್ರಾಹ್ಮಣಸ್ತಾರಯಿತುಂ ಸಮರ್ಥಃ ॥೧೯೨॥

ನಿತ್ಯವೂ ಸತ್ಕರ್ಮಗಳನ್ನಾಚರಿಸುವ, ಯಜ್ಞೋಪವೀತವನ್ನು ಧರಿಸಿರುವ, ನಿತ್ಯ ಸ್ವಾಧ್ಯಾಯಶೀಲನಾದ, ಶೂದ್ರಾನ್ನವನ್ನು ತ್ಯಾಗ ಮಾಡಿರುವ, ವಿಧಿಬದ್ಧವಾಗಿ ಪತ್ನಿಯನ್ನು ಋತುಕಾಲದಲ್ಲಿ ಮಾತ್ರ ಸಂಪರ್ಕಿಸುವ, ಅಗ್ನಿಹೋತ್ರಿಯಾದ ಬ್ರಾಹ್ಮಣನು ನಮ್ಮನ್ನು ಕಷ್ಟದಿಂದ ದಾಟಿಸಲು ಸಮರ್ಥನಾಗಿರುತ್ತಾನೆ.

ಬ್ರಾಹ್ಮಣೋ ಯಸ್ತು ಮದ್ಭಕ್ತೋ ಮದ್ಯಾಜೀ ಮತ್ಪರಾಯಣಃ ।
ಮಯಿ ಸನ್ನ್ಯಸ್ತಕರ್ಮಾ ಚ ಸ ವಿಪ್ರಸ್ತಾರಯಿಷ್ಯತಿ ॥೧೯೩॥

ಯಾವ ಬ್ರಾಹ್ಮಣನು ನನ್ನ ಭಕ್ತನಾಗಿ ಸಮಸ್ತ ಕರ್ಮಗಳನ್ನು ಭಗವತ್ಪೂಜಾ ರೂಪವಾಗಿ ಮಾಡುವವನಾಗಿ, ನನ್ನಲ್ಲೇ ಮನಸ್ಸುಳ್ಳವನಾಗಿ, ಸಮಸ್ತ ಕರ್ಮಗಳನ್ನೂ ಭಗವತ್ಪೂಜಾರೂಪವಾಗಿ ಸಮರ್ಪಿಸುವವನಾಗಿ ಇರುತ್ತಾನೋ ಅಂತಹ ವಿಪ್ರನು ಕಷ್ಟಗಳಿಂದ ನಮ್ಮನ್ನು ದಾಟಿಸುತ್ತಾನೆ.

ದ್ವಾದಶಾಕ್ಷರತತ್ತ್ವಜ್ಞಶ್ಚತುರ್ವ್ಯೂಹವಿಭಾಗವಿತ್ ।
ಅಚ್ಛಿದ್ರ(ಃ)ಪಂಚಕಾಲಜ್ಞಃ ಸ ವಿಪ್ರಸ್ತಾರಯಿಷ್ಯತಿ ॥೧೯೪॥

ಯಾವ ವ್ಯಕ್ತಿಯು ವಾಸುದೇವ ದ್ವಾದಶಾಕ್ಷರ ಮಂತ್ರಗಳನ್ನು ಜಪಿಸುತ್ತಾನೋ, ಭಗವಂತನ ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ರೂಪಗಳನ್ನು ಅರಿತಿರುತ್ತಾನೋ, ದೋಷದಿಂದ ಮುಕ್ತನಾಗಿರುತ್ತಾನೋ, ಅಭಿಗಮನ, ಉಪಾದಾನ, ಇಜ್ಯಾ, ಜಪ, ಸ್ವಾಧ್ಯಾಯ ಎಂಬ ಐದು ಕಾಲಗಳಲ್ಲಿ ಆಚರಿಸಬೇಕಾದ ಸತ್ಕರ್ಮಗಳನ್ನು ಅರಿತಿರುತ್ತಾನೋ ಅಂತಹ ಬ್ರಾಹ್ಮಣನು ನಮ್ಮನ್ನು ದುಃಖದಿಂದ ಪಾರು ಮಾಡುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಸರ್ವಶಾಸ್ತ್ರಸಮುಚ್ಚಯೋ ನಾಮ
ದ್ವ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂರನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ವೃಷಭ-ಗೃಹ-ಶಯ್ಯಾ ಮೊದಲಾದ ದಾನಗಳನ್ನು ಪ್ರಶಂಸಿದುದು. ಗೋ-ಬ್ರಾಹ್ಮಣರ ರಕ್ಷಣೆಯೇ ಮೊದಲಾದ ಅನೇಕ ಧರ್ಮಗಳನ್ನು ಹೇಳಿದುದು.

ವೈಶಂಪಾಯನಃ

ವಾಸುದೇವೇನ ದಾನೇಷು ಕಥಿತೇಷು ಯಥಾಕ್ರಮಮ್ ।
ಅವಿತೃಪ್ತಸ್ತು ಧರ್ಮೇಷು ರಾಜಾ ಕೇಶವಮಬ್ರವೀತ್ ॥೧॥

ವೈಶಂಪಾಯನ- ಜನಮೇಜಯನೇ, ವಾಸುದೇವನು ಕ್ರಮವಾಗಿ ದಾನಗಳ ವಿಷಯಗಳನ್ನು ಹೇಳಿದ ಬಳಿಕ, ಶ್ರವಣದಲ್ಲಿ ಪೂರ್ಣತೃಪ್ತಿಯನ್ನು ಪಡೆಯದ ಯುಧಿಷ್ಠಿರನು ಪುನಃ ಕೇಶವನನ್ನು ಕುರಿತು ಹೀಗೆ ಹೇಳಿದನು.

ಯುಧಿಷ್ಠಿರಃ

ದೇವ ಧರ್ಮಾಮೃತಮಿದಂ ಶೃಣ್ವತೋಽಪಿ ಪರಂತಪ ।
ನ ವಿದ್ಯತೇ ಸುರಶ್ರೇಷ್ಠ ಮಮ ತೃಪ್ತಿರ್ಹಿ ಮಾಧವ ॥೨॥

ಯುಧಿಷ್ಠಿರ- ಪರಂತಪನೇ, ದೇವದೇವನೇ, ಮಾಧವನೇ, ಅಮೃತಧಾರೆಗೆ ಸಮಾನವಾದ ನಿನ್ನ ಧರ್ಮಪ್ರವಚನವನ್ನು ಎಷ್ಟು ಕೇಳಿದರೂ ನನಗೆ ತೃಪ್ತಿ ಉಂಟಾಗುತ್ತಿಲ್ಲ. ಮತ್ತೂ ಕೇಳಬೇಕು ಎನಿಸುತ್ತಿದೆ.

ತತ್ಫಲಂ ಕಥಯಸ್ವೇಹ ತವ ಭಕ್ತಸ್ಯ ಮೇಽಚ್ಯುತ ॥೩॥

ಶ್ರೀಕೃಷ್ಣನೇ ವೃಷಭವನ್ನು ದಾನ ಮಾಡಿದಾಗ ಯಾವ ಫಲವು ಉಂಟಾಗುತ್ತದೆ ಎಂಬುದನ್ನು ನಿನ್ನ ಭಕ್ತನಾದ ನನಗೆ ತಿಳಿಸು.

ಯಾನಿ ಚಾನ್ಯಾನಿ ದಾನಾನಿ ತ್ವಯಾ ನೋಕ್ತಾನಿ ಕಾನಿಚಿತ್ ।
ತಾನ್ಯಾಚಕ್ಷ್ವ ಸುರಶ್ರೇಷ್ಠ ತೇಷಾಂ ಚಾನುಕ್ರಮಾತ್ ಫಲಮ್ ॥೪॥

ಇಷ್ಟೆ ಅಲ್ಲದೆ ಬೇರೆ ಇನ್ನೂ ಯಾವ ದಾನಗಳ ಬಗ್ಗೆ ನೀನು ತಿಳಿಸಿಲ್ಲವೋ, ಆ ಎಲ್ಲ ದಾನಗಳ ಬಗ್ಗೆಯೂ ಕ್ರಮವಾಗಿ ತಿಳಿಸುತ್ತಾ, ಅವುಗಳಿಂದ ದೊರೆಯುವ ಫಲಗಳನ್ನೂ ತಿಳಿಸು.

ಶ್ರೀಭಗವಾನ್

ಶೃಣು ಧರ್ಮಾಮೃತಂ ಶ್ರೇಷ್ಠಂ ದತ್ತಸ್ಯಾನಡುಹಃ ಫಲಮ್ ।
ಪವಿತ್ರತ್ವಾತ್ ಸುಪುಣ್ಯತ್ವಾತ್ ಪಾವನತ್ವಾತ್ ತಥೈವ ಚ ॥೫॥

ಶ್ರೀಭಗವಾನ್– ಧರ್ಮರಾಜನೇ, ಶ್ರೇಷ್ಠವಾದ ನಿತ್ಯವಾದ ವೃಷಭದಾನದ ಫಲವನ್ನು ಕೇಳು. ಈ ದಾನದ ಫಲವನ್ನು ಕೇಳುವುದೇ ಪವಿತ್ರವಾಗಿದೆ, ಪುಣ್ಯಪ್ರದವಾಗಿದೆ, ಶ್ರೇಷ್ಠವಾಗಿದೆ.

ದಶಧೇನುಸಮೋಽನಡ್ವಾನ್ ಏಕೋಽಪಿ ಕುರುಪುಂಗವ ।
ಮೇದೋಮಾಂಸವಿಪುಷ್ಟಾಂಗೋ ನೀರೋಗಃ ಕೋಪವರ್ಜಿತಃ ॥೬॥

ಕುರುಶ್ರೇಷ್ಠನೇ, ಹತ್ತು ಹಸುಗಳಿಗೆ ಸಮಾನವಾದುದು ಒಂದು ವೃಷಭದ ದಾನ. ಕುರುಪುಂಗವನೇ, ಕೋಪವಿಲ್ಲದ, ರೋಗರಹಿತವಾದ, ಮೇದಸ್ಸು, ಮಾಂಸಗಳಿಂದ ಪುಷ್ಟವಾದ ಅವಯವವುಳ್ಳ ಒಂದು ವೃಷಭವನ್ನು ದಾನ ಮಾಡಿದರೂ ಹತ್ತು ಹಸುಗಳನ್ನು ದಾನ ಮಾಡಿದ ಫಲವು ಉಂಟಾಗುತ್ತದೆ.

ಯುವಾ ಭದ್ರಃ ಸುಶೀಲಶ್ಚ ಸರ್ವದೋಷವಿವರ್ಜಿತಃ ।
ಧುರಂ ಧಾರಯತೇಽನಡ್ವಾನ್ ದತ್ತೋ ವಿಪ್ರಾಯ ಪಾಂಡವ ॥೭॥

ಪಾಂಡವನೇ, ಯೌವನದಲ್ಲಿ ಕೂಡಿರುವ, ಮಂಗಳವಾದ, ಒಳ್ಳೆಯ ಸ್ವಭಾವದಿಂದ ಕೂಡಿದ, ದೋಷಗಳಿಂದ ದೂರವಾದ, ಭಾರವನ್ನು ಹೊರುವ ವೃಷಭವನ್ನು ಬ್ರಾಹ್ಮಣನಿಗೆ ದಾನ ಮಾಡಬೇಕು.

ಸ ತೇನ ಪುಣ್ಯದಾನೇನ ವರ್ಷಕೋಟಿಂ ಯುಧಿಷ್ಠಿರ ।
ಯಥಾಕಾಮಂ ಮಹಾತೇಜಾ ಗವಾಂ ಲೋಕೇ ಮಹೀಯತೇ ॥೮॥

ಯುಧಿಷ್ಠಿರನೇ, ಪುಣ್ಯಪ್ರದಾನವಾದ ವೃಷಭವನ್ನು ದಾನ ಮಾಡುವುದರಿಂದ ಯುಧಿಷ್ಠಿರನೇ, ದಾನ ಮಾಡಿದ ವ್ಯಕ್ತಿಯು ಕೋಟಿ ವರ್ಷಗಳ ಕಾಲ ತನ್ನ ಸಮಸ್ತ ಇಷ್ಟಾರ್ಥಗಳನ್ನು ಪಡೆಯುತ್ತಾ ತೇಜಸ್ವಿಯಾಗಿ ಗೋಲೋಕದಲ್ಲಿ ಪೂಜಿತನಾಗುತ್ತಾನೆ.

ಯಶ್ಚ ದದ್ಯಾದನಡ್ವಾಹೌ ದ್ವೌ ಯುಕ್ತೌ ತು ಧುರಂಧರೌ ।
ಸುವ್ರತಾಯ ದರಿದ್ರಾಯ ಶ್ರೋತ್ರಿಯಾಯ ವಿಶೇಷತಃ ॥೯॥

ತಸ್ಯ ಯತ್ ಪುಣ್ಯಮಾಖ್ಯಾತಂ ತಚ್ಛೃಣುಷ್ವ ಯುಧಿಷ್ಠಿರ ॥೧೦॥

ಭಾರವನ್ನು ಹೊರುವ ಸಾಮರ್ಥ್ಯವುಳ್ಳ ಎರಡು ಎತ್ತುಗಳನ್ನು ಯಾವನು ವ್ರತನಿಷ್ಠನಾದ, ದರಿದ್ರನಾದ ಶ್ರೋತ್ರಿಯ ಬ್ರಾಹ್ಮಣನಿಗೆ ದಾನ ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯವೇನೆಂಬುದನ್ನು ತಿಳಿಸುತ್ತೇನೆ, ಯುಧಿಷ್ಠಿರನೇ ಕೇಳಿಸಿಕೊ.

ಸಹಸ್ರಗೋಪ್ರದಾನೇನ ಯತ್ಪ್ರೋಕ್ತಂ ಫಲಮುತ್ತಮಮ್ ।
ತತ್ಪುಣ್ಯಫಲಮಾಪ್ನೋತಿ ಯಾತಿ ಲೋಕಾನ್ ಸನಾತನಾನ್ ॥೧೧॥

ಸಾವಿರ ಗೋವುಗಳನ್ನು ದಾನ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೋ ಆ ಫಲವನ್ನು ಎರಡು ವೃಷಭಗಳನ್ನು ದಾನ ಮಾಡಿದ ವ್ಯಕ್ತಿಯು ಹೊಂದುತ್ತಾನೆ.

ಯಾವಂತಿ ಚೈವ ರೋಮಾಣಿ ತಯೋಶ್ಚಾನಡುಹೋರ್ನೃಪ ।
ತಾವದ್ ವರ್ಷಸಹಸ್ರಾಣಿ ಮಮ ಲೋಕೇ ಮಹೀಯತೇ ॥೧೨॥

ಆ ಎರಡು ಎತ್ತುಗಳ ದೇಹದಲ್ಲಿ ಎಷ್ಟು ರೋಮಗಳು ಇವೆಯೋ ಅಷ್ಟು ಸಾವಿರ ವರ್ಷಗಳ ಕಾಲ ನನ್ನ ಲೋಕದಲ್ಲಿ ಪೂಜಿತನಾಗುತ್ತಾನೆ.

ದರಿದ್ರಾಯೈವ ದಾತವ್ಯಂ ನ ಸಮೃದ್ಧಾಯ ಪಾಂಡವ ।
ವರ್ಷಾಣಾಂ ಹಿ ತಟಾಕೇಷು ಫಲಂ ನೈವ ಪಯೋಧಿಷು ॥೧೩॥

ಈ ಎತ್ತುಗಳನ್ನು ದರಿದ್ರನಾದ ಬ್ರಾಹ್ಮಣನಿಗೆ ನೀಡಬೇಕೇ ವಿನಾ ಸಮೃದ್ಧಿಯುಳ್ಳ ಬ್ರಾಹ್ಮಣನಿಗೆ ನೀಡಬಾರದು. ಕಾರಣ ಮಳೆಗಾಲದಲ್ಲಿ ಸುರಿಯುವ ನೀರನ ಪ್ರಯೋಜನವು ಸರೋವರ, ಬಾವಿಗಳಲ್ಲದೆ ಸಮುದ್ರಕ್ಕೆ ಯಾವ ಪ್ರಯೋಜನವೂ ಉಂಟುಮಾಡುವುದಿಲ್ಲ. ಇದರಂತೆ ಸಮೃದ್ಧಿಯುಳ್ಳ ಬ್ರಾಹ್ಮಣನಿಗೆ ದಾನ ಮಾಡುವುದಕ್ಕಿಂತ ದರಿದ್ರನಿಗೆ ಮಾಡುವ ದಾನವು ಶ್ರೇಷ್ಠವೆನಿಸಿದೆ.

ಯಸ್ತು ದದ್ಯಾದನಡುಹಂ ದರಿದ್ರಾಯ ದ್ವಿಜಾತಯೇ ।
ಸ ತೇನ ಪುಣ್ಯದಾನೇನ ಪೂತಾತ್ಮಾ ಕುರುಪುಂಗವ ॥೧೪॥

ವಿಮಾನಂ ದಿವ್ಯಮಾರೂಢೋ ದಿವ್ಯರೂಪೀ ಯಥಾಸುಖಮ್ ।
ಮಮ ಲೋಕೇಷು ರಮತೇ ಯಾವದಾಭೂತಸಂಪ್ಲವಮ್ ॥೧೫॥

ಕುರುಶ್ರೇಷ್ಠನೇ, ಯಾವ ವ್ಯಕ್ತಿಯು ಎತ್ತುಗಳನ್ನು ದರಿದ್ರನಾದ ಬ್ರಾಹ್ಮಣನಿಗೆ ದಾನ ಮಾಡುತ್ತಾನೋ ಅವನು ಪವಿತ್ರಾತ್ಮನಾಗಿ, ಆ ಪುಣ್ಯಪ್ರದವಾದ ದಾನದಿಂದ ನಿರ್ಮಲವಾದ, ಶ್ರೇಷ್ಠವಾದ ದೇವವಿಮಾನವನ್ನು ಏರಿಕೊಂಡು ಪ್ರಳಯವಾಗುವ ತನಕವೂ ನನ್ನ ಲೋಕದಲ್ಲಿ ಇದ್ದು ಸಮಸ್ತ ಇಷ್ಟಾರ್ಥಗಳನ್ನು ಪಡೆದು ವಿಹರಿಸುತ್ತಾನೆ.

ಗೃಹಂ ದೀಪಪ್ರಭಾಯುಕ್ತಂ ಶಯ್ಯಾಸನವಿಭೂಷಿತಮ್ ।
ಭಾಜನೋಪಸ್ಕರೈರ್ಯುಕ್ತಂ ಧಾನ್ಯಪೂರ್ಣಮಲಂಕೃತಮ್ ॥೧೬॥

ದಾಸೀಗೋಭೂಮಿಸಂಯುಕ್ತಮನ್ಯೂನಂ ಸರ್ವಸಾಧನೈಃ ॥೧೭॥

ಬ್ರಾಹ್ಮಣಾಯ ದರಿದ್ರಾಯ ಶ್ರೋತ್ರಿಯಾಯ ಯುಧಿಷ್ಠಿರ ।
ದದ್ಯಾತ್ ಸದಕ್ಷಿಣಂ ಯಸ್ತು ತಸ್ಯ ಪುಣ್ಯಫಲಂ ಶೃಣು ॥೧೮॥

ಯುಧಿಷ್ಠಿರನೇ, ಯಾವ ವ್ಯಕ್ತಿಯು ದೀಪದ ಬೆಳಕಿನಿಂದ ಕೂಡಿದ ಮನೆಯನ್ನು, ಹಾಸಿಗೆ, ಆಸನದಿಂದ ಅಲಂಕೃತವಾದ, ಪಾತ್ರೆಗಳಿಂದ ತುಂಬಿದ, ಧಾನ್ಯಪೂರ್ಣವಾದ, ಅಲಂಕೃತವಾದ ದಾಸಿಯರೂ, ಗೋ, ಭೂಮಿ ಮುಂತಾದ ನ್ಯೂನತೆಯಿಲ್ಲದ ಸಮಸ್ತ ಸಾಧನವುಳ್ಳ ಗೃಹವನ್ನು ಶ್ರೋತ್ರಿಯನಾದ, ದರಿದ್ರನಾದ ಬ್ರಾಹ್ಮಣನಿಗೆ ದಕ್ಷಿಣೆ ಸಹಿತವಾಗಿ ದಾನ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೆ ಎನ್ನುವುದನ್ನು ಹೇಳುತ್ತೇನೆ, ಕೇಳಿಸಿಕೊ.

ದೇವಾಃ ಪಿತೃಗಣಾಶ್ಚೈವ ಹ್ಯಗ್ನಯೋ ಋಷಯಸ್ತಥಾ ।
ಪ್ರಯಚ್ಛಂತಿ ಪ್ರಹೃಷ್ಟಾ ವೈ ಯಾನಮಾದಿತ್ಯಸನ್ನಿಭಮ್ ॥೧೯॥

ತೇನ ಗಚ್ಛೇಚ್ಛ್ರಿಯಾ ಯುಕ್ತೋ ಬ್ರಹ್ಮಲೋಕಮನುತ್ತಮಮ್ ॥೨೦॥

ದೇವತೆಗಳು, ಪಿತೃಗಣದವರು, ಅಗ್ನಿಗಳು, ಋಷಿಗಳು ಇವನ ದಾನದಿಂದ ಸಂತುಷ್ಟರಾಗಿ ಸೂರ್ಯಪ್ರಭೆಯಿಂದ ಕಂಗೊಳಿಸುವ ವಾಹನವನ್ನು ಅವನ ಪಾಲಿಗೆ ಕಳುಹಿಸಿಕೊಡುತ್ತಾರೆ. ಯಾರಿಂದಲೂ ಹೊಂದಲಾಗದ ಕಾಂತಿಯಿಂದ ಕೂಡಿದ ಬ್ರಹ್ಮಲೋಕವನ್ನು ಅವನು ಹೊಂದುತ್ತಾನೆ.

ಸ್ತ್ರೀಸಹಸ್ರಾವೃತೇ ದಿವ್ಯೇ ಭವನೇ ತತ್ರ ಕಾಂಚನೇ ।
ಮೋದತೇ ಬ್ರಹ್ಮಲೋಕಸ್ಥೋ ಯಾವದಾಭೂತಸಂಪ್ಲವಮ್ ॥೨೧॥

ಬಂಗಾರಮಯವಾದ ಅರಮನೆಯಲ್ಲಿ ಸಾಸಿರ ಸ್ತ್ರೀಯರಿಂದ ಕೂಡಿಕೊಂಡು ಪ್ರಲಯವಾಗುವ ತನಕವೂ ಬ್ರಹ್ಮಲೋಕದಲ್ಲಿ ಸುಖ ಹೊಂದುತ್ತಾನೆ.

ಶಯ್ಯಾಂ ಪ್ರಸ್ತರಣೋಪೇತಾಂ ಯಃ ಪ್ರಯಚ್ಛತಿ ಪಾಂಡವ ।
ಅರ್ಚಯಿತ್ವಾ ದ್ವಿಜಂ ಭಕ್ತ್ಯಾ ವಸ್ತ್ರಮಾಲ್ಯಾನುಲೇಪನೈಃ ॥೨೨॥

ಭೋಜಯಿತ್ವಾ ವಿಚಿತ್ರಾನ್ನಂ ತಸ್ಯ ಪುಣ್ಯಫಲಂ ಶೃಣು ॥೨೩॥

ಆಚ್ಛಾದನೆ(ಹೊದಿಕೆ)ಯಿಂದ ಕೂಡಿದ ಹಾಸಿಗೆಯನ್ನು ಯಾವನು ಬ್ರಾಹ್ಮಣನಿಗೆ ದಾನ ಮಾಡುತ್ತಾನೋ, ವಸ್ತ್ರ, ಮಾಲ್ಯ, ಅನುಲೇಪನಗಳಿಂದ ಅಲಂಕರಿಸಿ ಭಕ್ತಿಯಿಂದ ದಾನ ಮಾಡಿ, ಅನೇಕ ಬಗೆಯ ಅನ್ನದಿಂದ ಊಟವನ್ನು ಮಾಡಿಸಿದ ವ್ಯಕ್ತಿಗೆ ದೊರೆಯುವ ಫಲವೇನೆಂಬುದನ್ನು ಕೇಳು.

ಧೇನುದಾನಸ್ಯ ಯತ್ಪುಣ್ಯಂ ವಿಧಿದತ್ತಸ್ಯ ಪಾಂಡವ ।
ತತ್ಪುಣ್ಯಂ ಸಮನುಪ್ರಾಪ್ಯ ಪಿತೃಲೋಕೇ ಮಹೀಯತೇ ॥೨೪॥

ಒಂದು ಹಸುವನ್ನು ದಾನ ಮಾಡಿದಾಗ ಯಾವ ಪುಣ್ಯವನ್ನು ಹೊಂದುತ್ತಾನೋ, ವಿಧಿಬದ್ಧವಾಗಿ ಗೋದಾನ ಮಾಡಿದ ಪುಣ್ಯವನ್ನೇ ಈ ದಾನದಿಂದ ಹೊಂದಿ ಪಿತೃಲೋಕದಲ್ಲಿ ಪೂಜ್ಯನಾಗುತ್ತಾನೆ.

ಶಿಲ್ಪಮಧ್ಯಯನಂ ವಾऽಪಿ ವಿದ್ಯಾಮಂತ್ರೌಷಧಾನಿ ಚ ।
ಯಃ ಪ್ರಯಚ್ಛತಿ ವಿಪ್ರಾಯ ತಸ್ಯ ಪುಣ್ಯಫಲಂ ಶೃಣು ॥೨೫॥

ಶಿಲ್ಪ, ವೇದ, ಮಂತ್ರ, ಔಷಧಿಗಳ ವಿದ್ಯೆಗಳನ್ನು ಯಾವನು ದಾನ ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯಫಲವನ್ನು ಕೇಳು.

ಆಹಿತಾಗ್ನಿಸಹಸ್ರಸ್ಯ ತರ್ಪಿತಸ್ಯೇಹ ಯತ್ಫಲಮ್ ।
ತತ್ಪುಣ್ಯಫಲಮಾಪ್ನೋತಿ ಯಸ್ತು ವಿದ್ಯಾಂ ಪ್ರಯಚ್ಛತಿ ॥೨೬॥

ಸಾವಿರ ಆಹಿತಾಗ್ನಿಗಳನ್ನು ತೃಪ್ತಿಪಡಿಸಿದಾಗ ಯಾವ ಫಲವು ಬರುತ್ತದೋ ಆ ಪುಣ್ಯಫಲವನ್ನು ವಿದ್ಯಾದಾನ ಮಾಡಿದ ವ್ಯಕ್ತಿಯು ಹೊಂದುತ್ತಾನೆ.

ಕುರುಶ್ರೇಷ್ಠನೇ, ಯಾವ ವ್ಯಕ್ತಿಯು ಎತ್ತುಗಳನ್ನು ದರಿದ್ರನಾದ ಬ್ರಾಹ್ಮಣನಿಗೆ ದಾನ ಮಾಡುತ್ತಾನೋ ಅವನು ಪವಿತ್ರಾತ್ಮನಾಗಿ, ಆ ಪುಣ್ಯಪ್ರದವಾದ ದಾನದಿಂದ ನಿರ್ಮಲವಾದ, ಶ್ರೇಷ್ಠವಾದ ದೇವವಿಮಾನವನ್ನು ಏರಿಕೊಂಡು ಪ್ರಳಯವಾಗುವ ತನಕವೂ ನನ್ನ ಲೋಕದಲ್ಲಿ ಇದ್ದು ಸಮಸ್ತ ಇಷ್ಟಾರ್ಥಗಳನ್ನು ಪಡೆದು ವಿಹರಿಸುತ್ತಾನೆ.

ಗೃಹಂ ದೀಪಪ್ರಭಾಯುಕ್ತಂ ಶಯ್ಯಾಸನವಿಭೂಷಿತಮ್ ।
ಭಾಜನೋಪಸ್ಕರೈರ್ಯುಕ್ತಂ ಧಾನ್ಯಪೂರ್ಣಮಲಂಕೃತಮ್ ॥೧೬॥

ದಾಸೀಗೋಭೂಮಿಸಂಯುಕ್ತಮನ್ಯೂನಂ ಸರ್ವಸಾಧನೈಃ ॥೧೭॥

ಬ್ರಾಹ್ಮಣಾಯ ದರಿದ್ರಾಯ ಶ್ರೋತ್ರಿಯಾಯ ಯುಧಿಷ್ಠಿರ ।
ದದ್ಯಾತ್ ಸದಕ್ಷಿಣಂ ಯಸ್ತು ತಸ್ಯ ಪುಣ್ಯಫಲಂ ಶೃಣು ॥೧೮॥

ಯುಧಿಷ್ಠಿರನೇ, ಯಾವ ವ್ಯಕ್ತಿಯು ದೀಪದ ಬೆಳಕಿನಿಂದ ಕೂಡಿದ ಮನೆಯನ್ನು, ಹಾಸಿಗೆ, ಆಸನದಿಂದ ಅಲಂಕೃತವಾದ, ಪಾತ್ರೆಗಳಿಂದ ತುಂಬಿದ, ಧಾನ್ಯಪೂರ್ಣವಾದ, ಅಲಂಕೃತವಾದ ದಾಸಿಯರೂ, ಗೋ, ಭೂಮಿ ಮುಂತಾದ ನ್ಯೂನತೆಯಿಲ್ಲದ ಸಮಸ್ತ ಸಾಧನವುಳ್ಳ ಗೃಹವನ್ನು ಶ್ರೋತ್ರಿಯನಾದ, ದರಿದ್ರನಾದ ಬ್ರಾಹ್ಮಣನಿಗೆ ದಕ್ಷಿಣೆ ಸಹಿತವಾಗಿ ದಾನ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೆ ಎನ್ನುವುದನ್ನು ಹೇಳುತ್ತೇನೆ, ಕೇಳಿಸಿಕೊ.

ದೇವಾಃ ಪಿತೃಗಣಾಶ್ಚೈವ ಹ್ಯಗ್ನಯೋ ಋಷಯಸ್ತಥಾ ।
ಪ್ರಯಚ್ಛಂತಿ ಪ್ರಹೃಷ್ಟಾ ವೈ ಯಾನಮಾದಿತ್ಯಸನ್ನಿಭಮ್ ॥೧೯॥

ತೇನ ಗಚ್ಛೇಚ್ಛ್ರಿಯಾ ಯುಕ್ತೋ ಬ್ರಹ್ಮಲೋಕಮನುತ್ತಮಮ್ ॥೨೦॥

ದೇವತೆಗಳು, ಪಿತೃಗಣದವರು, ಅಗ್ನಿಗಳು, ಋಷಿಗಳು ಇವನ ದಾನದಿಂದ ಸಂತುಷ್ಟರಾಗಿ ಸೂರ್ಯಪ್ರಭೆಯಿಂದ ಕಂಗೊಳಿಸುವ ವಾಹನವನ್ನು ಅವನ ಪಾಲಿಗೆ ಕಳುಹಿಸಿಕೊಡುತ್ತಾರೆ. ಯಾರಿಂದಲೂ ಹೊಂದಲಾಗದ ಕಾಂತಿಯಿಂದ ಕೂಡಿದ ಬ್ರಹ್ಮಲೋಕವನ್ನು ಅವನು ಹೊಂದುತ್ತಾನೆ.

ಸ್ತ್ರೀಸಹಸ್ರಾವೃತೇ ದಿವ್ಯೇ ಭವನೇ ತತ್ರ ಕಾಂಚನೇ ।
ಮೋದತೇ ಬ್ರಹ್ಮಲೋಕಸ್ಥೋ ಯಾವದಾಭೂತಸಂಪ್ಲವಮ್ ॥೨೧॥

ಬಂಗಾರಮಯವಾದ ಅರಮನೆಯಲ್ಲಿ ಸಾಸಿರ ಸ್ತ್ರೀಯರಿಂದ ಕೂಡಿಕೊಂಡು ಪ್ರಲಯವಾಗುವ ತನಕವೂ ಬ್ರಹ್ಮಲೋಕದಲ್ಲಿ ಸುಖ ಹೊಂದುತ್ತಾನೆ.

ಶಯ್ಯಾಂ ಪ್ರಸ್ತರಣೋಪೇತಾಂ ಯಃ ಪ್ರಯಚ್ಛತಿ ಪಾಂಡವ ।
ಅರ್ಚಯಿತ್ವಾ ದ್ವಿಜಂ ಭಕ್ತ್ಯಾ ವಸ್ತ್ರಮಾಲ್ಯಾನುಲೇಪನೈಃ ॥೨೨॥

ಭೋಜಯಿತ್ವಾ ವಿಚಿತ್ರಾನ್ನಂ ತಸ್ಯ ಪುಣ್ಯಫಲಂ ಶೃಣು ॥೨೩॥

ಆಚ್ಛಾದನೆ(ಹೊದಿಕೆ)ಯಿಂದ ಕೂಡಿದ ಹಾಸಿಗೆಯನ್ನು ಯಾವನು ಬ್ರಾಹ್ಮಣನಿಗೆ ದಾನ ಮಾಡುತ್ತಾನೋ, ವಸ್ತ್ರ, ಮಾಲ್ಯ, ಅನುಲೇಪನಗಳಿಂದ ಅಲಂಕರಿಸಿ ಭಕ್ತಿಯಿಂದ ದಾನ ಮಾಡಿ, ಅನೇಕ ಬಗೆಯ ಅನ್ನದಿಂದ ಊಟವನ್ನು ಮಾಡಿಸಿದ ವ್ಯಕ್ತಿಗೆ ದೊರೆಯುವ ಫಲವೇನೆಂಬುದನ್ನು ಕೇಳು.

ಧೇನುದಾನಸ್ಯ ಯತ್ಪುಣ್ಯಂ ವಿಧಿದತ್ತಸ್ಯ ಪಾಂಡವ ।
ತತ್ಪುಣ್ಯಂ ಸಮನುಪ್ರಾಪ್ಯ ಪಿತೃಲೋಕೇ ಮಹೀಯತೇ ॥೨೪॥

ಒಂದು ಹಸುವನ್ನು ದಾನ ಮಾಡಿದಾಗ ಯಾವ ಪುಣ್ಯವನ್ನು ಹೊಂದುತ್ತಾನೋ, ವಿಧಿಬದ್ಧವಾಗಿ ಗೋದಾನ ಮಾಡಿದ ಪುಣ್ಯವನ್ನೇ ಈ ದಾನದಿಂದ ಹೊಂದಿ ಪಿತೃಲೋಕದಲ್ಲಿ ಪೂಜ್ಯನಾಗುತ್ತಾನೆ.

ಶಿಲ್ಪಮಧ್ಯಯನಂ ವಾऽಪಿ ವಿದ್ಯಾಮಂತ್ರೌಷಧಾನಿ ಚ ।
ಯಃ ಪ್ರಯಚ್ಛತಿ ವಿಪ್ರಾಯ ತಸ್ಯ ಪುಣ್ಯಫಲಂ ಶೃಣು ॥೨೫॥

ಶಿಲ್ಪ, ವೇದ, ಮಂತ್ರ, ಔಷಧಿಗಳ ವಿದ್ಯೆಗಳನ್ನು ಯಾವನು ದಾನ ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯಫಲವನ್ನು ಕೇಳು.

ಆಹಿತಾಗ್ನಿಸಹಸ್ರಸ್ಯ ತರ್ಪಿತಸ್ಯೇಹ ಯತ್ಫಲಮ್ ।
ತತ್ಪುಣ್ಯಫಲಮಾಪ್ನೋತಿ ಯಸ್ತು ವಿದ್ಯಾಂ ಪ್ರಯಚ್ಛತಿ ॥೨೬॥

ಸಾವಿರ ಆಹಿತಾಗ್ನಿಗಳನ್ನು ತೃಪ್ತಿಪಡಿಸಿದಾಗ ಯಾವ ಫಲವು ಬರುತ್ತದೋ ಆ ಪುಣ್ಯಫಲವನ್ನು ವಿದ್ಯಾದಾನ ಮಾಡಿದ ವ್ಯಕ್ತಿಯು ಹೊಂದುತ್ತಾನೆ.

ಛಂದೋಭಿಃ ಸಂಪ್ರಯುಕ್ತೇನ ವಿಮಾನೇನ ವಿರಾಜತಾ ।
ಸಪ್ತರ್ಷಿಲೋಕಾನ್ ವ್ರಜತಿ ಪೂಜ್ಯತೇ ಬ್ರಹ್ಮವಾದಿಭಿಃ ॥೨೭॥

ತನ್ನ ನಿಯಂತ್ರಣಕ್ಕೆ ಸಿಗುವ ಕುದುರೆಗಳಿಂದ ಕೂಡಿದ ವಿಮಾನದಲ್ಲಿ ಶೋಭಿಸುವವನಾಗಿ, ಬ್ರಹ್ಮವಾದಿಗಳಿಂದ ಪೂಜಿತನಾಗಿ ಸಪ್ತರ್ಷಿಗಳ ಲೋಕಕ್ಕೆ ಹೋಗುತ್ತಾನೆ.

ಚತುರ್ಯುಗಾನಿ ವೈ ತ್ರಿಂಶತ್ ಕ್ರೀಡಿತ್ವಾ ತತ್ರ ದೇವವತ್ ।
ಇಹ ಮಾನುಷ್ಯಕೇ ಲೋಕೇ ವಿಪ್ರೋ ಭವತಿ ವೇದವಿತ್ ॥೨೮॥

ಆ ಸಪ್ತರ್ಷಿಲೋಕದಲ್ಲಿಯಾದರೂ ಮೂವತ್ತು ಚತುರ್ಯುಗಗಳ ಕಾಲ ದೇವತೆಗಳಂತೆ ಸಂತೋಷದಂತೆ ವಿಹರಿಸಿ, ನಂತರ ಮನುಷ್ಯಲೋಕದಲ್ಲಿ ಬ್ರಾಹ್ಮಣನಾಗಿ, ವೇದಜ್ಞನಾಗಿ ಹುಟ್ಟುತ್ತಾನೆ.

ವಿಶ್ರಾಮಯತಿ ಯೋ ವಿಪ್ರಂ ಶ್ರಾಂತಮಧ್ವನಿ ಕರ್ಶಿತಮ್ ।
ವಿನಶ್ಯತಿ ತದಾ ಪಾಪಂ ತಸ್ಯ ವರ್ಷಕೃತಂ ನೃಪ ॥೨೯॥

ಯಾವನು ದಾರಿಯಲ್ಲಿ ಬಳಲಿದ ಒಬ್ಬ ಬ್ರಾಹ್ಮಣನನ್ನು ವಿಶ್ರಾಂತಿ ಕೊಡುವುದರ ಮೂಲಕ ಉಪಚರಿಸುತ್ತಾನೋ ಅವನ ಒಂದು ವರ್ಷಗಳ ಪಾಪವು ನಾಶವನ್ನು ಹೊಂದುತ್ತದೆ.

ಅಥ ಪ್ರಕ್ಷಾಲಯೇತ್ ಪಾದೌ ತಸ್ಯ ತೋಯೇನ ಭಕ್ತಿಮಾನ್ ।
ದಶವರ್ಷಕೃತಂ ಪಾಪಂ ವ್ಯಪೋಹತಿ ನ ಸಂಶಯಃ ॥೩೦॥

ಯಾರು ಪ್ರಯಾಣದಲ್ಲಿ ಸಾಗುತ್ತಿರುವ ಬ್ರಾಹ್ಮಣನ ಪಾದಗಳನ್ನು ಭಕ್ತಿಯಿಂದ ನೀರಿನಿಂದ ತೊಳೆಯುತ್ತಾನೋ ಅವನ ಹತ್ತುವರ್ಷಗಳ ಪಾಪಗಳು ಪರಿಹಾರವಾಗುತ್ತವೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಘೃತೇನ ವಾऽಥ ತೈಲೇನ ಪಾದೌ ತಸ್ಯ ತು ಪೂಜಯೇತ್ ।
ಸ ದ್ವಾದಶಸಮಾರೂಢಂ ಪಾಪಮಾಶು ವ್ಯಪೋಹತಿ ॥೩೧॥

ತೀರ್ಥಯಾತ್ರೆಯನ್ನು ಮಾಡುತ್ತಿರುವ ಬ್ರಾಹ್ಮಣನ ಪಾದಗಳನ್ನು ತುಪ್ಪದಿಂದಾಗಲಿ,

ತೈಲದಿಂದಾಗಲಿ ಯಾವನು ಪೂಜಿಸುತ್ತಾನೋ ಅವನ ಹನ್ನೆರಡು ವರ್ಷಗಳಲ್ಲಿ ಸಂಪಾದಿಸಿದ ಪಾಪಗಳು ಪರಿಹಾರವಾಗುತ್ತವೆ.

ಧೇನುದಾನಸ್ಯ ದತ್ತಸ್ಯ ಯಚ್ಚ ಪುಣ್ಯಮುದಾಹೃತಮ್ ।
ತತ್ಪುಣ್ಯಫಲಮಾಪ್ನೋತಿ ಯಸ್ತೆ ರ್ಯಿನಂ ವಿಪ್ರಮರ್ಚಯೇತ್ ॥೩೨॥

ಒಂದು ಹಸುವನ್ನು ದಾನ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೆ ಎಂದು ಹೇಳಿದ್ದಾರೋ, ಬ್ರಾಹ್ಮಣನನ್ನು ಆರಾಧಿಸಿದ ವ್ಯಕ್ತಿಗೂ ಅಷ್ಟೇ ಪುಣ್ಯವು ಲಭಿಸುತ್ತದೆ.

ಸ್ವಾಗತೇನ ತು ಯೋ ವಿಪ್ರಂ ಪೂಜಯೇದಾಸನೇನ ಚ ।
ಪ್ರತ್ಯುತ್ಥಾನೇನ ವಾ ರಾಜನ್ ಸ ದೇವಾನಾಂ ಪ್ರಿಯೋ ಭವೇತ್ ॥೩೩॥

ಯಾವ ವ್ಯಕ್ತಿಯು ಬ್ರಾಹ್ಮಣನನ್ನು ಸ್ವಾಗತಿಸಿ ಆಸನಾದಿಗಳನ್ನು ಕೊಟ್ಟು ಎದ್ದು ನಿಂತು ಗೌರವಿಸುವ ಮೂಲಕ ಉಪಚರಿಸುತ್ತಾನೋ ಅವನು ದೇವತೆಗಳಿಗೆ ಇಷ್ಟನಾಗುತ್ತಾನೆ.

ಸ್ವಾಗತೇನಾಗ್ನಯೋ ರಾಜನ್ನಾಸನೇನ ಶತಕ್ರತುಃ ।
ಪ್ರತ್ಯುತ್ಥಾನೇನ ಪಿತರಃ ಪ್ರೀತಿಂ ಯಾಂತ್ಯತಿಥಿಪ್ರಿಯಾಃ ॥೩೪॥

ಬ್ರಾಹ್ಮಣನನ್ನು ಸ್ವಾಗತಿಸುವುದರಿಂದ ಅಗ್ನಿಗಳು, ಆಸನವನ್ನು ನೀಡುವುದರಿಂದ ಇಂದ್ರನು, ಎದ್ದು ನಿಂತು ಗೌರವಿಸುವುದರಿಂದ ಪಿತೃದೇವತೆಗಳು ಸಂತುಷ್ಟರಾಗುತ್ತಾರೆ. ಈ ಎಲ್ಲ ದೇವತೆಗಳು ಅತಿಥಿಯ ವಿಷಯದಲ್ಲಿ ಪ್ರೀತಿಯುಳ್ಳವರು.

ಅಗ್ನಿಶಕ್ರಪಿತೃಣಾಂ ಚ ತೇಷಾಂ ಪ್ರೀತ್ಯಾ ನರಾಧಿಪ ।
ಸಂವತ್ಸರಕೃತಂ ಪಾಪಂ ತಸ್ಯ ಸದ್ಯೋ ವಿನಶ್ಯತಿ ॥೩೫॥

ಆದ್ದರಿಂದ ಅಗ್ನಿ-ಇಂದ್ರ-ಪಿತೃಗಳನ್ನು ಸಂತೋಷಪಡಿಸಿದ ಫಲವಾಗಿ ನರಾಧಿಪನೇ, ಆ ವ್ಯಕ್ತಿಯ ಒಂದು ಸಂವತ್ಸರದಲ್ಲಿ ಮಾಡಿದ ಪಾಪಗಳು ಕೂಡಲೇ ನಾಶ ಹೊಂದುತ್ತವೆ.

ಯಃ ಪ್ರಯಚ್ಛತಿ ವಿಪ್ರಾಯ ಆಸನಂ ಮಾಲ್ಯಭೂಷಿತಮ್ ।
ಸ ಯಾತಿ ಮಣಿಯುಕ್ತೇನ ರಥೇನ ಹರಿಕೇತನಮ್ ॥೩೬॥

ಯಾವ ವ್ಯಕ್ತಿಯು ಬ್ರಾಹ್ಮಣನಿಗೆ ಆಸನವನ್ನು ನೀಡುತ್ತಾನೋ, ಮಾಲೆಗಳಿಂದ ಅಲಂಕರಿಸುತ್ತಾನೋ ಆ ವ್ಯಕ್ತಿಯು ಮಣಿಗಳಿಂದ ಅಲಂಕೃತವಾದ ರಥವನ್ನು ಏರಿಕೊಂಡು ಇಂದ್ರನ ಮಂದಿರಕ್ಕೆ ಸಾಗುತ್ತಾನೆ.

ಪುರಂದರಾಸನೇ ತತ್ರ ದಿವ್ಯನಾರೀವಿಭೂಷಿತಃ ।
ಷಷ್ಟಿಂ ವರ್ಷಸಹಸ್ರಾಣಿ ಕ್ರೀಡತ್ಯಪ್ಸರಸಾಂ ಗಣೈಃ ॥೩೭॥

ಇಂದ್ರನ ಮನೆಯಲ್ಲಿ ಅನೇಕ ನಾರಿಯರಿಂದ ವಿಭೂಷಿತನಾಗಿ ಅರವತ್ತು ಸಾವಿರ ವರ್ಷಗಳ ಕಾಲ ಅಪ್ಸರೆಯರ ಮಧ್ಯದಲ್ಲಿ ಕ್ರೀಡಿಸುತ್ತಾನೆ.

ಇಹ ಲೋಕೇ ತು ಧನವಾನ್ ಚತುರ್ವೇದೀ ದ್ವಿಜೋ ಭವೇತ್ ॥೩೮॥

ಬಳಿಕ ಭೂಲೋಕಕ್ಕೆ ಆಗಮಿಸಿ ಧನವಂತನಾದ ಚತುರ್ವೇದ ಪಾರಂಗತನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ವಾಹನಂ ಯಃ ಪ್ರಯಚ್ಛೇತ ಬ್ರಾಹ್ಮಣಾಯ ಯುಧಿಷ್ಠಿರ ।
ಸ ಯಾತಿ ರತ್ನಚಿತ್ರೇಣ ವಾಹನೇನ ಸುರಾಲಯಮ್ ॥೩೯॥

ಯುಧಿಷ್ಠಿರನೇ, ಯಾವನು ಬ್ರಾಹ್ಮಣನಿಗೆ ವಾಹನವನ್ನು ನೀಡುತ್ತಾನೋ ಅವನು ರತ್ನದಿಂದ ಅಲಂಕೃತವಾದ ವಾಹನದಲ್ಲಿ ಸ್ವರ್ಗಲೋಕಕ್ಕೆ ಹೋಗುತ್ತಾನೆ.

ಸ ತತ್ರ ಕಾಮಂ ಕ್ರೀಡಿತ್ವಾ ಸೇವ್ಯಮಾನೋಽಪ್ಸರೋಗಣೈಃ ।
ಇಹ ರಾಜಾ ಭವೇದ್ ರಾಜನ್ ನಾತ್ರ ಕಾರ್ಯಾ ವಿಚಾರಣಾ ॥೪೦॥

ಸ್ವರ್ಗಲೋಕದಲ್ಲಿ ಯಥೇಷ್ಟವಾಗಿ ವಿಹರಿಸಿ, ಅಪ್ಸರಾಗಣದಿಂದ ಸೇವ್ಯಮಾನನಾಗಿ ಬಳಿಕ ಈ ಭೂಮಿಯಲ್ಲಿ ರಾಜನಾಗಿ ಹುಟ್ಟುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಪಾದಪಂ ಪಲ್ಲವಾಕೀರ್ಣಂ ಪುಷ್ಪಿತಂ ಸಫಲಂ ತಥಾ ।
ಗಂಧಮಾಲ್ಯಾರ್ಚಿತಂ ಕೃತ್ವಾ ವಸ್ತ್ರಭೂಷಣಭೂಷಿತಮ್ ॥೪೧॥

ಯಃ ಪ್ರಯಚ್ಛತಿ ವಿಪ್ರಾಯ ಶ್ರೋತ್ರಿಯಾಯ ಸದಕ್ಷಿಣಮ್ ।
ಭೋಜಯಿತ್ವಾ ಯಥಾಕಾಮಂ ತಸ್ಯ ಪುಣ್ಯಫಲಂ ಶೃಣು ॥೪೨॥

ಯಾವ ವ್ಯಕ್ತಿಯು ಚಿಗುರಿನಿಂದ ತುಂಬಿದ, ಹೂ, ಹಣ್ಣುಗಳಿಂದ ಸಮೃದ್ಧವಾದ ಒಂದು ಮರವನ್ನು ಗಂಧ-ಮಾಲೆಗಳಿಂದ ಅಲಂಕರಿಸಿ ವಸ್ತ್ರ-ಭೂಷಣವನ್ನು ಬ್ರಾಹ್ಮಣನಿಗೆ ನೀಡುತ್ತಾನೋ, ಬಳಿಕ ಭೋಜನ ಮಾಡಿಸಿ, ದಕ್ಷಿಣೆ ಕೊಟ್ಟು ಸತ್ಕರಿಸುತ್ತಾನೋ ಅವನಿಗೆ ದೊರೆಯುವ ಪುಣ್ಯದ ಫಲವೇನೆಂದು ಹೇಳುತ್ತೇನೆ, ಕೇಳು.

ಜಾಂಬೂನದವಿಚಿತ್ರೇಣ ವಿಮಾನೇನ ವಿರಾಜತಾ ।
ಪುರಂದರಪುರಂ ಯಾತಿ ಜಯಶಬ್ದರವೈರ್ಯುತಃ ॥೪೩॥

ಬಂಗಾರದಿಂದ ಅಲಂಕೃತವಾದ ವಿಮಾನದಲ್ಲಿ ಶೋಭಿಸುವವನಾಗಿ, ಜಯಘೋಷಗಳಿಂದ ಕೂಡಿದವನಾಗಿ ಇಂದ್ರಲೋಕಕ್ಕೆ ತೆರಳುತ್ತಾನೆ.

ತತ್ರ ಶಕ್ರಪುರೇ ರಮ್ಯೇ ತಸ್ಯ ಕಲ್ಪಕಪಾದಪಃ ।
ದದಾತಿ ಚೇಪ್ಸಿತಂ ಸರ್ವಂ ಮನಸಾ ಯದ್ಯದಿಚ್ಛತಿ ॥೪೪॥

ಆ ಇಂದ್ರನ ರಮಣೀಯವಾದ ಪಟ್ಟಣದಲ್ಲಿಯಾದರೂ ಕಲ್ಪವೃಕ್ಷದ ಬುಡದಲ್ಲಿ ಕುಳಿತು ತನ್ನ ಮನಸ್ಸಿಗೆ ಬರುವ ಇಷ್ಟಾರ್ಥಗಳನ್ನೆಲ್ಲ ಯಥೇಷ್ಟವಾಗಿ ಹೊಂದುತ್ತಾನೆ.

ಯಾವಂತಿ ತಸ್ಯ ಪತ್ರಾಣಿ ಪುಷ್ಪಾಣಿ ಚ ಫಲಾನಿ ಚ ।
ತಾವದ್ ವರ್ಷಸಹಸ್ರಾಣಿ ಶಕ್ರಲೋಕೇ ಮಹೀಯತೇ ॥೪೫॥

ದಾನ ಮಾಡಿದ ಮರದಲ್ಲಿ ಎಷ್ಟು ಎಲೆ, ಪತ್ರ, ಪುಷ್ಪ, ಫಲಗಳಿವೆಯೋ ಅಷ್ಟು ವರ್ಷಗಳ ಕಾಲ ಪುರಂದರನ ಲೋಕದಲ್ಲಿ ಪೂಜಿತನಾಗುತ್ತಾನೆ.

ಶಕ್ರಲೋಕಾವತೀರ್ಣಶ್ಚ ಮಾನುಷ್ಯಂ ಲೋಕಮಾಗತಃ ।
ರಥಾಶ್ವಗಜಸಂಪೂರ್ಣಂ ಪುರಂ ರಾಜ್ಯಂ ಚ ರಕ್ಷತಿ ॥೪೬॥

ಪುರಂದರನ ಮನೆಯಿಂದ ಭೂಮಿಗೆ ಆಗಮಿಸಿದ ಆ ಮನುಷ್ಯನು ರಥ, ಕುದುರೆ, ಆನೆಗಳಿಂದ ತುಂಬಿದ ಪಟ್ಟಣವನ್ನು, ರಾಜ್ಯವನ್ನು ರಕ್ಷಿಸುತ್ತಾನೆ.

ಸ್ಥಾಪಯಿತ್ವಾ ತು ಮದ್ಭಕ್ತ್ಯಾ ಯೋ ಮತ್ಪ್ರತಿಕೃತಿಂ ನರಃ ।
ಆಲಯಂ ವಿಧಿವತ್ ಕೃತ್ವಾ ಪೂಜಾಕರ್ಮಾಣಿ ಕಾರಯೇತ್ ॥೪೭॥

ಸ್ವಯಂ ವಾ ಪೂಜಯೇದ್ ಭಕ್ತ್ಯಾ ತಸ್ಯ ಪುಣ್ಯಫಲಂ ಶೃಣು ॥೪೮॥

ಯಾವ ವ್ಯಕ್ತಿಯು ಭಕ್ತಿಯಿಂದ ನನ್ನ ಪ್ರತಿಮೆಯನ್ನು ಮಾಡಿಸಿ, ವಿಧಿಬದ್ಧವಾಗಿ ಮಂದಿರವನ್ನು ಕಟ್ಟಿಸಿ, ಆ ಪ್ರತಿಮೆಯನ್ನು ಸ್ಥಾಪಿಸಿ, ಅಲ್ಲಿ ಪೂಜಾಕರ್ಮಗಳನ್ನು ಮಾಡಿಸುತ್ತಾನೋ, ಭಕ್ತಿಯಿಂದ ತಾನೇ ಪೂಜೆಯನ್ನು ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯವನ್ನು ಕೇಳು.

ಅಶ್ವಮೇಧಸಹಸ್ರಸ್ಯ ಯತ್ಫಲಂ ಸಮುದಾಹೃತಮ್ ।
ತತ್ಫಲಂ ಸಮನುಪ್ರಾಪ್ತೋ ಮತ್ಸಾಲೋಕ್ಯಂ ಪ್ರಪದ್ಯತೇ ॥೪೯॥

ನ ಜಾನೇ ನಿರ್ಗಮಂ ತಸ್ಯ ಮಮ ಲೋಕಾದ್ ಯುಧಿಷ್ಠಿರ ॥೫೦॥

ಅವನು ಸಾವಿರ ಅಶ್ವಮೇಧಯಾಗಕ್ಕೆ ಯಾವ ಫಲವನ್ನು ಹೇಳಿದ್ದಾರೋ ಅಂತಹ ಫಲವನ್ನು ಹೊಂದುತ್ತಾನೆ. ನನ್ನ ಸಾಲೋಕ್ಯವನ್ನೇ ಹೊಂದುತ್ತಾನೆ. ಯುಧಿಷ್ಠಿರನೇ, ಇಂತಹ ವ್ಯಕ್ತಿಯು ನನ್ನ ಮನೆಯಿಂದ ಮತ್ತೆ ಭೂಮಿಗೆ ತೆರಳುವುದಿಲ್ಲ.

ದೇವಾಲಯೇ ವಿಪ್ರಗೃಹೇ ಗೋವಾಟೇ ಚತ್ವರೇऽಪಿ ವಾ ।
ಪ್ರಜ್ವಾಲಯತಿ ಯೋ ದೀಪಂ ತಸ್ಯ ಪುಣ್ಯಫಲಂ ಶೃಣು ॥೫೧॥

ದೇವಾಲಯದಲ್ಲಾಗಲಿ, ಬ್ರಾಹ್ಮಣನ ಮನೆಯಲ್ಲಾಗಲಿ, ಗೋಶಾಲೆಯಲ್ಲಾಗಲಿ, ಯಜ್ಞಮಂಟಪದಲ್ಲಾಗಲಿ ಯಾರು ದೀಪವನ್ನು ಬೆಳಗಿಸುತ್ತಾರೋ ಅವರಿಗೆ ದೊರಕುವ ಪುಣ್ಯದ ಫಲವನ್ನು ಕೇಳು.

ಆರುಹ್ಯ ಕಾಂಚನಂ ಯಾನಂ ದ್ಯೋತಯನ್ ಸರ್ವತೋ ದಿಶಮ್ ।
ಗಚ್ಛೇದಾದಿತ್ಯಲೋಕಂ ಸ ಸೇವ್ಯಮಾನಃ ಸುರೋತ್ತಮೈಃ ॥೫೨॥

ದೀಪವನ್ನು ಇಂತಹ ಸ್ಥಳಗಳಲ್ಲಿ ಬೆಳಗಿಸಿದ ವ್ಯಕ್ತಿಯು ಬಂಗಾರದ ವಾಹನವನ್ನು ಏರಿಕೊಂಡು ಹತ್ತುದಿಕ್ಕುಗಳಲ್ಲೂ ಶೋಭಿಸುತ್ತಾ ಸೂರ್ಯನ ಲೋಕಕ್ಕೆ ದೇವತೆಗಳಿಂದ ಸೇವ್ಯಮಾನನಾಗಿ ತೆರಳುತ್ತಾನೆ.

ತತ್ರ ಪ್ರಕಾಮಂ ಕ್ರೀಡಿತ್ವಾ ವರ್ಷಕೋಟಿಂ ಮಹಾಯಶಾಃ ।
ಇಹ ಲೋಕೇ ಭವೇದ್ ವಿಪ್ರೋ ವೇದವೇದಾಂಗಪಾರಗಃ ॥೫೩॥

ಯಥೇಷ್ಟವಾಗಿ ಪೂಜಿಸಿ ಕೋಟಿವರ್ಷಗಳ ಬಳಿಕ ಈ ಭೂಮಿಯಲ್ಲಿ ವೇದ ಪಾರಂಗತನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ದೇವಾಲಯೇಷು ವಾ ರಾಜನ್ ಬ್ರಾಹ್ಮಣಾವಸಥೇಷು ವಾ ।
ಚತ್ವರೇ ವಾ ಚತುಷ್ಕೇ ವಾ ರಾತ್ರೌ ವಾ ಯದಿ ವಾ ದಿವಾ ॥೫೪॥

ನಾನಾಗಂಧರ್ವವಾದ್ಯಾನಿ ಧರ್ಮಶ್ರಾವಣಿಕಾನಿ ಚ ।
ಯಸ್ತು ಕಾರಯತೇ ಭಕ್ತ್ಯಾ ಮದ್ಗತೇನಾಂತರಾತ್ಮನಾ ॥೫೫॥

ತಸ್ಯ ದೇವಾ ನರಶ್ರೇಷ್ಠ ಪಿತರಶ್ಚಾಪಿ ಹರ್ಷಿತಾಃ ।
ಸುಪ್ರೀತಾಃ ಸಂಪ್ರಯಚ್ಛಂತಿ ವಿಮಾನಂ ಕಾಮಗಂ ಶುಭಮ್ ॥೫೬॥

ಯಾವನು ನನ್ನ ಭಕ್ತನಾಗಿ ನನ್ನಲ್ಲೇ ಮನಸ್ಸನ್ನು ಇಟ್ಟವನಾಗಿ ದೇವಾಲಯದಲ್ಲಾಗಲಿ, ಬ್ರಾಹ್ಮಣರ ಮನೆಯಲ್ಲಾಗಲಿ, ಅಂಗಳದಲ್ಲಾಗಲಿ, ನಾಲ್ಕು ದಾರಿಗಳು ಸೇರುವ ಜಾಗದಲ್ಲಾಗಲಿ, ಹಗಲಿನಲ್ಲಾಗಲಿ, ರಾತ್ರಿಯಲ್ಲಾಗಲಿ ಅನೇಕ ವಿಧವಾದ ಗಂಧರ್ವವಾದ್ಯಗಳನ್ನು ಮೊಳಗಿಸುತ್ತಾನೋ, ಧರ್ಮಪ್ರವಚನಗಳನ್ನು ಭಕ್ತಿಯಿಂದ ಮಾಡಿಸುತ್ತಾನೋ ಅವನ ವಿಷಯದಲ್ಲಿ ದೇವತೆಗಳು, ಪಿತೃಗಳು ಸಂತುಷ್ಟರಾಗಿ ಯಥೇಷ್ಟವಾಗಿ ಸಂಚರಿಸುವ ವಿಮಾನವನ್ನು ಆತನಿಗೆ ದಾನ ಮಾಡುತ್ತಾರೆ.

ಸ ಚ ತೇನ ವಿಮಾನೇನ ಯಾತಿ ದೇವಪುರಂ ನರಃ ।
ತತ್ರ ದಿವ್ಯಾಪ್ಸರೋಭಿಸ್ತು ಸೇವ್ಯಮಾನಃ ಪ್ರಮೋದತೇ ॥೫೭॥

ಬಳಿಕ ಆ ವಿಮಾನದಲ್ಲಿ ಏರಿದ ಆತನು ದೇವತೆಗಳ ಪಟ್ಟಣಕ್ಕೆ ಸಾಗುತ್ತಾನೆ. ಅಲ್ಲಿಯಾದರೂ ದಿವ್ಯ ಅಪ್ಸರಾಸ್ತ್ರೀಯರಿಂದ ಸೇವ್ಯಮಾನನಾಗಿ ಸಂತೋಷ ಹೊಂದುತ್ತಾನೆ.

ದೇವಲೋಕಾವತೀರ್ಣಸ್ತು ಸ ಲೋಕೇಽಸ್ಮಿನ್ ನರಾಧಿಪ ।
ವೇದವೇದಾಂಗತತ್ತ್ವಜ್ಞೋ ಭೋಗವಾನ್ ಬ್ರಾಹ್ಮಣೋ ಭವೇತ್ ॥೫೮॥

ರಾಜನೇ, ದೇವಲೋಕದಿಂದ ಭೂಮಿಗೆ ಬಂದ ಆತನು ವೇದವೇದಾಂಗ ತತ್ತ್ವಜ್ಞನಾಗಿ ಸುಖ ಹೊಂದಿರುವ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಚತ್ವರೇ ವಾ ಸಭಾಯಾಂ ವಾ ವಿಸ್ತೀರ್ಣೇ ವಾ ಸಭಾಂಗಣೇ ।
ಕೃತ್ವಾऽಗ್ನಿಕುಂಡಲಂ ವಿಪುಲಂ ಸ್ಥಂಡಿಲಂ ವಾ ಯುಧಿಷ್ಠಿರ ॥೫೯॥

ತತ್ರಾಗ್ನಿಂ ಚತುರೋ ಮಾಸಾನ್ ಜ್ವಾಲಯೇದ್ ಯಸ್ತು ಭಕ್ತಿಮಾನ್ ।
ಸಮಾಪ್ತೇಷು ತು ಮಾಸೇಷು ಪೌಷ್ಯಾದಿಷು ತತೋ ದ್ವಿಜಾನ್ ॥೬೦॥

ಭೋಜಯೇತ್ ಪಾಯಸಂ ಮೃಷ್ಟಂ ಮದ್ಗತೇನಾಂತರಾತ್ಮನಾ ।
ದಕ್ಷಿಣಾಂ ಚ ಯಥಾಶಕ್ತಿ ಬ್ರಾಹ್ಮಣೇಭ್ಯೋ ನಿವೇದಯೇತ್ ॥೬೧॥

ಏವಮಗ್ನಿಂ ತು ಯಃ ಕುರ್ಯಾನ್ನಿತ್ಯಮೇವಾರ್ಚಯಂಸ್ತು ಮಾಮ್ ।
ತಸ್ಯ ಪುಣ್ಯಫಲಂ ಯದ್ವೈ ತನ್ನಿಬೋಧ ಯುಧಿಷ್ಠಿರ ॥೬೨॥

ನಾಲ್ಕು ದಾರಿಗಳು ಸೇರುವ ಜಾಗದಲ್ಲಿಯಾಗಲಿ, ಸಭಾಮಂದಿರದಲ್ಲಾಗಲಿ, ವಿಸ್ತಾರವಾದ ಸಭಾಂಗಣದಲ್ಲಾಗಲಿ ಯಾವನು ಸ್ಥಂಡಿಲವನ್ನು ವಿಶಾಲವಾಗಿ ಬರೆದು ಅಗ್ನಿಕುಂಡವನ್ನು ಸ್ಥಾಪಿಸಿ, ಯಜ್ಞಕರ್ಮಗಳನ್ನು ಮಾಡುತ್ತಾನೋ, ನಾಲ್ಕು ಮಾಸಗಳ ಕಾಲ ಭಕ್ತಿಯಿಂದ ಯಜ್ಞಗಳನ್ನು ಆರಾಧಿಸುತ್ತಾನೋ, ಯಜ್ಞಗಳು ಮುಗಿದ ಬಳಿಕ ಪುಷ್ಯವೇ ಮೊದಲಾದ ಮಾಸಗಳಲ್ಲಿ ಬ್ರಾಹ್ಮಣರನ್ನು ಮೃಷ್ಟಾನ್ನ, ಪಾಯಸಗಳಿಂದ ನನ್ನಲ್ಲೇ ನೆಲೆಗೊಂಡ ಮನಸ್ಸುಳ್ಳವನಾಗಿ ಯಥಾಶಕ್ತಿ ದಕ್ಷಿಣಾದಿಗಳನ್ನು ಕೊಟ್ಟು ಊಟ ಮಾಡಿಸುತ್ತಾನೋ, ಬ್ರಾಹ್ಮಣರನ್ನು ಸತ್ಕರಿಸುತ್ತಾನೋ ಈ ಕ್ರಮದಲ್ಲಿ ಅಗ್ನಿಕಾರ್ಯವನ್ನು ಮಾಡಿ ಬ್ರಾಹ್ಮಣಾರಾಧನೆಯನ್ನು ಮಾಡಿದ ಆತನಿಗೆ ಫಲವೇನೆಂಬುದನ್ನು ತಿಳಿದುಕೊ.

ತೇನಾಹಂ ಶಂಕರಶ್ಚೈವ ಪಿತರೋ ಹ್ಯಗ್ನಯಸ್ತಥಾ ।
ಯಾಸ್ಯಾಮಃ ಪರಮಾಂ ಪ್ರೀತಿಂ ನಾತ್ರ ಕಾರ್ಯಾ ವಿಚಾರಣಾ ॥೬೩॥

ಅವನ ಈ ಸತ್ಕರ್ಮದಿಂದ ನಾನು, ಮಹರುದ್ರ, ಪಿತೃಗಳು, ಅಗ್ನಿಗಳು ಅತ್ಯಂತ ಸಂತೋಷವನ್ನು ಹೊಂದುತ್ತೇವೆ. ಇದರಲ್ಲಿ ವಿಚಾರ ಮಾಡಬೇಕಾದುದಿಲ್ಲ.

ಷಷ್ಟಿಂ ವರ್ಷಸಹಸ್ರಾಣಿ ಷಷ್ಟಿಂ ವರ್ಷಶತಾನಿ ಚ ।
ಸೋऽಸ್ಮತ್ಪ್ರೀತಿಕರಃ ಶ್ರೀಮಾನ್ ಯಮಲೋಕೇ ಮಹೀಯತೇ ॥೬೪॥

ಅವನು ಅರವತ್ತು ಸಾವಿರದ ಅರವತ್ತನೂರು ವರ್ಷಗಳ ಕಾಲ ನಮ್ಮನ್ನು ಸಂತೋಷ ಪಡಿಸಿದ ಪುಣ್ಯದಿಂದಾಗಿ ಯಮಲೋಕದಲ್ಲಿ ಪೂಜಿತನಾಗುತ್ತಾನೆ.

ಯಮಲೋಕಾವತೀರ್ಣಶ್ಚ ಸೋಽಸ್ಮಿನ್ ಲೋಕೇ ಮಹಾಯಶಾಃ ।
ವೇದವೇದಾಂಗವಿದ್ ವಿಪ್ರೋ ಜಾಯತೇ ರಾಜಪೂಜಿತಃ ॥೬೫॥

ಯಮಲೋಕದಿಂದ ಭೂಮಿಗೆ ಬಂದ ಮಹಾಕೀರ್ತಿಸಂಪನ್ನನಾದ ಆತನು ವೇದ-ವೇದಾಂಗವನ್ನು ತಿಳಿದ ಬ್ರಾಹ್ಮಣನಾಗಿ ಹುಟ್ಟುತ್ತಾನೆ. ರಾಜನಿಂದ ಸಮ್ಮಾನಿತನಾಗುತ್ತಾನೆ.

ಯಃ ಕರೋತಿ ನರಶ್ರೇಷ್ಠ ಭರಣಂ ಬ್ರಾಹ್ಮಣಸ್ಯ ತು ।
ಶ್ರೋತ್ರಿಯಸ್ಯಾಭಿಜಾತಸ್ಯ ದರಿದ್ರಸ್ಯ ವಿಶೇಷತಃ ॥೬೬॥

ತಸ್ಯ ಪುಣ್ಯಫಲಂ ಯದ್ವೈ ತನ್ನಿಬೋಧ ಯುಧಿಷ್ಠಿರ ॥೬೭॥

ಯುಧಿಷ್ಠಿರನೇ, ಯಾವ ವ್ಯಕ್ತಿಯು ಶ್ರೋತ್ರಿಯನಾಗಿ ಹುಟ್ಟಿದ, ದರಿದ್ರನಾದ ಬ್ರಾಹ್ಮಣನ ಜೀವನ ರಕ್ಷಣೆಯನ್ನು ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯವೇನೆಂಬುದನ್ನು ಹೇಳುತ್ತೇನೆ, ತಿಳಿದುಕೊ.

ಗವಾಂ ಕೋಟಿಪ್ರದಾನೇನ ಯತ್ಪುಣ್ಯಂ ಸಮುದಾಹೃತಮ್ ।
ತತ್ಪುಣ್ಯಫಲಮಾಪ್ನೋತಿ ವರ್ಷೇಣೈಕೇನ ಪಾಂಡವ ॥೬೮॥

ಕೋಟಿ ಹಸುಗಳನ್ನು ದಾನ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೆ ಎಂದು ಹೇಳಿದ್ದಾರೋ ಅಷ್ಟು ಪುಣ್ಯಗಳನ್ನು ಒಂದು ವರ್ಷದಲ್ಲಿಯೇ ಹೊಂದುತ್ತಾನೆ.

ಕಾಂಚನೇನ ವಿಚಿತ್ರೇಣ ಯಾನೇನಾಂಬರಶಾಲಿನಾ ।
ಸ ಯಾತಿ ಯಾಮಕಂ ಲೋಕಂ ದಿವ್ಯಸ್ತ್ರೀಗಣಸೇವಿತಮ್ ॥೬೯॥

ಬಂಗಾರದಿಂದ ತಯಾರಿಸಿದ ವಿಚಿತ್ರವಾದ, ಆಕಾಶಗಾಮಿಯಾದ ವಾಹನವನ್ನು ಏರಿಕೊಂಡು ದಿವ್ಯ ಸ್ತ್ರೀಗಣದಿಂದ ಸೇವಿತನಾಗಿ ಆ ವ್ಯಕ್ತಿಯು ಯಮಲೋಕಕ್ಕೆ ತೆರಳುತ್ತಾನೆ.

ಗೀಯಮಾನೋ ವರಸ್ತ್ರೀಭಿರ್ವರ್ಷಾಣಾಂ ಕೋಟಿವಿಂಶತಿಮ್ ॥೭೦॥

ಕ್ರೀಡಿತ್ವಾ ಮಾಮಕೇ ಲೋಕೇ ತತ್ರ ದೇವೈರಭಿಷ್ಟುತಃ ।
ಮಾನುಷ್ಯಮವತೀರ್ಣಸ್ತು ವೇದವಿದ್ ಬ್ರಾಹ್ಮಣೋ ಭವೇತ್ ॥೭೧॥

ಉತ್ತಮರಾದ ಸ್ತ್ರೀಯರಿಂದ ಇಪ್ಪತ್ತು ಕೋಟಿ ವರ್ಷಗಳ ಕಾಲ ಸ್ತುತಿಸಲ್ಪಡುವವನಾಗಿ, ಸಮಸ್ತ ದೇವತೆಗಳಿಂದ ಸ್ತೋತ್ರಪಾತ್ರನಾಗಿ, ನನ್ನ ಲೋಕದಲ್ಲಿ ಯಥೇಷ್ಟವಾಗಿ ಸಂಚರಿಸಿ ಭೂಮಿಯಲ್ಲಿ ವೇದಜ್ಞನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಕರಕಂ ಕುಂಡಿಕಾಂ ವಾऽಪಿ ಮಹದ್ವಾ ಜಲಭಾಜನಮ್ ।
ಯಃ ಪ್ರಯಚ್ಛತಿ ವಿಪ್ರಾಯ ತಸ್ಯ ಪುಣ್ಯಫಲಂ ಶೃಣು ॥೭೨॥

ಯುಧಿಷ್ಠಿರನೇ, ಕಮಂಡಲುವನ್ನಾಗಲಿ, ಗಿಂಡಿಯನ್ನಾಗಲಿ, ದೊಡ್ಡ ಜಲಪಾತ್ರೆಯನ್ನಾಗಲಿ ಬ್ರಾಹ್ಮಣನಿಗೆ ದಾನ ಮಾಡುವ ವ್ಯಕ್ತಿಗೆ ಲಭಿಸುವ ಪುಣ್ಯದ ಫಲವನ್ನು ಕೇಳು.

ಬ್ರಹ್ಮಕೂರ್ಚೇನ ಯತ್ಪೀತೇ ಫಲಂ ಪ್ರೋಕ್ತಂ ಯುಧಿಷ್ಠಿರ ।
ತತ್ಪುಣ್ಯಫಲಮಾಪ್ನೋತಿ ಜಲಭಾಜನದಾನತಃ ॥೭೩॥

ದರ್ಭೆಯನ್ನು ತಾಗಿಸಿದ ಪಂಚಗವ್ಯವನ್ನು ಪ್ರಾಶನ ಮಾಡಿದಾಗ ಯಾವ ಫಲವು ಲಭಿಸುತ್ತದೋ ಆ ಪುಣ್ಯವನ್ನು ಜಲಪಾತ್ರೆಯನ್ನು ದಾನ ಮಾಡಿದ ವ್ಯಕ್ತಿಯು ಹೊಂದುತ್ತಾನೆ.

ಸುತೃಪ್ತಃ ಸುಪ್ರಭಃ ಸೌಮ್ಯಃ ಪ್ರಹೃಷ್ಟೇಂದ್ರಿಯಮಾನಸಃ ।
ಹಂಸಸಾರಸಯುಕ್ತೇನ ವಿಮಾನೇನ ವಿರಾಜತಾ ॥೭೪॥

ಸ ಯಾತಿ ವಾರುಣಂ ಲೋಕಂ ದಿವ್ಯಗಂಧರ್ವಸೇವಿತಃ ॥೭೫॥

ಜಲಪಾತ್ರೆಯನ್ನು ದಾನ ಮಾಡಿದ ವ್ಯಕ್ತಿಯು ತೃಪ್ತನಾಗಿ, ಕಾಂತಿಸಂಪನ್ನನಾಗಿ, ಸೌಮ್ಯನಾಗಿ, ಸಮಸ್ತ ಇಂದ್ರಿಯಗಳಲ್ಲಿಯೂ ಸಂತೋಷ ಹೊಂದಿದವನಾಗಿ, ಹಂಸ-ಸಾರಸಪಕ್ಷಿಗಳಿಂದ ಕೂಡಿದ ವಿಮಾನದಲ್ಲಿ ಶೋಭಿಸುವವನಾಗಿ, ದಿವ್ಯಗಂಧರ್ವರಿಂದ ಸೇವಿತನಾಗಿ ವರುಣಲೋಕವನ್ನು ಕುರಿತು ಸಾಗುತ್ತಾನೆ.

ಪಾನೀಯಂ ಯಃ ಪ್ರಯಚ್ಛೇದ್ ವೈ ಜೀವಾನಾಂ ಜೀವನಂ ಪರಮ್ ।
ಗ್ರೀಷ್ಮಕೇಷು ತು ಮಾಸೇಷು ತಸ್ಯ ಪುಣ್ಯಫಲಂ ಶೃಣು ॥೭೬॥

ಯಾವಾತನು ಗ್ರೀಷ್ಮ ಋತುವಿಗೆ ಸಂಬಂಧಿಸಿದ ಮಾಸಗಳಲ್ಲಿ ಸಮಸ್ತ

ಪ್ರಾಣಿಗಳಿಗೂ ಜೀವನಪ್ರದವಾದ ಪಾನೀಯವನ್ನು ದಾನ ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯಫಲವನ್ನು ಕೇಳು.

ಕಪಿಲಾಕೋಟಿದಾನಸ್ಯ ಯತ್ ಪುಣ್ಯಂ ತು ವಿಧೀಯತೇ ।
ತತ್ಪುಣ್ಯಫಲಮಾಪ್ನೋತಿ ಪಾನೀಯಂ ಯಃ ಪ್ರಯಚ್ಛತಿ ॥೭೭॥

ಕೋಟಿಸಂಖ್ಯೆಯಲ್ಲಿ ಕಪಿಲಧೇನುಗಳನ್ನು ದಾನ ಮಾಡಿದಾಗ ಯಾವ ಪುಣ್ಯವನ್ನು ವಿಧಿಸಿದ್ದಾರೋ ಆ ಪುಣ್ಯವನ್ನು ಜಲದಾನದಿಂದ ಹೊಂದುತ್ತಾನೆ.

ಪೂರ್ಣಚಂದ್ರಪ್ರಕಾಶೇನ ವಿಮಾನೇನ ವಿರಾಜತಾ ।
ಸ ಗಚ್ಛೇಚ್ಚಂದ್ರಸದನಂ ಸೇವ್ಯಮಾನೋಽಪ್ಸರೋಗಣೈಃ ॥೭೮॥

ಹುಣ್ಣಿಮೆಯ ಚಂದ್ರನಂತೆ ಬೆಳಗುವ ವಿಮಾನದಲ್ಲಿ ಶೋಭಿಸುವವನಾಗಿ, ಅಪ್ಸರೋಗಣಗಳಿಂದ ಸೇವ್ಯಮಾನನಾಗಿ ಚಂದ್ರನ ಲೋಕವನ್ನು ಕುರಿತು ಸಾಗುತ್ತಾನೆ.

ತ್ರಿಂಶತ್ಕೋಟಿಯುಗಂ ತತ್ರ ದಿವ್ಯಗಂಧರ್ವಸೇವಿತಃ ।
ಕ್ರೀಡಿತ್ವಾ ಮಾನುಷೇ ಲೋಕೇ ಚತುರ್ವೇದೀ ದ್ವಿಜೋ ಭವೇತ್ ॥೭೯॥

ಆ ಚಂದ್ರಲೋಕದಲ್ಲಿಯಾದರೂ ಮೂವತ್ತು ಕೋಟಿ ಯುಗಗಳ ಕಾಲ ದಿವ್ಯಗಂಧರ್ವರಿಂದ ಸೇವಿತನಾಗಿ, ಸುಖವಾಗಿ ವಿಹರಿಸಿ ಬಳಿಕ ಮನುಷ್ಯಲೋಕದಲ್ಲಿ ಚತುರ್ವೇದಗಳನ್ನರಿತ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಶಿರೋಭ್ಯಂಗಪ್ರದಾನೇನ ತೇಜಸ್ವೀ ಪ್ರಿಯದರ್ಶನಃ ।
ಸುಭಗೋ ರೂಪವಾನ್ ಶೂರಃ ಪಂಡಿತಶ್ಚ ದ್ವಿಜೋ ಭವೇತ್ ॥೮೦॥

ಯಾವನು ಬ್ರಾಹ್ಮಣನಿಗೆ ತಲೆಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾನೋ ಅವನು ತೇಜಸ್ವಿಯಾಗಿ, ಸ್ಫುರದ್ರೂಪಿಯಾಗಿ, ಐಶ್ವರ್ಯಸಂಪನ್ನನಾಗಿ, ನೋಡುವವರಿಗೆ ಸಂತೋಷವನ್ನುಂಟು ಮಾಡುವವನಾಗಿ, ಶೂರನಾಗಿ, ಪಂಡಿತನಾಗಿ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ವಸ್ತ್ರದಾಯೀ ತು ತೇಜಸ್ವೀ ಸರ್ವತ್ರ ಪ್ರಿಯದರ್ಶನಃ ।
ಸುಭಗೋ ಭವತಿ ಶ್ರೀಮಾನ್ ಸ್ತ್ರೀಣಾಂ ನಿತ್ಯಂ ಮನೋರಮಃ ॥೮೧॥

ಯಾವನು ಬ್ರಾಹ್ಮಣನಿಗೆ ವಸ್ತ್ರವನ್ನು ದಾನ ಮಾಡುತ್ತಾನೋ ಅವನು ಎಲ್ಲರಿಗೂ ಪ್ರೀತಿಪಾತ್ರನಾಗಿ, ತೇಜಸ್ವಿಯಾಗಿ, ಭಾಗ್ಯವಂತನಾಗಿ, ಶ್ರೀಮಂತನಾಗಿ, ಸ್ತ್ರೀಯರ ಪ್ರೀತಿಗೆ ಪಾತ್ರನಾಗುತ್ತಾನೆ.

ಉಪಾನಹೌ ಚ ಚ್ಛತ್ರಂ ಚ ಯೋ ದದಾತಿ ನರೋತ್ತಮಃ ॥೮೨॥

ಸ ಯಾತಿ ರಥಮುಖ್ಯೇನ ಕಾಂಚನೇನ ವಿರಾಜತಾ ।
ಶಕ್ರಲೋಕಂ ಮಹಾತೇಜಾಃ ಸೇವ್ಯಮಾನೋಽಪ್ಸರೋಗಣೈಃ ॥೮೩॥

ಯಾವ ವ್ಯಕ್ತಿಯು ಪಾದುಕೆಗಳನ್ನು, ಛತ್ರಗಳನ್ನು ದಾನ ಮಾಡುತ್ತಾನೋ ಅವನು ಬಂಗಾರದ ರಥವನ್ನು ಏರಿಕೊಂಡು ತೇಜಃಪುಂಜನಾಗಿ, ಅಪ್ಸರಾಗಣಗಳಿಂದ ಸೇವ್ಯಮಾನನಾಗಿ ಪುರಂದರನ ಲೋಕಕ್ಕೆ ಸಾಗುತ್ತಾನೆ.

ಕಾಷ್ಠಪಾದುಕದಾ ಯಾಂತಿ ವಿಮಾನೈರ್ವೃಕ್ಷನಿರ್ಮಿತೈಃ ।
ಧರ್ಮರಾಜಪುರಂ ರಮ್ಯಂ ಸೇವ್ಯಮಾನಾಃ ಸುರೋತ್ತಮೈಃ ॥೮೪॥

ಕಟ್ಟಿಗೆ ಪಾದುಕೆಗಳನ್ನು ದಾನ ಮಾಡಿದ ವ್ಯಕ್ತಿಯು ಮರಗಳಿಂದಲೇ ನಿರ್ಮಿತವಾದ ವಿಮಾನವನ್ನು ಏರಿಕೊಂಡು, ಧರ್ಮರಾಜನ ಪಟ್ಟಣಕ್ಕೆ ದೇವತೆಗಳಿಂದ ಸೇವ್ಯಮಾನನಾಗಿ ತೆರಳುತ್ತಾನೆ.

ದಂತಕಾಷ್ಠಪ್ರದಾನೇನ ಪ್ರಿಯವಾಕ್ಯೋ ಭವೇನ್ನರಃ ।
ಸುಗಂಧವದನಃ ಶ್ರೀಮಾನ್ ಮೇಧಾಸೌಭಾಗ್ಯಸಂಯುತಃ ॥೮೫॥

ಯಾವನು ಬ್ರಾಹ್ಮಣನಿಗೆ ದಂತಕಾಷ್ಠಗಳನ್ನು ದಾನ ಮಾಡುತ್ತಾನೋ ಅವನು ಪ್ರಿಯವಾದ ಮಾತುಗಳನ್ನು ಆಡುವ ಸಾಮರ್ಥ್ಯವನ್ನು ಹೊಂದುತ್ತಾನೆ. ಪರಿಮಳ ಭರಿತವಾದ ಬಾಯಿಯುಳ್ಳವನಾಗಿ, ಕಾಂತಿಯುಕ್ತನಾಗಿ, ಜ್ಞಾನಿಯಾಗಿ, ಸೌಭಾಗ್ಯವಂತನಾಗಿಯೂ ಇರುತ್ತಾನೆ.

ಕ್ಷೀರಂ ದಧಿ ಘೃತಂ ವಾಽಪಿ ಗುಡಂ ಮಧುರಸಂ ತಥಾ ।
ಯೇ ಪ್ರಯಚ್ಛಂತಿ ವಿಪ್ರೇಭ್ಯಃ ಪರಾಂ ಭಕ್ತಿಂ ಗತಾ ನರಾಃ ॥೮೬॥

ತೇ ವೃಷೈರಶ್ವಯಾನೈಶ್ಚ ಶ್ವೇತಸ್ರಗ್ದಾಮಭೂಷಿತಾಃ ।
ಉಪಗೀಯಮಾನಾ ಗಂಧರ್ವೈರ್ಯಾಂತೀಶ್ವರಪುರಂ ನರಾಃ ॥೮೭॥

ಯಾರು ಹಾಲನ್ನು, ಮೊಸರನ್ನು, ತುಪ್ಪವನ್ನು, ಬೆಲ್ಲವನ್ನು, ಜೇನುತುಪ್ಪವನ್ನು ಬ್ರಾಹ್ಮಣರಿಗೆ ದಾನ ಮಾಡುತ್ತಾರೋ ಭಕ್ತಿಯಿಂದ ದಾನ ಮಾಡಿದ ಅವರು ಎತ್ತುಗಳ, ಕುದುರೆಗಳ ವಾಹನಗಳನ್ನು ಏರಿಕೊಂಡು, ಬಿಳಿಯಾದ ಮಾಲೆಗಳಿಂದ ಅಲಂಕೃತರಾಗಿ, ಗಂಧರ್ವರಿಂದ ಸ್ತೋತ್ರಪಾತ್ರರಾಗಿ ಮಹರುದ್ರನ ಪಟ್ಟಣಕ್ಕೆ ಸಾಗುತ್ತಾರೆ.

ತತ್ರ ದಿವ್ಯಾಪ್ಸರೋಭಿಸ್ತು ಸೇವ್ಯಮಾನಾ ಯಥಾಸುಖಮ್ ।
ಷಷ್ಟಿವರ್ಷಸಹಸ್ರಾಣಿ ಮೋದಂತೇ ದೇವಸನ್ನಿಭಾಃ ॥೮೮॥

ಆ ಮಹರುದ್ರದೇವರ ಲೋಕದಲ್ಲಿಯಾದರೂ ದಿವ್ಯ ಅಪ್ಸರಾಸ್ತ್ರೀಯರಿಂದ ಸುಖವಾಗಿ ಸೇವ್ಯಮಾನರಾಗಿ ದೇವತೆಗಳಂತೆ ಅರವತ್ತು ಸಾವಿರ ವರ್ಷಗಳ ಕಾಲ ಸುಖವನ್ನು ಅನುಭವಿಸುತ್ತಾರೆ.

ತತಃ ಕಾಲಾವತೀರ್ಣಾಶ್ಚ ಜಾಯಂತೇ ತ್ವಿಹ ಮಾನವಾಃ ।
ಪ್ರಭೂತಧನಧಾನ್ಯಾಶ್ಚ ಭೋಗವಂತೋ ನರೋತ್ತಮಾಃ ॥೮೯॥

ಬಳಿಕ ಕಾಲಾನುಸಾರವಾಗಿ ಈ ಭೂಮಿಯಲ್ಲಿ ಮಾನವರಾಗಿ ಹುಟ್ಟುತ್ತಾರೆ. ಧನ-ಧಾನ್ಯಗಳ ಸಮೃದ್ಧಿಯನ್ನು, ಸಮಸ್ತ ಭೋಗಗಳನ್ನು ಹೊಂದಿದವರಾಗುತ್ತಾರೆ.

ವೈಶಾಖೇ ಮಾಸಿ ವೈಶಾಖೇ ದಿವಸೇ ಪಾಂಡುನಂದನ ।
ವೈವಸ್ವತಂ ಸಮುದ್ದಿಶ್ಯ ಪರಾಂ ಭಕ್ತಿಮುಪಾಗತಾಃ ॥೯೦॥

ಅಭ್ಯರ್ಚ್ಯ ವಿಧಿವದ್ ವಿಪ್ರಾನ್ ತಿಲಾನ್ ಗುಡಸಮಾಯುತಾನ್ ।
ಯೇ ಪ್ರಯಚ್ಛಂತಿ ವಿಪ್ರೇಭ್ಯಸ್ತೇಷಾಂ ಪುಣ್ಯಫಲಂ ಶೃಣು ॥೯೧॥

ಪಾಂಡುಕುವರನೇ, ವಿಶಾಖಾನಕ್ಷತ್ರಕ್ಕೆ ಸಂಬಂಧಿಸಿದ ದಿವಸದಲ್ಲಿ ವೈಶಾಖಮಾಸದಲ್ಲಿ ಯಾರು ವೈವಸ್ವತ ಮನುವನ್ನು ಉದ್ದೇಶಿಸಿಕೊಂಡು ಭಕ್ತಿಯನ್ನು ಹೊಂದಿದವರಾಗಿ ಬ್ರಾಹ್ಮಣರನ್ನು ವಿಧಿಬದ್ಧವಾಗಿ ಎಳ್ಳು-ಬೆಲ್ಲಗಳನ್ನು ದಾನ ಮಾಡುವ ಮೂಲಕ ಆರಾಧಿಸುತ್ತಾರೋ ಅವರಿಗೆ ದೊರಕುವ ಫಲವೇನೆಂಬುದನ್ನು ಕೇಳು.

ಗೋಪ್ರದಾನೇನ ಯತ್ಪುಣ್ಯಂ ವಿಧಿವತ್ ಪಾಂಡುನಂದನ ।
ತತ್ಪುಣ್ಯಂ ಸಮನುಪ್ರಾಪ್ತೋ ಯಮಲೋಕೇ ಮಹೀಯತೇ ॥೯೨॥

ಪಾಂಡವನೇ, ಇದರಿಂದ ವಿಧಿಬದ್ಧವಾಗಿ ಗೋದಾನ ಮಾಡಿದಾಗ ಯಾವ ಪುಣ್ಯವನ್ನು ಹೊಂದುತ್ತಾನೋ ಆ ಪುಣ್ಯವನ್ನು ಹೊಂದಿದವನಾಗಿ ಯಮಲೋಕದಲ್ಲಿ ಪೂಜಿತನಾಗುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದಿಹ ರಾಜಾ ಭವಿಷ್ಯತಿ ॥೯೩॥

ಬಳಿಕ ಕಾಲಾಂತರದಲ್ಲಿ ಭೂಮಿಗೆ ಆಗಮಿಸಿದ ಆತನು ರಾಜನಾಗುತ್ತಾನೆ.

ತಸ್ಮಿನ್ನೇವ ದಿನೇ ವಿಪ್ರಾನ್ ಭೋಜಯಿತ್ವಾ ಸದಕ್ಷಿಣಮ್ ।
ತೋಯಪೂರ್ಣಾನಿ ದಿವ್ಯಾನಿ ಭಾಜನಾನಿ ದಿಶಂತಿ ಯೇ ॥೯೪॥

ತೇ ಯಾಂತ್ಯಾದಿತ್ಯವರ್ಣಾಭೈರ್ವಿಮಾನೈರ್ವರುಣಾಲಯಮ್ ।
ತತ್ರ ದಿವ್ಯಾಂಗನಾಭಿಸ್ತು ರಮಂತೇ ಕಾಮಗಾಮಿನಃ ॥೯೫॥

ವಿಶಾಖಾ ನಕ್ಷತ್ರಕ್ಕೆ ಸಂಬಂಧಿಸಿದ ದಿವಸದಲ್ಲಿ ಯಾರು ದಕ್ಷಿಣೆಯನ್ನು ಕೊಟ್ಟು ಬ್ರಾಹ್ಮಣರನ್ನು ಊಟ ಮಾಡಿಸುತ್ತಾರೋ, ನೀರು ತುಂಬಿದ ಶ್ರೇಷ್ಠವಾದ ಪಾತ್ರೆಗಳನ್ನು ದಾನ ಮಾಡುತ್ತಾರೋ ಅವರು ಸೂರ್ಯನಿಗೆ ಸದೃಶವಾದ ಕಾಂತಿಯುಳ್ಳ ವಿಮಾನದಿಂದ ಕೂಡಿಕೊಂಡು ವರುಣನ ಮನೆಗೆ ಹೋಗುತ್ತಾರೆ. ಅಲ್ಲಿ ಯಥೇಷ್ಟವಾಗಿ ವಿಹರಿಸುತ್ತಾ ದಿವ್ಯಾಂಗನೆಯರಿಂದ ಸೇವ್ಯಮಾನರಾಗಿರುತ್ತಾರೆ.

ತತೋಽವತೀರ್ಣಾಃ ಕಾಲೇನ ತೇ ಚಾಸ್ಮಿನ್ ಮಾನುಷೇ ಪುನಃ ।
ಭೋಗವಂತೋ ದ್ವಿಜಶ್ರೇಷ್ಠಾ ಭವಿಷ್ಯಂತಿ ನ ಸಂಶಯಃ ॥೯೬॥

ಕಾಲಾನುಸಾರವಾಗಿ ಅಲ್ಲಿಂದ ಈ ಮನುಷ್ಯಲೋಕಕ್ಕೆ ಆಗಮಿಸಿದ ಅವರು ಶ್ರೇಷ್ಠ ಬ್ರಾಹ್ಮಣರಾಗಿ ಭೋಗವುಳ್ಳವರಾಗಿಯೂ ಇರುತ್ತಾರೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಅನಂತರಾಶೀ ಯಶ್ಚಾಪಿ ವರ್ತತೇ ವ್ರತವತ್ ಸದಾ ॥೯೭॥

ಸತ್ಯವಾಕ್ ಕ್ರೋಧರಹಿತಃ ಶುಚಿಃ ಸ್ನಾನರತಃ ಸದಾ ।
ಸ ವಿಮಾನೇನ ದಿವ್ಯೇನ ಯಾತಿ ಶಕ್ರಪುರಂ ನರಃ ॥೯೮॥

ಯಾವ ವ್ಯಕ್ತಿಯು ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ, ಮಧ್ಯಾಹ್ನದಿಂದ ರಾತ್ರಿಯ ತನಕ ಮಧ್ಯಕಾಲದಲ್ಲಿ ಆಹಾರವನ್ನು ಸ್ವೀಕರಿಸದೆ ವ್ರತನಿಷ್ಠನಾಗಿ ಇರುತ್ತಾನೋ, ಸತ್ಯವಂತನಾಗಿ, ಕ್ರೋಧರಹಿತನಾಗಿ, ಶುಚಿಯಾಗಿ, ಸ್ನಾನರತನಾಗಿ ಯಾವಾಗಲೂ ಇರುತ್ತಾನೋ ಅವನು ದಿವ್ಯವಾದ ವಿಮಾನವನ್ನು ಏರಿ ಇಂದ್ರನ ಪುರಕ್ಕೆ ಸಾಗುತ್ತಾನೆ.

ತತ್ರ ದಿವ್ಯಾಪ್ಸರೋಭಿಸ್ತು ವರ್ಷಕೋಟಿಂ ಮಹಾತಪಾಃ ।
ಕ್ರೀಡಿತ್ವಾ ಮಾನುಷೇ ಲೋಕೇ ಜಾಯತೇ ವೇದವಿದ್ ದ್ವಿಜಃ ॥೯೯॥

ಆ ಇಂದ್ರಲೋಕದಲ್ಲಿಯಾದರೂ ಅಪ್ಸರೆಯರಿಂದ ಕೂಡಿ, ಮಹಾತಪಸ್ವಿಯಾಗಿ ಕೋಟಿವರ್ಷಗಳ ಕಾಲ ವಿಹರಿಸಿ, ಮನುಷ್ಯಲೋಕದಲ್ಲಿ ವೇದಜ್ಞನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಏಕಭುಕ್ತೇನ ಯಶ್ಚಾಪಿ ವರ್ಷಮೇಕಂ ತು ವರ್ತತೇ ।
ಬ್ರಹ್ಮಚಾರೀ ಜಿತಕ್ರೋಧಃ ಸತ್ಯಶೌಚಸಮನ್ವಿತಃ ॥೧೦೦॥

ಸ ವಿಮಾನೇನ ದಿವ್ಯೇನ ಯಾತಿ ಶಕ್ರಪುರಂ ಸುಖಮ್ ॥೧೦೧॥

ಯಾವ ವ್ಯಕ್ತಿಯು ದಿನಕ್ಕೆ ಒಂದು ಕಾಲದಲ್ಲಿ ಮಾತ್ರ ಊಟವನ್ನು ಮಾಡಿ, ಒಂದು ವರ್ಷಗಳ ಕಾಲ ಇರುತ್ತಾನೋ ಅಂತಹ ಬ್ರಹ್ಮಚಾರಿಯಾದ, ಸಿಟ್ಟನ್ನು ಬಿಟ್ಟಿರುವ, ಸತ್ಯ-ಶೌಚದಿಂದ ಕೂಡಿರುವ ವ್ಯಕ್ತಿಯು ದಿವ್ಯವಾದ ವಿಮಾನವನ್ನು ಹೊಂದಿ ಇಂದ್ರಪುರಿಗೆ ಸುಖವಾಗಿ ಸಾಗುತ್ತಾನೆ.

ದಶಕೋಟಿಸಮಾಸ್ತತ್ರ ಕ್ರೀಡಿತ್ವಾऽಪ್ಸರಸಾಂ ಗಣೈಃ ।
ಇಹ ಮಾನುಷಕೇ ಲೋಕೇ ಬ್ರಾಹ್ಮಣೋ ವೇದವಿದ್ ಭವೇತ್ ॥೧೦೨॥

ಆ ಇಂದ್ರಲೋಕದಲ್ಲಿಯಾದರೂ ಹತ್ತುಕೋಟಿ ವರ್ಷಗಳ ಕಾಲ ಅಪ್ಸರಾಗಣದಿಂದ ಸೇರಿಕೊಂಡು ವಿಹರಿಸಿ, ಪುನಃ ಮನುಷ್ಯಲೋಕದಲ್ಲಿ ವೇದಜ್ಞನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಚತುರ್ಥಕಾಲೇ ಯೋ ಭುಂಕ್ತೇ ಬ್ರಹ್ಮಚಾರೀ ಜಿತೇಂದ್ರಿಯಃ ।
ವರ್ತತೇ ವರ್ಷಮೇಕಂ ತು ತಸ್ಯ ಪುಣ್ಯಫಲಂ ಶೃಣು ॥೧೦೩॥

ದಿನದ ನಾಲ್ಕನೆಯ ಕಾಲದಲ್ಲಿ ಜಿತೇಂದ್ರಿಯನಾದ ಬ್ರಹ್ಮಚಾರಿಯು ಊಟ ಮಾಡುತ್ತ ಒಂದು ವರ್ಷದ ಕಾಲ ಈ ಕ್ರಮದ ನಿಯಮವನ್ನು ಅನುಷ್ಠಾನ ಮಾಡಿದ ಬ್ರಹ್ಮಚಾರಿಗೆ ದೊರಕುವ ಫಲವನ್ನು ಕೇಳಿಸಿಕೊ.

ಚಿತ್ರಬರ್ಹಿಣಯುಕ್ತೇನ ವಿಚಿತ್ರಧ್ವಜಶೋಭಿನಾ ।
ಯಾತಿ ಯಾನೇನ ದಿವ್ಯೇನ ಸ ಮಹೇಂದ್ರಪುರಂ ನರಃ ॥೧೦೪॥

ಬಗೆಬಗೆಯ ಗರಿಗಳಿಂದ ಕೂಡಿದ, ವಿಚಿತ್ರವಾದ ಧ್ವಜದಿಂದ ಶೋಭಿಸುವ ವಿಮಾನವನ್ನು ಏರಿಕೊಂಡು ಇಂದ್ರನ ಪಟ್ಟಣಕ್ಕೆ ಸಾಗುತ್ತಾನೆ.

ಅಕೃಶಾಭಿರ್ವರಸ್ತ್ರೀಭಿಃ ಸೇವ್ಯಮಾನೋ ಯಥಾಸುಖಮ್ ।
ತತ್ರ ದ್ವಾದಶಕೋಟಿಂ ಸ ಸಮಾಃ ಸಮ್ಯಕ್ ಪ್ರಮೋದತೇ ॥೧೦೫॥

ಪುಷ್ಟರಾದ ವರಸ್ತ್ರೀಯರಿಂದ ಸುಖವಾಗಿ ಸೇವ್ಯಮಾನನಾದ ಆತನು ಹನ್ನೆರಡು ಕೋಟಿ ವರ್ಷಗಳ ಕಾಲ ಸುಖವನ್ನು ಅನುಭವಿಸುತ್ತಾನೆ.

ಶಕ್ರಲೋಕಾವತೀರ್ಣಸ್ತು ಲೋಕೇ ಚಾಸ್ಮಿನ್ ನರಾಧಿಪ ।
ಭವೇದ್ ವೈ ಬ್ರಾಹ್ಮಣೋ ವಿದ್ವಾನ್ ಕ್ಷಮಾವಾನ್ ವೇದಪಾರಗಃ ॥

ಇಂದ್ರನ ಲೋಕದಿಂದ ಕೆಳಗೆ ಇಳಿದ ಆತನು ಬ್ರಾಹ್ಮಣನಾಗಿ ಹುಟ್ಟಿ, ಕ್ಷಮಾಶೀಲನಾದ, ವೇದಜ್ಞನಾದ ವ್ಯಕ್ತಿಯಾಗಿರುತ್ತಾನೆ.

ಷಷ್ಠಕಾಲಂ ತು ಯೋಽಶ್ನಾತಿ ವರ್ಷಮೇಕಮಕಲ್ಮಷಃ ।
ಬ್ರಹ್ಮಚರ್ಯವ್ರತೈರ್ಯುಕ್ತಃ ಶುಚಿಃ ಕ್ರೋಧವಿವರ್ಜಿತಃ ॥೧೦೭॥

ತಪೋಯುಕ್ತಸ್ಯ ತಸ್ಯಾಪಿ ಶೃಣುಷ್ವ ಫಲಮುತ್ತಮಮ್ ॥೧೦೮॥

ಯಾವನು ದಿನದ ಆರನೆಯ ಕಾಲದಲ್ಲಿ ಒಂದು ವರ್ಷದ ಕಾಲ ಕಾಮ ಕ್ರೋಧದಿಂದ ರಹಿತನಾಗಿ, ಬ್ರಹ್ಮಚರ್ಯದಿಂದ ಕೂಡಿದವನಾಗಿ, ಶುಚಿಯಾಗಿ ಇದ್ದು ಊಟ ಮಾಡುತ್ತಾನೋ ಅಂತಹ ತಪೋಯುಕ್ತನಾದ ವ್ಯಕ್ತಿಗೆ ದೊರಕುವ ಫಲವೇನೆಂಬುದನ್ನು ಕೇಳು.

ಆತ್ಯಾದಿತ್ಯಪ್ರಕಾಶೇನ ವಿಮಾನೇನಾರ್ಕಸನ್ನಿಭಃ ।
ಸ ಯಾತಿ ಮಮ ಲೋಕಾನ್ ವೈ ದಿವ್ಯನಾರೀನಿಷೇವಿತಃ ॥೧೦೯॥

ಅತ್ಯಂತ ಶ್ರೇಷ್ಠನಾದ ಸೂರ್ಯನ ಬೆಳಕಿನಂತೆ ಬೆಳಗುವ ಸೂರ್ಯಸದೃಶವಾದ ವಿಮಾನದಲ್ಲಿ ಸಂಚರಿಸುತ್ತಾ, ದೇವಲೋಕದ ನಾರಿಯರಿಂದ ಸೇವ್ಯಮಾನನಾಗಿ ನನ್ನ ಲೋಕಕ್ಕೆ ಆಗಮಿಸುತ್ತಾನೆ.

ತತ್ರ ಸಾಧ್ಯೈರ್ಮರುದ್ಭಿಶ್ಚ ಪೂಜ್ಯಮಾನೋ ಯಥಾಸುಖಮ್ ।
ಪಶ್ಯನ್ನೇವ ಸದಾ ಮಾಂ ತು ಕೀಡತ್ಯಪ್ಸರಸಾಂ ಗಣೈಃ ॥೧೧೦॥

ಆ ಲೋಕದಲ್ಲಿಯಾದರೂ ಸಾಧ್ಯರು, ಮರುತ್ತುಗಳು ಇವರಿಂದ ಸುಖವಾಗಿ ಪೂಜ್ಯಮಾನನಾಗಿ, ಅಪ್ಸರಾಸ್ತ್ರೀಯರಿಂದ ಕೂಡಿದವನಾಗಿ ನನ್ನನ್ನು ನೋಡುತ್ತಾ ಸಂತೋಷ ಹೊಂದುತ್ತಾನೆ.

ಪಕ್ಷೋಪವಾಸಂ ಯಶ್ಚಾಪಿ ಕುರುತೇ ಮದ್ಗತಾತ್ಮನಾ ।
ಸಮಾಪ್ತೇ ತು ವ್ರತೇ ತಸ್ಮಿನ್ ತರ್ಪಯೇತ್ ಶ್ರೋತ್ರಿಯಾನ್ ಶುಚೀನ್ ॥

ಸೋಽಪಿ ಗಚ್ಛತಿ ದಿವ್ಯೇನ ವಿಮಾನೇನ ಮಹಾತಪಾಃ ।
ದ್ಯೋತಯನ್ ಪ್ರಭಯಾ ವ್ಯೋಮ ಮಮ ಲೋಕಂ ಪ್ರಪದ್ಯತೇ ॥೧೧೨॥

ಸ ತತ್ರ ಮೋದತೇ ಕಾಮಂ ಕಾಮರೂಪೀ ಯಥಾಸುಖಮ್ ॥೧೧೩॥

ಯಾವನು ನನ್ನಲ್ಲೇ ಮನಸ್ಸನ್ನಿಟ್ಟು ಹದಿನೈದು ದಿನಗಳ ಕಾಲ ಉಪವಾಸವನ್ನು ಮಾಡುತ್ತಾನೋ, ಉಪವಾಸ ಮುಗಿದ ಬಳಿಕ ಶ್ರೋತ್ರಿಯರಾದ, ಶೌಚಾಚಾರ ಸಂಪನ್ನರಾದ ಬ್ರಾಹ್ಮಣರನ್ನು ಭೋಜನ ಮಾಡಿಸುತ್ತಾನೋ ಅವನು ದಿವ್ಯವಾದ ವಿಮಾನವನ್ನು ಏರಿ, ತನ್ನ ಪ್ರಭೆಯಿಂದ ದಿಕ್ಕುಗಳನ್ನು ಬೆಳಗುತ್ತಾ, ನನ್ನ ಲೋಕವನ್ನು ಹೊಂದುತ್ತಾನೆ. ನನ್ನ ಲೋಕದಲ್ಲಿಯಾದರೂ ಕಾಮರೂಪಿಯಾಗಿ ಯಥೇಷ್ಟವಾಗಿ ಸುಖದಿಂದ ವಿಹರಿಸುತ್ತಾನೆ.

ತ್ರಿಂಶತ್ಕೋಟಿಸಮಾ ರಾಜನ್ ಕ್ರೀಡಿತ್ವಾ ತತ್ರ ದೇವವತ್ ।
ಇಹ ಮಾನುಷ್ಯಕೇ ಲೋಕೇ ಪೂಜನೀಯೋ ದ್ವಿಜೋತ್ತಮಃ ॥೧೧೪॥

ಆ ಲೋಕದಲ್ಲಿ ದೇವತೆಯಂತೆ ಮೂವತ್ತು ಕೋಟಿ ವರ್ಷಗಳ ಕಾಲ ವಿಹರಿಸಿ ಈ ಮನುಷ್ಯಲೋಕದಲ್ಲಿ ಪೂಜನೀಯನಾದ ಬ್ರಾಹ್ಮಣಶ್ರೇಷ್ಠನಾಗಿ ಹುಟ್ಟುತ್ತಾನೆ.

ತ್ರಯಾಣಾಮಪಿ ವೇದಾನಾಂ ಸಾಂಗಾನಾಂ ಪಾರಗೋ ಭವೇತ್ ॥೧೧೫॥

ಮೂರು ವೇದಗಳನ್ನು ಷಡಂಗಸಹಿತವಾಗಿ ಅಧ್ಯಯನ ಮಾಡುವವನಾಗುತ್ತಾನೆ.

ಯಶ್ಚ ಮಾಸೋಪವಾಸಂ ವೈ ಕುರುತೇ ಮದ್ಗತಾತ್ಮನಾ ।
ಜಿತೇಂದ್ರಿಯೋ ಜಿತಕ್ರೋಧೋ ಜಿತಧೀಃ ಸ್ನಾನತತ್ಪರಃ ॥೧೧೬॥

ಸಮಾಪ್ತೇ ನಿಯಮೇ ತತ್ರ ಭೋಜಯಿತ್ವಾ ದ್ವಿಜೋತ್ತಮಾನ್ ।
ದಕ್ಷಿಣಾಂ ಚ ತತೋ ದದ್ಯಾತ್ ಪ್ರಹೃಷ್ಟೇನಾಂತರಾತ್ಮನಾ ॥೧೧೭॥

ಸ ಗಚ್ಛತಿ ಮಹಾತೇಜಾ ಬ್ರಹ್ಮಲೋಕಮನುತ್ತಮಮ್ ।
ಸಿಂಹಯುಕ್ತೇನ ಯಾನೇನ ದಿವ್ಯಸ್ತ್ರೀಗಣಸೇವಿತಃ ॥೧೧೮॥

ಯಾವ ವ್ಯಕ್ತಿಯು ಒಂದು ತಿಂಗಳ ಕಾಲ ನನ್ನಲ್ಲೇ ಮನಸ್ಸನ್ನಿಟ್ಟವನಾಗಿ, ಜಿತೇಂದ್ರಿಯನಾಗಿ, ಜಿತಕ್ರೋಧನಾಗಿ, ಬುದ್ಧಿಯನ್ನು ನಿಗ್ರಹಿಸಿಕೊಂಡು, ಸ್ನಾನ-ಶೌಚ ತತ್ಪರನಾಗಿ ಉಪವಾಸವನ್ನು ಮಾಡುತ್ತಾನೋ, ಉಪವಾಸ ಮುಗಿದ ಬಳಿಕ ಬ್ರಾಹ್ಮಣ ಶ್ರೇಷ್ಠರನ್ನು ದಕ್ಷಿಣಾದಿಗಳಿಂದ ತೃಪ್ತಿಪಡಿಸಿ ಸಂತೋಷದಿಂದ ಊಟ ಮಾಡಿಸುತ್ತಾನೋ ಆ ವ್ಯಕ್ತಿಯು ಮಹಾತೇಜಸ್ವಿಯಾಗಿ ಶ್ರೇಷ್ಠವಾದ ಬ್ರಹ್ಮಲೋಕವನ್ನು ಕುರಿತು ಸಿಂಹಯುಕ್ತವಾದ ವಿಮಾನದಲ್ಲಿ ಸಾಗುತ್ತಾನೆ. ಅಲ್ಲಿ ದಿವ್ಯಸ್ತ್ರೀಯರಿಂದ ಸೇವಿತನಾಗಿರುತ್ತಾನೆ.

ಸ ತತ್ರ ಬ್ರಹ್ಮಣೋ ಲೋಕೇ ದೇವರ್ಷಿಗಣಸೇವಿತಃ ।
ಶತಕೋಟಿಸಮಾ ರಾಜನ್ ಯಥಾಕಾಮಂ ಪ್ರಮೋದತೇ ॥೧೧೯॥

ಆ ಬ್ರಾಹ್ಮಣನು ಬ್ರಹ್ಮಲೋಕದಲ್ಲಿ ದೇವತೆಗಳು, ಋಷಿಗಳಿಂದ ಸೇವ್ಯಮಾನನಾಗಿ ನೂರುಕೋಟಿ ವರ್ಷಗಳ ಕಾಲ ಮನಬಂದಂತೆ ಸಂತೋಷ ಪಡುತ್ತಾನೆ.

ತತಃ ಕಾಲಾವತೀರ್ಣಶ್ಚ ಸೋಽಸ್ಮಿನ್ ಲೋಕೇ ದ್ವಿಜೋ ಭವೇತ್ ।
ಷಡಂಗವಿಚ್ಚತುರ್ವೇದೀ ತ್ರಿಂಶಜ್ಜನ್ಮಾನ್ಯರೋಗವಾನ್ ॥೧೨೦॥

ಬಳಿಕ ಕಾಲಾಂತರದಲ್ಲಿ ಈ ಭೂಮಿಗೆ ಆಗಮಿಸಿದ ಬ್ರಾಹ್ಮಣನು ಆರು ಅಂಗಗಳಿಂದ ಸಹಿತವಾದ ನಾಲ್ಕು ವೇದಗಳನ್ನು ಅಧ್ಯಯನ ಮಾಡುತ್ತಾ ಮೂವತ್ತು ಜನ್ಮಗಳಲ್ಲಿ ರೋಗವಿಲ್ಲದವನಾಗಿ ಬದುಕುತ್ತಾನೆ.

ಯಸ್ಯಕ್ತ್ವಾ ಸರ್ವಕರ್ಮಾಣಿ ಶುಚಿಃ ಕ್ರೋಧವಿವರ್ಜಿತಃ ।
ಮಹಾಪ್ರಸ್ಥಾನಮೇಕಾಗ್ರೋ ಯಾತಿ ಮದ್ಗತಮಾನಸಃ ॥೧೨೧॥

ಯಾವ ವ್ಯಕ್ತಿಯು ಕ್ರೋಧವರ್ಜಿತನಾಗಿ, ಶುಚಿಯಾಗಿ ಸಮಸ್ತ ಕರ್ಮಗಳನ್ನು ನನ್ನಲ್ಲೇ ಸಮರ್ಪಿಸುತ್ತಾನೋ ನನ್ನ ಭಕ್ತನಾದ ಅವನು ಏಕಾಗ್ರತೆಯಿಂದ ಮಹಾಪ್ರಸ್ಥಾನವನ್ನು ಹೊಂದುತ್ತಾನೆ.

ಸ ಗಚ್ಛೇದಿಂದ್ರಸದನಂ ವಿಮಾನೇನ ಮಹಾತಪಾಃ ।
ಮಹಾಮಣಿವಿಚಿತ್ರೇಣ ಸೌವರ್ಣೇನ ವಿರಾಜತಾ ॥೧೨೨॥

ಆ ಮಹಾತಪಸ್ವಿಯು ವಿಮಾನದಿಂದ ಇಂದ್ರನ ಮನೆಗೆ ಸಾಗುತ್ತಾನೆ. ಆ ವಿಮಾನವಾದರೂ ಮಹಾಮಣಿಗಳಿಂದ ವಿಚಿತ್ರವಾಗಿ ಅಲಂಕೃತವಾಗಿರುತ್ತದೆ. ಬಂಗಾರದಿಂದ ಶೋಭಿಸುತ್ತಿರುತ್ತದೆ.

ಶತಕೋಟಿಸಮಾಸ್ತತ್ರ ಸುರಾಧಿಪತಿಪೂಜಿತಃ ।
ನಾಕಪೃಷ್ಠೇ ನಿವಸತಿ ದಿವ್ಯಸ್ತ್ರೀಗಣಸೇವಿತಃ ॥೧೨೩॥

ನೂರುಕೋಟಿ ವರ್ಷಗಳ ಕಾಲ ಇಂದ್ರದೇವನಿಂದ ಪೂಜಿತನಾದ ಅವನು ದಿವ್ಯ ಸ್ತ್ರೀಯರಿಂದ ಸೇವಿತನಾಗಿ ಸ್ವರ್ಗಲೋಕದಲ್ಲಿ ವಾಸ ಮಾಡುತ್ತಾನೆ.

ಶಕ್ರಲೋಕಾವತೀರ್ಣಶ್ಚ ಮಾನುಷೇಷೂಪಜಾಯತೇ ।
ರಾಜ್ಞಾಂ ರಾಜಾ ಮಹಾತೇಜಾಃ ಸರ್ವಲೋಕಾರ್ಚಿತಃ ಪ್ರಭುಃ ॥೧೨೪॥

ಇಂದ್ರಲೋಕದಿಂದ ಭೂಮಿಗೆ ಆಗಮಿಸಿದ ಅವನು ಮನುಷ್ಯಲೋಕದಲ್ಲಿ ಮಹಾತೇಜಸ್ವಿಯಾದ, ಸಮಸ್ತ ಜನರಿಂದ ಪೂಜಿತನಾದ ದೊಡ್ಡ ರಾಜನಾಗಿ ಶೋಭಿಸುತ್ತಾನೆ.

ಪ್ರಾಯೋಪ್ರವೇಶಂ ಯಃ ಕುರ್ಯಾನ್ಮದ್ಗತೇನಾಂತರಾತ್ಮನಾ ॥೧೨೫॥

ನಮೋ ಬ್ರಹ್ಮಣ್ಯದೇವಾಯೇತ್ಯುಕ್ತ್ವಾ ಮಂತ್ರಂ ಸಮಾಹಿತಃ ।
ಅಂತಃಸ್ಥೋ ಜಿತಕ್ರೋಧಸ್ತಸ್ಯ ಪುಣ್ಯಫಲಂ ಶೃಣು ॥೧೨೬॥

ಯಾವ ವ್ಯಕ್ತಿಯು ನನ್ನಲ್ಲಿಯೇ ಮನಸ್ಸನ್ನಿಟ್ಟು ಪ್ರಾಯೋಪ್ರವೇಶವ್ರತವನ್ನು ಕೈಗೊಳ್ಳುತ್ತಾನೋ, ನಮೋ ಬ್ರಹ್ಮಣ್ಯದೇವಾಯ ಎಂಬ ಮಂತ್ರವನ್ನು ಏಕಾಗ್ರತೆಯಿಂದ ಪಠಿಸುತ್ತಾ, ನನ್ನನ್ನೇ ಧ್ಯಾನ ಮಾಡುತ್ತಾನೋ, ಕ್ರೋಧವನ್ನು ತ್ಯಜಿಸಿದ ಅವನಿಗೆ ಲಭಿಸುವ ಪುಣ್ಯವನ್ನು ಹೇಳುತ್ತೇನೆ, ಕೇಳು.

ಕಾಮಗಃ ಕಾಮರೂಪೀ ಚ ಬಾಲಸೂರ್ಯಸಮಪ್ರಭಃ ।
ಸ ವಿಮಾನೇನ ದಿವ್ಯೇನ ಯಾತಿ ಲೋಕಾನನಾಮಯಾನ್ ॥೧೨೭॥

ಆತನು ಮನಬಂದಂತೆ ಇಚ್ಛಾರೂಪಗಳನ್ನು ಸ್ವೀಕರಿಸಿ ಉದಿಸುವ, ಸೂರ್ಯನಿಗೆ ಸಮಾನವಾದ ಕಾಂತಿಯನ್ನು ಹೊಂದಿದವನಾಗಿ ದಿವ್ಯವಾದ ವಿಮಾನವನ್ನು ಏರಿಕೊಂಡು ದೋಷಗಳೇ ಇಲ್ಲದ ಲೋಕಗಳಲ್ಲಿ ಸಂಚರಿಸುತ್ತಾನೆ.

ಸ್ವರ್ಗಾತ್ ಸ್ವರ್ಗಂ ಮಹಾತೇಜಾ ಗತ್ವಾ ಗತ್ವಾ ಯಥಾಸುಖಮ್ ।
ಮಮ ಲೋಕೇಷು ರಮತೇ ಯಾವದಾಭೂತಸಂಪ್ಲವಮ್ ॥೧೨೮॥

ಒಂದು ಸುಖಲೋಕದಿಂದ ಮತ್ತೊಂದು ಸುಖಲೋಕಕ್ಕೆ ಯಥಾಸುಖವಾಗಿ ತೇಜಸ್ವಿಯಾದ ಆತನು ಸಂಚರಿಸುತ್ತಾ, ಪ್ರಲಯಕಾಲದ ತನಕ ನನ್ನ ಲೋಕದಲ್ಲಿ ಸುಖವನ್ನು ಹೊಂದುತ್ತಾನೆ.

ಅಗ್ನಿಪ್ರವೇಶಂ ಯಶ್ಚಾಪಿ ಕುರುತೇ ಮದ್ಗತಾತ್ಮನಾ ।
ಸೋಽಪಿ ಯಾನೇನ ದಿವ್ಯೇನ ಮಮ ಲೋಕಂ ಪ್ರಪದ್ಯತೇ ॥೧೨೯॥

ಯಾವ ವ್ಯಕ್ತಿಯು ನನ್ನಲ್ಲೇ ನೆಲೆಗೊಂಡ ಮನಸ್ಸಿನಿಂದ ಅಗ್ನಿಪ್ರವೇಶವನ್ನು ಮಾಡುತ್ತಾನೋ ಅವನು ದಿವ್ಯವಾದ ವಿಮಾನವನ್ನು ಏರಿಕೊಂಡು ನನ್ನ ಲೋಕವನ್ನು ಹೊಂದುತ್ತಾನೆ.

ತತ್ರ ಸರ್ವಗುಣೋಪೇತಃ ಪಶ್ಯನ್ನೇವ ಸ ಮಾಂ ಸದಾ ।
ತ್ರಿಂಶತ್ಕೋಟಿಸಮಾ ರಾಜನ್ ಮೋದತೇ ಮಮ ಸನ್ನಿಧೌ ॥೧೩೦॥

ಆತನು ಅಲ್ಲಿ ಸಮಸ್ತ ಗುಣಗಳಿಂದ ಕೂಡಿದ ನನ್ನನ್ನೇ ನೋಡುತ್ತಾ ಮೂವತ್ತು ಕೋಟಿ ವರ್ಷಗಳ ಕಾಲ ನನ್ನ ಸನ್ನಿಧಾನದಲ್ಲಿ ಸುಖ ಹೊಂದುತ್ತಾನೆ.

ತತೋಽವತೀರ್ಣಃ ಕಾಲೇನ ವೇದವಿದ್ ಬ್ರಾಹ್ಮಣೋ ಭವೇತ್ ॥

ಕಾಲಾಂತರದಲ್ಲಿ ಭೂಮಿಗೆ ಆಗಮಿಸಿದ ಆತನು ವೇದಜ್ಞನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಕಾರೀಷಂ ಸಾಧಯನ್ ಯಸ್ತು ಮಾಂ ಪ್ರಪನ್ನಃ ಶುಚಿವ್ರತಃ ।
ನಮೋ ಬ್ರಹ್ಮಣ್ಯದೇವಾಯೇತ್ಯೇತನ್ಮಂತ್ರಮುದಾಹರನ್ ॥೧೩೨॥

ಬಾಲಸೂರ್ಯಪ್ರಕಾಶೇನ ವಿಮಾನೇನ ವಿರಾಜತಾ ।
ಯಮಲೋಕಂ ಸಮಾಸಾದ್ಯ ವರ್ಷಕೋಟಿಂ ಪ್ರಮೋದತೇ ॥೧೩೩॥

ಯಾವ ವ್ಯಕ್ತಿಯು ಕಾರೀಷ ಎಂಬ ಅಗ್ನಿಯನ್ನು ಸ್ಥಾಪನೆ ಮಾಡುತ್ತಾನೋ, ಶೌಚಾಚಾರ ನಿರತನಾದ ಆ ವ್ಯಕ್ತಿಯು ನಮೋ ಬ್ರಹ್ಮಣ್ಯದೇವಾಯ ಎಂಬ ಮಂತ್ರವನ್ನು ಹೇಳುತ್ತಿರುತ್ತಾನೋ ಆತನು ಬಾಲಸೂರ್ಯಪ್ರಕಾಶವುಳ್ಳ ವಿಮಾನದಲ್ಲಿ ಏರಿಕೊಂಡು ಯಮಲೋಕಕ್ಕೆ ಹೋಗಿ ಕೋಟಿವರ್ಷಗಳ ಕಾಲ ಸುಖವನ್ನು ಅನುಭವಿಸುತ್ತಾನೆ.

ವ್ಯಾಖ್ಯಾನ ವಿಶೇಷ– ಕಾರೀಷ ಎಂಬ ಅಗ್ನಿಯು ಯಮದೇವರಿಗೆ ಸಂಬಂಧಪಟ್ಟ ಅಗ್ನಿಯಾಗಿದೆ.

ಯಮಲೋಕಾವತೀರ್ಣಶ್ಚ ಲೋಕೇಽಸ್ಮಿನ್ ಕ್ಷತ್ರಿಯೋ ಭವೇತ್ ॥೧೩೪॥

ಯಮಲೋಕದಿಂದ ಆಗಮಿಸಿದ ಆತನು ಈ ಭೂಮಿಯಲ್ಲಿ ಕ್ಷತ್ರಿಯನಾಗಿ ಹುಟ್ಟುತ್ತಾನೆ.

ನಿವೇಶಯತಿ ಮನ್ಮೂರ್ತ್ಯಾಮಾತ್ಮಾನಂ ಮದ್ಗತಃ ಶುಚಿಃ ।
ರುದ್ರದಕ್ಷಿಣಮೂರ್ತ್ಯಾಂ ವಾ ಚತುರ್ದಶ್ಯಾಂ ವಿಶೇಷತಃ ॥೧೩೫॥

ಸಿದ್ಧೈರ್ಬ್ರಹ್ಮರ್ಷಿಭಿಶ್ಚೈವ ದೇವಲೋಕೈಶ್ಚ ಪೂಜಿತಃ ।
ಗಂಧರ್ವೈರ್ಭೂತಸಂಘೈಶ್ಚ ಗೀಯಮಾನೋ ಮಹಾತಪಾಃ ॥೧೩೬॥

ಪ್ರವಿಶೇತ್ ಸ ಮಹಾತೇಜಾ ಮಾಂ ವಾ ಶಂಕರಮೇವ ಚ ।
ನ ಸ್ಯಾತ್ ಪುನರ್ಭವೋ ರಾಜನ್ ನಾತ್ರ ಕಾರ್ಯಾ ವಿಚಾರಣಾ ॥

ಯಾವ ವ್ಯಕ್ತಿಯು ನನ್ನಲ್ಲೇ ಮನಸ್ಸುಳ್ಳವನಾಗಿ ಚತುರ್ದಶಿ ತಿಥಿಯಂದು ನನ್ನ ರೂಪವನ್ನೇ ಧ್ಯಾನಿಸುತ್ತಾ ಪ್ರಾಣವನ್ನು ಸಮರ್ಪಿಸುತ್ತಾನೋ ಅಥವಾ ರುದ್ರದೇವನ ಕ್ಷೇಮಕರವಾದ ಮೂರ್ತಿಯಲ್ಲಿ ತನ್ನ ಮನಸ್ಸನ್ನು ನೆಲೆಗೊಳಿಸುತ್ತಾನೋ ಆತನು ಸಿದ್ಧರಿಂದ, ಬ್ರಹ್ಮರ್ಷಿಗಳಿಂದ, ದೇವತೆಗಳಿಂದಲೂ ಪೂಜಿತನಾಗಿ, ಗಂಧರ್ವರಿಂದ, ಸಮಸ್ತ ಪ್ರಾಣಿಗಳಿಂದ ಸ್ತೋತ್ರಪಾತ್ರನಾಗಿ ನನ್ನನಾಗಲಿ, ರುದ್ರನನ್ನಾಗಲಿ ಹೊಂದುತ್ತಾನೆ. ಅವನು ಪುನಃ ಇಲ್ಲಿ ಹುಟ್ಟನ್ನು ಪಡೆಯುವುದಿಲ್ಲ. ಇದಕ್ಕೆ ಸಂಶಯವಿಲ್ಲ.

ಗೋಕೃತೇ ಸ್ತ್ರೀಕೃತೇ ಚೈವ ಗುರುವಿಪ್ರಕೃತೇಽಪಿ ವಾ ।
ಹನ್ಯಂತೇ ಯೇ ತು ರಾಜೇಂದ್ರ ಶಕ್ರಲೋಕಂ ವ್ರಜಂತಿ ತೇ ॥೧೩೮॥

ಯಾರು ಗೋವುಗಳ ರಕ್ಷಣೆಗಾಗಿ, ಸ್ತ್ರೀಯರ ರಕ್ಷಣೆಗಾಗಿ, ಗುರುಗಳಿಗಾಗಿ, ಬ್ರಾಹ್ಮಣರ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಸಮರ್ಪಿಸುತ್ತಾರೋ ಅವರು ಇಂದ್ರಲೋಕಕ್ಕೆ ಸಾಗುತ್ತಾರೆ.

ತತ್ರ ಜಾಂಬೂನದಮಯೇ ವಿಮಾನೇ ಕಾಮಗಾಮಿನಿ ।
ಮನ್ವಂತರಂ ಪ್ರಮೋದಂತೇ ದಿವ್ಯನಾರೀನಿಷೇವಿತಾಃ ॥೧೩೯॥

ಅಲ್ಲಿಯಾದರೂ ಬಂಗಾರದಿಂದ ಕೂಡಿದ ವಿಮಾನದಲ್ಲಿ ಸ್ವಚ್ಛಂದವಾಗಿ ಸಂಚರಿಸುತ್ತಾ, ಒಂದು ಮನ್ವಂತರದ ಕಾಲ ದಿವ್ಯನಾರಿಯರಿಂದ ಸೇವ್ಯಮಾನರಾಗಿ ಸಂತೋಷವನ್ನು ಹೊಂದುತ್ತಾರೆ.

ಆಶ್ರುತಸ್ಯಾಪ್ರದಾನೇನ ದತ್ತಸ್ಯ ಹರಣೇನ ಚ ।
ಜನ್ಮಪ್ರಭೃತಿ ಯದ್ದತ್ತಂ ಸರ್ವಂ ನಶ್ಯತಿ ಭಾರತ ॥೧೪೦॥

ದಾನ ಕೊಡುತ್ತೇನೆಂದು ಕೊಡದೇ ಇದ್ದರೂ ಕೊಟ್ಟಿದ್ದನ್ನು ಅಪಹರಿಸಿದರೂ, ಹುಟ್ಟಿನಿಂದ ಮೊದಲುಗೊಂಡು ಮಾಡಿದ ಸಮಸ್ತ ದಾನಗಳ ಫಲವೆಲ್ಲವೂ ನಾಶವಾಗುತ್ತದೆ.

ನಾಗೋಪ್ರದಾಸ್ತತ್ರ ಪಯಃ ಪಿಬಂತಿ
ನಾಭೂಮಿದಾ ಭೂಮಿಮಥಾಶ್ನುವಂತಿ ।
ಯಾನ್ ಯಾನ್ ಕಾಮಾನ್ ಬ್ರಾಹ್ಮಣೇಭ್ಯೋ ದದಾತಿ
ತಾಂಸ್ತಾನ್ ಕಾಮಾನ್ ಸ್ವರ್ಗಲೋಕೇ ಸ ಭುಂಕ್ತೇ ॥೧೪೧೦॥

ಗೋವುಗಳನ್ನು ದಾನ ಮಾಡದವರಿಗೆ ಹಾಲನ್ನು ಸೇವಿಸುವ ಭಾಗ್ಯವು ಒದಗುವುದಿಲ್ಲ. ಭೂಮಿಯನ್ನು ದಾನ ಮಾಡದವನಿಗೆ ಭೂಮಿಯ ಸುಖವು ದೊರಕುವುದಿಲ್ಲ. ಯಾವ ಯಾವ ವಸ್ತುಗಳನ್ನು ಬಯಸಿದ ಬ್ರಾಹ್ಮಣರಿಗೆ ನೀಡುತ್ತಾರೋ ಅವರು ಆಯಾ ಕಾಮನೆಗಳನ್ನು ಸ್ವರ್ಗಲೋಕದಲ್ಲಿ ಅನುಭವಿಸುತ್ತಾರೆ.

ಯದ್ಯದಿಷ್ಟತಮಂ ದ್ರವ್ಯಂ ನ್ಯಾಯೇನೋಪಾರ್ಜಿತಂ ಚ ಯತ್ ।
ತತ್ತದ್ ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ ॥೧೪೨॥

ನ್ಯಾಯದಿಂದ ಗಳಿಸಿದ, ತನಗೆ ಅತ್ಯಂತ ಇಷ್ಟವಾದ ಪದಾರ್ಥವು ಯಾವುದಿದೆಯೋ ಅಂತಹ ಪದಾರ್ಥವನ್ನು ಅಕ್ಷಯ ಫಲವನ್ನು ಬಯಸುವ ವ್ಯಕ್ತಿಯು ಗುಣವಂತನಾದ ಬ್ರಾಹ್ಮಣನಿಗೆ ದಾನ ಮಾಡಬೇಕು.

ಅನುಪೋಷ್ಯ ತ್ರಿರಾತ್ರಾಣಿ ತೀರ್ಥಾನ್ಯನಭಿಗಮ್ಯ ಚ ।
ಅದತ್ತ್ವಾ ಕಾಂಚನಂ ಗಾಂ ಚ ದರಿದ್ರೋ ನಾಮ ಜಾಯತೇ ॥೧೪೩॥

ಯಾವ ವ್ಯಕ್ತಿಯು ದಶಮೀ, ಏಕಾದಶೀ, ದ್ವಾದಶಿಗಳನ್ನು ಅನುಷ್ಠಾನ ಮಾಡಿರುವುದಿಲ್ಲವೋ, ತೀರ್ಥವನ್ನು ಸೇವಿಸಿರುವುದಿಲ್ಲವೋ, ಬಂಗಾರವನ್ನು ದಾನ ಮಾಡಿರುವುದಿಲ್ಲವೋ, ಗೋದಾನವನ್ನು ಮಾಡಿರುವುದಿಲ್ಲವೋ ಅವನು ದರಿದ್ರನಾಗಿ ಹುಟ್ಟುತ್ತಾನೆ.

ದಾನಂ ಯತ್ ತತ್ಫಲಂ ನೈತಿ ಶ್ರೋತ್ರಿಯಾಯ ನ ದೀಯತೇ ।
ಶ್ರೋತ್ರಿಯಾ ಯತ್ರ ನಾಶ್ನಂತಿ ನ ದೇವಾಸ್ತತ್ರ ಭುಂಜತೇ ॥೧೪೪॥

ಯಾವ ವ್ಯಕ್ತಿಯು ಶ್ರೋತ್ರಿಯ ಬ್ರಾಹ್ಮಣನಿಗೆ ದಾನವನ್ನು ಮಾಡುವುದಿಲ್ಲವೋ, ಶ್ರೋತ್ರಿಯ ಬ್ರಾಹ್ಮಣರನ್ನು ಊಟ ಮಾಡಿಸುವುದಿಲ್ಲವೋ ಅವನು ದಾನದ ಫಲವನ್ನಾಗಲಿ, ದೇವತೆಗಳ ಅನುಗ್ರಹವನ್ನಾಗಲಿ ಹೊಂದುವುದಿಲ್ಲ.

ಶ್ರೋತ್ರಿಯೇಭ್ಯಃ ಪರಂ ನಾಸ್ತಿ ಪರಮಂ ದೈವತಂ ಮಹತ್ ।
ನಿಧಾನಂ ಚಾಪಿ ರಾಜೇಂದ್ರ ನಾನ್ಯಾಚ್ಛ್ರೋತ್ರಿಯಭೋಜನಾತ್ ॥೧೪೫॥

ಶ್ರೋತ್ರಿಯರಿಗಿಂತ ಶ್ರೇಷ್ಠವಾದ ಪರಮದೈವತವು ಜಗತ್ತಿನಲ್ಲಿ ಇನ್ನೊಂದು ಇರುವುದಿಲ್ಲ. ಇಂತಹ ಮಹತ್ವವನ್ನು ಹೊಂದಿರುವ ಶ್ರೋತ್ರಿಯ ಬ್ರಾಹ್ಮಣರ ಭೋಜನಕ್ಕಿಂತ ಬೇರೆ ಫಲವನ್ನು ಹೊಂದಲು ಬೇರೆ ಉಪಾಯಗಳು ಯಾವವೂ ಇರುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ದಾನಕಥನಂ ನಾಮ
ತ್ರ್ಯಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಾಲ್ಕನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನಿಗೆ ಪಂಚಮಹಾಯಜ್ಞಗಳ ಬಗ್ಗೆ ನಿರೂಪಿಸಿದುದು. ಸ್ನಾನವಿಧಿಗಳನ್ನು ನಿರೂಪಿಸಿದುದು. ವೈಷ್ಣವರ ಲಕ್ಷಣವನ್ನು ಹೇಳಿದುದು. ಭಗವಂತನ ಪೂಜೆಗೆ ಯೋಗ್ಯವಾದ ಪುಷ್ಪಗಳ್ಯಾವವು ಎಂಬುದನ್ನು ತಿಳಿಸಿದುದು.

ಯುಧಿಷ್ಠಿರಃ

ವಿಪ್ರಯೋಗೇ ಶರೀರಸ್ಯ ಸೇಂದ್ರಿಯಸ್ಯ ವಿಶೇಷತಃ ।
ಅಂತರಾ ವರ್ತಮಾನಸ್ಯ ಗತಿಃ ಪ್ರಾಣಸ್ಯ ಕೀದೃಶೀ ॥೧॥

ಯುಧಿಷ್ಠಿರ– ಇಂದ್ರಿಯಗಳಿಂದ ಸಹಿತನಾಗಿ ಜೀವನು ಶರೀರವನ್ನು ತ್ಯಜಿಸಿದಾಗ ದೇಹಬಿಟ್ಟುಗತಿಸಿದ ಜೀವನ ಮಧ್ಯದ ಸ್ಥಿತಿಯು ಯಾವ ರೀತಿಯಾಗಿರುತ್ತದೆ?

ಶ್ರೀಭಗವಾನ್

ಶುಭಾಶುಭಕೃತಂ ಸರ್ವಂ ಪ್ರಾಪ್ನೋತೀಹ ಫಲಂ ನರಃ ।
ನ ತು ಸರ್ವಸ್ಯ ಭೂತಸ್ಯ ಪಂಚತ್ವಂ ವಿದ್ಯತೇ ನೃಪ ॥೨॥

ಶ್ರೀಭಗವಾನ್– ಜೀವನು ಈ ದೇಹದ ಸಂಬಂಧದಿಂದ ಇಷ್ಟಾನಿಷ್ಟ ಫಲಗಳನ್ನೆಲ್ಲ ಇಲ್ಲಿಹೊಂದುತ್ತಾನೆ. ಮರಣದ ಬಳಿಕ ಜೀವನ ದೇಹಕ್ಕೆ ಅಂಟಿಕೊಂಡ ಇಂದ್ರಿಯಗಳು ಸರ್ವಾತ್ಮನ ನಾಶವನ್ನು ಹೊಂದುವುದಿಲ್ಲ. ಜೀವನಿಗೆ ಮರಣವೇ ಇಲ್ಲ. ಇಂದ್ರಿಯಗಳು ಭಾಗಶಃ ನಾಶವನ್ನು ಹೊಂದುತ್ತವೆ.

ಪಂಚತ್ವಂ ಪಾಂಡವಶ್ರೇಷ್ಠ ಭೂರಿಭೂತಿಕರಂ ನೃಣಾಮ್ ॥೩॥

ತೇಷಾಂ ಪಂಚ ಮಹಾಯಜ್ಞಾನ್ ಯೇ ಕುರ್ವಂತಿ ದ್ವಿಜೋತ್ತಮಃ ।
ಪಂಚತ್ವಂ ಪಂಚಭಿರ್ಭೂತೈರ್ವಿಯೋಗಂ ಸಂಪ್ರಚಕ್ಷತೇ ॥೪॥

ಯಾವ ಜೀವರು ಪಂಚಮಹಾಯಜ್ಞಗಳನ್ನು ಪ್ರತಿದಿನವು ಆಚರಿಸಿ ದೇಹಾವಸಾನವನ್ನು ಹೊಂದುತ್ತಾರೋ ಅವರು ಮರಣ ಹೊಂದಿದ ಮೇಲೆ ವಿಶಿಷ್ಟವಾದ ಐಶ್ವರ್ಯವನ್ನೇ ಹೊಂದುತ್ತಾರೆ. ದೇಹಕ್ಕೆ ಮರಣವೇ ವಿನಾ ಜೀವರಿಗೆ ಎಂದೂ ಮರಣವಿಲ್ಲ. ದೇಹವಿಯೋಗವೆಂಬ ನಾಶವು ಪುಣ್ಯವನ್ನು ಮಾಡಿದ ಸಜ್ಜನರಿಗೆ ಸ್ವರ್ಗದಲ್ಲಿ ಐಶ್ವರ್ಯದಾಯಕವೇ ಆಗಿದೆ. ಆದ್ದರಿಂದ ಪಂಚಭೂತಗಳ ವಿಯೋಗವು ಸಜ್ಜನರ ಪಾಲಿಗೆ ಐಶ್ವರ್ಯದಾಯಕವೇ ಎಂದು ಸಜ್ಜನರ ಅಭಿಪ್ರಾಯ.

ನ ಜಾಯತೇ ನ ಮ್ರಿಯತೇ ಪುರುಷಃ ಶಾಶ್ವತಃ ಸದಾ ॥೫॥

ಪ್ರಾಯೇಣ ಮರಣಂ ನಾಮ ಪಾಪಿನಾಮೇವ ಪಾಂಡವ ।
ಯೇಷಾಂ ತು ನ ಗತಿಃ ಪುಣ್ಯಾ ತೇಷಾಂ ಮರಣಮುಚ್ಯತೇ ॥೬॥

ಸಾತ್ವಿಕನಾದ ಪುರುಷನು ಎಂದಿಗೂ ಶಾಶ್ವತವಾದ ಮರಣವನ್ನು ಹೊಂದುವುದೇ ಇಲ್ಲ. ಪ್ರಾಯಃ ದೇಹವಿಯೋಗವೆಂಬ ಮರಣವು ಪಾಪಿಗಳ ಪಾಲಿಗೆ ಮಾತ್ರ ಭಯಂಕರವಾಗಿದೆ. ಯಾರಿಗೆ ಪುಣ್ಯಗತಿಯು ಲಭಿಸುವುದಿಲ್ಲವೋ ಅವರಿಗೆ ಮರಣ ಎನ್ನುವ ಶಬ್ದವನ್ನು ಹೇಳುತ್ತಾರೆ. ಸಾತ್ವಿಕರಾದ ಜನರಿಗೆ ಮರಣವು ಸುಖದಾಯಕವಾದ ಅವಭೃಥ ಎನಿಸಿದೆ.

ಪ್ರಾಯೇಣಾಕೃತಕೃತ್ಯಸ್ತು ಮೃತ್ಯೋರುದ್ವಿಜತೇ ಜನಃ ।
ಕೃತಕೃತ್ಯಾಃ ಪ್ರತೀಕ್ಷಂತೇ ಮೃತ್ಯುಂ ಪ್ರಿಯಮಿವಾತಿಥಿಮ್ ॥೭॥

ಪ್ರಾಯಃ ಮಾಡಬೇಕಾದ ಕರ್ತವ್ಯಗಳನ್ನು ಮಾಡದೆ ಇರುವ ಜನರು ಮರಣಕ್ಕೆ ಭಯಪಡುತ್ತಾರೆ. ಸತ್ಕರ್ಮಶೀಲರಾದ ಸಜ್ಜನರು ಇಷ್ಟನಾದ ಅತಿಥಿಯನ್ನು ನಿರೀಕ್ಷಿಸುವಂತೆ ಮೃತ್ಯುವನ್ನು ಅತಿಥಿಯಂತೆ ನಿರೀಕ್ಷಿಸುತ್ತಾರೆ.

ಯುಧಿಷ್ಠಿರಃ

ಪಂಚ ಯಜ್ಞಾಃ ಕಥಂ ದೇವ ಕ್ರಿಯಂತೇಽತ್ರ ದ್ವಿಜಾತಿಭಿಃ ।
ತೇಷಾಂ ನಾಮ ಚ ದೇವೇಶ ಕರ್ತುಮರ್ಹಸ್ಯಶೇಷತಃ ॥೮॥

ಯುಧಿಷ್ಠಿರ– ದೇವೇಶನೇ, ಪಂಚಮಹಾಯಜ್ಞಗಳನ್ನು ಬ್ರಾಹ್ಮಣರು ಹೇಗೆ ಮಾಡುತ್ತಾರೆ? ಅವುಗಳ ನಾಮಧೇಯಗಳನ್ನು ಸಂಪೂರ್ಣವಾಗಿ ಹೇಳುವ ಕೃಪೆ ತೋರು.

ಶ್ರೀಭಗವಾನ್

ಶೃಣು ಪಂಚ ಮಹಾಯಜ್ಞಾನ್ ಕೀರ್ತ್ಯಮಾನಾನ್ ಯುಧಿಷ್ಠಿರ ।
ಯೈರೇವ ಬ್ರಹ್ಮಸಾಲೋಕ್ಯಂ ಲಭಂತೇ ಗೃಹಮೇಧಿನಃ ॥೯॥

ಶ್ರೀಭಗವಾನ್– ಯುಧಿಷ್ಠಿರನೇ, ನಾನು ಹೇಳಲಿರುವ ಪಂಚಮಹಾಯಜ್ಞಗಳ ಸ್ವರೂಪವನ್ನು ಕೇಳು. ಅವುಗಳನ್ನು ಅನುಷ್ಠಾನ ಮಾಡುವುದರಿಂದಲೇ ಗೃಹಸ್ಥನು ಬ್ರಹ್ಮಲೋಕವನ್ನು ಹೊಂದುತ್ತಾನೆ.

ಋಷಿಯಜ್ಞಂ ಬ್ರಹ್ಮಯಜ್ಞಂ ಭೂತಯಜ್ಞಂ ಚ ಪಾಂಡವ ।
ನೃಯಜ್ಞಂ ಪಿತೃಯಜ್ಞಂ ಚ ಪಂಚ ಯಜ್ಞಾನ್ ಪ್ರಚಕ್ಷತೇ ॥೧೦॥

ಋಷಿಯಜ್ಞ, ಬ್ರಹ್ಮಯಜ್ಞ, ಭೂತಯಜ್ಞ, ಮನುಷ್ಯಯಜ್ಞ, ಪಿತೃಯಜ್ಞ ಎಂಬ ಈ ಪಂಚಮಹಾಯಜ್ಞಗಳನ್ನು ಯಜ್ಞ ಎಂದು ಕರೆಯುತ್ತಾರೆ.

ತರ್ಪಣಂ ಋಷಿಯಜ್ಞಃ ಸ್ಯಾತ್ ಸ್ವಾಧ್ಯಾಯೋ ಬ್ರಹ್ಮಯಜ್ಞಕಮ್ ॥೧೧॥

ತರ್ಪಣಕ್ಕೆ ಋಷಿಯಜ್ಞ ಎನ್ನುತ್ತಾರೆ. ಸ್ವಾಧ್ಯಾಯಕ್ಕೆ ಬ್ರಹ್ಮಯಜ್ಞ ಎನ್ನುತ್ತಾರೆ.

ಭೂತಯಜ್ಞೋ ಬಲಿರ್ಜ್ಞೇಯೋ ನೃಯಜ್ಞೋಽತಿಥಿಪೂಜನಮ್ ।
ಪಿತೄನುದ್ದಿಶ್ಯ ಯತ್ಕರ್ಮ ಪಿತೃಯಜ್ಞಃ ಪ್ರಕೀರ್ತಿತಃ ॥೧೨॥

ಸಮಸ್ತ ಪ್ರಾಣಿಗಳಿಗೂ ಬಲಿದಾನ ಮಾಡುವುದಕ್ಕೆ ಭೂತಯಜ್ಞ ಎನ್ನುತ್ತಾರೆ. ಅತಿಥಿ ಸತ್ಕಾರವು ಮನುಷ್ಯಯಜ್ಞ ಎನಿಸಿದೆ. ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧಾದಿಗಳನ್ನು ಮಾಡುವುದಕ್ಕೆ ಪಿತೃಯಜ್ಞ ಎಂದು ಹೆಸರು.

ಹುತಂ ಚಾಪ್ಯಹುತಂ ಚೈವ ತಥಾ ಪ್ರಹುತಮೇವ ಚ ।
ಪ್ರಾಶಿತಂ ಬಲಿದಾನಂ ಚ ಪಾಕಯಜ್ಞಾನ್ ಪ್ರಚಕ್ಷತೇ ॥೧೩॥

ಹುತ, ಅಹುತ, ಪ್ರಹುತ, ಪ್ರಾಶಿತ, ಬಲಿದಾನ ಇವುಗಳನ್ನು ಪಾಕಯಜ್ಞಗಳೆಂದು ಕರೆಯುತ್ತಾರೆ.

ವೈಶ್ವದೇವಾದಯೋ ಹೋಮಾ ಹುತಮಿತ್ಯುಚ್ಯತೇ ಬುಧೈಃ ।
ಅಹುತಂ ಚ ಭವೇದ್ದತ್ತಂ ಪ್ರಹುತಂ ಬ್ರಾಹ್ಮಣಾಶಿತಮ್ ॥೧೪॥

ವೈಶ್ವದೇವಾದಿ ಕರ್ಮಗಳ ಮೂಲಕ ದೇವತೆಗಳನ್ನು ಉದ್ದೇಶಿಸಿ ಮಾಡುವ ಹೋಮವನ್ನು ವಿದ್ವಾಂಸರು ಹುತ ಎಂದು ಕರೆಯುತ್ತಾರೆ. ದಾನ ಕೊಡುವ ವಸ್ತುವಿಗೆ ಅಹುತ ಎಂದು ಹೆಸರು. ಬ್ರಾಹ್ಮಣ ಭೋಜನಕ್ಕೆ ಪ್ರಹುತ ಎಂದು ಹೆಸರು.

ಪ್ರಾಣಾಗ್ನಿಹೋತ್ರಹೋಮಂ ಚ ಪ್ರಾಶಿತಂ ವಿಧಿವದ್ ವಿದುಃ ।
ಬಲಿಕರ್ಮ ಚ ರಾಜೇಂದ್ರ ಪಾಕಯಜ್ಞಾಃ ಪ್ರಕೀರ್ತಿತಾಃ ॥೧೫॥

ಪ್ರಾಣಾಗ್ನಿಹೋತ್ರದ ವಿಧಿಯಿಂದ ಪ್ರಾಣಿಗಳಿಗೆ ಐದು ಗ್ರಾಸಗಳನ್ನು ಅರ್ಪಿಸುವುದಕ್ಕೆ ಪ್ರಾಶಿತ ಎಂದು ಹೆಸರು. ಪ್ರಾಣಿಗಳ ತೃಪ್ತಿಗಾಗಿ ಅನ್ನವನ್ನು ದಾನ ಮಾಡುವುದಕ್ಕೆ ಬಲಿದಾನ ಎಂದು ಹೆಸರು. ಈ ಐದು ಯಜ್ಞಗಳು ಪಂಚಪಾಕ ಯಜ್ಞಗಳೆಂದು ಕರೆಯಲ್ಪಟ್ಟಿವೆ.

ಕೇಚಿತ್ ಪಂಚ ಮಹಾಯಜ್ಞಾನ್ ಪಾಕಯಜ್ಞಾನ್ ಪ್ರಚಕ್ಷತೇ ।
ಅಪರೇ ಬ್ರಹ್ಮಯಜ್ಞಾದೀನ್ ಮಹಾಯಜ್ಞವಿದೋ ವಿದುಃ ॥೧೬॥

ಕೆಲವು ವಿದ್ವಾಂಸರು ಮಹಾಯಜ್ಞಾದಿಗಳನ್ನು ಪಾಕಯಜ್ಞ ಎಂದು ಕರೆಯುತ್ತಾರೆ. ಇನ್ನು ಕೆಲವು ವಿದ್ವಾಂಸರು ಬ್ರಹ್ಮಯಜ್ಞವೇ ಮೊದಲಾದವುಗಳಿಗೆ ಪಂಚಮಹಾ ಯಜ್ಞಗಳೆಂದು ಕರೆಯುತ್ತಾರೆ.

ಸರ್ವ ಏತೇ ಮಹಾಯಜ್ಞಾಃ ಸರ್ವಥಾ ಪರಿಕೀರ್ತಿತಾಃ ।
ಬುಭುಕ್ಷಿತಾನ್ ಬ್ರಾಹ್ಮಣಾಂಸ್ತು ಯಥಾಶಕ್ತಿ ನ ಹಾಪಯೇತ್ ॥೧೭॥

ಇದೆಲ್ಲವೂ ಎಲ್ಲ ರೀತಿಯಿಂದಲೂ ಮಹಾಯಜ್ಞಗಳೆಂದೇ ಕರೆಸಿಕೊಳ್ಳುತ್ತದೆ. ಹಸಿದು ಬಂದ ಬ್ರಾಹ್ಮಣರನ್ನು ಯಥಾಶಕ್ತಿ ತೃಪ್ತಿಪಡಿಸಬೇಕೇ ಹೊರತು ಎಂದಿಗೂ ನಿರಾಶರನ್ನಾಗಿ ಕಳುಹಿಸಬಾರದು.

ಅಹನ್ಯಹನಿ ಯೇ ತ್ವೇತಾನ್ ಅಕೃತ್ವಾ ಭುಂಜತೇ ಸ್ವಯಮ್ ।
ಕೇವಲಂ ಮಲಮಶ್ನಂತಿ ತೇ ನರಾ ನ ಚ ಸಂಶಯಃ ॥೧೮॥

ಆದ್ದರಿಂದ ವಿದ್ವಾಂಸನಾದ ಬ್ರಾಹ್ಮಣನು ಪ್ರತಿದಿನವೂ ಸ್ನಾನ ಮಾಡಿ ಪಂಚಮಹಾಯಜ್ಞಗಳನ್ನು ಅನುಷ್ಠಾನ ಮಾಡಬೇಕು. ಇವುಗಳನ್ನು ಆಚರಿಸದೆ ಊಟ ಮಾಡುವ ಬ್ರಾಹ್ಮಣನು ತಿನ್ನುವ ಅನ್ನವು ಮಲ ಸಮಾನವಾಗಿ ಮಲವನ್ನೇ ತಿಂದಂತಾಗುತ್ತದೆ.

ತಸ್ಮಾತ್ ಸ್ನಾತ್ವಾ ದ್ವಿಜೋ ವಿದ್ವಾನ್ ಕುರ್ಯಾದೇತಾನ್ ದಿನೇ ದಿನೇ ।
ಅತೋಽನ್ಯಥಾ ತು ಭುಂಜನ್ ವೈ ಪ್ರಾಯಶ್ಚಿತ್ತೀ ಭವೇದ್ ದ್ವಿಜಃ ॥೧೯॥

ಆದ್ದರಿಂದ ಸ್ನಾನವನ್ನು ಮಾಡಿ, ದೇವತೆಗಳನ್ನು ಆರಾಧಿಸಿ ಊಟ ಮಾಡಬೇಕು. ಈ ಪಂಚಮಹಾಯಜ್ಞಗಳನ್ನು ಆಚರಿಸದೆ ಊಟ ಮಾಡುವ ವ್ಯಕ್ತಿಯು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗುತ್ತದೆ.

ಯುಧಿಷ್ಠಿರಃ

ದೇವದೇವ ನಮಸ್ತೇಽಸ್ತು ತ್ವದ್ಭಕ್ತಸ್ಯ ಜನಾರ್ದನ ।
ವಕ್ತುಮರ್ಹಸಿ ದೇವೇಶ ಸ್ನಾನಸ್ಯ ಚ ವಿಧಿಂ ಮಮ ॥೨೦॥

ಯುಧಿಷ್ಠಿರ– ದೇವದೇವೇಶನೇ, ದೈತ್ಯಹಂತಕನೇ, ನಿನ್ನ ಭಕ್ತನಾದ ನನಗೆ ಸ್ನಾನದ ವಿಧಿಯನ್ನು ಹೇಳುವ ಕೃಪೆ ತೋರು.

ಶ್ರೀಭಗವಾನ್

ಶೃಣು ಪಾಂಡವ ತತ್ಸರ್ವಂ ಪವಿತ್ರಂ ಪಾಪನಾಶನಮ್ ।
ಸ್ನಾತ್ವಾ ಯೇನ ವಿಧಾನೇನ ಮುಚ್ಯಂತೇ ಕಿಲ್ಬಿಷಾದ್ ದ್ವಿಜಾಃ ॥೨೧॥

ಶ್ರೀಭಗವಾನ್– ಯುಧಿಷ್ಠಿರನೇ, ಯಾವ ವಿಧಾನದಿಂದ ಬ್ರಾಹ್ಮಣನು ಸ್ನಾನ ಮಾಡಿದರೆ ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೋ ಅಂತಹ ಪವಿತ್ರವೂ, ಪಾಪ ನಾಶಕವೂ ಆದ ಸ್ನಾನದ ವಿಧಿಯನ್ನು ಯಥಾರ್ಥವಾಗಿ ಹೇಳುತ್ತೇನೆ, ಕೇಳು.

ಮೃದಂ ಚ ಗೋಮಯಂ ಚೈವ ತಿಲಾನ್ ದರ್ಭಾಂಸ್ತಥೈವ ಚ ।
ಪುಷ್ಪಾಣ್ಯಪಿ ಯಥಾಲಾಭಮಾದಾಯ ತು ಜಲಂ ವ್ರಜೇತ್ ॥೨೨॥

ಮೃತ್ತಿಕೆ, ಸೆಗಣಿ, ಎಳ್ಳು, ದರ್ಭೆ, ಪುಷ್ಪಗಳು ಇವೇ ಮೊದಲಾದ ವಸ್ತುಗಳನ್ನು ಶಾಸ್ತ್ರದಲ್ಲಿ ಹೇಳಿದ ರೀತಿಯಲ್ಲಿ ಸ್ವೀಕರಿಸಿ ನೀರಿನ ಬಳಿ ಸಾಗಬೇಕು.

ನದ್ಯಾಂ ಸತ್ಯಾಂ ನ ಚ ಸ್ನಾಯಾದನ್ಯತ್ರ ದ್ವಿಜಸತ್ತಮಃ ।
ಸತಿ ಪ್ರಭೂತೇ ಪಯಸಿ ನಾಲ್ಪೇ ಸ್ನಾಯಾತ್ ಕದಾಚನ ॥೨೩॥

ಬ್ರಾಹ್ಮಣನು ನದಿಯಲ್ಲಿ ಸ್ನಾನ ಮಾಡಿದ ಬಳಿಕ ನಂತರ ಬೇರೆ ಎಲ್ಲಿಯೂ ಸ್ನಾನ ಮಾಡಬಾರದು. ಅಪಾರವಾದ ಜಲ ತುಂಬಿರುವ ಜಲಾಶಯವಿರುವಾಗ ಅಲ್ಪಜಲ ತುಂಬಿದ ಹಳ್ಳದಲ್ಲಿ ಸ್ನಾನ ಮಾಡಬಾರದು.

ಗತ್ವೋದಕಸಮೀಪಂ ತು ಶುಚೌ ದೇಶೇ ಮನೋರಮೇ ।
ತತೋ ಮೃದ್ಗೋಮಯಾದೀನಿ ತತ್ರಾವೇಕ್ಷ್ಯ ವಿನಿಕ್ಷಿಪೇತ್ ॥೨೪॥

ಬ್ರಾಹ್ಮಣನು ನದಿ ಅಥವಾ ಜಲಾಶಯದ ಬಳಿ ಹೋಗಿ ಶುದ್ಧವಾದ, ಮನೋಹರವಾದ ಸ್ಥಳಗಳಲ್ಲಿ ಮಣ್ಣು ಸೆಗಣಿಗಳನ್ನು ಇಡಬೇಕು.

ಬಹಿಃ ಪ್ರಕ್ಷಾಲ್ಯ ಪಾದೌ ಚ ದ್ವಿರಾಚಮ್ಯ ಪ್ರಯತ್ನತಃ ।
ಪ್ರಕ್ಷಿಣಂ ಸಮಾವೃತ್ಯ ನಮಸ್ಕುರ್ಯಾತ್ತು ತಜ್ಜಲಮ್ ॥೨೫॥

ಪಾತ್ರೆಯನ್ನು ತುಂಬಿಕೊಂಡು ಹೋಗಿ ಜಲಾಶಯದ ಹೊರಗಡೆಯೇ ಎರಡು ಕಾಲುಗಳನ್ನು ತೊಳೆದುಕೊಂಡು, ಎರಡು ಬಾರಿ ಆಚಮನ ಮಾಡಿ ಜಲಾಶಯಕ್ಕೆ ಪ್ರದಕ್ಷಿಣೆ, ನಮಸ್ಕಾರವನ್ನು ಮಾಡಬೇಕು.

ನ ಚ ಪ್ರಕ್ಷಾಲಯೇತ್ ತೀರಮದ್ಭಿರ್ವಿದ್ವಾನ್ ಕದಾಚನ ।
ನ ಚ ಪಾದೇನ ವಾ ಹನ್ಯಾದ್ಧಸ್ತೇನಾನ್ಯೇನ ತಜ್ಜಲಮ್ ॥೨೬॥

ಎಂದಿಗೂ ಮಣ್ಣಿನ ದಡವುಳ್ಳ ಸರೋವರದ ದಡವನ್ನು ನೀರಿನಿಂದ ತೊಳೆಯಬಾರದು, ಪಾದದಿಂದ ಕೆಡಿಸಬಾರದು, ಕೈಯಿಂದಲೂ ಆ ದಡವನ್ನು ತೊಳೆಯುವ ಮೂಲಕ ನೀರನ್ನು ಕದಡಬಾರದು.

ಸರ್ವದೇವಮಯಾ ಹ್ಯಾಪೋ ಮನ್ಮಯಾಃ ಪಾಂಡುನಂದನ ।
ತಸ್ಮಾತ್ ತಾಸ್ತು ನ ಹಂತವ್ಯಾಸ್ತ್ವದ್ವಿಃ ಪ್ರಕ್ಷಾಲಯೇತ್ ಸ್ಥಳಮ್ ॥೨೭॥

ಪಾಂಡವನೇ, ನೀರು ಸಮಸ್ತ ದೇವತೆಗಳ ಸ್ವರೂಪವೆನಿಸಿದೆ. ಭಗವಂತನ ಸ್ವರೂಪವೂ ಎನಿಸಿದೆ. ಆದ್ದರಿಂದ ಕೈಯಿಂದ ನೀರನ್ನು ಬಡಿಯಬಾರದು. ತೀರ ಪ್ರದೇಶದ ದೂರದ ಸ್ಥಳವನ್ನು ಆರಿಸಿಕೊಂಡು ಜಲಾಶಯದ ನೀರನ್ನು ಆ ಸ್ಥಳದಿಂದ ಶುದ್ಧೀಕರಿಸಬೇಕು.

ಕೇವಲಂ ಪ್ರಥಮಂ ಮಜ್ಜೇನ್ನಾಂಗಾನಿ ವಿಮೃಜೇದ್ ಬುಧಃ ।
ತತ್ ತೀರ್ಥಂ ಸ ಸಮಾಸಾದ್ಯ ಕುರ್ಯಾದಾಚಮನಂ ಪುನಃ ॥೨೮॥

ವಿದ್ವಾಂಸನಾದವನು ಮೊದಲು ನೀರಿನಲ್ಲಿ ಮುಳುಗಬೇಕು. ಮೈ-ಕೈಗಳನ್ನು ಉಜ್ಜಿಕೊಳ್ಳಬೇಕು. ಬಳಿಕ ಪುನಃ ಆ ತೀರ್ಥದಲ್ಲಿ ಮುಳುಗಿ ಆಚಮನವನ್ನು ಮಾಡಬೇಕು.

ಗೋಕರ್ಣಾಕೃತಿವತ್ ಕೃತ್ವಾ ಕರಂ ತ್ರಿಃ ಪ್ರಪಿಬೇಜ್ಜಲಮ್ ॥೨೯॥

ದ್ವಿಸ್ತತ್ ಪರಿಮೃಜೇದ್ ವಕ್ತ್ರಂ ಪಾದಾವಭ್ಯುಕ್ಷ್ಯ ಚಾತ್ಮನಃ ।
ಶೀರ್ಷಣ್ಯಾಂಸ್ತು ತತಃ ಪ್ರಾಣಾನ್ ಸಕೃದೇವ ತು ಸಂಸ್ಪೃಶೇತ್ ॥೩೦॥

ವಿದ್ವಾಂಸನು ತನ್ನ ಹಸ್ತವನ್ನು ಹಸುವಿನ ಕಿವಿಯ ರೂಪದಲ್ಲಿಟ್ಟುಕೊಂಡು ಅದರಿಂದ ಮೂರು ಬಾರಿ ಪ್ರಾಶನ ಮಾಡಬೇಕು. ಅನಂತರ ನೀರಿನಿಂದ ಕೂಡಿದ ಕೈಯಿಂದ ಮುಖವನ್ನು ಎರಡು ಬಾರಿ ಸ್ಪರ್ಶಿಸಬೇಕು. ಎರಡು ಪಾದಗಳ ಮೇಲೂ ಸ್ವಲ್ಪ ನೀರನ್ನು ಹಾಕಿಕೊಳ್ಳಬೇಕು.

ಬಾಹೂ ದ್ವೌ ಚ ತತಃ ಸ್ಪಷ್ಟ್ವಾ ಹೃದಯಂ ನಾಭಿಮೇವ ಚ ।
ಪ್ರತ್ಯಂಗಮುದಕಂ ಸ್ಪಷ್ಟ್ವಾ ಮೂರ್ಧಾನಂ ತು ತತಃ ಸ್ಪೃಶೇತ್ ॥೩೧॥

ಬಳಿಕ ಎರಡು ಬಾಹುಗಳನ್ನು ಮುಟ್ಟಿಕೊಳ್ಳಬೇಕು. ಕ್ರಮವಾಗಿ ಹೃದಯ, ನಾಭಿ, ಇತರ ಸ್ಥಾನಗಳನ್ನು ಸ್ಪರ್ಶಿಸಿ ಕೊನೆಗೆ ತಲೆಯನ್ನು ಮುಟ್ಟಬೇಕು.

ಆಪಃ ಪುನಂತ್ವಿತ್ಯುಕ್ತ್ವಾ ಚ ಪುನರಾಚಮನಂ ಚರೇತ್ ।
ಸೋಂಕಾರವ್ಯಾಹೃತೀರ್ವಾऽಪಿ ಸದಸಸ್ಪತಿಮಿತ್ಯೃಚಮ್ ॥೩೨॥

'ಆಪಃ ಪುನಂತು' ಎಂಬ ಮಂತ್ರವನ್ನು ಓಂಕಾರ ಸಹಿತವಾದ ವ್ಯಾಹೃತಿಗಳ ಮೂಲಕ ಹೇಳಬೇಕು ಅಥವಾ 'ಸದಸಸ್ಪತಿಮದ್ಭುತಂ' ಎಂಬ ಮಂತ್ರವನ್ನಾಗಲಿ ಹೇಳಿ ಆಚಮನ ಮಾಡಬೇಕು.

ಆಚಮ್ಯ ಮೃತ್ತಿಕಾಃ ಪ್ರಶ್ಚಾತ್ ತ್ರಿಧಾಕೃತ್ಯ ಸಮಾಲಭೇತ್ ॥೩೩॥

ಆಚಮನ ಮಾಡಿದ ಬಳಿಕ ಮೃತ್ತಿಕೆಯನ್ನು ತೆಗೆದುಕೊಂಡು ಮೂರು ಭಾಗ ಮಾಡಿ ಮೈಗೆ ಹಚ್ಚಿಕೊಳ್ಳಬೇಕು.

ಋಚೇದಂ ವಿಷ್ಣುರಿತ್ಯಂಗಮುತ್ತಮಾಧಮಮಧ್ಯಮಮ್ ।
ಆಲಭ್ಯ ವಾರುಣೈಃ ಸೂಕ್ತೈರ್ನಮಸ್ಕೃತ್ಯ ಜಲಂ ತತಃ ॥೩೪॥

'ಇದಂ ವಿಷ್ಣು ರ್ವಿಚಕ್ರಮೇ ತ್ರೇದಾ ನಿದಧೇ ಪದಂ' ಎಂಬ ಮಂತ್ರವನ್ನು ಹೇಳುತ್ತಾ ಮೃತ್ತಿಕೆಯ ಮೊದಲನೆಯ ಭಾಗವನ್ನು ಶರೀರದ ಮೇಲ್ಭಾಗಕ್ಕೂ, ಎರಡನೆಯ ಭಾಗವನ್ನು ಮಧ್ಯಭಾಗಕ್ಕೂ, ಮೂರನೆಯ ಭಾಗವನ್ನು ಕೆಳಭಾಗಕ್ಕೂ ಹಚ್ಚಿಕೊಂಡು ವರುಣಸೂಕ್ತವನ್ನು ಹೇಳುತ್ತಾ ನೀರಿಗೆ ನಮಸ್ಕರಿಸಿ ನೀರಿಗೆ ಇಳಿಯಬೇಕು.

ಸ್ರವಂತ್ಯಾಂ ಚೇತ್ ಪ್ರತಿಸ್ರೋತಃ ಪ್ರತ್ಯರ್ಕಂ ಚಾನ್ಯವಾರಿಷು ।
ಮಜ್ಜೇದೋಮಿತ್ಯುದಾಹೃತ್ಯ ನ ಚ ವಿಕ್ಷೋಭಯೇಜ್ಜಲಮ್ ॥೩೫॥

ನದಿಯಲ್ಲಿಯಾದರೆ ಪ್ರವಾಹಕ್ಕೆ ಎದುರು ನಿಂತು ಮುಳುಗಬೇಕು. ನಿಂತಿರುವ ನೀರಾಗಿದ್ದರೆ ಸೂರ್ಯನಿಗೆ ಅಭಿಮುಖವಾಗಿ ನಿಂತು ಮುಳುಗಬೇಕು. 'ಓಂ' ಎಂದು ಪ್ರಣವೋಚ್ಚಾರಣೆ ಮಾಡುತ್ತಾ ಮುಳುಗಬೇಕು. ನೀರನ್ನು ಕದಡಬಾರದು.

ಗೋಮಯಂ ಚ ತ್ರಿಧಾ ಕೃತ್ವಾ ಜಲೇ ಪೂರ್ವಂ ಸಮಾಲಭೇತ್ ।
ಸವ್ಯಾಹೃತಿಂ ಸಪ್ರಣವಾಂ ಗಾಯತ್ರೀಂ ಚ ಪುನರ್ಜಪೇತ್ ॥೩೬॥

ಬಳಿಕ ಗೋಮಯವನ್ನು ಕೈಯಲ್ಲಿಟ್ಟುಕೊಂಡು, ಮೊದಲು ನೀರಿನಲ್ಲಿ ತೊಳೆದು ಮೂರು ವಿಭಾಗ ಮಾಡಿ, ಮೃತ್ತಿಕೆಯಂತೆ ಒಂದು ಭಾಗವನ್ನು ಊರ್ಧ್ವಾಂಗಕ್ಕೂ, ಎರಡನೆಯ ಭಾಗವನ್ನು ಮಧ್ಯಾಂಗಕ್ಕೂ, ಮೂರನೆಯ ಭಾಗವನ್ನು ಸೊಂಟದಿಂದ ಕೆಳಭಾಗಕ್ಕೂ ಲೇಪಿಸಿಕೊಳ್ಳಬೇಕು. ಹೀಗೆ ಲೇಪಿಸುವಾಗ ಓಂಕಾರ ವ್ಯಾಹೃತಿ ಸಹಿತವಾದ ಗಾಯತ್ರಿಯನ್ನು ಜಪಿಸುತ್ತಿರಬೇಕು.

ಪುನರಾಚಮನಂ ಕೃತ್ವಾ ಮದ್ಗತೇನಾಂತರಾತ್ಮನಾ ।
ಆಪೋಹಿಷ್ಠೇತಿ ತಿಸೃಭಿರ್ದರ್ಭಪೂತೇನ ವಾರಿಣಾ ॥೩೭॥

ತಥಾ ತರತ್ಸಮಂದೀಭಿಃ ಸಿಂಚೀಚ್ಚತಸೃಭಿಃ ಕ್ರಮಾತ್ ॥೩೮॥

ಪುನಃ ಆಚಮನ ಮಾಡಿ, ನನ್ನಲ್ಲಿಯೇ ಮನಸ್ಸನ್ನು ದೃಢಗೊಳಿಸಿ 'ಆಪೋಹಿಷ್ಠಾ ಮಯೋ ಭುವಃ' ಮುಂತಾದ ಮೂರು ಋಕ್ಕುಗಳಿಂದ ದರ್ಭೆಯಿಂದ ಪವಿತ್ರವಾದ ನೀರಿನಿಂದ ಅದೇ ರೀತಿ ' ತರತ್ಸಮಂದೀ ಧಾವತಿ' ಎಂಬ ನಾಲ್ಕು ಋಕ್ಕುಗಳಿಂದ ಕೂಡಿದ ಮಂತ್ರದಿಂದ ಕ್ರಮವಾಗಿ ಸ್ನಾನ ಮಾಡಬೇಕು.

ಗೋಸೂಕ್ತೇನಾಶ್ವಸೂಕ್ತೇನ ಶುದ್ಧವರ್ಣೇ(ರ್ಗೇ)ನ ಚಾಪ್ಯಥ ।
ವೈಷ್ಣವೈರ್ವಾರುಣೈಃ ಸೂಕ್ತೈಃ ಸಾವಿತ್ರೈರಿಂದ್ರದೇವತೈಃ ॥೩೯॥

ಗೋಸೂಕ್ತ, ಅಶ್ವಸೂಕ್ತ, ಶುದ್ಧವರ್ಣ ಎನಿಸಿದ ಅಜಾದಿ ಐವತ್ತೊಂದು ಅಕ್ಷರಗಳು, ವೈಷ್ಣವಸೂಕ್ತ, ವಾರುಣಸೂಕ್ತ, ಸಾವಿತ್ರ ಸೂಕ್ತ, ಐಂದ್ರ ಸೂಕ್ತ ಇವುಗಳನ್ನು ಕ್ರಮವಾಗಿ ಪಠಿಸುತ್ತಾ ಸ್ನಾನ ಮಾಡಬೇಕು.

ವಾಮದೈವ್ಯೇನ ಚಾತ್ಮಾನಮನ್ಯೈರ್ಮನ್ಮಯಸಾಮಭಿಃ ।
ಸ್ಥಿತ್ವಾಽಂತಃಸಲಿಲೇ ಸೂಕ್ತಂ ಜಪೇದ್ವಾಽಘಮರ್ಷಣಮ್ ॥೪೦॥

ವಾಮದೈವ ಸೂಕ್ತದಿಂದ, ನನಗೆ ಸಂಬಂಧಿಸಿದ ಸಾಮಗಾನಗಳಿಂದ ನೀರಿನ ಒಳಗೆ ನಿಂತು ಮಾರ್ಜನ ಮಾಡಿಕೊಳ್ಳುತ್ತಾ, ನೀರಿನಲ್ಲಿಯೇ ಮುಳುಗಿ ಅಘಮರ್ಷಣ ಸೂಕ್ತವನ್ನು ಜಪಿಸಬೇಕು.

ಸವ್ಯಾಹೃತೀಕಾಂ ಸಪ್ರಣವಾಂ ಗಾಯತ್ರೀಂ ವಾ ತತೋ ಜಪೇತ್ ।
ಆಶ್ವಾಸಮುಕ್ತಾನ್ ಪ್ರಣವಂ ಜಪೇದ್ ವಾ ಮಾಮನುಸ್ಮರನ್ ॥೪೧॥

ಪ್ರಣವ, ವ್ಯಾಹೃತಿಗಳಿಂದ ಗಾಯತ್ರಿಯನ್ನು ಜಪಿಸಬೇಕು. ಎಷ್ಟು ಹೊತ್ತು ಉಸಿರುಕಟ್ಟಿಕೊಂಡು ಇರಲು ಸಾಧ್ಯವೋ ಅಷ್ಟು ಹೊತ್ತಿನವರೆಗೆ ನೀರಿನಲ್ಲಿ ಮುಳುಗಿ ಕುಳಿತು, ನನ್ನನ್ನೇ ಸ್ಮರಿಸುತ್ತಾ ಸೂಕ್ತಗಳನ್ನಾಗಲಿ, ಪ್ರಣವ ಮಂತ್ರವನ್ನಾಗಲಿ ಜಪಿಸುತ್ತಿರಬೇಕು.

ಉತ್ಪ್ಲುತ್ಯ ತೀರಮಾಸಾದ್ಯ ಧೌತೇ ಶುಕ್ಲೇ ಚ ವಾಸಸೀ ।
ಶುದ್ಧೇ ಚಾಚ್ಛಾದಯೀತ್ ಕಕ್ಷೇಽನುಕುರ್ಯಾತ್ ಪರಿಪಾಶಕಮ್ ॥೪೨॥

ಪುನಃ ಮುಳುಗಿ ಸ್ನಾನ ಮಾಡಿ, ತೀರಕ್ಕೆ ಬಂದು ಶುದ್ಧವಾಗಿರುವ ವಸ್ತ್ರವನ್ನು ಉಟ್ಟುಕೊಂಡು, ಮತ್ತೊಂದು ವಸ್ತ್ರವನ್ನು ಹೊದ್ದುಕೊಳ್ಳಬೇಕು. ಉಡುವ ವಸ್ತ್ರಕ್ಕೆ ಅನುಕೂಲವಾಗುವಂತೆ ಸುತ್ತ ಕಟಿಸೂತ್ರವನ್ನು ಧಾರಣೆ ಮಾಡಬೇಕು.

ಪಾಶೇನ ಬದ್ಧ್ವಾ ಕಕ್ಷೇ ಯತ್ ಕುರುತೇ ಕರ್ಮ ವೈದಿಕಮ್ ।
ರಾಕ್ಷಸಾ ದಾನವಾ ದೈತ್ಯಾಸ್ತದ್ ವಿಲುಂಪಂತಿ ಹರ್ಷಿತಾಃ ॥೪೩॥

ತಸ್ಮಾತ್ ಸರ್ವಪ್ರಯತ್ನೇನ ಕಕ್ಷಪಾಶೇ ನ ಧಾರಯೇತ್ ॥೪೪॥

ತೋಳುಗಳ ಕೆಳಭಾಗದಲ್ಲಿ ಹಗ್ಗವನ್ನು ಬಿಗಿಯುವಂತೆ ಹೊದಿಯುವ ವಸ್ತ್ರವನ್ನು ಹೊದ್ದುಕೊಂಡು ಮಾಡುವ ವೈದಿಕಕರ್ಮಗಳ ಫಲವನ್ನು ರಾಕ್ಷಸರು, ದಾನವರು, ದೈತ್ಯರು ಸಂತೋಷದಿಂದ ಅಪಹರಿಸುತ್ತಾರೆ. ಆದ್ದರಿಂದ ಯಾವುದೇ ಕಾರಣದಿಂದಲೂ ಹೊದೆಯುವ ವಸ್ತ್ರವನ್ನು ಕಂಕಳುಗಳ ಕೆಳಭಾಗದಲ್ಲಿ ಹಗ್ಗದಂತೆ ಬಿಗಿದುಕೊಳ್ಳಬಾರದು.

ತತಃ ಪ್ರಕ್ಷಾಲ್ಯ ಪಾದೌ ದ್ವೌ ಹಸ್ತೌ ಚೈವ ಮೃದಾ ಶನೈಃ ।
ಆಚಮ್ಯ ಪುನರಾಚಾಮೇತ್ ತತಃ ಸಾವಿತ್ರಿಯಾ ದ್ವಿಜಃ ॥೪೫॥

ಬ್ರಾಹ್ಮಣನು ವಸ್ತ್ರಗಳನ್ನು ಧರಿಸಿದ ಬಳಿಕ ಆಚಮನವನ್ನು ಮಾಡಿ, ಕೈ-ಕಾಲುಗಳನ್ನು ಮೃತ್ತಿಕೆಯಿಂದ ತೊಳೆದುಕೊಂಡು, ಪುನಃ ಗಾಯತ್ರಿಯನ್ನು ಜಪಿಸುತ್ತಾ ಆಚಮನ ಮಾಡಬೇಕು.

ಪ್ರಾಙ್ಮುಖೋದಙ್ಮುಖೋ ವಾಽಪಿ ಧ್ಯಾಯನ್ ವೇದಾನ್ ಸಮಾಹಿತಃ ॥

ಪೂರ್ವಾಭಿಮುಖವಾಗಿಯಾಗಲಿ, ಉತ್ತರಾಭಿಮುಖವಾಗಿಯಾಗಲಿ ಕುಳಿತು ಏಕಾಗ್ರಚಿತ್ತದಿಂದ ಧ್ಯಾನ ಮಾಡಬೇಕು.

ಜಲೇ ಜಲಗತಃ ಶುದ್ಧಃ ಸ್ಥಲ ಏವ ಸ್ಥಲೇ ಸ್ಥಿತಃ ।
ಉಭಯತ್ರ ಸ್ಥಿತಸ್ತಸ್ಮಾದ್ ಆಚಾಮೇದಾತ್ಮಶುದ್ಧಯೇ ॥೪೭॥

ನೀರಿನಲ್ಲಿ ನಿಂತಿರುವ ಮನುಷ್ಯನು ಅಲ್ಲಿಯೇ ಆಚಮನ ಮಾಡಿದರೂ ಶುದ್ಧನಾಗುತ್ತಾನೆ. ದಂಡೆಯ ಮೇಲೆ ಕುಳಿತ ಮನುಷ್ಯನು ಅಲ್ಲಿಯೇ ಆಚಮನ ಮಾಡಿದರೂ ಶುದ್ಧನಾಗುತ್ತಾನೆ. ಒಟ್ಟಿನಲ್ಲಿ ಶುದ್ಧಿಗಾಗಿ ಆಚಮನವನ್ನು ಮಾಡಬೇಕು.

ದರ್ಭೇಷು ದರ್ಭಪಾಣಿಃ ಸನ್ ಪ್ರಾಙ್ಮುಖಃ ಸುಸಮಾಹಿತಃ ।
ಪ್ರಾಣಾಯಾಮಾಂಸ್ತತಃ ಕುರ್ಯಾತ್ ಮದ್ಗತೇನಾಂತರಾತ್ಮನಾ ॥೪೮॥

ದರ್ಭೆಯನ್ನು ಕೈಯಲ್ಲಿ ಧರಿಸಿ, ದರ್ಭಾಸನದಲ್ಲಿ ಪೂರ್ವಾಭಿಮುಖವಾಗಿ ಏಕಾಗ್ರಚಿತ್ತದಿಂದ ಕುಳಿತು ನನ್ನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ, ಪ್ರಾಣಾಯಾಮವನ್ನು ಮಾಡಬೇಕು.

ಸಹಸ್ರಕೃತ್ವಃ ಸಾವಿತ್ರೀಂ ಶತಕೃತ್ವಸ್ತು ವಾ ಜಪೇತ್ ॥೪೯॥

ಗಾಯತ್ರಿ ಮಂತ್ರವನ್ನು ಒಂದು ಸಾವಿರ ಬಾರಿ ಅಥವಾ ನೂರು ಬಾರಿ ಜಪಿಸಬೇಕು.

ಸಮಾಪ್ತೇ ತು ಜಪೇ ತಸ್ಮಿನ್ ಸಾವಿತ್ರ್ಯಾ ಚಾಭಿಮಂತ್ರ್ಯ ಚ ।
ಮಂದೇಹಾನಾಂ ವಿನಾಶಾಯ ರಕ್ಷಸಾಂ ವಿಕ್ಷಿಪೇಜ್ಜಲಮ್ ॥೫೦॥

ಮಂದೇಹವೆಂಬ ರಾಕ್ಷಸರನ್ನು ನಾಶಮಾಡುವ ದೃಷ್ಟಿಯಿಂದ ಗಾಯತ್ರಿ ಮಂತ್ರದಿಂದ ಅಭಿಮಂತ್ರಿತವಾದ ನೀರನ್ನು ಸೂರ್ಯನಿಗೆ ಅರ್ಘ್ಯ ನೀಡಬೇಕು. ಮಂದ ಎಂಬ ದಿರ್ಘಿಪದಲ್ಲಿ ಯಥೇಷ್ಟವಾಗಿ ಸಂಚರಿಸುವ ರಾಕ್ಷಸರನ್ನು ನಾಶಮಾಡುವ ದೃಷ್ಟಿಯಿಂದ ನೀರನ್ನು ವಜ್ರಾಯುಧ ಎಂದು ಭಾವಿಸಿ ಅರ್ಘ್ಯಕೊಡಬೇಕು.

ಉದ್ವರ್ಗೋऽಸೀತ್ಯಥಾಚಾಂತಃ ಪ್ರಾಯಶ್ಚಿತ್ತಜಲಂ ಕ್ಷಿಪೇತ್ ॥೫೧॥

ಅನಂತರ ಆಚಮನವನ್ನು ಮಾಡಿ ರಾಕ್ಷಸ ವರ್ಗವು ಸಂವೃತವಾಗಿದೆ ಎಂಬ 'ಉದ್ವರ್ಗೋ೯ऽಸಿ' ಎಂಬ ಮಂತ್ರವನ್ನು ಪಠಿಸುತ್ತಾ ಪ್ರಾಯಶ್ಚಿತ್ತಾರ್ಘ್ಯವನ್ನು ನೀಡಬೇಕು.

ಅಥಾದಾಯ ಸುಪುಷ್ಪಾಣಿ ತೋಯಾನ್ಯಂಜಲಿನಾ ದ್ವಿಜಃ ।
ಪ್ರಕ್ಷಿಪ್ಯ ಪ್ರತಿಸೂರ್ಯಂ ಚ ವ್ಯೋಮಮುದ್ರಾಂ ಪ್ರಕಲ್ಪಯೇತ್ ॥೫೨॥

ಬಳಿಕ ಬ್ರಾಹ್ಮಣನು ಬೊಗಸೆಯಲ್ಲಿ ನೀರನ್ನು, ಸುಗಂಧಮಯವಾದ ಹೂವನ್ನು ಇಟ್ಟುಕೊಂಡು ಸೂರ್ಯನ ಕಡೆ ಎರಚಬೇಕು. ವ್ಯೋಮಮುದ್ರೆಯನ್ನು ಸೂರ್ಯನಿಗೆ ತೋರಿಸಬೇಕು.

ತತೋ ದ್ವಾದಶಕೃತ್ವಸ್ತು ಸೂರ್ಯಸ್ಯೈಕಾಕ್ಷರಂ ಜಪೇತ್ ।
ತತಃ ಷಡಕ್ಷರಾದೀನಿ ತ್ರಿಃ ಕೃತ್ವಃ ಪರಿವರ್ತಯೇತ್ ॥೫೩॥

ಬಳಿಕ ಸೂರ್ಯನ ಏಕಾಕ್ಷರ ಮಂತ್ರವನ್ನು ಹನ್ನೆರಡು ಬಾರಿ ಜಪಿಸಬೇಕು. ಷಡಕ್ಷರ ಮಂತ್ರಗಳನ್ನು ಆರು ಬಾರಿ ಜಪಿಸಬೇಕು.

ವ್ಯಾಖ್ಯಾನ ವಿಶೇಷ– ಸೂರ್ಯನ ಏಕಾಕ್ಷರ ಮಂತ್ರವೆಂದರೆ 'ಓಂ'ಕಾರವೇ ಆಗಿದೆ. **'ಬ್ರಹ್ಮಭೂರ್ಭುವಃ ಸ್ವರೋಂ'** ಎಂಬುದು ಷಡಕ್ಷರ ಮಂತ್ರವೆಂದು ಕರೆಸಿಕೊಂಡಿದೆ. **'ಓಂ ಆಪೋಜ್ಯೋತಿರಸೋ' 'ಅಮೃತಂ ಆಸಾವಾದಿತ್ಯೋ ಬ್ರಹ್ಮ' 'ಬ್ರಹ್ಮಭೂರ್ಭುವಃ ಸ್ವರೋಂ'** ಎಂಬ ಮೂರು ಮಂತ್ರಗಳನ್ನು ಜಪಿಸುತ್ತಾ ಪ್ರದಕ್ಷಿಣೆಯನ್ನು ಮಾಡಬೇಕು.

ಪ್ರದಕ್ಷಿಣಂ ಪರಾಮೃಜ್ಯ ಮುದ್ರಯಾ ಸ್ವಮುಖಂ ತಯಾ ।
ಊರ್ಧ್ವಬಾಹುಸ್ತತೋ ಭೂತ್ವಾ ಸೂರ್ಯಮೀಕ್ಷೇತ್ ಸಮಾಹಿತಃ ॥೫೪॥

ತನ್ಮಂಡಲಸ್ಥಂ ಮಾಂ ಧ್ಯಾಯೇತ್ ತೇಜೋಮೂರ್ತಿಂ ಚತುರ್ಭುಜಮ್ ।
ಉದುತ್ಯಂ ಚ ಜಪೇನ್ಮಂತ್ರಂ ಚಿತ್ರಂ ತಚ್ಚಕ್ಷುರಿತ್ಯಪಿ ॥೫೫॥

ಯೋಮಮುದ್ರೆಯನ್ನು ತೋರಿಸುತ್ತಾ ಪ್ರದಕ್ಷಿಣವಾಗಿ ತಿರುಗಿ ತನ್ನ ಮುಖವನ್ನು ಮುದ್ರೆಯಿಂದ ಮುಚ್ಚಿಕೊಳ್ಳಬೇಕು. ಬಳಿಕ ಎರಡು ಭುಜಗಳನ್ನು ಮೇಲಕ್ಕೆತ್ತಿಕೊಂಡು ಏಕಾಗ್ರಚಿತ್ತನಾಗಿ ಸೂರ್ಯನ ಕಡೆ ನೋಡುತ್ತಾ ಸೂರ್ಯಮಂಡಲದ ಮಧ್ಯದಲ್ಲಿರುವ

ಪೂರ್ವಾಭಿಮುಖವಾಗಿಯಾಗಲಿ, ಉತ್ತರಾಭಿಮುಖವಾಗಿಯಾಗಲಿ ಕುಳಿತು ಏಕಾಗ್ರಚಿತ್ತದಿಂದ ಧ್ಯಾನ ಮಾಡಬೇಕು.

ಜಲೇ ಜಲಗತಃ ಶುದ್ಧಃ ಸ್ಥಲ ಏವ ಸ್ಥಲೇ ಸ್ಥಿತಃ ।
ಉಭಯತ್ರ ಸ್ಥಿತಸ್ತಸ್ಮಾದ್ ಆಚಾಮೇದಾತ್ಮಶುದ್ಧಯೇ ॥೪೭॥

ನೀರಿನಲ್ಲಿ ನಿಂತಿರುವ ಮನುಷ್ಯನು ಅಲ್ಲಿಯೇ ಆಚಮನ ಮಾಡಿದರೂ ಶುದ್ಧನಾಗುತ್ತಾನೆ. ದಂಡೆಯ ಮೇಲೆ ಕುಳಿತ ಮನುಷ್ಯನು ಅಲ್ಲಿಯೇ ಆಚಮನ ಮಾಡಿದರೂ ಶುದ್ಧನಾಗುತ್ತಾನೆ. ಒಟ್ಟಿನಲ್ಲಿ ಶುದ್ಧಿಗಾಗಿ ಆಚಮನವನ್ನು ಮಾಡಬೇಕು.

ದರ್ಭೇಷು ದರ್ಭಪಾಣಿಃ ಸನ್ ಪ್ರಾಙ್ಮುಖಃ ಸುಸಮಾಹಿತಃ ।
ಪ್ರಾಣಾಯಾಮಾಂಸ್ತತಃ ಕುರ್ಯಾತ್ ಮದ್ಗತೇನಾಂತರಾತ್ಮನಾ ॥೪೮॥

ದರ್ಭೆಯನ್ನು ಕೈಯಲ್ಲಿ ಧರಿಸಿ, ದರ್ಭಾಸನದಲ್ಲಿ ಪೂರ್ವಾಭಿಮುಖವಾಗಿ ಏಕಾಗ್ರಚಿತ್ತದಿಂದ ಕುಳಿತು ನನ್ನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ, ಪ್ರಾಣಾಯಾಮವನ್ನು ಮಾಡಬೇಕು.

ಸಹಸ್ರಕೃತ್ವಃ ಸಾವಿತ್ರೀಂ ಶತಕೃತ್ವಸ್ತು ವಾ ಜಪೇತ್ ॥೪೯॥

ಗಾಯತ್ರಿ ಮಂತ್ರವನ್ನು ಒಂದು ಸಾವಿರ ಬಾರಿ ಅಥವಾ ನೂರು ಬಾರಿ ಜಪಿಸಬೇಕು.

ಸಮಾಪ್ತೇ ತು ಜಪೇ ತಸ್ಮಿನ್ ಸಾವಿತ್ರ್ಯಾ ಚಾಭಿಮಂತ್ರ್ಯ ಚ ।
ಮಂದೇಹಾನಾಂ ವಿನಾಶಾಯ ರಕ್ಷಸಾಂ ವಿಕ್ಷಿಪೇಜ್ಜಲಮ್ ॥೫೦॥

ಮಂದೇಹವೆಂಬ ರಾಕ್ಷಸರನ್ನು ನಾಶಮಾಡುವ ದೃಷ್ಟಿಯಿಂದ ಗಾಯತ್ರಿ ಮಂತ್ರದಿಂದ ಅಭಿಮಂತ್ರಿತವಾದ ನೀರನ್ನು ಸೂರ್ಯನಿಗೆ ಅರ್ಘ್ಯ ನೀಡಬೇಕು. ಮಂದ ಎಂಬ ದಿರ್ಘಿಪದಲ್ಲಿ ಯಥೇಷ್ಟವಾಗಿ ಸಂಚರಿಸುವ ರಾಕ್ಷಸರನ್ನು ನಾಶಮಾಡುವ ದೃಷ್ಟಿಯಿಂದ ನೀರನ್ನು ವಜ್ರಾಯುಧ ಎಂದು ಭಾವಿಸಿ ಅರ್ಘ್ಯಕೊಡಬೇಕು.

ಉದ್ವರ್ಗೋऽಸೀತ್ಯಥಾಚಾಂತಃ ಪ್ರಾಯಶ್ಚಿತ್ತಜಲಂ ಕ್ಷಿಪೇತ್ ॥೫೧॥

ಅನಂತರ ಆಚಮನವನ್ನು ಮಾಡಿ ರಾಕ್ಷಸ ವರ್ಗವು ಸಂವೃತವಾಗಿದೆ ಎಂಬ 'ಉದ್ವರ್ಗೋ೯ऽಸಿ' ಎಂಬ ಮಂತ್ರವನ್ನು ಪಠಿಸುತ್ತಾ ಪ್ರಾಯಶ್ಚಿತ್ತಾರ್ಘ್ಯವನ್ನು ನೀಡಬೇಕು.

ಅಥಾದಾಯ ಸುಪುಷ್ಪಾಣಿ ತೋಯಾನ್ಯಂಜಲಿನಾ ದ್ವಿಜಃ ।
ಪ್ರಕ್ಷಿಪ್ಯ ಪ್ರತಿಸೂರ್ಯಂ ಚ ವ್ಯೋಮಮುದ್ರಾಂ ಪ್ರಕಲ್ಪಯೇತ್ ॥೫೨॥

ಬಳಿಕ ಬ್ರಾಹ್ಮಣನು ಬೊಗಸೆಯಲ್ಲಿ ನೀರನ್ನು, ಸುಗಂಧಮಯವಾದ ಹೂವನ್ನು ಇಟ್ಟುಕೊಂಡು ಸೂರ್ಯನ ಕಡೆ ಎರಚಬೇಕು. ವ್ಯೋಮಮುದ್ರೆಯನ್ನು ಸೂರ್ಯನಿಗೆ ತೋರಿಸಬೇಕು.

ತತೋ ದ್ವಾದಶಕೃತ್ವಸ್ತು ಸೂರ್ಯಸ್ಯೈಕಾಕ್ಷರಂ ಜಪೇತ್ ।
ತತಃ ಷಡಕ್ಷರಾದೀನಿ ತ್ರಿಃ ಕೃತ್ವಃ ಪರಿವರ್ತಯೇತ್ ॥೫೩॥

ಬಳಿಕ ಸೂರ್ಯನ ಏಕಾಕ್ಷರ ಮಂತ್ರವನ್ನು ಹನ್ನೆರಡು ಬಾರಿ ಜಪಿಸಬೇಕು. ಷಡಕ್ಷರ ಮಂತ್ರಗಳನ್ನು ಆರು ಬಾರಿ ಜಪಿಸಬೇಕು.

ವ್ಯಾಖ್ಯಾನ ವಿಶೇಷ– ಸೂರ್ಯನ ಏಕಾಕ್ಷರ ಮಂತ್ರವೆಂದರೆ 'ಓಂ'ಕಾರವೇ ಆಗಿದೆ. 'ಬ್ರಹ್ಮಭೂರ್ಭುವಃ ಸ್ವರೋಂ' ಎಂಬುದು ಷಡಕ್ಷರ ಮಂತ್ರವೆಂದು ಕರೆಸಿಕೊಂಡಿದೆ. 'ಓಂ ಆಪೋಜ್ಯೋತಿರಸೋ' 'ಅಮೃತಂ ಆಸಾವಾದಿತ್ಯೋ ಬ್ರಹ್ಮ' 'ಬ್ರಹ್ಮಭೂರ್ಭುವಃ ಸ್ವರೋಂ' ಎಂಬ ಮೂರು ಮಂತ್ರಗಳನ್ನು ಜಪಿಸುತ್ತಾ ಪ್ರದಕ್ಷಿಣೆಯನ್ನು ಮಾಡಬೇಕು.

ಪ್ರದಕ್ಷಿಣಂ ಪರಾಮೃಜ್ಯ ಮುದ್ರಯಾ ಸ್ವಮುಖಂ ತಯಾ ।
ಊರ್ಧ್ವಬಾಹುಸ್ತತೋ ಭೂತ್ವಾ ಸೂರ್ಯಮೀಕ್ಷೇತ್ ಸಮಾಹಿತಃ ॥೫೪॥

ತನ್ಮಂಡಲಸ್ಥಂ ಮಾಂ ಧ್ಯಾಯೇತ್ ತೇಜೋಮೂರ್ತಿಂ ಚತುರ್ಭುಜಮ್ ।
ಉದುತ್ಯಂ ಚ ಜಪೇನ್ಮಂತ್ರಂ ಚಿತ್ರಂ ತಚ್ಚಕ್ಷುರಿತ್ಯಪಿ ॥೫೫॥

ಯೋಮಮುದ್ರೆಯನ್ನು ತೋರಿಸುತ್ತಾ ಪ್ರದಕ್ಷಿಣವಾಗಿ ತಿರುಗಿ ತನ್ನ ಮುಖವನ್ನು ಮುದ್ರೆಯಿಂದ ಮುಚ್ಚಿಕೊಳ್ಳಬೇಕು. ಬಳಿಕ ಎರಡು ಭುಜಗಳನ್ನು ಮೇಲಕ್ಕೆತ್ತಿಕೊಂಡು ಏಕಾಗ್ರಚಿತ್ತನಾಗಿ ಸೂರ್ಯನ ಕಡೆ ನೋಡುತ್ತಾ ಸೂರ್ಯಮಂಡಲದ ಮಧ್ಯದಲ್ಲಿರುವ

ಭಗವಂತನ ನಾಲ್ಕು ಭುಜಗಳಿಂದ ಕೂಡಿದ ತೇಜೋರೂಪವಾಗಿರುವ ನಾರಾಯಣ ರೂಪವನ್ನು ಧ್ಯಾನಿಸಬೇಕು. 'ಉದುತ್ಯಂ ಚಿತ್ರಂದೇವಾನಾಂ ತಚ್ಚಕ್ಷುಃ' ಎಂಬ ಮಂತ್ರವನ್ನು ಜಪಿಸಬೇಕು.

ಸಾವಿತ್ರೀಂ ಚ ಯಥಾಶಕ್ತಿ ಜಪ್ತ್ವಾ ಸೂಕ್ತಂ ಚ ಮಾಮಕಮ್ ।
ಮನ್ಮಯಾನಿ ಚ ಸಾಮಾನಿ ಪುರುಷವ್ರತಮೇವ ಚ ॥೫೬॥

ಯಥಾಶಕ್ತಿ ಗಾಯತ್ರಿಮಂತ್ರವನ್ನು, ನನಗೆ ಸಂಬಂಧಿಸಿದ ವಿಷ್ಣು ಸೂಕ್ತಗಳನ್ನು, ಸಾಮಗಳನ್ನು, ಪುರುಷಸೂಕ್ತಗಳನ್ನು ಜಪಿಸಬೇಕು.

ತತಶ್ಚಾಲೋಕಯೇದರ್ಕಂ ಹಂಸಃಶುಚಿಷದಿತ್ಯೃಚಾ ॥೫೭॥

ಬಳಿಕ 'ಹಂಸಃ ಶುಚಿಷತ್' ಎಂಬ ಮಂತ್ರವನ್ನು ಹೇಳಿಕೊಂಡು ಸೂರ್ಯನ ಕಡೆ ನೋಡಬೇಕು.

ಪ್ರದಕ್ಷಿಣಂ ಸಮಾವೃತ್ಯ ನಮಸ್ಕೃತ್ಯ ದಿವಾಕರಮ್ ।
ತತಸ್ತು ತರ್ಪಯೇದದ್ಭಿರ್ಮಾಂ ಬ್ರಹ್ಮಾಣಂ ಚ ಶಂಕರಮ್ ॥೫೮॥

ಪ್ರದಕ್ಷಿಣಾಪೂರ್ವಕವಾಗಿ ನಮಸ್ಕರಿಸುತ್ತಾ, ಸೂರ್ಯನನ್ನು ನೀರಿನ ಮೂಲಕ ತೃಪ್ತಿಪಡಿಸಬೇಕು. ಅಂತರ್ಯಾಮಿಯಾದ ಚತುರ್ಮುಖ ಬ್ರಹ್ಮನನ್ನು, ಶಂಕರನನ್ನು ಸಂತೋಷಪಡಿಸಬೇಕು.

ಪ್ರಜಾಪತಿಂ ಚ ದೇವಾಂಶ್ಚ ತಥಾ ದೇವಮುನೀನಪಿ ।
ಸಾಂಗಾನಪಿ ತಥಾ ವೇದಾನಿತಿಹಾಸಾನ್ ಕ್ರತೂಂಸ್ತಥಾ ॥೫೯॥

ಪುರಾಣಾನಿ ಚ ದಿವ್ಯಾನಿ ಕುಲಾನ್ಯಪ್ಸರಸಾಂ ತಥಾ ।
ಋತೂನ್ ಸಂವತ್ಸರಾಂಶ್ಚೈವ ಕಲಾನ್ ಕಾಲಾತ್ಮಕಂ ತಥಾ ॥೬೦॥

ಭೂತಗ್ರಾಮಾಂಶ್ಚ ಭೂತಾನಿ ಸರಿತಃ ಸಾಗರಾಂಸ್ತಥಾ ।
ಶೈಲಾನ್ ಶೈಲಸ್ಥಿತಾನ್ ದೇವಾನ್ ಓಷಧೀಃ ಸವನಸ್ಪತೀಃ ॥೬೧॥

ತರ್ಪಯೇದುಪವೀತೀ ತು ಪ್ರತ್ಯೇಕಂ ತೃಪ್ಯತಾಮಿತಿ ॥೬೨॥

ಬ್ರಹ್ಮನಿಗೂ, ದೇವತೆಗಳಿಗೂ, ದೇವಮುನಿಗಳಿಗೂ, ಸಾಂಗವಾದ ವೇದಗಳಿಗೂ, ಇತಿಹಾಸಗಳಿಗೂ, ಕ್ರತುಗಳಿಗೂ, ಪುರಾಣಗಳಿಗೂ, ಅಪ್ಸರೆಯರಿಗೂ, ಋತುಗಳಿಗೂ, ಕಲಾ ಕಾಲಾತ್ಮಕವಾದ ಸಂವತ್ಸರಗಳಿಗೂ, ಭೂತಗಳಿಗೂ, ನದಿಗಳಿಗೂ, ಸಾಗರಗಳಿಗೂ, ಪರ್ವತಗಳಿಗೂ, ಪರ್ವತದಲ್ಲಿರುವ ದೇವತೆಗಳಿಗೂ, ಓಷಧಿ ವನಸ್ಪತಿಗಳಿಗೂ ಉಪವೀತವಾಗಿ ತರ್ಪಣವನ್ನು ನೀಡಬೇಕು. ಬಲಗೈಯಲ್ಲಿ ಯಜ್ಞೋಪವೀತವನ್ನು ಹಿಡಿದುಕೊಂಡು 'ತೃಪ್ಯತಾಂ' ಎಂದು ಹೇಳುತ್ತಾ ಅರ್ಘ್ಯಕೊಡಬೇಕು.

ಅನ್ವಾರಭ್ಯ ಚ ಸವ್ಯೇನ ಪಾಣಿನಾ ದಕ್ಷಿಣೇನ ತು ।
ನಿವೀತೀ ತರ್ಪಯೇತ್ ಪಶ್ಚಾದ್ ಋಷೀನ್ ಮಂತ್ರಕೃತಸ್ತಥಾ ॥೬೩॥

ಎಡಗೈಯಿಂದ ಯಜ್ಞೋಪವೀತವನ್ನು ಮಾಲಾಕಾರವಾಗಿ ಮಾಡಿಕೊಂಡು ಬಲಗೈಯಿಂದ ಮಂತ್ರದ್ರಷ್ಟಾರರಾದ ಮರೀಚಿಗಳೇ ಮೊದಲಾದ ಋಷಿಗಳಿಗೂ ವಿದ್ವಾಂಸನಾದವನು ತರ್ಪಣವನ್ನು ನೀಡಬೇಕು.

ಮರೀಚ್ಯಾದಿಮುನೀಂಶ್ಚೈವ ನಾರದಾಂತಾನ್ ಸಮಾಹಿತಃ ।
ಪ್ರಾಚೀನಾವೀತ್ಯಥೈತಾಂಸ್ತು ತರ್ಪಯೇದ್ ದೇವತಾಃ ಪಿತೄನ್ ॥೬೪॥

ಮರೀಚಿಯೇ ಮೊದಲಾದ ನಾರದರ ತನಕ ಋಷಿಗಳಿಗೆ ತರ್ಪಣವನ್ನು ನೀಡಿದ ಬಳಿಕ ಎಡಭಾಗದಲ್ಲಿ ಯಜ್ಞೋಪವೀತವನ್ನು ಮಾಡಿಕೊಂಡು ದೇವತೆಗಳಿಗೂ, ಪಿತೃಗಳಿಗೂ ಸಂಬಂಧಿಸಿದಂತೆ ತರ್ಪಣವನ್ನು ನೀಡಬೇಕು.

ತತಸ್ತು ಕವ್ಯವಾಡಗ್ನಿಂ ಸೋಮಂ ವೈವಸ್ವತಂ ತಥಾ ।
ತತಶ್ಚಾರ್ಯಮಣಂ ಚಾಪಿ ಅಗ್ನಿಷ್ವಾತ್ತಾಂಸ್ತಥೈವ ಚ ॥೬೫॥

ಸೋಮಪಾಂಶ್ಚೈವ ದರ್ಭೇಷು ಸತಿಲೈರೇವ ವಾರಿಭಿಃ ।
ತೃಪ್ಯತಾಮಿತಿ ಪಶ್ಚಾತ್ತು ಸ್ವಪಿತೄಂಸ್ತರ್ಪಯೇತ್ ಪುನಃ ॥೬೬॥

ಬಳಿಕ ಕವ್ಯವಾಹನನಾದ ಅಗ್ನಿಗೆ, ಸೋಮನಿಗೆ, ವೈವಸ್ವತನಿಗೆ, ಅರ್ಯಮ, ಅಗ್ನಿಷ್ವಾತ್ತ, ಸೋಮಪ, ಮುಂತಾದವರಿಗೆ ನೀರಿನಿಂದ ದರ್ಭೆಯ ಸಹಿತವಾಗಿ ತೃಪ್ಯತಾಂ ಎಂದು ತರ್ಪಣವನ್ನು ನೀಡಬೇಕು. ಬಳಿಕ ಪಿತೃಗಳನ್ನು ನೀರು-ದರ್ಭೆಗಳಿಂದ ತೃಪ್ತಿಪಡಿಸಬೇಕು.

ಪಿತ್ರ್ಯಾನ್ ಪಿತಾಮಹಾಂಶ್ಚೈವ ತಥೈವ ಪ್ರಪಿತಾಮಹಾನ್ ।
ಪಿತಾಮಹೀಃ ತಥಾ ಚಾಪಿ ತಥೈವ ಪ್ರಪಿತಾಮಹೀಃ ॥೬೭॥

ತಥಾ ಪಿತೃಷ್ವಸ್ರಾಶ್ಚೈವ ಮಾತೃಷ್ವಸ್ರಾಸ್ತಥೈವ ಚ ॥೬೮॥

ಮಾತರಂ ಚಾತ್ಮನಶ್ಚೈವ ತಥಾ ಮಾತಾಮಹೀಮಪಿ ।
ಮಾತುರ್ಮಾತಾಮಹೀಂ ಚೈವ ಗುರುಮಾಚಾರ್ಯಮೇವ ಚ ॥೬೯॥

ಪಿತೃಗಳಿಗೆ ಕ್ರಮದಲ್ಲಿ ತರ್ಪಣವನ್ನು ಕೊಡಬೇಕು. ತಂದೆ-ಅಜ್ಜ-ಮುತ್ತಜ್ಜ, ತಾಯಿ-ತಂದೆಯ ತಾಯಿ-ತಂದೆಯ ತಾಯಿಯ ತಾಯಿ, ತಂದೆಯ ತಂಗಿ ಅಥವಾ ಅಕ್ಕ, ತಾಯಿಯ ತಂಗಿ ಅಥವಾ ಅಕ್ಕ, ತನ್ನ ತಾಯಿ, ತಾಯಿಯ ತಾಯಿ, ತಾಯಿಯ ತಾಯಿಯ ತಾಯಿ, ಇವರಿಗೆ ಗುರುಗಳಿಗೆ, ಆಚಾರ್ಯರಿಗೆ;

ಉಪಾಧ್ಯಾಯಾನ್ ಸಖೀನ್ ಬಂಧೂನ್ ಶಿಷ್ಯರ್ತ್ವಿಗ್ಜ್ಞಾತಿಪುತ್ರಕಾನ್ ।
ಪ್ರಮೀತಾನಾನೃಶಂಸ್ಯಾರ್ಥಂ ತರ್ಪಯೇತ್ ತಾನಮತ್ಸರಃ ॥೭೦॥

ಉಪಾಧ್ಯಾಯರು, ಮಿತ್ರರು, ಬಂಧುಗಳು, ಶಿಷ್ಯರು, ಋತ್ವಿಜರು, ಜ್ಞಾನಿಗಳು, ಇವರಲ್ಲಿ ಯಾರು ಮರಣವನ್ನು ಹೊಂದಿರುವರೋ ಅಂತಹವರಿಗೆ ಕರುಣೆಯಿಂದ ಈರ್ಷ್ಯಾದಿಗಳನ್ನು ಬಿಟ್ಟು ತರ್ಪಣವನ್ನು ನೀಡಬೇಕು.

ತರ್ಪಯಿತ್ವಾ ತಥಾऽऽಚಮ್ಯ ಸ್ನಾನವಸ್ತ್ರಂ ಪ್ರಪೀಡಯೇತ್ ।
ವೃದ್ಧಿಂ ಭೃತ್ಯಜನಸ್ಯಾಹುಃ ಸ್ನಾನಂ ಪಾನಂ ಚ ತದ್ವಿದಃ ॥೭೧॥

ತರ್ಪಣ ನೀಡಿದ ಬಳಿಕ ಆಚಮನ ಮಾಡಿ ಸ್ನಾನದ ಸಮಯದಲ್ಲಿ ಉಟ್ಟ ವಸ್ತ್ರವನ್ನು ಹಿಂಡಬೇಕು. ಆ ವಸ್ತ್ರದ ಜಲವು ಮೃತರಾದ ಭೃತ್ಯಜನರ ಭಾಗವಾಗಿರುತ್ತದೆ. ಅದು ಅವರ ಸ್ನಾನ ಮತ್ತು ಪಾನಗಳಿಗೆ ಸಂಬಂಧಿಸಿದ ನೀರಾಗಿರುತ್ತದೆ. ಆದ್ದರಿಂದ ಸ್ನಾನ ವಸ್ತ್ರವನ್ನು ಹಿಂಡುವುದರಿಂದ ಗತಿಸಿದವರಿಗೆ ತರ್ಪಣ ವಿಧಿಯಾಗುತ್ತದೆ.

ಅತರ್ಪಯಿತ್ವಾ ತಾನ್ ಪೂರ್ವಂ ಸ್ನಾನವಸ್ತ್ರಂ ನ ಪೀಡಯೇತ್ ॥೭೨॥

ಹಿಂದೆ ಹೇಳಿದ ದೇವ, ಋಷಿ, ಪಿತೃಗಳ ತರ್ಪಣವನ್ನು ನೀಡದೆ ಸ್ನಾನವಸ್ತ್ರವನ್ನು ಮೊದಲೇ ಹಿಂಡಬಾರದು.

ಪೀಡಯೇಚ್ಚೇತ್ ಪುರಾ ಮೋಹಾದ್ ದೇವಾಃ ಸರ್ಷಿಗಣಾಸ್ತಥಾ ।
ಪಿತರಶ್ಚ ನಿರಾಶಾಸ್ತೇ ಶಪ್ತ್ವಾ ಯಾಂತಿ ಯಥಾಗತಮ್ ॥೭೩॥

ಯಾವನು ಮೋಹದಿಂದ ದೇವ-ಋಷಿ-ಪಿತೃ ತರ್ಪಣಕ್ಕಿಂತ ಮೊದಲೇ ಸ್ನಾನವಸ್ತ್ರವನ್ನು ಹಿಂಡುತ್ತಾರೋ ಅವನ ಈ ಕ್ರಿಯೆಯಿಂದ ದೇವ-ಋಷಿ-ಪಿತೃಗಳು ನಿರಾಶರಾಗಿ ಅವನಿಗೆ ಶಾಪವನ್ನು ಕೊಟ್ಟು ಹಿಂದಿರುಗುತ್ತಾರೆ.

ಪ್ರಕ್ಷಾಲ್ಯ ಚ ಮೃದಾ ಪಾದಾವಾಚಮ್ಯ ಪ್ರಯತಃ ಪುನಃ ।
ದರ್ಭೇಷು ದರ್ಭಪಾಣಿಃ ಸನ್ ಸ್ವಾಧ್ಯಾಯಂ ತು ಸಮಾರಭೇತ್ ॥೭೪॥

ಬ್ರಾಹ್ಮಣನು ಕಾಲುಗಳನ್ನು ಮಣ್ಣಿನಿಂದ ತೊಳೆದುಕೊಂಡು, ದರ್ಭಾಸನದಲ್ಲಿ ಕುಳಿತು ದರ್ಭಪಾಣಿಯಾಗಿ ವೇದಪಠನವನ್ನು ಪ್ರಾರಂಭಿಸಬೇಕು.

ವೇದಮಾದೌ ಸಮಾರಭ್ಯ ತತೋಪರ್ಯುಪರಿ ಕ್ರಮಾತ್ ।
ಯದಧೀತೇ ಸ್ವಯಂ ಶಕ್ತ್ಯಾ ತತ್ ಸ್ವಾಧ್ಯಾಯಂ ಪ್ರಚಕ್ಷತೇ ॥೭೫॥

ಋಚಂ ವಾಥ ಯಜುರ್ವಾऽಪಿ ಸಾಮಗಾಥಾಮಥಾಪಿ ಚ ।
ಇತಿಹಾಸಪುರಾಣಾನಿ ಯಥಾಶಕ್ತಿ ನ ಹಾಪಯೇತ್ ॥೭೬॥

ಋಗ್ವೇದವನ್ನಾಗಲಿ, ಯಜುರ್ವೇದವನ್ನಾಗಲಿ, ಸಾಮವೇದವನ್ನಾಗಲಿ ಪಠನ ಮಾಡಬೇಕು. ಇತಿಹಾಸ-ಪುರಾಣವನ್ನು ಯಥಾಶಕ್ತಿ ಪಾರಾಯಣ ಮಾಡಬೇಕು. ಇವುಗಳ ಅಧ್ಯಯನವನ್ನು ಬಿಡಬಾರದು.

ಉತ್ಥಾಯ ತು ನಮಸ್ಕೃತ್ಯ ದಿಶೋ ದಿಗ್ದೇವತಾ ಅಪಿ ।
ಬ್ರಹ್ಮಾಣಂ ಚ ತತಶ್ಚಾಗ್ನಿಂ ಪೃಥಿವೀಮೋಷಧೀಸ್ತಥಾ ॥೭೭॥

ವಾಚಂ ವಾಚಸ್ಪತಿಂ ಚೈವ ಮಾಂ ಚೈವ ಸರಿತ(ಸಮಿಧ)ಸ್ತಥಾ ।
ನಮಸ್ಕೃತ್ವಾ ತಥಾऽದ್ಭಿಸ್ತು ಪ್ರಣವಾದಿ ಚ ಪೂಜಯೇತ್ ॥೭೮॥

ವೇದಪಠನವನ್ನು ಪೂರ್ಣಗೊಳಿಸಿ ನಿಂತುಕೊಂಡು ದಿಕ್ಕುಗಳಿಗೂ, ದಿಗ್ದೇವತೆಗಳಿಗೂ, ಬ್ರಹ್ಮನಿಗೂ, ಅಗ್ನಿಗೂ, ಪೃಥಿವಿಗೂ, ಓಷಧಿಗಳಿಗೂ, ವಾಕ್‌ಗೂ, ವಾಚಸ್ಪತಿಗೂ, ಸಮಿತ್ತುಗಳಿಗೂ, ನನಗೂ ನಮಸ್ಕರಿಸಬೇಕು. ಬಳಿಕ ನೀರಿಗೆ ಸಾಗಿ ಪ್ರಣವಾದಿ ಮಂತ್ರಗಳಿಂದ ಜಲಾಶಯವನ್ನು ಪೂಜಿಸಬೇಕು.

ತತೋ ನಮೋऽದ್ಭ್ಯ ಇತ್ಯುಕ್ತ್ವಾ ನಮಸ್ಕುರ್ಯಾತ್ತು ತಜ್ಜಲಮ್ ॥೭೯॥

'ನಮೋ ಅದ್ಭ್ಯಃ' ಎಂದು ಹೇಳುತ್ತಾ ಆ ಜಲಾಶಯವನ್ನು ನಮಸ್ಕರಿಸಬೇಕು.

ಘೃಣಿಃ ಸೂರ್ಯಸ್ತಥಾऽऽದಿತ್ಯಸ್ತ್ರಿ ಸ್ವಮೂರ್ಧ್ನಿ ತತೋ ಜಲೈಃ ।
ಸಿಕ್ತ್ವಾऽವಲೋಕಯೇದರ್ಕಂ ಪ್ರಣವೇನ ಸಮಾಹಿತಃ ॥೮೦॥

ಅನಂತರ ಘೃಣಿ, ಸೂರ್ಯ, ಆದಿತ್ಯ ಎಂಬ ಸೂರ್ಯಾಷ್ಟಾಕ್ಷರಿಮಂತ್ರವನ್ನು ಜಪಿಸುತ್ತಾ, ತನ್ನ ತಲೆಯ ಮೇಲೆ ಎರಡು ಕೈಗಳನ್ನು ಜೋಡಿಸಿಕೊಂಡು ಪ್ರಣವ ಮಂತ್ರದ ಮೂಲಕ ಏಕಾಗ್ರಚಿತ್ತದಿಂದ ಸೂರ್ಯನನ್ನು ಅವಲೋಕಿಸಬೇಕು.

ತತೋ ಮಾಮರ್ಚಯೇತ್ ಪುಷ್ಪೈರ್ಮತ್ಪ್ರಿಯೈರೇವ ನಿತ್ಯಶಃ ॥೮೧॥

ಬಳಿಕ ನನಗೆ ಅತ್ಯಂತ ಪ್ರಿಯವಾದ ಪುಷ್ಪಗಳಿಂದ ನಿತ್ಯವೂ ಆರಾಧಿಸಬೇಕು.

ಯುಧಿಷ್ಠಿರಃ

ತತ್ಪ್ರಿಯಾಣಿ ಪ್ರಸೂನಾನಿ ತ್ವದನಿಷ್ಟಾನಿ ಮಾಧವ ।
ಸರ್ವಾಣ್ಯಾಚಕ್ಷ್ವ ದೇವೇಶ ತ್ವದ್ಭಕ್ತಸ್ಯ ಮಮಾಚ್ಯುತ ॥೮೨॥

ಯುಧಿಷ್ಠಿರ– ಮಾಧವನೇ, ಅಚ್ಯುತನೇ, ಯಾವ ಪುಷ್ಪಗಳು ನಿನಗೆ ಅತ್ಯಂತ ಪ್ರಿಯವಾದವು? ಯಾವ ಪುಷ್ಪಗಳಲ್ಲಿ ನಿನ್ನ ಸನ್ನಿಧಾನವಿದೆ. ಅನಿಷ್ಟ ಪುಷ್ಪಗಳು ಯಾವುವು? ಇವೆಲ್ಲವನ್ನೂ ನನಗೆ ಬಿಡಿಸಿ ಹೇಳು.

ಶ್ರೀಭಗವಾನ್

ಶೃಣುಷ್ವಾವಹಿತೋ ರಾಜನ್ ಪುಷ್ಪಾಣಿ ಪ್ರಿಯಕೃಂತಿ ಮೇ ॥೮೩॥

ಶ್ರೀಭಗವಾನ್– ರಾಜನೇ, ನನಗೆ ಪ್ರಿಯವಾದ ಪುಷ್ಪಗಳನ್ನು ತಿಳಿಸುತ್ತೇನೆ. ಅವ್ಯಗ್ರಚಿತ್ತನಾಗಿ ಕೇಳು.

ಕುಮುದಂ ಕರವೀರಂ ಚ ಚಣಕಂ ಚಂಪಕಂ ತಥಾ ।
ಮಲ್ಲಿಕಾ ಜಾತಿಪುಷ್ಪಂ ಚ ನಂದ್ಯಾವರ್ತಂ ಚ ನಂದಿಕಮ್ ॥೮೪॥

ಪಲಾಶಪುಷ್ಪಪತ್ರಾಣಿ ದೂರ್ವಾ ಭೃಂಗಕಮೇವ ಚ ।
ವನಮಾಲಾ ಚ ರಾಜೇಂದ್ರ ಮತ್ಪ್ರಿಯಾಣಿ ವಿಶೇಷತಃ ॥೮೫॥

ಕುಮುದ, ಕರವೀರ, ಚಣಕ, ಚಂಪಕ, ಮಲ್ಲಿಕಾ, ಜಾಜಿ, ನಂದ್ಯಾವರ್ತ, ನಂದಿಕ, ಮುತ್ತುಗದ ಹೂವು ಮತ್ತು ಅದರ ಎಲೆ, ದೂರ್ವಾ, ಭೃಂಗರಾಜ, ವನಮಾಲೆ - ಇವೆಲ್ಲವೂ ವಿಶೇಷವಾಗಿ ನನಗೆ ಪ್ರಿಯವಾದವುಗಳು.

ಸರ್ವೇಷಾಮಪಿ ಪುಷ್ಪಾಣಾಂ ಸಹಸ್ರಗುಣಮುತ್ಪಲಮ್ ।
ತಸ್ಮಾತ್ ಪದ್ಮಂ ತಥಾ ರಾಜನ್ ಪದ್ಮಾತ್ತು ಶತಪತ್ರಕಮ್ ॥೮೬॥

ಸಮಸ್ತ ಪುಷ್ಪಗಳಲ್ಲಿಯೂ ನೈದಿಲೆಯು ಸಾವಿರ ಪಾಲು ಹೆಚ್ಚು ಗುಣವುಳ್ಳದ್ದು. ಅದಕ್ಕಿಂತಲೂ ಪದ್ಮವು ಶ್ರೇಷ್ಠವಾದುದು. ಪದ್ಮಕ್ಕಿಂತಲೂ ಶತಪತ್ರಕಮಲವು ಶ್ರೇಷ್ಠವಾದುದು.

ತಸ್ಮಾತ್ ಸಹಸ್ರಪತ್ರಂ ತು ಪುಂಡರೀಕಂ ತತಃ ಪರಮ್ ।
ಪುಂಡರೀಕಸಹಸ್ರಾತ್ತು ತುಲಸೀ ಗುಣತೋಽಧಿಕಾ ॥೮೭॥

ಶತಪತ್ರಕಮಲಕ್ಕಿಂತಲೂ ಸಹಸ್ರಪತ್ರಕಮಲವು ಶ್ರೇಷ್ಠವಾದುದು. ಸಹಸ್ರಪತ್ರ ಕಮಲಕ್ಕಿಂತಲೂ ಶ್ವೇತಕಮಲ (ಪುಂಡರೀಕ) ಪುಷ್ಪವು ಶ್ರೇಷ್ಠವಾದುದು. ಆದರೆ ಸಾವಿರ ಪುಂಡರೀಕಗಳಿಗಿಂತಲೂ ಗುಣದ ದೃಷ್ಟಿಯಿಂದ ತುಲಸಿಯೇ ಶ್ರೇಷ್ಠವಾದುದು.

ಬಕಪುಷ್ಪಂ ತತಃ ತಸ್ಮಾತ್ ಸೌವರ್ಣಂ ತು ತತೋಽಧಿಕಮ್ ।
ಸೌವರ್ಣಾತ್ತು ಪ್ರಸೂನಾಚ್ಚ ಮತ್ಪ್ರಿಯಂ ನಾಸ್ತಿ ಪಾಂಡವ ॥೮೮॥

ತುಲಸಿಗಿಂತಲೂ ಪಾದರೀ ಹೂವು, ಬಕುಲಪುಷ್ಪವು ಶ್ರೇಷ್ಠವಾದುದು. ಬಕುಲ ಪುಷ್ಪಕ್ಕಿಂತಲೂ ಸೌವರ್ಣಪುಷ್ಪವು ಶ್ರೇಷ್ಠವಾದುದು. ಸೌವರ್ಣಪುಷ್ಪಕ್ಕಿಂತಲೂ ಹೆಚ್ಚು ಪ್ರಿಯವಾಗಿರುವ ಯಾವ ಪುಷ್ಪವೂ ಇರುವುದಿಲ್ಲ.

ಪುಷ್ಪಾಲಾಭೇ ತುಲಸ್ಯಾಸ್ತು ಪತ್ರೈರ್ಮಾಮರ್ಚಯೇದ್ ಬುಧಃ ।
ಪತ್ರಾಲಾಭೇ ತು ಶಾಖಾಭಿಃ ಶಾಖಾಲಾಭೇ ಶಿಫಾಫಲೈಃ ॥೮೯॥

ಹೂವು ಸಿಕ್ಕದಿದ್ದಲ್ಲಿ ನನ್ನ ಭಕ್ತನಾದವನು ನನ್ನನ್ನು ತುಳಸಿ ಪತ್ರದಿಂದಲೇ ಪೂಜಿಸಬೇಕು. ತುಳಸಿ ಪತ್ರವು ಸಿಕ್ಕದಿದ್ದಲ್ಲಿ ತುಳಸಿಯ ಕಡ್ಡಿಯಿಂದ ಪೂಜಿಸಬೇಕು. ತುಳಸಿ ಕಡ್ಡಿಯೂ ಸಿಕ್ಕದಿದ್ದಲ್ಲಿ ತುಳಸಿಯ ಬೇರಿನ ತುಂಡುಗಳಿಂದ ಪೂಜಿಸಬೇಕು.

ಶಿಫಾಲಾಭೇ ಮೃದಾ ತತ್ರ ಭಕ್ತಿಮಾನರ್ಚಯೇತ ಮಾಮ್ ॥೯೦॥

ತುಳಸಿಯ ಬೇರು ಸಿಕ್ಕದಿದ್ದಲ್ಲಿ ತುಳಸಿ ಗಿಡದ ಸ್ಥಳದಲ್ಲಿರುವ ಮಣ್ಣಿನಿಂದಾದರೂ ನನ್ನನ್ನು ಪೂಜಿಸಬೇಕು.

(ಯೇನ ಕೇನ ಪ್ರಕಾರೇಣ ತುಲಸೀದಲಪೂರ್ವಕೈಃ ।
ಪುಷ್ಪೈಃ ಫಲೈರ್ವಾऽಪ್ಯನ್ನಾದ್ಯೈರ್ಮದಾರಾಧನಮುತ್ತಮಮ್ ॥೯೧॥)

ಯಾವ ರೀತಿಯಿಂದಲಾದರೂ ತುಳಸೀದಳಗಳಿಂದ, ಪುಷ್ಪಗಳಿಂದ, ಫಲಗಳಿಂದ, ಅನ್ನಾದಿಗಳಿಂದ ನನ್ನ ಆರಾಧನೆಯು ಶ್ರೇಷ್ಠವೇ ಎನಿಸಿದೆ.

ವರ್ಜನೀಯಾನಿ ಪುಷ್ಪಾಣಿ ಶೃಣು ರಾಜನ್ ಸಮಾಹಿತಃ ॥೯೨॥

ಇನ್ನು ಮುಂದೆ ನನ್ನ ಪೂಜೆಗೆ ಯೋಗ್ಯವಲ್ಲದ ಪುಷ್ಪಗಳನ್ನು ಹೇಳುತ್ತೇನೆ, ಕೇಳಿಸಿಕೊ.

ಕಿಂಕಿಣೀ ಮುನಿಪುಷ್ಪಂ ಚ ದುತ್ತೂರಂ ಪಾಟಲಂ ತಥಾ ।
ತಥಾऽತಿಮುಕ್ತಕಂ ಚೈವ ಪುನ್ನಾಗಂ ನಕ್ತಮಾಲಿಕಾಮ್ ॥೯೩॥

ಕಿಂಕಿಣೀ (ಗೆಜ್ಜೆ ಹೂವು), ಮುನಿಪುಷ್ಪ, ದುರ್ದೂರ (ದತ್ತೂರ- ಹೆಮ್ಮರದ ಹೂವು), ಪಾಟಲ (ಪಾದರಿ), ಅತಿಮುಕ್ತಕ (ತಾಳೆ), ಪುನ್ನಾಗ (ಸುರಗಿ ಹೂವು), ನಕ್ತಮಾಲಿಕ (ಹೊಂಗೆ ಹೂವು);

ಯೌಧಿಕಂ ಕ್ಷೀರಿಕಾಪುಷ್ಪಂ ನಿರ್ಗುಂಡೀ ಲಾಂಗುಲೀ ಜಪಾ ।
ಕರ್ಣಿಕಾರಂ ತಥಾऽಶೋಕಂ ಶಾಲ್ಮಲೀಪುಷ್ಪಮೇವ ಚ ॥೯೪॥

ಕಕುಭಾಃ ಕೋವಿದಾರಶ್ಚ ವೈಭೀತಕಮಥಾಪಿ ಚ ।
ಕುರಂಟಕಪ್ರಸೂನಂ ಚ ಕಲ್ಪಕಂ ಲಾಂಗಲೀ ತಥಾ ॥೯೫॥

ಅಂಕೋಲಂ ಗಿರಿಕರ್ಣೀ ಚ ನೀಲಾನ್ಯೇವ ಚ ಸರ್ವಶಃ ।
ಏಕವರ್ಣಾನಿ ಚಾನ್ಯಾನಿ ಸರ್ವಾಣ್ಯೇವ ವಿವರ್ಜಯೇತ್ ॥೯೬॥

ಯೌಧಿಕ, ಕ್ಷೀರಿಕ (ಹಾಲೆ ಹೂವು), ನಿರ್ಗುಂಡೀ (ಲಕ್ಕಿ ಹೂವು), ಲಾಂಗುಲೀ (ಕೋಳಿಕುಟುಕನ ಹೂವು), ಜಪ (ದಾಸವಾಳದ ಹೂವು), ಕರ್ಣಿಕಾರ, ಅಶೋಕ,

ಸೇವಲಕ, ಶಾಲ್ಮಲೀ, ಕಕುಭಾ (ಕೆಂಪು ಮತ್ತೀ ಹೂವು), ಕೋವಿದಾರ (ಕೆಂಗಾಂಚಾಳ ಹೂವು), ವೈಭೀತಕ (ತಾರೆ ಹೂವು), ಕುರಂಟಕ, ಕಲ್ಪಕ (ಖರ್ಜೂರದ ಹೂವು), ಲಾಂಗಲಿ, ಅಂಕೋಲ, ಗಿರಿಕರ್ಣಿ (ಕಪ್ಪು ಚುಕ್ಕೆ ಇರುವ ಹೂವು), ನೀಲಿ ಬಣ್ಣದ ಪುಷ್ಪಗಳು, ಒಂದೇ ವರ್ಣದಲ್ಲಿ ಇರುವ ಒಂದೆಲೆಯ ಹೂವು - ಈ ಎಲ್ಲ ಪುಷ್ಪಗಳನ್ನು ನಿರಾಕರಿಸಬೇಕು.

ಅರ್ಕಪುಷ್ಪಾಣಿ ವರ್ಜ್ಯಾನಿ ಚಾರ್ಕಪತ್ರಸ್ಥಿತಾನಿ ಚ ।
ವ್ಯಾಘಾತಪಿಚುಮಂದಾನಿ ಸರ್ವಾಣ್ಯೇವ ವಿವರ್ಜಯೇತ್ ॥೯೭॥

ಎಕ್ಕದ ಹೂವುಗಳಿಂದ ನನ್ನನ್ನು ಪೂಜಿಸಬಾರದು. ಎಕ್ಕದ ಎಲೆಯ ಮೇಲಿಟ್ಟ ಹೂವುಗಳಿಂದಲೂ ನನ್ನನ್ನು ಪೂಜಿಸಬಾರದು. ಹಾಗೆಯೇ ಬೇವಿನ ಹೂವುಗಳಿಂದಲೂ ಪೂಜಿಸುವುದು ಯೋಗ್ಯವಲ್ಲ.

ಅನ್ಯೈಸ್ತು ಶುಕ್ಲಪತ್ರೈಶ್ಚ ಗಂಧವದ್ಭಿರ್ನರಾಧಿಪ ।
ಅವಜ್ಯೈರ್ಯಸ್ಯೈರ್ಯಥಾಲಾಭಂ ಮದ್ಭಕ್ತೋ ಮಾಂ ಸಮರ್ಚಯೇತ್ ॥

ಹೀಗೆ ನಿಷೇಧಿಸಲ್ಪಟ್ಟಿರುವ ಪುಷ್ಪಗಳನ್ನು ಬಿಟ್ಟು ಬಿಳಿಯ ಯಸಳುಗಳಿರುವ ಸುಗಂಧಮಯ ಹೂವುಗಳಿಂದ ನನ್ನನ್ನು ಭಕ್ತರು ಆರಾಧಿಸಬೇಕು.

ಯುಧಿಷ್ಠಿರಃ

ಕಥಂ ತ್ವಮರ್ಚನೀಯೋಽಸಿ ಮೂರ್ತಯಃ ಕೀದೃಶಾಸ್ತು ತೇ ।
ವೈಖಾನಸಾಃ ಕಥಂ ಬ್ರೂಯುಃ ಕಥಂ ವಾ ಪಾಂಚರಾತ್ರಿಕಾಃ ॥೯೯॥

ಯುಧಿಷ್ಠಿರ– ಮಾಧವನೇ, ನಿನ್ನನ್ನು ಹೇಗೆ ಪೂಜಿಸಬೇಕು? ನಿನ್ನ ಮೂರ್ತಿಗಳು ಯಾವುವು? ಈ ವಿಷಯದಲ್ಲಿ ವೈಖಾನಸ ಆಗಮಕ್ಕೆ ಸಂಬಂಧಿಸಿದವರು ಏನು ಹೇಳುತ್ತಾರೆ? ಪಾಂಚರಾತ್ರಾಗಮಕ್ಕೆ ಸಂಬಂಧಿಸಿದ ಜ್ಞಾನಿಗಳು ಏನು ಹೇಳುತ್ತಾರೆ?

ಶ್ರೀಭಗವಾನ್

ಶೃಣು ಪಾಂಡವ ತತ್ಸರ್ವಮರ್ಚನಾಕ್ರಮಮಾತ್ಮನಃ ।
ಸ್ಥಂಡಿಲೇ ಪದ್ಮಕಂ ಕೃತ್ವಾ ಚಾಷ್ಟಪತ್ರಂ ಸಕರ್ಣಿಕಮ್ ॥೧೦೦॥

ಶ್ರೀಭಗವಾನ್– ಪಾಂಡವನೇ, ನನ್ನ ಅರ್ಚಾಕ್ರಮವನ್ನು ಸಮಗ್ರವಾಗಿ ಹೇಳುತ್ತೇನೆ, ಕೇಳಿಸಿಕೊ. ಸಮವಾಗಿರುವ ವೇದಿಕೆಯಲ್ಲಿ ಕರ್ಣಿಕೆಗಳಿಂದ ಯುಕ್ತವಾದ ಅಷ್ಟದಳ ಪದ್ಮವನ್ನು ರಚಿಸಬೇಕು.

ಅಷ್ಟಾಕ್ಷರವಿಧಾನೇನ ಹ್ಯಥವಾ ದ್ವಾದಶಾಕ್ಷರೈಃ ।
ವೈದಿಕೈರಥವಾ ಮಂತ್ರೈರ್ಮಮ ಸೂಕ್ತೇನ ವಾ ಪುನಃ ॥೧೦೧॥

ಅಷ್ಟಾಕ್ಷರ ಮಂತ್ರದಿಂದಾಗಲಿ, ದ್ವಾದಶಾಕ್ಷರ ಮಂತ್ರದಿಂದಾಗಲಿ, ವೈದಿಕ ಮಂತ್ರದಿಂದಾಗಲಿ, ಪುರುಷಸೂಕ್ತದಿಂದಾಗಲಿ ನನ್ನನ್ನು ಆವಾಹಿಸಬೇಕು.

ಸ್ಥಾಪಿತಂ ಮಾಂ ತತಸ್ತಸ್ಮಿನ್ನರ್ಚಯಿತ್ವಾ ವಿಚಕ್ಷಣಃ ।
ಪುರುಷಂ ಚ ತತಃ ಸತ್ಯಮಚ್ಯುತಂ ಚ ಯುಧಿಷ್ಠಿರ ॥೧೦೨॥

ಅನಿರುದ್ಧಂ ಚ ಮಾಂ ಪ್ರಾಹುರ್ವೈಖಾನಸವಿದೋ ಜನಾಃ ।
ಅನ್ಯೇ ತ್ವೇವಂ ವಿಜಾನಂತಿ ಮಾಂ ರಾಜನ್ ಪಾಂಚರಾತ್ರಿಕಾಃ ॥೧೦೩॥

ವಾಸುದೇವಂ ಚ ರಾಜೇಂದ್ರ ಸಂಕರ್ಷಣಮಥಾಪಿ ವಾ ।
ಪ್ರದ್ಯುಮ್ನಮನಿರುದ್ಧಂ ಚ ಚತುರ್ಮೂರ್ತಿಂ ಪ್ರಚಕ್ಷತೇ ॥೧೦೪॥

ರಾಜೇಂದ್ರನೇ, ವೈಖಾನಸಾಗಮವನ್ನು ತಿಳಿದವರು ನನ್ನನ್ನು ಪುರುಷ, ಸತ್ಯ, ಅಚ್ಯುತ, ಅನಿರುದ್ಧ ಎಂಬ ಹೆಸರುಗಳಿಂದ ಆರಾಧಿಸುತ್ತಾರೆ. ಪಾಂಚರಾತ್ರಾಗಮವನ್ನು ತಿಳಿದವರು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ಚತುರ್ವಿಧ ರೂಪಗಳನ್ನು ಆರಾಧಿಸುತ್ತಾರೆ.

ಏತಾಶ್ಚಾನ್ಯಾಶ್ಚ ರಾಜೇಂದ್ರ ಸಂಜ್ಞಾಭೇದೇನ ಮೂರ್ತಯಃ ।
ವಿದ್ಧ್ಯನರ್ಥಾಂತರಾ ಏವಂ ಮಾಮೇವಂ ಚಾರ್ಚಯೇದ್ ಬುಧಃ ॥

ಅತ್ಯಂತಭೇದರಹಿತಂ ಗುಣಪೂರ್ಣಂ ಸದೈವ ಹಿ ॥೧೦೬॥

ಇವುಗಳಲ್ಲದೇ ಸಂಜ್ಞಾಭೇದದಿಂದ ನನ್ನ ಇನ್ನೂ ಅನೇಕ ಮೂರ್ತಿಗಳಿವೆ. ಹೆಸರುಗಳು ಬೇರೆಯಾದರೂ ಆರಾಧನೆಯನ್ನು ಹೊಂದುವವನು ನಾನೇ ಆಗಿದ್ದೇನೆ. ಎಲ್ಲ ರೂಪಗಳಿಂದಲೂ ಭೇದರಹಿತನಾಗಿ, ಗುಣಪೂರ್ಣನಾಗಿ ಯಾವಾಗಲೂ ನಾನೇ ಆರಾಧ್ಯನಾಗಿದ್ದೇನೆ.

ಯುಧಿಷ್ಠಿರಃ

ತ್ವದ್ಭಕ್ತಾಃ ಕೀದೃಶಾ ದೇವ ಕಾನಿ ತೇಷಾಂ ವ್ರತಾನಿ ಚ ।
ಏತತ್ ಕಥಯ ದೇವೇಶ ತ್ವದ್ಭಕ್ತಸ್ಯ ಮಮಾಚ್ಯುತ ॥೧೦೭॥

ಯುಧಿಷ್ಠಿರ– ಅಚ್ಯುತನೇ, ನಿನ್ನ ಭಕ್ತರು ಎಂತಹವರು? ಅವರ ವ್ರತನಿಯಮಗಳು ಯಾವುವು? ಭಕ್ತನಾದ ನನಗೆ ಈ ವಿಷಯವನ್ನು ಕೃಪೆ ಮಾಡಿ ಹೇಳು.

ಶ್ರೀಭಗವಾನ್

ಅನನ್ಯದೇವತಾಭಕ್ತಾ ಯೇ ಮದ್ಭಕ್ತಜನಪ್ರಿಯಾಃ ।
ಮಾಮೇವ ಶರಣಂ ಪ್ರಾಪ್ತಾಸ್ತೇ ಮದ್ಭಕ್ತಾಃ ಪ್ರಕೀರ್ತಿತಾಃ ॥೧೦೮॥

ಶ್ರೀಭಗವಾನ್– ಯಾರು ಇತರ ದೇವತೆಗಳಿಗೆ ಭಕ್ತರಾಗಿರದೆ ಅನನ್ಯವಾದ ಭಕ್ತಿಯಿಂದ ನನ್ನನ್ನೇ ಶರಣು ಹೊಂದಿ ನನ್ನ ಭಕ್ತರೇ ಆಗಿರುತ್ತಾರೋ, ನನ್ನ ಭಕ್ತರಿಗೆ ಪ್ರೀತಿಪಾತ್ರರಾಗಿರುತ್ತಾರೋ ಅವರೇ ನನ್ನ ಭಕ್ತರೆಂದು ತಿಳಿ.

ಸ್ವರ್ಗ್ಯಾಣ್ಯಪಿ ಯಶಸ್ಯಾನಿ ಮತ್ಪ್ರಿಯಾಣಿ ವಿಶೇಷತಃ ।
ಮದ್ಭಕ್ತಃ ಪಾಂಡವಶ್ರೇಷ್ಠ ವ್ರತಾನೀಮಾನಿ ಧಾರಯೇತ್ ॥೧೦೯॥

ಸ್ವರ್ಗವನ್ನು ನೀಡುವ, ಕೀರ್ತಿಯನ್ನು ಕೊಡುವ, ವಿಶೇಷವಾಗಿ ನನಗೆ ಅತ್ಯಂತ ಪ್ರಿಯವಾದ ವ್ರತವನ್ನು ನನ್ನ ಭಕ್ತರು ಅನುಷ್ಠಾನ ಮಾಡಬೇಕು.

ನಾನ್ಯದಾಚ್ಛಾದಯೇದ್ ವಸ್ತ್ರಂ ಮದ್ಭಕ್ತೋ ಜಲತಾರಣೇ ।
ಸ್ವಸ್ಥಸ್ತು ನ ದಿವಾ ಸ್ವಪ್ಯೇನ್ಮಧುಮಾಂಸಾನಿ ವರ್ಜಯೇತ್ ॥೧೧೦॥

ನನ್ನ ಭಕ್ತರು ನೀರನ್ನು ದಾಟುವಾಗ ಒಂದೇ ವಸ್ತ್ರವನ್ನು ಧರಿಸಬೇಕೇ ಹೊರತು ಎರಡನೆಯ ವಸ್ತ್ರವನ್ನು ಧರಿಸಬಾರದು. ಹಗಲಿನಲ್ಲಿ ನಿದ್ರಿಸಬಾರದು. ಮಧು ಮಾಂಸಗಳನ್ನು ವರ್ಜಿಸಬೇಕು.

ಪ್ರದಕ್ಷಿಣಂ ವ್ರಜೇದ್ ವಿಪ್ರಾನ್ ಗಾಮಶ್ವತ್ಥಂ ಹುತಾಶನಮ್ ।
ನ ಧಾವೇತ್ ಪತಿತೇ ವರ್ಷೇ ನಾಗ್ರಭಿಕ್ಷಾಂ ಚ ಲೋಪಯೇತ್॥೧೧೧॥

ದಾರಿಯಲ್ಲಿ ಪ್ರಯಾಣ ಮಾಡುವಾಗ ದಾರಿಯಲ್ಲಿ ಸಿಗುವ ಬ್ರಾಹ್ಮಣ, ಗೋವು, ಅಶ್ವತ್ಥ ವೃಕ್ಷ, ಅಗ್ನಿ ಇವುಗಳನ್ನು ಬಲಕ್ಕೆ ಇಟ್ಟುಕೊಂಡು ಪ್ರಯಾಣ ಮಾಡಬೇಕು. ಮಳೆ ಬರುತ್ತಿರುವಾಗ ಓಡಿ ಹೋಗಬಾರದು. ಭಿಕ್ಷುಗಳು ಆಗಮಿಸಿದಾಗ ಅವರಿಗೆ ಮೊದಲು ಭಿಕ್ಷೆಯನ್ನು ನೀಡಿ ನಂತರ ಊಟ ಮಾಡಬೇಕು.

ಪ್ರತ್ಯಕ್ಷಲವಣಂ ನಾದ್ಯಾತ್ ಶೋಭಾಂಜನಕರಂಜನೌ ।
ಗ್ರಾಸಮುಷ್ಟಿಂ ಗವೇ ದದ್ಯಾದ್ ಧಾನ್ಯಾಮ್ಲಂ ಚೈವ ವರ್ಜಯೇತ್ ॥

ಭೋಜನ ಪಾತ್ರೆಗೆ ನೇರವಾಗಿ ಉಪ್ಪನ್ನು ಹಾಕಿಕೊಂಡು ಊಟ ಮಾಡಬಾರದು. ನುಗ್ಗೆಕಾಯಿಯನ್ನು ತಿನ್ನಬಾರದು. ಹುಳಿಗಂಜಿಯನ್ನು ಕುಡಿಯಬಾರದು. ಹಸುವಿಗೆ ಪ್ರತಿದಿನವೂ ಮುಷ್ಟಿಯಷ್ಟು ಆಹಾರವನ್ನು ತಿನ್ನಿಸಬೇಕು.

ತಥಾ ಪರ್ಯುಷಿತಂ ಚಾಪಿ ಪಕ್ವಂ ಪರಗೃಹಾಗತಮ್ ।
ನಿವೇದಿತಂ ಚ ಯದ್ ದ್ರವ್ಯಂ ತತ್ ಪ್ರಯತ್ನೇನ ವರ್ಜಯೇತ್ ॥

ಇತರ ಮನೆಗಳಿಂದ ತಂದ ಪಕ್ವಾನ್ನವನ್ನಾಗಲಿ, ಹಳಸಿದ ಅನ್ನವನ್ನಾಗಲಿ, ಇನ್ನೊಬ್ಬರಿಗೆ ಕೊಡುತ್ತೇನೆ ಎಂದು ಪ್ರತಿಜ್ಞೆ ಮಾಡಿದ ಅನ್ನವನ್ನಾಗಲಿ ಪ್ರಯತ್ನ ಪೂರ್ವಕವಾಗಿ ನಿರಾಕರಿಸಬೇಕು.

ವಿಭೀತಕಕರಂಜ್ಞಾನಾಂ ಛಾಯಾಂ ದೂರಾತ್ ತು ವರ್ಜಯೇತ್ ।
ವಿಪ್ರದೇವಪರೀವಾದಂ ನ ವದೇತ್ ಪೀಡಿತೋಽಪಿ ಸನ್ ॥೧೧೪॥

ತಾಳೆಗಿಡದ ನೆರಳಿನಲ್ಲಾಗಲಿ, ಹೊಂಗೆ ಮರದ ನೆರಳಿನಲ್ಲಾಗಲಿ ಕುಳಿತು ಕೊಳ್ಳಬಾರದು. ಎಷ್ಟೇ ಕಷ್ಟವಿದ್ದರೂ ಬ್ರಾಹ್ಮಣರನ್ನಾಗಲಿ, ದೇವತೆಗಳನ್ನಾಗಲಿ ನಿಂದಿಸಬಾರದು. ಅವರಿಗೆ ಪೀಡೆಯನ್ನು ನೀಡಬಾರದು.

ಸಾತ್ವಿಕಾ ರಾಜಸಾಶ್ಚಾಪಿ ತಾಮಸಾಶ್ಚಾಪಿ ಪಾಂಡವ ।
ಮಾಮರ್ಚಯಂತಿ ಮದ್ಭಕ್ತಾಸ್ತೇಷಾಮೀದೃಗ್ವಿಧಾ ಗತಿಃ ॥೧೧೫॥

ಸಾತ್ವಿಕರು, ರಾಜಸರು, ತಾಮಸರು ಎಂದು ಮೂರುವಿಧವಾದ ಭಕ್ತರೂ ಇದ್ದಾರೆ. ಅವರು ನನ್ನನ್ನು ಆರಾಧಿಸಿ ಹೊಂದುವ ಗತಿಗಳನ್ನು ಕೇಳಿಸಿಕೊ. ವಿಷಯಪದಾರ್ಥಗಳ

ಅಭಿಲಾಷೆಯನ್ನು ಹೊಂದಿದ ವ್ಯಕ್ತಿಗಳು ರಾಜಸರು ಎನಿಸಿಕೊಳ್ಳುತ್ತಾರೆ. ಕ್ರೋಧ, ಹೊಟ್ಟೆಕಿಚ್ಚು ಮೊದಲಾದ ದೋಷವುಳ್ಳವರು ತಾಮಸರು ಎಂದು ಕರೆಸಿಕೊಳ್ಳುತ್ತಾರೆ.

ತಾಮಸಾಸ್ತಿಮಿರಂ ಯಾಂತಿ ರಾಜಸಾ ರಜ ಏವ ತತ್ ।
ಸಾತ್ವಿಕಾಃ ಸತ್ವಸಂಪನ್ನಾಃ ಸತ್ವಮೇವ ಪ್ರಯಾಂತಿ ತೇ ॥೧೧೬॥

ತಾಮಸರು ನರಕಕ್ಕೆ ಹೋಗುತ್ತಾರೆ. ರಾಜಸರು ರಜೋಗುಣವನ್ನೇ ಹೊಂದುತ್ತಾರೆ. ಸಾತ್ವಿಕರು ಸತ್ವಗುಣಸಂಪನ್ನರಾಗಿ ಸತ್ವಗುಣವನ್ನೇ ಹೊಂದುತ್ತಾರೆ.

ಯೇ ಸಿದ್ಧಾಃ ಸಂತಿ ಸಾಂಖ್ಯೇನ ಯೋಗಸತ್ವಬಲೇನ ಚ ।
ನಭಸ್ಯಾದಿತ್ಯಚಂದ್ರಾಭ್ಯಾಂ ಪಶ್ಯಂತಿ ಪದವಿಸ್ತರಮ್ ॥೧೧೭॥

ಸಿದ್ಧರು ಯಥಾರ್ಥಜ್ಞಾನವನ್ನು ಹೊಂದಿ ಯೋಗಸತ್ವಬಲದಿಂದ ಕೂಡಿದವರು. ಆಕಾಶದಲ್ಲಿ ಸೂರ್ಯ-ಚಂದ್ರರನ್ನು, ಭಗವಂತನ ವ್ಯಾಪ್ತಿಯನ್ನು ನೋಡುವ ವ್ಯಕ್ತಿಗಳು ಸಾತ್ವಿಕರೆನಿಸುತ್ತಾರೆ.

ಏಕಸ್ತಂಭೇ ನವದ್ವಾರೇ ತ್ರಿಸ್ಥೂಣೇ ಪಂಚಧಾತುಕೇ ।
ಏತಸ್ಮಿನ್ ದೇಹನಗರೇ ರಾಜಸಸ್ತು ಸದಾ ಭವೇತ್ ॥೧೧೮॥

ಪ್ರಕೃತಿ ಎಂಬ ಮೂಲಸ್ತಂಭದಿಂದ ಕೂಡಿದ, ನವದ್ವಾರಗಳು ಇರುವ, ಸತ್ವ-ರಜಸ್-ತಮೋಗುಣಗಳೆಂಬ ಸ್ಥೂಣಗಳಿಂದ ಕೂಡಿರುವ, ಪಂಚಧಾತುಗಳಿಂದ ಕೂಡಿರುವ ಈ ದೇಹವೆಂಬ ನಗರದಲ್ಲಿ ರಾಜಸರು ಯಾವಾಗಲೂ ಉತ್ಪನ್ನರಾಗಿರುತ್ತಾರೆ.

ಉದಿತೇ ಸವಿತರ್ಯಾಪ್ಯಕ್ರಿಯಾಯುಕ್ತಸ್ಯ ಧೀಮತಃ ।
ಚತುರ್ವೇದವಿದಶ್ಚಾಪಿ ದೇಹೇ ಷಟ್ ವೃಷಲಾಃ ಸ್ಮೃತಾಃ ॥೧೧೯॥

ಸೂರ್ಯೋದಯದಿಂದ ಆರಂಭಿಸಿ ನಿತ್ಯವೂ ಕ್ರಿಯಾಶೀಲರಾಗಿರುವ, ಧೀಮಂತರಾದ, ಚತುರ್ವೇದಪಾರಂಗತನಾದ ಬ್ರಾಹ್ಮಣನ ಶರೀರದಲ್ಲಿ ಆರು ಮಂದಿ ವೃಷಲರೂ (ಶೂದ್ರರು) ಇದ್ದಾರೆ ಎಂದು ತಿಳಿಯಬೇಕು.

ಕ್ಷತ್ರಿಯಾಃ ಸಪ್ತ ವಿಜ್ಞೇಯಾ ವೈಶ್ಯಾಸ್ತ್ವಷ್ಟೌ ಪ್ರಕೀರ್ತಿತಾಃ ।
ನಿಯತಾಃ ಪಾಂಡವಶ್ರೇಷ್ಠ ಶೂದ್ರಾಣಾಮೇಕವಿಂಶತಿಃ ॥೧೨೦॥

ಹಾಗೆಯೇ ಈ ಶರೀರದಲ್ಲಿ ಏಳು ಮಂದಿ ಕ್ಷತ್ರಿಯರು, ಎಂಟು ಮಂದಿ ವೈಶ್ಯರು, ಇಪ್ಪತ್ತೊಂದು ಮಂದಿ ಶೂದ್ರರು ನಿಯಮೇನ ಇರುತ್ತಾರೆಂದು ತಿಳಿಯಬೇಕು.

ಕಾಮಃ ಕ್ರೋಧಶ್ಚ ಲೋಭಶ್ಚ ಮೋಹಶ್ಚ ಮದ ಏವ ಚ ।
ಮಹಾಮೋಹಶ್ಚ ಇತ್ಯೇತೇ ದೇಹೇ ಷಟ್ ವೃಷಲಾಃ ಸ್ಮೃತಾಃ ॥೧೨೧॥

ಕಾಮ, ಕ್ರೋಧ, ಲೋಭ, ಮೋಹ, ಮದ, ಮಹಾಮೋಹ ಎಂಬ ಈ ಆರನ್ನು ಶರೀರದಲ್ಲಿರುವ ವೃಷಲರು ಎಂದು ತಿಳಿಯಬೇಕು.

ಗರ್ವಃ ಸ್ತಂಭೋ ಹ್ಯಹಂಕಾರ ಈರ್ಷ್ಯಾ ಚ ದ್ರೋಹ ಏವ ಚ ।
ಪಾರುಷ್ಯಂ ಕ್ರೂರತಾ ಚೇತಿ ಸಪ್ತೈತೇ ಕ್ಷತ್ರಿಯಾಃ ಸ್ಮೃತಾಃ ॥೧೨೨॥

ಗರ್ವ, ಸ್ತಂಭ, ಅಹಂಕಾರ, ಈರ್ಷ್ಯೆ, ದ್ರೋಹ, ಪಾರುಷ್ಯ, ಕ್ರೌರ್ಯ - ಈ ಏಳನ್ನು ಶರೀರದಲ್ಲಿರುವ ಕ್ಷತ್ರಿಯರೆಂದು ತಿಳಿಯಬೇಕು.

ತೀಕ್ಷ್ಣತಾ ನಿಕೃತಿರ್ಮಾಯಾ ಶಾಠ್ಯಂ ಡಂಭೋ ಹ್ಯನಾರ್ಜವಮ್ ।
ಪೈಶುನ್ಯಮನೃತಂ ಚೈವ ವೈಶ್ಯಾಸ್ತ್ವಷ್ಟೌ ಪ್ರಕೀರ್ತಿತಾಃ ॥೧೨೩॥

ತೀಕ್ಷ್ಣತೆ, ಕಪಟ, ಮಾಯೆ, ಶಠತ್ವ, ಡಂಭ, ಕುಟಿಲತೆ, ಚಾಡಿಕೋರತನ, ಅಸತ್ಯ ಭಾಷಣ - ಈ ಎಂಟನ್ನು ಶರೀರದಲ್ಲಿರುವ ವೈಶ್ಯರೆಂದು ತಿಳಿಯಬೇಕು.

ತೃಷ್ಣಾ ಬುಭುಕ್ಷಾ ನಿದ್ರಾ ಚ ಹ್ಯಾಲಸ್ಯಂ ಚಾಘೃಣಾऽದಯಾ ।
ಆಧಿಶ್ಚಾಪಿ ವಿಷಾದಶ್ಚ ಪ್ರಮಾದೋ ಹೀನಸತ್ವತಾ ॥೧೨೪॥

ಭಯಂ ವಿಕ್ಲವತಾ ಜಾಡ್ಯಂ ಪಾಪಕಂ ಮನ್ಯುರೇವ ಚ ।
ಆಶಾ ಚಾಶ್ರದ್ದಧಾನತ್ವಮನವಸ್ಥಾಪ್ಯಮಂತ್ರಣಮ್ ॥೧೨೫॥

ಅಶೌಚಂ ಮಲಿನತ್ವಂ ಚ ಶೂದ್ರಾ ಹ್ಯೇತೇ ಪ್ರಕೀರ್ತಿತಾಃ ॥೧೨೬॥

ತೃಷ್ಣೆ (ದಾಹ), ಯಾವಾಗಲೂ ತಿನ್ನುವ ಆಸೆ, ನಿದ್ರೆ, ಆಲಸ್ಯ, ನಿರ್ದಯತೆ, ಕ್ರೌರ್ಯ, ಮಾನಸಿಕ ಚಿಂತೆ, ವಿಷಾದ, ಪ್ರಮಾದ, ಸತ್ವಹೀನತೆ, ಭಯ, ಗಾಬರಿಗೊಳ್ಳುವಿಕೆ, ಜಡತ್ವ, ಪಾಪಕರ್ಮಾನುಷ್ಠಾನ, ನಿತ್ಯವೂ ಕ್ರೋಧ, ಮಿತಿಮೀರಿದ ಆಸೆ, ಅಶ್ರದ್ಧೆ, ಅವ್ಯವಸ್ಥೆ, ಅಜಿತೇಂದ್ರಿಯತ್ವ, ಅಪಾವಿತ್ರ್ಯ, ಮಾಲಿನ್ಯ - ಈ ಇಪ್ಪತ್ತೊಂದನ್ನು ಶರೀರದಲ್ಲಿರುವ ಶೂದ್ರರೆಂದು ಭಾವಿಸಬೇಕು.

ಯಸ್ಮಿನ್ನೇತೇ ನ ದೃಶ್ಯಂತೇ ಸ ವೈ ಬ್ರಾಹ್ಮಣ ಉಚ್ಯತೇ ॥೧೨೭॥

ಯಾವ ವ್ಯಕ್ತಿಯಲ್ಲಿ ಇವುಗಳಿರುವುದಿಲ್ಲವೋ ಅವನೇ ಬ್ರಾಹ್ಮಣ ಎಂದು ಕರೆಸಿಕೊಳ್ಳುತ್ತಾನೆ.

ಯೇಷು ಯೇಷು ಹಿ ಭಾವೇಷು ಯತ್ಕಾಲಂ ವರ್ತತೇ ದ್ವಿಜಃ ।
ತತ್ತತ್ಕಾಲಂ ಸ ವಿಜ್ಞೇಯೋ ಬ್ರಾಹ್ಮಣೋ ಜ್ಞಾನದುರ್ಬಲಃ ॥೧೨೮॥

ಆದುದರಿಂದ ಕಾಮ-ಕ್ರೋಧಾದಿ ವೃಷಲಭಾವಗಳು ಎಲ್ಲಿಯ ತನಕ ಬ್ರಾಹ್ಮಣನಲ್ಲಿರುತ್ತವೋ ಅಲ್ಲಿಯ ತನಕ ಬ್ರಾಹ್ಮಣನು ಶೂದ್ರನೇ ಎಂದು ಕರೆಸಿಕೊಳ್ಳುತ್ತಾನೆ. ಹೀಗೆ ಕ್ಷತ್ರಿಯರಲ್ಲಿರುವ ಆಯಾ ದುರ್ಗುಣಗಳು ನಾಶವಾದಾಗ, ಕ್ಷತ್ರಿಯೋಚಿತವಾದ ಗುಣಗಳು ಬಂದಾಗ ಮಾತ್ರ ಕ್ಷತ್ರಿಯರು ಎಂದು ಕರೆಸಿಕೊಳ್ಳುತ್ತಾರೆ.

ಪ್ರಾಣಾನಾಯಮ್ಯ ಯತ್ಕಾಲೇ ಯೋ ಮಾಂ ಚಾಪಿ ವಿಚಿಂತಯೇತ್ ।
ತತ್ಕಾಲೇ ವೈ ದ್ವಿಜೋ ಜ್ಞೇಯಃ ಶೇಷಕಾಲೇ ಹ್ಯಥೇತರಃ ॥೧೨೯॥

ಯಾರು ಪ್ರಾಣಾಯಾಮಗಳನ್ನು ಆಚರಿಸಿ, ನನ್ನನ್ನು ಯಾವ ಕಾಲದಲ್ಲಿ ಧ್ಯಾನಿಸುತ್ತಾರೋ ಅದೇ ಕಾಲವು ಬ್ರಾಹ್ಮಣನಿಗೆ ದ್ವಿಜ ಎಂದು ಹೇಳಿಸಿಕೊಳ್ಳುವ ಕಾಲ. ನನ್ನನ್ನು ಧ್ಯಾನಿಸದೆ ಇರುವ ಕಾಲ ಅವನು ಬ್ರಾಹ್ಮಣನಾಗದಿರುವ ಕಾಲ ಎಂದು ತಿಳಿಯಬೇಕು.

ತಸ್ಮಾತ್ತು ಸಾತ್ವಿಕೋ ಭೂತ್ವಾ ಶುಚಿಃ ಕ್ರೋಧವಿವರ್ಜಿತಃ ।
ಮಾಮರ್ಚಯೇತ್ತು ಸತತಂ ಮತ್ಪ್ರಿಯತ್ವಂ ಯದೀಚ್ಛತಿ ॥೧೩೦॥

ಆದ್ದರಿಂದ ಸಾತ್ವಿಕನಾಗಿ, ಶುಚಿಯಾಗಿ, ಕ್ರೋಧವನ್ನು ಬಿಟ್ಟು, ನನ್ನ ಪ್ರೀತಿಯನ್ನು ಬಯಸುವ ವ್ಯಕ್ತಿಯು ಯಾವಾಗಲೂ ನನ್ನ ಆರಾಧನೆಯಲ್ಲಿಯೇ ತತ್ಪರನಾಗಿರಬೇಕು.

ಅಲೋಲಜಿಹ್ವಃ ಸಮುಪಸ್ಥಿತೋ ಧೃತಿಂ
ನಿಧಾಯ ಚಕ್ಷುರ್ಯುಗಮಾತ್ರಮೇವ ಚ ।
ಮನಶ್ಚ ವಾಚಂ ಚ ನಿಗೃಹ್ಯ ಚಂಚಲಂ
ಭಯಾನ್ನಿವೃತ್ತೋ ಮಮ ಭಕ್ತ ಉಚ್ಯತೇ ॥೧೩೧॥

ಯಾರಿಗೆ ನಾಲಿಗೆಯ ಚಾಪಲ್ಯವಿಲ್ಲವೋ, ಯಾವನು ಮಹಾಧೈರ್ಯಶಾಲಿಯೋ, ಯಾವನು ಚಂಚಲವಾದ ಮನಸ್ಸನ್ನು, ವಾಣಿಯನ್ನು ನಿಗ್ರಹಿಸಿಕೊಂಡಿದ್ದಾನೋ, ಎರಡು ಕಣ್ಣುಗಳ ದೃಷ್ಟಿಯನ್ನೂ ಜೊತೆಗೂಡಿಸಿ ನನ್ನನ್ನೇ ಧ್ಯಾನ ಮಾಡುತ್ತಾನೋ, ನಿರ್ಭೀತನಾಗಿರುತ್ತಾನೋ ಅವನೇ ನನ್ನ ಭಕ್ತ.

ಈದೃಶಾ ಧ್ಯಾನಿನೋ ಯೇ ತು ಬ್ರಾಹ್ಮಣಾ ನಿಯತೇಂದ್ರಿಯಾಃ ।
ತೇಷಾಂ ಶ್ರಾದ್ಧೇಷು ತೃಪ್ಯಂತಿ ತೇನ ತೃಪ್ತಾಃ ಪಿತಾಮಹಾಃ ॥೧೩೨॥

ಇಂತಹ ಅಧ್ಯಾತ್ಮಜ್ಞಾನದಿಂದ ಕೂಡಿದ, ಜಿತೇಂದ್ರಿಯರಾದ ಬ್ರಾಹ್ಮಣರು ಶ್ರಾದ್ಧಗಳಲ್ಲಿ ಭೋಜನ ಮಾಡಿ ತೃಪ್ತರಾದರೆ ಕರ್ತೃವಿನ ಪಿತೃ-ಪಿತಾಮಹರು ತೃಪ್ತರಾಗುತ್ತಾರೆ.

ಧರ್ಮೋ ಜಯತಿ ನಾಧರ್ಮಃ ಸತ್ಯಂ ಜಯತಿ ನಾನೃತಮ್ ।
ಕ್ಷಮಾ ಜಯತಿ ನ ಕ್ರೋಧಃ ಕ್ಷಮಾವಾನ್ ಬ್ರಾಹ್ಮಣೋ ಭವೇತ್ ॥

ಧರ್ಮವೇ ಜಯಿಸುತ್ತದೆ, ಅಧರ್ಮಕ್ಕೆ ಎಂದಿಗೂ ಜಯವಿಲ್ಲ. ಸತ್ಯವೇ ಜಯಿಸುತ್ತದೆ, ಅಸತ್ಯಕ್ಕೆ ಜಯವಿಲ್ಲ. ಕ್ಷಮೆಯೇ ಜಯಿಸುತ್ತದೆ, ಕ್ರೋಧಕ್ಕೆ ಜಯವಿಲ್ಲ. ಆದ್ದರಿಂದ ಬ್ರಾಹ್ಮಣನು ಯಾವಾಗಲೂ ಕ್ಷಮಾವಂತನಾಗಿರಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಭಕ್ತಲಕ್ಷಣಕಥನಂ ನಾಮ
ಚತುರಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐದನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಹತ್ತು ಪ್ರಕಾರವಾದ ಕಪಿಲಗೋವುಗಳ ವಿಭಾಗವನ್ನು ಹೇಳುವ ಮೂಲಕ ಅದರ ದಾನದ ಮಹತ್ವವನ್ನು ಬಣ್ಣಿಸಿದುದು.

ವೈಶಂಪಾಯನಃ

ದಾನಪುಣ್ಯಫಲಂ ಶ್ರುತ್ವಾ ತಪಃ ಪುಣ್ಯಫಲಾನಿ ಚ ।
ಧರ್ಮಪುತ್ರಃ ಪ್ರಹೃಷ್ಟಾತ್ಮಾ ಕೇಶವಂ ಪುನರಬ್ರವೀತ್ ॥೧॥

ವೈಶಂಪಾಯನ– ಜನಮೇಜಯನೇ, ದಾನಗಳ ಮತ್ತು ತಪಸ್ಸಿನ ಪುಣ್ಯದ ಫಲವನ್ನು ಕೃಷ್ಣನ ಮುಖದಿಂದ ಕೇಳಿಸಿಕೊಂಡು ಸಂತುಷ್ಟನಾದ ಧರ್ಮರಾಜನು ಕೇಶವನನ್ನು ಕುರಿತು ಪುನಃ ಹೀಗೆ ಹೇಳಿದನು.

ಯುಧಿಷ್ಠಿರಃ

ಯಾ ಚೈಷಾ ಕಪಿಲಾ ದೇವ ಪೂರ್ವಮುತ್ಪಾದಿತಾ ವಿಭೋ ।
ಹೋಮಧೇನುಃ ಸದಾ ಪುಣ್ಯಾ ಚತುರ್ವಕ್ತ್ರೇಣ ಮಾಧವ ॥೨॥

ಯುಧಿಷ್ಠಿರ– ಮಾಧವನೇ, ಅಗ್ನಿಹೋತ್ರದ ಸಿದ್ಧಿಗಾಗಿ ಚತುರ್ಮುಖ ಬ್ರಹ್ಮನು ಕಪಿಲಾ ಎಂಬ ಪುಣ್ಯಸ್ವರೂಪಳಾದ ಹೋಮಧೇನುವನ್ನು ಹಿಂದೆ ಸೃಷ್ಟಿಸಿದನು.

ಸಾ ಕಥಂ ಬ್ರಾಹ್ಮಣೇಭ್ಯೋ ಹಿ ದೇಯಾ ಕಸ್ಮಿನ್ ದಿನೇಽಪಿ ವಾ ।
ಕೀದೃಶಾಯ ಚ ವಿಪ್ರಾಯ ದಾತವ್ಯಾ ಪುಣ್ಯಲಕ್ಷಣಾ ॥೩॥

ಅಂತಹ ಕಪಿಲ ಧೇನುವನ್ನು ಬ್ರಾಹ್ಮಣರಿಗೆ ಹೇಗೆ ದಾನ ಮಾಡಬೇಕು? ಯಾವ ದಿವಸದಲ್ಲಿ ನೀಡಬೇಕು? ಪುಣ್ಯಲಕ್ಷಣಗಳುಳ್ಳ ಆ ಧೇನುವನ್ನು ಎಂತಹ ಬ್ರಾಹ್ಮಣನಿಗೆ ದಾನ ಮಾಡಬೇಕು?

ಕತಿ ವಾ ಕಪಿಲಾಃ ಪ್ರೋಕ್ತಾಃ ಸ್ವಯಮೇವ ಸ್ವಯಂಭುವಾ ।
ಕೈರ್ವಾ ದೇಯಾಶ್ಚ ತಾ ದೇವ ಶ್ರೋತುಮಿಚ್ಛಾಮಿ ತತ್ತ್ವತಃ ॥೪॥

ಕಪಿಲಧೇನುಗಳಲ್ಲಿ ಎಷ್ಟು ಪ್ರಭೇದಗಳಿವೆ ಎಂದು ಚತುರ್ಮುಖ ಬ್ರಹ್ಮನು ತಿಳಿಸಿದ್ದಾನೆ? ಕಪಿಲಧೇನುವನ್ನು ದಾನ ಮಾಡುವವನು ಹೇಗಿರಬೇಕು? ಇದನ್ನು ಯಥಾವತ್ತಾಗಿ ನಿನ್ನಿಂದ ತಿಳಿಯಬಯಸುವೆ.

ವೈಶಂಪಾಯನಃ

ಏವಮುಕ್ತೋ ಹೃಷೀಕೇಶೋ ಧರ್ಮಪುತ್ರೇಣ ಸಂಸದಿ ।
ಅಬ್ರವೀತ್ ಕಪಿಲಾಸಂಖ್ಯಾಂ ತಾಸಾಂ ಮಾಹಾತ್ಮ್ಯಮೇವ ಚ ॥೫॥

ವೈಶಂಪಾಯನ– ಜನಮೇಜಯನೇ, ರಾಜಸಭೆಯಲ್ಲಿ ಧರ್ಮಪುತ್ರನಾದ ಹೃಷೀಕೇಶನನ್ನು ಹೀಗೆ ಪ್ರಶ್ನಿಸಲು, ಕಪಿಲಾಧೇನುಗಳ ಸಂಖ್ಯೆಯನ್ನು, ಅವುಗಳ ಮಹಿಮೆಯನ್ನು ಹೇಳಿದನು.

ಶ್ರೀಭಗವಾನ್

ಶೃಣು ಪಾಂಡವ ತತ್ತೆ ರ್ಯಿನ ಪವಿತ್ರಂ ಪಾವನಂ ಪರಮ್ ।
ಯಚ್ಛ್ರುತ್ವಾ ಪಾಪಕರ್ಮಾSಪಿ ನರಃ ಪಾಪೈಃ ಪ್ರಮುಚ್ಯತೇ ॥೬॥

ಶ್ರೀಭಗವಾನ್– ಪಾಂಡವನೇ, ಪವಿತ್ರವೂ, ಪಾವನವೂ ಶ್ರೇಷ್ಠವೂ ಆದ ಕಪಿಲಧೇನುವಿನ ಇತಿಹಾಸವನ್ನು ಹೇಳುತ್ತೇನೆ. ಇದರ ಮಹತ್ವವನ್ನು ಕೇಳುವುದರಿಂದ ಪಾಪಕರ್ಮ ಮಾಡಿದ ಮನುಷ್ಯನು ಸಕಲ ಪಾಪಕರ್ಮಗಳಿಂದ ಮುಕ್ತನಾಗುತ್ತಾನೆ.

ಅಗ್ನಿಮಧ್ಯೋದ್ಭವಾಂ ದಿವ್ಯಾಮಗ್ನಿಜ್ವಾಲಾಸಮಪ್ರಭಾಮ್ ।
ಅಗ್ನಿಜ್ವಾಲೋಜ್ಜ್ವಲಚ್ಛೃಂಗೀಂ ಪ್ರದೀಪ್ತಾಂಗಾರಲೋಚನಾಮ್ ॥೭॥

ಪೂರ್ವಕಾಲದಲ್ಲಿ ಚತುರ್ಮುಖಬ್ರಹ್ಮನು ಅಗ್ನಿಹೋತ್ರದ ನಿಮಿತ್ತದಿಂದ ಸಮಸ್ತವಾದ ತೇಜಸ್ಸುಗಳನ್ನು ಒಂದು ಕಡೆ ಸಂಗ್ರಹಿಸಿ ಅಗ್ನಿಯಂತೆ ಜ್ವಲಿಸುವ, ಬೆಳಗುವ, ಬೆಂಕಿಯಂತೆ ಕಣ್ಣುಗಳುಳ್ಳ, ಅಗ್ನಿಜ್ವಾಲೆಯಂತೆ ಶೃಂಗಗಳಿಂದ ಶೋಭಿಸುವ,

ಅಗ್ನಿಪುಚ್ಛಾಮಗ್ನಿಖುರಾಮ್ ಅಗ್ನಿರೋಮಪ್ರಭಾನ್ವಿತಾಮ್ ।
ತಾಮಾಗ್ನೇಯೀಮಗ್ನಿಜಿಹ್ವಾಮಗ್ನಿಗ್ರೀವಾಂ ಜ್ವಲತ್ಪ್ರಭಾಮ್ ॥೮॥

ಅಗ್ನಿಯಂತೆ ಬೆಳಗುವ ಪುಚ್ಛವುಳ್ಳ, ಅಗ್ನಿಯಂತೆ ಬೆಳಗುವ ಗೊರಸುಗಳುಳ್ಳ, ಅಗ್ನಿಯಂತೆ ರೋಮಗಳ ಪ್ರಭೆಯಿಂದ ಕೂಡಿದ, ಅಗ್ನಿಯಂತೆ ನಾಲಿಗೆಯುಳ್ಳ, ಅಗ್ನಿಯಂತೆ ಕುತ್ತಿಗೆಯುಳ್ಳ, ಅಗ್ನಿಯಂತೆ ಜ್ವಲಿಸುವ ಕಾಂತಿಯಿಂದ ಕೂಡಿದ ಗೋವನ್ನು ನಿರ್ಮಿಸಿದನು.

ಭುಂಜತೇ ಕಪಿಲಾಂ ಯೇ ತು ಶೂದ್ರಾ ಲೋಭೇನ ಮೋಹಿತಾಃ ।
ಪತಿತಾಂಸ್ತಾನ್ ವಿಜಾನೀಯಾತ್ ಚಂಡಾಲಸದೃಶಾ ಹಿ ತೇ ॥೯॥

ಇಂತಹ ಕಪಿಲಗೋವನ್ನು ಲೋಭದಿಂದ ಮೋಹಿತರಾಗಿ ಯಾವ ಶೂದ್ರರು ವಧೆ ಮಾಡಿ ತಿನ್ನುತ್ತಾರೋ ಅವರನ್ನು ಪತಿತರನ್ನಾಗಿಯೂ, ಚಂಡಾಲ ಸದೃಶರನ್ನಾಗಿ ತಿಳಿಯಬೇಕು.

ನ ತೇಷಾಂ ಬ್ರಾಹ್ಮಣಃ ಕಶ್ಚಿದ್ ಗೃಹೇ ಕುರ್ಯಾತ್ ಪ್ರತಿಗ್ರಹಮ್ ।
ದೂರಾಚ್ಚ ಪರಿಹರ್ತವ್ಯಾ ಮಹಾಪಾತಕಿನೋ ಹಿ ತೇ ॥೧೦॥

ಬ್ರಾಹ್ಮಣನು ಇಂತಹ ಗೋವನ್ನು ವಧೆ ಮಾಡಿದ ವ್ಯಕ್ತಿಗಳ ಮನೆಯಲ್ಲಿ ದಾನವನ್ನು ಸ್ವೀಕರಿಸಬಾರದು. ಅವರನ್ನು ದೂರದಲ್ಲೇ ನಿರಾಕರಿಸಬೇಕು. ಗೋಹತ್ಯೆ ಮಾಡಿದವರು ಮಹಾಪಾತಕಿಗಳು ಎಂದು ಕರೆಸಿಕೊಳ್ಳುತ್ತಾರೆ.

ಸರ್ವಕಾಲಂ ಹಿ ತೇ ಸರ್ವೈರ್ವರ್ಜಿತಾಃ ಪಿತೃದೈವತ್ಯೈಃ ।
ತೇ ಸದಾ ಹ್ಯಪ್ರತಿಗ್ರಾಹ್ಯಾ ಹ್ಯಸಂಭಾಷ್ಯಾಶ್ಚ ಪಾಪಿನಃ ॥೧೧॥

ಎಲ್ಲ ಕಾಲಗಳಲ್ಲಿಯೂ ಗೋಪಾತಕಿಗಳು ಎಲ್ಲ ಪಿತೃದೇವತೆಗಳಿಂದ ವರ್ಜಿತರಾಗಿದ್ದಾರೆ. ಅವರ ಬಳಿ ದಾನವನ್ನು ಸ್ವೀಕರಿಸಬಾರದು, ಅವರ ಬಳಿ ಮಾತುಗಳನ್ನೂ ಆಡಬಾರದು.

ಪಿಬಂತಿ ಕಪಿಲಾಂ ಯಾವತ್ ತಾವತ್ ತೇಷಾಂ ಪಿತಾಮಹಾಃ ।
ಅಮೇಧ್ಯಮುಪಭುಂಜಂತಿ ಭೂಮ್ಯಾಂ ವೈ ಶ್ವಸೃಗಾಲವತ್ ॥೧೨॥

ಯಾವ ಶೂದ್ರರು ಕಪಿಲಧೇನುವಿನ ಹಾಲನ್ನು ಪಾನ ಮಾಡುತ್ತಾರೋ ಅವರ ಪಿತೃಗಳು ನಾಯಿ, ನರಿಗಳಂತೆ ಭೂಮಿಯಲ್ಲಿ ಅಮೇಧ್ಯವನ್ನೇ ತಿನ್ನುವವರಾಗುತ್ತಾರೆ.

ಕಪಿಲಾಯಾ ಘೃತಂ ಕ್ಷೀರಂ ದಧಿ ತಕ್ರಮಥಾಪಿ ವಾ ।
ಯೇ ಶೂದ್ರಾ ಉಪಭುಂಜಂತಿ ತೇಷಾಂ ಗತಿಮಿಮಾಂ ಶೃಣು ॥೧೩॥

ಯಾವ ಶೂದ್ರರು ಕಪಿಲಧೇನುವಿನ ತುಪ್ಪವನ್ನಾಗಲಿ, ಹಾಲನ್ನಾಗಲಿ, ಮೊಸರನ್ನಾಗಲಿ, ಮಜ್ಜಿಗೆಯನ್ನಾಗಲಿ ಸ್ವೀಕರಿಸುತ್ತಾರೋ ಅವರಿಗೆ ದೊರಕುವ ಗತಿಗಳ ಬಗ್ಗೆ ಕೇಳಿಸಿಕೊ.

ಕಪಿಲೋಪಜೀವೀ ಶೂದ್ರಸ್ತು ಮೃತೋ ಗಚ್ಛತಿ ರೌರವಮ್ ।
ಕ್ಲಿಶ್ಯತೇ ರೌರವೇ ಘೋರೇ ವರ್ಷಕೋಟಿಶತಂ ವಸನ್ ॥೧೪॥

ಕಪಿಲಧೇನುವಿನಿಂದ ಜೀವಿಕೆಯನ್ನು ನಡೆಸುವ ಶೂದ್ರನು ಸತ್ತ ಬಳಿಕ ರೌರವ ನರಕಕ್ಕೆ ಸೇರುತ್ತಾನೆ. ಕೋಟಿ ವರ್ಷಗಳ ಕಾಲ ರೌರವ ನರಕದಲ್ಲಿ ದುಃಖಕ್ಕೀಡಾಗುತ್ತಾನೆ.

ರೌರವಾಚ್ಚ ಪರಿಭ್ರಷ್ಟೋ ವಿಷ್ಠಾಯಾಂ ಜಾಯತೇ ಕ್ರಿಮಿಃ ॥೧೫॥

ಬಳಿಕ ರೌರವ ನರಕದಿಂದ ಹೊರಬಂದವನಾಗಿ ಅಮೇಧ್ಯದಲ್ಲಿ ಕ್ರಿಮಿಯಾಗಿ ಹುಟ್ಟುತ್ತಾನೆ.

ವಿಷ್ಠಾಗರ್ತೇಷು ಸಂವಿಷ್ಟೋ ದುರ್ಗಂಧೇಷು ಸಹಸ್ರಶಃ ।
ತತ್ರ ತತ್ರೋಪಜಾಯೇತ ನೋತ್ತಾರಂ ತತ್ರ ವಿಂದತಿ ॥೧೬॥

ಅಮೇಧ್ಯದ ಹೊಂಡಗಳಲ್ಲಿ ದೂಡಲ್ಪಟ್ಟವನಾಗಿ, ಸಾವಿರಾರು ದುರ್ಗಂಧಗಳಿಂದ ಅಭಿಭೂತನಾಗಿ, ಅಲ್ಲಿಯೇ ಹೊರಳಾಡುತ್ತಿರುತ್ತಾನೆ. ಅಲ್ಲಿಂದ ಉದ್ಧಾರವನ್ನು ಹೊಂದುವುದೇ ಇಲ್ಲ.

ಬ್ರಾಹ್ಮಣಶ್ಚೈವ ಯಸ್ತೇಷಾಂ ಗೃಹೇ ಕುರ್ಯಾತ್ ಪ್ರತಿಗ್ರಹಮ್ ।
ತತಃ ಪ್ರಭೃತಿ ತಸ್ಯಾಪಿ ಪಿತರಃ ಸ್ಯುರಮೇಧ್ಯಪಾಃ ॥೧೭॥

ಯಾವ ಬ್ರಾಹ್ಮಣನು ಕಪಿಲಗೋವನ್ನು ಜೀವಿಸಿಕೊಂಡು ಬದುಕುವ ಶೂದ್ರನ ಮನೆಯಲ್ಲಿ ದಾನವನ್ನು ಸ್ವೀಕರಿಸುತ್ತಾನೋ ಅಂದಿನಿಂದ ಆ ಬ್ರಾಹ್ಮಣರ ಪಿತೃಗಳು ಅಮೇಧ್ಯವನ್ನು ಉಣ್ಣಲು ಆರಂಭಿಸುತ್ತಾರೆ.

ನ ತೇನ ಸಾರ್ಧಂ ಸಂಭಾಷ್ಯೇನ್ನ ಚಾಪ್ಯೇಕಾಸನಂ ವ್ರಜೇತ್ ।
ಸ ನಿತ್ಯಂ ವರ್ಜನೀಯೋ ಹಿ ದೂರಾತ್ತು ಬ್ರಾಹ್ಮಣಾಧಮಃ ॥೧೮॥

ಅಂತಹ ಬ್ರಾಹ್ಮಣನ ಜೊತೆಗೆ ಪಿತೃಗಳು ಮಾತುಗಳನ್ನಾಡುವುದಿಲ್ಲ. ಅವನ ಆಸನವನ್ನು ಸ್ವೀಕರಿಸುವುದಿಲ್ಲ. ಆ ಬ್ರಾಹ್ಮಣನು ನಿತ್ಯವೂ ಉತ್ತಮರಿಂದ ತ್ಯಜಿಸಲ್ಪಡುವವನಾಗುತ್ತಾನೆ.

ಯಸ್ತೇನ ಸಹ ಸಂಭಾಷೇದ್ ಏಕಶಯ್ಯಾಂ ವ್ರಜೇತ ವಾ ।
ಪ್ರಾಜಾಪತ್ಯಂ ಚರೇತ್ ಕೃಚ್ಛ್ರಂ ಸ ಚ ತೇನ ವಿಶುದ್ಧ್ಯತಿ ॥೧೯॥

ಯಾವ ವ್ಯಕ್ತಿಯು ಕಪಿಲಧೇನುವಿನ ಜೀವಿಕೆಯನ್ನು ನಡೆಸುವ ಶೂದ್ರನ ಮನೆಯಲ್ಲಿ ಪ್ರತಿಗ್ರಹವನ್ನು ಮಾಡಿದ್ದಾನೋ ಅವನ ಜೊತೆಗೆ ಮಾತನಾಡಬಾರದು. ಅವನ ಹಾಸಿಗೆಯಲ್ಲಿ ಮಲಗಬಾರದು. ಒಂದು ವೇಳೆ ತಿಳಿಯದೆ ಮಾಡಿದಲ್ಲಿ ಪ್ರಾಜಾಪತ್ಯ ವ್ರತವನ್ನು, ಕೃಚ್ಛ್ರವ್ರತವನ್ನು ಆಚರಿಸಬೇಕು. ಇದರಿಂದ ಶುದ್ಧಿಯನ್ನು ಹೊಂದುತ್ತಾನೆ.

ಕಪಿಲೋಪಜೀವಿನಃ ಶೂದ್ರಾದ್ ಯಃ ಕರೋತಿ ಪ್ರತಿಗ್ರಹಮ್ ।
ಪ್ರಾಯಶ್ಚಿತ್ತಂ ಭವೇತ್ ತಸ್ಯ ವಿಪ್ರಸ್ಯೈತನ್ನ ಸಂಶಯಃ ॥೨೦॥

ಯಾವ ವ್ಯಕ್ತಿಯು ಕಪಿಲಧೇನುವನ್ನು ಅವಲಂಬಿಸಿಕೊಂಡು ಜೀವಿಕೆಯನ್ನು ನಡೆಸುವ ಶೂದ್ರನಿಂದ ಪ್ರತಿಗ್ರಹವನ್ನು ಮಾಡುತ್ತಾನೋ ಅವನಿಗೆ ಇದೇ ಪ್ರಾಯಶ್ಚಿತ್ತವು. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಬ್ರಹ್ಮಕೂರ್ಚಂ ಪ್ರಕುರ್ವೀತ ಚಾಂದ್ರಾಯಣಮಥಾಪಿ ವಾ ।
ಮುಚ್ಯತೇ ಕಿಲ್ಬಿಷಾತ್ ತಸ್ಮಾದ್ ಏತೇನ ಬ್ರಾಹ್ಮಣೋ ಹಿ ಸಃ ॥೨೧॥

ಬ್ರಹ್ಮಕೂರ್ಚ ಎಂಬ ವ್ರತವನ್ನು ಮಾಡಬೇಕು. ಅರ್ಥಾತ್ ಪ್ರಾಜಾಪತ್ಯ ವ್ರತವನ್ನು ಮಾಡಬೇಕು. ಚಾಂದ್ರಾಯಣ ವ್ರತವನ್ನು ಮಾಡಬೇಕು. ಇದರಿಂದ ಬ್ರಾಹ್ಮಣನು ಆ ಪಾಪದಿಂದ ಮುಕ್ತನಾಗುತ್ತಾನೆ.

ಕಪಿಲಾ ಹ್ಯಗ್ನಿಹೋತ್ರಾರ್ಥಂ ಯಜ್ಞಾರ್ಥೇ ಚ ಸ್ವಯಂಭುವಾ ।
ಸರ್ವತಸ್ತೇಜ ಉದ್ಧೃತ್ಯ ಬ್ರಹ್ಮಣಾ ನಿರ್ಮಿತಾ ಪುರಾ ॥೨೨॥

ಕಪಿಲಧೇನುವು ಅಗ್ನಿಹೋತ್ರದ ಸಲುವಾಗಿ ಯಜ್ಞದಲ್ಲಿ ಚತುರ್ಮುಖ ಬ್ರಹ್ಮನಿಂದ ಸೃಷ್ಟವಾಗಿದೆ. ಚತುರ್ಮುಖ ಬ್ರಹ್ಮನು ಎಲ್ಲ ಕಡೆಯ ತೇಜಸ್ಸನ್ನು ಸಂಗ್ರಹಿಸಿ ಕಪಿಲ ಧೇನುವನ್ನು ಹಿಂದೆ ನಿರ್ಮಿಸಿರುತ್ತಾನೆ.

ಪವಿತ್ರಂ ಚ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಮ್ ।
ಪುಣ್ಯಾನಾಂ ಪರಮಂ ಪುಣ್ಯಂ ಕಪಿಲಾ ಪಾಂಡುನಂದನ ॥೨೩॥

ಕಪಿಲಧೇನುವು ಪವಿತ್ರ ವಸ್ತುಗಳಿಗೂ ಪರಮಪವಿತ್ರವಾದುದು. ಮಂಗಳ ವಸ್ತುಗಳಲ್ಲಿಯೂ ಮಂಗಳಕರವಾದುದು. ಪುಣ್ಯಗಳೆಲ್ಲದಕ್ಕೂ ಪರಮ ಪುಣ್ಯಸ್ವರೂಪವು.

ತಪಸಾಂ ತಪ ಏವಾಗ್ರ್ಯಂ ವ್ರತಾನಾಂ ವ್ರತಮುತ್ತಮಮ್ ।
ದಾನಾನಾಂ ಪರಮಂ ದಾನಂ ನಿಧಾನಂ ಹ್ಯೇತದಕ್ಷಯಮ್ ॥೨೪॥

ತಪಸ್ಸುಗಳಲ್ಲಿ ಶ್ರೇಷ್ಠವಾದ ತಪಸ್ಸು, ವ್ರತಗಳಲ್ಲಿ ಉತ್ತಮವಾದ ವ್ರತ, ದಾನಗಳಲ್ಲಿ ಉತ್ತಮವಾದ ದಾನ ಎಲ್ಲದರ ಅಕ್ಷಯಕ್ಕೂ ಈ ಕಪಿಲಧೇನುವೇ ಕಾರಣವಾಗಿದೆ.

ಬಳಿಕ ರೌರವ ನರಕದಿಂದ ಹೊರಬಂದವನಾಗಿ ಅಮೇಧ್ಯದಲ್ಲಿ ಕ್ರಿಮಿಯಾಗಿ ಹುಟ್ಟುತ್ತಾನೆ.

ವಿಷ್ಠಾಗರ್ತೇಷು ಸಂವಿಷ್ಟೋ ದುರ್ಗಂಧೇಷು ಸಹಸ್ರಶಃ ।
ತತ್ರ ತತ್ರೋಪಜಾಯೇತ ನೋತ್ತಾರಂ ತತ್ರ ವಿಂದತಿ ॥೧೬॥

ಅಮೇಧ್ಯದ ಹೊಂಡಗಳಲ್ಲಿ ದೂಡಲ್ಪಟ್ಟವನಾಗಿ, ಸಾವಿರಾರು ದುರ್ಗಂಧಗಳಿಂದ ಅಭಿಭೂತನಾಗಿ, ಅಲ್ಲಿಯೇ ಹೊರಳಾಡುತ್ತಿರುತ್ತಾನೆ. ಅಲ್ಲಿಂದ ಉದ್ಧಾರವನ್ನು ಹೊಂದುವುದೇ ಇಲ್ಲ.

ಬ್ರಾಹ್ಮಣಶ್ಚೈವ ಯಸ್ತೇಷಾಂ ಗೃಹೇ ಕುರ್ಯಾತ್ ಪ್ರತಿಗ್ರಹಮ್ ।
ತತಃ ಪ್ರಭೃತಿ ತಸ್ಯಾಪಿ ಪಿತರಃ ಸ್ಯುರಮೇಧ್ಯಪಾಃ ॥೧೭॥

ಯಾವ ಬ್ರಾಹ್ಮಣನು ಕಪಿಲಗೋವನ್ನು ಜೀವಿಸಿಕೊಂಡು ಬದುಕುವ ಶೂದ್ರನ ಮನೆಯಲ್ಲಿ ದಾನವನ್ನು ಸ್ವೀಕರಿಸುತ್ತಾನೋ ಅಂದಿನಿಂದ ಆ ಬ್ರಾಹ್ಮಣರ ಪಿತೃಗಳು ಅಮೇಧ್ಯವನ್ನು ಉಣ್ಣಲು ಆರಂಭಿಸುತ್ತಾರೆ.

ನ ತೇನ ಸಾರ್ಧಂ ಸಂಭಾಷ್ಯೇನ್ನ ಚಾಪ್ಯೇಕಾಸನಂ ವ್ರಜೇತ್ ।
ಸ ನಿತ್ಯಂ ವರ್ಜನೀಯೋ ಹಿ ದೂರಾತ್ತು ಬ್ರಾಹ್ಮಣಾಧಮಃ ॥೧೮॥

ಅಂತಹ ಬ್ರಾಹ್ಮಣನ ಜೊತೆಗೆ ಪಿತೃಗಳು ಮಾತುಗಳನ್ನಾಡುವುದಿಲ್ಲ. ಅವನ ಆಸನವನ್ನು ಸ್ವೀಕರಿಸುವುದಿಲ್ಲ. ಆ ಬ್ರಾಹ್ಮಣನು ನಿತ್ಯವೂ ಉತ್ತಮರಿಂದ ತ್ಯಜಿಸಲ್ಪಡುವವನಾಗುತ್ತಾನೆ.

ಯಸ್ತೇನ ಸಹ ಸಂಭಾಷೇದ್ ಏಕಶಯ್ಯಾಂ ವ್ರಜೇತ ವಾ ।
ಪ್ರಾಜಾಪತ್ಯಂ ಚರೇತ್ ಕೃಚ್ಛ್ರಂ ಸ ಚ ತೇನ ವಿಶುದ್ಧ್ಯತಿ ॥೧೯॥

ಯಾವ ವ್ಯಕ್ತಿಯು ಕಪಿಲಧೇನುವಿನ ಜೀವಿಕೆಯನ್ನು ನಡೆಸುವ ಶೂದ್ರನ ಮನೆಯಲ್ಲಿ ಪ್ರತಿಗ್ರಹವನ್ನು ಮಾಡಿದ್ದಾನೋ ಅವನ ಜೊತೆಗೆ ಮಾತನಾಡಬಾರದು. ಅವನ ಹಾಸಿಗೆಯಲ್ಲಿ ಮಲಗಬಾರದು. ಒಂದು ವೇಳೆ ತಿಳಿಯದೆ ಮಾಡಿದಲ್ಲಿ ಪ್ರಾಜಾಪತ್ಯ ವ್ರತವನ್ನು, ಕೃಚ್ಛ್ರವ್ರತವನ್ನು ಆಚರಿಸಬೇಕು. ಇದರಿಂದ ಶುದ್ಧಿಯನ್ನು ಹೊಂದುತ್ತಾನೆ.

ಕಪಿಲೋಪಜೀವಿನಃ ಶೂದ್ರಾದ್ ಯಃ ಕರೋತಿ ಪ್ರತಿಗ್ರಹಮ್ ।
ಪ್ರಾಯಶ್ಚಿತ್ತಂ ಭವೇತ್ ತಸ್ಯ ವಿಪ್ರಸ್ಯೈತನ್ನ ಸಂಶಯಃ ॥೨೦॥

ಯಾವ ವ್ಯಕ್ತಿಯು ಕಪಿಲಧೇನುವನ್ನು ಅವಲಂಬಿಸಿಕೊಂಡು ಜೀವಿಕೆಯನ್ನು ನಡೆಸುವ ಶೂದ್ರನಿಂದ ಪ್ರತಿಗ್ರಹವನ್ನು ಮಾಡುತ್ತಾನೋ ಅವನಿಗೆ ಇದೇ ಪ್ರಾಯಶ್ಚಿತ್ತವು. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಬ್ರಹ್ಮಕೂರ್ಚಂ ಪ್ರಕುರ್ವೀತ ಚಾಂದ್ರಾಯಣಮಥಾಪಿ ವಾ ।
ಮುಚ್ಯತೇ ಕಿಲ್ಬಿಷಾತ್ ತಸ್ಮಾದ್ ಏತೇನ ಬ್ರಾಹ್ಮಣೋ ಹಿ ಸಃ ॥೨೧॥

ಬ್ರಹ್ಮಕೂರ್ಚ ಎಂಬ ವ್ರತವನ್ನು ಮಾಡಬೇಕು. ಅರ್ಥಾತ್ ಪ್ರಾಜಾಪತ್ಯ ವ್ರತವನ್ನು ಮಾಡಬೇಕು. ಚಾಂದ್ರಾಯಣ ವ್ರತವನ್ನು ಮಾಡಬೇಕು. ಇದರಿಂದ ಬ್ರಾಹ್ಮಣನು ಆ ಪಾಪದಿಂದ ಮುಕ್ತನಾಗುತ್ತಾನೆ.

ಕಪಿಲಾ ಹ್ಯಗ್ನಿಹೋತ್ರಾರ್ಥಂ ಯಜ್ಞಾರ್ಥೇ ಚ ಸ್ವಯಂಭುವಾ ।
ಸರ್ವತಸ್ತೇಜ ಉದ್ಧೃತ್ಯ ಬ್ರಹ್ಮಣಾ ನಿರ್ಮಿತಾ ಪುರಾ ॥೨೨॥

ಕಪಿಲಧೇನುವು ಅಗ್ನಿಹೋತ್ರದ ಸಲುವಾಗಿ ಯಜ್ಞದಲ್ಲಿ ಚತುರ್ಮುಖ ಬ್ರಹ್ಮನಿಂದ ಸೃಷ್ಟವಾಗಿದೆ. ಚತುರ್ಮುಖ ಬ್ರಹ್ಮನು ಎಲ್ಲ ಕಡೆಯ ತೇಜಸ್ಸನ್ನು ಸಂಗ್ರಹಿಸಿ ಕಪಿಲ ಧೇನುವನ್ನು ಹಿಂದೆ ನಿರ್ಮಿಸಿರುತ್ತಾನೆ.

ಪವಿತ್ರಂ ಚ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಮ್ ।
ಪುಣ್ಯಾನಾಂ ಪರಮಂ ಪುಣ್ಯಂ ಕಪಿಲಾ ಪಾಂಡುನಂದನ ॥೨೩॥

ಕಪಿಲಧೇನುವು ಪವಿತ್ರ ವಸ್ತುಗಳಿಗೂ ಪರಮಪವಿತ್ರವಾದುದು. ಮಂಗಳ ವಸ್ತುಗಳಲ್ಲಿಯೂ ಮಂಗಳಕರವಾದುದು. ಪುಣ್ಯಗಳೆಲ್ಲದಕ್ಕೂ ಪರಮ ಪುಣ್ಯಸ್ವರೂಪವು.

ತಪಸಾಂ ತಪ ಏವಾಗ್ರ್ಯಂ ವ್ರತಾನಾಂ ವ್ರತಮುತ್ತಮಮ್ ।
ದಾನಾನಾಂ ಪರಮಂ ದಾನಂ ನಿಧಾನಂ ಹ್ಯೇತದಕ್ಷಯಮ್ ॥೨೪॥

ತಪಸ್ಸುಗಳಲ್ಲಿ ಶ್ರೇಷ್ಠವಾದ ತಪಸ್ಸು, ವ್ರತಗಳಲ್ಲಿ ಉತ್ತಮವಾದ ವ್ರತ, ದಾನಗಳಲ್ಲಿ ಉತ್ತಮವಾದ ದಾನ ಎಲ್ಲದರ ಅಕ್ಷಯಕ್ಕೂ ಈ ಕಪಿಲಧೇನುವೇ ಕಾರಣವಾಗಿದೆ.

ಪೃಥಿವ್ಯಾಂ ಯಾನಿ ತೀರ್ಥಾನಿ ಪುಣ್ಯಾನ್ಯಾಯತನಾನಿ ಚ ।
ಪವಿತ್ರಾಣಿ ಚ ರಮ್ಯಾಣಿ ಸರ್ವಲೋಕೇಷು ಪಾಂಡವ ॥೨೫॥

ತೇಭ್ಯಸ್ತೇಜಃ ಸಮುದ್ಧತ್ಯ ಬ್ರಹ್ಮಣಾ ಲೋಕಕರ್ತೃಣಾ ।
ಲೋಕನಿಸ್ತರಣಾಯೈವ ನಿರ್ಮಿತಾ ಕಪಿಲಾ ಸ್ವಯಮ್ ॥೨೬॥

ಭೂಮಂಡಲದಲ್ಲಿ ಯಾವ ತೀರ್ಥಗಳಿವೆಯೋ, ಪುಣ್ಯಕ್ಷೇತ್ರಗಳಿವೆಯೋ, ಪವಿತ್ರವಾದ ಯಾವ ವಸ್ತುಗಳಿವೆಯೋ ಆ ಎಲ್ಲ ವಸ್ತುಗಳ ತೇಜಸ್ಸುಗಳನ್ನುದ್ಧರಿಸಿ ಚತುರ್ಮುಖ ಬ್ರಹ್ಮನು ಸಮಸ್ತ ಜಗತ್ತಿನ ದುಃಖಪರಿಹಾರಕ್ಕಾಗಿ ಕಪಿಲಧೇನುವನ್ನು ನಿರ್ಮಿಸಿರುತ್ತಾನೆ.

ಸರ್ವತೇಜೋಮಯೀ ಹ್ಯೇವಂ ಕಪಿಲಾ ಪಾಂಡುನಂದನ ।
ಸದಾऽಮೃತವಹಾ ಮೇಧ್ಯಾ ಶುಚಿಃ ಪಾವನಮುತ್ತಮಮ್ ॥೨೭॥

ಪಾಂಡುತನಯನೇ, ಸಮಸ್ತ ತೇಜಸ್ಸುಗಳಿಂದ ತುಂಬಿದ ಕಪಿಲಧೇನುವು ನಿತ್ಯವೂ ಅಮೃತವನ್ನು ಕೊಡುವಂತಹ ಧೇನುವಾಗಿದೆ. ಅದರ ಕ್ಷೀರವು ಸ್ವೀಕಾರಾರ್ಹವಾದ, ಉತ್ತಮವಾದ, ಶುಚಿಯಾದ ಪದಾರ್ಥವಾಗಿದೆ.

ಕ್ಷೀರೇಣ ಕಪಿಲಾಯಾಸ್ತು ದಧ್ನಾ ಚ ಸಘೃತೇನ ವಾ ।
ಹೋತವ್ಯಾನ್ಯಗ್ನಿಹೋತ್ರಾಣಿ ಸಾಯಂ ಪ್ರಾತರ್ದ್ವಿಜಾತಿಭಿಃ ॥೨೮॥

ಕಪಿಲಾಯಾ ಘೃತೇನಾಪಿ ದಧ್ನಾ ಕ್ಷೀರೇಣ ವಾ ಪುನಃ ।
ಜುಹ್ವತೇ ಯೇऽಗ್ನಿಹೋತ್ರಾಣಿ ಬ್ರಾಹ್ಮಣಾ ವಿಧಿವತ್ ಪ್ರಭೋ ॥೨೯॥

ಕಪಿಲಧೇನುವಿನ ಹಾಲಿನಿಂದಾಗಲಿ, ಮೊಸರಿನಿಂದಾಗಲಿ, ತುಪ್ಪದಿಂದಾಗಲಿ, ಸಾಯಂಕಾಲ, ಪ್ರಾತಃಕಾಲಗಳಲ್ಲಿ ವಿಧಿಬದ್ಧವಾಗಿ ಬ್ರಾಹ್ಮಣರು ಅಗ್ನಿಹೋತ್ರವನ್ನು ಆಚರಿಸಬೇಕು.

ಪೂಜಯಂತ್ಯತಿಥೀಂಶ್ಚೈವ ಪರಾಂ ಭಕ್ತಿಮುಪಾಗತಾಃ ।
ಶೂದ್ರಾನ್ನವಿರತಾ ನಿತ್ಯಂ ಡಂಭಾನೃತವಿವರ್ಜಿತಾಃ ॥೩೦॥

ಕಪಿಲಧೇನುವಿನ ಹಾಲಿನ ಪದಾರ್ಥಗಳಿಂದ ಅತಿಥಿ-ಅಭ್ಯಾಗತರನ್ನು ಭಕ್ತಿಯಿಂದ

ಸತ್ಕರಿಸಬೇಕು. ಕಪಿಲಧೇನುವನ್ನು ಪೋಷಿಸುವವರು ಶೂದ್ರಾನ್ನವನ್ನು ಬಿಟ್ಟಿರಬೇಕು. ಜಂಬ, ಸುಳ್ಳುಗಳಿಗೆ ಎಂದೂ ತುತ್ತಾಗಬಾರದು.

ಯೇ ಯಾಂತ್ಯಾದಿತ್ಯಸಂಕಾಶೈರ್ವಿಮಾನೈರ್ದ್ವಿಜಸತ್ತಮಾಃ ।
ಸೂರ್ಯಮಂಡಲಮಧ್ಯೇನ ಬ್ರಹ್ಮಲೋಕಮನುತ್ತಮಮ್ ॥೩೧॥

ಇಂತಹ ಬ್ರಾಹ್ಮಣರು ಆದಿತ್ಯಸದೃಶವಾದ ವಿಮಾನದಲ್ಲಿ ಕುಳಿತು, ಸೂರ್ಯ ಮಂಡಲದ ಮಧ್ಯದಿಂದ ಶ್ರೇಷ್ಠವಾದ ಬ್ರಹ್ಮಲೋಕಕ್ಕೆ ಹೋಗುತ್ತಾರೆ.

ಬ್ರಹ್ಮಣೋ ಭವನೇ ದಿವ್ಯೇ ಕಾಮಗಾಃ ಕಾಮರೂಪಿಣಃ ।
ಬ್ರಹ್ಮಣಾ ಪೂಜ್ಯಮಾನಾಸ್ತು ಮೋದಂತೇ ಕಲ್ಪಮಕ್ಷಯಮ್ ॥೩೨॥

ಬ್ರಹ್ಮನ ಆಜ್ಞೆಯಂತೆ, ಬ್ರಹ್ಮನ ಭವನದಲ್ಲಿ ಇಚ್ಛಾರೂಪವಾಗಿ ಸಂಚರಿಸುತ್ತಾ ಚತುರ್ಮುಖ ಬ್ರಹ್ಮನಿಂದ ಪೂಜಿಸಲ್ಪಡುತ್ತಾ, ಒಂದು ಕಲ್ಪಗಳ ಕಾಲ ಸುಖವಾಗಿ ವಿಹರಿಸುತ್ತಾರೆ.

ಏವಂ ಹಿ ಕಪಿಲಾ ರಾಜನ್ ಪುಣ್ಯಾ ಮಂತ್ರಾಮೃತಾರಣಿಃ ।
ಆದಾವೇವಾಗ್ನಿಮಧ್ಯಾತ್ತು ಮೈತ್ರೇಯೀ ಬ್ರಹ್ಮನಿರ್ಮಿತಾ ॥೩೩॥

ಈ ರೀತಿಯಾಗಿ ಕಪಿಲಧೇನುವು ಬಹಳ ಪುಣ್ಯಪ್ರದವಾದುದು. ಚತುರ್ಮುಖ ಬ್ರಹ್ಮನಿಂದ ಸೃಷ್ಟಿಯ ಆರಂಭದಲ್ಲಿ ಅಗ್ನಿಯ ಮಧ್ಯದಿಂದ ನಿರ್ಮಿತವಾದುದು.

ಶೃಂಗಾಗ್ರೇ ಕಪಿಲಾಯಾಸ್ತು ಸರ್ವತೀರ್ಥಾನಿ ಪಾಂಡವ ।
ಬ್ರಹ್ಮಣೋ ಹಿ ನಿಯೋಗೇನ ನಿವಸಂತಿ ದಿನೇ ದಿನೇ ॥೩೪॥

ಕಪಿಲಧೇನುವಿನ ಕೊಂಬುಗಳ ತುದಿಯಲ್ಲಿ ಸಕಲ ತೀರ್ಥಗಳು ಯಾವಾಗಲೂ ಸನ್ನಿಹಿತವಾಗಿರುತ್ತವೆ. ಚತುರ್ಮುಖ ಬ್ರಹ್ಮನ ಆದೇಶದಂತೆ ಪ್ರತಿದಿನವೂ ಸಮಸ್ತ ತೀರ್ಥಗಳು ಕೊಂಬಿನ ತುದಿಯಲ್ಲಿ ವಾಸಿಸುತ್ತಿರುತ್ತವೆ.

ಪ್ರಾತರುತ್ಥಾಯ ಯೋ ಮರ್ತ್ಯಃ ಕಪಿಲಾಶೃಂಗಮಸ್ತಕಾತ್ ।
ಚ್ಯುತಾ ಆಪಸ್ತು ಶೀರ್ಷೇಣ ಧಾರಯೇತ್ ಪ್ರಯತಃ ಶುಚಿಃ ॥೩೫॥

ಸ ತೇನ ಪುಣ್ಯತೀರ್ಥೇನ ಸಹಸಾ ದಗ್ಧಕಿಲ್ಬಿಷಃ ।
ವರ್ಷತ್ರಯಕೃತಂ ಪಾಪಂ ಪ್ರದಹತ್ಯಗ್ನಿವತ್ ತೃಣಮ್ ॥೩೬॥

ಪ್ರಾತಃಕಾಲದಲ್ಲಿ ಎದ್ದು ಯಾವ ಮನುಷ್ಯನು ಕಪಿಲಾಧೇನುವಿನ ಕೊಂಬಿನ ತುದಿಯಿಂದ ಹರಿದುಬರುವ ನೀರನ್ನು ತನ್ನ ತಲೆಯಲ್ಲಿ ಧರಿಸುತ್ತಾನೋ, ಶುಚಿಯಾಗಿ ಧರಿಸಿದ ಆ ಪುಣ್ಯತೀರ್ಥದಿಂದ ಸಮಸ್ತ ಪಾಪಗಳನ್ನು ಕೂಡಲೇ ಕಳೆದುಕೊಳ್ಳುತ್ತಾನೆ. ಬೆಂಕಿಯು ಹುಲ್ಲನ್ನು ಸುಡುವಂತೆ ಮೂರು ವರ್ಷಗಳ ಪಾಪವು ಕಪಿಲಾಧೇನುವಿನ ಕೊಂಬಿನಿಂದ ಬಂದ ನೀರು ಪರಿಹರಿಸುತ್ತದೆ.

ಮೂತ್ರೇಣ ಕಪಿಲಾಯಾಸ್ತು ಯಸ್ತು ಪ್ರಾತರುಪಸ್ಪೃಶೇತ್ ।
ಸ್ನಾನೇನ ತೇನ ಪುಣ್ಯೇನ ನಷ್ಟಪಾಪಃ ಸ ಮಾನವಃ ॥೩೭॥

ಕಪಿಲಾಧೇನುವಿನ ಮೂತ್ರದಿಂದ ಯಾವನು ಪ್ರಾತಃಕಾಲದಲ್ಲಿ ಸ್ನಾನವನ್ನು ಆಚರಿಸುತ್ತಾನೋ ಆ ಸ್ನಾನದಿಂದ ಲಭಿಸುವ ಪುಣ್ಯದಿಂದ ಮಾನವನು ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೆ.

ತ್ರಿಂಶದ್ವರ್ಷಕೃತಾತ್ ಪಾಪಾನ್ಮುಚ್ಯತೇ ನಾತ್ರ ಸಂಶಯಃ ॥೩೮॥

ಮೂವತ್ತು ವರ್ಷಗಳಲ್ಲಿ ಮಾಡಿದ ಪಾಪಗಳಿಂದ ಬಿಡುಗಡೆ ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಪ್ರಾತರುತ್ಥಾಯ ಯೋ ಭಕ್ತ್ಯಾ ಪ್ರಯಚ್ಛೇತ್ ತೃಣಮುಷ್ಟಿಕಮ್ ।
ತಸ್ಯ ನಶ್ಯತಿ ತತ್ ಪಾಪಂ ತ್ರಿಂಶದ್ರಾತ್ರಕೃತಂ ನೃಪ ॥೩೯॥

ರಾಜನೇ, ಪ್ರಾತಃಕಾಲದಲ್ಲಿ ಯಾವನು ಭಕ್ತಿಯಿಂದ ಎದ್ದು ಒಂದು ಮುಷ್ಟಿ ಹುಲ್ಲನ್ನು ಕಪಿಲಾ ಧೇನುವಿಗೆ ನೀಡುತ್ತಾನೋ ಅವನು ಮೂವತ್ತು ರಾತ್ರಿಗಳಲ್ಲಿ ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುತ್ತಾನೆ.

ಪ್ರಾತರುತ್ಥಾಯ ಮದ್ಭಕ್ತ್ಯಾ ಕುರ್ಯಾದ್ ಯಸ್ತಾಂ ಪ್ರದಕ್ಷಿಣಮ್ ।
ಪ್ರದಕ್ಷಿಣೀಕೃತಾ ತೇನ ಪೃಥಿವೀ ನಾತ್ರ ಸಂಶಯಃ ॥೪೦॥

ಪ್ರಾತಃಕಾಲದಲ್ಲಿ ಎದ್ದು ಭಗವದ್ಭಕ್ತಿಯಿಂದ ಯಾವಾತನು ಕಪಿಲಾಧೇನುವಿಗೆ

ಪ್ರದಕ್ಷಿಣೆ ಮಾಡುತ್ತಾನೋ ಅವನು ಭೂಮಂಡಲವನ್ನೇ ಪ್ರದಕ್ಷಿಣೆ ಮಾಡಿದಂತೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಪ್ರದಕ್ಷಿಣೇನ ಚೈಕೇನ ಶ್ರದ್ಧಾಯುಕ್ತಸ್ಯ ಪಾಂಡವ ।
ದಶರಾತ್ರಕೃತಂ ಪಾಪಂ ತಸ್ಯ ತನ್ನಶ್ಯತಿ ಧ್ರುವಮ್ ॥೪೧॥

ಕಪಿಲಾಧೇನುವಿಗೆ ಶ್ರದ್ಧೆಯಿಂದ ಮಾಡಿದ ಒಂದು ಪ್ರದಕ್ಷಿಣೆ, ನಮಸ್ಕಾರವು ನಿಶ್ಚಯವಾಗಿಯೂ ಹತ್ತು ರಾತ್ರಿಗಳಲ್ಲಿ ಮಾಡಿದ ಪಾಪವನ್ನು ನಾಶಮಾಡುತ್ತದೆ.

ಕಪಿಲಾಪಂಚಗವ್ಯೇನ ಯಃ ಸ್ನಾಯಾತ್ತು ಶುಚಿರ್ನರಃ ।
ಸ ಗಂಗಾದ್ಯೇಷು ತೀರ್ಥೇಷು ಸ್ನಾತೋ ಭವತಿ ಪಾಂಡವ ॥೪೨॥

ಕಪಿಲಾಧೇನುವಿನಿಂದ ಮಾಡಿದ ಪಂಚಗವ್ಯದಿಂದ ಸ್ನಾನ ಮಾಡುವವನು ಪವಿತ್ರನಾಗುತ್ತಾನೆ. ಗಂಗಾದಿ ಸರ್ವತೀರ್ಥಗಳಲ್ಲಿಯೂ ಸ್ನಾನ ಮಾಡಿದಂತಾಗುತ್ತದೆ.

ತೇನ ಸ್ನಾನೇನ ತಸ್ಯಾಪಿ ಶ್ರದ್ಧಾಯುಕ್ತಸ್ಯ ಪಾಂಡವ ।
ದಶರಾತ್ರಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥೪೩॥

ಆ ಕಪಿಲಾಧೇನುವಿನ ಪಂಚಗವ್ಯದಿಂದ ಶ್ರದ್ಧೆಯಿಂದ ಸ್ನಾನ ಮಾಡಿದವನು ಹತ್ತು ರಾತ್ರಿಯಲ್ಲಿ ಮಾಡಿದ ಪಾಪವನ್ನು ಆ ಕ್ಷಣದಲ್ಲಿಯೇ ಪರಿಹರಿಸಿಕೊಳ್ಳುತ್ತಾನೆ.

ದೃಷ್ಟ್ವಾ ತು ಕಪಿಲಾಂ ಭಕ್ತ್ಯಾ ಶ್ರುತ್ವಾ ಹುಂಕಾರನಿಃಸ್ವನಮ್ ।
ವ್ಯಪೋಹತಿ ನರಃ ಪಾಪಮಹೋರಾತ್ರಕೃತಂ ನೃಪ ॥೪೪॥

ರಾಜನೇ, ಕಪಿಲಾಧೇನುವನ್ನು ನೋಡಿ, ಅದರ ಅಂಬಾ ಎಂಬ ಧ್ವನಿಯನ್ನು ಕೇಳಿದರೆ ಒಂದು ದಿನದ ಪಾಪವು ಪರಿಹಾರವಾಗುತ್ತದೆ.

ಯತ್ರ ವಾ ತತ್ರ ವಾ ಚಾಂಗೇ ಕಪಿಲಾಂ ಯಃ ಸ್ಪೃಶೇತ್ ಶುಚಿಃ ।
ಸಂವತ್ಸರಕೃತಂ ಪಾಪಂ ವಿನಾಶಯತಿ ಪಾಂಡವ ॥೪೫॥

ಎಲ್ಲಿಯೇ ಆಗಲಿ, ಕಪಿಲಾ ಗೋವನ್ನು ಕಂಡು ಶುಚಿಯಾಗಿ ಅದರ ದೇಹವನ್ನು ಸವರುತ್ತಾನೋ ಅವನು ಒಂದು ಸಂವತ್ಸರದಲ್ಲಿ ಮಾಡಿದ ಪಾಪವನ್ನು ಪರಿಹರಿಸಿಕೊಳ್ಳುತ್ತಾನೆ.

ಗೋಸಹಸ್ರಂ ಚ ಯೋ ದದ್ಯಾದ್ ಏಕಾಂ ಚ ಕಪಿಲಾಂ ನರಃ ।
ಸಮಂ ತಸ್ಯ ಫಲಂ ಪ್ರಾಹ ಬ್ರಹ್ಮಲೋಕೇ ಪಿತಾಮಹಃ ॥೪೬॥

ಒಂದು ಸಾವಿರ ಗೋವುಗಳನ್ನು ದಾನ ಮಾಡಿದವನಿಗೆ ಲಭಿಸುವ ಫಲವು, ಒಂದು ಕಪಿಲಾಧೇನುವನ್ನು ದಾನ ಮಾಡಿದವನಿಗೆ ಲಭಿಸುವ ಫಲವು ಒಂದೇ ಎಂದು ಲೋಕ ಪಿತಾಮಹನಾದ ಬ್ರಹ್ಮದೇವನು ಹೇಳಿದ್ದಾನೆ.

ಯಸ್ತ್ವೇಕಾಂ ಕಪಿಲಾಂ ಹನ್ಯಾನ್ನರಃ ಕಶ್ಚಿತ್ ಪ್ರಮಾದತಃ ।
ಗೋಸಹಸ್ರಂ ಹತಂ ತೇನ ಭವೇನ್ನಾತ್ರ ವಿಚಾರಣಾ ॥೪೭॥

ಯಾವ ವ್ಯಕ್ತಿಯು ಪ್ರಮಾದದಿಂದ ಕಪಿಲಾಧೇನುವನ್ನು ಕೊಂದರೆ ಅವನಿಗೆ ಒಂದು ಸಾವಿರ ಗೋವುಗಳನ್ನು ಕೊಂದ ಪಾಪವು ಉಂಟಾಗುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯಸ್ತ್ವೇಕಾಂ ಕಪಿಲಾಂ ದದ್ಯಾತ್ ಶ್ರೋತ್ರಿಯಾಯಾಹಿತಾಗ್ನಯೇ ।
ಗವಾಂ ಶತಸಹಸ್ರಂ ತು ದತ್ತಂ ಭವತಿ ಪಾಂಡವ ॥೪೮॥

ಆಹಿತಾಗ್ನಿಯಾದ ಬ್ರಾಹ್ಮಣನಿಗೆ ಯಾವನು ಒಂದು ಕಪಿಲಾಧೇನುವನ್ನು ದಾನ ಮಾಡುತ್ತಾನೋ ಅವನು ಸಾವಿರ ಗೋವುಗಳನ್ನು ದಾನ ಮಾಡಿದ ಫಲವನ್ನು ಹೊಂದುತ್ತಾನೆ.

ದಶೇಹ ಕಪಿಲಾಃ ಪ್ರೋಕ್ತಾಃ ಸ್ವಯಮೇವ ಸ್ವಯಂಭುವಾ ।
ಯೋ ದದ್ಯಾಚ್ಛ್ರೋತ್ರಿಯೇಭ್ಯೋ ವೈ ಸ್ವರ್ಗಂ ಗಚ್ಛತಿ ತಚ್ಛೃಣು ॥೪೯॥

ಸ್ವಯಂ ಚತುರ್ಮುಖ ಬ್ರಹ್ಮನೇ ಕಪಿಲಾಧೇನುಗಳಲ್ಲಿ ಹತ್ತು ಭೇದಗಳನ್ನು ಹೇಳಿದ್ದಾನೆ. ಅವುಗಳನ್ನು ಬ್ರಾಹ್ಮಣರಿಗೆ ನೀಡಿದಾಗ ಉತ್ತಮ ಸದ್ಗತಿ ಹೊಂದುವಿಕೆಯ ಬಗ್ಗೆ ಹೇಳುತ್ತೇನೆ, ಕೇಳಿಸಿಕೊ.

ಪ್ರಥಮಾ ಸ್ವರ್ಣಕಪಿಲಾ ದ್ವಿತೀಯಾ ಗೌರಪಿಂಗಲಾ ।
ತೃತೀಯಾ ರಕ್ತಪಿಂಗಾಕ್ಷೀ ಚತುರ್ಥೀ ಗಲಪಿಂಗಲಾ ॥೫೦॥

ಹೊಂಬಣ್ಣದಿಂದ ಕೂಡಿದ ಕಪಿಲಾ ಮೊದಲನೆಯದ್ದು. ಎರಡನೆಯದ್ದು ಗೌರಪಿಂಗಲಾ (ಬಿಳಿ-ಹಳದಿ), ಮೂರನೆಯದ್ದು ರಕ್ತಪಿಂಗಾಕ್ಷಿ (ಹಳದಿ ಬಣ್ಣದ

ಕಣ್ಣುಗಳುಳ್ಳದ್ದು), ನಾಲ್ಕನೆಯದ್ದು ಗಲಪಿಂಗಲಾ (ಕುತ್ತಿಗೆಯಲ್ಲಿ ಕಂದು-ಹಳದಿ ಬಣ್ಣ ಮಿಶ್ರಿತವಾದುದು).

ಪಂಚಮೀ ಬಭ್ರುವರ್ಣಾಭಾ ಷಷ್ಠೀ ಚ ಶ್ವೇತಪಿಂಗಲಾ ।
ಸಪ್ತಮೀ ರಂಗಪಿಂಗಾಕ್ಷೀ ತ್ವಷ್ಟಮೀ ಖಿರಪಿಂಗಲಾ ॥೫೧॥

ಐದನೆಯದ್ದು ಕೆಂಪು ಮಿಶ್ರಿತ ಕಂದುಬಣ್ಣವುಳ್ಳದ್ದು, ಆರನೆಯದ್ದು ಬಿಳಿಯ ಮತ್ತು ಕಂದು ಹಳದಿ ಬಣ್ಣದ್ದು, ಏಳನೆಯದ್ದು ಕೆಂಪು ಮತ್ತು ಕೆಂದು ಹಳದಿ ಬಣ್ಣದ ಕಣ್ಣುಗಳುಳ್ಳದ್ದು, ಎಂಟನೆಯದ್ದು ಗೊರಸುಗಳಲ್ಲಿ ಮಾತ್ರ ಕಂದು ಹಳದಿ ಬಣ್ಣವುಳ್ಳದ್ದು.

ನವಮೀ ಪಾಟಲಾ ಜ್ಞೇಯಾ ದಶಮೀ ಪುಚ್ಛಪಿಂಗಲಾ ।
ದಶೈತಾಃ ಕಪಿಲಾಃ ಪ್ರೋಕ್ತಾಃ ತಾರಯಂತಿ ನರಾನ್ ಸದಾ ॥೫೨॥

ಒಂಬತ್ತನೆಯದ್ದು ಬಿಳಿ ಮತ್ತು ಕೆಂಪು ಮಿಶ್ರಿತ ಬಣ್ಣವುಳ್ಳದ್ದು. ಹತ್ತನೆಯದ್ದು ಬಾಲದಲ್ಲಿ ಮಾತ್ರ ಕಂದು ಹಳದಿ ಬಣ್ಣವುಳ್ಳದ್ದು. ಈ ಹತ್ತುವಿಧವಾದ ಕಪಿಲಾ ಧೇನುಗಳು ಮನುಷ್ಯರನ್ನು ಪಾಪದಿಂದ ದಾಟಿಸುತ್ತವೆ.

ಮಂಗಲ್ಯಾಶ್ಚ ಪವಿತ್ರಾಶ್ಚ ಸರ್ವಪಾಪಪ್ರಣಾಶನಾಃ ।
ಏವಮೇವ ಹ್ಯನಾಹೋ ದಶ ಪ್ರೋಕ್ತಾ ನರೇಶ್ವರ ॥೫೩॥

ಇವು ಮಂಗಳಮಯವಾದವುಗಳು, ಪವಿತ್ರವಾದವುಗಳು, ಸರ್ವವಿಧವಾದ ಪಾಪಗಳನ್ನು ಪರಿಹರಿಸಬಲ್ಲವುಗಳು. ಹೀಗೆಯೇ ಎತ್ತುಗಳು ಹತ್ತು ಪ್ರಕಾರವಾಗಿವೆ.

ಬ್ರಾಹ್ಮಣೋ ವಾಹಯೇತ್ ತಾಂಸ್ತು ನಾನ್ಯೋ ವರ್ಣಃ ಕಥಂಚನ ।
ನ ವಾಹಯೇಚ್ಚ ಕಪಿಲಾಂ ಕ್ಷೇತ್ರೇ ವಾಽಧ್ವನಿ ವಾ ದ್ವಿಜಃ ॥೫೪॥

ಪ್ರಯಾಣಕ್ಕೆ ಕಪಿಲಾ ಜಾತಿಯ ಎತ್ತುಗಳನ್ನು ಬ್ರಾಹ್ಮಣನು ಮಾತ್ರವೇ ಗಾಡಿಗೆ ಹೂಡಲು ಉಪಯೋಗಿಸಿಕೊಳ್ಳಬಹುದು. ಇತರ ವರ್ಣದವರು ಯಾವುದೇ ಕಾರಣದಿಂದಲೂ ಇದನ್ನು ಸವಾರಿಗೆ ಉಪಯೋಗಿಸಬಾರದು. ಬ್ರಾಹ್ಮಣನು ಉಳುವುದಕ್ಕಾಗಲಿ, ಬೇರೆಯವರ ಸಂಚಾರಕ್ಕಾಗಲಿ ಗಾಡಿಯನ್ನು ಎಳೆಯುವುದಕ್ಕಾಗಲಿ ಉಪಯೋಗಿಸಬಾರದು.

ವಾಹಯೇದ್ ಹುಂಕೃತೇನೈವ ಶಾಖಯಾ ವಾ ಸಪತ್ರಯಾ ।
ನ ದಂಡೇನ ನ ಯಷ್ಟ್ಯಾ ವಾ ನ ಪಾಶೇನ ಚ ವಾ ಪುನಃ ॥೫೫॥

ಕಪಿಲಾ ವೃಷಭವು ಪ್ರಯಾಣ ಮಾಡುವಾಗ, ಗಾಡಿಗೆ ಕಟ್ಟಿದಾಗಲು ಹೂಂಕಾರದ ಧ್ವನಿಯಿಂದ ಅಥವಾ ಎಲೆಗಳ ಕೋಲಿನಿಂದ ಮೃದುವಾಗಿ ಪ್ರಹರಿಸಿ, ಎತ್ತುಗಳನ್ನು ಮುಂದುವರೆಯುವಂತೆ ಮಾಡಬೇಕು. ದಂಡದಿಂದಾಗಲಿ, ಕೋಲಿನಿಂದಾಗಲಿ, ಹಗ್ಗದಿಂದಾಗಲಿ ಅವುಗಳನ್ನು ಹೊಡೆಯಬಾರದು.

ನ ಕ್ಷುತ್ಪಿಪಾಸ್ರಮಶ್ರಾಂತಾನ್ ವಾಹಯೇದ್ ವಿಕಲೇಂದ್ರಿಯಾನ್ ।
ಸುತೃಪ್ತೇಷು ತು ಭುಂಜೀಯಾತ್ ಪಿಬೇತ್ ಪೀತೇಷು ಚೋದಕಮ್ ॥

ಎತ್ತುಗಳು ಹಸಿದಾಗ, ಬಾಯಾರಿದಾಗ, ನಡೆದು ಬಳಲಿದಾಗ ಅವುಗಳನ್ನು ಗಾಡಿಗೆ ಕಟ್ಟಬಾರದು. ಇಂದ್ರಿಯಗಳು ಶಿಥಿಲವಾಗಿದ್ದಾಗಲೂ ಗಾಡಿಗೆ ಕಟ್ಟಬಾರದು. ಅವುಗಳು ಯಥೇಷ್ಟವಾಗಿ ಹುಲ್ಲುತಿಂದು ತೃಪ್ತವಾಗುವ ತನಕ, ನೀರನ್ನು ಕುಡಿಯುವ ತನಕ ಸೇವೆಗೆ ಬಳಸಿಕೊಳ್ಳಬಾರದು. ಕಪಿಲಾ ವೃಷಭಗಳು ಹುಲ್ಲು ತಿಂದು ತೃಪ್ತವಾಗುವ ತನಕ ಬ್ರಾಹ್ಮಣನು ಊಟ ಮಾಡಬಾರದು. ಅವುಗಳು ನೀರು ಕುಡಿದ ಬಳಿಕವೇ ನೀರು ಕುಡಿಯಬೇಕು.

ಶುಶ್ರೂಷೋರ್ಮಾತರಶ್ಚೈತಾಃ ಪಿತರಸ್ತೇ ಪ್ರಕೀರ್ತಿತಾಃ ।
ಅಹ್ನಾಂ ಪೂರ್ವಂ ತ್ರಿಭಾಗೇ ತು ಧುರ್ಯಾಣಾಂ ವಾಹನಂ ಸ್ಮೃತಮ್॥

ಶುಶ್ರೂಷೆ ಮಾಡಲು ಬಯಸುವ ಪುರುಷನಿಗೆ ಕಪಿಲಾಧೇನುವು ತಾಯಿಯಾದರೆ, ಕಪಿಲಾ ವೃಷಭವು ತಂದೆಯಾಗಿರುತ್ತದೆ. ವೃಷಭಗಳನ್ನು ಪ್ರಾತಃಕಾಲದಲ್ಲಿ ಮಾತ್ರ ವಾಹನಕ್ಕೆ ಕಟ್ಟುವುದು ಯೋಗ್ಯವಾಗಿದೆ.

ವಿಶ್ರಾಮೇನ್ಮಧ್ಯಮೇ ಭಾಗೇ ಭಾಗೇ ಚಾಂತೇ ಯಥಾಸುಖಮ್ ॥೫೮॥

ದಿನದ ಮಧ್ಯಭಾಗದಲ್ಲಿ ವಿಶ್ರಮಿಸಿಕೊಳ್ಳಲು ಅವುಗಳನ್ನು ಬಿಟ್ಟುಬಿಡಬೇಕು. ದಿನದ ಮೂರನೆಯ ಭಾಗದಲ್ಲಿ ಅವಶ್ಯಕತೆ ಇದ್ದರೆ ಗಾಡಿಗೆ ಕಟ್ಟಬಹುದು.

ಯತ್ರ ವಾ ತ್ವರಯಾ ಕೃತ್ಯಂ ಸಂಶಯೋ ಯತ್ರ ಚಾಧ್ವನಿ ।
ವಾಹಯೇತ್ ತತ್ರ ಧುರ್ಯಾಂಸ್ತು ನ ಸ ಪಾಪೇನ ಲಿಪ್ಯತೇ ॥೫೯॥

ಎಲ್ಲಿಯಾದರೂ ಅವಸರದ ಕಾರ್ಯವಿರುವ ಸಂದರ್ಭದಲ್ಲಿ, ಮಾರ್ಗದಲ್ಲಿ ಕಳ್ಳ-ಕಾಕರ ಭೀತಿಯ ಸಂಶಯ ಇದ್ದಾಗ ಮಧ್ಯಾಹ್ನದ ವೇಳೆಯೂ ಗಾಡಿಗೆ ಕಟ್ಟಬಹುದು. ಅನಿವಾರ್ಯವಾಗಿ ಕಟ್ಟಿದಾಗ ಪಾಪವು ಬರುವುದಿಲ್ಲ.

ಅನ್ಯಥಾ ವಾಹಯನ್ ರಾಜನ್ ನಿರಯಂ ಯಾತಿ ರೌರವಮ್ ॥೬೦॥

ಅನಿವಾರ್ಯವಿಲ್ಲದೆ ಮಧ್ಯಾಹ್ನ ಕಾಲದಲ್ಲಿ ಕಪಿಲವೃಷಭಗಳನ್ನು ಗಾಡಿಗೆ ಕಟ್ಟಿದರೆ ರೌರವ ನರಕಕ್ಕೆ ಹೋಗುತ್ತಾನೆ. ಸಂಶಯವಿಲ್ಲ.

ರುಧಿರಂ ವಾಹಯೇತ್ ತೇಷಾಂ ಯಸ್ತು ಮೋಹಾನ್ನರಾಧಿಪ ।
ಭ್ರೂಣಹತ್ಯಾಸಮಂ ಪಾಪಂ ತಸ್ಯ ಸ್ಯಾತ್ ಪಾಂಡುನಂದನ ॥೬೧॥

ಯಾವನು ಮೋಹವಶನಾಗಿ ಎತ್ತುಗಳ ಶರೀರದಲ್ಲಿ ರಕ್ತಬರುವಂತೆ ಭಾರವನ್ನು ತುಂಬಿ ಎಳೆಸುತ್ತಾನೊ ಅವನಿಗೆ ಭ್ರೂಣಹತ್ಯೆಗೆ ಸಮಾನವಾದ ಪಾಪವು ಉಂಟಾಗುತ್ತದೆ.

ತೇನ ಪಾಪೇನ ಪಾಪಾತ್ಮಾ ನರಕಂ ಯಾತ್ಯಸಂಶಯಮ್ ॥೬೨॥

ಈ ಪಾಪದಿಂದ ಅವನು ನಿಶ್ಚಿತವಾಗಿ ನರಕಕ್ಕೆ ಹೋಗುತ್ತಾನೆ, ಸಂಶಯವಿಲ್ಲ.

ನರಕೇಷು ಚ ಸರ್ವೇಷು ಸಮಾಃ ಸ್ಥಿತ್ವಾ ಶತಂ ಶತಮ್ ।
ಇಹ ಮಾನುಷ್ಯಕೇ ಲೋಕೇ ಬಲೀವರ್ದೋ ಭವಿಷ್ಯತಿ ॥೬೩॥

ಅವನು ಆ ಪಾಪದಿಂದ ನರಕದಲ್ಲಿ ನೂರು ನೂರು ವರ್ಷಗಳ ಕಾಲ ವಾಸ ಮಾಡಿ, ಪುನಃ ಮನುಷ್ಯಲೋಕದಲ್ಲಿಯೇ ಎತ್ತಾಗಿ ಹುಟ್ಟುತ್ತಾನೆ.

ತಸ್ಮಾತ್ತು ಮುಕ್ತಿಮನ್ವಿಚ್ಛನ್ ದದ್ಯಾತ್ತು ಕಪಿಲಾಂ ನರಃ ॥೬೪॥

ಆದ್ದರಿಂದ ಸಂಸಾರದಿಂದ ಮುಕ್ತಿಯನ್ನು ಬಯಸುವ ಮನುಷ್ಯನು ಕಪಿಲಾ ಧೇನುವನ್ನು ದಾನವಾಗಿ ಕೊಡಬೇಕು.

ಕಪಿಲಾಂ ವಾಹಯೇದ್ ಯಸ್ತು ವೃಷಲೋ ಲೋಭಮೋಹಿತಃ ।
ತೇನ ದೇವಾಸ್ತ್ರಯಸ್ತ್ರಿಂಶತ್ ಪಿತರಶ್ಚಾಪಿ ವಾಹಿತಾಃ ॥೬೫॥

ಕಪಿಲಾಧೇನುವನ್ನು ಲೋಭ-ಮೋಹಗಳಿಗೆ ತುತ್ತಾಗಿ ಯಾವ ವ್ಯಷಲನು ಗಾಡಿಗೆ ಕಟ್ಟುತ್ತಾನೋ ಅವನಿಂದ ಮೂವತ್ಮೂರು ಕೋಟಿ ದೇವತೆಗಳು, ಪಿತೃಗಳು ಗಾಡಿಯನ್ನು ಎಳೆದವರಂತೆ ದುಃಖಿತರಾಗುತ್ತಾರೆ.

ಸ ದೇವೈಃ ಪಿತೃಭಿರ್ನಿತ್ಯಂ ವಧ್ಯಮಾನಃ ಸುದುರ್ಮತಿಃ ।
ನರಕಾನ್ನರಕಂ ಘೋರಂ ಗಚ್ಛೇದಾಪ್ರಲಯಂ ನೃಪ ॥೬೬॥

ಅಂತಹ ವ್ಯಷಲನು ದೇವತೆಗಳಿಂದ, ಪಿತೃಗಳಿಂದ ನಿತ್ಯವೂ ದುರ್ಮತಿಯೆಂದು ಘಾಸಿಗೆ ತುತ್ತಾದವನಾಗಿ, ನರಕವನ್ನು ಕುರಿತು ಹೋಗಿ, ಪ್ರಲಯವಾಗುವ ತನಕವೂ ಸಂಚರಿಸುತ್ತಿರುತ್ತಾನೆ.

ಬ್ರಹ್ಮಾ ರುದ್ರಸ್ತಥಾಗ್ನಿಶ್ಚ ಕಪಿಲಾನಾಂ ಗತಿಂ ಗತಾಃ ।
ತಸ್ಮಾತ್ ತೇ ತು ನ ಹಂತವ್ಯಾಃ ಪೂಜ್ಯಾಸ್ತೇ ತು ವಿಶೇಷತಃ ॥೬೭॥

ಚತುರ್ಮುಖ ಬ್ರಹ್ಮನು, ಮಹರುದ್ರನು, ಅಗ್ನಿದೇವನು ಕಪಿಲಾಧೇನುವಿನ ಗತಿಯನ್ನು ಹೊಂದಿರುತ್ತಾರೆ. ಅದರ ನಡೆಯನ್ನು ಅನುಸರಿಸುತ್ತಾರೆ. ಆದ್ದರಿಂದ ಕಪಿಲಾ ಧೇನುವನ್ನು ಕೊಲ್ಲಬಾರದು. ವಿಶೇಷವಾಗಿ ಪೂಜ್ಯವಾದವುಗಳು ಕಪಿಲಾ ಧೇನುಗಳು.

ನಿಃಶ್ವಸಂತಿ ಯದಾ ಶ್ರಾಂತಾಸ್ತದಾ ಹನ್ಯುಶ್ಚ ತತ್ಕುಲಮ್ ॥೬೮॥

ಕಪಿಲಾಧೇನುವು ಯಾವಾಗ ಬಳಲಿ ಉಸಿರನ್ನು ಬಿಡುತ್ತದೋ ಅದರ ಬಳಲುವಿಕೆಯು ಅವನ ಕುಲವನ್ನೇ ನಾಶಮಾಡುತ್ತದೆ.

ಯಾವಂತಿ ತೇಷಾಂ ರೋಮಾಣಿ ತಾವದ್ ವರ್ಷಶತಂ ನೃಪ ।
ನರಕೇ ಪರಿಪಚ್ಯಂತೇ ತತ್ರ ತದ್ಘಾತಕಾ ನರಾಃ ॥೬೯॥

ಯಾವ ವ್ಯಕ್ತಿಯು ಕಪಿಲಾ ಗೋವನ್ನು ಹಿಂಸಿಸುತ್ತಾನೋ ಅವನು ಆ ಧೇನುವಿನ ದೇಹದಲ್ಲಿರುವ ರೋಮಗಳಷ್ಟು ಕಾಲ ಗಾಡಿಗೆ, ಪೀಡೆ ಮಾಡಿ ಕಟ್ಟಿದ ಪಾಪದಿಂದಾಗಿ ನರಕಲೋಕದಲ್ಲಿ ದುಃಖಕ್ಕೆ ಈಡಾಗುತ್ತಾನೆ.

ಕಪಿಲಾ ಸರ್ವಯಜ್ಞೇಷು ದಕ್ಷಿಣಾರ್ಥಂ ವಿಧೀಯತೇ ।
ತಸ್ಮಾತ್ ತದ್ದಕ್ಷಿಣಾ ದೇಯಾ ಯಜ್ಞೇಷ್ವೇವ ದ್ವಿಜಾತಿಭಿಃ ॥೭೦॥

ಎಲ್ಲ ಯಜ್ಞಗಳಲ್ಲಿಯೂ ಕಪಿಲಾಧೇನುವನ್ನೇ ದಕ್ಷಿಣೆಯನ್ನಾಗಿ ಕೊಡಬೇಕೆಂದು ಶಾಸ್ತ್ರವಚನವಿದೆ. ಆದ್ದರಿಂದ ಬ್ರಾಹ್ಮಣರಿಗೆ ಯಜ್ಞದಲ್ಲಿ ಕಪಿಲಾಧೇನುವನ್ನೇ ದಕ್ಷಿಣೆಯನ್ನಾಗಿ ನೀಡಬೇಕು.

ಹೋಮಾರ್ಥಂ ಚಾಗ್ನಿಹೋತ್ರಸ್ಯ ಯಾಂ ಪ್ರಯಚ್ಛೇತ್ ಪ್ರಯತ್ನತಃ ।
ಶ್ರೋತ್ರಿಯಾಯ ದರಿದ್ರಾಯ ಶ್ರಾಂತಾಯ ಚ ಯತಾತ್ಮನೇ ॥೭೧॥

ಅಗ್ನಿಹೋತ್ರದ ಹೋಮಕ್ಕಾಗಿ ಕಪಿಲಾಧೇನುವನ್ನು ಶ್ರೋತ್ರಿಯನಾದ, ದರಿದ್ರನಾದ, ಬಳಲಿರುವ, ಜಿತೇಂದ್ರಿಯನಾದ ಬ್ರಾಹ್ಮಣನಿಗೆ ಪ್ರಯತ್ನಪೂರ್ವಕವಾಗಿ ದಾನ ಮಾಡಬೇಕು.

ತೇನ ದಾನೇನ ಪೂತಾತ್ಮಾ ಸೋಽಗ್ನಿಲೋಕೇ ಮಹೀಯತೇ ॥೭೨॥

ಆ ದಾನದಿಂದ ಪೂತಾತ್ಮನಾದ ವ್ಯಕ್ತಿಯು ಅಗ್ನಿಲೋಕದಲ್ಲಿ ಪೂಜಿತನಾಗುತ್ತಾನೆ.

ಯಾವಂತಿ ಚೈವ ರೋಮಾಣಿ ಕಪಿಲಾಯಾಂ ನರೇಶ್ವರ ।
ತಾವದ್ ವರ್ಷಸಹಸ್ರಾಣಿ ನರಃ ಸ್ವರ್ಗೇ ಮಹೀಯತೇ ॥೭೩॥

ಕಪಿಲಾಧೇನುವಿನ ದೇಹದಲ್ಲಿ ಎಷ್ಟು ರೋಮಗಳು ಇವೆಯೋ ಅಷ್ಟು ವರ್ಷಗಳ ಕಾಲ ಸ್ವರ್ಗಲೋಕದಲ್ಲಿ ಪೂಜಿತನಾಗುತ್ತಾನೆ.

ಸುವರ್ಣಖುರಶೃಂಗೀಂ ಚ ಕಪಿಲಾಂ ಯಃ ಪ್ರಯಚ್ಛತಿ ।
ವಿಷುವೇ ಚಾಯನೇ ಚಾಪಿ ಸೋಽಶ್ವಮೇಧಫಲಂ ಲಭೇತ್ ॥೭೪॥

ಸುವರ್ಣದಿಂದ ಅಲಂಕರಿಸಲ್ಪಟ್ಟ ಕೊಂಬುಗಳಿಂದ ಕೂಡಿದ ಮತ್ತು ಗೊರಸುಗಳಿಂದ ಕೂಡಿದ ಕಪಿಲಾಧೇನುವನ್ನು ವಿಷುವ ಯೋಗದಲ್ಲಿ, ದಕ್ಷಿಣಾಯನ, ಉತ್ತರಾಯಣ ಸಂಕ್ರಮಣಗಳಲ್ಲಿ ಯಾವನು ದಾನ ಮಾಡುತ್ತಾನೋ ಅವನು ಅಶ್ವಮೇಧ ಯಾಗದ ಫಲವನ್ನು ಹೊಂದುತ್ತಾನೆ.

ತೇನಾಶ್ವಮೇಧತುಲ್ಯೇನ ಮಮ ಲೋಕಂ ಸ ಗಚ್ಛತಿ ॥೭೫॥

ಅಂತಹ ಅಶ್ವಮೇಧ ಯಾಗದ ಸಮಾನವಾದ ಪುಣ್ಯದಿಂದ ನನ್ನ ಲೋಕವನ್ನು ಹೊಂದುತ್ತಾನೆ.

ಸ್ವರ್ಣಶೃಂಗೀಂ ರೂಪ್ಯಖುರಾಂ ಸವತ್ಸಾಂ ಕಾಂಸ್ಯದೋಹನಾಮ್ ।
ವಸ್ತ್ರೈರಲಂಕೃತಾಂ ಪುಷ್ಟಾಂ ಗಂಧೈರ್ಮಾಲ್ಯೈಶ್ಚ ಶೋಭಿತಾಮ್ ॥೭೬॥

ಬಂಗಾರದಿಂದ ಅಲಂಕೃತವಾದ ಕೊಂಬುಗಳುಳ್ಳ, ಬೆಳ್ಳಿಯಿಂದ ಅಲಂಕಾರ ಮಾಡಿದ ಗೊರಸುಗಳುಳ್ಳ, ಕರುವಿನಿಂದ ಕೂಡಿದ, ಕಂಚಿನ ಹಾಲುಕರೆಯುವ ಪಾತ್ರೆ ಸಹಿತವಾದ ಹಸುವನ್ನು ವಸ್ತ್ರಗಳಿಂದ ಅಲಂಕಾರ ಮಾಡಿ, ಆಹಾರವನ್ನು ನೀಡಿ, ಗಂಧ-ಮಾಲ್ಯಗಳಿಂದ ಅಲಂಕರಿಸಿ ಯಾವಾತನು ದಾನ ಮಾಡುತ್ತಾನೋ ಅವನು ಅಕ್ಷಯವಾದ ಫಲವನ್ನು ಹೊಂದುತ್ತಾನೆ.

ಪವಿತ್ರಂ ಹಿ ಪವಿತ್ರಾಣಾಂ ಸುವರ್ಣಮಿತಿ ಮೇ ಮತಿಃ ।
ತಸ್ಮಾತ್ ಸುವರ್ಣಾಭರಣಾ ದಾತವ್ಯಾ ಚಾಗ್ನಿಹೋತ್ರಿಣೇ ॥೭೭॥

ಪವಿತ್ರಗಳಲ್ಲಿ ಪವಿತ್ರವಾದದ್ದು ಸುವರ್ಣ ಎಂದು ನನ್ನ ಬುದ್ಧಿಯು. ಆದ್ದರಿಂದ ಸುವರ್ಣಾಭರಣಗಳಿಂದ ಅಲಂಕೃತವಾದ ಕಪಿಲಧೇನುವನ್ನು ಅಗ್ನಿಹೋತ್ರನಿರತನಾದ ಬ್ರಾಹ್ಮಣನಿಗೆ ದಾನ ಮಾಡಬೇಕು.

ಏವಂ ದತ್ತ್ವಾ ತು ರಾಜೇಂದ್ರ ಸಪ್ತ ಪೂರ್ವಾನ್ ಪರಾನಪಿ ।
ತಾರಯಿಷ್ಯತಿ ರಾಜೇಂದ್ರ ನಾತ್ರ ಕಾರ್ಯಾ ವಿಚಾರಣಾ ॥೭೮॥

ಈ ಕ್ರಮದಲ್ಲಿ ದಾನ ಮಾಡಿದ ವ್ಯಕ್ತಿಯು ಹಿಂದಿನ ಏಳು ತಲೆಗಳನ್ನು, ಮುಂದಿನ ಏಳು ತಲೆಗಳನ್ನು ನರಕದಿಂದ ಉದ್ಧರಿಸುತ್ತಾನೆ. ಇದರಲ್ಲಿ ವಿಚಾರ ಮಾಡಬೇಕಾಗಿಲ್ಲ.

ಅಗ್ನಿಷ್ಟೋಮಸಹಸ್ರಸ್ಯ ವಾಜಪೇಯಂ ಚ ತತ್ಸಮಮ್ ।
ವಾಜಪೇಯಸಹಸ್ರಸ್ಯ ಅಶ್ವಮೇಧಂ ಚ ತತ್ಸಮಮ್ ॥೭೯॥

ಅಶ್ವಮೇಧಸಹಸ್ರಸ್ಯ ರಾಜಸೂಯಂ ಚ ತತ್ಸಮಮ್ ॥೮೦॥

ಕಪಿಲಾನಾಂ ಸಹಸ್ರೇಣ ವಿಧಿದತ್ತೇನ ಪಾಂಡವ ।
ರಾಜಸೂಯಫಲಂ ಪ್ರಾಪ್ಯ ಮಮ ಲೋಕೇ ಮಹೀಯತೇ ॥೮೧॥

ಸಾವಿರ ಅಗ್ನಿಷ್ಟೋಮ ಯಾಗಗಳು ಒಂದು ವಾಜಪೇಯಕ್ಕೆ ಸಮಾನವಾದುದು. ಸಾವಿರ ವಾಜಪೇಯಗಳು ಒಂದು ಅಶ್ವಮೇಧಕ್ಕೆ ಸಮಾನವಾದುದು. ಸಾವಿರ ಅಶ್ವಮೇಧಗಳು ಒಂದು ರಾಜಸೂಯಕ್ಕೆ ಸಮವಾದುದು. ವಿಧಿವತ್ತಾಗಿ ಸಾವಿರ

ಕಪಿಲಧೇನುಗಳನ್ನು ದಾನ ಮಾಡುವುದರಿಂದ ರಾಜಸೂಯ ಯಾಗವನ್ನು ಮಾಡಿದ ಫಲವನ್ನು ಮನುಷ್ಯನು ಹೊಂದುತ್ತಾನೆ. ನನ್ನ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ನ ತಸ್ಯ ಪುನರಾವೃತ್ತಿರ್ವಿದ್ಯತೇ ಕುರುಪುಂಗವ ॥೮೨॥

ಇಂತಹ ದಾನವನ್ನು ಮಾಡಿದ ವ್ಯಕ್ತಿಯು ನನ್ನ ಲೋಕದಿಂದ ಹಿಂದಿರುಗುವುದಿಲ್ಲ.

ಪ್ರಯಚ್ಛತೇ ಯಃ ಕಪಿಲಾಂ ಸಚೇಲಾಂ
ಸಕಾಂಸ್ಯದೋಹಾಂ ಕನಕಾಗ್ರ್ಯಶೃಂಗೀಮ್ ।
ತೈಸ್ತೈರ್ಗುಣೈಃ ಕಾಮದುಘಾ ಹಿ ಭೂತ್ವಾ
ನರಂ ಪ್ರದಾತಾರಮುಪೈತಿ ಸಾ ಗೌಃ ॥೮೩॥

ಯಾವ ವ್ಯಕ್ತಿಯು ಕಪಿಲಾಧೇನುವು ಬಟ್ಟೆಯಿಂದ, ಕಾಂಸ್ಯ(ಕಂಚು)ಪಾತ್ರೆಯಿಂದ, ಬಂಗಾರದಿಂದ ಅಲಂಕೃತವಾಗಿ ದಾನ ಮಾಡಲ್ಪಡುತ್ತದೋ ಆಯಾ ಗುಣಗಳಿಂದ ಇಷ್ಟಾರ್ಥಗಳನ್ನು ಸುರಿಸುತ್ತಾ ದಾನ ಮಾಡಿದ ವ್ಯಕ್ತಿಯನ್ನು ಅದೇ ಹಸುವು ರಕ್ಷಿಸುತ್ತದೆ.

ಸ್ವಕರ್ಮಭಿಶ್ಚಾಪ್ಯನುಬಧ್ಯಮಾನಂ
ತೀವ್ರಾಂಧಕಾರೇ ನರಕೇ ಪತಂತಮ್ ।
ಮಹಾರ್ಣವೇ ನೌರಿವ ವಾಯುನೀತಾ
ದತ್ತಾ ಹಿ ಗೌಸ್ತಾರಯತೇ ಮನುಷ್ಯಮ್ ॥೮೪॥

ಮಹಾವಾಯುವಿನಿಂದ ಒಯ್ಯಲ್ಪಡುವ ದೋಣಿಯು ತೀರಕ್ಕೆ ತಲುಪಿಸುವಂತೆ ದಾನ ಮಾಡಿದ ಹಸುವು ತನ್ನ ಕರ್ಮಗಳಿಂದ ಬಂಧಿತನಾದ, ಘೋರವಾದ ಅಂಧಕಾರದಿಂದ ಕೂಡಿದ ನರಕದಲ್ಲಿ ಬಿದ್ದಿರುವ ಮನುಷ್ಯನನ್ನು ಉದ್ಧರಿಸುತ್ತದೆ.

ಪುತ್ರಾಂಶ್ಚ ಪೌತ್ರಾಂಶ್ಚ ಕುಲಂ ಚ ಸರ್ವಮ್
ಆಸಪ್ತಮಂ ತಾರಯತೇ ಪರತ್ರ ।
ಯಾವನ್ಮನುಷ್ಯಾನ್ ಪೃಥಿವೀ ಬಿಭರ್ತಿ ।
ತಾವತ್ ಪ್ರದಾತಾರಮಿತೋಽಪರತ್ರ ॥೮೫॥

ಮಕ್ಕಳನ್ನು, ಮೊಮ್ಮಕ್ಕಳನ್ನು, ಸಮಸ್ತ ಕುಲವನ್ನು ಏಳು ತಲೆಮಾರುಗಳ ತನಕ ಉದ್ಧರಿಸುತ್ತದೆ. ಸಮಸ್ತ ಮನುಷ್ಯರನ್ನು ಭೂಮಿಯು ಎಲ್ಲಿಯ ತನಕ ಧರಿಸಿರುತ್ತದೋ

ಅಲ್ಲಿಯ ತನಕವೂ ಗೋದಾನ ಮಾಡಿದವನು ಇಹ, ಪರಲೋಕಗಳಲ್ಲಿ ಸುಖವನ್ನು ಅನುಭವಿಸುತ್ತಾನೆ.

ಯಥೌಷಧಂ ಮಂತ್ರಕೃತಂ ನರಸ್ಯ
ಪ್ರಯುಕ್ತಮಾತ್ರಂ ವಿನಿಹಂತಿ ರೋಗಾನ್ ।
ತಥೈವ ದತ್ತಾ ಕಪಿಲಾ ಸುಪಾತ್ರೇ
ಪಾಪಂ ನರಸ್ಯಾಶು ನಿಹಂತಿ ಸರ್ವಮ್ ॥೮೬॥

ಮಂತ್ರದಿಂದ ಅಭಿಮಂತ್ರಿಸಿಕೊಟ್ಟ ಔಷಧವು ಮನುಷ್ಯನ ರೋಗಗಳನ್ನು ಪರಿಹರಿಸುವಂತೆ ಸತ್ಪಾತ್ರನಿಗೆ ನೀಡಿದ ಕಪಿಲಾಧೇನುವು ಮನುಷ್ಯನ ಸಕಲ ಪಾಪಗಳನ್ನು ಕ್ಷಣಮಾತ್ರದಲ್ಲಿ ನಾಶಗೊಳಿಸುತ್ತದೆ.

ಯಥೈವ ದೃಷ್ಟ್ವಾ ಭುಜಗಾಃ ಸುಪರ್ಣಂ
ನಶ್ಯಂತಿ ದೂರಾದ್ ವಿವಶಾ ಭಯಾರ್ತಾಃ ।
ತಥೈವ ದೃಷ್ಟ್ವಾ ಕಪಿಲಾಪ್ರದಾನಂ
ನಶ್ಯಂತಿ ಪಾಪಾನಿ ನರಸ್ಯ ಶೀಘ್ರಮ್ ॥೮೭॥

ಯಾವ ರೀತಿಯಲ್ಲಿ ಗರುಡನನ್ನು ದೂರದಿಂದಲೇ ನೋಡಿದ ಹಾವುಗಳು ವಿವಶವಾಗಿ ಮತ್ತು ಭಯಪೀಡಿತವಾಗಿ ನಾಶವಾಗುವವೋ, ಹಾಗೆಯೇ ಕಪಿಲಾಧೇನುವಿನ ದಾನವನ್ನು ಮಾಡಿದ ಮನುಷ್ಯನ ಪಾಪಗಳು ಬೇಗನೇ ನಾಶವಾಗುತ್ತದೆ.

ಯಥಾ ತ್ವಚಂ ಸ್ವಾಂ ಭುಜಗೋ ವಿಹಾಯ
ಪುನರ್ನವಂ ರೂಪಮುಪೈತಿ ಪುಣ್ಯಮ್ ।
ತಥೈವ ಮುಕ್ತಃ ಪುರುಷಃ ಸ್ವಪಾಪೈಃ
ವಿರಾಜತೇ ವೈ ಕಪಿಲಾಪ್ರದಾನಾತ್ ॥೮೮॥

ಯಾವ ರೀತಿಯಾಗಿ ಸರ್ಪವು ಪೊರೆಯನ್ನು ಬಿಟ್ಟು ನೂತನವಾದ ಸುಂದರವಾದ ರೂಪವನ್ನು ಹೊಂದುತ್ತದೋ, ಅದೇ ರೀತಿಯಲ್ಲಿ ಕಪಿಲಾಧೇನುವನ್ನು ದಾನ ಮಾಡಿದವನು ಸಮಸ್ತ ಪಾಪಗಳಿಂದಲೂ ಬಿಡುಗಡೆ ಹೊಂದಿ ಶೋಭಿಸುತ್ತಾನೆ.

ಯಥಾಽಂಧಕಾರಂ ನಯನೇಷು ಲಗ್ನಂ
ದೀಪ್ತೋ ಹಿ ನಿರ್ಯಾತಯತಿ ಪ್ರದೀಪಃ ।

ತಥಾ ನರೇ ಪಾಪಮತಿಪ್ರಲೀನಂ
ನಿರ್ಯಾತಯೇದ್ ವೈ ಕಪಿಲಾಪ್ರದಾನಮ್ ॥೪೯॥

ಪ್ರಜ್ವಲಿಸುವ ದೀಪವು ಮನೆಯಲ್ಲಿ ತುಂಬಿರುವ ಕತ್ತಲೆಯನ್ನು ತೊಡೆಯುವಂತೆ ಕಪಿಲಾಧೇನುವನ್ನು ದಾನ ಮಾಡಿದ ಮನುಷ್ಯನು ತನ್ನಲ್ಲಿ ತುಂಬಿರುವ ಪಾಪವನ್ನು ಹೊಡೆದಟ್ಟುತ್ತಾನೆ.

ಯಾವಂತಿ ರೋಮಾಣಿ ಭವಂತಿ ತಸ್ಯಾ
ವತ್ಸಾನ್ವಿತಾಯಾಶ್ಚ ಶರೀರಜಾನಿ ।
ತಾವತ್ ಪ್ರದಾತಾ ಯುಗವರ್ಷಕೋಟಿಂ
ಸ ಬ್ರಹ್ಮಲೋಕೇ ರಮತೇ ಮನುಷ್ಯಃ ॥೫೦॥

ಕರುವಿನಿಂದ ಕೂಡಿದ ಕಪಿಲಾಧೇನುವಿನ ದೇಹದಲ್ಲಿ ಉತ್ಪನ್ನವಾದ ರೋಮಗಳು ಎಷ್ಟು ಇವೆಯೋ ಅಷ್ಟು ಸಂಖ್ಯೆಯ ಕೋಟಿ ಯುಗವರ್ಷಗಳ ಕಾಲ ಗೋದಾನಿಯು ಬ್ರಹ್ಮಲೋಕದಲ್ಲಿ ಸಂತೋಷವನ್ನು ಹೊಂದುತ್ತಾನೆ.

ಯಸ್ಯಾಹಿತಾಗ್ನೇರತಿಥಿಪ್ರಿಯಸ್ಯ
ಶೂದ್ರಾನ್ನದೂರಸ್ಯ ಜಿತೇಂದ್ರಿಯಸ್ಯ ।
ಸತ್ಯವ್ರತಸ್ಯಾಧ್ಯಯನಾನ್ವಿತಸ್ಯ
ದತ್ತಾ ಹಿ ಗೌಸ್ತಾರಯತೇ ಪರತ್ರ ॥೫೧॥

ಯಾವನು ಅನುದಿನವೂ ಅಗ್ನಿಹೋತ್ರವನ್ನು ಮಾಡುತ್ತಾನೋ, ಅತಿಥಿ ಪ್ರಿಯನಾಗಿರುತ್ತಾನೋ, ಶೂದ್ರಾನ್ನದಿಂದ ದೂರವಿರುತ್ತಾನೋ, ಜಿತೇಂದ್ರಿಯನೂ, ಸತ್ಯವ್ರತನೂ, ಸ್ವಾಧ್ಯಾಯ ಪರಾಯಣನೂ ಆಗಿರುತ್ತಾನೋ ಅಂತಹವನಿಗೆ ಕೊಡಲ್ಪಟ್ಟ ಕಪಿಲಾಧೇನುವು ದಾನಿಯನ್ನು ಪರಲೋಕದಲ್ಲಿಯೂ ಉದ್ಧರಿಸುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಕಪಿಲಾಮಾಹಾತ್ಮ್ಯಕಥನಂ ನಾಮ
ಪಂಚಾಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಆರನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಕಪಿಲಾಧೇನುವಿನ ದಾನದ ಪ್ರಶಂಸೆಯನ್ನು ಮಾಡಿದುದು. ಚತುರ್ಮುಖ ಬ್ರಹ್ಮನಿಂದ ಅಗ್ನಿಕುಂಡದ ಮಧ್ಯದಲ್ಲಿ ಕಪಿಲಾಧೇನುವು ಸೃಷ್ಟವಾದುದು. ಆ ಪ್ರಸಂಗದಲ್ಲಿ ರುದ್ರಾದಿ ದೇವತೆಗಳು ಕಪಿಲಾಧೇನುವಿಗೆ ಎಲ್ಲ ಧೇನುಗಳಿಗಿಂತ ಅಧಿಕವಾದ ಪೂಜ್ಯತ್ವ ವರವನ್ನು ನೀಡಿದುದು. ದೇವತೆ-ಋಷಿ ಮುಂತಾದವರು ತಮ್ಮ ಆಶ್ರಯಕ್ಕಾಗಿ ಕಪಿಲಾಧೇನುವನ್ನು ಆಶ್ರಯಿಸಿದುದು. ಕೃಷ್ಣನು ಹವ್ಯ-ಕವ್ಯ ದಾನಗಳ ಕಾಲವನ್ನು ನಿರೂಪಿಸಿದುದು. ಶ್ರಾದ್ಧಭೋಜನಕ್ಕೆ ಅರ್ಹರಾದ ಬ್ರಾಹ್ಮಣರು, ಅನರ್ಹರಾದ ಬ್ರಾಹ್ಮಣರು ಯಾರೆಂದು ನಿರೂಪಿಸಿದುದು. ಸ್ವರ್ಗಪ್ರಾಪಕ ಸುಕೃತ-ದುಷ್ಕೃತಗಳನ್ನು ನಿರೂಪಿಸಿದುದು.

ವೈಶಂಪಾಯನಃ

ಏವಂ ಶ್ರುತ್ವಾ ಪರಂ ಪುಣ್ಯಂ ಕಪಿಲಾದಾನಮುತ್ತಮಮ್ ।
ಧರ್ಮಪುತ್ರಃ ಪ್ರಹೃಷ್ಟಾತ್ಮಾ ಕೇಶವಂ ಪುನರಬ್ರವೀತ್ ॥೧॥

ವೈಶಂಪಾಯನ- ಜನಮೇಜಯನೇ, ಯುಧಿಷ್ಠಿರನು ಶ್ರೇಷ್ಠವೂ, ಪುಣ್ಯಪ್ರದವೂ ಆದ ಕಪಿಲಾಧೇನುವಿನ ದಾನದ ವಿಧಿ-ನಿಯಮವನ್ನು ಕೇಳಿ ಸಂತುಷ್ಟನಾಗಿ ಕೇಶವನನ್ನು ಕುರಿತು ಹೇಳಿದನು.

ಯುಧಿಷ್ಠಿರಃ

ದೇವದೇವೇಶ ಕಪಿಲಾ ಯದಾ ವಿಪ್ರಾಯ ದೀಯತೇ ।
ಕಥಂ ಸರ್ವೇಷು ಚಾಂಗೇಷು ತಸ್ಯಾಸ್ತಿಷ್ಠಂತಿ ದೇವತಾಃ ॥೨॥

ಯುಧಿಷ್ಠಿರ- ದೇವದೇವೇಶನೇ, ಕಪಿಲಾಧೇನುವನ್ನು ಬ್ರಾಹ್ಮಣನಿಗೆ ದಾನ ಮಾಡುವಾಗ ಅದರ ಶರೀರದಲ್ಲಿ ದೇವತೆಗಳು ಹೇಗೆ ವಾಸ ಮಾಡುತ್ತಾರೆ?

ಯಾಶ್ಚೈತಾಃ ಕಪಿಲಾಃ ಪ್ರೋಕ್ತಾ ದಶ ಚೈವ ತ್ವಯಾ ಮಮ ।
ತಾಸಾಂ ಕತಿ ಸುರಶ್ರೇಷ್ಠ ಕಪಿಲಾಃ ಪುಣ್ಯಲಕ್ಷಣಾಃ ॥೩॥

ದೇವಶ್ರೇಷ್ಠನೇ, ನನಗೆ ನೀನು ಹೇಳಿದ ಹತ್ತು ಬಗೆಯ ಕಪಿಲಾ ಗೋವುಗಳಲ್ಲಿ ಪುಣ್ಯಲಕ್ಷಣವುಳ್ಳ ಗೋವುಗಳು ಯಾವುವು?

ಕಥಂ ವಾऽನುಗೃಹೀತಾಸ್ತಾಃ ಸುರೈಃ ಪಿತೃಗಣೈರಪಿ ।
ಕೇನ ಯುಕ್ತಾಶ್ಚ ವರ್ಣೇನ ಶ್ರೋತುಂ ಕೌತೂಹಲಂ ಹಿ ಮೇ ॥೪॥

ಕಪಿಲಾ ಗೋವುಗಳು ದೇವತೆಗಳಿಂದ, ಪಿತೃಗಣಗಳಿಂದ ಹೇಗೆ ಪೂಜ್ಯವಾಗಿವೆ? ಯಾವ ಬಣ್ಣಗಳಿಂದ ಕೂಡಿದವು? ಇವುಗಳ ಬಗ್ಗೆ ಕೇಳುವ ಕುತೂಹಲವು ನನಗೆ ಉಂಟಾಗಿದೆ.

ವೈಶಂಪಾಯನಃ

ಯುಧಿಷ್ಠಿರೇಣೈವಮುಕ್ತಃ ಕೇಶವಃ ಸತ್ಯವಾಕ್ ತದಾ ।
ಗುಹ್ಯಾನಾಂ ಪರಮಂ ಗುಹ್ಯಂ ವಕ್ತುಮೇವೋಪಚಕ್ರಮೇ ॥೫॥

ವೈಶಂಪಾಯನ– ಈ ರೀತಿಯಾಗಿ ಯುಧಿಷ್ಠಿರನು ಪ್ರಶ್ನಿಸಲು, ಸತ್ಯವಾದಿಯಾದ ಕೇಶವನು ಗೋವುಗಳ ವಿಷಯದಲ್ಲಿ ಅತ್ಯಂತ ಗುಹ್ಯವಾದ ವಿಷಯವನ್ನು ಹೇಳಲು ಪ್ರಾರಂಭಿಸಿದನು.

ಶ್ರೀಭಗವಾನ್

ಶೃಣು ರಾಜನ್ ಪವಿತ್ರಂ ವೈ ರಹಸ್ಯಂ ಧರ್ಮಮುತ್ತಮಮ್ ।
ಗ್ರಹಣೀಯಂ ಸತ್ಯಮಿದಂ ನ ಶ್ರಾವ್ಯಂ ಹೇತುವಾದಿನಾ ॥೬॥

ಶ್ರೀಭಗವಾನ್– ಯುಧಿಷ್ಠಿರನೇ, ಧರ್ಮವೂ, ರಹಸ್ಯವೂ ಆಗಿರುವ ಶ್ರೇಷ್ಠವಾದ ಈ ವಿಷಯವನ್ನು ಕೇಳಿಸಿಕೊ. ಈ ವಿಷಯವು ಕೇವಲ ಕುತರ್ಕ ಮಾಡುವವರಿಂದ ಕೇಳಲ್ಪಡಲು ಯೋಗ್ಯವಾಗಿರುವುದಿಲ್ಲ.

ಯದಾ ವತ್ಸಸ್ಯ ಪಾದೌ ದ್ವೌ ಪ್ರಸವೇ ಶಿರಸಾ ಸಹ ।
ದೃಶ್ಯೇತೇ ದಾನಕಾಲಂ ತಮಾಹುಃ ಕಾಲವಿದೋ ಜನಾಃ ॥೭॥

ಯಾವಾಗ ಕಪಿಲಾಧೇನುವಿನ ಉದರದಿಂದ ಅದರ ಕರುವಿನ ಎರಡು ಪಾದಗಳು ಪ್ರಸವವನ್ನು ತಲೆಯಿಂದ ಸಹಿತವಾಗಿ ಹೊಂದುತ್ತಿರುತ್ತವೋ ಆ ಕಾಲವು ಕಪಿಲಾ ಧೇನುವಿನ ದಾನ ಕಾಲವು ಎಂದು ಜ್ಞಾನಿಗಳಿಂದ ಕರೆಯಸಲ್ಪಟ್ಟಿದೆ.

ಅಂತರಿಕ್ಷಗತೋ ವತ್ಸೋ ಯಾವದ್ಭೂಮಿಂ ನ ಯಾಸ್ಯತಿ ।
ಗೌಸ್ತಾವತ್ ಪೃಥಿವೀ ಜ್ಞೇಯಾ ತಸ್ಮಾದ್ ದೇಯಾ ತು ತಾದೃಶೀ ॥೮॥

ಕಪಿಲಾಗೋವಿನ ಉದರದಿಂದ ಪ್ರಸವವನ್ನು ಹೊಂದುತ್ತಿರುವ ಕರುವು ಎಲ್ಲಿಯ ತನಕವು ಭೂಮಿಯನ್ನು ಮುಟ್ಟಿಲ್ಲವೋ ಅಲ್ಲಿಯ ತನಕ ಆ ಕಪಿಲಾ ಗೋವು ಸಮಗ್ರ ಭೂಮಂಡಲಕ್ಕೆ ಸಮಾನವಾಗಿದೆ. ಆದ್ದರಿಂದ ಅಂತಹ ಗೋವನ್ನು ಬ್ರಾಹ್ಮಣನಿಗೆ ದಾನ ಮಾಡಬೇಕು.

ಯಾವಂತಿ ಧೇನೋ ರೋಮಾಣಿ ಸವತ್ಸಾಯಾ ಯುಧಿಷ್ಠಿರ ।
ತಾವಂತ್ಯಃ ಸಿಕತಾಶ್ಚಾಪಿ ಗರ್ಭೋದಕಪರಿಪ್ಲುತಾಃ ॥೯॥

ತಾವದ್ ವರ್ಷಸಹಸ್ರಾಣಿ ದಾತಾ ಸ್ವರ್ಗೇ ಮಹೀಯತೇ ॥೧೦॥

ಯುಧಿಷ್ಠಿರನೇ, ಆ ಕರುವಿನಿಂದ ಸಹಿತವಾದ ಧೇನುವಿನಲ್ಲಿ ಎಷ್ಟು ರೋಮಗಳಿವೆಯೋ, ಗರ್ಭೋದಕದಿಂದ ತೊಯ್ಯಲ್ಪಟ್ಟ ಎಷ್ಟು ಕಣಗಳಿವೆಯೋ ಅಷ್ಟು ಸಾವಿರ ವರ್ಷಗಳ ಕಾಲ ದಾನ ಮಾಡಿದ ವ್ಯಕ್ತಿಯು ಸ್ವರ್ಗಲೋಕದಲ್ಲಿ ಪೂಜ್ಯನಾಗುತ್ತಾನೆ.

ಸುವರ್ಣಾಭರಣಾಂ ಕೃತ್ವಾ ಸವತ್ಸಾಂ ಕಪಿಲಾಂ ತಿಲೈಃ ।
ಪ್ರಚ್ಛಾದ್ಯ ತಾಂ ತು ದದ್ಯಾದ್ ವೈ ಸರ್ವರತ್ನೈರಲಂಕೃತಾಮ್ ॥೧೧॥

ಸಸಮುದ್ರನದೀ ತೇನ ಸಶೈಲವನಕಾನನಾ ।
ಚತುರಂತಾ ಭವೇದ್ ದತ್ತಾ ನಾತ್ರ ಕಾರ್ಯಾ ವಿಚಾರಣಾ ॥೧೨॥

ಕಪಿಲಾ ಧೇನುವನ್ನು ಕರುವಿನ ಜೊತೆಗೆ ಬಂಗಾರದಿಂದ ಅಲಂಕರಿಸಿ, ತಿಲದ ರಾಶಿಯ ಜೊತೆಗೆ ಸಮಸ್ತ ರತ್ನಗಳಿಂದ ಅಲಂಕರಿಸಿ ಯಾವಾತನು ದಾನ ಮಾಡುತ್ತಾನೋ ಆ ವ್ಯಕ್ತಿಯು ಸಮುದ್ರ, ನದಿ, ಪರ್ವತ, ಕಾಡು ಮೊದಲಾದ ವಸ್ತುಗಳಿಂದ ತುಂಬಿದ ಭೂಮಂಡಲವನ್ನು ದಾನ ಮಾಡಿದ ಫಲವನ್ನು ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಪೃಥಿವೀದಾನತುಲ್ಯೇನ ತೇನ ದಾನೇನ ಮಾನವಃ ।
ಸಂಸಾರಸಾಗರಾತ್ ತೀರ್ಣೋ ಯಾತಿ ಲೋಕಂ ಪ್ರಜಾಪತೇಃ ॥೧೩॥

ಭೂಮಿಯನ್ನು ದಾನ ಮಾಡಿದ ಸಮಾನವಾದ ಫಲವನ್ನು ಇಂತಹ ಗೋವನ್ನು ದಾನ ಮಾಡಿದ ಮನುಷ್ಯನು ಹೊಂದುತ್ತಾನೆ. ಸಂಸಾರ ಸಮುದ್ರದಿಂದ ಬಿಡುಗಡೆಯನ್ನು ಹೊಂದಿದವನಾಗಿ ಚತುರ್ಮುಖ ಬ್ರಹ್ಮನ ಲೋಕವನ್ನು ಹೊಂದುತ್ತಾನೆ.

ಬ್ರಹ್ಮಹಾ ಯದಿ ವಾ ಗೋಘ್ನೋ ಭ್ರೂಣಹಾ ಗುರುತಲ್ಪಗಃ ।
ಮಹಾಪಾತಕಯುಕ್ತೋಽಪಿ ದಾನೇನಾನೇನ ಶುದ್ಧ್ಯತಿ ॥೧೪॥

ಬ್ರಹ್ಮಹತ್ಯೆಯನ್ನು ಮಾಡಿರಲಿ, ಗೋಹತ್ಯೆಯನ್ನು ಮಾಡಿರಲಿ, ಭ್ರೂಣಹತ್ಯೆಯನ್ನು ಎಸಗಿರಲಿ, ಗುರುತಲ್ಪವನ್ನು ಏರಿರಲಿ, ಮಹಾಪಾತಕವನ್ನೇ ಮಾಡಿರಲಿ, ಇಂತಹ ಗೋದಾನದಿಂದ ಶುದ್ಧಿಯನ್ನು ಹೊಂದುತ್ತಾನೆ.

ಇದಂ ಪಠತಿ ಯಃ ಪುಣ್ಯಂ ಕಪಿಲಾದಾನಮುತ್ತಮಮ್ ।
ಪ್ರಾತರುತ್ಥಾಯ ಮದ್ಭಕ್ತ್ಯಾ ತಸ್ಯ ಪುಣ್ಯಫಲಂ ಶೃಣು ॥೧೫॥

ಯಾವನು ಇಂತಹ ಕಪಿಲಾಧೇನುವಿನ ದಾನವನ್ನು ಪ್ರತಿದಿನವೂ ಪುಣ್ಯತರವೆಂದು ಪಠಿಸುತ್ತಾನೋ, ಪ್ರಾತಃಕಾಲದಲ್ಲಿ ಭಕ್ತಿಯಿಂದ ಪಠಿಸುವವನಿಗೆ ಫಲವೇನೆಂದು ಹೇಳುತ್ತೇನೆ, ಕೇಳಿಸಿಕೊ.

ಮನಸಾ ಕರ್ಮಣಾ ವಾಚಾ ಮತಿಪೂರ್ವಂ ಯುಧಿಷ್ಠಿರ ।
ಪಾಪಂ ರಾತ್ರಿಕೃತಂ ಹನ್ಯಾದ್ ಅಸ್ಯಾಧ್ಯಾಯಸ್ಯ ಪಾಠಕಃ ॥೧೬॥

ಮನಸ್ಸಿನಿಂದ, ಕರ್ಮದಿಂದ, ಮಾತಿನಿಂದ, ಮತಿಪೂರ್ವಕವಾಗಿ ಏನೆಲ್ಲ ಪಾಪಕರ್ಮಗಳನ್ನು ಮಾಡಿರುತ್ತಾನೋ ಅಂಥವನು ಈ ಅಧ್ಯಾಯವನ್ನು ಪ್ರತಿದಿನವು ಪಾಠ ಮಾಡುವದರಿಂದ ರಾತ್ರಿ ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುತ್ತಾನೆ.

ಇದಮಾವರ್ತಮಾನಸ್ತು ಶ್ರಾದ್ಧೇ ಯಸ್ತರ್ಪಯೇದ್ ದ್ವಿಜಾನ್ ।
ತಸ್ಯಾಪ್ಯಮೃತಮಶ್ನಂತಿ ಪಿತರೋಽತ್ಯಂತಹರ್ಷಿತಾಃ ॥೧೭॥

ಯಾವಾತನು ಶ್ರಾದ್ಧಕಾಲದಲ್ಲಿ ಈ ಅಧ್ಯಾಯದ ಪಾರಾಯಣವನ್ನು ಮಾಡುತ್ತಾ, ಬ್ರಾಹ್ಮಣರನ್ನು ಭೋಜನಾದಿಗಳಿಂದ ತೃಪ್ತಿಪಡಿಸುತ್ತಾನೋ ಅಂತಹವನ ಪಿತೃಗಳು ಅತ್ಯಂತ ಹರ್ಷಿತರಾಗಿ ಅಮೃತವನ್ನೇ ಭೋಜನ ಮಾಡುತ್ತಾರೆ.

ಯಶ್ಚೈದಂ ಶೃಣುಯಾದ್ ಭಕ್ತ್ಯಾ ಮದ್ಗತೇನಾಂತರಾತ್ಮನಾ ।
ತಸ್ಯ ರಾತ್ರಿಕೃತಂ ಸರ್ವಂ ಪಾಪಮಾಶು ಪ್ರಣಶ್ಯತಿ ॥೧೮॥

ಯಾವಾತನು ನನ್ನಲ್ಲೇ ಮನಸ್ಸುಳ್ಳವರಾಗಿ ಈ ಅಧ್ಯಾಯವನ್ನು ಭಕ್ತಿಯಿಂದ ಶ್ರವಣ

ಮಾಡುತ್ತಾನೋ ಅವನು ರಾತ್ರಿ ಮಾಡಿದ ಸಮಸ್ತ ಪಾಪಗಳನ್ನು ಕೂಡಲೇ ನಾಶ ಪಡಿಸಿಕೊಳ್ಳುತ್ತಾನೆ.

ಅತಃ ಪರಂ ವಿಶೇಷಂ ತು ಕಪಿಲಾನಾಂ ಬ್ರವೀಮಿ ತೇ ॥೧೯॥

ಇನ್ನು ಮುಂದೆ ಇದಕ್ಕಿಂತ ವಿಶೇಷವಾದ ಕಪಿಲಾಧೇನುಗಳ ಮಹತ್ವವನ್ನು ತಿಳಿಸುತ್ತೇನೆ.

ಯಾಶ್ಚೈತಾಃ ಕಪಿಲಾಃ ಪ್ರೋಕ್ತಾ ದಶ ರಾಜನ್ ಮಯಾ ತವ ।
ತಾಸಾಂ ಚತಸ್ರಃ ಪ್ರವರಾಃ ಪುಣ್ಯಾಃ ಪಾಪಪ್ರಣಾಶನಾಃ ॥೨೦॥

ನಾನು ಹತ್ತು ಬಗೆಯ ಕಪಿಲಾಧೇನುಗಳನ್ನು ಹಿಂದೆ ತಿಳಿಸಿದ್ದೇನೆ. ಆ ಹತ್ತರಲ್ಲಿ ಪಾಪವನ್ನು ನಾಶಮಾಡುವ ನಾಲ್ಕು ಬಗೆಯ ಧೇನುಗಳು ಪುಣ್ಯಪ್ರದವಾದವುಗಳು, ಶ್ರೇಷ್ಠವಾದವುಗಳು ಎಂದು ಹೇಳುತ್ತಾರೆ.

ಸುವರ್ಣಕಪಿಲಾ ಪುಣ್ಯಾ ತಥಾ ರಕ್ತಾಕ್ಷಿಪಿಂಗಲಾ ।
ಪಿಂಗಲಾಕ್ಷೀ ಚ ಯಾ ಗೌಶ್ಚ ಯಾ ಸ್ಯಾತ್ ಪಿಂಗಲಪಿಂಗಲಾ ॥೨೧॥

ಮೊದಲನೆಯದ್ದು ಸುವರ್ಣಕಪಿಲಾ, ಎರಡನೆಯದು ಗೌರಪಿಂಗಲ, ಮೂರನೆಯದು ರಕ್ತಪಿಂಗಾಕ್ಷೀ, ನಾಲ್ಕನೆಯದ್ದು ಗಲಪಿಂಗಾಕ್ಷೀ, ಐದನೆಯದ್ದು ಬಭ್ರುವರ್ಣ, ಆರನೆಯದು ಶ್ವೇತಪಿಂಗಲಾ, ಏಳನೆಯದ್ದು ವಕ್ತ್ರಪಿಂಗಾಕ್ಷೀ, ಎಂಟನೆಯದ್ದು ಚರಪಿಂಗಲಾ, ಒಂಬತ್ತನೆಯದ್ದು ಪಾಟಲ, ಹತ್ತುನೆಯದ್ದು ಪುಚ್ಛ ಪಿಂಗಲಾ. ಇವುಗಳಲ್ಲಿ ಸುವರ್ಣಕಪಿಲಾ, ರಕ್ತಾಕ್ಷಿಪಿಂಗಲಾ, ಪಿಂಗಲಾಕ್ಷೀ, ಪಿಂಗಲ ಪಿಂಗಲಾ.

ಏತಾಶ್ಚತಸ್ರಃ ಪ್ರವರಾಃ ಪವಿತ್ರಾಃ ಪಾಪನಾಶನಾಃ ।
ನಮಸ್ಕೃತಾ ವಾ ಸ್ಪೃಷ್ಟಾ ವಾ ಘ್ನಂತಿ ಪಾಪಂ ನರಸ್ಯ ತು ॥೨೨॥

ಈ ನಾಲ್ಕು ಬಗೆಯ ಕಾಮಧೇನುಗಳು ಶ್ರೇಷ್ಠವೂ, ಪವಿತ್ರವೂ, ಪಾಪಹರವೂ ಆಗಿವೆ. ಇವುಗಳ ಸ್ಪರ್ಶನ ಮತ್ತು ನಮಸ್ಕಾರಗಳಿಂದಲೇ ಮನುಷ್ಯನ ಪಾಪವು ದೂರವಾಗುತ್ತದೆ.

ಯಸ್ಯೈತಾಃ ಕಪಿಲಾಃ ಸಂತಿ ಗೃಹೇ ಪಾಪಪ್ರಣಾಶನಾಃ ।
ತತ್ರ ಶ್ರೀರ್ವಿಜಯಃ ಕೀರ್ತಿಃ ಸ್ಥಿರಾ ನಿತ್ಯಂ ಯುಧಿಷ್ಠಿರ ॥೨೩॥

ಪಾಪನಾಶಕಗಳಾದ ಕಪಿಲಾಧೇನುಗಳು ಯಾರ ಮನೆಯಲ್ಲಿ ಇವೆಯೋ ಅವನಲ್ಲಿ ಸಂಪತ್ತು, ವಿಜಯ, ಕೀರ್ತಿ, ಸಮೃದ್ಧಿ ಇವುಗಳು ನಿತ್ಯವಾಸವಾಗಿರುತ್ತವೆ.

ಏತಾಸಾಂ ಪ್ರೀತಿಮಾಯಾತಿ ಕ್ಷೀರೇಣ ತು ವೃಷಧ್ವಜಃ ।
ದಧ್ನಾ ಚ ತ್ರಿದಶಾಃ ಸರ್ವೇ ಘೃತೇನ ಚ ಹುತಾಶನಃ ॥೨೪॥

ಈ ಹಸುಗಳ ಹಾಲಿನಿಂದ ಭಗವಾನ್ ಶಂಕರನು ಸುಪ್ರೀತನಾಗುತ್ತಾನೆ. ಇವುಗಳ ಮೊಸರಿನಿಂದ ದೇವತೆಗಳು, ತುಪ್ಪದಿಂದ ಯಜ್ಞೇಶ್ವರನು ತೃಪ್ತರಾಗುತ್ತಾರೆ.

ಪಿತಾ ಪಿತಾಮಹಾಶ್ಚೈವ ತಥೈವ ಪ್ರಪಿತಾಮಹಾಃ ।
ಸಕೃದ್ದತ್ತೇನ ತುಷ್ಯಂತಿ ವರ್ಷಕೋಟಿಂ ಯುಧಿಷ್ಠಿರ ॥೨೫॥

ಕಪಿಲಾಧೇನುವಿನ ತುಪ್ಪ, ಹಾಲು, ಮೊಸರುಗಳನ್ನು ಶ್ರೋತ್ರಿಯ ಬ್ರಾಹ್ಮಣರಿಗೆ ಒಮ್ಮೆ ದಾನ ಮಾಡಿದರೂ ತಂದೆ, ಅಜ್ಜ, ಮುತ್ತಜ್ಜ ಇವರೆಲ್ಲರೂ ಕೋಟಿ ವರ್ಷಗಳ ಕಾಲ ಸಂತೋಷವನ್ನು ಹೊಂದುತ್ತಾರೆ.

ಕಪಿಲಾನಾಂ ಘೃತಂ ಕ್ಷೀರಂ ದಧಿ ಪಾಯಸಮೇವ ವಾ ।
ಶ್ರೋತ್ರಿಯೇಭ್ಯಃ ಸಕೃದ್ದತ್ತಾ ನರಃ ಪಾಪೈಃ ಪ್ರಮುಚ್ಯತೇ ॥೨೬॥

ಕಪಿಲಾಧೇನುವಿನ ತುಪ್ಪ-ಹಾಲು-ಮೊಸರು-ಪಾಯಸಗಳನ್ನು ಶ್ರೋತ್ರಿಯ ಬ್ರಾಹ್ಮಣನಿಗೆ ಒಂದು ಬಾರಿ ದಾನ ಮಾಡಿದರೂ ಮನುಷ್ಯನು ಸಮಸ್ತ ಪಾಪಗಳಿಂದ ಬಿಡುಗಡೆ ಹೊಂದುತ್ತಾನೆ.

ಉಪವಾಸಂ ತು ಯಃ ಕೃತ್ವಾಪ್ಯಹೋರಾತ್ರಂ ಜಿತೇಂದ್ರಿಯಃ ।
ಕಪಿಲಾಪಂಚಗವ್ಯಂ ತು ಪೀತ್ವಾ ಚಾಂದ್ರಾಯಣಾತ್ ಪರಮ್ ॥೨೭॥

ಯಾವನು ಹಗಲು-ರಾತ್ರಿ ಜಿತೇಂದ್ರಿಯನಾಗಿ ಉಪವಾಸದಲ್ಲಿದ್ದು ಕಪಿಲಾಧೇನುವಿನ ಪಂಚಗವ್ಯವನ್ನು ಪಾನ ಮಾಡುತ್ತಾನೋ ಅವನು ಚಾಂದ್ರಾಯಣ ಫಲಕ್ಕಿಂತ ಅಧಿಕವಾದ ಫಲವನ್ನು ಹೊಂದುತ್ತಾನೆ.

ಸೌಮ್ಯೇ ಮುಹೂರ್ತೇ ತತ್ ಪ್ರಾಶ್ಯ ಶುದ್ಧಾತ್ಮಾ ಶುದ್ಧಮಾನಸಃ ।
ಕ್ರೋಧಾನೃತವಿನಿರ್ಮುಕ್ತೋ ಮದ್ಗತೇನಾಂತರಾತ್ಮನಾ ॥೨೮॥

ಯಾವನು ಕೋಪ, ಅಸತ್ಯಗಳನ್ನು ಬಿಟ್ಟು ಭಗವಂತನಲ್ಲಿಯೇ ನೆಲೆಗೊಂಡ ಮನಸ್ಸುಳ್ಳವನಾಗಿ, ಶುಭವಾದ ಮುಹೂರ್ತದಲ್ಲಿ ಕಪಿಲಾಧೇನುವಿನ ಪಂಚಗವ್ಯವನ್ನು ಪ್ರಾಶನ ಮಾಡುತ್ತಾನೋ ಅವನು ಶುದ್ಧಾತ್ಮನೂ, ಶುದ್ಧ ಅಂತಕರಣವುಳ್ಳವನೂ ಆಗುತ್ತಾನೆ.

ಕಪಿಲಾಪಂಚಗವ್ಯೇನ ಸಮಂತ್ರೇಣ ಪೃಥಕ್ ಪೃಥಕ್ ।
ಯೋ ಮತ್ಪ್ರತಿಕೃತಿಂ ವಾऽಪಿ ಶಂಕರಾಕೃತಿಮೇವ ವಾ ॥೨೯॥

ಸ್ನಾಪಯೇದ್ ವಿಷುವೇ ಯಸ್ತು ಸೋऽಶ್ವಮೇಧಫಲಂ ಲಭೇತ್ ॥೩೦॥

ಯಾರು ವಿಷುವತ್ ಪುಣ್ಯಕಾಲದಲ್ಲಿ ಪ್ರತ್ಯೇಕವಾಗಿ ಮಂತ್ರಗಳನ್ನು ಪಠಿಸುತ್ತಾ, ಕಪಿಲಾಧೇನುವಿನ ಪಂಚಗವ್ಯದಿಂದ ನನ್ನ ಪ್ರತಿಮೆಗಾಗಲಿ, ರುದ್ರನ ಪ್ರತಿಮೆಗಾಗಲಿ ಅಭಿಷೇಕವನ್ನು ಮಾಡಿದರೆ ಅವನು ಅಶ್ವಮೇಧ ಮಾಡಿದ ಫಲವನ್ನು ಹೊಂದುತ್ತಾನೆ.

ಸ ಮುಕ್ತಪಾಪಃ ಪೂತಾತ್ಮಾ ಯಾನೇನಾಂಬರಶೋಭಿನಾ ।
ಮಮ ಲೋಕಂ ವ್ರಜೇನ್ಮುಕ್ತೋ ರುದ್ರೋಕ್ತಮಥಾಪಿ ವಾ ॥೩೧॥

ಆ ವ್ಯಕ್ತಿಯು ಸಮಸ್ತ ಪಾಪಗಳಿಂದ ಬಿಡುಗಡೆಯನ್ನು ಹೊಂದಿದವನಾಗಿ ಶುದ್ಧಾಂತಃಕರಣದವನಾಗಿ ಆಕಾಶದಲ್ಲಿ ಬೆಳಗುವ ವಿಮಾನದಲ್ಲಿ ಕುಳಿತು ನನ್ನ ಲೋಕಕ್ಕಾಗಲಿ, ರುದ್ರನ ಲೋಕಕ್ಕಾಗಲಿ ಹೋಗುತ್ತಾನೆ.

ಬ್ರಹ್ಮಣಾ ತು ಪುರಾ ಸೃಷ್ಟಾ ಕಪಿಲಾ ಕಾಂಚನಪ್ರಭಾ ।
ಅಗ್ನಿಕುಂಡಾತ್ ಪರೈರ್ಮಂತ್ರೈರ್ಹೋಮಧೇನುರ್ಮಹಾಪ್ರಭಾ ॥೩೨॥

ಬಂಗಾರದ ಬಣ್ಣದಿಂದ ಬೆಳಗುವ ಕಪಿಲಾಧೇನುವು ಹಿಂದೆ ಚತುರ್ಮುಖ ಬ್ರಹ್ಮನಿಂದ ಶ್ರೇಷ್ಠವಾದ ಮಂತ್ರಗಳ ಮೂಲಕ ಅಗ್ನಿಕುಂಡದಿಂದ ಸೃಷ್ಟಿಸಲ್ಪಟ್ಟಿದೆ. ಮಹಾಕಾಂತಿಸಂಪನ್ನವಾದ ಈ ಕಪಿಲಾಧೇನುವನ್ನೇ ಹೋಮಧೇನು ಎನ್ನುತ್ತಾರೆ.

ಸೃಷ್ಟಮಾತ್ರಾಂ ತು ತಾಂ ದೃಷ್ಟ್ವಾ ದೇವಾ ರುದ್ರಾದಯೋ ದಿವಿ ।
ಸಿದ್ಧಾ ಬ್ರಹ್ಮರ್ಷಯಶ್ಚೈವ ವೇದಾಃ ಸಾಂಗಾಃ ಸಹಾಧ್ವರಾಃ ॥೩೩॥

ಸಾಗರಾಃ ಸರಿತಶ್ಚೈವ ಪರ್ವತಾಃ ಸಬಲಾಹಕಾಃ ।
ಗಂಧರ್ವಾಪ್ಸರಸೋ ಯಕ್ಷಾಃ ಪನ್ನಗಾಶ್ಚಾಪ್ಯುಪಸ್ಥಿತಾಃ ॥೩೪॥

ಅಗ್ನಿಕುಂಡದಿಂದ ಬ್ರಹ್ಮದೇವರ ಮೂಲಕ ಸೃಷ್ಟವಾದ ಕಪಿಲಾಧೇನುವನ್ನು ನೋಡಿದ ಕೂಡಲೇ ರುದ್ರಾದಿ ದೇವತೆಗಳು, ಸಿದ್ಧರು, ಬ್ರಹ್ಮರ್ಷಿಗಳು, ವೇದಗಳು, ಷಡಂಗಗಳು, ಸಮಸ್ತ ಯಜ್ಞಗಳು, ಸಮುದ್ರಗಳು, ನದಿ-ಸರೋವರಗಳು, ಪರ್ವತಗಳು, ಸಮಸ್ತ ಮೇಘಗಳು, ಗಂಧರ್ವರು, ಅಪ್ಸರೆಯರು, ಯಕ್ಷರು, ಪನ್ನಗಗಳು (ಸರ್ಪಗಳು) ಎಲ್ಲರೂ ಅಲ್ಲಿ ಸನ್ನಿಹಿತರಾದರು.

ಸರ್ವೇ ವಿಸ್ಮಯಮಾಪನ್ನಾಃ ಶಿಖಿಮಧ್ಯೇ ಮಹಾಪ್ರಭಾಮ್ ।
ಮಂತ್ರೈಶ್ಚ ವಿವಿಧೈಃ ಸರ್ವಾಸ್ತುಷ್ಟುವುಸ್ತಾಮನೇಕಶಃ ॥೩೫॥

ಎಲ್ಲರೂ ಪರಮ ಆಶ್ಚರ್ಯವನ್ನು ಹೊಂದಿದವರಾಗಿ, ಅಗ್ನಿಯ ಮಧ್ಯದಲ್ಲಿ ಮಹಾತೇಜಸ್ಸಿನಿಂದ ಕಂಗೊಳಿಸುವ ಕಪಿಲಾಧೇನುವನ್ನು ಬಗೆ ಬಗೆಯ ಮಂತ್ರಗಳಿಂದ ಅನೇಕ ವಿಧವಾಗಿ ಸ್ತೋತ್ರ ಮಾಡಿದರು.

ಕೃತಾಂಜಲಿಪುಟಾಃ ಸರ್ವೇ ತಾಮ್ರಶೃಂಗೀಂ ತ್ರಿಲೋಚನಾಮ್ ।
ಶಿರೋಭಿಃ ಪತಿತಾ ಭೂಮೌ ಸವತ್ಸಾಮಮೃತಾರಣಿಮ್ ॥೩೬॥

ಊಚುಃ ಪ್ರಾಂಜಲಯಃ ಸರ್ವೇ ಚತುರ್ವಕ್ತ್ರಂ ಪಿತಾಮಹಮ್ ॥೩೭॥

ಸಮಸ್ತ ದೇವತೆಗಳು ಕೈಮುಗಿದುಕೊಂಡು, ಕರುವಿನಿಂದ ಸಹಿತವಾದ, ಮುಕ್ತಿಯನ್ನೇ ನೀಡಲು ಸಮರ್ಥವಾದ, ಕೆಂಪಾದ ಶೃಂಗದಿಂದ ಕೂಡಿರುವ, ರುದ್ರನಂತೆ ಬೆಳಗುವ ಕಪಿಲಧೇನುವನ್ನು ಕಂಡು ಸಾಷ್ಟಾಂಗ ನಮಸ್ಕರಿಸಿ, ಎಲ್ಲರೂ ಕೈಮುಗಿದು ಪಿತಾಮಹನಾದ ಚತುರ್ಮುಖ ಬ್ರಹ್ಮನನ್ನು ಕುರಿತು ಹೇಳಿದರು.

ದೇವತಾಃ

ಆಜ್ಞಾಪಯ ಮಹಾದೇವ ಕಿಂ ತೇ ಕರ್ಮ ಪ್ರಿಯಂ ವಿಭೋ ॥೩೮॥

ದೇವತೆಗಳು– ನಾವು ಯಾವ ಕರ್ಮವನ್ನು ಮಾಡಬೇಕು ಎಂಬುದನ್ನು ನಮ್ಮ ಪಾಲಿಗೆ ತಿಳಿಸು.

ಶ್ರೀಭಗವಾನ್

ಏವಮುಕ್ತಃ ಸುರೈಃ ಸರ್ವೈರ್ಬ್ರಹ್ಮಾ ವಚನಮಬ್ರವೀತ್ ॥೩೯॥

ಶ್ರೀಭಗವಾನ್– ಈ ರೀತಿಯಾಗಿ ದೇವತೆಗಳು ಚತುರ್ಮುಖ ಬ್ರಹ್ಮನ ಬಳಿ ಹೇಳಿದಾಗ ಬ್ರಹ್ಮನು ಹೀಗೆ ಹೇಳುತ್ತಾನೆ.

ಬ್ರಹ್ಮಾ

ಭವಂತೋऽಪ್ಯನುಗೃಹ್ಣಂತು ದೋಗ್ಧ್ರೀಮೇನಾಂ ಪಯಸ್ವಿನೀಮ್ ॥೪೦॥

ಬ್ರಹ್ಮಾ– ಸಮಸ್ತ ದೇವತೆಗಳೇ, ಹಾಲನ್ನು ನೀಡುವ ಈ ಹಸುವನ್ನು ನೀವೆಲ್ಲರೂ ಅನುಗ್ರಹಿಸಿರಿ.

ಹೋಮಧೇನುರಿಯಂ ಯಜ್ಞೇ ಹ್ಯಗ್ನೀನ್ ಸಂತರ್ಪಯಿಷ್ಯತಿ ।
ಅತೋऽಗ್ನಿಸ್ತರ್ಪಿತಃ ಸರ್ವಾನ್ ಭವತಸ್ತರ್ಪಯಿಷ್ಯತಿ ॥೪೧॥

ಹೋಮಧೇನುವೆನಿಸಿದ ಈ ಕಾಮಧೇನುವು ಸಮಸ್ತ ಅಗ್ನಿಗಳನ್ನು ಸಂತೋಷ ಪಡಿಸುತ್ತದೆ. ಅದರಿಂದ ಸಂತುಷ್ಟನಾದ ಅಗ್ನಿಯು ನಿಮ್ಮೆಲ್ಲರನ್ನೂ ಸಂತೋಷ ಪಡಿಸುತ್ತಾನೆ.

ಪ್ರೀತಾಃ ಕ್ಷೀರಾಮೃತೇನಾಸ್ಯಾ ಜಾತವೀರ್ಯಪರಾಕ್ರಮಾಃ ।
ಜಯಿಷ್ಯಥ ಯಥಾಕಾಮಂ ದಾನವಾನ್ ಸರ್ವ ಏವ ತು ॥೪೨॥

ಈ ಹಸುವಿನ ಅಮೃತಮಯವಾದ ಹಾಲಿನಿಂದ ಪ್ರೀತರಾದ ನೀವೆಲ್ಲರೂ ಶ್ರೇಷ್ಠವಾದ ಬಲವನ್ನು ಹೊಂದಿದವರಾಗಿ ಇಚ್ಛೆ ಬಂದಂತೆ ದಾನವರನ್ನು ಜಯಿಸಿರಿ.

ಜಾತವೀರ್ಯಬಲೈಶ್ವರ್ಯಾಃ ಸತ್ತ್ವವಂತೋ ಜಿತಾರಯಃ ।
ಸದೇವಮಾತೃಕಾಃ ಸರ್ವಾಃ ಪಾಲಯಿಷ್ಯಥ ವೈ ಪ್ರಜಾಃ ॥೪೩॥

ಸಮಸ್ತ ಬಲ-ಐಶ್ವರ್ಯಗಳಿಂದ ತುಂಬಿದವರಾಗಿ, ಸತ್ವವಂತರಾಗಿ, ಶತ್ರುಗಳನ್ನು ಗೆದ್ದವರಾಗಿ, ಮಳೆಯಿಂದ ಸಸ್ಯಭರಿತವಾದ ದೇಶವನ್ನು ಹೊಂದಿದವರಾಗಿ ಸಮಸ್ತ ಪ್ರಜೆಗಳನ್ನು ರಕ್ಷಿಸಿರಿ.

ಪಾಲಿತಾಶ್ಚ ಪ್ರಜಾಃ ಸರ್ವಾ ಭವದ್ಭಿರಿಹ ಧರ್ಮತಃ ।
ಪೂಜಯಿಷ್ಯಂತಿ ವೋ ನಿತ್ಯಂ ಯಜ್ಞೈರ್ವಿವಿಧದಕ್ಷಿಣೈಃ ॥೪೪॥

ಸಮಸ್ತ ಪ್ರಜೆಗಳನ್ನು ನೀವು ರಕ್ಷಿಸಿದಲ್ಲಿ ಆ ಪ್ರಜೆಗಳು ನಿಮ್ಮನ್ನು ಯಜ್ಞದ ಮೂಲಕ ವಿವಿಧ ದಕ್ಷಿಣೆಗಳಿಂದ ಪೂಜಿಸುತ್ತಾರೆ.

ಶ್ರೀಭಗವಾನ್

ಏವಮುಕ್ತಾಃ ಸುರಾಃ ಸರ್ವೇ ಬ್ರಹ್ಮಣಾ ಪರಮೇಷ್ಠಿನಾ ।
ತತಃ ಸಂಹೃಷ್ಟಮನಸಃ ಕಪಿಲಾಯೈ ವರಂ ದದುಃ ॥೪೫॥

ಶ್ರೀಭಗವಾನ್– ಹೀಗೆ ಚತುರ್ಮುಖ ಬ್ರಹ್ಮನು ದೇವತೆಗಳನ್ನು ಕುರಿತು ಹೇಳಿದ ಬಳಿಕ ಆ ದೇವತೆಗಳೆಲ್ಲರೂ ಸಂತುಷ್ಟರಾಗಿ ಕಪಿಲಧೇನುವಿಗೆ ವರವನ್ನು ನೀಡಿದರು.

ದೇವತಾಃ

ಯಸ್ಮಾಲ್ಲೋಕಹಿತಾಯಾದ್ಯ ಬ್ರಹ್ಮಣಾ ತ್ವಂ ವಿನಿರ್ಮಿತಾ ।
ತಸ್ಮಾತ್ ಪೂತಾ ಪವಿತ್ರಾ ಚ ಭವ ಪಾಪವ್ಯಪೋಹನೀ ॥೪೬॥

ದೇವತೆಗಳು– ಕಪಿಲಧೇನುವೇ, ಚತುರ್ಮುಖ ಬ್ರಹ್ಮನ ಮೂಲಕ ಲೋಕದ ಹಿತಕ್ಕೋಸ್ಕರ ನೀನು ನಿರ್ಮಿಸಲ್ಪಟ್ಟಿರುವೆಯೋ ಆದ್ದರಿಂದ ನೀನು ಪವಿತ್ರಳಾಗಿ ಸಮಸ್ತ ಜೀವರ ಪಾಪಗಳನ್ನು ಕಳೆಯುವವಳಾಗಿ ಇರು.

ಯೇ ತ್ವಾಂ ದೃಷ್ಟ್ವಾ ನಮಸ್ಯಂತಿ ಸ್ಪೃಶಂತಿ ಚ ಕರೈರ್ನರಾಃ ।
ತೇಷಾಂ ವರ್ಷಕೃತಂ ಪಾಪಂ ತತ್ಕ್ಷಣಾನಾಂ ಪ್ರಣಶ್ಯತಿ ॥೪೭॥

ಕಪಿಲಧೇನುವೇ, ನಿನ್ನನ್ನು ನೋಡಿ ಯಾರು ನಮಸ್ಕರಿಸುತ್ತಾರೋ ಕೈಗಳಿಂದ ಮುಟ್ಟುತ್ತಾರೋ ಅಂತಹ ನಿನ್ನ ಭಕ್ತರಿಗೆ ಒಂದು ವರ್ಷಗಳಲ್ಲಿ ಆಚರಿಸಿದ ಪಾಪವು ನಾಶವಾಗುತ್ತದೆ.

ಅಕಾಮಕೃತಮಜ್ಞಾತಮದೃಷ್ಟಂ ಯತ್ತು ಪಾತಕಮ್ ।
ತ್ವಾಂ ದೃಷ್ಟ್ವಾ ಯೇ ನಮಸ್ಯಂತಿ ನರಾಃ ಸರ್ವಂಸಹೇತಿ ಚ ॥೪೮॥

ಸಂಕಲ್ಪಿಸದೆ ಮಾಡಿದ, ತಿಳಿಯದೆ ಮಾಡಿದ, ಕಾಣದೆ ಮಾಡಿದ ಪಾಪಗಳೆಲ್ಲವೂ

ನಿನ್ನನ್ನು ನೋಡಿದ ಕೂಡಲೇ ಯಾರು ನಮಸ್ಕರಿಸುತ್ತಾರೋ ಅವರ ಪಾಲಿಗೆ ಪರಿಹಾರವಾಗಲಿ. ನೀನು 'ಸರ್ವಂಸಹ' ಎಂಬ ಬಿರುದಿನಿಂದ ಭೂಷಿತಳಾಗು.

ತೇಷಾಂ ತದ್ವಿಲಯಂ ಯಾತಿ ತಮಃ ಸೂರ್ಯೋದಯೇ ಯಥಾ ॥೪೯॥

ನಿನ್ನನ್ನು ನಮಸ್ಕರಿಸಿದ ವ್ಯಕ್ತಿಗಳ ಪಾಪಗಳೆಲ್ಲವೂ ಸೂರ್ಯೋದಯವಾದಾಗ ಕತ್ತಲು ಪರಿಹಾರವಾದಂತೆ ನಾಶವಾಗುತ್ತದೆ.

ಶ್ರೀಭಗವಾನ್

ಇತ್ಯುಕ್ತ್ವಾ ತಸ್ಯೈ ವರಂ ದತ್ತ್ವಾ ಪ್ರಯಯುಸ್ತೇ ಯಥಾಗತಮ್ ।
ಲೋಕನಿಸ್ತರಣಾರ್ಥಾಯ ಸಾ ಚ ಲೋಕಾಂಶ್ಚಚಾರ ಹ ॥೫೦॥

ಶ್ರೀಭಗವಾನ್– ಈ ರೀತಿಯಾಗಿ ದೇವತೆಗಳು ಕಪಿಲಧೇನುವಿಗೆ ವರವನ್ನು ನೀಡಿ ತಾವು ತಮ್ಮ ಮನೆಗಳಿಗೆ ತೆರಳಿದರು. ಕಪಿಲಧೇನುವಾದರೂ ಸಮಸ್ತ -ಜೀವರ ಪಾಪವನ್ನು ಪರಿಹರಿಸುವ ದೃಷ್ಟಿಯಿಂದ ಸಮಸ್ತ ಲೋಕಗಳಲ್ಲಿಯೂ ಸಂಚರಿಸಿದಳು.

ತಸ್ಯಾಮೇವ ಸಮುದ್ಭೂತಾಃ ಶೇಷಾಶ್ಚ ಕಪಿಲಾ ನವ ।
ವಿಚರಂತಿ ಮಹೀಮೇನಾಂ ಲೋಕಾನುಗ್ರಹಕಾರಣಾತ್ ॥೫೧॥

ಅಂತಹ ಕಪಿಲಧೇನುವಿನಿಂದ ಉತ್ಪನ್ನವಾದ ಉಳಿದ ಕಪಿಲಗೋವುಗಳೇ ಲೋಕಾನುಗ್ರಹ ಕಾರಣದಿಂದ ಸಂಚರಿಸುತ್ತಿವೆ.

ತಸ್ಮಾತ್ತು ಕಪಿಲಾ ದೇಯಾ ಪರತ್ರ ಹಿತಮಿಚ್ಛತಾ ॥೫೨॥

ಆದ್ದರಿಂದ ಪರಲೋಕದ ಹಿತವನ್ನು ಬಯಸುವ ವ್ಯಕ್ತಿಗಳು ಕಪಿಲಾಧೇನುವನ್ನು ದಾನ ಮಾಡಬೇಕು.

ಯದಾ ಚ ದೀಯತೇ ರಾಜನ್ ಕಪಿಲಾ ಹ್ಯಗ್ನಿಹೋತ್ರಿಣೇ ।
ತದಾऽಗ್ರಶೃಂಗಯೋಸ್ತಸ್ಯಾ ವಿಷ್ಣುರಿಂದ್ರಶ್ಚ ತಿಷ್ಠತಃ ॥೫೩॥

ರಾಜನೇ, ಅಗ್ನಿಹೋತ್ರನಿರತನಾದ ವ್ಯಕ್ತಿಗೆ ಕಪಿಲಾಧೇನುವನ್ನು ದಾನ ಮಾಡಿದಾಗ ಆ ಕಪಿಲಾಧೇನುವಿನ ಕೊಂಬಿನ ಅಗ್ರಭಾಗದಲ್ಲಿ ವಿಷ್ಣು-ಇಂದ್ರರು ಸನ್ನಿಹಿತರಾಗಿರುತ್ತಾರೆ.

ಚಂದ್ರವಜ್ರಧರೌ ಚಾಪಿ ತಿಷ್ಠತಃ ಶೃಂಗಮೂಲಯೋಃ ।
ಶೃಂಗಮಧ್ಯೇ ತಥಾ ಬ್ರಹ್ಮಾ ಲಲಾಟೇ ಗೋವೃಷಧ್ವಜಃ ॥೫೪॥

ಕೊಂಬುಗಳ ಬುಡದಲ್ಲಿ ಚಂದ್ರನು, ವಜ್ರಧರನಾದ ಇಂದ್ರನು ಇರುತ್ತಾರೆ. ಕೊಂಬುಗಳ ಮಧ್ಯದಲ್ಲಿ ಚತುರ್ಮುಖ ಬ್ರಹ್ಮನೂ, ಹಣೆಯಲ್ಲಿ ಪರಶಿವನು ಇರುತ್ತಾರೆ.

ಕರ್ಣಯೋರಶ್ವಿನೌ ದೇವೌ ಚಕ್ಷುಷೋಃ ಶಶಿಭಾಸ್ಕರೌ ।
ದಂತೇಷು ಮರುತೋ ದೇವಾ ಜಿಹ್ವಾಯಾಂ ಚ ಸರಸ್ವತೀ ॥೫೫॥

ರೋಮಾಂತೇ ಮುನಯಃ ಸರ್ವೇ ಚರ್ಮಣ್ಯೇವ ಪ್ರಜಾಪತಿಃ ।
ನಿಃಶ್ವಾಸೇಷು ಸ್ಥಿತಾ ವೇದಾಃ ಸಷಡಂಗಪದಕ್ರಮಾಃ ॥೫೬॥

ಕಪಿಲಾಧೇನುವಿನ ಕಿವಿಯಲ್ಲಿ ಅಶ್ವಿನೀದೇವತೆಗಳೂ, ಕಣ್ಣುಗಳಲ್ಲಿ ಸೂರ್ಯ-ಚಂದ್ರರು, ಹಲ್ಲುಗಳಲ್ಲಿ ಮರುದ್ದೇವತೆಗಳು, ನಾಲಿಗೆಯಲ್ಲಿ ಸರಸ್ವತಿಯೂ, ರೋಮಕೂಪಗಳಲ್ಲಿ ಎಲ್ಲ ಮುನಿಗಳು, ಚರ್ಮದಲ್ಲಿ ಪ್ರಜಾಪತಿಯೂ, ಅದರ ನಿಃಶ್ವಾಸದಲ್ಲಿ ಷಡಂಗಗಳಿಂದ ಮತ್ತು ಪದಕ್ರಮಗಳಿಂದ ಸಹಿತವಾದ ವೇದಗಳು ಇರುತ್ತವೆ.

ನಾಸಾಪುಟೇ ಸ್ಥಿತಾ ಗಂಧಾಃ ಪುಷ್ಪಾಣೆ ಸುರಭೀಣೆ ಚ ।
ಅಧರೇ ವಸವಃ ಸರ್ವೇ ಮುಖೇ ಚಾಗ್ನಿಃ ಪ್ರತಿಷ್ಠಿತಃ ॥೫೭॥

ಮೂಗಿನ ಹೊಳ್ಳೆಗಳಲ್ಲಿ ಗಂಧ, ಸುಗಂಧಯುಕ್ತವಾದ ಪುಷ್ಪಗಳು ಇರುತ್ತವೆ. ಕೆಳತುಟಿಯಲ್ಲಿ ವಸುಗಳು, ಮುಖದಲ್ಲಿ ಅಗ್ನಿಯು ಇರುತ್ತಾನೆ.

ಸಾಧ್ಯಾ ದೇವಾಃ ಸ್ಥಿತಾಃ ಕಕ್ಷೇ ಗ್ರೀವಾಯಾಂ ಪಾರ್ವತೀ ಸ್ಥಿತಾ ।
ಪೃಷ್ಠೇ ಚ ನಕ್ಷತ್ರಗಣಾಃ ಕಕುದ್ದೇಶೇ ನಭಃ ಸ್ಥಿತಮ್ ॥೫೮॥

ಅಪಾನೇ ಸರ್ವತೀರ್ಥಾನಿ ಗೋಮೂತ್ರೇ ಜಾಹ್ನವೀ ಸ್ವಯಮ್ ।
ಅಷ್ಟೈಶ್ವರ್ಯಮಯೀ ಲಕ್ಷ್ಮೀರ್ಗೋಮಯೇ ವಸತೇ ತದಾ ॥೫೯॥

ಕಂಕಳುಗಳಲ್ಲಿ ಸಾಧ್ಯದೇವತೆಗಳು, ಕುತ್ತಿಗೆಯಲ್ಲಿ ಪಾರ್ವತಿಯು, ಪೃಷ್ಠಭಾಗದಲ್ಲಿ ನಕ್ಷತ್ರಗಳು, ಕಕುದ್ದೇಶದಲ್ಲಿ ಆಕಾಶವು, ಅಪಾನ ಸ್ಥಾನದಲ್ಲಿ ಸರ್ವತೀರ್ಥಗಳು,

ಗೋಮೂತ್ರದಲ್ಲಿ ಸ್ವತಃ ಜಾಹ್ನವಿಯು, ಗೋಮಯದಲ್ಲಿ ಅಷ್ಟೈಶ್ವರ್ಯದಿಂದ ಯುಕ್ತಳಾದ ಮಹಾಲಕ್ಷ್ಮಿಯು ಸನ್ನಿಹಿತಳಾಗಿರುತ್ತಾಳೆ.

ನಾಸಿಕಾಯಾಂ ಸದಾ ದೇವೀ ಜ್ಯೇಷ್ಠಾ ವಸತಿ ಭಾಮಿನೀ ।
ಶ್ರೋಣೀತಟಸ್ಥಾಃ ಪಿತರೋ ರಮಾ ಲಾಂಗಲಮಾಶ್ರಿತಾಃ ॥೬೦॥

ಮೂಗಿನಲ್ಲಿ ಸುಂದರಿಯಾದ ಜ್ಯೇಷ್ಠಾದೇವಿಯೂ, ನಿತಂಬದಲ್ಲಿ ಪಿತೃದೇವತೆಗಳೂ, ಬಾಲದಲ್ಲಿ ಲಕ್ಷ್ಮೀದೇವಿಯು ವಾಸವಾಗಿರುತ್ತಾಳೆ.

ಪಾರ್ಶ್ವಯೋರುಭಯೋಃ ಸರ್ವೇ ವಿಶ್ವೇ ದೇವಾಃ ಪ್ರತಿಷ್ಠಿತಾಃ ।
ತಿಷ್ಠತ್ಯುರಸಿ ತಾಸಾಂ ತು ಪ್ರೀತಃ ಶಕ್ತಿಧರೋ ಗುಹಃ ॥೬೧॥

ಜಾನುಜಂಘೋರುದೇಶೇಷು ಪಂಚ ತಿಷ್ಠಂತಿ ವಾಯವಃ ।
ಖುರಮಧ್ಯೇಷು ಗಂಧರ್ವಾಃ ಖುರಾಗ್ರೇಷು ಚ ಪನ್ನಗಾಃ ॥೬೨॥

ಎರಡು ಪಾರ್ಶ್ವಗಳಲ್ಲಿ ವಿಶ್ವೇದೇವತೆಗಳು, ಎದೆಯಲ್ಲಿ ಶಕ್ತ್ಯಾಯುಧವನ್ನು ಧರಿಸಿದ ಸ್ಕಂಧನು, ಜಾನು-ಜಂಘ ಪ್ರದೇಶಗಳಲ್ಲಿ (ತೊಡೆಗಳಲ್ಲಿ) ಪಂಚಪ್ರಾಣರು, ಗೊರಸುಗಳಲ್ಲಿ ಗಂಧರ್ವರು, ಗೊರಸುಗಳ ಅಗ್ರಭಾಗದಲ್ಲಿ ಸರ್ಪದೇವತೆಗಳು ಇರುತ್ತಾರೆ.

ಚತ್ವಾರಃ ಸಾಗರಾಃ ಪೂರ್ಣಾಸ್ತಸ್ಯಾ ಏವ ಪಯೋಧರಾಃ ।
ರತಿರ್ಮೇಧಾ ಕ್ಷಮಾ ಸ್ವಾಹಾ ಶ್ರದ್ಧಾ ಶಾಂತಿರ್ಧೃತಿಃ ಸ್ಮೃತಿಃ ॥೬೩॥

ಕೀರ್ತಿರ್ದೀಪ್ತಿಃ ಕ್ರಿಯಾ ಕಾಂತಿಸ್ತುಷ್ಟಿಃ ಪುಷ್ಟಿಶ್ಚ ಸಂತತಿಃ ।
ದಿಶಶ್ಚ ವಿದಿಶಶ್ಚೈವ ಸೇವಂತೇ ಕಪಿಲಾಂ ಸದಾ ॥೬೪॥

ಕಪಿಲಾಧೇನುವಿನ ಕೆಚ್ಚಲಿನಲ್ಲಿ ನಾಲ್ಕು ಸಮುದ್ರಗಳು, ರತಿ-ಮೇಧಾ-ಕ್ಷಮಾ-ಸ್ವಾಹಾ-ಶ್ರದ್ಧಾ-ಶಾಂತಿ-ಧೃತಿ-ಸ್ಮೃತಿ-ಕೀರ್ತಿ-ದೀಪ್ತಿ-ಕ್ರಿಯಾ-ಕಾಂತಿ-ಸ್ತುಷ್ಟಿ-ಪುಷ್ಟಿ-ಸಂತತಿ-ದಿಕ್ಕುಗಳು-ಉಪದಿಕ್ಕುಗಳು ಎಲ್ಲವೂ ಅಧಿದೇವತೆಗಳಾಗಿ ಕೆಚ್ಚಲಿನಲ್ಲಿ ಸೇವಿಸುತ್ತಾ ವಾಸಿಸುತ್ತಿವೆ.

ದೇವಾಃ ಪಿತೃಗಣಾಶ್ಚಾಪಿ ಗಂಧರ್ವಾಪ್ಸರಸಾಂ ಗಣಾಃ ।
ಲೋಕಾ ದ್ವೀಪಾರ್ಣವಾಶ್ಚೈವ ಗಂಗಾದ್ಯಾಃ ಸರಿತಸ್ತಥಾ ॥೬೫॥

ಗ್ರಹಾಃ ಪಿತೃಗಣಾಶ್ಚಾಪಿ ವೇದಾಃ ಸಾಂಗಾಃ ಸಹಾಧ್ವರೈಃ ।
ವೇದೋಕ್ತೈರ್ವಿವಿಧೈರ್ಮಂತ್ರೈಃ ಸ್ತುವಂತಿ ಹೃಷಿತಾಸ್ತಥಾ ॥೬೬॥

ದೇವತೆಗಳು, ಪಿತೃಗಳು, ಗಂಧರ್ವರು, ಅಪ್ಸರೆಯರು, ಲೋಕಗಳು, ದಿರ್ಘಿಪಗಳು, ಸಮುದ್ರಗಳು, ಗಂಗೆಯೇ ಮೊದಲಾದ ನದಿಗಳು, ಗ್ರಹಗಳು, ಪಿತೃಗಣಗಳು, ಯಜ್ಞಗಳಿಂದ ಸಹಿತವಾದ ಸಾಂಗವಾದ ವೇದಗಳು, ಸಂತುಷ್ಟರಾದ ಸಮಸ್ತ ದೇವತೆಗಳು ವೇದೋಕ್ತವಾದ ವಿವಿಧ ಮಂತ್ರಗಳಿಂದ ಕಪಿಲಾಧೇನುವನ್ನು ಸ್ತುತಿಸುತ್ತಾರೆ.

ವಿದ್ಯಾಧರಾಶ್ಚ ಯೇ ಸಿದ್ಧಾ ಭೂತಾಸ್ತಾರಾಗಣಾಸ್ತಥಾ ।
ಪುಷ್ಪವೃಷ್ಟಿಂ ಚ ವರ್ಷಂತಿ ಪ್ರನೃತ್ಯಂತಿ ಚ ಹರ್ಷಿತಾಃ ॥೬೭॥

ವಿದ್ಯಾಧರರು, ಸಿದ್ಧರು, ಭೂತಗಣಗಳು, ತಾರಾಗಣಗಳು ಕಪಿಲಾಧೇನುವಿನ ವಿಷಯದಲ್ಲಿ ಸಂತುಷ್ಟರಾಗಿ ನರ್ತನ ಮಾಡುತ್ತಾರೆ, ಪುಷ್ಪವೃಷ್ಟಿಯನ್ನು ಗೈಯ್ಯುತ್ತಾರೆ.

ದೇವಾಃ

ಬ್ರಹ್ಮಣೋತ್ಪಾದಿತಾ ದೇವೀ ವಹ್ನಿಕುಂಡಾತ್ ಮಹಾಪ್ರಭಾ ॥೬೮॥

ದೇವತೆಗಳು– ದೇವಿಯೇ, ಮಹಾಪ್ರಭೆಯಿಂದ ಕೂಡಿರುವ ನಿನ್ನನ್ನು ಚತುರ್ಮುಖ ಬ್ರಹ್ಮನು ಅಗ್ನಿಕುಂಡದಿಂದ ಸೃಷ್ಟಿಸಿದ್ದಾನೆ.

ನಮಸ್ತೇ ಕಪಿಲೇ ಪುಣ್ಯೇ ಸರ್ವದೇವೈರ್ನಮಸ್ಕೃತೇ ।
ಕಪಿಲೇऽಥ ಮಹಾಸತ್ವೇ ಸರ್ವತೀರ್ಥಮಯೇ ಶುಭೇ ॥೬೯॥

ಕಪಿಲೆಯೇ, ಪುಣ್ಯಸ್ವರೂಪಿಣಿಯೇ, ಸಕಲದೇವತೆಗಳಿಂದ ನಮಸ್ಕೃತಳೇ, ಮಹಾಸತ್ವಳೇ, ಸರ್ವತೀರ್ಥಮಯಳೇ, ಶುದ್ಧಸ್ವರೂಪಳೇ;

ದಾತಾರಂ ಸ್ವಜನೋಪೇತಂ ಬ್ರಹ್ಮಲೋಕಂ ನಯ ಸ್ವಯಮ್ ।
ಅಹೋ ರತ್ನಮಿದಂ ಪುಣ್ಯಂ ಸರ್ವದುಃಖಘ್ನಮುತ್ತಮಮ್ ॥೭೦॥

ಕಪಿಲಗೋರೂಪವಾದ ಈ ರತ್ನವು ಎಷ್ಟು ಪವಿತ್ರವಾಗಿದೆ! ಎಷ್ಟು ಉತ್ತಮವಾಗಿದೆ! ಇದು ಸಮಸ್ತ ದುಃಖಗಳನ್ನು ಪರಿಹರಿಸಲು ಸಮರ್ಥವಾಗಿದೆ. ದಾನ ಮಾಡಿದ

ವ್ಯಕ್ತಿಯನ್ನು ಬಂಧು-ಬಾಂಧವರಿಂದ ಬ್ರಹ್ಮಲೋಕಕ್ಕೆ ಹೊತ್ತೊಯ್ಯುವ ಸಾಮರ್ಥ್ಯ ಉಳ್ಳವಳಾಗಿರುವಿ.

ಅಹೋ ಧರ್ಮಾರ್ಜಿತಂ ಶುದ್ಧಮಿದಮಗ್ರ್ಯಂ ಮಹದ್ಧನಮ್ ॥೭೧॥

ಧರ್ಮದಿಂದ ಸಂಪಾದಿಸಲ್ಪಟ್ಟ ಶುದ್ಧವಾದ ಶ್ರೇಷ್ಠವಾದ ಮಹಾಧನವಾಗಿರುವಿ.

ಶ್ರೀಭಗವಾನ್

ಇತ್ಯಾಕಾಶಸ್ಥಿತಾಸ್ತೇ ತು ಜಲ್ಪಂತಿ ಚ ರಮಂತಿ ಚ ॥೭೨॥

ಶ್ರೀಭಗವಾನ್– ದೇವತೆಗಳು ಕಪಿಲಧೇನುವಿನ ಮಂತ್ರವನ್ನು ಆಕಾಶದಲ್ಲಿ ಹೀಗೆ ನಿಂತು ಜಪಿಸುತ್ತಾರೆ, ಸಂತೋಷ ಹೊಂದುತ್ತಾರೆ.

ತಸ್ಯಾಃ ಪ್ರತಿಗ್ರಹೀತಾ ಚ ಭುಂಕ್ತೇ ಯಾವದ್ ದ್ವಿಜೋತ್ತಮಃ ।
ತಾವದ್ ದೇವಗಣಾಃ ಸರ್ವೇ ಕಪಿಲಾಮರ್ಚಯಂತಿ ವೈ ॥೭೩॥

ಕಪಿಲಧೇನುವನ್ನು ದಾನವನ್ನಾಗಿ ಸ್ವೀಕರಿಸಿದವ ಎಷ್ಟು ಕಾಲ ಅದರ ಹಾಲನ್ನು ಸ್ವೀಕರಿಸುತ್ತಾನೋ ಅಷ್ಟು ಕಾಲ ದೇವತಾಗಣಗಳು ಕಪಿಲಾಧೇನುವನ್ನು ಪೂಜಿಸುತ್ತಿರುತ್ತಾರೆ.

ಸ್ವರ್ಣಶೃಂಗೀಂ ರೂಪ್ಯಖುರಾಂ ಗಂಧೈಃ ಪುಷ್ಪೈಃ ಸುಪೂಜಿತಾಮ್ ॥೭೪॥

ಬಂಗಾರದ ಕೊಂಬಿನಿಂದ ಅಲಂಕೃತವಾದ, ಬೆಳ್ಳಿಯಿಂದ ಅಲಂಕೃತವಾದ ಗೊರಸುಳ್ಳ, ಗಂಧ-ಪುಷ್ಪಗಳಿಂದ ಪೂಜಿತವಾದ;

ವಸ್ತ್ರೈರ್ಯಾಮಹತಾಭ್ಯಾಂ ತು ಯಾವತ್ ತಿಷ್ಠತ್ಯಲಂಕೃತಾ ।
ತಾವದ್ ಯದಿಚ್ಛೇತ್ ಕಪಿಲಾ ಮಂತ್ರಪೂತಾ ಸುಸಂಸ್ಕೃತಾ ॥೭೫॥

ತುಂಡುಮಾಡದ ವಸ್ತ್ರಗಳಿಂದ ಅಲಂಕೃತವಾದ ಕಪಿಲಧೇನುವು ಎಷ್ಟು ಕಾಲ ಅಲಂಕೃತವಾಗಿರುತ್ತದೋ ಅಷ್ಟು ಕಾಲ ಸುಸಂಸ್ಕೃತವಾದ, ಮಂತ್ರಪೂತವಾದ ಕಪಿಲಾಧೇನುವು ಇಷ್ಟಾರ್ಥಗಳನ್ನು ನೀಡುತ್ತದೆ.

ಭೂಲೋಕವಾಸಿನಃ ಸರ್ವಾನ್ ಬ್ರಹ್ಮಲೋಕಂ ನಯೇತ್ ಸ್ವಯಮ್ ॥

ಭೂಲೋಕವಾಸಿಗಳಾದ ವ್ಯಕ್ತಿಗಳನ್ನು ಬ್ರಹ್ಮನ ಲೋಕಕ್ಕೆ ಸ್ವಯಂ ಕೊಂಡೊಯ್ಯಬಲ್ಲ ಸಾಮರ್ಥ್ಯವು ಕಪಿಲಾಧೇನುವಿಗಿದೆ.

ಭೂರಶ್ವಃ ಕನಕಂ ಗಾವೋ ರೂಪ್ಯಮನ್ನಂ ತಿಲಾ ಯವಾಃ ।
ದೀಯಮಾನಾನಿ ವಿಪ್ರಾಯ ಪ್ರಹೃಷ್ಯಂತಿ ದಿನೇ ದಿನೇ ॥೭೭॥

ಭೂಮಿ, ಕುದುರೆ, ಬಂಗಾರ, ಹಸುಗಳು, ಬೆಳ್ಳಿ, ಅನ್ನ, ಎಳ್ಳು, ಗೋಧಿ- ಇವುಗಳನ್ನು ಪ್ರತಿದಿನವೂ ಬ್ರಾಹ್ಮಣರಿಗೆ ದಾನ ಮಾಡಿದಾಗ ದೇವತೆಗಳು ಸಂತುಷ್ಟರಾಗುತ್ತಾರೆ.

ಅಥ ತ್ವಶ್ರೋತ್ರಿಯೇಭ್ಯೋ ವೈ ತಾನಿ ದತ್ತಾನಿ ಪಾಂಡವ ।
ತಥಾ ನಿಂದಂತ್ಯಥಾತ್ಮಾನಮಶುಭಂ ಕಿಂ ನು ನಃ ಕೃತಮ್ ॥೭೮॥

ಆದರೆ ಇವುಗಳನ್ನೇ ಶ್ರೋತ್ರಿಯರಲ್ಲದ ಬ್ರಾಹ್ಮಣರಿಗೆ ದಾನ ಮಾಡಿದಲ್ಲಿ ದೇವತೆಗಳೇ ತಮ್ಮನ್ನು, ನಾವೇನು ಅಶುಭಕರ್ಮಗಳನ್ನು ಮಾಡಿದ್ದೇವೆ ಎಂದು ನಿಂದಿಸಿಕೊಳ್ಳುತ್ತಾರೆ.

ಅಹೋ ರಕ್ಷಃ ಪಿಶಾಚೈಶ್ಚ ಲುಪ್ಯಮಾನಾಃ ಸಮಂತತಃ ।
ಯಾಸ್ಯಾಮೋ ನಿರಯಂ ಶೀಘ್ರಮಿತಿ ಶೋಚಂತಿ ತಾನಿ ವೈ ॥೭೯॥

ಅಶ್ರೋತ್ರಿಯರಿಗೆ ದಾನ ಮಾಡಿದಾಗ ರಾಕ್ಷಸರು, ಪಿಶಾಚಿಗಳು ಆ ದಾನದ ಪುಣ್ಯವನ್ನು ಅಪಹರಿಸುತ್ತಾರೆ. ಇದರಿಂದ ಪಿತೃದೇವತೆಗಳು ಅಯ್ಯೋ! ನಾವು ನರಕಕ್ಕೆ ಹೋಗುತ್ತೇವಲ್ಲ ಎಂದು ದುಃಖಿತರಾಗುತ್ತಾರೆ.

ಏತಾನ್ಯಪಿ ದ್ವಿಜೇಭ್ಯೋ ವೈ ಶ್ರೋತ್ರಿಯೇಭ್ಯೋ ವಿಶೇಷತಃ ।
ದೀಯಮಾನಾನಿ ಹೃಷ್ಯಂತಿ ದಾತಾರಂ ತಾರಯಂತಿ ಚ ॥೮೦॥

ಭೂಮಿ, ಅಶ್ವ, ಕನಕ ಮೊದಲಾದ ದ್ರವ್ಯಗಳನ್ನು ಶ್ರೋತ್ರಿಯ ಬ್ರಾಹ್ಮಣರಿಗೆ ವಿಶೇಷವಾಗಿ ದಾನ ಮಾಡಿದಾಗ, ಇದರಿಂದ ಸಂತುಷ್ಟರಾದ ದೇವತೆಗಳು ದಾನ ಮಾಡಿದ ವ್ಯಕ್ತಿಯನ್ನು ಪಾಪಗಳಿಂದ ಬಿಡುಗಡೆ ಮಾಡುತ್ತಾರೆ.

ಯುಧಿಷ್ಠಿರಃ

ದೇವದೇವೇಶ ದೈತ್ಯಘ್ನ ಕಾಲಃ ಕೋ ಹವ್ಯಕವ್ಯಯೋಃ ।
ಕೇ ತತ್ರ ಪೂಜಾಮರ್ಹಂತಿ ವರ್ಜನೀಯಾಶ್ಚ ಕೇ ದ್ವಿಜಾಃ ॥೮೧॥

ಯುಧಿಷ್ಠಿರ– ದೇವದೇವೇಶನೇ, ದೈತ್ಯಹಂತಕನೇ, ಹವ್ಯ-ಕವ್ಯಗಳಿಗೆ ಸರಿಯಾದ ಕಾಲ ಯಾವುದು? ಯಜ್ಞ ಮತ್ತು ಶ್ರಾದ್ಧಕರ್ಮಗಳಲ್ಲಿ ಎಂತಹ ಬ್ರಾಹ್ಮಣರು ಪೂಜೆಗೆ ಅರ್ಹರಾಗಿರುತ್ತಾರೆ? ಎಂತಹ ಬ್ರಾಹ್ಮಣರನ್ನು ಹವ್ಯ-ಕವ್ಯಗಳಿಗೆ ಆಹ್ವಾನ ಮಾಡಬಾರದು?ಇದೆಲ್ಲವನ್ನೂ ಕೃಪೆ ಮಾಡಿ ತಿಳಿಸು.

ಶ್ರೀಭಗವಾನ್

ದೈವಂ ಪೂರ್ವಾಹ್ಣಿಕಂ ಜ್ಞೇಯಂ ಪೈತಕಂ ಚಾಪರಾಹ್ಣಿಕಮ್ ।
ಕಾಲಹೀನಂ ಚ ಯದ್ದಾನಂ ತದ್ದಾನಂ ರಾಜಸಂ ವಿದುಃ ॥೮೨॥

ಶ್ರೀಭಗವಾನ್– ಧರ್ಮಜನೇ, ದೇವತೆಗಳಿಗೆ ಸಂಬಂಧಿಸಿದ ಹವ್ಯಕರ್ಮಗಳನ್ನು ಪೂರ್ವಾಹ್ಣದಲ್ಲಿ ಮಾಡುವುದು ಯೋಗ್ಯವಾಗಿದೆ. ಪಿತೃಗಳಿಗೆ ಸಂಬಂಧಿಸಿದ ಕವ್ಯ ಕರ್ಮಗಳನ್ನು ಅಪರಾಹ್ಣದಲ್ಲಿ ಮಾಡುವುದು ಯೋಗ್ಯವಾಗಿದೆ. ಅಕಾಲದಲ್ಲಿ ಮಾಡಿದ ದಾನವು ರಾಜಸ ಎನಿಸುತ್ತದೆ.

ಖಾದಿತಂ ಚ ಅವೀಡಂ ಚ ಕಾಲಾತ್ಪೂರ್ವಂ ಚ ಯತ್ಕೃತಮ್ ।
ರಜಸ್ವಲಾಭಿಮೃಷ್ಟಂ ಚ ತದ್ಭಾಗಂ ರಾಕ್ಷಸಂ ವಿದುಃ ॥೮೩॥

ತಿಂದು ಉಳಿದ ಪದಾರ್ಥಗಳು, ಎಂಜಲು ಮಾಡಿದ ಪದಾರ್ಥಗಳು, ಕಾಲಕ್ಕಿಂತ ಮೊದಲು ಮಾಡಿದ ಕರ್ಮಗಳು, ರಜಸ್ವಲೆಯರಿಂದ ಮುಟ್ಟಲ್ಪಟ್ಟ ಪದಾರ್ಥಗಳನ್ನು ರಾಕ್ಷಸರಿಗೆ ಸಂಬಂಧಿಸಿದ್ದು ಎಂದು ಹೇಳಿದ್ದಾರೆ.

ಅವಶಿಷ್ಟೇನ ಯದ್ಭುಕ್ತಂ ಅವ್ರತೇನ ಚ ಭಾರತ ।
ಪರಾಮೃಷ್ಟಂ ಶುನಾ ವಾಽಪಿ ತದ್ಭಾಗಂ ರಾಕ್ಷಸಂ ವಿದುಃ ॥೮೪॥

ತಿಂದು ಉಳಿದ ಪದಾರ್ಥವು ಯಾವುದಿದೆಯೋ, ಅಶುಚಿಯಾದ ಪದಾರ್ಥವು ಯಾವುದಿದೆಯೋ, ನಾಯಿ ಮುಟ್ಟಿದ ಅನ್ನವು ಯಾವುದಿದೆಯೋ ಅವು ರಾಕ್ಷಸರಿಗೆ ಸಂಬಂಧಿಸಿದವು ಎಂದು ವಿದ್ವಾಂಸರು ತಿಳಿದಿದ್ದಾರೆ.

ಯಾವಂತಃ ಪತಿತಾ ವಿಪ್ರಾ ಜಡೋನ್ಮತ್ತಾದಯೋಽಪಿ ಚ ।
ದೈವೇ ಚ ಪಿತ್ರ್ಯೇ ತೇ ವಿಪ್ರಾ ರಾಜನ್ ನಾರ್ಹಂತಿ ಸತ್ಕ್ರಿಯಾಮ್ ॥

ಪತಿತರಾದ, ಉನ್ಮತ್ತರಾದ, ಜಡರಾದ ಬ್ರಾಹ್ಮಣರು ದೇವ-ಪಿತೃ ಸಂಬಂಧವಾದ ಹವ್ಯ-ಕವ್ಯಗಳಲ್ಲಿ ಸತ್ಕಾರ ಹೊಂದಲು ಯೋಗ್ಯರಾಗಿರುವುದಿಲ್ಲ.

ಕ್ಲೀಬಃ ಪ್ಲೀಹೀ ಚ ಕುಷ್ಠೀ ಚ ರಾಜಯಕ್ಷ್ಮಾನ್ವಿತಶ್ಚ ಯಃ ।
ಅಪಸ್ಮಾರೀ ಚ ಯಶ್ಚಾಪಿ ಪಿತ್ರ್ಯೇ ನಾರ್ಹತಿ ಸತ್ಕ್ರಿಯಾಮ್ ॥೮೬॥

ನಪುಂಸಕನು, ಉದರದಲ್ಲಿ ಗುಲ್ಮ ವ್ಯಾಧಿಯನ್ನು ಹೊಂದಿರುವವನು, ಕುಷ್ಠ ರೋಗಿಯು, ಕ್ಷಯರೋಗಿಯು, ಮೂರ್ಛಾರೋಗಿಯು ಇವರೆಲ್ಲರೂ ಪಿತೃ ಕಾರ್ಯದಲ್ಲಿ ಸತ್ಕಾರ ಹೊಂದಲು ಯೋಗ್ಯರಾಗುವುದಿಲ್ಲ.

ಚಿಕಿತ್ಸಕಾ ದೇವಲಕಾ ವೃಥಾ ನಿಯಮಧಾರಿಣಃ ।
ಸೋಮವಿಕ್ರಯಿಣಶ್ಚಾಪಿ ಶ್ರಾದ್ಧೇ ನಾರ್ಹಂತಿ ಸತ್ಕೃತಿಮ್ ॥೮೭॥

ಜೀವಿಕೆಗಾಗಿ ವೈದ್ಯವೃತ್ತಿಯನ್ನು ಮಾಡುವವರು, ಜೀವಿಕೆಗಾಗಿ ದೇವರ ಪೂಜೆಯನ್ನು ಮಾಡುವವರು, ಡಾಂಭಿಕವಾಗಿ ನಿಯಮಾನುಷ್ಠಾನವನ್ನು ಮಾಡುವವರು, ಸೋಮ ಲತೆಯನ್ನು ಮಾರುವವರು ಇವರೆಲ್ಲರೂ ಶ್ರಾದ್ಧದಲ್ಲಿ ಸತ್ಕಾರ ಹೊಂದಲು ಯೋಗ್ಯರಾಗಿರುವುದಿಲ್ಲ.

ಏಕೋದ್ದಿಷ್ಟೇ ಚ ಯೇ ಚಾನ್ನಂ ಭುಂಜತೇ ವಿಧಿವದ್ ದ್ವಿಜಾಃ ।
ಚಾಂದ್ರಾಯಣಮಕೃತ್ವಾ ತೇ ಪುನರ್ನಾರ್ಹಂತಿ ಸತ್ಕೃತಿಮ್ ॥೮೮॥

ಏಕೋದ್ದಿಷ್ಟ ಶ್ರಾದ್ಧದಲ್ಲಿ ವಿಧಿವತ್ತಾಗಿ ಯಾವ ಬ್ರಾಹ್ಮಣನು ಊಟ ಮಾಡುತ್ತಾನೋ ಅವನು ಚಾಂದ್ರಾಯಣ ವ್ರತವನ್ನು ಮಾಡದೆ ಮತ್ತೊಂದು ದಾನಕ್ಕೆ ಅರ್ಹನಾಗುವುದಿಲ್ಲ.

ಗಾಯಕಾ ನರ್ತಕಾಶ್ಚೈವ ಪ್ಲವಕಾ ವಾದಕಾಸ್ತಥಾ ।
ಕಥಕಾ ಯೌಧಿಕಾಶ್ಚೈವ ಶ್ರಾದ್ಧೇ ನಾರ್ಹಂತಿ ಸತ್ಕ್ರಿಯಾಮ್ ॥೮೯॥

ಗಾಯಕರು, ನರ್ತಕರು, ಕತ್ತಿಯ ಅಲುಗಿನ ಮೇಲೆ ನರ್ತನ ಮಾಡುವವರು,

ವಾದ್ಯಗಳನ್ನು ನುಡಿಸುವವರು, ಕಥೆಯನ್ನು ಹೇಳಿ ಜೀವಿಸುವವರು, ಯೋಧರು ಇವರು ಶ್ರಾದ್ಧದಲ್ಲಿ ಸತ್ಕಾರ ಹೊಂದಲು ಯೋಗ್ಯರಾಗುವುದಿಲ್ಲ.

ಅನಗ್ನಯಶ್ಚ ಯೇ ವಿಪ್ರಾಃ ಪ್ರೇತನಿರ್ಯಾತಕಾಶ್ಚ ಯೇ ।
ಸ್ತೇನಾಶ್ಚಾಪಿ ವಿಕರ್ಮಸ್ಥಾ ರಾಜನ್ ನಾರ್ಹಂತಿ ಸತ್ಕೃತಿಮ್ ॥೯೦॥

ರಾಜನೇ, ಅಗ್ನಿಹೋತ್ರವನ್ನು ಮಾಡದಿರುವವರು, ಜೀವಿಕೆಗಾಗಿ ಹೆಣ ಹೊರುವವರು, ಕಳ್ಳತನ ಮಾಡುವವರು, ವರ್ಣಾಶ್ರಮಧರ್ಮಕ್ಕೆ ವಿರುದ್ಧವಾದ ಕರ್ಮಗಳಲ್ಲಿ ತೊಡಗಿಸಿ- ಕೊಂಡಿರುವವರು ಶ್ರಾದ್ಧಕ್ಕೆ ಅರ್ಹರಾಗಿರುವುದಿಲ್ಲ.

ಅಪರಿಜ್ಞಾತಪೂರ್ವಾಶ್ಚ ಗಣಪುತ್ರಶ್ಚ ಯೋ ದ್ವಿಜಃ ।
ಪುತ್ರಿಕಾಪುತ್ರಕಾಶ್ಚಾಪಿ ಶ್ರಾದ್ಧೇ ನಾರ್ಹಂತಿ ಸತ್ಕ್ರಿಯಾಮ್ ॥೯೧॥

ಅಪರಿಚಿತರಾದ ಬ್ರಾಹ್ಮಣರು, ತಂದೆ ಯಾರೆಂದು ತಿಳಿಯದೆ ಸಾಮೂಹಿಕವಾಗಿ ಬ್ರಾಹ್ಮಣಪುತ್ರರೆಂದು ಹೇಳಿಸಿಕೊಳ್ಳುವವರು, ಪುತ್ರಿಯನ್ನು ಶಾಸ್ತ್ರೀಯವಾಗಿ ದಾನ ಮಾಡಿ, ಅವಳಲ್ಲಿ ಹುಟ್ಟುವ ಮಗುವನ್ನು ಮಗನನ್ನಾಗಿ ಮಾಡಿಕೊಂಡ ಬಳಿಕ ಆ ಮಗನು ಶ್ರಾದ್ಧದಲ್ಲಿ ಸತ್ಕಾರ ಹೊಂದಲು ಯೋಗ್ಯನಾಗುವುದಿಲ್ಲ.

ರಣಕರ್ತಾ ಚ ಯೋ ವಿಪ್ರೋ ಯಶ್ಚ ವಾಣಿಜ್ಯಕೋ ದ್ವಿಜಃ ।
ಪ್ರಾಣಿವಿಕ್ರಯವೃತ್ತಿಶ್ಚ ಶ್ರಾದ್ಧೇ ನಾರ್ಹಂತಿ ಸತ್ಕೃತಿಮ್ ॥೯೨॥

ಯುದ್ಧದಲ್ಲಿ ಹೋರಾಡುವ, ವ್ಯಾಪಾರ ಮಾಡುವ, ಪಶು-ಪಕ್ಷಿಗಳನ್ನು ಮಾರಾಟ ಮಾಡುವ ಬ್ರಾಹ್ಮಣರು ಶ್ರಾದ್ಧದಲ್ಲಿ ಸತ್ಕಾರ ಹೊಂದಲು ಯೋಗ್ಯನಾಗುವುದಿಲ್ಲ.

ಚೀರ್ಣವ್ರತಗುಣೈರ್ಯುಕ್ತಾ ನಿತ್ಯಂ ಸ್ವಾಧ್ಯಾಯತತ್ಪರಾಃ ।
ಸಾವಿತ್ರೀಜ್ಞಾಃ ಕ್ರಿಯಾವಂತಸ್ತೇ ಶ್ರಾದ್ಧೇ ಸತ್ಕೃತಿಕ್ಷಮಾಃ ॥೯೩॥

ವ್ರತಾನುಷ್ಠಾನಗಳನ್ನು ಮಾಡುವ, ಗುಣವಂತರಾದ, ಸದಾ ಸ್ವಾಧ್ಯಾಯಶೀಲರಾದ, ಗಾಯತ್ರೀಮಂತ್ರವನ್ನು ಚೆನ್ನಾಗಿ ತಿಳಿದಿರುವ, ಕ್ರಿಯಾನಿಷ್ಠರಾದ ಬ್ರಾಹ್ಮಣರು ಶ್ರಾದ್ಧದಲ್ಲಿ ಸತ್ಕಾರಕ್ಕೆ ಅರ್ಹರಾಗಿರುತ್ತಾರೆ.

ಶ್ರಾದ್ಧಸ್ಯ ಬ್ರಾಹ್ಮಣಃ ಕಾಲಪ್ರಾಪ್ತೋ ದಧಿ ಘೃತಂ ತಥಾ ।
ದರ್ಭಾಃ ಸುಮನಸಃ ಕ್ಷೇತ್ರಂ ತತ್ಕಾಲೇ ಶ್ರಾದ್ಧದೋ ಭವೇತ್ ॥೯೪॥

ಸತ್ಪಾತ್ರನಾದ ಬ್ರಾಹ್ಮಣನ ಆಗಮನ ಕಾಲವೇ ಶ್ರಾದ್ಧಕಾಲಕ್ಕೆ ಉತ್ತಮ ಕಾಲ ಎನಿಸಿದೆ. ಯಾವ ಸಮಯದಲ್ಲಿ ಬ್ರಾಹ್ಮಣನು ಆಗಮಿಸುತ್ತಾನೋ, ಮೊಸರು, ತುಪ್ಪ, ದರ್ಭೆ, ಹೂವು, ಪವಿತ್ರವಾದ ಕ್ಷೇತ್ರ ಇವುಗಳು ಪ್ರಾಪ್ತವಾಗುತ್ತವೆಯೋ ಆ ಸಮಯದಲ್ಲಿ ಶ್ರಾದ್ಧವನ್ನು ಮಾಡಬೇಕು.

ಚಾರಿತ್ರನಿಯತಾ ರಾಜನ್ ಕೃಶಾ ಯೇ ಕೃಶವೃತ್ತಯಃ ।
ಅರ್ಥಿನಶ್ಚೋಪಗಚ್ಛಂತಿ ತೇಭ್ಯೋ ದತ್ತಂ ಮಹತ್ ಫಲಮ್ ॥೯೫॥

ತಪಸ್ವಿನಶ್ಚ ಯೇ ವಿಪ್ರಾಸ್ತಥಾ ಭೈಕ್ಷಚರಾಶ್ಚ ಯೇ ।
ಅರ್ಥಿನಃ ಕೇಚಿದಿಚ್ಛಂತಿ ತೇಷಾಂ ದತ್ತಂ ಮಹತ್ಫಲಮ್ ॥೯೬॥

ರಾಜನೇ, ಸದಾಚಾರನಿರತರಾದ, ದುರ್ಬಲರಾದ, ವೃತ್ತಿಹೀನರಾದ, ಭಿಕ್ಷಾವೃತ್ತಿಯಿಂದ ಜೀವಿಸುವ, ತಪಸ್ವಿಗಳಾದ ಬ್ರಾಹ್ಮಣರು ಏನನ್ನಾದರೂ ಬೇಡಲು ಬಂದರೆ ಅವರಿಗೆ ಅದನ್ನು ದಾನ ಮಾಡಬೇಕು. ಅದಕ್ಕೆ ಮಹತ್ತರವಾದ ಫಲವಿದೆ.

ಏವಂ ಧರ್ಮವಿದಾಂ ಶ್ರೇಷ್ಠ ಜ್ಞಾತ್ವಾ ಸರ್ವಾತ್ಮನಾ ಸದಾ ।
ಶ್ರೋತ್ರಿಯಾಯ ದರಿದ್ರಾಯ ಪ್ರಯಚ್ಛಾನುಪಕಾರಿಣೇ । ೯೭॥

ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ, ಈ ಎಲ್ಲ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡು, ಯಾವ ಉಪಕಾರವನ್ನೂ ಮಾಡದಿರುವ ಶ್ರೋತ್ರಿಯನಾದ ಬ್ರಾಹ್ಮಣನಿಗೆ ದಾನ ಮಾಡು.

ದಾನಂ ಯತ್ ತೇ ಪ್ರಿಯಂ ಕಿಂಚಿಚ್ಛ್ರೋತ್ರಿಯಾಣಾಂ ಚ ಯತ್ ಪ್ರಿಯಮ್।
ತತ್ ಪ್ರಯಚ್ಛಸ್ವ ಧರ್ಮಜ್ಞ ಯದೀಚ್ಛಸಿ ತದಕ್ಷಯಮ್ ॥೯೮॥

ಧರ್ಮಜ್ಞನೇ, ನೀನು ದಾನದ ಅಕ್ಷಯಫಲವನ್ನು ಹೊಂದಲು ಬಯಸುತ್ತಿಯಾದರೆ ನಿನಗೆ ಯಾವುದು ಅತ್ಯಂತ ಇಷ್ಟವಾದ ವಸ್ತುವಾಗಿದೆಯೋ ಅದರಂತೆ ಶ್ರೋತ್ರಿಯರಿಗೆ ಯಾವ ವಸ್ತುವು ಪ್ರಿಯವಾಗಿದೆಯೋ ಅದನ್ನು ದಾನ ಮಾಡು.

ನಿರಯಂ ಯೇ ಚ ಗಚ್ಛಂತಿ ತಚ್ಛೃಣುಷ್ವ ಯುಧಿಷ್ಠಿರ ॥೯೯॥

ಇನ್ನು ಮುಂದೆ ನರಕಕ್ಕೆ ಯಾರು ಹೋಗುತ್ತಾರೆಂದು ಹೇಳುತ್ತೇನೆ, ಕೇಳು.

ಗುರ್ವರ್ಥಂ ವಾ ಗವಾರ್ಥಂ ವಾ ನೋ ಚೇದನ್ಯತ್ರ ಪಾಂಡವ ।
ವದಂತಿ ಯೇಽನೃತಂ ವಿಪ್ರಾಸ್ತೇ ವೈ ನಿರಯಗಾಮಿನಃ ॥೧೦೦॥

ಪಾಂಡವನೇ, ಯಾರು ಗುರುವಿಗಾಗಿ, ಹಸುವಿಗಾಗಿ ಅಲ್ಲದೆ ಬೇರೆ ಕಡೆ ಸುಳ್ಳನ್ನು ಮಾತನಾಡುತ್ತಾರೋ ಅಂತಹ ಬ್ರಾಹ್ಮಣರು ನರಕಕ್ಕೆ ಹೋಗುತ್ತಾರೆ.

ಪರದಾರಾಪಹರ್ತಾರಃ ಪರದಾರಾಭಿಮರ್ಶಕಾಃ ।
ಪರದಾರಪ್ರಯೋಕ್ತಾರಸ್ತೇ ವೈ ನಿರಯಗಾಮಿನಃ ॥೧೦೧॥

ಪರಪತ್ನಿಯರನ್ನು ಅಪಹರಿಸುವವರು, ಪರಪತ್ನಿಯರ ಸ್ಪರ್ಶ ಮಾಡುವವರು, ಪರಪತ್ನಿಯರೊಡನೆ ಸಂಬಂಧವನ್ನು ಮಾಡುವವರು ನರಕಕ್ಕೆ ಹೋಗುತ್ತಾರೆ.

ಸೂಚಕಾಃ ಸಂಧಿಭೇತ್ತಾರಃ ಪರದ್ರವ್ಯೋಪಜೀವಿನಃ ।
ಅಕೃತಜ್ಞಾಶ್ಚ ವಿಪ್ರಾಣಾಂ ತೇ ವೈ ನಿರಯಗಾಮಿನಃ ॥೧೦೨॥

ಚಾಡಿಕೋರರು, ಮಾಡಿಕೊಂಡಿದ್ದ ಸಂಧಾನವನ್ನು ಮುರಿಯುವವರು, ಇತರರ ದ್ರವ್ಯದಿಂದ ಜೀವನವನ್ನು ನಡೆಸುವವರು, ಮಾಡಿದ ಉಪಕಾರವನ್ನು ಮರೆಯುವವರು ನರಕಕ್ಕೆ ಹೋಗುತ್ತಾರೆ.

ವರ್ಣಾಶ್ರಮಾಣಾಂ ಯೇ ಬಾಹ್ಯಾಃ ಪಾಷಂಡಸ್ಥಾಶ್ಚ ಪಾಂಡವ ।
ಉಪಾಸತೇ ಚ ತಾನೇವ ತೇ ಸರ್ವೇ ನಿರಯಾಲಯಾಃ ॥೧೦೩॥

ವರ್ಣದಿಂದಲೂ ಆಶ್ರಮದಿಂದಲೂ ಭ್ರಷ್ಟರಾದವರು, ವೇದಗಳನ್ನು ನಿಂದಿಸುವವರು, ನಾಸ್ತಿಕರು, ಇವರನ್ನು ಆಶ್ರಯಿಸಿಕೊಂಡು ಜೀವನವನ್ನು ನಡೆಸುವವರು ಇವರೆಲ್ಲರೂ ನರಕಕ್ಕೆ ಹೋಗುತ್ತಾರೆ.

ವೇದವಿಕ್ರಯಿಣಶ್ಚೈವ ವೇದಾನಾಂ ಚೈವ ದೂಷಕಾಃ ।
ವೇದಾನಾಂ ಲೇಖಕಾಶ್ಚೈವ ತೇ ವೈ ನಿರಯಗಾಮಿನಃ ॥೧೦೪॥

ವೇದವನ್ನು ಮಾರಿಕೊಂಡು ಬದುಕುವವರು, ವೇದವನ್ನು ನಿಂದಿಸುವವರು, ವೇದಗಳನ್ನು ಬರೆದು ಮಾರಾಟ ಮಾಡುವವರು ನರಕಗಳಿಗೆ ಹೋಗುತ್ತಾರೆ.

ರಸವಿಕ್ರಯಿಣೋ ರಾಜನ್ ವಿಷವಿಕ್ರಯಿಣಶ್ಚ ಯೇ ।
ಕ್ಷೀರವಿಕ್ರಯಿಣಶ್ಚಾಪಿ ತೇ ವೈ ನಿರಯಗಾಮಿನಃ ॥೧೦೫॥

ರಾಜನೇ, ಪಾಕವನ್ನು ಮಾರಾಟ ಮಾಡುವವರು, ವಿಷವನ್ನು ಮಾರಾಟ ಮಾಡುವವರು ಮತ್ತು ಹಾಲನ್ನು ಮಾರಾಟ ಮಾಡುವ ಬ್ರಾಹ್ಮಣರು ನರಕಕ್ಕೆ ಹೋಗುತ್ತಾರೆ.

ಚಂಡಾಲೇಭ್ಯಶ್ಚ ಯೇ ಕ್ಷೀರಂ ಪ್ರಯಚ್ಛಂತಿ ನರಾಧಮಾಃ ।
ಅರ್ಥಾರ್ಥಮಥವಾ ಸ್ನೇಹಾತ್ ತೇ ವೈ ನಿರಯಗಾಮಿನಃ ॥ ೧೦೬॥

ಯಾವ ಬ್ರಾಹ್ಮಣರು ಚಂಡಾಲರಿಗೆ ಹಾಲನ್ನು ದಾನ ಮಾಡುತ್ತಾರೋ ಅಂತಹ ನರಾಧಮರು, ಬಡ್ಡಿಗಾಗಿ ಚಂಡಾಲರಿಗೆ ಹಣವನ್ನು ಕೊಡುವವರು ಅಥವಾ ಸ್ನೇಹದಿಂದ ಹಣವನ್ನು ಕೊಡುವವರು ನರಕಕ್ಕೆ ಹೋಗುತ್ತಾರೆ.

ಪಶೂನಾಂ ದಮಕಾಶ್ಚೈವ ತಥಾ ನಾಸಾನುವೇಧಕಾಃ ।
ಪುಂಸ್ತ್ವಹಿಂಸಾಕರಾಶ್ಚೈವ ತೇ ವೈ ನಿರಯಗಾಮಿನಃ ॥೧೦೭॥

ಪಶುಗಳನ್ನು ಹಿಂಸಿಸುವವರು, ಪಶುಗಳ ಮೂಗನ್ನು ಚುಚ್ಚಿ ಹಿಂಸಿಸುವವರು, ವೃಷಭಗಳ ಬೀಜವನ್ನು ಒಡೆದು ಪುಂಸ್ತ್ವವನ್ನು ನಾಶ ಮಾಡುವವರು ನರಕಕ್ಕೆ ಹೋಗುತ್ತಾರೆ.

ಅದಾತಾರಃ ಸಮರ್ಥಾ ಯೇ ದ್ರವ್ಯಾಣಾಂ ಲೋಭಕಾರಣಾತ್ ।
ದೀನಾನಂಧಾನ್ ನ ಪಶ್ಯಂತಿ ತೇ ವೈ ನಿರಯಗಾಮಿನಃ ॥೧೦೮॥

ದಾನ ಕೊಡಲು ಸಾಮರ್ಥ್ಯವಿದ್ದರೂ ಲೋಭದಿಂದ ದ್ರವ್ಯಗಳನ್ನು ದಾನ ಮಾಡದೆ ಇದ್ದವರೂ, ದುಃಖಿತರನ್ನು, ಕುರುಡರನ್ನು ನೋಡದೆ ಉನ್ಮತ್ತರಾಗಿ ನಡೆಯುವವರು ನರಕಗಳಿಗೆ ಹೋಗುತ್ತಾರೆ.

ಕ್ಷಾಂತಾನ್ ದಾಂತಾನ್ ಕೃಶಾನ್ ಪ್ರಾಜ್ಞಾನ್ ದೀರ್ಘಕಾಲಸಹೋಷಿತಾನ್ ।
ತ್ಯಜಂತಿ ಕೃತಕೃತ್ಯಾ ಯೇ ತೇ ವೈ ನಿರಯಗಾಮಿನಃ ॥೧೦೯॥

ತಮ್ಮ ಜೊತೆಯಲ್ಲಿಯೇ ಬಹಳ ಕಾಲದಿಂದ ವಾಸವಾಗಿದ್ದ, ಸಹನಶೀಲರಾದ, ಜಿತೇಂದ್ರಿಯರಾದ, ದುರ್ಬಲರಾದ, ಬುದ್ಧಿವಂತರಾದ ಮನುಷ್ಯರನ್ನು ತಮ್ಮ

ಕಾರ್ಯವು ಮುಗಿದಕೂಡಲೇ ಬಿಟ್ಟುಬಿಡುವವರು ಅರ್ಥಾತ್ ಕೃತಘ್ನರಾದವರು ನರಕಕ್ಕೆ ಹೋಗುತ್ತಾರೆ.

ಬಾಲಾನಾಮಪಿ ವೃದ್ಧಾನಾಂ ಶ್ರಾಂತಾನಾಂ ಚಾಪಿ ಯೇ ನರಾಃ ।
ಅದತ್ತ್ವಾಽಶ್ನಂತಿ ಯೇ ಮೃಷ್ಟಂ ತೇ ವೈ ನಿರಯಗಾಮಿನಃ ॥೧೧೦॥

ಯಾರು ಬಾಲಕರಿಗೂ, ವೃದ್ಧರಿಗೂ, ಬಳಲಿರುವ ವ್ಯಕ್ತಿಗಳಿಗೂ ಆಹಾರವನ್ನು ಕೊಡದೆ ತಾವು ಮೃಷ್ಟಾನ್ನವನ್ನು ಉಣ್ಣುತ್ತಾರೋ ಅವರೂ ನರಕಕ್ಕೆ ಹೋಗುತ್ತಾರೆ.

ಏತೇ ಪೂರ್ವರ್ಷಿಭಿಃ ಪ್ರೋಕ್ತಾ ನರಾ ನಿರಯಗಾಮಿನಃ ॥೧೧೧॥

ಈ ಎಲ್ಲ ವ್ಯಕ್ತಿಗಳು ನರಕಕ್ಕೆ ಹೋಗುವವರೆಂದು ಋಷಿಗಳೇ ಹೇಳಿರುತ್ತಾರೆ.

ಯೇ ಸ್ವರ್ಗಂ ಸಮನುಪ್ರಾಪ್ತಾಸ್ತಾನ್ ಶೃಣುಷ್ವ ಯುಧಿಷ್ಠಿರ ॥೧೧೨॥

ಯಾರು ಸ್ವರ್ಗಕ್ಕೆ ಹೋಗುತ್ತಾರೆ ಅಂತಹ ವ್ಯಕ್ತಿಗಳನ್ನು ಹೇಳುವೆ, ತಿಳಿದುಕೊ.

ದಾನೇನ ತಪಸಾ ಚೈವ ಸತ್ಯೇನ ಚ ದಮೇನ ಚ ।
ಯೇ ಧರ್ಮಮನುವರ್ತಂತೇ ತೇ ನರಾಃ ಸ್ವರ್ಗಗಾಮಿನಃ ॥೧೧೩॥

ಯುಧಿಷ್ಠಿರನೇ, ದಾನದಿಂದ, ತಪಸ್ಸಿನಿಂದ, ಸತ್ಯದಿಂದ, ಇಂದ್ರಿಯನಿಗ್ರಹದಿಂದ, ಯಾರು ಧರ್ಮಾನುಷ್ಠಾನವನ್ನು ಮಾಡುತ್ತಾರೋ ಆ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಶುಶ್ರೂಷಯಾಽಪ್ಯುಪಾಧ್ಯಾಯಾತ್ ಶ್ರುತಮಾದಾಯ ಪಾಂಡವ ।
ಯೇ ಪ್ರತಿಗ್ರಹನಿಃಸ್ನೇಹಾಃ ತೇ ನರಾಃ ಸ್ವರ್ಗಗಾಮಿನಃ ॥೧೧೪॥

ಪಾಂಡವನೇ, ಯಾರು ಗುರುಗಳಿಗೆ ಸೇವೆ ಮಾಡುತ್ತಾ, ಸಾಂಗವೇದಗಳನ್ನು ಹೃದ್ಗತ ಮಾಡಿಕೊಳ್ಳುತ್ತಾರೋ, ಪ್ರತಿಗ್ರಹದಲ್ಲಿ ನಿರಾಸಕ್ತರಾಗಿರುತ್ತಾರೋ ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಮಧುಮಾಂಸಾಸವೇಭ್ಯಸ್ತು ನಿವೃತ್ತಾ ವೃತ್ತವತ್ತು ಯೇ ।
ಪರದಾರನಿವೃತ್ತಾಶ್ಚ ತೇ ನರಾಃ ಸ್ವರ್ಗಗಾಮಿನಃ ॥೧೧೫॥

ಯಾರು ಮಧು-ಮಾಂಸ ಮತ್ತು ಆಸವಗಳನ್ನು ಬಿಟ್ಟು ಉತ್ತಮ ವ್ರತಾನುಷ್ಠಾನಗಳಲ್ಲಿ ನಿರತರಾಗಿರುತ್ತಾರೋ ಪರಸ್ತ್ರೀ ಸಹವಾಸವನ್ನು ಮಾಡುವುದಿಲ್ಲವೋ ಅವರು ಸ್ವರ್ಗಕ್ಕೆ ಹೋಗುತ್ತಾರೆ.

ಮಾತರಂ ಪಿತರಂ ಚೈವ ಶುಶ್ರೂಷಂತಿ ಚ ಯೇ ನರಾಃ ।
ಭ್ರಾತೄಣಾಮಪಿ ಸಸ್ನೇಹಾಸ್ತೇ ನರಾಃ ಸ್ವರ್ಗಗಾಮಿನಃ ॥೧೧೬॥

ತಾಯಿಯನ್ನು, ತಂದೆಯನ್ನು ಸೇವಿಸುವ, ಸಹೋದರರೊಡನೆ ಪ್ರೀತಿಯಿಂದ ಇರುವ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಯೇ ಚ ಭೋಜನಕಾಲೇ ತು ನಿರ್ಯಾತಾಶ್ಚಾತಿಥಿಪ್ರಿಯಾಃ ।
ದ್ವಾರರೋಧಂ ನ ಕುರ್ವಂತಿ ತೇ ನರಾಃ ಸ್ವರ್ಗಗಾಮಿನಃ ॥೧೧೭॥

ಯಾರು ಭೋಜನಕಾಲದಲ್ಲಿ ಮನೆಯಿಂದ ಹೊರಗೆ ಹೋಗಿ ಅತಿಥಿಗಳನ್ನು ಸ್ವಾಗತಿಸಿ ಸತ್ಕರಿಸುತ್ತಾರೋ, ಅತಿಥಿಗಳಿಗಾಗಿ ಯಾವಾಗಲೂ ಬಾಗಿಲನ್ನು ತೆರದೇ ಇರುತ್ತಾರೋ ಅಂತಹ ಅತಿಥಿಪ್ರಿಯರಾದ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ವೈವಾಹಿಕಂ ತು ಕನ್ಯಾನಾಂ ದರಿದ್ರಾಣಾಂ ಚ ಯೇ ನರಾಃ ।
ಕಾರಯಂತಿ ಚ ಕುರ್ವಂತಿ ತೇ ನರಾಃ ಸ್ವರ್ಗಗಾಮಿನಃ ॥೧೧೮॥

ಯಾರು ಬಡಹೆಣ್ಣುಮಕ್ಕಳಿಗೆ ಅಥವಾ ಬಡ ಗಂಡುಮಕ್ಕಳಿಗೆ ಮದುವೆ ಮಾಡಿಸುತ್ತಾರೋ, ಮದುವೆ ಮಾಡುವವರೂ ಕೂಡ ಸ್ವರ್ಗಕ್ಕೆ ಹೋಗುತ್ತಾರೆ.

ರಸಾನಾಮಥ ಬೀಜಾನಾಮೋಷಧೀನಾಂ ತಥೈವ ಚ ।
ದಾತಾರಃ ಶ್ರದ್ಧಯೋಪೇತಾಸ್ತೇ ನರಾಃ ಸ್ವರ್ಗಗಾಮಿನಃ ॥೧೧೯॥

ಯಾರು ಶ್ರದ್ಧಾಪೂರ್ವಕವಾಗಿ ರಸಗಳನ್ನು, ಬೀಜಗಳನ್ನು, ಓಷಧಿಗಳನ್ನು ಶ್ರದ್ಧೆಯಿಂದ ದಾನ ಮಾಡುತ್ತಾರೋ ಅವರು ಸ್ವರ್ಗಕ್ಕೆ ಹೋಗುತ್ತಾರೆ.

ಕ್ಷೇಮಾಕ್ಷೇಮಂ ಚ ಮಾರ್ಗೇಷು ಸಮಾನಿ ವಿಷಮಾನಿ ಚ ।
ಅರ್ಥಿನಾಂ ಯೇ ಚ ವಕ್ಷ್ಯಂತಿ ತೇ ನರಾಃ ಸ್ವರ್ಗಗಾಮಿನಃ ॥೧೨೦॥

ಯಾರು ಮಾರ್ಗದಲ್ಲಿ ಸಂಚರಿಸುವ ವ್ಯಕ್ತಿಗಳ ಹಿತ-ಅಹಿತಗಳನ್ನು, ಸುಖ-ದುಃಖಗಳನ್ನು ಅರ್ಥ ಮಾಡಿಕೊಂಡು, ದುಃಖಿತರಾದವರನ್ನು ಉಪಚರಿಸುತ್ತಾರೊ ಅವರು ಸ್ವರ್ಗಕ್ಕೆ ಹೋಗುತ್ತಾರೆ.

ಪರ್ವದ್ವಯೇ ಚತುರ್ದಶ್ಯಾಮಷ್ಟಮ್ಯಾಂ ಸಂಧ್ಯಯೋರ್ದ್ವಯೋಃ ।
ಆರ್ದ್ರಾಯಾಂ ಜನ್ಮನಕ್ಷತ್ರೇ ವಿಷುವೇ ಶ್ರವಣೇऽಥವಾ ॥೧೨೧॥

ಯೇ ಗ್ರಾಮ್ಯಧರ್ಮವಿರತಾಸ್ತೇ ನರಾಃ ಸ್ವರ್ಗಗಾಮಿನಃ ॥೧೨೨॥

ಯಾರು ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ, ಚತುರ್ದಶಿ ಮತ್ತು ಅಷ್ಟಮಿ ತಿಥಿಗಳಲ್ಲಿ, ಎರಡು ಸಂಧಿಗಳಲ್ಲಿ, ಆರ್ದ್ರಾ ಮತ್ತು ಜನ್ಮ ನಕ್ಷತ್ರಗಳಲ್ಲಿ, ವಿಷುವ ಕಾಲ ಎನಿಸುವ ಮೇಷ ಮತ್ತು ತುಲಾ ಸಂಕ್ರಮಣ ಕಾಲದಲ್ಲಿ, ಶ್ರವಣಾ ನಕ್ಷತ್ರದಲ್ಲಿ ಸ್ತ್ರೀ ಸಮಾಗಮವನ್ನು ಮಾಡುವುದಿಲ್ಲವೋ ಅಂತಹವರು ಸ್ವರ್ಗಕ್ಕೆ ಹೋಗುತ್ತಾರೆ.

ಹವ್ಯಕವ್ಯವಿಧಾನಂ ಚ ನರಕಸ್ವರ್ಗಗಾಮಿನೌ ।
ಧರ್ಮಾಧರ್ಮೌ ಚ ಕಥಿತೌ ಕಿಂ ಭೂಯಃ ಶ್ರೋತುಮಿಚ್ಛಸಿ ॥೧೨೩॥

ಯುಧಿಷ್ಠಿರನೇ, ನಾನು ನಿನಗೆ ಹವ್ಯ-ಕವ್ಯ ವಿಧಾನಗಳನ್ನು, ನರಕ ಮತ್ತು ಸ್ವರ್ಗಕ್ಕೆ ಹೋಗುವವರನ್ನು, ಧರ್ಮಾಧರ್ಮಗಳ ವಿಷಯಗಳನ್ನು ನಿರೂಪಿಸಿದ್ದೇನೆ. ನೀನು ಇನ್ನೂ ಯಾವ ವಿಷಯವನ್ನು ಕೇಳಲು ಬಯಸುತ್ತೀಯಾ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಸ್ವರ್ಗನರಕಗಮನಕಥನಂ ನಾಮ ಷಡಧಿಕಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಏಳನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಸಾಕ್ಷಾತ್ ಬ್ರಹ್ಮಹತ್ಯೆಯನ್ನು ಮಾಡದಿದ್ದರೂ ಬ್ರಹ್ಮಹತ್ಯೆಗೆ ಸಮಾನವಾದ ದುಷ್ಕರ್ಮ ಯಾವುದು ಎಂದು ಹೇಳಿದುದು. ಅದರಂತೆ ಅಭೋಜ್ಯವೆನಿಸಿದ ಅನ್ನಗಳ ಬಗ್ಗೆ, ಪಾಪಿಗಳ ಲಕ್ಷಣದ ಬಗ್ಗೆ ನಿರೂಪಿಸಿದುದು.

ಯುಧಿಷ್ಠಿರಃ

ಇದಂ ಮೇ ತತ್ತ್ವತೋ ದೇವ ವಕ್ತುಮರ್ಹಸ್ಯಶೇಷತಃ ।
ಹಿಂಸಾಮಕೃತ್ವಾ ಯೋ ಮರ್ತ್ಯೋ ಬ್ರಹ್ಮಹತ್ಯಾಮವಾಪ್ನುಯಾತ್ ॥೧॥

ಯುಧಿಷ್ಠಿರ– ದೇವೇಶನೇ, ಹಿಂಸೆಯನ್ನೇ ಮಾಡದಿದ್ದರೂ ಯಾವನು ಬ್ರಹ್ಮಹತ್ಯೆಯ ಪಾಪಕ್ಕೆ ಸಮಾನವಾದ ಪಾಪವನ್ನು ಹೊಂದುತ್ತಾನೆ? ಈ ವಿಷಯವಾಗಿ ಯಥಾರ್ಥವಾಗಿ, ಸಮಗ್ರವಾಗಿ ತಿಳಿಸು.

ಶ್ರೀಭಗವಾನ್

ಬ್ರಾಹ್ಮಣಂ ಸ್ವಯಮಾಹೂಯ ಭಿಕ್ಷಾರ್ಥಂ ಕೃಶವೃತ್ತಿನಮ್ ।
ಬ್ರೂಯಾನ್ನಾಸ್ತೀತಿ ಯಃ ಪಶ್ಚಾತ್ ತಮಾಹುರ್ಬ್ರಹ್ಮಘಾತಕಮ್ ॥೨॥

ಶ್ರೀಭಗವಾನ್– ಬದುಕಿಗೆ ಮಾರ್ಗವೇ ಇಲ್ಲದ ಬ್ರಾಹ್ಮಣನನ್ನು ಭಿಕ್ಷೆಯನ್ನು ನೀಡುತ್ತೇನೆ ಎಂದು ಸ್ವಯಂ ತಾನೇ ಆಹ್ವಾನಿಸಿ, ಅವನು ಮನೆಗೆ ಬಂದ ಬಳಿಕ ಏನೂ ಇಲ್ಲ, ಹೊರಟು ಹೋಗು ಎಂದು ಯಾವನು ಹೇಳುತ್ತಾನೋ ಅವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಮಧ್ಯಸ್ಥಸ್ಯೇಹ ವಿಪ್ರಸ್ಯ ಯೋऽನೂಚಾನಸ್ಯ ಭಾರತ ।
ವೃತ್ತಿಂ ಹರತಿ ದುರ್ಬುದ್ಧಿಸ್ತಮಾಹುರ್ಬ್ರಹ್ಮಘಾತಕಮ್ ॥೩॥

ದುಷ್ಟಬುದ್ಧಿಯುಳ್ಳ ಮನುಷ್ಯನು ಸುಮ್ಮನಿರುವ ಬ್ರಹ್ಮಜ್ಞಾನಿಯಾದ ಬ್ರಾಹ್ಮಣನ ಜೀವಿಕೆಯನ್ನೇ ಅಪಹರಿಸುತ್ತಾನೋ ಅವನನ್ನೂ ಬ್ರಹ್ಮಘಾತಕನೆಂದು ಹೇಳುತ್ತಾರೆ.

ಗೋಕುಲಸ್ಯ ತೃಷಾರ್ತಸ್ಯ ಜಲಾಂತೇ ವಸುಧಾಧಿಪ ।
ಉತ್ಪಾದಯತಿ ಯೋ ವಿಘ್ನಂ ತಮಾಹುರ್ಬ್ರಹ್ಮಘಾತಕಮ್ ॥೪॥

ಗೋವುಗಳಿಗೆ ಬಾಯಾರಿಕೆ ಉಂಟಾಗಲು ಬಾಯಾರಿಕೆಯನ್ನು ಪರಿಹರಿಸಲು ಇರುವ ಸರೋವರವನ್ನು ಯಾವನು ನಾಶಗೈಯ್ಯುತ್ತಾನೋ ಅವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಯಃ ಪ್ರವೃತ್ತಾಂ ಶ್ರುತಿಂ ಸಮ್ಯಕ್ ಶಾಸ್ತ್ರಂ ವಾ ಮುನಿಭಿಃ ಕೃತಮ್ ।
ದೂಷಯತ್ಯನಭಿಜ್ಞಾಯ ತಮಾಹುರ್ಬ್ರಹ್ಮಘಾತಕಮ್ ॥೫॥

ಯಾರು ಅನಾದಿಕಾಲದಿಂದ ಕವಿಯಿಂದ ಕವಿಗೆ ಹರಿದುಬಂದಿರುವ ವೇದಮಾತುಗಳನ್ನೂ, ಶಾಸ್ತ್ರಗಳನ್ನೂ ಋಷಿ-ಮುನಿಗಳಿದ ರಚಿತವಾದ ಶಾಸ್ತ್ರಗಳನ್ನು ಏನೂ ತಿಳಿಯದೇ ದೂಷಣೆ ಮಾಡುತ್ತಾರೋ ಅವರನ್ನು ಬ್ರಹ್ಮಘಾತಕರೆಂದು ಹೇಳುತ್ತಾರೆ.

ಆಶ್ರಮೇ ವಾ ವನೇ ವಾऽಪಿ ಗ್ರಾಮೇ ವಾ ನಗರೇऽಪಿ ವಾ ।
ಅಗ್ನಿಂ ಯಃ ಪ್ರಕ್ಷಿಪೇತ್ ಕ್ರುದ್ಧಃ ತಮಾಹುರ್ಬ್ರಹ್ಮಘಾತಕಮ್ ॥೬॥

ಆಶ್ರಮದಲ್ಲಿಯೇ ಆಗಲಿ, ಮನೆಯಲ್ಲಿಯೇ ಆಗಲಿ, ಗ್ರಾಮದಲ್ಲಿಯೇ ಆಗಲಿ, ಪಟ್ಟಣದಲ್ಲಿಯೇ ಆಗಲಿ, ಯಾರು ಕ್ರುದ್ಧರಾಗಿ ಅವುಗಳಿಗೆ ಬೆಂಕಿಯನ್ನು ನೀಡುತ್ತಾರೋ ಅವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಚಕ್ಷುಷಾ ವಾ ವಿಹೀನಸ್ಯ ಪಂಗೋರ್ವಾऽಪಿ ಜಡಸ್ಯ ವಾ ।
ಹರೇದ್ವೈ ಯಸ್ತು ಸರ್ವಸ್ವಂ ತಮಾಹುರ್ಬ್ರಹ್ಮಘಾತಕಮ್ ॥೭॥

ಕಣ್ಣಿಲ್ಲದವನ, ಕಾಲಿಲ್ಲದವನ, ಬುದ್ಧಿಯಿಲ್ಲದವನ ಸರ್ವಸ್ವವನ್ನು ಯಾವನು ಅಪಹರಿಸುತ್ತಾನೋ ಅವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಯಾವತ್ಸಾರೋ ಭವೇದ್ ದೀನಸ್ತನ್ನಾಶೇ ಯಸ್ಯ ದುಃಸ್ಥಿತಿಃ ।
ತತ್ಸರ್ವಸ್ವಂ ಹರೇದ್ ಯೋ ವೈ ತಮಾಹುರ್ಬ್ರಹ್ಮಘಾತಕಮ್ ॥೮॥

ಯಾವ ಒಬ್ಬ ದೀನನಾದ ಮನುಷ್ಯನು ತನ್ನಲ್ಲಿರುವ ಅಲ್ಪಸ್ವಲ್ಪ ವಸ್ತುವನ್ನೇ ಸಾರಸರ್ವಸ್ವವೆಂದು ಭಾವಿಸಿಕೊಂಡಿರುತ್ತಾನೋ, ಅವುಗಳ ನಾಶದಿಂದ ದುಃಖ ಹೊಂದುತ್ತಾನೋ ಅಂತಹವನ ಸಮೀಪದಲ್ಲಿರುವ ಅಲ್ಪ ವಸ್ತುಗಳನ್ನು ಅಪಹರಿಸುವವನಿಗೆ ಬ್ರಹ್ಮಘಾತಕನೆಂದು ಹೇಳುತ್ತಾರೆ.

ಕ್ರೋಧಾದ್ವಾ ಯದಿ ವಾ ದ್ವೇಷಾದಾಕ್ರುಷ್ಟಸ್ತರ್ಜಿತೋಽಪಿ ವಾ ।
ಋತೌ ಸ್ತ್ರಿಯಂ ವಾ ನೋಪೇಯಾತ್ ತಮಾಹುರ್ಬ್ರಹ್ಮಘಾತಕಮ್ ॥೯॥

ಕ್ರೋಧದಿಂದಾಗಲಿ, ದ್ವೇಷದಿಂದಾಗಲಿ, ಕಿರುಚುತ್ತಾ, ಹೆದರಿಸುತ್ತಾ ತನ್ನ ಪತ್ನಿಯನ್ನು ತರ್ಜಿಸುತ್ತಲಾಗಲಿ, ಋತುಕಾಲದಲ್ಲಿ ತನ್ನ ಪತ್ನಿಯನ್ನು ಸೇರುವುದಿಲ್ಲವೋ ಅವನನ್ನು ಬ್ರಹ್ಮಘಾತಕನೆಂದು ಹೇಳುತ್ತಾರೆ.

ಯುಧಿಷ್ಠಿರಃ

ಸರ್ವೇಷಾಮಪಿ ದಾನಾನಾಂ ಯತ್ತು ದಾನಂ ವಿಶಿಷ್ಯತೇ ।
ಅಭೋಜ್ಯಾನ್ನಾಶ್ಚ ಯೇ ವಿಪ್ರಾಸ್ತಾನ್ ಬ್ರೂಹಿ ಸುರೋತ್ತಮ ॥೧೦॥

ಯುಧಿಷ್ಠಿರ– ಸಮಸ್ತ ದಾನಗಳಿಗಿಂತಲೂ ಯಾವ ದಾನವು ವಿಶಿಷ್ಟವಾದುದು? ಯಾವ ಬ್ರಾಹ್ಮಣರ ಅನ್ನವು ತಿನ್ನಲು ಯೋಗ್ಯವಲ್ಲ? ಇದನ್ನು ವಿಷದವಾಗಿ ತಿಳಿಸು.

ಶ್ರೀಭಗವಾನ್

ಅನ್ನಮೇವ ಪ್ರಶಂಸಂತಿ ದೇವಾ ಬ್ರಹ್ಮಪುರಃಸರಾಃ ।
ಅನ್ನೇನ ಸದೃಶಂ ದಾನಂ ನ ಭೂತಂ ನ ಭವಿಷ್ಯತಿ ॥೧೧॥

ಶ್ರೀಭಗವಾನ್– ಯುಧಿಷ್ಠಿರನೇ, ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳೂ ಅನ್ನವನ್ನೇ ಪ್ರಶಂಸೆ ಮಾಡುತ್ತಾರೆ. ಆದ್ದರಿಂದ ಅನ್ನದಾನಕ್ಕಿಂತ ಪ್ರಶಂಸನೀಯವಾದ ದಾನವು ಹಿಂದೆಯೂ ಇರಲಿಲ್ಲ, ಮುಂದೆಯೂ ಇರಲಾರದು.

ಅನ್ನಮೂರ್ಜಸ್ಕರಂ ಲೋಕೇ ಅನ್ನಾತ್ ಪ್ರಾಣಾಃ ಪ್ರತಿಷ್ಠಿತಾಃ ।
ಅಭೋಜ್ಯಾನ್ನಾನ್ ಮಯಾ ರಾಜನ್ ವಕ್ಷ್ಯಮಾಣಾನ್ ನಿಬೋಧ ಮೇ ॥

ಈ ಲೋಕದಲ್ಲಿ ಅನ್ನವೇ ಪ್ರಾಣಿಗಳ ಬಲವನ್ನು ಹೆಚ್ಚಿಸುತ್ತದೆ. ಅನ್ನವನ್ನು ಅವಲಂಬಿಸಿಕೊಂಡು ಪ್ರಾಣಿಗಳು ಬದುಕಿವೆ. ಇನ್ನು ಮುಂದೆ ನಾನು ಯಾರ ಅನ್ನವನ್ನು ಉಣ್ಣಬಾರದೆಂದು ಉತ್ತರಿಸುತ್ತೇನೆ. ಏಕಾಗ್ರತೆಯಿಂದ ಕೇಳು.

ದೀಕ್ಷಿತಸ್ಯ ಕದರ್ಯಸ್ಯ ಬದ್ಧಸ್ಯ ನಿಗಲೇನ ತು ।
ಅಭಿಶಸ್ತಸ್ಯ ಷಂಡಸ್ಯ ಪಾಕಭೇದಕರಸ್ಯ ಚ ॥೧೩॥

ಯಜ್ಞದಲ್ಲಿ ದೀಕ್ಷಿತನಾಗಿರುವವನ, ಜಿಪುಣನ, ಕೋಪಿಷ್ಟನ, ಶಠನ, ಶಾಪಗ್ರಸ್ಥನ, ನಪುಂಸಕನ, ಪಂಕ್ತಿಭೇದ ಮಾಡುವವನ ಅನ್ನವನ್ನು ಉಣ್ಣಬಾರದು.

ಚಿಕಿತ್ಸಕಸ್ಯ ದೂತಸ್ಯ ತಥಾ ಚೋಚ್ಛಿಷ್ಟಭೋಜಿನಃ ॥೧೪॥

ಚಿಕಿತ್ಸೆಯನ್ನು ನೀಡುವ ವೈದ್ಯನ, ದೂತನ, ಉಚ್ಛಿಷ್ಟಾನ್ನವನ್ನು ತಿನ್ನುವವನ ಮನೆಯಲ್ಲಿ ಅನ್ನವನ್ನು ಉಣ್ಣಬಾರದು.

ಉಗ್ರಾನ್ನಂ ಸೂತಕಾನ್ನಂ ಚ ಶೂದ್ರೋಚ್ಛೇಷಣಮೇವ ಚ ।
ದ್ವಿಷದನ್ನಂ ನ ಭೋಕ್ತವ್ಯಂ ಪತಿತಾನ್ನಂ ಚ ಯಚ್ಛುತಮ್ ॥೧೫॥

ಉಗ್ರನ, ಅಶೌಚದಲ್ಲಿರುವವನ, ವೃಷಲನು ಊಟ ಮಾಡಿದ ಬಳಿಕ ಉಳಿದ ಅನ್ನವನ್ನು, ದ್ವೇಷ ಮಾಡುವವನ ಅನ್ನವನ್ನು, ಪತಿತನ ಮನೆಯ ಅನ್ನವನ್ನು ಉಣ್ಣಬಾರದು.

ತಥಾ ಚ ಪಿಶುನಸ್ಯಾನ್ನಂ ಯಜ್ಞವಿಕ್ರಯಿಣಸ್ತಥಾ ॥೧೬॥

ಚಾಡಿಹೇಳುವವನ ಮನೆಯ ಅನ್ನವನ್ನು, ಯಜ್ಞದ ಫಲವನ್ನು ಮಾರುವವನ ಅನ್ನವನ್ನು ಉಣ್ಣಬಾರದು.

ಶೈಲೂಷಿತಂತುವಾಯಾನ್ನಂ ಕೃತಘ್ನಸ್ಯಾನ್ನಮೇವ ಚ ।
ಅಂಬಷ್ಠಸ್ಯ ನಿಷಾದಸ್ಯ ರಂಗಾವತರಕಸ್ಯ ಚ ॥೧೭॥

ವೇದೋಕ್ತವಾದ ಮರ್ಯಾದೆಯನ್ನು ನಾಶಪಡಿಸಿದ, ತಲೆಯಲ್ಲಿ ನಾಯಿ ಚಿಹ್ನೆ ಮೊದಲಾದ ರೀತಿಯಲ್ಲಿ ವಿರೂಪವಾಗಿ ಕೇಶದಲ್ಲಿ ಅಲಂಕೃತನಾದ ವ್ಯಕ್ತಿಯನ್ನು ಶೈಲೂಷಿ ಎಂದು ಕರೆದಿದ್ದಾರೆ. ಅಂತಹ ವ್ಯಕ್ತಿಯ ಮನೆಯ ಅನ್ನವನ್ನು, ಬಟ್ಟೆಯನ್ನು ಹೊಲಿದು ಜೀವನ ಮಾಡುವ ವ್ಯಕ್ತಿಯ ಮನೆಯ ಅನ್ನವನ್ನು, ಕೃತಘ್ನನ ಮನೆಯ ಅನ್ನವನ್ನು, ವೇಶ್ಯಾಸ್ತ್ರೀಯಲ್ಲಿ ಬ್ರಾಹ್ಮಣನಿಂದ ಹುಟ್ಟಿದವನ ಮನೆಯ ಅನ್ನವನ್ನು, ಬೇಡನ ಮನೆಯ ಅನ್ನವನ್ನು, ರಂಗಭೂಮಿಯಲ್ಲಿ ನಾಟಕವನ್ನು ಮಾಡುವವನ ಮನೆಯ ಅನ್ನವನ್ನು ಉಣ್ಣಬಾರದು.

ಸುವರ್ಣಕರ್ತುರ್ವೈಣಸ್ಯ ಶಸ್ತ್ರವಿಕ್ರಯಿಣಸ್ತಥಾ ।
ಸೂತಾನಾಂ ಶೌಂಡಿಕಾನಾಂ ಚ ವೈದ್ಯಸ್ಯ ರಜಕಸ್ಯ ಚ ॥೧೮॥

ಅಕ್ಕಸಾಲಿಗನ ಮನೆಯ ಅನ್ನವನ್ನು, ವೀಣೆಯನ್ನು ನುಡಿಸಿಕೊಂಡು ಜೀವಿಸುವವನ ಮನೆಯ ಅನ್ನವನ್ನು, ಆಯುಧಗಳನ್ನು ಮಾರುವವನ ಅನ್ನವನ್ನು, ಸೂತನ ಮನೆಯ ಅನ್ನವನ್ನು, ಹೆಂಡವನ್ನು ಮಾರುವವನ ಮನೆಯ ಅನ್ನವನ್ನು, ವೈದ್ಯನ ಮನೆಯ ಅನ್ನವನ್ನು, ರಜಕನ (ಅಗಸನ) ಮನೆಯ ಅನ್ನವನ್ನು ಉಣ್ಣಬಾರದು.

ಸ್ತ್ರೀಜಿತಸ್ಯ ನೃಶಂಸಸ್ಯ ತಥಾ ಮಾಹಿಷಕಸ್ಯ ಚ ।
ಅನಿರ್ದಶಾನಾಂ ಪ್ರೇತಾನಾಂ ಗಣಿಕಾನಾಂ ತಥೈವ ಚ ॥೧೯॥

ಹೆಂಗಸಿನ ಅಡಿಯಾಳಾಗಿ ಬದುಕುವವನ ಮನೆಯ ಅನ್ನವನ್ನು, ಕ್ರೂರಿಯ ಮನೆಯ ಅನ್ನವನ್ನು, ವೈಶ್ಯಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿದವನ ಮನೆಯ ಅನ್ನವನ್ನು, ಸತ್ತವರ ಮನೆಯಲ್ಲಿ ಹತ್ತುದಿನಗಳ ಒಳಗೆ ಇರುವವರ ಮನೆಯ ಅನ್ನವನ್ನು, ವೇಶ್ಯೆಯ ಅನ್ನವನ್ನು ಉಣ್ಣಬಾರದು.

ಬಂದಿನೋ ದ್ಯೂತಕರ್ತುಶ್ಚ ತಥಾ ದ್ಯೂತವಿದಾಮಪಿ ।
ಪರಿವಿತ್ತೇಶ್ಚ(ಸ್ಯ) ಯಚ್ಚಾನ್ನಂ ಪರಿವೇತ್ತುಸ್ತಥೈವ ಚ ॥೨೦॥

ಹೊಗಳುಭಟ್ಟರ ಮನೆಯ ಅನ್ನವನ್ನು, ದ್ಯೂತಕ್ರೀಡೆಯನ್ನು ಆಡುವವರ ಮನೆಯ ಅನ್ನವನ್ನು, ದ್ಯೂತದ ವಿಷಯದಲ್ಲಿ ನಿಷ್ಣಾತರಾದವರ ಮನೆಯ ಅನ್ನವನ್ನು, ಹಿರಿಯಣ್ಣನು ಮದುವೆಯಾಗದಿದ್ದಾಗ ತಾನೆ ಮೊದಲು ಮದುವೆಯಾದ ತಮ್ಮನ ಮನೆಯ ಅನ್ನವನ್ನು, ಅಣ್ಣನು ಮರಣ ಹೊಂದಿದ ನಂತರ ತಮ್ಮನು ಪರಿವೇತೃವಾಗಿ ಬಡಿಸುವ ಅನ್ನವನ್ನು ಸ್ವೀಕರಿಸಬಾರದು.

ಯಶ್ಚಾಗ್ರೇ ದಿಧಿಷುರ್ವಿಪ್ರೋ ದಿಧಿಷೂಪಪತಿಸ್ತಥಾ ।
ತಯೋರಪ್ಯುಭಯೋರನ್ನಂ ರಾಜ್ಞಾಂ ಚಾಪಿ ವಿವರ್ಜಯೇತ್ ॥೨೧॥

ಯಾವ ನಾರಿಯು ಎರಡು ವಿವಾಹವನ್ನು ಮಾಡಿಕೊಂಡಿರುತ್ತಾಳೋ ಅವಳು ದಿಧಿಷು ಎಂದು ಕರೆಸಿಕೊಳ್ಳುತ್ತಾಳೆ. ಅವಳ ಗಂಡ ಕ್ಷತ್ರಿಯನಾಗಿದ್ದಲ್ಲಿ ದಿಧಿಷು ಎಂದು ಕರೆಸಿಕೊಳ್ಳುತ್ತಾನೆ. ಬ್ರಾಹ್ಮಣನಾಗಿದ್ದಲ್ಲಿ ಅಗ್ರೇ ದಿಧಿಷು ಎಂದು ಕರೆಸಿಕೊಳ್ಳುತ್ತಾನೆ. ಇಂತಹ ನಾರಿಯನ್ನು ವಿವಾಹ ಮಾಡಿಕೊಂಡ ಕ್ಷತ್ರಿಯನ ಮನೆಯಲ್ಲಾಗಲಿ, ಬ್ರಾಹ್ಮಣನ ಮನೆಯಲ್ಲಾಗಲಿ ಊಟವನ್ನು ಮಾಡಿದರೆ ಬ್ರಹ್ಮಘಾತಕನೆನಿಸುತ್ತಾನೆ. ಮೊದಲು ಒಬ್ಬ

ಸ್ತ್ರೀಯನ್ನು ಮದುವೆಯಾಗಿ, ನಂತರ ಊಢಳಾದ ಸ್ತ್ರೀಯನ್ನು ಮದುವೆ ಮಾಡಿಕೊಂಡ ಈ ಬ್ರಾಹ್ಮಣ-ಕ್ಷತ್ರಿಯರು ಪತಿತರಾಗಿರುವುದರಿಂದ ಇವರೀರ್ವರೂ ಜಾರ ಎಂದೇ ಕರೆಸಿಕೊಳ್ಳುತ್ತಾರೆ.

ರಾಜಾನ್ನಂ ತೇಜ ಆದತ್ತೇ ಶೂದ್ರಾನ್ನಂ ಬ್ರಹ್ಮವರ್ಚಸಮ್ ।
ಆಯುಃ ಸುವರ್ಣಕಾರಾನ್ನಂ ಯಶಶ್ಚರ್ಮಾವಕೃಂತಿನಃ ॥೨೨॥

ರಾಜನ ಅನ್ನವು ತೇಜಸ್ಸನ್ನೂ, ಶೂದ್ರನ ಮನೆಯ ಅನ್ನವು ಬ್ರಹ್ಮವರ್ಚಸ್ಸನ್ನೂ, ಅಕ್ಕಸಾಲಿಗನ ಮನೆಯ ಅನ್ನವು ಆಯುಸ್ಸನ್ನೂ, ಚರ್ಮಾರನ ಮನೆಯ ಅನ್ನವು ಯಶಸ್ಸನ್ನು ಹಾಳುಮಾಡುತ್ತದೆ.

ಗಣಾನ್ನಂ ಗಣಿಕಾನ್ನಂ ಚ ಲೋಕೇಭ್ಯಃ ಪರಿಕೃಂತತಿ ।
ಪೂಯಂ ಚಿಕಿತ್ಸಕಸ್ಯಾನ್ನಂ ಶುಕ್ಲಂ ತು ವೃಷಲೀಪತೇಃ ॥೨೩॥

ಜನಸಮೂಹದ ಅನ್ನವು, ವೇಶ್ಯಾಸ್ತ್ರೀಯ ಅನ್ನವು ಲೋಕದಲ್ಲಿ ನಿಂದಿತವಾದವು. ವೈದ್ಯನ ಅನ್ನವು ಕೀವಿಗೆ ಸಮಾನವಾದುದು. ಶೂದ್ರಸ್ತ್ರೀಪತಿಯಾದ ಬ್ರಾಹ್ಮಣನ ಅನ್ನವು ವೀರ್ಯಕ್ಕೆ ಸಮಾನವಾದುದು.

ವಿಷ್ಮಾ ವಾರ್ಧುಷಿಕಸ್ಯಾನ್ನಂ ತಸ್ಮಾತ್ ತತ್ ಪರಿವರ್ಜಯೇತ್ ॥೨೪॥

ಬಡ್ಡಿಯಿಂದ ಜೀವಿಸುವವನ ಅನ್ನವು ಅಮೇಧ್ಯಕ್ಕೆ ಸಮಾನವಾದುದು. ಆದ್ದರಿಂದ ಇವೆಲ್ಲವನ್ನೂ ತ್ಯಜಿಸಬೇಕು.

ತೇಷಾಂ ತ್ವಗಸ್ಥಿರೋಮಾಣಿ ಭುಂಕ್ತೇ ಯೋಽನ್ನಂ ತು ಭಕ್ಷಯೇತ್ ॥೨೫॥

ಯಾವನು ಮೋಹದಿಂದ ಇಂಥವರು ಮಾಡಿದ ಅನ್ನವನ್ನು ಉಣ್ಣುತ್ತಾನೋ ಅವನು ಅವರ ಚರ್ಮ, ಅಸ್ಥಿ, ರೋಮಗಳನ್ನೇ ತಿನ್ನುವವನು ಎನಿಸಿಕೊಳ್ಳುತ್ತಾನೆ.

ಅಮಾತ್ಯಾನ್ನಮಥೈತೇಷಾಂ ಭುಕ್ತ್ವಾ ತು ತ್ರ್ಯಕ್ಷರಂ ಜಪೇತ್ ।
ಮತ್ಯಾ ಭುಕ್ತ್ವಾ ಸಕೃದ್ ವಾಽಪಿ ಪ್ರಾಜಾಪತ್ಯಂ ಚರೇದ್ ದ್ವಿಜಃ ॥೨೬॥

ಒಂದು ವೇಳೆ ಬ್ರಾಹ್ಮಣನು ತಿಳಿಯದೆ ಇಂತಹವರ ಅನ್ನವನ್ನು ಉಂಡರೆ ಓಂಕಾರ ಜಪವನ್ನು ಮಾಡಬೇಕು. ಮತಿಪೂರ್ವಕವಾಗಿ ತಿಂದರೆ ಆ ಪಾಪ ಪರಿಹಾರಕ್ಕಾಗಿ ಪ್ರಾಜಾಪತ್ಯ ವ್ರತವನ್ನು ಆಚರಿಸಬೇಕು.

ದಾನಾನಾಂ ಚ ಫಲಂ ಯದ್ವೈ ಶೃಣು ಪಾಂಡವ ತತ್ತ್ವತಃ ॥೨೭॥

ಯುಧಿಷ್ಠಿರನೇ, ದಾನಗಳ ಫಲವೇನೆಂಬುದನ್ನು ಯಥಾವತ್ತಾಗಿ ತಿಳಿಸುತ್ತೇನೆ, ಕೇಳು.

ಜಲದಸ್ತೃಪ್ತಿಮಾಪ್ನೋತಿ ಸುಖಮಕ್ಷಯಮನ್ನದಃ ॥೨೮॥

ಜಲವನ್ನು ದಾನ ಮಾಡಿದವನು ತೃಪ್ತಿಯನ್ನು ಹೊಂದುತ್ತಾನೆ. ಅನ್ನದಾನವನ್ನು ಮಾಡಿದವನು ಅಕ್ಷಯವಾದ ಸುಖವನ್ನು ಹೊಂದುತ್ತಾನೆ.

ತಿಲದಸ್ತು ಪ್ರಜಾಮಿಷ್ಟಾಂ ದೀಪದಶ್ಚಕ್ಷುರುತ್ತಮಮ್ ।
ಭೂಮಿದೋ ಭೂಮಿಮಾಪ್ನೋತಿ ದೀರ್ಘಮಾಯುರ್ಹಿರಣ್ಯದಃ ॥೨೯॥

ಎಳ್ಳನ್ನು ದಾನ ಮಾಡಿದವನು ಇಷ್ಟವಾದ ಸಂತಾನವನ್ನು ಹೊಂದುತ್ತಾನೆ. ದೀಪದಾನ ಮಾಡಿದವನು ಹೊಳೆಯುವ ಕಣ್ಣುಗಳುಳ್ಳವನಾಗುತ್ತಾನೆ. ಭೂದಾನ ಮಾಡಿದವನು ಭೂಮಿಯನ್ನೂ, ಸುವರ್ಣದಾನ ಮಾಡಿದವನು ದೀರ್ಘಾಯುಷ್ಯವನ್ನೂ ಹೊಂದುತ್ತಾನೆ.

ಗೃಹದೋಽಗ್ರ್ಯಾಣಿ ವೇಶ್ಮಾನಿ ರೂಪ್ಯದೋ ರೂಪಮುತ್ತಮಮ್ ।
ವಾಸೋದಶ್ಚಂದ್ರಸಾಲೋಕ್ಯಮಶ್ವಿಸಾಲೋಕ್ಯಮಶ್ವದಃ ॥೩೦॥

ಗೃಹದಾನ ಮಾಡಿದವನು ಶ್ರೇಷ್ಠವಾದ ಮನೆಗಳನ್ನೂ, ಬೆಳ್ಳಿಯನ್ನು ದಾನ ಮಾಡಿದವನು ಒಳ್ಳೆಯ ರೂಪವಂತನೂ, ವಸ್ತ್ರವನ್ನು ದಾನ ಮಾಡಿದವನು ಚಂದ್ರಲೋಕಕ್ಕೂ, ಕುದುರೆಯನ್ನು ದಾನ ಮಾಡಿದವನು ಅಶ್ವಿನೀದೇವತೆಗಳ ಲೋಕಕ್ಕೂ ಹೋಗುತ್ತಾನೆ.

ಅನಡುದ್ದಃ ಶ್ರಿಯಂ ಜುಷ್ಟಾಂ ಗೋದೋ ಗೋಲೋಕಮಶ್ನುತೇ ।
ಯಾನಶಯ್ಯಾಪ್ರದೋ ಭಾರ್ಯಾಮೈಶ್ವರ್ಯಮಭಯಪ್ರದಃ ॥೩೧॥

ಎತ್ತನ್ನು ದಾನ ಮಾಡಿದವನು ಅಪೇಕ್ಷಿಸಿದ ಸಂಪತ್ತನ್ನು, ಗೋವನ್ನು ದಾನ ಮಾಡಿದವನು ಗೋಲೋಕಕ್ಕೆ ಹೋಗಿ ಸುಖವನ್ನು ಪಡೆಯುತ್ತಾನೆ. ವಾಹನವನ್ನು,

ಹಾಸಿಗೆಯನ್ನು ದಾನ ಮಾಡಿದವನು ಸುಂದರಳಾದ ಹೆಂಡತಿಯನ್ನು ಹೊಂದುತ್ತಾನೆ. ಪ್ರಾಣಿಗಳಿಗೆ ಅಭಯವನ್ನು ನೀಡುವವನು ಐಶ್ವರ್ಯ ಸಂಪನ್ನನು ಆಗುತ್ತಾನೆ.

ಧಾನ್ಯದಃ ಶಾಶ್ವತಂ ಸೌಖ್ಯಂ ಬ್ರಹ್ಮದೋ ಬ್ರಹ್ಮಸಾಮ್ಯತಾಮ್ ।
ಸರ್ವೇಷಾಮೇವ ದಾನಾನಾಂ ಬ್ರಹ್ಮದಾನಂ ವಿಶಿಷ್ಯತೇ ॥೩೨॥

ಧಾನ್ಯಗಳನ್ನು ದಾನ ಮಾಡಿದವನು ಶಾಶ್ವತವಾದ ಸುಖವನ್ನು ಹೊಂದುತ್ತಾನೆ. ವೇದವಿದ್ಯೆಯನ್ನು ದಾನ ಮಾಡಿದವನು ಪರಬ್ರಹ್ಮನ ಸಾದೃಶ್ಯವನ್ನು ಹೊಂದುತ್ತಾನೆ. ಸಮಸ್ತ ದಾನಗಳಿಗಿಂತಲೂ ವೇದವಿದ್ಯೆಯನ್ನು ದಾನ ಮಾಡುವುದೇ ಪ್ರಶಸ್ತವಾದುದು.

ಹಿರಣ್ಯಭೂಗವಾಶ್ವಾಜವಸ್ತ್ರಶಯ್ಯಾಸನಾದಿಷು ।
ಯೋಽರ್ಚಿತಂ ಪ್ರತಿಗೃಹ್ಣಾತಿ ದದಾತ್ಯರ್ಚಿತಮೇವ ಚ ॥೩೩॥

ತಾವುಭೌ ಗಚ್ಛತಃ ಸ್ವರ್ಗಂ ನರಕಂ ತು ವಿಪರ್ಯಯೇ ॥೩೪॥

ಸುವರ್ಣ, ಭೂಮಿ, ಗೋವು, ಕುದುರೆ, ಆಡು, ವಸ್ತ್ರ, ಹಾಸಿಗೆ, ಆಸನ - ಇವೇ ಮೊದಲಾದ ವಸ್ತುಗಳನ್ನು ಯಾವನು ಆದರಪೂರ್ವಕವಾಗಿ ಸತ್ಪಾತ್ರರಿಗೆ ಕೃಷ್ಣಾರ್ಪಣ ಬುದ್ಧಿಯಿಂದ ನೀಡುತ್ತಾನೋ, ಯಾರು ಕೃಷ್ಣಾರ್ಪಣ ಬುದ್ಧಿಯಿಂದ ಸ್ವೀಕರಿಸುತ್ತಾನೋ ಅವರಿಬ್ಬರೂ ಸ್ವರ್ಗಕ್ಕೆ ಹೋಗುತ್ತಾರೆ. ಒಂದು ವೇಳೆ ಇದಕ್ಕೆ ವಿಪರೀತವಾಗಿ ಔದಾಸೀನ್ಯದಿಂದ, ಅಶ್ರದ್ಧೆಯಿಂದ, ಕೃಷ್ಣಾರ್ಪಣಬುದ್ಧಿಯಿಲ್ಲದೆ ದಾನ ಮಾಡಿದರೆ ನರಕಕ್ಕೆ ಹೋಗುತ್ತಾರೆ.

ಅನೃತಂ ನ ವದೇದ್ ವಿದ್ವಾಂಸ್ತಪಸ್ತಪ್ತ್ವಾ ನ ವಿಸ್ಮಯೇತ್ ।
ನಾರ್ತೋಽಪ್ಯಪವದೇದ್ ವಿಪ್ರಾನ್ ನ ದತ್ತ್ವಾ ಪರಿಕೀರ್ತಯೇತ್ ॥

ವಿದ್ವಾಂಸನು ಸುಳ್ಳನ್ನು ಹೇಳಬಾರದು, ತಪಸ್ಸನ್ನು ಮಾಡಿ ಗರ್ವವನ್ನು ಹೊಂದಬಾರದು, ಕಷ್ಟದಲ್ಲಿದ್ದರೂ ಬ್ರಾಹ್ಮಣರನ್ನು ಅವಮಾನ ಮಾಡಬಾರದು. ದಾನ ಕೊಟ್ಟಿದ್ದನ್ನು ಹೇಳಿಕೊಳ್ಳಬಾರದು.

ಯಜ್ಞೋಽನೃತೇನ ಕ್ಷರತಿ ತಪಃ ಕ್ಷರತಿ ವಿಸ್ಮಯಾತ್ ।
ಆಯುರ್ವಿಪ್ರಾಪವಾದೇನ ದಾನಂ ತು ಪರಿಕೀರ್ತನಾತ್ ॥೩೬॥

ಸುಳ್ಳು ಹೇಳುವುದರಿಂದ ಯಜ್ಞದ ಫಲವು ನಾಶವಾಗುತ್ತದೆ. ಅಹಂಕಾರದಿಂದ ತಪಸ್ಸು ನಾಶವಾಗುತ್ತದೆ. ಬ್ರಾಹ್ಮಣರನ್ನು ಅವಮಾನಗೊಳಿಸುವುದರಿಂದ ಆಯುಷ್ಯವು ನಾಶವಾಗುತ್ತದೆ. ದಾನ ಕೊಟ್ಟು ಹೇಳಿಕೊಳ್ಳುವುದರಿಂದ ದಾನದ ಫಲವು ನಾಶವಾಗುತ್ತದೆ.

ಏಕಃ ಪ್ರಜಾಯತೇ ಜಂತುರೇಕ ಏವ ಪ್ರಮೀಯತೇ ।
ಏಕೋನುಭುಂಕ್ತೇ ಸುಕೃತಮೇಕಶ್ಚಾಪ್ನೋತಿ ದುಷ್ಕೃತಮ್ ॥೩೭॥

ಜೀವನು ಏಕಾಕಿಯಾಗಿ ಹುಟ್ಟುತ್ತಾನೆ, ಏಕಾಕಿಯಾಗಿ ಸಾಯುತ್ತಾನೆ, ಏಕಾಕಿಯಾಗಿಯೇ ತಾನು ಮಾಡಿದ ಸುಕೃತ-ದುಷ್ಕೃತಗಳ ಫಲವನ್ನು ಅನುಭವಿಸುತ್ತಾನೆ.

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಹಸಮಂ ಕ್ಷಿತೌ ।
ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥೩೮॥

ಮನುಷ್ಯನು ಮರಣ ಹೊಂದಿದ ಬಳಿಕ ಅವನ ಬಂಧುಗಳೇ ಮೃತಶರೀರಕ್ಕೆ ಕಟ್ಟಿಗೆಯನ್ನಿಟ್ಟು ವಿಮುಖರಾಗಿ ಹೊರಟು ಹೋಗುತ್ತಾರೆ. ಅಥವಾ ಮಣ್ಣಿನ ಹೆಂಟೆಗಳನ್ನು ಅವನ ಮೇಲೆ ಹಾಕಿ ಹೊರಟು ಹೋಗುತ್ತಾರೆ. ಆ ಸಮಯದಲ್ಲಿ ಧರ್ಮ ಒಂದೇ ಶರೀರವನ್ನು ತ್ಯಜಿಸಿದ ಜೀವನ ಹಿಂದೆ ಹೋಗುತ್ತದೆ.

ಅನಾಗತಾನಿ ಕಾರ್ಯಾಣಿ ಕರ್ತುಂ ಗಣಯತೇ ಮನಃ ।
ಶರೀರಕಂ ಸಮುದ್ವೀಕ್ಷ್ಯ ಸ್ಮಯತೇ ನೂನಮಂತಕಃ ॥೩೯॥

ಮುಂದಿನ ಸತ್ಕರ್ಮಗಳನ್ನು ಮಾಡಲು ಮನುಷ್ಯನು ಲೆಕ್ಕ ಹಾಕುತ್ತಾನೆ. ಆದರೆ ಶರೀರದ ಅಸ್ಥಿರತೆಯನ್ನು ನೋಡುತ್ತಿರುವ ಯಮದೇವನು ಅವನನ್ನು ಕಂಡು ನಗುತ್ತಿರುತ್ತಾನೆ.

ತಸ್ಮಾದ್ ಧರ್ಮಸಹಾಯಸ್ತು ಧರ್ಮಂ ಸಂಚಿನುಯಾತ್ ಸದಾ ।
ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಮ್ ॥೪೦॥

ಆದ್ದರಿಂದ ಮನುಷ್ಯನು ಆಪತ್ಕಾಲದಲ್ಲಿ ಧರ್ಮ ಒಂದೇ ಸಹಾಯಕವಾಗಿದೆ ಎಂದು ನಿಶ್ಚಯಿಸಿಕೊಂಡು, ಪುಣ್ಯಸಂಚಯದಲ್ಲಿ ತತ್ಪರನಾಗಿರಬೇಕು. ಮನುಷ್ಯನು

ಧರ್ಮದ ಸಹಾಯದಿಂದ ದಾಟಲು ಅಸಾಧ್ಯವಾದ, ಅಂಧಕಾರದಿಂದ ಕೂಡಿದ ನರಕವನ್ನು ದಾಟುತ್ತಾನೆ.

ಯೇಷಾಂ ತಟಾಕಾನಿ ಬಹೂದಕಾನಿ
ಸಭಾಶ್ಚ ಕೂಪಾಶ್ಚ ಪ್ರತಿಶ್ರಯಾಶ್ಚ ।
ಅನ್ನಪ್ರದಾನಂ ಮಧುರಾ ಚ ವಾಣೀ
ಯಮಸ್ಯ ತೇ ನಿರ್ವಿಷಯಾ ಭವಂತಿ ॥೪೧॥

ಯಾವಾತನು ಬಹಳ ನೀರಿನಿಂದ ತುಂಬಿರುವ ಸರೋವರಗಳನ್ನೂ, ಧರ್ಮಶಾಲೆಗಳನ್ನೂ, ಬಾವಿಗಳನ್ನೂ, ಚೆನ್ನಾಗಿರುವ ಅರವಟ್ಟಿಗೆಗಳನ್ನು ನಿರ್ಮಿಸುತ್ತಾನೋ, ಅನ್ನದಾನ ಮಾಡುತ್ತಾನೋ, ಇತರರೊಡನೆ ಪ್ರಿಯವಾದ ಮಧುರವಾದ ಮಾತುಗಳನ್ನಾಡುತ್ತಾನೋ ಅವನು ಯಮನಿಗೆ ವಿಷಯನಾಗುವುದಿಲ್ಲ. ಯಮಬಾಧೆಗೆ ತುತ್ತಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಭೋಜ್ಯಾಭೋಜ್ಯಾದಿಸರ್ವದಾನಕಥನಂ ನಾಮ ಸಪ್ತಾಧಿಕಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಟನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಯತಿ-ಅಗ್ನಿಗಳ ಮಹಿಮೆಯನ್ನು ವರ್ಣಿಸಿದುದು. ದಾನಪಾತ್ರನಾದ ಬ್ರಾಹ್ಮಣನ ಲಕ್ಷಣವನ್ನು ಹೇಳಿದುದು. ಅದರಂತೆ ಅನ್ನದಾನದ ಮಹಿಮೆಯನ್ನು ನಿರೂಪಿಸಿದುದು.

ಯುಧಿಷ್ಠಿರಃ

ಅನೇಕಾಂತಂ ಬಹುದ್ವಾರಂ ಧರ್ಮಮಾಹುರ್ಮನೀಷಿಣಃ ।
ಕಿಂಲಕ್ಷಣೋಽಸೌ ಭವತಿ ತನ್ಮೇ ಬ್ರೂಹಿ ಜನಾರ್ದನ ॥೧॥

ಯುಧಿಷ್ಠಿರ– ಜನಾರ್ದನನೇ, ಧರ್ಮವು ಅನೇಕ ಪ್ರಕಾರವುಳ್ಳದ್ದು, ಅನೇಕ

ದ್ವಾರವುಳ್ಳದ್ದು ಎಂದು ವಿದ್ವಾಂಸರು ಹೇಳುತ್ತಾರೆ. ಧರ್ಮದ ನಿಶ್ಚಿತವಾದ ಲಕ್ಷಣವೇನು? ಈ ವಿಷಯವನ್ನು ಹೇಳು.

ಶ್ರೀಭಗವಾನ್

ಶೃಣು ರಾಜನ್ ಸಮಾಸೇನ ಧರ್ಮಶೌಚವಿಧಿಕ್ರಮಮ್ ॥೨॥

ಶ್ರೀಭಗವಾನ್– ಯುಧಿಷ್ಠಿರನೇ, ಸಂಕ್ಷೇಪವಾಗಿ ಧರ್ಮದ ಮತ್ತು ಶೌಚದ ವಿಧಿಯನ್ನು, ಅದರ ಕ್ರಮವನ್ನು ಹೇಳುತ್ತೇನೆ, ಕೇಳು.

ಅಹಿಂಸಾ ಸತ್ಯಮಸ್ತೇಯಮಾನೃಶಂಸ್ಯಂ ದಮಃ ಶಮಃ ।
ಆರ್ಜವಂ ಚೈವ ರಾಜೇಂದ್ರ ನಿಶ್ಚಿತಂ ಧರ್ಮಲಕ್ಷಣಮ್ ॥೩॥

ರಾಜೇಂದ್ರನೇ, ಸತ್ಯ, ಅಚೌರ್ಯ, ಅಹಿಂಸೆ, ಅಕ್ರೌರ್ಯ, ದಮ,ಶಮ, ಸರಳತೆ - ಇವು ಧರ್ಮದ ನಿಶ್ಚಿತ ಲಕ್ಷಣಗಳು.

ಬ್ರಹ್ಮಚರ್ಯಂ ತಪಃ ಕ್ಷಾಂತಿರ್ಮಧುಮಾಂಸಸ್ಯ ವರ್ಜನಮ್ ।
ಮರ್ಯಾದಾಯಾಂ ಸ್ಥಿತಿಶ್ಚೈವ ಶಮಃ ಶೌಚಸ್ಯ ಲಕ್ಷಣಮ್ ॥೪॥

ಬ್ರಹ್ಮಚರ್ಯ, ತಪಸ್ಸು, ಕ್ಷಮೆ, ಮಧು-ಮಾಂಸಗಳ ತ್ಯಾಗ, ಧರ್ಮ ಮರ್ಯಾದೆಯನ್ನು ಮೀರದಿರುವುದು, ಶಮ ಇವುಗಳು ಶೌಚದ ಲಕ್ಷಣಗಳಾಗಿವೆ.

ಬಾಲ್ಯೇ ವಿದ್ಯಾಂ ನಿಷೇವೇತ ಯೌವನೇ ದಾರಸಂಗ್ರಹಮ್ ।
ವಾರ್ಧಕೇ ಮೌನಮಾತಿಷ್ಠೇತ್ ಸರ್ವದಾ ಧರ್ಮಮಾಚರೇತ್ ॥೫॥

ಮನುಷ್ಯನು ಬಾಲ್ಯದಲ್ಲಿ ವಿದ್ಯೆಯನ್ನು ಕಲಿಯಬೇಕು. ಯೌವನದಲ್ಲಿ ವಿವಾಹವನ್ನು ಮಾಡಿಕೊಂಡು ಗೃಹಸ್ಥನಾಗಬೇಕು. ವಾರ್ಧಕ್ಯದಲ್ಲಿ ಮುನಿವೃತ್ತಿಯನ್ನು ಆಶ್ರಯಿಸಬೇಕು. ಹೀಗೆ ಎಲ್ಲ ಅವಸ್ಥೆಗಳಲ್ಲಿಯೂ ಧರ್ಮಾಚರಣೆಯನ್ನು ಮಾಡಬೇಕು.

ಬ್ರಾಹ್ಮಣಾನ್ ನಾವಮನ್ಯೇತ ಗುರೂನ್ ಪರಿವದೇನ್ನ ಚ ।
ಯತೀನಾಮನುಕೂಲಃ ಸ್ಯಾದ್ ಏಷ ಧರ್ಮಃ ಸನಾತನಃ ॥೬॥

ಬ್ರಾಹ್ಮಣರನ್ನು ಅವಮಾನಗೊಳಿಸಬಾರದು. ಗುರುಗಳನ್ನು ನಿಂದಿಸಬಾರದು. ಯತಿಗಳಿಗೆ ಅನುಕೂಲವಾಗಿ ವರ್ತಿಸಬೇಕು. ಇದು ಸನಾತನ ಧರ್ಮವು.

ಧರ್ಮದ ಸಹಾಯದಿಂದ ದಾಟಲು ಅಸಾಧ್ಯವಾದ, ಅಂಧಕಾರದಿಂದ ಕೂಡಿದ ನರಕವನ್ನು ದಾಟುತ್ತಾನೆ.

ಯೇಷಾಂ ತಟಾಕಾನಿ ಬಹೂದಕಾನಿ
ಸಭಾಶ್ಚ ಕೂಪಾಶ್ಚ ಪ್ರತಿಶ್ರಯಾಶ್ಚ ।
ಅನ್ನಪ್ರದಾನಂ ಮಧುರಾ ಚ ವಾಣೀ
ಯಮಸ್ಯ ತೇ ನಿರ್ವಿಷಯಾ ಭವಂತಿ ॥೪೧॥

ಯಾವಾತನು ಬಹಳ ನೀರಿನಿಂದ ತುಂಬಿರುವ ಸರೋವರಗಳನ್ನೂ, ಧರ್ಮಶಾಲೆಗಳನ್ನೂ, ಬಾವಿಗಳನ್ನೂ, ಚೆನ್ನಾಗಿರುವ ಅರವಟ್ಟಿಗೆಗಳನ್ನು ನಿರ್ಮಿಸುತ್ತಾನೋ, ಅನ್ನದಾನ ಮಾಡುತ್ತಾನೋ, ಇತರರೊಡನೆ ಪ್ರಿಯವಾದ ಮಧುರವಾದ ಮಾತುಗಳನ್ನಾಡುತ್ತಾನೋ ಅವನು ಯಮನಿಗೆ ವಿಷಯನಾಗುವುದಿಲ್ಲ. ಯಮಬಾಧೆಗೆ ತುತ್ತಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಭೋಜ್ಯಾಭೋಜ್ಯಾದಿಸರ್ವದಾನಕಥನಂ ನಾಮ ಸಪ್ತಾಧಿಕಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಟನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಯತಿ-ಅಗ್ನಿಗಳ ಮಹಿಮೆಯನ್ನು ವರ್ಣಿಸಿದುದು. ದಾನಪಾತ್ರನಾದ ಬ್ರಾಹ್ಮಣನ ಲಕ್ಷಣವನ್ನು ಹೇಳಿದುದು. ಅದರಂತೆ ಅನ್ನದಾನದ ಮಹಿಮೆಯನ್ನು ನಿರೂಪಿಸಿದುದು.

ಯುಧಿಷ್ಠಿರಃ

ಅನೇಕಾಂತಂ ಬಹುದ್ವಾರಂ ಧರ್ಮಮಾಹುರ್ಮನೀಷಿಣಃ ।
ಕಿಂಲಕ್ಷಣೋಽಸೌ ಭವತಿ ತನ್ಮೇ ಬ್ರೂಹಿ ಜನಾರ್ದನ ॥೧॥

ಯುಧಿಷ್ಠಿರ– ಜನಾರ್ದನನೇ, ಧರ್ಮವು ಅನೇಕ ಪ್ರಕಾರವುಳ್ಳದ್ದು, ಅನೇಕ

ದ್ವಾರವುಳ್ಳದ್ದು ಎಂದು ವಿದ್ವಾಂಸರು ಹೇಳುತ್ತಾರೆ. ಧರ್ಮದ ನಿಶ್ಚಿತವಾದ ಲಕ್ಷಣವೇನು? ಈ ವಿಷಯವನ್ನು ಹೇಳು.

ಶ್ರೀಭಗವಾನ್

ಶೃಣು ರಾಜನ್ ಸಮಾಸೇನ ಧರ್ಮಶೌಚವಿಧಿಕ್ರಮಮ್ ॥೨॥

ಶ್ರೀಭಗವಾನ್– ಯುಧಿಷ್ಠಿರನೇ, ಸಂಕ್ಷೇಪವಾಗಿ ಧರ್ಮದ ಮತ್ತು ಶೌಚದ ವಿಧಿಯನ್ನು, ಅದರ ಕ್ರಮವನ್ನು ಹೇಳುತ್ತೇನೆ, ಕೇಳು.

ಅಹಿಂಸಾ ಸತ್ಯಮಸ್ತೇಯಮಾನೃಶಂಸ್ಯಂ ದಮಃ ಶಮಃ ।
ಆರ್ಜವಂ ಚೈವ ರಾಜೇಂದ್ರ ನಿಶ್ಚಿತಂ ಧರ್ಮಲಕ್ಷಣಮ್ ॥೩॥

ರಾಜೇಂದ್ರನೇ, ಸತ್ಯ, ಅಚೌರ್ಯ, ಅಹಿಂಸೆ, ಅಕ್ರೌರ್ಯ, ದಮ,ಶಮ, ಸರಳತೆ - ಇವು ಧರ್ಮದ ನಿಶ್ಚಿತ ಲಕ್ಷಣಗಳು.

ಬ್ರಹ್ಮಚರ್ಯಂ ತಪಃ ಕ್ಷಾಂತಿರ್ಮಧುಮಾಂಸಸ್ಯ ವರ್ಜನಮ್ ।
ಮರ್ಯಾದಾಯಾಂ ಸ್ಥಿತಿಶ್ಚೈವ ಶಮಃ ಶೌಚಸ್ಯ ಲಕ್ಷಣಮ್ ॥೪॥

ಬ್ರಹ್ಮಚರ್ಯ, ತಪಸ್ಸು, ಕ್ಷಮೆ, ಮಧು-ಮಾಂಸಗಳ ತ್ಯಾಗ, ಧರ್ಮ ಮರ್ಯಾದೆಯನ್ನು ಮೀರದಿರುವುದು, ಶಮ ಇವುಗಳು ಶೌಚದ ಲಕ್ಷಣಗಳಾಗಿವೆ.

ಬಾಲ್ಯೇ ವಿದ್ಯಾಂ ನಿಷೇವೇತ ಯೌವನೇ ದಾರಸಂಗ್ರಹಮ್ ।
ವಾರ್ಧಕೇ ಮೌನಮಾತಿಷ್ಠೇತ್ ಸರ್ವದಾ ಧರ್ಮಮಾಚರೇತ್ ॥೫॥

ಮನುಷ್ಯನು ಬಾಲ್ಯದಲ್ಲಿ ವಿದ್ಯೆಯನ್ನು ಕಲಿಯಬೇಕು. ಯೌವನದಲ್ಲಿ ವಿವಾಹವನ್ನು ಮಾಡಿಕೊಂಡು ಗೃಹಸ್ಥನಾಗಬೇಕು. ವಾರ್ಧಕ್ಯದಲ್ಲಿ ಮುನಿವೃತ್ತಿಯನ್ನು ಆಶ್ರಯಿಸಬೇಕು. ಹೀಗೆ ಎಲ್ಲ ಅವಸ್ಥೆಗಳಲ್ಲಿಯೂ ಧರ್ಮಾಚರಣೆಯನ್ನು ಮಾಡಬೇಕು.

ಬ್ರಾಹ್ಮಣಾನ್ ನಾವಮನ್ಯೇತ ಗುರೂನ್ ಪರಿವದೇನ್ನ ಚ ।
ಯತೀನಾಮನುಕೂಲಃ ಸ್ಯಾದ್ ಏಷ ಧರ್ಮಃ ಸನಾತನಃ ॥೬॥

ಬ್ರಾಹ್ಮಣರನ್ನು ಅವಮಾನಗೊಳಿಸಬಾರದು. ಗುರುಗಳನ್ನು ನಿಂದಿಸಬಾರದು. ಯತಿಗಳಿಗೆ ಅನುಕೂಲವಾಗಿ ವರ್ತಿಸಬೇಕು. ಇದು ಸನಾತನ ಧರ್ಮವು.

ಯತಿರ್ಗುರುರ್ದ್ವಿಜಾತೀನಾಂ ವರ್ಣಾನಾಂ ಬ್ರಾಹ್ಮಣೋ ಗುರುಃ ।
ಪತಿರೇವ ಗುರುಃ ಸ್ತ್ರೀಣಾಂ ಸರ್ವೇಷಾಂ ಪಾರ್ಥಿವೋ ಗುರುಃ ॥೭॥

ಬ್ರಾಹ್ಮಣರಿಗೆ ಸಂನ್ಯಾಸಿಯೇ ಗುರುವು. ನಾಲ್ಕು ವರ್ಣದವರಿಗೆ ಬ್ರಾಹ್ಮಣರೇ ಗುರುವು. ಹೆಂಗಸರಿಗೆ ಪತಿಯೇ ಗುರುವು. ಎಲ್ಲರಿಗೆ ರಾಜನೇ ಗುರುವು.

ಯದ್ ಗೃಹಸ್ಥಾರ್ಜಿತಂ ಪಾಪಂ ಜ್ಞಾನತೋಽಜ್ಞಾನತೋಽಪಿ ವಾ ।
ನಿರ್ದಹಿಷ್ಯತಿ ತತ್ಸರ್ವಮೇಕರಾತ್ರೋಷಿತೋ ಯತಿಃ ॥೮॥

ಯಾವ ಗೃಹಸ್ಥನಿಂದ ಸಂಪಾದಿಸಲ್ಪಟ್ಟ ಪಾಪವಿದೆಯೋ, ಗೃಹಸ್ಥನು ಜ್ಞಾನದಿಂದಲೋ, ಅಜ್ಞಾನದಿಂದಲೋ ಮಾಡಿದ ಪಾಪವನ್ನು ಒಂದು ರಾತ್ರಿ ಆ ಗೃಹಸ್ಥನ ಮನೆಯಲ್ಲಿ ವಾಸ ಮಾಡಿದ ಸಂನ್ಯಾಸಿಯು ಅವನ ಪಾಪಗಳನ್ನು ಸುಡುತ್ತಾನೆ.

ದುರ್ವೃತ್ತಾ ವಾ ಸುವೃತ್ತಾ ವಾ ಜ್ಞಾನಿನೋಽಜ್ಞಾನಿನೋಽಪಿ ವಾ ।
ಗೃಹಸ್ಥೈರ್ಯತಯಃ ಪೂಜ್ಯಾ ಪರತ್ರ ಹಿತಕಾಂಕ್ಷಿಭಿಃ ॥೯॥

ಪರಲೋಕದ ಹಿತವನ್ನು ಬಯಸುವ ಗೃಹಸ್ಥರು ಸದಾಚಾರಿಯೇ ಆಗಲಿ, ದುರಾಚಾರಿಯೇ ಆಗಲಿ, ಜ್ಞಾನಿಯೇ ಆಗಲಿ, ಅಜ್ಞಾನಿಯೇ ಆಗಲಿ, ಅಂತಹ ಯತಿಯನ್ನು ಪೂಜಿಸಬೇಕು.

ಏಕದಂಡೀ ತ್ರಿದಂಡೀ ವಾ ಶಿಖಿತೋ ಮುಂಡಿತೋಽಪಿ ವಾ ।
ಕಾಷಾಯದಂಡಸಾರೋಽಪಿ ಯತಿಃ ಪೂಜ್ಯೋ ಯುಧಿಷ್ಠಿರ ॥೧೦॥

ಯುಧಿಷ್ಠಿರನೇ, ಸಂನ್ಯಾಸಿಯು ಏಕದಂಡಿಯೇ ಆಗಿರಲಿ, ತ್ರಿದಂಡಿಯೇ ಆಗಿರಲಿ, ಶಿಖಾಸಹಿತನೇ ಆಗಿರಲಿ, ಮುಂಡನ ಮಾಡಿಸಿಕೊಂಡಿರಲಿ, ಕಾಷಾಯ ವಸ್ತ್ರವನ್ನು ಉಟ್ಟಿಕೊಂಡಿರಲಿ, ದಂಡ ಧರಿಸಿಕೊಂಡಿರಲಿ, ಅಂಥ ಯತಿಯು ಪೂಜ್ಯನಾಗಿದ್ದಾನೆ.

ಅಪೂಜಿತೋ ಗೃಹಸ್ಥೈರ್ವಾ ತಥಾ ಚಾಪ್ಯವಮಾನಿತಃ ।
ಯತಿರ್ವಾಽಪ್ಯತಿಥಿರ್ವಾಽಪಿ ನರಕೇ ಪಾತಯಿಷ್ಯತಃ ॥೧೧॥

ಯಾವ ಯತಿಯನ್ನು ಗೃಹಸ್ಥನು ಪೂಜಿಸುವುದಿಲ್ಲವೋ, ಅವಮಾನ ಮಾಡುತ್ತಾನೋ, ಯಾವ ಅತಿಥಿಯನ್ನು ಗೃಹಸ್ಥನು ಪೂಜಿಸದೇ ಅವಮಾನ

ಮಾಡುತ್ತಾನೋ ಅಂತಹ ಗೃಹಸ್ಥನನ್ನು ಯತಿಯು, ಅತಿಥಿಯು ನರಕದಲ್ಲಿ ಬೀಳಿಸುತ್ತಾರೆ.

ತಸ್ಮಾತ್ ತು ಯತಯಃ ಪೂಜ್ಯಾ ಮದ್ಭಕ್ತಾ ಮತ್ಪರಾಯಣಾಃ ।
ಮಯಿ ಸನ್ನ್ಯಸ್ತಕರ್ಮಾಣಃ ಪರತ್ರ ಹಿತಕಾಂಕ್ಷಿಭಿಃ ॥೧೨॥

ಆದ್ದರಿಂದ ನನ್ನ ಭಕ್ತರಾದ, ನನ್ನನ್ನೇ ನಂಬಿರುವ ಯತಿಗಳನ್ನು ಪೂಜಿಸಬೇಕು. ನನ್ನಲ್ಲಿಯೇ ಸಮಸ್ತ ಕರ್ಮಗಳನ್ನು ಸಮರ್ಪಿಸುವ ಯತಿಗಳ ಆರಾಧನೆಯು ಪರಲೋಕದಲ್ಲಿ ಹಿತವನ್ನುಂಟು ಮಾಡುತ್ತದೆ.

ಪ್ರಹರೇನ್ನ ದ್ವಿಜಾನ್ ವಿಪ್ರೋ ಗಾಂ ನ ಹನ್ಯಾತ್ ಕದಾಚನ ।
ಭ್ರೂಣಹತ್ಯಾಸಮಂ ಚೈವ ಉಭಯಂ ಯೋ ನಿಷೇವತೇ ॥೧೩॥

ಬ್ರಾಹ್ಮಣನಾದವನು ಬ್ರಾಹ್ಮಣರಿಗೆ ಹೊಡೆಯಬಾರದು. ಯಾವುದೇ ಕಾರಣದಿಂದ ಗೋವನ್ನು ಹಿಂಸಿಸಬಾರದು. ಯಾವನು ಬ್ರಾಹ್ಮಣರನ್ನು, ಗೋವನ್ನು ಹಿಂಸಿಸುತ್ತಾನೋ, ಹೊಡೆಯುತ್ತಾನೋ ಅವನಿಗೆ ಭ್ರೂಣಹತ್ಯೆಗೆ ಸಮಾನವಾದ ಪಾಪವು ಬರುತ್ತದೆ.

ನಾಗ್ನಿಂ ಮುಖೇನೋಪಧಮೇತ್ ನ ಚ ಪಾದೌ ಪ್ರತಾಪಯೇತ್ ।
ನಾಧಃ ಕುರ್ಯಾತ್ ಕದಾಚಿತ್ತು ನ ಪೃಷ್ಠಂ ಪರಿತಾಪಯೇತ್ ॥೧೪॥

ಅಗ್ನಿಯನ್ನು ಬಾಯಿಯಿಂದ ಊದಬಾರದು. ಬೆಂಕಿಯಲ್ಲಿ ಕಾಲುಗಳನ್ನು ಕಾಯಿಸಿಕೊಳ್ಳಬಾರದು. ಬೆಂಕಿಯನ್ನು ಕಾಲಿನಿಂದ ತಳ್ಳಬಾರದು. ಬೆಂಕಿಯಿಂದ ಪೃಷ್ಟಭಾಗವನ್ನು ಕಾಯಿಸಿಕೊಳ್ಳಬಾರದು.

ನಾಂತರಾ ಗಮನಂ ಕುರ್ಯಾನ್ನ ಚಾಮೇಧ್ಯಂ ವಿನಿಕ್ಷಿಪೇತ್ ।
ಉಚ್ಚಿಷ್ಟೋ ನ ಸ್ಪೃಶೇದಗ್ನಿಮಶೌಚಸ್ಥೋ ನ ಜಾತುಚಿತ್ ॥೧೫॥

ಅಗ್ನಿಗಳ ಮಧ್ಯದಲ್ಲಿ ಸಂಚರಿಸಬಾರದು. ನಿಷಿದ್ಧ ಪದಾರ್ಥಗಳನ್ನು ಅಗ್ನಿಗೆ ಹಾಕಬಾರದು. ತಿಂದು ಉಳಿದ ಪದಾರ್ಥಗಳನ್ನು ಅಗ್ನಿಗೆ ಹಾಕಬಾರದು. ಅಶೌಚದಿಂದ ಅಗ್ನಿಯನ್ನು ಎಂದಿಗೂ ಮುಟ್ಟಬಾರದು.

ಶ್ವಚಂಡಾಲಾದಿಭಿಃ ಸ್ಪೃಷ್ಟೋ ನಾಂಗಮಗ್ನೌ ಪ್ರತಾಪಯೇತ್ ।
ಸರ್ವದೇವಮಯೋ ವಹ್ನಿಸ್ತಸ್ಮಾಚ್ಛುದ್ಧಃ ಸದಾ ಸ್ಪೃಶೇತ್ ॥೧೬॥

ನಾಯಿಯನ್ನಾಗಲಿ, ಚಂಡಾಲನನ್ನಾಗಿ ಮುಟ್ಟಿಸಿಕೊಂಡು ಶರೀರವನ್ನು ಅಗ್ನಿಯಲ್ಲಿ ಕಾಯಿಸಿಕೊಳ್ಳಬಾರದು. ಅಗ್ನಿಯು ಸರ್ವದೇವತಾ ಸ್ವರೂಪವು. ಆದ್ದರಿಂದ ಅಗ್ನಿಯನ್ನು ಶುದ್ಧನಾಗಿಯೇ ಮುಟ್ಟಬೇಕು.

ಪ್ರಾಪ್ತಮೂತ್ರಪುರೀಷಸ್ತು ನ ಸ್ಪೃಶೇದ್ ವಹ್ನಿಮಾತ್ಮವಾನ್ ।
ಯಾವತ್ತು ಧಾರಯೇದ್ ವೇಗಂ ತಾವದಪ್ರಯತೋ ಭವೇತ್ ॥೧೭॥

ಬುದ್ಧಿವಂತನಾದವನು ಮಲ-ಮೂತ್ರಗಳ ಅವಸರವು ಉಂಟಾದಾಗ ಅಗ್ನಿಯನ್ನು ಮುಟ್ಟಬಾರದು. ಮಲ-ಮೂತ್ರಗಳ ವೇಗವನ್ನು ತಡೆದಿರುವಷ್ಟು ಕಾಲ ಅವನು ಅಶುದ್ಧನಾಗಿಯೇ ಇರುತ್ತಾನೆ.

ಪಚನಾಗ್ನಿಂ ನ ಗೃಹ್ಣೀಯಾತ್ ಪರವೇಶ್ಮನಿ ಜಾತುಚಿತ್ ॥೧೮॥

ಎಂದಿಗೂ ಇನ್ನೊಬ್ಬರ ಮನೆಯಲ್ಲಿ ಪಾಕ ಮಾಡುವ ಅಗ್ನಿಯನ್ನು ತಾನು ಉಪಯೋಗಿಸಿಕೊಳ್ಳಬಾರದು.

ತೇನ ಪಕ್ವೇನ ಚಾನ್ನೇನ ಯತ್ಕರ್ಮ ಕುರುತೇ ಶುಭಮ್ ।
ತಚ್ಛುಭಸ್ಯ ಫಲಂ ಚಾರ್ಧಮಗ್ನಿದತ್ತಸ್ಯ ಭವೇನ್ನೃಪ ॥೧೯॥

ಯಾರು ಪಾಕವಾದ ಅನ್ನದಿಂದ ಶುಭಕರ್ಮವನ್ನು ಮಾಡುತ್ತಾನೋ ಆ ಶುಭಫಲದ ಅರ್ಧವು ಅಗ್ನಿಯನ್ನು ಕೊಟ್ಟವನಿಗೆ ಉಂಟಾಗುತ್ತದೆ. ಅರ್ಥಾತ್ ವೈಶ್ವದೇವಾದಿ ಕ್ರಿಯೆಗಳನ್ನು ಮತ್ತೊಬ್ಬರ ಮನೆಯ ಅನ್ನದಿಂದ ಮಾಡಿದಾಗ ಅದರ ಫಲವು ಆ ಯಜಮಾನನಿಗೆ ತಲುಪುತ್ತದೆ.

ತಸ್ಮಾತ್ ಶುಭತರಂ ಕರ್ಮ ಪ್ರಕುರ್ಯಾದವಿನಾಶಿತಮ್ ॥೨೦॥

ಆದ್ದರಿಂದ ಎಂದೂ ನಾಶವಾಗದೆ ಇರುವ ಶ್ರೇಷ್ಠವಾದ ಶುಭಕರ್ಮಗಳನ್ನೇ ಮಾಡಬೇಕು.

ಪ್ರಮಾದಾದ್ ಯದಿ ವಾಽಜ್ಞಾನಾತ್ ತಸ್ಯ ನಾಶೋ ಭವಿಷ್ಯತಿ ।
ಗೃಹ್ಣೀಯಾತ್ ತು ಮಥಿತ್ವಾ ವಾ ಶ್ರೋತ್ರಿಯಾಗಾರತೋಽಪಿ ವಾ ॥೨೧॥

ಪ್ರಮಾದದಿಂದಾಗಲಿ, ಅಜ್ಞಾನದಿಂದಾಗಲಿ, ಯಾರು ಶ್ರೋತ್ರಿಯನ ಮನೆಯಿಂದ ಅಗ್ನಿಯನ್ನು ಮಥಿಸಿ ತನ್ನ ಮನೆಯ ಪಾಕಕ್ಕೆ ತರುತ್ತಾನೋ ಅವನು ನಾಶಹೊಂದುತ್ತಾನೆ.

ಯುಧಿಷ್ಠಿರಃ

ಕೀದೃಶಾಃ ಸಾಧವೋ ವಿಪ್ರಾಸ್ತೇಭ್ಯೋ ದತ್ತಂ ಮಹಾಫಲಮ್ ।
ಕೀದೃಶೇಭ್ಯೋ ಹಿ ದಾತವ್ಯಂ ತನ್ಮೇ ಬ್ರೂಹಿ ಜನಾರ್ದನ ॥೨೨॥

ಯುಧಿಷ್ಠಿರ– ಜನಾರ್ದನನೇ, ಯಾರಿಗೆ ದಾನವನ್ನು ಕೊಟ್ಟರೆ ಮಹಾಫಲವು ಲಭಿಸುತ್ತದೆ? ಅಂತಹ ಬ್ರಾಹ್ಮಣರು ಹೇಗಿರುತ್ತಾರೆ? ಎಂತಹವರಿಗೆ ದಾನವನ್ನು ಮಾಡಬೇಕು? ಈ ವಿಷಯವನ್ನು ಕೃಪೆ ಮಾಡಿ ಹೇಳು.

ಶ್ರೀಭಗವಾನ್

ಅಕ್ರೋಧನಾಃ ಸತ್ಯಪರಾ ಧರ್ಮನಿತ್ಯಾ ಜಿತೇಂದ್ರಿಯಾಃ ।
ತಾದೃಶಾಃ ಸಾಧವೋ ವಿಪ್ರಾಸ್ತೇಭ್ಯೋ ದತ್ತಂ ಮಹತ್ಫಲಮ್ ॥೨೩॥

ಶ್ರೀಭಗವಾನ್– ಕೋಪವಿಲ್ಲದಿರುವ, ಸತ್ಯನಿಷ್ಠರಾದ, ಪ್ರತಿದಿನವು ಧರ್ಮಕಾರ್ಯಗಳನ್ನು ಮಾಡುವ, ಜಿತೇಂದ್ರಿಯರಾದ ಬ್ರಾಹ್ಮಣರೇ ಶ್ರೇಷ್ಠರು. ಅವರಿಗೆ ಮಾಡುವ ದಾನವು ಮಹಾಫಲದಾಯಕ.

ಅಮಾನಿನಃ ಸರ್ವಸಹಾ ದೃಷ್ಟಾರ್ಥಾ ವಿಜಿತೇಂದ್ರಿಯಾಃ ।
ಸರ್ವಭೂತಹಿತಾ ಮೈತ್ರಾಸ್ತೇಭ್ಯೋ ದತ್ತಂ ಮಹತ್ಫಲಮ್ ॥೨೪॥

ಅಭಿಮಾನಶೂನ್ಯರಾದ, ಎಲ್ಲವನ್ನೂ ಸಹಿಸಿಕೊಳ್ಳುವ, ಶಾಸ್ತ್ರಾರ್ಥಗಳನ್ನು ತಿಳಿದಿರುವ, ಇಂದ್ರಿಯಗಳನ್ನು ಜಯಿಸಿರುವ, ಸರ್ವಪ್ರಾಣಿಗಳಿಗೂ ಹಿತವನ್ನುಂಟು ಮಾಡುವ, ಎಲ್ಲರೊಡನೆ ಮೈತ್ರಿಭಾವದಿಂದಿರುವ ವಿಪ್ರರೇ ಶ್ರೇಷ್ಠರಾದವರು. ಅವರಿಗೆ ಮಾಡುವ ದಾನವು ಮಹಾಫಲದಾಯಕ.

ಅಲುಬ್ಧಾಃ ಶುಚಯೋ ವೈದ್ಯಾ ಹ್ರೀಮಂತಃ ಸತ್ಯವಾದಿನಃ ।
ಸ್ವಧರ್ಮನಿರತಾ ಯೇ ತು ತೇಭ್ಯೋ ದತ್ತಂ ಮಹತ್ಫಲಮ್ ॥೨೫॥

ಲೋಭರಹಿತರಾದ, ಶುದ್ಧರಾದ, ವಿದ್ವಾಂಸರಾದ, ಲಜ್ಜಾಯುಕ್ತರಾದ,

ಸತ್ಯವಾದಿಗಳಾದ, ಸ್ವಧರ್ಮನಿಷ್ಠರಾದ ಬ್ರಾಹ್ಮಣರೇ ಶ್ರೇಷ್ಠರು. ಅವರಿಗೆ ನೀಡುವ ದಾನವು ಮಹಾಫಲದಾಯಕ.

ಸಾಂಗಾಂಶ್ಚ ಚತುರೋ ವೇದಾನ್ ಯೋಽಧೀಯೇತ ದಿನೇ ದಿನೇ ।
ಶೂದ್ರಾನ್ನಂ ಯಸ್ಯ ದೇಹೇ ನ ತತ್ ಪಾತ್ರಮೃಷಯೋ ವಿದುಃ ॥೨೬॥

ಯಾವ ಬ್ರಾಹ್ಮಣನು ಆರು ಅಂಗಗಳಿಂದ ಕೂಡಿರುವ ನಾಲ್ಕು ವೇದಗಳನ್ನು ಅನುದಿನವೂ ಪಾರಾಯಣ ಮಾಡುತ್ತಾನೋ, ಯಾವನ ದೇಹದಲ್ಲಿ ಶೂದ್ರಾನ್ನವು ಇರುವುದಿಲ್ಲವೋ ಅವನು ಸತ್ಪಾತ್ರನು ಎಂದು ಮುನಿಗಳು ಹೇಳುತ್ತಾರೆ.

ಪ್ರಜ್ಞಾಶ್ರುತಾಭ್ಯಾಂ ವೃತ್ತೇನ ಶೀಲೇನ ಚ ಸಮನ್ವಿತಃ ।
ತಾರಯೇತ್ ತತ್ಕುಲಂ ಸರ್ವಮೇಕೊಽಪೀಹ ಯುಧಿಷ್ಠಿರ ॥೨೭॥

ದಾನವನ್ನು ಸ್ವೀಕರಿಸುವ ವ್ಯಕ್ತಿಯು ಒಳ್ಳೆಯ ಬುದ್ಧಿಯಿಂದಲೂ, ಶಾಸ್ತ್ರಜ್ಞಾನದಿಂದಲೂ, ತನ್ನ ಸದಾಚಾರದಿಂದಲೂ, ಉತ್ತಮವಾದ ಶೀಲದಿಂದಲೂ ಯುಕ್ತನಾಗಿದ್ದರೆ ಅಂತಹ ಒಬ್ಬನೇ ವ್ಯಕ್ತಿಯು ದಾನಿಯ ಕುಲವನ್ನು ಉದ್ಧರಿಸಬಲ್ಲನು.

ಗಾಮಶ್ವಮನ್ನಂ ವಿತ್ತಂ ವಾ ತದ್ವಿಧೇ ಪ್ರತಿಪಾದಯೇತ್ ॥೨೮॥

ಅಂತಹ ಬ್ರಾಹ್ಮಣನಿಗೆ ಗೋವನ್ನು, ಕುದುರೆಯನ್ನು, ಅನ್ನವನ್ನು, ಐಶ್ವರ್ಯವನ್ನು ದಾನ ಮಾಡಬೇಕು.

ನಿಶಮ್ಯ ಚ ಗುಣೋಪೇತಂ ಬ್ರಾಹ್ಮಣಂ ಸಾಧುಸಮ್ಮತಮ್ ।
ದೂರಾದಾಹೂಯ ಸತ್ಕೃತ್ಯ ತಂ ಪ್ರಯತ್ನೇನ ಪೂಜಯೇತ್ ॥೨೯॥

ಸಾಧು ಸಮ್ಮತನಾದ, ಸಕಲ ಗುಣಗಳಿಂದ ಕೂಡಿದ ಬ್ರಾಹ್ಮಣನು ಇದ್ದಾನೆ ಎಂದು ತಿಳಿದರೆ ಅವನು ಎಷ್ಟೇ ದೂರದಲ್ಲಿದ್ದರೂ ಅವನನು ಪ್ರಯತ್ನಪೂರ್ವಕವಾಗಿ ಕರೆದುತಂದು ಆದರಿಸಬೇಕು.

ಯುಧಿಷ್ಠಿರಃ

ಧರ್ಮಾಧರ್ಮವಿಧಿರ್ದೇವ ಮಮ ಭೀಷ್ಮೇಣ ಭಾಷಿತಃ ।
ಭೀಷ್ಮವಾಕ್ಯಾತ್ ಸಾರಭೂತಂ ವದ ಧರ್ಮಂ ಸುರೇಶ್ವರ ॥೩೦॥

ಯುಧಿಷ್ಠಿರ– ಕೃಷ್ಣನೇ, ಧರ್ಮಾಧರ್ಮಗಳ ಲಕ್ಷಣಗಳನ್ನು ಭೀಷ್ಮನು ವಿಸ್ತಾರವಾಗಿ ಹಿಂದೆ ಉಪದೇಶಿಸಿದ್ದಾನೆ. ಅವುಗಳ ಸಾರವನ್ನು ನೀನು ಉಪದೇಶಿಸು.

ಶ್ರೀಭಗವಾನ್

ಅನ್ನೇನ ಧಾರ್ಯತೇ ಸರ್ವಂ ಜಗದೇತಚ್ಚರಾಚರಮ್ ।
ಅನ್ನಾತ್ ಪ್ರಭವತಿ ಪ್ರಾಣಃ ಪ್ರತ್ಯಕ್ಷಂ ನಾಸ್ತಿ ಸಂಶಯಃ ॥೩೧॥

ಶ್ರೀಭಗವಾನ್– ಚರಾಚರಾತ್ಮಕವಾದ ಜಗತ್ತು ಅನ್ನದಿಂದಲೇ ಧರಿಸಲ್ಪಟ್ಟಿದೆ. ಜಗತ್ತಿಗೆ ಅನ್ನವೇ ಆಧಾರ. ಅನ್ನದಿಂದಲೇ ಇಂದ್ರಿಯಗಳ ಉತ್ಪತ್ತಿ . ಇದು ಪ್ರತ್ಯಕ್ಷದಲ್ಲಿ ಕಾಣುವ ವಿಷಯವಾಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಕಲತ್ರಂ ಪೀಡಯಿತ್ವಾ ತು ದೇಶಕಾಲೇ ಚ ಶಕ್ತಿತಃ ।
ದಾತವ್ಯಂ ಭಿಕ್ಷವೇ ಚಾನ್ನಮಾತ್ಮನೋ ಭೂತಿಮಿಚ್ಛತಾ ॥೩೨॥

ತನಗೆ ಹಿತವನ್ನು ಬಯಸುವ ಮನುಷ್ಯನು ತನ್ನ ಪತ್ನಿಗೆ ಸ್ವಲ್ಪ ಕಷ್ಟವಾದರೂ ದೇಶ-ಕಾಲಗಳನ್ನು ಆಲೋಚಿಸಿ, ತನ್ನ ಶಕ್ತಿಗೆ ಅನುಸಾರವಾಗಿ ಸಂನ್ಯಾಸಿಯಾದವನಿಗೆ ಭಿಕ್ಷೆಯನ್ನು ನೀಡಬೇಕು. ಪತ್ನಿಗೆ ಕಷ್ಟವಾಗುತ್ತದೆ ಎಂಬ ಕಾರಣದಿಂದ ಸಂನ್ಯಾಸಿಯನ್ನು ನಿರಾಕರಿಸಬಾರದು.

ವಿಪ್ರಮಧ್ವಪರಿಶ್ರಾಂತಂ ಬಾಲಂ ವೃದ್ಧಮಥಾಪಿ ವಾ ।
ಅರ್ಚಯೇದ್ ಗುರುವತ್ ಪ್ರೀತೋ ಗೃಹಸ್ಥೋ ಗೃಹಮಾಗತಮ್ ॥೩೩॥

ತೀರ್ಥಯಾತ್ರೆಯಲ್ಲಿ ಬಳಲುತ್ತಾ ಸಾಗುತ್ತಿರುವ ಬ್ರಾಹ್ಮಣನು ಬಾಲಕನೇ ಆಗಿರಲಿ, ವೃದ್ಧನೇ ಆಗಿರಲಿ, ತನ್ನ ಗುರುವನ್ನು ಸ್ವಾಗತಿಸುವಂತೆ ಗೃಹಸ್ಥನು ತನ್ನ ಮನೆಗೆ ಕರೆಸಿ ಅವರನ್ನು ಪೂಜಿಸಬೇಕು.

ಕ್ರೋಧಮುತ್ಪತಿತಂ ಹಿತ್ವಾ ಸುಶೀಲೋ ವೀತಮತ್ಸರಃ ।
ಅರ್ಚಯೇದತಿಥಿಂ ಪ್ರೀತಃ ಪರತ್ರ ಹಿತಭೂತಯೇ ॥೩೪॥

ಪರಲೋಕದ ಹಿತವನ್ನು ಬಯಸುವ ವ್ಯಕ್ತಿಯು ಉತ್ಪನ್ನವಾಗುವ ಕ್ರೋಧವನ್ನು ತ್ಯಜಿಸಿ, ಸಚ್ಚಾರಿತ್ರ್ಯಸಂಪನ್ನನಾಗಿ, ಮಾತ್ಸರ್ಯರಹಿತನಾಗಿ, ಸಂತೋಷದಿಂದ ಅತಿಥಿಯನ್ನು ಆರಾಧಿಸಬೇಕು.

ಅತಿಥಿಂ ನಾವಮನ್ಯೇತ ನಾನೃತಾಂ ಗಿರಮೀರಯೇತ್ ।
ನ ಪೃಚ್ಛೇದ್ಗೋತ್ರಚರಣಂ ನಾಧೀತಂ ವಾ ಕದಾಚನ ॥೩೫॥

ಅತಿಥಿಯನ್ನು ಎಂದಿಗೂ ಅವಮಾನಿಸಬಾರದು. ಸುಳ್ಳಾದ ಮಾತುಗಳನ್ನು ಅತಿಥಿಯ ಮುಂದೆ ಆಡಬಾರದು. ಅತಿಥಿಯು ಮನೆಗೆ ಆಗಮಿಸಿದಾಗ ಅವನ ಗೋತ್ರವನ್ನು ಕೇಳಬಾರದು, ಅವನ ಅಧ್ಯಯನವನ್ನು ವಿಚಾರಿಸಬಾರದು.

ಚಂಡಾಲೋ ವಾ ಶ್ವಪಾಕೋ ವಾ ಕಾಲೇ ಯಃ ಕಶ್ಚಿದಾಗತಃ ।
ಅನ್ನೇನ ಪೂಜನೀಯಃ ಸ್ಯಾತ್ ಪರತ್ರ ಹಿತಮಿಚ್ಛತಾ ॥೩೬॥

ಚಂಡಾಲನೇ ಆಗಿರಲಿ, ಶ್ವಪಾಕಿಯೇ ಆಗಿರಲಿ, ಊಟದ ಸಮಯದಲ್ಲಿ ಯಾವ ಅತಿಥಿಯು ಆಗಮಿಸುತ್ತಾನೋ ಅವನನ್ನು ಪರಲೋಕದಲ್ಲಿ ಹಿತವನ್ನು ಬಯಸುವ ವ್ಯಕ್ತಿಯು ಅನ್ನದಿಂದ ಪೂಜಿಸಬೇಕು.

ಪಿಧಾಯ ತು ಗೃಹದ್ವಾರಂ ಭುಂಕ್ತೇ ಯೋಽನ್ನಂ ಪ್ರಹೃಷ್ಟವಾನ್ ।
ಸ್ವರ್ಗದ್ವಾರಪಿಧಾನಂ ವೈ ಕೃತಂ ತೇನ ಯುಧಿಷ್ಠಿರ ॥೩೭॥

ಯುಧಿಷ್ಠಿರನೇ, ಯಾರು ಅತಿಥಿಯನ್ನು ಸ್ವಾಗತಿಸುವ ಸಮಯದಲ್ಲಿ ಮನೆಯ ಬಾಗಿಲನ್ನು ಮುಚ್ಚಿ, ಸಂತೋಷದಿಂದ ಅನ್ನವನ್ನು ಉಣ್ಣುತ್ತಾನೋ ಅವನು ಸ್ವರ್ಗದ ಬಾಗಿಲನ್ನೇ ಮುಚ್ಚಿ ಪಾಪವನ್ನು ತಿನ್ನುತ್ತಾನೆ.

ಪಿತೄನ್ ದೇವಾನ್ ಋಷೀನ್ ವಿಪ್ರಾನ್ ಅತಿಥೀಂಶ್ಚ ನಿರಾಶ್ರಯಾನ್ ।
ಯೋ ನರಃ ಪ್ರೀಣಯತ್ಯನ್ನೈಸ್ತಸ್ಯ ಪುಣ್ಯಫಲಂ ಮಹತ್ ॥೩೮॥

ಪಿತೃಗಳನ್ನು, ದೇವತೆಗಳನ್ನು, ಋಷಿಗಳನ್ನು, ಬ್ರಾಹ್ಮಣರನ್ನು, ಅತಿಥಿಗಳನ್ನು, ಆಶ್ರಯರಹಿತರನ್ನು ಯಾವ ಮನುಷ್ಯನು ಸಂತೋಷಪಡಿಸುವನೋ ಅವನಿಗೆ ಲಭಿಸುವ ಪುಣ್ಯವು ಮಹತ್ತರದುದೆಂದು ತಿಳಿದುಕೊ.

ಕೃತ್ವಾಽಪಿ ಪಾಪಂ ಬಹುಶೋ ಯೋ ದದಾತ್ಯನ್ನಮರ್ಥಿನೇ ।
ಬ್ರಾಹ್ಮಣಾಯ ವಿಶೇಷೇಣ ಸರ್ವಪಾಪೈಃ ಪ್ರಮುಚ್ಯತೇ ॥೩೯॥

ಅನೇಕ ಪಾಪಗಳನ್ನು ಆಚರಿಸಿದ ವ್ಯಕ್ತಿಯು ಅನ್ನವನ್ನು ಬೇಡುವ ವ್ಯಕ್ತಿಗೆ ಅನ್ನವನ್ನು

ನೀಡಿದಾಗ, ವಿಶೇಷವಾಗಿ ಬ್ರಾಹ್ಮಣನಿಗೆ ಅನ್ನವನ್ನು ನೀಡಿದಾಗ ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೆ.

ಅನ್ನದಃ ಪ್ರಾಣದೋ ಲೋಕೇ ಪ್ರಾಣದಃ ಸರ್ವದೋ ಭವೇತ್ ।
ತಸ್ಮಾದನ್ನಂ ಪ್ರಯತ್ನೇನ ದಾತವ್ಯಂ ಭೂತಿಮಿಚ್ಛತಾ ॥೪೦॥

ಯಾವನು ಜಗತ್ತಿನಲ್ಲಿ ಅನ್ನವನ್ನು ದಾನ ಮಾಡುತ್ತಾನೋ ಅವನು ಪ್ರಾಣವನ್ನೇ ದಾನ ಮಾಡಿದ ಪುಣ್ಯಭಾಗಿಯು. ಪ್ರಾಣವನ್ನು ದಾನ ಮಾಡಿದವನಿಗೆ ಎಲ್ಲವನ್ನೂ ದಾನ ಮಾಡಿದ ಪುಣ್ಯವುಂಟಾಗುತ್ತದೆ. ಆದ್ದರಿಂದ ಐಶ್ವರ್ಯವನ್ನು ಬಯಸಿದ ವ್ಯಕ್ತಿಯು ಪ್ರಯತ್ನಪೂರ್ವಕವಾಗಿ ಅನ್ನವನ್ನು ದಾನ ಮಾಡಬೇಕು.

ಅನ್ನಂ ಹ್ಯಮೃತಮಿತ್ಯಾಹುರನ್ನಂ ಪ್ರಜನನಂ ಸ್ಮೃತಮ್ ।
ಅನ್ನಪ್ರಣಾಶೇ ಸೀದಂತಿ ಶರೀರೇ ಪಂಚ ಧಾತವಃ ॥೪೧॥

ಅನ್ನವನ್ನು ಅಮೃತ ಎಂದು ಜ್ಞಾನಿಗಳು ಹೇಳುತ್ತಾರೆ. ಅನ್ನವೇ ಪ್ರಜಾಸರ್ಗಕ್ಕೆ ಹೇತುವಾಗಿದೆ. ಅನ್ನವು ಇಲ್ಲದಿದ್ದರೆ ಶರೀರದಲ್ಲಿರುವ ಐದು ಧಾತುಗಳೂ ಕೂಡ ನಾಶ ಹೊಂದುತ್ತವೆ.

ಬಲಂ ಬಲವತೋ ನಶ್ಯೇದ್ ಅನ್ನಹೀನಸ್ಯ ದೇಹಿನಃ ।
ತಸ್ಮಾದನ್ನಂ ಪ್ರದಾತವ್ಯಂ ಶ್ರದ್ಧಯಾऽಶ್ರದ್ಧಯಾऽಪಿ ವಾ ॥೪೨॥

ಎಷ್ಟೇ ಬಲಿಷ್ಠನಾಗಿದ್ದರೂ ಅನ್ನಹೀನನಾದರೆ ಜೀವನು ನಾಶವನ್ನು ಹೊಂದುತ್ತಾನೆ. ಆದ್ದರಿಂದ ಆಸ್ತಿಕ್ಯ ಬುದ್ಧಿ (ಶ್ರದ್ಧೆ) ಇರಲಿ, ಇಲ್ಲದಿರಲಿ ಅನ್ನವನ್ನು ದಾನ ಮಾಡಲೇಬೇಕು.

ಆದತ್ತೇ ಹಿ ರಸಂ ಸರ್ವಮಾದಿತ್ಯಃ ಸ್ವಗಭಸ್ತಿಭಿಃ ।
ವಾಯುಸ್ತಸ್ಮಾತ್ ಸಮಾದಾಯ ರಸಂ ಮೇಘೇಷು ಧಾರಯೇತ್ ॥೪೩॥

ಸೂರ್ಯದೇವನು ಸಮಸ್ತ ಪದಾರ್ಥಗಳ ರಸವನ್ನು ತನ್ನ ಕಿರಣಗಳಲ್ಲಿ ನಿಂತು ಸ್ವೀಕರಿಸುತ್ತಾನೆ. ವಾಯುದೇವನು ಆ ಕಿರಣಗಳಲ್ಲಿರುವ ರಸವನ್ನು ಮೇಘಗಳಲ್ಲಿ ತುಂಬುತ್ತಾನೆ.

ತತ್ತು ಮೇಘಗತಂ ಭೂಮೌ ಶಕ್ರೋ ವರ್ಷತಿ ತದ್ರಸಮ್ ।
ತೇನ ದಿಗ್ಧಾ ಭವೇದ್ ದೇವೀ ಮಹೀ ಪ್ರೀತಾ ಚ ಪಾಂಡವ ॥೪೪॥

ಆ ಮೇಘದಲ್ಲಿರುವ ರಸವನ್ನು ಇಂದ್ರದೇವನು ಭೂಮಿಯಲ್ಲಿ ಮಳೆಯ ಮೂಲಕ ಸುರಿಸುತ್ತಾನೆ. ಆ ರಸದಿಂದಲೇ ಧಾನ್ಯಗಳು ರಸಭರಿತವಾಗುತ್ತವೆ. ಭೂದೇವಿಯು ಆ ರಸದಿಂದ ಪ್ರೀತಳಾಗುತ್ತಾಳೆ.

ತಸ್ಯಾಂ ಸಸ್ಯಾನಿ ರೋಹಂತಿ ಯೈರ್ಜೀವಂತ್ಯಖಿಲಾಃ ಪ್ರಜಾಃ ।
ಮಾಂಸಮೇದೋಽಸ್ಥಿಮಜ್ಜಾನಾಂ ಸಂಭವಸ್ತೇಭ್ಯಃ ಏವ ಹಿ ॥೪೫॥

ಆ ಭೂದೇವಿಯಿಂದ ಸಸ್ಯಗಳು ಅಭಿವೃದ್ಧಿಯನ್ನು ಹೊಂದುತ್ತವೆ. ಆ ಸಸ್ಯಗಳಿಂದಲೇ ಸಮಸ್ತ ಜೀವರಾಶಿಗಳು, ಪ್ರಜೆಗಳು ಪ್ರೀತರಾಗುತ್ತಾರೆ. ಆ ರಸದಿಂದಲೇ ಮಾಂಸ, ಮೇದ, ಅಸ್ಥಿ, ಮಜ್ಜೆಗಳು ಜೀವರಾಶಿಗಳಿಗೆ ಉತ್ಪನ್ನವಾಗುತ್ತವೆ.

ಏವಂ ಸೂರ್ಯಶ್ಚ ಪವನೋ ಮೇಘಃ ಶಕ್ರಸ್ತಥೈವ ಚ ।
ಏಕ ಏವ ಸ್ಥಿತೋ ರಾಶಿರ್ಯತೋ ಭೂತಾನಿ ಜಜ್ಞಿರೇ ॥೪೬॥

ಈ ರೀತಿಯಾಗಿ ಸೂರ್ಯದೇವ, ವಾಯುದೇವ, ಮೇಘ, ಇಂದ್ರ - ಇವರೇ ಈ ಭೂಮಿಯಲ್ಲಿನಿಂತು ಸಮಸ್ತ ಜೀವರ ಉತ್ಪತ್ತಿಗೆ ಕಾರಣರಾಗಿದ್ದಾರೆ.

ಭವನಾನಿ ಚ ದಿವ್ಯಾನಿ ದಿವಿ ತೇಷಾಂ ಮಹಾತ್ಮನಾಮ್ ।
ನಾನಾಸಂಸ್ಥಾನರೂಪಾಣಿ ನಾನಾಭೂತಯುತಾನಿ ಚ ॥೪೭॥

ಯಾರು ಅನ್ನದಾನವನ್ನು ಮಾಡುತ್ತಾರೋ ಅಂತಹ ಮಹಾತ್ಮರಿಗೆ ಸ್ವರ್ಗಲೋಕದಲ್ಲಿ ದಿವ್ಯವಾದ ಭವನಗಳು ದೊರೆಯುತ್ತವೆ.

ಚಂದ್ರಮಂಡಲಶುಭ್ರಾಣಿ ಕಿಂಕಿಣೀಜಾಲವಂತಿ ಚ ।
ತರುಣಾದಿತ್ಯವರ್ಣಾನಿ ಸ್ಥಾವರಾಣಿ ಚರಾಣಿ ಚ ॥೪೮॥

ಅನೇಕ ಮಹಡಿಗಳಿಂದ ಕೂಡಿದ, ಅನೇಕ ಪ್ರಾಣಿಗಳಿಂದ ತುಂಬಿರುವ, ಚಂದ್ರಮಂಡಲಗಳಂತೆ ಶುಭ್ರವಾದ, ಗೆಜ್ಜೆಗಳಿಂದ ಕೂಡಿದ ಬೀಳಲುಗಳಿಂದ ತುಂಬಿರುವ, ಉದಿಸುವ ಸೂರ್ಯನಂತೆ ಪ್ರಕಾಶಮಾನವಾದ, ಸ್ಥಾವರ-ಜಂಗಮಗಳಿಂದ ಕೂಡಿರುವ;

ಅನೇಕಶತಸಂಖ್ಯಾನಿ ಸಾಂತರ್ಜಲವನಾನಿ ಚ ।
ತತ್ರ ಪುಷ್ಪಫಲೋಪೇತಾಃ ಕಾಮದಾಃ ಸುರಪಾದಪಾಃ ॥೪೯॥

ನೂರಾರು ಸಂಖ್ಯೆಗಳಿಂದ ತುಂಬಿರುವ, ನೀರಿನಿಂದ ತುಂಬಿರುವ ಮೇಘಗಳಿಂದ, ವನಗಳಿಂದ, ಪುಷ್ಪ-ಫಲ, ರಸಗಳಿಂದ ಕೂಡಿರುವ, ಇಷ್ಟಾರ್ಥಗಳನ್ನು ಕೊಡುವ, ದೇವತರುಗಳಿಂದ;

ವಾಪ್ಯೋ ದಿವ್ಯಾಃ ಸರಃ ಕೂಪಾಃ ದೀರ್ಘಿಕಾಶ್ಚ ಸಹಸ್ರಶಃ ।
ಭಕ್ಷ್ಯಭೋಜ್ಯಮಯಾಃ ಶೈಲಾ ವಾಸಾಂಸ್ಯಾಭರಣಾನಿ ಚ ॥೫೦॥

ಬಾವಿಗಳು, ದಿವ್ಯವಾದ ಸರೋವರಗಳು, ಕೂಪಗಳು, ವಿಸ್ತಾರವಾದ ನೀರಿನ ಆಶ್ರಯಗಳು, ಭಕ್ಷ್ಯ-ಭೋಜ್ಯಗಳು, ಪರ್ವತಗಳು, ಬಟ್ಟೆಗಳು, ಆಭರಣಗಳು;

ಕ್ಷೀರಸ್ರವಂತ್ಯಃ ಸರಿತಸ್ತಥಾ ಚೈವಾನ್ನಪರ್ವತಾಃ ।
ಘೋಷವಂತಿ ಚ ಯಾನಾನಿ ಯುಕ್ತಾನ್ಯಥ ಸಹಸ್ರಶಃ ॥೫೧॥

ಹಾಲನ್ನು ಸುರಿಸುವ ಸರೋವರಗಳು, ಅನ್ನಪರ್ವತಗಳು, ವೇದಘೋಷದಿಂದ ತುಂಬಿದ ವಾಹನಗಳ, ಸಾವಿರಾರು ಸಂಖ್ಯೆಯಲ್ಲಿ ತುಂಬಿರುತ್ತವೆ.

ಪ್ರಾಸಾದಾಃ ಪಾಂಡರಾಃ ಶುಭ್ರಾಃ ಶಯ್ಯಾಶ್ಚ ಕನಕೋಜ್ಜ್ವಲಾಃ ।
ಅನ್ನದಾಸ್ತತ್ರ ತಿಷ್ಠಂತಿ ತಸ್ಮಾದನ್ನಪ್ರದೋ ಭವೇತ್ ॥೫೨॥

ಶುಭ್ರಬಣ್ಣದ ಬಿಳಿಯಾದ ಮಹಡಿಗಳು, ಬಂಗಾರದಿಂದ ಅಲಂಕೃತವಾದ ಆಸನಗಳು ಬಂಗಾರದಂತೆ ಉಜ್ವಲವಾದ ಹಾಸಿಗೆಗಳಿಂದ ಕೂಡಿದ ಮಂದಿರ, ದಿವ್ಯೋದ್ಯಾನಗಳಲ್ಲಿ ಅನ್ನದಾನ ಮಾಡಿದವರು ವಿಹರಿಸುತ್ತಾರೆ. ಆದ್ದರಿಂದ ಅನ್ನದಾನವನ್ನು ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಸ್ವರ್ಗನರಕಗಮನಕಥನಂ ನಾಮ
ಅಷ್ಟಾಧಿಕಶತತಮೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂಬತ್ತನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಭೋಜನದ ವಿಧಿಯನ್ನು ನಿರೂಪಿಸಿದುದು. ಗೋಗ್ರಾಸವನ್ನು ಕೊಡುವ ಪ್ರಕಾರವನ್ನು ಹೇಳಿದುದು. ತಿಲದಾನದ ಪ್ರಶಂಸೆಯನ್ನು ಮಾಡುತ್ತಾ ಕಬ್ಬನ್ನು ಬ್ರಾಹ್ಮಣನು ತಾನೇ ಯಂತ್ರದಲ್ಲಿ ಹಾಕಬಾರದೆಂದು ನಿರಾಕರಿಸಿದುದು.

ಯುಧಿಷ್ಠಿರಃ

ಅನ್ನದಾನಫಲಂ ಶ್ರುತ್ವಾ ಪ್ರೀತೋಽಸ್ಮಿ ಮಧುಸೂದನ ।
ಭೋಜನಸ್ಯ ವಿಧಿಂ ವಕ್ತುಂ ದೇವದೇವ ತ್ವಮರ್ಹಸಿ ॥೧॥

ಯುಧಿಷ್ಠಿರ– ಶ್ರೀಕೃಷ್ಣನೇ, ಮಧುಸೂದನನೇ, ಅನ್ನದಾನದ ಫಲವನ್ನು ಕೇಳಿ ಸಂತೋಷವಾಗಿದೆ. ಇನ್ನು ಮುಂದೆ ಭೋಜನದ ವಿಧಿಯನ್ನು ಹೇಳುವ ಕೃಪೆ ಮಾಡು.

ಶ್ರೀಭಗವಾನ್

ಭೋಜನಸ್ಯ ದ್ವಿಜಾತೀನಾಂ ವಿಧಾನಂ ಶೃಣು ಪಾಂಡವ ।
ಸ್ನಾತಃ ಶುಚಿಃ ಶುಚೌ ದೇಶೇ ನಿರ್ಜನೇ ಹುತಪಾವಕಃ ॥೨॥

ಶ್ರೀಭಗವಾನ್– ಯುಧಿಷ್ಠಿರನೇ, ಬ್ರಾಹ್ಮಣರ ಭೋಜನದ ವಿಧಾನವನ್ನು ಹೇಳುತ್ತೇನೆ, ಕೇಳು. ದ್ವಿಜಶ್ರೇಷ್ಠನು ಸ್ನಾನ ಮಾಡಿ ಪರಿಶುದ್ಧನಾಗಿ ಸಂಧ್ಯಾವಂದನೆ, ಅಗ್ನಿಹೋತ್ರಾದಿಗಳನ್ನು ಮುಗಿಸಬೇಕು.

ಮಂಡಲಂ ಕಾರಯಿತ್ವಾ ತು ಚತುರಶ್ರಂ ದ್ವಿಜೋತ್ತಮಃ ।
ಕ್ಷತ್ರಿಯಶ್ಚೇತ್ ತತೋ ವೃತ್ತಂ ವೈಶ್ಯೋಽರ್ಧೇಂದುಸಮಾಕೃತಿಮ್ ॥೩॥

ಬಳಿಕ ಏಕಾಂತವಾದ ಪ್ರದೇಶದಲ್ಲಿ ನಾಲ್ಕುಮೂಲೆಗಳುಳ್ಳ ಮಂಡಲವನ್ನು ರಚಿಸಬೇಕು. ಕ್ಷತ್ರಿಯನಾದರೆ ದುಂಡಾದ ಮಂಡಲವನ್ನು, ವೈಶ್ಯನಾದರೆ ಅರ್ಧಚಂದ್ರಾಕೃತಿಯ ಮಂಡಲವನ್ನು ರಚಿಸಬೇಕು.

ಆರ್ದ್ರಪಾದಸ್ತು ಭುಂಜೀಯಾತ್ ಪ್ರಾಙ್ಮುಖಶ್ಚಾಸನೇ ಶುಚೌ ।
ಪಾದಾಭ್ಯಾಂ ಧರಣೀಂ ಸ್ಪೃಷ್ಟ್ವಾ ಪಾದೇನೈಕೇನ ವಾ ಪುನಃ ॥೪॥

ಮಂಡಲದ ಮೇಲೆ ಎಲೆಯನ್ನು ಹಾಕಿ ಕಾಲ್ಗಳನ್ನು ತೊಳೆದುಕೊಂಡು ಪವಿತ್ರವಾದ ಆಸನದಲ್ಲಿ ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು. ಎರಡು ಕಾಲುಗಳನ್ನು ಅಥವಾ ಒಂದು ಕಾಲನ್ನಾದರೂ ಭೂಮಿಗೆ ತಗುಲಿಸಿಕೊಂಡೇ ಕುಳಿತಿರಬೇಕು (ಸಮಗ್ರವಾಗಿ ದೇಹವನ್ನು ಮಣೆಯ ಮೇಲೆ ಕೂಡಿಸಿ ಊಟ ಮಾಡಬಾರದು. ಪೃಷ್ಟಭಾಗದಲ್ಲಿ ಆಸನವಿರಬೇಕು. ಕಾಲಿನ ಮುಂಭಾಗವು ನೆಲದಲ್ಲಿರಬೇಕು ಎಂದು ಅಭಿಪ್ರಾಯ).

ನೈಕವಾಸಾಸ್ತು ಭುಂಜೀಯಾನ್ನ ಚಾಂತರ್ಧಾಯ ವಾ ಪುನಃ ।
ನ ಭಿನ್ನಭಾಂಡೇ ಭುಂಜೀತ ಪರ್ಣಪೃಷ್ಠೇ ತಥೈವ ಚ ॥೫॥

ಒಂದೇ ವಸ್ತ್ರವನ್ನು ಉಟ್ಟುಕೊಂಡು ಉತ್ತರೀಯವಿಲ್ಲದೆ ಬ್ರಾಹ್ಮಣನು ಊಟ ಮಾಡಬಾರದು. ಶರೀರವನ್ನು ಬಟ್ಟೆಯಿಂದ ಸಮಗ್ರವಾಗಿ ಮುಚ್ಚಿಕೊಂಡು ಊಟ ಮಾಡಬಾರದು. ಒಡೆದ ತಟ್ಟೆಯಲ್ಲಾಗಲಿ, ಎಲೆಯ ಹಿಂಭಾಗದಲ್ಲಾಗಲಿ ಊಟ ಮಾಡಬಾರದು.

ಅನ್ನಂ ಪೂರ್ವಂ ನಮಸ್ಕುರ್ಯಾತ್ ಪ್ರಹೃಷ್ಟೇನಾಂತರಾತ್ಮನಾ ।
ನಾನ್ಯದಾಲೋಕಯೇದನ್ನಾನ್ನ ಜುಗುಪ್ಸೇತ ತತ್ಪರಃ ॥೬॥

ಸಂತುಷ್ಟವಾದ ಮನಸ್ಸಿನಿಂದ ಊಟಕ್ಕೆ ಕುಳಿತುಕೊಂಡು ಆರಂಭದಲ್ಲಿ ಅನ್ನಕ್ಕೆ ನಮಸ್ಕಾರ ಮಾಡಬೇಕು. ಊಟ ಮಾಡುವ ಸಮಯದಲ್ಲಿ ಅನ್ನವನ್ನು ಬಿಟ್ಟು ಬೇರೆ ಯಾವುದನ್ನೂ ನೋಡಬಾರದು. ಬಡಿಸಿರುವ ಅನ್ನದಲ್ಲಿ ಜುಗುಪ್ಸೆಯನ್ನು ಹೊಂದಬಾರದು.

ಜುಗುಪ್ಸಿತಂ ಚ ಯಚ್ಚಾನ್ನಂ ರಾಕ್ಷಸಾ ಏವ ಭುಂಜತೇ ॥೭॥

ಜುಗುಪ್ಸೆಯಿಂದ ಅನ್ನವನ್ನು ನೋಡಿದರೆ ಆ ಅನ್ನವನ್ನು ರಾಕ್ಷಸರೆ ಸ್ವೀಕರಿಸುತ್ತಾರೆ.

ಪಾಣಿನಾ ಜಲಮುದ್ಧೃತ್ಯ ಕುರ್ಯಾದನ್ನಂ ಪ್ರದಕ್ಷಿಣಮ್ ।
ಅಪೇಯಂ ತದ್ವಿಜಾನೀಯಾತ್ ಪೀತ್ವಾ ಚಾಂದ್ರಾಯಣಂ ಚರೇತ್ ॥೮॥

ಊಟವನ್ನು ಮಾಡುವಾಗ ಕೈಯಲ್ಲಿ ನೀರನ್ನು ಹಾಕಿಕೊಂಡು ಊಟಮಾಡುವ ಎಲೆಯ ಸುತ್ತಲೂ ಪ್ರದಕ್ಷಿಣಾಕಾರವಾಗಿ ಪರಿಷೇಚನವನ್ನು ಮಾಡಬೇಕು. ಪರಿಷೇಚನ

ಮಾಡಿದ ನೀರನ್ನು ಉಳಿಸಿಕೊಂಡು ಅದನ್ನೇ ಕುಡಿಯಬಾರದು. ಹೀಗೆ ಕುಡಿದಲ್ಲಿ ಚಾಂದ್ರಾಯಣ ವ್ರತವನ್ನು ಆಚರಿಸಬೇಕಾಗುತ್ತದೆ.

ಪರಿವೇಷಜಲಾದನ್ಯತ್ ಪೇಯಮೇವ ತು ಮಂತ್ರವತ್ ।
ಪಂಚ ಪ್ರಾಣಾಹುತೀಃ ಕುರ್ಯಾತ್ ಸಮಂತ್ರಂ ತು ಪೃಥಕ್ ಪೃಥಕ್ ॥

ಪರಿಷೇಚನ ಮಾಡಿದ ಬಳಿಕ ಬೇರೆ ನೀರನ್ನು ಕೈಗೆ ಹಾಕಿಕೊಂಡು ಮಂತ್ರಪೂರ್ವಕವಾಗಿ ಆ ನೀರನ್ನು ಪಾನ ಮಾಡಿ, ಪಂಚಪ್ರಾಣಾಹುತಿಗಳನ್ನು ಮಂತ್ರಪೂರ್ವಕವಾಗಿಯೇ ಪ್ರತ್ಯೇಕ ಪ್ರತ್ಯೇಕವಾಗಿ ಸ್ವೀಕರಿಸಬೇಕು.

ಯಥಾ ರಸಂ ನ ಜಾನಾತಿ ಜಿಹ್ವಾ ಪ್ರಾಣಾಹುತೌ ನೃಪ ।
ತಥಾ ಸಮಾಹಿತಃ ಕುರ್ಯಾತ್ ಪ್ರಾಣಾಹುತಿಮತಂದ್ರಿತಃ ॥೧೦॥

ಪ್ರಾಣಾಹುತಿಯನ್ನು ಸ್ವೀಕರಿಸುವ ಸಮಯದಲ್ಲಿ ಅಲಸನಾಗಿರಬಾರದು. ಸ್ಥಿರಚಿತ್ತನಾಗಿ ಪ್ರಾಣಗಳಿಗೆ ಅನ್ನ ರೂಪವಾದ ಆಹುತಿಯನ್ನು ತಲುಪಿಸಬೇಕೇ ಹೊರತು ಅನ್ನದ ರಸವನ್ನು ನಾಲಿಗೆಯಿಂದ ಸವಿಯಬಾರದು. ಹೀಗೆ ಏಕಾಗ್ರತೆಯಿಂದ ಪ್ರಾಣಾಹುತಿಗಳನ್ನು ನೀಡಬೇಕು.

ವಂದಿತ್ವಾऽನ್ನಮಥಾನ್ನಾದಂ ಪಂಚ ಪ್ರಾಣಾಂಶ್ಚ ಪಾಂಡವ ।
ಯಃ ಕುರ್ಯಾದಾಹುತೀಃ ಪಂಚ ತೇನೇಷ್ಟಾಃ ಪಂಚ ವಾಯವಃ ॥೧೧॥

ಪಂಚಪ್ರಾಣರನ್ನು ವಂದಿಸಿ ಅನ್ನವನ್ನು ತಿನ್ನುವ ಪಂಚಪ್ರಾಣನ ತತ್ತ್ವವನ್ನು ತಿಳಿದುಕೊಂಡು ಯಾರು ಪ್ರಾಣಾದಿ ಹೋತೃವನ್ನು ಮಾಡುತ್ತಾನೋ ಅವನು ಪಂಚವಾಯುಗಳಿಗೆ ಸಂಬಂಧಿಸಿದ ಯಜ್ಞವನ್ನೇ ಮಾಡಿದಂತಾಗುತ್ತದೆ.

ಅತೋऽನ್ಯಥಾ ತು ಭುಂಜಾನೋ ಬ್ರಾಹ್ಮಣೋ ಜ್ಞಾನದುರ್ಬಲಃ ।
ತೇನಾನ್ನೇನಾಸುರಾನ್ ಪ್ರೇತಾನ್ ರಾಕ್ಷಸಾಂಸ್ತರ್ಪಯಿಷ್ಯತಿ ॥೧೨॥

ಹೀಗೆ ಪ್ರಾಣಾದಿ ಹೋತೃವನ್ನು ಮಾಡದೆ ವ್ಯರ್ಥವಾಗಿ ಕಬಳಿಸುವ ಮೂರ್ಖನಾದ ಬ್ರಾಹ್ಮಣನು ತಾನು ತಿನ್ನುವ ಅನ್ನದ ಮೂಲಕ ಅಸುರರನ್ನು, ಪ್ರೇತರನ್ನು, ರಾಕ್ಷಸರನ್ನು ತೃಪ್ತಿಪಡಿಸುತ್ತಾನೆ.

ವಕ್ತ್ರಪ್ರಮಾಣಾನ್ ಪಿಂಡಾಂಶ್ಚ ಗ್ರಸೇದೇಕೈಕಶಃ ಪುನಃ ।
ವಕ್ತ್ರಾಧಿಕಂ ತು ಯತ್ ಪಿಂಡಮಾತ್ಮೋಚ್ಛಿಷ್ಟಂ ತದುಚ್ಯತೇ ॥೧೩॥

ಬಾಯಿಗೆ ಹಿಡಿಸುವಷ್ಟು ತುತ್ತುಗಳನ್ನು ಮಾಡಿಕೊಂಡು, ಒಂದು ಬಾರಿಗೆ ಒಂದು ತುತ್ತಿನಂತೆ ಅನ್ನವನ್ನು ಉಣ್ಣಬೇಕು. ಅಧಿಕವಾದ ತುತ್ತನ್ನು ತಿನ್ನಲು ಹೋಗಿ ಅದರಲ್ಲಿ ಉಳಿಯುವ ಅನ್ನವನ್ನು ಮತ್ತೆ ಎಲೆಗೆ ಹಾಕಿಕೊಂಡು ತಿಂದರೆ ಆತ್ಮೋಚ್ಛಿಷ್ಟ ಎನ್ನುತ್ತಾರೆ. ಹಾಗೆ ತಿಂದರೆ ಚಾಂದ್ರಾಯಣ ವ್ರತವನ್ನು ಆಚರಿಸಬೇಕು.

ಪಿಂಡಾವಶಿಷ್ಟಮನ್ಯಚ್ಚ ವಕ್ತ್ರನಿಃಸೃತಮೇವ ಚ ।
ಅಭೋಜ್ಯಂ ತದ್ವಿಜಾನೀಯಾದ್ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥

ಯಾವನು ತನ್ನ ಮುಖದಿಂದ ಕೆಳಗೆ ಬಿದ್ದ ಉಚ್ಛಿಷ್ಟಾನ್ನವನ್ನು ಉಣ್ಣುತ್ತಾನೋ ಅವನು ಪಾಪ ಪರಿಹಾರಕ್ಕಾಗಿ ಚಾಂದ್ರಾಯಣವ್ರತವನ್ನು ಮಾಡಬೇಕು.

ಸ್ವಮುಚ್ಛಿಷ್ಟಂ ತು ಯೋ ಭುಂಕ್ತೇ ಯೋ ಭುಂಕ್ತೇ ಮುಕ್ತಮೋದನಮ್ ।
ಚಾಂದ್ರಾಯಣಂ ಚರೇತ್ ಕೃಚ್ಛ್ರಂ ಪ್ರಾಜಾಪತ್ಯಮಥಾಪಿ ವಾ ॥೧೫॥

ಯಾವ ಬ್ರಾಹ್ಮಣನು ತನ್ನ ಉಚ್ಛಿಷ್ಟವನ್ನು (ಎಂಜಲು) ಉಣ್ಣುತ್ತಾನೋ, ಮುಕ್ತವಾಗಿ ಉಣ್ಣುವನೋ ಅಂಥವನು ಚಾಂದ್ರಾಯಣ ವ್ರತ ಅಥವಾ ಕೃಚ್ಛ್ರವ್ರತ ಅಥವಾ ಪ್ರಾಜಾಪತ್ಯ ವ್ರತವನ್ನಾಗಲಿ ಮಾಡಬೇಕು.

ಪಿಬತಃ ಪತಿತೇ ತೋಯೇ ಭೋಜನೇ ಮುಖನಿಃಸೃತೇ ।
ಅಭೋಜ್ಯಂ ತದ್ ವಿಜಾನೀಯಾದ್ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥

ನೀರು ಕುಡಿಯುತ್ತಿರುವಾಗ ಬಾಯಿಂದ ನೀರು ಕೆಳಗೆ ಬಿದ್ದರೆ, ತುತ್ತು ಉಣ್ಣುವಾಗ ತುತ್ತು ಬಾಯಿಂದ ಎಲೆಗೆ ಬಿದ್ದರೆ ಆ ಉಚ್ಛಿಷ್ಟ ಬಿದ್ದ ಅಭೋಜ್ಯವೆನಿಸಿದೆ. ಅದನ್ನು ಪುನಃ ತಿಂದರೆ ಚಾಂದ್ರಾಯಣ ವ್ರತವನ್ನು ಆಚರಿಸಬೇಕು.

ಪೀತಶೇಷಂ ತು ತನ್ನಾಮ ನ ಪೇಯಂ ಪಾಂಡುನಂದನ ।
ಪಿಬೇದ್ ಯದಿ ಹಿ ತನ್ಮೋಹಾದ್ ದ್ವಿಜಶ್ಚಾಂದ್ರಾಯಣಂ ಚರೇತ್ ॥

ಸ್ವಲ್ಪ ಕುಡಿದು ಉಳಿದ ನೀರು ಪೀತ ಶೇಷವೆನಿಸುತ್ತದೆ. ಆ ನೀರನ್ನು ಕುಡಿಯಬೇಕು.

ಒಂದು ವೇಳೆ ಕುಡಿದು ಉಳಿದ ನೀರನ್ನು ಪುನಃ ಕುಡಿದರೆ ಆ ಬ್ರಾಹ್ಮಣನು ಚಾಂದ್ರಾಯಣ ವ್ರತವನ್ನು ಮಾಡಬೇಕು.

ಪಾನೀಯಾನಿ ಪಿಬೇದ್ ಯೇನ ಪಾತ್ರೇಣ ದ್ವಿಜಸತ್ತಮಃ ।
ಅನುಚ್ಛಿಷ್ಟಂ ಭವೇತ್ ಯಾವದ್ ಯಾವದ್ಭೂಮೌ ನ ನಿಕ್ಷಿಪೇತ್ ॥೧೮॥

ಯಾವ ಬ್ರಾಹ್ಮಣನು ನೀರನ್ನು ಉಚ್ಛಿಷ್ಟವಾಗದೆ ಇರುವಂತೆ ಪಾನ ಮಾಡುತ್ತಾನೋ, ಎಲ್ಲಿಯ ತನಕ ಭೂಮಿಯಲ್ಲಿ ಆ ನೀರಿನ ಪಾತ್ರೆ ಇಟ್ಟಿರುವುದಿಲ್ಲವೋ ಅಲ್ಲಿಯ ತನಕವೂ ಆ ಪಾನೀಯವು ಅನುಚ್ಛಿಷ್ಟ ಎಂದೇ ಕರೆಸಿಕೊಳ್ಳುತ್ತದೆ. (ಲೋಟದಲ್ಲಿ ಹಾಕಿಕೊಂಡು ನೀರನ್ನು ಕುಡಿಯುವಾಗ ಅರ್ಧ ನೀರನ್ನು ಕುಡಿದು ಆ ಲೋಟವನ್ನು ಕೆಳಗೆ ಇಟ್ಟರೆ ಉಳಿದ ನೀರು ಉಚ್ಚಿಷ್ಟವಾಗುತ್ತದೆ). ಹಾಗೆ ಮಾಡಿದರೆ ಚಾಂದ್ರಾಯಣ ವ್ರತ ಮಾಡಬೇಕು.

ಮೌನೀ ವಾऽಪ್ಯಥವಾ ಭೂಮೌ ಪ್ರಹೃಷ್ಟಃ ಸಂಯತೇಂದ್ರಿಯಃ ।
ಭುಂಜೀತ ವಿಧಿವದ್ ವಿಪ್ರೋ ನ ಚೋಚ್ಛಿಷ್ಟಾನಿ ಚಾವಪೇತ್ ॥೧೯॥

ಬ್ರಾಹ್ಮಣನು ಮೌನಿಯಾಗಿ ಭೂಮಿಯನ್ನಾಗಲಿ, ದಿಕ್ಕುಗಳನ್ನಾಗಲಿ ನೋಡದೆ ಅನ್ನವನ್ನು ವಿಧಿವತ್ತಾಗಿ ಸಂತೋಷದಿಂದ ಊಟಮಾಡಬೇಕು. ತನ್ನ ಉಚ್ಛಿಷ್ಟ ಮತ್ತೊಬ್ಬರಿಗೆ ಬೀಳದೆ ಇರುವಂತೆ ಜಾಗೃತೆ ವಹಿಸಬೇಕು (ಮಾವಿನ ಹಣ್ಣಿನ ಗೆರೆಟೆಯನ್ನು ಚೀಪುವಾಗ ಎಚ್ಚರಿಕೆ ವಹಿಸಬೇಕು).

ಸದಾ ಚಾತ್ಯಶನಂ ನಾದ್ಯಾನ್ನಾತಿಹೀನಂ ಚ ಕರ್ಹಿಚಿತ್ ।
ಯಥಾನ್ನೇನ ವ್ಯಥಾ ನ ಸ್ಯಾತ್ ತಥಾ ಭುಂಜೀತ ನಿತ್ಯಶಃ ॥೨೦॥

ಯಾವಾಗಲೂ ಅನ್ನವನ್ನು ಅಧಿಕವಾಗಿ ಉಣ್ಣಬಾರದು. ಕಡಿಮೆಯಾಗಿಯೂ ಉಣ್ಣಬಾರದು. ಎಷ್ಟು ಅನ್ನದಿಂದ ಶರೀರ, ಮನಸ್ಸುಗಳು ಹಿತವನ್ನು ಹೊಂದುತ್ತವೋ ಅಷ್ಟು ಅನ್ನವನ್ನು ಮಾತ್ರ ಪ್ರತಿದಿನವು ಉಣ್ಣಬೇಕು.

ಉದಕ್ಯಾಮಪಿ ಚಂಡಾಲಂ ಶ್ವಾನಂ ವಾ ಶೂದ್ರಮೇವ ವಾ ।
ಭುಂಜ್ಞಾನೋ ಯದಿ ವಾ ಪಶ್ಯೇತ್ ತದನ್ನಂ ತು ಪರಿತ್ಯಜೇತ್ ॥೨೧॥

ರಜಸ್ವಲೆಯನ್ನಾಗಲೀ, ಚಂಡಾಲನನ್ನಾಗಲೀ, ನಾಯಿಯನ್ನಾಗಲೀ, ಶೂದ್ರನನ್ನಾಗಲೀ ಊಟ ಮಾಡುವಾಗ ನೋಡಿದಲ್ಲಿ ಆ ಅನ್ನವನ್ನು ತ್ಯಜಿಸಬೇಕು.

ಭುಂಜಾನೋ ಹ್ಯತ್ಯಜನ್ ಮೋಹಾದ್ ದ್ವಿಜಶ್ಚಾಂದ್ರಾಯಣಂ ಚರೇತ್ ॥

ಅವರನ್ನು ನೋಡಿಯೂ ಅನ್ನವನ್ನು ತ್ಯಾಗ ಮಾಡದೆ ಮೋಹದಿಂದ ಉಂಡಲ್ಲಿ ಆ ಬ್ರಾಹ್ಮಣನು ಚಾಂದ್ರಾಯಣ ವ್ರತವನ್ನು ಮಾಡಬೇಕು.

ಕೇಶಕೀಟಾವಪನ್ನಂ ಚ ಮುಖಮಾರುತವೀಜಿತಮ್ ।
ಅಭೋಜ್ಯಂ ತದ್ವಿಜಾನೀಯಾದ್ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥

ಕೂದಲು ಬಿದ್ದ ಅನ್ನ, ಹುಳ ಬಿದ್ದ ಅನ್ನ, ಬಾಯಿಂದ ಆರಿಸಿದ ಅನ್ನ - ಇವುಗಳು ಅಭೋಜ್ಯಗಳೆನಿಸುತ್ತವೆ. ಪ್ರಮಾದದಿಂದ ಈ ಅನ್ನವನ್ನು ತಿಂದಲ್ಲಿ ಚಾಂದ್ರಾಯನವನ್ನು ಆಚರಿಸಿ ಶುದ್ಧಿ ಮಾಡಿಕೊಳ್ಳಬೇಕು.

ಉತ್ಥಾಯ ಚ ಪುನಃ ಸ್ಪೃಷ್ಟಂ ಪಾದಸ್ಪೃಷ್ಟಂ ಚ ಲಂಘಿತಮ್ ।
ಅನ್ನಂ ತದ್ರಾಕ್ಷಸಂ ವಿದ್ಯಾತ್ ತಸ್ಮಾತ್ ತತ್ ಪರಿವರ್ಜಯೇತ್ ॥೨೪॥

ಊಟ ಮಾಡುವಾಗ ಎದ್ದು ಹೋಗಿ ಪುನಃ ಬಂದು ಮುಟ್ಟಿದ ಅನ್ನ, ಕಾಲಿಗೆ ತಗುಲಿದ ಅನ್ನ, ಕಾಲಿನಿಂದ ದಾಟಿದ ಅನ್ನ - ಇವುಗಳು ರಾಕ್ಷಸರಿಂದ ತಿನ್ನಲು ಯೋಗ್ಯವಾಗಿವೆ. ಇಂತಹ ಅನ್ನವನ್ನು ವರ್ಜಿಸಬೇಕು.

ರಾಕ್ಷಸೋಚ್ಛಿಷ್ಟಭುಗ್ ವಿಪ್ರಃ ಸಪ್ತ ಪೂರ್ವಾನ್ ಪರಾನಪಿ ।
ತಸ್ಯ ನಶ್ಯತಿ ತತ್ ಸರ್ವಂ ದುಃಸ್ವಪ್ನಂ ಚ ವಿನಶ್ಯತಿ ॥೨೫॥

ರಾಕ್ಷಸರ ಉಚ್ಛಿಷ್ಟವನ್ನು ತಿಂದ ಬ್ರಾಹ್ಮಣನು ಹಿಂದಿನ ಏಳು ತಲೆಗಳನ್ನು, ಮುಂದಿನ ಏಳು ತಲೆಗಳನ್ನು ನಾಶ ಮಾಡುತ್ತಾನೆ. ಇಂತಹ ಅನ್ನವನ್ನು ತಿಂದವರಿಗೆ ಕೆಟ್ಟ ಕನಸುಗಳೂ, ನಾಶವೂ ಉಂಟಾಗುತ್ತದೆ.

ತಿಲಾಃ ಪವಿತ್ರಾಃ ಪಾಪಘ್ನಾ ನಾರಾಯಣಸಮುದ್ಭವಾಃ ।
ತಿಲಾನ್ ಶ್ರಾದ್ಧೇ ಪ್ರಶಂಸಂತಿ ದಾನಮೇತದನುತ್ತಮಮ್ ॥೨೬॥

ಎಳ್ಳುಗಳು ಪವಿತ್ರವಾದವುಗಳು. ಪಾಪವನ್ನು ನಾಶಮಾಡುವುಗಳು. ನಾರಾಯಣನಿಂದ ಉತ್ಪನ್ನವಾದವುಗಳು. ಆದ್ದರಿಂದ ಶ್ರಾದ್ಧದಲ್ಲಿ ತಿಲದಾನವನ್ನು ಅತಿಶ್ರೇಷ್ಠ ದಾನವೆನ್ನುತ್ತಾರೆ.

ತಿಲಾನ್ ದದ್ಯಾತ್ ತಿಲಾನ್ ಭಕ್ಷ್ಯಾತ್ ತಿಲಾನ್ ಪ್ರಾತರುಪಸ್ಪೃಶೇತ್ ।
ತಿಲಂ ತಿಲಮಿತಿ ಬ್ರೂಯಾತ್ ತಿಲಾಃ ಪಾಪಹರಾ ಹಿ ತೇ ॥೨೭॥

ಎಳ್ಳುಗಳನ್ನು ದಾನ ಮಾಡಬೇಕು. ಎಳ್ಳಿನ ಭಕ್ಷ್ಯವನ್ನು ತಿನ್ನಬೇಕು. ಬೆಳಿಗ್ಗೆ ಸಮಯದಲ್ಲಿ ಎಳ್ಳನ್ನು ಮುಟ್ಟಬೇಕು. ಯಾವಾಗಲೂ ತಿಲ, ತಿಲ ಎನ್ನಬೇಕು. ಕಾರಣವೇನೆಂದರೆ ಸಮಸ್ತ ಪಾಪಗಳನ್ನು ತಿಲಗಳು ಪರಿಹರಿಸುತ್ತವೆ.

ಕ್ರೀತಾಃ ಪ್ರತಿಗೃಹೀತಾ ವಾ ನ ವಿಕ್ರೇಯಾ ದ್ವಿಜಾತಿಭಿಃ ॥೨೮॥

ಬ್ರಾಹ್ಮಣರು ಎಳ್ಳನ್ನು ಕೊಂಡುಕೊಳ್ಳಬಹುದು, ದಾನವನ್ನು ಸ್ವೀಕರಿಸಬಹುದು, ಆದರೆ ಎಂದೂ ಮಾರಾಟ ಮಾಡಬಾರದು.

(ಭೋಜನಾಭ್ಯಂಜನಾದ್ ದಾನಾದ್ ಯೋನ್ಯತ್ತು ಕುರುತೇ ತಿಲೈಃ ।
ಕ್ರಿಮಿರ್ಭೂತ್ವಾ ಶ್ವವಿಷ್ಠಾಯಾಂ ಪಿತೃಭಿಃ ಸಹ ಮಜ್ಜತಿ ॥೨೯॥

ತಿಲಗಳನ್ನು ಊಟಕ್ಕೆ, ಅಭ್ಯಂಜನಕ್ಕೆ, ದಾನಕ್ಕೆ ಉಪಯೋಗಿಸಿಕೊಳ್ಳಬೇಕು. ಬೇರೆ ಕರ್ಮಗಳಿಗೆ ಉಪಯೋಗಿಸಿಕೊಂಡರೆ ನಾಯಿಯ ಮಲದಲ್ಲಿ ಕ್ರಿಮಿಯಾಗಿ, ಪಿತೃಗಳಿಂದ ಸಹಿತನಾಗಿ ಮುಳುಗಿಹೋಗುತ್ತಾನೆ.

ತಿಲಾನ್ ನ ಪೀಡಯೇದ್ ವಿಪ್ರೋ ಯಂತ್ರಚಕ್ರೇ ಸ್ವಯಂ ನೃಪ ।
ಪೀಡಯನ್ ಹಿ ದ್ವಿಜೋ ಮೋಹಾನ್ನರಕಂ ಯಾತಿ ರೌರವಮ್ ॥೩೦॥

ಬ್ರಾಹ್ಮಣನು ಎಳ್ಳನ್ನು ಗಾಣಕ್ಕೆ ಹಾಕಿ ತಾನೇ ಅರಿಯಬಾರದು. ಮೋಹದಿಂದ ಬ್ರಾಹ್ಮಣನು ಎಳ್ಳನ್ನು ಅರೆದರೆ ರೌರವ ನರಕಕ್ಕೆ ಹೋಗುತ್ತಾನೆ.

ಇಕ್ಷುವಂಶೋದ್ಭವಃ ಸೋಮಃ ಸೋಮವಂಶೋದ್ಭವೋ ದ್ವಿಜಃ ।
ಇಕ್ಷೂನ್ ನ ಘಾತಯೇತ್ ತಸ್ಮಾದ್ ಇಕ್ಷುಘಾತ್ಯಾತ್ಮಘಾತಕಃ ॥೩೧॥

ಸೋಮನು (ಚಂದ್ರ) ಕಬ್ಬಿನ ಜಲ್ಲೆಯಲ್ಲಿ ಹುಟ್ಟಿದವನು. ಬ್ರಾಹ್ಮಣರು ಸೋಮನ ವಂಶದವರು. ಆದ್ದರಿಂದ ಬ್ರಾಹ್ಮಣನು ಕಬ್ಬನ್ನು ಗಾಣದಲ್ಲಿ ಅರೆಯಬಾರದು. ಕಬ್ಬನ್ನು ಗಾಣದಲ್ಲಿ ಅರೆದರೆ ಆತ್ಮಘಾತುಕನೆನಿಸುತ್ತಾನೆ.

ಇಕ್ಷುದಂಡಸಹಸ್ರಾಣಾಮೇಕೈಕೇನ ಯುಧಿಷ್ಠಿರ ।
ಬ್ರಹ್ಮಹತ್ಯಾಮವಾಪ್ನೋತಿ ಬ್ರಾಹ್ಮಣೋ ಯಂತ್ರಪೀಡಕಃ ॥೩೨॥)

ಒಂದೊಂದು ಕಬ್ಬಿನ ಜಲ್ಲೆಗಳನ್ನು ಗಾಣದಲ್ಲಿ ಅರೆದಾಗಲೂ ಯಂತ್ರದಿಂದ ಕಬ್ಬನ್ನು ಅರೆದ ಬ್ರಾಹ್ಮಣನು ಸಾವಿರ ಬ್ರಹ್ಮಹತ್ಯೆಯ ಪಾಪವನ್ನು ಹೊಂದುತ್ತಾನೆ.

ತಸ್ಮಾನ್ನ ಪೀಡಯೇದಿಕ್ಷೂನ್ ಯಂತ್ರಚಕ್ರೇ ದ್ವಿಜೋತ್ತಮಃ ॥೩೩॥

ಆದ್ದರಿಂದ ಕಬ್ಬಿನ ಜಲ್ಲೆಗಳನ್ನು ಬ್ರಾಹ್ಮಣನು ಎಂದಿಗೂ ಅರೆಯಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ತೃಣಮುಷ್ಟಿತಿಲೇಕ್ಷುದಂಡದಾನಕಥನಂ ನಾಮ ನವಾಧಿಕಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನಿಗೆ ಆಪದ್ಧರ್ಮಗಳನ್ನು ಹೇಳಿದುದು. ಪ್ರಶಸ್ತ-ಅಪ್ರಶಸ್ತ ಬ್ರಾಹ್ಮಣರ ಲಕ್ಷಣಗಳನ್ನು ಹೇಳಿದುದು. ಸಾಮಾನ್ಯವಾಗಿ ನಾನಾ ಧರ್ಮಗಳನ್ನು ಹೇಳುವ ಮೂಲಕ ಬ್ರಾಹ್ಮಣ್ಯ ಸಿದ್ಧಿಯ ಪ್ರಕಾರವನ್ನು ನಿರೂಪಿಸಿದುದು. ಗುರು-ಆಚಾರ್ಯ-ಉಪಾಧ್ಯಾಯರ ಲಕ್ಷಣಗಳನ್ನು ಹೇಳಿದುದು.

ಯುಧಿಷ್ಠಿರಃ

ಸಮುಚ್ಚಯಂ ತು ಧರ್ಮಾಣಾಂ ಭೋಜ್ಯಾಭೋಜ್ಯಂ ಚ ಕೇಶವ ।
ಶ್ರುತಂ ಮಯಾ ತತ್ತ್ವತಸ್ತಾದಾದ್ ಆಪದ್ಧರ್ಮಂ ಬ್ರವೀಹಿ ಮೇ ॥೧॥

ಯುಧಿಷ್ಠಿರ- ಮಾಧವನೇ, ನಿನ್ನಿಂದ ಧರ್ಮಗಳ ವಿಷಯವನ್ನು ಸಂಗ್ರಹವಾಗಿ ಕೇಳಿದ್ದೇನೆ. ಭೋಜನಕ್ಕೆ ಯೋಗ್ಯವಾದ, ಅಯೋಗ್ಯವಾದ ಅನ್ನದ ವಿಷಯವನ್ನೂ

ತಿಳಿದುಕೊಂಡಿದ್ದೇನೆ. ಇನ್ನು ಮುಂದೆ ನನಗೆ ಆಪದ್ಧರ್ಮದ ವಿಷಯವನ್ನು ವಿಷದವಾಗಿ ತಿಳಿಸಿಕೊಡು.

ಶ್ರೀಭಗವಾನ್

ದುರ್ಭಿಕ್ಷೇ ರಾಷ್ಟ್ರಸಮ್ಭೇದೇ ತ್ವಾಶೌಚೇ ಮೃತಸೂತಕೇ ।
ಘರ್ಮಕಾಲೇऽಧ್ವನಿ ತಥಾ ನಿಯಮೋ ಯೇನ ಲುಪ್ಯತೇ ॥೨॥

ಶ್ರೀಭಗವಾನ್– ಧರ್ಮಜನೇ, ದುರ್ಭಿಕ್ಷೆಯಲ್ಲಿ, ದೇಶಕ್ಕೆ ಯಾವುದಾದರೂ ವಿಪತ್ತು ಒದಗಿಬಂದಾಗ, ಜಾತಾಶೌಚ, ಮೃತಾಶೌಚಗಳಲ್ಲಿ, ಬೇಸಿಗೆಯಲ್ಲಿ, ದಾರಿಯಲ್ಲಿ ಪ್ರಯಾಣ ಮಾಡಬೇಕಾದ ಸಂದರ್ಭವು ಒದಗಿ ಬಂದಾಗ ಬ್ರಾಹ್ಮಣನ ನಿಯಮಗಳು ಸಹಜವಾಗಿ ಲೋಪವಾಗುತ್ತವೆ.

ದೂರಾಧ್ವಗಮನಾದ್ ಖಿನ್ನೋ ದ್ವಿಜಾಲಾಭೇऽಥ ಶೂದ್ರತಃ ।
ಅಕೃತಾನ್ನಂ ತು ಯತ್ ಕಿಂಚಿದ್ ಗೃಹ್ಣೀಯಾದಾತ್ಮವೃತ್ತಯೇ ॥೩॥

ಬಹಳ ದೂರ ಪ್ರಯಾಣ ಮಾಡಿ ಆಯಾಸಗೊಂಡಾಗ ಬ್ರಾಹ್ಮಣನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಸಿಕ್ಕದಿದ್ದಾಗ ಶೂದ್ರನಿಂದಲಾದರೂ ಬೇಯಿಸದೆ ಇರುವ ಆಹಾರವನ್ನು ಜೀವಿಕೆಗಾಗಿ ಸ್ವಲ್ಪ ಪ್ರಮಾಣದಲ್ಲಿ ಸ್ವೀಕರಿಸಬಹುದು.

ಆತುರೋ ದುಃಖಿತೋ ವಾऽಪಿ ಭಯಾರ್ತೋ ವಾ ಬುಭುಕ್ಷಿತಃ ।
ಭುಂಜನ್ನವಿಧಿನಾ ವಿಪ್ರಃ ಪ್ರಾಯಶ್ಚಿತ್ತೀಯತೇ ನ ಚ ॥೪॥

ರೋಗಿಯಾದ, ದುಃಖಿತನಾಗಿರುವ, ಆರ್ತನಾದ, ಹಸಿದಿರುವ ಬ್ರಾಹ್ಮಣನು ವಿಧಿ ನಿಯಮಗಳನ್ನು ಉಲ್ಲಂಘಿಸಿ ಊಟ ಮಾಡಿದಲ್ಲಿ ಆಪತ್ಕಾಲದಲ್ಲಿ ಪ್ರಾಯಶ್ಚಿತ್ತದ ಅವಶ್ಯಕತೆಯು ಇರುವುದಿಲ್ಲ.

ನಿಮಂತ್ರಿತಸ್ತು ಯೋ ವಿಪ್ರೋ ವಿಧಿವದ್ಧವ್ಯಕವ್ಯಯೋಃ ।
ಮಾಂಸಾದೀನ್ಯಪಿ ಭುಂಜಾನಃ ಪ್ರಾಯಶ್ಚಿತ್ತೀಯತೇ ನ ಚ ॥೫॥

ಯಾವ ಬ್ರಾಹ್ಮಣನು ವಿಧಿವತ್ತಾಗಿ ಹವ್ಯ-ಕವ್ಯಗಳಿಗೆ ನಿಮಂತ್ರಿತನಾಗಿರುತ್ತಾನೋ ಅವನು ವಿಧಿವತ್ತಾಗಿ ಸಮರ್ಪಿಸಿದ ಮಾಂಸವನ್ನು ಭುಂಜಿಸಿದರೂ ಪ್ರಾಯಶ್ಚಿತ್ತವು ಬೇಕಾಗುವುದಿಲ್ಲ.

ವ್ಯಾಖ್ಯಾನ ವಿಶೇಷ– ಯುಗಧರ್ಮಾನುಸಾರವಾಗಿ ಬ್ರಾಹ್ಮಣರು ಶ್ರಾದ್ಧಾದಿಗಳಲ್ಲಿ ವಿಹಿತವಾದ ಮಾಂಸಭೋಜನವನ್ನು ಮಾಡುತ್ತಿದ್ದರು. ಕಲಿಯುಗದಲ್ಲಿದು ನಿಷಿದ್ಧವಾಗಿದೆ.

ಅಷ್ಟೌ ತಾನ್ಯವ್ರತಘ್ನಾನಿ ಆಪೋ ಮೂಲಂ ಘೃತಂ ಪಯಃ ।
ಹವಿರ್ಬ್ರಾಹ್ಮಣಕಾಮ್ಯಾ ಚ ಗುರೋರ್ವಚನಮೌಷಧಮ್ ॥೬॥

ಎಂಟು ಪದಾರ್ಥಗಳು ವ್ರತಕ್ಕೆ ವಿಘ್ನವುಂಟು ಮಾಡುವುದಿಲ್ಲ ಎನ್ನುತ್ತಾರೆ. ನೀರು, ಗೆಡ್ಡೆಗೆಣಸು, ತುಪ್ಪ, ಹಾಲು, ಹವಿಸ್ಸು ಬ್ರಾಹ್ಮಣನ ಇಚ್ಛೆಯನ್ನು ಪೂರ್ಣಗೊಳಿಸುವುದು, ಗುರುವಿನ ಆಜ್ಞಾಪರಿಪಾಲನೆ, ಔಷಧಿಸೇವನೆ- ಇವುಗಳು ವ್ರತವಿಘ್ನಕಾರಿಗಳಲ್ಲ.

ಅಶಕ್ತೋ ವಿಧಿವತ್ ಕರ್ತುಂ ಪ್ರಾಯಶ್ಚಿತ್ತಾನಿ ಯೋ ನರಃ ।
ವಿದುಷಾಂ ವಚನೇನಾಪಿ ದಾನೇನಾಪಿ ವಿಶುದ್ಧ್ಯತಿ ॥೭॥

ವಿಧಿವತ್ತಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಲು ಶಕ್ತಿ ಇಲ್ಲದ ವ್ಯಕ್ತಿಯು ವಿದ್ವಾಂಸರ ಮಾತಿನಂತೆ, ಅವರು ಹೇಳಿದಂತೆ ನಡೆಯುವುದು, ಅವರಿಗೆ ದಾನ ಮಾಡುವುದರಿಂದಲೂ ಶುದ್ಧನಾಗುತ್ತಾನೆ.

ಅನೃತಾವೃತುಕಾಲೇ ವಾ ದಿವಾ ರಾತ್ರೌ ತಥಾಽಪಿ ವಾ ।
ಪ್ರೋಷಿತಸ್ತು ಸ್ತ್ರಿಯಂ ಗಚ್ಛೇತ್ ಪ್ರಾಯಶ್ಚಿತ್ತೀಯತೇ ನ ಚ ॥೮॥

ಬೇರೆ ಪ್ರದೇಶದಲ್ಲಿ ಪತಿಯು ಸಂಚರಿಸುತ್ತಾ, ತನ್ನ ಮನೆಗೆ ಆಗಮಿಸಿದಾಗ ಆ ಪತಿಯು ಬೇರೆ ಸಮಯದಲ್ಲಾಗಲಿ, ಹಗಲಿನಲ್ಲಾಗಲಿ, ರಾತ್ರಿಯಲ್ಲಾಗಲಿ ಭಾರ್ಯೆಯೊಡನೆ ಸಮಾಗಮವನ್ನು ಮಾಡಬಹುದು. ಅದಕ್ಕೆ ಪ್ರಾಯಶ್ಚಿತ್ತವು ಬೇಕಾಗಿಲ್ಲ.

ಯುಧಿಷ್ಠಿರಃ

ಪ್ರಶಸ್ಯಾಃ ಕೀದೃಶಾ ವಿಪ್ರಾ ನಿಂದ್ಯಾಶ್ಚಾಪಿ ಸುರೇಶ್ವರ ।
ಅಷ್ಟಕಾಯಾಶ್ಚ ಕಃ ಕಾಲಸ್ತನ್ಮೇ ಕಥಯ ಸುವ್ರತ ॥೯॥

ಯುಧಿಷ್ಠಿರ– ಮಾಧವನೇ, ಯಾವ ಬ್ರಾಹ್ಮಣರು ಪ್ರಶಂಸೆಗೆ ಅರ್ಹರು? ನಿಂದ್ಯರು ಯಾರು? ಮಹಾಲಯ ಶ್ರಾದ್ಧಕ್ಕೆ ಸರಿಯಾದ ಕಾಲವು ಯಾವುದು? ಇವುಗಳನ್ನು ಹೇಳುವ ಕೃಪೆದೋರು.

ಶ್ರೀಭಗವಾನ್

ಸತ್ಯಸಂಧಂ ದ್ವಿಜಂ ದೃಷ್ಟ್ವಾ ಸ್ಥಾನಾದ್ವೇಪತಿ ಭಾಸ್ಕರಃ ।
ಏಷ ಮೇ ಮಂಡಲಂ ಭಿತ್ತ್ವಾ ಯಾತಿ ಬ್ರಹ್ಮ ಸನಾತನಮ್ ॥೧೦॥

ಶ್ರೀಭಗವಾನ್– ಸತ್ಯಸಂಧನಾದ ಬ್ರಾಹ್ಮಣನನ್ನು ಕಂಡ ಸೂರ್ಯನು, ತನ್ನ ಸ್ಥಾನದಿಂದ ಭಯಪಡುತ್ತಾನೆ. ಈ ಬ್ರಾಹ್ಮಣನು ಸೂರ್ಯಮಂಡಲವನ್ನೂ ಭೇದಿಸಿಕೊಂಡು ಪರಬ್ರಹ್ಮನನ್ನು ಸೇರುವ ಅರ್ಹತೆಯುಳ್ಳವನು ಎಂದು ಗೌರವಿಸುತ್ತಾನೆ.

ಕುಲೀನಃ ಕರ್ಮಕೃದ್ ವೈದ್ಯಸ್ತಥಾ ಚಾಪ್ಯಾನೃಶಂಸ್ಯವಾನ್ ।
ಹ್ರೀಮಾನ್ ಋಜುಃಸತ್ಯವಾದೀ ಪಾತ್ರಂ ಸರ್ವ ಇಮೇ ದ್ವಿಜಾಃ ॥೧೧॥

ಉತ್ತಮ ಕುಲದಲ್ಲಿ ಹುಟ್ಟಿದವನು, ಶಾಸ್ತ್ರೋಕ್ತ ಕರ್ಮಗಳನ್ನು ಅನುಸರಿಸುವವನು, ವಿದ್ವಾಂಸನು, ದಯಾಳುವು, ತೇಜಸ್ವಿಯು, ಋಜುಸ್ವಭಾವದವನು, ಸತ್ಯವಾದಿಯು - ಇವರೆಲ್ಲರೂ ಪಾತ್ರರಾದ ಬ್ರಾಹ್ಮಣರು ಎನಿಸುತ್ತಾರೆ.

ಏತೇ ಚಾಗ್ರಾಸನಸ್ಥಾಸ್ತೇ ಭುಂಜಾನಾಃ ಪ್ರಥಮಂ ದ್ವಿಜಾಃ ।
ತಸ್ಯಾಂ ಪಂಕ್ತ್ಯಾಂ ಚ ಯೇ ಚಾನ್ಯೇ ತಾನ್ ಪುನನ್ತ್ಯೇವ ದರ್ಶನಾತ್ ॥

ಇಂತಹ ಬ್ರಾಹ್ಮಣರು ಪಂಕ್ತಿಯ ಮೊದಲಲ್ಲಿ ಕುಳಿತು ಎಲ್ಲರಿಗಿಂತಲೂ ಮೊದಲು ಊಟಮಾಡಲು ಅರ್ಹರಾಗಿರುತ್ತಾರೆ. ಇವರು ತಮ್ಮ ಸಾಲಿನಲ್ಲಿ ಕುಳಿತಿರುವ ಎಲ್ಲ ಪಂಕ್ತಿಗಳನ್ನು ದೃಷ್ಟಿಯಿಂದಲೇ ಪವಿತ್ರಗೊಳಿಸುತ್ತಾರೆ.

ಮದ್ಭಕ್ತಾ ಯೇ ದ್ವಿಜಶ್ರೇಷ್ಠಾ ಮದ್ಗತಾ ಮತ್ಪರಾಯಣಾಃ ।
ತಾನ್ ಪಂಕ್ತಿಪಾವನಾನ್ ವಿದ್ಧಿ ಪೂಜ್ಯಾಂಶ್ಚೈವ ವಿಶೇಷತಃ ॥೧೩॥

ಯಾವ ಬ್ರಾಹ್ಮಣಶ್ರೇಷ್ಠರು ಮನಸ್ಸನ್ನು ನನ್ನಲ್ಲೇ ನೆಲೆಗೊಳಿಸಿ, ನನ್ನನ್ನೇ ಆಶ್ರಯವನ್ನಾಗಿ ತಿಳಿದು ನನ್ನ ಭಕ್ತರಾಗಿರುತ್ತಾರೋ ಅವರು ಪಂಕ್ತಿಪಾವನರು. ಅಂತಹವರು ವಿಶೇಷವಾಗಿ ಪೂಜಾ, ಸತ್ಕಾರಗಳಿಗೆ ಅರ್ಹರಾಗಿರುತ್ತಾರೆ.

ನಿಂದ್ಯಾನ್ ಶೃಣು ದ್ವಿಜಾನ್ ರಾಜನ್ನಪಿ ವಾ ವೇದಪಾರಗಾನ್ ।
ಬ್ರಾಹ್ಮಣಚ್ಛದ್ಮನಾ ಲೋಕೇ ಚರತಃ ಪಾಪಕಾರಿಣಃ ॥೧೪॥

ಯುಧಿಷ್ಠಿರನೇ, ಇನ್ನು ಮುಂದೆ ನಿಂದ್ಯರಾದ ಬ್ರಾಹ್ಮಣರು ಯಾರೆಂದು ಹೇಳುತ್ತೇನೆ. ಯಾರು ಈ ಲೋಕದಲ್ಲಿ ಇತರರನ್ನು ವಂಚಿಸುತ್ತಾ ಕಾಲ ಕಳೆಯುತ್ತಾರೋ ಅವರು ವೇದಪಾರಂಗತರಾಗಿದ್ದರೂ ಪಾಪಿಷ್ಠರೇ ಸರಿ.

ಅನಗ್ನಿರನಧೀಯಾನಃ ಪ್ರತಿಗ್ರಹರುಚಿಸ್ತು ಯಃ ।
ಯತ್ರ ಕುತ್ರ ತು ಭುಂಜಾನಸ್ತಂ ವಿದ್ಯಾತ್ ಪಂಕ್ತಿದೂಷಕಮ್ ॥೧೫॥

ಅಗ್ನಿಹೋತ್ರವನ್ನು ಮಾಡದವನು, ಅಧ್ಯಯನ ಮಾಡದವನು, ದಾನ ತೆಗೆದುಕೊಳ್ಳುವುದರಲ್ಲೇ ಆಸಕ್ತನಾದವನು, ಸಿಕ್ಕಿದ ಕಡೆ ತಿನ್ನುವವನು- ಇಂತಹವನನ್ನು ದೂಷ್ಯನಾದ ಬ್ರಾಹ್ಮಣನೆಂದು ತಿಳಿ.

ಮೃತಸೂತಕಪುಷ್ಟಾಂಗೋ ಯಶ್ಚ ಶೂದ್ರಾನ್ನಭುಗ್ ದ್ವಿಜಃ ॥೧೬॥

ಯಾವನ ಶರೀರವು ಜಾತಾಶೌಚ, ಮೃತಾಶೌಚ ಅನ್ನವನ್ನು ಊಟಮಾಡಿ ಪುಷ್ಟವಾಗಿರುವುದೋ, ಶೂದ್ರಾನ್ನವನ್ನು ತಿನ್ನುತ್ತಾನೋ,

(ಅಸೂಯಾಲುರ್ದಂಭಪರೋ ಮಹಾನಹಮಿತಿ ಬ್ರುವನ್ ।)
ಅಹಂ ಚಾಪಿ ನ ಜಾನಾಮಿ ಗತಿಂ ತಸ್ಯ ನರಾಧಿಪ ॥೧೭॥

ಹೊಟ್ಟೆಕಿಚ್ಚಿನ ಭಾವನೆಯುಳ್ಳವನೋ, ತಾನೇ ಶ್ರೇಷ್ಠನೆಂದು ಭಾವಿಸಿದ್ದಾನೋ, ಅಂತಹ ವ್ಯಕ್ತಿಗೆ ಎಂತಹ ಗತಿಯು ಲಭಿಸುತ್ತದೆ ಎಂದು ನನಗೂ ತಿಳಿಯದು.

ಶೂದ್ರಾನ್ನರಸಪುಷ್ಟಾಂಗೋಽಪ್ಯಧೀಯಾನೋ ಹಿ ನಿತ್ಯಶಃ ।
ಜಪತೋ ಜುಹ್ವತಶ್ಚಾಪಿ ಗತಿರೂರ್ಧ್ವಾ ನ ವಿದ್ಯತೇ ॥೧೮॥

ಶೂದ್ರಾನ್ನ ರಸದಿಂದ ಕೊಬ್ಬಿದ ದೇಹವುಳ್ಳ ಬ್ರಾಹ್ಮಣನು ನಿತ್ಯವೂ ಅಧ್ಯಯನ ಶೀಲನಾಗಿದ್ದರೂ, ಜಪಶೀಲನಾಗಿದ್ದರೂ, ಯಜ್ಞ-ಯಾಗಗಳನ್ನು ನಡೆಸುತ್ತಿದ್ದರೂ ಅವನಿಗೆ ಊರ್ಧ್ವಗತಿಯು ಲಭಿಸುವುದಿಲ್ಲ.

ಆಹಿತಾಗ್ನಿಶ್ಚ ಯೋ ವಿಪ್ರಃ ಶೂದ್ರಾನ್ನಾನ್ನ ನಿವರ್ತತೇ ।
ಪಂಚ ತಸ್ಯ ಪ್ರಣಶ್ಯಂತಿ ಆತ್ಮಾ ಬ್ರಹ್ಮ ತ್ರಯೋಽಗ್ನಯಃ ॥೧೯॥

ಬ್ರಾಹ್ಮಣನು ನಿತ್ಯಾಗ್ನಿಹೋತ್ರಿಯಾಗಿದ್ದರೂ, ಶೂದ್ರಾನ್ನವನ್ನು ನಿರಂತರ ಭೋಜನ ಮಾಡುತ್ತಿದ್ದರೆ, ಅಂತಹವನ ಆತ್ಮಜ್ಞಾನವು, ವೇದಾಧ್ಯಯನದ ಫಲವು ಮತ್ತು ಮೂರು ಅಗ್ನಿಗಳು ನಾಶ ಹೊಂದುತ್ತವೆ.

ಶೂದ್ರಪ್ರೇಷಣಕರ್ತುಶ್ಚ ಬ್ರಾಹ್ಮಣಸ್ಯ ವಿಶೇಷತಃ ।
ಭೂಮ್ಯಾಮನ್ನಂ ಪ್ರದಾತವ್ಯಂ ಶ್ವಸೃಗಾಲಸಮೋ ಹಿ ಸಃ ॥೨೦॥

ಶೂದ್ರನ ಸೇವೆಯನ್ನು ಮಾಡುವ ಬ್ರಾಹ್ಮಣನಿಗೆ ನೆಲದ ಮೇಲೆ ಅನ್ನವನ್ನು ಬಡಿಸಬೇಕು. ಕಾರಣ ಅವನು ನಾಯಿ, ನರಿಗಳಿಗೆ ಸಮಾನನಾದವನು.

ಪ್ರೇತಭೂತಂ ತು ಯಃ ಶೂದ್ರಂ ಬ್ರಾಹ್ಮಣೋ ಜ್ಞಾನದುರ್ಬಲಃ ।
ಅನುಗಚ್ಛೇನ್ನೀಯಮಾನಂ ತ್ರಿರಾತ್ರಮಶುಚಿರ್ಭವೇತ್ ॥೨೧॥

ಅಜ್ಞಾನಿಯಾದ ಬ್ರಾಹ್ಮಣನು, ಮರಣ ಹೊಂದಿದ ಶೂದ್ರನನ್ನು ಸ್ಮಶಾನಕ್ಕೆ ಒಯ್ಯುವಾಗ ಅವನನ್ನು ಅನುಸರಿಸಿ ಹೋದರೆ ಮೂರು ರಾತ್ರಿಗಳು ಅಶೌಚವಿರಬೇಕು.

ತ್ರಿರಾತ್ರೇ ತು ತತಃ ಪೂರ್ಣೇ ನದೀಂ ಗತ್ವಾ ಸಮುದ್ರಗಾಮ್ ।
ಪ್ರಾಣಾಯಾಮಶತಂ ಕೃತ್ವಾ ಘೃತಂ ಪ್ರಾಶ್ಯ ವಿಶುದ್ಧ್ಯತಿ ॥೨೨॥

ಮೂರುರಾತ್ರಿಗಳು ಕಳೆದ ಬಳಿಕ ಸಮುದ್ರಗಳನ್ನು ಸೇರುವ ನದಿಯಲ್ಲಿ ಸ್ನಾನ ಮಾಡಿ, ನೂರು ಪ್ರಾಣಾಯಾಮಗಳನ್ನು ಮಾಡಿ ತುಪ್ಪ ಕುಡಿಯುವುದರಿಂದ ಶುದ್ಧನಾಗುತ್ತಾನೆ.

ಅನಾಥಂ ಬ್ರಾಹ್ಮಣಂ ಪ್ರೇತಂ ಯೇ ವಹಂತಿ ದ್ವಿಜೋತ್ತಮಾಃ ।
ಪದೇ ಪದೇऽಶ್ವಮೇಧಸ್ಯ ಫಲಂ ತೇ ಪ್ರಾಪ್ನುವಂತಿ ಹಿ ॥೨೩॥

ಯಾವ ಶ್ರೇಷ್ಠರಾದ ಬ್ರಾಹ್ಮಣರು ಅನಾಥ ಬ್ರಾಹ್ಮಣನ ಶವವನ್ನು ಸ್ಮಶಾನ ಭೂಮಿಗೆ ಹೊತ್ತುಯ್ಯುವರೋ ಅವರು ಇಡುವ ಪ್ರತಿ ಹೆಜ್ಜೆಯು ಅಶ್ವಮೇಧದ ಫಲವನ್ನು ನೀಡುತ್ತದೆ.

ನ ತೇಷಾಮಶುಭಂ ಕಿಂಚಿತ್ ಪಾಪಂ ವಾ ಶುಭಕರ್ಮಣಾಮ್ ।
ಜಲಾವಗಾಹನಾದೇವ ಸದ್ಯಃ ಶೌಚಂ ವಿಧೀಯತೇ ॥೨೪॥

ಅನಾಥ ಬ್ರಾಹ್ಮಣನ ಶವ ಹೊತ್ತು ಒಯ್ದ ಅವರಿಗೆ ಶುಭಕರ್ಮಿಗಳೆಂದು ಶಾಸ್ತ್ರವು ಕರೆದಿದೆ. ಆ ಬ್ರಾಹ್ಮಣರಿಗೆ ಅಶುಭವಾಗಲಿ, ಪಾಪವಾಗಲಿ ಉಂಟಾಗುವುದಿಲ್ಲ. ಸ್ನಾನ ಮಾಡಿದ ಕೂಡಲೇ ಶುದ್ಧಿಯನ್ನು ಹೊಂದುತ್ತಾರೆ.

ಶೂದ್ರವೇಶ್ಮನಿ ವಿಪ್ರೇಣ ಕ್ಷೀರಂ ವಾ ಯದಿ ವಾ ದಧಿ ।
ನಿರ್ವ್ಯತೇನ ನ ಭೋಕ್ತವ್ಯಂ ವಿದ್ಧಿ ಶೂದ್ರಾನ್ನಮೇವ ತತ್ ॥೨೫॥

ನಿವೃತ್ತಿಮಾರ್ಗದಲ್ಲಿ ನಿರತನಾದ ಸಂನ್ಯಾಸಿಯು ಶೂದ್ರನ ಮನೆಯಲ್ಲಿ ಹಾಲನ್ನಾಗಲಿ, ಮೊಸರನ್ನಾಗಲಿ ಸೇವಿಸಬಾರದು. ಅವುಗಳು ಶೂದ್ರಾನ್ನವೆಂದೇ ತಿಳಿಯಬೇಕು.

ವಿಪ್ರಾಣಾಂ ಭೋಕ್ತುಕಾಮಾನಾಮತ್ಯಂತಂ ಚಾನ್ನಕಾಂಕ್ಷಯಾ ।
ಯೋ ವಿಘ್ನಂ ಕುರುತೇ ಮರ್ತ್ಯಸ್ತತೋ ನಾನ್ಯೋಽಸ್ತಿ ಪಾಪಕೃತ್ ॥೨೬॥

ಬಹಳ ಹಸಿದಿರುವ, ಅನ್ನದ ಆಕಾಂಕ್ಷೆಯುಳ್ಳ ಬ್ರಾಹ್ಮಣನ ಭೋಜನಕ್ಕೆ ಯಾವನು ವಿಘ್ನವನ್ನುಂಟು ಮಾಡುತ್ತಾನೋ ಅವರಿಗಿಂತ ಪಾಪಿಷ್ಟನು ಜಗತ್ತಿನಲ್ಲಿ ಬೇರೆ ಯಾರೂ ಇರುವುದಿಲ್ಲ.

ಸರ್ವೇ ಚ ವೇದಾಃ ಸಹ ಷಡ್‌ಭಿರಂಗೈಃ
ಸಾಂಖ್ಯಂ ಪುರಾಣಂ ಚ ಕುಲೇ ಚ ಜನ್ಮ ।
ನೈತಾನಿ ಸರ್ವಾಣಿ ಗತಿರ್ಭವಂತಿ
ಶೀಲವ್ಯಪೇತಸ್ಯ ನೃಪ ದ್ವಿಜಸ್ಯ ॥೨೭॥

ರಾಜನೇ, ಷಡಂಗಗಳಿಂದ ಯುಕ್ತವಾದ ವೇದಗಳು, ಸಾಂಖ್ಯಶಾಸ್ತ್ರ, ಪುರಾಣ, ಸತ್ಕುಲದಲ್ಲಿ ಜನ್ಮ - ಇವೆಲ್ಲವೂ ಒಟ್ಟಾಗಿ ಸೇರಿದರೂ ಶೀಲ-ಸದಾಚಾರಗಳಿಂದ ಬ್ರಾಹ್ಮಣನು ಕೂಡಿರದಿದ್ದರೆ ಅವನಿಗೆ ಇವುಗಳು ಸದ್ಗತಿಯನ್ನು ನೀಡಲಾರವು.

ಗ್ರಹೋಪರಾಗೇ ವಿಷುವೇಽಯನಾಂತೇ
ಪಿತ್ರ್ಯೇ ಮಘಾಸು ಸ್ವಸುತೇ ಚ ಜಾತೇ ।
ಗಯೇಷು ಸರ್ವೇಷು ಚ ಪಾಂಡುಪುತ್ರ
ದತ್ತಂ ಭವೇನ್ನಿಷ್ಕಸಹಸ್ರತುಲ್ಯಮ್ ॥೨೮॥

ಪಾಂಡುಪುತ್ರನೇ, ಗ್ರಹಣ ಸಮಯದಲ್ಲಿ, ವಿಶುವಯೋಗದಲ್ಲಿ, ದಕ್ಷಿಣಾಯನ, ಉತ್ತರಾಯಣ ಪುಣ್ಯಕಾಲಗಳಲ್ಲಿ, ಪಿತೃಕಾರ್ಯಗಳಲ್ಲಿ, ಮಘಾ ನಕ್ಷತ್ರದಲ್ಲಿ, ಮಗನು ಹುಟ್ಟಿದ ಸಮಯದಲ್ಲಿ, ಗಯಾ ಶ್ರಾದ್ಧಾದಿ ಪಿತೃಕರ್ಮವನ್ನು ಮಾಡುವ ಸಮಯದಲ್ಲಿ ಸ್ವಲ್ಪ ದಾನವನ್ನು ಮಾಡಿದರೂ ಒಂದು ಸಾವಿರ ಸುವರ್ಣನಾಣ್ಯಗಳನ್ನು ದಾನ ಮಾಡಿದ್ದಕ್ಕೆ ಸಮಾನವಾಗುತ್ತದೆ.

ವೈಶಾಖಿಮಾಸಸ್ಯ ಚ ಯಾ ತೃತೀಯಾऽ
ನವದ್ಯಾऽಸೌ ಕಾರ್ತಿಕಶುಕ್ಲಪಕ್ಷೇ ।
ನಭಸ್ಯಮಾಸಸ್ಯ ಚ ಕೃಷ್ಣಪಕ್ಷೇ
ತ್ರಯೋದಶೀ ಪಂಚದಶೀ ಚ ಮಾಘೇ ॥೨೯॥

ಉಪಪ್ಲವೇ ಚಂದ್ರಮಸೋ ರವೇಶ್ಚ
ಶ್ರಾದ್ಧಸ್ಯ ಕಾಲೋ ಹ್ಯಯನದ್ವಯೇ ಚ ।
ಪಾನೀಯಮಪ್ಯತ್ರ ತಿಲೈರ್ವಿಮಿಶ್ರಂ
ದದ್ಯಾತ್ ಪಿತೃಭ್ಯಃ ಪ್ರಯತೋ ಮನುಷ್ಯಃ ॥೩೦॥

ವೈಶಾಖ ಮಾಸದ ಶುಕ್ಲಪಕ್ಷದ ತೃತೀಯಾ, ಕಾರ್ತಿಕ ಮಾಸದ ಶುದ್ಧ ತೃತೀಯಾ, ಭಾದ್ರಪದ ಮಾಸದ ಕೃಷ್ಣಪಕ್ಷದ ತ್ರಯೋದಶಿ, ಮಾಘ ಮಾಸದ ಅಮಾವಾಸ್ಯೆ, ಚಂದ್ರ ಸೂರ್ಯರ ಗ್ರಹಣದ ದಿವಸಗಳು, ಉತ್ತರಾಯಣ, ದಕ್ಷಿಣಾಯನ ಪುಣ್ಯಕಾಲಗಳು ಶ್ರಾದ್ಧ ಮಾಡಲು ಶ್ರೇಷ್ಠವಾದ ಕಾಲವಾಗಿವೆ. ಈ ದಿವಸಗಳಲ್ಲಿ ಪಿತೃಗಳನ್ನುದ್ದೇಶಿಸಿ ತಿಲ ಮಿಶ್ರಿತವಾದ ಜಲತರ್ಪಣ ಮಾಡಿದರೂ ಸಹಸ್ರ ವರ್ಷ ಶ್ರಾದ್ಧ ಮಾಡಿದ ಫಲವು ಲಭಿಸುತ್ತದೆ.

ಯಸ್ತ್ವೇಕಪಂಕ್ತ್ಯಾಂ ವಿಷಮಂ ದದಾತಿ
ಸ್ನೇಹಾದ್ ಭಯಾದ್ವಾ ಯದಿ ವಾऽರ್ಥಹೇತೋಃ ।
ಕ್ರೂರಂ ದುರಾಚಾರಮನಾತ್ಮವಂತಂ
ಬ್ರಹ್ಮಘ್ನಮೇನಂ ಮುನಯೋ ವದಂತಿ ॥೩೧॥

ಯಾವ ಮನುಷ್ಯನು ಸ್ನೇಹಭಾವದಿಂದ ಅಥವಾ ಭಯದಿಂದ, ಧನದ ಆಕಾಂಕ್ಷೆಯಿಂದ ಒಂದೇ ಸ್ಥಳದಲ್ಲಿ ಕುಳಿತಿರುವ ಜನರಿಗೆ ಬಡಿಸುತ್ತಾ ಪಂಕ್ತಿಭೇದ

ಮಾಡುತ್ತಾನೋ ಅಂತಹ ಕ್ರೂರನಾದ, ದುರಾಚಾರಿಯಾದ, ಅಜಿತೇಂದ್ರಿಯನಾದ ಮನುಷ್ಯನನ್ನು ಬ್ರಹ್ಮಹತ್ಯೆ ಮಾಡಿದವನೆಂದು ವಿದ್ವಾಂಸರು ಹೇಳುತ್ತಾರೆ.

ಇಹ ಚೈಕಸ್ಯ ನಾಮುತ್ರ ಅಮುತ್ರೈಕಸ್ಯ ನೋ ಇಹ ।
ಇಹ ಚಾಮುತ್ರ ಚೈಕಸ್ಯ ನಾಮುತ್ರೈಕಸ್ಯ ನೋ ಇಹ ॥೩೨॥

ಕೇವಲ ಹೊಟ್ಟೆ ಹೊರೆಯಲು ಬಯಸುವ ವ್ಯಕ್ತಿ ಇಹಲೋಕದಲ್ಲಿ ಸುಖವನ್ನು ಹೊಂದುತ್ತಾನೆ. ಪರಲೋಕದ ಸುಖವನ್ನು ಹೊಂದುವುದಿಲ್ಲ. ಯಾವನು ಪರಲೋಕದ ಸುಖವನ್ನು ಬಯಸುತ್ತಾನೋ ಅವನು ಈ ಲೋಕದಲ್ಲಿ ವಿಧಿ-ನಿಷೇಧಗಳನ್ನು ಅನುಸರಿಸಬೇಕು. ಯಾವನು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಸುಖವನ್ನು ಅನುಭವಿಸಲು ಬಯಸುತ್ತಾನೋ ಅವನು ವಿಧಿ-ನಿಷೇಧಗಳ ಜೊತೆ ತ್ಯಾಗಿಯಾಗಿ, ಉದಾರಿಯಾಗಿ ಬದುಕಬೇಕು. ಯಾವನು ಈ ಲೋಕದ ವಿಧಿ-ನಿಷೇಧಗಳನ್ನೂ ಉಲ್ಲಂಘಿಸುತ್ತಾನೋ, ಪರಲೋಕದ ಚಿಂತೆಯೂ ಇರುವುದಿಲ್ಲವೋ ಅವನು ಉಭಯತ್ರ ದುಃಖಭಾಗಿಯಾಗುತ್ತಾನೆ.

ಧನಾನಿ ಯೇಷಾಂ ವಿಪುಲಾನಿ ಸಂತಿ
ನಿತ್ಯಂ ರಮಂತೇ ಪರಲೋಕಮೂಢಾಃ ।
ತೇಷಾಮಯಂ ಶತ್ರುವರಘ್ನಲೋಕೋ
ನಾನ್ಯತ್ ಸುಖಂ ದೇಹಸುಖೇ ರತಾನಾಮ್ ॥೩೩॥

ಯುಧಿಷ್ಠಿರನೇ, ಯಾರು ವಿಪುಲವಾದ ಹಣವನ್ನು ಹೊಂದಿ ಪರಲೋಕದ ವಿಷಯದಲ್ಲಿ ಮೂರ್ಖರಾಗಿ ಸದಾ ಇಹಲೋಕದ ಸುಖದಲ್ಲೇ ಆಸಕ್ತರಾಗಿರುತ್ತಾರೋ ಅಂತಹ ದೈಹಿಕ ಸುಖದಲ್ಲಿಯೇ ಆಸಕ್ತರಾಗಿರುವವರಿಗೆ ಇಹಲೋಕದ ಸುಖವು ದೊರೆಯಬಹುದು, ಆದರೆ ಪರಲೋಕದ ಸುಖವು ದುರ್ಲಭವಾಗುತ್ತದೆ.

ಯೇ ಯೋಗಯುಕ್ತಾಸ್ತಪಸಿ ಪ್ರಯುಕ್ತಾಃ
ಸ್ವಾಧ್ಯಾಯಶೀಲಾ ಜರಯಂತಿ ದೇಹಮ್ ।
ಜಿತೇಂದ್ರಿಯಾ ಭೂತಹಿತೇ ನಿವಿಷ್ಟಾಃ
ತೇಷಾಮಸೌ ನಾಮ ರಿಪುಘ್ನಲೋಕಃ ॥೩೪॥

ಯಾರು ಯೋಗನಿಷ್ಠರಾಗಿ, ತಪಸ್ಸಿನಲ್ಲಿ ನಿರತರಾಗಿರುತ್ತಾರೋ, ಅಧ್ಯಯನಶೀಲರಾಗಿ ದೇಹವನ್ನು ತೇಯ್ಯುತ್ತಾರೋ, ಜಿತೇಂದ್ರಿಯರಾಗಿರುತ್ತಾರೋ, ಪ್ರಾಣಿಗಳ ಹಿತದಲ್ಲಿ ಆಸಕ್ತರಾಗಿರುತ್ತಾರೋ ಅಂತಹವರು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾರೆ.

ಯೇ ಧರ್ಮಮೇವ ಪ್ರಥಮಂ ಚರಂತಿ
ಧರ್ಮೇಣ ಲಬ್ಧ್ವಾऽಪಿ ಧನಾನಿ ಲೋಕೇ ।
ದಾರಾನವಾಪ್ಯ ಕ್ರತುಭಿರ್ಯಜಂತೇ
ತೇಷಾಮಯಂ ಚೈವ ಪರಶ್ಚ ಲೋಕಃ ॥೩೫॥

ಯಾರು ಧರ್ಮದಿಂದ ಹಣವನ್ನು ಸಂಪಾದಿಸಿ, ಮೊದಲು ಧರ್ಮವನ್ನೇ ಆಚರಿಸುತ್ತಾರೋ, ವಿವಾಹಿತರಾಗಿ ಯಜ್ಞಗಳ ಮೂಲಕ ಭಗವಂತನನ್ನು ಆರಾಧಿಸುತ್ತಾರೋ ಅವರಿಗೆ ಇಹ-ಪರಲೋಕದಲ್ಲಿ ಸುಖವಿದೆ.

ಯೇ ನೈವ ವಿದ್ಯಾಂ ನ ತಪೋ ನ ದಾನಂ
ನ ಚಾಪಿ ಮೂಢಾಃ ಪ್ರಜನೇ ಯತಂತೇ ।
ನ ಚಾಪಿ ಗಚ್ಛಂತಿ ಸುಖಾನಿ ಭೋಗಾಃ
ತೇಷಾಮಯಂ ಚೈವ ಪರಶ್ಚ ನಾಸ್ತಿ ॥೩೬॥

ಯಾವ ಮೂರ್ಖರು ವಿದ್ಯೆಯಿಲ್ಲದೆ, ತಪಸ್ಸಿಲ್ಲದೆ, ದಾನವಿಲ್ಲದೆ, ಶಾಸ್ತ್ರೀಯ ಪದ್ಧತಿಯಲ್ಲಿ ಸಂತಾನ ಪಡೆಯದೆ, ಬೇರೆ ಸುಖೋಪಭೋಗಗಳನ್ನು ಅನುಭವಿಸುವುದಿಲ್ಲವೋ ಅವರಿಗೆ ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಸುಖವು ದೊರೆಯುವುದಿಲ್ಲ.

ಯುಧಿಷ್ಠಿರಃ

ನಾರಾಯಣ ಪುರಾಣೇಶ ಲೋಕಾವಾಸ ನಮೋऽಸ್ತು ತೇ ।
ಶ್ರೋತುಮಿಚ್ಛಾಮಿ ಕಾತ್ಸ್ನ್ಯೇನ ಧರ್ಮಸಾರಸಮುಚ್ಚಯಮ್ ॥೩೭॥

ಯುಧಿಷ್ಠಿರ– ನಾರಾಯಣನೇ, ಪುರಾಣಪುರುಷೋತ್ತಮನೇ, ಜಗದಂತರ್ಯಾಮಿಯೇ, ಶ್ರೀಕೃಷ್ಣನೇ ನಿನಗೆ ನಮಸ್ಕಾರ. ಸಮಸ್ತ ಧರ್ಮಗಳ ಸಾರವನ್ನು ಸಮಗ್ರವಾಗಿ ಕೇಳಲು ಬಯಸುತ್ತೇನೆ.

ಶ್ರೀಭಗವಾನ್

ಧರ್ಮಸಾರಂ ಮಹಾಪ್ರಾಜ್ಞ ಮನುನಾ ಪ್ರೋಕ್ತಮಾದಿತಃ ।
ಪ್ರವಕ್ಷ್ಯಾಮಿ ಮನುಪ್ರೋಕ್ತಂ ಪೌರಾಣಂ ಶ್ರುತಿಸಂಹಿತಮ್ ॥೩೮॥

ಶ್ರೀಭಗವಾನ್– ಮಹಾಪ್ರಾಜ್ಞನೇ, ಮನುವು ಸೃಷ್ಟಿಯ ಪ್ರಾರಂಭದಲ್ಲಿ ಹೇಳಿದ ಧರ್ಮಸಾರವನ್ನು ಮೊದಲಿನಿಂದಲೂ ಹೇಳುತ್ತೇನೆ. ಇದು ತುಂಬಾ ಪ್ರಾಚೀನವಾದುದು, ವೇದಸಮ್ಮತವಾದುದು.

ಅಗ್ನಿಚಿತ್ ಕಪಿಲಾ ಸತ್ರೀ ರಾಜಾ ಭಿಕ್ಷುರ್ಮಹೋದಧಿಃ ।
ದೃಷ್ಟಮಾತ್ರಾಃ ಪುನಂತ್ಯೇತೇ ತಸ್ಮಾತ್ ಪಶ್ಯೇತ ತಾನ್ ಸದಾ ॥೩೯॥

ಅಗ್ನಿಹೋತ್ರವನ್ನು ಮಾಡುವ ಬ್ರಾಹ್ಮಣನು, ಕಪಿಲಾಧೇನು, ಸತ್ರಯಜ್ಞ ಮಾಡುವವನು, ರಾಜನು, ಸಂನ್ಯಾಸಿ, ಮಹಾಸಾಗರ- ಇವು ದರ್ಶನ ಮಾಡುವುದರಿಂದಲೇ ನಮ್ಮನ್ನು ಪವಿತ್ರಗೊಳಿಸುತ್ತವೆ. ಆದ್ದರಿಂದ ಇವುಗಳ ದರ್ಶನ ಮಾಡುತ್ತಿರಬೇಕು.

ಗೌರೇಕಸ್ಯೈವ ದಾತವ್ಯಾ ನ ಬಹೂನಾಂ ಯುಧಿಷ್ಠಿರ ।
ಸಾ ಗೌರ್ವಿಕ್ರಯಮಾಪನ್ನಾ ದಹತ್ಯಾಸಪ್ತಮಂ ಕುಲಮ್ ॥೪೦॥

ಒಂದು ಹಸುವನ್ನು ಒಬ್ಬನಿಗೇ ದಾನ ಮಾಡಬೇಕು. ಒಂದೇ ಹಸುವನ್ನು ಹತ್ತು ಜನರಿಗೆ ದಾನ ಮಾಡಬಾರದು. ದಾನ ಮಾಡಿದ ಹಸುವನ್ನೇ ಹಣ ಕೊಟ್ಟುಕೊಂಡಲ್ಲಿ ಅವನ ಏಳು ತಲೆಯು ಭಸ್ಮವಾಗುತ್ತದೆ.

ಬಹೂನಾಂ ನ ಪ್ರದಾತವ್ಯಾ ಗೌರ್ವಸ್ತ್ರಂ ಶಯನಂ ಸ್ತ್ರಿಯಃ ।
ತಾದೃಗ್ಭೂತಂ ತು ತದ್ದಾನಂ ದಾತಾರಂ ನೋಪತಿಷ್ಠತಿ ॥೪೧॥

ಗೋವನ್ನು, ವಸ್ತ್ರವನ್ನು, ಹಾಸಿಗೆಯನ್ನು, ಸ್ತ್ರೀಯರನ್ನು ಬಹುಮಂದಿಗೆ ದಾನ ಮಾಡಬಾರದು. ಹೀಗೆ ಮಾಡಿದರೆ ದಾನದ ಫಲವು ದಾತೃವಿಗೆ ಲಭಿಸುವುದಿಲ್ಲ.

ಆಕ್ರಮ್ಯ ಬ್ರಾಹ್ಮಣೈರ್ಭುಕ್ತಮ್ ಅನಾರ್ಯಾಣಾಂ ತು ವೇಶ್ಮನಿ ।
ಗೋಭಿಶ್ಚ ಪುಣ್ಯಂ ತತ್ ತೇಷಾಂ ರಾಜಸೂಯಾದ್ ವಿಶಿಷ್ಯತೇ ॥೪೨॥

ಯಾವ ರಾಜನು ನೀಚರ, ಕಳ್ಳರ ಮನೆಯಲ್ಲಿ ಇರುವ ಅಮೂಲ್ಯವಾದ ವಸ್ತುವನ್ನು ರಾಜಶಾಸನದ ಮೂಲಕ ತೆಗೆದುಕೊಂಡು ಬಂದು, ಅಂತಹ ವಸ್ತುವನ್ನು ಬ್ರಾಹ್ಮಣರಿಗಾಗಲೀ, ಗೋನಿಮಿತ್ತವಾಗಲೀ ದಾನ ಮಾಡಿದಾಗ ಆ ರಾಜನಿಗೆ ರಾಜಸೂಯ ಯಾಗಕ್ಕಿಂತಲೂ ಅಧಿಕ ಫಲವು ಲಭಿಸುತ್ತದೆ. ದುಷ್ಟರನ್ನು ನಿಗ್ರಹಿಸಿ ತಂದಿರುವ ಧನವು ಅಗ್ನಿಮುಖದಲ್ಲಿ ಹೋಮಿಸಿದಾಗ ಫಲ ಕೊಡುವಂತೆ ಗೋಬ್ರಾಹ್ಮಣರ ಮುಖದಲ್ಲಿ ನೀಡಿರುವುದರಿಂದ ರಾಜಸೂಯಕ್ಕಿಂತ ಶ್ರೇಷ್ಠವಾಗುತ್ತದೆ ಎಂದು ಅಭಿಪ್ರಾಯ.

ಮಾ ದದಾತ್ವಿತಿ ಯೋ ಬ್ರೂಯಾದ್ ಗೋಷು ಚ ಬ್ರಾಹ್ಮಣೇಷು ಚ ।
ತಿರ್ಯಗ್ಯೋನಿಶತಂ ಗತ್ವಾ ಚಾಂಡಾಲೇಷೂಪಜಾಯತೇ ॥೪೩॥

ಬ್ರಾಹ್ಮಣನಿಗಾಗಲಿ, ಗೋವಿಗಾಗಲಿ ಆಹಾರವನ್ನು ಕೊಡುವಾಗ ಮಾ ದದಾತು (ಕೊಡಕೂಡದು) ಎಂದು ಯಾವನು ತಡೆ ಮಾಡುತ್ತಾನೋ ಅವನು ನೂರು ಬಾರಿ ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟಿ, ಅನಂತರ ಮನುಷ್ಯಲೋಕದಲ್ಲಿ ಚಂಡಾಲನಾಗಿ ಜನ್ಮ ತಾಳುತ್ತಾನೆ.

ಬ್ರಾಹ್ಮಣಸ್ವಂ ತು ದೇವಸ್ವಂ ದರಿದ್ರಸ್ಯ ಚ ಯದ್ಧನಮ್ ।
ಗುರೋಶ್ಚಾಪಿ ಹೃತಂ ರಾಜನ್ ಸ್ವರ್ಗಸ್ಥಮಪಿ ಪಾತಯೇತ್ ॥೪೪॥

ಬ್ರಾಹ್ಮಣರ, ದೇವರ, ದರಿದ್ರನ, ಗುರುವಿನ ಧನವನ್ನು ಅಪಹರಿಸಿದರೆ ಅವರು ಸ್ವರ್ಗವನ್ನು ಪಡೆಯಲು ಸಾಧಕವಾದ ಇತರ ಕರ್ಮಗಳನ್ನು ಮಾಡಿದರೂ ದೇವತೆಗಳೇ ಆಗಿದ್ದರೂ ಅಧಃಪತನವನ್ನು ಹೊಂದುತ್ತಾರೆ.

ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ ।
ದ್ವಿತೀಯಂ ಧರ್ಮಶಾಸ್ತ್ರಾಣಿ ತೃತೀಯಂ ಲೋಕಸಂಗ್ರಹಃ ॥೪೫॥

ಧರ್ಮತತ್ವವನ್ನು ತಿಳಿಯಬಯಸುವವರಿಗೆ ವೇದವೇ ಮುಖ್ಯವಾದ ಶ್ರೇಷ್ಠವಾದ ಪ್ರಮಾಣವು. ಧರ್ಮಶಾಸ್ತ್ರಗಳು ಎರಡನೆಯ ಪ್ರಮಾಣ. ಲೋಕಾಚಾರವು ಮೂರನೆಯ ಪ್ರಮಾಣ.

ಆಸಮುದ್ರಾಚ್ಚ ಯತ್ಪೂರ್ವಾದ್ ಆಸಮುದ್ರಾಚ್ಚ ಪಶ್ಚಿಮಾತ್ ।
ಹಿಮವದ್ ವಿಂಧ್ಯಯೋರ್ಮಧ್ಯಮಾರ್ಯಾವರ್ತಂ ಪ್ರಚಕ್ಷತೇ ॥೪೬॥

ಪೂರ್ವಸಮುದ್ರದಿಂದ ಪಶ್ಚಿಮ ಸಮುದ್ರದ ತನಕ ಮಧ್ಯ ಇರುವ, ಹಿಮಾಲಯದಿಂದ ವಿಂಧ್ಯಪರ್ವತದವರೆಗೆ ಇರುವ ಭೂಭಾಗವನ್ನು ಆರ್ಯಾವರ್ತ ಎನ್ನುತ್ತಾರೆ.

ಸರಸ್ವತೀದೃಷದ್ವತ್ಯೋಃ ದೇವನದ್ಯೋರ್ಯದಂತರಮ್ ।
ತದ್ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥೪೭॥

ದೇವನದಿ ಎನಿಸಿದ ಸರಸ್ವತಿ ಮತ್ತು ದೃಷದ್ವತಿ ನದಿಗಳಿಗೆ ಮಧ್ಯದಲ್ಲಿರುವ, ದೇವತೆಗಳಿಂದ ನಿರ್ಮಿತವಾಗಿರುವ ದೇಶವನ್ನು ಬ್ರಹ್ಮಾವರ್ತ ಎಂದು ಕರೆಯುತ್ತಾರೆ.

ಯಸ್ಮಿನ್ ದೇಶೇ ಯ ಆಚಾರಃ ಪಾರಂಪರ್ಯಕ್ರಮಾಗತಃ ।
ವರ್ಣಾನಾಂ ಸಾಂತರಾಲಾನಾಂ ಸ ಸದಾಚಾರ ಉಚ್ಯತೇ ॥೪೮॥

ಯಾವ ದೇಶದಲ್ಲಿ ನಾಲ್ಕು ವರ್ಣಗಳ ಮತ್ತು ಅವುಗಳಲ್ಲಿರುವ ಅವಾಂತರ ಭೇದಗಳ ಆಚಾರ, ವ್ಯವಹಾರಗಳು ಪರಂಪರೆಯಿಂದ ನಡೆದುಕೊಂಡು ಬಂದಿವೆಯೋ ಅವೇ ಆಚಾರವನ್ನು ಸದಾಚಾರವೆನ್ನುತ್ತಾರೆ.

ಕುರುಕ್ಷೇತ್ರಂ ಚ ಮತ್ಸ್ಯಾಶ್ಚ ಪಾಂಚಾಲಾಃ ಶೂರಸೇನಯಃ ।
ಏತೇ ಬ್ರಹ್ಮರ್ಷಿದೇಶಾಸ್ತು ಬ್ರಹ್ಮಾವರ್ತಾದನಂತರಾಃ ॥೪೯॥

ಕುರುಕ್ಷೇತ್ರ, ಮತ್ಸ್ಯದೇಶ, ಪಾಂಚಾಲ ದೇಶ, ಶೂರಸೇನ ದೇಶ- ಇವುಗಳು ಬ್ರಹ್ಮರ್ಷಿಗಳ ದೇಶವಾಗಿದ್ದು ಬ್ರಹ್ಮಾವರ್ತದ ಸಮೀಪದಲ್ಲಿರುತ್ತವೆ.

ಏತದ್ದೇಶಪ್ರಸೂತಸ್ಯ ಸಕಾಶಾದಗ್ರಜನ್ಮನಃ ।
ಸ್ವಂ ಚಾರಿತ್ರಂ ಚ ಗೃಹ್ಣೀಯುಃ ಪೃಥಿವ್ಯಾಂ ಸರ್ವಮಾನವಾಃ ॥೫೦॥

ಈ ಪ್ರದೇಶದಲ್ಲಿ ಇರುವ ಬ್ರಾಹ್ಮಣರ ಬಳಿಗೆ ಭೂಮಂಡಲದಲ್ಲಿರುವ ಸಮಸ್ತ ಮಾನವರು ಹೋಗಿ, ತಮ್ಮ ತಮ್ಮ ಆಚಾರ-ವಿಚಾರಗಳ ಬಗ್ಗೆ ಉಪದೇಶವನ್ನು ಪಡೆದುಕೊಳ್ಳಬೇಕು.

ಹಿಮವದ್ ವಿಂಧ್ಯಯೋರ್ಮಧ್ಯಂ ಯತ್ ಪ್ರಾಗ್ ವಿನಶನಾದಪಿ ।
ಪ್ರತ್ಯಗೇವ ಪ್ರಯಾಗಾತ್ ತು ಮಧ್ಯದೇಶಃ ಪ್ರಕೀರ್ತಿತಃ ॥೫೧॥

ಹಿಮವದ್ ಪರ್ವತಕ್ಕೂ, ವಿಂಧ್ಯಪರ್ವತಕ್ಕೂ ಮಧ್ಯದಲ್ಲಿ, ಕುರುಕ್ಷೇತ್ರದಿಂದ ಪೂರ್ವಕ್ಕೂ ಪ್ರಯಾಗದಿಂದ ಪಶ್ಚಿಮಕ್ಕೂ ಇರುವ ಭೂಭಾಗವನ್ನು ಮಧ್ಯದೇಶವೆಂದು ಕರೆಯುತ್ತಾರೆ.

ಕೃಷ್ಣಸಾರಸ್ತು ಚರತಿ ಮೃಗೋ ಯತ್ರ ಸ್ವಭಾವತಃ ।
ಸ ಜ್ಞೇಯೋ ಯಾಜ್ಞಿಯೋ ದೇಶೋ ಮ್ಲೇಚ್ಛದೇಶಸ್ತತಃ ಪರಃ ॥೫೨॥

ಯಾವ ಪ್ರದೇಶದಲ್ಲಿ ಕೃಷ್ಣಸಾರವೆಂಬ ಜಿಂಕೆಯು ಸಹಜವಾಗಿ ಸಂಚರಿಸುತ್ತದೆಯೋ ಆ ಪ್ರದೇಶವು ಯಜ್ಞ ಮಾಡುವವರಿಗೆ ಯೋಗ್ಯಪ್ರದೇಶ ಎನಿಸುತ್ತದೆ. ಈ ಪ್ರದೇಶದಿಂದ ಮುಂದಿನ ಪ್ರದೇಶವು ಮ್ಲೇಚ್ಛದೇಶವೆನಿಸಿದೆ.

ಏತಾನ್ ವಿಜ್ಞಾಯ ದೇಶಾಂಸ್ತು ಸಂಶ್ರಯೇಯುರ್ದ್ವಿಜಾತಯಃ ।
ಶೂದ್ರಸ್ತು ಯಸ್ಮಿನ್ ಕಸ್ಮಿನ್ ವಾ ನಿವಸೇದ್ ವೃತ್ತಿಕರ್ಶಿತಃ ॥೫೩॥

ಭೂಮಂಡದಲ್ಲಿ ಇರುವ ಈ ದೇಶಗಳನ್ನು ಸರಿಯಾಗಿ ಅರ್ಥೈಸಿಕೊಂಡು ಬ್ರಾಹ್ಮಣರು ವಾಸ ಮಾಡಬೇಕು. ವೃತ್ತಿಯನ್ನು ಅವಲಂಬಿಸಿಕೊಂಡು ಬದುಕುವ ಶೂದ್ರನು ಯಾವ ದೇಶದಲ್ಲಿಯಾದರೂ ವಾಸ ಮಾಡಬಹುದು.

ಆಚಾರಃ ಪ್ರಥಮೋ ಧರ್ಮೋ ಹ್ಯಹಿಂಸಾ ಸತ್ಯಮೇವ ಚ ।
ದಾನಂ ಚೈವ ಯಥಾಶಕ್ತಿ ಯಮಾಶ್ಚ ನಿಯಮೈಃ ಸಹ ॥೫೪॥

ಸದಾಚಾರವು ಮೊದಲನೆಯ ಧರ್ಮವೆನಿಸಿದೆ. ಅಹಿಂಸಾ, ಸತ್ಯ, ಯಥಾಶಕ್ತಿ ದಾನ, ನಿಯಮಗಳು ಮುಖ್ಯಧರ್ಮಗಳಾಗಿವೆ.

ವೈದಿಕೈಃ ಕರ್ಮಭಿಃ ಪುಣ್ಯೈರ್ನಿಷೇಕಾದಿರ್ದ್ವಿಜನ್ಮನಾಮ್ ।
ಕಾರ್ಯಃ ಶರೀರಸಂಸ್ಕಾರಃ ಪಾವನಃ ಪ್ರೇತ್ಯ ಚೇಹ ಚ ॥೫೫॥

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಗರ್ಭಾದಾನದಿಂದ ಹಿಡಿದು ಅಂತ್ಯೇಷ್ಟಿಯ ತನಕ ಸಮಸ್ತ ಸಂಸ್ಕಾರಗಳನ್ನು ವೇದವಿಧಿಗಳಿಂದ ಅನುಷ್ಠಾನ ಮಾಡಬೇಕು.

ಇಹಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ವೇದವಿಹಿತ ಶಾರೀರಿಕ ಸಂಸ್ಕಾರವು ಮನುಷ್ಯನನ್ನು ಪಾವನಗೊಳಿಸುತ್ತದೆ.

ಗರ್ಭಹೋಮೈರ್ಜಾತಕರ್ಮನಾಮಚೌಲೋಪನಾಯನೈಃ ।
ಸ್ವಾಧ್ಯಾಯೈಸ್ತದ್ ವ್ರತೈಶ್ಚೈವ ವಿವಾಹಸ್ನಾತಕವ್ರತೈಃ ॥೫೬॥

ಗರ್ಭದಲ್ಲಿರುವಾಗ ಮಾಡುವ ಪುಂಸವನ, ಸೀಮಂತ ಹೋಮಗಳು, ಜಾತಕರ್ಮ, ನಾಮಕರಣ, ಚೂಡಾಕರ್ಮ, ಉಪನಯನ, ವೇದಾಧ್ಯಯನ, ವೇದಮಂತ್ರಗಳು, ಸ್ನಾತಕ ವ್ರತ, ವಿವಾಹ.

ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ ॥೫೭॥

ಪಂಚಮಹಾಯಜ್ಞಗಳ ಅನುಷ್ಠಾನ ಮತ್ತು ಇತರ ಯಜ್ಞಗಳ ಅನುಷ್ಠಾನ. ಈ ಸಂಸ್ಕಾರಗಳಿಂದ ಶರೀರವು ಪರಬ್ರಹ್ಮನನ್ನು ಹೊಂದಲು ಅರ್ಹತೆಯನ್ನು ಪಡೆಯುತ್ತದೆ.

ಧರ್ಮಾರ್ಥೌ ಯದಿ ನ ಸ್ಯಾತಾಂ ಶುಶ್ರೂಷಾ ವಾऽಪಿ ತದ್ವಿಧಾ ।
ವಿದ್ಯಾ ತಸ್ಮಿನ್ ನ ವಪ್ತವ್ಯಾ ಶುಭಂ ಬೀಜಮಿವೋಷರೇ ॥೫೮॥

ಯಾವ ವ್ಯಕ್ತಿಯು ಧರ್ಮಾರ್ಥಗಳನ್ನು ಸಾಧಿಸಿಕೊಡುವ ಕರ್ಮಗಳನ್ನು ಆಚರಿಸುವುದಿಲ್ಲವೋ, ವಿದ್ಯೆಯನ್ನು ಹೊಂದಲು ಗುರುಶುಶ್ರೂಷೆಯನ್ನು ಮಾಡುವುದಿಲ್ಲವೋ ಅಂತಹ ವ್ಯಕ್ತಿಗೆ ವಿದ್ಯೆಯನ್ನು ನೀಡಬಾರದು. ಒಂದು ವೇಳೆ ನೀಡಿದರೆ ಬೀಜವನ್ನು ಬಂಜರು ಭೂಮಿಯಲ್ಲಿ ಬಿತ್ತಿದಂತಾಗುತ್ತದೆ.

ಲೌಕಿಕಂ ವೈದಿಕಂ ವಾऽಪಿ ತಥಾऽऽಧ್ಯಾತ್ಮಿಕಮೇವ ವಾ ।
ಯಸ್ಮಾಜ್ಜ್ಞಾನಮಿದಂ ಪ್ರಾಪ್ತಂ ತಂ ಪೂರ್ವಮಭಿವಾದಯೇತ್ ॥೫೯॥

ಲೌಕಿಕವಿದ್ಯೆಯೇ ಆಗಿರಲಿ, ಅಲೌಕಿಕ ವಿದ್ಯೆಯೇ ಆಗಿರಲಿ, ಆಧ್ಯಾತ್ಮಿಕ ವಿದ್ಯೆಯೇ ಆಗಿರಲಿ, ಆ ವಿದ್ಯೆಯು ಯಾವ ಗುರುವಿನಿಂದ ಪ್ರಾಪ್ತವಾಯಿತೋ ಆ ಗುರುವನ್ನು ಮೊದಲು ನಮಸ್ಕರಿಸಬೇಕು.

ಸವ್ಯೇನ ಸವ್ಯಃ ಸ್ಪೃಷ್ಟವ್ಯೋ ದಕ್ಷಿಣೇನ ತು ದಕ್ಷಿಣಃ ।
ನ ಕುರ್ಯಾದೇಕಹಸ್ತೇನ ಗುರೋಃ ಪಾದಾಭಿವಾದನಮ್ ॥೬೦॥

ತನ್ನ ಎಡಗೈಯಿಂದ ಗುರುವಿನ ಎಡಗಾಲನ್ನು, ತನ್ನ ಬಲಗೈಯಿಂದ ಗುರುವಿನ ಬಲಗಾಲನ್ನು ಮುಟ್ಟಿ, ಗುರುವಿನ ಪಾದಗಳಿಗೆ ಅಭಿವಾದನ ಮಾಡಬೇಕು. ಒಂದೇ ಕೈಯಿಂದ ನಮಸ್ಕರಿಸಬಾರದು.

ನಿಷೇಕಾದೀನಿ ಕರ್ಮಾಣಿ ಯಃ ಕರೋತಿ ಯಥಾವಿಧಿ ।
ಅಧ್ಯಾಪಯತಿ ಚೈವೈನಂ ಸ ವಿಪ್ರೋ ಗುರುರುಚ್ಯತೇ ॥೬೧॥

ಗರ್ಭಾಧಾರಣೆ ಮೊದಲಾದ ಸಂಸ್ಕಾರಗಳನ್ನು ವಿಧಿವತ್ತಾಗಿ ಅನುಷ್ಠಾನ ಮಾಡಿಸಿದ ವ್ಯಕ್ತಿಯು, ವೇದವನ್ನು ಪಾಠ ಮಾಡುವ ವ್ಯಕ್ತಿಯು, ಬ್ರಾಹ್ಮಣನು ಗುರುವೆಂದು ಹೇಳಲ್ಪಡುತ್ತಾನೆ.

ಕೃತ್ವೋಪನಯನಂ ವೇದಾನ್ ಯೋऽಧ್ಯಾಪಯತಿ ನಿತ್ಯಶಃ ।
ಸಕಲ್ಪಾನ್ ಸರಹಸ್ಯಾಂಶ್ಚ ಸ ಚೋಪಾಧ್ಯಾಯ ಉಚ್ಯತೇ ॥೬೨॥

ಉಪನಯನ ಸಂಸ್ಕಾರವನ್ನು ಮಾಡಿಸಿ ಪ್ರತಿದಿನವು ಕಲ್ಪ, ರಹಸ್ಯ ಇವುಗಳಿಂದ ಸಹಿತವಾದ ವೇದವನ್ನು ಯಾರು ಹೇಳಿಕೊಡುತ್ತಾರೋ ಅವನನ್ನು ಉಪಾಧ್ಯಾಯ ಎನ್ನುತ್ತಾರೆ.

ಸಾಂಗಾಂಶ್ಚ ವೇದಾನಧ್ಯಾಪ್ಯ ಶಿಕ್ಷಯಿತ್ವಾ ವ್ರತಾನಿ ಚ ।
ವಿವೃಣೋತಿ ಚ ಮಂತ್ರಾರ್ಥಾನ್ ಆಚಾರ್ಯಃ ಸೋऽಭಿಧೀಯತೇ ॥

ಶಿಕ್ಷಾದಿ ಷಡಂಗಸಹಿತವಾದ ವೇದಗಳನ್ನು ಅಧ್ಯಯನ ಮಾಡಿಸಿ, ವೇದವ್ರತಗಳನ್ನೂ ಮಾಡಿಸಿ, ಮಂತ್ರಾರ್ಥಗಳನ್ನು ವಿವರಿಸಿ ಹೇಳುವ ವ್ಯಕ್ತಿಯನ್ನು ಆಚಾರ್ಯ ಎನ್ನುತ್ತಾರೆ.

ಉಪಾಧ್ಯಾಯಾದ್ ದಶಾಚಾರ್ಯ ಆಚಾರ್ಯಾಣಾಂ ಶತಂ ಪಿತಾ ।
ಪಿತುಃ ಶತಗುಣಂ ಮಾತಾ ಗೌರವೇಣಾತಿರಿಚ್ಯತೇ ॥೬೪॥

ಗೌರವದಲ್ಲಿ ಆಚಾರ್ಯನು ಉಪಾಧ್ಯಾಯನಿಗಿಂತಲೂ ಹತ್ತುಪಟ್ಟು ಶ್ರೇಷ್ಠನು. ತಂದೆಯು ಆಚಾರ್ಯನಿಗಿಂತಲೂ ನೂರು ಪಟ್ಟು ಶ್ರೇಷ್ಠನು. ತಾಯಿಯು ತಂದೆಗಿಂತಲೂ ನೂರು ಪಟ್ಟು ಅಧಿಕಳು.

ತಸ್ಮಾತ್ ತೇಷಾಂ ವಶೇ ತಿಷ್ಠೇತ್ ಶುಶ್ರೂಷಾಪರಮೋ ಭವೇತ್ ।
ಅವಮಾನಾದ್ಧಿ ತೇಷಾಂ ತು ನರಕಂ ಸ್ಯಾನ್ನ ಸಂಶಯಃ ॥೬೫॥

ಆದ್ದರಿಂದ ಯಾವಾಗಲೂ ಮನುಷ್ಯನು ಪೂಜ್ಯರಾದ ಗುರುಗಳ ಅಧೀನದಲ್ಲಿರಬೇಕು. ಅವರ ಶುಶ್ರೂಷೆಯಲ್ಲಿ ಆಸಕ್ತನಾಗಿರಬೇಕು. ಅಂತಹ ಗುರುಗಳನ್ನು ಸ್ವಲ್ಪವೇ ಅವಮಾನಿಸಿದರೂ ನರಕವುಂಟಾಗುತ್ತದೆ, ಸಂಶಯವಿಲ್ಲ.

ಹೀನಾಂಗಾನತಿರಿಕ್ತಾಂಗಾನ್ ವಿದ್ಯಾಹೀನಾನ್ ವಯೋಧಿಕಾನ್ ।
ರೂಪದ್ರವಿಣಹೀನಾಂಶ್ಚ ನ ವಾಚಾऽಧಿಕ್ಷಿಪೇದ್ ಬುಧಃ ॥೬೬॥

ಅಂಗಹೀನರನ್ನು, ಅಧಿಕಾಂಗರನ್ನು, ಅವಿದ್ಯಾವಂತರನ್ನು, ವಯೋಜ್ಯೇಷ್ಠರನ್ನು, ರೂಪ ಧನಹೀನರನ್ನು, ಜಾತಿ-ಧನಹೀನರನ್ನು ನಿಂದಿಸಬಾರದು.

ಶಪತಾ ಯತ್ಕೃತಂ ಪುಣ್ಯಂ ಶಪ್ಯಮಾನಂ ತು ಗಚ್ಛತಿ ।
ಶಪ್ಯಮಾನಸ್ಯ ಯತ್ಪಾಪಂ ಶಪಂತಮನುಗಚ್ಛತಿ ॥೬೭॥

ನಿಂದಿಸುವ ವ್ಯಕ್ತಿಯಲ್ಲಿರುವ ಪುಣ್ಯವು ಯಾರನ್ನು ನಿಂದಿಸುತ್ತೇವೋ ಅವನಿಗೆ ಸೇರುತ್ತದೆ. ನಿಂದಿಸಲ್ಪಡುವವನಲ್ಲಿರುವ ಪಾಪವು ನಿಂದಿಸಲ್ಪಡುವವನಿಗೆ ಸೇರುತ್ತದೆ. ಆದ್ದರಿಂದ ಯಾರನ್ನೂ ನಿಂದಿಸಬಾರದು.

ನಾಸ್ತಿಕ್ಯಂ ವೇದನಿಂದಾಂ ಚ ದೇವತಾನಾಂ ಚ ಕುತ್ಸನಮ್ ।
ದ್ವೇಷಂ ಡಂಭಂ ಚ ಮಾನಂ ಚ ಕ್ರೋಧಂ ತೈಕ್ಷ್ಣ್ಯಂ ಚ ವರ್ಜಯೇತ್॥

ನಾಸ್ತಿಕತೆ, ವೇದಗಳ ನಿಂದನೆ, ದೇವತೆಗಳ ದೂಷಣೆ, ದ್ವೇಷ, ಡಂಭ, ದುರಭಿಮಾನ, ಕ್ರೋಧ, ಕಾಠಿಣ್ಯ ಇವುಗಳನ್ನು ಯಾವಾಗಲೂ ತ್ಯಜಿಸಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನಿಗೆ ಅಗ್ನಿಸೃಷ್ಟಿಯ ಪ್ರಕಾರವನ್ನು ಹೇಳಿದುದು. ಆಹವನೀಯಾದಿ ಅಗ್ನಿಗಳ ವಿಭಾಗವನ್ನು ಹೇಳುವ ಮೂಲಕ ಅವುಗಳ ನಾಮವನ್ನು ಉಚ್ಚಾರಿಸಿದುದು. ಅದರಂತೆ ಯಜ್ಞ-ಅಗ್ನಿಹೋತ್ರಗಳ ಪ್ರಶಂಸೆಯನ್ನು ಮಾಡಿದುದು.

ಯುಧಿಷ್ಠಿರಃ

ಭಗವಂಸ್ತವ ಭಕ್ತಸ್ಯ ಧರ್ಮಾಧರ್ಮಮಜಾನತಃ ।
ಧರ್ಮಂ ಪುಣ್ಯತಮಂ ದೇವ ಪೃಚ್ಛತಃ ಕಥಯಸ್ವ ಮೇ ॥೧॥

ಯುಧಿಷ್ಠಿರ– ದೇವೇಶನೇ, ಧರ್ಮಾಧರ್ಮಗಳನ್ನು ತಿಳಿಯದಿರುವ, ನಿನ್ನ ಭಕ್ತನಾದ ನನಗೆ ಪುಣ್ಯತಮವಾದ ಧರ್ಮ ಯಾವುದೆಂದು ತಿಳಿಸಿಕೊಡು.

ಶ್ರೀಭಗವಾನ್

ಯದೇತದಗ್ನಿಹೋತ್ರಂ ವೈ ಸೃಷ್ಟಂ ವರ್ಣತ್ರಯಸ್ಯ ತು ।
ಮಂತ್ರವದ್ ಯದ್ಧುತಂ ಸಮ್ಯಗ್ ವಿಧಿನಾ ಚಾಪ್ಯುಪಾಸಿತಮ್ ॥೨॥

ಆಹಿತಾಗ್ನಿಂ ನಯತ್ಯೂರ್ಧ್ವಂ ಸಪತ್ನೀಕಂ ಸಬಾಂಧವಮ್ ॥೩॥

ಶ್ರೀಭಗವಾನ್– ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಯವರಿಗೆ ಅಗ್ನಿಹೋತ್ರವು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದೆ. ಚೆನ್ನಾಗಿ ಅಗ್ನಿಯನ್ನು ಉಪಾಸನೆ ಮಾಡುತ್ತಾ, ಮಂತ್ರ ಪೂರ್ವಕವಾಗಿ ಹೋಮಿಸಿದರೆ ಅಂತಹ ಪತ್ನಿ-ಬಂಧು ಸಹಿತನಾದ ಆಹಿತಾಗ್ನಿಯನ್ನು ಆ ಯಜ್ಞದ ಫಲವು ಊರ್ಧ್ವಲೋಕಕ್ಕೆ ಕೊಂಡೊಯ್ಯುತ್ತದೆ.

ಯುಧಿಷ್ಠಿರಃ

ಕಥಂ ತದ್ ಬ್ರಾಹ್ಮಣೈರ್ದೇವ ಹೋತವ್ಯಂ ಕ್ಷತ್ರಿಯೈಃ ಕಥಮ್ ।
ವೈಶ್ಯೈರ್ವಾ ದೇವದೇವೇಶ ಕಥಂ ವಾ ಸುಹುತಂ ಭವೇತ್ ॥೪॥

ಯುಧಿಷ್ಠಿರ– ದೇವೇಶನೇ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ ಜಾತಿಯವರು ಹೇಗೆ ಹೋಮ ಮಾಡಬೇಕು? ಹೇಗೆ ಹೋಮವನ್ನು ಮಾಡಿದರೆ ಶಾಸ್ತ್ರೀಯವಾಗುತ್ತದೆ?

ಕಸ್ಮಿನ್ ಕಾಲೇಽಥವಾ ಕಸ್ಮಿನ್ನಾಧೇಯೋಽಗ್ನಿಃ ಸುರೋತ್ತಮ ।
ಆಹಿತಸ್ಯ ಕಥಂ ವಾಽಪಿ ಸಮ್ಯಗಾಚರಣಂ ಭವೇತ್ ॥೫॥

ಅಗ್ನಿಯಲ್ಲಿ ಎಷ್ಟು ಪ್ರಭೇದಗಳಿವೆ? ಯಾವ ಕಾಲದಲ್ಲಿ ಯಾವ ಅಗ್ನಿಯನ್ನು ಉಪಾಸನೆ ಮಾಡಬೇಕು? ಆಹಿತಾಗ್ನಿಯ ಸದಾಚಾರವು ಹೇಗಿರಬೇಕು?

ಕತ್ಯಗ್ನಯಃ ಕಿಮಾತ್ಮಾನಃ ಸ್ಥಾನಂ ಕಿಂ ಕಸ್ಯ ವಾ ವಿಭೋ ।
ಕತರಸ್ಮಿನ್ ಹುತೇ ಸ್ಥಾನೇ ಕಂ ವ್ರಜೇದಾಗ್ನಿಹೋತ್ರಿಕಃ ॥೬॥

ಅಗ್ನಿಯ ಪ್ರಭೇದಗಳೆಷ್ಟು? ಅವುಗಳ ಸ್ವರೂಪವೇನು? ಸ್ಥಾನವೇನು? ಯಾವ ಅಗ್ನಿಯಲ್ಲಿ ಹೋಮಿಸಿದರೆ ಯಾವ ಲೋಕಕ್ಕೆ ಹೋಗುತ್ತಾನೆ?

ಅಗ್ನಿಹೋತ್ರನಿಮಿತ್ತಂ ಚ ಕಿಮುತ್ಪನ್ನಂ ಪುರಾಽನಘ ।
ಕಥಮೇವಾಥ ಹೂಯಂತೇ ಪ್ರೀಯಂತೇ ಚ ಸುರಾಃ ಕಥಮ್ ॥೭॥

ಹಿಂದೆ ಯಾವ ನಿಮಿತ್ತದಿಂದ ಅಗ್ನಿಹೋತ್ರವು ಪ್ರಾರಂಭವಾಯಿತು? ದೇವತೆಗಳನ್ನು ತೃಪ್ತಿಗೊಳಿಸಲು ಹೇಗೆ ಹೋಮ ಮಾಡಬೇಕು? ಹೇಗೆ ಹೋಮ ಮಾಡಿದಲ್ಲಿ ದೇವತೆಗಳು ತೃಪ್ತರಾಗುತ್ತಾರೆ?

ವಿಧಿವನ್ಮಂತ್ರವದ್ಭಕ್ತ್ಯಾ ಪೂಜಿತಾಸ್ತ್ವಗ್ನಯಃ ಕಥಮ್ ।
ಕಾಂ ಗತಿಂ ವದತಾಂಶ್ರೇಷ್ಠ ನಯಂತಿ ಹ್ಯಗ್ನಿಹೋತ್ರಿಣಃ ॥೮॥

ಅಗ್ನಿಗಳನ್ನು ವಿಧಿವತ್ತಾಗಿ ಮಂತ್ರಪೂರ್ವಕವಾಗಿ ಪೂಜಿಸಿದರೆ ಆ ಅಗ್ನಿಗಳು ಹೋಮಿಸಿದ ವ್ಯಕ್ತಿಗಳಿಗೆ ಎಂತಹ ಸದ್ಗತಿಯನ್ನು ನೀಡುತ್ತಾರೆ?

ದುರ್ಹುತಾಶ್ಚಾಪಿ ಭಗವನ್ನವಿಜ್ಞಾತಾಸ್ತ್ರಯೋಽಗ್ನಯಃ ।
ಕಿಮಾಹಿತಾಗ್ನೇಃ ಕುರ್ವಂತಿ ದುಶ್ಚೀರ್ಣಾ ವಾಽಪಿ ಕೇಶವ ॥೯॥

ಮೂರು ಅಗ್ನಿಗಳ ಸ್ವರೂಪವನ್ನು ತಿಳಿಯದೆ, ಆ ಅಗ್ನಿಗಳಲ್ಲಿ ವಿಧಿಯನ್ನು ಅನುಸರಿಸದೆ ಹೋಮಿಸಿದರೆ, ಉಪಾಸಿಸಿದರೆ, ತಪ್ಪಾಗಿ ಮಾಡಿದರೆ ಅವರು ಹೊಂದುವ ಕೆಟ್ಟ ಫಲಗಳಾದರೂ ಏನು?

ಉತ್ಸನ್ನಾಗ್ನಿಸ್ತು ಪಾಪಾತ್ಮಾ ಕಾಂ ಯೋನಿಂ ದೇವ ಗಚ್ಛತಿ ॥೧೦॥

ಅಗ್ನಿಯನ್ನು ಪರಿತ್ಯಾಗ ಮಾಡಿರುವ ಪಾಪಾತ್ಮನು ಮುಂದೆ ಯಾವ ಯೋನಿಗಳಲ್ಲಿ ಜನ್ಮ ತಾಳುತ್ತಾನೆ?

ಏತತ್ಸರ್ವಂ ಸಮಾಸೇನ ಭಕ್ತ್ಯಾ ಹ್ಯುಪಗತಸ್ಯ ಮೇ ।
ವಕ್ತುಮರ್ಹಸಿ ಸರ್ವಜ್ಞ ಸರ್ವಾತ್ಮಕ ನಮೋಽಸ್ತು ತೇ ॥೧೧॥

ಸರ್ವಾಂತರ್ಯಾಮಿಯೇ, ಸರ್ವಜ್ಞನೇ, ನಿನಗೆ ನಮಸ್ಕಾರ. ಭಕ್ತಿ-ಭಾವದಿಂದ ನಿನ್ನ ಬಳಿ ಬಂದು ಪ್ರಶ್ನಿಸುತ್ತಿರುವ ನನಗೆ ಈ ಎಲ್ಲ ವಿಷಯಗಳನ್ನು ಸಂಕ್ಷಿಪ್ತವಾಗಿ ಹೇಳು.

ಶ್ರೀಭಗವಾನ್

ಶೃಣು ರಾಜನ್ ಮಹಾಪುಣ್ಯಮಿದಂ ಧರ್ಮಾಮೃತಂ ಪರಮ್ ।
ಯತ್ತು ತಾರಯತೇ ಯುಕ್ತಾನ್ ಬ್ರಾಹ್ಮಣಾನಗ್ನಿಹೋತ್ರಿಣಃ ॥೧೨॥

ಶ್ರೀಭಗವಾನ್– ಮಹಾರಾಜನೇ, ಮಹಾಪುಣ್ಯಪ್ರದವಾದ ಧರ್ಮಾಮೃತವನ್ನು ಕೇಳಿಸಿಕೊ. ಅಗ್ನಿಹೋತ್ರವು ಧರ್ಮಪರಾಯಣರಾದ ಅಗ್ನಿಹೋತ್ರಿಗಳಾದ ಬ್ರಾಹ್ಮಣರನ್ನು ಕಷ್ಟದಿಂದ ಪಾರು ಮಾಡುತ್ತದೆ.

ಬ್ರಹ್ಮತ್ವೇನಾಸೃಜಂ ಲೋಕಾನ್ ಅಹಮಾದೌ ಮಹಾದ್ಯುತೇ ।
ಸೃಷ್ಟೋಽಗ್ನಿರ್ಮುಖತಃ ಪೂರ್ವಂ ಲೋಕಾನಾಂ ಹಿತಕಾಮ್ಯಯಾ ॥೧೩॥

ಮಹಾದ್ಯುತಿಮಂತನೇ, ಸೃಷ್ಟಿಯ ಆರಂಭದಲ್ಲಿ ನಾನೇ ಪರಬ್ರಹ್ಮವೆಂಬ ಮೂಲರೂಪದಿಂದ ಸಮಸ್ತ ಲೋಕಗಳನ್ನು ಸೃಷ್ಟಿಸಿದ್ದೇನೆ. ಲೋಕದ ಜನರಿಗೆ ಹಿತವನ್ನು ಮಾಡುವ ದೃಷ್ಟಿಯಿಂದ ಎಲ್ಲ ಸೃಷ್ಟಿಗಳಿಗಿಂತಲೂ ಮೊದಲೂ ಅಗ್ನಿಯನ್ನೇ ನನ್ನ ಮುಖದಿಂದ ಸೃಷ್ಟಿಸಿದೆನು.

ಯಸ್ಮಾದಗ್ನೇ ಸ ಭೂತಾನಾಂ ಸರ್ವೇಷಾಂ ನಿರ್ಮಿತೋ ಮಯಾ ।
ತಸ್ಮಾದಗ್ನೀತ್ಯಭಿಹಿತಃ ಪುರಾಣಜ್ಞೈರ್ಮಹರ್ಷಿಭಿಃ ॥೧೪॥

ಯಾವ ಕಾರಣದಿಂದ ಸಮಸ್ತ ಪ್ರಾಣಿಗಳಿಗೂ ಉಪಕಾರವನ್ನು ಮಾಡುವ ಅಗ್ನಿಯನ್ನು ಆರಂಭದಲ್ಲೇ ಸೃಷ್ಟಿ ಮಾಡಿದೆನೋ ಆದ್ದರಿಂದ ಪುರಾಣವನ್ನು ತಿಳಿದ ವಿದ್ವಾಂಸರು ಅಗ್ನಿ ಎಂದು ಕರೆದರು.

ಯಸ್ಮಾತ್ತು ಸರ್ವಕೃತ್ಯೇಷು ಪೂರ್ವಮಸ್ಯೈ ಪ್ರದೀಯತೇ ।
ಆಹುತಿರ್ದೀಪ್ಯಮಾನಾಯ ತಸ್ಮಾದಗ್ನೀತಿ ಕಥ್ಯತೇ ॥೧೫॥

ಸಮಸ್ತ ಕರ್ಮಗಳಲ್ಲಿಯೂ ಎಲ್ಲರಿಗಿಂತ ಮೊದಲು ಪ್ರಜ್ವಲಿತವಾದ ಅಗ್ನಿಯಲ್ಲಿಯೇ ಆಹುತಿಯನ್ನು ನೀಡಬೇಕು. ಎಲ್ಲರಿಗಿಂತ ಮೊದಲು ಆಹುತಿಯನ್ನು ಸ್ವೀಕರಿಸುವುದರಿಂದ ಅವನನ್ನು ಅಗ್ನಿ ಎಂದು ಕರೆಯುತ್ತಾರೆ.

ಯಸ್ಮಾಚ್ಚ ನಯತಿ ಹ್ಯಗ್ರ್ಯಾಂ ಗತಿಂ ವಿಪ್ರಾನ್ ಸುಪೂಜಿತಃ ।
ಯಸ್ಮಾಚ್ಚ ನಯನಾದ್ ರಾಜನ್ ದೇವೇಷ್ವಗ್ನೀತಿ ಕೀರ್ತ್ಯತೇ ॥೧೬॥

ಸರಿಯಾಗಿ ಪೂಜಿಸಿದರೆ ಬ್ರಾಹ್ಮಣರನ್ನು ಅಗ್ರಗತಿಗೆ, ಪರಮಪದವಿಗೆ ಕೊಂಡೊಯ್ಯುತ್ತಾನಾದ್ದರಿಂದ ದೇವತೆಗಳು ಅವನನ್ನು ಅಗ್ನಿ ಎನ್ನುತ್ತಾರೆ.

ಯಸ್ಮಾಚ್ಚ ದುರ್ಹುತಃ ಸೋಽಯಮಲಂ ಭಕ್ಷಯಿತುಂ ಕ್ಷಣಾತ್ ।
ಯಜಮಾನಂ ನರಶ್ರೇಷ್ಠ ಕ್ರವ್ಯಾದೋಽಗ್ನಿಸ್ತತಃ ಸ್ಮೃತಃ ॥೧೭॥

ವಿಧಿಯನ್ನು ಉಲ್ಲಂಘಿಸಿ ಹೋಮ ಮಾಡುವ ಯಜಮಾನನನ್ನು ಕ್ಷಣಮಾತ್ರದಲ್ಲಿ ಭಕ್ಷಿಸಲು ಸಮರ್ಥನಾಗಿರುವುದರಿಂದ ಅವನನ್ನು ಕ್ರವ್ಯಾದ ಎಂದು ಕರೆಯುತ್ತಾರೆ.

ಸರ್ವಭೂತಾತ್ಮಕೋ ರಾಜನ್ ದೇವಾನಾಮೇಷ ವೈ ಮುಖಮ್ ।
ಪ್ರಥಮಂ ಮನ್ಮುಖಾತ್ ಸೃಷ್ಟೋ ಲೋಕಾರ್ಥೇ ಪಚನಪ್ರಭುಃ ॥೧೮॥

ಸಮಸ್ತ ಪ್ರಾಣಿಗಳ ಆತ್ಮಸ್ವರೂಪನಾಗಿರುವ ಅಗ್ನಿಯು ದೇವತೆಗಳಿಗೆ ಮುಖಸ್ಥಾನೀಯನಾಗಿದ್ದಾನೆ. ಮೊದಲು ನನ್ನ ಮುಖದಿಂದ ಸೃಷ್ಟನಾದ ಈ ಅಗ್ನಿದೇವನೇ ಸಮಸ್ತ ಜೀವರ ಪಚನ ಶಕ್ತಿಗೆ ನಿಯಾಮಕನಾಗಿದ್ದಾನೆ.

ಸೃಷ್ಟಮಾತ್ರೋ ಜಗತ್ಸರ್ವಮತ್ತುಮೈಚ್ಛತ್ ಪುರಾ ಖಲು ।
ತತಃ ಪ್ರಶಮಿತಃ ಸೋಽಗ್ನಿರುಪಾಸೀನೋ ಮಯಾ ಪುರಾ ॥೧೯॥

ಸೃಷ್ಟಿಮಾಡಿದ ಕೂಡಲೇ ಅಗ್ನಿದೇವನು ಸಮಸ್ತ ಜಗತ್ತನ್ನೇ ಕಬಳಿಸಲು ಇಚ್ಛಿಸಿದನು. ಅಂತಹ ಅಗ್ನಿಯನ್ನು ನಾನು ಹಿಂದೆ ಸಮಾಧಾನ ಪಡಿಸಿ ಶಾಂತಗೊಳಿಸಿದೆನು.

ಸತತೋಪಾಸನಾತ್ ಸೋಽಯಮೌಪಾಸನ ಇತಿ ಸ್ಮೃತಃ ॥೨೦॥

ಯಾವಾಗಲೂ ನನ್ನಿಂದ ಸನ್ನಿಹಿತನಾಗಿರುವ ಈ ಅಗ್ನಿದೇವನನ್ನು ಔಪಾಸನ ಎಂದು ಕರೆಯುತ್ತಾರೆ.

ಆಹುತಿಃ ಸರ್ವಮಾಖ್ಯಾತಾ ತಸ್ಮಿನ್ ವಸತಿ ಸೋಽನಲಃ ।
ಆವಸಥ್ಯ ಇತಿ ಖ್ಯಾತಸ್ತೇನಾಸೌ ಬ್ರಹ್ಮವಾದಿಭಿಃ ॥೨೧॥

ಆಹುತಿ ಎಂಬುದು ಸರ್ವ ಎಂಬ ಅರ್ಥವನ್ನು ಹೇಳುತ್ತದೆ. ಹವ್ಯವನ್ನೇ ಹವನವೆನ್ನುತ್ತಾರೆ. ಅಗ್ನಿಯು ಸಮಸ್ತ ಹವ್ಯಗಳನ್ನು ಒಯ್ಯುವವನಾದ್ದರಿಂದ ಇವನಿಗೆ ಆಹವನೀಯ ಎಂದು ಹೆಸರು.

ತಸ್ಮಿನ್ ಪಂಚ ಮಹಾಯಜ್ಞಾ ವರ್ತಂತೇ ಯಸ್ಯ ಧರ್ಮತಃ ।
ಸೋಮಮಂಡಲಮಧ್ಯೇನ ಗತಿಸ್ತಸ್ಯ ದ್ವಿಜನ್ಮನಃ ॥೨೨॥

ಆ ಅಗ್ನಿದೇವನಲ್ಲಿ ಪಂಚಮಹಾಯಜ್ಞಗಳು ಧರ್ಮದಿಂದ ಪ್ರವೃತ್ತಿಯನ್ನು ಹೊಂದುತ್ತವೆ. ಪಂಚಮಹಾಯಜ್ಞಗಳನ್ನು ಮಾಡಿದ ಬ್ರಾಹ್ಮಣನು ಸೋಮ ಮಂಡಲದ ಮಧ್ಯದಿಂದ ಸದ್ಗತಿಯನ್ನು ಹೊಂದುತ್ತಾನೆ.

ತೇನ ಸಪ್ತರ್ಷಯಃ ಸಿದ್ಧಾಃ ಸಂಯತೇಂದ್ರಿಯಬುದ್ಧಯಃ ।
ಗತಾ ಹ್ಯಮರಸಾಯುಜ್ಯಮೇಕಾಗ್ನ್ಯರ್ಚನತತ್ಪರಾಃ ॥೨೩॥

ಇಂದ್ರಿಯಗಳನ್ನು, ಬುದ್ಧಿಯನ್ನು ಹತೋಟಿಯಲ್ಲಿಟ್ಟುಕೊಂಡಿರುವ, ಸಿದ್ಧರಾದ ಸಪ್ತರ್ಷಿಗಳು ಅಗ್ನಿಯ ಆರಾಧನೆಯಲ್ಲಿಯೇ ನಿರತರಾದ ಕಾರಣ ದೇವತೆಗಳೆಂದೇ ಕರೆಸಿಕೊಳ್ಳುತ್ತಾರೆ.

ಅಪರೇ ಚಾವಸಥ್ಯಂ ಚ ಪಚನಾಗ್ನಿಂ ಪ್ರಚಕ್ಷತೇ ।
ತಸ್ಮಿನ್ ಪಂಚ ಮಹಾಯಜ್ಞಾ ವೈಶ್ವದೇವಶ್ಚ ವರ್ತತೇ ॥೨೪॥

ಇನ್ನು ಕೆಲವರು ಆಹವನೀಯ, ಪಚನಾಗ್ನಿ ಎಂದು ಎರಡು ಅಗ್ನಿಗಳನ್ನು ಹೇಳುತ್ತಾರೆ. ಆ ಅಗ್ನಿಯಲ್ಲಿಯೇ ಪಂಚಮಹಾಯಜ್ಞಗಳು, ವೈಶ್ವದೇವವು ಮಾಡಲ್ಪಡುತ್ತದೆ.

ಸ್ಥಾಲೀಪಾಕಂ ಚ ಗಾರ್ಹ್ಯಂ ಚ ಸರ್ವೇ ಚಾಸ್ಮಿನ್ ಪ್ರತಿಷ್ಠಿತಾಃ ।
ಗೃಹಕರ್ಮವಹೋ ಯಸ್ಮಾತ್ ತಸ್ಮಾದ್ ಗೃಹಪತಿಸ್ತು ಸಃ ॥೨೫॥

ಸ್ಥಾಲೀಪಾಕವು, ಗೃಹಸ್ಥರಿಗೆ ಸಂಬಂಧಪಟ್ಟ ಯಜ್ಞವು ಎಲ್ಲವೂ ಈ ಅಗ್ನಿಯಲ್ಲಿಯೇ ಪ್ರತಿಷ್ಠಿತವಾಗಿವೆ. ಗೃಹಸ್ಥರ ಕರ್ಮಗಳನ್ನು ಹೊತ್ತುಯ್ಯುವ ಕಾರಣದಿಂದ ಈ ಅಗ್ನಿಗೆ ಗೃಹಪತಿ ಎಂದು ಕರೆಯುತ್ತಾರೆ.

ಔಪಾಸನಂ ಚಾವಸಥ್ಯಂ ಸಭ್ಯಂ ಪಚನಪಾವಕಮ್ ।
ಆಹುರ್ಬ್ರಹ್ಮವಿದಃ ಕೇಚಿನ್ಮತಮೇತನ್ಮಮಾಪಿ ಚ ॥೨೬॥

ಕೆಲವು ಬ್ರಹ್ಮಜ್ಞಾನಿಗಳು ಔಪಾಸನ, ಆವಸಥ್ಯ, ಪಚನಪಾವಕ ಎಂಬುದಾಗಿ ಅಗ್ನಿಯ ಮೂರು ಪ್ರಕಾರಗಳನ್ನು ಹೇಳುತ್ತಾರೆ. ಇದು ನನಗೂ ಸಮ್ಮತವಾಗಿದೆ.

ಅಗ್ನಿಹೋತ್ರಪ್ರಕಾರಂ ತು ಶೃಣು ರಾಜನ್ ಸಮಾಹಿತಃ ।
ತ್ರಯಾಣಾಂ ಗುಣನಾಮಾನಿ ವಹ್ನೀನಾಮುಚ್ಯತೇ ಮಯಾ ॥೨೭॥

ಯುಧಿಷ್ಠಿರನೇ, ನಾನೀಗ ಹೇಳಲಿರುವ ಅಗ್ನಿಹೋತ್ರದ ಪ್ರಕಾರವನ್ನು ಕೇಳು. ಮೂರು ಅಗ್ನಿಯ ಗುಣಗಳಿಗೆ ಅನುಗುಣವಾದ ಹೆಸರುಗಳನ್ನು ತಿಳಿದುಕೊ.

ಗೃಹಾಣಾಂ ಹಿ ಪತಿತ್ವಂ ಹಿ ಗೃಹಪತ್ಯಮಿತಿ ಸ್ಮೃತಮ್ ।
ಗೃಹಪತ್ಯಂ ತು ಯಸ್ಯಾಸೀತ್ ತತ್ ತಸ್ಮಾದ್ ಗಾರ್ಹಪತ್ಯತಾ ॥೨೮॥

ಗೃಹಗಳ ಒಡೆತನವನ್ನು ಹೊಂದಿರುವುದು ಗೃಹಪತಿತ್ವವು. ಯಾವ ಅಗ್ನಿಯಲ್ಲಿ ಗೃಹಪತಿತ್ವವು ನೆಲೆಗೊಂಡಿದೆಯೋ ಆ ಅಗ್ನಿಯು ಗಾರ್ಹಪತ್ಯ ಎಂದು ಕರೆಸಿಕೊಳ್ಳಲ್ಪಡುತ್ತದೆ.

ಯಜಮಾನಂ ತು ಯಸ್ಮಾತ್ತು ದಕ್ಷಿಣಾಂ ತು ಗತಿಂ ನಯೇತ್ ।
ದಕ್ಷಿಣಾಗ್ನಿಂ ತಮಾಹುಸ್ತೇ ದಕ್ಷಿಣಾಯತನಂ ದ್ವಿಜಾಃ ॥೨೯॥

ಯಾವ ಅಗ್ನಿಯು ಯಜಮಾನನನ್ನು ದಕ್ಷಿಣಾಯನದ ಮಾರ್ಗದ ಮೂಲಕ ಸ್ವರ್ಗಕ್ಕೆ ಕೊಂಡೊಯ್ಯುವುದೋ ದಕ್ಷಿಣದಲ್ಲಿರುವುದೋ ಆ ಅಗ್ನಿಯನ್ನು ಬ್ರಾಹ್ಮಣರು ದಕ್ಷಿಣಾಗ್ನಿ ಎಂದು ಕರೆಯುತ್ತಾರೆ.

ಆಹುತಿಂ ಸಮ್ಯಗಾಖ್ಯಾತಾಂ ವಹಂತಂ ಹವ್ಯವಾಹನಮ್ ।
ಸರ್ವಹವ್ಯವಹೋ ವಹ್ನಿರ್ಗತಶ್ಚಾಹವನೀಯತಾಮ್ ॥೩೦॥

ಆಹುತಿ ಎಂಬುದು ಸರ್ವ ಎಂಬ ಅರ್ಥವನ್ನು ಹೇಳುತ್ತದೆ. ಹವ್ಯವನ್ನೇ ಹವನ ಎನ್ನುತ್ತಾರೆ. ಸಮಸ್ತ ಹವ್ಯಗಳನ್ನು ಯಾವ ಕಾರಣದಿಂದ ಅಗ್ನಿಯು ಒಯ್ಯುತ್ತಾನೋ ಆ ಕಾರಣದಿಂದ ಆಹವನೀಯ ಎಂಬ ಹೆಸರನ್ನು ಪಡೆದಿದ್ದಾನೆ.

ಯಸ್ತಾ ವಸಥ್ಯಂ ಜುಹುಯಾನ್ಮೂಲಾಗ್ನಿಂ ವಿಧಿವದ್ ದ್ವಿಜಃ ।
ಆವಸಥ್ಯಂ ತು ತಂ ಚಾಗ್ನಿಂ ಪಚನಾಗ್ನಿಂ ಪ್ರಚಕ್ಷತೇ ॥೩೧॥

ಯಾರು ಮೂಲಾಗ್ನಿಯನ್ನು ಆವಸಥ್ಯ ಎಂಬ ಹೆಸರಿನಿಂದ ವಿಧಿಬದ್ಧವಾಗಿ ಹೋಮಿಸುತ್ತಾರೋ ಅಂತಹ ಆವಸಥ್ಯ ಎಂಬ ಅಗ್ನಿಯನ್ನು ಪಚನಾಗ್ನಿ ಎಂದು ಕರೆಯುತ್ತಾರೆ.

ತೇಷಾಂ ಸಭಾಗತೋ ವಹ್ನಿಃ ಸಭ್ಯ ಇತ್ಯಭಿಧೀಯತೇ ।
ಆವಸಥ್ಯಸ್ತು ಯೋ ವಹ್ನಿಃ ಪ್ರಥಮಃ ಸ ಪ್ರಜಾಪತಿಃ ॥೩೨॥

ದೊಡ್ಡ ಯಜ್ಞಸಭೆಯಲ್ಲಿ ಸ್ಥಾಪಿಸುವ ವಹ್ನಿಯನ್ನು ಸಭ್ಯ ಎಂದು ಕರೆಯುತ್ತಾರೆ. ಆವಸಥ್ಯವಹ್ನಿಯು ಮೊದಲನೆಯ ವಹ್ನಿಯಾಗಿದ್ದು, ಪ್ರಜಾಪತಿಯು ಅದಕ್ಕೆ ಅಭಿಮಾನಿಯಾಗಿದ್ದಾನೆ.

ಬ್ರಹ್ಮಾ ಚ ಗಾರ್ಹಪತ್ಯೋಽಗ್ನಿಃ ತಸ್ಮಾದೇವ ತು ಸೋಽಭವತ್ ।
ದಕ್ಷಿಣಾಗ್ನಿಸ್ತ್ವಯಂ ರುದ್ರಃ ಕ್ರೋಧಾತ್ಮಾ ಚಂಡ ಏವ ಸಃ ॥೩೩॥

ಬ್ರಹ್ಮನೇ ಗಾರ್ಹಪತ್ಯಾಗ್ನಿಯು. ಕಾರಣ ಅವನು ಹುಟ್ಟಿರುವುದು ಗಾರ್ಹಪತ್ಯಾಗ್ನಿಯಲ್ಲಿ. ಕ್ರೋಧಾತ್ಮನಾದ, ಪ್ರಚಂಡನಾದ ರುದ್ರನೇ ದಕ್ಷಿಣಾಗ್ನಿ ಸ್ವರೂಪನಾಗಿದ್ದಾನೆ.

ಅಹಮಾಹವನೀಯೋಽಗ್ನಿರಾಹೋಮಾದ್ಯಸ್ಯ ವೈ ಮುಖೇ ।
ಸಭ್ಯೋಽಗ್ನಿಃ ಪಂಚಮೋ ಯಸ್ತು ಸ್ಕಂದ ಏವ ನರಾಧಿಪ ॥೩೪॥

ಹೋಮದ ಆರಂಭದಿಂದ ಕೊನೆಯ ತನಕ ಯಾವ ಅಗ್ನಿಯ ಮೂಲಕ ನನಗೆ ಆಹುತಿಯನ್ನು ನೀಡುತ್ತಾರೋ ಅಂತಹ ಆಹವನೀಯ ಅಗ್ನಿಯು ನಾನೇ ಆಗಿದ್ದೇನೆ. ಐದನೆಯ ಸಭ್ಯ ಎಂಬ ಅಗ್ನಿಗೆ ಷಣ್ಮುಖನು ಅಭಿಮಾನಿಯಾಗಿದ್ದಾನೆ.

ಪೃಥಿವೀ ಗಾರ್ಹಪತ್ಯೋಽಗ್ನಿರಂತರಿಕ್ಷಂ ಚ ದಕ್ಷಿಣಃ ।
ಸ್ವರ್ಗಮಾಹವನೀಯೋಽಗ್ನಿರೇವಮಗ್ನಿತ್ರಯಂ ಸ್ಮೃತಮ್ ॥೩೫॥

ಗಾರ್ಹಪತ್ಯಾಗ್ನಿಯನ್ನು ಸೇವಿಸಿದವನೂ, ದಕ್ಷಿಣಾಗ್ನಿಯನ್ನು ಸೇವಿಸಿದವನು ಅಂತರಿಕ್ಷಲೋಕವನ್ನೂ, ಆಹವನೀಯಾಗ್ನಿಯನ್ನು ಸೇವಿಸಿದವನು ಸ್ವರ್ಗಲೋಕವನ್ನು ಹೊಂದುತ್ತಾನೆ. ಹೀಗೆ ಮೂರು ಅಗ್ನಿಗಳು ಇವೆ.

ವೃತ್ತಶ್ಚ ಗಾರ್ಹಪತ್ಯೋಽಗ್ನಿರ್ಯಸ್ಮಾದ್ ವೃತ್ತಾ ಚ ಮೇದಿನೀ ।
ಅರ್ಧಚಂದ್ರಾಕೃತಿಃ ಖಂ ವೈ ದಕ್ಷಿಣಾಗ್ನಿಸ್ತಥಾ ಭವೇತ್ ॥೩೬॥

ಗಾರ್ಹಪತ್ಯಾಗ್ನಿಯ ಆಕಾರವು ವರ್ತುಲಾಕಾರವು. ಕಾರಣ ಪೃಥಿವಿಯ ಆಕಾರವು ವರ್ತುಲಾಕಾರವಾದುದರಿಂದ, ಇದಕ್ಕೆ ಸಂಬಂಧಿಸಿದ ಅಗ್ನಿಯ ಆಕಾರವೂ ವರ್ತುಲಾಕಾರವಾಗಿಯೇ ಇದೆ. ದಕ್ಷಿಣಾಗ್ನಿಯ ಆಕಾರವು ಅಂತರಿಕ್ಷ ಲೋಕದ ಆಕಾರವು. ಅಂತರಿಕ್ಷಲೋಕದ ಆಕಾರವು ಅರ್ಧಚಂದ್ರಾಕೃತಿಯ ಆಕಾರವು. ಅದರಂತೆ ದಕ್ಷಿಣಾಗ್ನಿಯ ಆಕಾರವೂ ಇದೆ.

ಚತುರಶ್ರಂ ತತಃ ಸ್ವರ್ಗಂ ನಿರ್ಮಲಂ ತು ನಿರಾಮಯಮ್ ।
ತಸ್ಮಾದಾಹವನೀಯೋಽಗ್ನಿರ್ಚತುರಶ್ರೋ ಭವೇನ್ನೃಪ ॥೩೭॥

ಚತುಷ್ಕೋಣದ ಆಕಾರವು ಆಹವನೀಯ ಅಗ್ನಿಯ ಆಕಾರವು. ಸ್ವರ್ಗಲೋಕವು ಚತುಃಕೋಣದಿಂದ ಕೂಡಿದೆ. ಆ ಕಾರಣದಿಂದ ಅದಕ್ಕೆ ಸಂಬಂಧಿಸಿದ ಅಗ್ನಿಯ ಆಕಾರವು ಚತುರಶ್ರದಿಂದಲೇ ಕೂಡಿದೆ.

ಜುಹುಯಾದ್ ಗಾರ್ಹಪತ್ಯಂ ಯೋ ಭುವಂ ಜಯತಿ ಸ ದ್ವಿಜಃ ।
ಜುಹೋತಿ ದಕ್ಷಿಣಾಗ್ನಿಂ ಯಃ ಸ ಜಯತ್ಯಂತರಿಕ್ಷಕಮ್ ॥೩೮॥

ಯಾವ ಬ್ರಾಹ್ಮಣನು ಗಾರ್ಹಪತ್ಯ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾನೋ ಅವನು ಭೂಮಿಯನ್ನು ಜಯಿಸುತ್ತಾನೆ. ದಕ್ಷಿಣಾಗ್ನಿಯಲ್ಲಿ ಹೋಮವನ್ನು ಮಾಡಿದವನು ಅಂತರಿಕ್ಷವನ್ನು ಜಯಿಸುತ್ತಾನೆ.

ಪೃಥಿವೀಮಂತರಿಕ್ಷಂ ಚ ದಿವಂ ಚರ್ಷಿಗಣೈಃ ಸಹ ।
ಜಯತ್ಯಾಹವನೀಯಂ ಯೋ ಜುಹುಯಾದ್ ಭಕ್ತಿಮಾನ್ ದ್ವಿಜಃ ॥೩೯॥

ಆಹವನಾಗ್ನಿಯಲ್ಲಿ ಹೋಮಮಾಡಿದವನು ಭಕ್ತಿಯಿಂದ ಹೋಮ ಮಾಡಿದಾಗ ಪೃಥಿವಿ, ಅಂತರಿಕ್ಷ, ಋಷಿಗಣಗಳಿಂದ ತುಂಬಿದ ದೇವಲೋಕ- ಎಲ್ಲವನ್ನೂ ಜಯಿಸುತ್ತಾನೆ.

ಆಭಿಮುಖ್ಯೇನ ಹೋಮಸ್ತು ಯಸ್ಯ ಯಜ್ಞೇಷು ವರ್ತತೇ ।
ತೇನಾಪ್ಯಾಹವನೀಯತ್ವಂ ಗತೋ ವಹ್ನಿರ್ಮಹಾದ್ಯುತಿಃ ॥೪೦॥

ಯಜ್ಞಗಳಲ್ಲಿ ಅಗ್ನಿಯು ಅಭಿಮುಖವಾಗಿರುವ ಎಲ್ಲ ಆಹುತಿಗಳು ಹೋಮ ಮಾಡಲ್ಪಡುವುದರಿಂದ ಅಥವಾ ಎಲ್ಲ ಅಗ್ನಿಗಳಿಗಿಂತ ಶ್ರೇಷ್ಠವಾಗಿರುವುದರಿಂದ ಈ ಅಗ್ನಿಗೆ ಆಹವನೀಯತ್ವ ಎಂಬ ಪದವಿಯು ಲಭಿಸಿದೆ. ಈ ಆಹವನೀಯಾಗ್ನಿಯು ಮಹಾಕಾಂತಿಯುಳ್ಳದ್ದು.

ಆಹೋಮಾದಗ್ನಿಹೋತ್ರೇಷು ಯಜ್ಞೈರ್ವಾ ಯತ್ರ ಸರ್ವಶಃ ।
ಯಸ್ಮಾದಸ್ಮಿನ್ ಪ್ರವರ್ತಂತೇ ತತೋ ಹ್ಯಾಹವನೀಯತಾ ॥೪೧॥

ಅಗ್ನಿಹೋತ್ರಗಳಲ್ಲಿ, ಇತರ ಯಜ್ಞಗಳಲ್ಲಿ ಆರಂಭದಿಂದ ಎಲ್ಲ ಕಡೆಯಿಂದಲೂ ಎಲ್ಲ ಆಹುತಿಗಳನ್ನೂ ಈ ಆಹವನೀಯಾಗ್ನಿಯಲ್ಲಿಯೇ ಹಾಕುವುದರಿಂದ ಈ ಅಗ್ನಿಗೆ ಆಹವನೀಯ ಎಂದು ಹೆಸರು.

ಯಸ್ತ್ವಾವಸಥ್ಯಂ ಜುಹುಯಾನ್ಮೂಲಾಗ್ನಿಂ ವಿಧಿವದ್ ದ್ವಿಜಃ ।
ಸ ತು ಸಪ್ತರ್ಷಿಲೋಕೇಷು ಸಪತ್ನೀಕಃ ಪ್ರಮೋದತೇ ॥೪೨॥

ಯಾವ ಬ್ರಾಹ್ಮಣನು ವಿಧಿಬದ್ಧವಾಗಿ ಮೂಲಾಗ್ನಿ ಎನಿಸಿದ ಆಹವನೀಯಾಗ್ನಿಯ ಮೂಲಕ ಹೋಮವನ್ನು ಮಾಡುತ್ತಾನೋ ಅವನು ಸಪತ್ನೀಕವಾಗಿ ಸಪ್ತರ್ಷಿಗಳ ಲೋಕದಲ್ಲಿ ಸಂತೋಷವನ್ನು ಹೊಂದುತ್ತಾನೆ.

ಯಶ್ಚಾಪ್ಯುಪಾಸನಃ(ಸತೇ) ಸಭ್ಯಂ ವಿಧಿವತ್ ಪ್ರಯತಾತ್ಮವಾನ್ ।
ಸ ಜಯೇದ್ ವಾಙ್ಮಯಂ ಸರ್ವಂ ತಥಾತ್ವೃಷಿಸಭಾಮಪಿ ॥೪೩॥

ಯಾವನು ಜಿತೇಂದ್ರಿಯಾಗ್ನಿಯಾಗಿ, ವಿಧಿಬದ್ಧವಾಗಿ ಸಭ್ಯ ಎಂಬ ಅಗ್ನಿಯನ್ನು ಉಪಾಸನೆ ಮಾಡುತ್ತಾನೋ ಅವನು ವಾಙ್ಮಯವಾದ ವೇದಪ್ರಪಂಚವನ್ನೂ ಜಯಿಸುತ್ತಾನೆ. ಋಷಿ ಸಭೆಯನ್ನೂ ಗೆಲ್ಲುತ್ತಾನೆ.

ಅಗ್ನೀನಾಮಥವಾऽಗ್ನೇऽಸ್ತು ಯಸ್ಯ ಹೋಮಃ ಪ್ರದೀಯತೇ ।
ಇಷ್ಟೋ ಭವತಿ ಸರ್ವಾಗ್ನಿರಗ್ನಿಹೋತ್ರಂ ಚ ಯದ್ಭವೇತ್ ॥೪೪॥

ಅಗ್ನಿಗಳಲ್ಲಿ ಅಥವಾ ಅಗ್ನಿಯಲ್ಲಿ ಯಾವನು ಹೋಮವನ್ನು ದಾನ ಮಾಡುತ್ತಾನೋ ಅಂಥ ಅಗ್ನಿಹೋತ್ರ ಮಾಡಿದವನಿಗೆ ಅಗ್ನಿದೇವನು ಪ್ರಸನ್ನನಾಗುತ್ತಾನೆ.

ತ್ರಾಣಾಯ ಯಜಮಾನಸ್ಯ ಚಾಗ್ನಿಹೋತ್ರಮಿತಿ ಸ್ಮೃತಮ್ ॥೪೫॥

ಯಜಮಾನನನ್ನು ರಕ್ಷಿಸುವ ದೃಷ್ಟಿಯಿಂದಲೇ ಅಗ್ನಿಹೋತ್ರ ಎಂಬ ಶಬ್ದವು ಪ್ರವೃತ್ತವಾಗಿದೆ.

ಹೋ ಇತ್ಯೇಷ ವಿಷಾದೋ ವೈ ವಿಷಾದೋ ದುಃಖಮುಚ್ಯತೇ ।
ದುಃಖಂ ತಾಪತ್ರಯಂ ಪ್ರೋಕ್ತಂ ಪಾಪಂ ಹಿ ನರಕಂ ವಿದುಃ ॥೪೬॥

'ಹೋ' ಎಂದರೆ ವಿಷಾದ ಎಂದು ಅರ್ಥ. ವಿಷಾದ ಎಂದರೆ ದುಃಖ ಎಂದರ್ಥ. ದುಃಖ ಎಂದರೆ ತಾಪತ್ರಯ ಎಂದರ್ಥ. ಪಾಪ ಎಂದರೆ ನರಕ ಎಂದರ್ಥ.

ತಸ್ಮಾದ್ ವೈ ತ್ರಾಯತೇ ದುಃಖಾದ್ ಯಜಮಾನಂ ಹುತೋऽನಲಃ ।
ತಸ್ಮಾತ್ತು ವಿಧಿವತ್ ಪ್ರೋಕ್ತಮಗ್ನಿಹೋತ್ರಮಿತಿ ಶ್ರುತೌ ॥೪೭॥

ಅಗ್ನಿಯನ್ನು ಉಪಾಸನೆ ಮಾಡುವ ವ್ಯಕ್ತಿಯನ್ನು 'ಹೋಮ' ಎಂಬ ದುಃಖದಿಂದ ರಕ್ಷಿಸುವುದರಿಂದ ಅಗ್ನಿಹೋತ್ರ ಎಂದು ಕರೆದಿದ್ದಾರೆ.

ತದಗ್ನಿಹೋತ್ರಂ ಸೃಷ್ಟಂ ವೈ ಬ್ರಹ್ಮಣಾ ಲೋಕಕರ್ತೃಣಾ ।
ವೇದಾಶ್ಚಾಪ್ಯಗ್ನಿಹೋತ್ರಾರ್ಥಂ ಜಜ್ಞಿರೇ ಸ್ವಯಮೇವ ತು ॥೪೮॥

ಈ ಅಗ್ನಿಹೋತ್ರವನ್ನು ಚತುರ್ಮುಖ ಬ್ರಹ್ಮನು ಜೀವರನ್ನು ಸೃಷ್ಟಿಸುವ ಸಂದರ್ಭದಲ್ಲಿ ಸೃಷ್ಟಿಸಿದ್ದಾನೆ. ಸಮಸ್ತ ವೇದಗಳು ಅಗ್ನಿಹೋತ್ರ ನಿಮಿತ್ತದಿಂದಲೇ ಸ್ವಯಂ ಪ್ರಾದುರ್ಭೂತಗಳಾಗಿವೆ.

ಅಗ್ನಿಹೋತ್ರಫಲಾ ವೇದಾಃ ಶೀಲವೃತ್ತಫಲಂ ಶ್ರುತಮ್ ।
ರತಿಪುತ್ರಫಲಾ ನಾರೀ ದತ್ತಭೋಗಫಲಂ ಧನಮ್ ॥೪೯॥

ವೇದಾಧ್ಯಯನಕ್ಕೆ ಫಲವು ಅಗ್ನಿಹೋತ್ರವೇ ಆಗಿದೆ. ಶೀಲ-ಸದಾಚಾರಗಳೇ ಶಾಸ್ತ್ರಜ್ಞಾನಕ್ಕೆ ಫಲವಾಗಿವೆ. ಸ್ತ್ರೀಯನ್ನು ವಿವಾಹ ಮಾಡಿಕೊಂಡ ಪ್ರಯೋಜನ ರತಿಸುಖ ಮತ್ತು ಸತ್ಸಂತಾನವಾಗಿದೆ. ದಾನ, ಭೋಗಗಳೆಂಬ ಫಲಗಳೇ ಧನದ ಸುಖವಾಗಿವೆ.

ತ್ರಿವೇದಮಂತ್ರಸಂಯೋಗಾದಗ್ನಿಹೋತ್ರಂ ಪ್ರವರ್ತತೇ ।
ಋಗ್ಯಜುಃ ಸಾಮಭಿಃ ಪುಣ್ಯೈಃ ಸ್ಥಾಪ್ಯತೇ ಸೂತ್ರಸಂಯುತೈಃ ॥೫೦॥

ಮೂರು ವೇದಗಳ ಮಂತ್ರಗಳ ಸಂಯೋಗದಿಂದ ಅಗ್ನಿಹೋತ್ರವು ಪ್ರವೃತ್ತವಾಗಿದೆ. ಋಗ್ಯಜುಸ್ಸಾಮಗಳ ಪವಿತ್ರ ಮಂತ್ರಗಳಿಂದಲೂ, ಮೀಮಾಂಸಾ ಸೂತ್ರಗಳಿಂದಲೂ ಅಗ್ನಿಹೋತ್ರದ ಪ್ರಯೋಗ ವಿಧಾನಗಳು ಪ್ರತಿಪಾದಿಸಲ್ಪಟ್ಟಿವೆ.

ವಸಂತೋ ಬ್ರಾಹ್ಮಣಸ್ಯ ಸ್ಯಾದ್ ಆಧೇಯೋಽಗ್ನಿರ್ನರಾಧಿಪ ।
ವಸಂತೋ ಬ್ರಾಹ್ಮಣಃ ಪ್ರೋಕ್ತೋ ವೇದಯೋನಿಃ ಸ ಉಚ್ಯತೇ ॥೫೧॥

ವಸಂತ ಕಾಲಾಭಿಮಾನಿಯು ಬ್ರಾಹ್ಮಣನಿಗೆ ನಿಯಾಮಕನಾಗಿದ್ದಾನೆ. ಆ ಋತುವನ್ನು ವೇದಗಳ ಯೋನಿ ಎನ್ನುತ್ತಾರೆ. ಆದ್ದರಿಂದ ವಸಂತ ಕಾಲದಲ್ಲಿ ಬ್ರಾಹ್ಮಣನು ಅಗ್ನಿಯನ್ನು ಪ್ರತಿಷ್ಠಾಪಿಸಬೇಕು.

ಅಗ್ನ್ಯಾಧೇಯಂ ತು ಯೇನಾಥ ವಸಂತೇ ಕ್ರಿಯತೇ ನೃಪ ।
ತಸ್ಯ ಶ್ರೀರ್ಬ್ರಹ್ಮವೃದ್ಧಿಶ್ಚ ಬ್ರಾಹ್ಮಣಸ್ಯ ವಿವರ್ಧತೇ ॥೫೨॥

ವಸಂತ ಋತುವಿನಲ್ಲಿ ಅಗ್ನಿಯನ್ನು ಸಂಸ್ಕಾರಪೂರ್ವಕವಾಗಿ ಪ್ರತಿಷ್ಠಾಪಿಸಿದ ಬ್ರಾಹ್ಮಣನಿಗೆ ಸಂಪತ್ತಿನ ಸಮೃದ್ಧಿಯೂ, ವೈದಿಕ ಜ್ಞಾನವೂ ಲಾಭವಾಗುತ್ತದೆ.

ಕ್ಷತ್ರಿಯಸ್ಯಾಗ್ನಿರಾಧೇಯೋ ಗ್ರೀಷ್ಮೇ ಶ್ರೇಷ್ಠಃ ಸ ವೈ ನೃಪ ॥೫೩॥

ಕ್ಷತ್ರಿಯನು ಗ್ರೀಷ್ಮಋತುವಿನಲ್ಲಿ ಅಗ್ನ್ಯಾಧಾನವನ್ನು ಮಾಡುವುದು ಶ್ರೇಷ್ಠ ಎನ್ನುತ್ತಾರೆ.

ಯೇನಾಧಾನಂ ತು ವೈ ಗ್ರೀಷ್ಮೇ ಕ್ರಿಯತೇ ತಸ್ಯ ವರ್ಧತೇ ।
ಶ್ರೀಃ ಪ್ರಜಾಃ ಪಶವಶ್ಚೈವ ವಿತ್ತಂ ತೇಜೋ ಬಲಂ ಯಶಃ ॥೫೪॥

ಗ್ರೀಷ್ಮಋತುವಿನಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿದ ಕ್ಷತ್ರಿಯನಿಗೆ ಸಂಪತ್ತು, ಸಂತಾನ, ಪಶು, ಧನ, ತೇಜಸ್ಸು, ಬಲ, ಯಶಸ್ಸುಗಳು ಅಭಿವೃದ್ಧಿಯನ್ನು ಹೊಂದುತ್ತವೆ.

ಶರದ್ ರಾತ್ರೇಽಥ ವೈಶ್ಯಸ್ಯ ಹ್ಯಾಧಾನೀಯೋ ಹುತಾಶನಃ ।
ಶರದ್ ರಾತ್ರಂ ಸ್ವಯಂ ವೈಶ್ಯೋ ವೈಶ್ಯಯೋನಿಃ ಸ ಉಚ್ಯತೇ ॥೫೫॥

ಶರತ್ಕಾಲದ ರಾತ್ರಿಯು ವೈಶ್ಯನ ಸ್ವರೂಪವೇ ಆಗಿದೆ. ಶರದೃತುವಿನ ರಾತ್ರಿಯನ್ನು ವೈಶ್ಯಯೋನಿ ಎಂದಿದ್ದಾರೆ. ವೈಶ್ಯನು ಶರದೃತುವಿನಲ್ಲಿ ಅಕ್ಕಿ ಸ್ಥಾಪಿಸಬೇಕು.

ಶರದ್ಯಾಧಾನಮೇವಂ ವೈ ಕ್ರಿಯತೇ ಯೇನ ಪಾಂಡವ ।
ತಸ್ಯಾಪಿ ಶ್ರೀಃ ಪ್ರಜಾಽಽಯುಶ್ಚ ಪಶವೋಽರ್ಥಶ್ಚ ವರ್ಧತೇ ॥೫೬॥

ಪಾಂಡವನೇ, ಆದ್ದರಿಂದ ವೈಶ್ಯನು ಶರದೃತುವಿನಲ್ಲಿ ಅಗ್ನಿಯನ್ನು ಆಧಾನ ಮಾಡಬೇಕು. ಹೀಗೆ ಮಾಡಿದ ವೈಶ್ಯನಿಗೆ ಸಂಪತ್ತು, ಸಂತಾನ, ಆಯುಸ್ಸು, ಪಶು, ಐಶ್ವರ್ಯಗಳು ವೃದ್ಧಿಯಾಗುತ್ತವೆ.

ಪಶವಃ ಸರ್ವ ಏವೈತೇ ತ್ರಿಭಿರ್ವೈದೈರಲಂಕೃತಾಃ ।
ಅಗ್ನಿಹೋತ್ರಾತ್ ಪ್ರವರ್ಧಂತೇ ತೈರೇವ ಧ್ರಿಯತೇ ಜಗತ್ ॥೫೭॥

ಸಂಪತ್ತು, ಪಶುಗಳು- ಈ ಎಲ್ಲ ಸುಖಸಾಧನಗಳು ವೇದಗಳಿಂದಲೇ ಅಲಂಕೃತವಾಗಿವೆ. ಯಾರು ವೇದಗಳ ಮೂಲಕ ಅಗ್ನಿಹೋತ್ರವನ್ನು ಮಾಡುತ್ತಾರೋ ಅವರ ಪಾಲಿಗೆ ಈ ಸಂಪತ್ತುಗಳು ಅಭಿವೃದ್ಧಿಯನ್ನು ಹೊಂದುತ್ತವೆ. ಅಗ್ನಿಹೋತ್ರದಿಂದಲೇ ಜಗತ್ತು ಧರಿಸಲ್ಪಟ್ಟಿದೆ.

ಗ್ರಾಮ್ಯಾರಣ್ಯಾಶ್ಚ ಪಶವಸ್ತಥಾ ವೃಕ್ಷಾಸ್ಸೃಣಾನಿ ಚ ।
ಫಲಾನ್ಯೋಷಧಯಶ್ಚಾಪಿ ಅಗ್ನಿಹೋತ್ರಕೃತೇ ಹಿ ತಾಃ ॥೫೮॥

ಗ್ರಾಮ್ಯ ಪದಾರ್ಥಗಳು, ಅರಣ್ಯಪದಾರ್ಥಗಳು, ಪಶುಗಳು, ವೃಕ್ಷಗಳು, ತೃಣಗಳು, ಫಲಗಳು, ಓಷಧಿಗಳು ಎಲ್ಲವೂ ಅಗ್ನಿಹೋತ್ರಕ್ಕಾಗಿ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿವೆ.

ರಸಾಃ ಸ್ನೇಹಾಸ್ತಥಾ ಗಂಧಾ ರತ್ನಾನಿ ಮಣಯಸ್ತಥಾ ।
ಕಾಂಚನಾನಿ ಚ ಲೋಹಾನಿ ಹ್ಯಗ್ನಿಹೋತ್ರಕೃತೇಽಭವನ್ ॥೫೯॥

ರಸಗಳು, ತುಪ್ಪ ಮೊದಲಾದ ಜಿಡ್ಡಿನ ಪದಾರ್ಥಗಳು, ಸುಗಂಧ ದ್ರವ್ಯಗಳು, ರತ್ನಗಳು, ಮಣಿಗಳು, ಸುವರ್ಣ ಮತ್ತು ಇನ್ನಿತರ ಲೋಹಗಳು ಎಲ್ಲವೂ ಅಗ್ನಿಹೋತ್ರ ನಿಮಿತ್ತವಾಗಿಯೇ ಉತ್ಪನ್ನವಾಗಿವೆ.

ಆಯುರ್ವೇದೋ ಧನುರ್ವೇದೋ ಮೀಮಾಂಸಾ ನ್ಯಾಯವಿಸ್ತರಃ ।
ಧರ್ಮಶಾಸ್ತ್ರಂ ಚ ತತ್ಸರ್ವಮಗ್ನಿಹೋತ್ರಕೃತೇ ಕೃತಮ್ ॥೬೦॥

ಆಯುರ್ವೇದ, ಧನುರ್ವೇದ, ಮೀಮಾಂಸಾ, ನ್ಯಾಯಶಾಸ್ತ್ರ, ಧರ್ಮಶಾಸ್ತ್ರ ಎಲ್ಲವೂ ಅಗ್ನಿಹೋತ್ರಕ್ಕಾಗಿಯೇ ಪ್ರತಿಪಾದಿಸಲ್ಪಟ್ಟಿವೆ.

ಛಂದಃ ಶಿಕ್ಷಾ ಚ ಕಲ್ಪಾಶ್ಚ ತಥಾ ವ್ಯಾಕರಣಂ ನೃಪ ।
ಜ್ಯೋತಿಃಶಾಸ್ತ್ರಂ ನಿರುಕ್ತಂ ಚಾಪ್ಯಗ್ನಿಹೋತ್ರಕೃತೇ ಕೃತಮ್ ॥೬೧॥

ಛಂದಸ್ಸು, ಶಿಕ್ಷಾ, ಕಲ್ಪಾ, ವ್ಯಾಕರಣ, ಜ್ಯೋತಿಃಶಾಸ್ತ್ರ, ನಿರುಕ್ತ ಎಲ್ಲವೂ ಅಗ್ನಿಹೋತ್ರಕ್ಕಾಗಿಯೇ ಸೃಷ್ಟಿಸಲ್ಪಟ್ಟಿವೆ.

ಇತಿಹಾಸಪುರಾಣಾಶ್ಚ ಗಾಥಾಶ್ಚೋಪನಿಷತ್ ತಥಾ ।
ಆಥರ್ವಣಾನಿ ಕರ್ಮಾಣಿ ಚಾಗ್ನಿಹೋತ್ರಕೃತೇ ಕೃತಮ್ ॥೬೨॥

ಇತಿಹಾಸ-ಪುರಾಣಗಳು, ಗಾಥೆಗಳು, ಉಪನಿಷತ್ತುಗಳು, ಅಥರ್ವ ಪ್ರಕ್ರಿಯೆಗಳು ಇವೆಲ್ಲವೂ ಅಗ್ನಿಹೋತ್ರಕ್ಕಾಗಿಯೇ ಸೃಷ್ಟಿಸಲ್ಪಟ್ಟಿವೆ.

ಯಚ್ಚೈತಸ್ಯಾಂ ಪೃಥಿವ್ಯಾಂ ಹಿ ಕಿಂಚಿದಸ್ತಿ ಚರಾಚರಮ್ ।
ತತ್ಸರ್ವಮಗ್ನಿಹೋತ್ರಸ್ಯ ಕೃತೇ ಸೃಷ್ಟಂ ಸ್ವಯಂಭುವಾ ॥೬೩॥

ಈ ಜಗತ್ತಿನಲ್ಲಿ ಚರಾಚರ ಎಂದು ಏನು ತೋರುತ್ತದೋ ಅದೆಲ್ಲವೂ ಅಗ್ನಿಹೋತ್ರಕ್ಕಾಗಿಯೇ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿವೆ.

ಅಗ್ನಿಹೋತ್ರಸ್ಯ ದರ್ಶಸ್ಯ ಪೂರ್ಣಮಾಸಸ್ಯ ಚಾಪ್ಯಥ ।
ಯೂಪೇಷ್ಟಿಪಶುಬಂಧಾನಾಂ ಸೋಮಪಾನಕ್ರಿಯಾವತಾಮ್ ॥೬೪॥

ತಿಥಿನಕ್ಷತ್ರಯೋಗಾನಾಂ ಮುಹೂರ್ತಕರಣಾತ್ಮನಾಮ್ ।
ಕಾಲಸ್ಯ ವೇದನಾರ್ಥಂ ತು ಜ್ಯೋತಿರ್ಜ್ಞಾನಂ ಕೃತಂ ಪುರಾ ॥೬೫॥

ಅಗ್ನಿಹೋತ್ರ, ದರ್ಶಪೂರ್ಣ ಮಾಸ ಯಾಗಗಳು, ಯೂಪ, ಇಷ್ಟಿ, ಪಶುಬಂಧ, ಸೋಮಪಾನ ಕ್ರಿಯೆಗಳು, ತಿಥಿ, ನಕ್ಷತ್ರ, ಯೋಗ, ಮುಹೂರ್ತ, ಕರಣ ಇವುಗಳ ಕಾಲಜ್ಞಾನವನ್ನು ತಿಳಿಯಲು ಜ್ಯೋತಿಶ್ಶಾಸ್ತ್ರವನ್ನು ಹಿಂದೆ ರಚಿಸಿದ್ದಾರೆ.

ಋಗ್ಯಜುಃಸಾಮಮಂತ್ರಾಣಾಂ ಶ್ಲೋಕತತ್ತ್ವಾರ್ಥಚಿಂತನಾತ್ ।
ಪ್ರತ್ಯಾಪತ್ತಿವಿಕಲ್ಪಾನಾಂ ಛಂದೋಜ್ಞಾನಂ ಪ್ರಕಲ್ಪಿತಮ್ ॥೬೬॥

ಋಗ್ವೇದ, ಯಜುರ್ವೇದ, ಸಾಮವೇದ ಮಂತ್ರಗಳ ಛಂದಸ್ಸುಗಳನ್ನು ತಿಳಿಯುವ ದೃಷ್ಟಿಯಿಂದ, ಸಂಶಯ-ವಿಕಲ್ಪಗಳನ್ನು ಪರಿಹರಿಸುವ ದೃಷ್ಟಿಯಿಂದ ಛಂದಶ್ಶಾಸ್ತ್ರವು ರಚಿತವಾಗಿದೆ.

ವರ್ಣಾಕ್ಷರಪದಾರ್ಥಾನಾಂ ಸಂಧಿಲಿಂಗವಿವಕ್ಷಿತಮ್ ।
ನಾಮಧಾತುವಿವೇಕಾರ್ಥಂ ಪುರಾ ವ್ಯಾಕರಣಂ ಕೃತಮ್ ॥೬೭॥

ವರ್ಣ, ಅಕ್ಷರ, ಪದಗಳ ಅರ್ಥ, ಸಂಧಿ, ಲಿಂಗ, ನಾಮ, ಧಾತು ಇವುಗಳ ವಿವೇಚನೆಗಾಗಿ ವ್ಯಾಕರಣಶಾಸ್ತ್ರವು ರಚಿಸಲ್ಪಟ್ಟಿದೆ.

ಯೂಪವೇದ್ಯಧ್ವರಾರ್ಥಂ ತು ಪ್ರೋಕ್ಷಣಶ್ರಪಣಾಯ ತು ।
ಯಜ್ಞದೈವತಯೋಗಾರ್ಥಂ ಶಿಕ್ಷಾಜ್ಞಾನಂ ಪ್ರಕಲ್ಪಿತಮ್ ॥೬೮॥

ಯೂಪ, ವೇದಿ, ಯಜ್ಞಗಳ ಸ್ವರೂಪವನ್ನು ತಿಳಿಯಲು, ಪ್ರೋಕ್ಷಣ, ಶ್ರಪಣ (ಚರುವನ್ನು ಬೇಯಿಸುವುದು) ಮುಂತಾದವುಗಳನ್ನು ಸರಿಯಾಗಿ ತಿಳಿಯಲು, ಯಜ್ಞ ಮತ್ತು ದೇವತೆಗಳಿರುವ ಸಂಬಂಧವನ್ನು ತಿಳಿಯಲು ಶಿಕ್ಷಾ ಎಂಬ ವೇದಾಂಗದ ರಚನೆಯಾಗಿದೆ.

ಯಜ್ಞಪಾತ್ರಪವಿತ್ರಾರ್ಥಂ ದ್ರವ್ಯಸಂಭರಣಾಯ ಚ ।
ಸರ್ವಯಜ್ಞವಿಕಲ್ಪಾಯ ಪುರಾ ಕಲ್ಪಂ ಪ್ರಕಲ್ಪಿತಮ್ ॥೬೯॥)

ಯಜ್ಞಪಾತ್ರೆಗಳ ಶುದ್ಧಿ, ಯಜ್ಞಸಂಬಂಧವಾದ ಸಾಮಗ್ರಿಗಳ ಸಂಗ್ರಹ, ಸರ್ವಯಜ್ಞಗಳ ವೈಕಲ್ಪಿಕ ವಿಧಾನಗಳ ಜ್ಞಾನ-ಇವುಗಳನ್ನು ತಿಳಿಯುವ ದೃಷ್ಟಿಯಿಂದ ಕಲ್ಪಶಾಸ್ತ್ರವು ರಚಿತವಾಗಿದೆ.

ನಾಮಧಾತುವಿಭಕ್ತೀನಾಂ ತತ್ತ್ವಾರ್ಥನಿಯಮಾಯ ಚ ।
ಸರ್ವವೇದನಿರುಕ್ತಾನಾಂ ನಿರುಕ್ತಮೃಷಿಭಿಃ ಕೃತಮ್ ॥೭೦॥

ಸಮಗ್ರ ವೇದದಲ್ಲಿ ಪ್ರಯೋಗಿಸಿರುವ ನಾಮ, ಧಾತು, ವಿಭಕ್ತಿಗಳ ತಾತ್ತ್ವಿಕಾರ್ಥವನ್ನು ನಿಶ್ಚಯಿಸುವ ದೃಷ್ಟಿಯಿಂದ ಋಷಿಗಳು ನಿರುಕ್ತ ಎಂಬ ಶಾಸ್ತ್ರವನ್ನು ರಚಿಸಿದ್ದಾರೆ.

ವೇದ್ಯರ್ಥಂ ಪೃಥಿವೀ ಸೃಷ್ಟಾ ಸಂಭಾರಾರ್ಥಂ ತಥೈವ ಚ ।
ಇಧ್ಮಾರ್ಥಮಥ ಯೂಪಾರ್ಥಂ ಬ್ರಹ್ಮಾ ಚಕ್ರೇ ವನಸ್ಪತಿಮ್ ॥೭೧॥

ಯಜ್ಞದ ವೇದಿಗಳನ್ನು ನಿರ್ಮಿಸುವ ದೃಷ್ಟಿಯಿಂದ, ಯಜ್ಞಕ್ಕೆ ಬೇಕಾಗಿರುವ ಪದಾರ್ಥಗಳನ್ನು ಇಡುವ ದೃಷ್ಟಿಯಿಂದ ಬ್ರಹ್ಮನು ಪೃಥಿವಿಯನ್ನು ನೇಮಿಸಿದ್ದಾನೆ. ಯಜ್ಞಕ್ಕೆ ಬೇಕಾಗುವ ಸಮಿತ್ತುಗಳ ಸಲುವಾಗಿ, ಯೂಪಗಳ (ಬಲಿಗಂಬ) ಸಲುವಾಗಿ ಬ್ರಹ್ಮನು ವನಸ್ಪತಿಗಳನ್ನು ಸೃಷ್ಟಿಸಿದ್ದಾನೆ.

ಗ್ರಾಮ್ಯಾರಣ್ಯಾಶ್ಚ ಪಶವೋ ಜಾಯಂತೇ ಯಜ್ಞಕಾರಣಾತ್ ।
ಮಂತ್ರಾಣಾಂ ವಿನಿಯೋಗಂ ಚ ಪ್ರೋಕ್ಷಣಶ್ರಪಣಂ ತಥಾ ॥೭೨॥

ಗ್ರಾಮ್ಯಪದಾರ್ಥಗಳು, ಅರಣ್ಯಪದಾರ್ಥಗಳು, ಪಶುಗಳು ಯಜ್ಞ ಕಾರಣದಿಂದಲೇ ಸೃಷ್ಟವಾಗಿವೆ. ಮಂತ್ರಗಳ ವಿನಿಯೋಗಕ್ಕೆ ಪ್ರೋಕ್ಷಣ, ಶ್ರಪಣಗಳು (ಚರುವನ್ನು ಬೇಯಿಸುವುದು) ನಿರ್ಮಾಣವಾಗಿವೆ .

ಅನುಯಾಜಪ್ರಯಾಜಾಶ್ಚ ಮರುತಾಂ ಶಂಸಿನಸ್ತಥಾ ।
ಔದಾತ್ತಂ ಚೈವ ಸಾಮ್ನಾಂ ವೈ ಪ್ರತಿಪ್ರಸ್ಥಾನಮೇವ ಚ ॥೭೩॥

ವಿಷ್ಣುಕ್ರಮೋಽನುತ್ತಮಣಂ ದಕ್ಷಿಣಾವಭೃಥಂ ತಥಾ ।
ತ್ರಿಕಾಲಮರ್ಚನಂ ಚೈವ ಸ್ಥಾನೇಷೂಪಹೃತಂ ತಥಾ ॥೭೪॥

ದೇವತಾಗ್ರಹಣಂ ಮೋಕ್ಷಂ ಹವಿಷಾಂ ಶ್ರಪಣಂ ತಥಾ ।
ನಾವಬುದ್ಧ್ಯಂತಿ ಯೇ ವಿಪ್ರಾ ನಿಂದಂತಿ ಚ ಪಶೋರ್ವಧಮ್ ॥೭೫॥

ತೇ ಯಾಂತಿ ನರಕಂ ಘೋರಂ ರೌರವಂ ತಮಸಾಽಽವೃತಮ್ ॥೭೬॥

ಅನುಯಾಜ-ಪ್ರಯಾಜಗಳು, ಮರುದ್ದೇವತೆಗಳ ಪ್ರಶಂಸೆಗಳು, ಉದ್ಗಾತ್ರ, ಸಾಮ, ಪ್ರತಿಪ್ರಸ್ಥಾನ, ದೀಕ್ಷಾಹೋಮ, ಬಳಿಕ ನಡೆಯುವ ಕರ್ಮಗಳು, ದಕ್ಷಿಣಾವಭೃಥ, ತ್ರಿಕಾಲಪೂಜೆ, ಸ್ಥಾನಗಳಲ್ಲಿ ತಂದ ಪದಾರ್ಥಗಳು, ದೇವತಾಗ್ರಹಣ, ಮೋಕ್ಷ, ಹವಿಸ್ಸುಗಳ ಶ್ರಪಣ (ಬೇಯಿಸುವಿಕೆ) - ಇವುಗಳನ್ನು ಯಾವ ಬ್ರಾಹ್ಮಣರು ಅರಿಯದೆ ವ್ಯರ್ಥವಾಗಿ ಪಶುವಧೆಯನ್ನು ನಿಂದಿಸುತ್ತಾರೋ ಅವರು ಕತ್ತಲೆಯಿಂದ ಕೂಡಿದ ಘೋರವಾದ ರೌರವ ನರಕಕ್ಕೆ ಸಾಗುತ್ತಾರೆ.

ಶತವರ್ಷಸಹಸ್ರಾಣಿ ತತ್ರ ಸ್ಥಿತ್ವಾ ನರಾಧಮಾಃ ।
ಕ್ರಿಮಿಭಿರ್ಭಕ್ಷ್ಯಮಾಣಾಶ್ಚ ತಿಷ್ಠೇಯುಃ ಪೂಯಶೋಣಿತೇ ॥೭೭॥

ಅಂತಹ ನರಾಧಮರು ಲಕ್ಷ ವರ್ಷಗಳ ಕಾಲ ರೌರವನರಕದಲ್ಲಿದ್ದು ಮಲ, ರಕ್ತಗಳಿಂದ ತುಂಬಿದ ಬಾವಿಗಳಲ್ಲಿ ಕ್ರಿಮಿಗಳಿಂದ ತಿನ್ನಲ್ಪಡುವವರಾಗಿ ವಾಸ ಮಾಡುತ್ತಾರೆ.

ಯೂಪಾಸ್ತು ಮಂತ್ರಸಂಸ್ಕಾರೈರೇಷಾಂ ವೈ ಪಶವಸ್ತಥಾ ।
ಯಜಮಾನೇನ ಸಹಿತಾಃ ಸ್ವರ್ಗಂ ಯಾಂತಿ ನರೇಶ್ವರ ॥೭೮॥

ಯಜ್ಞದ ಪ್ರಕ್ರಿಯೆಯಲ್ಲಿ ಮಂತ್ರಸಂಸ್ಕೃತವಾದ ಯೂಪವಾಗಿ (ಬಲಿಗಂಬ) ನಿಂತಿರುವ ಸ್ಥಾವರ ಜೀವರು, ಪಶುಗಳು ಯಜಮಾನನಿಂದ ಸಹಿತವಾಗಿ ನರೇಶ್ವರನೇ, ಸ್ವರ್ಗಕ್ಕೆ ಹೋಗುತ್ತಾರೆ.

ಯಾವತ್ಕಾಲಂ ಹಿ ಯಜ್ವಾ ವೈ ಸ್ವರ್ಗಲೋಕೇ ಮಹೀಯತೇ ।
ತಾವತ್ಕಾಲಂ ಪ್ರಮೋದಂತೇ ಪಶವೋ ಹ್ಯಧ್ವರೇ ಹತಾಃ ॥೭೯॥

ಎಷ್ಟು ಕಾಲ ಯಜ್ಞದಲ್ಲಿ ಇವುಗಳ ಬಳಕೆಯಾಗಿದೆಯೋ ಅಷ್ಟು ಕಾಲ ಅಧ್ವರ (ಯಾಗ)ದಲ್ಲಿ ಹತವಾದ ಪಶುಗಳು ಸ್ವರ್ಗಲೋಕದಲ್ಲಿ ಸುಖದಿಂದ ಕಾಲ ಕಳೆಯುತ್ತವೆ.

ವೃಕ್ಷಾ ಯೂಪತ್ವಮಿಚ್ಛಂತಿ ಪಶುತ್ವಂ ಪಶವಸ್ತಥಾ ।
ತೃಣಾನೀಚ್ಛಂತಿ ಬರ್ಹಿಷ್ಟ್ವಂ ಓಷಧ್ಯಶ್ಚ ಹವಿಷ್ಯತಾಮ್ ॥೮೦॥

ಮರ-ಗಿಡಗಳೆಲ್ಲವೂ ಯಜ್ಞದ ಯೂಪವಾಗಬೇಕು ಎಂದು ಬಯಸುತ್ತವೆ. ಪಶುಗಳೆಲ್ಲವೂ ಯಜ್ಞದ ಬಲಿಪಶುವಾಗಬೇಕೆಂದು ಬಯಸುತ್ತವೆ. ತೃಣ-ದರ್ಭೆಗಳು ಇಧ್ಮಬರ್ಹಿಗಳಾಗಬೇಕೆಂದು ಬಯಸುತ್ತವೆ. ಓಷಧಿಸಸ್ಯಗಳು ಯಜ್ಞದಲ್ಲಿ ಹವಿಸ್ಸಾಗಬೇಕೆಂದು ಬಯಸುತ್ತವೆ.

ಸೋಮತ್ವಂ ಚಲ ತಾಃ ಸರ್ವಾ ವೇದಿತ್ವಂ ಚ ವಸುಂಧರಾ ॥೮೧॥

ಲತೆಗಳೆಲ್ಲವೂ ಯಜ್ಞದಲ್ಲಿ ಸೋಮತ್ವವನ್ನು ಹೊಂದಬೇಕೆಂದು ಬಯಸುತ್ತವೆ. ಭೂದೇವಿಯು ಯಜ್ಞವೇದಿಕೆಯಾಗಬೇಕೆಂದು ಬಯಸುತ್ತಾಳೆ.

ಯಸ್ಮಾತ್ ಪಶುತ್ವಮಿಚ್ಛಂತಿ ಪಶವಃ ಸ್ವರ್ಗಲಿಪ್ಸಯಾ ।
ತಸ್ಮಾತ್ ಪಶುವಧೇ ಹಿಂಸಾ ನಾಸ್ತಿ ಯಜ್ಞೇಷು ಪಾಂಡವ ॥೮೨॥

ಯಾವ ಕಾರಣದಿಂದ ಸ್ವರ್ಗವನ್ನು ಹೊಂದುವ ಬಯಕೆಯಿಂದ ಪಶುಗಳು ಯಜ್ಞದ ಬಲಿಪಶುವಾಗಬೇಕೆಂದು ಬಯಸುತ್ತವೆಯೋ ಆ ಕಾರಣದಿಂದ ಯಜ್ಞದಲ್ಲಿ ಪಶುವಧೆಯು ಹಿಂಸೆ ಎನಿಸುವುದಿಲ್ಲ.

ಅಹಿಂಸಾ ವೈದಿಕಂ ಕರ್ಮ ಬ್ರಹ್ಮಕರ್ಮೇತಿ ತತ್ಕೃತಮ್ ॥೮೩॥

ವೈದಿಕವಾದ ಕರ್ಮಗಳನ್ನು ಅಹಿಂಸಾ ಕರ್ಮ ಎನ್ನುತ್ತಾರೆ. ಬ್ರಹ್ಮಕರ್ಮ ಎಂದೂ ಹೇಳುತ್ತಾರೆ.

ವೇದೋಕ್ತಂ ಯೇ ನ ಕುರ್ವಂತಿ ಹಿಂಸಾಬುದ್ಧ್ಯಾ ಕ್ರತೂನ್ ದ್ವಿಜಾಃ ।
ಸದ್ಯಃ ಶೂದ್ರತ್ವಮಾಯಾಂತಿ ಪ್ರೇತ್ಯ ಚಂಡಾಲತಾಮಪಿ ॥೮೪॥

ವೇದೋಕ್ತವಾದ ಯಜ್ಞಗಳನ್ನು ಯಾವ ಬ್ರಾಹ್ಮಣರು ಹಿಂಸೆ ಎನ್ನುವ ಬುದ್ಧಿಯಿಂದ ಆಚರಿಸುವುದಿಲ್ಲವೋ ಅವರು ಕೂಡಲೇ ಶೂದ್ರತ್ವವನ್ನು ಹೊಂದುತ್ತಾರೆ. ಸತ್ತ ಬಳಿಕ ಚಂಡಾಲರಾಗುತ್ತಾರೆ.

ಗಾವೋ ಯಜ್ಞಾರ್ಥಮುತ್ಪನ್ನಾ ದಕ್ಷಿಣಾರ್ಥಂ ತಥೈವ ಚ ।
ಸುವರ್ಣಂ ರಜತಂ ಚೈವ ಪಾತ್ರಕುಂಭಾರ್ಥಮೇವ ಚ ॥೮೫॥

ಹಸುಗಳು ಯಜ್ಞಕ್ಕಾಗಿಯೇ ಸೃಷ್ಟಿಸಲ್ಪಟ್ಟಿವೆ. ಅದೇ ರೀತಿ ಯಜ್ಞದ ದಕ್ಷಿಣೆಗಾಗಿಯೂ ಸೃಷ್ಟಿಸಲ್ಪಟ್ಟಿವೆ. ಚಿನ್ನ ಮತ್ತು ಬೆಳ್ಳಿಗಳು ಯಜ್ಞದಲ್ಲಿ ಬೇಕಾಗುವ ಪಾತ್ರೆಗಳ ನಿಮಿತ್ತದಿಂದ, ಕಲಶಗಳ ದೃಷ್ಟಿಯಿಂದ ಸೃಷ್ಟಿಸಲ್ಪಟ್ಟಿವೆ.

ದರ್ಭಾಃ ಸಂಸ್ತರಣಾರ್ಥಂ ತು ರಕ್ಷಸಾಂ ರಕ್ಷಣಾಯ ಚ ।
ಯಜನಾರ್ಥಂ ದ್ವಿಜಾಃ ಸೃಷ್ಟಾಸ್ತಾರಕಾ ದಿವಿ ದೇವತಾಃ ॥೮೬॥

ದರ್ಭೆಗಳು ಯಜ್ಞವೇದಿಕೆಯ ಸುತ್ತಲೂ ಹರಡುವ ದೃಷ್ಟಿಯಿಂದ, ರಾಕ್ಷಸರ ದೆಸೆಯಿಂದ ಯಜ್ಞವನ್ನು ರಕ್ಷಿಸುವ ದೃಷ್ಟಿಯಿಂದಲೂ ಸೃಷ್ಟಿಸಲ್ಪಟ್ಟಿವೆ. ಬ್ರಾಹ್ಮಣರು ಯಾಗ ಮಾಡಿಸಲು, ನಕ್ಷತ್ರಗಳ, ದೇವತೆಗಳ ಸೃಷ್ಟಿಯು ಆಗಿದೆ.

ಕ್ಷತ್ರಿಯಾ ರಕ್ಷಣಾರ್ಥಂ ತು ವೈಶ್ಯಾ ವಾರ್ತಾನಿಮಿತ್ತತಃ ।
ಶುಶ್ರೂಷಾರ್ಥಂ ತ್ರಯಾಣಾಂ ತು ಶೂದ್ರಾಃ ಸೃಷ್ಟಾಃ ಸ್ವಯಂಭುವಾ ॥

ಬ್ರಹ್ಮಜಾತಿಯನ್ನು ರಕ್ಷಿಸುವ ಸಲುವಾಗಿ ಕ್ಷತ್ರಿಯರ ಸೃಷ್ಟಿಯಾಗಿದೆ. ಕೃಷಿ-ಗೋರಕ್ಷ-ವಾಣಿಜ್ಯಗಳ ದೃಷ್ಟಿಯಿಂದ ವೈಶ್ಯರನ್ನು ಬ್ರಹ್ಮನು ಸೃಷ್ಟಿಸಿದ್ದಾನೆ. ಮೂರು ವರ್ಣದವರನ್ನು ಸೇವಿಸುವ ದೃಷ್ಟಿಯಿಂದ ಬ್ರಹ್ಮನು ಶೂದ್ರರನ್ನು ಸೃಷ್ಟಿಸಿದ್ದಾನೆ.

ಏವಮೇತಜ್ಜಗತ್ ಸರ್ವಮಗ್ನಿಹೋತ್ರಕೃತೇ ಕೃತಮ್ ॥೮೮॥

ಈ ರೀತಿಯಾಗಿ ಸಮಗ್ರ ಜಗತ್ತು ಅಗ್ನಿಹೋತ್ರ ದೃಷ್ಟಿಯಿಂದಲೇ ಸೃಷ್ಟಿಸಲ್ಪಟ್ಟಿದೆ.

ನಾವಬುದ್ಧ್ಯಂತಿ ಯೇ ಚೈವಂ ನರಾಸ್ತು ತಮಸಾ ವೃತಾಃ ।
ತೇ ಯಾಂತಿ ನರಕಂ ಘೋರಂ ರೌರವಂ ನಾಮ ವಿಶ್ರುತಮ್ ॥೮೯॥

ಯಾರು ಈ ಉದ್ದೇಶಗಳನ್ನು ಅಜ್ಞಾನದಿಂದ ಆವೃತರಾಗಿ ಅರ್ಥ ಮಾಡಿಕೊಳ್ಳುವುದಿಲ್ಲವೋ ಅವರು ಪ್ರಸಿದ್ಧವಾದ ರೌರವವೆಂಬ ನರಕಕ್ಕೆ ಹೋಗುತ್ತಾರೆ.

ರೌರವಾದ್ ವಿಪ್ರಯುಕ್ತಾಸ್ತು ಕ್ರಿಮಿಯೋನಿಂ ವ್ರಜಂತಿ ತೇ ॥೯೦॥

ರೌರವ ನರಕದಿಂದ ಬಿಡುಗಡೆ ಹೊಂದಿದರೂ ಕ್ರಿಮಿಯೋನಿಯಲ್ಲಿಯೇ ಹುಟ್ಟುತ್ತಾರೆ.

ಯಥೋಕ್ತಮಗ್ನಿಹೋತ್ರಾಣಾಂ ಶುಶ್ರೂಷಂತಿ ಚ ಯೇ ದ್ವಿಜಾಃ ।
ತೈಸ್ತು ದತ್ತಂ ಹುತಂ ಚೇಷ್ಟಂ ದತ್ತಮಧ್ಯಾಪಿತಂ ಭವೇತ್ ॥೯೧॥

ಯಾವ ಬ್ರಾಹ್ಮಣರು ಶ್ರದ್ಧೆಯಿಂದ ಅಗ್ನಿಹೋತ್ರವನ್ನು ಮಾಡುತ್ತಾರೋ ಅವರು ಮಾಡಿದ ದಾನ, ಮಾಡಿದ ಯಜ್ಞ, ಹೋಮ, ಅಧ್ಯಯನ ಇವುಗಳ ಫಲವನ್ನು ಹೊಂದುತ್ತಾರೆ.

ಏವಮಿಷ್ಟಂ ಚ ಪೂರ್ತಂ ಚ ಯದ್ ವಿಪ್ರೈಃ ಕ್ರಿಯತೇ ನೃಪ ।
ತತ್ಸರ್ವಂ ಸಮ್ಯಗಾಹೃತ್ಯ ಚಾದಿತ್ಯೇ ಸ್ಥಾಪಯಾಮ್ಯಹಮ್ ॥೯೨॥

ಯಾವ ಬ್ರಾಹ್ಮಣರು ಯಜ್ಞಗಳನ್ನು ಮಾಡುತ್ತಾರೋ, ಲೋಕೋಪಕಾರಗಳನ್ನು ಮಾಡುತ್ತಾರೋ, ಅದೆಲ್ಲವನ್ನೂ ಭಗವಂತನಾದ ನಾನು ಸ್ವೀಕರಿಸಿ, ಸೂರ್ಯಮಂಡಲದಲ್ಲಿ ಆ ಪುಣ್ಯವನ್ನು ಸ್ಥಾಪಿಸುತ್ತೇನೆ.

ಮಯಾ ಸ್ಥಾಪಿತಮಾದಿತ್ಯೇ ಲೋಕಸ್ಯ ಸುಕೃತಂ ಹಿ ಯತ್ ।
ಧಾರಯೇತ್ ತತ್ ಸಹಸ್ರಾಂಶುಃ ಸುಕೃತಂ ಹ್ಯಗ್ನಿಹೋತ್ರಿಣಾಮ್ ॥೯೩॥

ಹೀಗೆ ಸೂರ್ಯನು ಅಗ್ನಿಹೋತ್ರಗಳ ಸುಕೃತವನ್ನು ನನ್ನ ಮೂಲಕ ಧರಿಸುತ್ತಾನೆ. ಆದ್ದರಿಂದ ಆದಿತ್ಯನಲ್ಲಿ ಸ್ಥಾಪಿಸಿದ ಲೋಕದ ಸುಕೃತವೇ ಆದಿತ್ಯರೂಪದಲ್ಲಿ ಕಾಣುತ್ತಿದೆ. ಅಗ್ನಿಹೋತ್ರಿಗಳ ಸುಕೃತವನ್ನು ಆದಿತ್ಯನು ಧರಿಸಿರುತ್ತಾನೆ.

ಯಾವತ್ಕಾಲಂ ತು ತಿಷ್ಠಂತಿ ಲೋಕೇ ಚಾಪ್ಯಗ್ನಿಹೋತ್ರಿಣಃ ।
ತಾವದೇವ ಹಿ ಪುಣ್ಯೇನ ದೀಪ್ಯತೇ ರವಿಣಾऽಂಬರೇ ॥೯೪॥

ಎಷ್ಟುಕಾಲ ಈ ಲೋಕದಲ್ಲಿ ಬ್ರಾಹ್ಮಣರು ಅಗ್ನಿಹೋತ್ರಿಗಳಾಗಿ ಸತ್ಕರ್ಮಗಳನ್ನು ಮಾಡುತ್ತಿರುತ್ತಾರೋ ಆ ಪುಣ್ಯದಿಂದ ಅಷ್ಟುಕಾಲ ಅಂತರಿಕ್ಷಲೋಕದಲ್ಲಿ ಸೂರ್ಯನ ಜೊತೆಗೆ ಬೆಳಗುತ್ತಾರೆ.

ಸ್ವರ್ಗೇ ಸ್ವರ್ಗಂ ಗತಾನಾಂ ತು ವೀರ್ಯಾದ್ ಭವತಿ ವೀರ್ಯವಾನ್ ।
ತತ್ರ ತೇ ಹ್ಯುಪಭುಂಜಂತಿ ಹ್ಯಗ್ನಿಹೋತ್ರಸ್ಯ ತತ್ಫಲಮ್ ॥೯೫॥

ಸ್ವರ್ಗಕ್ಕೆ ಹೋದವರು ಸ್ವರ್ಗಸುಖವನ್ನು ಅನುಭವಿಸುತ್ತಾರೆ. ಆ ತಪಸ್ಸಿನ ಬಲದಿಂದ ವೀರ್ಯವಂತರಾಗುತ್ತಾರೆ. ಅಗ್ನಿಹೋತ್ರದ ಫಲವನ್ನು ಸ್ವರ್ಗಲೋಕದಲ್ಲಿ ಚೆನ್ನಾಗಿ ಅನುಭವಿಸುತ್ತಾರೆ.

ಬಾಲಾಹಿತಾಗ್ನಯೋ ಯೇ ಚ ಶೂದ್ರಾನ್ನಾದ್ ವಿರತಾಃ ಸದಾ ।
ಕ್ರೋಧಲೋಭವಿನಿರ್ಮುಕ್ತಾಃ ಪ್ರಾತಃ ಸ್ನಾನಪರಾಯಣಾಃ ॥೯೬॥

ಯಥೋಕ್ತಮಗ್ನಿಹೋತ್ರಂ ವೈ ಜುಹ್ವತೇ ವಿಜಿತೇಂದ್ರಿಯಾಃ ॥೯೭॥

ಅತಿಥೇಯಾಃ ಸದಾ ಸೌಮ್ಯಾ ದ್ವಿಕಾಲಂ ಮತ್ಪರಾಯಣಾಃ ।
ತೇ ಯಾಂತ್ಯಪುನರಾವೃತ್ತಿಂ ಭಿತ್ತ್ವಾ ಚಾದಿತ್ಯಮಂಡಲಮ್ ॥೯೮॥

ಯಾರು ಬಾಲ್ಯದಿಂದಲೂ ಅಗ್ನಿಹೋತ್ರವನ್ನು ಮಾಡುತ್ತಿದ್ದಾರೋ, ಶೂದ್ರಾನ್ನವನ್ನು ತ್ಯಜಿಸಿದ್ದಾರೋ, ಕ್ರೋಧ-ಲೋಭಗಳಿಂದ ಮುಕ್ತರಾಗಿದ್ದಾರೋ, ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನವನ್ನು ಮಾಡುತ್ತಾರೋ, ವಿಧಿವತ್ತಾಗಿ ಜಿತೇಂದ್ರಿಯರಾಗಿದ್ದು ಅಗ್ನಿಹೋತ್ರವನ್ನು ಅನುಷ್ಠಾನ ಮಾಡುತ್ತಾರೋ, ಸದಾ ಅತಿಥಿ ಸತ್ಕಾರದಲ್ಲಿ ಆಸಕ್ತರಾಗಿರುತ್ತಾರೋ, ಶಾಂತಭಾವದಲ್ಲಿ ಇರುತ್ತಾರೋ, ಎರಡು ಕಾಲಗಳಲ್ಲಿಯೂ ಸಂಧ್ಯಾವಂದನೆಗಳನ್ನು ಸರಿಯಾಗಿ ಮಾಡುತ್ತಾರೋ ಅವರು ಸೂರ್ಯಮಂಡಲವನ್ನು ಭೇದಿಸಿಕೊಂಡು ಪುನರಾವೃತ್ತಿಯಿಲ್ಲದ ಲೋಕಕ್ಕೆ ಹೊಗುತ್ತಾರೆ.

ಮಮ ಲೋಕಂ ಸಪತ್ನೀಕಾ ಯಾನ್ಯೈಃ ಸೂರ್ಯೋದಯಪ್ರಭೈಃ ।
ತತ್ರ ಬಾಲಾರ್ಕಸಂಕಾಶಾಃ ಕಾಮಗಾಃ ಕಾಮರೂಪಿಣಃ ॥೯೯॥

ಬಳಿಕ ನನ್ನ ಲೋಕದಲ್ಲಿ ಉದಿಸುವ ಸೂರ್ಯನಂತೆ ಪ್ರಭೆಯುಳ್ಳ ವಿಮಾನದಲ್ಲಿ ಸಪತ್ನೀಕರಾಗಿ ಕುಳಿತು, ಉದಿಸುವ ಸೂರ್ಯನಂತೆ ಬೆಳಗುತ್ತಾ, ಕಾಮರೂಪಿಗಳಾಗಿ ಇಷ್ಟಾರ್ಥಗಳನ್ನು ಪಡೆಯುತ್ತಾ ಸಂಚರಿಸುತ್ತಾರೆ.

ಐಶ್ವರ್ಯಗುಣಸಂಪನ್ನಾಃ ಕ್ರೀಡಂತಿ ಚ ಯಥಾಸುಖಮ್ ।
ಇತ್ಯೇಷಾ ಹ್ಯಾಹಿತಾಗ್ನೀನಾಂ ವಿಭೂತಿಃ ಪಾಂಡುನಂದನ ॥೧೦೦॥

ಪಾಂಡುನಂದನನೇ, ಐಶ್ವರ್ಯಗುಣಸಂಪನ್ನರಾದ ಅವರು ಯಥೇಷ್ಟವಾಗಿ

ರೌರವ ನರಕದಿಂದ ಬಿಡುಗಡೆ ಹೊಂದಿದರೂ ಕ್ರಿಮಿಯೋನಿಯಲ್ಲಿಯೇ ಹುಟ್ಟುತ್ತಾರೆ.

ಯಥೋಕ್ತಮಗ್ನಿಹೋತ್ರಾಣಾಂ ಶುಶ್ರೂಷಂತಿ ಚ ಯೇ ದ್ವಿಜಾಃ ।
ತೈಸ್ತು ದತ್ತಂ ಹುತಂ ಚೇಷ್ಟಂ ದತ್ತಮಧ್ಯಾಪಿತಂ ಭವೇತ್ ॥೯೧॥

ಯಾವ ಬ್ರಾಹ್ಮಣರು ಶ್ರದ್ಧೆಯಿಂದ ಅಗ್ನಿಹೋತ್ರವನ್ನು ಮಾಡುತ್ತಾರೋ ಅವರು ಮಾಡಿದ ದಾನ, ಮಾಡಿದ ಯಜ್ಞ, ಹೋಮ, ಅಧ್ಯಯನ ಇವುಗಳ ಫಲವನ್ನು ಹೊಂದುತ್ತಾರೆ.

ಏವಮಿಷ್ಟಂ ಚ ಪೂರ್ತಂ ಚ ಯದ್ ವಿಪ್ರೈಃ ಕ್ರಿಯತೇ ನೃಪ ।
ತತ್ಸರ್ವಂ ಸಮ್ಯಗಾಹೃತ್ಯ ಚಾದಿತ್ಯೇ ಸ್ಥಾಪಯಾಮ್ಯಹಮ್ ॥೯೨॥

ಯಾವ ಬ್ರಾಹ್ಮಣರು ಯಜ್ಞಗಳನ್ನು ಮಾಡುತ್ತಾರೋ, ಲೋಕೋಪಕಾರಗಳನ್ನು ಮಾಡುತ್ತಾರೋ, ಅದೆಲ್ಲವನ್ನೂ ಭಗವಂತನಾದ ನಾನು ಸ್ವೀಕರಿಸಿ, ಸೂರ್ಯಮಂಡಲದಲ್ಲಿ ಆ ಪುಣ್ಯವನ್ನು ಸ್ಥಾಪಿಸುತ್ತೇನೆ.

ಮಯಾ ಸ್ಥಾಪಿತಮಾದಿತ್ಯೇ ಲೋಕಸ್ಯ ಸುಕೃತಂ ಹಿ ಯತ್ ।
ಧಾರಯೇತ್ ತತ್ ಸಹಸ್ರಾಂಶುಃ ಸುಕೃತಂ ಹ್ಯಗ್ನಿಹೋತ್ರಿಣಾಮ್ ॥೯೩॥

ಹೀಗೆ ಸೂರ್ಯನು ಅಗ್ನಿಹೋತ್ರಗಳ ಸುಕೃತವನ್ನು ನನ್ನ ಮೂಲಕ ಧರಿಸುತ್ತಾನೆ. ಆದ್ದರಿಂದ ಆದಿತ್ಯನಲ್ಲಿ ಸ್ಥಾಪಿಸಿದ ಲೋಕದ ಸುಕೃತವೇ ಆದಿತ್ಯರೂಪದಲ್ಲಿ ಕಾಣುತ್ತಿದೆ. ಅಗ್ನಿಹೋತ್ರಿಗಳ ಸುಕೃತವನ್ನು ಆದಿತ್ಯನು ಧರಿಸಿರುತ್ತಾನೆ.

ಯಾವತ್ಕಾಲಂ ತು ತಿಷ್ಠಂತಿ ಲೋಕೇ ಚಾಪ್ಯಗ್ನಿಹೋತ್ರಿಣಃ ।
ತಾವದೇವ ಹಿ ಪುಣ್ಯೇನ ದೀಪ್ಯತೇ ರವಿಣಾऽಂಬರೇ ॥೯೪॥

ಎಷ್ಟು ಕಾಲ ಈ ಲೋಕದಲ್ಲಿ ಬ್ರಾಹ್ಮಣರು ಅಗ್ನಿಹೋತ್ರಿಗಳಾಗಿ ಸತ್ಕರ್ಮಗಳನ್ನು ಮಾಡುತ್ತಿರುತ್ತಾರೋ ಆ ಪುಣ್ಯದಿಂದ ಅಷ್ಟು ಕಾಲ ಅಂತರಿಕ್ಷ ಲೋಕದಲ್ಲಿ ಸೂರ್ಯನ ಜೊತೆಗೆ ಬೆಳಗುತ್ತಾರೆ.

ಸ್ವರ್ಗೇ ಸ್ವರ್ಗಂ ಗತಾನಾಂ ತು ವೀರ್ಯಾದ್ ಭವತಿ ವೀರ್ಯವಾನ್ ।
ತತ್ರ ತೇ ಹ್ಯುಪಭುಂಜಂತಿ ಹ್ಯಗ್ನಿಹೋತ್ರಸ್ಯ ತತ್ಫಲಮ್ ॥೯೫॥

ಸ್ವರ್ಗಕ್ಕೆ ಹೋದವರು ಸ್ವರ್ಗಸುಖವನ್ನು ಅನುಭವಿಸುತ್ತಾರೆ. ಆ ತಪಸ್ಸಿನ ಬಲದಿಂದ ವೀರ್ಯವಂತರಾಗುತ್ತಾರೆ. ಅಗ್ನಿಹೋತ್ರದ ಫಲವನ್ನು ಸ್ವರ್ಗಲೋಕದಲ್ಲಿ ಚೆನ್ನಾಗಿ ಅನುಭವಿಸುತ್ತಾರೆ.

ಬಾಲಾಹಿತಾಗ್ನಯೋ ಯೇ ಚ ಶೂದ್ರಾನ್ನಾದ್ ವಿರತಾಃ ಸದಾ ।
ಕ್ರೋಧಲೋಭವಿನಿರ್ಮುಕ್ತಾಃ ಪ್ರಾತಃ ಸ್ನಾನಪರಾಯಣಾಃ ॥೯೬॥

ಯಥೋಕ್ತಮಗ್ನಿಹೋತ್ರಂ ವೈ ಜುಹ್ವತೇ ವಿಜಿತೇಂದ್ರಿಯಾಃ ॥೯೭॥

ಅತಿಥೇಯಾಃ ಸದಾ ಸೌಮ್ಯಾ ದ್ವಿಕಾಲಂ ಮತ್ಪರಾಯಣಾಃ ।
ತೇ ಯಾಂತ್ಯಪುನರಾವೃತ್ತಿಂ ಭಿತ್ತ್ವಾ ಚಾದಿತ್ಯಮಂಡಲಮ್ ॥೯೮॥

ಯಾರು ಬಾಲ್ಯದಿಂದಲೂ ಅಗ್ನಿಹೋತ್ರವನ್ನು ಮಾಡುತ್ತಿದ್ದಾರೋ, ಶೂದ್ರಾನ್ನವನ್ನು ತ್ಯಜಿಸಿದ್ದಾರೋ, ಕ್ರೋಧ-ಲೋಭಗಳಿಂದ ಮುಕ್ತರಾಗಿದ್ದಾರೋ, ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನವನ್ನು ಮಾಡುತ್ತಾರೋ, ವಿಧಿವತ್ತಾಗಿ ಜಿತೇಂದ್ರಿಯರಾಗಿದ್ದು ಅಗ್ನಿಹೋತ್ರವನ್ನು ಅನುಷ್ಠಾನ ಮಾಡುತ್ತಾರೋ, ಸದಾ ಅತಿಥಿ ಸತ್ಕಾರದಲ್ಲಿ ಆಸಕ್ತರಾಗಿರುತ್ತಾರೋ, ಶಾಂತಭಾವದಲ್ಲಿ ಇರುತ್ತಾರೋ, ಎರಡು ಕಾಲಗಳಲ್ಲಿಯೂ ಸಂಧ್ಯಾವಂದನೆಗಳನ್ನು ಸರಿಯಾಗಿ ಮಾಡುತ್ತಾರೋ ಅವರು ಸೂರ್ಯಮಂಡಲವನ್ನು ಭೇದಿಸಿಕೊಂಡು ಪುನರಾವೃತ್ತಿಯಿಲ್ಲದ ಲೋಕಕ್ಕೆ ಹೊಗುತ್ತಾರೆ.

ಮಮ ಲೋಕಂ ಸಪತ್ನೀಕಾ ಯಾನ್ಯೈಃ ಸೂರ್ಯೋದಯಪ್ರಭೈಃ ।
ತತ್ರ ಬಾಲಾರ್ಕಸಂಕಾಶಾಃ ಕಾಮಗಾಃ ಕಾಮರೂಪಿಣಃ ॥೯೯॥

ಬಳಿಕ ನನ್ನ ಲೋಕದಲ್ಲಿ ಉದಿಸುವ ಸೂರ್ಯನಂತೆ ಪ್ರಭೆಯುಳ್ಳ ವಿಮಾನದಲ್ಲಿ ಸಪತ್ನೀಕರಾಗಿ ಕುಳಿತು, ಉದಿಸುವ ಸೂರ್ಯನಂತೆ ಬೆಳಗುತ್ತಾ, ಕಾಮರೂಪಿಗಳಾಗಿ ಇಷ್ಟಾರ್ಥಗಳನ್ನು ಪಡೆಯುತ್ತಾ ಸಂಚರಿಸುತ್ತಾರೆ.

ಐಶ್ವರ್ಯಗುಣಸಂಪನ್ನಾಃ ಕ್ರೀಡಂತಿ ಚ ಯಥಾಸುಖಮ್ ।
ಇತ್ಯೇಷಾ ಹ್ಯಾಹಿತಾಗ್ನೀನಾಂ ವಿಭೂತಿಃ ಪಾಂಡುನಂದನ ॥೧೦೦॥

ಪಾಂಡುನಂದನನೇ, ಐಶ್ವರ್ಯಗುಣಸಂಪನ್ನರಾದ ಅವರು ಯಥೇಷ್ಟವಾಗಿ

ಕ್ರೀಡಿಸುತ್ತಾರೆ. ಸುಖವನ್ನು ಹೊಂದುತ್ತಾರೆ. ಈ ರೀತಿಯಾಗಿ ಆಹಿತಾಗ್ನಿಗಳಿಗೆ ಸಿಗುವ ಫಲವನ್ನು, ಅವರ ಐಶ್ವರ್ಯಗಳನ್ನು ನಿರೂಪಿಸಿದ್ದೇನೆ.

ಯೇ ಚ ವೇದಶ್ರುತಿಂ ಕೇಚಿನ್ನಿಂದಮಾನಾ ಹ್ಯಬುದ್ಧಯಃ ।
ಪ್ರಮಾಣಂ ನ ಚ ಕುರ್ವಂತಿ ತೇ ಯಾಂತಿ ಹ್ಯಕ್ಷಯಂ ತಮಃ ॥೧೦೦॥

ಯಾರು ಈ ಲೋಕದಲ್ಲಿ ಮೂರ್ಖರಾಗಿ ವೇದಗಳನ್ನು ನಿಂದಿಸುತ್ತಾ, ದಡ್ಡತನದಿಂದ ಶ್ರುತಿಪ್ರಮಾಣವನ್ನು ಗೌರವಿಸುವುದಿಲ್ಲವೋ ಅವರು ಅಕ್ಷಯವಾದ ಅಂಧಂತಮಸ್ಸನ್ನು ಹೊಂದುತ್ತಾರೆ.

ಪ್ರಮಾಣಮಿತಿಹಾಸಂ ಚ ವೇದಾನ್ ಕುರ್ವಂತಿ ಯೇ ದ್ವಿಜಾಃ ।
ತೇ ಯಾಂತ್ಯಮರಸಾಯುಜ್ಯಂ ನಿತ್ಯಮಾಸ್ತಿಕ್ಯಬುದ್ಧಯಃ ॥೧೦೨॥

ಯಾವ ಆಸ್ತಿಕ್ಯಬುದ್ಧಿಯುಳ್ಳ ಬ್ರಾಹ್ಮಣರು ವೇದಗಳನ್ನು, ಇತಿಹಾಸವನ್ನು ಪ್ರಮಾಣವೆಂದು ಭಾವಿಸುತ್ತಾರೋ ಅವರು ದೇವತೆಗಳ ಸಾಯುಜ್ಯವನ್ನು ಹೊಂದುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಏಕಾದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೆರಡನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಚಾಂದ್ರಾಯಣವ್ರತದ ವಿಧಿಗಳನ್ನು ನಿರೂಪಿಸಿದುದು. ಚಾಂದ್ರಾಯಣವ್ರತದ ಆಚರಣಶೀಲರಿಗೆ ದೊರೆಯುವ ಫಲವನ್ನು ಹೇಳಿದುದು.

ಯುಧಿಷ್ಠಿರಃ

ಚಕ್ರಾಯುಧ ನಮಸ್ತೇऽಸ್ತು ದೇವೇಶ ಗರುಡಧ್ವಜ ।
ಚಾಂದ್ರಾಯಣವಿಧಿಂ ಪುಣ್ಯಮಾಖ್ಯಾಹಿ ಭಗವನ್ ಮಮ ॥೧॥

ಯುಧಿಷ್ಠಿರ– ಚಕ್ರಾಯುಧನೇ, ಗರುಡಧ್ವಜನೇ, ದೇವೇಶನೇ, ಪೂಜ್ಯನೇ, ನಿನಗೆ ನಮಸ್ಕಾರ. ನನ್ನಲ್ಲಿ ಕರುಣೆಯಿಂದ ಚಾಂದ್ರಾಯಣ ವ್ರತದ ವಿಧಿಯನ್ನು, ಅದರಿಂದ ದೊರೆಯುವ ಪುಣ್ಯವನ್ನು ತಿಳಿಸುವ ಕೃಪೆತೋರು.

ಶ್ರೀಭಗವಾನ್

ಶೃಣು ಪಾಂಡವ ತತ್ತೆ ರ್ಯಿನ ಸರ್ವಪಾಪಪ್ರಣಾಶನಮ್ ।
ಪಾಪಿನೋ ಯೇನ ಶುದ್ಧ್ಯಂತಿ ತತ್ ತೇ ವಕ್ಷ್ಯಾಮಿ ಸರ್ವಶಃ ॥೨॥

ಶ್ರೀಭಗವಾನ್– ಪಾಂಡವನೇ, ಸಮಸ್ತ ಪಾಪಗಳನ್ನು ನಾಶಮಾಡುವ ಪಾಪಿಗಳು ಯಾವ ವ್ರತಾಚಾರಣೆಯಿಂದ ಶುದ್ಧಿಯನ್ನು ಹೊಂದುತ್ತಾರೋ ಅಂತಹ ಚಾಂದ್ರಾಯಣದ ಬಗ್ಗೆ ವಿಧಿ-ನಿಯಮಗಳನ್ನು ತಿಳಿಸುತ್ತೇನೆ.

ಬ್ರಾಹ್ಮಣಃ ಕ್ಷತ್ರಿಯೋ ವಾऽಪಿ ವೈಶ್ಯೋ ವಾ ಚರಿತವ್ರತಃ ।
ಯಥಾವತ್ ಕರ್ತುಕಾಮೋ ಯಃ ತಸ್ಯೇಯಂ ಪ್ರಥಮಾ ಕ್ರಿಯಾ ॥೩॥

ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ ಯಥಾವತ್ತಾಗಿ ಚಾಂದ್ರಾಯಣ ವ್ರತವನ್ನು ಮಾಡಲು ಬಯಸುವವನು ಮೊಟ್ಟ ಮೊದಲು ಈ ಕರ್ಮವನ್ನು ಮಾಡಬೇಕು.

ಶೋಧಯೇತ್ತು ಶರೀರಂ ಸ್ವಂ ಪಂಚಗವ್ಯೇನ ಯಂತ್ರಿತಮ್ ।
ಸಶಿರಃ ಕೃಷ್ಣಪಕ್ಷೇ ತು ತತಃ ಕುರ್ಯಾತ ವಾಪನಮ್ ॥೪॥

ನಿಯಮದಲ್ಲಿದ್ದುಕೊಂಡು ಪಂಚಗವ್ಯ ಪ್ರಾಶನವನ್ನು ಮಾಡಿ ಶರೀರವನ್ನು ಶುದ್ಧೀಕರಿಸಿಕೊಂಡು ಕೃಷ್ಣಪಕ್ಷದ ಅಮಾವಾಸ್ಯೆಯ ದಿವಸ ಕ್ಷೌರ ಮಾಡಿಸಿಕೊಳ್ಳಬೇಕು.

ಶುದ್ಧವಾಸಾಃ ಶುಚಿರ್ಭೂತ್ವಾ ಮೌಂಜೀಂ ಬಧ್ನೀತ ಮೇಖಿಲಾಮ್ ।
ಪಾಲಾಶದಂಡಮಾದಾಯ ಬ್ರಹ್ಮಚಾರಿವ್ರತೇ ಸ್ಥಿತಃ ॥೫॥

ಬಳಿಕ ಶುದ್ಧವಾದ ವಸ್ತ್ರವನ್ನು ಧರಿಸಿ, ಮುಂಜಹುಲ್ಲಿನಿಂದ ಮಾಡಿದ ಉಡಿದಾರವನ್ನು ಕಟ್ಟಿಕೊಂಡು, ಮುತ್ತುಗದ ದಂಡವನ್ನು ಹಿಡಿದು ಬ್ರಹ್ಮಚರ್ಯವ್ರತದಲ್ಲಿರಬೇಕು.

ಕೃತೋಪವಾಸಃ ಪೂರ್ವಂ ತು ಶುಕ್ಲಪ್ರತಿಪದಿ ದ್ವಿಜಃ ।
ನದೀಸಂಗಮತೀರ್ಥೇಷು ಶುಚೌ ದೇಶೇ ಗೃಹೇಽಪಿ ವಾ ॥೬॥

ದ್ವಿಜನು ಅಮಾವಾಸ್ಯೆಯ ದಿವಸ ಉಪವಾಸ ಮಾಡಿ, ಶುಕ್ಲ ಪಕ್ಷದ ಪ್ರತಿಪತ್ ದಿನದಲ್ಲಿ ನದಿಗಳ ಸಂಗಮದಲ್ಲಿ ಅಥವಾ ಪವಿತ್ರವಾದ ಸ್ಥಳದಲ್ಲಿ ಮನೆಯಲ್ಲಾಗಲಿ, ಈ ವ್ರತವನ್ನು ಆರಂಭಿಸಬೇಕು.

ಗೋಮಯೇನೋಪಲಿಪ್ತೇಽಥ ಸ್ಥಂಡಿಲೇಽಗ್ನಿಂ ನಿಧಾಪಯೇತ್ ॥೭॥

ಗೋಮಯದಿಂದ ಲಿಪ್ತವಾದ ಸ್ಥಂಡಿಲದಲ್ಲಿ ಅಗ್ನಿಯನ್ನು ಸ್ಥಾಪಿಸಬೇಕು.

ಆಘಾರಾವಾಜ್ಯಭಾಗೌ ಚ ಪ್ರಣವಂ ವ್ಯಾಹೃತಿಂ ತಥಾ ।
ವಾರುಣಂ ಚಾಪಿ ಪಂಚೈವ ಹುತ್ವಾ ಸರ್ವಾನ್ ಯಥಾಕ್ರಮಮ್ ॥೮॥

ಮೊದಲು ನಿತ್ಯಕರ್ಮಗಳನ್ನು ಮುಗಿಸಿ, ಒಂದು ವೇದಿಕೆಯ ಮೇಲೆ ಅಗ್ನಿಯನ್ನು ಸ್ಥಾಪಿಸಿ, ಅದರಲ್ಲಿ ಅನುಕ್ರಮವಾಗಿ ಆಘಾರ, ಆಜ್ಯಭಾಗ, ಪ್ರಣವ, ವ್ಯಾಹೃತಿವಾರುಣ ಹೋಮಗಳನ್ನು ಕ್ರಮವಾಗಿ ಮಾಡಬೇಕು.

ಸತ್ಯಾಯ ವಿಷ್ಣವೇ ಚಾಪಿ ಬ್ರಹ್ಮರ್ಷಿಭ್ಯೋಽಥ ಬ್ರಹ್ಮಣೇ ।
ವಿಶ್ವೇಭ್ಯಶ್ಚೈವ ದೇವೇಭ್ಯಃ ಸಪ್ರಜಾಪತಯೇ ತಥಾ ॥೯॥

ಷಟ್ಕೃತ್ವೋ ಜುಹುಯಾತ್ ಪಶ್ಚಾತ್ ಪ್ರಾಯಶ್ಚಿತ್ತಾಹುತೀರ್ದ್ವಿಜಃ ।
ತತಃ ಸಮಾಪಯೇದಗ್ನಿಂ ಶಾಂತಿಂ ಕೃತ್ವಾಽಥ ಪೌಷ್ಟಿಕಮ್ ॥೧೦॥

ಸತ್ಯ ಸ್ವರೂಪಿಯಾದ ವಿಷ್ಣುವಿಗೆ, ಬ್ರಹ್ಮರ್ಷಿಗಳಿಂದ ಸಹಿತನಾದ ಚತುರ್ಮುಖ ಬ್ರಹ್ಮನಿಗೆ, ವಿಶ್ವೇದೇವತೆಗಳಿಂದ ಕೂಡಿದ ದೇವತೆಗಳಿಗೆ, ಪ್ರಜಾಪತಿಗಳಿಗೆ ಆರು ಹೋಮಗಳನ್ನು ಮಾಡಿ ಪ್ರಾಯಶ್ಚಿತ್ತ ಆಹುತಿಯನ್ನು ದಾನ ಮಾಡಬೇಕು. ಬಳಿಕ ಶಾಂತಿ ಮತ್ತು ಪೌಷ್ಟಿಕ ಕರ್ಮಗಳನ್ನು ಮಾಡಿ ಅಗ್ನಿಕಾರ್ಯವನ್ನು ಸಮಾಪ್ತಿಗೊಳಿಸಬೇಕು.

ಪ್ರಣಮ್ಯ ಚಾಗ್ನಿಂ ಸೋಮಂ ಚ ಭಸ್ಮ ಧೃತ್ವಾ ತಥಾತ್ಮನಿ ॥೧೧॥

ಸೋಮನಿಗೂ ಅಗ್ನಿಗೂ ನಮಸ್ಕರಿಸಿ ಹುತಭಸ್ಮವನ್ನು ವಿಧಿಬದ್ಧವಾಗಿ ಧರಿಸಬೇಕು.

ನದೀಂ ಗತ್ವಾ ವಿಮುಕ್ತಾಯ ಸೋಮಾಯ ವರುಣಾಯ ಚ ।
ಆದಿತ್ಯಾಯ ನಮಸ್ಕೃತ್ವಾ ತತಃ ಸ್ನಾಯಾತ್ ಸಮಾಹಿತಃ ॥೧೨॥

ನದಿಯ ಬಳಿ ಹೋಗಿ ಶುದ್ಧಾಂತಃಕರಣನಾಗಿ ನಾರಾಯಣನಿಗೆ, ಸೋಮನಿಗೆ, ವರುಣನಿಗೆ, ಸೂರ್ಯನಿಗೆ ಏಕಾಗ್ರತೆಯಿಂದ ನಮಸ್ಕರಿಸಿ ಸ್ನಾನ ಮಾಡಬೇಕು:

ಉತ್ತೀರ್ಯೋದಕಮಾಚಮ್ಯ ತ್ವಾಸೀನಃ ಪೂರ್ವತೋಮುಖಃ ।
ಪ್ರಾಣಾಯಾಮಂ ತತಃ ಕೃತ್ವಾ ಪವಿತ್ರೈರಭಿಷೇಚನಮ್ ॥೧೩॥

ಸ್ನಾನ ಮಾಡಿದ ಬಳಿಕ ನದಿಯಿಂದ ಮೇಲೆ ಬಂದು ಪೂರ್ವಾಭಿಮುಖವಾಗಿ ಕುಳಿತು, ಆಚಮನ ಮಾಡಿ ಪ್ರಾಣಾಯಾಮ ಮಾಡಬೇಕು. ಬಳಿಕ ದರ್ಭೆಯಿಂದ ಪ್ರೋಕ್ಷಿಸಿಕೊಳ್ಳಬೇಕು.

ಆಚಾಂತಸ್ತ್ವಭಿವೀಕ್ಷೇತ ಚೋರ್ದ್ವಬಾಹುರ್ದಿವಾಕರಮ್ ।
ಕೃತಾಂಜಲಿಪುಟಃ ಪಶ್ಚಾತ್ ಕುರ್ಯಾಚ್ಚೈವ ಪ್ರದಕ್ಷಿಣಮ್ ॥೧೪॥

ಪುನಃ ಆಚಮನ ಮಾಡಿ, ತೋಳುಗಳನ್ನು ಮೇಲಕ್ಕೆತ್ತಿಕೊಂಡು ಸೂರ್ಯನನ್ನು ನೋಡಬೇಕು. ಬಳಿಕ ಎರಡು ಕೈಗಳನ್ನು ಜೋಡಿಸಿಕೊಂಡು ಸೂರ್ಯನಿಗೆ ಪ್ರದಕ್ಷಿಣೆ, ನಮಸ್ಕಾರವನ್ನು ಮಾಡಬೇಕು.

ನಾರಾಯಣಂ ವಾ ರುದ್ರಂ ವಾ ಬ್ರಹ್ಮಾಣಮಥವಾಽಪಿ ವಾ ।
ಆರಣ್ಯಂ ಮಮ ಸೂಕ್ತಂ ವಾ ಪ್ರಾಗ್ಭೋಜನಮಥಾಪಿ ವಾ ॥೧೫॥

ಭೋಜನಕ್ಕಿಂತ ಮೊದಲು ನಾರಾಯಣನನ್ನು, ರುದ್ರನನ್ನು, ಚತುರ್ಮುಖ ಬ್ರಹ್ಮನನ್ನು ಉಪನಿಷತ್ತುಗಳಿಂದ, ವಿಷ್ಣುಸೂಕ್ತಗಳಿಂದ, ಶಾಂತಿಸೂಕ್ತಗಳಿಂದ ಸ್ತೋತ್ರ ಮಾಡಬೇಕು.

ವೀರಘ್ನಮೃಷಭಂ ವಾಽಪಿ ತಥಾ ಚಾಪ್ಯಘಮರ್ಷಣಮ್ ।
ಗಾಯತ್ರೀಂ ಮಮ ದೇವೀಂ ವಾ ಸಾವಿತ್ರೀಂ ವಾ ಜಪೇತ್ ತತಃ ॥

ಶತಂ ವಾಽಷ್ಟಶತಂ ವಾಽಪಿ ಸಹಸ್ರಮಥವಾ ಪರಮ್ ॥೧೭॥

ರಕ್ಷೋಘ್ನಸೂಕ್ತವಾಗಲಿ, ವೃಷಭಸೂಕ್ತವಾಗಲಿ, ಲಕ್ಷ್ಮೀಸೂಕ್ತವಾಗಲಿ, ಸಾವಿತ್ರೀ ಸೂಕ್ತವಾಗಲಿ ನೂರು ಬಾರಿ ಅಥವಾ ನೂರ ಎಂಟು ಬಾರಿ ಜಪಿಸಬೇಕು. ಅವಕಾಶವಿದ್ದಲ್ಲಿ ಸಾವಿರ ಬಾರಿಯೂ ಜಪಿಸಬೇಕು.

ತತೋ ಮಧ್ಯಾಹ್ನಕಾಲೇ ವೈ ಪಾಯಸಂ ಪಾವಕಂ ಹಿ ವಾ ।
ವಾಚಯಿತ್ವಾ ಪ್ರಯತ್ನೇನ ಪ್ರಯತಃ ಸುಸಮಾಹಿತಃ ॥೧೮॥

ಬಳಿಕ ಮಧ್ಯಾಹ್ನ ಕಾಲದಲ್ಲಿ ಪಯಃಸಂಬಂಧಿಯಾದ ಆಪ್ಯಸೂಕ್ತವನ್ನೂ, ಅಗ್ನಿಸಂಬಂಧಿಯಾದ ಅಗ್ನಿಸೂಕ್ತವನ್ನು ಪವಿತ್ರನಾಗಿ, ಏಕಾಗ್ರಚಿತ್ತನಾಗಿ ಪ್ರಯತ್ನಪೂರ್ವಕವಾಗಿ ಪಠಿಸಬೇಕು.

ಪಾತ್ರಂ ತತಃ ಸಮಾದಾಯ ಸೌವರ್ಣಂ ರಾಜತಂ ತು ವಾ ।
ತಾಮ್ರಂ ವಾ ಮೃಣ್ಮಯಂ ವಾऽಪಿ ಔದುಂಬರಮಥಾಪಿ ವಾ ॥೧೯॥

ವೃಕ್ಷಾಣಾಂ ಯಾಜ್ಞಿಯಾನಾಂ ತು ಪರ್ಣೈರಾರ್ದ್ರೈರಕುತ್ಸಿತೈಃ ।
ಪುಟಕೇನ ತು ಗುಪ್ತೇನ ಚರೇದ್ ಭೈಕ್ಷಂ ಸಮಾಹಿತಃ ॥೨೦॥

ಬಳಿಕ ಚಿನ್ನದ ಪಾತ್ರೆಯನ್ನಾಗಲಿ, ಬೆಳ್ಳಿಯ ಪಾತ್ರೆಯನ್ನಾಗಲಿ, ತಾಮ್ರದ ಪಾತ್ರೆಯನ್ನಾಗಲಿ, ಮಣ್ಣಿನ ಪಾತ್ರೆಯನ್ನಾಗಲಿ, ಅತ್ತಿ ಮರದಿಂದ ಮಾಡಿದ ಪಾತ್ರೆಯನ್ನಾಗಲಿ, ಯಜ್ಞಕ್ಕೆ ಸಂಬಂಧಿಸಿದ ಹಸಿರು ಎಲೆಗಳಿಂದ ಮಾಡಿದ ದೊನ್ನೆಯನ್ನಾಗಲಿ ತೆಗೆದುಕೊಂಡು, ಆ ದೊನ್ನೆಯ ಮೇಲ್ಭಾಗವನ್ನು ಮುಚ್ಚಿ ಏಕಾಗ್ರಚಿತ್ತನಾಗಿ ಭಿಕ್ಷೆಯನ್ನು ಬೇಡಬೇಕು.

ಬ್ರಾಹ್ಮಣಾನಾಂ ಗೃಹಾಣಾಂ ತು ಸಪ್ತಾನಾಂ ನಾಪರಂ ವ್ರಜೇತ್ ।
ಗೋದೋಹಮಾತ್ರಂ ತಿಷ್ಠೇತ್ ತು ವಾಗ್ಯತಃ ಸಂಯತೇಂದ್ರಿಯಃ ॥೨೧॥

ಏಳು ಬ್ರಾಹ್ಮಣರ ಮನೆಗೆ ಹೋಗಿ ಭಿಕ್ಷೆಯನ್ನು ಬೇಡಬೇಕು. ಎಂಟನೆಯ ಮನೆಗೆ ಹೋಗಬಾರದು. ಜಿತೇಂದ್ರಿಯನಾಗಿ, ಮೌನಿಯಾಗಿ ಬ್ರಾಹ್ಮಣರ ಮನೆಯ ಮುಂದೆ ಒಂದು ಹಸುವನ್ನು ಕರೆಯುವಷ್ಟು ಕಾಲ ಮಾತ್ರ ನಿಲ್ಲಬೇಕು.

ನ ಹಸೇಚ್ಚ ನ ವೀಕ್ಷೇಚ್ಚ ನಾಭಿಭಾಷೇತ ವಾ ಸ್ತ್ರಿಯಾ ।
ದೃಷ್ಟ್ವಾ ಮೂತ್ರಪುರೀಷಂ ವಾ ಚಂಡಾಲಂ ವಾ ರಜಸ್ವಲಾಮ್ ॥೨೨॥

ಪತಿತಂ ಚ ಯಥಾ ಶ್ವಾನಮಾದಿತ್ಯಮವಲೋಕಯೇತ್ ॥೨೩॥

ಭಿಕ್ಷೆಗೆ ಹೋದ ವ್ಯಕ್ತಿಯು ನಗಬಾರದು. ಆಚೆ-ಈಚೆ ನೋಡಬಾರದು. ಯಾವ ಸ್ತ್ರೀ ಬಳಿಯೂ ಮಾತನಾಡಬಾರದು. ಮೂತ್ರವನ್ನಾಗಲಿ, ಮಲವನ್ನಾಗಲಿ, ಚಂಡಾಲನನ್ನಾಗಿ, ರಜಸ್ವಲೆಯನ್ನಾಗಲಿ, ಪತಿತನನ್ನಾಗಲಿ, ನಾಯಿಯನ್ನಾಗಲಿ ನೋಡಿದಲ್ಲಿ ಕೂಡಲೇ ಪಾಪಪರಿಹಾರಕ್ಕೆ ಸೂರ್ಯನನ್ನು ನೋಡಬೇಕು.

ಯೋ ಹಿ ಪಾದುಕಾಮಾರುಹ್ಯ ಸರ್ವದಾ ಪ್ರಚರೇದ್ ದ್ವಿಜಃ ।
ತಂ ದೃಷ್ಟ್ವಾ ಪಾಪಕರ್ಮಾಣಮಾದಿತ್ಯಮವಲೋಕಯೇತ್ ॥೨೪॥

ಯಾವ ಬ್ರಾಹ್ಮಣನು ಯಾವಾಗಲು ಪಾದರಕ್ಷೆಯನ್ನು ಹಾಕಿಕೊಂಡು ಸಂಚರಿಸುತ್ತಾನೋ ಅಂತಹ ಪಾಪಕರ್ಮಿಯಾದ ಬ್ರಾಹ್ಮಣನನ್ನು ನೋಡಿ ಸೂರ್ಯನನ್ನು ನೋಡಬೇಕು.

ತತಸ್ತಾ ವಸಥಂ ಪ್ರಾಪ್ತೋ ಭಿಕ್ಷಾಂ ನಿಕ್ಷಿಪ್ಯ ಭೂತಳೇ ।
ಪ್ರಕ್ಷಾಲ್ಯ ಪಾದಾವಾಜಾನು ಹಸ್ತಾವಾಕೂರ್ಪರಂ ಪುನಃ ॥೨೫॥

ಆಚಮ್ಯ ವಾರಿಣಾ ತೇನ ವಹ್ನಿಂ ವಿಪ್ರಾಂಶ್ಚ ಪೂಜಯೇತ್ ॥೨೬॥

ಹೀಗೆ ಏಳು ಮನೆಗಳಲ್ಲಿ ಭಿಕ್ಷಾಟನೆ ಮಾಡಿಕೊಂಡು ಮನೆಗೆ ಹೋಗಿ ಭೂಮಿಯ ಮೇಲೆ ಭಿಕ್ಷೆಯನ್ನಿಟ್ಟು ಮೊಳಕಾಲಿನವರೆಗೂ ಕಾಲುಗಳನ್ನೂ, ಮೊಣಕೈವರೆಗೂ ಕೈಗಳನ್ನು ತೊಳೆದುಕೊಂಡು, ಪುನಃ ಆಚಮನ ಮಾಡಿ, ಆ ತಂದ ಭಿಕ್ಷಾನ್ನದಿಂದ ಅಗ್ನಿಯನ್ನು ಬ್ರಾಹ್ಮಣರನ್ನು ಪೂಜಿಸಬೇಕು.

ಪಂಚ ಸಪ್ತಾಥವಾ ಕುರ್ಯಾದ್ ಭಾಗಾನ್ ಭೈಕ್ಷಸ್ಯ ತಸ್ಯ ವೈ ।
ತೇಷಾಮನ್ಯತಮಂ ಪಿಂಡಮಾದಿತ್ಯಾಯ ನಿವೇದಯೇತ್ ॥೨೭॥

ತಂದ ಆ ಭಿಕ್ಷೆಯನ್ನು ಐದು ಅಥವಾ ಏಳು ಭಾಗಗಳನ್ನಾಗಿ ಮಾಡಿ, ಅವುಗಳಲ್ಲಿ ಒಂದು ಭಾಗವನ್ನು ಸೂರ್ಯನಿಗೆ ನಿವೇದಿಸಬೇಕು.

ಬ್ರಹ್ಮಣೇ ಚಾಗ್ನಯೇ ಚೈವ ಸೋಮಾಯ ವರುಣಾಯ ಚ ।
ವಿಶ್ವೇಭ್ಯಶ್ಚೈವ ದೇವೇಭ್ಯೋ ದದ್ಯಾದನ್ನಂ ಯಥಾಕ್ರಮಮ್ ॥೨೮॥

ಕ್ರಮವಾಗಿ ಬ್ರಹ್ಮ-ಅಗ್ನಿ-ಸೋಮ-ವರುಣ-ವಿಶ್ವೇದೇವತೆಗಳಿಗೆ ಒಂದೊಂದು ಭಾಗವನ್ನು ನೀಡಬೇಕು.

ಅವಶಿಷ್ಟಮಥೈಕಂ ತು ವಕ್ತ್ರಮಾತ್ರಂ ಪ್ರಕಲ್ಪಯೇತ್ ॥೨೯॥

ಉಳಿದ ಕಡೆಯ ಗ್ರಾಸವು (ತುತ್ತು) ಬಾಯೊಳಗೆ ಸುಲಭವಾಗಿ ಹೋಗುವಷ್ಟು ಗಾತ್ರದಲ್ಲಿರಬೇಕು.

ಅಂಗುಲ್ಯಗ್ರೇ ಸ್ಥಿತಂ ಪಿಂಡಂ ಗಾಯತ್ರ್ಯಾ ಚಾಭಿಮಂತ್ರಯೇತ್ ।
ಅಂಗುಲೀಭಿಸ್ತ್ರಿಭಿಃ ಪಿಂಡಂ ಪ್ರಾಶ್ನೀಯಾತ್ ಪ್ರಾಙ್ಮುಖಃ ಶುಚಿಃ ॥೩೦॥

ಪವಿತ್ರವಾದ ಭಾವದಿಂದ ಪೂರ್ವಾಭಿಮುಖವಾಗಿ ಕುಳಿತು ಮೂರು ಬೆರಳುಗಳ ಅಗ್ರಭಾಗದಲ್ಲಿ ಒಂದು ತುತ್ತನ್ನು ಇಟ್ಟುಕೊಂಡು ಗಾಯತ್ರಿಯಿಂದ ಆ ತುತ್ತನ್ನು ಅಭಿಮಂತ್ರಿಸಬೇಕು. ಅನಂತರ ಅಂಗುಷ್ಟ-ಮಧ್ಯದ ಎರಡು ಬೆರಳುಗಳ ಮೂಲಕ ಆ ತುತ್ತನ್ನು ಭುಂಜಿಸಬೇಕು.

ಯಥಾ ಚ ವರ್ಧತೇ ಸೋಮೋ ಹ್ರಸತೇ ಚ ಯಥಾ ಪುನಃ ।
ತಥಾ ಪಿಂಡಾಶ್ಚ ವರ್ಧಂತೇ ಹ್ರಸಂತೇ ಚ ದಿನೇ ದಿನೇ ॥೩೧॥

ತುತ್ತುಗಳನ್ನು ಚಂದ್ರನು ಶುಕ್ಲಪಕ್ಷಗಳಲ್ಲಿ ವರ್ಧಿಸುವಂತೆ ಹೆಚ್ಚಿಸುತ್ತಾ ಹೋಗಬೇಕು. ಕೃಷ್ಣಪಕ್ಷದಲ್ಲಿ ಚಂದ್ರನು ಕ್ಷೀಣಿಸುವಂತೆ ಕಡಿಮೆ ಮಾಡುತ್ತಾ ಹೋಗಬೇಕು.

ತ್ರಿಕಾಲಂ ಸ್ನಾನಮಸ್ಯೋಕ್ತಂ ದ್ವಿಕಾಲಮಥವಾ ಸಕೃತ್ ।
ಬ್ರಹ್ಮಚಾರೀ ಸದಾ ವಾಽಪಿ ನ ಚ ವಸ್ತ್ರಂ ಪ್ರಪೀಡಯೇತ್ ॥೩೨॥

ಚಾಂದ್ರಾಯಣ ವ್ರತವನ್ನು ಆಚರಿಸುವಾಗ ಮೂರು ಕಾಲಗಳಲ್ಲಿಯೂ ಸ್ನಾನ ಮಾಡಬೇಕು. ಸಾಧ್ಯವಾಗದಿದ್ದಲ್ಲಿ ಎರಡು ಹೊತ್ತು ಮಾಡಬೇಕು. ಅದೂ ಸಾಧ್ಯವಾಗದಿದ್ದಲ್ಲಿ ಒಂದು ಹೊತ್ತು ಮಾಡಬಹುದು. ವ್ರತವು ಸಮಾಪ್ತಿಯಾಗುವ ತನಕ ಬ್ರಹ್ಮಚರ್ಯವ್ರತದಲ್ಲಿರಬೇಕು. ವಸ್ತ್ರವನ್ನು ಹಿಂಡಬಾರದು.

ಸ್ಥಾನೇ ನ ದಿವಸಂ ತಿಷ್ಠೇದ್ ರಾತ್ರೌ ವೀರಾಸನಂ ವ್ರಜೇತ್ ।
ಭವೇತ್ ಸ್ಥಂಡಿಲಶಾಯೀ ವಾಽಪ್ಯಥವಾ ವೃಕ್ಷಮೂಲಕಃ ॥೩೩॥

ಹಗಲಿನಲ್ಲಿ ಒಂದೇ ಸ್ಥಳದಲ್ಲಿರಬಾರದು. ರಾತ್ರಿಯಲ್ಲಿ ವೀರಾಸನದಲ್ಲಿ ಕುಳಿತುಕೊಳ್ಳಬೇಕು. ಕೇವಲ ನೆಲದಲ್ಲಿಸ್ಥಂಡಿಲದಲ್ಲಿ(ದರ್ಭೆ) ಮಲಗಬೇಕು ಅಥವಾ ವೃಕ್ಷವನ್ನಾಶ್ರಯಿಸಿಯೂ ಮಲಗಬಹುದು.

ವಲ್ಕಲಂ ಯದಿ ವಾ ಕ್ಷೌಮಂ ಶಾಣಂ ಕಾರ್ಪಾಸಕಂ ತಥಾ ।
ಆಚ್ಛಾದನಂ ಭವೇತ್ ತಸ್ಯ ವಸ್ತ್ರಾರ್ಥಂ ಪಾಂಡುನಂದನ ॥೩೪॥

ಪಾಂಡುಪುತ್ರನೇ, ಆ ವ್ರತದ ಸಮಯದಲ್ಲಿ ನಾರುಮಡಿ, ರೇಷ್ಮೆ, ಸೆಣಬು, ಹತ್ತಿ ಇವುಗಳಿಂದ ಮಾಡಿದ ವಸ್ತ್ರವನ್ನು ಧರಿಸಬಹುದು.

ಏವಂ ಚಾಂದ್ರಾಯಣೇ ಪೂರ್ಣೇ ಮಾಸಸ್ಯಾಂತೇ ಪ್ರಯತ್ನವಾನ್ ।
ಬ್ರಾಹ್ಮಣಾನ್ ಭೋಜಯೇದ್ ಭಕ್ಯ್ಯಾ ದದ್ಯಾಚ್ಚೈವ ತು ದಕ್ಷಿಣಾಮ್ ॥

ಹೀಗೆ ಮಾಸದ ಕಡೆಯಲ್ಲಿ ಚಾಂದ್ರಾಯಣ ವ್ರತವು ಪೂರ್ಣವಾದ ಬಳಿಕ ಬ್ರಾಹ್ಮಣರಿಗೆ ಭಕ್ತಿಪೂರ್ವಕವಾಗಿ ಭೋಜನ ಮಾಡಿಸಬೇಕು. ದಕ್ಷಿಣೆಯನ್ನೂ ನೀಡಬೇಕು.

ಚಾಂದ್ರಾಯಣೇನ ಚೀರ್ಣೇನ ಯತ್ ಕೃತಂ ತೇನ ದುಷ್ಕೃತಮ್ ।
ತತ್ಸರ್ವಂ ತತ್ಕ್ಷಣಾದೇವ ಭಸ್ಮೀಭವತಿ ಕಾಷ್ಠವತ್ ॥೩೬॥

ಚಾಂದ್ರಾಯಣ ವ್ರತಾಚರಣೆಯಿಂದ ಮನುಷ್ಯನು ಮಾಡಿದ ಪಾಪಗಳೆಲ್ಲವೂ ಒಣಗಿದ ಕಟ್ಟಿಗೆಯು ಕ್ಷಣ ಮಾತ್ರದಲ್ಲಿ ಅಗ್ನಿಯಿಂದ ಭಸ್ಮವಾಗುವಂತೆ ಈ ವ್ರತವು ಆ ಕ್ಷಣದಲ್ಲಿಯೇ ಪಾಪವನ್ನು ಭಸ್ಮ ಮಾಡುತ್ತದೆ.

ಬ್ರಹ್ಮಹತ್ಯಾ ಚ ಗೋಹತ್ಯಾ ಸುವರ್ಣಸ್ಯೈವ ಚ ।
ಭ್ರೂಣಹತ್ಯಾ ಸುರಾಪಾನಂ ಗುರೋರ್ದಾರವ್ಯತಿಕ್ರಮಃ ॥೩೭॥

ಏವಮನ್ಯಾನಿ ಪಾಪಾನಿ ಪಾತಕೀಯಾನಿ ಯಾನಿ ಚ ।
ಚಾಂದ್ರಾಯಣೇನ ನಶ್ಯಂತಿ ವಾಯುನಾ ಪಾಂಸವೋ ಯಥಾ ॥೩೮॥

ಬ್ರಹ್ಮಹತ್ಯೆ, ಗೋಹತ್ಯೆ, ಬಂಗಾರಕಳ್ಳತನ, ಭ್ರೂಣಹತ್ಯೆ, ಸುರಾಪಾನ, ಗುರುತಲ್ಪಗಮನ, ಇನ್ನೂ ಅನೇಕ ಮಹಾ ಪಾತಕಗಳು ಹನ್ನೆರಡು ವರ್ಷಗಳ ಕಾಲ

ಚಾಂದ್ರಾಯಣ ವ್ರತ ಮಾಡುವುದರಿಂದ ವಾಯುವಿನ ವೇಗದಿಂದ ಧೂಳು ಹಾರಿ ಹೋಗುವಂತೆ ಅವರವರ ಯೋಗ್ಯತೆಗೆ ತಕ್ಕಂತೆ ಪಾಪಗಳು ಪರಿಹಾರವಾಗುತ್ತವೆ.

ಅನಿರ್ದಶಾಯಾ ಗೋಃ ಕ್ಷೀರಮೌಷ್ಟ್ರಮಾವಿಕಮೇವ ಚ ।
ಮೃತಸೂತಕಯೋಶ್ಚಾನ್ನಂ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೩೯॥

ಯಾವ ಹಸುವು ಕರುವನ್ನು ಹಾಕಿ ಹತ್ತು ದಿವಸಗಳು ಆಗಿಲ್ಲವೋ ಅಂತಹ ಹಸುವಿನ, ಒಂಟೆಯ, ಕುರಿಯ ಹಾಲನ್ನು ಕುಡಿದವನು, ಮರಣಾಶೌಚ, ಜಾತಾಶೌಚಗಳ ಮನೆಯಲ್ಲಿ ಊಟ ಮಾಡಿದವನು ಪಾಪ ಪರಿಹಾರಕ್ಕಾಗಿ ಚಾಂದ್ರಾಯಣ ವ್ರತವನ್ನು ಮಾಡಬೇಕು.

ಉಪಪಾತಕಿನಶ್ಚಾನ್ನಂ ಪತಿತಾನ್ನಂ ತಥೈವ ಚ ।
ಶೂದ್ರಸ್ಯೋಚ್ಛಿಷ್ಟಣಂ ಚೈವ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೪೦॥

ಉಪಪಾತಕಗಳನ್ನು ಮಾಡಿದವನ ಅನ್ನವನ್ನು, ಪತಿತನ ಅನ್ನವನ್ನು, ಶೂದ್ರನ ಉಚ್ಛಿಷ್ಟವನ್ನು ಉಂಡವನು ಚಾಂದ್ರಾಯಣ ವ್ರತವನ್ನು ಆಚರಿಸಬೇಕು.

ಆಕಾಶಸ್ಥಂ ತು ಹಸ್ತಸ್ಥಮಧಃ ಸ್ರಸ್ತಂ ತಥೈವ ಚ ।
ಪರಹಸ್ತಸ್ಥಿತಂ ಚೈವ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೪೧॥

ಆಕಾಶದಲ್ಲಿರುವ (ತುತ್ತನ್ನು ಹಾರಿಸಿ ತಿನ್ನುವ), ಎಡಗೈಯಲ್ಲಿ ಇಟ್ಟುಕೊಂಡು ತಿನ್ನುವ, ಕೈಯಿಂದ ಜಾರಿ ಬಿದ್ದ ಅನ್ನವನ್ನು ಉಣ್ಣುವ, ಇತರ ರೀತಿಯಲ್ಲಿ ತಿಂದುಳಿದ ಪದಾರ್ಥವನ್ನು ಸ್ವೀಕರಿಸಿ ತಿನ್ನುವ ವ್ಯಕ್ತಿಯು ಚಾಂದ್ರಾಯಣ ವ್ರತವನ್ನು ಆಚರಿಸಬೇಕು.

ಅಥಾಗ್ರೇ ದಿಧಿಷೋರನ್ನಂ ದಿಧಿಪೂಪಪತೇಸ್ತಥಾ ।
ಪರಿವೇತ್ತುಸ್ತಥಾ ಚಾನ್ನಂ ಪರಿವಿತ್ತಾನ್ನಮೇವ ಚ ॥೪೨॥

ಕುಂಡಾನ್ನಂ ಗೋಲಕಾನ್ನಂ ಚ ದೇವಲಾನ್ನಂ ತಥೈವ ಚ ।
ತಥಾ ಪುರೋಹಿತಸ್ಯಾನ್ನಂ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೪೩॥

ನಂತರ ಮೊದಲನೆಯ ಪತಿಗೆ ವಿಚ್ಛೇದನ ಮಾಡಿಕೊಂಡು ಎರಡನೆಯ ಪತಿಯನ್ನು ಸ್ವೀಕರಿಸಿದವಳ ಅನ್ನವನ್ನೂ, ಅಂತಹ ಪತ್ನಿಯನ್ನು ವಿವಾಹ ಮಾಡಿಕೊಂಡವನ ಮನೆಯ

ಅನ್ನವನ್ನೂ, ಅಣ್ಣನಿಗಿಂತ ಮೊದಲೇ ವಿವಾಹ ಮಾಡಿಕೊಂಡ ವ್ಯಕ್ತಿಯ ಅನ್ನವನ್ನೂ, ಅಕ್ಕನಿಗಿಂತ ಮೊದಲೇ ಮದುವೆಯಾದವಳ ಅನ್ನವನ್ನೂ, ಪತಿಯು ಜೀವಿಸಿರುವಾಗ ಪರಪುರುಷನಿಂದ ಹುಟ್ಟಿದವನ ಮನೆಯ ಅನ್ನವನ್ನೂ, ವಿಧವೆಯಲ್ಲಿ ಜಾರ ಪುರುಷನಿಂದ ಹುಟ್ಟಿದವನ ಮನೆಯ ಅನ್ನವನ್ನೂ, ವೇತನಕ್ಕಾಗಿ ದೇವರ ಪೂಜೆಯನ್ನು ಮಾಡುವ ಪುರೋಹಿತನ ಮನೆಯ ಅನ್ನವನ್ನು ಊಟಮಾಡಿದರೆ ಚಾಂದ್ರಾಯಣ ವ್ರತವನ್ನು ಆಚರಿಸಬೇಕು.

ಸುರಾಸವಂ ವಿಷಂ ಸರ್ಪಿರ್ಲಾಕ್ಷಾ ಲವಣಮೇವ ಚ ।
ತೈಲಂ ಚಾಪಿ ಚ ವಿಕ್ರೀಣನ್ ದ್ವಿಜಶ್ಚಾಂದ್ರಾಯಣಂ ಚರೇತ್ ॥೪೪॥

ಮದಿರೆ, ಆಸವ, ವಿಷ, ತುಪ್ಪ, ಅಗರು, ಎಣ್ಣೆ ಇವುಗಳನ್ನು ಮಾರಾಟ ಮಾಡುವ ಬ್ರಾಹ್ಮಣನು ಚಾಂದ್ರಾಯಣ ವ್ರತವನ್ನು ಆಚರಿಸಬೇಕು.

ಏಕೋದ್ದಿಷ್ಟಂ ತು ಯೋ ಭುಂಕ್ತೇ ಜನಮಧ್ಯಗತೋಽಪಿ ಯಃ ।
ಭಿನ್ನಭಾಂಡೇಷು ಯೋ ಭುಂಕ್ತೇ ದ್ವಿಜಶ್ಚಾಂದ್ರಾಯಣಂ ಚರೇತ್ ॥೪೫॥

ಮಹಾಲಯ ಶ್ರಾದ್ಧದಲ್ಲಿ ಊಟ ಮಾಡಿದ, ಜನಸಮೂಹದ ಮಧ್ಯದಲ್ಲಿ ಊಟ ಮಾಡಿದ, ಒಡೆದ ಪಾತ್ರೆಯಲ್ಲಿ ಊಟ ಮಾಡಿದ ಬ್ರಾಹ್ಮಣನು ಚಾಂದ್ರಾಯಣ ವ್ರತವನ್ನು ಮಾಡಬೇಕು.

ಯೋ ಭುಂಕ್ತೇನುಪನೀತೇನ ಯೋ ಭುಂಕ್ತೇ ಚ ಸ್ತ್ರಿಯಾ ಸಹ ।
ಯೋ ಭುಂಕ್ತೇ ಕನ್ಯಯಾ ಸಾರ್ಧಂ ದ್ವಿಜಶ್ಚಾಂದ್ರಾಯಣಂ ಚರೇತ್ ॥

ಉಪನಯನವಾಗದವನ ಜೊತೆಯಲ್ಲಿ ತಂದೆ ಮತ್ತು ಹೆಂಗಸಿನ ಜೊತೆಗೆ ಊಟ ಮಾಡಿದ ಬ್ರಾಹ್ಮಣನು, ಕನ್ಯೆಯ ಜೊತೆಗೆ ಉಂಡಬ್ರಾಹ್ಮಣನು ಚಾಂದ್ರಾಯಣ ವ್ರತವನ್ನು ಮಾಡಬೇಕು.

ಉಚ್ಛಿಷ್ಟಂ ಸ್ಥಾಪಯೇದ್ ವಿಪ್ರೋ ಯೋ ಮೋಹಾದ್ ಭೋಜನಾಂತರೇ ।
ದದ್ಯಾದ್ ವಾ ಯದಿ ಸಮ್ಮೋಹಾದ್ ದ್ವಿಜಶ್ಚಾಂದ್ರಾಯಣಂ ಚರೇತ್ ॥೪೭॥

ಯಾವನು ಮೋಹವಶನಾಗಿ ಊಟ ಮಾಡಿದ ಬಳಿಕ ಉಳಿದ ಅನ್ನವನ್ನು

ಬೇರೆಯವರ ತಟ್ಟೆಗೆ ಹಾಕುತ್ತಾನೋ ಅಥವಾ ಬೇರೆಯವರಿಗೆ ತಿನ್ನಲು ಕೊಡುತ್ತಾನೋ ಅಂತಹ ಬ್ರಾಹ್ಮಣನು ಚಾಂದ್ರಾಯಣ ವ್ರತವನ್ನು ಮಾಡಬೇಕು.

ತುಂಬೀಂ ಕೋಶಾತಕೀಂ ಚೈವ ಪಲಾಂಡುಂ ಗೃಂಜನಂ ತಥಾ ।
ಛತ್ರಾಕಂ ಲಶುನಂ ಚೈವ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೪೮॥

ಯಾರು ಸೋರೆಕಾಯಿಯನ್ನು, ಪಡವಲಕಾಯಿಯನ್ನು, ಈರುಳ್ಳಿಯನ್ನು, ಗಜ್ಜರಿಯನ್ನು, ಅಣಬೆಯನ್ನು, ಬೆಳ್ಳುಳ್ಳಿಯನ್ನು ತಿನ್ನುತ್ತಾನೋ ಅವನು ಚಾಂದ್ರಾಯಣ ವ್ರತವನ್ನು ಮಾಡಬೇಕು.

ದ್ವಿಜಃ ಪರ್ಯುಷಿತಂ ಚಾನ್ನಂ ಪಕ್ವಂ ಪರಗೃಹಾಗತಮ್ ।
ವಿಪಕ್ವಂ ಚ ತಥಾ ಮಾಂಸಂ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥೪೯॥

ಹಳಿಸಿದ ಅನ್ನವನ್ನು, ಮತ್ತೊಬ್ಬರ ಮನೆಯಿಂದ ತಂದ ಅನ್ನವನ್ನು, ಸರಿಯಾಗಿ ಬೇಯದಿರುವ ಅನ್ನವನ್ನು, ಮಾಂಸವನ್ನು ತಿಂದವನು ಚಾಂದ್ರಾಯಣ ವ್ರತವನ್ನು ಮಾಡಬೇಕು.

ಉದಕ್ಯಯಾ ಶುನಾ ವಾಽಪಿ ಚಂಡಾಲೈರ್ವಾ ದ್ವಿಜೋತ್ತಮಃ ।
ದೃಷ್ಟಮನ್ನಂ ತು ಭುಂಜಾನೋ ದ್ವಿಜಶ್ಚಾಂದ್ರಾಯಣಂ ಚರೇತ್ ॥೫೦॥

ರಜಸ್ವಲೆ, ನಾಯಿ, ಚಂಡಾಲ ಇವರು ನೋಡಿದ ಅನ್ನವನ್ನು ತಿಂದ ಬ್ರಾಹ್ಮಣ ವ್ಯಕ್ತಿಯು ಚಾಂದ್ರಾಯಣ ವ್ರತವನ್ನು ಮಾಡಬೇಕು.

ಏತತ್ಪುರಾ ವಿಶುದ್ಧ್ಯರ್ಥಮೃಷಿಭಿಶ್ಚರಿತವ್ರತಮ್ ।
ಪಾವನಂ ಸರ್ವಭೂತಾನಾಂ ಪುಣ್ಯಂ ಪಾಂಡವ ಚೋದಿತಮ್ ॥೫೧॥

ಯುಧಿಷ್ಠಿರನೇ, ಋಷಿಗಳು ಇಂತಹ ದೋಷಗಳ ವಿಶುದ್ಧಿಗಾಗಿ ಈ ಚಾಂದ್ರಾಯಣ ವ್ರತವನ್ನು ಆಚರಿಸಿದ್ದಾರೆ. ಸಮಸ್ತ ಪ್ರಾಣಿಗಳಿಗೂ ಪವಿತ್ರವಾದ ಪುಣ್ಯಪ್ರದವಾದ ವ್ರತವು ಚಾಂದ್ರಾಯಣ ವ್ರತವು ಎಂದು ಹೇಳಲ್ಪಟ್ಟಿದೆ.

ಏತೇನ ವಸವೋ ರುದ್ರಾಶ್ಚಾದಿತ್ಯಾಶ್ಚ ದಿವಂ ಗತಾಃ ।
ಏತದದ್ಯ ಪರಂ ಗುಹ್ಯಂ ಪವಿತ್ರಂ ಪಾಪನಾಶನಮ್ ॥೫೨॥

ಯಥೋಕ್ತಮೇತದ್ ಯಃ ಕುರ್ಯಾದ್ ದ್ವಿಜಃ ಪಾಪಪ್ರಣಾಶನಮ್ ।
ಸ ದಿವಂ ಯಾತಿ ಪೂತಾತ್ಮಾ ನಿರ್ಮಲಾದಿತ್ಯಸನ್ನಿಭಃ ॥೫೩॥

ಈ ಚಾಂದ್ರಾಯಣ ವ್ರತದಿಂದ ವಸುಗಳು, ರುದ್ರರು, ಆದಿತ್ಯರು ಸ್ವರ್ಗದಲ್ಲಿ ಸುಖವಾಗಿ ಇದ್ದಾರೆ. ಇಂತಹ ಪವಿತ್ರವಾದ, ಗುಹ್ಯವಾದ, ಪಾಪನಾಶಕವಾದ ವ್ರತವನ್ನು ಯಥಾವತ್ತಾಗಿ ನಿನಗೆ ನಿರೂಪಿಸಿದ್ದೇನೆ. ನಾನು ಹೇಳಿದಂತೆ ಯಾವ ಬ್ರಾಹ್ಮಣರು ಈ ವ್ರತವನ್ನು ಆಚರಿಸುತ್ತಾರೋ ಅವರ ಸಮಸ್ತ ವಿಧವಾದ ಪಾಪಗಳು ನಾಶವಾಗುತ್ತವೆ. ಬಳಿಕ ನಿರ್ಮಲನಾದ ಸೂರ್ಯನಂತೆ ಪ್ರಕಾಶಿಸುವ ಪೂತಾತ್ಮನಾದ ಆ ವ್ಯಕ್ತಿಯು ಸ್ವರ್ಗಕ್ಕೆ ಹೋಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಚಾಂದ್ರಾಯಣವಿಧಿರ್ನಾಮ ದ್ವಾದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿಮೂರನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಕಾರ್ತಿಕವೇ ಮೊದಲಾದ ಹನ್ನೆರಡು ಮಾಸಗಳಲ್ಲಿ ಏಕಭುಕ್ತ ವ್ರತವನ್ನು ಆಚರಿಸುವ ಪ್ರಕಾರವನ್ನು ನಿರೂಪಿಸುವ ಮೂಲಕ ಆ ವ್ರತಕ್ಕೆ ಲಭಿಸುವ ಫಲವನ್ನು ಹೇಳಿದುದು.

ವೈಶಂಪಾಯನಃ

ಕೇಶವೇನೈವಮುಕ್ತೇ ತು ಚಾಂದ್ರಾಯಣವಿಧಿಕ್ರಮೇ ।
ಅಪೃಚ್ಛತ್ ಪುನರನ್ಯಾಂಶ್ಚ ಧರ್ಮಾನ್ ಧರ್ಮಾತ್ಮಜೋ ನೃಪಃ ॥೧॥

ವೈಶಂಪಾಯನ– ಕೇಶವನು ಚಾಂದ್ರಾಯಣವ್ರತದ ವಿಧಿಗಳನ್ನು, ಕ್ರಮಗಳನ್ನು ನಿರೂಪಿಸಿದ ಬಳಿಕ ಧರ್ಮಜನಾದ ಯುಧಿಷ್ಠಿರನು ಪುನಃ ಬೇರೆ ಧರ್ಮಗಳ ಬಗ್ಗೆ ಪ್ರಶ್ನಿಸಿದನು.

ಯುಧಿಷ್ಠಿರಃ

ಸರ್ವಭೂತಪತೇ ಶ್ರೀಮನ್ ಸರ್ವಭೂತನಮಸ್ಕೃತ ।
ಸರ್ವಭೂತಹಿತಂ ಧರ್ಮಂ ಸರ್ವಜ್ಞ ಕಥಯಸ್ವ ಮೇ ॥೨॥

ಯುಧಿಷ್ಠಿರ– ಸರ್ವಭೂತಪತಿಯೇ, ಸರ್ವಪ್ರಾಣಿಗಳಿಂದಲೂ ನಮಸ್ಕೃತನಾದ ಶ್ರೀಮಂತನೇ ಸರ್ವಪ್ರಾಣಿಗಳಿಗೂ ಹಿತಕರವಾದ ಧರ್ಮವನ್ನು ಸರ್ವಜ್ಞನಾದ ನೀನು ನನಗೆ ಹೇಳು.

ಶ್ರೀಭಗವಾನ್

ಯದ್ ದರಿದ್ರಜನಸ್ಯಾಪಿ ಸ್ವರ್ಗ್ಯಂ ಸುಖಕರಂ ಭವೇತ್ ।
ಸರ್ವಪಾಪಪ್ರಶಮನಂ ತಚ್ಛೃಣುಷ್ವ ಯುಧಿಷ್ಠಿರ ॥೩॥

ಶ್ರೀಭಗವಾನ್– ಯುಧಿಷ್ಠಿರನೇ, ಯಾವ ಧರ್ಮವು ದರಿದ್ರಜನರಿಗೂ ಸ್ವರ್ಗವನ್ನು ನೀಡುತ್ತದೋ, ಸುಖಕರವಾಗಿದೆಯೋ, ಸಮಸ್ತ ಪಾಪಗಳನ್ನು ನಾಶಗೊಳಿಸುತ್ತದೋ ಅಂತಹ ಧರ್ಮವನ್ನು ಹೇಳುತ್ತೇನೆ, ಕೇಳಿಸಿಕೊ.

ಕಾರ್ತಿಕಾದ್ಯಾಸ್ತು ಯೇ ಮಾಸಾ ದ್ವಾದಶೈವ ಪ್ರಕೀರ್ತಿತಾಃ ।
ತೇಷ್ವೇಕಭುಕ್ತನಿಯಮಃ ಸರ್ವೇಷಾಮುಚ್ಯತೇ ಮಯಾ ॥೪॥

ಕಾರ್ತಿಕವೇ ಮೊದಲಾದ ಹನ್ನೆರಡು ಮಾಸಗಳು ಹೇಳಲ್ಪಟ್ಟಿವೆ. ಆ ಮಾಸಗಳಲ್ಲಿ ಏಕಭುಕ್ತ ನಿಯಮವು ಎಲ್ಲರಿಗೂ ನನ್ನಿಂದ ಹೇಳಲ್ಪಡುತ್ತದೆ.

ಕಾರ್ತಿಕೇ ಯಸ್ತು ವೈ ಮಾಸೇ ನಂದಾಯಾಂ ಸಂಯತೇಂದ್ರಿಯಃ ।
ಏಕಭುಕ್ತೇನ ಮದ್ಭಕ್ತೋ ಮಾಸಮೇಕಂ ತು ವರ್ತತೇ ॥೫॥

ಜಲಂ ವಾ ನ ಪಿಬೇನ್ಮಾಸೇ ನಾಂತರಾ ಭೋಜನಾತ್ ಪರಮ್ ।
ಆದಿತ್ಯರೂಪಂ ಮಾಂ ನಿತ್ಯಮರ್ಚಯನ್ ಸುಸಮಾಹಿತಃ ॥೬॥

ವ್ರತಾಂತೇ ಭೋಜಯೇದ್ ವಿಪ್ರಾನ್ ದಕ್ಷಿಣಾಂ ಚ ದದೌ ಪುನಃ ।
ಕ್ರೋಧಲೋಭವಿನಿರ್ಮುಕ್ತಸ್ತಸ್ಯ ಪುಣ್ಯಫಲಂ ಶೃಣು ॥೭॥

ಯಾವನು ಕಾರ್ತಿಕ ಮಾಸದಲ್ಲಿ ಶುಕ್ಲಪಕ್ಷ ಪ್ರತಿಪದೆಯಂದು ಜಿತೇಂದ್ರಿಯನಾಗಿ ಏಕಭುಕ್ತಿಯನ್ನು ಆರಂಭಿಸಿ, ಒಂದು ಮಾಸದ ಪರ್ಯಂತ ನನ್ನ ಭಕ್ತನಾಗಿ ಅನುಷ್ಠಾನ ಮಾಡುತ್ತಾನೋ, ಒಂದು ಮಾಸದ ತನಕ ಭೋಜನದ ಬಳಿಕ ನೀರನ್ನೂ ಪಾನ ಮಾಡುವುದಿಲ್ಲವೋ, ಆದಿತ್ಯರೂಪಿಯಾದ ನನ್ನನ್ನು ನಿತ್ಯವೂ ಏಕಾಗ್ರಬುದ್ಧಿಯಿಂದ

ಆರಾಧಿಸುತ್ತಾನೋ, ವ್ರತ ಮುಗಿದ ಬಳಿಕ ಬ್ರಾಹ್ಮಣರಿಗೆ ಊಟ ಮಾಡಿಸುತ್ತಾನೋ ಪುನಃ ಅವರಿಗೆ ದಕ್ಷಿಣೆ ನೀಡುತ್ತಾನೋ, ಕ್ರೋಧ-ಲೋಭ ನಿರ್ಮುಕ್ತನಾಗಿ ಈ ಕ್ರಮದಲ್ಲಿ ವ್ರತವನ್ನು ಮಾಡಿದ ಅವನಿಗೆ ಲಭಿಸುವ ಪುಣ್ಯವೇನೆಂಬುದನ್ನು ತಿಳಿದುಕೊ.

ವಿಧಿವತ್ ಕಪಿಲಾದಾನೇ ಯತ್ಪುಣ್ಯಂ ಸಮುದಾಹೃತಮ್ ।
ತತ್ಪುಣ್ಯಂ ಸಮನುಪ್ರಾಪ್ಯ ಸೂರ್ಯಲೋಕೇ ಮಹೀಯತೇ ॥೮॥

ತತಶ್ಚಾಪಿ ಚ್ಯುತಃ ಕಾಲಾತ್ ಪುರುಷೇಷೂಪಜಾಯತೇ ॥೯॥

ವಿಧಿಬದ್ಧವಾಗಿ ಕಪಿಲಧೇನುವಿನ ದಾನ ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೆ ಎಂದು ಹೇಳಿದ್ದಾರೋ ಅಂತಹ ಪುಣ್ಯವನ್ನು ಒಂದು ಕಾರ್ತಿಕ ಮಾಸದಲ್ಲಿ ಮಾಡಿದ ಏಕಭುಕ್ತವ್ರತದಿಂದ ಹೊಂದುತ್ತಾನೆ. ಸೂರ್ಯಲೋಕದಲ್ಲಿ ಪೂಜ್ಯನಾಗುತ್ತಾನೆ. ಬಳಿಕ ಕಾಲಾನುಸಾರವಾಗಿ ಆ ಲೋಕದಿಂದ ಕೆಳಗೆ ಬಂದ ಆ ವ್ಯಕ್ತಿಯು ಕಿಂಪುರುಷರ ಖಂಡದಲ್ಲಿ ಜನ್ಮವನ್ನು ತಾಳುತ್ತಾನೆ.

ಮಾರ್ಗಶೀರ್ಷಂ ತು ಯೋ ಮಾಸಮೇಕಭುಕ್ತೇನ ವರ್ತತೇ ।
ಕಾಮಂ ಕ್ರೋಧಂ ಚ ಲೋಭಂ ಚ ಪರಿತ್ಯಜ್ಯ ಯಥಾವಿಧಿ ॥೧೦॥

ಸ್ನಾತ್ವಾ ಚಾದಿತ್ಯರೂಪಂ ಮಾಮರ್ಚಯೇನ್ನಿಯತೇಂದ್ರಿಯಃ ।
ಜಪನ್ನೇವ ತು ಗಾಯತ್ರೀಂ ಮಾಮಿಕಾಂ ವಾಗ್ಯತಃ ಶುಚಿಃ ॥೧೧॥

ಮಾಸೇ ಪರಿಸಮಾಪ್ತೇ ತು ಭೋಜಯಿತ್ವಾ ದ್ವಿಜಾನ್ ಶುಚಿಃ ।
ತಾನರ್ಚಯತಿ ಮದ್ಭಕ್ತ್ಯಾ ತಸ್ಯ ಪುಣ್ಯಫಲಂ ಶೃಣು ॥೧೨॥

ಯಾವನು ಮಾರ್ಗಶಿರ ಮಾಸದಲ್ಲಿ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಕಾಮ-ಕ್ರೋಧ-ಲೋಭಗಳನ್ನು ತ್ಯಜಿಸಿ, ವಿಧಿಬದ್ಧವಾಗಿ ಏಕಭುಕ್ತವ್ರತವನ್ನು ಆರಂಭಿಸುತ್ತಾನೋ, ಸ್ನಾನ ಮಾಡಿ, ಜಿತೇಂದ್ರಿಯನಾಗಿ, ಆದಿತ್ಯಾಂತರ್ಯಾಮಿಯಾದ ನನ್ನನ್ನು ಆರಾಧಿಸಿ, ಮೌನಿಯಾಗಿದ್ದು, ಶುಚಿಯಾಗಿ ಗಾಯತ್ರಿಮಂತ್ರ ಜಪಮಾಡಿ, ಮಾರ್ಗಶಿರ ಮಾಸವು ಪರಿಸಮಾಪ್ತಿ ಹೊಂದಿದ ಬಳಿಕ ಸದಾಚಾರ ಸಂಪನ್ನನಾಗಿದ್ದು ಬ್ರಾಹ್ಮಣರನ್ನು ಊಟ ಮಾಡಿಸಬೇಕು. ನನ್ನ ಭಕ್ತನಾಗಿದ್ದು ಆ ಬ್ರಾಹ್ಮಣರನ್ನು ಆರಾಧಿಸಿದವನಿಗೆ ದೊರೆಯುವ ಪುಣ್ಯಫಲವೇನೆಂಬುದನ್ನು ಕೇಳಿಸಿಕೊ.

ಅಗ್ನಿಹೋತ್ರೇ ಕೃತೇ ಪುಣ್ಯಮಾಹಿತಾಗ್ನೇಶ್ಚ ಯದ್ಭವೇತ್ ।
ತತ್ಪುಣ್ಯಫಲಮಾಸಾದ್ಯ ಯಾನೇನಾಂಬರಶೋಭಿನಾ ॥೧೩॥

ಸಪ್ತರ್ಷಿಲೋಕೇ ಚರತಿ ಯಥಾಕಾಲಂ ಯಥಾಸುಖಮ್ ॥೧೪॥

ಆಹಿತಾಗ್ನಿಗೆ ಅಗ್ನಿಹೋತ್ರವನ್ನು ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೋ ಅಂತಹ ಪುಣ್ಯವನ್ನು ಈ ವ್ರತದಿಂದ ಹೊಂದಿ ಆಕಾಶದಲ್ಲಿ ಶೋಭಿಸುವ ಯಾನದಲ್ಲಿ ಕುಳಿತು ಸಪ್ತರ್ಷಿಗಳ ಲೋಕದಲ್ಲಿ ಸುಖವಾಗಿ ಬಹಳ ಕಾಲ ಸಂಚರಿಸುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದ್ ಹರಿವರ್ಷೇಷು ಜಾಯತೇ ।
ತತ್ರ ಪ್ರಕಾಶಂ ಕ್ರೀಡಿತ್ವಾ ರಾಜಾ ಪಶ್ಚಾದ್ ಭವಿಷ್ಯತಿ ॥೧೫॥

ಕಾಲಿಕವಾಗಿ ಆ ಲೋಕದಿಂದ ಆಗಮಿಸಿದ ಆ ವ್ಯಕ್ತಿಯು ಹರಿವರ್ಷ ಖಂಡದಲ್ಲಿ ಉತ್ಪತ್ತಿಯನ್ನು ಹೊಂದುತ್ತಾನೆ. ಅಲ್ಲಿ ಅನೇಕ ವರ್ಷಗಳ ಕಾಲ ಸುಖವಾಗಿ ವಿಹರಿಸಿ ಬಳಿಕ ರಾಜನಾಗಿ ಹುಟ್ಟುತ್ತಾನೆ.

ಪೌಷಮಾಸಂ ಕ್ಷಿಪೇದೇವಮೇಕಭುಕ್ತೇನ ಯೋ ನರಃ ।
ಅರ್ಚಯನ್ನೇವ ಮಾಂ ನಿತ್ಯಂ ಮದ್ಗತೇನಾಂತರಾತ್ಮನಾ ॥೧೬॥

ಅಹಿಂಸಾ ಸತ್ಯನಿರತಃ ಕ್ರೋಧಹರ್ಷವಿವರ್ಜಿತಃ ।
ಏವಂ ಯುಕ್ತಸ್ಯ ರಾಜೇಂದ್ರ ಶೃಣು ಯತ್ಫಲಮುತ್ತಮಮ್ ॥೧೭॥

ಇದರಂತೆ ಪೌಷಮಾಸದಲ್ಲಿ ಯಾವ ಮನುಷ್ಯನು ಹೃದಯದಲ್ಲಿ ಭಗವಂತನನ್ನು ಧ್ಯಾನಿಸುತ್ತಾ ಪೂಜಿಸುತ್ತಾ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಹಿಂಸೆ ಮಾಡದೆ, ಸತ್ಯನಿಷ್ಠನಾಗಿ, ಕ್ರೋಧ-ಹರ್ಷಗಳ ಉದ್ವೇಗವನ್ನು ತ್ಯಜಿಸಿ ಈ ವ್ರತವನ್ನು ಆಚರಿಸಿದ ವ್ಯಕ್ತಿಗೆ ಯಾವ ಉತ್ತಮವಾದ ಫಲವು ಲಭಿಸುತ್ತದೆ ಎಂಬುದನ್ನು ರಾಜೇಂದ್ರನೇ ತಿಳಿಸುತ್ತೇನೆ, ಕೇಳು.

ವಿಪ್ರಾತಿಥ್ಯಸಹಸ್ರೇಷು ಯತ್ಪುಣ್ಯಂ ಸಮುದಾಹೃತಮ್ ।
ತತ್ಪುಣ್ಯಂ ಸಮನುಪ್ರಾಪ್ಯ ಶಕ್ರಲೋಕೇ ಮಹೀಯತೇ ॥೧೮॥

ಸಾವಿರ ಬ್ರಾಹ್ಮಣರನ್ನು ಅನ್ನದಿಂದ ಆರಾಧಿಸಿದಾಗ ಯಾವ ಪುಣ್ಯವು

ದೊರೆಯುತ್ತದೋ ಅಷ್ಟು ಫಲವನ್ನು ಹೊಂದಿದವನಾಗಿ ಇಂದ್ರಲೋಕದಲ್ಲಿ ಪೂಜಿತನಾಗುತ್ತಾನೆ.

ಅವತೀರ್ಣಸ್ತತಃ ಕಾಲಾದ್ ಇಲವರ್ಷೇ ತು ಜಾಯತೇ ।
ತತ್ರ ಸ್ಥಿತ್ವಾ ಚಿರಂ ಕಾಲಮಸ್ಮಿನ್ ವಿಪ್ರೋ ಭವಿಷ್ಯತಿ ॥೧೯॥

ಬಳಿಕ ಇಂದ್ರಲೋಕದಿಂದ ಆಗಮಿಸಿದ ಅವನು ಇಲಾವೃತವರ್ಷದಲ್ಲಿ ಜನ್ಮ ತಾಳುತ್ತಾನೆ. ಅಲ್ಲಿ ಬಹಳ ಕಾಲ ವಾಸ ಮಾಡಿ ನಂತರ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಮಾಘಮಾಸಂ ತಥಾ ಯಸ್ತು ವರ್ತತೇ ಚೈಕಭುಕ್ತತಃ ।
ಮದರ್ಚನಪರೋ ಭೂತ್ವಾ ಡಂಭಕ್ರೋಧವಿವರ್ಜಿತಃ ॥೨೦॥

ಮಾಮಿಕಾಮಪಿ ಸಾವಿತ್ರೀಂ ಸಂಧ್ಯಾಯಾಂ ತು ಜಪೇದ್ ಬುಧಃ ॥೨೧॥

ದತ್ತ್ವಾ ತು ದಕ್ಷಿಣಾಮಂತೇ ಭೋಜಯಿತ್ವಾ ದ್ವಿಜಾನಪಿ ।
ನಮಸ್ಕರೋತಿ ತಾನ್ ಭಕ್ತ್ಯಾ ಮದ್ಗತೇನಾಂತರಾತ್ಮನಾ ॥೨೨॥

ತ್ರಿಕಾಲಂ ಸ್ನಾನಯುಕ್ತಸ್ಯ ತಸ್ಯ ಪುಣ್ಯಫಲಂ ಶೃಣು ॥೨೩॥

ಯಾವನು ಮಾಘಮಾಸದಲ್ಲಿ ಡಂಭ, ಕ್ರೋಧಗಳನ್ನು ತ್ಯಜಿಸಿ ನನ್ನ ಆರಾಧಕನಾಗಿದ್ದು ಏಕಭುಕ್ತವ್ರತವನ್ನು ಆಚರಿಸುತ್ತಾನೋ, ನನಗೆ ಸಂಬಂಧಿಸಿದ ಗಾಯತ್ರಿಯನ್ನು ಸಂಧ್ಯಾಕಾಲದಲ್ಲಿ ಜ್ಞಾನಿಯಾಗಿ ಜಪಿಸುತ್ತಾನೋ, ವ್ರತ ಮುಗಿದ ಬಳಿಕ ಬ್ರಾಹ್ಮಣರನ್ನು ಊಟ ಮಾಡಿಸಿ ದಕ್ಷಿಣೆ ಕೊಟ್ಟು ಅಂತರ್ಯಾಮಿಯಾದ ನನ್ನನ್ನೇ ನೆನೆಯುತ್ತಾ ಬ್ರಾಹ್ಮಣರಿಗೆ ನಮಸ್ಕರಿಸುತ್ತಾನೋ, ಮೂರು ಕಾಲ ಸ್ನಾನ ಮಾಡಿ ವ್ರತವನ್ನು ಆಚರಿಸುವ ಆ ವ್ಯಕ್ತಿಗೆ ಲಭಿಸುವ ಪುಣ್ಯವೇನೆಂಬುದನ್ನು ಕೇಳು.

ನೀಲಕಂಠಪ್ರಯುಕ್ತೇನ ಯಾನೇನಾಂಬರಶೋಭಿನಾ ।
ಪಿತೃಲೋಕಂ ವ್ರಜೇಚ್ಛ್ರೀಮಾನ್ ಸೇವ್ಯಮಾನೋಽಪ್ಸರೋಗಣೈಃ ॥೨೪॥

ಮಹರುದ್ರದೇವನು ಕಳುಹಿಸಲ್ಪಟ್ಟ ರಥವನ್ನು ಏರಿಕೊಂಡು ಆಕಾಶದಲ್ಲಿ ಸಂಚರಿಸುತ್ತಾ ಕಾಂತಿಯುಕ್ತನಾಗಿ ಅಪ್ಸರಾಗಣದಿಂದ ಸೇವ್ಯಮಾನನಾಗಿ ಪಿತೃ ಲೋಕವನ್ನು ಕುರಿತು ಹೋಗುತ್ತಾನೆ.

ತತ್ರ ಪ್ರಕಾಮಂ ಕ್ರೀಡಿತ್ವಾ ಭದ್ರಾಶ್ವೇಷೂಪಜಾಯತೇ ।
ತತಶ್ಚ್ಯುತಶ್ಚತುರ್ವೇದೀ ವಿಪ್ರೋ ಭವತಿ ಭೂತಳೇ ॥೨೫॥

ಅಲ್ಲಿ ಯಥೇಷ್ಟವಾಗಿ ಸಂತೋಷದಿಂದ ವಿಹರಿಸಿ ಬಳಿಕ ಭದ್ರಾಶ್ವಖಂಡದಲ್ಲಿ ಹುಟ್ಟುತ್ತಾನೆ. ಅಲ್ಲಿಯೂ ಹೆಚ್ಚು ಕಾಲ ಸಂತೋಷದಿಂದ ವಿಹರಿಸಿ ನಂತರ ಚತುರ್ವೇದಜ್ಞನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಯಃ ಕ್ಷಿಪೇತ್ ಫಾಲ್ಗುನಂ ಮಾಸಮೇಕಭುಕ್ತೋ ಜಿತೇಂದ್ರಿಯಃ ।
ನಮೋ ಬ್ರಹ್ಮಣ್ಯದೇವಾಯೇತ್ಯೇತನ್ಮಂತ್ರಂ ಜಪೇತ್ ಸದಾ ॥೨೬॥

ಪಾಯಸಂ ಭೋಜಯೇದ್ ವಿಪ್ರಾನ್ ವ್ರತಾಂತೇ ಸಂಯತೇಂದ್ರಿಯಃ ।
ಮದರ್ಚನಪರೋಽಕ್ರೋಧಸ್ತಸ್ಯ ಪುಣ್ಯಫಲಂ ಶೃಣು ॥೨೭॥

ಯಾವ ವ್ಯಕ್ತಿಯು ಜಿತೇಂದ್ರಿಯನಾಗಿ ಫಾಲ್ಗುಣ ಮಾಸದಲ್ಲಿ 'ನಮೋ ಬ್ರಹ್ಮಣ್ಯದೇವಾಯ' ಎಂಬ ಮಂತ್ರವನ್ನು ಪಠಿಸುತ್ತಾ ಒಂದು ತಿಂಗಳ ಕಾಲ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಸಿಟ್ಟನ್ನು ಬಿಟ್ಟು ನನ್ನನ್ನು ಆರಾಧಿಸುತ್ತಾ ಜಿತೇಂದ್ರಿಯನಾಗಿ ವ್ರತ ಮುಗಿದ ಬಳಿಕ ಪಾಯಸದ ಭೋಜನವನ್ನು ಬ್ರಾಹ್ಮಣರಿಗೆ ಹಾಕುತ್ತಾನೋ ಅವನಿಗೆ ದೊರಕುವ ಫಲವೇನೆಂಬುದನ್ನು ಕೇಳಿಸಿಕೊ.

ವಿಮಾನಂ ಸಾರಸೈರ್ಯುಕ್ತಮಾರೂಢಃ ಕಾಮಗಾಮಿ ಚ ।
ನಕ್ಷತ್ರಲೋಕೇ ರಮತೇ ನಕ್ಷತ್ರಸದೃಶಾಕೃತಿಃ ॥೨೮॥

ಸಾರಸಪಕ್ಷಿಗಳಿಂದ ಕೂಡಿದ ಕಾಮಚಾರಿಯಾದ ವಿಮಾನವನ್ನು ಏರಿಕೊಂಡು ನಕ್ಷತ್ರಸದೃಶವಾದ ಆಕಾರವನ್ನು ಪಡೆದ ಆತನು ನಕ್ಷತ್ರಲೋಕದಲ್ಲಿಯೇ ವಿಹರಿಸುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾತ್ ಕೇತುಮಾಲೇಷು ಜಾಯತೇ ।
ತತ್ರ ಪ್ರಕಾಮಂ ಕ್ರೀಡಿತ್ವಾ ಮಾನುಷೇಷು ಮುನಿರ್ಭವೇತ್ ॥೨೯॥

ಬಳಿಕ ಅಲ್ಲಿಂದ ಕಾಲಿಕವಾಗಿ ಚ್ಯುತನಾದ ಅವನು ಕೇತುಮಾಲ ವರ್ಷದಲ್ಲಿ ಉತ್ಪತ್ತಿಯನ್ನು ಪಡೆದು ಅಲ್ಲಿಯೂ ಯಥೇಷ್ಟವಾಗಿ ವಿಹರಿಸಿ ಮನುಷ್ಯಲೋಕದಲ್ಲಿ ಮುನಿಯಾಗಿ ಹುಟ್ಟುತ್ತಾನೆ.

ಚೈತ್ರಮಾಸಂ ತು ಯೋ ರಾಜನ್ನೇಕಭುಕ್ತೇನ ವರ್ತತೇ ।
ಬ್ರಹ್ಮಚಾರೀ ತು ಮದ್ಭಕ್ತಸ್ತಸ್ಯ ಪುಣ್ಯಫಲಂ ಶೃಣು ॥೩೦॥

ಯಾವ ವ್ಯಕ್ತಿಯು ಚೈತ್ರಮಾಸದಲ್ಲಿ ನನ್ನ ಭಕ್ತನಾಗಿ ಬ್ರಹ್ಮಚರ್ಯದಲ್ಲಿದ್ದು ಏಕಭುಕ್ತ ವ್ರತವನ್ನು ಆಚರಿಸುತ್ತಾನೋ ಅವನಿಗೆ ಲಭಿಸುವ ಪುಣ್ಯಫಲವನ್ನು ಕೇಳು.

ಯದಗ್ನಿಹೋತ್ರಿಣಃ ಪುಣ್ಯಂ ಯಥೋಕ್ತವ್ರತಚಾರಿಣಃ ।
ತತ್ಪುಣ್ಯಫಲಮಾಸಾದ್ಯ ಚಂದ್ರಲೋಕೇ ಮಹೀಯತೇ ॥೩೧॥

ಅಗ್ನಿಹೋತ್ರಗಳಿಗೆ ಯಾವ ಪುಣ್ಯವು ಲಭಿಸುತ್ತದೋ ವಿಧಿಬದ್ಧವಾಗಿ ವ್ರತಾಚರಣೆ ಮಾಡಿದ ವ್ಯಕ್ತಿಗಳಿಗೆ ಲಭಿಸುವ ಪುಣ್ಯಫಲವನ್ನು ಹೊಂದಿದ ಈತನು ಚಂದ್ರಲೋಕದಲ್ಲಿ ಪೂಜ್ಯನಾಗುತ್ತಾನೆ.

ತತೋऽವತೀರ್ಯೋ ಜಾಯೇತ ವರ್ಷೇ ರಮಣಕೇ ಪುನಃ ।
ಭುಕ್ತ್ವಾ ಕಾಮಾಂಸ್ತತಸ್ತಸ್ಮಿನ್ನಿಹ ರಾಜಾ ಭವಿಷ್ಯತಿ ॥೩೨॥

ಬಳಿಕ ರಮಣಕ ವರ್ಷದಲ್ಲಿ ಉತ್ಪತ್ತಿಯನ್ನು ಹೊಂದಿ ಅಲ್ಲಿ ಯಥೇಷ್ಟವಾದ ಕಾಮನೆಗಳನ್ನು ಪಡೆದು ಈ ಭೂಮಿಯಲ್ಲಿ ರಾಜನಾಗಿ ಹುಟ್ಟುತ್ತಾನೆ.

ವೈಶಾಖೇ ಯಸ್ತು ವೈ ಮಾಸೇ ಏಕಭುಕ್ತೇನ ವರ್ತತೇ ।
ದ್ವಿಜಮಗ್ರಾಸನೇ ಕೃತ್ವಾ ಭುಂಜನ್ ಭೂಮೌ ಚ ವಾಗ್ಯತಃ ॥೩೩॥

ನಮೋ ಬ್ರಹ್ಮಣ್ಯದೇವಾಯೇತ್ಯರ್ಚಯಿತ್ವಾ ದಿವಾಕರಮ್ ।
ವ್ರತಾಂತೇ ಭೋಜಯೇದ್ ವಿಪ್ರಾನ್ ತಸ್ಯ ಪುಣ್ಯಫಲಂ ಶೃಣು ॥೩೪॥

ಯಾವನು ವೈಶಾಖ ಮಾಸದಲ್ಲಿ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಬ್ರಾಹ್ಮಣರನ್ನು ಉತ್ತಮವಾದ ಆಸನದಲ್ಲಿ ಕೂಡಿಸಿ ತಾನು ಮೌನವಾಗಿ ಭೂಮಿಯಲ್ಲಿ ಕುಳಿತು ಊಟ ಮಾಡುತ್ತಾನೋ, 'ನಮೋ ಬ್ರಹ್ಮಣ್ಯದೇವಾಯ' ಎಂಬ ಮಂತ್ರದಿಂದ ಸೂರ್ಯಾಂತರ್ಯಾಮಿಯಾದ ನನ್ನನ್ನು ಆರಾಧಿಸುತ್ತಾನೋ, ವ್ರತ ಮುಗಿದ ಬಳಿಕ ಬ್ರಾಹ್ಮಣರನ್ನು ಭೋಜನದಿಂದ ಸತ್ಕರಿಸುತ್ತಾನೋ ಅವನಿಗೆ ದೊರಕುವ ಫಲವನ್ನು ಕೇಳಿಸಿಕೊ.

ಫಲಂ ಯದ್ವಿಧಿವತ್ ಪ್ರೋಕ್ತಮಗ್ನಿಷ್ಟೋಮಾತಿರಾತ್ರಯೋಃ ।
ತತ್ಪುಣ್ಯಫಲಮಾಸಾದ್ಯ ದೇವಲೋಕೇ ಮಹೀಯತೇ ॥೩೫॥

ಅಗ್ನಿಷ್ಟೋಮಗಳನ್ನು ವಿಧಿವತ್ತಾಗಿ ಆಚರಿಸಿದಾಗ ಯಾವ ಪುಣ್ಯಫಲವನ್ನು ಹೊಂದುತ್ತಾನೋ ಅದೇ ಪುಣ್ಯವನ್ನು ಹೊಂದಿ ದೇವಲೋಕದಲ್ಲಿ ಪೂಜಿತನಾಗುತ್ತಾನೆ.

ತತೋ ಹೈಮವತೇ ವರ್ಷೇ ಜಾಯತೇ ಕಾಲಪರ್ಯಯಾತ್ ।
ತತ್ರ ಪ್ರಕಾಮಂ ಕೀಡಿತ್ವಾ ವಿಪ್ರಃ ಪಶ್ಚಾದ್ ಭವಿಷ್ಯತಿ ॥೩೬॥

ಪುಣ್ಯಫಲವು ತೀರಿದ ಬಳಿಕ ಹಿಮವದ್ ವರ್ಷದಲ್ಲಿ ಕಾಲಿಕವಾಗಿ ಉತ್ಪತ್ತಿಯನ್ನು ಹೊಂದುತ್ತಾನೆ. ಅಲ್ಲಿ ಯಥೇಷ್ಟವಾಗಿ ವಿಹರಿಸಿ ಬಳಿಕ ಬ್ರಾಹ್ಮಣನಾಗಿ ಭೂಮಿಯಲ್ಲಿ ಹುಟ್ಟುತ್ತಾನೆ.

ಜ್ಯೇಷ್ಠಮಾಸಂ ತು ಯೋ ರಾಜನ್ನೇಕಭುಕ್ತೇನ ವರ್ತತೇ ।
ವಿಪ್ರಮಗ್ರಾಸನೇ ಕೃತ್ವಾ ಭೂಮೌ ಭುಂಜನ್ ಯಥಾವಿಧಿ ॥೩೭॥

ನಮೋ ಬ್ರಹ್ಮಣ್ಯದೇವಾಯೇತ್ಯರ್ಚಯನ್ ಮಾಂ ಯಥಾವಿಧಿ ।
ಡಂಭಾನೃತವಿನಿರ್ಮುಕ್ತಸ್ತಸ್ಯ ಪುಣ್ಯಫಲಂ ಶೃಣು ॥೩೮॥

ಯಾರು ಜ್ಯೇಷ್ಠಮಾಸದಲ್ಲಿ ಬ್ರಾಹ್ಮಣರನ್ನು ಉಚ್ಚಾಸನದಲ್ಲಿ ಕೂಡಿಸಿ ತಾನು ಭೂಮಿಯಲ್ಲಿ ಕುಳಿತು ವಿಧಿಬದ್ಧವಾಗಿ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಜಂಬ, ಸುಳ್ಳುಗಳನ್ನು ತ್ಯಜಿಸಿ 'ನಮೋ ಬ್ರಹ್ಮಣ್ಯದೇವಾಯ' ಎಂಬ ಮಂತ್ರದಿಂದ ವಿಧಿ ಬದ್ಧವಾಗಿ ನನ್ನನ್ನು ಅರ್ಚಿಸುತ್ತಾನೋ ಅವನಿಗೆ ದೊರಕುವ ಫಲವನ್ನು ಕೇಳಿಸಿಕೊ.

ಚೀರ್ಣೇ ಚಾಂದ್ರಾಯಣೇ ಸಮ್ಯಗ್ ಯತ್ಪುಣ್ಯಂ ಸಮುದಾಹೃತಮ್ ।
ತತ್ಪುಣ್ಯಫಲಮಾಸಾದ್ಯ ದೇವಲೋಕೇ ಮಹೀಯತೇ ॥೩೯॥

ಚೆನ್ನಾಗಿ ಚಾಂದ್ರಾಯಣವ್ರತವು ಮಾಡಿದಾಗ ಯಾವ ಪುಣ್ಯವು ಲಭಿಸುತ್ತದೋ ಆ ಪುಣ್ಯವನ್ನು ಪಡೆದು ದೇವಲೋಕದಲ್ಲಿ ಪೂಜಿತನಾಗುತ್ತಾನೆ.

ಅಥೋತ್ತರಕುರುಷ್ವೇವ ಜಾಯತೇ ನಿರ್ಗತಸ್ತತಃ ।
ತತಶ್ಚಾಪಿ ಚ್ಯುತಃ ಕಾಲಾದಿಹ ಲೋಕೇ ದ್ವಿಜೋ ಭವೇತ್ ॥೪೦॥

ಬಳಿಕ ಪುಣ್ಯದಿಂದ ಚ್ಯುತನಾದ ಆತನು ಉತ್ತರಕುರು ವರ್ಷದಲ್ಲಿ ಉತ್ಪತ್ತಿಯನ್ನು ಹೊಂದುತ್ತಾನೆ. ಬಳಿಕ ಯಥೇಷ್ಟವಾಗಿ ಅಲ್ಲಿ ವಿಹರಿಸಿ ಕಾಲಿಕವಾಗಿ ಬ್ರಾಹ್ಮಣನಾಗಿ ಭೂಮಿಯಲ್ಲಿ ಹುಟ್ಟುತ್ತಾನೆ.

ಆಷಾಢಮಾಸಂ ಯೋ ರಾಜನ್ನೇಕಭುಕ್ತೇನ ವರ್ತತೇ ।
ಬ್ರಹ್ಮಚಾರೀ ಜಿತಕ್ರೋಧೋ ಮದರ್ಚನಪರಾಯಣಃ ॥೪೧॥

ವಿಪ್ರಮಗ್ರಾಸನೇ ಕೃತ್ವಾ ಭೂಮೌ ಭುಂಜನ್ ಜಿತೇಂದ್ರಿಯಃ ।
ಕೃತ್ವಾ ತ್ರಿಪವಣಸ್ನಾನಮಷ್ಟಾಕ್ಷರವಿಧಾನತಃ ॥೪೨॥

ವ್ರತಾಂತೇ ಭೋಜಯೇದ್ ವಿಪ್ರಾನ್ ಪಾಯಸೇನ ಯುಧಿಷ್ಠಿರ ।
ಗುಡೋದನೇನ ರಾಜೇಂದ್ರ ತಸ್ಯ ಪುಣ್ಯಫಲಂ ಶೃಣು ॥೪೩॥

ಯಾವನು ಆಷಾಢಮಾಸದಲ್ಲಿ ಬ್ರಹ್ಮಚಾರಿಯಾಗಿದ್ದು ನನ್ನನ್ನೇ ಆರಾಧಿಸುತ್ತಾ ಕ್ರೋಧವನ್ನು ಗೆದ್ದು ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಅಷ್ಟಾಕ್ಷರ ವಿಧಾನದಿಂದ ಮೂರು ಬಾರಿ ಸ್ನಾನವನ್ನಾಚರಿಸುತ್ತಾ ಬ್ರಾಹ್ಮಣರನ್ನು ಉಚ್ಚಾಸನದಲ್ಲಿ ಕೂಡಿಸಿ, ಜಿತೇಂದ್ರಿಯನಾಗಿ ಊಟ ಮಾಡುತ್ತಾ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಪಾಯಸದಿಂದ ಗುಡದಾನದಿಂದ ಬ್ರಾಹ್ಮಣರನ್ನು ವ್ರತ ಮುಗಿದ ಬಳಿಕ ಆರಾಧಿಸುತ್ತಾನೋ ರಾಜೇಂದ್ರನೇ, ಅವನಿಗೆ ದೊರಕುವ ಫಲವೇನೆಂಬುದನ್ನು ಹೇಳುತ್ತೇನೆ, ಕೇಳಿಸಿಕೊ.

ಕಪಿಲಾಶತದಾನಸ್ಯ ಯತ್ಪುಣ್ಯಂ ಪಾಂಡುನಂದನ ।
ತತ್ಪುಣ್ಯಫಲಮಾಸಾದ್ಯ ದೇವಲೋಕೇ ಮಹೀಯತೇ ॥೪೪॥

ಪಾಂಡುನಂದನನೇ, ನೂರು ಕಪಿಲಾಧೇನುಗಳನ್ನು ದಾನ ಮಾಡಿದಾಗ ಯಾವ ಪುಣ್ಯವು ದೊರೆಯುತ್ತದೋ ಆ ಪುಣ್ಯವನ್ನು ಹೊಂದಿ ದೇವಲೋಕದಲ್ಲಿ ಪೂಜಿತನಾಗುತ್ತಾನೆ.

ತತೋಽವತೀರ್ಣಃ ಕಾಲೇನ ಶಾಕದೀರ್ಪೇ ಪ್ರಜಾಯತೇ ।
ತತಶ್ಚಾಪಿ ಚ್ಯುತಃ ಕಾಲಾದಿಹ ವಿಪ್ರೋ ಭವಿಷ್ಯತಿ ॥೪೫॥

ಬಳಿಕ ಆ ಪುಣ್ಯದಿಂದ ಭೂಮಿಗೆ ಆಗಮಿಸಿದ ಆತನು ಶಾಕದೀರ್ಪದಲ್ಲಿ

ಉತ್ತತ್ತಿಯನ್ನು ಹೊಂದುತ್ತಾನೆ. ಕಾಲಿಕವಾಗಿ ಅಲ್ಲಿಂದ ಚ್ಯುತನಾಗಿ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಶ್ರಾವಣಂ ಯಃ ಕ್ಷಿಪೇನ್ಮಾಸಮೇಕಭುಕ್ತೇನ ಸಂಯತಃ ।
ನಮೋ ಬ್ರಹ್ಮಣ್ಯದೇವಾಯೇತ್ಯುಕ್ತ್ವಾ ಮಾಮರ್ಚಯೇತ್ ಸದಾ ॥೪೬॥

ವಿಪ್ರಮಗ್ರಾಸನೇ ಕೃತ್ವಾ ಭೂಮೌ ಭುಂಜನ್ ಯಥಾವಿಧಿ ॥೪೭॥

ಪಾಯಸೇನಾರ್ಚಯನ್ ವಿಪ್ರಾನ್ ಜಿತಕ್ರೋಧೋ ಜಿತೇಂದ್ರಿಯಃ ।
ಲೋಭಮೋಹವಿನಿರ್ಮುಕ್ತಸ್ತಸ್ಯ ಪುಣ್ಯಫಲಂ ಶೃಣು ॥೪೮॥

ಯಾವನು ಶ್ರಾವಣಮಾಸದಲ್ಲಿ ಏಕಭುಕ್ತವ್ರತವನ್ನು ಜಿತೇಂದ್ರಿಯನಾಗಿ ಆಚರಿಸುತ್ತಾನೋ, ಯಾವಾಗಲೂ 'ನಮೋ ಬ್ರಹ್ಮಣ್ಯದೇವಾಯ' ಎಂಬ ಮಂತ್ರದಿಂದ ನನ್ನನ್ನು ಅರ್ಚಿಸುತ್ತಾನೋ, ಬ್ರಾಹ್ಮಣನನ್ನು ಉಚ್ಚಾಸನದಲ್ಲಿ ಕೂಡಿಸಿ ಆರಾಧಿಸಿ ತಾನು ವಿಧಿಬದ್ಧವಾಗಿ ಭೂಮಿಯಲ್ಲಿ ಕುಳಿತು ಊಟ ಮಾಡುತ್ತಾನೋ, ಜಿತೇಂದ್ರಿಯನಾಗಿ, ಕ್ರೋಧವನ್ನು ಗೆದ್ದು, ಲೋಭ-ಮೋಹಗಳಿಂದ ಮುಕ್ತನಾಗಿ ಬ್ರಾಹ್ಮಣರನ್ನು ಪಾಯಸಗಳ ಮೂಲಕ ಆರಾಧಿಸುತ್ತಾನೋ ಅವನಿಗೆ ದೊರಕುವ ಫಲವನ್ನು ಕೇಳು.

ಕಪಿಲಾದಸ್ಯ ಯತ್ಪುಣ್ಯಂ ವಿಧಿವತ್ ತಸ್ಯ ಪಾಂಡವ ।
ತತ್ಪುಣ್ಯಂ ಸಮನುಪ್ರಾಪ್ಯ ಶಕ್ರಲೋಕೇ ಮಹೀಯತೇ ॥೪೯॥

ಕಪಿಲಧೇನುವನ್ನು ವಿಧಿಬದ್ಧವಾಗಿ ದಾನ ಮಾಡಿದಾಗ ಯಾವ ಪುಣ್ಯವನ್ನು ಹೊಂದುತ್ತಾನೋ ಆ ಪುಣ್ಯವನ್ನು ಸಂಪಾದಿಸಿಕೊಂಡು ಇಂದ್ರಲೋಕದಲ್ಲಿ ಪೂಜಿತನಾಗುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾತ್ ಕುಶದಿರ್ಯಿಪೇ ಪ್ರಜಾಯತೇ ।
ತತ್ರ ಪ್ರಕಾಮಂ ಕ್ರೀಡಿತ್ವಾ ವಿಪ್ರೋ ಭವತಿ ಮಾನುಷೇ ॥೫೦॥

ಅಲ್ಲಿಂದಲೂ ಚ್ಯುತನಾದ ಅವನು ಕಾಲಿಕನಾಗಿ ಕುಶದಿರ್ಯಿಪದಲ್ಲಿ ಹುಟ್ಟುತ್ತಾನೆ. ಅಲ್ಲಿ ಸ್ವೇಚ್ಛೆಯಿಂದ ಕ್ರೀಡಿಸಿ ಬಳಿಕ ಮನುಷ್ಯಲೋಕದಲ್ಲಿ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಯಸ್ತು ಭಾದ್ರಪದಂ ಮಾಸಮೇಕಭುಕ್ತೇನ ವರ್ತತೇ ।
ಬ್ರಹ್ಮಚಾರೀ ಜಿತಕ್ರೋಧಃ ಸತ್ಯಸಂಧೋ ಜಿತೇಂದ್ರಿಯಃ ॥೫೧॥

ವಿಪ್ರಮಗ್ರಾಸನೇ ಕೃತ್ವಾ ಪಾಕಭೇದವಿವರ್ಜಿತಃ ।
ನಮೋ ಬ್ರಹ್ಮಣ್ಯದೇವಾಯೇತ್ಯುಕ್ತ್ವಾ ಽಸ್ಯ ಚರಣೌ ಸ್ಪೃಶೇತ್ ॥೫೨॥

ತಿಲಾನ್ ವಾ ಽಪಿ ಘೃತಾನ್ ವಾ ಽಪಿ ವ್ರತಾಂತೇ ದಕ್ಷಿಣಾಂ ದದತ್ ।
ಮದ್ಭಕ್ತಸ್ಯ ನರಶ್ರೇಷ್ಠ ತಸ್ಯ ಪುಣ್ಯಫಲಂ ಶೃಣು ॥೫೩॥

ಜಿತೇಂದ್ರಿಯನಾದ, ಸತ್ಯಸಂಧನಾದ, ಜಿತಕ್ರೋಧನಾದ, ಬ್ರಹ್ಮಚಾರಿಯಾದ, ಯಾವನು ಭಾದ್ರಪದ ಮಾಸದಲ್ಲಿ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ಬ್ರಾಹ್ಮಣನನ್ನು ಪಾಕಭೇದ ಮಾಡದೆ ಉಚ್ಚಾಸನದಲ್ಲಿ ಕೂರಿಸಿ 'ನಮೋ ಬ್ರಹ್ಮಣ್ಯ ದೇವಾಯ' ಎಂಬ ಮಂತ್ರವನ್ನು ಉಚ್ಚರಿಸುತ್ತಾ ಬ್ರಾಹ್ಮಣನ ಪಾದಗಳನ್ನು ಮುಟ್ಟುತ್ತಾ ಎಳ್ಳು, ತುಪ್ಪ, ದಕ್ಷಿಣೆ ಇವುಗಳನ್ನು ವ್ರತ ಮುಗಿದ ಬಳಿಕ ಬ್ರಾಹ್ಮಣನಿಗೆ ದಾನ ಮಾಡುತ್ತಾನೋ ಅಂತಹ ನನ್ನ ಭಕ್ತನಾದವನಿಗೆ ದೊರೆಯುವ ಪುಣ್ಯದ ಫಲವೇನೆಂಬುದನ್ನು ನರಶ್ರೇಷ್ಠನೇ ಕೇಳು.

ಯತ್ಫಲಂ ವಿಧಿವತ್ಪ್ರೋಕ್ತಂ ರಾಜಸೂಯಾಶ್ವಮೇಧಯೋಃ ।
ತತ್ಪುಣ್ಯಫಲಮಾಸಾದ್ಯ ಶಕ್ರಲೋಕೇ ಮಹೀಯತೇ ॥೫೪॥

ವಿಧಿವತ್ತಾಗಿ ರಾಜಸೂಯ, ಅಶ್ವಮೇಧ ಯಾಗಗಳನ್ನು ಮಾಡಿದಾಗ ಯಾವ ಪುಣ್ಯವನ್ನು ಹೊಂದುತ್ತಾನೋ ಅದೇ ಫಲವನ್ನು ಹೊಂದಿದ ವ್ಯಕ್ತಿಯು ಇಂದ್ರ ಲೋಕದಲ್ಲಿ ಪೂಜಿತನಾಗುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾತ್ ಜಾಯತೇ ಧನದಾಲಯೇ ।
ತತ್ರ ಪ್ರಕಾಮಂ ಕ್ರೀಡಿತ್ವಾ ರಾಜಾ ಭವತಿ ಮಾನುಷೇ ॥೫೫॥

ಬಳಿಕ ಕಾಲಿಕವಾಗಿ ಅಲ್ಲಿಂದ ಚ್ಯುತನಾದ ಅತನು ಕುಬೇರನ ಮನೆಯಲ್ಲಿ ಉತ್ಪತ್ತಿಯನ್ನು ಹೊಂದುತ್ತಾನೆ. ಅಲ್ಲಿ ಯಥೇಷ್ಟವಾಗಿ ಸಂತೋಷದಿಂದ ವಿಹರಿಸಿ ಬಳಿಕ ಮನುಷ್ಯಲೋಕದಲ್ಲಿ ರಾಜನಾಗಿ ಹುಟ್ಟುತ್ತಾನೆ.

ಯಶ್ಚಾಪ್ಯಾಶ್ವಯುಜೇ ಮಾಸಮೇಕಭುಕ್ತೇನ ವರ್ತತೇ ॥೫೬॥

ಮದ್ಗಾಯತ್ರೀಂ ಜಪೇದ್ಭಕ್ತ್ಯಾ ಮದ್ಗತೇನಾಂತರಾತ್ಮನಾ ।
ದ್ವಿಸಂಧ್ಯಂ ವಾ ತ್ರಿಸಂಧ್ಯಂ ವಾ ಶತಮಷ್ಟೋತ್ತರಂ ತು ವಾ ॥೫೭॥

ಯಾವ ವ್ಯಕ್ತಿಯು ಆಶ್ವಯುಜ ಮಾಸದಲ್ಲಿ ಏಕಭುಕ್ತವ್ರತವನ್ನು ಆಚರಿಸುತ್ತಾನೋ, ನನ್ನಲ್ಲೇ ನೆಲೆಗೊಂಡ ಮನಸ್ಸುಳ್ಳವನಾಗಿ ಗಾಯತ್ರಿ ಜಪವನ್ನು ಮಾಡುತ್ತಾನೋ, ಎರಡು ಅಥವಾ ಮೂರು ಸಂಧ್ಯಾಕಾಲದಲ್ಲಿ ನೂರು ಅಥವಾ ನೂರ ಎಂಟು ಗಾಯತ್ರಿಯನ್ನು ಜಪಿಸುತ್ತಾನೋ,

ನಮೋ ಬ್ರಹ್ಮಣ್ಯದೇವಾಯೇತ್ಯಸಕೃನ್ಮಾಂ ಪ್ರಣಮ್ಯ ಚ ।
ವಿಪ್ರಮಗ್ರಾಸನೇ ಕೃತ್ವಾ ಸಂಯತೇಂದ್ರಿಯಮಾನಸಃ ॥೫೮॥

ವ್ರತಾಂತೇ ಭೋಜಯೇದ್ ವಿಪ್ರಾನ್ ತಸ್ಯ ಪುಣ್ಯಫಲಂ ಶೃಣು ॥೫೯॥

'ನಮೋ ಬ್ರಹ್ಮಣ್ಯದೇವಾಯ' ಎಂದು ಅನೇಕ ಬಾರಿ ಸ್ತುತಿಸುತ್ತಾ ನನ್ನನ್ನು ನಮಸ್ಕರಿಸುತ್ತಾನೋ, ಜಿತೇಂದ್ರಿಯನಾಗಿ ಬ್ರಾಹ್ಮಣನನ್ನು ಉಚ್ಚಾಸನದಲ್ಲಿ ಕೂರಿಸುತ್ತಾನೋ, ವ್ರತ ಮುಗಿದ ಬಳಿಕ ಬ್ರಾಹ್ಮಣರನ್ನು ಊಟ ಮಾಡಿಸುತ್ತಾನೋ ಅವನಿಗೆ ದೊರಕುವ ಪುಣ್ಯಫಲವನ್ನು ಕೇಳು.

ಅಶ್ವಮೇಧಸ್ಯ ಯತ್ಪುಣ್ಯಂ ವಿಧಿವತ್ ಪಾಂಡುನಂದನ ।
ತತ್ಪುಣ್ಯಫಲಮಾಸಾದ್ಯ ಮಮ ಲೋಕೇ ಮಹೀಯತೇ ॥೬೦॥

ಅಶ್ವಮೇಧಯಜ್ಞವನ್ನು ವಿಧಿವತ್ತಾಗಿ ಆಚರಿಸಿದಾಗ ಯಾವ ಪುಣ್ಯವು ಲಭಿಸುತ್ತದೋ, ಪಾಂಡುನಂದನನೇ ಅದೇ ಪುಣ್ಯವನ್ನು ಹೊಂದಿದ ಈ ವ್ಯಕ್ತಿಯು ನನ್ನ ಲೋಕದಲ್ಲಿ ಪೂಜಿತನಾಗುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾತ್ ಶ್ವೇತದಿರ್ಯಿಪೇ ಪ್ರಜಾಯತೇ ।
ತತ್ರ ಭುಕ್ತ್ವಾ ಮಹಾಭೋಗಾನತ್ರ ವಿಪ್ರವರೋ ಭವೇತ್ ॥೬೧॥

ಬಳಿಕ ಕಾಲಿಕವಾಗಿ ಚ್ಯುತನಾದ ಈತನು ನನ್ನ ಲೋಕವಾದ ಶ್ವೇತದಿರ್ಯಿಪದಲ್ಲಿ ಜನ್ಮವನ್ನು ತಾಳಿ ಅಲ್ಲಿ ಅನೇಕ ಭೋಗವನ್ನು ಅನುಭವಿಸಿ, ಈ ಭೂಮಿಯಲ್ಲಿ ಬ್ರಾಹ್ಮಣ ಶ್ರೇಷ್ಠನಾಗಿ ಹುಟ್ಟುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಏಕಭಕ್ತವಿಧಿರ್ನಾಮ
ತ್ರಯೋದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

ನೂರ ಹದಿನಾಲ್ಕನೆಯ ಅಧ್ಯಾಯ

ಶ್ರೀಕೃಷ್ಣನು ಯುಧಿಷ್ಠಿರನನ್ನು ಕುರಿತು ಒಂದು ಸಂವತ್ಸರದ ಕಾಲ ಏಕಭುಕ್ತವ್ರತವನ್ನು ಮಾಡಿದಾಗ ಉಂಟಾಗುವ ಫಲವೇನೆಂಬುದನ್ನು ಹೇಳಿದುದು. ಕೃಷ್ಣನು ಯುಧಿಷ್ಠಿರನನ್ನು ಕುರಿತು ಕೇಶವಾದಿ ಭಗವನ್ಮೂರ್ತಿ ಉಪಾಸನೆ ಮಾಡುವ ಮೂಲಕ ಮಾರ್ಗಶೀರ್ಷಾದಿ ದ್ವಾದಶೀವ್ರತಾಚರಣೆಯ ಫಲವನ್ನು ಹೇಳಿದುದು. ಯುಧಿಷ್ಠಿರನು ವಿಸ್ತಾರವಾಗಿ ಕೃಷ್ಣನನ್ನು ಸ್ತುತಿಸಿದುದು. ಪುನಃ ಕೃಷ್ಣನು ಯುಧಿಷ್ಠಿರನಿಗೆ ಏಕಾದಶಿ ಉಪವಾಸ ಪೂರ್ವಕ ದ್ವಾದಶಿಯಂದು ಭಗವತ್ಪೂಜೆಯನ್ನು ಮಾಡಿದರೆ ಉಂಟಾಗುವ ಫಲವೇನೆಂಬುದನ್ನು ನಿರೂಪಿಸಿದುದು.

ಯುಧಿಷ್ಠಿರಃ

ಏವಂ ಸಂವತ್ಸರಂ ಪೂರ್ಣಮೇಕಭ(ಭು)ಕ್ತೇನ ಯಃ ಕ್ಷಿಪೇತ್ ।
ತಸ್ಯ ಪುಣ್ಯಫಲಂ ಯದ್ವೈ ತನ್ಮಮಾಚಕ್ಷ್ವ ಕೇಶವ ॥೧॥

ಯುಧಿಷ್ಠಿರ– ಈ ರೀತಿಯಾಗಿ ಒಂದು ಸಂವತ್ಸರದ ಕಾಲ ಯಾರು ಏಕಭುಕ್ತ ಎಂಬ ವ್ರತವನ್ನು ಮಾಡುತ್ತಾನೋ ಅವನಿಗೆ ಲಭಿಸುವ ಪುಣ್ಯವೇನೆಂಬುದನ್ನು ಕೇಶವನೇ ನನಗೆ ತಿಳಿಸು.

ಶ್ರೀಭಗವಾನ್

ಶೃಣು ಪಾಂಡವ ಸತ್ಯಂ ಮೇ ವಚನಂ ಪುಣ್ಯಮುತ್ತಮಮ್ ।
ಯದಕೃತ್ವಾಽಥವಾ ಕೃತ್ವಾ ನರಃ ಪಾಪೈಃ ಪ್ರಮುಚ್ಯತೇ ॥೨॥

ಶ್ರೀಭಗವಾನ್– ಪಾಂಡವನೇ, ನನ್ನ ಉತ್ತಮವಾದ ಪುಣ್ಯವಚನವನ್ನು ಕೇಳಿಸಿಕೊ. ಯಾರಿಗೆ ಏಕಭುಕ್ತವ್ರತವನ್ನು ಮಾಡಲು ಸಾಧ್ಯವಿಲ್ಲವೋ ಅವರು ಈ ವ್ರತದ ಬಗ್ಗೆ ಕೇಳಿಸಿಕೊಂಡರೂ ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾರೆ. ಅಥವಾ ಯಾರು ಪಾಪಕರ್ಮವನ್ನು ಮಾಡಿ ನಾನು ಹೇಳುವ ವ್ರತವನ್ನು ಮಾಡುತ್ತಾರೊ ಅವರೂ ಪಾಪದಿಂದ ಮುಕ್ತರಾಗುತ್ತಾರೆ. ಅಥವಾ ಪಾಪವನ್ನು ಮಾಡದೆ ಯಾರು ಈ ವ್ರತವನ್ನು ಅನುಷ್ಠಾನ ಮಾಡುತ್ತಾರೋ ಅವರು ಸಂಸಾರಬಂಧನದಿಂದಲೇ ಬಿಡುಗಡೆಯನ್ನು ಹೊಂದುತ್ತಾರೆ.

ಏಕಭ(ಭು)ಕ್ತೇನ ವರ್ತೇತ ನರಃ ಸಂವತ್ಸರಂ ತು ಯಃ ।
ಬ್ರಹ್ಮಚಾರೀ ಹ್ಯಧಃಶಾಯೀ ಜಿತಕ್ರೋಧೋ ಜಿತೇಂದ್ರಿಯಃ ॥೩॥

ಶುಚಿಃ ಸ್ನಾನರತೋವ್ಯಗ್ರಃ ಸತ್ಯವಾಗನಸೂಯಕಃ ।
ಅರ್ಚಯನ್ನೇವ ಮಾಂ ನಿತ್ಯಂ ಮದ್ಗತೇನಾಂತರಾತ್ಮನಾ ॥೪॥

ಯಾರು ಏಕಭುಕ್ತ ಎನ್ನುವ ವ್ರತವನ್ನು ಒಂದು ಸಂವತ್ಸರದ ಕಾಲ ಜಿತೇಂದ್ರಿಯನಾಗಿ, ಜಿತಕ್ರೋಧನಾಗಿ, ಬ್ರಹ್ಮಚಾರಿಯಾಗಿ, ನೆಲದಲ್ಲೇ ಮಲಗುವವನಾಗಿ, ಶುಚಿಯಾಗಿ, ಸ್ನಾನರತನಾಗಿ, ಅವ್ಯಗ್ರನಾಗಿ, ಸತ್ಯವಚನ ಉಳ್ಳವನಾಗಿ, ಅಸೂಯೆ ಇಲ್ಲದವನಾಗಿ, ನನ್ನಲ್ಲೇ ಮನಸ್ಸುಳ್ಳವನಾಗಿ ನಿತ್ಯವೂ ನನ್ನನ್ನು ಆರಾಧಿಸುತ್ತಾ ಅನುಷ್ಠಾನ ಮಾಡುತ್ತಾನೋ;

ಸಂಧ್ಯಯೋಸ್ತು ಜಪೇನ್ನಿತ್ಯಂ ಮದ್ಗಾಯತ್ರೀಂ ಸಮಾಹಿತಃ ।
ನಮೋ ಬ್ರಹ್ಮಣ್ಯದೇವಾಯೇತ್ಯಸಕೃನ್ಮಾಂ ಪ್ರಣಮ್ಯ ಚ ॥೫॥

ಎರಡು ಸಂಧ್ಯಾಕಾಲಗಳಲ್ಲಿ ಗಾಯತ್ರಿಯಿಂದ ನನ್ನನ್ನು ಜಪಿಸುತ್ತಾನೋ, ನಮೋ ಬ್ರಹ್ಮಣ್ಯದೇವಾಯ ಎಂಬ ಮಂತ್ರವನ್ನು ಅನೇಕ ಬಾರಿ ಪಠಿಸುತ್ತಾ ನನ್ನನ್ನು ನಮಿಸುತ್ತಾನೋ,

ವಿಪ್ರಮಗ್ರಾಸನೇ ಕೃತ್ವಾ ಯಾವಕಂ ಭೈಕ್ಷಮೇವ ವಾ ।
ಭುಕ್ತ್ವಾ ತು ವಾಗ್ಯತೋ ಭೂಮಾವಾಚಾಂತಸ್ಯ ದ್ವಿಜನ್ಮನಃ ॥೬॥

ಬ್ರಾಹ್ಮಣನನ್ನು ಉನ್ನತ ಆಸನದಲ್ಲಿ ಕೂರಿಸಿ, ಗೋಧಿಯಿಂದ ತಯಾರಿಸಿದ ಭಿಕ್ಷಾನ್ನವನ್ನು ಬ್ರಾಹ್ಮಣನಿಗೆ ನೀಡಿ ಮೌನಿಯಾಗಿ ಭೂಮಿಯಲ್ಲಿ ಕುಳಿತು ಸ್ವೀಕರಿಸುತ್ತಾನೋ,

ನಮೋಽಸ್ತು ವಾಸುದೇವಾಯೇತ್ಯುಕ್ತ್ವಾ ತು ಚರಣೌ ಸ್ಪೃಶೇತ್ ॥೭॥

ಬಳಿಕ 'ವಾಸುದೇವಾಯ ನಮಃ' ಎನ್ನುತ್ತಾ ಬ್ರಾಹ್ಮಣನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡುತ್ತಾನೋ,

ಮಾಸೇ ಮಾಸೇ ಸಮಾಪ್ತೇ ತು ಭೋಜಯಿತ್ವಾ ದ್ವಿಜಾನ್ ಶುಚೀನ್ ।
ಸಂವತ್ಸರೇ ತತಃ ಪೂರ್ಣೇ ದದ್ಯಾತ್ತು ವ್ರತದಕ್ಷಿಣಮ್ ॥೮॥

ಪ್ರತಿ ಮಾಸಗಳು ಪೂರ್ಣವಾದಾಗ, ಸದಾಚಾರ ಸಂಪನ್ನರಾದ ಬ್ರಾಹ್ಮಣರನ್ನು

ಭೋಜನ ಮಾಡಿಸುತ್ತಾನೋ ಅವನು ಸಂವತ್ಸರವು ಪೂರ್ಣವಾದ ಬಳಿಕ ಸಮಗ್ರ ವ್ರತ ಪರಿಸಮಾಪ್ತಿಗಾಗಿ ಪೂರ್ಣತೆಗಾಗಿ ಬ್ರಾಹ್ಮಣರಿಗೆ ದಕ್ಷಿಣೆಯನ್ನು ನೀಡಬೇಕು.

ನವಜಾತಮಯೀಂ ಗಾಂ ವಾ ತಿಲಧೇನುಮಥಾಪಿ ವಾ ।
ವಿಪ್ರಹಸ್ತಚ್ಯುತೈಸ್ತೋಯೈಃ ಸಹಿರಣ್ಯೈಃ ಸಮುಕ್ಷಿತಃ ॥೯॥

ತಸ್ಯ ಪುಣ್ಯಫಲಂ ರಾಜನ್ ಕಥ್ಯಮಾನಂ ಮಯಾ ಶೃಣು ॥೧೦॥

ಹೊಸದಾಗಿ ಪ್ರಸವವನ್ನು ಹೊಂದಿದ ಹಸುವನ್ನು ಅಥವಾ ತಿಲಧೇನುವನ್ನು, ಬ್ರಾಹ್ಮಣನ ಕೈಯಲ್ಲಿ ಹಿರಣ್ಯಸಹಿತವಾಗಿ ದಾನವಾಗಿ ಕೊಟ್ಟು ಆ ನೀರು ಭೂಮಿಗೆ ಸುರಿದರೆ ಅದರ ಪುಣ್ಯಫಲವೇನೆಂಬುದನ್ನು ನಾನು ಮುಂದೆ ತಿಳಿಸುತ್ತೇನೆ, ಕೇಳಿಸಿಕೊ.

ದಶಜನ್ಮಕೃತಂ ಪಾಪಂ ಜ್ಞಾನತೋಽಜ್ಞಾನತೋಽಪಿ ವಾ ।
ತದ್ ವಿನಶ್ಯತಿ ತಸ್ಯಾಶು ನಾತ್ರ ಕಾರ್ಯಾ ವಿಚಾರಣಾ ॥೧೧॥

ಹತ್ತು ಜನ್ಮಗಳಲ್ಲಿ ತಿಳಿದೋ, ತಿಳಿಯದೆಯೋ ಮಾಡಿದ ಸಮಗ್ರ ಪಾಪಗಳು ತಕ್ಷಣದಲ್ಲಿಯೇ ನಾಶವಾಗುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯುಧಿಷ್ಠಿರಃ

ಸರ್ವೇಷಾಮುಪವಾಸಾನಾಂ ಯಚ್ಛ್ರೇಯಃ ಸುಮಹತ್ಫಲಮ್ ।
ಯಚ್ಚ ನಿಃಶ್ರೇಯಸಂ ಲೋಕೇ ತದ್ಭವಾನ್ ವಕ್ತುಮರ್ಹತಿ ॥೧೨॥

ಯುಧಿಷ್ಠಿರ– ಸಮಸ್ತ ಉಪವಾಸಗಳಲ್ಲಿ ಯಾವ ಮಹತ್ತರವಾದ ಫಲವು ಉಂಟಾಗುತ್ತದೋ, ಶ್ರೇಯಸ್ಸು ಉಂಟಾಗುತ್ತದೋ ಲೋಕದಲ್ಲಿ ಅಂತಹ ಶ್ರೇಯಸ್ಸನ್ನುಂಟು ಮಾಡುವ ಕರ್ತವ್ಯವನ್ನು ನನಗೆ ತಿಳಿಸು.

ಶ್ರೀಭಗವಾನ್

ಶೃಣು ರಾಜನ್ ಮಯಾ ಪೂರ್ವಂ ಯಥಾ ಗೀತಂ ತು ನಾರದೇ ।
ತಥಾ ತೇ ಕಥಯಿಷ್ಯಾಮಿ ಮದ್ಭಕ್ತಾಯ ಯುಧಿಷ್ಠಿರ ॥೧೩॥

ಶ್ರೀಭಗವಾನ್– ರಾಜನೇ, ಹಿಂದೆ ನಾನು ಇದೇ ಪ್ರಶ್ನೆಗೆ ನಾರದರಿಗೆ ಉತ್ತರಿಸಿದ್ದೆನು. ನನ್ನ ಭಕ್ತನಾದ ನಿನಗೂ ಅದನ್ನೇ ಹೇಳುತ್ತೇನೆ.

ಯಸ್ತು ಭಕ್ತ್ಯಾ ಶುಚಿರ್ಭೂತ್ವಾ ಪಂಚಮ್ಯಾಂ ಮೇ ನರಾಧಿಪ ।
ಉಪವಾಸವ್ರತಂ ಕುರ್ಯಾತ್ ತ್ರಿಕಾಲಂ ಚಾರ್ಚಯಂಸ್ತು ಮಾಮ್ ॥

ಸರ್ವಕ್ರತುಫಲಂ ಲಬ್ಧ್ವಾ ಮಮ ಲೋಕೇ ಮಹೀಯತೇ ॥೧೫॥

ಯಾವನು ಮೂರು ಕಾಲಗಳಲ್ಲಿಯೂ ಸ್ನಾನ ಮಾಡಿ ನನ್ನನ್ನು ಪೂಜಿಸುತ್ತಾ ಭಕ್ತಿಯಿಂದ ಶುಚಿಯಾಗಿ ಪಂಚಮೀ ತಿಥಿಯಲ್ಲಿ ಉಪವಾಸ ವ್ರತವನ್ನು ಮಾಡುತ್ತಾನೋ ಅವನು ಸಮಸ್ತ ಯಜ್ಞಗಳ ಫಲವನ್ನು ಪಡೆದು ನನ್ನ ಲೋಕದಲ್ಲಿ ಪೂಜಿತನಾಗುತ್ತಾನೆ.

ಯುಧಿಷ್ಠಿರಃ

ಭಗವನ್ ದೇವದೇವೇಶ ಪಂಚಮೀ ನಾಮ ಕಾ ತವ ।
ತಾಮಹಂ ಶ್ರೋತುಮಿಚ್ಛಾಮಿ ಕಥಯಸ್ವ ಮಮಾಚ್ಯುತ ॥೧೬॥

ಯುಧಿಷ್ಠಿರ– ಪೂಜ್ಯನೇ, ದೇವದೇವೇಶನೇ, ಪಂಚಮಿ ಎಂದರೆ ಯಾವ ಪಂಚಮಿ? ಅದರ ಬಗ್ಗೆ ಕೇಳಲು ಉತ್ಸುಕನಾಗಿದ್ದೇನೆ. ಅಚ್ಯುತನೇ, ನನಗೆ ತಿಳಿಸು.

ಶ್ರೀಭಗವಾನ್

ಪರ್ವದ್ವಯಂ ಚ ದ್ವಾದಶ್ಯೌ ಶ್ರವಣಂ ಚ ನರಾಧಿಪ ।
ತತ್ಪಂಚಮೀತಿ ವಿಖ್ಯಾತಂ ಮತ್ಪ್ರಿಯಾ ಚ ವಿಶೇಷತಃ ॥೧೭॥

ಶ್ರೀಭಗವಾನ್– ಅಮಾವಾಸ್ಯೆ-ಹುಣ್ಣಿಮೆಗಳು, ಕೃಷ್ಣ-ಶುಕ್ಲಪಕ್ಷಗಳ ಎರಡು ಏಕಾದಶಿಗಳು, ಶ್ರವಣಾ ನಕ್ಷತ್ರ - ಈ ಐದು ಸೇರಿ ಪಂಚಮಿ ಎಂದು ಕರೆಯಲ್ಪಟ್ಟಿದೆ. ಇದು ನನಗೆ ಅತ್ಯಂತ ಪ್ರಿಯವಾದ ವ್ರತವೆನಿಸಿದೆ.

ತಸ್ಮಾತ್ತು ಬ್ರಾಹ್ಮಣಶ್ರೇಷ್ಠೈರ್ಮನ್ನಿವೇಶಿತಬುದ್ಧಿಭಿಃ ।
ಉಪವಾಸಸ್ತು ಕರ್ತವ್ಯೋ ಮತ್ಪ್ರಿಯಾರ್ಥಂ ಯುಧಿಷ್ಠಿರ ॥೧೮॥

ನನ್ನಲ್ಲಿಯೇ ಆಸಕ್ತವಾದ ಬುದ್ಧಿಯುಳ್ಳ ಬ್ರಾಹ್ಮಣಶ್ರೇಷ್ಠರು ನನ್ನ ಸಂತೋಷಕ್ಕೋಸ್ಕರ ಈ ಐದು ದಿನಗಳಲ್ಲಿ ಉಪವಾಸವನ್ನು ಮಾಡಬೇಕು.

ದ್ವಾದಶ್ಯಾಮೇವ ವಾ ಕುರ್ಯಾದ್ ಉಪವಾಸಮಶಕ್ನುವನ್ ।
ತೇನಾಹಂ ಪರಮಾಂ ಪ್ರೀತಿಂ ಯಾಸ್ಯಾಮಿ ನರಪುಂಗವ ॥೧೯॥

ಯಾರು ಈ ಉಪವಾಸವನ್ನು ಐದು ದಿನವೂ ಮಾಡಲಾಗದಿದ್ದಲ್ಲಿ ಶುದ್ಧ ಏಕಾದಶಿಯಲ್ಲಿಯಾದರೂ ಉಪವಾಸ ಮಾಡಬೇಕು. ಅದರಿಂದ ನಾನು ಅತ್ಯಂತ ಪ್ರೀತಿಯನ್ನು ಹೊಂದುತ್ತೇನೆ.

ಅಹೋರಾತ್ರೇಣ ದ್ವಾದಶ್ಯಾಂ ಮಾರ್ಗಶೀರ್ಷೇಣ ಕೇಶವಮ್ ।
ಉಪೋಷ್ಯ ಪೂಜಯೇದ್ ಯೋ ಮಾಂ ಸೋऽಶ್ವಮೇಧಫಲಂ ಲಭೇತ್ ॥

ಯಾರು ಮಾರ್ಗಶಿರ ಮಾಸದ ಏಕಾದಶಿಯಂದು ಸಮಗ್ರವಾಗಿ ಉಪವಾಸ ವ್ರತವನ್ನು ಮಾಡಿ ದ್ವಾದಶಿ ಪಾರಣೆಯನ್ನು ಮಾಡುತ್ತಾರೋ ಅವರು ನನ್ನ ಪ್ರೀತಿಗೋಸ್ಕರ ಈ ಸತ್ಕರ್ಮವನ್ನು ಮಾಡಿದ ಪುಣ್ಯದ ಫಲವಾಗಿ ಅಶ್ವಮೇಧ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಪುಷ್ಯಮಾಸೇ ತು ನಾಮ್ನಾ ನಾರಾಯಣಂ ತು ಮಾಮ್ ।
ಉಪೋಷ್ಯ ಪೂಜಯೇದ್ ಯೋ ಮಾಂ ವಾಜಪೇಯಫಲಂ ಲಭೇತ್ ॥

ಯಾರು ಪುಷ್ಯಮಾಸದ ಏಕಾದಶಿಯಂದು ನಾರಾಯಣನನ್ನು ಧ್ಯಾನಿಸುತ್ತಾ ಉಪವಾಸವನ್ನು ಮಾಡಿ ದ್ವಾದಶಿ ಪಾರಣೆಯನ್ನು ಮಾಡುತ್ತಾರೋ ಅವರು ವಾಜಪೇಯ ಯಜ್ಞದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಫಾಲ್ಗುನೇ ಮಾಸಿ ಗೋವಿಂದಾಖ್ಯಮುಪೋಷ್ಯ ಮಾಮ್ ।
ಅರ್ಚಯೇದ್ ಯಃ ಸಮಾಪ್ನೋತಿ ಹ್ಯತಿರಾತ್ರಫಲಂ ನೃಪ ॥೨೨॥

ಯಾರು ಫಾಲ್ಗುಣ ಮಾಸದ ದ್ವಾದಶಿಯಂದು ಗೋವಿಂದನನ್ನು ಧ್ಯಾನಿಸುತ್ತಾ ಉಪವಾಸ ವ್ರತವನ್ನು ಮಾಡುತ್ತಾರೋ ಅವರು ಅತಿರಾತ್ರ ಎಂಬ ಸತ್ಕರ್ಮಾನುಷ್ಠಾನ ಮಾಡಿದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಮಾಘಮಾಸೇ ತು ಮಾಮುಪೋಷ್ಯ ತು ಮಾಧವಮ್ ।
ಪೂಜಯೇದ್ ಯಃ ಸಮಾಪ್ನೋತಿ ರಾಜಸೂಯಫಲಂ ನೃಪ ॥೨೩॥

ಯಾರು ಮಾಘಮಾಸದ ಏಕಾದಶಿಯಂದು ಉಪವಾಸ ವ್ರತವನ್ನು ಕೈಗೊಂಡು ದ್ವಾದಶಿಯಂದು ಪಾರಣೆ ಮಾಡಿ ಮಾಧವನಾದ ನನ್ನನ್ನು ಆರಾಧಿಸುತ್ತಾರೋ ಅವರು ರಾಜಸೂಯ ಯಾಗ ಮಾಡಿದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಮಾಸಿ ಚೈತ್ರೇ ತು ಮಾಂ ವಿಷ್ಣುಂ ಸಮುಪೋಷ್ಯ ಯಃ ।
ಪೂಜಯನ್ ಫಲಮಾಪ್ನೋತಿ ಪೌಂಡರೀಕಸ್ಯ ಯತ್ಫಲಮ್ ॥೨೪॥

ಯಾರು ಚೈತ್ರಮಾಸದ ಶುದ್ಧ ಏಕಾದಶಿಯಂದು ಉಪವಾಸ ಮಾಡಿ ವಿಷ್ಣು ಎಂಬ ನನ್ನ ರೂಪವನ್ನು ಧ್ಯಾನಿಸುತ್ತಾ ದ್ವಾದಶಿ ಪಾರಣೆ ಮಾಡುತ್ತಾರೋ ಅವರು ಪುಂಡರೀಕ ಯಾಗದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಮಾಸಿ ವೈಶಾಖೇ ಮಧುಸೂದನಸಂಜ್ಞಿತಮ್ ।
ಉಪೋಷ್ಯ ಪೂಜಯೇದ್ ಯೋ ಮಾಂ ಸೋऽಗ್ನಿಷ್ಟೋಮಸ್ಯ ಪಾಂಡವ ॥

ಯಾರು ಮಧುಸೂದನ ಎಂಬ ಹೆಸರುಳ್ಳ ವೈಶಾಖ ಮಾಸದ ಶುದ್ಧ ಏಕಾದಶಿಯಂದು ಉಪವಾಸ ಮಾಡಿ ದ್ವಾದಶಿಯಂದು ಪಾರಣೆ ಮಾಡುತ್ತಾರೋ ಅವರು ಅಗ್ನಿಷ್ಟೋಮಯಾಗದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಜ್ಯೇಷ್ಠಮಾಸೇ ತು ಮಾಮುಪೋಷ್ಯ ತ್ರಿವಿಕ್ರಮಮ್ ।
ಅರ್ಚಯೇದ್ ಯಃ ಸಮಾಪ್ನೋತಿ ಗವಾಂ ಮೇಧಫಲಂ ನೃಪ ॥೨೬॥

ಯಾರು ಜ್ಯೇಷ್ಠ ಮಾಸದ ಶುದ್ಧ ಏಕಾದಶಿಯಂದು ನನ್ನ ತ್ರಿವಿಕ್ರಮ ರೂಪವನ್ನು ಪೂಜಿಸುತ್ತಾ ಉಪವಾಸ ಮಾಡಿ ದ್ವಾದಶಿಯಂದು ಪಾರಣೆ ಮಾಡುತ್ತಾರೋ ಅವರು ಗೋಮೇಧ ಯಾಗದ ಫಲವನ್ನು ಹೊಂದುತ್ತಾರೆ.

ಆಷಾಢೇ ವಾಮನಾಖ್ಯಂ ಮಾಂ ದ್ವಾದಶ್ಯಾಂ ಸಮುಪೋಷ್ಯ ಯಃ ।
ನರಮೇಧಸ್ಯ ಸ ಫಲಂ ಪ್ರಾಪ್ನುಯಾನ್ನರಸತ್ತಮಃ ॥೨೭॥

ಯಾರು ಆಷಾಢ ಮಾಸದ ಶುದ್ಧ ಏಕಾದಶಿಯಂದು ವಾಮನ ರೂಪಿಯಾದ ನನ್ನನ್ನು ಧ್ಯಾನಿಸುತ್ತಾ ಉಪವಾಸ ಮಾಡಿ, ದ್ವಾದಶಿ ಪಾರಣೆ ಮಾಡುತ್ತಾರೋ ಅವರು ನರಮೇಧ ಯಜ್ಞದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಶ್ರಾವಣೇ ಮಾಸಿ ಶ್ರೀಧರಾಖ್ಯಮುಪೋಷ್ಯ ಮಾಮ್ ।
ಪೂಜಯೇದ್ ಯಃ ಸಮಾಪ್ನೋತಿ ಪಂಚಯಜ್ಞಫಲಂ ನೃಪ ॥೨೮॥

ಯಾರು ಶ್ರಾವಣ ಮಾಸದಲ್ಲಿ ಶ್ರೀಧರ ಎಂಬ ನನ್ನ ರೂಪವನ್ನು ಧ್ಯಾನಿಸುತ್ತಾ, ಏಕಾದಶಿ ಉಪವಾಸ ಮಾಡಿ ದ್ವಾದಶಿ ಪಾರಣೆ ಮಾಡುತ್ತಾರೋ ಅವರು ಪಂಚ ಯಜ್ಞ ಫಲಗಳನ್ನು ಹೊಂದುತ್ತಾರೆ.

ಮಾಸಿ ಭಾದ್ರಪದೇ ಯೋ ಮಾಂ ಹೃಷೀಕೇಶಾಖ್ಯಮರ್ಚಯೇತ್ ।
ಉಪೋಷ್ಯ ಸ ಸಮಾಪ್ನೋತಿ ಸೌತ್ರಾಮಣಿಫಲಂ ನೃಪ ॥೨೯॥

ಯಾರು ಭಾದ್ರಪದ ಮಾಸದಲ್ಲಿ ಹೃಷೀಕೇಶ ಎಂಬ ನನ್ನ ರೂಪವನ್ನು ಸ್ಮರಿಸುತ್ತಾ ಏಕಾದಶಿಯಂದು ಉಪವಾಸ ಮಾಡಿ, ದ್ವಾದಶಿಯಂದು ಪಾರಣೆ ಮಾಡುತ್ತಾರೋ ಅವರು ಸೌತ್ರಾಮಣಿ ಎಂಬ ಯಜ್ಞದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಮಾಶ್ವಯುಮಾಸೇ ಪದ್ಮನಾಭಮುಪೋಷ್ಯ ಮಾಮ್ ।
ಅರ್ಚಯೇದ್ ಯಃ ಸಮಾಪ್ನೋತಿ ಗೋಸಹಸ್ರಫಲಂ ನೃಪ ॥೩೦॥

ಯಾರು ಅಶ್ವಯುಜ ಮಾಸದಲ್ಲಿ ಪದ್ಮನಾಭರೂಪವನ್ನು ಧ್ಯಾನಿಸುತ್ತಾ ಏಕಾದಶಿಯಂದು ಉಪವಾಸ ಮಾಡಿ, ದ್ವಾದಶಿಯಂದು ಪಾರಣೆ ಮಾಡುತ್ತಾರೋ ಅವರು ಸಾವಿರ ಗೋದಾನ ಮಾಡಿದ ಫಲವನ್ನು ಹೊಂದುತ್ತಾರೆ.

ದ್ವಾದಶ್ಯಾಂ ಕಾರ್ತಿಕೇ ಮಾಸಿ ಮಾಂ ದಾಮೋದರಸಂಜ್ಞಿತಮ್ ।
ಉಪೋಷ್ಯ ಪೂಜಯೇದ್ ಯಸ್ತು ಸರ್ವಕ್ರತುಫಲಂ ಲಭೇತ್ ॥೩೧॥

ಯಾರು ಕಾರ್ತಿಕ ಮಾಸದಲ್ಲಿ ದಾಮೋದರ ರೂಪವನ್ನು ಆರಾಧಿಸುತ್ತಾ ಏಕಾದಶಿಯಂದು ಉಪವಾಸ ಮಾಡಿ, ದ್ವಾದಶಿಯಂದು ಪಾರಣೆ ಮಾಡುತ್ತಾರೋ ಅವರು ಸಕಲ ಯಜ್ಞಗಳ ಫಲವನ್ನು ಹೊಂದುತ್ತಾರೆ.

ಕೇವಲೇನೋಪವಾಸೇನ ದ್ವಾದಶ್ಯಾಂ ಪಾಂಡುನಂದನ ।
ಯತ್ಫಲಂ ಪೂರ್ವಮುದ್ದಿಷ್ಟಂ ತಸ್ಯಾರ್ಧಂ ಲಭತೇ ಫಲಮ್ ॥೩೨॥

ಪಾಂಡುನಂದನನೇ, ಕೇವಲ ಏಕಾದಶಿಯಂದು ಉಪವಾಸ ಮಾಡಿ ದ್ವಾದಶಿ ಪಾರಣೆ ಮಾಡಿದವರಿಗೆ ಸಮಗ್ರ ಪಂಚಮೀ ವ್ರತದಲ್ಲಿ ದೊರೆಯುವ ಫಲದ ಅರ್ಧಭಾಗದಷ್ಟು ಫಲವು ನಿಶ್ಚಿತವಾಗಿಯೂ ದೊರೆಯುತ್ತದೆ.

ಶ್ರಾವಣೇಽಪ್ಯೇವಮೇವಂ ಮಾಂ ಯೋಽರ್ಚಯೇದ್ ಭಕ್ತಿಮಾನ್ ನರಃ ।
ಮಮ ಸಾಲೋಕ್ಯಮಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥೩೩॥

ಯಾರು ಭಕ್ತಿಯುತನಾಗಿ ಶ್ರವಣಾ ನಕ್ಷತ್ರದಂದು ಉಪವಾಸವನ್ನು ಮಾಡಿ ನನ್ನನ್ನು ಆರಾಧಿಸುತ್ತಾನೋ ಅವನು ನನ್ನ ಲೋಕವನ್ನೇ ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಮಾಸೇ ಮಾಸೇ ಸಮಭ್ಯರ್ಚ್ಯ ಕ್ರಮಶೋ ಮಾಮತಂದ್ರಿತಃ ।
ಪೂರ್ಣೇ ಸಂವತ್ಸರೇ ಕುರ್ಯಾತ್ ಪುನಃ ಸಂವತ್ಸರಾರ್ಚನಮ್ ॥೩೪॥

ಪ್ರತಿ ಮಾಸಗಳಲ್ಲಿಯೂ ಕ್ರಮವಾಗಿ ಆಲಸ್ಯವಿಲ್ಲದೆ ನನ್ನನ್ನು ಆರಾಧಿಸುತ್ತಾ ಒಂದು ಸಂವತ್ಸರಗಳ ಕಾಲ ನನ್ನ ಆರಾಧನೆಯನ್ನು ಮಾಡಬೇಕು.

ಏವಂ ದ್ವಾದಶವರ್ಷಂ ಯೋ ಮದ್ಭಕ್ತೋ ಮತ್ಪರಾಯಣಃ ।
ಅವಿಘ್ನಮರ್ಚಯಾನಸ್ತು ಮಮ ಸಾಲೋಕ್ಯಮಾಪ್ನುಯಾತ್ ॥೩೫॥

ಈ ರೀತಿಯಾಗಿ ಹನ್ನೆರಡು ವರ್ಷಗಳ ಕಾಲ ನನ್ನಲ್ಲೇ ನಿಷ್ಠನಾಗಿ ಯಾವ ಭಕ್ತನು ತಡೆಯಿಲ್ಲದೆ ಆರಾಧನೆಯನ್ನು ಮಾಡುತ್ತಾನೋ ಅವನು ನನ್ನ ಲೋಕವನ್ನೇ ಹೊಂದುತ್ತಾನೆ.

ಅರ್ಚಯೇತ್ ಪ್ರೀತಿಮಾನ್ ಯೋ ಮಾಂ ದ್ವಾದಶ್ಯಾಂ ವೇದಸಂಹಿತಾಮ್ ।
ಸ ಪೂರ್ವೋಕ್ತಫಲಂ ರಾಜನ್ ಲಭತೇ ನಾತ್ರ ಸಂಶಯಃ ॥೩೬॥

ಯಾವನು ಭಕ್ತಿಯಿಂದ ಕೂಡಿದವನಾಗಿ ಏಕಾದಶಿ ತಿಥಿಯಂದು ವೇದಗಳನ್ನು ಪಠನ ಮಾಡುತ್ತಾನೋ, ಭಗವಂತನನ್ನು ಆರಾಧಿಸುತ್ತಾನೋ ಅವನು ಹಿಂದೆ ಹೇಳಿದಂತೆ ಉತ್ತಮ ಫಲಗಳನ್ನು ಹೊಂದುತ್ತಾನೆ, ಯಾವ ಸಂಶಯವೂ ಇಲ್ಲ.

ಗಂಧಂ ಪುಷ್ಪಂ ಫಲಂ ತೋಯಂ ಪತ್ರಂ ವಾ ಮೂಲಮೇವ ವಾ ।
ದ್ವಾದಶ್ಯಾಂ ಮಮ ಯೋ ದದ್ಯಾತ್ ತತೋ ನಾನ್ಯೋಽಸ್ತಿ ಮತ್ಪ್ರಿಯಃ॥೩೭॥

ಯಾವ ವ್ಯಕ್ತಿಯು ದ್ವಾದಶಿ ತಿಥಿಯಂದು ಗಂಧವನ್ನಾಗಲಿ, ಪುಷ್ಪ, ಫಲ, ತೋಯ, ಪತ್ರ , ಗೆಡ್ಡೆ-ಗೆಣಸುಗಳನ್ನಾಗಲಿ ನನಗೆ ಭಕ್ತಿಯಿಂದ ಸಮರ್ಪಿಸುತ್ತಾನೋ ಅವನು ನನಗೆ ಪ್ರೀತಿಪಾತ್ರನಾಗುತ್ತಾನೆ.

ಏತೇನ ವಿಧಿನಾ ಸರ್ವೇ ದೇವಾಃ ಶಕ್ರಪುರೋಗಮಾಃ ।
ಮದ್ಭಕ್ತ್ಯಾ ನರಶಾರ್ದೂಲ ಸ್ವರ್ಗಭೋಗಾಂಸ್ತು ಭುಂಜತೇ ॥೩೮॥

ಈ ರೀತಿಯಾದ ವಿಧಿಯಿಂದ ಇಂದ್ರನೇ ಮೊದಲಾದ ದೇವತೆಗಳು ನನ್ನನ್ನು ಆರಾಧಿಸಿ ಸಮಸ್ತ ಭೋಗಗಳನ್ನು ಅನುಭವಿಸುತ್ತಿದ್ದಾರೆ.

ವೈಶಂಪಾಯನಃ

ಏವಂ ವದತಿ ದೇವೇಶೇ ಕೇಶವೇ ಪಾಂಡುನಂದನಃ ।
ಕೃತಾಂಜಲಿಪುಟಃ ಸ್ತೋತ್ರಮಿದಂ ಭಕ್ತ್ಯಾऽಭ್ಯುವಾಚ ಹ ॥೩೯॥

ವೈಶಂಪಾಯನ– ಈ ರೀತಿಯಾಗಿ ಕೃಷ್ಣಪರಮಾತ್ಮನು ಹೇಳುತ್ತಿರಲು, ಧರ್ಮರಾಜನು ಕೈಮುಗಿದುಕೊಂಡು ಭಕ್ತಿಯಿಂದ ಕೃಷ್ಣನನ್ನು ಸ್ತುತಿಸಲಾರಂಭಿಸಿದನು.

ಯುಧಿಷ್ಠಿರಃ

ಸರ್ವಲೋಕೇಶ ದೇವೇಶ ಹೃಷೀಕೇಶ ನಮೋऽಸ್ತು ತೇ ।
ಸಹಸ್ರಶಿರಸೇ ತುಭ್ಯಂ ಸಹಸ್ರಾಕ್ಷ ನಮೋऽಸ್ತು ತೇ ॥೪೦॥

ಯುಧಿಷ್ಠಿರ– ಸಮಸ್ತಲೋಕಗಳಿಗೆ ಒಡೆಯನಾದವನೇ, ದೇವತೆಗಳಿಗೆಲ್ಲ ಪ್ರಭುವೇ, ಇಂದ್ರಿಯಗಳಿಗೆಲ್ಲ ಸ್ವಾಮಿಯಾದ ಹೃಷೀಕೇಶನೇ, ನಿನಗೆ ನಮಸ್ಕಾರ. ಅನಂತ ಶಿರಸ್ಸುಳ್ಳವನೇ, ಅನಂತಾಕ್ಷನೇ, ನಿನಗೆ ನಮಸ್ಕಾರವಿರಲಿ.

ತ್ರಯೀಮಯ ತ್ರಯೀನಾಥ ತ್ರಯೀಸ್ತುತ ನಮೋ ನಮಃ ।
ಯಜ್ಞಾತ್ಮನ್ ಯಜ್ಞಸಂಭೂತ ಯಜ್ಞನಾಥ ನಮೋ ನಮಃ ॥೪೧॥

ಮೂರು ವೇದಗಳಲ್ಲಿ ಪ್ರತಿಪಾದ್ಯನಾದವನೇ, ಮೂರು ವೇದಗಳಿಗೆ ಸ್ವಾಮಿಯಾದವನೇ, ಮೂರು ವೇದಗಳಿಂದ ಸ್ತುತ್ಯನಾದವನೇ ನಿನಗೆ ನಮಸ್ಕಾರ. ಯಜ್ಞಸ್ವರೂಪಿಯೇ, ಯಜ್ಞಸಂಭೂತನೇ, ಯಜ್ಞನಾಥನೇ, ನಿನಗೆ ನಿನಗೆ ನಮಸ್ಕಾರ.

ಚತುರ್ಮೂರ್ತೇ ಚತುರ್ಬಾಹೋ ಚತುರ್ವ್ಯೂಹ ನಮೋ ನಮಃ ।
ಲೋಕಾತ್ಮನ್ ಲೋಕಕೃನ್ನಾಥ ಲೋಕಾವಾಸ ನಮೋ ನಮಃ ॥೪೨॥

ವಿಶ್ವ-ತೈಜಸ-ಪ್ರಾಜ್ಞ-ತುರ್ಯ ಎಂಬ ನಾಲ್ಕು ಮೂರ್ತಿಯುಳ್ಳವನೇ, ನಾಲ್ಕು ತೋಳುಗಳುಳ್ಳವನೇ, ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧನೆಂಬ ಚತುರ್ವ್ಯೂಹ ಸ್ವರೂಪನೇ, ನಿನಗೆ ನಮಸ್ಕಾರವು, ನಮಸ್ಕಾರವು. ಲೋಕಕ್ಕೆಲ್ಲ ಅಂತರ್ಯಾಮಿಯಾದವನೇ, ಲೋಕವನ್ನು ಸೃಷ್ಟಿಸುವವನೇ, ಲೋಕದಲ್ಲಿ ವಾಸ ಮಾಡುವವನೇ, ನಿನಗೆ ನಮಸ್ಕಾರವು, ನಮಸ್ಕಾರವು.

ಸೃಷ್ಟಿಸಂಹಾರಕರ್ತ್ರೇ ತೇ ನರಸಿಂಹ ನಮೋ ನಮಃ ।
ಭಕ್ತಪ್ರಿಯ ನಮಸ್ತೇಽಸ್ತು ಭಕ್ತವತ್ಸಲ ತೇ ನಮಃ ॥೪೩॥

ಸೃಷ್ಟಿ-ಸಂಹಾರಗಳನ್ನು ಮಾಡುವವನೇ, ನರಸಿಂಹನೇ, ನಿನಗೆ ನಮಸ್ಕಾರವು, ನಮಸ್ಕಾರವು. ಭಕ್ತಪ್ರಿಯನೇ, ಭಕ್ತವತ್ಸಲನೇ, ನಿನಗೆ ನಮಸ್ಕಾರ.

ಬ್ರಹ್ಮವಾಸ ನಮಸ್ತೇಽಸ್ತು ಬ್ರಹ್ಮನಾಥ ನಮೋ ನಮಃ ॥೪೪॥

ಚತುರ್ಮುಖ ಬ್ರಹ್ಮನಲ್ಲಿ ಅಂತರ್ಯಾಮಿಯಾದವನೇ, ವೇದಗಳಿಗೆಲ್ಲ ಸ್ವಾಮಿಯಾದವನೇ, ನಿನಗೆ ನಮಸ್ಕಾರವು, ನಮಸ್ಕಾರವು.

ರುದ್ರರೂಪ ನಮಸ್ತೇಽಸ್ತು ರುದ್ರಕರ್ಮರತಾಯ ತೇ ।
ಪಂಚಯಜ್ಞ ನಮಸ್ತೇಽಸ್ತು ಸರ್ವಯಜ್ಞ ನಮೋ ನಮಃ ॥೪೫॥

ರುದ್ರನಲ್ಲಿ ಅಂತರ್ಯಾಮಿಯಾದವನೇ, ರುದ್ರರೂಪಿಯೇ, ಭಯಂಕರವಾದ ಕರ್ಮರತನಾದವನೇ, ಪಂಚಯಜ್ಞಾತ್ಮಕನೇ, ಸರ್ವಯಜ್ಞಸ್ವರೂಪಿಯೇ, ನಿನಗೆ ನಮಸ್ಕಾರವು, ನಮಸ್ಕಾರವು.

ಸೃಷ್ಟಿಸಂಹಾರಕರ್ತ್ರೇ ತೇ ರುದ್ರಪ್ರಿಯ ನಮೋಽಸ್ತು ತೇ ।
ಕೃಷ್ಣ ಪ್ರಿಯ ನಮಸ್ತೇಽಸ್ತು ಕೃಷ್ಣ ನಾಥ ನಮೋ ನಮಃ ॥೪೬॥

ಸೃಷ್ಟಿ-ಸಂಹಾರವನ್ನು ಮಾಡುವವನೇ, ರುದ್ರನಿಗೆ ಪ್ರೀತಿಪಾತ್ರನಾದವನೇ, ನಿನಗೆ ನಮಸ್ಕಾರವು, ನಮಸ್ಕಾರವು. ಪಾರ್ಥನಿಗೆ ಪ್ರಿಯನಾದವನೇ, ನಾಥನಾದ ಕೃಷ್ಣನೇ,ನಿನಗೆ ನಮಸ್ಕಾರವು ನಮಸ್ಕಾರವು.

ಯೋಗಾವಾಸ ನಮಸ್ತೇಽಸ್ತು ಯೋಗಿನಾಥ ನಮೋ ನಮಃ ॥೪೭॥

ಯೋಗಿಗಳಿಗೆ ಪ್ರಿಯನೇ, ಯೋಗಿನಾಥನೇ, ನಿನಗೆ ನಮಸ್ಕಾರವು, ನಮಸ್ಕಾರವು.

ಹಯವಕ್ತ್ರ ನಮಸ್ತೇಽಸ್ತು ಚಕ್ರಪಾಣೇ ನಮೋ ನಮಃ ।
ಪಂಚಭೂತ ನಮಸ್ತೇಽಸ್ತು ಪಂಚಾಯುಧ ನಮೋ ನಮಃ ॥೪೮॥

ಹಯಗ್ರೀವನೇ, ಚಕ್ರಪಾಣಿಯೇ, ನಿನಗೆ ನಮಸ್ಕಾರವು, ನಮಸ್ಕಾರವು. ಪಂಚಭೂತ ಸ್ವರೂಪನೇ, ಪಂಚಾಯುಧನೇ, ನಿನಗೆ ನಮಸ್ಕಾರವು, ನಮಸ್ಕಾರವು.

ವೈಶಂಪಾಯನಃ

ಭಕ್ತಿಗದ್ಗದಯಾ ವಾಚಾ ಸ್ತುವತ್ಯೇವಂ ಯುಧಿಷ್ಠಿರೇ ।
ಗೃಹೀತ್ವಾ ಕೇಶವೋ ಹಸ್ತೇ ಪ್ರೀತಾತ್ಮಾ ತಂ ನ್ಯವಾರಯತ್ ॥೪೯॥

ವೈಶಂಪಾಯನ– ಜನಮೇಜಯನೇ, ಯುಧಿಷ್ಠಿರನು ಪರಮಭಕ್ತಿಯಿಂದ ಉಂಟಾದ ಗದ್ಗದ ಧ್ವನಿಯಿಂದ ಹೀಗೆ ಸ್ತೋತ್ರ ಮಾಡುತ್ತಿರಲಾಗಿ, ಪ್ರೀತಾತ್ಮನಾದ ಕೃಷ್ಣನು ಧರ್ಮರಾಜನ ಕೈಹಿಡಿದು ಅವನು ಸ್ತೋತ್ರವನ್ನು ಮುಂದುವರೆಸದಂತೆ ತಡೆ ಹಿಡಿದನು.

ನಿವಾರ್ಯ ಚ ಪುನರ್ವಾಚಾ ಭಕ್ತಿನಮ್ರಂ ಯುಧಿಷ್ಠಿರಮ್ ।
ವಕ್ತುಮೇವ ನರಶ್ರೇಷ್ಠ ಧರ್ಮಪುತ್ರಂ ಪ್ರಚಕ್ರಮೇ ॥೫೦॥

ಮಾತಿನಿಂದ ತಡೆದು, ಭಕ್ತಿನಮ್ರನಾದ ನರಶ್ರೇಷ್ಠನಾದ, ಧರ್ಮಪುತ್ರನಾದ ಯುಧಿಷ್ಠಿರನಿಗೆ ಹೀಗೆ ಹೇಳಿದನು.

ಶ್ರೀಭಗವಾನ್

ಅನ್ಯವತ್ ಕಿಮಿದಂ ರಾಜನ್ ಮಾಂ ಸ್ತೌಷಿ ನರಪುಂಗವ ।
ತಿಷ್ಠ ಪೃಚ್ಛ ಯಥಾಪೂರ್ವಂ ಧರ್ಮಾನೇವ ಯುಧಿಷ್ಠಿರ ॥೫೧॥

ಶ್ರೀಭಗವಾನ್– ಯುಧಿಷ್ಠಿರನೇ, ಬೇರೆಯವರು ಸ್ತೋತ್ರ ಮಾಡುವಂತೆ ನೀನು ನನ್ನನ್ನು ಯಾಕೆ ಸ್ತೋತ್ರ ಮಾಡುತ್ತಿರುವಿ? ಸ್ತೋತ್ರವನ್ನು ನಿಲ್ಲಿಸು. ಧರ್ಮಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳು.

ಯುಧಿಷ್ಠಿರಃ

ಭಗವಂಸ್ತ್ವತ್ಪ್ರಸಾದಂ ತು ಸ್ಮೃತ್ವಾ ಸ್ಮೃತ್ವಾ ಪುನಃ ಪುನಃ ।
ನ ಶಾಂತಿರಸ್ತಿ ದೇವೇಶ ನೃತ್ಯತೀವ ಚ ಮೇ ಮನಃ ॥೫೨॥

ಯುಧಿಷ್ಠಿರ– ಷಡ್ಗುಣೈಶ್ವರ್ಯಸಂಪನ್ನನೇ, ನೀನು ನನಗೆ ಮಾಡಿದ ಅನುಗ್ರಹವನ್ನು ಮತ್ತೆ ಮತ್ತೆ ಸ್ಮರಿಸಿಕೊಂಡು ಪುನಃ ಪುನಃ ನನ್ನ ಮನಸ್ಸಿನಲ್ಲಿ ಸಂತೋಷ ಉಂಟಾಗುತ್ತಿದೆ. ನನ್ನ ಮನಸ್ಸು ಆನಂದದಿಂದ ಕುಣಿಯುತ್ತಿರುವಂತಾಗುತ್ತಿದೆ. ನಿನ್ನನ್ನು ಸ್ತುತಿಸದೆ ನನಗೆ ಶಾಂತಿಯು ಸಿಗುತ್ತಿಲ್ಲ.

ಇದಂ ಚ ಮಮ ಸಂಪ್ರಶ್ನಂ ವಕ್ತುಮರ್ಹಸಿ ಮಾಧವ ।
ಕೃಷ್ಣಪಕ್ಷೇ ತು ದ್ವಾದಶ್ಯಾಮರ್ಚನೀಯಃ ಕಥಂ ಭವಾನ್ ॥೫೩॥

ಮಾಧವನೇ, ನನ್ನ ಈ ಪ್ರಶ್ನೆಗೆ ಉತ್ತರಿಸಲು ಅರ್ಹನಾಗಿದ್ದಿ. ಕೃಷ್ಣಪಕ್ಷದ ದ್ವಾದಶಿಯಲ್ಲಿ ನಿನ್ನ ಪೂಜೆಯನ್ನು ಹೇಗೆ ಮಾಡಬೇಕು? ಧರ್ಮಯುಕ್ತವಾದ ಈ ವಿಷಯವನ್ನು ತಿಳಿಸು.

ಶ್ರೀಭಗವಾನ್

ಶೃಣು ರಾಜನ್ ಯಥಾತತ್ತ್ವಂ ತತ್ಪೂರ್ವಂ ಕಥಯಾಮಿ ತೇ ।
ಪರಮಂ ಕೃಷ್ಣದ್ವಾದಶ್ಯಾಮರ್ಚನಾಯಾಂ ಫಲಂ ಮಮ ॥೫೪॥

ಶ್ರೀಭಗವಾನ್– ಯುಧಿಷ್ಠಿರನೇ ಕೇಳು. ಹಿಂದಿನಂತೆ ನಾನು ನಿನ್ನ ಎಲ್ಲ ಪ್ರಶ್ನೆಗಳಿಗೂ ಯಥಾರ್ಥವಾದ ಉತ್ತರವನ್ನು ಹೇಳುತ್ತೇನೆ.

ಏಕಾದಶ್ಯಾಮುಪೋಷ್ಯಾಥ ದ್ವಾದಶ್ಯಾಮರ್ಚಯೇತ್ ತು ಮಾಮ್ ।
ವಿಪ್ರಾನಪಿ ಯಥಾಲಾಭಂ ಭೋಜಯೇದ್ ಭಕ್ತಿಮಾನ್ ನರಃ ॥೫೫॥

ಕೃಷ್ಣಪಕ್ಷದ ಏಕಾದಶಿಯಂದು ಉಪವಾಸವನ್ನು ಮಾಡಿ, ದ್ವಾದಶಿಯಂದು ನನ್ನನ್ನು ಅರ್ಚಿಸಿ, ಯಥಾಶಕ್ತಿ ಬ್ರಾಹ್ಮಣರಿಗೂ ಭೋಜನ ಮಾಡಿಸಿ, ಭಕ್ತಿವಂತನಾಗಿ ತಾನು ಪಾರಣೆಯನ್ನು ಮಾಡಬೇಕು.

ಸ ಗಚ್ಛೇದ್ ದಕ್ಷಿಣಾಮೂರ್ತಿಂ ಮಾಂ ವಾ ನಾತ್ರ ವಿಚಾರಣಾ ।
ಚಂದ್ರಸಾಲೋಕ್ಯಮಥವಾ ಗ್ರಹನಕ್ಷತ್ರಪೂಜಿತಃ ॥೫೬॥

ಯಾವ ಮನುಷ್ಯನು ದಕ್ಷಿಣಾಮೂರ್ತಿಯಾದ ನನ್ನನ್ನು ಚೆನ್ನಾಗಿ ಆರಾಧಿಸುತ್ತಾನೋ ಅವನು ಗ್ರಹ-ನಕ್ಷತ್ರಗಳಿಂದ ಪೂಜಿಸಲ್ಪಟ್ಟವನಾಗಿ ಚಂದ್ರಸಾಲೋಕ್ಯವನ್ನೇ ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಏಕಾದಶೀವ್ರತಮಾಹಾತ್ಮ್ಯವರ್ಣನಂ ನಾಮ ಚತುರ್ದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೈದನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ವಿಷುವ ಎಂಬ ಪುಣ್ಯಕಾಲದ ಮಹಿಮೆಯನ್ನು ವರ್ಣಿಸುವ ಮೂಲಕ ಅಲ್ಲಿ ಮಾಡಬೇಕಾದ ದಾನಾದಿಗಳನ್ನು ಪ್ರಶಂಸಿದುದು. ಇದರಂತೆ ಗಾಯತ್ರೀಜಪದ ಮಾಹಾತ್ಮ್ಯವನ್ನು ಹೇಳಿದುದು. ಅಶ್ವತ್ಥಮಾಹಾತ್ಮ್ಯವನ್ನು ಹೇಳಿದುದು. ಅದೇ ರೀತಿ ನಾನಾ ಧರ್ಮಗಳನ್ನು ಹೇಳುವ ಮೂಲಕ ಶಿಂಶುಮಾರ ಎಂಬ ರೂಪದ ಬಗ್ಗೆ ನಿರೂಪಿಸಿದುದು. ಪಂಚಗವ್ಯವಿಧಾನವನ್ನು ಹೇಳಿದುದು.

ವೈಶಂಪಾಯನಃ

ಕೇಶವೇನೈವಮಾಖ್ಯಾತೇ ಧರ್ಮಪುತ್ರಃ ಪುನಃ ಪ್ರಭುಮ್ ।
ಪಪ್ರಚ್ಛ ದಾನಕಾಲಸ್ಯ ವಿಶೇಷಂ ಚ ವಿಧಿಂ ನೃಪ ॥೧॥

ವೈಶಂಪಾಯನ– ಕೇಶವನು ಧರ್ಮಪುತ್ರನನ್ನು ಕುರಿತು ಇಷ್ಟು ವಿಸ್ತಾರವಾಗಿ ಉಪದೇಶವನ್ನು ಮಾಡುತ್ತಿರಲು ಪುನಃ ದಾನಕಾಲದ ವಿಶೇಷ ವಿಧಿಗಳ ಬಗ್ಗೆ ಧರ್ಮರಾಜನು ಪ್ರಶ್ನಿಸಿದನು.

ಯುಧಿಷ್ಠಿರಃ

ದೇವ ಕಿಂ ಫಲಮಾಖ್ಯಾತಂ ದಾನಸ್ಯ ವಿಷುವೇಷು ಚ ।
ಸೂರ್ಯೇಂದೂಪಪ್ಲವೇ ಚೈವ ದತ್ತೇ ದಾನೇ ಚ ಯತ್ ಫಲಮ್ ॥೨॥

ಯುಧಿಷ್ಠಿರ– ವಿಷುವಯೋಗದಲ್ಲಿ, ಚಂದ್ರ-ಸೂರ್ಯರ ಗ್ರಹಣ ಕಾಲದಲ್ಲಿ ದಾನ ಮಾಡುವುದರಿಂದ ಯಾವ ಫಲವು ಉಂಟಾಗುತ್ತದೆ? ದೇವೇಶ್ವರನೇ ಉತ್ತರಿಸು.

ಶ್ರೀಭಗವಾನ್

ಶೃಣುಷ್ವ ರಾಜನ್ ವಿಷುವೇ ಸೋಮಾರ್ಕಗ್ರಹಣೇಷು ಚ ।
ವ್ಯತೀಪಾತೇऽಯನೇ ಚೈವ ದಾನಂ ಸ್ಯಾದಕ್ಷಯಂ ನೃಪ ॥೩॥

ಶ್ರೀಭಗವಾನ್– ಯುಧಿಷ್ಠಿರನೇ, ವಿಷುವ ಯೋಗದಲ್ಲಿ, ಚಂದ್ರ-ಸೂರ್ಯರ ಗ್ರಹಣದಲ್ಲಿ, ವ್ಯತೀಪಾತ ಯೋಗದಲ್ಲಿ, ದಕ್ಷಿಣಾಯನ-ಉತ್ತರಾಯಣಗಳಲ್ಲಿ ಮಾಡುವ ದಾನವು ಅಕ್ಷಯವಾದ ಫಲವನ್ನು ನೀಡುತ್ತದೆ.

ರಾಜನ್ ಅಯನಯೋರ್ಮಧ್ಯಂ ವಿಷುವಂ ಸಂಪ್ರಚಕ್ಷತೇ ।
ಸಮೇ ರಾತ್ರಿದಿನೇ ತತ್ರ ಸಂಧ್ಯಾಯಾಂ ವಿಷುವೇ ನೃಪ ॥೪॥

ರಾಜನೇ, ದಕ್ಷಿಣಾಯನ-ಉತ್ತರಾಯಣ ಪುಣ್ಯಕಾಲಗಳ ಮಧ್ಯದಲ್ಲಿ ಯಾವ ದಿನ, ರಾತ್ರಿ ಮತ್ತು ಹಗಲುಗಳು ಒಂದೇ ಪ್ರಮಾಣದಲ್ಲಿ ಇರುತ್ತವೋ ಅದಕ್ಕೆ ವಿಷುವ ಯೋಗ ಎಂದು ಹೆಸರು.

ವ್ಯಾಖ್ಯಾನ ವಿಶೇಷ– ಇಲ್ಲಿ ದಕ್ಷಿಣಾಯನಕ್ಕೆ ತುಲಾಸಂಕ್ರಮಣವು ಮಧ್ಯ ಎನಿಸಿದೆ. ಉತ್ತರಾಯಣಕ್ಕೆ ಮೇಷ ಸಂಕ್ರಮಣವು ಮಧ್ಯ ಎನಿಸಿದೆ. ಇಲ್ಲದಿದ್ದಲ್ಲಿ '**ಸಮರಾತ್ರಿಂದಿವೇ ಕಾಲೇ ವಿಷುವದ್ ವಿಷುವಂ ಚ ತತ್**' ಹಗಲು-ರಾತ್ರಿಗಳು ಸಮಪ್ರಮಾಣದಲ್ಲಿ ಇರುವ ಯೋಗವು ವಿಷುವ ಯೋಗ ಎಂದು ಹೇಳಿದ್ದಾರೆ. ಈ ಎರಡು ಸಂಕ್ರಮಣಗಳು ಮಧ್ಯ ಎಂದು ಗ್ರಹಿಸದಿದ್ದರೆ ಸಾಮ್ಯವು ಉಂಟಾಗುವುದಿಲ್ಲ.

ಬ್ರಹ್ಮಾऽಹಂ ಶಂಕರಶ್ಚಾಪಿ ತಿಷ್ಠಾಮಃ ಸಹಿತಾಃ ಸಕೃತ್ ।
ಕ್ರಿಯಾಕಾರಣಕಾರ್ಯಾಣಾಮೇಕೀಭಾವತ್ವಕಾರಣಾತ್ ॥೫॥

ವಿಷುವ ಯೋಗವಿರುವ ದಿನ ಸಂಧ್ಯಾಸಮಯದಲ್ಲಿ ಚತುರ್ಮುಖ ಬ್ರಹ್ಮನು, ನಾನು, ಶಂಕರನು ಕ್ರಿಯಾ-ಕಾರಣ-ಕಾರ್ಯ ಎಂಬ ಮೂರು ವ್ಯಾಪಾರಗಳನ್ನು ಒಟ್ಟುಗೂಡಿಸಲು ಒಂದೆಡೆ ಸೇರುತ್ತೇವೆ.

ಅಸ್ಮಾಕಮೇಕೀಭೂತಾನಾಂ ನಿಷ್ಕಲಂ ತತ್ಪದಂ ಪರಮ್ ।
ತನ್ಮುಹೂರ್ತಂ ಪರಂ ಪುಣ್ಯಂ ರಾಜನ್ ವಿಷುವಸಂಜ್ಞಿತಮ್ ॥೬॥

ಒಂದೆಡೆ ಯಾವ ಮುಹೂರ್ತದಲ್ಲಿ ತ್ರಿಮೂರ್ತಿಗಳು ಒಟ್ಟಾಗಿ ಸೇರುತ್ತೇವೊ

ಅದೇ ಕಲಾರಹಿತವಾದ ಪರಮಪದವೆನಿಸಿಕೊಳ್ಳುತ್ತದೆ. ವಿಷುವ ಎಂಬ ಆ ಮುಹೂರ್ತವು ಪರಮಪವಿತ್ರವಾದುದು.

ತದೇವಾದ್ಯಕ್ಷರಂ ಬ್ರಹ್ಮ ಪರಂ ಬ್ರಹ್ಮೇತಿ ಕೀರ್ತಿತಮ್ ॥೭॥

ಅದನ್ನೇ ಅಕ್ಷರವೆಂದೂ, ಬ್ರಹ್ಮವೆಂದೂ, ಪರಬ್ರಹ್ಮವೆಂದೂ ಕರೆಯುತ್ತಾರೆ.

ತಸ್ಮಿನ್ ಮುಹೂರ್ತೇ ಸರ್ವೇऽಪಿ ಚಿಂತಯಂತಃ ಪರಂ ಪದಮ್ ॥೮॥

ಪರಮಪವಿತ್ರವಾದ ವಿಷುವ ಮುಹೂರ್ತದಲ್ಲಿ ಎಲ್ಲರೂ ಪರಮಪದವನ್ನು ಕುರಿತು ಚಿಂತಿಸುತ್ತಾರೆ.

ದೇವಾಶ್ಚ ಪಿತರೋ ರುದ್ರಾಃ ವಸವಶ್ಚಾಶ್ವಿನೌ ತಥಾ ।
ಸಾಧ್ಯಾಶ್ಚ ವಿಶ್ವೇ ಗಂಧರ್ವಾಃ ಸಿದ್ಧಾ ಬ್ರಹ್ಮರ್ಷಯಸ್ತಥಾ ॥೯॥

ಸೋಮಾದಯೋ ಗ್ರಹಾಶ್ಚೈವ ಸರಿತಃ ಸಾಗರಾಸ್ತಥಾ ।
ಮರುತೋऽಪ್ಸರಸೋ ನಾಗಾ ಯಕ್ಷರಾಕ್ಷಸಗುಹ್ಯಕಾಃ ॥೧೦॥

ಏತೇ ಚಾನ್ಯೇ ಚ ರಾಜೇಂದ್ರ ವಿಷುವೇ ಸಂಯತೇಂದ್ರಿಯಾಃ ।
ಸೋಪವಾಸಾಃ ಪ್ರಯತ್ನೇನ ಭವಂತಿ ಧ್ಯಾನತತ್ಪರಾಃ ॥೧೧॥

ದೇವತೆಗಳು, ಪಿತೃಗಳು, ರುದ್ರರು, ವಸುಗಳು, ಅಶ್ವಿನೀದೇವತೆಗಳು, ಸಾಧ್ಯರು, ವಿಶ್ವೇದೇವತೆಗಳು, ಗಂಧರ್ವರು, ಸಿದ್ಧರು, ಬ್ರಹ್ಮರ್ಷಿಗಳು, ಸೋಮನೇ ಮೊದಲಾದ ಗ್ರಹಗಳು, ನದಿಗಳು, ಸಮುದ್ರಗಳು, ಮರುತ್ತುಗಳು, ಅಪ್ಸರೆಯರು, ನಾಗರು, ಯಕ್ಷರು, ರಾಕ್ಷಸರು, ಗುಹ್ಯಕರು, ಇವರೇ ಅಲ್ಲದೆ ಇನ್ನೂ ಇತರ ದೇವತೆಗಳು ವಿಷುವ ಮುಹೂರ್ತದಲ್ಲಿ ಜಿತೇಂದ್ರಿಯರಾಗಿ ಉಪವಾಸದಿಂದಿದ್ದು ಪ್ರಯತ್ನಪೂರ್ವಕವಾಗಿ ಪರಮಾತ್ಮನ ಧ್ಯಾನದಲ್ಲಿ ತತ್ಪರರಾಗಿರುತ್ತಾರೆ.

ಅನ್ನಂ ಗಾವಸ್ತಿಲಾನ್ ಭೂಮಿಂ ಕನ್ಯಾದಾನಂ ತಥೈವ ಚ ।
ಗೃಹಮಾಯತನಂ ಧಾನ್ಯಂ ವಾಹನಂ ಶಯನಂ ತಥಾ ॥೧೨॥

ಯಚ್ಚಾನ್ಯಚ್ಚ ಮಯಾ ಪ್ರೋಕ್ತಂ ತತ್ಪ್ರಯಚ್ಛ ಯುಧಿಷ್ಠಿರ ॥೧೩॥

ಆದ್ದರಿಂದ ಯುಧಿಷ್ಠಿರನೇ, ನೀನು ಈ ಪುಣ್ಯಮುಹೂರ್ತದಲ್ಲಿ ಅನ್ನ, ಗೋವುಗಳು, ಎಳ್ಳು, ಭೂಮಿ, ಕನ್ಯೆಯರು, ಮನೆ, ವಿಶ್ರಾಮಧಾಮಗಳು, ಧಾನ್ಯಗಳು, ವಾಹನಗಳು, ಹಾಸಿಗೆಗಳು, ಅಲ್ಲದೆ ನಾನು ಹೇಳಿರುವ ಇನ್ನೂ ಅನೇಕ ವಸ್ತುಗಳನ್ನು ದಾನ ಮಾಡು.

ದೀಯತೇ ವಿಷುವೇಷ್ವೇವಂ ಶ್ರೋತ್ರಿಯೇಭ್ಯೋ ವಿಶೇಷತಃ ।
ತಸ್ಯ ದಾನಸ್ಯ ಕೌಂತೇಯ ಕ್ಷಯೋ ನೈವೋಪಪದ್ಯತೇ ॥೧೪॥

ವಿಷುವ ಮುಹೂರ್ತದಲ್ಲಿ ಇವುಗಳನ್ನು ದಾನ ಮಾಡಿದರೆ ಅದರಲ್ಲಿಯೂ ವಿಶೇಷವಾಗಿ ಶ್ರೋತ್ರಿಯರಿಗೆ ದಾನ ಮಾಡಿದರೆ ಆ ದಾನದ ಫಲವು ಎಂದಿಗೂ ನಾಶ ಹೊಂದುವುದೇ ಇಲ್ಲ.

ವರ್ಧತೇಽಹರಹಃ ಪುಣ್ಯಂ ತದ್ದಾನಂ ಕೋಟಿಸಮ್ಮಿತಮ್ ॥೧೫॥

ಆ ದಾನದ ಪುಣ್ಯವು ಪ್ರತಿದಿನವೂ ಕೋಟಿ ಕೋಟಿಪಟ್ಟು ಹೆಚ್ಚಾಗುತ್ತಲೇ ಇರುತ್ತದೆ.

ವಿಷುವೇ ಸ್ನಪನಂ ಯಸ್ತು ಮಮ ಕುರ್ಯಾದ್ಧರಸ್ಯ ವಾ ।
ಅರ್ಚನಾಂ ಚ ಯಥಾನ್ಯಾಯಂ ತಸ್ಯ ಪುಣ್ಯಫಲಂ ಶೃಣು ॥೧೬॥

ವಿಷುವ ಕಾಲದಲ್ಲಿ ಐಹಿಕ ಫಲಗಳ ಕಾಮನೆಯು ಉಂಟಾದಲ್ಲಿ ರುದ್ರದೇವನನ್ನು ಆರಾಧಿಸಬೇಕು. ಶಂಕರನಿಂದ ಮೋಕ್ಷೋಪಯೋಗಿ ಜ್ಞಾನವನ್ನು ಪಡೆಯುವ ಬಯಕೆ ಇದ್ದರೆ ರುದ್ರನನ್ನು ಪೂಜಿಸಬೇಕು. ಈಗಾಗಲೇ ಜ್ಞಾನವನ್ನು ಹೊಂದಿದವನಾಗಿದ್ದರೆ, ಮೋಕ್ಷವನ್ನು ಬಯಸುವವನು ನನ್ನನ್ನೇ ಆರಾಧಿಸಬೇಕು. ಹೀಗೆ ಆರಾಧಿಸುವವರಿಗೆ ಸಿಗುವ ಪುಣ್ಯದ ಫಲವನ್ನು ತಿಳಿದುಕೊ.

ದಶಜನ್ಮಕೃತಂ ಪಾಪಂ ತಸ್ಯ ಸದ್ಯೋ ವಿನಶ್ಯತಿ ।
ದಶಾನಾಮಶ್ವಮೇಧಾನಾಮಿಷ್ಟಾನಾಂ ಲಭತೇ ಫಲಮ್ ॥೧೭॥

ಹತ್ತು ಜನ್ಮಗಳಲ್ಲಿ ಆರ್ಜಿತವಾದ ಪಾಪವು ಈ ಕಾಲದಲ್ಲಿ ಮಾಡುವ ಆರಾಧನೆಯಿಂದ ತಕ್ಷಣ ನಾಶ ಹೊಂದುತ್ತದೆ. ಹತ್ತು ಅಶ್ವಮೇಧ ಯಜ್ಞಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ವಿಮಾನಂ ದಿವ್ಯಮಾರೂಢಃ ಕಾಮರೂಪೀ ಯಥಾಸುಖಮ್ ।
ಸ ಯಾತಿ ಮಾಮಕಂ ಲೋಕಂ ರುದ್ರಲೋಕಮಥಾಪಿ ವಾ ॥೧೮॥

ಕಾಮರೂಪಿಯಾಗಿ, ದಿವ್ಯವಾದ ವಿಮಾನವನ್ನು ಏರಿದವನಾಗಿ ಅವನು ಆರಾಧನೆಯ ಫಲವಾಗಿ ನನ್ನ ಲೋಕವನ್ನಾಗಲಿ, ರುದ್ರಲೋಕವನ್ನಾಗಲಿ ಹೊಂದುತ್ತಾನೆ.

ತತ್ರಸ್ಥೈರ್ದೇವಗಂಧರ್ವೈರ್ಗೀಯಮಾನೋ ಯಥಾಸುಖಮ್ ।
ದಿವ್ಯವರ್ಷಸಹಸ್ರಾಣಿ ಕೋಟಿಮೇಕಂ ತು ಮೋದತೇ ॥೧೯॥

ಆ ಲೋಕದಲ್ಲಿರುವ ಗಂಧರ್ವರಿಂದ ಸ್ತುತಿಸಲ್ಪಡುವವನಾಗಿ ಸುಖವಾಗಿ ದೇವಮಾನದ ಸಾವಿರ ಕೋಟಿ ವರ್ಷಗಳ ಕಾಲ ಸುಖವನ್ನು ಅನುಭವಿಸುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದಿಹ ಲೋಕೇ ದ್ವಿಜೋತ್ತಮಃ ।
ಚತುರ್ಣಾಮಪಿ ವೇದಾನಾಂ ಪಾರಗೋ ಬ್ರಹ್ಮವಿದ್ ಭವೇತ್ ॥೨೦॥

ಬಳಿಕ ಅಲ್ಲಿಂದ ಕಾಲಿಕವಾಗಿ ಚ್ಯುತನಾದ ಅವನು ಸಮಸ್ತ ನಾಲ್ಕು ವೇದಗಳ ಅರ್ಥವನ್ನು ತಿಳಿದ ಬ್ರಹ್ಮಜ್ಞಾನಿಯಾಗಿ ಭೂಮಿಯಲ್ಲಿ ಹುಟ್ಟುತ್ತಾನೆ.

ಚಂದ್ರಸೂರ್ಯಗ್ರಹೇ ವಾऽಪಿ ಮಮ ವಾ ಶಂಕರಸ್ಯ ವಾ ।
ಗಾಯತ್ರೀಂ ಮಾಮಿಕಾಂ ವಾऽಪಿ ಜಪೇದ್ ಯಃ ಶಂಕರಸ್ಯ ವಾ ॥೨೧॥

ಸೂರ್ಯ-ಚಂದ್ರಗ್ರಹಣದ ಸಮಯದಲ್ಲಿ ಯಾವನು ನನ್ನನ್ನಾಗಲಿ, ಶಂಕರನನ್ನಾಗಲಿ ಸ್ತುತಿಸುತ್ತಾನೋ, ನನಗೆ ಸಂಬಂಧಿಸಿದ ಗಾಯತ್ರಿಯನ್ನು ಜಪಿಸುತ್ತಾನೋ,

ಶಂಖತೂರ್ಯನಿನಾದೈಶ್ಚ ಕಾಂಸ್ಯಘಂಟಾಸ್ವನೈರಪಿ ।
ಕಾರಯೇತ್ತು ಧ್ವನಿಂ ಭಕ್ತ್ಯಾ ತಸ್ಯ ಪುಣ್ಯಫಲಂ ಶೃಣು ॥೨೨॥

ಅವನು ಶಂಖ-ತೂರ್ಯಗಳಿಂದಲೂ, ತಾಳ-ಗಂಟೆಗಳಿಂದಲೂ ಭಕ್ತಿಪೂರ್ವಕವಾಗಿ ಪೂಜಿಸುತ್ತಾ ಗಟ್ಟಿಯಾಗಿ ಶಬ್ದವನ್ನು ಮಾಡಬೇಕು. ಹಾಗೆ ಮಾಡಿದರೆ ಅದರಿಂದ ಪ್ರಾಪ್ತವಾಗುವ ಫಲವನ್ನು ಹೇಳುತ್ತೇನೆ.

ಗಾಂಧರ್ವೈರ್ಹೋಮಜಪೈ ರ್ಶ್ಚ ಶಬ್ದೈರುತ್ಕೃಷ್ಟನಾದಿಭಿಃ ।
ದುರ್ಬಲೋಽಪಿ ಭವೇದ್ರಾಹುಃ ಸೋಮಶ್ಚ ಬಲವಾನ್ ಭವೇತ್ ॥೨೩॥

ಗೀತೆಗಳಿಂದ, ಹೋಮ-ಜಪಗಳಿಂದ, ಉತ್ಕೃಷ್ಟವಾದ ನಾದಗಳಿಂದ, ಶಬ್ದಗಳಿಂದ ಸೋಮನು ಉತ್ಕೃಷ್ಟವಾದ ಬಲವನ್ನು ಹೊಂದುತ್ತಾನೆ. ರಾಹುವು ದುರ್ಬಲನಾಗುತ್ತಾನೆ.

ಸೂರ್ಯೇಂದೂಪಪ್ಲವೇ ಚೈವ ಶ್ರೋತ್ರಿಯೇಭ್ಯಃ ಪ್ರದೀಯತೇ ।
ತತ್ ಸಹಸ್ರಸಮಂ ಭೂತ್ವಾ ದಾತಾರಮುಪತಿಷ್ಠತಿ ॥೨೪॥

ಯಾವನು ಸೂರ್ಯ-ಚಂದ್ರರ ಗ್ರಹಣ ಕಾಲದಲ್ಲಿ ಶ್ರೋತ್ರಿಯರಿಗೆ ದಾನವನ್ನು ಮಾಡುತ್ತಾನೋ ಆ ದಾನವು ಸಾಮಾನ್ಯ ದಿನದಲ್ಲಿ ಏಮಾಡುವ ದಾನಕ್ಕಿಂತಲೂ ಸಾವಿರ ಪಟ್ಟು ಹೆಚ್ಚು ಫಲವನ್ನು ದಾನ ಮಾಡಿದವನಿಗೆ ಉಂಟುಮಾಡುತ್ತದೆ.

ಮಹಾಪಾತಕಯುಕ್ತೋಽಪಿ ಯದ್ಯಪಿ ಸ್ಯಾನ್ನರೋ ನೃಪ ।
ನಿರ್ಲೇಪಸ್ತತ್ಕ್ಷಣಾದೇವ ತೇನ ದಾನೇನ ಜಾಯತೇ ॥೨೫॥

ಒಬ್ಬ ಮನುಷ್ಯನು ಮಹಾಪಾಪದಿಂದ ಕೂಡಿದ್ದರೂ ಗ್ರಹಣ ಕಾಲದಲ್ಲಿ ಮಾಡುವ ದಾನದಿಂದ ಆ ಕ್ಷಣದಲ್ಲಿಯೇ ಪಾಪದಿಂದ ಬಿಡುಗಡೆಯನ್ನು ಹೊಂದಿ ಶ್ರೇಷ್ಠ ಪುರುಷನಾಗುತ್ತಾನೆ.

ಚಂದ್ರಸೂರ್ಯಪ್ರಕಾಶೇನ ವಿಮಾನೇನ ವಿರಾಜತಾ ।
ಯಾತಿ ಸೋಮಪುರಂ ರಮ್ಯಂ ಸೇವ್ಯಮಾನೋಽಪ್ಸರೋಗಣೈಃ ॥೨೬॥

ಅವನು ಮೃತನಾದ ಬಳಿಕ ಚಂದ್ರನ ಮತ್ತು ಸೂರ್ಯನ ಪ್ರಕಾಶದಿಂದ ಕೂಡಿರುವ ಸುಂದರವಾದ ವಿಮಾನದಲ್ಲಿ ಕುಳಿತು, ಅಪ್ಸರಾಗಣದಿಂದ ಸೇವಿಸಲ್ಪಡುತ್ತಾ ರಮಣೀಯವಾದ ಚಂದ್ರಲೋಕಕ್ಕೆ ಹೋಗುತ್ತಾನೆ.

ಯಾವದ್ಯಕ್ಷಾಣಿ ತಿಷ್ಠಂತಿ ಗಗನೇ ಶಶಿನಾ ಸಹ ।
ತಾವತ್ಕಾಲಂ ಸ ರಾಜೇಂದ್ರ ಸೋಮಲೋಕೇ ಮಹೀಯತೇ ॥೨೭॥

ಆಕಾಶದಲ್ಲಿ ಎಲ್ಲಿಯತನಕ ನಕ್ಷತ್ರವಿರುತ್ತವೆಯೋ ಅಲ್ಲಿಯತನಕವೂ ಅವನು ಚಂದ್ರಲೋಕದಲ್ಲಿ ಸಮ್ಮಾನಿಸಲ್ಪಡುತ್ತಾನೆ.

ತತಶ್ಚಾಪಿ ಚ್ಯುತಃ ಕಾಲಾದಿಹ ಲೋಕೇ ಯುಧಿಷ್ಠಿರ ।
ವೇದವೇದಾಂಗವಿದ್ ವಿಪ್ರಃ ಕೋಟೀಧನಪತಿರ್ಭವೇತ್ ॥೨೮॥

ಕಾಲಾಂತರದಲ್ಲಿ ಸ್ವರ್ಗದಿಂದ ಜಾರಿದರೂ ವೇದ-ವೇದಾಂಗ ಪಾರಂಗತನಾದ ಬ್ರಾಹ್ಮಣನಾಗಿ ಹುಟ್ಟಿ ಕೋಟ್ಯಧಿಪತಿಯಾಗುತ್ತಾನೆ.

ಯುಧಿಷ್ಠಿರಃ

ಭಗವಂಸ್ತವ ಗಾಯತ್ರೀ ಜಪ್ಯತೇ ಚ ಕಥಂ ನೃಭಿಃ ।
ಕಿಂ ವಾ ತಸ್ಯ ಫಲಂ ದೇವ ಮಮಾಚಕ್ಷ್ವ ಸುರೇಶ್ವರ ॥೨೯॥

ಯುಧಿಷ್ಠಿರ– ವಿಭುವೇ, ನಿನ್ನ ಗಾಯತ್ರಿಯನ್ನು ಹೇಗೆ ಜಪಿಸುವುದು? ಸುರೇಶ್ವರನೇ, ಅದರಿಂದ ಯಾವ ಫಲವು ಸಿಗುತ್ತದೆ? ಈ ವಿಷಯವನ್ನು ಕೃಪೆ ಮಾಡಿ ಹೇಳು.

ಶ್ರೀಭಗವಾನ್

ದ್ವಾದಶ್ಯಾಂ ವಿಷುವೇ ಚೈವ ಚಂದ್ರಸೂರ್ಯಗ್ರಹೇ ತಥಾ ।
ಅಯನೇ ಶ್ರವಣೇ ಚೈವ ವ್ಯತೀಪಾತೇ ತಥೈವ ಚ ॥೩೦॥

ಶ್ರೀಭಗವಾನ್– ಯುಧಿಷ್ಠಿರನೇ, ದ್ವಾದಶಿಯಲ್ಲಿಯೂ, ವಿಷುವ ಯೋಗದಲ್ಲಿಯೂ, ಸೂರ್ಯ-ಚಂದ್ರರ ಗ್ರಹಣ ಕಾಲದಲ್ಲಿಯೂ, ದಕ್ಷಿಣಾಯನ - ಉತ್ತರಾಯಣಗಳ ಸಂಕ್ರಮಣ ಕಾಲದಲ್ಲಿಯೂ, ಶ್ರವಣಾ ನಕ್ಷತ್ರವಿರುವ ದಿನದಲ್ಲಿಯೂ, ವ್ಯತೀಪಾತ ಯೋಗವಿರುವ ಕಾಲದಲ್ಲಿಯೂ,

ಅಶ್ವತ್ಥದರ್ಶನೇ ಚೈವ ತಥಾ ಮದ್ದರ್ಶನೇಽಪಿ ಚ ।
ಜಪ್ತ್ವಾ ತು ಮಮ ಗಾಯತ್ರೀಮಥವಾಽಷ್ಟಾಕ್ಷರಂ ನೃಪ ॥೩೧॥

ಆರ್ಜಿತಂ ದುಷ್ಕೃತಂ ತಸ್ಯ ನಾಶಯೇನ್ನಾತ್ರ ಸಂಶಯಃ ॥೩೨॥

ಅಶ್ವತ್ಥವೃಕ್ಷವನ್ನು ಅಥವಾ ನನ್ನನ್ನು ನೋಡಿದಲ್ಲಿ, ನನ್ನ ಸಂಬಂಧವಾದ ಗಾಯತ್ರಿಯನ್ನಾಗಲಿ, ಪ್ರಣವಸಹಿತವಾದ 'ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರ ಜಪವನ್ನಾಗಲಿ ಮಾಡುವುದರಿಂದ ಹಿಂದಿನ ಜನ್ಮದಲ್ಲಿ ಮಾಡಿದ ಎಲ್ಲ ಪಾಪಗಳೂ ಕೂಡ ನಾಶ ಹೊಂದುತ್ತವೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯುಧಿಷ್ಠಿರಃ

ಅಶ್ವತ್ಥದರ್ಶನಂ ಚೈವ ಕಿಂ ತ್ವದ್ದರ್ಶನಸಮ್ಮಿತಮ್ ।
ಏತತ್ ಕಥಯ ದೇವೇಶ ಪರಂ ಕೌತೂಹಲಂ ಹಿ ಮೇ ॥೩೩॥

ಯುಧಿಷ್ಠಿರ– ದೇವೇಶನೇ, ಅಶ್ವತ್ಥವೃಕ್ಷದ ದರ್ಶನವು ನಿನ್ನ ದರ್ಶನಕ್ಕೆ ಸಮಾನ ಎಂದು ಹೇಳಿದಿ. ಇದು ಹೇಗೆ? ಈ ವಿಷಯದ ಬಗ್ಗೆ ನನಗೆ ಕುತೂಹಲವಿದೆ, ತಿಳಿಸು.

ಶ್ರೀಭಗವಾನ್

ಅಹಮಶ್ವತ್ಥರೂಪೇಣ ಪಾಲಯಾಮಿ ಜಗತ್ತ್ರಯಮ್ ।
ಅಶ್ವತ್ಥೋ ನ ಸ್ಥಿತೋ ಯತ್ರ ನಾಹಂ ತತ್ರ ಪ್ರತಿಷ್ಠಿತಃ ॥೩೪॥

ಶ್ರೀಭಗವಾನ್– ಯುಧಿಷ್ಠಿರನೇ, ನಾನು ಜಗತ್ತನ್ನು ಅಶ್ವತ್ಥ ವೃಕ್ಷದ ರೂಪದಲ್ಲಿ ನಿಂತು ರಕ್ಷಿಸುತ್ತಿದ್ದೇನೆ. ಯಾವ ಜಾಗದಲ್ಲಿ ಅಶ್ವತ್ಥವೃಕ್ಷವು ಇರುವುದಿಲ್ಲವೋ ಆ ಸ್ಥಳದಲ್ಲಿ ನಾನು ಇರುವುದಿಲ್ಲ.

ಯತ್ರಾಹಂ ಸಂಸ್ಥಿತೋ ರಾಜನ್ನಶ್ವತ್ಥಶ್ಚಾಪಿ ತತ್ರ ವೈ ।
ಯಸ್ತೆ ರ್ಯಿನಮರ್ಚಯೇದ್ ಭಕ್ತ್ಯಾ ಸ ಮಾಂ ಸಾಕ್ಷಾತ್ ಸಮರ್ಚತಿ ॥

ನಾನು ಎಲ್ಲಿರುತ್ತೇನೋ ಅಲ್ಲಿ ಅಶ್ವತ್ಥವು ಇರುತ್ತದೆ. ಯಾವ ಮನುಷ್ಯನು ಅಶ್ವತ್ಥ ವೃಕ್ಷವನ್ನು ಪೂಜಿಸುತ್ತಾನೋ ಅವನು ನನ್ನನ್ನೇ ಸಾಕ್ಷಾತ್ತಾಗಿ ಪೂಜಿಸಿದಂತಾಗುತ್ತದೆ.

ಯಸ್ತೆ ರ್ಯಿನಂ ಪ್ರಹರೇತ್ ಕೋಪಾನ್ಮಾಮೇವ ಪ್ರಹರೇತ್ತು ಸಃ ।
ತಸ್ಮಾತ್ ಪ್ರದಕ್ಷಿಣಂ ಕುರ್ಯಾನ್ನ ಚ್ಛಿಂದ್ಯಾದೇನಮನ್ವಹಮ್ ॥೩೬॥

ಯಾವ ವ್ಯಕ್ತಿಯು ಕೋಪದಿಂದ ಅಶ್ವತ್ಥವೃಕ್ಷವನ್ನು ಕಡಿಯಲು ಹೋಗುತ್ತಾನೋ ಅವನು ನನ್ನನ್ನೇ ಪ್ರಹರಿಸಿದಂತಾಗುತ್ತದೆ. ಆದ್ದರಿಂದ ಅಶ್ವತ್ಥವೃಕ್ಷಕ್ಕೆ ಪ್ರತಿದಿನವೂ ಪ್ರದಕ್ಷಿಣೆ ಮಾಡಬೇಕು. ಯಾವ ಕಾರಣದಿಂದಲೂ ಅಶ್ವತ್ಥವೃಕ್ಷವನ್ನು ನಾಶ ಮಾಡಬಾರದು.

ವ್ರತಸ್ಯ ಪಾರಣಂ ತೀರ್ಥಂ ಸರ್ವತೀರ್ಥೇಷು ಪಾಂಡವ ।
ದೇವಶುಶ್ರೂಷಣಂ ತೀರ್ಥಂ ಗುರುಶುಶ್ರೂಷಣಂ ತಥಾ ॥೩೭॥

ಪಾಂಡವನೇ, ಸಮಸ್ತ ತೀರ್ಥಗಳನ್ನು ಸೇವಿಸುವುದಕ್ಕಿಂತಲೂ ಆರಂಭಿಸಿದ ವ್ರತವನ್ನು ಸಂಪೂರ್ಣಗೊಳಿಸುವುದು ಶ್ರೇಷ್ಠವಾದ ತೀರ್ಥವೆನಿಸಿದೆ. ದೇವರ ಸೇವೆಯು ನಿಜವಾದ ಸೇವೆ ಎನಿಸಿದೆ. ಅದರಂತೆ ಗುರುಶುಶ್ರೂಷೆಯು ತೀರ್ಥಸೇವನೆಗೆ ಸಮಾನವಾಗಿದೆ.

ಪುತ್ರಸ್ಯ ಪಾರಣಂ ತೀರ್ಥಮಾರ್ಜವಂ ತೀರ್ಥಮುಚ್ಯತೇ ॥೩೮॥

ದೇವಶುಶ್ರೂಷಣಂ ತೀರ್ಥಮರ್ಥಂ ಜ್ಞಾನಸ್ಯ ಪಾರಣಮ್ ।
ನರಾಣಾಂ ತೋಷಣಂ ತೀರ್ಥಂ ಗಾರ್ಹಸ್ಥ್ಯಂ ತೀರ್ಥಮುಚ್ಯತೇ॥೩೯॥

ಮಕ್ಕಳನ್ನು ರಕ್ಷಿಸುವುದು, ಮಾತು-ಮನಸ್ಸು-ಕೃತಿಗಳಲ್ಲಿ ಏಕಾಭಿಪ್ರಾಯವನ್ನು ಹೊಂದುವುದು, ದೇವತೆಗಳನ್ನು ಸೇವಿಸುವುದು, ಜ್ಞಾನ ಹೊಂದುವುದು, ಮನುಷ್ಯರನ್ನು ಸಂತೋಷ ಪಡಿಸುವುದು- ಇವೆಲ್ಲವೂ ಗೃಹಸ್ಥನಿಗೆ ತೀರ್ಥವೆಂದು ಹೇಳಲ್ಪಟ್ಟಿವೆ.

ಆತಿಥೇಯಂ ಪರಂ ತೀರ್ಥಮತಿಥಿಸ್ತೀರ್ಥಮುಚ್ಯತೇ ॥೪೦॥

ಅತಿಥಿಸೇವೆಯಲ್ಲಿ ತೊಡಗಿಸಿಕೊಳ್ಳುವುದು ಶ್ರೇಷ್ಠವಾದ ತೀರ್ಥ ಎಂದು ಹೇಳಿದ್ದಾರೆ. ಅತಿಥಿಯೂ ತೀರ್ಥವೆಂದು ಹೇಳಲ್ಪಟ್ಟಿದ್ದಾನೆ.

ಬ್ರಹ್ಮಚರ್ಯಂ ಪರಂ ತೀರ್ಥಂ ತ್ರೇತಾಗ್ನಿಸ್ತೀರ್ಥಮುಚ್ಯತೇ ॥೪೧॥

ಬ್ರಹ್ಮಚರ್ಯ ವ್ರತವನ್ನು ಪಾಲಿಸುವುದು ಶ್ರೇಷ್ಠವಾದ ತೀರ್ಥವಾಗಿದ್ದು ತ್ರೇತಾಗ್ನಿಯೂ ತೀರ್ಥ ಎನಿಸಿದೆ.

ಮೂಲಧರ್ಮಂ ತು ವಿಜ್ಞಾಯ ಮನಸ್ತತ್ರಾವಧಾರ್ಯತಾಮ್ ।
ಗಚ್ಛ ತೀರ್ಥಾನಿ ಕೌಂತೇಯ ಧರ್ಮೋ ಧರ್ಮೇಣ ವರ್ಧತೇ ॥೪೨॥

ಕೌಂತೇಯನೇ, ಮೂಲಧರ್ಮವನ್ನು ಚೆನ್ನಾಗಿ ತಿಳಿದು, ಮನಸ್ಸಿನ ಏಕಾಗ್ರತೆಯನ್ನು ಈ ಮೂಲ ಧರ್ಮದ ಅನುಷ್ಠಾನದಲ್ಲಿಯೇ ನೆಲೆಗೊಳಿಸಬೇಕು. ಇವುಗಳನ್ನು ಅರಿತು ತೀರ್ಥಯಾತ್ರೆಯನ್ನು ಮಾಡು. ಧರ್ಮಕಾರ್ಯವನ್ನು ಮಾಡುವುದರಿಂದಲೇ ಧರ್ಮವು ವೃದ್ಧಿಯನ್ನು ಹೊಂದುತ್ತದೆ.

ದ್ವಿವಿಧಂ ತೀರ್ಥಮಿತ್ಯಾಹುಃ ಸ್ಥಾವರಂ ಜಂಗಮಂ ತಥಾ ।
ಸ್ಥಾವರಾಜ್ಜಂಗಮಂ ಶ್ರೇಷ್ಠಂ ತತೋ ಜ್ಞಾನಪರಿಗ್ರಹಃ ॥೪೩॥

ಸ್ಥಾವರ-ಜಂಗಮಗಳೆಂಬ ಎರಡು ವಿಧವಾದ ತೀರ್ಥಗಳಿವೆ. ಸ್ಥಾವರ ತೀರ್ಥಕ್ಕಿಂತ ಜಂಗಮ ತೀರ್ಥವು ಶ್ರೇಷ್ಠವಾದದ್ದು. ಏಕೆಂದರೆ ಜಂಗಮ ತೀರ್ಥದಿಂದ ಜ್ಞಾನಲಾಭವಾಗುತ್ತದೆ.

ಕರ್ಮಣಾ ಹಿ ವಿಶುದ್ಧಸ್ಯ ಪುರುಷಸ್ಯೇಹ ಭಾರತ ।
ಹೃದಯೇ ಸರ್ವತೀರ್ಥಾನಿ ತೀರ್ಥಭೂತಃ ಸ ಉಚ್ಯತೇ ॥೪೪॥

ಪಾಂಡವನೇ, ಸತ್ಕರ್ಮದಿಂದ ಪರಿಶುದ್ಧನಾಗಿರುವ ಪುರುಷನ ಹೃದಯದಲ್ಲಿಯೇ ಸಮಸ್ತ ತೀರ್ಥಗಳು ಇರುತ್ತವೆ. ಅವನೇ ತೀರ್ಥರೂಪನೆಂದು ಹೇಳುತ್ತಾರೆ.

ಗುರುತೀರ್ಥಂ ಪರಂ ಜ್ಞಾನಮತಸ್ತೀರ್ಥಂ ನ ವಿದ್ಯತೇ ।
ಜ್ಞಾನಂ ತೀರ್ಥಂ ತಪಸ್ತೀರ್ಥಂ ಬ್ರಹ್ಮ ತೀರ್ಥಂ ಸನಾತನಮ್ ॥೪೫॥

ಗುರುರೂಪದ ತೀರ್ಥದ ಸೇವೆಯಿಂದ ಪರಮಾತ್ಮನ ಜ್ಞಾನವು ಉತ್ಪನ್ನವಾಗುತ್ತದೆ. ಆದ್ದರಿಂದ ಗುರುತೀರ್ಥಕ್ಕಿಂತಲೂ ಶ್ರೇಷ್ಠವಾದ, ಸನಾತನವಾದ ತೀರ್ಥವು ಮತ್ತೊಂದು ಇರುವುದಿಲ್ಲ.

ಕ್ಷಮಾ ತು ಪರಮಂ ತೀರ್ಥಂ ಸರ್ವತೀರ್ಥೇಷು ಪಾಂಡವ ।
ಕ್ಷಮಾವತಾಮಯಂ ಲೋಕಃ ಪರಶ್ಚೈವ ಕ್ಷಮಾವತಾಮ್ ॥೪೬॥

ಪಾಂಡವನೇ, ಸಮಸ್ತ ತೀರ್ಥಗಳಿಗಿಂತ ಕ್ಷಮಾತೀರ್ಥವೇ ಶ್ರೇಷ್ಠವಾದುದು. ಕ್ಷಮಾವಂತರಿಗೆ ಪರಲೋಕಗಳ ಪ್ರಾಪ್ತಿಯು, ಇಹಲೋಕದಲ್ಲಿ ಸ್ಥಿತಿಯು.

ಮಾನಿತೋಽಮಾನಿತೋ ವಾಽಪಿ ಪೂಜಿತೋಽಪೂಜಿತೋಽಪಿ ವಾ ।
ಆಕ್ರುಷ್ಟಸ್ತರ್ಜಿತೋ ವಾಽಪಿ ಕ್ಷಮಾವಾಂಸ್ತೀರ್ಥಮುಚ್ಯತೇ ॥೪೭॥

ಸನ್ಮಾನವನ್ನು ಮಾಡಲಿ, ಅವಮಾನವನ್ನು ಮಾಡಲಿ, ಪೂಜಿಸಲಿ, ಅವಮಾನಿಸಲಿ, ಹೆದರಿಸಲಿ, ಸಮಾಧಾನ ಪಡಿಸಲಿ, ಎಲ್ಲ ಸ್ಥಿತಿಗಳಲ್ಲಿಯೂ ಕ್ಷಮಾವಂತನಾಗಿರುವುದೇ ತೀರ್ಥ ಎನಿಸಿದೆ.

ಕ್ಷಮಾ ಯಶಃ ಕ್ಷಮಾ ದಾನಂ ಕ್ಷಮಾ ಸತ್ಯಂ ಕ್ಷಮಾ ತಪಃ ।
ಕ್ಷಮಾऽಹಿಂಸಾ ಕ್ಷಮಾ ಧರ್ಮಃ ಕ್ಷಮಾ ಚೇಂದ್ರಿಯನಿಗ್ರಹಃ ॥೪೮॥

ಕ್ಷಮೆಯೇ ಕೀರ್ತಿ, ಕ್ಷಮೆಯೇ ದಾನ, ಕ್ಷಮೆಯೇ ಸತ್ಯ, ಕ್ಷಮೆಯೇ ತಪಸ್ಸು, ಕ್ಷಮೆಯೇ ಅಹಿಂಸೆ, ಕ್ಷಮೆಯೇ ಧರ್ಮ, ಕ್ಷಮೆಯೇ ಇಂದ್ರಿಯನಿಗ್ರಹ.

ಕ್ಷಮಾ ದಯಾ ಕ್ಷಮಾ ಯಜ್ಞಃ ಕ್ಷಮಯೈವ ಧೃತಂ ಜಗತ್ ।
ಕ್ಷಮಾವಾನ್ ಬ್ರಾಹ್ಮಣೋ ದೇವಃ ಕ್ಷಮಾವಾನ್ ಬ್ರಾಹ್ಮಣೋ ವರಃ ॥

ಕ್ಷಮೆಯೇ ದಯೆ, ಕ್ಷಮೆಯೇ ಯಜ್ಞ, ಕ್ಷಮೆಯೇ ಧೈರ್ಯ, ಕ್ಷಮೆಯಿಂದಲೇ ಜಗತ್ತು ಧರಿಸಲ್ಪಟ್ಟಿದೆ. ಕ್ಷಮಾವಂತನಾದ ಬ್ರಾಹ್ಮಣನು ದೇವತೆ ಎನಿಸಿದ್ದಾನೆ. ಕ್ಷಮಾವಂತನಾದ ಬ್ರಾಹ್ಮಣನು ಶ್ರೇಷ್ಠ ಎನಿಸಿದ್ದಾನೆ.

ಕ್ಷಮಾವಾನ್ ಪ್ರಾಪ್ನುಯಾತ್ ಸ್ವರ್ಗಂ ಕ್ಷಮಾವಾನ್ ಪ್ರಾಪ್ನುಯಾದ್ ಯಶಃ ।
ಕ್ಷಮಾವಾನ್ ಪ್ರಾಪ್ನುಯಾನ್ಮೋಕ್ಷಂ ತಸ್ಮಾತ್ ತೀರ್ಥಂ ಸ ಉಚ್ಯತೇ ॥೫೦॥

ಕ್ಷಮಾವಂತನು ಸ್ವರ್ಗವನ್ನು ಹೊಂದುತ್ತಾನೆ. ಕ್ಷಮಾವಂತನು ಕೀರ್ತಿಯನ್ನು ಹೊಂದುತ್ತಾನೆ. ಕ್ಷಮಾವಂತನು ಮೋಕ್ಷವನ್ನು ಹೊಂದುತ್ತಾನೆ. ಆದ್ದರಿಂದ ಕ್ಷಮೆಯೇ ತೀರ್ಥ ಎನಿಸುತ್ತದೆ.

ಆತ್ಮಾ ನದೀ ಭಾರತಪುಣ್ಯತೀರ್ಥಮ್
ಆತ್ಮಾ ತೀರ್ಥಂ ಸರ್ವತೀರ್ಥಪ್ರಧಾನಮ್ ।
ಆತ್ಮಾ ಯಜ್ಞಃ ಸರ್ವಮಾತ್ಮನ್ಯಥೋ ವೈ
ಸ್ವರ್ಗೋ ಮೋಕ್ಷಃ ಸರ್ವಮಾತ್ಮನ್ಯಧೀನಮ್ ॥೫೧॥

ಪರಮಾತ್ಮನ ಜ್ಞಾನವೇ ಭಾರತದೇಶದ ಪುಣ್ಯತೀರ್ಥ, ನದಿ ಎನಿಸಿದೆ. ಪರಮಾತ್ಮನೇ ಸಮಸ್ತ ತೀರ್ಥಗಳಿಗೂ ಪ್ರಧಾನ ತೀರ್ಥ ಎನಿಸಿದ್ದಾನೆ. ಪರಮಾತ್ಮನನ್ನೇ ಯಜ್ಞಸ್ವರೂಪನೆಂದು ಯೋಗಿಗಳು ತಿಳಿಯುತ್ತಾರೆ. ಸ್ವರ್ಗ-ಮೋಕ್ಷಗಳೆಲ್ಲವೂ ಪರಮಾತ್ಮನ ಅಧೀನವಾಗಿವೆ.

ಆಚಾರವಸ್ತ್ರಾಂತರಕ್ಷಾಲಿತೇನ
ಸತ್ಯಪ್ರಸನ್ನಕ್ಷಮಶೀತಲೇನ ।

ದ್ವಿವಿಧಂ ತೀರ್ಥಮಿತ್ಯಾಹುಃ ಸ್ಥಾವರಂ ಜಂಗಮಂ ತಥಾ ।
ಸ್ಥಾವರಾಜ್ಜಂಗಮಂ ಶ್ರೇಷ್ಠಂ ತತೋ ಜ್ಞಾನಪರಿಗ್ರಹಃ ॥೪೩॥

ಸ್ಥಾವರ-ಜಂಗಮಗಳೆಂಬ ಎರಡು ವಿಧವಾದ ತೀರ್ಥಗಳಿವೆ. ಸ್ಥಾವರ ತೀರ್ಥಕ್ಕಿಂತ ಜಂಗಮ ತೀರ್ಥವು ಶ್ರೇಷ್ಠವಾದದ್ದು. ಏಕೆಂದರೆ ಜಂಗಮ ತೀರ್ಥದಿಂದ ಜ್ಞಾನಲಾಭವಾಗುತ್ತದೆ.

ಕರ್ಮಣಾ ಹಿ ವಿಶುದ್ಧಸ್ಯ ಪುರುಷಸ್ಯೇಹ ಭಾರತ ।
ಹೃದಯೇ ಸರ್ವತೀರ್ಥಾನಿ ತೀರ್ಥಭೂತಃ ಸ ಉಚ್ಯತೇ ॥೪೪॥

ಪಾಂಡವನೇ, ಸತ್ಕರ್ಮದಿಂದ ಪರಿಶುದ್ಧನಾಗಿರುವ ಪುರುಷನ ಹೃದಯದಲ್ಲಿಯೇ ಸಮಸ್ತ ತೀರ್ಥಗಳು ಇರುತ್ತವೆ. ಅವನೇ ತೀರ್ಥರೂಪನೆಂದು ಹೇಳುತ್ತಾರೆ.

ಗುರುತೀರ್ಥಂ ಪರಂ ಜ್ಞಾನಮತಸ್ತೀರ್ಥಂ ನ ವಿದ್ಯತೇ ।
ಜ್ಞಾನಂ ತೀರ್ಥಂ ತಪಸ್ತೀರ್ಥಂ ಬ್ರಹ್ಮ ತೀರ್ಥಂ ಸನಾತನಮ್ ॥೪೫॥

ಗುರುರೂಪದ ತೀರ್ಥದ ಸೇವೆಯಿಂದ ಪರಮಾತ್ಮನ ಜ್ಞಾನವು ಉತ್ಪನ್ನವಾಗುತ್ತದೆ. ಆದ್ದರಿಂದ ಗುರುತೀರ್ಥಕ್ಕಿಂತಲೂ ಶ್ರೇಷ್ಠವಾದ, ಸನಾತನವಾದ ತೀರ್ಥವು ಮತ್ತೊಂದು ಇರುವುದಿಲ್ಲ.

ಕ್ಷಮಾ ತು ಪರಮಂ ತೀರ್ಥಂ ಸರ್ವತೀರ್ಥೇಷು ಪಾಂಡವ ।
ಕ್ಷಮಾವತಾಮಯಂ ಲೋಕಃ ಪರಶ್ಚೈವ ಕ್ಷಮಾವತಾಮ್ ॥೪೬॥

ಪಾಂಡವನೇ, ಸಮಸ್ತ ತೀರ್ಥಗಳಿಗಿಂತ ಕ್ಷಮಾತೀರ್ಥವೇ ಶ್ರೇಷ್ಠವಾದುದು. ಕ್ಷಮಾವಂತರಿಗೆ ಪರಲೋಕಗಳ ಪ್ರಾಪ್ತಿಯು, ಇಹಲೋಕದಲ್ಲಿ ಸ್ಥಿತಿಯು.

ಮಾನಿತೋಽಮಾನಿತೋ ವಾಽಪಿ ಪೂಜಿತೋಽಪೂಜಿತೋಽಪಿ ವಾ ।
ಆಕ್ರುಷ್ಟಸ್ತರ್ಜಿತೋ ವಾಽಪಿ ಕ್ಷಮಾವಾಂಸ್ತೀರ್ಥಮುಚ್ಯತೇ ॥೪೭॥

ಸನ್ಮಾನವನ್ನು ಮಾಡಲಿ, ಅವಮಾನವನ್ನು ಮಾಡಲಿ, ಪೂಜಿಸಲಿ, ಅವಮಾನಿಸಲಿ, ಹೆದರಿಸಲಿ, ಸಮಾಧಾನ ಪಡಿಸಲಿ, ಎಲ್ಲಸ್ಥಿತಿಗಳಲ್ಲಿಯೂ ಕ್ಷಮಾವಂತನಾಗಿರುವುದೇ ತೀರ್ಥ ಎನಿಸಿದೆ.

ಕ್ಷಮಾ ಯಶಃ ಕ್ಷಮಾ ದಾನಂ ಕ್ಷಮಾ ಸತ್ಯಂ ಕ್ಷಮಾ ತಪಃ ।
ಕ್ಷಮಾऽಹಿಂಸಾ ಕ್ಷಮಾ ಧರ್ಮಃ ಕ್ಷಮಾ ಚೇಂದ್ರಿಯನಿಗ್ರಹಃ ॥೪೮॥

ಕ್ಷಮೆಯೇ ಕೀರ್ತಿ, ಕ್ಷಮೆಯೇ ದಾನ, ಕ್ಷಮೆಯೇ ಸತ್ಯ, ಕ್ಷಮೆಯೇ ತಪಸ್ಸು, ಕ್ಷಮೆಯೇ ಅಹಿಂಸೆ, ಕ್ಷಮೆಯೇ ಧರ್ಮ, ಕ್ಷಮೆಯೇ ಇಂದ್ರಿಯನಿಗ್ರಹ.

ಕ್ಷಮಾ ದಯಾ ಕ್ಷಮಾ ಯಜ್ಞಃ ಕ್ಷಮಯೈವ ಧೃತಂ ಜಗತ್ ।
ಕ್ಷಮಾವಾನ್ ಬ್ರಾಹ್ಮಣೋ ದೇವಃ ಕ್ಷಮಾವಾನ್ ಬ್ರಾಹ್ಮಣೋ ವರಃ ॥

ಕ್ಷಮೆಯೇ ದಯೆ, ಕ್ಷಮೆಯೇ ಯಜ್ಞ, ಕ್ಷಮೆಯೇ ಧೈರ್ಯ, ಕ್ಷಮೆಯಿಂದಲೇ ಜಗತ್ತು ಧರಿಸಲ್ಪಟ್ಟಿದೆ. ಕ್ಷಮಾವಂತನಾದ ಬ್ರಾಹ್ಮಣನು ದೇವತೆ ಎನಿಸಿದ್ದಾನೆ. ಕ್ಷಮಾವಂತನಾದ ಬ್ರಾಹ್ಮಣನು ಶ್ರೇಷ್ಠ ಎನಿಸಿದ್ದಾನೆ.

ಕ್ಷಮಾವಾನ್ ಪ್ರಾಪ್ನುಯಾತ್ ಸ್ವರ್ಗಂ ಕ್ಷಮಾವಾನ್ ಪ್ರಾಪ್ನುಯಾದ್ ಯಶಃ ।
ಕ್ಷಮಾವಾನ್ ಪ್ರಾಪ್ನುಯಾನ್ಮೋಕ್ಷಂ ತಸ್ಮಾತ್ ತೀರ್ಥಂ ಸ ಉಚ್ಯತೇ ॥೫೦॥

ಕ್ಷಮಾವಂತನು ಸ್ವರ್ಗವನ್ನು ಹೊಂದುತ್ತಾನೆ. ಕ್ಷಮಾವಂತನು ಕೀರ್ತಿಯನ್ನು ಹೊಂದುತ್ತಾನೆ. ಕ್ಷಮಾವಂತನು ಮೋಕ್ಷವನ್ನು ಹೊಂದುತ್ತಾನೆ. ಆದ್ದರಿಂದ ಕ್ಷಮೆಯೇ ತೀರ್ಥ ಎನಿಸುತ್ತದೆ.

ಆತ್ಮಾ ನದೀ ಭಾರತಪುಣ್ಯತೀರ್ಥಮ್
ಆತ್ಮಾ ತೀರ್ಥಂ ಸರ್ವತೀರ್ಥಪ್ರಧಾನಮ್ ।
ಆತ್ಮಾ ಯಜ್ಞಃ ಸರ್ವಮಾತ್ಮನ್ಯಥೋ ವೈ
ಸ್ವರ್ಗೋ ಮೋಕ್ಷಃ ಸರ್ವಮಾತ್ಮನ್ಯಧೀನಮ್ ॥೫೧॥

ಪರಮಾತ್ಮನ ಜ್ಞಾನವೇ ಭಾರತದೇಶದ ಪುಣ್ಯತೀರ್ಥ, ನದಿ ಎನಿಸಿದೆ. ಪರಮಾತ್ಮನೇ ಸಮಸ್ತ ತೀರ್ಥಗಳಿಗೂ ಪ್ರಧಾನ ತೀರ್ಥ ಎನಿಸಿದ್ದಾನೆ. ಪರಮಾತ್ಮನನ್ನೇ ಯಜ್ಞಸ್ವರೂಪನೆಂದು ಯೋಗಿಗಳು ತಿಳಿಯುತ್ತಾರೆ. ಸ್ವರ್ಗ-ಮೋಕ್ಷಗಳೆಲ್ಲವೂ ಪರಮಾತ್ಮನ ಅಧೀನವಾಗಿವೆ.

ಆಚಾರವಸ್ಯಾಂತರಕ್ಷಾಲಿತೇನ
ಸತ್ಯಪ್ರಸನ್ನಕ್ಷಮಶೀತಲೇನ ।

ಜ್ಞಾನಾಂಬುನಾ ಸ್ನಾತಿ ಹಿ ಯೋ ಹಿ ನಿತ್ಯಂ
ಕಿಂ ತಸ್ಯ ಭೂಯಃ ಸಲಿಲೇನ ಕೃತ್ಯಮ್ ॥೫೨॥

ಯಾವ ವ್ಯಕ್ತಿಯು ಸದಾಚಾರ ಪಾಲನೆಯಿಂದ ಅತ್ಯಂತ ನಿರ್ಮಲನಾಗಿರುತ್ತಾನೋ ಸತ್ಯ ಮತ್ತು ಕ್ಷಮೆಗಳೆಂಬ ಅಪಾರವಾದ ಶೈತ್ಯವುಳ್ಳ ಜ್ಞಾನವೆಂಬ ನೀರಿನಲ್ಲಿ ನಿತ್ಯ ಸ್ನಾನ ಮಾಡುತ್ತಾನೋ, ಅಂತಹವನಿಗೆ ಜಲರೂಪವಾದ ತೀರ್ಥದಲ್ಲಿ ಸ್ನಾನ ಮಾಡುವ ಅಗತ್ಯವೇನಿದೆ?

ಯುಧಿಷ್ಠಿರಃ

ಭಗವನ್ ಸರ್ವಪಾಪಘ್ನಂ ಪ್ರಾಯಶ್ಚಿತ್ತಮದುಷ್ಕರಮ್ ।
ತ್ವದ್ಭಕ್ತಸ್ಯ ಸುರಶ್ರೇಷ್ಠ ಮಮ ವಕ್ತುಂ ತ್ವಮರ್ಹಸಿ ॥೫೩॥

ಯುಧಿಷ್ಠಿರ– ಪೂಜ್ಯನೇ, ಸುರಶ್ರೇಷ್ಠನೇ, ನಿನ್ನ ಭಕ್ತನಾದ ನನಗೆ ಸಮಸ್ತ ಪಾಪಗಳನ್ನು ಪರಿಹರಿಸಿಕೊಳ್ಳುವ ಸುಲಭವಾಗಿ ಮಾಡಿಕೊಳ್ಳಬಹುದಾದ ಪ್ರಾಯಶ್ಚಿತ್ತವು ಯಾವುದೆಂದು ತಿಳಿಸು.

ಶ್ರೀಭಗವಾನ್

ರಹಸ್ಯಮಿದಮತ್ಯರ್ಥಮಶ್ರಾವ್ಯಂ ಪಾಪಕರ್ಮಣಾಮ್ ।
ಅಧಾರ್ಮಿಕಾಣಾಮಶ್ರಾವ್ಯಂ ಪ್ರಾಯಶ್ಚಿತ್ತಂ ಬ್ರವೀಮಿ ತೇ ॥೫೪॥

ಶ್ರೀಭಗವಾನ್– ಯುಧಿಷ್ಠಿರನೇ, ನಾನು ನಿನಗೆ ಅತ್ಯಂತ ರಹಸ್ಯವಾದ, ಯಾರಿಂದಲೂ ಸುಲಭವಾಗಿ ಕೇಳಲು ಸಾಧ್ಯವಿಲ್ಲದ, ಗೋಪ್ಯವಾದ, ಸುಲಭವಾದ, ಅಧಾರ್ಮಿಕರಿಗೆ ಹೇಳಬಾರದ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ.

ಪಾವನಂ ಬ್ರಾಹ್ಮಣಂ ದೃಷ್ಟ್ವಾ ಮದ್ಗತೇನಾಂತರಾತ್ಮನಾ ।
ನಮೋ ಬ್ರಹ್ಮಣ್ಯದೇವಾಯೇತ್ಯಭಿವಾದನಮಾಚರೇತ್ ॥೫೫॥

ಪವಿತ್ರನಾದ ಬ್ರಾಹ್ಮಣನನ್ನು ನೋಡಿದ ಕೂಡಲೇ ನನ್ನನ್ನು ಸ್ಮರಿಸಿಕೊಂಡು 'ನಮೋ ಬ್ರಹ್ಮಣ್ಯದೇವಾಯ' ಎಂಬ ಮಂತ್ರವನ್ನು ಪಠಿಸುತ್ತಾ ಭಗವದ್ಬುದ್ಧಿಯಿಂದ ಬ್ರಾಹ್ಮಣನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಬೇಕು.

ಪ್ರದಕ್ಷಿಣಂ ಚ ಯಃ ಕುರ್ಯಾತ್ ಪುನರಷ್ಟಾಕ್ಷರೇಣ ತು ।
ತೇನ ತುಷ್ಟೋ ನರಶ್ರೇಷ್ಠ ತತ್ ಪಾಪಂ ಕ್ಷಪಯಾಮ್ಯಹಮ್ ॥೫೬॥

ಪುನಃ 'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರ ಮಂತ್ರದಿಂದ ಪ್ರದಕ್ಷಿಣೆಯನ್ನು ಮಾಡುತ್ತಾ ಬ್ರಾಹ್ಮಣನನ್ನು ನಮಸ್ಕರಿಸಿದಲ್ಲಿ ಬ್ರಾಹ್ಮಣನು ಸಂತುಷ್ಟನಾಗುತ್ತಾನೆ. ಅಂತಹ ಸಂತುಷ್ಟನಾದ ಬ್ರಾಹ್ಮಣನ ಅಂತರ್ಯಾಮಿಯಾಗಿರುವ ನಾನು ಅವನ ಪಾಪಗಳನ್ನು ನಾಶ ಮಾಡುತ್ತೇನೆ.

ಯತ್ರ ಕೃಷ್ಟಾಂ ವರಾಹಸ್ಯ ಮೃತ್ತಿಕಾಂ ಶಿರಸಾ ವಹನ್ ।
ಪ್ರಾಣಾಯಾಮಶತಂ ಕೃತ್ವಾ ನರಃ ಪಾಪೈಃ ಪ್ರಮುಚ್ಯತೇ ॥೫೭॥

ಯಾವ ವ್ಯಕ್ತಿಯು ವರಾಹನ ಕೋರೆಯಿಂದ ಸೀಳಿದ ಭೂಮಿಯ ಮಣ್ಣನ್ನು ತಲೆಯಲ್ಲಿ ಹಚ್ಚಿಕೊಂಡು ನೂರು ಪ್ರಾಣಾಯಾಮವನ್ನು ಮಾಡುತ್ತಾನೋ ಅವನು ಸಮಸ್ತ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ದಕ್ಷಿಣಾವರ್ತಶಂಖಾದ್ವಾ ಕಪಿಲಾಶೃಂಗತೋಽಪಿ ವಾ ।
ಪ್ರಾಕ್ಪ್ರೋತಸಂ ನದೀಂ ಗತ್ವಾ ಮಮಾಯತನಸನ್ನಿಧೌ ॥೫೮॥

ಸಲಿಲೇನ ಚ ವಿಗ್ರಹೇ (ತು ಯಃ) ಸ್ನಾಯಾತ್ ಸಕೃದೇವ ರವಿಗ್ರಹೇ ।
ತಸ್ಯ ಯತ್ ಸಂಚಿತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥೫೯॥

ಸೂರ್ಯಗ್ರಹಣದ ಸಮಯದಲ್ಲಿ ಪೂರ್ವಕ್ಕೆ ಹರಿಯುವ ನದಿಯ ಬಳಿ ಹೋಗಿ ನನ್ನ ಮಂದಿರದ ಬಳಿಯಲ್ಲಿ ಬಲಮುರಿ ಶಂಖದಲ್ಲಾಗಲಿ, ಕಪಿಲಾಧೇನುವಿನ ಕೊಂಬಿನಲ್ಲಿ ತುಂಬಿದ ನೀರಿನಿಂದಾಗಲಿ, ನದಿಯ ನೀರನ್ನು ತುಂಬಿಕೊಂಡು ಒಮ್ಮೆ ಸ್ನಾನ ಮಾಡಿದರೂ ಅವನ ದೇಹದಲ್ಲಿ ಸಂಚಿತವಾದ ಸಮಸ್ತ ಪಾಪಗಳು ಆ ಕ್ಷಣದಲ್ಲಿಯೇ ನಾಶ ಹೊಂದುತ್ತವೆ.

ಮಸ್ತಕಾನ್ನಿಃಸೃತೈಸ್ತೋಯೈಃ ಕಪಿಲಾಯಾ ಯುಧಿಷ್ಠಿರ ।
ಗೋಮೂತ್ರೇಣಾಪಿ ಯಃ ಸ್ನಾಯಾದ್ ರೋಹಿಣ್ಯಾಂ ಮಮ ವಾ ದಿನೇ ॥

ವಿಪ್ರಪಾದಚ್ಯುತೈರ್ವಾಽಪಿ ತೋಯೈಃ ಪಾಪಂ ಪ್ರಣಶ್ಯತಿ ॥೬೦॥

ಕಪಿಲಾಧೇನುವಿನ ತಲೆಯಿಂದ ಸುರಿಯಲ್ಪಟ್ಟ ನೀರನ್ನು ಅಥವಾ ಕಪಿಲಾ ಗೋವಿನ ಮೂತ್ರದಿಂದಾಗಲಿ ರೋಹಿಣಿ ನಕ್ಷತ್ರದಲ್ಲಿ ಅಥವಾ ಏಕಾದಶಿ ದಿವಸದಲ್ಲಿ ಯಾವನು ಸ್ನಾನ ಮಾಡುತ್ತಾನೋ ಅಥವಾ ಬ್ರಾಹ್ಮಣರ ಪಾದದಿಂದ ಸುರಿದ ನೀರಿನಿಂದ ಯಾವನು ಸ್ನಾನ ಮಾಡುತ್ತಾನೋ ಅವನ ಎಲ್ಲ ಪಾಪಗಳು ನಾಶ ಹೊಂದುತ್ತವೆ.

ನಮಸ್ಯೇದ್ಯಸ್ತು ಮದ್ಭಕ್ತ್ಯಾ ಶಿಂಶುಮಾರಂ ಪ್ರಜಾಪತಿಮ್ ।
ಚತುರ್ದಶಾಂಗಸಂಯುಕ್ತಂ ತಸ್ಯ ಪಾಪಂ ಪ್ರಣಶ್ಯತಿ ॥೬೨॥

ಯಾವ ವ್ಯಕ್ತಿಯು ಭಕ್ತಿಯಿಂದ ಶಿಂಶುಮಾರ ಎಂಬ ಪ್ರಜಾಪತಿಯನ್ನು ಅರ್ಥಾತ್ ಜ್ಯೋತಿಶ್ಚಕ್ರದಲ್ಲಿರುವಂತಹ ಶಿಂಶುಮಾರ ರೂಪವನ್ನು, ಸೂರ್ಯ-ಚಂದ್ರಾದಿ ದೇವತಾ ವೃಂದವನ್ನು ಪರಿಪಾಲಿಸುವ ನನ್ನ ಅವತಾರವೆಂದು ತಿಳಿದು ನಮಸ್ಕರಿಸುತ್ತಾನೋ ಹದಿನಾಲ್ಕು ಅಂಗಗಳಿಂದ ಕೂಡಿರುವ ಆ ಶಿಂಶುಮಾರ ರೂಪವನ್ನು ಪ್ರತಿದಿನವು ನೋಡಿದ ಕೂಡಲೇ ಅವನು ಸಮಸ್ತ ಪಾಪಗಳಿಂದ ಮುಕ್ತನಾಗುತ್ತಾನೆ.

ತತಶ್ಚತುರ್ದಶಾಂಗಾನಿ ಶೃಣು ತಸ್ಯ ನರಾಧಿಪ ।
ಶಿರೋ ಧರ್ಮೋ ಹನುರ್ಬ್ರಹ್ಮಾ ಪುಚ್ಛಾವುತ್ತರದಕ್ಷಿಣೌ ॥೬೩॥

ಹೃದಯಂ ತು ಭವೇದ್ ವಿಷ್ಣುರ್ಹಸ್ತೌ ಸ್ಯಾತಾಂ ತಥಾऽಶ್ವಿನೌ ।
ಅತ್ರಿರ್ಮಧ್ಯಂ ಭವೇದ್ ರಾಜನ್ ಲಿಂಗಂ ಸಂವತ್ಸರಂ ಭವೇತ್ ॥೬೪॥

ನರಾಧಿಪನೇ, ಆ ಶಿಂಶುಮಾರರೂಪದ ಹದಿನಾಲ್ಕು ಅಂಗಗಳನ್ನು ತಿಳಿದುಕೊ. ಶಿಂಶುಮಾರನ ತಲೆಯು ಧರ್ಮವೆನಿಸಿದೆ. ಹನುವು (ಗಲ್ಲ) ಬ್ರಹ್ಮ ಎನಿಸಿದೆ. ಪುಚ್ಛವು ಉತ್ತರ-ದಕ್ಷಿಣವೆನಿಸಿದೆ. ಹೃದಯವು ವಿಷ್ಣು ಎನಿಸಿದೆ, ಹಸ್ತವು ಅಶ್ವಿನಿದೇವತೆಗಳೆನಿಸಿದ್ದಾರೆ. ಮಧ್ಯಭಾಗವು ಅತ್ರಿಋಷಿಗಳೆನಿಸಿದ್ದಾರೆ, ಲಿಂಗಭಾಗವು ಸಂವತ್ಸರವೆನಿಸಿದೆ.

ಮಿತ್ರಾವರುಣಕೌ ಪಾದೌ ಪುಚ್ಛಮೂಲಂ ಹುತಾಶನಃ ।
ತತಃ ಪಶ್ಚಾದ್ ಭವೇದಿಂದ್ರಸ್ತತಃ ಪಶ್ಚಾತ್ ಪ್ರಜಾಪತಿಃ ॥೬೫॥

ಎರಡು ಪಾದಗಳು ಮಿತ್ರಾ-ವರುಣರು ಎನಿಸಿದ್ದಾರೆ, ಪುಚ್ಛಮೂಲವು ಅಗ್ನಿದೇವ ಎನಿಸಿದ್ದಾನೆ. ಪುಚ್ಛದ ಮೇಲ್ಭಾಗಕ್ಕೆ ಇಂದ್ರನು ಅಭಿಮಾನಿಯಾಗಿದ್ದಾನೆ. ಅದರ ನಂತರ ಭಾಗಕ್ಕೆ ಚತುರ್ಮುಖನು ಅಭಿಮಾನಿಯಾಗಿದ್ದಾನೆ.

ಅಭಯಂ ಚ ತತಃ ಪಶ್ಚಾತ್ ಸ ಏಷ ಧ್ರುವಸಂಜ್ಞಿತಃ ।
ಏತಾನ್ಯಂಗಾನಿ ಸರ್ವಾಣಿ ಶಿಂಶುಮಾರಪ್ರಜಾಪತೇಃ ॥೬೬॥

ಶಿಂಶುಮಾರದೇವನ ಮೇಲ್ಭಾಗದಲ್ಲಿರುವ ಸ್ಥಳಗಳು ಮೃತ್ಯುಭಯದಿಂದ ರಹಿತವಾದ ಸ್ಥಳ ಎನಿಸಿವೆ. ಅದನ್ನೇ ಧ್ರುವ ಮಂಡಲ ಎಂದು ಕರೆಯುತ್ತಾರೆ. ಇವೆಲ್ಲವೂ ಶಿಂಶುಮಾರಪ್ರಜಾಪತಿಯ ಅಂಗಗಳೆನಿಸಿವೆ.

ಪಿಬೇತ್ತು ಪಂಚಗವ್ಯಂ ಯಃ ಪೌರ್ಣಮಾಸ್ಯಾಮುಪೋಷ್ಯ ತು ।
ತಸ್ಯ ನಶ್ಯತಿ ಯತ್ಪಾಪಂ ತತ್ಪಾಪಂ ಪೂರ್ವಸಂಚಿತಮ್ ॥೬೭॥

ಯಾವನು ಹುಣ್ಣಿಮೆ ದಿವಸ ಉಪವಾಸವಿದ್ದು ಪಂಚಗವ್ಯವನ್ನು ಪ್ರಾಶನ ಮಾಡುತ್ತಾನೋ ಅವನ ಪೂರ್ವಸಂಚಿತಪಾಪಗಳೆಲ್ಲವೂ ನಾಶವಾಗುತ್ತವೆ.

ತಥೈವ ಬ್ರಹ್ಮಕೂರ್ಚಂ ತು ಸಮಂತ್ರಂ ತು ಪೃಥಕ್ ಪೃಥಕ್ ।
ಮಾಸಿ ಮಾಸಿ ಪಿಬೇದ್ಯಸ್ತು ತಸ್ಯ ಪಾಪಂ ಪ್ರಣಶ್ಯತಿ ॥೬೮॥

ಅದೇ ರೀತಿ ಯಾವನು ಪ್ರತಿ ಮಾಸವು ಪ್ರತ್ಯೇಕ ಪ್ರತ್ಯೇಕವಾಗಿ ಮಂತ್ರವನ್ನು ಜಪಮಾಡುತ್ತಾ, ಪಂಚಗವ್ಯವನ್ನು ಪ್ರಾಶನ ಮಾಡುತ್ತಾನೋ ಅವನ ಪಾಪಗಳು ನಾಶ ಹೊಂದುತ್ತವೆ.

ಪಾತ್ರಂ ಚ ಬ್ರಹ್ಮಕೂರ್ಚಂ ಚ ಶೃಣು ಮಂತ್ರಂ ಚ ಭಾರತ ।
ಪಾಲಾಶಂ ಪದ್ಮಪತ್ರಂ ಚ ತಾಮ್ರಂ ವಾऽಥ ಹಿರಣ್ಮಯಮ್ ॥೬೯॥

ಸಾದಯಿತ್ವಾ ತು ಗೃಹ್ಣೀಯಾತ್ ತತ್ತು ಪಾತ್ರಮುದಾಹೃತಮ್ ॥೭೦॥

ಪಂಚಗವ್ಯಕ್ಕೆ ಯೋಗ್ಯವಾದ ಪಾತ್ರೆಯಾವುದು? ಬ್ರಹ್ಮಕೂರ್ಚ ಎಂದರೇನು? ಮಂತ್ರವೇನು? ಅದರ ಬಗ್ಗೆ ಹೇಳುತ್ತೇನೆ, ಕೇಳು. ಮುತ್ತುಗದ ಎಲೆ ಅಥವಾ ಕಮಲದ ಎಲೆ ಅಥವಾ ತಾಮ್ರದ ಪಾತ್ರೆ ಅಥವಾ ಹಿರಣ್ಯಪಾತ್ರೆಯನ್ನು ಕಲ್ಪಿಸಿಕೊಂಡು ಪಂಚಗವ್ಯವನ್ನು ಪ್ರಾಶನ ಮಾಡಬೇಕು.

ಗಾಯತ್ರ್ಯಾ ಗೃಹ್ಯ ಗೋಮೂತ್ರಂ ಗಂಧದ್ವಾರೇತಿ ಗೋಮಯಮ್ ।
ಆಪ್ಯಾಯಸ್ವೇತಿ ಚ ಕ್ಷೀರಂ ದಧಿಕ್ರಾವ್ಣೇತಿ ವೈ ದಧಿ ॥೭೧॥

ಪಂಚಗವ್ಯವನ್ನು ಸಿದ್ಧಪಡಿಸುವ ವಿಧಿಯು ಹೀಗಿದೆ: ಗಾಯತ್ರಿ ಮಂತ್ರವನ್ನು ಹೇಳಿಕೊಂಡು ಗೋಮೂತ್ರವನ್ನು ತೆಗೆದುಕೊಳ್ಳಬೇಕು. 'ಗಂಧದ್ವಾರಾಂ' ಎಂಬ ಮಂತ್ರವನ್ನು ಹೇಳಿಕೊಂಡು ಗೋವಿನ ಸೆಗಣಿಯನ್ನು ತೆಗೆದುಕೊಳ್ಳಬೇಕು. 'ಆಪ್ಯಾಯಸ್ವ' ಎಂಬ ಮಂತ್ರವನ್ನು ಹೇಳಿಕೊಂಡು ಹಸುವಿನ ಹಾಲನ್ನು ತೆಗೆದುಕೊಳ್ಳಬೇಕು. 'ದದಿಕ್ರಾವ್ಣೋ ಅಕಾರಿಶಂ' ಎಂಬ ಮಂತ್ರವನ್ನು ಹೇಳಿಕೊಂಡು ಮೊಸರನ್ನು ತೆಗೆದುಕೊಳ್ಳಬೇಕು.

ತೇಜೋಽಸಿ ಶುಕ್ರಮಿತ್ಯಾಜ್ಯಂ ದೇವಸ್ಯ ತ್ವೇತಿ ಕುಶೋದಕಮ್ ।
ಆಪ್ಯೋಹಿಷ್ಠೇತಿ ಸಂಗೃಹ್ಯ ಯವಪೂರ್ವಂ ಯಥಾವಿಧಿ ॥೭೨॥

'ತೇಜೋಽಸಿ ಶುಕ್ರಂ' ಎಂಬ ಮಂತ್ರವನ್ನು ಹೇಳಿಕೊಂಡು ಹಸುವಿನ ತುಪ್ಪವನ್ನು ತೆಗೆದುಕೊಳ್ಳಬೇಕು. 'ದೇವಸ್ಯ ತ್ವೇತಿ' ಎಂಬ ಮಂತ್ರವನ್ನು ಹೇಳಿಕೊಂಡು ಕುಶೋದಕವನ್ನು ತೆಗೆದುಕೊಳ್ಳಬೇಕು. 'ಆಪ್ಯೋಹಿಷ್ಠ' ಎಂಬ ಮಂತ್ರವನ್ನು ಹೇಳಿಕೊಂಡು ಗೋಧಿಯನ್ನು ತೆಗೆದುಕೊಳ್ಳಬೇಕು.

ಬ್ರಹ್ಮಣೇ ಚ ಯಥಾ ಹುತ್ವಾ ಸಮಿದ್ಧೇ ಚ ಹುತಾಶನೇ ।
ಆಲೋಡ್ಯ ಪ್ರಣವೇನೈವ ನಿರ್ಮಥ್ಯ ಪ್ರಣವೇನ ತು ॥೭೩॥

ನಂತರ ಎಲ್ಲವನ್ನೂ ಒಟ್ಟಿಗೆ ಸೇರಿಸಿ, ಅಗ್ನಿಯನ್ನು ಪ್ರತಿಷ್ಠಾಪಿಸಿ, ಪ್ರಜ್ವಲಿಸುವ ಅಗ್ನಿಯಲ್ಲಿ ಬ್ರಹ್ಮನಿಗೆ ಆಹುತಿಯನ್ನು ಕೊಡಬೇಕು. ಪ್ರಣವಮಂತ್ರವನ್ನು ಹೇಳಿಕೊಂಡು ಎಲ್ಲವನ್ನೂ ಕಲಕಬೇಕು. ಪ್ರಣವದಿಂದಲೇ ಮಥನ ಮಾಡಬೇಕು.

ಉದ್ಧೃತ್ಯ ಪ್ರಣವೇನೈವ ಪಿಬೇತ್ತು ಪ್ರಣವೇನ ತು ।
ಮಹತಾऽಪಿ ಸ ಪಾಪೇನ ತ್ವಚೇವಾಹಿರ್ವಿಮುಚ್ಯತೇ ॥೭೪॥

ಪ್ರಣವ ಮಂತ್ರವನ್ನು ಹೇಳಿಕೊಂಡು ಪಂಚಗವ್ಯ ಇರುವ ಪಾತ್ರೆಯನ್ನು ಮೇಲಕ್ಕೆ ಎತ್ತಬೇಕು. ಪ್ರಣವೋಚ್ಚಾರಣ ಪೂರ್ವಕವಾಗಿಯೇ ಪ್ರಾಶನ ಮಾಡಬೇಕು. ಹೀಗೆ ಮಾಡುವುದರಿಂದ ಮಹತ್ತರವಾದ ಪಾಪಗಳನ್ನು ಮಾಡಿದ್ದರೂ ಸರ್ಪವು ಪೊರೆಯಿಂದ ಮುಕ್ತವಾಗುವಂತೆ ಪಾಪದಿಂದ ಮುಕ್ತನಾಗುತ್ತಾನೆ.

ಭದ್ರಂ ತ ಇತಿ ಯಃ ಪಾದಂ ಪಠೇದೃಕ್ಸಂಹಿತಾಂ ತದಾ ।
ಅಂತರ್ಜಲೇ ವಾऽಭ್ಯಾದಿತ್ಯೇ ತಸ್ಯ ಪಾಪಂ ಪ್ರಣಶ್ಯತಿ ॥೭೫॥

ಯಾವ ಮನುಷ್ಯನು ನೀರಿನಲ್ಲಿ ಕುಳಿತು ಅಥವಾ ಸೂರ್ಯನಿಗೆ ಅಭಿಮುಖವಾಗಿ 'ಭದ್ರಂ ನಃ' ಎಂಬ ಒಂದು ಪಾದವನ್ನಾಗಲಿ ಅಥವಾ ಋಕ್‌ಸಂಹಿತೆಯನ್ನು ಜಪಿಸುತ್ತಾನೋ ಅವನ ಪಾಪವು ನಾಶ ಹೊಂದುತ್ತದೆ.

ಮಮ ಸೂಕ್ತಂ ಜಪೇದ್ಯಸ್ತು ನಿತ್ಯಂ ಮದ್ಗತಮಾನಸಃ ।
ನ ಸ ಪಾಪೇನ ಲಿಪ್ಯೇತ ಪದ್ಮಪತ್ರಮಿವಾಂಭಸಾ ॥೭೬॥

ಯಾವನು ನನ್ನಲ್ಲೇ ಮನಸ್ಸುಳ್ಳವನಾಗಿ ನಿತ್ಯವೂ ಪುರುಷಸೂಕ್ತವನ್ನು ಪಠಿಸುತ್ತಾನೋ ಅವನು ತಾವರೆಯ ಎಲೆಯು ನೀರಿನಿಂದ ಲಿಪ್ತವಾಗದಂತೆ ಪಾಪದಿಂದ ಲೇಪವನ್ನು ಹೊಂದುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಬಹುಧರ್ಮಕಥನಂ ನಾಮ
ಪಂಚದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾರನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು, ಯಾವ ಮನುಷ್ಯನಲ್ಲಿ ಭಗವದ್ಭಕ್ತಿ, ಸಚ್ಚಾರಿತ್ರ್ಯ ಮೊದಲಾದ ಗುಣಗಳು ಇಲ್ಲದಿದ್ದಲ್ಲಿ ಬ್ರಾಹ್ಮಣನಾಗಿದ್ದರೂ ಅಗ್ನಿಹೋತ್ರ ಪರಾಯಣನಾಗಿದ್ದರೂ, ಸ್ವಾಧ್ಯಾಯ-ಅಧ್ಯಯನಾದಿ ಸತ್ಕರ್ಮವುಳ್ಳವನಾಗಿದ್ದರೂ ಅವನು ಸಾಫಲ್ಯವನ್ನು ಹೊಂದಲಾರ. ಶೂದ್ರನಾದವನು ಸ್ವಾಧ್ಯಾಯಾದಿ ಲಕ್ಷಣಗಳಿದ್ದರೂ ಭಕ್ತಿಯುಳ್ಳವನಾಗಿದ್ದಲ್ಲಿ, ತನ್ನ ಜಾತಿಗೆ ಸಂಬಂಧಿಸಿದ ಸ್ವಲ್ಪ ಸತ್ಕರ್ಮವನ್ನು ಮಾಡಿದರೂ ಸಫಲತೆಯನ್ನು ಹೊಂದುತ್ತಾನೆ ಎಂದು ಹೇಳಿದುದು.

ಯುಧಿಷ್ಠಿರಃ

ಕೀದೃಶಾ ಬ್ರಾಹ್ಮಣಾ ಪುಣ್ಯಾ ಭಾವಶುದ್ಧಾಃ ಸುರೇಶ್ವರ ।
ತತ್ಕರ್ಮ ಸಫಲಂ ನೇತಿ ಕಥಯಸ್ವ ಮಮಾನಘ ॥೧॥

ಯುಧಿಷ್ಠಿರ– ಅನಘನೇ, ಸುರೇಶ್ವರನೇ, ಭಾವದಿಂದ ಶುದ್ಧರಾದ, ಪುಣ್ಯಾತ್ಮರಾದ ಬ್ರಾಹ್ಮಣರು ಹೇಗಿರುತ್ತಾರೆ? ಅವರು ಮಾಡಿದ ಕರ್ಮವು ಕೆಲವು ಸಮಯದಲ್ಲಿ ಸಫಲವಾಗದಿರಲು ಕಾರಣವೇನು? ನನಗೆ ಕೃಪೆ ಮಾಡಿ ಹೇಳು.

ಶ್ರೀಭಗವಾನ್

ಶೃಣು ಪಾಂಡವ ತತ್ಸರ್ವಂ ಬ್ರಾಹ್ಮಣಾನಾಂ ಯಥಾಕ್ರಮಮ್ ।
ಸಫಲಂ ನಿಷ್ಫಲಂ ಚೇತಿ ತೇಷಾಂ ಕರ್ಮ ಬ್ರವೀಮಿ ತೇ ॥೨॥

ಶ್ರೀಭಗವಾನ್– ಯುಧಿಷ್ಠಿರನೇ, ಬ್ರಾಹ್ಮಣರು ಮಾಡುವ ಕಾರ್ಯವು ಸಫಲವಾಗುವುದಕ್ಕೂ, ನಿಷ್ಫಲವಾಗುವುದಕ್ಕೂ ಕಾರಣವೇನೆಂದು ಕ್ರಮವಾಗಿ ಹೇಳುತ್ತೇನೆ, ಕೇಳಿಸಿಕೊ.

ತ್ರಿದಂಡಧಾರಣಂ ಮೌನಂ ಜಟಾಧಾರಣಮುಂಡನಮ್ ।
ವಲ್ಕಲಾಜಿನಸಂವಾಸೋ ವ್ರತಚರ್ಯಾSಭಿಷೇಚನಮ್ ॥೩॥

ಅಗ್ನಿಹೋತ್ರಂ ವನೇ ವಾಸಃ ಸ್ವಾಧ್ಯಾಯೋ ದಾನಸತ್ಕ್ರಿಯಾ ।
ಸರ್ವಾಣ್ಯೇತಾನಿ ವೈ ಮಿಥ್ಯಾ ಯದಿ ಭಾವೋ ನ ನಿರ್ಮಲಃ ॥೪॥

ಮನಸ್ಸಿನ ಭಾವನೆಯು ಶುದ್ಧವಾಗಿ ಇರದಿದ್ದಲ್ಲಿ ತ್ರಿದಂಡಧಾರಣೆ, ಮೌನವ್ರತ, ಜಟಾಧಾರಣೆ, ಶಿರೋಮುಂಡನ, ನಾರುಮಡಿ ಧರಿಸಿರುವಿಕೆ, ಕೃಷ್ಣಾಜಿನ ಧಾರಣೆ, ಬ್ರಹ್ಮಚರ್ಯ, ಸ್ನಾನ, ವ್ರತ, ಅಗ್ನಿಹೋತ್ರ, ಗೃಹಸ್ಥಧರ್ಮ ಪಾಲನೆ, ವೇದಾಧ್ಯಯನ, ಶೀಲ, ದಾನ ಮಾಡಿರುವಿಕೆ- ಇವುಗಳೆಲ್ಲವೂ ವ್ಯರ್ಥವಾಗುತ್ತವೆ.

ಅಗ್ನಿಹೋತ್ರಂ ವೃಥಾ ರಾಜನ್ ವೃಥಾ ವೇದಾಸ್ತಥೈವ ಚ ।
ಶೀಲೇನ ದೇವಾಸ್ತುಷ್ಯಂತಿ ಶ್ರುತಯಸ್ತತ್ರ ಕಾರಣಮ್ ॥೫॥

ರಾಜನೇ, ಯಾವ ಮನುಷ್ಯನ ಶೀಲವು ಸರಿಯಾಗಿರುವುದಿಲ್ಲವೋ ಅವನು ಮಾಡಿದ ಅಗ್ನಿಹೋತ್ರವು ವ್ಯರ್ಥವಾಗುತ್ತದೆ. ವೇದಾಧ್ಯಯನವೂ ವ್ಯರ್ಥವಾಗುತ್ತದೆ. ಶೀಲದಿಂದಲೇ ದೇವತೆಗಳು ಸಂತುಷ್ಟರಾಗುತ್ತಾರೆ. ಇದಕ್ಕೆ ಶ್ರುತಿಗಳೇ ಪ್ರಮಾಣವು.

ಕ್ಷಾಂತಂ ದಾಂತಂ ಜಿತಕ್ರೋಧಂ ಜಿತಾತ್ಮಾನಂ ಜಿತೇಂದ್ರಿಯಮ್ ।
ತಮಗ್ರ್ಯಂ ಬ್ರಾಹ್ಮಣಂ ಮನ್ಯೇ ಶೇಷಾಃ ಶೂದ್ರಾ ಇತಿ ಸ್ಮೃತಾಃ ॥೬॥

ಯಾವನು ಕ್ಷಮಾಸಮುದ್ರನೋ, ಇಂದ್ರಿಯನಿಗ್ರಹವುಳ್ಳವನೋ, ಕ್ರೋಧವನ್ನು ಗೆದ್ದವನೋ, ಮನಸ್ಸಿನ ನಿಗ್ರಹವುಳ್ಳವನೋ, ಜಿತೇಂದ್ರಿಯನೋ ಅವನನ್ನು ಶ್ರೇಷ್ಠನಾದ ಬ್ರಾಹ್ಮಣ ಎಂದು ತಿಳಿಯುತ್ತೇನೆ. ಉಳಿದವರು ಶೂದ್ರರು ಎಂದು ಕರೆಸಿಕೊಳ್ಳುತ್ತಾರೆ.

ಅಗ್ನಿಹೋತ್ರವ್ರತಪರಾನ್ ಸ್ವಾಧ್ಯಾಯನಿರತಾನ್ ಶುಚೀನ್ ।
ಉಪವಾಸರತಾನ್ ದಾಂತಾನ್ ತಾನ್ ದೇವಾ ಬ್ರಾಹ್ಮಣಾನ್ ವಿದುಃ ॥

ಅಗ್ನಿಹೋತ್ರ ವ್ರತನಿಷ್ಠರಾದ, ಸ್ವಾಧ್ಯಾಯ ನಿರತರಾದ, ಶೌಚಾಚಾರದಿಂದ ಕೂಡಿರುವ, ಉಪವಾಸನಿರತರಾದ, ಇಂದ್ರಿಯನಿಗ್ರಹ ಶೀಲರಾದ ಬ್ರಾಹ್ಮಣರನ್ನು ದೇವತೆಗಳು ಬ್ರಾಹ್ಮಣರೆಂದು ಕರೆಯುತ್ತಾರೆ.

ನ ಜಾತಿಃ ಪೂಜ್ಯತೇ ರಾಜನ್ ಗುಣಾಃ ಕಲ್ಯಾಣಕಾರಣಾಃ ।
ಚಂಡಾಲಮಪಿ ವೃತ್ತಸ್ಥಂ ತಂ ದೇವಾ ಬ್ರಾಹ್ಮಣಂ ವಿದುಃ ॥೮॥

ರಾಜನೇ, ಪೂಜೆಗೆ ಅರ್ಹವಾದವು ಕಲ್ಯಾಣಕರ ಗುಣಗಳೇ ವಿನಾ ಜಾತಿಯಲ್ಲ. ಚಂಡಾಲನಾದರೂ ಸಚ್ಚಾರಿತ್ರ್ಯಸಂಪನ್ನನಾದ ವ್ಯಕ್ತಿಯನ್ನು ದೇವತೆಗಳು ಬ್ರಾಹ್ಮಣ ಎಂದೇ ತಿಳಿದಿದ್ದಾರೆ.

ಮನಃಶೌಚಂ ಕರ್ಮಶೌಚಂ ಕುಲಶೌಚಂ ಚ ಭಾರತ ।
ಶರೀರಶೌಚಂ ವಾಕ್ಶೌಚಂ ಶೌಚಂ ಪಂಚವಿಧಂ ಸ್ಮೃತಮ್ ॥೯॥

ಮನಃಶೌಚ, ಕರ್ಮಶೌಚ, ಕುಲಶೌಚ, ಶರೀರ ಶೌಚ ಮತ್ತು ವಾಕ್‌ಶೌಚ ಎಂಬುದಾಗಿ ಐದು ವಿಧವಾಗಿ ಶೌಚವು ಇದೆ.

ಪಂಚಸ್ವೇತೇಷು ಶೌಚೇಷು ಹೃದಿ ಶೌಚಂ ವಿಶಿಷ್ಯತೇ ।
ಹೃದಯಸ್ಯ ಚ ಶೌಚೇನ ಸ್ವರ್ಗಂ ಗಚ್ಛಂತಿ ಮಾನವಾಃ ॥೧೦॥

ಈ ಐದು ವಿಧವಾದ ಶೌಚಗಳಲ್ಲಿಯೂ ಹೃದಯದ ಶುಚಿತ್ವವು ಶ್ರೇಷ್ಠವಾದುದು. ಹೃದಯದ ನೈರ್ಮಲ್ಯದಿಂದ ಮನುಷ್ಯರು ಸ್ವರ್ಗಕ್ಕೆ ಹೋಗುತ್ತಾರೆ.

ಅಗ್ನಿಹೋತ್ರಪರಿಭ್ರಷ್ಟಃ ಪ್ರಸಕ್ತಃ ಕ್ರಯವಿಕ್ರಯೇ ।
ವರ್ಣಸಂಕರಕರ್ತಾ ಚ ಬ್ರಾಹ್ಮಣೋ ವೃಷಲೈಃ ಸಮಃ ॥೧೧॥

ಯಾವ ಬ್ರಾಹ್ಮಣನು ಅಗ್ನಿಹೋತ್ರವನ್ನು ಆಚರಿಸುವುದಿಲ್ಲವೋ (ವೈಶ್ವದೇವವನ್ನು ಮಾಡುವುದಿಲ್ಲವೋ) ಕ್ರಯವಿಕ್ರಯಗಳನ್ನು ಮಾಡುತ್ತಾನೋ, ವರ್ಣಸಾಂಕರ್ಯವನ್ನು ಉಂಟುಮಾಡುತ್ತಾನೋ ಅವನು ವೃಷಲನಿಗೆ ಸಮಾನನಾಗಿದ್ದಾನೆ.

ಯಸ್ಯ ವೇದಶ್ರುತಿರ್ನಷ್ಟಾ ಕರ್ಷಕಶ್ಚಾಪಿ ಯೋ ದ್ವಿಜಃ ।
ವಿಕರ್ಮಸೇವೀ ಕೌಂತೇಯ ಸ ವೈ ವೃಷಲ ಉಚ್ಯತೇ ॥೧೨॥

ಯಾವ ಬ್ರಾಹ್ಮಣನು ವೇದಾಧ್ಯಯನವನ್ನು ಮಾಡುವುದಿಲ್ಲವೋ, ನೇಗಿಲನ್ನು ಉಪಯೋಗಿಸಿ ಕೃಷಿಯನ್ನು ಮಾಡುತ್ತಾನೋ, ತನ್ನ ವೃತ್ತಿಗೆ ವಿರುದ್ಧವಾದ ಕರ್ಮವನ್ನು ಮಾಡುತ್ತಾನೋ ಅವನು ವೃಷಲ ಎಂದು ಕರೆಸಿಕೊಳ್ಳುತ್ತಾನೆ.

ವೃಷೋ ಹಿ ಧರ್ಮೋ ವಿಜ್ಞೇಯಸ್ತಸ್ಯ ಯಃ ಕುರುತೇ ಲಯಮ್ ।
ವೃಷಲಂ ತಂ ವಿದುರ್ದೇವಾ ನಿಕೃಷ್ಟಂ ಶ್ವಪಚಾದಪಿ ॥೧೩॥

ವೃಷ ಎಂದರೆ ಧರ್ಮ. ಅದನ್ನು ನಾಶ ಮಾಡುವವನಿಗೆ ವೃಷಲ ಎಂದು ದೇವತೆಗಳು ಹೇಳುತ್ತಾರೆ. ಈ ವೃಷಲನು ಚಂಡಾಲನಿಗಿಂತಲೂ ನಿಕೃಷ್ಟನಾಗಿದ್ದಾನೆ.

ಸ್ತುತಿಭಿರ್ಬ್ರಹ್ಮಪೂರ್ವಾಭಿರ್ಯಃ ಶೂದ್ರಂ ಸ್ತೌತಿ ಮಾನವಃ ।
ನ ತು ಮಾಂ ಸ್ತೌತಿ ಪಾಪಾತ್ಮಾ ಸ ತು ಚಂಡಾಲ ಏವ ಚ ॥೧೪॥

ಯಾವ ಮಾನವನು ಭಗವಂತನನ್ನು ಕೊಂಡಾಡುವ ಮಂತ್ರಗಳಂತೆ ಶೂದ್ರರನ್ನು ಸ್ತುತಿಸುತ್ತಾನೋ ಅವನು ಪಾಪಾತ್ಮ, ಚಂಡಾಲ ಎನಿಸುತ್ತಾನೆ. ನನ್ನನ್ನು ಎಂದೂ ಸಮೀಪಿಸುವುದಿಲ್ಲ.

ಶ್ವದೃತೌ ತು ಯಥಾ ಕ್ಷೀರಂ ಬ್ರಹ್ಮ ವೈ ವೃಷಲೇ ತಥಾ ।
ದುಷ್ಟತಾಮೇತಿ ತತ್ಸರ್ವಂ ಶುನಾ ಲೀಢಂ ಹವಿರ್ಯಥಾ ॥೧೫॥

ನಾಯಿ ಮುಟ್ಟಿದ ಕ್ಷೀರವು ಹೇಗೋ ಹಾಗೆ ಯಾವ ವೃಷಲನು ವೇದಗಳನ್ನು ಅಧ್ಯಯನ ಮಾಡುತ್ತಾನೋ ಅಂತಹ ವೇದವು ಸತ್ತ ನಾಯಿಯ ಶಿರದಲ್ಲಿ ಧರಿಸಿದ ಕ್ಷೀರದಂತೆ ದುಷ್ಟತ್ವವನ್ನು ಹೊಂದುತ್ತದೆ. ನಾಯಿ ನೆಕ್ಕಿದ ಹವಿಸ್ಸನ್ನು ತ್ಯಜಿಸುವಂತೆ ಅವನಿಂದ ವೇದವು ತ್ಯಜಿಸಲ್ಪಡುತ್ತದೆ.

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ ।
ಧರ್ಮಶಾಸ್ತ್ರಂ ಪುರಾಣಂ ಚ ವಿದ್ಯಾ ಹ್ಯೇತಾಶ್ಚತುರ್ದಶ ॥೧೬॥

ಷಡಂಗಗಳು, ನಾಲ್ಕು ವೇದಗಳು, ಬ್ರಹ್ಮಮೀಮಾಂಸಾ ಶಾಸ್ತ್ರವು, ನ್ಯಾಯಶಾಸ್ತ್ರವು ಧರ್ಮಶಾಸ್ತ್ರವು, ಪುರಾಣವು ಇವುಗಳೆಲ್ಲ ಹದಿನಾಲ್ಕು ವಿದ್ಯೆಗಳೆನಿಸುತ್ತವೆ.

ಯಾನ್ಯುಕ್ತಾನಿ ಮಯಾ ಸಮ್ಯಗ್ ವಿದ್ಯಾಸ್ಥಾನಾನಿ ಭಾರತ ।
ಉತ್ಪನ್ನಾನಿ ಪವಿತ್ರಾಣಿ ಪಾವನಾರ್ಥಂ ತಥೈವ ಚ ॥೧೭॥

ಯಾವ ವಿದ್ಯಾಸ್ಥಾನಗಳನ್ನು ನಾನು ಹಿಂದೆ ತಿಳಿಸಿದ್ದೇನೋ ಆ ಹದಿನಾಲ್ಕು ವಿದ್ಯೆಗಳು ಲೋಕಕಲ್ಯಾಣಕ್ಕಾಗಿ ಪ್ರಕಟವಾದವುಗಳು. ಪವಿತ್ರವಾದವುಗಳು.

ತಸ್ಮಾತ್ ತಾನಿ ನ ಶೂದ್ರಸ್ಯ ಸ್ಪೃಷ್ಟವ್ಯಾನಿ ಯುಧಿಷ್ಠಿರ ।
ಸರ್ವಂ ಚ ಶೂದ್ರಸಂಸ್ಪೃಷ್ಟಮಪವಿತ್ರಂ ನ ಸಂಶಯಃ ॥೧೮॥

ಆದ್ದರಿಂದ ವೃಷಲನಾದವನು ಇವುಗಳನ್ನು ಸ್ಪರ್ಶಿಸಬಾರದು. ಈ ವಿದ್ಯೆಗಳು ವೃಷಲನ ಸ್ಪರ್ಶದಿಂದ ಅಪವಿತ್ರಗಳಾಗುತ್ತವೆ ಎಂಬುದರಲ್ಲಿ ಸಂಶಯವಿಲ್ಲ.

ಲೋಕೇ ತ್ರೀಣ್ಯಪವಿತ್ರಾಣಿ ಪಂಚಾಮೇಧ್ಯಾನಿ ಭಾರತ ।
ಶ್ವಾ ಚ ಶೂದ್ರಃ ಶ್ವಪಾಕಶ್ಚ ಅಪವಿತ್ರಾಣಿ ಭಾರತ ॥೧೯॥

ದೇವಃ ಕುಕ್ಕುಟೋ ಯೂಪೋ ಹ್ಯುದಕ್ಯಾ ವೃಷಲೀಪತಿಃ ।
ಪಂಚೈತೇ ಸ್ಯುರಮೇಧ್ಯಾಶ್ಚ ಸ್ಪೃಷ್ಟವ್ಯಾ ನ ಕದಾಚನ ॥೨೦॥

ಸ್ಪೃಷ್ಟ್ವೈತಾನಪ್ಸು ವೈ ವಿಪ್ರಃ ಸಚೇಲೋ ಜಲಮಾವಿಶೇತ್ ॥೨೧॥

ಲೋಕದಲ್ಲಿ ಮೂರು ಅಪವಿತ್ರವಾದವುಗಳು, ಐದು ಅಶುದ್ಧವಾದವುಗಳು ಇವೆ. ನಾಯಿ, ವೃಷಲ, ಚಾಂಡಾಲ- ಈ ಮೂರು ಅಪವಿತ್ರರು. ಅಶ್ಲೀಲವಾಗಿ ಮಾತನಾಡುವವನು, ಕೋಳಿ, ಕಡಿಯಲಿಕ್ಕಾಗಿ ಪಶುಗಳನ್ನು ಕಟ್ಟಿರುವ ಸ್ತಂಭ, ರಜಸ್ವಲೆಯಾದ ಸ್ತ್ರೀ, ವೃಷಲ ಸ್ತ್ರೀಯನ್ನು ಮದುವೆ ಮಾಡಿಕೊಂಡ ಬ್ರಾಹ್ಮಣ - ಈ ಐದು ಅಶುದ್ಧವಾದವುಗಳು. ಒಟ್ಟು ಈ ಎಂಟರಲ್ಲಿ ಯಾವುದನ್ನು, ಯಾರನ್ನು ಮುಟ್ಟಿದರೂ ಬ್ರಾಹ್ಮಣನು ಉಟ್ಟಿರುವ ಬಟ್ಟೆಯಲ್ಲಿಯೇ ನೀರಿನಲ್ಲಿಳಿದು ಸ್ನಾನ ಮಾಡಬೇಕು.

ಮದ್ಭಕ್ತಾನ್ ಶೂದ್ರಸಾಮಾನ್ಯಾದ್ ಅವಮನ್ಯಂತಿ ಯೇ ನರಾಃ ।
ನರಕೇಷ್ವೇವ ತಿಷ್ಠಂತಿ ವರ್ಷಕೋಟಿಂ ನರಾಧಮಾಃ ॥೨೨॥

ನನ್ನ ಭಕ್ತರು ಶೂದ್ರತ್ವ ಜಾತಿಯುಳ್ಳವರು ಎಂಬ ಕಾರಣದಿಂದ ಯಾರಾದರೂ ಅವರನ್ನು ಅವಮಾನಗೊಳಿಸಿದರೆ ಅಂತಹವರು ನರಾಧಮರಾಗುತ್ತಾರೆ. ಕೋಟಿ ವರ್ಷಗಳ ತನಕ ನರಕದಲ್ಲಿ ಬೀಳುತ್ತಾರೆ.

ಚಂಡಾಲಮಪಿ ಮದ್ಭಕ್ತಂ ನಾವಮನ್ಯೇತ ಬುದ್ಧಿಮಾನ್ ।
ಅವಮತ್ಯ ಪತಂತ್ಯೇವ ನರಕೇ ರೌರವೇ ನರಾಃ ॥೨೩॥

ನನ್ನ ಭಕ್ತನ ಭಕ್ತನಾದವನು ಚಂಡಾಲನೇ ಆಗಿದ್ದರೂ ಅವನನ್ನು ಬುದ್ಧಿವಂತನಾದ ಮನುಷ್ಯನು ಅವಮಾನಿಸಬಾರದು. ಅವನನ್ನು ಅವಮಾನಿಸಿದಲ್ಲಿ ರೌರವ ಎಂಬ ನರಕದಲ್ಲಿ ಬೀಳುತ್ತಾರೆ.

ಮಮ ಮದ್ಭಕ್ತಭಕ್ತೇಷು ಪ್ರೀತಿರಭ್ಯಧಿಕಾ ನೃಪ ।
ತಸ್ಮಾನ್ಮದ್ಭಕ್ತಭಕ್ತಾಶ್ಚ ಪೂಜನೀಯಾ ವಿಶೇಷತಃ ॥೨೪॥

ನನ್ನ ಭಕ್ತರಿಗೆ ಯಾರು ಭಕ್ತರೋ ಅವರಲ್ಲಿ ನನಗೆ ಅಧಿಕವಾದ ಪ್ರೀತಿ ಇರುತ್ತದೆ. ಆದ್ದರಿಂದ ನನ್ನ ಭಕ್ತರ ಭಕ್ತರನ್ನು ವಿಶೇಷವಾಗಿ ಸತ್ಕರಿಸಬೇಕು.

ಕೀಟಪಕ್ಷಿಮೃಗಾಣಾಂ ಚ ಮಯಿ ಸನ್ನ್ಯಸ್ತಚೇತಸಾಮ್ ।
ಊರ್ಧ್ವಮೇವ ಗತಿಂ ವಿದ್ಧಿ ಕಿಂ ಪುನರ್ಜ್ಞಾನಿನಾಂ ನೃಣಾಮ್ ॥೨೫॥

ನನ್ನಲ್ಲಿಯೇ ಮನಸ್ಸನ್ನಿಟ್ಟು ಧ್ಯಾನ ಮಾಡುವ ಕೀಟ, ಪಕ್ಷಿ, ಮೃಗಗಳಿಗೂ ಊರ್ಧ್ವಗತಿಯು ಉಂಟಾಗುತ್ತದೆ. ಹೀಗಿರುವಾಗ ಜ್ಞಾನಿ ಮನುಜರಿಗೆ ಊರ್ಧ್ವಗತಿಯುಂಟಾಗುತ್ತದೆ ಎಂದು ಪ್ರತ್ಯೇಕವಾಗಿ ಹೇಳಬೇಕೆ?

ಪತ್ರಂ ವಾऽಪ್ಯಥವಾ ಪುಷ್ಪಂ ಫಲಂ ವಾऽಪ್ಯಪ ಏವ ವಾ ।
ದದಾತಿ ಮಮ ಶೂದ್ರೋऽಪಿ ಶಿರಸಾ ಧಾರಯಾಮಿ ತತ್ ॥೨೬॥

ಯಾರು ತುಳಸೀಪತ್ರವನ್ನಾಗಲಿ, ಪುಷ್ಪ, ಫಲ, ಜಲ ಇವುಗಳಲ್ಲಿ ಯಾವುದನ್ನೇ ಆಗಲಿ, ಭಕ್ತಿಯಿಂದ ಶೂದ್ರನು ಸಮರ್ಪಿಸಿದರೂ ಅದನ್ನು ಶಿರಸಾ ಧರಿಸುತ್ತೇನೆ.

ವಿಪ್ರಾನೇವಾರ್ಚಯೇದ್ ಭಕ್ತ್ಯಾ ಶೂದ್ರಪ್ರಾಯಾಂಶ್ಚ ಮತ್ಪ್ರಿಯಾನ್ ।
ತೇಷಾಂ ತೇನೈವ ರೂಪೇಣ ಪೂಜಾಂ ಗೃಹ್ಣಾಮಿ ಭಾರತ ॥೨೭॥

ಶೂದ್ರ ಪ್ರಾಯರಾದ ನನ್ನ ಭಕ್ತರಾಗಿರುವ ಬ್ರಾಹ್ಮಣರನ್ನು ಭಕ್ತಿಯಿಂದ ಆರಾಧಿಸಬೇಕು. ನಾನು ಅವರಲ್ಲಿ ಅವರ ರೂಪದಿಂದಲೇ ಇದ್ದು ಪೂಜೆಯನ್ನು ಸ್ವೀಕರಿಸುತ್ತೇನೆ.

ವೇದೋಕ್ತೇನೈವ ಮಾರ್ಗೇಣ ಸರ್ವಭೂತಹೃದಿ ಸ್ಥಿತಮ್ ।
ಮಾಮರ್ಚಯಂತಿ ಯೇ ವಿಪ್ರಾ ಮತ್ಸಾಯುಜ್ಯಂ ವ್ರಜಂತಿ ತೇ ॥೨೮॥

ವೇದೋಕ್ತವಾದ ಮಾರ್ಗದಿಂದ ಸಮಸ್ತ ಜೀವರಲ್ಲಿ ಅಂತರ್ಯಾಮಿಯಾಗಿರುವ ನನ್ನನ್ನು ಯಾವ ಬ್ರಾಹ್ಮಣರು ಆರಾಧಿಸುತ್ತಾರೋ ಅವರು ನನ್ನ ಸಾಯುಜ್ಯವನ್ನು ಹೊಂದುತ್ತಾರೆ.

ಬ್ರಾಹ್ಮಣಾನಾಂ ಹಿತಾಯೈವ ಪ್ರಾದುರ್ಭಾವಃ ಕೃತೋ ಮಯಾ ।
ಪ್ರಾದುರ್ಭಾವಾಕೃತಿಃ ಕಾಚಿದ್ ಅರ್ಚನೀಯಾ ಯುಧಿಷ್ಠಿರ ॥೨೯॥

ಯುಧಿಷ್ಠಿರನೇ, ಬ್ರಾಹ್ಮಣರಿಗೆ ಹಿತವನ್ನು ಬಯಸುವ ದೃಷ್ಟಿಯಿಂದಲೇ ಅನೇಕ ಅವತಾರಗಳನ್ನು ತಾಳಿರುತ್ತೇನೆ. ಆ ಅವತಾರಗಳನ್ನು ಚಿಂತಿಸಿ ಪೂಜಿಸಬೇಕು.

ಅಸಾಮಾನ್ಯತಮಾಂ ಮೂರ್ತಿಂ ಯೋ ಮದ್ಭಕ್ತ್ಯಾ ಸಮರ್ಚತಿ ।
ತೇನೈವ ಪರಿತುಷ್ಟೋಽಹಂ ಭವಿಷ್ಯಾಮಿ ನ ಸಂಶಯಃ ॥೩೦॥

ನನ್ನ ಅವತಾರಗಳಲ್ಲಿ ಯಾವುದಾದರೂ ಒಂದು ಮೂರ್ತಿಯನ್ನು ಯಾವ ವ್ಯಕ್ತಿಯು ಭಕ್ತಿಯಿಂದ ಆರಾಧಿಸುತ್ತಾನೋ ಅವನ ಆರಾಧನೆಯಿಂದ ಖಂಡಿತವಾಗಿಯೂ ಸಂತುಷ್ಟನಾಗುತ್ತೇನೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಮೃದಾ ಚ ಮಣಿರತ್ನೈಶ್ಚ ತಾಮ್ರೇಣ ರಜತೇನ ವಾ ।
ಕೃತ್ವಾ ಪ್ರತಿಕೃತಿಂ ಕುರ್ಯಾದರ್ಚನಾಂ ಕಾಂಚನೇನ ವಾ ॥೩೧॥

ಮಣ್ಣಿನಿಂದಾಗಲಿ, ಮಣಿಗಳಿಂದಾಗಲಿ, ರತ್ನದಿಂದಾಗಲಿ, ತಾಮ್ರದಿಂದಾಗಲಿ, ಬೆಳ್ಳಿಯಿಂದಾಗಲಿ, ಬಂಗಾರದಿಂದಾಗಲಿ ನನ್ನ ಪ್ರತಿಮೆಯನ್ನು ಮಾಡಿಸಿಕೊಂಡು ನನ್ನ ಆರಾಧನೆಯನ್ನು ಮಾಡಬೇಕು.

ಪುಣ್ಯಂ ದಶಗುಣಂ ವಿದ್ಯಾದೇತೇಷಾಮುತ್ತರೋತ್ತರಮ್ ॥೩೨॥

ಆಯಾ ಲೋಹಗಳಿಗೆ ಅನುಗುಣವಾಗಿ ಕ್ರಮವಾಗಿ ಹತ್ತು ಪಟ್ಟು ಅಧಿಕವಾದ ಪುಣ್ಯವನ್ನು ಆಯಾ ಪ್ರತೀಕದಲ್ಲಿ ಹೊಂದುತ್ತಾರೆ ಎಂದು ತಿಳಿ.

ಜಯಕಾಮೋಽರ್ಚಯೇದ್ ರಾಜಾ ವಿದ್ಯಾಕಾಮೋ ದ್ವಿಜೋತ್ತಮಃ ।
ವೈಶ್ಯೋ ವಾ ಧನಕಾಮೋ ಹಿ ಶೂದ್ರಃ ಪುಣ್ಯಂ ಫಲಂ ಸ್ತ್ರಿಯಃ ॥೩೩॥

ಜಯಾಕಾಂಕ್ಷಿಯಾದ ರಾಜನು ನನ್ನನ್ನು ಆರಾಧಿಸಬೇಕು. ಬ್ರಾಹ್ಮಣನು ವಿದ್ಯಾಕಾಮನೆಯಿಂದ ನನ್ನನ್ನು ಆರಾಧಿಸಬೇಕು. ವೈಶ್ಯನು ಧನಕಾಮನೆಯಿಂದ ಆರಾಧಿಸಬೇಕು. ಶೂದ್ರನು ಪುಣ್ಯವೇ ಫಲವನ್ನಾಗಿ ಚಿಂತಿಸಿ ಆರಾಧಿಸಬೇಕು. ಸ್ತ್ರೀಯರು ಪುಣ್ಯವನ್ನೇ ಫಲವನ್ನಾಗಿಸಿಕೊಂಡು ಆರಾಧಿಸಬೇಕು.

ಸರ್ವಕಾಮಾಃ ಸ್ತ್ರಿಯೋ ವಾಽಪಿ ಸರ್ವಾನ್ ಕಾಮಾನವಾಪ್ನುಯುಃ॥೩೪॥

ಅಥವಾ ಸ್ತ್ರೀಯರು ಸಮಸ್ತ ಕಾಮನೆಗಳಿಗಾಗಿ ನನ್ನನ್ನು ಆರಾಧಿಸಿದರೆ ಅವರ ಸಮಸ್ತ ಕಾಮನೆಗಳು ಪೂರ್ಣವಾಗುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ವಿಷ್ಣುಭಕ್ತ್ಯಾದಿಮಹಿಮಾವರ್ಣನಂ ನಾಮ ಷೋಡಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೇಳನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಅಶ್ವತ್ಥ, ಗೋ, ಬ್ರಾಹ್ಮಣ– ಇವರ ಮಹತ್ವವನ್ನು ಹೇಳುವ ಮೂಲಕ ಬ್ರಾಹ್ಮಣ್ಯನಾಶಕವಾದ ದುಷ್ಕರ್ಮಗಳ್ಯಾವುವೆಂದು ನಿರೂಪಿಸಿದುದು.

ಯುಧಿಷ್ಠಿರಃ

ಕೀದೃಶಾನಾಂ ತು ಶೂದ್ರಾಣಾಂ ನಾನುಗೃಹ್ಣಾಸಿ ಚಾರ್ಚನಮ್ ।
ಉದ್ವೇಗಸ್ತವ ಕಸ್ಮಾದ್ಧಿ ತನ್ಮೇ ಬ್ರೂಹಿ ಸುರೇಶ್ವರ ॥೧॥

ಯುಧಿಷ್ಠಿರ– ಎಂತಹ ಶೂದ್ರರ ಪೂಜೆಯನ್ನು ನೀನು ಸ್ವೀಕರಿಸುವುದಿಲ್ಲ? ಯಾವ ಕಾರ್ಯವು ನಿನಗೆ ಉದ್ವೇಗವನ್ನುಂಟು ಮಾಡುತ್ತದೆ? ಈ ವಿಷಯವನ್ನು ಹೇಳು.

ಶ್ರೀಭಗವಾನ್

ಅವ್ರತೇನಾಪ್ಯಭಕ್ತೇನ ಸ್ಪೃಷ್ಟಾಂ ಶೂದ್ರೇಣ ಚಾರ್ಚನಾಮ್ ।
ತಾಂ ವರ್ಜಯಾಮಿ ರಾಜೇಂದ್ರ ಶ್ವಪಾಕವಿಹಿತಾಮಿವ ॥೨॥

ಶ್ರೀಭಗವಾನ್– ರಾಜೇಂದ್ರನೇ, ವ್ರತಗಳನ್ನು ಪರಿಪಾಲಿಸದೆ ನನ್ನ ಭಕ್ತನಲ್ಲದ ಶೂದ್ರನು ಮಾಡಿದ ಪೂಜೆಯನ್ನು ಚಂಡಾಲನು ಮಾಡಿದ ಪೂಜೆಯಂತೆ ತಿರಸ್ಕರಿಸುತ್ತೇನೆ.

ಅಹಂ ಚ ಶಂಕರಶ್ಚಾಪಿ ಗಾವೋ ವಿಪ್ರಾಸ್ತಥೈವ ಚ ।
ಅಶ್ವತ್ಥೋಽಮರರೂಪಂ ಚ ತ್ರಯಮೇತದ್ ಯುಧಿಷ್ಠಿರ ॥೩॥

ಎಲ್ಲರ ಹೃದಯದಲ್ಲಿ ಅಹೇಯ ನಾಮಕನಾಗಿ ಇರುವ ನಾನು ಎಲ್ಲರಿಗೂ ಸುಖಕರನಾಗಿರುವುದರಿಂದ ಶಂಕರ ಎಂದು ಕರೆಸಿಕೊಳ್ಳುತ್ತೇನೆ. ಅಂತಹ ನಾನು ನನ್ನ ಅಧಿಷ್ಠಾನವೆನಿಸಿದ ಗೋವುಗಳು, ಬ್ರಾಹ್ಮಣ, ಅಶ್ವತ್ಥವೃಕ್ಷ ಇವುಗಳನ್ನು ಮೂರು ದೇವತಾ ಸ್ವರೂಪವೆಂದೇ ತಿಳಿದುಕೊ.

ಏತತ್ ತ್ರಯಂ ಹಿ ಮದ್ಭಕ್ತೋ ನಾವಮನ್ಯೇತ ಕರ್ಹಿಚಿತ್ ।
ಅವಮಾನಿತಮೇತತ್ತು ದಹತ್ಯಾಸಪ್ತಮಂ ಕುಲಮ್ ॥೪॥

ಗೋವುಗಳನ್ನು, ಬ್ರಾಹ್ಮಣರನ್ನು, ಅಶ್ವತ್ಥ ವೃಕ್ಷವನ್ನು ನನ್ನ ಭಕ್ತರಾದವರು ಎಂದಿಗೂ ಯಾವ ಕಾರಣದಿಂದಲೂ ಅವಮಾನ ಮಾಡಬಾರದು. ಯಾರು ಅವಮಾನ ಪಡಿಸುತ್ತಾರೋ ಅವರ ಏಳು ಕುಲಗಳು ಭಸ್ಮವಾಗುತ್ತವೆ.

ಅಶ್ವತ್ಥೋ ಬ್ರಾಹ್ಮಣಾ ಗಾವೋ ಮನ್ಮಯಾಸ್ತಾರಯಂತಿ ಹಿ ।
ತಸ್ಮಾದೇತತ್ ಪ್ರಯತ್ನೇನ ತ್ರಯಂ ಪೂಜಯ ಪಾಂಡವ ॥೫॥

ಅಶ್ವತ್ಥ, ಬ್ರಾಹ್ಮಣ, ಗೋವುಗಳಲ್ಲಿ ನಾನೇ ಅಂತರ್ಯಾಮಿಯಾಗಿದ್ದು ಅವುಗಳನ್ನು ಸೇವಿಸುವವರನ್ನು ಕಷ್ಟದಿಂದ ದಾಟಿಸುತ್ತೇನೆ. ಆದ್ದರಿಂದ ಈ ಮೂರನ್ನು ಪ್ರಯತ್ನ ಪೂರ್ವಕವಾಗಿ ನೀನು ಪೂಜಿಸು.

ಯುಧಿಷ್ಠಿರಃ

ಬ್ರಾಹ್ಮಣೇನೈವ ದೇಹೇನ ಶೂದ್ರತ್ವಂ ಕಥಮಾಪ್ನುಯಾತ್ ।
ಬ್ರಹ್ಮ ವಾ ನಶ್ಯತಿ ಕಥಂ ವಕ್ತುಂ ದೇವ ತ್ವಮರ್ಹಸಿ ॥೬॥

ಯುಧಿಷ್ಠಿರ– ಬ್ರಾಹ್ಮಣನ ಶರೀರದಲ್ಲಿಯೇ ಇದ್ದುಕೊಂಡು ಬ್ರಾಹ್ಮಣನು ಶೂದ್ರತ್ವವನ್ನು ಹೇಗೆ ಹೊಂದುತ್ತಾನೆ? ಬ್ರಾಹ್ಮಣ್ಯವು ಹೇಗೆ ನಾಶವಾಗುತ್ತದೆ? ಇದನ್ನು ನನಗೆ ತಿಳಿಸು.

ಶ್ರೀಭಗವಾನ್

ಕೂಪಸ್ಥಾನಂ ತು ಯೋ ವಿಪ್ರಃ ಕುರ್ಯಾದ್ ದ್ವಾದಶವಾರ್ಷಿಕಮ್ ।
ಸ ತೇನೈವ ಶರೀರೇಣ ಶೂದ್ರತ್ವಂ ಯಾತ್ಯಸಂಶಯಃ ॥೭॥

ಶ್ರೀಭಗವಾನ್– ಯಾವ ಬ್ರಾಹ್ಮಣನು ಹನ್ನೆರಡು ವರ್ಷಗಳ ಕಾಲ ಬಾವಿಯಲ್ಲಿಯೇ ಸ್ನಾನವನ್ನು ಮಾಡುತ್ತಾನೋ ಅವನು ಶಾರೀರಕವಾಗಿ ಶೂದ್ರತ್ವವನ್ನು ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯಸ್ತು ರಾಜಾಶ್ರಯೇಣೈವ ಜೀವೇದ್ ದ್ವಾದಶವಾರ್ಷಿಕಮ್ ।
ಸ ಶೂದ್ರತ್ವಂ ವ್ರಜೇದ್ ವಿಪ್ರೋ ವೇದಾನಾಂ ಪಾರಗೋಽಪಿ ಸನ್ ॥

ಯಾವ ಬ್ರಾಹ್ಮಣನು ಹನ್ನೆರಡು ವರ್ಷಗಳ ಕಾಲ ರಾಜಾಶ್ರಯದಲ್ಲಿಯೇ ಜೀವನವನ್ನು ಕಳೆಯುತ್ತಾನೋ ಅವನು ವೇದ-ವೇದಾಂಗ ಪಾರಂಗತನಾಗಿದ್ದರೂ ಶೂದ್ರತ್ವವನ್ನು ಹೊಂದುತ್ತಾನೆ.

ಪತ್ತನೇ ನಗರೇ ವಾಽಪಿ ಯೋ ದ್ವಾದಶ ಸಮಾ ವಸೇತ್ ।
ಸ ಶೂದ್ರತ್ವಂ ವ್ರಜೇದ್ ವಿಪ್ರೋ ನಾತ್ರ ಕಾರ್ಯಾ ವಿಚಾರಣಾ ॥೯॥

ಯಾವ ಬ್ರಾಹ್ಮಣನು ಪಟ್ಟಣದಲ್ಲೇ ಆಗಲಿ, ನಗರದಲ್ಲೇ ಆಗಲಿ, ಹನ್ನೆರಡು ವರ್ಷಗಳ ಕಾಲ ವಾಸ ಮಾಡುತ್ತಾನೋ ಅವನು ಶೂದ್ರತ್ವವನ್ನು ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಉತ್ಪಾದಯತಿ ಯಃ ಪುತ್ರಂ ಶೂದ್ರ್ಯಾಯಾಂ ಕಾಮತೋ ದ್ವಿಜಃ ।
ತಸ್ಯ ಕಾಯಗತಂ ಬ್ರಹ್ಮ ಸದ್ಯ ಏವ ವಿನಶ್ಯತಿ ॥೧೦॥

ಯಾವ ಬ್ರಾಹ್ಮಣನು ಕಾಮುಕನಾಗಿ ಶೂದ್ರಸ್ತ್ರೀಯಲ್ಲಿ ಸಂತಾನವನ್ನು ಹೊಂದುತ್ತಾನೋ ಅವನ ದೇಹದಲ್ಲಿರುವ ಬ್ರಾಹ್ಮಣ್ಯವು ಕೂಡಲೇ ನಾಶವನ್ನು ಹೊಂದುತ್ತದೆ.

ಮದ್ಯಪಸ್ತ್ರೀಮುಖಂ ಮೋಹಾದ್ ಆಸ್ವಾದಯತಿ ಯೋ ದ್ವಿಜಃ ।
ತಸ್ಯ ಕಾಯಗತಂ ಬ್ರಹ್ಮ ಸದ್ಯ ಏವ ವಿನಶ್ಯತಿ ॥೧೧॥

ಯಾವ ಬ್ರಾಹ್ಮಣನು ಮದ್ಯಪಾನವನ್ನು ಮಾಡುವ ಸ್ತ್ರೀಯ ಮುಖವನ್ನು ಚುಂಬಿಸುತ್ತಾನೋ ಅವನ ದೇಹದಲ್ಲಿರುವ ಬ್ರಾಹ್ಮಣ್ಯವು ಸದ್ಯದಲ್ಲಿಯೇ ನಾಶ ಹೊಂದುತ್ತದೆ.

ಯಃ ಸೋಮತಿಲಕಾಂ ವಿಪ್ರಃ ಕೇವಲಂ ಭಕ್ಷಯೇದ್ ವೃಥಾ ।
ತಸ್ಯ ಕಾಯಗತಂ ಬ್ರಹ್ಮ ಸದ್ಯ ಏವ ವಿನಶ್ಯತಿ ॥೧೨॥

ಯಾವ ಬ್ರಾಹ್ಮಣನು ಸಂತೋಷಕ್ಕಾಗಿ ಸೋಮಲತೆಯ ರಸವನ್ನು ಭಕ್ಷಿಸುತ್ತಾನೋ ಅವನ ದೇಹದಲ್ಲಿರುವ ಬ್ರಾಹ್ಮಣ್ಯವು ಸದ್ಯದಲ್ಲೇ ನಾಶವನ್ನು ಹೊಂದುತ್ತದೆ.

ಮೈಥುನಂ ಕುರುತೇ ಯಸ್ತು ಜಿಹ್ವಾಯಾಂ ಬ್ರಾಹ್ಮಣೋ ನೃಪ ।
ತಸ್ಯ ಕಾಯಗತಂ ಬ್ರಹ್ಮ ಸದ್ಯ ಏವ ವಿನಶ್ಯತಿ ॥೧೩॥

ಯಾವ ಬ್ರಾಹ್ಮಣನು ಕಾಮುಕನಾಗಿ ನಾಲಿಗೆಯಿಂದ ಮೈಥುನವನ್ನು ಮಾಡುತ್ತಾನೋ ಅವನ ದೇಹದಲ್ಲಿರುವ ಬ್ರಾಹ್ಮಣ್ಯವು ಕೂಡಲೇ ನಾಶವನ್ನು ಹೊಂದುತ್ತದೆ.

ವಿಪ್ರತ್ವಂ ದುರ್ಲಭಂ ಪ್ರಾಪ್ಯ ದುರ್ಮಾರ್ಗೈರೇವಮಾದಿಭಿಃ ।
ವಿನಾಶಯಂತಿ ಯೇ ತತ್ತು ತಾನ್ ಶೋಚಾಮಿ ಯುಧಿಷ್ಠಿರ ॥೧೪॥

ಯಾವ ಬ್ರಾಹ್ಮಣನು ದುರ್ಲಭವಾದ ಬ್ರಾಹ್ಮಣ್ಯವನ್ನು ಹೊಂದಿ ದುರಾಚಾರಿಯಾಗಿ, ದುಷ್ಟಮಾರ್ಗದಲ್ಲಿಯೇ ಸಂಚರಿಸುತ್ತಾ ಬ್ರಾಹ್ಮಣ್ಯವನ್ನು ನಾಶಪಡಿಸಿಕೊಳ್ಳುತ್ತಾನೋ ಅವನ ವಿಷಯದಲ್ಲಿ ನಾನು ಅನುಕಂಪ ಪಡುತ್ತೇನೆ.

ತಸ್ಮಾತ್ ಸರ್ವಪ್ರಯತ್ನೇನ ಮತ್ಪ್ರಿಯೋ ಯೋ ಯುಧಿಷ್ಠಿರ ।
ಜಾತಿಭ್ರಂಶಕರಂ ಕರ್ಮ ನ ಕುರ್ಯಾದೀದೃಶಂ ದ್ವಿಜಃ ॥೧೫॥

ಆದ್ದರಿಂದ ಸರ್ವಪ್ರಯತ್ನದಿಂದಲೂ ನನ್ನ ಪ್ರೀತಿಪಾತ್ರನಾದ ಬ್ರಾಹ್ಮಣನು ಜಾತಿಯನ್ನು ನಾಶಪಡಿಸುವಂತಹ ದುಷ್ಕರ್ಮಗಳನ್ನು ಎಂದಿಗೂ ಮಾಡಬಾರದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಬ್ರಾಹ್ಮಣಜನ್ಮನಿ ಶೂದ್ರತ್ವಪ್ರಾಪ್ತಿಕಥನಂ ನಾಮ ಸಪ್ತದಶೋತ್ತರಶತತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೆಂಟನೆಯ ಅಧ್ಯಾಯ

ಕೃಷ್ಣನು ಯುಧಿಷ್ಠಿರನನ್ನು ಕುರಿತು ಪಾಲಾಶವಿಧಿಯ ಪ್ರಕಾರವನ್ನು ಹೇಳಿದುದು. ತೀರ್ಥಯಾತ್ರೆಯನ್ನು ಮಾಡಲು ಸಾಮರ್ಥ್ಯವಿಲ್ಲದವರಿಗೆ ತೀರ್ಥಯಾತ್ರೆಗೆ ಪ್ರತಿನಿಧಿಯಾದ ಕರ್ಮಗಳನ್ನು ವರ್ಣಿಸಿದುದು. ಭಗವದ್ಭಕ್ತನ ಲಕ್ಷಣವನ್ನು ಹೇಳುವ ಮೂಲಕ ಅವನನ್ನು ಪ್ರಶಂಸಿದುದು. ಸ್ವಯಂ ತನ್ನ ಸರ್ವೋತ್ತಮತ್ವವನ್ನು ಹೇಳುವ ಮೂಲಕ ತಾನು ಹೇಳಿದ ಧರ್ಮಗಳನ್ನು ಕೇಳಿದವರಿಗೆ ಫಲವನ್ನು ನಿರೂಪಿಸಿದುದು. ಬಳಿಕ ಯುಧಿಷ್ಠಿರಾದಿಗಳ ಆಮಂತ್ರಣದಿಂದ ದಾರುಕನಿಂದ ತರಲ್ಪಟ್ಟ ರಥವನ್ನು ಏರಿಕೊಂಡು ದ್ವಾರಕೆಯನ್ನು ಕುರಿತು ಹೊರಟಿದುದು.

ಯುಧಿಷ್ಠಿರಃ

ದೇಶಾಂತರಗತೇ ವಿಪ್ರೇ ಸಂಯುಕ್ತೇ ಕಾಲಧರ್ಮಣಾ ।
ಶರೀರನಾಶೇ ಸಂಪ್ರಾಪ್ತೇ ಕಥಂ ಪ್ರೇತವಿಕಲ್ಪನಾ ॥೧॥

ಯುಧಿಷ್ಠಿರ– ಕೃಷ್ಣನೇ, ಪರದೇಶಕ್ಕೆ ಹೋಗಿರುವ ಬ್ರಾಹ್ಮಣನು ಕಾಲಧರ್ಮ ಸಂಯೋಗದಿಂದ ಅಲ್ಲಿಯೇ ಮೃತನಾದರೆ ಅವನಿಗೆ ಪ್ರೇತಸಂಸ್ಕಾರಗಳನ್ನು ಹೇಗೆ ಮಾಡಬೇಕು?

ಶ್ರೀಭಗವಾನ್

ಶ್ರೂಯತಾಮಾಹಿತಾಗ್ನೇಷು ತಥಾಭೂತಸ್ಯ ಸಂಸ್ಕ್ರಿಯಾ ।
ಪಾಲಾಶವೃನ್ಮಯೈಃ ಪ್ರತಿಮಾ ಕರ್ತವ್ಯಾ ಕಲ್ಪಚೋದಿತಾ ॥೨॥

ಶ್ರೀಭಗವಾನ್– ಯುಧಿಷ್ಠಿರನೇ, ಅಗ್ನಿಹೋತ್ರಿಯಾದ ಬ್ರಾಹ್ಮಣನು ದೇಶಾಂತರದಲ್ಲಿ ಮರಣ ಹೊಂದಿದರೆ, ಅವನ ದೇಹವು ಅಲ್ಲಿಯೇ ನಷ್ಟವಾಗಿ ಹೋದರೆ ಪ್ರೇತ ಸಂಸ್ಕಾರ ಕಲ್ಪದ ಅನುಸಾರವಾಗಿ ಮುತ್ತುಗದ ಕಡ್ಡಿಗಳಿಂದ ಅವನ ಪ್ರತಿಕೃತಿಯನ್ನು ನಿರ್ಮಿಸಬೇಕು.

ತ್ರೀಣಿ ಷಷ್ಟಿಶತಾನ್ಯಾಹುರಸ್ಥೀನ್ಯಸ್ಯ ನರಾಧಿಪ ।
ತೇಷಾಂ ವಿಕಲ್ಪನಾ ಕಾರ್ಯಾ ಯಥಾಶಾಸ್ತ್ರವಿನಿಶ್ಚಯಮ್ ॥೩॥

ಮನುಷ್ಯನ ಶರೀರದಲ್ಲಿ ಮುನ್ನೂರ ಅರವತ್ತು ಮೂಳೆಗಳಿವೆ ಎಂದು ವಿದ್ವಾಂಸರು ಹೇಳುತ್ತಾರೆ. ಈ ಎಲ್ಲವನ್ನೂ ಶಾಸ್ತ್ರೋಕ್ತ ರೀತಿಯಲ್ಲಿ ಕಲ್ಪಿಸಿಕೊಂಡು ಮುತ್ತುಗದ ಕಡ್ಡಿಗಳಿಂದ ಕಲ್ಪಿತವಾದ ಬ್ರಾಹ್ಮಣನ ಪ್ರತಿಕೃತಿಯನ್ನು ದಹಿಸಬೇಕು.

ಅಶೀತ್ಯರ್ಧಂ ಶಿರಸಿ ಚ ಗ್ರೀವಾಯಾಂ ದಶ ಏವ ಚ ।
ಬಾಹ್ವೋಶ್ಚಾಪಿ ಶತಂ ದದ್ಯಾತ್ ಅಂಗುಲೀಷು ಪುನರ್ದಶ ॥೪॥

ತಲೆಯಲ್ಲಿ ನಲವತ್ತು ಅಸ್ಥಿಗಳನ್ನೂ, ಕುತ್ತಿಗೆಯಲ್ಲಿ ಹತ್ತು ಮೂಳೆಗಳನ್ನೂ, ಎರಡು ಬಾಹುಗಳಲ್ಲಿ ನೂರು, ನೂರು ಮೂಳೆಗಳನ್ನೂ, ಅಂಗುಲಿಗಳಲ್ಲಿ ಹತ್ತು ಮೂಳೆಗಳನ್ನೂ,

ಉರಸಿ ತ್ರಿಂಶತಂ ದದ್ಯಾಜ್ಜಠರೇ ಚಾಪಿ ವಿಂಶತಿಃ ।
ವೃಷಣೇ ದ್ವಾದಶಾರ್ಧಂ ತು ಶಿಶ್ನೇ ಚಾಷ್ಟಾರ್ಧಮೇವ ಚ ॥೫॥

ಎದೆಯಲ್ಲಿ ಮೂವತ್ತು ಮೂಳೆಗಳನ್ನೂ, ಜಠರದಲ್ಲಿ ಇಪ್ಪತ್ತು ಮೂಳೆಗಳನ್ನೂ, ವೃಷಣದಲ್ಲಿ ಹನ್ನೆರಡು ಮೂಳೆಗಳನ್ನೂ, ಶಿಶ್ನದಲ್ಲಿ ನಾಲ್ಕು ಮೂಳೆಗಳನ್ನೂ;

ದದ್ಯಾತ್ತು ಶತಮೂರ್ವೋಸ್ತು ಷಷ್ಟ್ಯರ್ಧಂ ಜಾನುಜಂಘಯೋಃ ।
ದಶ ದದ್ಯಾಚ್ಚರಣಯೋರೇಷಾ ಪ್ರೇತಸ್ಯ ನಿಷ್ಕೃತಿಃ ॥೬॥

ತೊಡೆಗಳಲ್ಲಿ ನೂರು ಮೂಳೆಗಳನ್ನೂ, ಜಾನುಜಂಘಗಳಲ್ಲಿ ಮೂವತ್ತು ಮೂವತ್ತು ಮೂಳೆಗಳನ್ನೂ, ಚರಣಗಳಲ್ಲಿ ಹತ್ತು-ಹತ್ತು ಮೂಳೆಗಳನ್ನು ಚಿಂತಿಸಿ, ಅದರ ಸ್ಥಾನಗಳಲ್ಲಿ ಮುತ್ತುಗದ ಕಡ್ಡಿಗಳನ್ನು ಇಟ್ಟು, ಗತಿಸಿದ ವ್ಯಕ್ತಿಯ ಸಂಸ್ಕಾರವನ್ನು ಮಾಡಬೇಕು.

ಯುಧಿಷ್ಠಿರಃ

ವಿಶೇಷತೀರ್ಥಂ ಸರ್ವೇಷಾಮಶಕ್ತಾನಾಮನುಗ್ರಹಾತ್ ।
ಭಕ್ತಾನಾಂ ತಾರಣಾರ್ಥಂ ವೈ ವಕ್ತುಮರ್ಹಸಿ ಧರ್ಮತಃ ॥೭॥

ಯುಧಿಷ್ಠಿರ– ಶ್ರೀಕೃಷ್ಣನೇ, ತೀರ್ಥಯಾತ್ರೆಯನ್ನು ಮಾಡಲು ಅಶಕ್ತರಾದ ಭಕ್ತರನ್ನು ಉದ್ಧರಿಸುವ ಸಲುವಾಗಿ ಧರ್ಮಾನುಸಾರವಾಗಿ ವಿಶೇಷವಾದ ತೀರ್ಥಗಳನ್ನು ವಿವರಿಸಿ ಹೇಳು.

ಶ್ರೀಭಗವಾನ್

ಪ್ರವರಂ ಸರ್ವತೀರ್ಥಾನಾಂ ಸತ್ಯಂ ಗಾಯಂತಿ ಸಾಮಗಾಃ ।
ಸತ್ಯಸ್ಯ ವಚನಂ ತೀರ್ಥಮಹಿಂಸಾ ತೀರ್ಥಮುಚ್ಯತೇ ॥೮॥

ಶ್ರೀಭಗವಾನ್– ಸಮಸ್ತ ತೀರ್ಥಗಳಲ್ಲಿ ಸತ್ಯವೇ ಶ್ರೇಷ್ಠವಾದ ತೀರ್ಥವೆಂದು ಹೇಳುತ್ತಾರೆ. ಸಾಮವೇದಜ್ಞರ ಅಭಿಪ್ರಾಯವು ಹೀಗಿದೆ. ಸತ್ಯವಚನವೂ ತೀರ್ಥ, ಅಹಿಂಸೆಯೂ ತೀರ್ಥವೆನಿಸಿದೆ.

ತಪಸ್ತೀರ್ಥಂ ದಯಾ ತೀರ್ಥಂ ಶೀಲಂ ತೀರ್ಥಂ ಯುಧಿಷ್ಠಿರ ।
(ಅಲ್ಪಸಂತೋಷಣಂ ತೀರ್ಥಂ ನಾರೀ ತೀರ್ಥಂ ಪತಿವ್ರತಾ ॥೯॥

ಯುಧಿಷ್ಠಿರನೇ, ತಪಸ್ಸೂ ತೀರ್ಥ, ದಯೆಯೂ ತೀರ್ಥ, ಶೀಲವೂ ತೀರ್ಥ, ಅಲ್ಪಸಂತೋಷದಿಂದ ಬದುಕುವುದೂ ತೀರ್ಥ. ಪ್ರಾಮಾಣಿಕವಾಗಿ ಪತಿವ್ರತೆಯಾದ ಸ್ತ್ರೀಯನ್ನು ರಕ್ಷಿಸುವುದೂ ತೀರ್ಥ ಎನಿಸಿದೆ.

ಸಂತುಷ್ಟೋ ಬ್ರಾಹ್ಮಣಸ್ತೀರ್ಥಂ ಜ್ಞಾನಂ ವಾ ತೀರ್ಥಮುಚ್ಯತೇ ।
ಮದ್ಭಕ್ತಃ ಸತತಂ ತೀರ್ಥಂ ಶಂಕರಸ್ಯ ವಿಶೇಷತಃ ॥೧೦॥

ಸಂತುಷ್ಟನಾದ ಬ್ರಾಹ್ಮಣನು ತೀರ್ಥಸ್ವರೂಪನು. ಜ್ಞಾನವನ್ನು ತೀರ್ಥವೆನ್ನುತ್ತಾರೆ. ನನ್ನ ಭಕ್ತರೆಲ್ಲರೂ ತೀರ್ಥರೂಪರೇ. ಅದರಲ್ಲಿಯೂ ವಿಶೇಷವಾಗಿ ಶಂಕರನ ಭಕ್ತರು ತೀರ್ಥರಾಗಿದ್ದಾರೆ.

ವ್ಯಾಖ್ಯಾನ ವಿಶೇಷ– ಶಂಕರ ಎಂದರೆ ಹಿಂದೆ ಲಕ್ಷಾಲಂಕಾರದಲ್ಲಿ ತಿಳಿಸಿದಂತೆ ಸಮಸ್ತ ಜೀವರ ಅಂತರ್ಯಾಮಿಯಾಗಿದ್ದು ಎಲ್ಲರಿಗೂ ಸಂತೋಷವನ್ನುಂಟು ಮಾಡುವ ಪರಬ್ರಹ್ಮ ಎಂದು ಅರ್ಥ.

ಯತಯಸ್ತೀರ್ಥಮಿತ್ಯೇವಂ ವಿದ್ವಾಂಸಸ್ತೀರ್ಥಮುಚ್ಯತೇ ।
ಶರಣ್ಯಪುರುಷಸ್ತೀರ್ಥಮಭಯಂ ತೀರ್ಥಮುಚ್ಯತೇ ॥೧೧॥

ಸಂನ್ಯಾಸಿಗಳು, ವಿದ್ವಾಂಸರು ತೀರ್ಥರೆನಿಸಿದ್ದಾರೆ. ಇತರರಿಗೆ ಆಶ್ರಯವನ್ನು ಕೊಡುವವರು ತೀರ್ಥರು. ಜೀವಕ್ಕೆ ಅಭಯದಾನವನ್ನು ಮಾಡುವವರು ತೀರ್ಥರೆನಿಸಿದ್ದಾರೆ.

ವಿದ್ಯಾವಿನೀತಕಸ್ತೀರ್ಥಂ ಧರ್ಮವಕ್ತಾ ವಿಶೇಷತಃ ॥೧೨॥

ವಿದ್ಯೆಯನ್ನು ಪಡೆದು ವಿನೀತನಾಗಿ ಅದನ್ನು ಬೋಧಿಸುವವನು ತೀರ್ಥನೆನಿಸಿದ್ದಾನೆ. ಧರ್ಮವನ್ನು ಬೋಧಿಸುವವನೂ ತೀರ್ಥ ಎಂದೇ ಕರೆಯಲ್ಪಟ್ಟಿದ್ದಾನೆ.

ತ್ರೈಲೋಕ್ಯೇಽಸ್ಮಿನ್ ನಿರುದ್ವಿಗ್ನೋ ನ ಬಿಭೇಮಿ ಕುತಶ್ಚನ ।
ನ ದಿವಾ ಯದಿ ವಾ ರಾತ್ರಾವುದ್ವೇಗಃ ಶೂದ್ರಲಂಘನಾತ್ ॥೧೩॥

ಮೂರು ಲೋಕಗಳಲ್ಲಿಯೂ ನಾನು ನಿರುದ್ವಿಗ್ನನಾಗಿಯೇ ಇದ್ದೇನೆ. ಹಗಲಿನಲ್ಲಾಗಲಿ, ರಾತ್ರಿಯಲ್ಲಾಗಲಿ ನನಗೆ ಯಾರಿಂದಲೂ ಭಯವಿಲ್ಲ. ಆದರೆ ಶೂದ್ರನು ಮರ್ಯಾದೆಯನ್ನು ಮೀರಿ ನಡೆದುಕೊಂಡಾಗ ಮಾತ್ರ ನಾನು ಉದ್ವಿಗ್ನನಾಗುತ್ತೇನೆ.

ನ ಭಯಂ ದೇವದೈತೇಭ್ಯೋ ರಕ್ಷೋಭ್ಯಶ್ಚೈವ ಮೇ ನೃಪ ।
ಶೂದ್ರವಕ್ತ್ರಚ್ಚ್ಯುತಾದ್ ಬ್ರಾಹ್ಮಾದ್ಭಯಂ ತು ಮಮ ಸರ್ವದಾ ॥೧೪॥

ಯುಧಿಷ್ಠಿರನೇ, ನನಗೆ ದೇವತೆಗಳಿಂದಾಗಲಿ, ರಾಕ್ಷಸರಿಂದಾಗಲಿ, ದೈತ್ಯರಿಂದಾಗಲಿ ಭಯ ಇರುವುದಿಲ್ಲ. ಆದರೆ ಶೂದ್ರರ ಬಾಯಿಂದ ವೈದಿಕ ಮಂತ್ರಗಳ ಉಚ್ಚಾರಣೆಯನ್ನು ಕೇಳಿಸಿಕೊಂಡರೆ ಮಹಾಭಯವನ್ನು ಹೊಂದುತ್ತೇನೆ.

ತಸ್ಮಾತ್ ಸಪ್ರಣವಂ ಶೂದ್ರೋ ಮನ್ನಾಮಾಪಿ ನ ಕೀರ್ತಯೇತ್ ।
ಪ್ರಣವಂ ಹಿ ಪರಂ ಲೋಕೇ ಬ್ರಹ್ಮ ಬ್ರಹ್ಮವಿದೋ ವಿದುಃ ॥೧೫॥

ಆದ್ದರಿಂದ ಶೂದ್ರನು ನನ್ನ ನಾಮವನ್ನು ಪ್ರಣವಮಂತ್ರದ ಜೊತೆಗೆ ಉಚ್ಚರಿಸಬಾರದು. ವೇದಜ್ಞರಾದ ವಿದ್ವಾಂಸರು ಪ್ರಣವವನ್ನೇ ಶ್ರೇಷ್ಠವಾದ ವೇದಮಂತ್ರವೆಂದು ಕರೆದಿದ್ದಾರೆ.

ದ್ವಿಜಶುಶ್ರೂಷಣಂ ಧರ್ಮಃ ಶೂದ್ರಾಣಾಂ ಭಕ್ತಿತೋ ಮಯಿ ।
ತೇನ ಗಚ್ಛಂತಿ ತೇ ಸ್ವರ್ಗಂ ಚಿಂತಯಂತೋ ಹಿ ಮಾಂ ಸದಾ ॥೧೬॥

ಶೂದ್ರರಿಗೆ ನನ್ನಲ್ಲಿ ಭಕ್ತಿ ಇರುವುದಕ್ಕಿಂತಲೂ ಹೆಚ್ಚಾಗಿ ಬ್ರಾಹ್ಮಣರ ಸೇವೆಯೇ ಮುಖ್ಯಧರ್ಮವಾಗಿದೆ. ಇದರಿಂದಲೇ ಅವರು ಸ್ವರ್ಗಕ್ಕೆ ಹೋಗುತ್ತಾರೆ. ಬ್ರಾಹ್ಮಣರ ಅಂತರ್ಯಾಮಿಯಾದ ನನ್ನನ್ನು ಚಿಂತಿಸುವುದೇ ಅವರಿಗೆ ಸುಖಸಾಧನವಾಗಿದೆ.

ದ್ವಿಜಶುಶ್ರೂಷಯಾ ಶೂದ್ರಃ ಪರಂ ಶ್ರೇಯೋऽಧಿಗಚ್ಛತಿ ।
ದ್ವಿಜಶುಶ್ರೂಷಣಾದನ್ಯನ್ನಾಸ್ತಿ ಶೂದ್ರಸ್ಯ ನಿಷ್ಕೃತಿಃ ॥೧೭॥

ದ್ವಿಜರ ಸೇವೆಯಿಂದಲೇ ಶೂದ್ರನು ಶ್ರೇಯಸ್ಸನ್ನು ಹೊಂದುತ್ತಾನೆ, ಹೊರತಾಗಿ ಅವನ ಉದ್ಧಾರಕ್ಕೆ ಬೇರೆ ಇನ್ನು ಯಾವ ಮಾರ್ಗವೂ ಇರುವುದಿಲ್ಲ.

ರಾಗೋ ದ್ವೇಷಶ್ಚ ಮೋಹಶ್ಚ ಪಾರುಷ್ಯಂ ಚಾನೃಶಂಸತಾ ।
ಶಾಠ್ಯಂ ಚ ದೀರ್ಘವೈರಿತ್ವಮತಿಮಾನಮನಾರ್ಜವಮ್ ॥೧೮॥

ರಾಗ, ದ್ವೇಷ, ಮೋಹ, ಕಾಠಿಣ್ಯ , ಸುಳ್ಳುಹೇಳುವಿಕೆ, ಶಾಠ್ಯ , ದೀರ್ಘ ವೈರತ್ವ, ಅತಿಯಾದ ಜಂಭ, ವಂಚಕತನ;

ಅನೃತಂ ಚಾಪವಾದಶ್ಚ ಪೈಶುನ್ಯಮತಿಲೋಭತಾ ।
ಹಿಂಸಾ ಸ್ತೇಯೋ ಮೃಷಾವಾದೋ ವಂಚನಾ ದ್ವೇಷಲೋಭತಾ ॥೧೯॥

ಸುಳ್ಳುಹೇಳುವಿಕೆ, ಅಪವಾದ, ಚಾಡಿ ಹೇಳುವ ಬುದ್ಧಿ, ಅತಿಲೋಭತ್ವ, ಹಿಂಸೆ, ಕಳ್ಳತನ, ಕೆಟ್ಟವಾದಗಳನ್ನು ಮಂಡಿಸುವುದು, ವಂಚನೆ, ದ್ವೇಷ, ಲೋಭ;

ಅಬುದ್ಧಿತಾ ಚ ನಾಸ್ತಿಕ್ಯಂ ಭಯಮಾಲಸ್ಯಮೇವ ಚ ।
ಅಶೌಚಂ ಚಾಕೃತಜ್ಞತ್ವಂ ಡಂಭತಾ ಸ್ತಂಭ ಏವ ಚ ॥೨೦॥

ದಡ್ಡತನ, ನಾಸ್ತಿಕ್ಯ , ಭಯ, ಆಲಸ್ಯ , ಅಶೌಚ, ಕೃತಘ್ನತೆ, ಜಂಭ, ಸ್ತಂಭ;

ನಿಕೃತಿಶ್ಚಾಪ್ಯವಿಜ್ಞಾನಂ ಜಾತಕೇ ಶೂದ್ರಮಾವಿಶೇತ್ ॥೨೧॥

ಕೆಟ್ಟತನ ಮಾಡಿಯೂ ಅದನ್ನು ತಿಳಿಯದಿರುವಿಕೆ ಈ ಎಲ್ಲ ದೋಷಗಳು ಶೂದ್ರನಲ್ಲಿ ಆವಿಷ್ಟವಾಗಿರುತ್ತವೆ.

ದೃಷ್ಟ್ವಾ ಪಿತಾಮಹಃ ಶೂದ್ರಮಭಿಭೂತಂ ತು ತಾಮಸೈಃ ।
ದ್ವಿಜಶುಶ್ರೂಷಣಂ ಧರ್ಮಂ ಶೂದ್ರಾಣಾಂ ತು ಪ್ರಯುಕ್ತವಾನ್ ॥೨೨॥

ಪಿತಾಮಹನೆನಿಸಿದ ಚತುರ್ಮುಖ ಬ್ರಹ್ಮನು ಇಷ್ಟೆಲ್ಲಾ ತಾಮಸಗುಣಗಳು ಶೂದ್ರನಲ್ಲಿ ಇವೆಯೆಂದು ತಿಳಿದು, ಶೂದ್ರರಿಗೆ ಬ್ರಾಹ್ಮಣರ ಸೇವೆಯೇ ಧರ್ಮವೆಂದು ವಿಧಾನ ಮಾಡಿದ್ದಾನೆ.

ನಶ್ಯಂತಿ ತಾಮಸಾ ಭಾವಾಃ ಶೂದ್ರಸ್ಯ ದ್ವಿಜಭಕ್ತಿತಃ ॥೨೩॥

ಬ್ರಾಹ್ಮಣರನ್ನು ಸೇವಿಸುವುದರಿಂದ ಶೂದ್ರರಲ್ಲಿರುವ ತಾಮಸಗುಣಗಳು ನಾಶ ಹೊಂದುತ್ತವೆ.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಂ ಮೂರ್ಧ್ನಾ ಗೃಹ್ಣಾಮಿ ಶೂದ್ರತಃ ॥೨೪॥

ಶೂದ್ರನಾದರೂ ಭಕ್ತಿಯಿಂದ ಕೂಡಿದವನಾಗಿ ನನಗೆ ಪತ್ರ , ಪುಷ್ಪ, ಫಲ, ನೀರು ಇವುಗಳನ್ನು ತಂದು ಸಮರ್ಪಿಸಿದರೆ ಅದನ್ನು ಶಿರಸಾ ಧಾರಣೆ ಮಾಡುತ್ತೇನೆ.

ಅಂತ್ಯಜೋ ವಾಽಪಿ ಯಃ ಕಶ್ಚಿತ್ ಸರ್ವಪಾಪಸಮನ್ವಿತಃ ।
ಯದಿ ಮಾಂ ಸತತಂ ಧ್ಯಾಯೇತ್ ಸರ್ವಪಾಪೈಃ ಪ್ರಮುಚ್ಯತೇ ॥೨೫॥

ಯಾವ ಅಂತ್ಯಜನಾದ ವ್ಯಕ್ತಿಯು ಸಮಸ್ತ ಪಾಪಗಳಿಂದ ಕೂಡಿಕೊಂಡಿದ್ದರೂ ನನ್ನನ್ನು ನಿರಂತರ ಧ್ಯಾನಿಸಿದ್ದಲ್ಲಿ ಅವನು ಸಮಸ್ತ ಪಾಪಗಳಿಂದ ಬಿಡುಗಡೆ ಹೊಂದುತ್ತಾನೆ.

ವಿದ್ಯಾವಿನಯಸಂಪನ್ನಾ ಬ್ರಾಹ್ಮಣಾ ವೇದಪಾರಗಾಃ ।
ಮಯಿ ಭಕ್ತಿಂ ನ ಕುರ್ವಂತಿ ಚಂಡಾಲಸದೃಶಾ ಹಿ ತೇ ॥೨೬॥

ವಿದ್ಯಾವಿನಯ ಸಂಪನ್ನರಾಗಿದ್ದರೂ, ವೇದವೇದಾಂಗ ಪಾರಂಗತರಾಗಿದ್ದರೂ ಬ್ರಾಹ್ಮಣರು ನನ್ನಲ್ಲಿ ಭಕ್ತಿಯಿಲ್ಲದವರಾಗಿದ್ದರೆ ಚಂಡಾಲರಿಗೆ ಸದೃಶರಾಗಿದ್ದಾರೆ.

ವೃಥಾ ದತ್ತಂ ವೃಥಾ ಜಪ್ತಂ ವೃಥಾ ಚೇಷ್ಟಂ ವೃಥಾ ಹುತಮ್ ।
ವೃಥಾऽऽತಿಥ್ಯಂ ಚ ತತ್ ತಸ್ಯ ಯೋ ನ ಭಕ್ತೋ ಮಮ ದ್ವಿಜಃ ॥೨೭॥

ದ್ವಿಜನು ನನ್ನ ಭಕ್ತನಾಗಿರದಿದ್ದರೆ ಅವನು ಮಾಡುವ ದಾನ, ತಪಸ್ಸು, ಯಜ್ಞ, ಹೋಮ, ಅತಿಥಿ ಸತ್ಕಾರ ಇವೆಲ್ಲವೂ ವ್ಯರ್ಥವಾಗುತ್ತವೆ.

ಯತ್ ಕೃತಂ ಚ ಹುತಂ ಚಾಪಿ ಯದಿಷ್ಟಂ ದತ್ತಮೇವ ಚ ।
ಅಭಕ್ತಿಮತ್ಕೃತಂ ಸರ್ವಂ ರಾಕ್ಷಸಾ ಏವ ಭುಂಜತೇ ॥೨೮॥

ಮಾಡಿದ ಸತ್ಕರ್ಮಗಳು, ಹೋಮ, ಪೂಜೆ, ದಾನ, ಇವೆಲ್ಲವನ್ನು ಭಕ್ತಿಹೀನನಾಗಿ ಮಾಡಿದರೆ ಅವುಗಳ ಫಲವನ್ನು ರಾಕ್ಷಸರೇ ಅನುಭವಿಸುತ್ತಾರೆ.

ಸ್ಥಾವರೇ ಜಂಗಮೇ ವಾऽಪಿ ಸರ್ವಭೂತೇಷು ಪಾಂಡವ ।
ಸಮತ್ವೇನ ಯದಾ ಕುರ್ಯಾನ್ಮದ್ಭಕ್ತೋ ಮಿತ್ರಶತ್ರುಷು ॥೨೯॥

ಮನುಷ್ಯನು ಸಮಸ್ತ ಸ್ಥಾವರ-ಜಂಗಮಾತ್ಮಕವಾದ ಎಲ್ಲ ಪ್ರಾಣಿಗಳನ್ನು, ಮಿತ್ರರನ್ನು, ಶತ್ರುಗಳನ್ನು ಸಮಾನವಾಗಿ ಯಾವಾಗ ಕಾಣುತ್ತಾನೋ ಆಗಲೇ ಅವನು ನನ್ನ ನಿಜವಾದ ಭಕ್ತನಾಗುತ್ತಾನೆ.

ಆನೃಶಂಸ್ಯಮಹಿಂಸಾ ಚ ದಮಃ ಸತ್ಯಂ ತಥಾऽऽರ್ಜವಮ್ ।
ಅದ್ರೋಹಶ್ಚೈವ ಭೂತಾನಾಂ ಮದ್ವ್ರತಾನಾಂ ವ್ರತಂ ನೃಪ ॥೩೦॥

ಕರುಣೆ, ಅಹಿಂಸೆ, ಸತ್ಯ , ಅದ್ರೋಹ, ಇಂದ್ರಿಯನಿಗ್ರಹ, ಆರ್ಜವ ಇವೆಲ್ಲವೂ ನನ್ನ ಭಕ್ತರು ಪರಿಪಾಲಿಸುವ ವ್ರತಗಳೆನಿಸಿವೆ.

ನಮ ಇತ್ಯೇವ ಯೋ ಬ್ರೂಯಾನ್ಮದ್ಭಕ್ತಂ ಶ್ರದ್ಧಯಾऽನ್ವಿತಃ ।
ತಸ್ಯಾಕ್ಷಯೋ ಭವೇಲ್ಲೋಕಃ ಶ್ವಪಾಕಸ್ಯಾಪಿ ಪಾಂಡವ ॥೩೧॥

ಯಾವ ಮನುಷ್ಯನು ನನ್ನ ಭಕ್ತನಿಗೆ ಶ್ರದ್ಧೆಯಿಂದ ನಮಃ ಎಂದು ಹೇಳುತ್ತಾನೋ ಹಾಗೆ ಹೇಳಿದವನು ಚಂಡಾಲನೇ ಆಗಿದ್ದರೂ ಅವನಿಗೆ ಅಕ್ಷಯವಾದ ಪುಣ್ಯ ಲೋಕಗಳು ಲಭಿಸುತ್ತದೆ.

ಕಿಂ ಪುನರ್ಯೇ ಯಜಂತೇ ಮಾಂ ಯಾಜಕಾ ವಿಧಿಪೂರ್ವಕಮ್ ।
ಮದ್ಭಕ್ತಾ ಮದ್ಗತಪ್ರಾಣಾಃ ಕಥಯಂತಶ್ಚ ಮಾಂ ಸದಾ ॥೩೨॥

ಹೀಗಿರುವಾಗ ನನ್ನ ಭಕ್ತನೇ ಆಗಿರುವವನಿಗೆ, ನನ್ನಲ್ಲೇ ಪ್ರಾಣವನ್ನು ಇಟ್ಟುಕೊಂಡಿರುವವನಿಗೆ, ನನ್ನ ನಾಮ-ಗುಣಗಳ ಸಂಕೀರ್ತನೆ ಮಾಡುವವನಿಗೆ, ಲಕ್ಷ್ಮೀಸಹಿತನಾಗಿ ಇರುವ ನನ್ನನ್ನೇ ಪೂಜಿಸುವವನಿಗೆ ಮಹಾಪುಣ್ಯಪ್ರದವಾದ ಲೋಕಗಳು ಸಿದ್ಧಿಸುತ್ತವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಬಹುವರ್ಷಸಹಸ್ರಾಣಿ ತಪಸ್ತಪ್ಯತಿ ಯೋ ನರಃ ।
ನಾಸೌ ಪದಮವಾಪ್ನೋತಿ ಮದ್ಭಕ್ತೈರ್ಯದವಾಪ್ಯತೇ ॥೩೩॥

ಅನೇಕ ಸಾವಿರ ವರ್ಷಗಳು ತಪಸ್ಸು ಮಾಡಿದವನೂ ಕೂಡ ನನ್ನ ಭಕ್ತರು ಹೊಂದುವ ಪುಣ್ಯಲೋಕಗಳನ್ನು ಹೊಂದನು.

ಮಾಮೇವ ತಸ್ಮಾದ್ ರಾಜೇಂದ್ರ ಧ್ಯಾಹಿ ನಿತ್ಯಮತಂದ್ರಿತಃ ।
ಅವಾಪ್ಸ್ಯಸಿ ತತಃ ಸಿದ್ಧಿಂ ದ್ರಕ್ಷ್ಯಸೇ ಚ ಪರಂ ಪದಮ್ ॥೩೪॥

ಯುಧಿಷ್ಠಿರನೇ, ಆದ್ದರಿಂದ ಜಾಗೃತೆಯಿಂದ ನನ್ನನ್ನೇ ಧ್ಯಾನ ಮಾಡು. ಸಿದ್ಧಿಯನ್ನು ಹೊಂದುತ್ತಿ. ನಿನಗೆ ನನ್ನ ಸಾಕ್ಷಾತ್ಕಾರವು ಆಗುತ್ತದೆ.

ಅಪಾರ್ಥಕಂ ಪ್ರಭಾಷಂತೇ ಶೂದ್ರಾ ಭಾಗವತಾ ಇತಿ ॥೩೫॥

ನ ಶೂದ್ರಾ ಭಗವದ್ಭಕ್ತಾ ವಿಪ್ರಾ ಭಾಗವತಾಃ ಸ್ಮೃತಾಃ ।
ಸರ್ವವರ್ಣೇಷು ತೇ ಶೂದ್ರಾ ಯೇ ಹ್ಯಭಕ್ತಾ ಜನಾರ್ದನೇ ॥೩೬॥

ಕೆಲವರು ಶೂದ್ರರು ಭಾಗವತರೆಂದು ತಪ್ಪಾಗಿ ಹೇಳುತ್ತಾರೆ.. ಶೂದ್ರರು ಭಗವದ್ಭಕ್ತರಲ್ಲ, ವಿಪ್ರರೇ ಭಗವದ್ಭಕ್ತರು. ಸಮಸ್ತ ವರ್ಣಗಳಲ್ಲಿಯೂ ಯಾರು ಜನಾರ್ದನನಲ್ಲಿ ಭಕ್ತಿಹೀನರಾಗಿದ್ದರೋ ಅವರೇ ಶೂದ್ರರು.

ದ್ವಾದಶಾಕ್ಷರತತ್ತ್ವಜ್ಞಃ ಚತುರ್ವ್ಯೂಹವಿಭಾಗವಿತ್ ।
ಅಚ್ಛಿದ್ರಪಂಚಕಾಲಜ್ಞಃ ಸ ವೈ ಭಾಗವತಃ ಸ್ಮೃತಃ ॥೩೭॥

ವಾಸುದೇವ ದ್ವಾದಶಾಕ್ಷರ ಮಂತ್ರವನ್ನು ಚೆನ್ನಾಗಿ ಅರಿತಿರುವವನು, ಚತುವ್ಯೂಹಗಳನ್ನು ವಿಭಾಗ ಮಾಡಲು ತಿಳಿದಿರುವವನು, ದೋಷವಿಲ್ಲದೆ ಇರುವಂತೆ ಪಂಚಕಾಲಗಳನ್ನು ಅರಿಯಬಲ್ಲವನು ಭಾಗವತ ಎಂದು ಕರೆಸಿಕೊಳ್ಳುತ್ತಾನೆ.

ವ್ಯಾಖ್ಯಾನ ವಿಶೇಷ– 'ಚತುರ್ವ್ಯೂಹವಿಭಾಗವಿತ್' ಎನ್ನುವುದು ಲಕ್ಷಾಲಂಕಾರ ಪಾಠ. ಚತುರ್ವ್ಯೂಹ ಎಂದರೆ ಕ್ರುದ್ಧೋಲ್ಕ, ಮಹೋಲ್ಕ, ವೀರೋಲ್ಕ, ದ್ಯುಲ್ಕ ಎನ್ನುವ ಭಗವಂತನ ರೂಪಗಳು. ವಾಸುದೇವ–ಸಂಕರ್ಷಣ–ಪ್ರದ್ಯುಮ್ನ–ಅನಿರುದ್ಧ ಎನ್ನುವ ರೂಪಗಳು. ಕೇಶವಾದಿ ಚತುರ್ವಿಂಶತಿ ರೂಪಗಳು. ಮತ್ಸ್ಯಾದಿ ದಶಾವತಾರಗಳು– ಹೀಗೆ ಗುಂಪು ಗುಂಪಾದ ಭಗವದ್ರೂಪಗಳ ನಾಲ್ಕು ವ್ಯೂಹಗಳನ್ನು ಚತುರ್ವ್ಯೂಹ ಎಂದು ಕರೆದಿದ್ದಾರೆ. ಈ ಚತುರ್ವ್ಯೂಹವನ್ನು ಚೆನ್ನಾಗಿ ಅರಿತವನು ಭಾಗವತ ಎಂದು ಕರೆಸಿಕೊಳ್ಳುತ್ತಾನೆ.

ಋಗ್ವೇದೇನೈವ ಹೋತಾ ಚ ಯಜುಷಾऽಧ್ವರ್ಯುರೇವ ಚ ।
ಸಾಮವೇದೇನ ಚೋದ್ಗಾತಾ ಪುಣ್ಯೈನಾಭಿಷ್ಟುವಂತಿ ಮಾಮ್ ॥೩೮॥

ಅಥರ್ವಶಿರಸಾ ಚೈವ ನಿತ್ಯಮಾಥರ್ವಣಾ ದ್ವಿಜಾಃ ।
ಸ್ತುವಂತಿ ಸತತಂ ಯೇ ಮಾಂ ತೇ ವೈ ಭಾಗವತಾಃ ಸ್ಮೃತಾಃ ॥೩೯॥

ಯಾರು ಯಜ್ಞದಲ್ಲಿ ಹೋತೃಗಳಾಗಿ ಋಗ್ವೇದದ ಮೂಲಕ ನನ್ನನ್ನು ಸ್ತುತಿಸುತ್ತಾರೋ, ಅಧ್ವರ್ಯುಗಳಾಗಿ ಯಜುರ್ವೇದದ ಮೂಲಕ ಸ್ತೋತ್ರ ಮಾಡುತ್ತಾರೋ, ಉದ್ಗಾತೃಗಳಾಗಿ ಸಾಮವೇದದ ಮೂಲಕ ನನ್ನನ್ನು ಸ್ತುತಿಸುತ್ತಾರೋ, ಅಥರ್ವ ಶಿರಸ್ಸಿನ ಮೂಲಕ ಅಥರ್ವ ಶಾಖೆಯ ಬ್ರಾಹ್ಮಣರು ಸ್ತೋತ್ರ ಮಾಡುತ್ತಾರೋ ಅವರೆಲ್ಲರೂ ಭಾಗವತರೆಂದೇ ಕರೆಯಲ್ಪಡುತ್ತಾರೆ.

ವೇದಾಧೀನಾಃ ಸದಾ ಯಜ್ಞಾ ಯಜ್ಞಾಧೀನಾಸ್ತು ದೇವತಾಃ ।
ದೇವತಾ ಬ್ರಾಹ್ಮಣಾಧೀನಾಸ್ತಸ್ಮಾದ್ ವಿಪ್ರಾಸ್ತು ದೇವತಾಃ ॥೪೦॥

ಯಜ್ಞಗಳೆಲ್ಲವೂ ವೇದದ ಅಧೀನವಾದವು. ದೇವತೆಗಳು ಯಜ್ಞಗಳಿಗೆ ಅಧೀನರು. ಯಜ್ಞವನ್ನು ನಡೆಸುವ ಬ್ರಾಹ್ಮಣರಿಗೆ ದೇವತೆಗಳು ಅಧೀನರು. ಆದ್ದರಿಂದ ಬ್ರಾಹ್ಮಣರೇ ದೇವತೆಗಳಾಗಿದ್ದಾರೆ.

ಅನಾಶ್ರಿತ್ಯೋಚ್ಚ್ರಯಂ ನಾಸ್ತಿ ಮುಖ್ಯಮಾಶ್ರಯಮಾಶ್ರಯೇತ್ ॥೪೧॥

ಯಾರನ್ನೂ ಆಶ್ರಯಿಸದಿದ್ದರೆ ಉನ್ನತ ಸ್ಥಿತಿಯು ಬರುವುದಿಲ್ಲ. ಆದ್ದರಿಂದ ಪ್ರಧಾನನೊಬ್ಬನನ್ನು ಆಶ್ರಯನನ್ನಾಗಿ ಪಡೆದುಕೊಳ್ಳಬೇಕು.

ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ ।
ಬ್ರಹ್ಮಾ ಮಾಮಾಶ್ರಿತೋ ರಾಜನ್ ನಾಹಂ ಕಂಚಿದುಪಾಶ್ರಿತಃ ॥೪೨॥

ದೇವತೆಗಳೆಲ್ಲರೂ ರುದ್ರನನ್ನು ಆಶ್ರಯಿಸಿದ್ದಾರೆ. ರುದ್ರನು ಬ್ರಹ್ಮನನ್ನು ಆಶ್ರಯಿಸಿದ್ದಾನೆ. ಚತುರ್ಮುಖ ಬ್ರಹ್ಮನು ನನ್ನನ್ನು ಆಶ್ರಯಿಸಿದ್ದಾನೆ. ನಾನಾದರೂ ಯಾರನ್ನೂ ಆಶ್ರಯಿಸಿರುವುದಿಲ್ಲ.

ಮಮಾಶ್ರಯೋ ನ ಕಶ್ಚಿತ್ತು ಸರ್ವೇಷಾಮಾಶ್ರಯೋ ಹ್ಯಹಮ್ ॥೪೩॥

ನನಗೆ ಆಶ್ರಯವನ್ನು ನೀಡುವವರು ಯಾರೂ ಇಲ್ಲ. ಆದರೆ ಎಲ್ಲರಿಗೂ ನಾನೇ ಆಶ್ರಯದಾತೃವಾಗಿದ್ದೇನೆ.

ವ್ಯಾಖ್ಯಾನ ವಿಶೇಷ– ಸರ್ವೋತ್ತಮನಾಗಿರುವ, ನನಗಿಂತ ಅತಿರಿಕ್ತರಾದ ಜೀವರು ಜಗತ್ತಿನಲ್ಲಿ ಯಾರೂ ಇರುವುದಿಲ್ಲ. ಆದ್ದರಿಂದ ನನ್ನನ್ನು ಆಶ್ರಯಿಸದೆ ಯಾರಿಗೂ ಉನ್ನತಿಯ ಸ್ಥಿತಿಯು ಲಭಿಸುವುದಿಲ್ಲ. ಆದ್ದರಿಂದ ಇನ್ನೊಬ್ಬರ ಅಧೀನನಾಗಿರುವ ವ್ಯಕ್ತಿಯು ಮತ್ತೊಬ್ಬರಿಗೆ ಉಚ್ಚಸ್ಥಾನವನ್ನು ಕೊಡಲು ಸಾಧ್ಯವಿಲ್ಲವಾದ್ದರಿಂದ ಮುಖ್ಯನಾದ ನನ್ನನ್ನೇ ಆಶ್ರಯಿಸಬೇಕು. ಮುಖ್ಯನಾದ ಆಶ್ರಯನು ನಾನೇ ಆಗಿದ್ದೇನೆ. ಬ್ರಹ್ಮಾದಿ ದೇವತೆಗಳು, ಏಕಾದಶ ರುದ್ರರು, ದ್ವಾದಶ ಆದಿತ್ಯರು, ನಲವತ್ತೊಂಬತ್ತು ಮಂದಿ ಮರುದ್ಗಣಗಳು, ಎಲ್ಲರೂ ಜ್ಞಾನ, ಬಲ, ವೀರ್ಯ, ಶೌರ್ಯಾದಿ ಸರ್ವಗುಣಗಳಿಂದಲೂ ವೃದ್ಧಿಯನ್ನು ಹೊಂದಿರುವ, ಗುಣಪರಿಪೂರ್ಣನಾದ ನನ್ನನ್ನೇ ಆಶ್ರಯಿಸಿದ್ದಾರೆ. ನನ್ನನ್ನು ನೇರವಾಗಿ ಆಶ್ರಯಿಸಲಾರದೆ ಪರಂಪರೆಯಿಂದ ಆಶ್ರಯಿಸಿದ್ದಾರೆ. ದೇವತೆಗಳಿಗೆ ರುದ್ರನು ಹೇಗೆ ಆಶ್ರಯನೋ, ರುದ್ರನಿಗೆ ಚತುರ್ಮುಖ ಬ್ರಹ್ಮನು ಹೇಗೆ ಆಶ್ರಯನೋ, ಹಾಗೆಯೇ ನನಗೆ ಯಾರೂ ಆಶ್ರಯವಾಗಿ ಇರುವುದಿಲ್ಲ. ಎಲ್ಲರಿಗೂ ನಾನೇ ಆಶ್ರಯದಾತನಾಗಿದ್ದೇನೆ. **'ಅಗ್ನಿರ್ವೈ ದೇವಾನಾಮವಮೋ ವಿಷ್ಣುಃ ಪರಮಃ', 'ತದಂತರೇಣ ಸರ್ವಾ ಅನ್ಯಾ ದೇವತಾ'** ಮೊದಲಾದ ಶ್ರುತಿ ಪ್ರಸಿದ್ಧಿಯನ್ನು ಕೃಷ್ಣನು **'ಸರ್ವೇಷಾಂ ಆಶ್ರಯೋ ಹ್ಯಹಮ್'** ಎಂಬಲ್ಲಿ ಈ ಶಬ್ದದಿಂದ ಸೂಚಿಸಿದ್ದಾನೆ. **'ದೇವಾಸುರಾಣಾಂ ಮಘವಾನ್ ಪ್ರಧಾನೋ ದಕ್ಷಾದಯೋ ಬ್ರಹ್ಮಸುತಾಶ್ಚತೇಷಾಮ್ । ಭವಃ ಪರಃ ಸೋಥ ವಿರಿಂಚವೀರ್ಯಃ ಸ ಮತ್ಪರೋಹಂ ದ್ವಿಜದೇವದೇವಃ । ಮತ್ತೋಪ್ಯನಂತಾತ್ಪರತಃ ಪರಸ್ಮಾತ್ ಸ್ವರ್ಗಾಪವರ್ಗಾಧಿಪತೇಃ ನ ಕಿಂಚಿತ್ ॥'** ಎಂಬ ಭಾಗವತ ಶ್ಲೋಕವನ್ನು ಇಲ್ಲಿ ಸೂಚಿಸಿದ್ದಾರೆ.

ಏವಮೇತನ್ಮಯಾ ಪ್ರೋಕ್ತಂ ರಹಸ್ಯಮಿದಮುತ್ತಮಮ್ ।
ಧರ್ಮಪ್ರಿಯಸ್ಯ ತೇ ರಾಜನ್ ನಿತ್ಯಮೇವಂ ಸಮಾಚರ ॥೪೪॥

ಈ ರೀತಿಯಾಗಿ ರಹಸ್ಯವಾದ ಉತ್ತಮವಾದ ಪ್ರಮೇಯವನ್ನು ಇಲ್ಲಿ ನಾನು ನಿನಗೆ ತಿಳಿಸಿದ್ದೇನೆ. ಹಿಂದಿನ ಪರ್ವಗಳಲ್ಲಿ ಲೋಕವಿಡಂಬನೆಗೋಸ್ಕರ ಕೆಲವೊಂದು ಕಡೆ ಭಗವಂತನ ಸರ್ವೋತ್ತಮತ್ವಕ್ಕೆ ವಿರುದ್ಧವಾಗುವಂತೆ ರುದ್ರದೇವರಿಗೆ ಆಧಿಕ್ಯವನ್ನು ಹೇಳಿದ್ದೇನೆ. ಕೃಷ್ಣನು ಕೈಲಾಸಯಾತ್ರೆಯನ್ನು ಮಾಡಿದ ಎಂಬ ವಿಡಂಬನೆಗಳ ಮಾತುಗಳನ್ನು ಆಡಿದ್ದೇನೆ. ಆದರೆ ಧರ್ಮಪ್ರಿಯನಾದ ನಿನಗೆ ಇಲ್ಲಿ ಏನು ಹೇಳಿದ್ದೇನೋ ಇದನ್ನೇ ನಿಜವಾದ ರಹಸ್ಯವೆಂದು ತಿಳಿದು ನಾನು ಹೇಳಿದಂತೆ ಆಚರಿಸು.

ಇದಂ ಪವಿತ್ರಮಾಖ್ಯಾನಂ ಪುಣ್ಯಂ ವೇದೈಶ್ಚ ಸಮ್ಮಿತಮ್ ।
ಯಃ ಪಠೇನ್ಮಾಮಕಂ ಧರ್ಮಮಹನ್ಯಹನಿ ಪಾಂಡವ ॥೪೫॥

ಇದು ಪವಿತ್ರವಾದ ಆಖ್ಯಾನವಾಗಿದೆ. ವೇದಕ್ಕೆ ಸಮಾನವಾಗಿದೆ. ನನಗೆ ಸಂಬಂಧಿಸಿದ ವೈಷ್ಣವಧರ್ಮವನ್ನು ಅನುದಿನವೂ ಯಾವನು ಪಠಿಸುತ್ತಾನೋ ಅವನ ಧರ್ಮವು ವರ್ಧಿಸುತ್ತದೆ.

ಧರ್ಮೋ ವಿವರ್ಧತೇ ತಸ್ಯ ಬುದ್ಧಿಶ್ಚಾಪಿ ಪ್ರಸೀದತಿ ।
ಪಾಪಕ್ಷಯಮುಪೈತ್ಯೇವಂ ಕಲ್ಯಾಣಂ ಚ ವಿವರ್ಧತೇ ॥೪೬॥

ಧರ್ಮದ ಅಭಿವೃದ್ಧಿಯ ಜೊತೆಗೆ ಬುದ್ಧಿಯೂ ಪ್ರಸನ್ನವಾಗುತ್ತದೆ. ಪಾಪಗಳೆಲ್ಲವೂ ನಶಿಸುತ್ತವೆ. ಕಲ್ಯಾಣವೂ ವರ್ಧಿಸುತ್ತದೆ.

ಏತತ್ಪುಣ್ಯಂ ಪವಿತ್ರಂ ಚ ಪಾಪನಾಶನಮುತ್ತಮಮ್ ।
ಶ್ರೋತವ್ಯಂ ಶ್ರದ್ಧಯಾ ಯುಕ್ತೈಃ ಶ್ರೋತ್ರಿಯೈಶ್ಚ ವಿಶೇಷತಃ ॥೪೭॥

ಪುಣ್ಯವೂ, ಪವಿತ್ರವೂ, ಪಾಪನಾಶಕವೂ, ಉತ್ಕೃಷ್ಟವೂ ಆದ ಈ ವಿಷ್ಣುಧರ್ಮವನ್ನು ಎಲ್ಲರೂ ಕೇಳಬೇಕು. ಅದರಲ್ಲಿಯೂ ಶ್ರದ್ಧಾಯುಕ್ತರಾದ ಶ್ರೋತ್ರಿಯರು ಕೇಳಲೇಬೇಕು.

ಶ್ರಾವಯೇದ್ ಯಸ್ತ್ವಿದಂ ಭಕ್ತ್ಯಾ ಪ್ರಯತೋಽಥ ಶೃಣೋತಿ ವಾ ।
ಸ ಗಚ್ಛೇನ್ಮಮ ಸಾಯುಜ್ಯಂ ನಾತ್ರ ಕಾರ್ಯಾ ವಿಚಾರಣಾ ॥೪೮॥

ಯಾವ ಮನುಷ್ಯನು ಭಕ್ತಿಪೂರ್ವಕವಾಗಿ ಮತ್ತೊಬ್ಬರಿಗೆ ಹೇಳುತ್ತಾನೋ, ಪವಿತ್ರ ಚಿತ್ತನಾಗಿ ಮತ್ತೊಬ್ಬರಿಂದ ಕೇಳುತ್ತಾನೋ ಅವನು ನನ್ನ ಸಾಯುಜ್ಯವನ್ನೇ ಹೊಂದುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯಶ್ಚೇದಂ ಶ್ರಾವಯೇಚ್ಛ್ರಾದ್ಧೇ ಮದ್ಭಕ್ತೋ ಮತ್ಪರಾಯಣಃ ।
ಪಿತರಸ್ತಸ್ಯ ತೃಪ್ಯಂತಿ ಯಾವದಾಭೂತಸಂಪ್ಲವಮ್ ॥೪೯॥

ಯಾವ ಬ್ರಾಹ್ಮಣನು ಈ ಆಖ್ಯಾನವನ್ನು ಶ್ರಾದ್ಧಕಾಲಗಳಲ್ಲಿ ನನ್ನಲ್ಲೇ ಭಕ್ತಿಯುಳ್ಳವನಾಗಿ ಶ್ರವಣ ಮಾಡಿಸುತ್ತಾನೋ ಅವನ ಪಿತೃಗಳು ಪ್ರಳಯ ಕಾಲದವರೆಗೂ ತೃಪ್ತರಾಗಿರುತ್ತಾರೆ.

ವೈಶಂಪಾಯನಃ

ಶ್ರುತ್ವಾ ಭಾಗವತಾನ್ ಧರ್ಮಾನ್ ಸಾಕ್ಷಾದ್ ವಿಷ್ಣೋರ್ಜಗದ್ಗುರೋಃ ।
ಪ್ರಹೃಷ್ಟಮನಸೋ ಭೂತ್ವಾ ಚಿಂತಯಂತೋऽದ್ಭುತಾಃ ಕಥಾಃ ॥೫೦॥

ಋಷಯಃ ಪಾಂಡವಾಶ್ಚೈವ ಪ್ರಣೇಮುಸ್ತಂ ಜನಾರ್ದನಮ್ ॥೫೧॥

ವೈಶಂಪಾಯನ– ಜನಮೇಜಯನೇ, ಸಾಕ್ಷಾತ್ ವಿಷ್ಣುವೇ ಆದ ಜಗದ್ಗುರುವಾದ ಶ್ರೀಕೃಷ್ಣನಿಂದ ಭಾಗವತ ಧರ್ಮಗಳನ್ನು ಕೇಳಿದ ಋಷಿಗಳು, ಪಾಂಡವರು ಪ್ರಹೃಷ್ಟವಾದ ಮನಸ್ಸಿನಿಂದ ಕೂಡಿದವರಾಗಿ ಅದ್ಭುತವಾದ ಕಥಾ ಪ್ರಸಂಗಗಳನ್ನು ಪುನಃ ಪುನಃ ಸ್ಮರಿಸುತ್ತಾ ಜನಾರ್ದನನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದರು.

ಪೂಜಯಾಮಾಸ ಗೋವಿಂದಂ ಧರ್ಮಪುತ್ರಃ ಪುನಃ ಪುನಃ ॥೫೨॥

ಧರ್ಮಪುತ್ರನಾದ ಯುಧಿಷ್ಠಿರನು ಪುನಃ ಪುನಃ ಗೋವಿಂದನನ್ನು ಪೂಜಿಸಿದನು.

ದೇವಾ ಬ್ರಹ್ಮರ್ಷಯಃ ಸಿದ್ಧಾ ಗಂಧರ್ವಾಪ್ಸರಸಸ್ತಥಾ ।
ಭೂತಾ ಯಕ್ಷಾ ಗ್ರಹಾಶ್ಚೈವ ಗುಹ್ಯಕಾ ಭುಜಗಾಸ್ತಥಾ ॥೫೩॥

ವಾಲಖಿಲ್ಯಾ ಮಹಾತ್ಮಾನೋ ಯೋಗಿನಸ್ತತ್ತ್ವದರ್ಶಿನಃ ।
ತಥಾ ಭಾಗವತಾಶ್ಚಾಪಿ ಪಂಚಕಾಲಮುಪಾಸಕಾಃ ॥೫೪॥

ಕೌತೂಹಲಸಮಾಯುಕ್ತಾ ಭಗವದ್ಭಕ್ತಿಮಾಗತಾಃ ॥೫೫॥

ದೇವತೆಗಳು, ಬ್ರಹ್ಮರ್ಷಿಗಳು, ಸಿದ್ಧರು, ಗಂಧರ್ವರು, ಅಪ್ಸರೆಯರು, ಭೂತಗಳು, ಗ್ರಹಗಳು, ಯಕ್ಷರು, ಮಹಾತ್ಮರಾದ ಋಷಿಗಳು, ಗುಹ್ಯಕರು, ಸರ್ಪಗಳು, ಮಹಾತ್ಮರಾದ ವಾಲಖಿಲ್ಯರು, ತತ್ತ್ವದರ್ಶಿಗಳಾದ ಯೋಗಿಗಳು, ಐದು ಕಾಲಗಳಲ್ಲಿ ಉಪಾಸನೆ ಮಾಡುವ ಭಾಗವತರು, ಇವರೆಲ್ಲರೂ ಕುತೂಹಲಾವಿಷ್ಟರಾಗಿ ಅಲ್ಲಿಗೆ ಆಗಮಿಸಿದರು.

ಶ್ರುತ್ವಾ ತು ಪರಮಂ ಪುಣ್ಯಂ ವೈಷ್ಣವಂ ಧರ್ಮಶಾಸನಮ್ ।
ವಿಮುಕ್ತಪಾಪಾಃ ಪೂತಾಸ್ತೇ ಸಂವೃತ್ತಾಸ್ತತ್ಕ್ಷಣೇನ ತು ॥೫೬॥

ಅವರೆಲ್ಲರೂ ಶ್ರೀಕೃಷ್ಣನೇ ಸಾಕ್ಷಾತ್ತಾಗಿ ಹೇಳಿದ ಪರಮಪುಣ್ಯಪ್ರದವಾದ, ವೈಷ್ಣವ ಧರ್ಮವನ್ನು ಭಗವದ್ಭಕ್ತಿಯಿಂದ ಕೂಡಿದ, ಧರ್ಮಶಾಸನರೂಪವಾಗಿರುವ ಧರ್ಮಗಳನ್ನು ಕೇಳಿ ಆ ಕ್ಷಣದಲ್ಲಿಯೇ ಪಾಪಮುಕ್ತರಾಗಿ ಪವಿತ್ರಾತ್ಮರಾದರು.

ಪ್ರಣಮ್ಯ ಶಿರಸಾ ವಿಷ್ಣುಂ ಪ್ರತಿನಂದ್ಯ ಚ ತಾಃ ಕಥಾಃ ।
ದ್ರಷ್ಟಾರೋ ದ್ವಾರಕಾಯಾಂ ವೈ ವಯಂ ಸರ್ವೇ ಜಗದ್ಗುರುಮ್ ॥೫೭॥

ಇತಿ ಪ್ರಹೃಷ್ಟಮನಸೋ ಯಯುರ್ದೇವಗಣೈಃ ಸಹ ।
ಸರ್ವೇ ಋಷಿಗಣಾ ರಾಜನ್ ಯಯುಃ ಸ್ವಂ ಸ್ವಂ ನಿವೇಶನಮ್ ॥೫೮॥

ಅವರೆಲ್ಲರೂ ಕೃಷ್ಣನಿಗೆ ತಲೆಬಾಗಿ ನಮಸ್ಕರಿಸಿ, ಅವನು ಹೇಳಿದ ವೈಷ್ಣವಧರ್ಮವನ್ನು ಬಹಳವಾಗಿ ಪ್ರಶಂಸಿಸಿದರು. ನಾವು ಮುಂದೆ ಜಗದ್ಗುರುವಾದ ಶ್ರೀಕೃಷ್ಣನನ್ನು ದ್ವಾರಕೆಯಲ್ಲಿ ಸಂದರ್ಶಿಸೋಣ ಎಂದು ಹೇಳುತ್ತಾ ಮಹರ್ಷಿಗಳು ಪ್ರಸನ್ನಚಿತ್ತರಾಗಿ ದೇವತೆಗಳ ಜೊತೆಗೆ ತಮ್ಮ ತಮ್ಮ ವಾಸಸ್ಥಾನಕ್ಕೆ ತೆರಳಿದರು.

ಗತೇಷು ತೇಷು ಸರ್ವೇಷು ಕೇಶವಃ ಕೇಶಿಹಾ ತದಾ ।
ಸಸ್ಮಾರ ದಾರುಕಂ ರಾಜನ್ ಸ ಚ ಸಾತ್ಯಕಿನಾ ಸಹ ॥೫೯॥

ಅವರೆಲ್ಲರೂ ಹೊರಟ ಬಳಿಕ ಕೇಶಿಹಂತಕನಾದ ಶ್ರೀಹರಿಯು ಸಾರಥಿಯಾದ ದಾರುಕನನ್ನು ಸ್ಮರಿಸಿಕೊಂಡನು. ದಾರುಕನು ಸಾತ್ಯಕಿಯ ಜೊತೆಗೆ ಕೃಷ್ಣನ ಬಳಿಗೆ ಬಂದನು.

ಸಮೀಪಸ್ಥೋऽಭವತ್ಸೂತೋ ಯಾಹಿ ದೇವೇತಿ ಚಾಬ್ರವೀತ್ ॥೬೦॥

ಹತ್ತಿರಕ್ಕೆ ಆಗಮಿಸಿದ ದಾರುಕನು ದೇವನೇ ಹೋಗೋಣ ಎಂದು ಹೇಳಿದನು.

ತತೋ ವಿಷಣ್ಣವದನಾಃ ಪಾಂಡವಾಃ ಪುರುಷೋತ್ತಮಮ್ ।
ಅಂಜಲಿಂ ಮೂರ್ಧ್ನಿ ಸಂಧಾಯ ನೇತ್ರೈರಶ್ರುಪರಿಪ್ಲುತೈಃ ॥೬೧॥

ಪಿಬಂತಃ ಸತತಂ ಕೃಷ್ಣಂ ನೋಚುರಾರ್ತತರಾಸ್ತದಾ ॥೬೨॥

ಬಳಿಕ ಶ್ರೀಕೃಷ್ಣನು ದ್ವಾರಕೆಗೆ ಪ್ರಯಾಣ ಹೊರಟಿರುವನೆಂಬ ವಾರ್ತೆಯನ್ನು ಕೇಳಿದ ಪಾಂಡವರೆಲ್ಲರೂ ಬಾಡಿದ ಮುಖವುಳ್ಳವರಾದರು. ಎರಡು ಕೈಗಳನ್ನು ಜೋಡಿಸಿ ತಲೆ ಮೇಲೆ ಕೈಯನ್ನಿಟ್ಟುಕೊಂಡು ನೀರು ತುಂಬಿದ ಕಣ್ಣುಗಳಿಂದ ಶ್ರೀಕೃಷ್ಣನನ್ನು ಕುಡಿದು ಬಿಡುತ್ತಾರೋ ಎಂಬಂತೆ ಎವೆಯಿಕ್ಕದೆ ನೋಡುತ್ತಿದ್ದರು.

ಕೃಷ್ಣೋऽಪಿ ಭಗವಾನ್ ದೇವಃ ಪೃಥಾಮಾಮಂತ್ರ್ಯ ಚಾರ್ತವತ್ ।
ಧೃತರಾಷ್ಟ್ರಂ ಚ ಗಾಂಧಾರೀಂ ವಿದುರಂ ದ್ರೌಪದೀಂ ತಥಾ ॥೬೩॥

ಕೃಷ್ಣದ್ವೈಪಾಯನಂ ವ್ಯಾಸಮೃಷೀನನ್ಯಾಂಶ್ಚ ಮಂತ್ರಿಣಃ ।
ಸುಭದ್ರಾಮಾತ್ಮಜಯುತಾಮುತ್ತರಾಂ ಸ್ಪೃಶ್ಯ ಪಾಣಿನಾ ॥೬೪॥

ನಿರ್ಗತ್ಯ ವೇಶ್ಮನಸ್ತಸ್ಮಾದಾರುರೋಹ ಮಹಾರಥಮ್ ॥೬೫॥

ಆದರೆ ದುಃಖಪೀಡಿತರಾದ ಅವರನ್ನು ಕುರಿತು ಕೃಷ್ಣನು ಯಾವ ಮಾತನ್ನೂ ಹೇಳಲಿಲ್ಲ. ಕೃಷ್ಣನೂ ಅವರ ಸ್ಥಿತಿಯನ್ನು ಕಂಡು ಆರ್ತನಂತೆ ದುಃಖಿತನಾದನು. ಪ್ರಯಾಣವು ಅನಿವಾರ್ಯವಾಗಿತ್ತು. ಕುಂತೀ, ಧೃತರಾಷ್ಟ್ರ, ಗಾಂಧಾರಿ, ವಿದುರ, ದ್ರೌಪದಿ, ವೇದವ್ಯಾಸರು, ಋಷಿಗಳು, ಅಮಾತ್ಯರು ಇವರೆಲ್ಲರ ಅನುಮತಿಯನ್ನು ಪಡೆದು ಸುಭದ್ರೆಯನ್ನೂ, ಮಗನ ಜೊತೆಗಿದ್ದ ಉತ್ತರೆಯನ್ನು ಕೈಯಿಂದ ಮುಟ್ಟಿ ಆಶೀರ್ವದಿಸಿ, ರಾಜಭವನದಿಂದ ಹೊರ ಹೊರಟು, ದಾರುಕನು ನಿಲ್ಲಿಸಿದ್ದ ರಥದಲ್ಲಿ ಕುಳಿತುಕೊಂಡನು.

ವಾಜಿಭಿಃ ಶೈಬ್ಯಸುಗ್ರೀವಮೇಘಪುಷ್ಪವ(ಬ)ಲಾಹಕೈಃ ।
ಯುಕ್ತಂ ತು ಧ್ವಜಭೂತೇನ ಪತಗೇಂದ್ರೇಣ ಧೀಮತಾ ॥೬೬॥

ರಥವು ಶೈಬ್ಯ, ಸುಗ್ರೀವ, ಮೇಘಪುಷ್ಪ, ಬಲಾಹಕ ಎಂಬ ಕುದುರೆಗಳಿಂದ ಕೂಡಿತ್ತು. ಧೀಮಂತನಾದ ಗರುಡನು ಆ ರಥದ ಧ್ವಜದಲ್ಲಿ ಶೋಭಿಸುತ್ತಿದ್ದನು.

ಅನ್ವಾರುರೋಹ ಚಾಪ್ಯೇನಂ ಪ್ರೇಮ್ಣಾ ರಾಜಾ ಯುಧಿಷ್ಠಿರಃ ।
ಅಪಾಸ್ಯ ಚಾಶು ಯಂತಾರಂ ದಾರುಕಂ ಸೂತಸತ್ತಮಮ್ ॥೬೭॥

ಅಭೀಶೂನ್ ಪ್ರತಿಜಗ್ರಾಹ ಸ್ವಯಂ ಕುರುಪತಿಸ್ತದಾ ॥೬೮॥

ಆ ಸಮಯದಲ್ಲಿ ಕುರುಪತಿಯಾದ ಯುಧಿಷ್ಠಿರನು ಪ್ರೀತಿಯಿಂದ ಕೃಷ್ಣನನ್ನು ಅನುಸರಿಸಿ ತಾನೂ ರಥವನ್ನೇರಿದನು. ಧರ್ಮರಾಜನು ಸೂತಶ್ರೇಷ್ಠನಾದ ದಾರುಕನಿಂದ ಕುದುರೆಗಳ ಕಡಿವಾಣವನ್ನು ತನ್ನ ಕಡೆಗೆ ತೆಗೆದುಕೊಂಡನು.

ಉಪಾರುಹ್ಯಾರ್ಜುನಶ್ಚಾಪಿ ಚಾಮರವ್ಯಜನಂ ಶುಭಮ್ ।
ರುಗ್ಮದಂಡಂ ಬೃಹನ್ಮೂರ್ಧ್ನಿ ದುಧಾವಾಶು ಪ್ರದಕ್ಷಿಣಮ್ ॥೬೯॥

ಅರ್ಜುನನೂ ರಥವನ್ನೇರಿ ಸುವರ್ಣದ ಹಿಡಿಯಿಂದ ಕೂಡಿದ ಚಾಮರದ ವ್ಯಜನ(ಬೀಸಣಿಗೆ)ಯನ್ನು ಕೈಯಲ್ಲಿ ಹಿಡಿದುಕೊಂಡು ಬಲಬದಿಯಿಂದ ಕೃಷ್ಣನ ತಲೆಯ ಮೇಲೆ ಗಾಳಿ ಬೀಸಲು ಆರಂಭಿಸಿದನು.

ಛತ್ರಂ ಶತಶಲಾಕಂ ಚ ದಿವ್ಯಮಾಲ್ಯೋಪಶೋಭಿತಮ್ ।
ವೈಡೂರ್ಯಮಣಿದಂಡಂ ಚ ಚಾಮೀಕರವಿಭೂಷಿತಮ್ ॥೭೦॥

ದಧಾರ ತರಸಾ ಭೀಮಶ್ಛತ್ರಂ ತಚ್ಚಾರ್ಜುನಸ್ಯ ॥೭೧॥

ಅದೇ ರೀತಿ ವೀರನಾದ ಭೀಮಸೇನನು ರಥವನ್ನು ಏರಿ, ದಿವ್ಯಮಾಲೆಯಿಂದ ಶೋಭಿತವಾಗಿದ್ದ, ನೂರು ಕಡ್ಡಿಗಳಿಂದ ಕೂಡಿದ ಬಂಗಾರದ ಶ್ವೇತಚ್ಛತ್ರವನ್ನು ಶ್ರೀಕೃಷ್ಣನ ತಲೆಯ ಮೇಲೆ ಹಿಡಿದನು. ಆ ಶ್ವೇತಚ್ಛತ್ರವು ವೈಡೂರ್ಯಮಣಿಗಳಿಂದ ನಿರ್ಮಿತವಾಗಿತ್ತು. ಅದರ ಬಟ್ಟೆಯು ಸುವರ್ಣದ ತಂತುಗಳಿಂದ ಅಲಂಕೃತವಾಗಿತ್ತು. ಶಾಙ್ಗಧನುರ್ಧರನಾದ ಶ್ರೀಕೃಷ್ಣನ ಅಂತಹ ಸುಂದರವಾದ ಛತ್ರವನ್ನು ಭೀಮಸೇನನು ಹಿಡಿದು ನಿಂತನು.

ಭೀಮಸೇನೋऽರ್ಜುನಶ್ಚೈವ ಯಮಾವಪ್ಯರಿಸೂದನೌ ।
ಮಾದ್ರೀಪುತ್ರೌ ತದಾ ರಾಜನ್ ಕೃಷ್ಣಸ್ಯಾಪ್ಯರಿಸೂದನೌ ॥೭೨॥

ಭೀಮಸೇನನನ್ನು ಅನುಸರಿಸಿ ನಕುಲ-ಸಹದೇವರೂ ರಥವನ್ನೇರಿ ಬಿಳಿ ಚಾಮರ ವ್ಯಜನಗಳಿಂದ ಕೃಷ್ಣನಿಗೆ ಗಾಳಿ ಬೀಸಿದರು.

ಪೃಷ್ಠತೋಽನುಯಯುಃ ಕೃಷ್ಣಂ ಮಾ ಶಬ್ದ ಇತಿ ಹರ್ಷಿತೌ ॥೭೩॥

ಈ ಪ್ರಕಾರ ಪಂಚಪಾಂಡವರು ಕೃಷ್ಣನನ್ನನುಸರಿಸಿ ಹೋದರು. ಕೃಷ್ಣನನ್ನು ಕುರಿತು ಪ್ರಯಾಣ ಮಾಡಬೇಡ ಎಂದು ಹೇಳತೊಡಗಿದರು.

ತ್ರಿಯೋಜನೇ ವ್ಯತೀತೇ ತು ಪರಿಷ್ವಜ್ಯ ಚ ಪಾಂಡವಾನ್ ।
ವಿಸೃಜ್ಯ ಕೃಷ್ಣಸ್ತಾನ್ ಸರ್ವಾನ್ ಪ್ರಣತಾನ್ ದ್ವಾರಕಾಂ ಯಯೌ ॥೭೪॥

ಮೂರು ಯೋಜನಗಳಷ್ಟು ದೂರ ರಥವು ಹೋದಬಳಿಕ ತನಗೆ ನಮಸ್ಕರಿಸಿದ ಪಾಂಡವರನ್ನು ಒಬ್ಬೊಬ್ಬರನ್ನಾಗಿ ಆಲಿಂಗಿಸಿಕೊಂಡು ಸಮಾಧಾನಪಡಿಸಿ ಅವರೆಲ್ಲರನ್ನೂ ಹಿಂದಕ್ಕೆ ಕಳುಹಿಸಿ ದ್ವಾರಕೆಯತ್ತ ನಡೆದನು.

ತದಾ ಪ್ರಣಮ್ಯ ಗೋವಿಂದಂ ತದಾಪ್ರಭೃತಿ ಪಾಂಡವಾಃ ।
ಕಪಿಲಾದ್ಯಾನಿ ದಾನಾನಿ ದದುರ್ಧರ್ಮಪರಾಯಣಾಃ ॥೭೫॥

ಪಾಂಡವರಾದರೂ ಕೃಷ್ಣನಿಗೆ ನಮಸ್ಕರಿಸಿ ಹಸ್ತಿನಾಪುರಕ್ಕೆ ಹಿಂದಿರುಗಿ ಬಂದು ಕೃಷ್ಣನ ಉಪದೇಶದಂತೆ ಕಪಿಲಾದಾನಗಳನ್ನು ಧರ್ಮಪರಾಯಣರಾಗಿ ಬ್ರಾಹ್ಮಣರಿಗೆ ಮಾಡಿದರು.

ಮಧುಸೂದನವಾಕ್ಯಾನಿ ಸ್ಮೃತ್ವಾ ಸ್ಮೃತ್ವಾ ಪುನಃ ಪುನಃ ।
ಮನಸಾ ಪೂಜಯಾಮಾಸುರ್ಹೃದಯಸ್ಥಾನಿ ಪಾಂಡವಾಃ ॥೭೬॥

ಮಧುಸೂದನನ ಮಾತುಗಳನ್ನು ಪುನಃ ಪುನಃ ಸ್ಮರಿಸುತ್ತಾ ಅವನನ್ನು ಹೃದಯದಲ್ಲಿ ತುಂಬಿಕೊಂಡು, ಮನಃಪೂರ್ವಕವಾಗಿ ಅವನ ವಾಕ್ಯಗಳನ್ನೇ ಸ್ತುತಿಸುತ್ತಿದ್ದರು.

ಯುಧಿಷ್ಠಿರಸ್ತು ಧರ್ಮಾತ್ಮಾ ಹೃದಿ ಕೃತ್ವಾ ಜನಾರ್ದನಮ್ ।
ತದ್ಭಕ್ತಸ್ತನ್ಮನಾ ಯುಕ್ತಸ್ತದ್ಯಾಜೀ ತತ್ಪರೋಽಭವತ್ ॥೭೭॥

ಯುಧಿಷ್ಠಿರನಾದರೂ ಧರ್ಮಾತ್ಮನಾದ ಜನಾರ್ದನನನ್ನು ಹೃದಯದಲ್ಲಿ ತುಂಬಿಕೊಂಡು ಅವನಲ್ಲಿಯೇ ಭಕ್ತಿಯುಳ್ಳವನಾಗಿ, ಅವನಲ್ಲಿಯೇ ಮನಸ್ಸುಳ್ಳವನಾಗಿ, ಅವನಿಗಾಗಿಯೇ ಸಮಸ್ತ ಕರ್ಮಗಳನ್ನು ಕೃಷ್ಣಾರ್ಪಣ ಬುದ್ಧಿಯಿಂದ ಮಾಡಿದನು.

ಏವಮೇತತ್ ಪುರಾವೃತ್ತಂ ವೈಷ್ಣವಂ ಧರ್ಮಶಾಸನಮ್ ।
ಮಯಾ ತೇ ಕಥಿತಂ ರಾಜನ್ ಪವಿತ್ರಂ ಪಾಪನಾಶನಮ್ ॥೭೮॥

ಈ ರೀತಿಯಾಗಿ ಪ್ರಾಚೀನವಾದ ವೈಷ್ಣವಧರ್ಮಶಾಸನವು ಪಾಪನಾಶಕವಾಗಿದೆ, ಪವಿತ್ರವಾಗಿದೆ. ಜನಮೇಜಯರಾಜನೇ, ಅದನ್ನು ನಿನಗೆ ಹೇಳಿರುತ್ತೇನೆ.

ತಚ್ಛೃಣುಷ್ವ ಮಹಾರಾಜ ವಿಷ್ಣುಪ್ರೋಕ್ತಂ ಕುರೂದ್ವಹ ।
ತೇನ ಗಚ್ಛಸಿ ನಾನ್ಯೇನ ತದ್ ವಿಷ್ಣೋಃ ಪರಮಂ ಪದಮ್ ॥೭೯॥

ವಿಷ್ಣುವಿನಿಂದಲೇ ಹೇಳಲ್ಪಟ್ಟ ವೈಷ್ಣವಧರ್ಮವನ್ನು ಕುರುಕುಲಶ್ರೇಷ್ಠನೇ ಕೇಳಿಸಿಕೊ. ಈ ಧರ್ಮದಿಂದಲೇ ವಿಷ್ಣುವಿನ ಪರಮಪದವೆನಿಸಿದ ವೈಕುಂಠವನ್ನು ಸೇರುತ್ತಿ. ಬೇರೆ ಯಾವ ಧರ್ಮದಿಂದಲೂ ವಿಷ್ಣುವಿನ ಪದವನ್ನು ಹೊಂದಲಾಗದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಆಶ್ವಮೇಧಿಕಪರ್ವಣಿ ವೈಷ್ಣವಧರ್ಮಶಾಸ್ತ್ರೇ ಸರ್ವಧರ್ಮಕಥನಾನಂತರಂ ಶ್ರೀಕೃಷ್ಣಸ್ಯ ದ್ವಾರಾವತೀಪ್ರವೇಶವರ್ಣನಂ ನಾಮ ಅಷ್ಟಾದಶೋತ್ತರಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಆಶ್ವಮೇಧಿಕಪರ್ವದಲ್ಲಿ ನೂರಹದಿನೆಂಟನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಮ್ ಆಶ್ವಮೇಧಿಕಪರ್ವ ॥

॥ ಶ್ರೀ ಮಧ್ವೇಶಾರ್ಪಣಮಸ್ತು ॥

★ ★ ★ ★ ★

ಏಕೋ ಬಂಧುರ್ನಾಸ್ತಿ ತತೋ ದ್ವಿತೀಯೋ
ಯೋ ಹೃಚ್ಛಯಸ್ತಮಹಮನುಬ್ರವೀಮಿ ।
ತೇನಾನುಶಿಷ್ಟಾ ಬಾಂಧವಾ ಬಂಧುಮಂತಃ
ಸಪ್ತರ್ಷಯಶ್ಚೈವ ದಿವಿ ಪ್ರಭಾಂತಿ ॥

ನಾರಾಯಣನೇ ನಮಗೆಲ್ಲ ಬಂಧುವು. ಅವನಿಗಿಂತ ಮಿಗಿಲಾದ ಇನ್ನೊಬ್ಬ ಬಂಧುವು ಇರುವುದಿಲ್ಲ. ಯಾವ ನಾರಾಯಣನು ಎಲ್ಲ ಪ್ರಾಣಿಗಳ ಹೃದಯಗುಹೆಯಲ್ಲಿಯೂ ಸನ್ನಿಹಿತನಾಗಿರುವನೋ ಅವನನ್ನೇ ಬಂಧುವೆಂದು ಹೇಳುತ್ತೇವೆ. ಅವನ ಸಂಕಲ್ಪದಿಂದಲೇ ಬಂಧು ಬಾಂಧವರು ಒದಗಿ ಬರುತ್ತಾರೆ. ಅವನ ಉಪದೇಶವನ್ನು ಪಡೆದು ಸಪ್ತರ್ಷಿಗಳು ಉತ್ಕೃಷ್ಟವಾದ ಸ್ಥಾನವನ್ನು ಪಡೆದು ಆಕಾಶದಲ್ಲಿ ಬೆಳಗುತ್ತಿದ್ದಾರೆ.

ISBN: 978-93-88813-40-2